1. 'ಆಯುಃ' ಅಂದರೆ ಬದುಕಿರುವದು, ಜೀವಿತ. ಜೀವಿತದ ಸುಖದುಃಖಗಳನ್ನೂ, ಹಿತಾಹಿತಗಳನ್ನೂ, ಕಾಲಪರಿಮಿತಿಗಳನ್ನೂ, ವೃದ್ಧಿಕ್ಷಯಗಳಿಗೆ ಹೇತುಗಳಾದ ದ್ರವ್ಯಾದಿಗಳ ಗುಣಕರ್ಮಗಳನ್ನೂ ತಿಳಿಸುವಂಥಾದ್ದು 'ಆಯುರ್ವೇದ'. ಋಗ್ಯಜುಸ್ಸಾಮಾಥರ್ವವೇದಗಳೊಂದಿಗೆ ವೈದ್ಯಕವಾದ ಆಯುರ್ವೇದ ಎಂಬ ಐದನೇ ವೇದವು ಬ್ರಹ್ಮನ ಮುಖದಿಂದ ಉದ್ಭವವಾಯಿತೆಂತ ಗೂಢಬೋಧವು ಹೇಳುತ್ತದಾಗಿ ಶಬ್ದಕಲ್ಪದ್ರುಮದಿಂದ ಕಂಡುಬರುತ್ತದೆ ಆದರೆ ಚರಕ ಸುಶ್ರುತ ಮುಂತಾದ ವೈದ್ಯಗ್ರಂಥಗಳಲ್ಲಿ ಆಯುರ್ವೇದವು ಅಥರ್ವವೇದದೊಳಗೆ ಅಡಗಿದ್ದೆಂತಲೇ ಹೇಳಲ್ಪಟ್ಟದೆ ಅಥರ್ವದಲ್ಲಿ ಜನರ ಇಷ್ಟಪ್ರಾಪ್ತಿಕರವಾದ ಸ್ವಸ್ತ್ಯಯನ-ಬಲಿ-ಮಂಗಲಹೋಮ-ನಿಯಮ-ಪ್ರಾಯಶ್ಚಿತ್ತ-ಉಪವಾಸ-ಮಂತ್ರ ಮುಂತಾದವುಗಳ ಉಪದೇಶಗಳೊಂದಿಗೆ ಆಯುರ್ವೃದ್ಧಿಕರವಾದ ಕೆಲವು ರಸಾಯನದ್ರವ್ಯಗಳ ಉಪಯೋಗವೂ, ರೋಗಪರಿಹಾರಕರವಾದ ಕೆಲವು ಔಷಧಗಳ ಯೋಗಗಳೂ ಉಕ್ತವಾಗಿವೆಯಲ್ಲದೆ, ರೋಗಗಳ ನಿದಾನ-ಪೂರ್ವರೂಪ-ಲಿಂಗ-ಉಪಶಯ ಮುಂತಾದ ಏವರಗಳಿಂದ ಕೂಡಿದ ಕ್ರಮವಾದ ಚಿಕಿತ್ಸೆಯು ಯಾವ ವೇದದಲ್ಲಿಯಾದರೂ ಕಾಣುತ್ತದೆಂತ ಎಣಿಸಬಾರದು. ಜನ್ಮವು ಅನಾದಿಯಾದ್ದರಿಂದ, ಅದಕ್ಕನುಬಂಧಗಳಾದ ಸುಖದುಃಖ, ಹಿತಾಹಿತ, ಇವುಗಳ ಕಾರಣ, ದುಃಖಾಹಿತಗಳ ಪರಿಹಾರ, ಮತ್ತು ಇವುಗಳ ಜ್ಞಾನಸಂಗ್ರಹವಾದ ಆಯುರ್ವೇದ ಸಹ ಅನಾದಿ. ಆಯುರ್ವೇದವಿಲ್ಲದಿದ್ದ ಕಾಲವಿಲ್ಲ. ಆದರೆ ಕಾಲಪರಿಣಾಮದಿಂದ ಲೋಕದಲ್ಲಿ ಆಯುರ್ವೇದದ ಜ್ಞಾನವು ಕೆಲವು ಸಮಯಗಳಲ್ಲಿ ಮಂದವಾದದ್ದು ಮತ್ತು ಪುನಃ ಉದ್ಧರಿಸಲ್ಪಟ್ಟದ್ದು ಶ್ರುತವಾಗಿದೆ. ಹೀಗೆ, ಆಯುರ್ವೇದಜ್ಞಾನವು ಮಲಿನವಾಗಿ, ಜನಗಳು ಪಡುವ ಸಂಕಷ್ಟಗಳನ್ನು ತಿಳಿದು, ಮಹಾಶೇಷನು ಒಬ್ಬ ಮುನಿಪುತ್ರನಾಗಿ ಅವತರಿಸಿ, ಪುನರ್ವಸುವಿನ ಶಿಷ್ಯರೊಳಗೊಬ್ಬನಾದ ಅಗ್ನಿವೇಶನು ರಚಿಸಿದ್ದ ವೈದ್ಯತಂತ್ರವನ್ನು ಪರಿಷ್ಕರಿಸಿ, ಚರಕ ಸಂಹಿತಾ ಎಂಬ ಗ್ರಂಥವನ್ನು ರಚಿಸಿದನೆಂತಲೂ, ಇನ್ನೊಂದು ಕಾಲದಲ್ಲಿ ಧನ್ವಂತರಿಯು ಇಂದ್ರನಿಂದ ವೈದ್ಯೋಪದೇಶವನ್ನು ಪಡೆದು, ಕಾಶಿಯಲ್ಲಿ ದಿವೋದಾಸನೆಂಬ ಹೆಸರಿನಿಂದ ಒನಿಸಿ, ಅರಸನಾದ ಮೇಲೆ ತಪಸ್ವಿಯಾಗಿ, ವಿಶ್ವಾಮಿತ್ರನ ಮಗನಾದ ಸುಶ್ರುತ ಮುಂತಾದ ಶಿಷ್ಯರುಗಳಿಗೆ ಆಯುರ್ವೇದವನ್ನು ಉಪದೇಶಮಾಡಿದ ಪ್ರಕಾರ, ಆ ಸುಶ್ರುತನು 'ಸುಶ್ರುತ' ಎಂಬ ಗ್ರಂಥವನ್ನು ರಚಿಸಿದನೆಂತಲೂ, ಇತಿಹಾಸವಿರುತ್ತದೆ

2 ಅಥರ್ವವೇದದ ಉಪಾಂಗವಾದ ಆಯುರ್ವೇದವನ್ನು ಬ್ರಹ್ಮನು ಪ್ರಜೆಗಳನ್ನು ಸೃಷ್ಟಿಸುವದಕ್ಕೆ ಮೊದಲೇ ಸಹಸ್ರ ಅಧ್ಯಾಯಗಳಾಗಿ ಒಂದು ಲಕ್ಷ ಶ್ಲೋಕಗಳಿಂದ ರಚಿಸಿದನೆಂತಲೂ, ಆ ಮೇಲೆ ಮನುಷ್ಯರು ಅಲ್ಪಾಯುಸ್ಸುಳ್ಳವರೂ ಅಲ್ಪಬುದ್ಧಿಯವರೂ ಆಗಿರುವದನ್ನು ಆಲೋಚಿಸಿ, ಎರಡನೇ ಅದನ್ನು ಶಲ್ಯ, ಶಾಲಾಕ್ಯ, ಕಾಯಚಿಕಿತ್ಸಾ, ಭೂತವಿದ್ಯಾ, ಕೌಮಾರಭೃತ್ಯ, ಅಗದತಂತ್ರ, ರಸಾಯನತಂತ್ರ ಮತ್ತು ವಾಜೀಕರಣತಂತ್ರ, ಎಂಬ ಅಷ್ಟಾಂಗಗಳಾಗಿ ವಿಭಾಗಿಸಿ, ಗ್ರಂಥಗಳನ್ನು ರಚಿಸಿದನೆಂತಲೂ, ಸುಶ್ರುತಸಂಹಿತೆಯಲ್ಲಿ ಹೇಳ

ಲ್ಪಟ್ಟದೆ. ಆದರೆ ಅದು ಆ ಕಾಲದಲ್ಲಿಯೇ ಪುರಾಣೋಕ್ತಿಯಾಗಿರಬೇಕು ಯಾಕೆಂದರೆ ಅದರಲ್ಲಿಯೇ ಬ್ರಹ್ಮನು ಆಯುರ್ವೇದವನ್ನು ದಕ್ಷಪ್ರಜಾಪತಿಗೆ ಹೇಳಿದ ಪ್ರಕಾರ, ಅವನು ಅಶ್ವಿನೀದೇವತೆಗಳಿಗೆ, ಅವರು ಇಂದ್ರನಿಗೆ, ಅವನು ಧನ್ವಂತರಿಗೆ, ಆ ಧನ್ವಂತರಿಯು ಸುಶ್ರುತ ಮೊದಲಾದ ಋಷಿಗಳಿಗೆ, ಉಪದೇಶಮಾಡಿದ್ದಾಗಿ ವಿವರಿಸಲ್ಪಟ್ಟಿದೆ ಚರಕಸಂಹಿತೆಯಲ್ಲಿಯೂ ಅದೇ ರೀತಿ ಬ್ರಹ್ಮನಿಂದ ಪ್ರಜಾಪತಿ, ಪ್ರಜಾಪತಿಯಿಂದ ಅಶ್ವಿನೀದೇವತೆಗಳು, ಅಶ್ವಿನೀದೇವತೆಗಳಿಂದ ಇಂದ್ರನು, ಆಯುರ್ವೇದವನ್ನು ಸಂಪೂರ್ಣವಾಗಿ ಕಲಿತದ್ದಾಗಿಯೂ, ಬಹು ಋಷಿಗಳಿಂದ ಪ್ರತಿನಿಧಿಯಾಗಿ ಕಳುಹಿಸಲ್ಪಟ್ಟ ಭರದ್ವಾಜನಿಗೆ ಇಂದ್ರನು ಆದನ್ನು ಸುಲಭವಾದ ಕ್ರಮದಲ್ಲಿ ಉಪದೇಶಮಾಡಿದ ಮೇರೆಗೆ ಆ ಭರದ್ವಾಜನು ಆ ಋಷಿಗಳಿಗೆಲ್ಲಾ ವಿವರಿಸಿದ ನೆಂತಲೂ, ಅನಂತರ ಅತ್ರಿಕುಲದವನಾದ ಪುನರ್ವಸುವು ಅಗ್ನಿವೇಶ, ಭೇಲ, ಜತೂಕರ್ಣ, ಪರಾಶರ, ಹಾರೀತ ಮತ್ತು ಕ್ಷಾರಪಾಣಿ ಎಂಬ ಹೆಸರಿನ ಆರು ಮಂದಿ ಶಿಷ್ಯರುಗಳಿಗೆ ಆಯುರ್ವೇದವನ್ನು ಏಕರೀತಿಯಲ್ಲಿ ಉಪದೇಶಮಾಡಿದನೆಂತಲೂ, ಆ ಶಿಷ್ಯರುಗಳೊಳಗೆ ವಿಶೇಷ ಬುದ್ಧಿಯುಳ್ಳವನಾಗಿದ್ದ ಅಗ್ನಿವೇಶನು ಪ್ರಥಮತಃ, ಮಿಕ್ಕವರು ಅನಂತರ, ಬೇರೆಬೇರೆ ತಂತ್ರಗಳನ್ನು ರಚಿಸಿದರೆಂತಲೂ ವರ್ಣಿತವಾಗಿದೆ. ಚರಕಸಂಹಿತೆಯ ಅನೇಕ ಅಧ್ಯಾಯಗಳ ಆರಂಭದಲ್ಲಿ "ಇತಿಹಸ್ಮಾಹ ಭಗವಾನಾತ್ರೇಯಃ" (ಅಂದರೆ ಭಗವಂತನಾದ ಆತ್ರೇಯ ಮುನಿಯು ಹೀಗೆ ಹೇಳುತ್ತಾನೆ) ಎಂತಲೂ, ಕೊನೆಯಲ್ಲಿ "ಅಗ್ನಿವೇಶಕೃತೇ ತಂತ್ರೇ ಚರಕ ಪ್ರತಿಸಂಸ್ಕೃತೇ" (ಅಂದರೆ ಅಗ್ನಿವೇಶನಿಂದ ರಚಿಸಲ್ಪಟ್ಟು ಚರಕನಿಂದ ಪ್ರತಿಸಂಸ್ಕಾರ ಮಾಡಲ್ಪಟ್ಟ ತಂತ್ರದಲ್ಲಿ) ಎಂತಲೂ ನಿರ್ದಿಷ್ಟವಾಗಿರುತ್ತದೆ ಈ ಸಂಹಿತೆಯ ಹೆಚ್ಚಿನ ಅಂಶವು ಶ್ಲೋಕರೂಪವಾಗಿರುತ್ತದಾದರೂ, ಅಲ್ಲಲ್ಲಿ ವಾಕ್ಯರೂಪವಾದ ಉಪದೇಶಗಳು ಕಾಣುತ್ತವೆ ಶ್ಲೋಕಗಳು ಅಗ್ನಿವೇಶನಿಂದ ರಚಿಸಲ್ಪಟ್ಟವೆಂತಲೂ, ವಾಕ್ಯಗಳು ಚರಕನ ಸ್ವಯಂಕೃತವೆಂತಲೂ, ಕೆಲವರ ಅಭಿಪ್ರಾಯವಿದೆ ಅತಿಸಂಕ್ಷೇಪವಾಗಿ ಹೇಳಲ್ಪಟ್ಟ ಅಂಶವನ್ನು ವಿಸ್ತರಿಸಿ, ಅತಿವಿಸ್ತಾರವನ್ನು ಸಂಕ್ಷೇಪಿಸಿ, ಹಳೇದಾದ ಗ್ರಂಥವನ್ನು ಪುನಃ ಹೊಸತು ಮಾಡುವದು ಸಂಸ್ಕಾರ ಮಾಡುವವನ ಕೆಲಸವೆಂಬದು ಚರಕಸಂಹಿತೆಯಲ್ಲಿಯೇ ಹೇಳಲ್ಪಟ್ಟದೆ. ವಾಕ್ಯಗಳು ಮಾತ್ರ ಚರಕಕೃತ ಎಂಬದು ಬರೇ ಊಹೆ. ಚರಕಸಂಹಿತೆಯ 120 ಅಧ್ಯಾಯಗಳೊಳಗೆ ಕಡೇ 41 ಅಧ್ಯಾಯಗಳನ್ನು ಕಾಲಾಂತರದಲ್ಲಿ ದೃಢಬಲ ಎಂಬವನು ಸೇರಿಸಿದ್ದೆಂತ ಪ್ರಫುಲ್ಲಚಂದ್ರರಾಯರವರು ಹೇಳುತ್ತಾರೆ. ಔಷಧ ಅಧ್ಯಾಯಗಳೊಳಗೆ 17, ಸಿದ್ಧಿ ಸ್ಥಾನ (ಅಧ್ಯಾಯಗಳು 12) ಮತ್ತು ಕಲ್ಪಸ್ಥಾನ (ಅಧ್ಯಾಯಗಳು 12), ಇವುಗಳಿಂದ ಪಂಡನದಪುರದಲ್ಲಿ ಹುಟ್ಟಿದವನಾದ ದೃಢಬಲನು ಚರಕನ ತಂತ್ರವನ್ನು ಸಂಪೂರ್ಣಮಾಡಿದನೆಂತ ಗ್ರಂಥದ ಕೊನೆಯಲ್ಲ ಹೇಳಲ್ಪಟ್ಟರೂ, ಆ ಭಾಗಗಳಲ್ಲಿ ಅಪೂರ್ಣವಾದ ಅಂಶಗಳನ್ನು ತುಂಬಿಸುವದು, ಅಶುದ್ಧವಾದಂಶಗಳನ್ನು ಶುದ್ಧಪಡಿಸುವದು, ಇತ್ಯಾದಿ ಪರಿಷ್ಕಾರಗಳನ್ನು ದೃಢಬಲನು ಧಾರಾಳವಾಗಿ ಮಾಡಿರುತ್ತಾನೆಂತಲ್ಲದೆ, ಆ ಅಧ್ಯಾಯಗಳು ಮೊದಲು ಚರಕನ ತಂತ್ರದಲ್ಲಿ ಇರಲಿಲ್ಲ ಎಂತ ತಾತ್ಪರ್ಯವಾಗಿರಲಿಕ್ಕಿಲ್ಲ. ಯಾಂಕೆದರೆ, ಸೂತ್ರಸ್ಥಾನದಲ್ಲಿ ಕಡೇದಾದ 30ನೇ ಅಧ್ಯಾಯದಲ್ಲಿ ಇಡೀ ತಂತ್ರದ 120 ಅಧ್ಯಾಯಗಳೂ ನಿರ್ದಿಷ್ಟವಾಗಿವೆ, ಮತ್ತು ದೃಢಬಲನಿಂದ ಸಂಸ್ಕಾರಮಾಡಲ್ಪಟ್ಟವೆಂಬ 41 ಅಧ್ಯಾಯಗಳೊಳಗೆ ಅನೇಕ ಅಧ್ಯಾಯಗಳ ಆರಂಭದಲ್ಲಿ ಅಗ್ನಿವೇಶನು ಆತ್ರೇಯನ ಹತ್ತರ ಮಾಡಿದ ಪ್ರಶ್ನೆಗಳು ಸಹ

ಕಾಣುತ್ತವೆ. ಹೀಗೆಯೇ ಸುಶ್ರುತಸಂಹಿತೆಯಲ್ಲಿ ಕಡೇ ಭಾಗವಾದ ಉತ್ತರತಂತ್ರ ಎಂಬ 66 ಅಧ್ಯಾಯಗಳನ್ನು ನಾಗಾರ್ಜುನನೆಂಬ ಬೌದ್ಧನು ಕಾಲಾಂತರದಲ್ಲಿ ಸೇರಿಸಿದ್ದಿಂತ ಕೆಲವರ ಮತವಿರುತ್ತದೆ. ಆದರೆ ಸುಶ್ರುತಸಂಹಿತೆಯಲ್ಲಿ 'ಅಧ್ಯಯನ ಸಂಪ್ರದಾನೀಯಂ' ಎಂಬ ಮೂರನೇ ಅಧ್ಯಾಯದಲ್ಲಿ ಉತ್ತರತಂತ್ರದ 66 ಅಧ್ಯಾಯಗಳು ಸೇರಿ, ಇಡೀ ತಂತ್ರದ 186 ಅಧ್ಯಾಯಗಳ ವಿಷಯಗಳು ಸೂಚಿಸಲ್ಪಟ್ಟವೆ ಮತ್ತು ಆ ಉತ್ತರತಂತ್ರದ ವಿಷಯವಾಗಿ

"ಶ್ರೇಷ್ಠತ್ವಾದುತ್ತರಂ ಹ್ಯೇತತ್ತಂತ್ರಮಾಹುರ್ಮಹರ್ಷಯಃ ।
ಬಹ್ವರ್ಥಸಂಗ್ರಹಾಚ್ಚ್ರೇಷ್ಠಮುತ್ತರಂ ಚಾಪಿ ಪಶ್ಚಿಮಮ್" ॥

ಎಂಬ ವಿವರ ಕಾಣುತ್ತದೆ. ಅಂದರೆ "ಈ ತಂತ್ರವು ಶ್ರೇಷ್ಠವಾದ್ದರಿಂದ ಇದಕ್ಕೆ ಉತ್ತರ ಎಂತ ಮಹರ್ಷಿಗಳು ಹೇಳುತ್ತಾರೆ. ಅದರ ಶ್ರೇಷ್ಠತ್ವವು ಅದರಲ್ಲಿ ಬಹಳವಾದ ಅರ್ಥಸಂಗ್ರಹಿಸಲ್ಪಟ್ಟಿರುವದರಿಂದ ಆಗಿರುತ್ತದೆ. ಅದಲ್ಲದೆ ಉತ್ತರ ಎಂದರೆ ಕಡೇದು" ಈ ಉತ್ತರತಂತ್ರದ ಅನೇಕ ಅಧ್ಯಾಯಗಳಲ್ಲಿಯೂ ಸುಶ್ರುತನ ಪ್ರಶ್ನೆಗಳಿಗೆ ಉತ್ತರವಾಗಿ ಧನ್ವಂತರಿಯ ಅವತಾರನಂದ ದಿವೋದಾಸನು ಮಾಡಿದ ಉಪದೇಶವೆಂತ ನಿರ್ದಿಷ್ಟವಾಗಿದೆ. ಉತ್ತರತಂತ್ರ ಸಹ ಸುಶ್ರುತನಿಂದಲೇ ಕಡೆಗೆ ರಚಿತವಾದ್ದಿಂತ ಯಾಕೆ ತಿಳಿಯಬಾರದೆಂಬದಕ್ಕೆ ಸಮರ್ಥ ಕಾರಣವೇನೂ ಕಾಣುವದಿಲ್ಲ ಚರಕಸಂಹಿತೆಯಲ್ಲಿರುವ ಕೆಲವು ಶ್ಲೋಕಗಳೇ ಸುಶ್ರುತದಲ್ಲಿಯೂ ಕಾಣುವದರಿಂದ, ಅವುಗಳೆಲ್ಲಾ ತಂತ್ರವನ್ನು ಸಂಸ್ಕರಿಸುವದಕ್ಕೋಸ್ಕರ ನಾಗಾರ್ಜುನನಿಂದ ಹೊಸತಾಗಿ ಕೂಡಿಸಲ್ಪಟ್ಟವುಗಳು ಆಗಿರಬೇಕೆಂತ ಊಹಿಸುವದು ಸರಿ ಕಾಣುವದಿಲ್ಲ ಅವುಗಳು ಈ ಎರಡು ಸಂಹಿತೆಗಳಿಗೂ ಹಿಂದೆ ರಚಿತವಾಗಿದ್ದ ಗ್ರಂಥಗಳಿಂದ ತೆಗೆಯಲ್ಪಟ್ಟವು ಎಂಬ ಅನುಮಾನವೇ ಬಲವಾದ್ದಾಗಿ ಕಾಣುತ್ತದೆ.

3. ಅಗ್ನಿವೇಶನ ಸಹಪಾಠಿಯಾದ ಭೇಳನು (ಅಥವಾ ಭೇಡನು) ರಚಿಸಿದ ತಂತ್ರದ ಪ್ರತಿಯು ತಂಜಾವೂರು ಅರಮನೆಯ ಪುಸ್ತಕಾಲಯದಲ್ಲಿ ಸಿಕ್ಕಿದೆ ಎಂತಲೂ, ಅದು ಅಪೂರ್ಣವಾಗಿರುತ್ತದೆಂತಲೂ, ಬರದ್ದು ಕಾಣುತ್ತದೆ ಹಾರೀತಸಂಹಿತೆಯೆಂಬದೊಂದು ಗ್ರಂಥ ಛಾಪೆಯಾಗಿದೆ. ಅದು ಹಾರೀತನಿಗೆ ಆತ್ರೇಯನು ಮಾಡಿದ ಉಪದೇಶವಾಗಿ ಅದರಲ್ಲಿ ಉಕ್ತವಾಗಿದೆ. ಅದರ ಕಡೇ ಅಧ್ಯಾಯದಲ್ಲಿ ಕಾಣುವ

ಚರಕಃ ಸುಶ್ರುತಶ್ಚೈವ ವಾಗ್ಭಟಶ್ಚ ತಥಾಪರಃ ।
ಮುಖ್ಯಾಶ್ಚ ಸಂಹಿತಾ ವಾಚ್ಯಾಸ್ತಿಸ್ರ ಏವ ಯುಗೇಯುಗೇ ।
ಅತ್ರಿಃ ಕೃತಯುಗೇ ವೈದ್ಯೋ ದ್ವಾಪರೇ ಸುಶ್ರುತೋ ಮತಃ ।
ಕಲೌ ವಾಗ್ಭಟನಾಮಾ ಚ ಗರಿಮಾತ್ರ ಪ್ರದೃಶ್ಯತೇ ॥

ಎಂದರೆ:— "ಚರಕ, ಸುಶ್ರುತ ಮತ್ತು ವಾಗ್ಭಟ ಎಂಬ ಮೂರು ಸಂಹಿತೆಗಳನ್ನು ಮುಖ್ಯವಾಗಿ ಓದತಕ್ಕದ್ದು. ಕೃತಯುಗದಲ್ಲಿ ಅತ್ರಿ, ದ್ವಾಪರದಲ್ಲಿ ಸುಶ್ರುತ ಮತ್ತು ಕಲಿಯುಗದಲ್ಲಿ ವಾಗ್ಭಟ ಶ್ರೇಷ್ಠ ವೈದ್ಯರಾಗಿ ಕಾಣುತ್ತಾರೆ" ಎಂಬ ವಚನಗಳಿಂದ ಆ ಗ್ರಂಥವನ್ನು ರಚಿಸಿದ ಹಾರೀತನು ಅಗ್ನಿವೇಶನ ಸಹಪಾಠಿಯಲ್ಲ ಎಂಬದು ಸ್ಪಷ್ಟವಾಗುತ್ತದೆ. ಯಾಕೆಂದರೆ ಚರಕ ಮತ್ತು ಸುಶ್ರುತಸಂಹಿತೆಗಳು ಉಂಟಾಗಿ ಬಹುಕಾಲದನಂತರ ವಾಗ್ಭಟ ರಚಿಸಲ್ಪಟ್ಟದ್ದೆಂಬದು ನಿರ್ವಿವಾದವಾದ ಅಂಶ. ಅದಲ್ಲದೆ, ಆ ಹಾರೀತಸಂಹಿತೆಯ ಕಾವ್ಯರಚನಾರೀತಿಯೇ ಅದರ ಅರ್ವಾಚೀನತೆಯನ್ನು ತೋರಿಸುತ್ತದೆ. ವಾಗ್ಭಟನ ಕಾಲದಲ್ಲಿ ಭೇಳನ ಗ್ರಂಥವಿದ್ದರೂ,

ಅದನ್ನು ಜನರು ಓದುವದು ಕಡಿಮೆಯಾಗಿತ್ತೆಂಬದು ಅದರಲ್ಲಿಯ ಈ ಕೆಳಗಣ ಶ್ಲೋಕದಿಂದ ತಿಳಿದುಬರುತ್ತದೆ —

ಋಷಿಪ್ರಣೀತೇ ಪ್ರೀತಿಶ್ಚೇನ್ಮುಕ್ತ್ವಾ ಚರಕಸುಶ್ರುತೌ ।
ಭೇಡಾದ್ಯಾಃ ಕಿಂ ನ ಪಠ್ಯಂತೇ ತಸ್ಮಾದ್ಗ್ರಾಹ್ಯಂ ಸುಭಾಷಿತಮ್ ॥

ಅಂದರೆ 'ಋಷಿಪ್ರಣೀತವಾದ ತಂತ್ರದಲ್ಲಿಯೇ ಜನರಿಗೆ ಪ್ರೀತಿಯಂತಾದರೆ, ಚರಕ ಸುಶ್ರುತಗಳ ಲ್ಲದೆ ಭೇಳಾದ್ಯರ ತಂತ್ರಗಳನ್ನು ಅವರು ಯಾಕೆ ಓದುವದಿಲ್ಲ' ಆದ್ದರಿಂದ ಸುಭಾಷಿತವಾದದ್ದು ಯಾರದೇಯಾದರೂ ಗ್ರಾಹ್ಯವಾಗಿರುತ್ತದೆ' ಹಾರೀತಸಂಹಿತಾ ಮುಂತಾದ ಅನೇಕ ಪುರಾತನಗ್ರಂಥಗಳು ಹಸ್ತಲಿಖಿತವಾಗಿ ಇತ್ತಲಾಗಿನ ವರೆಗೆ ಅಪರೂಪವಾಗಿ ದೊರೆಯುತ್ತಿದ್ದವು ಎಂಬದು ವೈದ್ಯಸಾರಸಂಗ್ರಹದ ಈ ಕೆಳಗಣ ವಾಕ್ಯದಿಂದ ಕಾಣುತ್ತದೆ —"ಶ್ರೀಮನ್ಮಹೀಶೂರ ಮಹಾರಾಜರವರ ಸೇನಾಪತಿಯಾಗಿದ್ದ ಸಂಬರಾಜೀ ಅರಸಿನವರು ಸಕಲ ಜನೋಪಕಾರದೃಷ್ಟಿಯಿಂದ ಆಯುರ್ವೇದ, ಧನ್ವಂತರೀಯ, ಹಾರೀತಸಂಹಿತಾ, ಕಾಶ್ಯಪಸಂಹಿತಾ, ಬಾಹಟ, ಭಗೀರಥಸಂಹಿತಾ, ಮಹಾಯಾತಸಂಹಿತಾ, ಕುಮಾರಸಂಹಿತಾ, ಪಿರಣ್ಯಕೇಶೀಯ, ಅಗ್ನಿವರ್ಮ, ಋಷ್ಯಶೃಂಗಸಂಹಿತಾ, ನಾರಾಯಣೀಯ, ಭರದ್ವಾಜಸಂಹಿತಾ, ಆತ್ರೇಯಸಂಹಿತಾ, ವೃದ್ಧಾತ್ರೇಯಸಂಹಿತಾ, ವೈದ್ಯಕಲ್ಪತರು, ಸಿದ್ಧತಂತ್ರ, ಸಿದ್ಧಸಾರ, ಭೋಜರಾಜೀಯ, ಅಗ್ನಿವೇಶೀಯ, ಚಿಕಿತ್ಸಾಮೃತ, ನಿತ್ಯನಾಥ, ಪ್ರಯೋಗಾಮೃತ, ಸಿದ್ಧಪ್ರಯೋಗ, ವೈದ್ಯಸಂಗ್ರಹ, ಯೋಗಾಮೃತ, ಮಹಾಸಾರ, ಷಷ್ಟಿಷ್ಟಿ, ಜಂಘ್ರಿಕಾ, ಕಾಂಚೀನಾಥ, ಶಾರ್ಙ್ಗಧರ, ಸುಶ್ರುತ, ಶತಶ್ಲೋಕಿ, ಲೋಲಂಬರಾಜೀಯ, ಪ್ರಯೋಗಸಾರ, ಶಬರಸಂಹಿತೆ, ಮೊದಲಾದ ಇನ್ನೂ ಅನೇಕ ಪೂರ್ವಗ್ರಂಥಗಳನ್ನು ಸಂಗ್ರಹಿಸಿ, ಸಕಲ ವೈದ್ಯಗ್ರಂಥಸಾರ ಪ್ರತಿಪಾದಕವಾದ ವೈದ್ಯಸಾರ ಸಂಗ್ರಹವೆಂಬ ಈ ಗ್ರಂಥವನ್ನು ರಚಿಸಿದರು" ಮೇಲಿನ ಪಟ್ಟಿಯಲ್ಲಿ ಉದಾಹೃತವಾದ ಕೆಲವು ಗ್ರಂಥಗಳಿಗಿಂತ ಹೆಚ್ಚು ಗುಣವತ್ತಾಗಿ ಪ್ರಸಿದ್ಧವಾಗಿರುವ ವೃದ್ಧವಾಗ್ಭಟ, ಮಾಧವನಿದಾನ, ರಸಾರ್ಣವ, ರಸಸಮುಚ್ಚಯ, ರಸೇಂದ್ರಚಿಂತಾಮಣಿ, ರಸರತ್ನಾಕರ, ಭಾವಪ್ರಕಾಶ, ಚಿಕಿತ್ಸಾಸಾರಸಂಗ್ರಹ, ಮುಂತಾದ ಅನೇಕ ಪುರಾತನ ಗ್ರಂಥಗಳು ಪ್ರಕಟವಾಗಿವೆ ಇನ್ನು ಸಂಸ್ಕೃತದಲ್ಲಿಯೂ, ಬೇರೆ ಬೇರೆ ದೇಶಭಾಷೆಗಳಲ್ಲಿಯೂ, ರಚಿಸಲ್ಪಟ್ಟಿರುವ ಅರ್ವಾಚೀನ ಗ್ರಂಥಗಳು ಅಸಂಖ್ಯಾತವಾಗಿವೆ. ಆದರ,

ನಿದಾನೇ ಮಾಧವಃ ಶ್ರೇಷ್ಠಃ ಸೂತ್ರಸ್ಥಾನೇ ತು ವಾಗ್ಭಟಃ ।
ಶಾರೀರೇ ಸುಶ್ರುತಃ ಪ್ರೋಕ್ತಶ್ಚರಕಸ್ತು ಚಿಕಿತ್ಸಿತೇ ॥

ಅಂದರೆ "ರೋಗದ ನಿದಾನದ ವಿಷಯದಲ್ಲಿ ಮಾಧವ, ಸೂತ್ರಸ್ಥಾನದಲ್ಲಿ ವಾಗ್ಭಟ, ಶಾರೀರದಲ್ಲಿ ಸುಶ್ರುತ, ಮತ್ತು ಚಿಕಿತ್ಸೆಯಲ್ಲಿ ಚರಕ, ಶ್ರೇಷ್ಠ" ಈ ಅಭಿಪ್ರಾಯ ಆ ನಾಲ್ಕು ಗ್ರಂಥಗಳು ಪ್ರಕಟವಾದ ಕಾಲದಿಂದ ಈ ವರೆಗೂ ಅಂಗೀಕೃತವಾಗಿದೆ. ಆ ಗ್ರಂಥಗಳ ಅರಬಿಯಲ್ಲಿ ಮಾಡಲ್ಪಟ್ಟ ಭಾಷಾಂತರಪ್ರತಿಗಳು ಕ್ರಿಸ್ತಶಕದ 8ನೇ ಶತಮಾನದಲ್ಲಿ ಅರಬಿಸ್ಥಾನದ ಮುಖ್ಯ ಪಟ್ಟಣವಾದ ಬಾಗ್ದಾದಿನಲ್ಲಿ ಸ್ಥಾಪಿತವಾದ ರಾಜರ ಪುಸ್ತಕಾಲಯದಲ್ಲಿ ಇದ್ದವು ಎಂಬದು ನಿರ್ಣೀತವಾಗಿದೆ.

4. ಚರಕ ಮತ್ತು ಸುಶ್ರುತ ಸಂಹಿತೆಗಳು ಬಹಳ ದೊಡ್ಡ ಗ್ರಂಥಗಳಾಗಿ, (ಛಾಪಖಾನೆಯಿಲ್ಲದ ಕಾಲದಲ್ಲಿ) ಅವುಗಳನ್ನು ಸಂಗ್ರಹಿಸಿ ಕಲಿಯುವದು ಸಾಮಾನ್ಯ ಜನರಿಗೆ ಅತಿ

ಪ್ರಯಾಸ ಎಂಬ ಮುಖ್ಯ ಕಾರಣದ ಮೇಲೆ ತಾನು ಅಷ್ಟಾಂಗಹೃದಯ ಎಂಬ ಗ್ರಂಥವನ್ನು ಅತಿವಿಸ್ತಾರವೂ ಅತಿಸಂಕ್ಷೇಪವೂ ಇಲ್ಲದ ರೀತಿಯಲ್ಲಿ ರಚಿಸುವದಕ್ಕೆ ಉದ್ಯುಕ್ತನಾದ್ದಿಂತ ವಾಗ್ಭಟನ ಸಂಹಿತೆಯಲ್ಲಿಯೇ ಕಾಣುತ್ತದೆ ಈ ಅಷ್ಟಾಂಗಹೃದಯವು ಚರಕ ಮತ್ತು ಸುಶ್ರುತಸಂಹಿತೆಗಳ ಸಾರವನ್ನು ಸಂಗ್ರಹಿಸಿ, ಭೇಳನ ಮತ್ತು ಹಾರೀತನ ತಂತ್ರಗಳಿಂದ ಕೆಲವು ಅಂಶಗಳನ್ನು ಹೆಕ್ಕಿ ಕೂಡಿಸಿ, ರಚಿಸಲ್ಪಟ್ಟದ್ದಲ್ಲದೆ, ಅದರಲ್ಲಿ ಅಪೂರ್ವವಾದದ್ದು ಇಲ್ಲ ಎನ್ನ ಬೇಕು ಎಂತ ಪ್ರಫುಲ್ಲಚಂದ್ರರಾಯರವರು ಬರದಿದ್ದಾರೆ. ಸಂಕ್ಷೇಪವಾಗಿಯೂ, ಗಂಭೀರಾರ್ಥ ವಾಗಿಯೂ ಇರುವದರಿಂದ, ಅದು ಕಲಿತ ಮೇಲೆ ನೆನಪಿನಲ್ಲಿಟ್ಟುಕೊಳ್ಳುವದಕ್ಕ ಬಹು ಅನುಕೂಲ ವಾಗಿರುತ್ತದಾದರೂ, ವ್ಯಾಖ್ಯಾನ, ಅಥವಾ ಗುರುವಿನ ಉಪದೇಶ, ವಿನಾ ಅದನ್ನು ತಿಳಿಯುವದು ಕಷ್ಟವಾಗಿ ಕಂಡೀತು. ವಾಗ್ಭಟನು ಬೌದ್ಧಮತದವನಾಗಿದ್ದ ಎಂತ ಪ್ರ. ಚಂದ್ರರಾಯರವರು ಮುಂತಾದ ಕೆಲವು ಗ್ರಂಥಕಾರರು ಸಾಧಿಸುತ್ತಾರೆ ಆ ಅಭಿಪ್ರಾಯಕ್ಕೆ ವಿರೋಧ ಪಕ್ಷದವರೂ ಇರುತ್ತಾರೆ ಚರಕಾದಿಗಳು ಹೇಳಿದಂತೆ ದೂತಶಕುನಾದಿಗಳ ಫಲದಾಯಕತ್ವ ವನ್ನು ಒಪ್ಪಿ, ದಾನ ಹೋಮ ಜಪಾದಿಗಳಿಂದ ಪಾಪದ ಫಲವು ಕಡಿಮೆಯಾಗುತ್ತದೆಂತ ಬರ ದಿರುವದು ಮುಂತಾದ್ದನ್ನು ಆಲೋಚಿಸಿದರೆ, ಗ್ರಂಥಕರ್ತೃ ಬೌದ್ಧನೆಂಬ ಸಾಧನೆಯು ಸರಿ ಕಾಣುವದಿಲ್ಲ ಇದೆಲ್ಲಾ ಹ್ಯಾಗಿದ್ದರೂ, ಚರಕಸಂಹಿತೆಯು ಯಾವ ಶೋಧನದಿಂದಾದರೂ ಬುದ್ಧನ ಜನ್ಮಕ್ಕೆ (ಅಂದರೆ ಇಪ್ಪತ್ತೈದು ಶತಮಾನಗಳಿಗೆ) ಹಿಂದಿನದು ಎನ್ನುವದರಲ್ಲಿ ಸಂದೇಹ ವಿಲ್ಲ ಎಂತ ಪ್ರ. ಚಂದ್ರರಾಯರವರು ಬರದಿದ್ದಾರೆ.

5. ಸುಶ್ರುತಸಂಹಿತೆಯು ಚರಕಸಂಹಿತೆಯ ಅನಂತರದ ಗ್ರಂಥ ಎಂತ ಸಾಧಾರಣವಾಗಿ ಎಣಿಸಲ್ಪಡುತ್ತದೆ ಕೃತಯುಗಕ್ಕೆ ಚರಕನೂ, ದ್ವಾಪರಕ್ಕೆ ಸುಶ್ರುತನೂ, ಕಲಿಯುಗಕ್ಕೆ ವಾಗ್ಭಟನೂ ಶ್ರೇಷ್ಠ ಎಂಬ ತಾತ್ಪರ್ಯದ ಮೇಲೆ ಎತ್ತಿದ ಶ್ಲೋಕವು ಮತ್ತು ಬೇರೆಬೇರೆ ಕಾಲ ಗಳಲ್ಲಿ ಶೇಷನೂ, ಧನ್ವಂತರಿಯೂ ಅವತಾರವಾದರೆಂಬ ಇತಿಹಾಸವು ಈ ಮತಕ್ಕೆ ಒಲ ಕೊಡುತ್ತವೆ. ಈ ಮತವನ್ನು ಅಂಗೀಕರಿಸುವದಕ್ಕೆ ಕವಿರಾಜ ನಾಗೇಂದ್ರನಾಥಸೇನಗುಪ್ತರು ಸಂದೇಹಪಡುತ್ತಾರೆ. ಆ ಎರಡು ಸಂಹಿತೆಗಳೊಳಗೆ ಕಾಣುವ ಮುಖ್ಯವಾದ ಭೇದಗಳು ಯಾವವೆಂದರೆ — ವೈದ್ಯಕರ್ಮದ ಅಷ್ಟಾಂಗಗಳಲ್ಲಿ ಶಲ್ಯತಂತ್ರವನ್ನೇ ಪ್ರಧಾನವಾಗಿಟ್ಟು ಕೂಂಡು, ಅದನ್ನೇ ಮುಂದಾಗಿ ಸುಶ್ರುತನು ವಿವರಿಸಿದ್ದಾನೆ.

ಔಷಧೇನವಮೌರಭ್ರಂ ಸೌಶ್ರುತಂ ಪೌಷ್ಕಲಾವತಮ್ ।
ಶೇಷಾಣಾಂ ಶಲ್ಯತಂತ್ರಾಣಾಂ ಮೂಲಾನ್ಯೇತಾನಿ ನಿರ್ದಿಶೇತ್ ॥

ಅಂದರೆ ಔಷಧೇನವ, ಔರಭ್ರ, ಸುಶ್ರುತ, ಪೌಷ್ಕಲಾವತ, ಇವರು ನಾಲ್ವರು ರಚಿಸಿದ ಶಲ್ಯ ತಂತ್ರಗಳು ಇತರ ಎಲ್ಲಾ ಶಲ್ಯತಂತ್ರಗಳಿಗೆ ಮೂಲವಾಗಿರುತ್ತವೆ ಎಂತ ಸುಶ್ರುತವೇ ಹೇಳುತ್ತದೆ. ಔಷಧೇನವ, ಔರಭ್ರ, ಪೌಷ್ಕಲಾವತ ಎಂಬವರು ಸುಶ್ರುತನೊಂದಿಗೆ ಧನ್ವಂತರಿಯಿಂದ ಪಾಠ ಕೇಳಿದವರೊಳಗೆ ಮೂವರಾಗಿರುತ್ತಾರೆ. ಅವರು ಮಾಡಿದ ತಂತ್ರಗಳು ಈ ವರೆಗೆ ದೊರೆದ ಹಾಗೆ ಕಾಣುವದಿಲ್ಲ. ಶಲ್ಯತಂತ್ರವೆಂಬದು ಯಂತ್ರ, ಶಸ್ತ್ರ, ಕ್ಷಾರ ಮತ್ತು ಅಗ್ನಿ, ಇವುಗಳ ಉಪಯೋಗದಿಂದ ಆಗತಕ್ಕ ಚಿಕಿತ್ಸೆ. ಸುಶ್ರುತದಲ್ಲಿ 101 ಪ್ರಕಾರವಾದ ಯಂತ್ರಗಳು ಮತ್ತು 20 ವಿಧವಾದ ಶಸ್ತ್ರಗಳು ವರ್ಣಿಸಲ್ಪಟ್ಟಿವೆ. ಗರ್ಭದಲ್ಲಿ ಮೃತವಾದ ಶಿಶುವನ್ನು ಶಸ್ತ್ರಗಳ ಉಪಯೋಗದಿಂದ, ಅಥವಾ ಶಸ್ತ್ರವಿಲ್ಲದೆ, ಹೊರಗೆ ತೆಗೆಯುವ ವಿಷಯದಲ್ಲಿ ಚಿಕಿತ್ಸಾಸ್ಥಾನದ

15ನೇ ಅಧ್ಯಾಯದಲ್ಲಿ ಸುಶ್ರುತನು ಬರೆದಿರುವ ಕ್ರಮವು ಈಗಿನ ಡಾಕ್ಟರರು ನಡಿಸುವ ಕ್ರಮಕ್ಕೆ ಸರಿಯಾಗಿಯೇ ಉಂಟೆಂತ ಒಬ್ಬರು ಪಾಶ್ಚಾತ್ಯ ವೈದ್ಯರು ಹೇಳಿದ್ದಾರೆ. ಚರಕ ಸಂಹಿತೆಯಲ್ಲಿ ಕಾಯಚಿಕಿತ್ಸೆಯೇ ಪ್ರಧಾನವಾಗಿ ಉಪದೇಶಿಸಲ್ಪಟ್ಟದೆ. ಕಾಯಚಿಕಿತ್ಸೆ ಯಂದರೆ ಸರ್ವಾಂಗವನ್ನಾಶ್ರಯಿಸಿ ಬರುವ ಜ್ವರಾತಿಸಾರಾದಿ ರೋಗಗಳಿಗೆ ಔಷಧಗಳಿಂದ ಮಾಡುವ ಚಿಕಿತ್ಸೆ. ಚರಕಸಂಹಿತೆಯ ಕಡೇ ಮಾತು ಏನಂದರೆ —

ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್ |

ಅಂದರೆ ಇದರಲ್ಲಿರುವಂಥಾದ್ದು ಬೇರೆ ಗ್ರಂಥಗಳಲ್ಲಿರಬಹುದು. ಇದರಲ್ಲಿಲ್ಲದ್ದು ಎಲ್ಲಿಯೂ ಇರದು. ಈ ಮಾತಿನಂತೆಯೇ ಈ ವರೆಗೂ ಚರಕಸಂಹಿತೆಯಲ್ಲಿ ಹೇಳಿರುವ ಚಿಕಿತ್ಸಾತತ್ವ ಗಳನ್ನೇ ಬೇರೆಬೇರೆ ಗ್ರಂಥಗಳಲ್ಲಿ ಬೇರೆಬೇರೆ ಕ್ರಮದಲ್ಲಿ ಸಂಕ್ಷೇಪವಾಗಿಯೋ, ವಿಸ್ತಾರ ವಾಗಿಯೋ, ವರ್ಣಿಸಿದ್ದಾರಲ್ಲದೆ, ಅವುಗಳಿಗೆ ಪ್ರತಿಪಕ್ಷವಾಗಿ ಯಾವ ಆಯುರ್ವೇದ ಗ್ರಂಥ ವಾದರೂ ಹುಟ್ಟಿರುವದಿಲ್ಲ ಚರಕನ ಕಾಲದನಂತರ ಪ್ರಚಾರಕ್ಕೆ ಬಂದಿರುವ ರಸ, ಭಸ್ಮ, ಮಾತ್ರಾದಿ ಕ್ರಮಗಳು ಚರಕನಿಂದ ಉಪದೇಶಿಸಲ್ಪಟ್ಟಿರುವ ಚಿಕಿತ್ಸಾತತ್ವಗಳಿಗೆ ಅನುಸರಿಸಿಯೇ ಇರುವಂಥವು.

ಎರಡನೇ ಭೇದವೇನಂದರೆ — ಚರಕಸಂಹಿತೆಯಲ್ಲಿ ಶಾಸ್ತ್ರಾರ್ಥಗಳು ಶ್ಲೋಕ (ಅಥವಾ ಸೂತ್ರ) ಸ್ಥಾನ-ನಿದಾನಸ್ಥಾನ-ವಿಮಾನಸ್ಥಾನ-ಶರೀರಸ್ಥಾನ-ಇಂದ್ರಿಯಸ್ಥಾನ-ಚಿಕಿತ್ಸಿತಸ್ಥಾನ-ಕಲ್ಪಸ್ಥಾನ-ಸಿದ್ಧಿಸ್ಥಾನ ಎಂಬ 8 ವಿಭಾಗಗಳಾಗಿ ಸಂಪಾದಿಸಲ್ಪಟ್ಟವೆ ಸುಶ್ರುತನು ಈ ವಿಭಾಗವನ್ನು ಒಪ್ಪಿಕೊಂಡ ಹಾಗೆ ಕಂಡರೂ, ತನ್ನ ಅರ್ಥಗಳನ್ನೆಲ್ಲಾ ಸೂತ್ರಸ್ಥಾನ-ನಿದಾನ ಸ್ಥಾನ-ಶಾರೀರಸ್ಥಾನ-ಚಿಕಿತ್ಸಿತಸ್ಥಾನ-ಕಲ್ಪಸ್ಥಾನ ಎಂಬ ಐದೇ ಭಾಗಗಳಲ್ಲಿ ಸಂಗ್ರಹಿಸಿ, ಪ್ರತಿ ಪಾದಿಸಿದ್ದಾನೆ. ಚರಕನು ವಿಮಾನ ಮತ್ತು ಇಂದ್ರಿಯಸ್ಥಾನಗಳಲ್ಲಿ ಹೇಳಿದ ವಿಷಯಗಳು ಸೂತ್ರಸ್ಥಾನದಲ್ಲಿಯೂ, ಸಿದ್ಧಿಸ್ಥಾನದ ಅಂಶವು ಚಿಕಿತ್ಸಾಸ್ಥಾನದಲ್ಲಿಯೂ, ಸುಶ್ರುತಸಂಹಿತೆ ಯಲ್ಲಿ ಕಾಣುತ್ತವೆ. ಸುಶ್ರುತನು ಆಯಾ ಸ್ಥಾನದಲ್ಲಿ ವಿವರಿಸಬೇಕಾದ ವಿಷಯಗಳಿಗೆ ತಕ್ಕ ಹಾಗೆ ಅಧ್ಯಾಯಗಳನ್ನು ಕಲ್ಪಿಸಿ, ವಿಷಯವನ್ನು ಆಯಾ ಅಧ್ಯಾಯದ ತಲೆಯಲ್ಲಿ ಉಲ್ಲೇಖಿಸಿ, ವಿಷಯಾರ್ಥಗಳನ್ನೆಲ್ಲಾ ನೆಟ್ಟಗಾಗಿ, ಅಧಿಕಪ್ರಸಂಗವಿಲ್ಲದೆ, ನಿರ್ದೇಶಿಸಿದ್ದಾನೆ. ಚರಕಸಂಹಿತೆಯಲ್ಲಿ ಇಂಥಾದ್ದೊಂದು ಕ್ರಮವನ್ನು ಪ್ರತಿಪಾದಿಸುವದಕ್ಕೆ, ಅಥವಾ ಅವ ಲಂಬಿಸುವದಕ್ಕೆ, ಪ್ರಯತ್ನಪಟ್ಟ ಹಾಗೆ ಕಾಣುವದಿಲ್ಲ. ಅಧ್ಯಾಯದ ಪ್ರಥಮ ವಾಕ್ಯದ ಮುಖ್ಯ ಶಬ್ದಗಳೇ ಸಾಧಾರಣವಾಗಿ ಅಧ್ಯಾಯಕ್ಕೆ ಶಿರೋನಾಮವಾಗಿ ಇಡಲ್ಪಟ್ಟಿವೆ. ಈ ಶಿರೋನಾಮದಿಂದ ಅಧ್ಯಾಯದಲ್ಲಿ ವ್ಯಾಖ್ಯಾತವಾದ ವಿಷಯವು ಅನೇಕ ಕಡೆಗಳಲ್ಲಿ ಸೂಚಿತ ವಾಗುವದಿಲ್ಲ. 'ತಸ್ಯಾಶಿತೀಯಾಧ್ಯಾಯ' ಎಂಬದರಲ್ಲಿ ಕಾಣುವದು ಋತುವರ್ಣನ ಮತ್ತು ಋತುಗಳಿಗೆ ತಕ್ಕ ಕರ್ತವ್ಯಗಳು, ಸದಾಚಾರಗಳನ್ನು ಉಪದೇಶಿಸುವ ಅಧ್ಯಾಯದ ಹೆಸರು 'ಇಂದ್ರಿಯೋಪಕ್ರಮಣೀಯ'. ಇದಲ್ಲದೆ ವಿಷಯಪ್ರತಿಪಾದನಾವಸರದಲ್ಲಿ ತರ್ಕ ವಿಮಾಂಸಾದಿ ಅನ್ಯಶಾಸ್ತ್ರಗಳನ್ನು ತಂದು ಒಡ್ಡುವದರಲ್ಲಿ ಆಚಾರ್ಯರಿಗೆ ಪ್ರೀತಿ ಹೆಚ್ಚು ಇತ್ತೆಂ ಬದು ವಿಮಾನಸ್ಥಾನದ 'ರೋಗಭಿಷಗ್ ಜಿತೀಯಮ' ಎಂಬ ಎಂಟನೇ ಅಧ್ಯಾಯದಲ್ಲಿರುವ ಕೆಲವು ವಿಷಯಗಳನ್ನು ಸೂಚಿಸುವದರಿಂದ ಸ್ಪಷ್ಟವಾದೀತು. ಆ ಅಧ್ಯಾಯದ ಆರಂಭದಲ್ಲಿ ಬುದ್ಧಿವಂತನಾದ ಒಬ್ಬ ಮನುಷ್ಯನು ತಾನು ಕಲಿಯತಕ್ಕ ಶಾಸ್ತ್ರವನ್ನು ಪರೀಕ್ಷಿಸಬೇಕೆಂತ

ಹೇಳಿ, ಆ ಶಾಸ್ತ್ರವು ಹ್ಯಾಗಿರಬೇಕೆಂಬದು, ಅನಂತರ ಅದೇ ರೀತಿ ಗುರುಪರೀಕ್ಷೆ, ಅಂಥಾ ಗುರು ವಿನ ಹತ್ತರ ಶಿಷ್ಯನು ಹ್ಯಾಗೆ ನಡಕೊಳ್ಳಬೇಕೆಂಬದು, ಕಲಿತ ಶಾಸ್ತ್ರಜ್ಞಾನವನ್ನು ದೃಢಪಡಿಸು ವದಕ್ಕೆ ಉಪಾಯವಾದ ಅಧ್ಯಯನ, ಅಧ್ಯಾಪನ, ಮತ್ತು ಆ ವಿದ್ಯೆಗೆ ಸಂಬಂಧಪಟ್ಟ ಸಂಭಾ ಷಣ, ಇವುಗಳ ಕ್ರಮ, ಅಧ್ಯಾಪನಾರಂಭದಲ್ಲಿ ಉಪನಯನರೂಪವಾದ ಹೋಮದ ಕ್ರಮ, ಶಿಷ್ಯನಲ್ಲಿರಬೇಕಾದ ಗುಣಗಳು, ನಿಯಮಗಳು ಮತ್ತು ಆಚಾರಗಳು, ಆ ಕುರಿತು ಶಿಷ್ಯನಿಗೆ ಅನುಜ್ಞೆಗಳು, ಸಂಭಾಷಣೆಯಲ್ಲಿ ವಿಶ್ವಾಸವುಳ್ಳವರ ಕೂಡೆ ಮತ್ತು ಸಭೆಯಲ್ಲಿ ಎಂಬ ಭೇದ, ಸಭಾಲಕ್ಷಣ, ತರ್ಕದ ರೀತಿ, ತರ್ಕದಲ್ಲಿ ಉಪಯೋಗಿಸಲ್ಪಡುವ ವಾದ, ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ, ಪ್ರತಿಜ್ಞಾ, ಸ್ಥಾಪನಾ, ಪ್ರತಿಷ್ಠಾಪನಾ, ಹೇತು, ಉಪನಯ, ನಿಗಮನ, ಉತ್ತರ, ದೃಷ್ಟಾಂತ, ಸಿದ್ಧಾಂತ, ಶಬ್ದ, ಪ್ರತ್ಯಕ್ಷ, ಅನುಮಾನ, ಔಪಮ್ಯ, ಐತಿಹ್ಯ, ಸಂಶಯ, ಪ್ರಯೋಜನ, ಸವ್ಯಭಿಚಾರ, ಜಿಜ್ಞಾಸಾ, ವ್ಯವಸಾಯ, ಅರ್ಥ ಪ್ರಾಪ್ತಿ, ಸಂಭವ, ಅನುಯೋಜ್ಯ, ಅನನುಯೋಜ್ಯ, ಅನುಯೋಗ, ಪ್ರತ್ಯನುಯೋಗ, ವಾಕ್ಯ ದೋಷ, ವಾಕ್ಯಪ್ರಶಂಸಾ, ಛಲ, ಅಹೇತು, ಅತೀತಕಾಲ, ಉಪಾಲಂಭ, ಪರಿಹಾರ, ಪ್ರತಿಜ್ಞಾ ಹಾನಿ, ಅಭ್ಯನುಜ್ಞಾ, ಹೇತ್ವಂತರ, ಅರ್ಥಾಂತರ, ನಿಗ್ರಹಸ್ಥಾನ ಎಂಬ ಪದಗಳ ಉದಾಹರಣ ಪುರಸ್ಸರವಾದ ವ್ಯಾಖ್ಯಾನ, ಅನಂತರ ಆಯುರ್ವೇದವಾದದ ಕೆಲವು ಪ್ರಕರಣಗಳು, ಈ ಪ್ರಕರಣಗಳೊಳಗೆ ಶರೀರದ ಪ್ರಕೃತಿಭೇದಗಳು, ವಿಕೃತಿ, ಬಲವರ್ಣಾದಿಗಳು, ಶರೀರದ ಅಂಗ ಗಳ ಪ್ರಮಾಣಗಳು, ಶಕ್ತಿಭೇದಗಳು, ಆಯುಃಪ್ರಮಾಣ, ಸಂವತ್ಸರ, ಅಯನಾದಿಕಾಲ ವಿಭಾಗಗಳು, ಋತುಚರ್ಯ, ವಮನವಿರೇಚನದ್ರವ್ಯಗಳ ಪಟ್ಟಿಗಳು, ಆಸ್ಥಾಪನಾದ್ರವ್ಯ ಗಳ ಷಡ್ರಸಗಳ ವಿಭಾಗದಿಂದ ಪಟ್ಟಿಗಳು, ಇತ್ಯಾದಿ ಬಹು ವಿಧವಾದ ಪ್ರಸ್ತಾಪಗಳು ಮುದ್ರಾಕ್ಷರಗಳ 33 ಪುಟಗಳಲ್ಲಿ ಇವೆ ಇಂಥಾ ಪ್ರಸಂಗಗಳು ಸುಶ್ರುತಸಂಹಿತೆಯಲ್ಲಿ ಕಾಣಬಾರವು.

ಮೂರನೇ ಕಾರಣವಾಗಿ ಹೇಳಲ್ಪಡುವ ವಾಕ್ಯಗಳ ಮತ್ತು ಪದಗಳ ರಚನಾರೀತಿಯ ಭೇದವೆಂಬದು ಸ್ಪಷ್ಟವಾಗಿಲ್ಲ.

ಚರಕಸಂಹಿತೆಯುಂಟಾಗಿ ಎಷ್ಟೋ ಕಾಲದನಂತರ ಸುಶ್ರುತಸಂಹಿತೆ ರಚಿತವಾದ್ದೆಂಬ ದಕ್ಕೆ ವಿರೋಧವಾಗಿ ಆಲೋಚಿಸಬಹುದಾದ ಕೆಲವು ವಿಷಯಗಳು ಯಾವವೆಂದರೆ —

(1) ವಾಗ್ಭಟಾದಿ ಅನಂತರದ ಗ್ರಂಥಗಳಲ್ಲಿ ಕಾಣುವ ಪ್ರಕಾರ ಸುಶ್ರುತಸಂಹಿತೆಯಲ್ಲಿ ಚರಕಸಂಹಿತೆಯ ಹೆಸರು ಇಲ್ಲ.

(2) ಎಲುಬುಗಳ ಸಂಖ್ಯೆಯು ಚರಕನ ಪ್ರಕಾರ 360, ಸುಶ್ರುತನ ಪ್ರಕಾರ 300 ಮಾತ್ರ ಈ ಸಂಖ್ಯೆಯನ್ನು ಹೇಳುವಾಗ ಸುಶ್ರುತನು 'ತ್ರೀಣಿ ಸಷಷ್ಟ್ಯೇನ್ಯಸ್ಥಿಶತಾನಿ ವೇದವಾದಿ ನೋ ಭಾಷನ್ತೇ | ಶಲ್ಯತನ್ತ್ರೇ ತು ತ್ರೀಣ್ಯೇವ ಶತಾನಿ' | ಅಂದರೆ — ವೇದವಾದಿಗಳು 360 ಎಲುಬುಗಳೆಂತ ಹೇಳುತ್ತಾರ, ಆದರೆ ಶಲ್ಯತಂತ್ರ ಪ್ರಕಾರ ಮುನ್ನೂರೇ ಎಂತ ಬರದಿದ್ದಾನೆ. ಇಲ್ಲಿ ವೇದವಾದಿಗಳೆಂಬ ಸಾಮಾನ್ಯಪಕ್ಷವೇ ಹೇಳಲ್ಪಟ್ಟದ್ದಲ್ಲದೆ, ಚರಕನ ಹೆಸರು ಕಾಣುವದಿಲ್ಲ

(3) ವಿಪಾಕದ ವಿಷಯದಲ್ಲಿ ಸುಶ್ರುತನು. — "ಆಗಮೇ ಹಿ ದ್ವಿವಿಧ ಏವ ಪಾಕೋ ಮಧುರಃ ಕಟುಕಶ್ಚ" ಶಾಸ್ತ್ರದಲ್ಲಿ ಪಾಕವು ಸೀ ಮತ್ತು ಖಾರ ಎಂಬ ಎರಡೇ ವಿಧ ಎಂತ,

ಪುನಃ (ಪು 95 ನೋಡಿ) ವಿಪಾಕದಲ್ಲಿ ಹುಳಿಯನ್ನು ಸೇರಿಸಿ ಮೂರು ವಿಧ ಎಂತ ಹೇಳುವದು ಸರಿಯಲ್ಲ, ಹುಳಿಯನ್ನು ಪ್ರತ್ಯೇಕವಾದೊಂದು ವಿಪಾಕವಾಗಿ ಎಣಿಸುವದಾದರೆ, ಉಪ್ಪನ್ನು ಸಹ ಒಂದು ವಿಪಾಕವಾಗಿ ಲೆಕ್ಕಿಸಬೇಕಾದೀತು, ಎಂತ ಸಹ ಬರೆದಿದ್ದಾನೆ. ಚರಕನು ಉಪ್ಪು, ಹುಳಿ ಸಹ ವಿಪಾಕಗಳೆಂತ ಎಣಿಸಿ, ವಿಪಾಕವು ನಾಲ್ಕು ವಿಧ ಎಂತ ಬರೆದಿರುತ್ತ. ಆ ಪಕ್ಷ ಉಂಟೆಂಬ ಸಂಗತಿಯನ್ನು ತಿಳಿಯದವನ ಹಾಗೆ ಸುಶ್ರುತನು ಯಾಕೆ ಹಾಗೆ ಬರೆದ?

(4) ಶಸ್ತ್ರಕರ್ಮದಲ್ಲಿ ಪ್ರವೀಣನಾದ ಸುಶ್ರುತ ಸಹ ಸೂತ್ರಸ್ಥಾನದ 24ನೇ ಅಧ್ಯಾಯ ದಾರಂಭದಲ್ಲಿ — "ವ್ಯಾಧಿಗಳು ಶಸ್ತ್ರಸಾಧ್ಯ, ಸ್ನೇಹಾದಿ ಕ್ರಿಯಾಸಾಧ್ಯ, ಎಂತ ಎರಡು ವಿಧ, ಶಸ್ತ್ರಸಾಧ್ಯವಾದ ರೋಗಗಳಿಗೆ ಸ್ನೇಹಾದಿಚಿಕಿತ್ಸೆಯನ್ನು ಮಾಡುವದಕ್ಕೆ ಪ್ರತಿಷೇಧವಿಲ್ಲ, ಆದರೆ, ಸ್ನೇಹಾದಿ ಕ್ರಿಯಾಸಾಧ್ಯವಾದ ರೋಗಗಳಲ್ಲಿ ಶಸ್ತ್ರಕರ್ಮವನ್ನು ನಡಿಸುವದಿಲ್ಲ" ಎಂಬ ಅಭಿಪ್ರಾಯ ಬರೆದಿದ್ದಾನೆ

(5) ಚರಕನ ಕಾಲದಲ್ಲಿಯೂ ಶಸ್ತ್ರಕರ್ಮದ ಕ್ರಮ ಇತ್ತೆಂಬದು ಚರಕಸಂಹಿತೆಯ ಅನೇಕ ವಚಸಗಳಿಂದ ಕಾಣುತ್ತದೆ ಉದರವ್ಯಾಧಿಯಲ್ಲಿ ಔಷಧಗಳಿಂದ ಮಾಡಲ್ಪಟ್ಟ ಚಿಕಿತ್ಸೆಯು ನಿಷ್ಫಲವಾದಾಗ, ಅನುಭವಶಾಲಗಳಿಂದ ಶಸ್ತ್ರಕರ್ಮವನ್ನು ನಡಿಸಬೇಕಾಗಿ ಹೇಳಿ, ನಾಭಿಯ ಕೆಳಗೆ ನಾಲ್ಕು ಅಂಗುಲದಲ್ಲಿ ಹೊಟ್ಟೆಯ ಎಡಪಾರ್ಶವನ್ನು ಮಿತಪ್ರಮಾಣವಾಗಿ ಹೊಗಿಸಿದ ಶಸ್ತ್ರದಿಂದ ಸೀಳಿ, ಕರುಳನ್ನು ಪರೀಕ್ಷಿಸಿ, ಅದರ ದೋಷಗಳನ್ನು ಪರಿಹರಿಸಿ, ಪುನಃ ಅದನ್ನು ಸ್ಥಾನದಲ್ಲರಿಸಿ ಹೊಲಿಯುವ ಕ್ರಮ ಮತ್ತು ಜಲೋದರದಲ್ಲಿ ನಳಿಗೆಯನ್ನು ಹೊಗಿಸಿ ನೀರನ್ನು ತೆಗೆಯುವ ಕ್ರಮ ಸಹ ಚರಕಸಂಹಿತೆಯಲ್ಲಿ ಹೇಳಲ್ಪಟ್ಟಿವೆ (ಚಿಕಿತ್ಸಾಸ್ಥಾನದ 18ನೇ ಅಧ್ಯಾಯ). ಪುನಃ ಅರ್ಶಸ್ಸು ವ್ಯಾಧಿಯಲ್ಲಿ — "ಮೂಳೆಗಳನ್ನು ಶಸ್ತ್ರದಿಂದ ಕತ್ತರಿಸುವದು ಒಳ್ಳೇದೆಂತ ಒಂದು ಪಕ್ಷ, ಕ್ಷಾರವನ್ನು ಉಪಯೋಗಿಸಿ ಸುಡುವದು ಒಳ್ಳೇದೆಂತ ಒಂದು ಪಕ್ಷ, ಬೆಂಕಿಯಿಂದಲೇ ಸುಡುವದು ಒಳ್ಳೇದೆಂತ ಇನ್ನೊಂದು ಪಕ್ಷ, ಹೀಗೆ ಮೂರು ಪಕ್ಷಗಳಿವೆ, ವೈದ್ಯನು ಅನುಭವಸ್ಥನಾದರೆ, ಆ ಮೂರು ಕ್ರಮಗಳೂ ಶಾಸ್ತ್ರರೀತ್ಯಾ ಸರಿಯಾದವುಗಳೇ ಮತ್ತು ಅವುಗಳನ್ನು ನಡಿಸುವಲ್ಲಿ ವ್ಯತ್ಯಾಸವಾಗಿ ಹೋದರೆ ಬೇರೆ ಬೇರೆ ಅನರ್ಥಗಳು ಉಂಟಾಗುತ್ತವೆ" ಎಂಬ ಅಭಿಪ್ರಾಯ ಹೇಳಲ್ಪಟ್ಟದೆ, (ಚಿಕಿತ್ಸಾಸ್ಥಾನದ 9ನೇ ಅಧ್ಯಾಯ ನೋಡಿ). ಅಶ್ವಿನೀದೇವತೆಗಳು ನಡಿಸಿದ ಅದ್ಭುತ ಶಸ್ತ್ರಾದಿ ಕರ್ಮಗಳನ್ನು ಪ್ರಸ್ತಾಪಿಸಿ ಅವರ ಶ್ಲಾಘನೆಯು ಚಿಕಿತ್ಸಾಸ್ಥಾನದ ಪ್ರಥಮ ಅಧ್ಯಾಯದಲ್ಲಿ ವಿಸ್ತೃತವಾಗಿದೆ

ಗರ್ಭದಲ್ಲಿ ಶಿಶು ಮೃತವಾದ ಲಕ್ಷಣಗಳನ್ನೆಲ್ಲಾ ವರ್ಣಿಸಿ, ಆ ಶಿಶುವನ್ನು ಹೊರಗ ಹಾಕುವದಕ್ಕೆ ಸಂಶಮನರೂಪವಾದ ಚಿಕಿತ್ಸೆ ನಡಿಸಬೇಕಾಗಿ ಕೆಲವರು, ಅಥರ್ವವೇದದಲ್ಲಿ ವಿಹಿತವಾದ ಮಂತ್ರಾದಿಕ್ರಮಗಳನ್ನು ನಡಿಸಬೇಕಾಗಿ ಕೆಲವರು ಜೆನ್ನಾಗಿ ಅನುಭವವುಳ್ಳ ಶಸ್ತ್ರಕರ್ಮದ ವೈದ್ಯರಿಂದ ಅದನ್ನು ತೆಗಿಸಬೇಕಾಗಿ ಕೆಲವರು, ಹೇಳುತ್ತಾರೆಂತ ಹೇಳಿ ಬಿಟ್ಟಿದ್ದಾನಲ್ಲದೆ, ತನ್ನ ಮತವನ್ನು ಚರಕಾಚಾರ್ಯನು ಹೇಳಿರುವದಿಲ್ಲ. (ಶರೀರಸ್ಥಾನದ ಎಂಟನೇ ಅಧ್ಯಾಯ ನೋಡಿರಿ.)

(6) ಗರ್ಭದಲ್ಲಿ ಪ್ರಥಮದಲ್ಲಿ ಉಂಟಾಗುವ ಅಂಗ ಯಾವದೆಂಬದರ ಕುರಿತು ಭರದ್ವಾಜ, ವಾಷ್ಕಲೀಕ, ಭದ್ರಕಾಪ್ಯ, ಭದ್ರಶೌನಕ, ವಡಿಶ, ಜನಕ, ಮತ್ತು ಕಶ್ಯಪ ಕೊಟ್ಟ ಬೇರೆ

ಬೇರೆ ಮತಗಳನ್ನು ತಿರಸ್ಕರಿಸಿ, ಧನ್ವಂತರಿ ಹೇಳಿದ ಸರ್ವಾಂಗನಿರ್ವೃತ್ತಿಯು ಏಕಕಾಲದಲ್ಲಿ ಆಗುವದೆಂಬ ಅಭಿಪ್ರಾಯವು ಸರಿಯಾದ್ದೆಂತ ಅನುಮೋದಿಸಲ್ಪಟ್ಟಿದೆ. (ಶಾರೀರಸ್ಥಾನದ 6ನೇ ಅಧ್ಯಾಯ ನೋಡಿರಿ.)

(7) ಚರಕಸಂಹಿತೆಯಲ್ಲಿ ವಸ್ತುವಿಧಿಯು ಸಂಪೂರ್ಣವಾಗಿ ವರ್ಣಿತವಾಗಿರುವದು ಮಾತ್ರವಲ್ಲದೆ, ಅದರ ಪ್ರಯೋಜನವು ಬಹಳವಾಗಿ ಶ್ಲಾಘಿಸಲ್ಪಟ್ಟಿರುತ್ತದೆ.

(8) ಯಾವ ಪೂರ್ವಗ್ರಂಥದಲ್ಲಿಯಾದರೂ ಚರಕಸಂಹಿತೆಯ ಹೆಸರು ಹೇಳಿ, ಸುಶ್ರುತನ ಪ್ರಸರನ್ನು ಬಟ್ಟದ್ದು ಕಾಣುವದಿಲ್ಲ. ಅಂದರೆ ಇವರಿಬ್ಬರ ಕಾಲಗಳ ಮಧ್ಯದಲ್ಲಿ ರಚಿತವಾದ ಗ್ರಂಥ ಕಂಡುಬರುವದಿಲ್ಲ.

ಈ ಸಂಗತಿಗಳನ್ನೆಲ್ಲ ಆಲೋಚಿಸುವಾಗ್ಗೆ, ಚರಕನ ಕಾಲಕ್ಕೂ ಮೊದಲು ಬಹುಮಂದಿ ಪ್ರಸಿದ್ಧ ವೈದ್ಯರಿರುತ್ತಿದ್ದರು, ಅವರೊಳಗೆ ಕೆಲವರು ಶಸ್ತ್ರವೈದ್ಯದಲ್ಲಿ ಕುಶಲರು, ಕೆಲವರು ಕಾಯ ಚಿಕಿತ್ಸೆಯೆಂಬ ಔಷಧ ಮಂತ್ರಾದಿಗಳ ಉಪಯೋಗದಲ್ಲಿ ಕುಶಲರು, ಹೀಗೆ ಎರಡು ತಂಡಗಳು ಇದ್ದವು; ಶಸ್ತ್ರವೈದ್ಯಕ್ಕೆ ಮೃತಶೋಧನದಿಂದ ಪಡೆಯಬೇಕಾದ ಸೂಕ್ಷ್ಮವಾದ ಶಾರೀರ ಅನುಭವವೂ, ಶಸ್ತ್ರಗಳನ್ನು ಉಪಯೋಗಿಸಿಯೇ ಬಲಪಡಬೇಕಾದ ಹಸ್ತಲಾಘವಾದಿ ಶಸ್ತ್ರಪ್ರಣಯನ ಪಾಂಡಿತ್ಯವೂ ಅವಶ್ಯವಾದ್ದರಿಂದ, ಬಹುಪಕ್ಷದ ವೈದ್ಯರು ಆ ಕಷ್ಟಸಾಧ್ಯವಾದ ಪಾಂಡಿತ್ಯಕ್ಕೆ ಯತ್ನಿಸದೆ, ಔಷಧೋಪಚಾರಗಳಿಂದಲೇ ಚಿಕಿತ್ಸೆ ನಡಿಸುತ್ತಿದ್ದರು, ಈ ದ್ವಿಪಕ್ಷಗಳಲ್ಲಿ ಪ್ರವೀಣರಾದ ಚರಕ ಮತ್ತು ಸುಶ್ರುತ ತಮ್ಮ ತಮ್ಮ ಪಕ್ಷದ ಕ್ರಮಗಳನ್ನು ಬಲಪಡಿಸಿ ಮತ್ತು ಸಂಸ್ಕರಿಸಿ, ಬೇರ ಬೇರ ಗ್ರಂಥಗಳನ್ನು ಹೆಚ್ಚು ಕಾಲಾಂತರವಿಲ್ಲದೆ ರಚಿಸಿದರು, ಮತ್ತು ಆ ಎರಡು ಗ್ರಂಥಗಳು ಪ್ರಾಯಶಃ ಏಕಕಾಲದಲ್ಲ ಪ್ರಚಾರಕ್ಕೆ ಬಂದಿರಬಹುದು, ಎಂತ ಸಹ ಕಾಣುತ್ತದೆ

6 ಹ್ಯಾಗಿದ್ದರೂ, ಈಗಿನ ಕಾಲದಲ್ಲಿ ಆಯುರ್ವೇದಜ್ಞಾನಕ್ಕೆ ಚರಕಸಂಹಿತೆ ಮತ್ತು ಸುಶ್ರುತಸಂಹಿತೆ ಸೇರಿ ಬುನಾದಿಯಾಗಿ ನಿಂತವೆ ಎಂಬದರಲ್ಲಿ ಸಂದೇಹವಿಲ್ಲ ಆ ಎರಡು ಗ್ರಂಥಗಳನ್ನೇ ಮುಖ್ಯಾಧಾರವಾಗಿ ತೆಗೆದುಕೊಂಡು ಈ ಆಯುರ್ವೇದಸಾರವನ್ನು ರಚಿಸಿರುತ್ತದೆ. ಬಿಜ್ಞಾಸಗಳು ಉಂಟಾಗಬಹುದಾದ್ದಲ್ಲಿ, ಅವುಗಳ ಪರಿಹಾರಕ್ಕೆ ಬೇಕಾದಷ್ಟು ಅರ್ವಾಚೀನ ಗ್ರಂಥಗಳ ಸಹಾಯವನ್ನು ಪಡೆದದೆ. ಕೆಲವು ಸಂದರ್ಭಗಳಲ್ಲಿ ಪ್ರಯೋಜನಕರವಾಗಬಹುದಾದ ಪಾಶ್ಚಾತ್ಯ ವೈದ್ಯರ ಮತವನ್ನು ಸಂಕ್ಷೇಪವಾಗಿ ಸೂಚಿಸಿರುತ್ತದೆ

7. ಇಂಥಾ ಗ್ರಂಥವನ್ನು ರಚಿಸಿ ಪ್ರಕಟಿಸುವದರ ಪ್ರಯೋಜನವೇನು? ಆವಶ್ಯವೇನು? ಎಂಬ ಜಿಜ್ಞಾಸೆ ನಮ್ಮ ವಾಚಕರಲ್ಲಿ ಹುಟ್ಟುವಂಥಾದ್ದು ಸಹಜ. ಈ ವಿಷಯವನ್ನು ಸ್ವಲ್ಪಮಟ್ಟಿಗೆ ಆಲೋಚಿಸುವ. ಈ ಭರತಖಂಡದವರ ಸರಾಸರಿ ಆಯುಃಪ್ರಮಾಣವು 23 ವರ್ಷ ಎಂತ ನಿರ್ಣಯಿಸಿದ್ದಾರೆ. ವಿಲಾಯತಿಯ ಅನೇಕ ರಾಜ್ಯಗಳಲ್ಲಿ ಈ ಪ್ರಮಾಣವು ಸುಮಾರು ಇದರ ದುಬಾರೆಯಷ್ಟು ಹೆಚ್ಚು ಇರುತ್ತದೆ. ಬಹು ವೃದ್ಧರಾದ ಸ್ತ್ರೀಪುರುಷರನೇಕರನ್ನು ನಾವು ನೋಡುತ್ತಿರುವಾಗ್ಗೆ, ಸರಾಸರಿ ಪ್ರಾಯವು 23 ವರ್ಷದಷ್ಟು ಕಡಿಮಯಾಗಿ ಉಂಟೆಂಬದರ ಅರ್ಥವೇನು? ಬಾಲ್ಯದಲ್ಲಿ ಸಾಯುವ ಮಕ್ಕಳ ಸಂಖ್ಯೆಯು ಬಹು ಹೆಚ್ಚು ಇದೆ ಎಂಬದೇ. ಈ ಖಂಡದಲ್ಲಿ ಜನನವಾಗುವ ಶಿಶುಗಳೊಳಗೆ 25 ಶತಾಂಶಗಳು (ಅಂದರೆ ನಾಲ್ಕರೊಳಗೆ ಒಂದು) ಹುಟ್ಟಿ ಹನ್ನೆರಡು ತಿಂಗಳುಗಳೊಳಗಾಗಿ ಸಾಯುತ್ತವೆ ಎಂತ ಎಣಿಸಿದ್ದಾರೆ. ಈ ಬಾಲಮರಣಾಧಿಕ್ಯವು ಬಾಲವಿವಾಹದ ಫಲ ಎಂತ ಸಾಧಾರಣವಾಗಿ ಸಮಾಧಾನ ಹೇಳು

ತ್ತಾರೆ. ಅದು ಬರೇ ಊಹೆ ಮತ್ತು ಬಾಲವಿವಾಹಪದ್ಧತಿಯನ್ನು ನಿಲ್ಲಿಸಬೇಕೆಂಬ ಪ್ರತಿಜ್ಞೆಯುಳ್ಳವರಿಂದ ಹುಟ್ಟಿದ್ದು. ಈ ಭರತಖಂಡದಲ್ಲಿರುವ ಎಲ್ಲಾ ಜನಸಮಾಜಗಳಲ್ಲಿ ಬಾಲವಿವಾಹದ ಪದ್ಧತಿಯು ಇಲ್ಲ. ಆ ಪದ್ಧತಿಯನ್ನು ಆಚರಿಸುವ ಸಮಾಜಗಳಲ್ಲಿ ಆಯುಃಪ್ರಮಾಣವು ಇತರ ಭಾರತೀಯ ಸಮಾಜಗಳಲ್ಲಿಯದಕ್ಕಿಂತ ಕಡಿಮೆ ಎಂತ ನಿರ್ಣೀತವಾದ ಪಕ್ಷದಲ್ಲಿ ಆ ಸಂದೇಹ ಹುಟ್ಟಬಹುದು. ಆ ಭೇದವನ್ನು ಕಂಡುಹಿಡಿದದ್ದಿಲ್ಲ. ಹದಿನಾರು ವರ್ಷ ಪ್ರಾಯದನಂತರ ಸ್ತ್ರೀಯು ಗರ್ಭಾಧಾನಕ್ಕೆ ಅರ್ಹಳು ಎಂತ ಮಹರ್ಷಿಗಳು ಬರದಿದ್ದಾರೆ ಈ ಅಭಿಪ್ರಾಯವು ಪಕ್ಷಪಾತಿಗಳಲ್ಲದ ಸರ್ವರೂ ಒಪ್ಪಬೇಕಾದ್ದೇ. ಬೆಳಿಕೆಯ ಕಾಲದಾಟಿದ ಮಧ್ಯವಯಸ್ಸಿನಲ್ಲಿ ವಿವಾಹಮಾಡಿಕೊಳ್ಳುವ ವಾಡಿಕೆ ಹೆಚ್ಚಾಗಿರುವ ಬಹು ದೇಶಗಳಲ್ಲಿ ಸಾಕಷ್ಟು ಸಂತತಿ ವೃದ್ಧಿಯಾಗದ್ದನ್ನು ನೋಡಿ, ಆಯಾ ದೇಶದ ಸರಕಾರದವರು ಆ ನ್ಯೂನತೆಯ ಪರಿಹಾರಕ್ಕಾಗಿ ಒಸುರಿಗಳಿಗೂ, ಬಾಣಂತಿಯರಿಗೂ, ಶಿಶುಗಳಿಗೂ ವೇತನ ಕೊಡಲಿಕ್ಕಾರಂಭಿಸಿದ್ದಾರೆ. ಭಾರತೀಯರ ಅಲ್ಪಾಯುಸ್ಸಿಗೆ ಮುಖ್ಯ ಕಾರಣಗಳು ಎರಡು ಅನುಭವಸಿದ್ಧವಾದವು ಒಂದನೇದು ದಾರಿದ್ರ್ಯ, ಎರಡನೇದು ಆರೋಗ್ಯಶಾಸ್ತ್ರಜ್ಞಾನದ ಕ್ಷಯ. ಭಾರತೀಯರಲ್ಲಿ ದುಃಖಕರವಾದ ದಾರಿದ್ರ್ಯವಿರುತ್ತದಾದರೂ, ಆ ದಾರಿದ್ರ್ಯವು ವೃದ್ಧಿಯಾಗುತ್ತಾ ಬರುತ್ತದೆನ್ನುವದಕ್ಕೆ ಸಾಕಷ್ಟು ಕಾರಣವಿಲ್ಲ ಆದರೆ ಆರೋಗ್ಯಶಾಸ್ತ್ರದ ಜ್ಞಾನವು, ಎಣ್ಣೆ ಆರಿದ ದೀಪದ ಪ್ರಕಾಶದಂತೆ, ಕಡಿಮೆಯಾಗುತ್ತಾ ಬರುತ್ತದೆನ್ನುವದಕ್ಕೆ ಸಂದೇಹವಿಲ್ಲ. ಈ ಮಾತನ್ನು ಪಾಶ್ಚಾತ್ಯ ವಿದ್ಯೆಯು ದಿನೇದಿನೇ ಈ ದೇಶದಲ್ಲಿ ಹಬ್ಬುತ್ತಾ ಬರುವದನ್ನೂ, ಬಿ ಎ. ಇತ್ಯಾದಿ ಮಾನ್ಯ ಪರೀಕ್ಷೆಗಳಲ್ಲಿ ತೇರ್ಗಡೆಪಡುವ ನಮ್ಮ ತರುಣರ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಏರುತ್ತಾ ಒರುವದನ್ನೂ ನೋಡಿ, ಕೆಲವರು ಶಂಕಿಸ್ಯಾರು ಪಾಶ್ಚಾತ್ಯ ವಿದ್ಯೆಯಿಂದ ಈ ವಿಷಯದಲ್ಲಿ ನಮ್ಮ ತರುಣರಿಗೆ ಸಿಕ್ಕುವ ಜ್ಞಾನವು ಅಪೂರ್ಣವಾಗಿ ವಸ್ತುತಃ ಸಾರ್ಥಕವಾಗುವದಿಲ್ಲ ಸುಮಾರು ೨೦ ವರ್ಷ ಇಂಗ್ಲಿಷ ವಿದ್ಯೆ ಕಲಿತು ರಸಾಯನಶಾಸ್ತ್ರದಲ್ಲಿ ಪಾಂಡಿತ್ಯ ಪಡೆದವನಿಗಾದರೂ ತನ್ನ ಮನೆಬಾವಿಯ ನೀರಿನಲ್ಲಿ ಯಾವ ದೋಷವುಂಟು ಮತ್ತು ಆ ದೋಷವನ್ನು ತೆಗೆದುಬಿಡುವ ಸುಲಭ ಉಪಾಯವೇನು ಎಂಬದನ್ನು ಗೊತ್ತುಮಾಡುವದು ಕಷ್ಟಸಾಧ್ಯ. ಕೆಲವು ವರ್ಷಗಳ ಮೊದಲು ನೀರನ್ನು ಶುದ್ಧ ಮಾಡುವದಕ್ಕೆ ಮೂರು ಗಡಿಗೆಗಳನ್ನು ಒಂದರ ಮೇಲೆ ಒಂದನ್ನಾಗಿ ಇಟ್ಟು, ಮೇಲಿನ ಒಂದನೆ ಗಡಿಗೆಗೆ ಮಳಲು ತುಂಬಿಸಿ, ಅದಕ್ಕೆ ಕುದಿಸಿ ಹಾಕಿದ ನೀರು ಬೊಟ್ಟುಬೊಟ್ಟಾಗಿ ಎರಡನೆ ಗಡಿಗೆಗೆ ಇಳಿಯುವಂತೆ ಅದರ ಅಡಿಯಲ್ಲಿ 3, 4 ತೂತುಗಳನ್ನು ಮಾಡಿ, ತೂತುಗಳಿಗೆ ಹುಲ್ಲ ಕಡ್ಡಿ ಇಟ್ಟು, ಎರಡನೆ ಗಡಿಗೆಗೆ ಮಸಿಯನ್ನು ತುಂಬಿಸಿ, ಅದರಿಂದ ಬುಡದ ಗಡಿಗೆಗೆ ಅದೇ ರೀತಿ ಬೊಟ್ಟುಬೊಟ್ಟಾಗಿ ನೀರನ್ನು ಇಳಿಸಿ, ಹಾಗೆ ಬುಡದ ಗಡಿಗೆಯಲ್ಲಿ ಸಂಗ್ರಹವಾದ ನೀರು ಶುದ್ಧವೆಂತ ನೆನಸಿ, ಅದನ್ನು ಪಾನಾದಿಗಳಿಗೆ ಉಪಯೋಗಿಸುವ ವಾಡಿಕೆ ಇತ್ತು ಈ ಕ್ರಮದಲ್ಲಿ ಮಳಲು, ಮಸಿ, ಗಡಿಗೆ ಮುಂತಾದವುಗಳನ್ನು ಶುದ್ಧವಾಗಿಡುವದು ಅವಶ್ಯಕ. ಇದು ಪ್ರಾಯಶಃ ಸಾಧ್ಯವಾಗುವದಿಲ್ಲವಾದ್ದರಿಂದ, ಅದನ್ನು ಬಿಟ್ಟು, ಈಗ ಬೇರೆಬೇರೆ ವಿಧದ ಜಲ ಶೋಧನಯಂತ್ರ (ಫಿಲ್ಟರ್)ಗಳನ್ನು ಉಪಯೋಗಿಸುತ್ತಿದ್ದಾರೆ. ಈ ಯಂತ್ರಗಳನ್ನು ಕೊಂಡು ಕೊಳ್ಳುವದು, ಕಾಪಾಡುವದು ಮತ್ತು ಅವುಗಳಿಂದ ಗೃಹಕೃತ್ಯಕ್ಕೆ ಸಾಕಷ್ಟು ಶುದ್ಧ ನೀರನ್ನು ಸಂಗ್ರಹಿಸುವದು ಈಗಿನ ಸ್ಥಿತಿಯಲ್ಲಿ ಸಾಮಾನ್ಯ ಜನರಿಗೆ ಅಸಾಧ್ಯ. ಈ ಸಂದರ್ಭದಲ್ಲಿ ಈ

ಆಯುರ್ವೇದಸಾರದ 12ನೇ ಅಧ್ಯಾಯದಲ್ಲಿ ಹೇಳಿರುವ ಉಪದೇಶಗಳು ಎಷ್ಟು ಸಾರ್ಥಕವೆಂಬದನ್ನು ವಾಚಕರು ಆಲೋಚಿಸಬಹುದು "ಯಾವ ವಾಸನೆಯೂ ಇಲ್ಲದ, ಯಾವ ರುಚಿಯೂ ಕಾಣದ, ಬಾಯಾರಿಕೆಯನ್ನು ನಿಲ್ಲಿಸತಕ್ಕ, ನಿರ್ಮಲವಾದ, ಶೀತಲವಾದ, ಸ್ವಚ್ಛವಾದ, ಲಘುವಾದ ಮತ್ತು ಮನೋಹರವಾದ ನೀರು ಗುಣವುಳ್ಳದ್ದೆಂತ ಹೇಳಲ್ಪಡುತ್ತದೆ" (ಪು. 235). "ನೀರನ್ನು ಕುದಿಸುವಾಗ್ಗೆ ಅದು ಉಕ್ಕದೆ, ಮತ್ತು ಅದರಲ್ಲ ನೊರೆ ಬಾರದೆ, ಅದು ನಿರ್ಮಲವಾಗಿಯೂ ಲಘುವಾಗಿಯೂ ಇದ್ದರೆ, ಅದು ಪ್ರಶಸ್ತ" (ಪು 236). ಇಷ್ಟರ ಮಟ್ಟಿನ ವಿಚಾರಮಾಡುವದಕ್ಕೆ ಯಾವ ಕಲಿಯುವಿಕೆಯೂ ಆವಶ್ಯಕವಲ್ಲ ಸಾಧಾರಣವಾಗಿ ಮಲಿನವಾಗಿ ಕಂಡ ನೀರನ್ನು ಕುದಿಸಿ, ಹನಿಸಿ, ಉಪಯೋಗಿಸತಕ್ಕದ್ದೆಂಬದು ಸರ್ವರಿಗೂ ಸಾಧ್ಯ. ಹೀಗೆ ಆಯುರ್ವೇದೀಯ ಗ್ರಂಥಗಳಲ್ಲಿ ಆರೋಗ್ಯಶಾಸ್ತ್ರದ ತತ್ವಗಳೆಲ್ಲಾ ಸರ್ವರಿಗೂ ತಿಳಿಯುವ ಮತ್ತು ಸಾಧ್ಯವಾಗುವ ರೀತಿಯಲ್ಲಿ ವಿವರಿಸಲ್ಪಟ್ಟವೆ ಶರೀರದ ಮತ್ತು ಉಡಿಗೆಗಳ ಶುಚಿತ್ವದ ಕುರಿತು ನಾವು ಇಂಗ್ಲಿಷ ವಿದ್ಯೆಯಿಂದ ಕಲಿತದ್ದು ಸಾಬೂಸಿನ ಉಪಯೋಗ ಸಾಮಾನ್ಯವಾದ ಸಾಬೂನುಗಳ ಉಪಯೋಗದಿಂದ ಶುಚಿಯಾದ ಮೈಯಲ್ಲಿ ತುರಿಗಜ್ಜಿಯುಂಟಾಗುತ್ತದೆ ಮತ್ತು ವಸ್ತ್ರಗಳು ಬೇಗನೇ ಹಳೇದಾಗಿ ಹರಿದುಹೋಗುತ್ತವೆ. ಸೀಗೆ, ನೊರೆಕಾಯಿ, ಹೆಸರಹಿಟ್ಟು, ಬೊಂಪು, ಗಂಜಿ, ಇತ್ಯಾದಿಗಳ ಉಪಯೋಗದಿಂದ ಆ ಶುಚಿತ್ವವನ್ನು ಸಂಪಾದಿಸುವದಾದರೆ, ಒಂದು ವರ್ಷಕ್ಕೆ ತಗಲಬಹುದಾದ ಖರ್ಚು ಸಾಬೂನುಬಗ್ಗೆ ಒಂದು ತಿಂಗಳಿಗೆ ಮುಟ್ಟುವ ಖರ್ಚಿಗಿಂತ ಕಡಿಮೆಯಾದೀತು ಬಡವರ ಮನೆಯವರೆಲ್ಲ ಸಾಬೂನುಗಳನ್ನು ಉಪಯೋಗಿಸುವದೆಂದರೆ, ಮನೆಯವರ ಸಂಪಾದನೆಯ ಹೆಚ್ಚಿನ ಅಂಶ ಸಾಬೂನಿನ ಖರ್ಚಿಗೆ ಹೋಗುವದು ಹಾಗೆ ಮಾಡದೆ ಮನೆಯವರೊಳಗೆ ಒಂದೆರಡು ಜನರು ಮಾತ್ರ ತಮ್ಮ ದೇಹವನ್ನೂ ಉಡಿಗೆಗಳನ್ನೂ ಶುಚಿಯಾಗಿಟ್ಟುಕೊಂಡದ್ದರಿಂದ ಹೆಚ್ಚು ಪ್ರಯೋಜನವಿಲ್ಲ. ಇನ್ನೊಂದು ದುರವಸ್ಥೆಯೇನಂದರೆ ನೊರೆಕಾಯಿ, ಸೀಗೆ ಇತ್ಯಾದಿಗಳನ್ನು ಕೂಡುಕೊಳ್ಳುವವರು ಕಡಿಮೆಯಾದ ಹಾಗೆ, ಆ ವೃಕ್ಷಗಳು ಬೇರೆ ಪ್ರಯೋಜನಕರವಾದ ವೃಕ್ಷಗಳ ಬಿಳಿಕೆಗೆ ಆತಂಕ ಮಾಡುವದಲ್ಲದೆ ಸಾಕಷ್ಟು ಪ್ರಯೋಜನವುಳ್ಳವಲ್ಲ ಎಂಬ ಗ್ರಹಿಕೆ ಜನರಲ್ಲಿ ಹುಟ್ಟಿ ಅವು ನಿರ್ಮೂಲವಾಗುವದಾಗುತ್ತದೆ ಈ ವಿಧವಾದ ಅನೇಕ ದೃಷ್ಟಾಂತಗಳು ವಾಚಕರ ನೆನಪಿಗೆ ಸ್ವಲ್ಪ ಆಲೋಚಿಸಿದರೆ ವಿಶದವಾಗಿ ಕಂಡಾವು ಒಟ್ಟಾರೆ ಅನೇಕ ಭಾಗಗಳಲ್ಲಿ ನಾವು ಪಾಶ್ಚಾತ್ಯರಿಂದ ಸಂಪಾದಿಸಿದ ಆರೋಗ್ಯಶಾಸ್ತ್ರಜ್ಞಾನವು ಸಭಾಭೂಷಣವಲ್ಲದೆ ಕಾರ್ಯತಃ ಪ್ರಯೋಜನಕರವಲ್ಲ ಸಾಮಾನ್ಯವಾಗಿ ನಮ್ಮ ಪಾಶ್ಚಾತ್ಯ ವಿದ್ಯೆಯನ್ನು ಸಫಲವಾಗುವಷ್ಟರ ವರೆಗೆ ವೃದ್ಧಿಮಾಡಿಕೊಳ್ಳುವದಕ್ಕೆ ಪ್ರಶಸ್ತ ಅಧ್ಯಾಪಕರಾಗಲಿ, ಉಪಕರಣಗಳಾಗಲಿ, ಸಂಪತ್ತಾಗಲಿ, ಸಾಕಷ್ಟು ಇರುವದಿಲ್ಲ. ಈಗಿನ ಅಪೂರ್ಣವಾದ ವಿದ್ಯೆಯಿಂದ ಗುಣಗಳಿಗಿಂತಲೂ ದೋಷಗಳು ಹಚ್ಚಾಗಿ ಸಂಭವಿಸುತ್ತವಾದ್ದರಿಂದ, ಅನೇಕರಿಗೆ ಭರ್ತೃಹರಿಯ ಶ್ಲೋಕವು ಪದೇಪದೇ ನೆನಪಿಗೆ ಬರುವದಾಗಿದೆ —

ಅಜ್ಞಃ ಸುಖಮಾರಾಧ್ಯಃ ಸುಖತರಮಾರಾಧ್ಯತೇ ವಿಶೇಷಜ್ಞಃ ।
ಜ್ಞಾನಲವದುರ್ವಿದಗ್ಧಂ ನರಂ ಬ್ರಹ್ಮಾಪಿ ನ ರಂಜಯತಿ ॥

ಇಂಥಾ ಅಲ್ಪವಿದ್ಯೆಯನ್ನು ತಮ್ಮ ಮಕ್ಕಳಿಗೆ ಕೊಡಿಸುವದಕ್ಕಿಂತಲೂ ಆ ವಿದ್ಯೆ ಅವರಿಗೆ ಇಲ್ಲದಿದ್ದರೇನೇ ಸುಖವಾಗುತ್ತಿತ್ತೆಂತ ಹಿರಿಯರು ಆಲೋಚಿಸುವದಕ್ಕೆ ಕಾರಣವಾಗಿದೆ.

8. ಆರೋಗ್ಯದ ಕಾಪಾಡುವಿಕೆಗಾಗಿ ಸರ್ವ ಜನರು ತಿಳಿದು ಸದಾ ಆಚರಿಸಬೇಕಾದ ಆಯುರ್ವೇದೀಯ ತತ್ವಗಳು ಮತ್ತು ಅವುಗಳ ಆಚರಣೆಯ ವ್ಯತ್ಯಾಸದಿಂದ ಉಂಟಾಗುವ ಅಲ್ಪ ಅಸುಖಗಳಿಗೆ ತಕ್ಕವಾದ ಪರಿಹಾರಜ್ಞಾನ ಈ ಭಾರತೀಯರಲ್ಲಿ ಅನಾದಿಯಿಂದ ಪರಂಪರೆಯಾಗಿ ಬಂದು ಅವರು ಪ್ರಯೋಜನ ಪಡುತ್ತಿದ್ದರು. ಇಲ್ಲಿ ಆಚರಣೆಯಲ್ಲಿದ್ದ ಶುದ್ಧಮುದ್ರಿಕೆ, ಪೂಜೆಪುನಸ್ಕಾರ, ಭೋಜನನಿಯಮ, ಸ್ನಾನ, ಅಭ್ಯಂಗ, ಶೌಚ, ಸೂತಿಕಾಚರಣೆ, ಉಪವಾಸ ಮುಂತಾದವುಗಳಿಗೆಲ್ಲ ಆರೋಗ್ಯಶಾಸ್ತ್ರವೇ ಬುನಾದಿ. ಅರುಣೋದಯದಲ್ಲಿ ಮನೆಸ್ತ್ರೀಯರು ಶಂಖ ಊದುವ ವಾಡಿಕೆಯು ಮನೆಯವರು ಅಷ್ಟರಲ್ಲಿಯೇ ಏಳಬೇಕೆಂಬ ಉದ್ದೇಶದಿಂದ ಮತ್ತು ಸಂಜೆಯ ಶಂಖ ಊದುವಿಕೆ ಅವಶ್ಯವಿಲ್ಲದ ಕಿಟಿಕಿ ಬಾಗಲುಗಳನ್ನು ಹಾವುಗಳ, ಕಳ್ಳರ ಮತ್ತು ರಾತ್ರಿಯ ತಣಪಾದ ಗಾಳಿಯ ಭಯಕ್ಕಾಗಿ ಮುಚ್ಚಬೇಕೆಂಬ ಉದ್ದೇಶದಿಂದ, ಉಂಟಾದ್ದೆಂತ ಕಾಣುತ್ತದೆ. ಇಂಥಾ ಆಚರಣೆಗಳೆಲ್ಲ ಮಿಥ್ಯಾಧರ್ಮಕ್ಕೆ ಸೇರಿದವು ಮತ್ತು ಅಪಾರ್ಥ ಎಂತ ಪಾಶ್ಚಾತ್ಯ ವಿದ್ಯೆಯ ಪ್ರಬಲತ್ವದಿಂದುಂಟಾದ ದೃಷ್ಟಿದೋಷಕ್ಕೆ ಕಂಡು ಅವುಗಳಲ್ಲಿ ನಮ್ಮವರ ಶ್ರದ್ಧೆಯು ದಿನೇ ದಿನೇ ಕಡಿಮೆಯಾಗುತ್ತಾ ಬರುತ್ತದೆ ಪ್ರತಿ ಮನೆಯಲ್ಲಿ ವೃದ್ಧರಾದ ಸ್ತ್ರೀಪುರುಷರುಗಳಿಗೆ ಸಾಧಾರಣವಾಗಿ ಉಂಟಾಗುವ ದೇಹದ ಅಸುಖವು ಯಾವ ದೋಷದಿಂದ ಮತ್ತು ಅದಕ್ಕೆ ಸುಲಭವಾದ ಪ್ರತಿಕ್ರಿಯೆ ಯಾವದು ಎಂಬದು ಮತ್ತು ಸಾಧಾರಣವಾಗಿ ಉಪಯೋಗಿಸಲ್ಪಡುವ ಅನ್ನಪಾನಭಕ್ಷ್ಯಭೋಜ್ಯಾದಿಗಳ ಗುಣದೋಷಗಳು ತಿಳಿದೇ ಇದ್ದವು. ಅವರ ಅನುಭವವು ಈಗಿನ ಪಾಶ್ಚಾತ್ಯ ವಿದ್ಯಾಭೂಷಣವನ್ನು ಧರಿಸಿಕೊಂಡ ತರುಣರ ದೃಷ್ಟಿಗೆ ಅಸರ್ಧವಾಗಿ ಕಂಡು, ಉಪಯೋಗಿಸಲ್ಪಡದ ಕಬ್ಬಿಣದ ಶಸ್ತ್ರದಂತೆ, ಕ್ಷಯಿಸುತ್ತಾ ಬಂತು ಮನೆಯ ಸಮೀಪದಲ್ಲಿ ತನ್ನಂತೆ ಬೆಳೆಯುವ ಗಿಡಮೂಲಿಕೆಗಳ ಪ್ರಯೋಜನವನ್ನು ತಿಳಿಯದೆ, ಅವುಗಳನ್ನು ಕಿತ್ತು ಬಿಸಾಡುತ್ತಾರೆ. ಈ ದಿವಸಗಳಲ್ಲಿ ಹಳ್ಳಿಯ ಹೆಂಗಸರೊಳಗೆ ಸಹ 'ಗರುಗ' ಅಂದರೆ ಯಾವದು? 'ಹೊನಗನೆ' ಎಂದರೆ ಯಾವದು? ಎಂಬ ತಿಳಿವಳಿಕೆ ಇಲ್ಲದವರು ಅನೇಕರಿದ್ದಾರೆ ಆಯುರ್ವೇದ ತಿಳಿದವನಿಗೆ ಅಂಥಾ ರೂಢಿಯಾಗಿ ಬಹು ಕಡೆಗಳಲ್ಲಿ ಬೆಳೆಯುವ ಗಿಡಗಳಿಂದಲೇ ಅನೇಕ ರೋಗಗಳನ್ನು ವಾಸಿಮಾಡುವದಕ್ಕೆ ಸಾಧ್ಯವಾಗುತ್ತದೆ.

9. ಆಯುರ್ವೇದೀಯ ಜ್ಞಾನದ ಕ್ಷಯಕ್ಕೆ ಇನ್ನೊಂದು ಕಾರಣ ಸರಕಾರಿ ಆಸ್ಪತ್ರಿಗಳ ಸಂಖ್ಯಾಭಿವೃದ್ಧಿ. ಆಯುರ್ವೇದಾಂಗವಾದ ಶಲ್ಯತಂತ್ರವನ್ನು ಸುಶ್ರುತನ ಉಪದೇಶದಂತೆ ಕ್ರಮವಾಗಿ ಕಲಿತ ಪಂಡಿತರು ನಮ್ಮ ದೇಶದಲ್ಲಿಲ್ಲದೆ ಹೋಗಿ ಬಹುಕಾಲವಾಯಿತು. ಆದ್ದರಿಂದ ವ್ರಣಗಳನ್ನು ಕೊಯ್ಯಿಸಲಿಕ್ಕೆ, ಕಂತಿದ ಮುಳ್ಳುಮೊಳೆಗಳನ್ನು ತೆಗಿಸಲಿಕ್ಕೆ, ತುಂಡಾದ ಅಥವಾ ಜೂರಾದ ಎಲುಬುಗಳನ್ನು ಸರಿಪಡಿಸಿ ಜೋಡಿಸಲಿಕ್ಕೆ ಮುಂತಾದ ಎಲ್ಲಾ ಶಸ್ತ್ರಸಾಧ್ಯವಾದ ಸಂಕಷ್ಟಗಳ ನಿವೃತ್ತಿಗೆ ಸ್ವಾಭಾವಿಕವಾಗಿ ಜನರು ಆಸ್ಪತ್ರಿಗಳಿಗೆ ಹೋಗಬೇಕಾಯಿತು. ಅಲ್ಲಿ ಸಿಕ್ಕುವ ಅತಿ ಸುಲಭವಾಗಿ ಸೇವಿಸಬಹುದಾದ ಸೆಂಟೊನಿನ್ ಎಂಬ ಔಷಧವು ಹೊಟ್ಟೆಹುಳ ತೆಗೆಯುವದರಲ್ಲಿ ಮತ್ತು ಕ್ವಿನೀನ್ ಎಂಬ ಭಸ್ಮವು ವಿಷಮಜ್ವರದಲ್ಲಿ ಮಾಡುವ ಕೆಲಸವು ಅತ್ಯದ್ಭುತವಾಗಿ ಕಂಡಿತು. ಬಾಟ್ಲಿಯೊಂದು ಕೈಯಲ್ಲಿದ್ದರೆ ಯಾವ ರೋಗಕ್ಕಾದರೂ ಸುಲಭಸೇವ್ಯವಾದ ಔಷಧವು ಧರ್ಮವಾಗಿ ದೊರೆಯುತ್ತಿತ್ತು. ಇಷ್ಟರಲ್ಲಿ ಜನಸಾಮಾನ್ಯವು ತನ್ನ ನಿತ್ಯಾಚರಣೆಗೆ ಮೇಲುಪಂಕ್ತಿಯಾಗಿಟ್ಟುಕೊಳ್ಳಬೇಕಾಗಿದ್ದ

'ಕಾರ್ಯಂ ಕರ್ಮ ಸಮಾಚರ' ಅಂದರೆ 'ಮಾಡಬೇಕಾದ ಕೆಲಸವನ್ನು ಶ್ರಮದ ಅಥವಾ ಫಲದ ವಿಚಾರವಿಲ್ಲದೆ ಮಾಡು' ಎಂಬ ಸೂತ್ರವನ್ನು ಮರೆತು, ಆಲಸ್ಯಾತ್ಮಕ ಕಲಿದೇವತೆಯ ಪ್ರೇರಣೆಯಿಂದ ಕ್ಷಣಿಕ ಲಕ್ಷ್ಮೀಯ ಆರಾಧನದಲ್ಲಿ ಪ್ರೀತಿ ಪಡುವದಾಯಿತು. ಇಂಥಾ ಸಂದರ್ಭದಲ್ಲಿ ಜನರು ಆಸ್ಪತ್ರಿಗಳಿಗೆ ಹೋಗದೆ, ಪಂಡಿತರನ್ನು ಹುಡುಕಿ, ಅವರು ಕೇಳಿದಷ್ಟು ದುಡ್ಡು ಕೊಟ್ಟು, ಊರೆಲ್ಲ ಸುತ್ತಿ ಔಷಧಗಳನ್ನು ಸಂಗ್ರಹಿಸಿಕೊಂಡು, ಕಷಾಯ, ತೈಲ, ಗಂಜಿ, ಮುಂತಾದವುಗಳನ್ನು ಮಾಡುವ ಶ್ರಮವನ್ನೂ ನಷ್ಟವನ್ನೂ ಯಾಕೆ ಪಡದಾರು? ಸಹಜವಾಗಿ ಸಾಧ್ಯವಿರುವಲ್ಲೆಲ್ಲಾ ಜನರು ಪ್ರಥಮತಃ ಆಸ್ಪತ್ರಿಗಳಿಗೆನೇ ಹೋಗುವದಾಗಿ, ಆಯುರ್ವೇದದ ಮೌಲ್ಯ ಇಳಿಯುತ್ತಾ ಬರುವದಾಯಿತು

10. ಸಾಮಾನ್ಯ ಜನರಲ್ಲಿ ಆಯುರ್ವೇದದ ಪರಿಚಯ ಕಡಿಮೆಯಾದ ಹಾಗೆ, ಆಯುರ್ವೇದೀಯ ಚಿಕಿತ್ಸಕರ ಪಾಂಡಿತ್ಯವು ಹೀನವಾಗುತ್ತಾ ಬಂತು 'ವಿದ್ವಾನೇವ ಜಾನಾತಿ ವಿದ್ವಜ್ಜನಪರಿಶ್ರಮಂ' ಯಾವದಾದರೊಂದು ವಿದ್ಯೆಯು ಅಭಿವೃದ್ಧಿಯಾಗುವದಕ್ಕೆ ಆ ವಿದ್ಯೆಯನ್ನು ಸಂಪಾದಿಸಿಕೊಂಡವನ ಪಾಂಡಿತ್ಯವನ್ನು ಪೋಷಕರು ಪರೀಕ್ಷಿಸಿ, ತಾರತಮ್ಯದಿಂದ ಅವನನ್ನು ಸಂತೋಷಪಡಿಸಿ, ಪ್ರೋತ್ಸಾಹಿಸುವದು ಅಗತ್ಯ. ವೈದಿಕನು ವೇದವನ್ನು ಹೇಳುತ್ತಾನೋ, ವಾಯುಸ್ತುತಿಯನ್ನು ಹೇಳುತ್ತಾನೋ ಎಂಬದನ್ನು ಗೊತ್ತುಮಾಡುವಷ್ಟು ತಿಳಿವಳಿಕೆ ಗೃಹಸ್ಥರಿಗೆ ಇಲ್ಲದಿದ್ದರೆ, ವೈದಿಕರು ಸಿವುಣತ್ವಕ್ಕೆ ಯಾಕೆ ಶ್ರಮ ಪಟ್ಟಾರು? ಫಿಟಿಲಿನಲ್ಲಿ ಚಾಲ್ ಬಾರಿಸುವ ಭಿಕ್ಷುಕನಿಗೂ, ಬಹುಕಾಲ ಶ್ರಮಪಟ್ಟು ಶಾಸ್ತ್ರೀತ್ಯಾ ಕ್ರಮೇಣ ಕಲಿತ ಫಿಟಿಲ್ ವಿದ್ವಾಂಸನಿಗೂ ಏಕರೀತಿಯಾಗಿ ಸನ್ಮಾನ ಸಿಕ್ಕುವದಾದರೆ, ಭರತಶಾಸ್ತ್ರದ ಕುಶಲತೆಯು ಅಭಿವೃದ್ಧಿಯಾಗುವದಕ್ಕೆ ಪ್ರೋತ್ಸಾಹ ಎಲ್ಲಿಂದ? ಚರಕಾಚಾರ್ಯನಿಂದ ಯಮನ ಅನುಚರರೆಂತ ವರ್ಣಿಸಲ್ಪಟ್ಟ ವೈದ್ಯವೇಷಧಾರಿಗಳು ಅವನ ಕಾಲದಲ್ಲಿಯೇ ಬಹಳವಾಗಿ ಇದ್ದರೆಂದ ಮೇಲೆ, ಅರಸುಗಳ ಸಹಾಯವಿಲ್ಲದ ಈ ಕಾಲದಲ್ಲಿ ಬಹುಶಃ ಅಂಧವರೇ ಇರುತ್ತಾರೆಂದರೆ ಆಶ್ಚರ್ಯವೇನು? ಉದರಪೋಷಣಕ್ಕಲ್ಲದೆ ವೈದ್ಯ ನಡಿಸುವ ಪಂಡಿತರು ಈ ಕಾಲದಲ್ಲಿ ಬಹಳ ಅಪರೂಪ ಎಂಬದು ಸರ್ವರಿಗೂ ವಿದಿತವಾದ್ದೇ ಉದರಪೋಷಣದ ಉದ್ದೇಶವನ್ನು ಪೂರೈಸುವದಕ್ಕೆ ಹೆಚ್ಚಿನ ಪಾಂಡಿತ್ಯವು ಅವಶ್ಯಕವಲ್ಲ ಸಾಧಾರಣವಾಗಿ ರೋಗಿಗಳು ಕೇಳುವ ಪ್ರಶ್ನೆಗಳು ಮೂರೇ 1 ತಮ್ಮ ರೋಗ ಯಾವದು? 2. ಆ ರೋಗಕ್ಕೆ ಮದ್ದೇನು? ಮತ್ತು 3 ಆ ಮದ್ದಿಗೆ ಎಷ್ಟು ಖರ್ಚು ಬಿದ್ದೀತು? ಈಗ, ರೋಗಗಳ ಪ್ರಧಾನ ವರ್ಗಗಳು ಒಂದು ನೂರ ಹದಿಮೂರೇ ಅವುಗಳೊಳಗೊಂದರ ಹೆಸರನ್ನು ರೋಗಿಗೆ ಸಮಾಧಾನವಾಗುವಂತೆ ಅವನ ಸಂಕಷ್ಟಕ್ಕೆ ಇಡುವದರಲ್ಲಿ ಪ್ರಯಾಸವಿಲ್ಲ ಜ್ವರ, ಅತಿಸಾರ, ಜ್ವರಾತಿಸಾರ, ಮೂಲವ್ಯಾಧಿ, ವಾಂತಿ, ಬಾಯಾರಿಕೆ, ಬಿಕ್ಕಟ್ಟು, ಉದರವ್ಯಾಧಿ, ಅರಸಿನ ಮುಂಡಿಗೆ, ಶೂಲೆ, ಮೇಹ, ಮೂತ್ರಕೃಚ್ಛ್ರ, ಅಶ್ಮರೀ, ಉಬ್ಬಸ, ಕೆಮ್ಮು, ಪಾಂಡು, ಕ್ಷಯ, ನೇತ್ರರೋಗ, ಕರ್ಣರೋಗ, ನಾಸಾರೋಗ, ಮುಖರೋಗ ಮುಂತಾದ ಬಹಳ ವ್ಯಾಧಿಗಳು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದ್ದವೇ ಔಷಧಗಳನ್ನು ತಯಾರಿಸಿ ವಿಕ್ರಯಿಸುವ ಪ್ರಸಿದ್ಧ ಆಯುರ್ವೇದೀಯ ವೈದ್ಯಾಲಯಗಳು ಈಗ ಅನೇಕ ಇವೆ. ಆ ವೈದ್ಯಾಲಯಗಳಲ್ಲಿ ವಿಕ್ರೀತವಾಗುವ ಔಷಧಗಳ ಪಟ್ಟಿಗಳೊಂದಿಗೆ ಅನೇಕ ರೋಗಗಳ ಕಲವು ಲಕ್ಷಣಗಳು ಮತ್ತು ಆ ರೋಗಗಳನ್ನು ತಮ್ಮಲ್ಲಿರುವ ಯಾವ ಔಷಧಗಳು ವಾಸಿಮಾಡುತ್ತವೆ ಎಂಬ ವಿವರಗಳು

ಪ್ರಕಟವಾಗುತ್ತಾ ಇವೆ ಆ ಔಷಧಗಳೊಳಗೆ ಒಂದರನಂತರ ಒಂದನ್ನು ರೋಗಿಗಳಿಗೆ ಕೊಟ್ಟು ನೋಡುವದರಲ್ಲಿಯೇ ಈಗಿನ ಸಾಮಾನ್ಯ ವೈದ್ಯದ ಸಮಾಪ್ತಿಯಾಗಿರುತ್ತದೆ. ಈ ಕ್ರಮದಿಂದ ಅನೇಕರು ಪ್ರಯೋಜನವನ್ನು ಪಡೆಯುವದುಂಟಾದರೂ, ಅಂಧಾ ಚಿಕಿತ್ಸಕರಿಗೆಲ್ಲಾ ಆಯುರ್ವೇದಪಂಡಿತರೆನ್ನುವದು ಸಮರ್ಪಕವಲ್ಲ

11. ಹೀಗೆ ನಮ್ಮ ಜನರಲ್ಲಿ ಆಯುರ್ವೇದಪರಿಜ್ಞಾನವು ನಷ್ಟವಾಗುತ್ತಾ ಬಂದದ್ದೇ ಹಿಂದೆ ಪ್ರಸ್ತಾಪಿಸಿದ ಅತ್ಯಧಿಕ ಬಾಲ್ಯಮರಣಗಳಿಗೆ ಮುಖ್ಯ ಕಾರಣವಾಗಿರುತ್ತದೆ. ಒಂದು ಹೆಂಗಸು ಬಸುರಿ ಎಂಬ ಅನುಮಾನ ಹುಟ್ಟಿದೊಡನೆ ದ್ರವ್ಯಗುಣಪರಿಜ್ಞಾನವಿಲ್ಲದೆ ಮತ್ತು ಪರಿಮಾಣಕ್ಕೆ ಲಕ್ಷ್ಯವಿಡದೆ, ಯಾವ ಗ್ರಂಥಗಳಲ್ಲಿಯೂ ಹೇಳಲ್ಪಡದ ಸ್ವರಸಾದಿ ಔಷಧಗಳನ್ನು ಕೂಡಿಸಿ, ತುಪ್ಪವನ್ನು ತಯಾರಿಸಿಕೊಡುತ್ತಾರೆ, ಮತ್ತು ಗರ್ಭಿಣಿಯರ ಒಯಕೆಗಳನ್ನು ಪೂರೈಸದೆ ಬಿಡಬಾರದೆಂಬದರಿಂದ ಅವರ ಇಚ್ಛಾನುಸಾರ, ಬೇಡಿಕಾಡಿಯಾದರೂ, ಭಕ್ಷ್ಯ-ಭೋಜ್ಯ-ಪಾನಾದಿಗಳನ್ನು ಒದಗಿಸಿಕೊಡುತ್ತಾರೆ ಗೀತೆಯಲ್ಲಿ ತಾಮಸ ಜನಪ್ರಿಯವಾಗಿ ಉದಾಹರಿಸಲ್ಪಟ್ಟ 'ಕಟ್ವಮ್ಲಲವಣಾತ್ಯುಷ್ಣತೀಕ್ಷ್ಣರೂಕ್ಷವಿದಾಹಿನಃ' ಎಂಬ ವರ್ಗಗಳ ಆಹಾರಾದಿಗಳೇ ಸಾಮಾನ್ಯವಾಗಿ ನಮ್ಮ ಸ್ತ್ರೀಯರಿಗೆ ಪ್ರಿಯವಾದ್ದರಿಂದ, ಅಂಧಾಹಾರಾದಿಗಳನ್ನು ಧಾರಾಳವಾಗಿ ಅವರು ಸೇವಿಸುವದಾಯಿತು. ಈ ಸಂಪ್ರದಾಯದ ದೆಸೆಯಿಂದ ಆ ಗರ್ಭಿಣಿಯರು ಇನ್ನಷ್ಟು ಬಲಹೀನರಾಗಿ, ಅವರಲ್ಲಿ ಅನೇಕರು ಹೆರಲಾರದೆ ಸಾಯುತ್ತಾರೆ, ಅಥವಾ ಕೂಸು ಹೊಟ್ಟೆಯಲ್ಲಿಯೇ ಮೃತವಾಗುತ್ತದೆ, ಅಥವಾ ಜನಿಸಿದ ಶಿಶುಗಳು ಸರಿಯಾದ ಬೆಳಿಕೆಯಿಲ್ಲದೆ ನಾನಾ ಉಪದ್ರವಗಳಿಗೊಳಗಾಗಿ ಬೇಗನೇ ಸಾಯುತ್ತವೆ ಹೆಂಗಸು ಅಶಕ್ತಳಾಗಿ ಹೆರುವ ಪ್ರಯಾಸವನ್ನು ಸಹಿಸಲಾರದೆ, ಅಥವಾ ಅತಿಯಾದ ರಕ್ತಸ್ರಾವದಿಂದ ಮೂರ್ಛೆ ಹೋಗುವ ಲಕ್ಷಣ ಕಂಡ ಕೂಡಲೇ, ಅವಳಿಗೆ ಬಾಣಂತಿನಂಜು ಉಂಟಾಯಿತೆಂತ ಭಾವಿಸಿ, ಹೊಟ್ಟೆಗೆ ಹಾಲು ಮುಂತಾದ ಸಂಶಮನಕರವಾದ ದ್ರವ್ಯಗಳನ್ನು ಕೊಟ್ಟು ಉಪಚಾರ ಮಾಡುವದಕ್ಕೆ ಒದಲಾಗಿ, ಶುಂಠೀರಸದಲ್ಲಿಯೋ. ಬೆಳ್ಳುಳ್ಳಿರಸದಲ್ಲಿಯೋ ಸನ್ನಿಪಾತಕ್ಕೆ ಉಕ್ತವಾದ ಗೋರೋಚನಾದಿ ಮಾತ್ರೆಗಳನ್ನು ಕೊಡುವದು, ಕಣ್ಣುಗಳಿಗೆ ತೀಕ್ಷ್ಣವಾದ ಅಂಜನಗಳನ್ನು ಹಚ್ಚುವದು, ಮಲಗದ ಹಾಗೆ ಜುಟ್ಟಿಗೆ ಹಗ್ಗ ಹಾಕಿ ಮೇಲೆ ಕಟ್ಟಿಯೋ, ಹತ್ತರದವರು ಹಿಡದೋ, ಕೂತುಕೊಳ್ಳಿಸುವದು ಮುಂತಾದ ಅನೇಕ ವಿಚಾರಹೀನವಾದ ಮತ್ತು ಕ್ರೂರವಾದ ಅಪಚಾರಗಳನ್ನು ಉಪಚಾರವೆಂಬ ಹೆಸರಿನಿಂದ ಮಾಡುತ್ತಾರೆ. ಈ ಅಪಚಾರಗಳಿಂದ ಅಂಧಾ ಯಾವ ಸ್ತ್ರೀಯಾದರೂ ಸಾಯದೆ ಉಳಿದರೆ, ಅವಳು ಭಾಗ್ಯವಂತಳೆನ್ನಬೇಕು. ಇದಲ್ಲದೆ ಬಾಣಂತಿಗೆ ಹಾಲು ಮುಂತಾದ ತಂಪಾದ ಪದಾರ್ಥಗಳು ಯಾವಾಗಲೂ ಬಹಳ ದೋಷಕರ ಎಂಬ ಮಿಥ್ಯಾಜ್ಞಾನವು ಇನ್ನೂ ಹೋಗದೆ ಇರುವದರಿಂದ ಬಹಳ ಅನರ್ಘಗಳು ಉಂಟಾಗುತ್ತವೆ. ಜನಿಸಿದ ಶಿಶುವು, ಅದರ ಕಂರದ ಕಫವನ್ನು ತೆಗೆಯದರಿಂದಲೋ, ಬರೇ ಬಲಹೀನತೆಯಿಂದಲೋ, ಸರಿಯಾಗಿ ಕೂಗಲಿಲ್ಲ ಎಂದರೆ, ಅಥವಾ ಅದನ್ನು ಕ್ರಮಪ್ರಕಾರ ಹೊದಿಸದರಿಂದ ತಣ್ಣಗಿನ ಗಾಳಿ ತಾಗಿ ಅದರ ಯಾವ ಅಂಗವಾದರೂ ಸ್ವಲ್ಪ ತಣ್ಣಗೆ ಕಂಡರೆ, ಅದಕ್ಕೆ ಶೀತವೇರಿತೆಂತ ಭಾವಿಸಿ, ಅದರ ಶರೀರದ ಅನೇಕ ಕಡೆಗಳಲ್ಲಿ ಕ್ರೂರವಾಗಿ ಸುಟ್ಟಿಡುತ್ತಾರೆ ಬಾಲವೃದ್ಧರಿಗೆ ಅಗ್ನಿ-ಕ್ಷಾರ-ವಿರೇಕಗಳು ವರ್ಜ್ಯ ಎಂತ ಆಯುರ್ವೇದದಲ್ಲಿ ವಿಶೇಷ ವಿಧಿ ಇರುತ್ತದೆ (ಪು. 191 ನೋಡಿ). ಚಿಕ್ಕ ಕೂಸುಗಳಿಗೆ ಆಗಿಂದಾಗ್ಗೆ ಖಾರ ಕೊಡ

ತಕ್ಕದ್ದೆಂಬ ನಿಯಮವನ್ನು ಕಲ್ಪಿಸಿಕೊಂಡು ಮಾಡುವ ಅನರ್ಥಗಳ ಒಂದು ದುಃಖಕರವಾದ ದೃಷ್ಟಾಂತವನ್ನು ನಮ್ಮ ವಾಚಕರ ತಿಳುವಳಿಕೆಗೆ ತರುವದು ಯುಕ್ತವಾಗಿ ಕಾಣುತ್ತದೆ. ಒಂದು ಕೂಸಿಗೆ ಸ್ವಲ್ಪ ನೆಗಡಿಯಾಗಿದೆ ಎಂಬದರಿಂದ ಒಂದು ಖಾರದ ಕಷಾಯವನ್ನು ಮಾಡಿ, ಅದರ ತಾಯಿಯು ಕೂಸನ್ನು ತನ್ನ ಕಾಲುಗಳ ಮೇಲೆ ಮಲಗಿಸಿ, ಒಂದು ಸೌಟು ಕಷಾಯವನ್ನು ಅದರ ಬಾಯಿಯೊಳಗೆ ಹೊಯಿದಳು. ಅದರ ಖಾರಸ್ವಭಾವದ ದೆಸೆಯಿಂದ ಶಿಶು ಚೆನ್ನಾಗಿ ಬಾಯಿಯನ್ನು ಕಳೆಯಿತು. ಅದೇ ಸಂದರ್ಭ ಕಷಾಯವನ್ನು ಕುಡಿಸುವದಕ್ಕೆ ಅನುಕೂಲವೆಂತ ಭಾವಿಸಿ, ತಾಯಿಯು ಇನ್ನೊಂದು ಸೌಟು ಕಷಾಯವನ್ನು ಅದರ ಬಾಯಿಯೊಳಗೆ ಹಾಕಿದಳು ಅದರಿಂದ ಶ್ವಾಸಕಟ್ಟಿಹೋಗಿ ಕೂಸು ಆಗಲೇ ಪ್ರಾಣವನ್ನು ಬಿಟ್ಟಿತು! ಮೊಲೆಯುಣ್ಣುವ ಕೂಸಿನ ತಾಯಿಯು ತಕ್ಕವಾದ ಆಹಾರ-ಪಾನ-ವಿಹಾರಾದಿಗಳ ನಿಯಮಗಳನ್ನು ಇಟ್ಟುಕೊಂಡು, ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳದಿರುವದರಿಂದ, ಮೊಲೆಹಾಲು ಸಾಲದೆಹೋಗಿ ಕೂಸು ಸಂಕಷ್ಟಪಡುವ ಸಂಗತಿಯಲ್ಲಿ ಆ ಕೂಸಿಗೆ ಅತಿಗುರುವಾದ ಅನ್ನ ಪಾನಾದಿಗಳನ್ನು ಕೊಟ್ಟು, ಅಥವಾ ತನ್ನ ಮೊಲೆಹಾಲಿನ ಗುಣವನ್ನು ಕಡಿಸಿಕೊಂಡು, ಆ ಕೂಸಿಗ ನಾನಾ ರೋಗಗಳನ್ನುಂಟುಮಾಡುತ್ತಾರೆ. ಬಾಣಂತಿ ಔಷಧ ಎಂತ ಮಾಡಿಕೊಡುವದರ ಅನರ್ಥದ ಕುರಿತು ಒಂದು ಸಂಗತಿಯನ್ನು ಹೇಳಿದರೆ ಸಾಕು ಅಂಗಡಿ ಔಷಧಗಳ ಅಡಿಗೆ ಎಂತ 10—20 ಬಗೆ ಔಷಧಗಳನ್ನು ಅಂಗಡಿಯಿಂದ ತರಿಸಿ, ಅವುಗಳ ಸೇರಿಕೆಯಿಂದ ಒಂದು ಗುಡವನ್ನು ಮಾಡಿ ಬಾಣಂತಿಗೆ ಕೊಡುವ ವಾಡಿಕೆ ಉಂಟು ಒಂದೆರಡು ಕಡೆಗಳಿಂದ ಆ ಜೀನಸುಗಳ ಪಟ್ಟಿಯನ್ನು ತರಿಸಿ ನೋಡಿ, ಆ ಔಷಧಗಳನ್ನೆಲ್ಲಾ ಎಷ್ಟೆಷ್ಟು ಹಾಕುತ್ತೀರಿ ಎಂತ ಕೇಳಿದ್ದಕ್ಕೆ, ಮೊದಲು ಒಂದೊಂದು ಪೈದು ಪ್ರಕಾರ ತರಿಸುವ ವಾಡಿಕೆಯಾದರೂ, ಈಗ ಜೀನಸುಗಳೆಲ್ಲಾ ಪ್ರಿಯವಾದ್ದರಿಂದ ಒಂದೊಂದು ಮುಕ್ಕಾಲಿನದಂತೆ ತರಿಸುತ್ತೇವ ಎಂಬ ಉತ್ತರ ಸಿಕ್ಕಿತು. ಆ ಪಟ್ಟಿಯಲ್ಲಿ ತೊಲೆಗೆ ಒಂದೆರಡು ರೂಪಾಯಿ ವರೆಗೆ ಕ್ರಯವಿರುವ ಗೋರೋಜನಾದಿಗಳೂ, ಒಂದೆರಡು ಮುಕ್ಕಾಲು ಕ್ರಯದ ಶುಂಠಿಜೀರಕಾದಿಗಳೂ ಸೇರಿರುವಾಗ್ಗೆ, ಸರಾಸರಿ ಒಂದು ಪೈದು ಅಥವಾ ಒಂದು ಮುಕ್ಕಾಲಿನದು ಎಂದರೆ ಆಯಾ ಔಷಧದ ಗುಣದೋಷಗಳ ವಿಚಾರ ಇಲ್ಲವೇ ಇಲ್ಲ ಎಂತ ಸ್ಪಷ್ಟವಾಗುತ್ತದೆ. ಬಾಣಂತಿಯಾಗುವದೊಂದು ರೋಗವಲ್ಲ. ಬಾಣಂತಿಯ ಆಯಾಸಪಟ್ಟ ಶರೀರವು ರೋಗಗಳಿಗೆ ಗುರಿಯಾಗದಂತೆ ಅವಳನ್ನು ಯುಕ್ತವಾದ ಆಹಾರವಿಹಾರಾದಿ ನಿಯಮಗಳಿಂದ ರಕ್ಷಿಸತಕ್ಕದ್ದೆಂತಲೂ, ಅವಳು ವ್ಯಾಯಾಮ, ಮೈಧುನ, ಸಿಟ್ಟು, ಶೀತ ಸೇವನ, ಇವುಗಳನ್ನು ಬಿಟ್ಟಿರಬೇಕೆಂತಲೂ ಹೇಳಲ್ಪಟ್ಟದೆ. ಬಾಣಂತಿಗೆ ಯಾವ ರೋಗವುಂಟಾದರೂ ಅದನ್ನು ವಾಸಿಮಾಡುವದರಲ್ಲಿ ಅಧಿಕ ಪ್ರಯಾಸವಿರುತ್ತದೆಂಬದರಿಂದಲೂ ಈ ನಿಯಮಗಳು ಉಕ್ತವಾಗಿವೆ ಸುಶ್ರುತನ ಉಪದೇಶ ಪ್ರಕಾರ, ಬಾಣಂತಿಗೆ ಕಡೀರುಬೇರನ್ನು ಕೂಡಿಸಿ ಕಾಯಿಸಿದ ತೈಲವನ್ನು ಹಚ್ಚಿ, ವಾತಹರವಾದ ಔಷಧಗಳನ್ನು ಹಾಕಿ ಕಾಯಿಸಿದ ಬಿಸಿನೀರಿನಿಂದ ಸ್ನಾನ ಮಾಡಿಸಬೇಕು, ದೋಷಕರವಾದ ರಕ್ತ ಮುಂತಾದ್ದು ಹೊರಗೆ ಹೋಗಲಿಲ್ಲ ಎಂತಾದರೆ, ಬೆಲ್ಲದ ಕಷಾಯವನ್ನು, ಹಿಪ್ಪಲಿ, ಹಿಪ್ಪಲೀಮೂಲ, ಗಜಹಿಪ್ಪಲಿ, ಚಿತ್ರಮೂಲ, ಒಣಶುಂಠಿ, ಇವುಗಳ ಚೂರ್ಣವನ್ನು ಕೂಡಿಸಿಕೊಂಡು, 2—3 ದಿನ ಕುಡಿಯ ಕೊಡಬೇಕು, ದೇಹ ಶುದ್ಧವಾದ ಮೇಲೆ ಮೂರು ದಿನ ವಿದಾರಿಗಂಧಾದಿ ವರ್ಗದ ಔಷಧಗಳನ್ನು ಸೇರಿಸಿ ಮಾಡಿದ ಗಂಜಿಯೊಂದಿಗೆ ಹಾಲನ್ನಾ

ಗಲಿ, ಸ್ನೇಹ (ತುಪ್ಪ ಮುಂತಾದ)ವನ್ನಾಗಲಿ ಕೂಡಿಸಿ ಕುಡಿಸಬೇಕು; ಅನಂತರ ದೇಹದ ಬಲವನ್ನೂ ಅಗ್ನಿಯ ಬಲವನ್ನೂ ನೋಡಿಕೊಂಡು, ಯವೆ—ಕೋಲ—ಹುರುಳಿ ಸೇರಿಸಿ ಮಾಡಿದ ಜಾಂಗಲಮಾಂಸದ ರಸದಿಂದ ಅನ್ನವನ್ನು ಉಣ್ಣಿಸುವದು, ಮತ್ತು ಈ ರೀತಿ ಒಂದೂವರೆ ತಿಂಗಳ ಪರೆಗೆ ಅವಳನ್ನು ಪಥ್ಯದಲ್ಲಿರಿಸಬೇಕು. ಚರಕನ ಮತ ಪ್ರಕಾರ, ಬಾಣಂತಿಗೆ ಹಸಿವು ಉಂಟಾದ್ದನ್ನು ನೋಡಿ, ತುಪ್ಪ, ತೈಲ, ವಸೆ, ಮಜ್ಜೆ, ಇವುಗಳೊಳಗೆ ಅವಳಿಗೆ ಹಿತವಾದ ಯಾವದಾದರೊಂದನ್ನು ಹಿಪ್ಪಲಿ, ಹಿಪ್ಪಲೀಮೂಲ, ಕಾಡುಮೆಣಸಿನ ಬೇರು, ಚಿತ್ರಮೂಲ, ಒಣಶುಂಠಿ, ಇವುಗಳ ಚೂರ್ಣದೊಂದಿಗೆ ಕುಡಿಯಕೊಟ್ಟು, ಅವಳ ಕಿಬ್ಬೊಟ್ಟಿಗೆ ತುಪ್ಪವನ್ನೂ ಎಣ್ಣೆಯನ್ನೂ ಸವರಿ ದೊಡ್ಡ ವಸ್ತ್ರವನ್ನು ಸುತ್ತಬೇಕು; ಆ ಸ್ನೇಹವು ಜೀರ್ಣವಾದನಂತರ ಅದೇ ಹಿಪ್ಪಲಿ ಮುಂತಾದವುಗಳನ್ನು ಕೂಡಿಸಿ ಮಾಡಿದ ಯವಾಗೂ ಎಂಬ ಗಂಜಿಯನ್ನು ಸ್ನೇಹದೊಂದಿಗೆ ಪ್ರತಿದಿನ ಎರಡು ಹೊತ್ತು ಉಣ್ಣಲಿಕ್ಕೆ ಕೊಡಬೇಕು; ಊಟಕ್ಕೆ ಮೊದಲೇ ಎರಡು ಹೊತ್ತು ಬಿಸಿನೀರಿನಿಂದ ಸ್ನಾನ ಮಾಡಿಸಬೇಕು, ಈ ಪ್ರಕಾರ 5 ದಿನ ಅಥವಾ 7 ದಿನ ಅವಳನ್ನು ಕಾಸಾಡಿ, ಅನಂತರ ಕ್ರಮದಿಂದ ಅವಳಿಗೆ (ತೃಪ್ತಿಕರವಾದ ಆಹಾರ ಕೊಟ್ಟು) ಆಪ್ಯಾಯನ ಮಾಡಬೇಕು ಒಟ್ಟಾರೆ, ಸುಖವಾಗಿ ಹೆರುವದಕ್ಕೂ ಬಾಣಂತಿತನವು ನಿರ್ಭಯವಾಗಿ ಗತಿಸುವದಕ್ಕೂ, ಶಿಶುವಿನ ಸರಿಯಾದ ಬೆಳಿಕೆಗೂ, ಹಂಗಸು ಬಸುರಿಯಾಗಿರುವಾಗ್ಗೆ ತೆಗೆದುಕೊಳ್ಳಬೇಕಾದ ಜಾಗ್ರತೆಯೇ ಮುಖ್ಯವಾದದ್ದೆಂಬದನ್ನು ಜನರು ವಸ್ತುತಃ ತಿಳಿಯದರಿಂದ ಬಹಳ ಕಷ್ಟಗಳು ಸಂಭವಿಸುತ್ತಿವೆ ಔಷಧಗಳ ಪ್ರಮಾಣದ ವಿಚಾರದಲ್ಲಿ ಪಂಡಿತರೆನ್ನಿಸಿಕೊಳ್ಳುವವರೊಳಗ ಅನೇಕರಿಗೆ ಸಹ ಸಾಕಷ್ಟು ತಿಳಿವು ಇದ್ದ ಹಾಗೆ ಕಾಣುವದಿಲ್ಲ. ಪ್ರಾಯಸ್ಥರಿಗೆ ಕೊಡುವದಕ್ಕೆ ತಯಾರಿಸಿದ ಗೋರೋಜನಾದಿ ಮಾತ್ರೆಯನ್ನು ಒಂದು ವರ್ಷ ಪ್ರಾಯದ ಮಗುವಿಗೆ ಕೊಡುತ್ತಿದ್ದೇನೆಂತ ಹೇಳಿದ ಒಬ್ಬ ವೈದ್ಯನ ಹತ್ತರ ಯಾವ ರಸದಲ್ಲಿ ಮತ್ತು ಯಾವ ಪ್ರಮಾಣದಲ್ಲಿ ಆ ಮಾತ್ರೆಯನ್ನು ಕೊಡುತ್ತಿದ್ದಿ? ಎಂತ ಕೇಳಿದ್ದಕ್ಕೆ ಶುಂಠಿರಸದಲ್ಲಿ ಅರ್ಧ ಮಾತ್ರೆ ಕೊಟ್ಟಿದ್ದೇನೆ ಎಂತ ಉತ್ತರ ಸಿಕ್ಕಿತು ಇಂಥವರೆಲ್ಲ ಆಯುರ್ವೇದಚಿಕಿತ್ಸೆಯನ್ನು ನಡಿಸಿ ಹೆಸರು ಪಡದಿರುವಾಗ್ಗೆ, ಆಯುರ್ವೇದದ ಗೌರವ ಉಳಿಯುವದು ಹ್ಯಾಗೆ? ಮತ್ತು ಬಾಲ್ಯಮರಣ ಕಡಿಮೆಯಾಗುವದು ಹ್ಯಾಗೆ? ಮಕ್ಕಳಿಗೆ ಪಿತ್ತಕೋಶದ ಶೋಫ ಉಂಟಾಗಿವೆ ಎಂತ ಕಂಡರೆ, ಅವುಗಳಿಗೆ ಜೇಪಾಳದ ಬೀಜ ಇತ್ಯಾದಿ ತೀಕ್ಷ್ಣವಾದ ವಿರೇಚನವನ್ನು ನಿರರ್ಥಕವಾಗಿ ಬಹುಕಾಲ ದಿನ ಬಿಡದೆ ಕೊಟ್ಟು, ಉಂಟು ಮಾಡುವ ಪೀಡೆಯು ಬಹು ದುಃಖಕರ. ಮಕ್ಕಳೊಳಗೆ ಬಾಲಗ್ರಹ ಎಂಬ ರೋಗವು ದಿನೇ ದಿನೇ ಹೆಚ್ಚಾಗುತ್ತಾ ಬರುತ್ತದೆ. ಇದಕ್ಕೆ ಹೇತು ಪ್ರಾಯಶಃ ತಾಯಿಯ ಮತ್ತು ಧಾತ್ರಿಯ ಅಪಚಾರಗಳು. ಆಯುರ್ವೇದದಲ್ಲಿ ಬಾಲಗ್ರಹಕ್ಕೆ ಬಲಿಗಳು ಹೇಳಲ್ಪಟ್ಟಿವೆಯಲ್ಲದೆ ಪ್ರತ್ಯೇಕವಾದ ಔಷಧ ಕಾಣುವದಿಲ್ಲ. ಬಾಲಗ್ರಹಚಿಹ್ನಗಳು ಕಂಡ ಮಗುವಿನಲ್ಲಿ ಕಾಣುವ ಅಜೀರ್ಣ ಮಲಬದ್ಧತೆ, ಕೆಮ್ಮು, ನೆಗಡಿ, ಮೈಕಾವು ಮುಂತಾದ ಉಪದ್ರವಗಳಿಗೆ ಪ್ರತ್ಯೇಕವಾಗಿ ಚಿಕಿತ್ಸೆಗಳು ಉಕ್ತವಾಗಿವೆ. ಈ ಚಿಕಿತ್ಸೆಗಳನ್ನು ಸರಿಯಾಗಿ ನಡಿಸಿದ್ದಲ್ಲಿ, ದೋಷಗಳು ಸರಿಯಾಗಿ ಮಗುವಿಗೆ ಸೌಖ್ಯವಾಗದಿದ್ದರೆ, ಉಕ್ತವಾದ ಬಲಿಗಳನ್ನು ಮಾಡಿಸುವದಲ್ಲದೆ ಬೇರೆ ಕರ್ತವ್ಯವಿಲ್ಲ ಎಂಬ ತಾತ್ಪರ್ಯ. ಆ ಬಲಿಗಳು ಸಾರ್ಥಕವೊ, ಅಲ್ಲವೊ, ಎಂಬದನ್ನು ಅನುಭವದಿಂದ ನಿಶ್ಚಯಿಸುವದಕ್ಕೆ, ಅಂಥಾ ಬಲಿಗಳನ್ನು ಉಕ್ತವಾದ ಕ್ರಮದಲ್ಲಿ ನಡಿಸಲಿಕ್ಕೆ ಕಲಿತ ವೈದ್ಯರ

ಈಗ ಅಪರೂಪವಾದ್ದರಿಂದ ಸಾಧ್ಯನಿಲ್ಲ ಕೂಸಿಗೆ ಇಂತಿಷ್ಟನೇ ದಿವಸದಲ್ಲಿ ಇಂತಿಷ್ಟನೇ ತಿಂಗಳಲ್ಲಿ ಇಂತಿಷ್ಟನೇ ವರ್ಷದಲ್ಲಿ ಬಾಧಿಸುವಂಥಾದ್ದು ಇಂಥಾ ಗ್ರಹ, ಅದರ ಬಾಧೆಯ ಲಕ್ಷಣಗಳು ಇಂಥವು, ಅದರ ಪರಿಹಾರಕ್ಕೆ ಬಲಿಮಂತ್ರಾದಿಗಳ ಕ್ರಮ ಹೀಗೆ, ಎಂಬ ವಿವರಗಳಿಂದ 12 ವರ್ಷಗಳ ವರೆಗೆ ಬಾಧಿಸಬಹುದಾದ ಹನ್ನೆರಡು ಗ್ರಹಗಳ ವ್ಯಾಖ್ಯಾನ ಕೆಲವು ಗ್ರಂಥಗಳಲ್ಲಿ, ಶಿಶುವನ್ನು ಬಾಧಿಸತಕ್ಕವು ಸ್ಕಂದಾದಿ ಒಂಭತ್ತು ಗ್ರಹಗಳೆಂತಲೂ, ಅವುಗಳ ಪರಿಹಾರಕ್ಕೆ ಬಲಿ, ಧೂಪ, ಸ್ನಾನಾದಿಗಳನ್ನು ಇಂಥಿಂಥಾ ಕ್ರಮಗಳಲ್ಲಿ ನಡಿಸಬೇಕೆಂತಲೂ ಕೆಲವು ಗ್ರಂಥಗಳಲ್ಲಿ, ಬರೆಯಲ್ಪಟ್ಟದ್ದು ಕಾಣುತ್ತದೆ. ಈಗ ಊರಲ್ಲಿ ಸರ್ವಸಾಮಾನ್ಯವಾಗಿ ನಡಿಸಲ್ಪಡುವ ಬಲಿಯಂತ್ರತಂತ್ರಾದಿಗಳ ಪ್ರಸ್ತಾಪ ಆಯುರ್ವೇದದಲ್ಲಿ ಕಾಣುವದಿಲ್ಲ ಆದ್ದರಿಂದ ಪ್ರಕೃತ ಸ್ಥಿತಿಯಲ್ಲಿ ವಾತ, ಪಿತ್ತ, ಕಫಗಳೊಳಗೆ ದೋಷಕರವಾದವುಗಳನ್ನು ಸರಿಪಡಿಸುವ ಹಾಗೂ, ಮೆದುಳು ಮುಂತಾದ ನರಗಳನ್ನು ಶುದ್ಧಪಡಿಸುವ ಹಾಗೂ ಪ್ರತಿಕ್ರಿಯೆ ಮಾಡತಕ್ಕದ್ದು ಮತ್ತು ಧಾತ್ರಿಯ ಅನಾಚರಣಗಳನ್ನು ನಿಲ್ಲಿಸುವದು ಮಾತ್ರ ನಮ್ಮ ಕರ್ತವ್ಯವಾಗಿದೆ ಈ ಅಂಶಗಳಿಗೆ ಲಕ್ಷ್ಯಕೊಡದೆ, ಮಂತ್ರ, ತಂತ್ರ, ವಿಭೂತಿ, ವಿಹಿತವಲ್ಲದ ಬಲಿ ಮುಂತಾದ ನಾನಾ ವಿಧವಾದ ಅಪಾರ್ಥಕೆಲಸಗಳನ್ನು ಮಾಡುವದರಲ್ಲಿಯೇ ಮನಸ್ಸಿಟ್ಟು, ಕಾಲ ಕಳೆದರೆ, ಅನಿಷ್ಟಸಂಭವವು ಹೆಚ್ಚಾಗದಿರುವದು ಹ್ಯಾಗೆ?

12. ಇಂಥ ಅನರ್ಥಗಳೆಲ್ಲ ನಿಂತು, ಭಾರತೀಯರ ಸರಾಸರಿ ಆಯುಃಪ್ರಮಾಣವು ಎರಬೇಕಾದರೆ, ಆಯುರ್ವೇದದ ಜ್ಞಾನವನ್ನು ಸಾಮಾನ್ಯ ಜನರಲ್ಲಿಯೂ ವೈದ್ಯರಲ್ಲಿಯೂ ಬೆಳಿಸುವದು ಅತ್ಯಾವಶ್ಯಕವಾಗಿರುತ್ತದೆ ಆಯುರ್ವೇದದ ತತ್ವಗಳನ್ನು ವಿವರಿಸದೆ, ಕೆಲವು ರೋಗಗಳ ಲಕ್ಷಣಗಳನ್ನು ಮತ್ತು ಅವುಗಳ ಪ್ರತಿಕ್ರಿಯೆಗಳೊಳಗೆ ಪ್ರಶಸ್ತವಾದ ಕೆಲವು ಯೋಗಗಳನ್ನು ಮಾತ್ರ ನಿದರ್ಶಿಸಿ, ಅನೇಕವಾಗಿ ಪ್ರಕಟವಾಗುತ್ತಿರುವ ಪುಸ್ತಕಗಳಿಂದ ಉದರಪೋಷಣವನ್ನೇ ಉದ್ದೇಶವಾಗಿಟ್ಟುಕೊಂಡು ವೈದ್ಯವೃತ್ತಿಯನ್ನವಲಂಬಿಸಿರುವವರಿಗೆ ಕ್ಷಣಿಕ ಪ್ರಯೋಜನ ಸಿಕ್ಕಬಹುದಾದರೂ, ಆಯುರ್ವೇದಜ್ಞಾನಾಭಿವೃದ್ಧಿಗೆ ಸಾರ್ಥತೆ ಇಲ್ಲ. ಆ ಔಷಧಯೋಗಗಳಿಗೆ ಆಧಾರವಾಗಿರುವ ತತ್ವಗಳನ್ನರಿಯದೆ, ಆ ಯೋಗಗಳನ್ನು ಉಪಯೋಗಿಸುವದರಿಂದ ದೋಷಗಳು ಅಧಿಕವಾಗಿ, ಆಯುರ್ವೇದದ ಕೀರ್ತಿಗೆ ಕುಂದು ಉಂಟಾಗುವ ಸಂಭವವಿರುತ್ತದೆ ಆ ತತ್ವಗಳನ್ನು ಸಾರ್ಥವಾಗಿ ತಿಳಿಯುವದಕ್ಕೆ ಸಂಸ್ಕೃತ ಭಾಷೆಯಲ್ಲಿ ರಚಿತವಾಗಿರುವ ಚರಕ, ಸುಶ್ರುತ, ಮುಂತಾದ ಮಹಾಗ್ರಂಥಗಳನ್ನು ಕಲಿಯಬೇಕಾದ್ದರಿಂದ, ಸಾಕಷ್ಟು ಸಂಸ್ಕೃತಜ್ಞಾನವಿಲ್ಲದ ಈಗಿನ ಜನಸಾಮಾನ್ಯಕ್ಕಾಗಲಿ, ವೈದ್ಯರಿಗಾಗಲಿ, ಅಂಥಾ ಜ್ಞಾನಸಂಪಾದನವು ಬಹು ಪ್ರಯಾಸಸಾಧ್ಯವೇ. ಅದಲ್ಲದೆ, ಯಾವದಾದರೊಂದೇ ಗ್ರಂಥವನ್ನು ಪೂರ್ಣವಾಗಿ ಓದಿದರೂ ಸಾಕಾಗುವದಿಲ್ಲ ಮತ್ತು ಆ ಪೂರ್ವಗ್ರಂಥಗಳಲ್ಲಿ ಆಧುನಿಕಾವಸ್ಥೆಗಳಿಗೆ ಪ್ರಯೋಜನವಿಲ್ಲದ ಅಂಶಗಳು ಬಹಳ ಇವೆ. ಇಂಥಾ ತಡೆಗಳನ್ನೆಲ್ಲ ನಿವಾರಿಸಿ, ಉತ್ಕೃಷ್ಟವಾದ ಆಯುರ್ವೇದೀಯ ವೈದ್ಯದ ಪ್ರಸಾರವನ್ನು ಸಾಧಿಸುವದಕ್ಕೆ ಅಂಥಾ ಮಹಾ ಗ್ರಂಥಗಳಲ್ಲಿ ಅಡಗಿರುವ ಮುಖ್ಯ ತತ್ವಗಳನ್ನೇ ಹೆಕ್ಕಿ, ಸಾಮಾನ್ಯ ಜನರು ಸುಲಭವಾಗಿ ತಿಳಿಯುವಂತೆ, ಆಯಾ ದೇಶದ ಮಾತೃಭಾಷೆಯಲ್ಲಿ ತಕ್ಕ ಗ್ರಂಥಗಳನ್ನು ರಚಿಸುವದೇ ಮುಖ್ಯ ಉಪಾಯ ಎಂಬ ವಿಚಾರವು ಈ ಗ್ರಂಥದ ಹೊರಡುವಿಕೆಗೆ ಪ್ರಧಾನ ಕಾರಣವೆನ್ನಬಹುದು.

13. ಎಷ್ಟೋ ಸಹಸ್ರ ವರ್ಷಗಳ ಹಿಂದೆ, ಆ ಕಾಲದ ಅಫ್ರೌಢ ಅನುಭವದ ಮೇಲೆ ರಚಿತವಾದ ಈ ಪುರಾತನ ಗ್ರಂಥಗಳನ್ನು ಉದ್ಧರಿಸುವದಕ್ಕಿಂತ ಆಧುನಿಕವಾದ ಮತ್ತು ಸಾಮಾನ್ಯವಾಗಿ ಸಮ್ಮಾನ ಪದವಿಯನ್ನು ಪಡೆದಿರುವ ಪಾಶ್ಚಾತ್ಯವೈದ್ಯವನ್ನೇ ಹೆಚ್ಚಿನ ಪ್ರಚಾರಕ್ಕೆ ತರುವದು ಒಳ್ಳೇದಲ್ಲವೋ ಎಂಬ ಜಿಜ್ಞಾಸವು ಸಹಜವಾಗಿ ಎಲ್ಲರಲ್ಲಿಯೂ ಹುಟ್ಟ ತಕ್ಕಂಥಾದ್ದು. ಅದನ್ನು ಸ್ವಲ್ಪ ಆಲೋಚಿಸುವ. ಹತ್ತು ವರ್ಷಗಳ ಹಿಂದೆ ಈ ಬ್ರಿಟಿಷ ಹಿಂದುಸ್ಥಾನದಲ್ಲಿ, ಚಿಕ್ಕವೂ ದೊಡ್ಡವೂ ಸೇರಿ, 2685 ಆಸ್ಪತ್ರಿಗಳು ಇದ್ದವು ಎಂತ ಕಾಣುತ್ತದೆ. ಈ ಭಾಗದ ಜನಸಂಖ್ಯೆಯು ಸುಮಾರು 244,000,000ವಾದ್ದರಿಂದ, 90,875 ಜನರಿಗೆ ಒಂದರ ಪ್ರಕಾರ ಆಸ್ಪತ್ರಿಗಳು ಇದ್ದ ಹಾಗೆ ಆಯಿತು. ಆ ಆಸ್ಪತ್ರಿಸಂಖ್ಯೆಯಿಂದ 1901ನೇ ಇಸವಿಯ ಗ್ರಾಮಗಳ ಮತ್ತು ಪಟ್ಟಣಗಳ ಸಂಖ್ಯೆಯಾಗಿದ್ದ 730,634ನ್ನು ವಿಭಾಗಿಸಿದರೆ, 272 ಗ್ರಾಮಗಳಿಗೆ ಒಂದು ಆಸ್ಪತ್ರಿ ಇತ್ತು ಎಂತ ತಿಳಿಯುತ್ತದೆ ಎಲ್ಲಾ ಜನರು ತಮ್ಮ ಸಂಕಟಪರಿಹಾರಕ್ಕೆ ಆಸ್ಪತ್ರಿಗಳನ್ನೇ ಆಧರಿಸಬೇಕಾದರೆ, ಈಗಿನ ಆಸ್ಪತ್ರಿ ಸಂಖ್ಯೆಯನ್ನು ನೂರು ಪಾಲಷ್ಟಾದರೂ ಏರಿಸಬೇಕಾದೀತು. ಕಳೆದ ಹತ್ತು ವರ್ಷಗಳಲ್ಲಿ ಆಸ್ಪತ್ರಿಗಳ ಸಂಖ್ಯೆಯು ಸ್ವಲ್ಪ ಮಟ್ಟಿಗೆ ಏರಿರಬೇಕು 1900ನೇ ಇಸವಿಯಲ್ಲಿ 2313 ಇದ್ದದ್ದು 1910ನೇ ಇಸವಿಯೊಳಗೆ 2685ಕ್ಕೆ ಏರಿತ್ತೆಂದರೆ, ಸರಾಸರಿ ವರ್ಷಕ್ಕೆ 37ರಂತೆ ಇಡೀ ಭರತ ಖಂಡದ ಬ್ರಿಟಿಷ ರಾಜಧಾನಿಯಲ್ಲಿ ಏರಿದಂತಾಯಿತು ಈ ಜಿಲ್ಲೆಯಲ್ಲಿ ಮೂರು ಮೈಲುಗಳ ದೂರಕ್ಕೆ ಒಂದರಂತೆ ಆಸ್ಪತ್ರಿಗಳನ್ನು ಸ್ಥಾಪಿಸುವದಾದರೂ, 260ರ ಮೇಲೆ ಆಸ್ಪತ್ರಿಗಳು ಬೇಕಾಗುವವು. ಆದ್ದರಿಂದ ಈಗ ಇರುವ ಸಂಖ್ಯೆಯ ನೂರು ಪಾಲಷ್ಟು ಹೆಚ್ಚು ಬೇಕಾಗುವದೆಂಬ ಅಂದಾಜು ಅತಿಶಯವಲ್ಲ. ಈಗ ಖರ್ಚಿನ ವಿಷಯ ಆಲೋಚಿಸಿದರೆ, 1911ನೇ ಇಸವಿಯಲ್ಲಿ ಸರಕಾರವು ವೈದ್ಯಸಹಾಯಕ್ಕಾಗಿ ಖರ್ಚು ಮಾಡಿದ್ದು 129 ಲಕ್ಷ ರೂಪಾಯಿಯೆಂತ ಕಾಣುತ್ತದೆ. ಅದರ ನೂರರಷ್ಟೆಂದರೆ 129 ಕೋಟಿ ರೂಪಾಯಿ ಆಗುತ್ತದೆ. ಸರಾಸರಿ ಮೇಲೆ ಒಂದು ಆಸ್ಪತ್ರಿಗೆ ವರ್ಷಕ್ಕೆ ಸುಮಾರು 5000 ರೂಪಾಯಿ ಖರ್ಚು ತಗಲುತ್ತದೆಂತ ಗಣಿಸಬಹುದು. ಪಾಶ್ಚಾತ್ಯರೀತ್ಯಾ ಚಿಕಿತ್ಸಾವೃತ್ತಿ ನಡಿಸುವದಕ್ಕೆ ಬೇಕಾದ ಅತ್ಯಂತ ಕೆಳಗಿನ ವಿದ್ಯಾಪೀಠವನ್ನೇರುವದಕ್ಕ ಸಹ ಹಿಂದಿನ ಸಾಧಾರಣ ವಿದ್ಯಾಭ್ಯಾಸ ಕಾಲ ಸೇರಿ ಹದಿನೈದು ವರ್ಷಗಳ ಕಲಿಯುವಿಕೆ ಮತ್ತು ನಾಲ್ಕೈದು ಸಾವಿರ ರೂಪಾಯಿಯ ಖರ್ಚು ಬೇಕಾಗುವದುಂದ, ಒಬ್ಬನು ರಾಜಸೇವಕನಾಗದೆ ಖಾಸಗಿಯಾಗಿ ವೈದ್ಯವೃತ್ತಿಯನ್ನು ನಡಿಸುವದಾದರೂ, ಆವನ ಪ್ರತಿಫಲವಾಗಿಯೂ ಔಷಧಗಳ ಖರ್ಚಾಗಿಯೂ, ಅಷ್ಟೇ ಅಂದರೆ 5000 ರೂಪಾಯಿಯಷ್ಟು ವರ್ಷಂಪ್ರತಿ ಸಿಕ್ಕಬೇಕಾದೀತು ಈ ರೀತಿಯಾಗಿ ದ್ರವ್ಯವನ್ನು ವೈದ್ಯಕ್ಕೆ ವಿನಿಯೋಗಿಸುವದಕ್ಕೆ ನಮ್ಮ ಜನರಾಗಲಿ, ನಮ್ಮ ಸರಕಾರವಾಗಲಿ ಶಕ್ತರಾಗುವದು ಯಾವಾಗ? ಅದಲ್ಲದೆ, ಈಗಿನಕ್ಕಿಂತಲೂ ನೂರು ಪಾಲಷ್ಟು ಜನರು ಪಾಶ್ಚಾತ್ಯವೈದ್ಯ ವಿದ್ಯಾಸಂಪಾದನಕ್ಕೆ ಉಮೇದು ಪಡುವದಾದರೆ, ಅಷ್ಟು ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಾಕಷ್ಟು ಶಾಲೆಗಳು, ಅಧ್ಯಾಪಕರು ಮತ್ತು ಉಪಕರಣಗಳು ಎಲ್ಲಿ ಇವೆ? ಈ ಸಂದರ್ಭದಲ್ಲಿ ಇನ್ನೊಂದು ಸಂಗತಿ ವಿಚಾರ ಮಾಡತಕ್ಕದ್ದು ಉಂಟು. ಇತ್ತಲಾಗಿ ವಿಲಾಯತಿಯಲ್ಲಿ ನಡೆದ ಮಹಾಯುದ್ಧಕಾಲದಲ್ಲ ಪಾಶ್ಚಾತ್ಯವೈದ್ಯರೀತ್ಯಾ ಅತ್ಯವಶ್ಯಕ್ತವಾದ ಔಷಧಾದಿಸಾಮಗ್ರಿಗಳು ಪರದೇಶಗಳಿಂದ ಒರುವದು ನಿಂತುಹೋಗಿ ಇಲ್ಲಿಯ ಡಾಕ್ಟರರ ಚಿಕಿತ್ಸಾಕ್ರಮಕ್ಕೆ ಉಂಟಾದ ಕಷ್ಟಗಳು ಬಹು ಮಂದಿಗಳಿಗೆ ಗೊತ್ತಾಗಿರ

ಬಹುದು ಈ ಭರತಖಂಡದ ಮೇಲೆ ಯಾರಾದರೂ ಪರರಾಜರು ಯುದ್ಧಾರಂಭ ಮಾಡಿದರೆ, ಅಥವಾ ಬೇರೆ ಯಾವ ಸಂಗತಿಗಳಿಂದಾದರೂ ಪರದೇಶಗಳಿಂದ ಸಮುದ್ರಮಾರ್ಗವಾಗಿ ಬರುವ ವ್ಯಾಪಾರವು ನಿಂತುಹೋದರೆ, ಈ ಪಾಶ್ಚಾತ್ಯವೈದ್ಯರ ವೃತ್ತಿಯು ಪ್ರಾಯಶಃ ನಿಂತುಹೋಗ ತಕ್ಕದ್ದೇ ಪಾಶ್ಚಾತ್ಯ ಔಷಧಗಳ ಅಂಗಡಿಯಿಲ್ಲದ ಹಳ್ಳಿಯಲ್ಲಿ ಒಬ್ಬ ರೋಗಿಗೆ ಪಾಶ್ಚಾತ್ಯ ವೈದ್ಯರು ಹತ್ತಿರವಿದ್ದರೂ ಏನು ಮಾಡಬಲ್ಲರು? ಇದಲ್ಲದೆ, ಸೂರ್ಯ ಚಂದ್ರ ವಾಯುಗಳ ಶಕ್ತಿಗಳು ಪ್ರಾಣಿ, ನೀರು, ಮಣ್ಣು ಮುಂತಾದ ಸಾರ್ವಭಾವಗಳ ಮೇಲೂ ಏಕರೀತ್ಯಾ ವ್ಯಾಪಿಸಿರುವದರಿಂದ, ಆಯಾ ದೇಶದ ಜನರಲ್ಲಿ ಉಂಟಾದ ರೋಗಗಳಿಗೆ ಆಯಾ ದೇಶದ ಔಷಧಗಳಿಂದಲೇ ಹೆಚ್ಚು ಗುಣ ಸಿಕ್ಕುತ್ತದೆಂಬ ಆಯುರ್ವೇದತತ್ವವು ಅನೇಕ ಕಾರಣಗಳಿಂದ ನಿಜವಾಗಿ ಕಾಣುತ್ತದೆ. ಪುನಃ ವಿಚಾರಣೀಯವಾದ ಒಂದು ಸಂಗತಿ ಯಾವದೆಂದರೆ ಪಾಶ್ಚಾತ್ಯವೈದ್ಯದ ಮೂಲವು ವಿಲಾಯತಿಯಲ್ಲಿರುತ್ತದೆ ಅಲ್ಲಿಯ ಜನಾಂಗಗಳಿಗೂ, ಭಾರತೀಯರಿಗೂ ಆಹಾರವಿಹಾರ, ಉಡಿಗೆತೊಡಿಗೆ ಮುಂತಾದ ಸರ್ವಭಾಗಗಳಲ್ಲಿಯೂ ಬಹಳ ಭೇದಗಳಿವೆ. ಅವರಿಗೂ ನಮಗೂ ಸಂಪರ್ಕವಾಗ ತೊಡಗಿ ಎಷ್ಟೋ ಶತಮಾನಗಳು ಗತಿಸಿ ಹೋದರೂ, ಅವರ ಕ್ರಮಗಳು ನಮಗಾಗಲಿ, ನಮ್ಮ ಕ್ರಮಗಳು ಅವರಿಗಾಗಲಿ, ಸರಿಯಾಗಿ ತಿಳಿದ ಹಾಗೆ ಕಾಣುವದಿಲ್ಲ ಆದ್ದರಿಂದ ರೋಗಿಗಳಿಗೆ ಅವರ ಸ್ಥಿತಿಗೂ, ರೋಗಕ್ಕೂ ತಕ್ಕವಾದ ಪಥ್ಯ, ಆಚಾರ, ಮುಂತಾದವುಗಳನ್ನು ವಿಧಿಸುವದಕ್ಕೆ ಪಾಶ್ಚಾತ್ಯವೈದ್ಯರಿಗೆ ಅನುಕೂಲತೆ ಇಲ್ಲ. ಇದರಿಂದ ರೋಗಗಳು ಬೇಗನೇ ವಾಸಿಯಾಗುವದಕ್ಕೆ ಅಡ್ಡಿಯಾಗುತ್ತದೆ. ಊರಜನರು ಸಾಮಾನ್ಯವಾಗಿ ಆಸ್ಪತ್ರಿ ಔಷಧಕ್ಕೆ ಪಥ್ಯವಿಲ್ಲ ಎಂತ ನೆನಸುವದು ತಪ್ಪು ಇವೇ ಮೊದಲಾದ ಕಾರಣಗಳಿಂದ ಈ ಭಾರತೀಯರ ಅನಾರೋಗ್ಯಕ್ಕೆ ಪಾಶ್ಚಾತ್ಯವೈದ್ಯದಿಂದಲೇ ನಿವೃತ್ತಿ ಸಿಕ್ಕುವದು ಅಸಾಧ್ಯವೆನ್ನಬೇಕು.

14. ಪಾಶ್ಚಾತ್ಯವೈದ್ಯವು ಶಾಸ್ತ್ರೀಯವಾದದ್ದಿಂತಲೂ, ಆಯುರ್ವೇದವೈದ್ಯವು ಶಾಸ್ತ್ರೀಯವಲ್ಲವೆಂತಲೂ, ಪಾಶ್ಚಾತ್ಯಡಾಕ್ಟರರೊಳಗೆ ಬಹು ಪಕ್ಷದವರ ಮತವುಂಟು ಇದು ಆಶ್ಚರ್ಯವಲ್ಲ ಅವರಿಗೆ ಅನ್ಯದೇಶೀಯವಾದ ಮತ್ತು ಸುಲಭ ಬೋಧ್ಯವಲ್ಲದ ಭಾಷೆಗಳಲ್ಲಿ ಪ್ರಕಾಶಿತವಾದ ಮತ್ತು ಅನ್ಯದೇಶೀಯ ಆಚಾರವಿಚಾರಾದ್ಯವಸ್ಥೆಗಳನ್ನನುಸರಿಸಿರುವ ಆಯುರ್ವೇದದ ಜ್ಞಾನವನ್ನು ಸಂಪಾದಿಸುವದು ದುಃಸಾಧ್ಯ, ಅಸಾಧ್ಯವೆನ್ನಲೂ ಬಹುದು. ಆದಾಗ್ಯೂ ಅವರೊಳಗೆ ಕೆಲವರು ಶ್ರಮಪಟ್ಟು ಆಯುರ್ವೇದ ಗ್ರಂಥಗಳ ಸಾರವನ್ನು ತಿಳಿದು, ಸಂತೋಷಪಟ್ಟು ಸ್ತುತಿಸುವವರೂ ಇರುತ್ತಾರೆ ಈ ಭಾರತೀಯರಲ್ಲಿ ಕೆಲಪರು ತಮ್ಮ ಕರ್ತವ್ಯವಾದ ಆಯುರ್ವೇದಜ್ಞಾನಸಂಪಾದನದಲ್ಲಿ ಉದಾಸೀನರಾಗಿಯೂ, ಪಾಶ್ಚಾತ್ಯವೈದ್ಯದ ಮರ್ಮಗಳಿಗೆ ಬಹಿಷ್ಕೃತರಾಗಿಯೂ ಇದ್ದು, ಪಾಶ್ಚಾತ್ಯಪಂಡಿತರುಗಳ ಬಹುಮತದಲ್ಲಿ ತಮಗಿರುವ ವಿಶ್ವಾಸವನ್ನೇ ಆಧರಿಸಿಕೊಂಡು, ಆಯುರ್ವೇದವು ಅಶಾಸ್ತ್ರೀಯ ಎಂದು ಬಹಿರಂಗವಾಗಿ ಹೇಳ ತೊಡಗಿದ್ದಾರೆ. ಆದದರಿಂದ ಆಯುರ್ವೇದಕ್ಕೆ ನಮ್ಮ ಸರಕಾರದ ಆಶ್ರಯವನ್ನು ಕೇಳುವದಕ್ಕೆನೇ ಸಂಕೋಚಪಡಬೇಕಾಗಿದೆ. ಇಂಥಾ ಅವಸ್ಥೆಯಲ್ಲಿ ಆ ಪ್ರತಿಜ್ಞೆಗಳನ್ನು ವಿಮರ್ಶಿಸುವದು ಅವಶ್ಯಕ. ಪ್ರಥಮತಃ ಪಾಶ್ಚಾತ್ಯವೈದ್ಯದ ಸ್ಥಿತಿಯನ್ನು ಆಲೋಚಿಸುವ. ಆ ವೈದ್ಯದಲ್ಲಿ ವ್ಯವಸ್ಥೆಹೊಂದದ ಪ್ರಮೇಯಗಳೇ ಬಹಳವಾಗಿವೆ ದಿನೇದಿನೇ ಹೊಸ ನಿರ್ಣಯಗಳ ಉತ್ಪಾದನ ಮತ್ತು ಹಳೇ ನಿರ್ಣಯಗಳ ಪರಿವರ್ತನ

ಪ್ರಕಟವಾಗುತ್ತಾ ಇವೆ, ಮತ್ತು ಏಕಕಾಲದಲ್ಲಿ ಅವರೊಳಗೆನೇ ಪಕ್ಷಾಂತರಗಳು ಅನೇಕ ಅಂಶಗಳಲ್ಲಿ ಇದ್ದೇ ಇವೆ ಇದೆಲ್ಲಾ ಶಾಸ್ತ್ರವರ್ಧನದ ಸಹಜವಾದ ಲಕ್ಷಣವಾದ್ದರಿಂದ, ಸ್ತುತ್ಯವಲ್ಲದೆ ನಿಂದ್ಯವಲ್ಲ ಎಂತ ಕೆಲವರು ಹೇಳಿಕೊಳ್ಳುವದೂ ಉಂಟು. ಆದರೆ ಆ ಸಂಸ್ಕಾರಾವರ್ತನಗಳ ಮಧ್ಯದಲ್ಲಿ ಆಯಾಕಾಲದ ಅಶುದ್ಧ ಅಥವಾ ಮಿಥ್ಯಾ ನಿರ್ಣಯಗಳ ಪ್ರಕಾರ ಚಿಕಿತ್ಸೆ ನಡಿಸಿದ್ದರಿಂದ ಎಷ್ಟು ಜನರಿಗೆ ಎಷ್ಟು ಕೆಡಕು ಉಂಟಾಗಿದೆ? ಹಾಗೆ ಕೆಡಕು ಹೊಂದಿದ ರೋಗಿಗಳ ದುರ್ಭಾಗ್ಯಕ್ಕೆ ಈ ಶಾಸ್ತ್ರೀಯವೆನ್ನುವ ಪಾಂಡಿತ್ಯವೇ ಕಾರಣವಾಗಿರಲಿಲ್ಲವೇ? ಈ ಅಂಶವನ್ನು ನಮ್ಮ ಅನುಭವಸಿದ್ಧವಾದ ಕೆಲವು ದೃಷ್ಟಾಂತಗಳಿಂದ ನಮ್ಮ ವಾಚಕರಿಗೆ ವಿಶದಪಡಿಸಬಹುದು. ನಮ್ಮ ಸ್ನೇಹಿತರೊಳಗೆ ಒಬ್ಬರಲ್ಲಿ ಕುತ್ತಿಗೆಯ ಹಿಂಬದಿಯಲ್ಲಿ ನರಗಳ ದೋಷದಿಂದ ನೋವು ಉಂಟಾಗಿ, ಕುತ್ತಿಗೆಯನ್ನು ತಿರುಗಿಸಲಾರದ ಹಾಗಿನ ಸ್ಥಿತಿ ಒದಗಿದ್ದಕ್ಕ ಡಾಕ್ಟರರಿಂದ ಚಿಕಿತ್ಸೆಮಾಡಿಸುತ್ತಿರುವ ಕಾಲದಲ್ಲಿ, ಅವರ ಮೂತ್ರದಲ್ಲಿ ಆಲ್ಬ್ಯುಮೆನ್' ಎಂಬ ವಸ್ತು ಉಂಟೆಂತ ಕಂಡುಹಿಡಿದರು. ಅದು ಕೆಟ್ಟ ವ್ಯಾಧಿಯೆಂಬದರಿಂದ ಅದಕ್ಕೆ, ಕುತ್ತಿಗೆಯ ದೋಷವು ಬೇಗದಲ್ಲಿ ಪರಿಹಾರವಾದಾಗ್ಯೂ, ಬಹು ಶ್ರಮಪಟ್ಟು ಚಿಕಿತ್ಸೆಮಾಡಿದರು ಈ ಚಿಕಿತ್ಸಾಕ್ರಮದಲ್ಲಿ ರೋಗಿಯ ಮೈಯದುರದಿರುವದು ಮುಖ್ಯವಾದ್ದರಿಂದ, ಮಲಮೂತ್ರವಿಸರ್ಜನವನ್ನು ಸಹ ಸಾಧ್ಯವಿದ್ದಮಟ್ಟಿಗ ಮಲಗಿದಲ್ಲಿಯೇ ಮಾಡುವಂತೆ ಅನುಕೂಲಿಸಿತ್ತು. ಈ 'ಆಲ್ಬ್ಯುಮೆನ್' ರಕ್ತದಲ್ಲಿರುವ ಮುಖ್ಯ ವಸ್ತುವಾದ್ದರಿಂದ, ಅದು ನಷ್ಟವಾಗಿ ಹೋಗಿ ರೋಗಿಗೆ ಅಪಾಯ ಬಾರದ ಹಾಗೆ, ರೋಗಿಗ ಸೆಕ ಕೊಟ್ಟು ಬೆವರಿಸುವದು ಚಿಕಿತ್ಸೆಯ ಇನ್ನೊಂದು ಮುಖ್ಯ ಅಂಗವಾಗಿತ್ತು ಈ ಕ್ರಮದಲ್ಲಿ ಮಾಡೋಣಾದ ಸುಮಾರು ಮೂರು ತಿಂಗಳ ಚಿಕಿತ್ಸೆಯಲ್ಲಿ ರೋಗಿಯ ಮೂತ್ರದಲ್ಲಿ ಆಲ್ಬ್ಯುಮನ್ ಅರ್ಧಾಂಶಕ್ಕಿಂತಲೂ ಹಚ್ಚು ಆಗುವಷ್ಟು ರೋಗವು ವೃದ್ಧಿಯಾದ್ದಲ್ಲದೆ, ಮಲಮೂತ್ರಗಳೊಂದಿಗೆ ರಕ್ತ ಹೋಗುವದು ಮತ್ತು ಚಳಿಜ್ವರ ಉಂಟಾದ್ದನ್ನು ಕಂಡು, ಆ ಚಿಕಿತ್ಸೆಯನ್ನು ನಿಲ್ಲಿಸಿ, ಆಯುರ್ವೇದಾನುಸಾರವಾಗಿ ನಾವು ಚಿಕಿತ್ಸೆ ಮಾಡತೊಡಗಿದೆವು. ರಕ್ತಸ್ರಾವ ಮತ್ತು ಚಳಿಜ್ವರ ಒಂದೇ ದಿನದಲ್ಲಿ ನಿಂತದ್ದಲ್ಲದೆ, ಮೂರನೇ ದಿನ ಮೂತ್ರವನ್ನು ಪರೀಕ್ಷಿಸುವಾಗ್ಗೆ, ಅದರಲ್ಲಿ 'ಆಲ್ಬ್ಯುಮೆನ್' ಬಹಳ ಕಡಿಮೆಯಾಗಿದೆ ಎಂತಲೂ, ಐದನೇ ದಿನ ಮೂತ್ರದಲ್ಲಿ 'ಆಲ್ಬ್ಯುಮೆನಿನ' ಲಾಂಛನ ಮಾತ್ರ ಉಂಟೆಂತಲೂ ಡಾಕ್ಟರರೇ ಹೇಳಿದರು. ಸರಕಾರ ಉದ್ಯೋಗಸ್ಥರಾಗಿದ್ದ ಆ ರೋಗಿಯ ರಜೆಯು ಅಂತ್ಯವಾದ್ದರಿಂದ, ಆರನೇ ದಿನದಲ್ಲಿ ಅವರು ತಮ್ಮ ಉದ್ಯೋಗಕ್ಕೆ ಪುನಃ ಸೇರುವ ಅಗತ್ಯವಾಯಿತು. ಕೆಲವು ದಿನಗಳನಂತರ ಮೊದಲು ಚಿಕಿತ್ಸೆಯನ್ನು ನಡಿಸುತ್ತಿದ್ದ ಇಬ್ಬರು ಡಾಕ್ಟರರಲ್ಲಿ ಹೆಚ್ಚಿನ ಅನುಭವ ಮತ್ತು ಕಲಿಯುವಿಕೆಯುಳ್ಳ ಒಬ್ಬರು ಡಾಕ್ಟರರು ರೋಗಿಯ ಮೂತ್ರವನ್ನು ಪರೀಕ್ಷಿಸಿ, ಅದರಲ್ಲಿ ಕಿಂಚಿತ್ ಆಲ್ಬ್ಯುಮನ್ ಇದ್ದದ್ದನ್ನು ಕಂಡು, ರೋಗಿಗೆ ನಮ್ಮ ಮುಂದೆಯೇ ಹೇಳಿದ್ದರ ತಾತ್ಪರ್ಯವೇನಂದರೆ 'ನೀವು ನಿಮ್ಮ ಜೀವದೊಂದಿಗೆ ಆಟ ಆಡುತ್ತಿದ್ದೀರಿ. ಇದು ಕುಟುಂಬವಂತರಾದ ನಿಮಗೆ ನೀತಿಯಲ್ಲ ಈ ನಿಮ್ಮ ರೋಗಕ್ಕೆ ಔಷಧವಿಲ್ಲ. ಯಾವಾಗಲಾದರೊಂದು ದಿನ ನಿಮ್ಮ ಶರೀರದಲ್ಲಿ ನೀರು ತುಂಬಿ ಮಾರಣೆ ದಿನ ಸಾಯುವಿರಿ. ನೀವು ಮಾಡತಕ್ಕದ್ದೇನಂದರೆ. ದೀರ್ಘಕಾಲದ ರಜೆಯನ್ನು ಪಡೆದು ಹವೆಯಲ್ಲಿ ತ್ಯಾವ ಕಡಿಮೆಯಾದ ಮತ್ತು ಉಷ್ಣವಾದ (ಯಾವದೋ ಎರಡು ಪಟ್ಟಣಗಳ ಹೆಸರು ಹೇಳಿ) ಇಂಥಾ ಪಟ್ಟಣಕ್ಕೆ ಹೋಗಿ ವಾಸಿಸತಕ್ಕದ್ದು. ಹಾಗೆ ಮಾಡದೆ,

ನೀವು ನೀಲಗಿರಿಗ ಹೋದ ಪಕ್ಷದಲ್ಲಿ ನೀವು ಸಾಯುವದು ನಿಶ್ಚಯ'. ಇದನ್ನು ಕೇಳಿ ರೋಗಿಯು ಬೆರಗಾಗಿ ಸುಮ್ಮನಿದ್ದರು ಡಾಕ್ಟರರ ಮನೆ ಬಿಟ್ಟು ಹೊರಗೆ ಬಂದ ಕೂಡಲೇ, ರೋಗಿಗೆ ಧೈರ್ಯಕೊಡುವ ಹಾಗೆ ನಾವು ಹೇಳಿದ ತಾತ್ಪರ್ಯವೇನೆಂದರೆ 'ನೀವು ಧೈರ್ಯ ಕೆಟ್ಟ ಹಾಗೆ ಕಾಣುತ್ತದೆ ಡಾಕ್ಟರರ ಮಾತುಗಳನ್ನು ನೀವು ಸ್ವಲ್ಪ ವಿಮರ್ಶಿಸಿರಿ. ಯಾವಾಗ ಲಾದರೊಂದು ದಿನ ಶರೀರದಲ್ಲಿ ನೀರು ತುಂಬಿ ಮಾರನೆ ದಿನ ಸಾಯುತ್ತೀರಂಬದು ನಿಜ ವಾದರೆ, ನಿಮಗೆ ಮರಣಶಾಸನವನ್ನು ಬರದಿಡಲಿಕ್ಕೆ ಸಮಯ ಸಿಕ್ಕಬಹುದೆಂತ ಊಹಿಸ ಬಹುದು' ಅರ್ಧಸಂಬಳದಿಂದ ಈ ಊರಲ್ಲಿ(ಮದ್ರಾಸಿನಲ್ಲಿ)ಯೇ ನಿಮಗೆ ನಿಮ್ಮ ಕುಟುಂಬದ ಪೋಷಣವನ್ನು ನಡಿಸುವದು ಕಷ್ಟವೆನ್ನುತ್ತಿದ್ದೀರಿ ಹಾಗಾದ ಮೇಲೆ ಅರ್ಧಸಂಬಳದ ರಜೆ ಪಡೆದು ದೂರದೇಶಕ್ಕೆ ಹೋಗಿ ನಿಲ್ಲುವದೆಂಬದು ಅಸಾಧ್ಯ. ಔಷಧವಿಲ್ಲ, ಬಿದ್ದರಿಂದ ನೀಲಗಿರಿಗ ಹೋಗುವ ವಿಷಯ ಮಾತ್ರ ಆಲೋಚಿಸತಕ್ಕ ಅಂಶ. ನಮ್ಮ ಮಾತಿನ ವಿಶ್ವಾಸದ ಮೇಲೆ ನೀವು ನೀಲಗಿರಿಗೆ ಯಾವಾಗಲಾದಂತ ಹೋಗಬೇಕು ನಿಮ್ಮ ದುರ್ಭಾಗ್ಯದಿಂದ ರೋಗವು ವೃದ್ಧಿಯಾಗುವದು ಕಂಡ ಪಕ್ಷದಲ್ಲಿ, ನೀವು ಮೆಟಿಕಲ್ ರಜೆ ಪಡೆದು ನಮ್ಮಲ್ಲಿಗೆ ಬಂದರೆ, ನಾವು ನಿಮ್ಮನ್ನು ನಮ್ಮ ಮನೆಯಲ್ಲಿರಿಸಿಕೊಂಡು ನಿಮ್ಮ ರೋಗವನ್ನು ನಿವೃತ್ತಿ ಗೊಳಿಸಿ ಹಿಂದೆ ಕಳುಹಿಸುತ್ತೇವೆ' ಎಂತ. ಈ ಮಾತಿನ ಮೇಲೆ ಅವರು ನೀಲಗಿರಿಗೆ ಹೋದರು. ಅಲ್ಲ ಸೇವಿಸುವದಕ್ಕೆ ಗುಗ್ಗುಳವಟಕವನ್ನು ಮಾಡಿ ಕಳುಹಿಸಿಕೊಟ್ಟೆವು. ಅದರಿಂದ ಆ ಊರಲ್ಲಿರುವಾಗಲೇ ಅವರ ರೋಗವು ನಿಃಶೇಷವಾದದ್ದಲ್ಲದೆ, ಅನಂತರ ಅವರು ಸುಮಾರು ಹತ್ತು ವರ್ಷ ಬದುಕಿದ್ದಾಗ್ಯೂ, ಆ ಹತ್ತು ವರ್ಷಗಳಲ್ಲಿಯೂ ಅವರ ಮೂತ್ರದಲ್ಲಿ ಆಲ್ಬುಮೆನ್ ಕಾಣಲಿಲ್ಲ. ಅವರು ಹೃದಯರೋಗದಿಂದ ಅಕಸ್ಮಾತ್ತಾಗಿ ಇಂದಿನಿಂದ ಸುಮಾರು ಒಂಭತ್ತು ವರ್ಷಕ್ಕೆ ಹಿಂದೆ ಮೃತವಾದ್ದಾಗಿರುತ್ತದೆ. ಮೇಲೆ ಪ್ರಸ್ತಾಪಿಸಿದ ಇಬ್ಬರು ಡಾಕ್ಟರರೂ ಭಾರತೀಯರಾದರೂ, ಪಾಶ್ಚಾತ್ಯವೈದ್ಯದಲ್ಲಿ ನಿಪುಣರೆಂತ ಕೀರ್ತಿಗೊಂಡು, ಈಗಲೂ ಪ್ರಸಿದ್ಧರಾಗಿದ್ದಾರೆ ಅಷ್ಟಲ್ಲದೆ, ಅವರಿಬ್ಬರಿಗೂ ಆ ರೋಗಿಯು ಆಪ್ತರಾಗಿದ್ದರು. ಆದ್ದರಿಂದ, ಪಾಶ್ಚಾತ್ಯವೈದ್ಯರೀತ್ಯಾ ಸಾಧ್ಯವಿರುವ ಪ್ರಯತ್ನಗಳನ್ನೆಲ್ಲಾ ಅವರಿಬ್ಬರೂ ಮನಃಪೂರ್ವಕವಾಗಿ ಮಾಡಿದ್ದಾರೆಂಬದರಲ್ಲಿ ಸಂಶಯವಿಲ್ಲ ಈ ಕಾರಣಗಳಿಂದ ಚಿಕಿತ್ಸಾನ್ಯೂನತೆಯು ಅವರನು ಸರಿಸಿದ ಶಾಸ್ತ್ರದ್ದೇ ಎಂತ ಊಹಿಸಬೇಕಾಗುತ್ತದೆ. ಇನ್ನೊಂದು ದೃಷ್ಟಾಂತವನ್ನು ಕೊಡ ಬಹುದು. ಮೇಲೆ ಪ್ರಸ್ತಾಪಿಸಿದ ರೋಗಿಯ ಪತ್ನಿಯು ನೀಲಗಿರಿಯಲ್ಲಿ (ಇಂದಿಗೆ ಸುಮಾರು ಇಪ್ಪತ್ತನಾಲ್ಕು ವರ್ಷಗಳ ಹಿಂದೆ) ಋತುಮತಿಯಾಗುವ ಕಾಲದಲ್ಲಿ, ಅವಳಿಗೆ ಚಿತ್ತಭ್ರಮವುಂಟಾಯಿತು ಅದು ಗರ್ಭಕೋಶದ ಅಕ್ರಮ ಅಥವಾ 'ಹಿಸ್ಟೀರಿಯಾ' ಎಂತ ನಿರ್ಣಯಿಸಿ, ಅಲ್ಲಿಯ ಡಾಕ್ಟರರು, ಅನಂತರ ಮದ್ರಾಸಿನ ಡಾಕ್ಟರರು, ಅದಕ್ಕೆ ಸುಮಾರು 1½ ವರ್ಷಕಾಲ ಚಿಕಿತ್ಸೆಮಾಡಿದಾಗ್ಯೂ, ರೋಗದ ಪ್ರಾಬಲ್ಯವು ಎನೇದಿನೇ ವೃದ್ಧಿಯಾಗುತ್ತಲೇ ಒಂದದ್ದನ್ನು ನೋಡಿ, ಕೊನೆಯಲ್ಲಿ ಆ ರೋಗವು ಉನ್ಮಾದ (ಹುಚ್ಚು) ಎಂತ ನಿರ್ಣಯಿಸಿ, ರೋಗಿಯನ್ನು ಹುಚ್ಚರ ಆಸ್ಪತ್ರಿಗೆ ಕಳುಹಿಸುವದು ಉತ್ತಮ ಎಂತ ಉಪದೇಶಮಾಡಿದ ಮೇಲೆ, ಆಯು ರ್ವೇದಾನುಸಾರವಾಗಿ ನಾವು ಚಿಕಿತ್ಸೆಯನ್ನಾರಂಭಿಸಿದ ಒಂದು ಪಕ್ಷದೊಳಗೆ ಹುಚ್ಚು ಇಳಿಯತೊಡಗಿತು. ಕ್ರಮೇಣ ಆ ರೋಗವು ವಾಸಿಯಾಗಿ ಆ ಸ್ತ್ರೀಯು ಕುಟುಂಬವಂತೆ ಯಾಗಿ ಪ್ರಾಯಸ್ಥನಾದ ಮಗನೊಂದಿಗೆ ಈಗಲೂ ಸೌಖ್ಯದಲ್ಲಿರುತ್ತಾರೆ.

Note.—The following is an extract from my retrospect of the year 1898 written in Feb '99 "His wife, on attaining the womanhood, as we understand the term, began to exhibit at intervals symptoms of insanity, which doctors at first took to be those of hysteria. After treating her for over a year and a half, the Madras doctors pronounced her case to be insanity and advised my friend to send her to the Lunatic Asylum. By this time the disease had assumed a most fearful form A friend has told me that she once caught hold of the beard of a Hakim, who pretended to be a *Mantravadi* and did not allow him to escape until she had plucked off a handful of the hair that adorned his chin She caused vexation not only to my friend, but to all his neighbours as well. She had to be chained and locked up in a room. Nevertheless, a Hindu as he was, the thought of sending his wife to the Lunatic Asylum was so repugnant to him that he wired to me to send the medicine of which I had written in one of my letters to him I prepared the thing and sent it accordingly by post in October 1897 with detailed instructions as to its administering and the principles on which the native treatment of the complaint is based Within a fortnight after the commencement of my treatment the patient showed improvement and by the end of December of that year she had rallied so far that she was no more a burden to anydody She ate well, slept well,—too much as my friend reported—took care to cover her person properly and could be left to herself For some time it was doubted whether the improvement was due to the medicine at all,—for, there used to be, even before, some abatement of the symptoms for a few weeks, irrespective of the treatment adopted But now there can be no doubt The woman has kept up the improvement for over a year It is reported, however, that she is still weak and sickly and does not get her menses regularly and that she sometimes smiles or grieves without apparent cause But she is able to cook food for the family occasionally and a friend lately told me that in general health too she had made vast improvement since he saw her in January 1898."

ಇನ್ನೊಬ್ಬ ಹೆಂಗಸಿಗೆ ಎಷಮಜ್ವರವು ಚಾತುರ್ಥಿಯಾಗಿ ನಿಂತು, ಸುಮಾರು ಎಂಟು ತಿಂಗಳ ಕಾಲದಲ್ಲಿ ಎಷ್ಟೋ ತೊಲೆ ಕ್ವಿನೀನನ್ನು ಸೇವಿಸಿದಾಗ್ಗೂ ವಾಸಿಯಾಗದೆ, ಪಾಂಡು ವ್ಯಾಟಾಗಿ, ಮೈಯಲ್ಲಿ ನೀರು ಕಾಣಲಿಕ್ಕಾರಂಭವಾದ ಮೇಲೆ ನಮ್ಮ ಬಳಿಗೆ ಬರಲಾಗಿ, ಒಂದು ಕಷಾಯವನ್ನು ಕಲ್ಪಿಸಿ, ಆರಂಭದ ದಿನವೇ ಜ್ವರ ಕಾಣುವ ದಿನವಾದ್ದರಿಂದ, ಆ ಕಷಾಯಕ್ಕೆ ಎರಡೂವರೆ ಗ್ರೈನ್ ಕ್ವಿನೀನನ್ನು ಒಂದು ಸರ್ತಿ ಮಾತ್ರ ಸೇರಿಸಿ ಕುಡಿಯಕೊಟ್ಟಲ್ಲಿ, ಜ್ವರ ಕಾಣದೆ ಹೋಯಿತು. ಎರಡನೇ ಜ್ವರಾವರ್ತದ ದಿನದಲ್ಲಿಯೂ, ಅಷ್ಟೇ ಕ್ವಿನೀನನ್ನು ಕೊಟ್ಟಿತ್ತು. ಇತರ ವೇಳೆಗಳಲ್ಲಿ ಅದೇ ಕಷಾಯದೊಂದಿಗೆ ಆಯುರ್ವೇದರೀತ್ಯಾ ತಯಾರಿಸಿದ ಮಾತ್ರೆಗಳನ್ನೇ ಕೊಟ್ಟದ್ದು. ಆ ರೋಗಿಗೆ ಜ್ವರ ಕೂಡಲೇ ವಾಸಿಯಾದದ್ದಲ್ಲದೆ, ಪಾಂಡು ಮುಂತಾದ ಉಪದ್ರವಗಳು ಕೆಲವು ವಾರಗಳಲ್ಲಿಯೇ ಪರಿಹಾರವಾಗಿ, ಸೌಖ್ಯವಾಯಿತು

ಇನ್ನೊಬ್ಬ ರೋಗಿಗೆ ಆಗಾಗ್ಗೆ ಮೂತ್ರ ಸಿಕ್ಕಿಕೊಂಡು, ಪೇಚಾಟವಾಗುತ್ತಿತ್ತು. ಅವರು ಉಪದ್ರವ ಉಂಟಾದ ಕೂಡಲೇ, ಆಸ್ಪತ್ರಿಗೆ ಹೋಗಿ, ಮೂತ್ರದ್ವಾರದೊಳಗೆ ನಳಿಗೆಯನ್ನು ಹೊಗಿಸಿ, ಮೂತ್ರವನ್ನು ಹೊರಪಡಿಸಿಕೊಳ್ಳುತ್ತಾ ಇದ್ದರು. ಅವರು, ತನಗೆ ಅಶ್ಮರೀ ರೋಗ (ಕಲ್ಲಿನ ವ್ಯಾಧಿ) ಇರಬಹುದೋ ಎಂತ ಸಂದೇಹಪಟ್ಟು ಎರಡು ಆಸ್ಪತ್ರಿಗಳಲ್ಲಿ ವಿಚಾರಿಸಿದಾಗ್ಗೂ, ಅವರಿಗೆ ಆ ರೋಗವಿಲ್ಲ ಅಂದರಂತೆ. ಸುಮಾರು ಎರಡು ವರ್ಷ ಈ ರೀತಿ ಪೇಚಾಟ ಪಟ್ಟನಂತರ, ಅವರು ನಮ್ಮ ಹತ್ತರ ಬಂದು ಕೇಳಿದ್ದಲ್ಲಿ, ಅವರ ರೋಗ ಅಶ್ಮರಿಯೇ ಆಗಿರಬೇಕೆಂತ ಹೇಳಿ, ಆಯುರ್ವೇದಾನುಸಾರವಾಗಿ ಚಿಕಿತ್ಸೆಯನ್ನಾರಂಭಿಸಿದ 4ನಯೋ ನೆಯೋ ದಿನದಲ್ಲಿ ಒಂದು ಭದ್ರಮುಷ್ಟಿಯ ಹಾಗಿನ ಕಲ್ಲು ಮೂತ್ರದ್ವಾರದಿಂದ ಹೊರಗೆ ಬಂತು ಅದಾಗಿ ಈಗ ಸುಮಾರು ಏಳು ವರ್ಷಗಳು ಕಳೆದವು, ತನ್ಮಧ್ಯೆ ಆ ಸಂಕಷ್ಟ ಪುನಃ ಅವರಿಗೆ ಉಂಟಾಗಲಿಲ್ಲ ಇದೇ ರೀತಿ ಪಾಶ್ಚಾತ್ಯಚಿಕಿತ್ಸೆ ನಿಷ್ಫಲವಾದ್ದನ್ನು ಕಂಡ ಮೇಲೆ, ಆಯುರ್ವೇದಾನುಸಾರವಾದ ಚಿಕಿತ್ಸೆಯನ್ನು ಮಾಡಿದರಿಂದ ಸೌಖ್ಯಪಡದ ರೋಗಿಗಳ ಇನ್ನೂ ಅನೇಕ ದೃಷ್ಟಾಂತಗಳನ್ನು ಕೊಡಬಹುದು ಆದರೆ ನಮ್ಮ ವಾಚಕರೊಳಗೆ ಅನೇಕರಿಗೆ ಅಂಥಾ ದೃಷ್ಟಾಂತಗಳು ಅವರವರ ಅನುಭವಸಿದ್ಧವಾಗಿಯೇ ನೆನಪಿಗೆ ಬರಬಹುದಾದ್ದರಿಂದ, ಈ ಪ್ರಮೇಯದಲ್ಲಿ ಇನ್ನು ಹೆಚ್ಚಿನ ವಿಸ್ತಾರವು ಅವಶ್ಯಕವಲ್ಲ. ಸುಮಾರು 25 ವರ್ಷಗಳ ಹಿಂದೆ ಈ ಭರತಖಂಡದಲ್ಲಿ ಪ್ಲೇಗೆಂಬ ರೋಗವು ಆರಂಭವಾಗಿ ಬಹು ವರ್ಷಗಳ ಪರ್ಯಂತ ಈ ಪಾಶ್ಚಾತ್ಯವೈದ್ಯರ ಉಪದೇಶವನ್ನನುಸರಿಸಿ, ಸರಕಾರದವರು ವಿಧಿಸಿದ ನಿವಾರಣೋಪಾಯ ಕ್ರಮಗಳ ದೆಸೆಯಿಂದ ಭಾರತೀಯರು ನಿರರ್ಥಕವಾಗಿ ಪಟ್ಟ ಬಹು ಬಧವಾದ ಸಂಕಷ್ಟಗಳು ಸರ್ವರಿಗೂ ವಿದಿತವಾಗಿವೆ ಆ ರೋಗವು ಅವರಿಗೆ ಹೊಸತಾಗಿರಲಿಲ್ಲ 1665ನೇ ಇಸವಿಯಲ್ಲಿ ಒಂದು ಲಂಡನ್‌ಪಟ್ಟಣದಲ್ಲಿಯೇ 70,000 ಜನರು ಆ ರೋಗದಿಂದ ಮೃತವಾಗಿದ್ದರು ಎಂತ ಅವರ ಪುಸ್ತಕಗಳೇ ಹೇಳುತ್ತವೆ. ಕೆಲವು ವರ್ಷಗಳ ಹಿಂದೆ ತಗುಲಿಗಳಿಂದ ಹೆಚ್ಚಾಗಿ ಹಬ್ಬಿಸಲ್ಪಡುವ ಒಂದು ಬಾತಿ ಜೀವಬೀಜದಿಂದ 'ಕಾಲಾಹಜಾರ' ಎಂಬ ಕೆಟ್ಟ ವ್ಯಾಧಿಯುಂಟಾಗುತ್ತದೆಂತ ಗದ್ದಲವನ್ನೆಬ್ಬಿಸಿ, ಜನರಿಗೆ ಭಯಪಡಿಸಿದರು. ಮತ್ತೊಂದು ಸಮಯದಲ್ಲಿ ತೊಳಸಿ ಸ್ವಚ್ಛಮಾಡಲ್ಪಟ್ಟ ಅಕ್ಕಿಯ ಅನ್ನವನ್ನುಂಡರೆ 'ಬೆರಿಬೆರಿ' ಎಂಬ ಮಹಾ ವ್ಯಾಧಿ ಉಂಟಾಗುತ್ತದೆಂತ ಹೆದರಿಸಿದರು. ಅನಂತರ ಆ ದೋಷವು ಮಿಲ್(ಯಂತ್ರ)ನಲ್ಲಿ ತಯಾರಿಸಲ್ಪಟ್ಟ ಅಕ್ಕಿಯಲ್ಲಿರುವದಲ್ಲದೆ, ಊರಲ್ಲಿ ಈ ಮೊದಲಿನಂತೆ ತಯಾರಿಸಲ್ಪಡುವ ಅಕ್ಕಿಯಲ್ಲೆಲ್ಲ ಎಂತ ನಿಶ್ಚಯವಾಗಿದೆಯಂತೆ. ಇತ್ತಲಾಗಿ ಒಂದೆರಡು ವರ್ಷಗಳಿಂದ ಭಾರತೀಯರೊಳಗೆ 88ರಿಂದ 98ರ ವರೆಗಿನ ಶತಾಂಶಗಳ ಜನರ ಹೊಟ್ಟೆಯಲ್ಲಿ ಜಾಡ್ಯತನ, ಪಾಂಡು, ಶೋಫೆ, ಕೆಮ್ಮು ಇತ್ಯಾದಿ ಅನೇಕ ರೋಗಗಳನ್ನುಂಟುಮಾಡತಕ್ಕ ಹೂಕ್ವರ್ಮ್' ಎಂಬ ಹುಳವು ಕಾಣುತ್ತದೆಂತ ಹೇಳತೊಡಗಿದ್ದಾರೆ ಈ ದಕ್ಷಿಣಕನ್ನಡ ಜಿಲ್ಲೆಯಲ್ಲಿ 100 ಮಂದಿಗಳೊಳಗೆ 98 ಮಂದಿಗಳಲ್ಲಿ ಆ ಹುಳ ಉಂಟಂತೆ. ಈ ಹುಳ ಎಲ್ಲಿಂದ, ಯಾವಾಗ್ಗೆ, ಮತ್ತು ಹ್ಯಾಗೆ ಬಂತೆಂತ ನಿಶ್ಚಯವಾಗಬೇಕಷ್ಟೆ. ಆದರೆ ಅದು ದೀರ್ಘಕಾಲದಿಂದ ಇದ್ದಿರಬೇಕೆಂಬ ಅಭಿಪ್ರಾಯವಿದೆ. ಈ ಮತಗಳೆಲ್ಲಾ ಎಷ್ಟರ ಮಟ್ಟಿಗೆ ನಿಜವಾಗಿರಬಹುದೆಂಬುದನ್ನು ಆಲೋಚಿಸುವ ಜನರು ಈ ಭರತಖಂಡವು ನಿರ್ಜನವಾಗುವದಕ್ಕೆ ಬದಲಾಗಿ ಅದರ ಜನಸಂಖ್ಯೆಯು ವರ್ಷದಿಂದ ವರ್ಷಕ್ಕೆ ಏರುತ್ತಲೇ ಒರುತ್ತದೆಂಬ ತಥ್ಯವನ್ನು ನೆನಪಿನಲ್ಲಿಟ್ಟರೆ ಸಾಕು.

15 ಹಿಂದಿನ ಪ್ರಕರಣದಲ್ಲಿ ಪ್ರಸ್ತಾಪಿಸಲ್ಪಟ್ಟ ಆಯುರ್ವೇದೀಯ ಚಿಕಿತ್ಸೆಯ ವಿಶೇಷ ಸಾಫಲ್ಯಕ್ಕೆ ಆ ಶಾಸ್ತ್ರದ ಪರಮಾರ್ಥವು ಕಾರಣವಲ್ಲ, ಕೆಲವು ದೇಶೀಯ ಔಷಧಗಳ ಗುಣ ಪ್ರಾಬಲ್ಯವೇ ಕಾರಣ ಎಂತ ಸಮಾಧಾನ ಹೇಳುವ ವಾಡಿಕೆ ಇತ್ತು ಈ ಮತಕ್ಕನುಸಾರವಾಗಿ, ಅಂಥಾ ವಿಶೇಷ ಫಲವತ್ತಾದ ಔಷಧಗಳನ್ನು ಹುಡುಕಿ ತೆಗೆಯುವ ಉದ್ದೇಶವನ್ನೇ ಮುಖ್ಯವಾಗಿಟ್ಟುಕೊಂಡು, ಸರಕಾರದಿಂದ ದೇಶೀಯ ಚಿಕಿತ್ಸಾಕ್ರಮಗಳ ಅನುಸಂಧಾನಕ್ಕಾಗಿ ನಿಯುಕ್ತರಾದ ಡಾಕ್ಟರ್ ಕೋಮನ್‌ರವರು ಎರಡು ವರ್ಷಕ್ಕೂ ಹೆಚ್ಚುಕಾಲ ಬಹು ಶ್ರಮ ಪಟ್ಟು, ಈ ಸಂಸ್ಥಾನದ ಎಲ್ಲಾ ಮುಖ್ಯ ಪಟ್ಟಣಗಳನ್ನು ಸಂಚರಿಸಿ, ಬಹು ಗ್ರಂಥಗಳನ್ನು ಶೋಧಿಸಿ, ಪ್ರಸಿದ್ಧರಾದ ದೇಶೀಯ ಪಂಡಿತರುಗಳನ್ನು ವಿಚಾರಿಸಿ, ಇದೇ ವರ್ಷದಲ್ಲಿ ಒರ ಕೊಂಡ ಎಚ್ಚರಿಸನಾಪತ್ರದಿಂದ ಪಾಶ್ಚಾತ್ಯವೈದ್ಯದಲ್ಲಿ ಉಪಯೋಗಿಸಲ್ಪಡುತ್ತಿರುವ ಔಷಧಗಳಕ್ಕಿಂತಲೂ ಅಧಿಕ ಫಲವಾಯಕವಾದ ಔಷಧ ಯಾವದಾದರೂ ದೇಶೀಯ ಪಂಡಿತರಿಂದ ಉಪಯೋಗಿಸಲ್ಪಡುತ್ತಿರುವದು ಕಾಣುವದಿಲ್ಲ ಎಂತ ನಿವೃತ್ತಿಯಾದದ್ದು ಕಾಣುತ್ತದೆ. ನಿಜವಾಗಿಯೂ ಪಾಶ್ಚಾತ್ಯರ ಔಷಧಗಳು ಪ್ರಾಯಶಃ ಸೂಕ್ಷ್ಮವಾಗಿ ಯಂತ್ರಗಳ ಸಹಾಯದಿಂದ ತಯಾರಿಸಲ್ಪಡುವಂಥವುಗಳಾದ್ದರಿಂದ, ಅವುಗಳಲ್ಲಿ ಹಚ್ಚು ಶಕ್ತಿ ಇರುತ್ತದೆಂಬದರಲ್ಲಿ ಸಂದೇಹ ವಿಲ್ಲ. ಅದಲ್ಲದೆ ಆಯುರ್ವೇದಚಿಕಿತ್ಸೆಯನ್ನು ನಡಿಸುತ್ತಿರುವ ಸಾಧಾರಣ ವೈದ್ಯರಿಗೆ ಆಯುರ್ವೇದದಲ್ಲಿರುವ ಪರಿಶ್ರಮಕ್ಕಿಂತಲೂ ಎಷ್ಟೋ ಹೆಚ್ಚು ನಿಪುಣತೆಯು ಅತ್ಯಂತ ಕೆಳಗಿನ ವರ್ಗದ ಪಾಶ್ಚಾತ್ಯ ವೈದ್ಯರಿಗ ಸಹ ಅವರ ಶಾಸ್ತ್ರದಲ್ಲಿರುತ್ತದೆಂಬದೂ ನಿಶ್ಚಯ ಶಾರೀರ ಶಾಸ್ತ್ರದ ಮಟ್ಟಿಗೆ ಸಾಮಾನ್ಯ ದೇಶೀಯ ವೈದ್ಯರ ಜ್ಞಾನವು ಶೂನ್ಯ ಎನ್ನಬೇಕು ಆದ್ದರಿಂದ ವಿಶೇಷವಾದ ದೇಶೀಯ ಚಿಕಿತ್ಸಾಸಾಫಲ್ಯವು ಆಯುರ್ವೇದೀಯ ಕ್ರಮದ ಉತ್ಕರ್ಷವನ್ನೇ ನಿರ್ದೇಶಿಸುತ್ತದೆಂತ ತಿಳಿಯಬೇಕಾಗುತ್ತದೆ.

16. ಈಗ ಶಾಸ್ತ್ರದೃಷ್ಟವೆನ್ನುವ ಪಾಶ್ಚಾತ್ಯ ಔಷಧಗಳ ವಿಷಯ ಸ್ವಲ್ಪ ವಿಚಾರ ಮಾಡುವ. ಅವರ ವಿಶೇಷವಾದ ಶಾಸ್ತ್ರೀಯ ಪರೀಕ್ಷೆ ಎಂಬದು ನೀರಿನಲ್ಲ ಎರಡು ಪಾಲು ಹೈಡ್ರೋಜನ್, ಒಂದು ಪಾಲು ಒಕ್ಸಿಜನ್ ಉಂಟು, ಹಾಲಿನಲ್ಲಿ ಸಕ್ಕರೆ ಇಂತಿಷ್ಟು, ಸ್ನೇಹ ಇಂತಿಷ್ಟು, ನೀರು ಇಂತಿಷ್ಟು ಉಂಟು, ಎಂಬಂಥಾ ವಿವರಗಳನ್ನು ಕಂಡುಹಿಡಿಯುವದು ಇಂಥಾ ಪರೀಕ್ಷೆಗೊಳಪಟ್ಟ ಪದಾರ್ಥಗಳು ಇನ್ನೂ ಬಹು ಸ್ವಲ್ಪವೇ ಆಗಿವೆ, ನೀರಿನಲ್ಲಿಯಾದರೂ ಬೆರಸಿಕೊಂಡಿರುವ ಪದಾರ್ಥಗಳನ್ನೆಲ್ಲ ತಿಳಿಯಲಿಕ್ಕೆ ಸಾಧ್ಯವಾಗುವದಿಲ್ಲ. ಪ್ರತಿ ದ್ರವ್ಯದಲ್ಲಿಯೂ ಈ ರೀತಿ ಮಾಡಿದ ಶೋಧನದಲ್ಲ ಒಂದಲ್ಲ ಒಂದು ವಿಶೇಷ ವಸ್ತು ಇದ್ದೇ ಇರುತ್ತದೆ. ಅಂಥಾ ವಸ್ತುವು ರಸಾಯನಶಾಸ್ತ್ರರೀತ್ಯಾ ವಿಚ್ಛೇದಕ್ಕೆ ಬಾರದೆ ಇದ್ದು, ಅನೇಕ ದ್ರವ್ಯಗಳಲ್ಲಿಯೂ, ಕಡೆಗಳಲ್ಲಿಯೂ, ದೊರಕುತ್ತದೆಂಬ ಹಾಗಿನ ವಿಚಾರದ ಮೇಲೆ ಅದನ್ನು ಮೂಲ ಭೂತಗಳ ಪಟ್ಟಿಗೆ ಸೇರಿಸುತ್ತಾರೆ ಹೀಗೆ ಮಾಡುವದರಿಂದ ಮೂಲಭೂತಗಳ ಪಟ್ಟಿಯು ವರ್ಷಂಪ್ರತಿ ದೀರ್ಘವಾಗಿ ಬೆಳೆಯುತ್ತಲದೆ ಲೋಕದಲ್ಲಿ ಯಾವ ಪದಾರ್ಥವಾದರೂ ಅಮೃತವಾಗುವದು, ಅಥವಾ ವಿಷವಾಗುವದು, ಅದರ ಉಪಯೋಗಿಸಲ್ಪಟ್ಟ ಪ್ರಮಾಣ ಭೇದದ ಮೇಲೆ ಮತ್ತು ಸಂಯೋಗಭೇದದ ಮೇಲೆ ಆಗಿರುತ್ತದೆ. ವತ್ಸನಾಭಿಯು ಅತ್ಯಂತ ಕಠಿನವಾದ ವಿಷಗಳೊಳಗೆ ಒಂದು ಆದಾಗ್ಯೂ ಅದನ್ನು ತಕ್ಕ ಪ್ರಮಾಣದಲ್ಲಿ ಮತ್ತು ತಕ್ಕ ಯೋಗದಲ್ಲಿ ಕೊಟ್ಟರೆ, ಅದು ಅಸದೃಶವಾದ ಔಷಧವಾಗಿ ಫಲಿಸುತ್ತದೆ ಮತ್ತು ಅದನ್ನು

ಎಳೇ ಶಿಶುವಿಗೆ ಸಹ ಕೊಡಬಹುದಾಗುತ್ತದೆ. ಕೆಲವು ವಿಷಗಳನ್ನು ಎಷ್ಟು ಪ್ರಮಾಣದ ವರೆಗೆ ವಿಷಲಕ್ಷಣಗಳಿಲ್ಲದೆ ಉಪಯೋಗಿಸಬಹುದೆಂಬದನ್ನು ಕುರಿತು ಶೋಧನಮಾಡಿದ್ದಾರಾಗಿ ಕಾಣುತ್ತದೆ. ಸಂಯೋಗಭೇದದ ವಿಚಾರದಲ್ಲಿ ಸಾರ್ಥಕಜ್ಞಾನವನ್ನು ಬಹಳವಾಗಿ ಸಂಪಾದಿಸಿರುವ ಹಾಗೆ ಕಾಣುವದಿಲ್ಲ. ಒಂದು ಪಾಲು ಪಾದರಸ ಎರಡು ಪಾಲು ಗಂಧಕ ಕೂಡಿಸಿ, ಅರೆದು ಕಜ್ಜಲ ಮಾಡಿಕೊಂಡು, ಸರಿ ಪಾಲು ಕಬ್ಬುಣ, ಉಕ್ಕು, ಭಂಗಾರ ಮುಂತಾದ ಯಾವ ಲೋಹವನ್ನಾಗಲಿ ಅರದಿಂದ ಉಜ್ಜಿ ಪುಡಿ ಮಾಡಿಕೊಂಡು ಕೂಡಿಸಿ, ಲೋಳೆಸರದ ರಸದಿಂದ ಆರು ಘಂಟೆಕಾಲ ಅರದು ಮಾಡಿದ ಕರ್ಪಗಿನ ಮುದ್ದೆಯನ್ನು ತಾಮ್ರದ ಹರಿವಾಣದಲ್ಲಿಟ್ಟು, ಹರಳುಗಿಡದ ಎಲೆಯಿಂದ ಮುಚ್ಚಿ, ಒಳ್ಳೇ ಬಿಸಿಲಲ್ಲಿ ಅರ್ಧ ಜಾಮುಕಾಲ ಇಟ್ಟು, ಅನಂತರ ಹಾಗೆಯೇ ಆ ಹರಿವಾಣವನ್ನು ಧಾನ್ಯರಾಶಿಯಲ್ಲಿ ಹುಗಿದಿಟ್ಟು ಎಂಟನೆ ದಿನ ಅದನ್ನು ತೆಗೆದು ನೋಡಿದರೆ, ಅದು ಕುಂಕುಮವರ್ಣದ ಒಳ್ಳೇ ಭಸ್ಮವಾದದ್ದು ಕಾಣುತ್ತದೆ* ಒಂದು ಸಮಯದಲ್ಲಿ ಈ ಕ್ರಮವನ್ನೇ ನಡಿಸಿ 4ನೇ ದಿನ ತೆಗೆದು ನೋಡಿದ್ದರಿಂದ, ಅದು ಭಸ್ಮವಾಗದೆ ನಿರರ್ಥಕವಾಯಿತು ನಾಲ್ಕನೇ ದಿನದಲ್ಲಿ ಆ ಮುದ್ದೆಯು ಕರ್ಪಾಗಿಯೇ ಇತ್ತು ಪುನಃ ಧಾನ್ಯರಾಶಿಯಲ್ಲಿಟ್ಟು, 8ನೇ ದಿನ ನೋಡಿದಾಗ್ಗೆ ಯಾವ ಭೇದವೂ ಉಂಟಾಗದೆ, ಇದ್ದ ಹಾಗೆಯೇ ಇತ್ತು ಆದರೆ ಅದನ್ನು ಕಲ್ಲಿನಿಂದ ಜಜ್ಜಿ ಒಡೆದಾಗ್ಗೆ, ಒಳಗಿನಿಂದ ಉಷ್ಣವಾದ ಸೆಕೆ ಹೊರಟುಹೋದದ್ದು ಕಂಡಿತು. ಅನಂತರ ಆ ಗಟ್ಟಿಯನ್ನು ಗಜಪುಟ ಹಾಕಿದಾಗ್ಯೂ, ಅದು ಭಸ್ಮವಾಗಲಿಲ್ಲ ಇದೆಲ್ಲಾ ಆದದ್ದು ಯಾವ ಶಕ್ತಿಯಿಂದ, ಲೋಳಿಸರದಲ್ಲಿ, ಹರಳೆಲೆಯಲ್ಲಿ ಮತ್ತು ತಾಮ್ರದ ಪಾತ್ರೆಯಲ್ಲಿ ಯಾವ ಯಾವ ವಿಶೇಷ ಶಕ್ತಿಗಳು ಇವೆ? ಧಾನ್ಯರಾಶಿಯಲ್ಲಿ ಎಂಟು ದಿನಗಳಲ್ಲಿ ಕಂಪಾಗತಕ್ಕದ್ದು ನಾಲ್ಕನೇ ದಿನದಲ್ಲಿ ಕರ್ಪಗಾಗಿಯೇ ಇರಲಿಕ್ಕೆ ಕಾರಣವೇನು ಇತ್ಯಾದಿ ಪ್ರಶ್ನೆಗಳಿಗೆ ಈಗಿನ ಪಾಶ್ಚಾತ್ಯರಸಾಯನ ಶಾಸ್ತ್ರಜ್ಞರು ಉತ್ತರ ಕೊಡಲು ಸಮರ್ಥರಾಗಿರುವದಿಲ್ಲ ಇಂಥಾ ಸಮಾಧಾನ ಸಿಕ್ಕಲಿಲ್ಲ ಎಂಬದರಿಂದ ರಾಜಯಕ್ಷ್ಮ ಮುಂತಾದ ಮಹಾವ್ಯಾಧಿಗಳಲ್ಲಿ ಉತ್ತಮ ಔಷಧವಾದ ಆ ಭಸ್ಮವನ್ನು ಮಾಡದೆ ಬಿಡುವದು ಎಷ್ಟು ತಪ್ಪೋ? ಇಂಥಾ ಅದ್ಭುತವಾದ ರಸಾಯನಶಾಸ್ತ್ರಜ್ಞಾನದಿಂದ ಗರ್ಭಿತವಾದ ಅನೇಕ ಯೋಗಗಳು ಆಯುರ್ವೇದೀಯ ಚಿಕಿತ್ಸೆಯಲ್ಲಿ ಎಷ್ಟೋ ಶತಮಾನಗಳಿಂದ ಸಾರ್ಥಕವಾಗಿ ಉಪಯೋಗಿಸಲ್ಪಡುತ್ತಿರುವದನ್ನು ಆಲೋಚಿಸಿದರೆ, ಇತ್ತಲಾಗೆ ಲಬ್ಧವಾದದ್ದೆಂಬ ರಸಾಯನಶಾಸ್ತ್ರಜ್ಞಾನವು ವೈದ್ಯಕ್ಕೆ ಅತ್ಯಗತ್ಯವಲ್ಲ ಎಂತಲೇ ಉಪಲಬ್ಧವಾಗುವದಿಲ್ಲವೋ? ಸಂಕ್ಷೇಪವಾಗಿ ಹೇಳುವದಾದರೆ, ರಸಾಯನಶಾಸ್ತ್ರ ಪ್ರಕಾರ ದ್ರವ್ಯಗಳನ್ನು ಶೋಧಿಸಿ, ಅದರಿಂದಲೇ ಅವುಗಳ ಗುಣದೋಷಗಳನ್ನು ಹೇಳಲು ಸಾಧ್ಯವಿಲ್ಲ. ವಿಷಮಜ್ವರಕ್ಕೆ ಕ್ವಿನೀನು, ಹೊಟ್ಟೆಹುಳಕ್ಕೆ ಸೆಂಟೊನಿನು, ಇತ್ಯಾದಿ ಔಷಧಗಳನ್ನು ಕಂಡುಹಿಡದ್ದು ಅವುಗಳ ಉಪಯೋಗದಿಂದಲೇ ಅಲ್ಲದೆ, ರಸಾಯನಶಾಸ್ತ್ರಜ್ಞರ ಶೋಧನದಿಂದಲ್ಲ ಆಯುರ್ವೇದದಲ್ಲಿ ಪ್ರತಿ ದ್ರವ್ಯದ ರುಚಿಗೆ ಕಾರಣವಾದ ಷಡ್ರಸಗಳ ಪ್ರಮಾಣಭೇದದ ಮೇಲೆ ಅದರ ಗುಣದೋಷಗಳನ್ನು ಊಹಿಸುವ ಕ್ರಮ ವಿವರಿಸಲ್ಪಟ್ಟಿದೆ. ಇದರಿಂದ ಹೊಸತಾದ ದ್ರವ್ಯಗಳ ಔಷಧೋಪಯೋಗವನ್ನು ಕಂಡುಹಿಡಿಯಲಿಕ್ಕೆ ಸಹಾಯವಾಗುತ್ತದೆ. ಇಂಥಾ ಸೌಕರ್ಯ ಸಹ ಪಾಶ್ಚಾತ್ಯಪಂಡಿತರಿಗೆ

* ಪ ರಾ —3 ನೇ ಧಾನ್ಯರಾಶಿಯಲ್ಲಿಟ್ಟರೆ ಸಾಕೆಂಬ ತಾತ್ಪರ್ಯದ ಮಾತು ಮತ್ತು 6 ಘಂಟೆಕಾಲ ಬಿಸಿಲಿನಲ್ಲಿ ಇಸಬೇಕೆಂಬ ಗಾವಪ್ರಕಾಶದ ಮಾತು ಸಹ ಸರಿ ಕಾಣುವದಿಲ್ಲ

ಇಲ್ಲವಾದ್ದರಿಂದ, ಅವರ ಔಷಧಗಳ ಗಣವು ಸಾಕಷ್ಟು ಅಭಿವೃದ್ಧಿ ಇಲ್ಲದಿರುವದಾಗಿದೆ ಇದನ್ನು ತಮ್ಮಲ್ಲಿಯ ಒಂದು ಕೊರತೆ ಎಂತ ಎಣಿಸುವದಕ್ಕೆ ಬದಲಾಗಿ, ದೇಶೀಯರು ಉಪ ಯೋಗಿಸುವ ಔಷಧಗಣವು ಬಹು ವಿಸ್ತಾರವಾಗಿರುವದೇ ಆಯುರ್ವೇದದ ಒಂದು ದೋಷ ಎಂತ ಹೇಳಲಿಕ್ಕೆ ತೊಡಗಿದ್ದಾರೆ. ಈ ಮನುಷ್ಯದೇಹವು ದ್ರವ್ಯಾಶ್ರಯ ಎಂಬದು ಸಿದ್ಧಾಂತ. ಪ್ರತಿ ದ್ರವ್ಯದಲ್ಲಿಯೂ ಷಡ್ರಸಗಳೊಳಗಿನ ರಸಗಳು ಪ್ರಮಾಣಭೇದದಿಂದ ಇರುತ್ತವೆಂಬದು ಸಹ ಸಿದ್ಧಾಂತ. ಆ ದ್ರವ್ಯಾಶ್ರಯವಾದ ರಸಗಳು ತಕ್ಕ ಕ್ರಮದಲ್ಲಿ ಈ ದೇಹಕ್ಕೆ ಸೇರಿದರೆ ಸುಖಕ್ಕೂ ಅಂದರೆ ಆರೋಗ್ಯಕ್ಕೂ, ಕ್ರಮಕ್ಕೆ ಹೆಚ್ಚು ಕಡಿಮೆಯಾಗಿ ಸೇರಿದರೆ ದುಃಖಕ್ಕೂ, ಅಂದರೆ ರೋಗಕ್ಕೂ, ಕಾರಣವಾಗುತ್ತವೆ ಎಂಬ ಆಯುರ್ವೇದದ ತತ್ವವನ್ನು ಕುರಿತು ಯಾರೂ ಸಂದೇಹಪಡಲು ಕಾರಣವಿಲ್ಲ. ಉಪ್ಪು, ಹುಳಿ, ಖಾರ, ಸೀ, ಚೊಗರು ಮತ್ತು ಕಹಿ ರಸಗ ಳಲ್ಲಿ ಯಾವದಾದರೂ ಒಂದು ಅತಿಯಾಗಿದ್ದ ಆಹಾರವನ್ನು ನಾವು ಸೇವಿಸಿದ ಕೂಡಲೇ ಬಾಯಾರಿಕೆ ಅಥವಾ ಬೇರೆ ಅಸುಖ ಉಂಟಾಗುವದು ನಮ್ಮ ನಿತ್ಯಾನುಭವ. ಬಾಯಾರಿಕೆ ಯಾಗುವದು ಆ ಅತಿಯಾದ ರಸವನ್ನು ತೆಳ್ಳಗೆಮಾಡಿ, ಅದರ ಪ್ರಾಬಲ್ಯವನ್ನು ತಗ್ಗಿಸಿ, ಅದರ ಪಚನವನ್ನು ಸಾಧಿಸುವದಕ್ಕಾಗಿರುತ್ತದೆ ಆ ರುಚಿಭೇದವು ಆಯಾ ದ್ರವ್ಯದಲ್ಲಿರುವ ಪೃಥ್ವೀ-ಅಪ್-ತೇಜಃ-ಆಕಾಶ ವಾಯು ಎಂಬ ಮಹಾಭೂತಗಳ ಪ್ರಮಾಣಭೇದವನ್ನು ಸೂಚಿಸು ತ್ತದೆಯಾಗಿ ನಮ್ಮ ಮಹರ್ಷಿಗಳು ಕಂಡುಹಿಡಿದಿದ್ದಾರೆ. ಹಾಗಾದ ಮೇಲೆ ಪ್ರತಿ ದ್ರವ್ಯವು ಯಾವನಾದರೂಬ್ಬನಿಗೆ ಯಾವದಾದರೊಂದು ಸಂಗತಿಯಲ್ಲಿ ಔಷಧವಾಗಲೇ ಬೇಕಲ್ಲವೋ? ಸೃಷ್ಟಿಯಲ್ಲಿ ದ್ರವ್ಯಗಳು ಹ್ಯಾಗೆ ಅಸಂಖ್ಯೇಯವಾಗಿವೆಯೋ, ಹಾಗೆಯೇ ಆರೇ ರಸಗಳ ತರ-ತಮ-ಯೋಗಗಳಿಂದುಂಟಾಗುವ ರಸಭೇದಗಳು ಸಹ ಅಸಂಖ್ಯೇಯ ಇಂಥಾ ಸೂಕ್ಷ್ಮ ಭೇದಗಳನ್ನು ಭಾವಿಸುವದಕ್ಕೆ ಸಹಾಯವಾಗುವಂತೆ ಮನುಷ್ಯನ ಹೆಬ್ಬೆಟ್ಟುಗಳ ರೇಖಾಭೇದದ ಉಪಮೆಯನ್ನು ಕೊಡಬಹುದು ಎಷ್ಟೋ ಲಕ್ಷ ಸಂಖ್ಯೆಯ ಜನರ ಹೆಬ್ಬೆಟ್ಟುಗಳ ಮುದ್ರೆಗ ಳನ್ನು ತೆಗೆದು ಹೋಲಿಸಿನೋಡಿ, ಪ್ರತಿಯೊಂದರ ರೇಖೆಗಳಲ್ಲಿಯೂ ಸೂಕ್ಷ್ಮವಾದ ಭೇದ ವುಂಟೆಂತ ನಿರ್ಣಯಿಸಿದ್ದಾರೆ. ಇಂಥಾ ಸೂಕ್ಷ್ಮಭೇದ ಪ್ರತಿ ಮನುಷ್ಯನಲ್ಲಿಯೂ, ಪ್ರತಿ ದ್ರವ್ಯ ದಲ್ಲಿಯೂ, ಪ್ರತಿ ದ್ರವ್ಯದ ರಸದಲ್ಲಿಯೂ, ಪ್ರತಿ ರೋಗದಲ್ಲಿಯೂ ಇದ್ದೇ ಇದೆ. ಈ ಭೇದವೇ ಪ್ರತಿ ರೋಗಿಗೂ ಪ್ರತಿ ವೈದ್ಯನಿಗೂ ಚಿಕಿತ್ಸೆಯಲ್ಲಿ ಕಷ್ಟಕೊಡುವಂಥಾದ್ದು. ಈ ಭೇದವಿಲ್ಲ ದಿದ್ದರೆ ವೈದ್ಯರ ಆವಶ್ಯಕತೆ ಪ್ರಾಯಶಃ ಇರಲಾರದು. ಈ ಭೇದವನ್ನು ಸಾಮಾನ್ಯವಾದ ವೈದ್ಯರಾಗಲಿ ಡಾಕ್ಟರರಾಗಲಿ ಆಲೋಚಿಸದೆ ಸಾಧಾರಣ ಚಿಕಿತ್ಸೆ ನಡಿಸುವದೇ ಅವರ ವೈದ್ಯದ ಮುಖ್ಯ ದೋಷವೆಂತ ತಿಳಿಯಬೇಕು. ರಸಗಳೊಳಗೆ ಪರಸ್ಪರ ವಿರುದ್ಧವಾದವು, ವೀರ್ಯವಿರುದ್ಧವಾದವು, ವಿಪಾಕವಿರುದ್ಧವಾದವು ಮುಂತಾದ, ಔಷಧಯೋಗಕಲ್ಪನೆಗೆ ಬೇಕಾದ. ಅನೇಕ ವಿವರಗಳು ಆಯುರ್ವೇದದಲ್ಲಿ ವರ್ಣಿಸಲ್ಪಟ್ಟಿರುತ್ತವೆ.

17. ಜ್ವರವು ಒಂದು ಪ್ರತ್ಯೇಕ ರೋಗವಾಗಿ ಆಯುರ್ವೇದದಲ್ಲಿ ಗಣನೆ ಮಾಡಲ್ಪ ಟ್ಟದ್ದು ಶಾಸ್ತ್ರೀಯವಲ್ಲ ಎಂಬ ದೋಷಾರೋಪಣವನ್ನು ಡಾಕ್ಟರ್ ಕೋಮನ್‌ನವರು ಸಹ ಎತ್ತಿದ್ದಾರಾದ್ದರಿಂದ, ಆ ಪ್ರಮೇಯವನ್ನು ಆಲೋಚಿಸಬೇಕಾಯಿತು. ಆಯುರ್ವೇದ ಪ್ರಕಾರ ಯಾವ ರೋಗದಲ್ಲಿಯಾದರೂ ವಾತ-ಪಿತ್ತ-ಕಫಗಳ ವಿಷಮ ಸ್ಥಿತಿ ಕಾಣುತ್ತದೆ ಮತ್ತು ಆ ವಾತ-ಪಿತ್ತ-ಕಫಗಳಲ್ಲಿ ವಿಷಮಾವಸ್ಥೆ ಹೊಂದಿದವುಗಳನ್ನು ಸ್ವಸ್ಥ ಸ್ಥಿತಿಗೆ ತರುವದೇ

ವೈದ್ಯನ ಕರ್ತವ್ಯವಲ್ಲದೆ ಬೇರೆ ಇಲ್ಲ. ಆದ್ದರಿಂದ ವಾತ-ಪಿತ್ತ-ಕಫಗಳು ಒಂದೊಂದಾಗಿ ದೋಷಕರವಾಗುವದರಿಂದ ಮೂರು, ಎರಡೆರಡಾಗಿ ದೋಷಕರವಾಗುವದರಿಂದ ಮೂರು, ಮೂರೂ ಒಟ್ಟಾಗಿ ದೋಷಮಾಡುವದರಿಂದ ಒಂದು, ಹೀಗೆ ಏಳೇ ರೋಗಗಳ ಪ್ರಧಾನ ವರ್ಗಗಳು ಜಗತ್ತಿನಲ್ಲಿ ಕಾಣುವ ಸರ್ವರೋಗಗಳ ಸರ್ವಲಕ್ಷಣಗಳೂ ಆ ಏಳು ಪ್ರಧಾನ ರೋಗಗಳ ಲಕ್ಷಣಗಳೇ. ಆ ಲಕ್ಷಣಗಳಲ್ಲಿ ಒಟ್ಟಾಗಿ ಕಾಣಿಸಿಕೊಳ್ಳುವ ಕೆಲವು ಲಕ್ಷಣಗಳ ಸಮುದಾಯಗಳನ್ನು ಲೋಕವ್ಯವಹಾರಾರ್ಥವಾಗಿ ಬೇರೆ ಬೇರೆ ಆಗಿ ಎಂಗಡಿಸಿ, ಆಯಾ ಸಮುದಾಯದಲ್ಲಿ ಪ್ರಧಾನವಾದ ಲಕ್ಷಣದ ಮೇಲೆ ಆ ಸಮುದಾಯಕ್ಕೆ ಹೆಸರಿಡುವದು ಸಂಪ್ರದಾಯವಾಗಿ ಬಂದದೆ ಅಂಥಾ ಹೆಸರು ಮುಖ್ಯವಾದ್ದಲ್ಲ ಮತ್ತು ಅಂಥಾ ಹೆಸರನ್ನು ಆಧರಿಸಿಯೇ ಚಿಕಿತ್ಸೆ ಮಾಡಬಾರದೆಂತ ವಿಶೇಷವಾಗಿ ಆಯುರ್ವೇದ ಪ್ರತಿಪಾದಕರಾದ ಋಷಿಗಳು ಎಚ್ಚರಿಸಿರುತ್ತಾರೆ ಪಾಶ್ಚಾತ್ಯವೈದ್ಯರು ರೋಗದ ನಾಮಕರಣದ ವಿಷಯದಲ್ಲಿ ಬಹು ಶ್ರಮಪಟ್ಟು, ಅನಂತರ ಆ ನಾಮವನ್ನೇ ಆಧರಿಸಿ ಚಿಕಿತ್ಸೆಮಾಡುತ್ತಿರುವ ಅವರ ಆಚರಣವೇ ಅಶಾಸ್ತ್ರೀಯ ಮತ್ತು ಅನರ್ಥಕರ ಎಂಬದು ನಮ್ಮ ಮತವಾಗಿರುತ್ತದೆ. ಈಗ, ಮಿಂದೆ ಪ್ರಸ್ತಾಪಿಸಿದ ಲಕ್ಷಣಸಮುದಾಯಗಳಲ್ಲಿ ಜ್ವರವೇ ಪ್ರಧಾನ ಲಕ್ಷಣವಾಗಿ ಕಾಣುವ ಒಂದು ಸಮುದಾಯವಿರುವದರಿಂದ ಅದಕ್ಕೆ ಜ್ವರರೋಗ ಎಂಬ ಹೆಸರು ಬಂದದೆ ಈ ಜ್ವರದಲ್ಲಿ ಪಾಶ್ಚಾತ್ಯರು 'ಮಲೇರಿಯಲ್' ಎಂಬ ಜಾತಿ ಭೇದವನ್ನು ಆಯುರ್ವೇದದಲ್ಲಿ 'ವಿಷಮ' ಎಂತ ಎಂಗಡಿಸಿ, ಅದರಲ್ಲಿ (ಸಂತತ) ಬಡದೇ ನಿತ್ಯ ಬರುವಂಥಾದ್ದು ಒಂದು, (ಸತತ) ದಿನದಲ್ಲಿ ಎರಡು ಸರ್ತಿ ಬಂದುಬಿಡುವಂಥಾದ್ದು ಒಂದು, (ಅನೇದ್ಯುಃ) ಅಹೋರಾತ್ರಿಗಳೊಳಗ, ಅಂದರೆ 24 ತಾಸುಗಳೊಳಗೆ, ಒಮ್ಮೆ ಬಂದು ಬಿಡುವಂಥಾದ್ದು ಒಂದು, (ತೃತೀಯಿಕ) ದಿನ ಬಿಟ್ಟು ದಿನ ಬಂದುಬಡುವಂಥಾದ್ದು ಒಂದು, (ಚಾತುರ್ಥಿಕ) ಎರಡು ದಿನ ಬಿಟ್ಟು ಬಂದುಬಿಡುವಂಥಾದ್ದು ಒಂದು, ಹೀಗೆ ಐದು ವಿಭಾಗಗಳನ್ನು ಮಾಡಿದ್ದಾರೆ ಇದೇ ವಿಭಾಗಗಳು ಪಾಶ್ಚಾತ್ಯರ ವೈದ್ಯದಲ್ಲಿಯೂ ಕಾಣುತ್ತವೆ. ಅವರು ಸಂತತಕ್ಕೆ ರಮಿಟ್ಟೆಂಟ್ (Remittent) ಅಥವಾ ರೆಮಿಟ್ಟೆಂಟ್ ಮಲೇರಿಯಲ್ (Remittent malarial) ಎಂತಲೂ, ಸತತಕ್ಕೂ, ಅನೇದ್ಯುಃ ಎಂಬದಕ್ಕೂ ಕ್ವೊಟಿಡಿಯನ್ (Quotidian) ಎಂತಲೂ, ತೃತೀಯಿಕಕ್ಕೆ ಟರ್ಸಿಯನ್ (Tertian) ಎಂತಲೂ, ಚಾತುರ್ಥಿಗೆ ಕ್ವಾರ್ಟನ್ (Quartan) ಎಂತಲೂ ಹೆಸರಿಟ್ಟಿದ್ದಾರೆ ಅವರ ಈ ವ್ಯವಸ್ಥೆ ವಿಷಯವನ್ನು ಮುಂದೆ ಪ್ರತ್ಯೇಕವಾಗಿ ಆಲೋಚಿಸೋಣಾಗುವದು ಆಯುರ್ವೇದ ಪ್ರಕಾರ ವಿಷಮಜ್ವರಗಳು ಮೇಲೆ ಹೇಳಿದಂತೆ 5, ಕ್ರಮವಾದ ವಾತಾದಿ ದೋಷಗಳಿಂದುಂಟಾಗುವ ಜ್ವರಗಳು 7, ಭಯಶೋಕಾದಿ ಕಾರಣಗಳಿಂದ ಹುಟ್ಟುವ ಆಗಂತು ಜ್ವರಗಳು 13, ಸೇರಿ 25 ಅಲ್ಲದೆ ತ್ರಿದೋಷ ಅಥವಾ ಸನ್ನಿಪಾತ ಜ್ವರದಲ್ಲಿ ವಾತಾದಿಗಳ ಪ್ರವೃದ್ಧ-ಮಧ್ಯ-ಹೀನಸ್ಥಿತಿಗಳ ಮೇಲೆ ಭೇದಗಳು 13 ಇರುವದರಿಂದ, ಒಟ್ಟು ಜ್ವರಭೇದಗಳು 37 ಆಗುತ್ತವೆ ಇವುಗಳ ವಿನಾ ಪ್ರಧಾನರೋಗಕ್ಕೆ ಉಪದ್ರವವಾಗಿ ಒಂದು ಜ್ವರ ಮತ್ತು ಮುಂದೆ ಒತತಕ್ಕ ರೋಗದ ಹೇತುವಾಗಿ ತೊಡಗಿದ ಜ್ವರ ಎಂಬ ಭೇದ ಬೇರೆ ಇರುತ್ತದೆ ಪುನಃ ಜ್ವರಾತಿಸಾರ ಎಂಬ ಬೇರೆ ರೋಗವಿದೆ ತ್ರಿದೋಷಗಳನ್ನು ರೋಗಗಳ ಹೇತುಗಳಾಗಿ ಒಪ್ಪತಕ್ಕವರು ಈ ಜ್ವರವಿಭಾಗಕ್ಕೆ ಆಕ್ಷೇಪವನ್ನು ಹೇಳ ಕಾರಣವಿಲ್ಲ. ತ್ರಿದೋಷ ನ್ಯಾಯವನ್ನು ಕೆಳಗೆ ಪ್ರತ್ಯೇಕವಾಗಿ ವಿಮರ್ಶಿಸುವೆವು.

18. ಈಗ ಪಾಶ್ಚಾತ್ಯವೈದ್ಯರ ಜ್ವರಚಿಕಿತ್ಸೆಯ ಅವಸ್ಥೆಯನ್ನು ಸ್ವಲ್ಪ ವಿಚಾರಿಸುವ. ಈ ಪ್ರಕರಣಕ್ಕೆ ಇದರ ಪ್ರಾಂತದಲ್ಲಿ ಹೆಸರು ಕಾಣಿಸಿದ ಮೂರು ಪುಸ್ತಕಗಳನ್ನು ಆಧಾರವಾಗಿ ತೆಗೆದುಕೊಂಡಿದ್ದೇವೆ. ಅವುಗಳೊಳಗೆ ಒಂದನೇದು 1876-79ನೇ ಇಸವಿಗಳಲ್ಲಿ ಐದು ಭಾಗಗಳಾಗಿ ರಚಿತವಾದ 4860 ಪುಟಗಳುಳ್ಳ ಪ್ರಸಿದ್ಧ ವೈದ್ಯಗ್ರಂಥ, ಎರಡನೇದು 1903ನೇ ಇಸವಿಯಲ್ಲಿ ಪ್ರಕಟವಾಗಿ, ಅದು ಬಹು ಪ್ರಯೋಜನಕರವಾದದ್ದೆಂಬದರಿಂದ ಸರಕಾರದವರು ಅದರ ಪ್ರತಿಗಳನ್ನು ಕೊಂಡುಕೊಂಡು ಕಡಿಮೆ ಕ್ರಯದಲ್ಲಿ ತಮ್ಮ ನೌಕರರು ಮುಂತಾದವರಿಗೆ ವಿಕ್ರಯಿಸಿದ್ದಾರೆ; 3ನೇದು ಅದ್ಯಾಪಿ ಡಾಕ್ಟರರು ಆಧಾರವಾಗಿಟ್ಟುಕೊಳ್ಳುವ ಪುಸ್ತಕಗಳೊಳಗೊಂದಾಗಿ, 1920ನೇ ಇಸವಿಯಲ್ಲಿ ಪ್ರಕಟವಾದ ಪ್ರಸಿದ್ಧ ವೈದ್ಯಕಗ್ರಂಥ ಈಗ, ಆಯುರ್ವೇದದಲ್ಲಿ ವಿವರಿಸಲ್ಪಟ್ಟ ಪಂಚವಿಧವಾದ ವಿಷಮ ಜ್ವರವನ್ನು ಪಾಶ್ಚಾತ್ಯರು 'ಮಲೇರಿಯಲ' ಎಂಬ ಸಾಮಾನ್ಯ ಹೆಸರಿನಿಂದ ಅದೇ ರೀತಿ ವರ್ಣಿಸಿದ್ದಾರೆಂತ ಹಿಂದೆ ಹೇಳಿದೆ ಆಗಂತು, ಅನ್ಯಲಕ್ಷಣ ಮತ್ತು ಉಪದ್ರವರೂಪವಾದ ಜ್ವರ ಜಾತಿಗಳನ್ನು ಎರಡು ಕ್ರಮಗಳಲ್ಲಿಯೂ ಪ್ರತ್ಯೇಕವಾಗಿಯೇ ವರ್ಣಿಸಿದ್ದಾರ ಉಳಿದ ವಾತಾದಿ ಪೃಥಕ್ 3, ದ್ವಂದ್ವ 3, ಸನ್ನಿಪಾತ 13, ಜ್ವರಾತಿಸಾರ 1, ಸಹ 20 ಜ್ವರಗಳ ಸ್ಥಾನದಲ್ಲಿ ಪಾಶ್ಚಾತ್ಯವೈದ್ಯದಲ್ಲಿ ಟಾಯ್ಫೊಯ್ಡ್ ಎಂಬ ಒಂದೇ ವರ್ಗ ಕಾಣುತ್ತದೆ. ಅವರ ವಿಚಾರದಲ್ಲಿ ನಿರ್ವಿವಾದವಾದ ಆಗಂತು ಮುಂತಾದ ವರ್ಗಗಳೊಳಗೆ ಸೇರದ್ದಾದ ಬಿಡದೆ ಬರುವ ಜ್ವರವು ವಿಷಮಜಾತಿಗಳೊಳಗೊಂದಾದ ಸಂತತ (Remittent) ಅಲ್ಲವಾದರೆ, ಅದು ಟಾಯ್ಫೊಯ್ಡೇ ಆಗಿರಬೇಕು ಬಿಳೇ ಜನರಲ್ಲಿ ಟಾಯ್ಫೊಯ್ಡ್ ಜ್ವರದ ಆರಂಭದಿನದಿಂದ 7ನೇ 10ನೇ ದಿನಗಳ ಮಧ್ಯ ಹೊಟ್ಟೆ, ಬೆನ್ನು ಮುಂತಾದ ಅಂಗಗಳಲ್ಲಿ ಒತ್ತಿದರೆ ಅಡಗುವ, 2—3 ದಿನಗಳಲ್ಲ ತನ್ನಂತೆ ಕಾಣದೆ ಹೋಗುವ ಮತ್ತು ಗುಲಾಬಿ ಕೆಂಪು ವರ್ಣದ ದಡಿಕೆಗಳು ಹಚ್ಚುಕಡಿಮೆಯಾಗಿ ಏಳುತ್ತವೆ ಈ ಲಕ್ಷಣ ಈ ದೇಶದ ಜನರಲ್ಲಿ ಪ್ರಾಯಶಃ ಕಾಣುವದಿಲ್ಲವಂತೆ. ಈ ಭೇದಕ್ಕೆ ಕಾರಣ ಗೊತ್ತಾಗಲಿಲ್ಲ. ಕೆಲವರು ಇಲ್ಲಿಯ ಜನರ ಶ್ಯಾಮವರ್ಣದ ದೆಸೆಯಿಂದ ಆ ದಡಿಕೆಗಳು ದೃಷ್ಟಿಗೋಚರವಾಗದೆ ಹೋಗುತ್ತವೆಂತ ಸಮಾಧಾನ ಹೇಳುವದುಂಟು. ಆದರೆ ಭಾರತೀಯರೆಲ್ಲರೂ ಶ್ಯಾಮವರ್ಣದವರಾಗಿರುವದಿಲ್ಲ. ಹ್ಯಾಗಿದ್ದರೂ, ಆ ದಡಿಕೆ ಏಳುವ ಲಕ್ಷಣ ಈ ದೇಶದಲ್ಲಿ ರೋಗದ ನಿದಾನನಿರ್ಣಯಕ್ಕೆ ಸಾರ್ಥಕವಲ್ಲ ಎಂತ ಅವರೇ ಹೇಳುತ್ತಾರೆ. ಆ ಲಕ್ಷಣವಲ್ಲದೆ ಬೇರೆ ಟಾಯ್ಫೊಯ್ಡಿಗೂ ಸಂತತಕ್ಕೂ ಇರುವ ಭೇದವನ್ನು ನಿಃಸಂಶಯವಾಗಿ ತಿಳಿಸತಕ್ಕ ಲಕ್ಷಣ ಯಾವದೂ ಇಲ್ಲ ಟಾಯ್ಫೊಯ್ಡ್ ಜ್ವರದ ಪರೀಕ್ಷೆ ವಿಷಯದಲ್ಲ 1920ನೇ ಇಸವಿಯ ಪುಸ್ತಕದಲ್ಲಿ ಈ ಕೆಳಗಣ ಅರ್ಥದ ಮಾತುಗಳಿವೆ —"ಲಕ್ಷಿಸಲಿಕ್ಕೆ ಅನೇಕ ಅಂಶಗಳು ಇವೆ ಪ್ರಥಮತಃ, ಬಿಡದೇ ಕಾದು ಬರುವ ಎಲ್ಲಾ ಜ್ವರಗಳಲ್ಲಿ ಟಾಯ್ಫೊಯ್ಡ್ ಜ್ವರವು ಅತ್ಯಂತ ಸಾಮಾನ್ಯವಾಗಿರುತ್ತದೆ. ಎರಡನೇದು, ಅದರ ಲಕ್ಷಣಗಳು ವಿಶೇಷವಾಗಿ ಅಸ್ಥಿರವಾಗಿವೆ ಮೂರನೇದು, ಈ ಜ್ವರವೂ ವಿಷಮಜ್ವರವೂ ಕೂಡಿಕೊಂಡ ರೋಗ ಎಂಬಂಥಾದ್ದಿಲ್ಲ. ನಾಲ್ಕನೇದು, ಅತ್ಯಂತ ಅನುಕೂಲವಾದ ಸಂದರ್ಭಗಳಲ್ಲಿ ಸಹ ಇದರ ಪರೀಕ್ಷೆಯಲ್ಲಿ ತಪ್ಪುಗಳುಂಟಾಗದೆ ಇರಲಿಕ್ಕೆ ಸಾಧ್ಯವಿಲ್ಲ." ಜ್ವರವು ಒಂದು ಹಪ್ತೆ ಅಥವಾ ಹೆಚ್ಚುಕಾಲ ಏರಿ

1 A System of Medicine by Reynolds vol I
2 Moore's Family Medicine and Hygiene for India
3 The Principles and Practice of Medicine by Osler and McCrae

ಕೊಂಡೇ ಇರುವದೊಂದು ಮುಖ್ಯ ಸಂಗತಿ ದಡಿಕೆಗಳು ಅಥವಾ ಹೊಟ್ಟೆ ಅಕ್ರಮಗಳು ಕಾಣುವ ವರೆಗೆ ಜ್ವರವು ಇಂಥಾದ್ದೆಂತ ನಿರ್ಣಯಿಸಲಿಕ್ಕೆ ತೀರಾ ಅಸಾಧ್ಯವಾಗಬಹುದು. ಹೊಟ್ಟೆಯ ನೋವು ಮತ್ತು ಸೂತನತೆ ಕುರಿತೇ ಒಂದು ಕಡೆಯಲ್ಲಿ ಸೂಕ್ಷ್ಮವಾಗಿ ಪರೀಕ್ಷೆ ಮಾಡಿದ 500 ರೋಗಿಗಳೊಳಗೆ 200 ರೋಗಿಗಳಲ್ಲಿ ಆ ಲಕ್ಷಣಗಳು ಕಾಣಲೇ ಇಲ್ಲ. 1500 ರೋಗಿಗಳೊಳಗೆ 516 ಜನರಿಗೆ ಅತಿಸಾರ, 443 ಜನರಿಗೆ ಹೊಟ್ಟೆನೋವು, ಮತ್ತು 249 ಜನರಿಗೆ ಮಲಬದ್ಧತೆ ಇತ್ತು ಎಂತ ಇನ್ನೊಂದು ಕಡೆಯಲ್ಲಿ ಶೋಧಿಸಿ ನೋಡಿದ್ದಾರೆ ಸಂತತ ಎಂಬ ವಿಷಮಜ್ವರ, ಕರಿನವಾದ ರಾಜಯಕ್ಷ್ಮ, ಅಂತರ್ಬುದ್ಧಿಯಲ್ಲಿ ಕೀವಾದಾಗ ಉಂಟಾಗುವ ಜ್ವರ, ಮುಂತಾದವು ಈ ಟಾಯ್ಫಾಯ್ಡಿನ ಹಾಗೆಯೇ ಕಾಣುವವು ಜ್ವರದ ಜಾತಿವಿಷಯದಲ್ಲಿ ಸಂದೇಹವುಂಟಾದಲ್ಲೆಲ್ಲಾ ಟಾಯ್ಫಾಯ್ಡಾಗಿರಬಹುದೆಂತ ಅನುಮಾನಪಡಬೇಕು. ಮೂರು ಹಪ್ತೆ ಕಾಲಕ್ಕಿಂತ ಹೆಚ್ಚು ಪೀಡಿಸುತ್ತಿದ್ದ ಜ್ವರಗಳಲ್ಲಿ 80 ಶಕಾಂಶಗಳು ಟಾಯ್ಫಾಯ್ಡಂತ ಈ ಭರತ ಖಂಡದಲ್ಲಿ ನಿಶ್ಚಯಿಸಿದ್ದಾರೆ. ಈ ಜ್ವರವು ಒಂದು ಕ್ರಿಮಿಬೀಜದಿಂದ ಉಂಟಾಗುವದು. ಅದು ರಕ್ತ ಮಲಾದಿಶೋಧನದಲ್ಲಿ ನೋಡಲು ಸಿಕ್ಕುತ್ತದೆ ಅಂಥಾ ಜ್ವರಪೀಡಿತನಾದ ರೋಗಿಯ ಸವಿಾಪ ಸಂಚರಿಸುತ್ತಿದ್ದ ಜನರ, ಮುಖ್ಯವಾಗಿ ಮಕ್ಕಳ, ಮಲದಲ್ಲಿ ಆ ಕ್ರಿಮಿಬೀಜಗಳು ಕಂಡಾಗ್ಯೂ ಅವರಲ್ಲಿ ಯಾರಿಗೂ ಜ್ವರ ಕಾಣದೆ ಇರಬಹುದು ಆ ಜ್ವರ ಉಂಟಾಗಿ ಗುಣವಾದ ಮನುಷ್ಯನ ಮೂತ್ರಾಶಯದಲ್ಲಿಯೂ, ಪಿತ್ತಾಶಯದಲ್ಲಿಯೂ ಆ ಕ್ರಿಮಿಬೀಜಗಳು 10-20 ವರ್ಷಗಳನಂತರ ಕಂಡದ್ದು ಉಂಟು ಕೆಲವು ಸಂಗತಿಗಳಲ್ಲಿ ವಿಷಮ ಲಕ್ಷಣಗಳಾಗಲಿ, ಉಪದ್ರವವಾಗಲಿ, ಯಾವದೂ ಕಾಣದೆ ರೋಗಿಯು ಫಕ್ಕನೆ ಸಾಯುವದುಂಟು, ಜ್ವರ ಪರಿಹರವಾಗ ಮಾತ್ರವಲ್ಲ, ಜ್ವರ ಬಿಟ್ಟು ವಾಸಿಯಾಗುತ್ತಾ ಬರುವ ಕಾಲದಲ್ಲಿ ಅಂಥಾ ಮರಣ ಉಂಟಾಗುವದುಂಟು ಅಂಥಾ ಅಕಸ್ಮಿಕ ಪರಿಣಾಮದ ಹೇತುವನ್ನು ತಿಳಿಯುವದು ಕಷ್ಟ ಈ ಜ್ವರವು 5 ರೋಗಿಗಳೊಳಗೆ ಒಬ್ಬನಲ್ಲಿ ಮರುಕಳಿಸಿ ಬರುತ್ತದೆ. ಒಬ್ಬ ರೋಗಿಗೆ 23 ದಿನಗಳ ವರೆಗೆ ಜ್ವರವಿಲ್ಲದೆ ಹೋಗಿ, 2ನೆ 41 ದಿನಗಳ ವರೆಗೆ ಜ್ವರ ಬಂದು, ಪುನಃ 42 ದಿನ ಬಿಟ್ಟು, ಅನಂತರ 2 ಹಪ್ತೆ 2ನೆ ಮರುಕಳಿಸಿ ಬಂದಿತ್ತು ಇದಕ್ಕೆಲ್ಲಾ ಕಾರಣ ತಿಳಿಯಬೇಕಷ್ಟೆ. ಆ ಕ್ರಿಮಿಬೀಜಗಳ ನಾಶನಕ್ಕೆ ಅಥವಾ ಅವುಗಳ ದೆಸೆಯಿಂದ ಉಂಟಾದ ಜ್ವರಕ್ಕೆ ಔಷಧವಿಲ್ಲ. ರೋಗಿಯ ಆಹಾರವಿಹಾರಾದಿಗಳ ಕುರಿತು ನಿಯಮ ಇಡುವದು, ಮತ್ತು ಆ ಜ್ವರದೊಂದಿಗೆ ಕಾಣಿಸಿಕೊಳ್ಳುವ ಹೊಟ್ಟೆಶೂಲೆ, ಅತಿಸಾರ, ಕೆಮ್ಮು, ತಲೆನೋವು, ನಿದ್ರೆ, ಅಶಕ್ತಿ, ಚಿತ್ತಭ್ರಮ, ಇತ್ಯಾದಿ ಉಪದ್ರವಗಳಿಗೆ ತಕ್ಕ ಚಿಕಿತ್ಸೆ ಮಾಡುವದು, ಇಷ್ಟೇ ಒಬ್ಬ ಡಾಕ್ಟರನು ಮಾಡತಕ್ಕ ಅಂಶವಾಗಿರುತ್ತದೆ ಇದೆಲ್ಲಾ ಪಾಶ್ಚಾತ್ಯವೈದ್ಯಗ್ರಂಥಗಳಿಂದ ಕಂಡುಬರುವಂಥಾದ್ದು

19. ಈಗ ವಿಷಮಜ್ವರದ ವಿಷಯದಲ್ಲಿ ಪಾಶ್ಚಾತ್ಯವೈದ್ಯಗ್ರಂಥಗಳು ಹೇಳುವದೇನಂದರೆ — ಹೆಚ್ಚಾಗಿ ಕೆಸರುಭೂಮಿಗಳಲ್ಲಿ ಇರುವ ಗಿಡ ಜಂತುಗಳ ಕೊಳಕಿನಿಂದುದ್ಭವಾಗುವ ಒಂದು ವಿಷದಿಂದ ವಿಷಮಜ್ವರವುಂಟಾಗುವಂಥಾದ್ದು, ಅಂಥಾ ವಿಷದ ಇರುವಿಕೆಯನ್ನು ತೋರಿಸಿಕೊಡುವದಕ್ಕೆ ಯಾವ ರಸಾಯನಶಾಸ್ತ್ರಜ್ಞನಾದರೂ ಶಕ್ತನಾಗಲಿಲ್ಲ, ಆ ವಿಷವು ಗಾಳಿಯಿಂದ ಬಹುದೂರದ ವರೆಗೆ ಪಸರಿಸುತ್ತದೆ, ಇತ್ಯಾದಿ ಮತ 1876ನೇ ಇಸವಿಯ ಗ್ರಂಥದಲ್ಲಿ ಕಾಣುತ್ತದೆ 1903ನೇ ಇಸವಿಯ ಪುಸ್ತಕದಲ್ಲಿ 'ಮಲೇರಿಯ' ಎಂಬದು ಮನುಷ್ಯರ

ರಕ್ತದ ಕೆಂಪುಜಾತಿಯ ಜೀವಬೀಜಗಳಿಗೆ ಬಂದಣಿಗೆರೂಪವಾಗಿ ಹಿಡಕೊಳ್ಳುವ ಒಂದು ಸಜೀವವಸ್ತು ಅಥವಾ ಕ್ರಿಮಿ: ಅದು ಹೆಣ್ಣುಸುಸಿಗಳ ಕಚ್ಚುವಿಕೆಗಳಿಂದ, ಅಥವಾ ನೀರಿನಿಂದ, ಅಥವಾ ಗಾಳಿಯಿಂದ, ಮನುಷ್ಯರ ರಕ್ತಕ್ಕೆ ಸೇರುವಂಥಾದ್ದು, ಆ ವಸ್ತು ಕರಿಣವಾದ ಜ್ವರದ ಪೀಡೆಯನ್ನು ಎಂದೂ ಅನುಭವಿಸದ ಮನುಷ್ಯನ ರಕ್ತದ ಕೆಂಪು ಬೀಜಗಳಲ್ಲಿ ಸಹ ಪರೀಕ್ಷೆಗೆ ಸಿಕ್ಕಿಯದೆ, ಇತ್ಯಾದಿ ಮತ ಕಾಣುತ್ತದೆ. ಈ ಎರಡು ಪುಸ್ತಕಗಳಲ್ಲಿಯೂ ವಿಷಮಜ್ವರವು ಸಂತತವಾಗಿ ಪೀಡಿಸುವದಕ್ಕೆ ವಿಷವು ಅತಿಯಾಗಿ ಸೇರಿಕೊಳ್ಳುವದೇ ಮುಖ್ಯ ಕಾರಣವಾಗಿ ಹೇಳಲ್ಪಟ್ಟದೆ. ಆ ವಿಷಕಾರಣವಾದ ಕ್ರಿಮಿಯಲ್ಲಿ ಭೇದಗಳಿವೆ ಎಂತ ಮಾತ್ರ 1903ನೇ ಇಸವಿಯ ಪುಸ್ತಕದಲ್ಲ ಸೂಚಿತವಾಗಿದೆ 1920ನೇ ಇಸವಿಯ ಗ್ರಂಥದಲ್ಲಿ, ತ್ರ್ಯಾಹಿಕಜ್ವರಕ್ಕೆ ಕಾರಣವಾದ ಕ್ರಿಮಿ ಒಂದು, ಚಾತುರ್ಥಿಕಜ್ವರಕ್ಕೆ ಕಾರಣವಾದ ಕ್ರಿಮಿ ಒಂದು, ಸಂತತ ಜ್ವರಕ್ಕೆ ಕಾರಣವಾದ ಕ್ರಿಮಿ ಒಂದು, ಕರಿಣಜಾತಿಯ ವಿಷಮಜ್ವರದಲ್ಲಿ ಕಾಣುವ ಕ್ರಿಮಿ ಒಂದು, ಹೀಗೆ ನಾಲ್ಕು ಬೇರೆಬೇರೆ ಕ್ರಿಮಿಗಳು ಇವೆ, ಮನುಷ್ಯನ ಶರೀರದೊಳಗೆ ಸೇರಿದ ಈ ಕ್ರಿಮಿಗಳು ತಮ್ಮ ಸಂತತಿಯನ್ನು ವೃದ್ಧಿಮಾಡುವ ಕಾಲದಲ್ಲಿ ಆ ಮನುಷ್ಯನಿಗೆ ಚಳಿ ಆರಂಭಿಸುವಂಥಾದ್ದು, ಸತತ, ಅನ್ಯೇದ್ಯುಃ, ಇತ್ಯಾದಿ ಭೇದಗಳು ಆಗಲಿಕ್ಕೆ ದೇಹದಲ್ಲ ತ್ರ್ಯಾಹಿಕ ಹೇತುವಾದ ಕ್ರಿಮಿಗಳು ಮತ್ತು ಚಾತುರ್ಥಿಕ ಹೇತುವಾದ ಕ್ರಿಮಿಗಳು ಸಹ ಸೇರಿಕೂಂಡಿರುವದರಿಂದ, ಅಥವಾ ಒಂದೇ ಜಾತಿಯ ಕ್ರಿಮಿಗಳು ಬೇರೆಬೇರೆ ಗುಂಪುಗಳಾಗಿ ನಿಂತಿದ್ದು, ಆ ಗುಂಪುಗಳಿಗೆ ಬೇರೆ ಬೇರೆ ವೃದ್ಧಿಕಾಲವಿರುವದರಿಂದ ಕಾರಣವಾಗಿರಬೇಕು, ಆ ಕ್ರಿಮಿಗಳು ಒಬ್ಬ ಮನುಷ್ಯನ ದೇಹದಲ್ಲಿದ್ದಾಗ್ಯೂ. ಅವಸಿಗೆ ಜ್ವರ ಬಾರದಿರಬಹುದು, ಆ ಕ್ರಿಮಿಗಳು ಸುಸಿಗಳಲ್ಲಿಯೂ, ಮನುಷ್ಯರಲ್ಲಿಯೂ ಅಲ್ಲದೆ ಬೇರ ಎಲ್ಲಿಯೂ ಕಾಣಲಿಕ್ಕೆ ಸಿಕ್ಕಿದ್ದಿಲ್ಲ, ಅವುಗಳು ಸುಸಿಗಳ ಕಚ್ಚುಪಕಗಳಿಂದಲೇ ಅಲ್ಲದೆ ಬೇರೆ ಎಥವಾಗಿ ಮನುಷ್ಯರ ಶರೀರವನ್ನು ಪ್ರವೇಶಿಸುವದಿಲ್ಲ; ಒಮ್ಮೆ ವಿಷಮಜ್ವರ ಬಂದು ಗುಣವಾಗಿ ಎಷ್ಟೋ ತಿಂಗಳುಗಳು, ಅಥವಾ ವರ್ಷಗಳು, ಕಳೆದ ಮೇಲೆ ಪುನಃ ವಿಷ ತಾಗದೆನೇ ಮರುಕಳಿಸಿ ಬರುವ ಜ್ವರಕ್ಕೆ ಕಾರಣ ಹೇಳುವದು ಕಷ್ಟ; ರಕ್ತದ ಪರೀಕ್ಷೆ ಎನಾ ಜ್ವರವು ಟಾಯ್ಫೊಯ್ಡೋ, ಸಂತತವೋ, ಎಂತ ನಿಶ್ಚಯಿಸುವದು ಅಸಾಧ್ಯವಾಗುವ ಸಂದರ್ಭಗಳು ಇವೆ, ರಕ್ತವನ್ನು ಪರೀಕ್ಷಿಸಿ ಆ ಕ್ರಿಮಿಗಳನ್ನು ಹುಡುಕಿತೆಗೆಯುವದು ಬಹಳ ಶ್ರಮವುಳ್ಳ ಮತ್ತು ಪ್ರಾಯಶಃ ಅಸಾಧ್ಯವಾದ ಕೆಲಸ, ಇತ್ಯಾದಿ ಮತ ಕಾಣುತ್ತದೆ. ಆ ಪುಸ್ತಕ ಮುದ್ರಿತವಾದನಂತರ ಇಷ್ಟರಲ್ಲಿಯೇ ಎಷ್ಟೆಲ್ಲ ವಿಚಾರ ನಡದಿದೆಯೋ ತಿಳಿಯ ಬೇಕಷ್ಟೆ ಹೀಗೆ, ವಿಷಮಜ್ವರದ ಬೇರಬೇರೆ ಜಾತಿಗೆ ಬೇರೆಬೇರೆ ನಿದಾನವನ್ನು ಕಂಡುಹಿಡ ವಾಗ್ಯೂ, ಚಿಕಿತ್ಸಾಭಾಗದಲ್ಲಿ ಆ ಎಲ್ಲಾ ವಿಷಮಜ್ವರಗಳಿಗೂ ಕ್ವಿನೀನು ಒಂದು ಅಲ್ಲದೆ ಬೇರೆ ಔಷಧವಿಲ್ಲ ಎಂಬ ಅಭಿಪ್ರಾಯವೇ ಬಲಪಟ್ಟಿದೆ. ಸಂತತಿ ವೃದ್ಧಿಯಾಗುವ ಕಾಲದಲ್ಲಿ ಕ್ರಿಮಿ ಗಳು ಪ್ರತ್ಯೇಕವಾಗಿ ರಕ್ತದಲ್ಲಿರುತ್ತವಯಾದ್ದರಿಂದ, ಆಗ್ಗೆ ಅವುಗಳನ್ನು ಕ್ವಿನೀನು ಸುಲಭವಾಗಿ ಕೊಲ್ಲುತ್ತದೆ, ಆದ್ದರಿಂದ ಚಳಿ ತೊಡಗುವಾಗ್ಗೆ ಮತ್ತು ಅದಕ್ಕೆ ಮೂದಲು ಧಾರಾಳವಾಗಿ ಕ್ವಿನೀ ನನ್ನು ಕೂಡಬೇಕು, ಆ ಕಾಲ ಬರುವದರೊಳಗೆ ಪ್ರತಿದಿನ 10—30 ಗ್ರೈನ್ ವರೆಗೆ ಸರ್ತಿಗ ಳಿಂದ 3 ದಿನಗಳ ವರೆಗೆ ಕ್ವಿನೀನನ್ನು ಕೂಡಬೇಕು, ಅನಂತರ ಕಡಿಮ ಪ್ರಮಾಣದಲ್ಲಿ ಎರಡು ಮೂರು ಹಪ್ತೆಗಳು ಕಳೆಯುವ ವರೆಗೆ ಕ್ವಿನೀನನ್ನು ಕೊಡುತ್ತಾ ಬರುವದು ಒಳ್ಳೇದು, ಸಂತತ ರೂಪವಾದ ಜ್ವರದ ಕರಿಣ ಸ್ಥಿತಿ ದಾಟಿದ ಮೇಲೆ ಆರು ಹಪ್ತೆಗಳ ವರೆಗೆ ಪ್ರತಿದಿನ ಸಣ್ಣ

ಪ್ರಮಾಣದಲ್ಲಿ ಕ್ವಿನೀನನ್ನು ಕೊಡಬೇಕು, ಆ ಮೇಲೆ ಮೂರು ವರ್ಷಗಳ ವರೆಗೆ ವರ್ಷಕ್ಕೆ ಎರಡು ಸರ್ತಿ ಕ್ವಿನೀನ್ ಪ್ರದಾನದ ಕ್ರಮ ನಡಿಸುವದು ಪ್ರಶಸ್ತ, ಇವು ಎಲ್ಲಾ ಕಳೆದ ವರ್ಷದ ಪುಸ್ತಕದಲ್ಲಿ ಕಾಣುವ ನಿಶ್ಚಿತಗಳು. 1903ನೇ ಇಸವಿಯಲ್ಲಿ ಜ್ವರ ಏರಿ, ಮೈ ಇಣಗಿದ ಕೂಡಲೆ ಕ್ವಿನೀನ್ ಕೊಡುವದನ್ನು ನಿಲ್ಲಿಸಬೇಕು ಮತ್ತು ರೋಗಿಯ ಮೆದುಳಿನಲ್ಲಿ ಅಕ್ರಮ ಇದ್ದರೆ, ಅಥವಾ ಉಪದ್ರವಕರವಾದ ಅತಿಸಾರ ಇದ್ದರ, ಕ್ವಿನೀನನ್ನು ಕೊಡಬಾರದು ಎಂತ ಇತ್ತು. ಈ ಸಂಗತಿ ಹೊಸ ನಿರ್ಣಯಗಳಲ್ಲಿ ಕಾಣುವದಿಲ್ಲ. ಬಹುಶಃ ಅಂಥಾ ಸಂಗತಿಗಳಲ್ಲಿಯೂ, ವಾಂತಿಯ ದೆಸೆಯಿಂದ ಕ್ವಿನೀನು ಹೊಟ್ಟೆಯಲ್ಲಿ ನಿಲ್ಲದಾಗಲೂ, ಕ್ವಿನೀನ್‌ನೀರನ್ನು, ಮೈ ಜುಚ್ಚಿ, ನಳಿಗೆಯಿಂದ ಮಾಂಸದೊಳಗೆ, ಅಥವಾ ಶಿರೆಗಳೊಳಗೆ, ಹೊಗಿಸಬೇಕೆಂತ ಆಭಿಪ್ರಾಯ ವಿದ್ದ ಹಾಗೆ ಕಾಣುತ್ತದೆ. ಅಶಕ್ತಿ ಹೆಚ್ಚು ಇದ್ದರೆ ರೋಗಿಗೆ ಬ್ರಾಂಡಿ ಕೊಡುಸದೂ, ಅವನು ನಿದ್ರೆಯಿಲ್ಲದೆ ಪೇಚಾಡುತ್ತಾನಾದರ ಆಫೀಮನ್ನು ಕೊಡುವದೂ, ಜಸಿ ಹೆಚ್ಚು ಇದ್ದಾಗ್ಗೆ ತಣ್ಣೀರಿನ ಒತ್ತಡ ಕೊಡುವದೂ ಮುಂತಾವ್ದೆಲ್ಲ ಅವರ ಪ್ರಕಾರ ಶಾಸ್ತ್ರಸಮ್ಮತ. ತಲೆನೋವು ಮುಂತಾದ ಲಕ್ಷಣಗಳನ್ನು ಕಂಡು ಡಾಕ್ಟರರು ರಕ್ತಮೋಕ್ಷಣವನ್ನು ಮಾಡಿಸುವದು ಸರಿಯಲ್ಲ ಎಂತ 1876ನೇ ಇಸವಿಯ ಗ್ರಂಥದಲ್ಲಿ ಬರ್ಚರಿಸಿದ್ದಾರೆ, ಆದರೆ 1903ನೇ ಇಸವಿಯ ಗ್ರಂಥದಲ್ಲಿ ತಲೆನೋವು ಹೆಚ್ಚು ಇದ್ದರೆ ಕೆನ್ನೆಗಳಲ್ಲ, ಅಥವಾ ಕಿವಿಗಳ ಹಿಂಭಾಗದಲ್ಲಿ, ಒಂದೆರಡು ಜಿಗಳೆಗಳನ್ನು ಕಚ್ಚಿಸಿದರೆ ಕ್ಷೇಮವಾಗುತ್ತದೆಂತ ಬರೆದಿದ್ದಾರ. ಇತ್ತಲಾಗಿನ ಗ್ರಂಥದಲ್ಲಿ ಆ ಪ್ರಸ್ತಾಪವಿಲ್ಲ. ಮಲೇರಿಯದಲ್ಲಿ ಕ್ವಿನೀಸಿನ ಉಪಯೋಗದಂತೆ, ಎಲ್ಲಾ ಜ್ವರಗಳಲ್ಲಯೂ ಮೈಬಿಸಿಯು $102\frac{1}{2}$ ಅಥವಾ 103 ಡಿಗ್ರಿಗೆ ಮಿಕ್ಕಿರುವದಾದರೆ, ರೋಗಿಗೆ 3 ಘಂಟೆಗೆ ಒಂದಾವರ್ತಿ ತಲೆ ವಿನಾ ಸರ್ವಾಂಗ ಶರೀರವು ತಣ್ಣೀರಿನಲ್ಲಿ 15 ಅಥವಾ 20 ಮಿನಿಟುಕಾಲ ಮುಳುಗಿ ಇರುವಂತೆ ಸ್ನಾನ ಮಾಡಿಸುವ ಕ್ರಮವು ಬಲಪಡುತ್ತಲೇ ಬಂದದೆ 1920ನೇ ಇಸವಿಯ ಗ್ರಂಥದಲ್ಲಿ, ಆಸ್ಪತ್ರಿಗಳಲ್ಲಯ 100 ರೋಗಿಗಳೊಳಗೆ 6ರಿಂದ 8ರ ವರೆಗಿನವರು ಈ ಸ್ನಾನದಿಂದ ಬದುಕಿದ್ದಾರೆಂತಲೂ, ಆ ಸ್ನಾನದ ಕ್ರಮವನ್ನು ಸಂಪೂರ್ಣವಾಗಿ ಉಪಯೋಗಿಸಿದ ಒಂದು ಆಸ್ಪತ್ರಿಯಲ್ಲಿ ಮರಣದ ಪ್ರಮಾಣವು 14·8 ಶತಾಂಶಗಳಿಂದ $7\frac{1}{2}$ ಶತಾಂಶಗಳಿಗೆ ಇಳಿದದ್ದು ಕಂಡದೆಂತ ಸಹ ಬರೆಯಲ್ಪಟ್ಟದೆ. ಆ ಗುಣಗಳು ತಣ್ಣೀರಿನ ಉಪಯೋಗದಿಂದಲೇ ಉಂಟಾದ್ದೆಂತ ಹ್ಯಾಗೆ ನಿಶ್ಚಯಿಸಿದ್ದೆಂಬದು ವಿವರಿಸಲ್ಪಡಲಿಲ್ಲ.

20. ಜ್ವರವು ಪ್ರತ್ಯೇಕ ರೋಗವಲ್ಲ ಎಂದುಕೊಳ್ಳುವ ಈ ಪಾಶ್ಚಾತ್ಯ ಪಂಡಿತರು ತಮ್ಮ ಔಷಧವರ್ಗಗಳಲ್ಲಿ ಎಂಟಿಪೈರೆಟಿಕ್ಸ್ (Antipyretics) ಅಂದರೆ ಜ್ವರಹರವಾದ ಔಷಧಗಳು, ಮತ್ತು ಫೀವರ್ ಮಿಕ್ಸ್‌ಚರ್ (fever mixture), ಅಂದರೆ ಜ್ವರಹರವಾದ ಮಿಶ್ರಗಳು, ಎಂಬ ವಿಭಾಗಗಳನ್ನಿಟ್ಟುಕೊಂಡು ಉಪಯೋಗಿಸುತ್ತಿರುವದು ಅಸಂಬದ್ಧವಲ್ಲವೇ? ಒಂದು ರೋಗಕ್ಕೆ ವಿಧಿಸಲ್ಪಟ್ಟ ಔಷಧದಿಂದಲೇ ಒಹು ರೋಗಗಳು ವಾಸಿಯಾಗುತ್ತವೆಂಬದು ಮತ್ತು ಅಣಿಲೆಕಾಯಿಯ ಗುಣವನ್ನು ವರ್ಣಿಸುವಲ್ಲಿ ನಾಮತಃ ನಿರ್ದೇಶಿಸಲ್ಪಟ್ಟ ಸುಮಾರು 35 ರೋಗಗಳಲ್ಲದೆ, ಇನ್ನು ವಾತ ಮತ್ತು ಕಫಸಂಬಂಧವಾದ ಅನೇಕ ರೋಗಗಳು ಅದರಿಂದ ವಾಸಿಯಾಗುತ್ತದೆಂತ ವಾಗ್ಭಟನ ಅಷ್ಟಾಂಗಹೃದಯದಲ್ಲಿ ಉಕ್ತವಾದದ್ದು ಹಾಸ್ಯಾಸ್ಪದ ಸಂಗತಿ ಎಂಬಂತೆ ಡಾಕ್ಟರ ಕೋಮನ್‌ನವರು ಎತ್ತಿಕೊಂಡಿದ್ದಾರೆ ಅಂಥವರ ಪಕ್ಷದವರು ತ್ರ್ಯಾಹಿಕ, ಚಾತುರ್ಥಿಕ, ಸಂತತ ಮತ್ತು ದುಷ್ಟ ಅಥವಾ ಕರಣರೂಪವಾದ (pernicious)

ಮಲೇರಿಯ ಎಂಬ ಜ್ವರಗಳು ನಾಲ್ಕು ಬೇರೆಬೇರೆ ಜೀವಬೀಜ ಅಥವಾ ಕ್ರಿಮಿಗಳಿಂದ ಹುಟ್ಟು ವಂಥವು ಮತ್ತು ಬೇರೆಬೇರೆ ಲಕ್ಷಣಗಳುಳ್ಳವು ಎಂತ ವರ್ಣಿಸಿ, ಅವುಗಳಿಗೆಲ್ಲಾ ಕ್ವಿನೀನು ಒಂದೇ ಔಷಧ ಎಂತ ಸಾಧಿಸುವದು ಅಸಂಬದ್ಧವಲ್ಲವೋ? ಟಾಯ್ಫೊಯ್ಡಿನಲ್ಲಿಯೂ, ರೆಮಿ ಟ್ಟಿಂಟ ಎಂಬ ಸಂತತಜ್ವರದಲ್ಲಿಯೂ, ಜ್ವರ ಒಂದಲ್ಲದೆ ಬೇರೆ ಯಾವ ಲಕ್ಷಣವಾದರೂ ಸ್ಥಿರವಲ್ಲ ಎಂದ ಮೇಲೆ ರೋಗವು ಜ್ವರವೇ ಎಂತ ಆಗಲಿಲ್ಲವೇ? ರೋಗದ ಹೆಸರು ಲಕ್ಷಣ ವ್ಯಾಪಕವೋ, ನಿದಾನವ್ಯಾಪಕವೋ? ನಿದಾನವ್ಯಾಪಕವಾದರೆ ಆಲ್ಬ್ಯುಮೆನ್ಯುರಿಯ (albumenuria), ಡಾಯಬೆಟಿಸ್ (diabetes), ಗೌಟ್ (gout), ಜ್ಯೌಂಡಿಸ್ (jaundice), ಮುಂತಾದ ಹೆಸರುಗಳ ಉಪಯೋಗವಿರುವದು ಯಾವ ನ್ಯಾಯದ ಮೇಲೆ? ಟಾಯ್ಫೊಯ್ಡ್ ಜ್ವರವು ಒಂದು ಜೀವಜೀವ ಅಥವಾ ಕ್ರಿಮಿಯಿಂದ ಉಂಟಾಗುವಂಥಾದ್ದು ಮತ್ತು ಅದಕ್ಕೆ ಔಷಧವಿಲ್ಲ, ಆದರೆ ಆ ರೋಗದಿಂದ ಪೀಡಿತರಾದ ನೂರು ಮಂದಿಗಳಲ್ಲಿ 5 ಮಂದಿ, ಅಥವಾ ಅತ್ಯಂತ ಅಧಿಕವಾದರೆ 20 ಮಂದಿಗಿಂತ ಹೆಚ್ಚು ಸತ್ತದ್ದು ಯಾವ ಲೆಕ್ಕದಲ್ಲಿಯೂ ಕಂಡು ಬಂದದ್ದಿಲ್ಲ ಎಂದ ಮೇಲೆ ಸರಾಸರಿ ಮೇಲೆ 88 ಶತಾಂಶದ ರೋಗಿಗಳು ಔಷಧವಿಲ್ಲದೇನೇ ಮತ್ತು ಕ್ರಿಮಿ ಸಾಯದೆನೇ ಆ ರೋಗದಿಂದ ವಿಮೋಚನೆ ಹೊಂದುತ್ತಾರೆಂಬ ಊಹೆ ಸಹಜ ವಾಗಿ ಹುಟ್ಟತಕ್ಕದ್ದಲ್ಲವೋ? ಅದು ಅಹುದಾದರೆ ವಿಷಮಜ್ವರದಲ್ಲಿ ಮಾತ್ರ ಕ್ವಿನೀನನ್ನು ಕೊಟ್ಟು ನಿದಾನರೂಪವಾದ ಕ್ರಿಮಿಗಳನ್ನು ಸಂಹರಿಸದ ವಿನಾ ಜ್ವರ ಪರಿಹಾರವಾಗುವದಿಲ್ಲ ಎಂಬದಕ್ಕೆ ಏನು ಆಧಾರ? ವಿಷಮಜ್ವರವು ಸುಶ್ರುತಾದಿಗಳ ಕಾಲದಿಂದ ಇದ್ದದ್ದು ಮತ್ತು ಕ್ವಿನೀನಿನ ಉಪಯೋಗ ಇತ್ತೀಚೆಗೆ ಆರಂಭವಾದದ್ದು ಆಗಿರುತ್ತಾ, ಕ್ವಿನೀನು ಏನಾ ಆ ಜ್ವರವು ವಾಸಿ ಯಾಗುವದಿಲ್ಲ ಎಂಬದು ನಿಜವಾದರೆ, ಕ್ವಿನೀನನ್ನು ಕಂಡುಹಿಡಿಯುವದಕ್ಕೆ ಪೂರ್ವದಲ್ಲ ಬಹು ಸಹಸ್ರ ವರ್ಷಗಳ ವರೆಗೆ ಜನರು ಹ್ಯಾಗೆ ಆ ರೋಗದಿಂದ ಮುಕ್ತರಾದರು ಮತ್ತು ಕ್ವಿನೀನಿನ ಸಂಚಾರಕ್ಕೊಳಪಡದೆ ಈಗಲೂ ಇರುವ ಬಹು ಪ್ರದೇಶಗಳಲ್ಲಿ ಜನರು ಹ್ಯಾಗೆ ತಮ್ಮನ್ನು ಆ ರೋಗದಿಂದ ಕಾಪಾಡಿಕೊಳ್ಳುತ್ತಾರೆ? ಜ್ವರದ ಕ್ರಿಮಿ ದೇಹದಲ್ಲಿದ್ದಾಗ್ಯೂ ಜ್ವರ ಬಾರದಿರುವದು, ಜ್ವರ ಬಂದು ವಾಸಿಯಾಗಿ ಎಷ್ಟು ಕ್ವಿನೀನನ್ನು ಸೇವಿಸಿದಾಗ್ಯೂ ಆ ಕ್ರಿಮಿ ದೇಹದಲ್ಲಿ ಕಾಣುವದು, ಒಂದು ಸೀಯಾಳವನ್ನು ಕುಡಿದ ದಿವಸ ಅಥವಾ ದೇಹಾಯಾಸ ಮಾಡಿಕೊಂಡ ದಿವಸ, ಅಥವಾ ಅವಲಕ್ಕಿ ಮೊದಲಾದ ಕೆಲವು ಪದಾರ್ಥಗಳನ್ನು ಸೇವಿಸಿದ ದಿವಸ. ಕ್ವಿನೀನಿನಿಂದ ವಾಸಿಯಾದ ವಿಷಮಜ್ವರವು ಪುನಃ ಕಾಣಿಸಿಕೊಳ್ಳುವದು, ಇಂಥಾದ ಕ್ಕೆಲ್ಲ ಸಮಾಧಾನವೇನು? ಕ್ವಿನೀನು ಕ್ರಿಮಿಗಳನ್ನು ನಾಶಮಾಡಿ ಜ್ವರವನ್ನು ಪರಿಹರಿಸುವದು ನಿಶ್ಚಯವಾದರೆ, ಅದನ್ನು ಅದೇ ಜ್ವರದ ಲಕ್ಷಣವಾಗಿ ಕಂಡ ಕೆಲವು ಉಪದ್ರವಗಳು ಇರು ವಾಗ್ಗೆ ಮತ್ತು ಜ್ವರದ ವೇಗ ಹೆಚ್ಚು ಇರುವಾಗ್ಗೆ ಇತ್ಯಾದಿ ಕೆಲವು ಸಂದರ್ಭಗಳಲ್ಲಿ ಕೊಡ ಕೂಡದು, ಮತ್ತು ಪ್ರಮಾಣದಲ್ಲಿ ಹೆಚ್ಚು ಕಡಿಮೆ ಮಾಡಬೇಕು, ಎಂಬಂಥಾದ್ದೆಲ್ಲ ಯಾಕೆ? ರೋಗದ ನಿದಾನಕ್ಕೆ ತಕ್ಕ ಪರಿಹಾರ ಮಾಡಿದ ಕೂಡಲೇ ಅದರ ಲಕ್ಷಣಗಳು ಸಹ ವಾಸಿಯಾಗ ಬೇಕಲ್ಲವೋ? ಕ್ವಿನೀನಿನ ಸೇವನದಿಂದ ದೋಷ ಬರುವದುಂಟೋ? ಇದ್ದರೆ, ಯಾವ ದೋಷ ಗಳು, ಯಾವ ಕಾರಣದಿಂದ ಬರುತ್ತವೆ? ಕ್ವಿನೀನು ಜ್ವರದ ಕ್ರಿಮಿಗಳನ್ನು ಕೊಲ್ಲುವದಲ್ಲದೆ, ಬೇರೆ ಏನು ಕೆಲಸವನ್ನು ಶರೀರದಲ್ಲಿ ಮಾಡುತ್ತದೆ? ಜ್ವರದಿಂದ ಮುಕ್ತನಾದವನು 3 ವರ್ಷ ಗಳ ವರೆಗೆ ಪ್ರತಿ ಆರು ತಿಂಗಳಲ್ಲಿ ಕೆಲವು ದಿನ ಪಡಪೆ ಕ್ವಿನೀನನ್ನು ಸೇವಿಸುವದು ಒಳ್ಳೇದು

ಮತ್ತು ಜ್ವರಪ್ರದೇಶಕ್ಕೆ ಹೋಗುವ ಮಕ್ಕಳುಮರಿಗಳು ಪಿಡಿದು ಎಲ್ಲವರು ಅಲ್ಪ ಪ್ರಮಾಣದಲ್ಲಿ ಕ್ವಿನೀನನ್ನು ಸೇವಿಸುತ್ತಿರುವದು ಒಳ್ಳೇದು ಎಂಬದು ಅದರ ಯಾವ ಗುಣಕ್ಕಾಗಿ? ಒಮ್ಮೆ ಸೇವಿಸಿದ ಕ್ವಿನೀನಿನ ಶಕ್ತಿಯು ಆರು ತಿಂಗಳ ವರೆಗೆ ಇರುತ್ತದೊ? ಹೌದಾದರೆ, ಆ ಕ್ವಿನೀನು ಕ್ರಿಮಿಗಳನ್ನು ನಾಶಮಾಡದೆ ಜ್ವರವನ್ನು ಬಾರದ ಹಾಗೆ ತಡೆಯುವದು ಹ್ಯಾಗೆ? ಈ ವಿಧದ ಇನ್ನೂ ಅನೇಕ ಸಹಜವಾದ ಜಿಜ್ಞಾಸೆಗಳು ಹುಟ್ಟುತ್ತವೆ. ಇವುಗಳಿಗೆ ಸಮಾಧಾನ ನಾವು ನೋಡಿದ ಯಾವ ಪಾಶ್ಚಾತ್ಯ ವೈದ್ಯಗ್ರಂಥಗಳಲ್ಲಿಯೂ ಕಾಣುವದಿಲ್ಲ.

21. ಪಾಶ್ಚಾತ್ಯ ವೈದ್ಯರು ತೊಲೆ ಲೆಕ್ಕದಲ್ಲಿ ಕ್ವೀನಿನನ್ನು ಕೊಟ್ಟು ಗುಣವಾಗದ ವಿಷಮಜ್ವರವನ್ನು ಐದು ಗ್ರೈನ ಕ್ವಿನೀನಿನಿಂದಲೇ, ಆಯುರ್ವೇದ ಪ್ರಕಾರ ತಯಾರಿಸಿದ ಕಷಾಯದ ಸಹಾಯದಿಂದ, ಗುಣ ಮಾಡಿದ ಒಂದು ಸಂಗತಿಯನ್ನು ಹಿಂದಿನ 14ನೇ ಪ್ರಕರಣದಲ್ಲಿ ಎತ್ತಿದೆವ್ರ. ಆ ಕ್ವಿನೀನಿನಿಂದ ವಿಷಮವಾದ ಒಂದು ಸಂಗತಿಯನ್ನು ಇಲ್ಲಿ ಹೇಳುವೆವ್ರ ಒಂದು ಹೆಂಗಸಿಗೆ ವಿಷಮಜ್ವರಕ್ಕೆಂತ ಕ್ವಿನೀನನ್ನು ಒಬ್ಬರು ಹಳ್ಳಿ ಪಂಡಿತರು ಕೊಟ್ಟರು ಅದರಿಂದ ಆ ಹೆಂಗಸು ಸ್ಮೃತಿಯಿಲ್ಲದೆಯೂ ಯಾವ ಅಂಗಚೇಷ್ಟೆಗಳನ್ನಾದರೂ ಮಾಡಲಾರದೆಯೂ ಬಿದ್ದುಕೊಂಡಿದ್ದ ಸ್ಥಿತಿಯನ್ನು ಕುರಿತು ಪಂಡಿತರನ್ನು ವಿಚಾರಿಸಿದ್ದಲ್ಲಿ, ಅವರು ಪ್ರಯೋಜನವಿಲ್ಲ ಎಂದು ಬಿಟ್ಟರು ಆ ಕೂಡಲೇ ನೆಲದ ಮೇಲೆ ದರ್ಭೆಗಳನ್ನು ಜಡಿಸಿ ಬ್ರಾಹ್ಮಣ ವಿಧವೆಯಾಗಿದ್ದ ಆ ಹೆಂಗಸನ್ನು ಮಲಗಿಸಿ ತುಳಸೀ ಮಾಲೆ ಹಾಕಿ ಬಾಯಿಯೊಳಗೆ ತೀರ್ಥ ಹೊಯ್ದರು ಹೀಗೆ ಮಾಡಿ ಸುಮಾರು 24 ತಾಸುಗಳಾದರೂ, ಅವಳು ಸಾಯದೆ ಇದ್ದ ಹಾಗೆಯೇ ಇದ್ದಳು ಅಷ್ಟರಲ್ಲಿ ಬೇರೆ ಕೆಲಸದ ಮೇಲೆ ಆ ಗ್ರಾಮಕ್ಕೆ ಹೋಗಿದ್ದ ನಮ್ಮನ್ನು ಕರದು ರೋಗಿಯನ್ನು ಪರೀಕ್ಷಿಸಬೇಕಾಗಿ ಅಲ್ಲಿ ನೆರದಿದ್ದ ಗ್ರಾಮಸ್ಥರು ಅಪೇಕ್ಷಿಸಿದ ಮೇರೆಗೆ, ನಾವು ರೋಗಿ ಇದ್ದಲ್ಲಿಗೆ ಹೋಗಿ ನೋಡುವಾಗ್ಗೆ, ಅವಳ ನಾಡಿಯು ವಿರಳವಾಗಿ ನಡಿಯುತ್ತಿದ್ದು, ಅಶುಭ ಸೂಚನೆಗಳೇನೂ ಕಾಣದರಿಂದ, ರೋಗಿಯನ್ನು ಉಪವಾಸಮಾಡಿಸಿ ಕೊಲ್ಲದಿದ್ದರೆ ಅವಳು ಸಾಯಲೆಂತ ಹೇಳಿ, ಸಾಯಾಹ್ನ ಸವಿಾಪಿಸಿದ್ದ ಆ ಕಾಲದಲ್ಲಿಯೇ ಒಂದು ಮಾತ್ರೆಯನ್ನು ಕೊಟ್ಟು, 2ನೆ ಒಂದು ಮಾತ್ರೆಯನ್ನು ಮಧ್ಯರಾತ್ರಿ ಕೊಡುವ ಹಾಗೂ, ತನ್ಮಧ್ಯ ಹಾಲನ್ನು ಕೊಡುವ ಹಾಗೂ ಹೇಳಿ ಹೋದೆವು ಬೆಳಿಗ್ಗೆ ಆ ಹೆಂಗಸಿಗೆ ಎಚ್ಚರವಾಗಿ, ಎದ್ದು ಕೂತು, ತನಗೆ ಹಲ್ಲು ನಾಲಿಗೆಗಳನ್ನು ಉಜ್ಜುವದಕ್ಕೆ ಒಂದು ಕಡ್ಡಿ ಬೇಕೆಂತ ಕೇಳಿದಳು. ಹೀಗೆ ಅನೇಕರಿಗೆ ವಿಚಾರವಿಲ್ಲದೆ ಕ್ವಿನೀನನ್ನು ಕೊಟ್ಟದರಿಂದ ಮೆದುಳಿನ ಅಕ್ರಮ ಉಂಟಾಗಿದೆ ಮುಂಬಯಿ ಮುಂತಾದ ದೇಶಗಳಿಗೆ ಹೋಗಿ ಸಂಪಾದಿಸಿದ ವಿಷಮಜ್ವರವು ಕ್ವಿನೀನಿನಿಂದ ಪರಿಹಾರವಾಗದೆ, ಬಹುಕಾಲ ದಣಿದು, ನಮ್ಮಲ್ಲಿಗೆ ಚಿಕಿತ್ಸೆಗೆ ಆಗಾಗ್ಗೆ ಬಂದ ರೋಗಿಗಳು ಒಹಳ ಮಂದಿ ಇದ್ದಾರ್ರೂ, ನಾವ್ರ ಕಳದ ಐದು ವರ್ಷಗಳಿಂದ ಕ್ವಿನೀನನ್ನು ಉಪಯೋಗಿಸಿದ್ದಿಲ್ಲ. ನಮ್ಮಲ್ಲಿಯ ಚಿಕಿತ್ಸೆಯಿಂದ ಅಂಥಾ ರೋಗಿಗಳಲ್ಲಿ ಯಾರಿಗಾದರೂ ವಾಸಿಯಾಗಲಿಲ್ಲ ಎಂಬ ವರ್ತಮಾನ ನಾವು ಕೇಳಲಿಲ್ಲ

22. ಅದೆಲ್ಲ ಹ್ಯಾಗಿದ್ದರೂ, ಕ್ವಿನೀನು ಪ್ರಾಯಶಃ ವಿಷಮಜ್ವರವನ್ನು ತಡೆದು ನಿಲ್ಲಿಸುತ್ತದೆಂಬದಕ್ಕೆ ಸಂದೇಹವಿಲ್ಲ ನಮ್ಮ ಅನುಭವ ಹ್ಯಾಗಂದರೆ ಚಳಿಯುಕ್ತವಾದ ಮತ್ತು ಪೂರ್ಣವಾಗಿ ಬಿಟ್ಟು ಬರುವ ವಿಷಮ-ಜ್ವರದಲ್ಲಿ ಚಳಿ ಬರುವ ಕಾಲದಿಂದ 4 ಘಂಟೆ ಪೂರ್ವದಲ್ಲಿ 3-4 ಗ್ರೈನ, ಅನಂತರ 2 ಘಂಟೆಯಲ್ಲಿ 3-4 ಗ್ರೈನ ಕ್ವಿನೀನನ್ನು ಪ್ರಾಯಸ್ಥನಾದ

ರೋಗಿಗೆ ಒಂದೆರಡು ಚಮಚೆ ಲಿಂಬೇರಸದಲ್ಲಿ ಒಂದು ಚಿಮಿಟಿ ಸಕ್ಕರೆ ಕೂಡಿಸಿ ಕೊಟ್ಟರೆ, ಅದೇ ದಿನದ ಚಳಿ ಬಾರದೆ ನಿಲ್ಲುತ್ತದೆ. ಹಾಗೆ ನಿಂತರೆ, 2ನೆ, 3ನೆ ಸರ್ತಿಯ ದಿನಗಳಲ್ಲಿ ಬೆಳಿಗ್ಗೆ ಒಮ್ಮೆ ಮಾತ್ರ ಅದೇ ರೀತಿ ಕ್ವಿನೀನನ್ನು ಸೇವಿಸಿ ಪಥ್ಯದಲ್ಲಿದ್ದರೆ, ಜ್ವರದ ತಾತ್ಕಾಲಿಕ ಪರಿಹಾರವಾಗುತ್ತದೆ ರೋಗದ ಮೂಲ ಹೋಯಿತೆಂತ ಧೈರ್ಯ ಪಡಬೇಕಾದರೆ, ದೋಷಕ್ಕೆ ತಕ್ಕವಾಗಿ ಆಯುರ್ವೇದರೀತ್ಯಾ ಔಷಧವನ್ನು ಮಾಡಿ, ದೋಷಗಳನ್ನು ಸ್ವಸ್ಥ ಸ್ಥಿತಿಗೆ ತರಬೇಕು ಪ್ರಥಮ ದಿನದಲ್ಲಿಯೇ ಜ್ವರ ನಿಲ್ಲದಿದ್ದರೆ ಕ್ವಿನೀನು ಆ ರೋಗಿಗೆ ನಿಷ್ಪ್ರಯೋಜನ ಎಂತ ನಿಶ್ಚಯಿಸಿ, ಬೇರೆ ಚಿಕಿತ್ಸೆಯನ್ನು ಮಾಡುವದೇ ಪ್ರಶಸ್ತ ಹಾಗೆ ಮಾಡದೆ, ದಿನಕ್ಕೆ 30-60 ಗ್ರೈನ ಪ್ರಕಾರ ಕ್ವಿನೀನನ್ನು ಸೇವಿಸುತ್ತಾ ಬಂದರೆ, ಒಳಗಿನ ಜ್ವರಕಾರಣವಾದ ಕ್ರಿಮಿಗಳಿಗೆ ಅದರಿಂದ ಎಷ್ಟು ಸಂಕಟವುಂಟಾಗುತ್ತದೊ, ಅದಕ್ಕಿಂತ ಹಚ್ಚಲ್ಲದಿದ್ದರೆ ಅಷ್ಟೇಯಾದರೂ ರೋಗಿಗೂ ಸಂಕಷ್ಟ ಉಂಟಾಗುತ್ತದೆಂಬದರಲ್ಲಿ ಸಂಶಯವಿಲ್ಲ ಜ್ವರದ ಶಾಂತತೆಗೋಸ್ಕರ ತಣ್ಣೀರ ಸ್ನಾನ ಮಾಡಿಸುವದು, ಅಶಕ್ತಿಗ ಬ್ರಾಂಡಿ ಕೊಡುತ್ತಾ ಬರುವದು, ಅನಿದ್ರೆಗೆ ಅಫೀಮು ಕೊಡುವದು ಇತ್ಯಾದಿ ಯೋಗಗಳು ಬುಡದಲ್ಲಿ ಪಸೆಯಿಲ್ಲದರಿಂದ ಒಣಗುತ್ತಾ ಬರುವ ಮರದ ಎಲೆಗಳಿಗೂ ಕೊಂಬೆಗಳಿಗೂ ನೀರನ್ನು ಸುರಿದರೆ ಎಷ್ಟೋ ಅಷ್ಟೇ ಪ್ರಯೋಜನವುಳ್ಳವು. ಎಲೆಗಳು ತತ್ಕಾಲ ಸ್ವಲ್ಪ ಸಜೀವವಾಗಿ ಕಂಡರೂ ಮರ ಸಾಯುವದು ನಿಶ್ಚಯ ಮಾತ್ರವಲ್ಲದೆ, ಅದು ಬೇಗನೇ ಕುಂಬಾಗಿ ಕೊಳೆಯಲಿಕ್ಕಾರಂಭಿಸುವದು ಈ ವಿಷಯದಲ್ಲಿ ಒಬ್ಬರು ಪಾಶ್ಚಾತ್ಯ ಡಾಕ್ಟರರೇ* ಹೇಳುವದೇನೆಂದರೆ —

*Frederic M Rooster, B S, M D (*Herald of Health* of April 1916)

"ಈ ವಿಷಗಳು ದೇಹದೊಳಗೆ ಆಕಾರ ಹೊಂದಲಿಕ್ಕೆ ಆರಂಭವಾದ ಕೂಡಲೇ, ಬಿಸಿಯು ಏರಲಿಕ್ಕಾರಂಭಿಸುತ್ತದೆ, ಯಾಕೆಂದರೆ ಯಕೃತ್ತಿನಲ್ಲಿಯೂ, (lymphatic glands) ಮೇದೊಪಿಂಡಗಳಲ್ಲಿಯೂ, ರಕ್ತದಲ್ಲಿಯೂ ಮತ್ತು ಬೇರೆ (tissues) ಕಲೆಗಳಲ್ಲಿಯೂ ಸುಡತ (ಪಚನಕ್ರಮ)ವು ಅಧಿಕವಾಗಿ ನಡೆಯುತ್ತದೆ ಜ್ವರವು ಅಧಿಕ ಪಚನದ (oxidation) ಲಕ್ಷಣವಾಗಿರುತ್ತದೆ. ಈ ಬಿಸಿಯ ಏರಿಕೆಯನ್ನು ತಡದರೆ, ವಿಷಗಳು ಆಕಾರ ಹೊಂದುವಂಧಾದ್ದು ಮುಂದರಿಸಿ ಮರಣವು ಸಹಜವಾಗಿ ಸಂಭವಿಸುವದಾಗುತ್ತದೆ ವಸ್ತುತಃ ಈ ಅಭಿಪ್ರಾಯವನ್ನು ಸ್ಥಾಪಿಸುವ ಪರೀಕ್ಷೆಗಳು ಮಾಡಲ್ಪಟ್ಟವೆ. ಕೆಲವು ಕೋಳಿಮರಿಗಳಿಗೂ 'ಗಿನಿ' ಜಾತಿ ಹಂದಿಗಳಿಗೂ ವಿಷಜ್ವರದ ಕ್ರಿಮಿಗಳ ಪಾಕನ್ನು ಹಾಕಿ ಬಿಸಿಯು ಏರದಂತೆ ಅವುಗಳನ್ನು ತಣ್ಣೀರಿನಲ್ಲಿ ಇರಿಸಲಾಯಿತು. ಅವು ಬೇಗನೇ ಸತ್ತವು. ಬೇರೆ ಕೆಲವಕ್ಕೆ ಬಿಸಿಯು ಅನೇಕ ಡಿಗ್ರಿ ವರಗೆ ಏರುವ ಹಾಗೆ ಬಿಡಲಾಗಿ, ಅವುಗಳಲ್ಲ ಬದುಕಿದವು ದೇಹವು ಸ್ವಾಭಾವಿಕವಾಗಿಯೇ ತನ್ನಲ್ಲಿ ಸೇರಿದ ಎಲ್ಲಾ ವಿಷಗಳ ಧ್ವಂಸನಕ್ಕೋಸ್ಕರ, ಅಧಿಕವಾಗಿ ಬಿಸಿಯನ್ನುಂಟುಮಾಡಿ, ಪ್ರಯತ್ನಿಸುತ್ತದೆ (ದೇಹದೊಳಗಿನ) ಉಷ್ಣೋತ್ಪಾದನಾಧಿಕ್ಯದ ಲಕ್ಷಣವಾದ ಎಲ್ಲ ಜ್ವರಗಳಲ್ಲಿ ವಿಷದ ಫಲವನ್ನು ಪ್ರತಿರೋಧಿಸತಕ್ಕಂಥ ಏಂಟಿಟೋಕ್ಸಿನ (antitoxin) ಎಂಬ ವಸ್ತುವನ್ನು ರಕ್ತವು ಶ್ರಮಪಟ್ಟು ಉಂಟುಮಾಡುತ್ತದೆ ಆದ್ದರಿಂದ ಜ್ವರವು ವಿಷದ ಅಂಟುವಿಕೆಗೆ ಒಂದು ರಕ್ಷೆ ಎಂಬದು ಸ್ಪಷ್ಟ

'ಜ್ವರವನ್ನು ಈ ಲಕ್ಷ್ಯದಿಂದ ನೋಡಿದ್ದಲ್ಲಿ, ಕ್ವಿನೀನು, ಎಂಟಿಪ್ಯಾರಿನ್, ಫೆನಸೆಟಿನ್ ಮತ್ತು ಬೇರೆ ಇದ್ದಲಿನಿಂದಾಗುವ ತಾರಿನ ಯೋಗಗಳು, ಮುಂತಾದ ಔಷಧಗಳಿಂದ ಜ್ವರ

ವನ್ನು ಶೀಘ್ರವಾಗಿ ಇಳಿಸುವದು ಶಾರೀರಶಾಸ್ತ್ರಕ್ಕೂ ರಸಾಯನಶಾಸ್ತ್ರಕ್ಕೂ ವಿರುದ್ಧ ಮಾತ್ರ ವಲ್ಲ; ಅದು ರೋಗಿಗೆ ಖಂಡಿತವಾಗಿ ಕೆಡಕನ್ನು ಮಾಡಿ, ಅವನು ಸ್ವಸ್ಥನಾಗುವ ಸಂಭವ ವನ್ನು ಕಡಿಮೆಮಾಡುತ್ತದೆ ಸ್ವಲ್ಪ ವರ್ಷಗಳ ಹಿಂದೆ ಇಂಥಾ ಎಂಟಿಪ್ಯಾರೆಟಿಕ್ (ಜ್ವರ ತಗ್ಗಿಸ ತಕ್ಕ) ಎನ್ನುವ ಔಷಧಗಳನ್ನು ಬಹಳವಾಗಿ ಉಪಯೋಗಿಸಿದರಿಂದಲೇ ಹೃದಯದ ಕೆಲಸ ನಿಂತುಹೋದ್ದರ, ಮತ್ತು ನರಗಳ ಸಂಬಂಧವಾದ ಅಕ್ರಮಗಳ, ಅನೇಕ ದೃಷ್ಟಾಂತಗಳು ಉಂಟಾದ್ದೆಂತ ತೋರಿಸಬಹುದು

"ಹಾಗಾದರೆ ಜ್ವರದಲ್ಲಿ ಮತ್ತು ಬಿಸಿಯನ್ನು ತಗ್ಗಿಸುವ ಯತ್ನದಲ್ಲಿ ತಣ್ಣೀರನ್ನು ಅಥವಾ ನೀರಿನ ಗಟ್ಟಿಯನ್ನು (ice) ಉಪಯೋಗಿಸುವದು ದೋಷಕರವಲ್ಲವೋ ಎಂಬ ಜಿಜ್ಞಾಸವು ಅನೇಕರಲ್ಲಿ ಸ್ವಾಭಾವಿಕವಾಗಿ ಹುಟ್ಟುತ್ತದೆಂಬದು ನಿಸ್ಸಂದೇಹ." (ಈ ಪ್ರಶ್ನೆಗೆ 'ಅಲ್ಲ' ಎಂತ ಉತ್ತರ ಒರದು, ತಣಸಿನಿಂದ ನರಗಳ, ಯಕೃತ್ತಿನ ಮತ್ತು ವೃಕ್ಕುಗಳ ಕೆಲಸವು ಅಧಿಕವಾಗಿ, ವಿಷವು ಹೊರಗೆ ಹೋಗಬಹುದೆಂತ ಹೇಳಿ) "ತಣ್ಣೀರಸ್ನಾನದಿಂದ (ದೇಹದೊಳಗಿನ) ಬಿಸಿ ಯನ್ನುಂಟುಮಾಡುವ ಸ್ಥಾನಗಳ ಕೆಲಸವನ್ನು ಹಿಡಿದು ನಿಲ್ಲಿಸುವದಲ್ಲದೆ, ಎಷವರಿಹಾರಕ ಫಲವಿಲ್ಲ ಎಂತಾದರೆ, ಅದು ಆ ಔಷಧಗಳಷ್ಟೇ ಬಾಧಕಕರ "

'ಈ ಸ್ಥಾನದಿಂದ ಅದನ್ನು ನೋಡಲಿಕ್ಕಾರಂಭಿಸಿದಂದಿನಿಂದ ಜ್ವರವು 104 ಡಿಗ್ರಿಗೆ ಏರಿ, ಅಲ್ಲಿಯೇ ನಿಂತೆಂಬದರಿಂದ ಮಾತ್ರ ರೋಗಿಗೆ ಹಗಲೂ ರಾತ್ರಿಗಳಲ್ಲೆಲ್ಲಾ ತಣ್ಣೀರು, ತಣ್ಣೀರ ವತ್ತಡಗಳು, ತಣ್ಣೀರಬಟ್ಟಿಗಳ ಹೊದಿಸುಎಕೆಗಳು, ಅಥವಾ ಕರಾರದಲ್ಲಿರಿಸಿ ತಣ್ಣೀರಸ್ನಾನಮಾಡಿಸುವದು ಮತ್ತು ಐಸಿಲೇಪ ಗಳು, ಇವುಗಳನ್ನುಪಯೋಗಿಸುವ ಪಕ್ಷವನ್ನು ನಾನು ಯಾವಾಗಲಾದರೂ ಸಮರ್ಥಿಸಿದ್ದಿಲ್ಲ." ಬ್ರಾಂಡಿಯ ಉಪಯೋಗದ ಕುರಿತು ಇನ್ನೊಬ್ಬರು ಡಾಕ್ಟರರು* ಹೇಳುವದೇನೆಂದರೆ "ಕೆಲವು ದಶವರ್ಷಗಳ ಹಿಂದೆ ಅನೇಕ ರೋಗಗಳಿಗೆ ಮದ್ಯವು ಸಾಧಾರಣವಾದ ಪರಿಹಾರವಾಗಿತ್ತು. ಟಾಯ್ಫೊಯ್ಡ್ ಜ್ವರವು ಇದಕ್ಕೊಂದು ಒಳ್ಳೇ ದೃಷ್ಟಾಂತ ಅರ್ಧಶತಮಾನದ ಪೂರ್ವದಲ್ಲಿ ಅದಕ್ಕೆ ಮದ್ಯವು ನಿತ್ಯವಾದ ಚಿಕಿತ್ಸೆಯಾಗಿತ್ತು ಆದರೆ ಈ ಕಾಲದಲ್ಲಿ ಆಧುನಿಕ ಅನುಭವವುಳ್ಳ ಎಲ್ಲಾ ವೈದ್ಯರು ಈ ರೋಗದಲ್ಲಿ ಮದ್ಯದ ಉಪಯೋಗ ವನ್ನು ಪ್ರತಿಷೇಧಿಸುತ್ತಾರೆ ಟಾಯ್ಫೊಯ್ಡ್ ಜ್ವರಕ್ಕೆ ಮದ್ಯ ಕೊಡುವ ದಿವಸಗಳಲ್ಲಿ ರೋಗಿಗೆ ಟಾಯ್ಫೊಯ್ಡಿನ ಕ್ರಿಮಿಗಳೊಂದಿಗೆ ಮಾಡಬೇಕಾದ ಯುದ್ಧಕ್ಕಿಂತಲೂ ತನ್ನ ದೇಹದೊಳಗೆ ಹೊಗಿಸಿದ ಮದ್ಯದೊಂದಿಗೆ ಯುದ್ಧವನ್ನು ಮಾಡುವದು ಹೆಚ್ಚು ಕಷ್ಟವಾಗಿರಬೇಕೆಂತ ನಾವು ಹೇಳುವೆವು."

*V I Mann, M D (*Herald of Health's* temperance annual 1915)

ಮದ್ಯ ಮುಂತಾದ ತೀಕ್ಷ್ಣವಾದ ಉತ್ತೇಜನಗಳ ಮತ್ತು ತಣ್ಣೀರಿನ ಸ್ನಾನಾದಿಗಳ ಉಪ ಯೋಗದ ವಿಷಯದಲ್ಲಿ ನಮ್ಮ ಅಭಿಪ್ರಾಯವೇನೆಂದರೆ ರೋಗಕ್ಕೆ ತಕ್ಕವಾದ ಔಷಧವಿದ್ದು, ಅದನ್ನು ಸೇವಿಸಿ ಜೀರ್ಣಿಸಲಿಕ್ಕೆ ಬೇಕಾದಷ್ಟು ಸಹ ಶಕ್ತಿಯು ರೋಗಿಗೆ ಇಲ್ಲವೆಂತಲೂ, ಅಂಥಾದ್ದರ ಉಪಯೋಗದಿಂದ ಅಷ್ಟು ಶಕ್ತಿ ರೋಗಿಗೆ ಒರಬಹುದೆಂತಲೂ ಕಂಡ ಸಂಗತಿಯಲ್ಲಿ ಮಾತ್ರ, ತಾತ್ಕಾಲಿಕ ಪ್ರಯೋಗವಾಗಿ ಅವುಗಳನ್ನು ಉಪಯೋಗಿಸಬಹುದಲ್ಲದೆ, ಅವುಗ ಳನ್ನು ಈಗಿನಂತೆ ಚಿಕಿತ್ಸಾಂಗವಾಗಿ ಪದೇಪದೇ ಉಪಯೋಗಿಸುವದು ಶುದ್ಧ ತಪ್ಪು. ಕೆಲವು ಸಂಗತಿಯಲ್ಲಿ ಮಾತನಾಡುವ ಶಕ್ತಿಯಿಲ್ಲದೆ ಸಾಯುವದಕ್ಕೆ ಸಮೀಪಿಸಿದ ರೋಗಿಗೆ ಕಸ್ತೂ

ರ್ಯಾದಿ ಮಾತ್ರೆಗಳನ್ನು ಕೊಡುವದರಿಂದ ಆ ರೋಗಿಗೆ ಒಂದೆರಡು ಮಾತುಗಳನ್ನಾದರೂ ಆಡುವ ಶಕ್ತಿ ಬರುವದುಂಟು. ಆದರೆ ಅದರಿಂದ ಅವನ ಮೃತಿಯು ದೂರವಾಗಲಾರದು. ಆದ್ದರಿಂದ ಅಂಥಾ ಮಾತ್ರೆಗಳನ್ನು ಸಾಧಾರಣವಾಗಿ ಕೊಡದೆ ಇರುವದು ಪ್ರಶಸ್ತ ಎಂಬ ಹಾಗಿನ ವಿಚಾರವನ್ನೇ ಮದ್ಯಾದಿಗಳ ಉಪಯೋಗದಲ್ಲಿ ಮಾಡತಕ್ಕದ್ದು.

23 ಈಗ ಆಯುರ್ವೇದಗ್ರಂಥಗಳಲ್ಲಿ ಉಕ್ತವಾಗಿರುವ ಜ್ವರಚಿಕಿತ್ಸೆಯ ಕೆಲವು ತತ್ವ ಗಳನ್ನು ನಿರ್ದೇಶಿಸುವದು ನಮ್ಮ ವಾಚಕರಿಗೆ ಆಯುರ್ವೇದೀಯ ಮತ್ತು ಪಾಶ್ಚಾತ್ಯ ಕ್ರಮ ಗಳ ಗುಣದೋಷಗಳನ್ನು ತೋಲನ ಮಾಡಿ ನೋಡುವದಕ್ಕೆ ಸಹಾಯಕರವಾಗಬಹುದು. ಆಯುರ್ವೇದದಲ್ಲಿ ಪ್ರಸಂಗ-ಗಾತ್ರಸ್ಪರ್ಶ-ನಿಃಶ್ವಾಸ-ಸಹಭೋಜನ-ಸಹಶಯ್ಯಾ-ಸಹಾಸನ-ವಸ್ತ್ರ ಮಾಲ್ಯಾನುಲೇಪನಗಳಿಂದ ಒಬ್ಬರಿಂದೊಬ್ಬರಿಗೆ ಅಂಟುವ ಸಾಂಕ್ರಾಮಿಕ ರೋಗಗಳೊಳಗೆ ಜ್ವರವು ಒಂದಾಗಿ ಉಕ್ತವಾಗಿದೆ. ಚರಕಾಚಾರ್ಯನು ದ್ವಂದ್ವಜ-ತ್ರಿದೋಷಜ ಜ್ವರಗಳ (ಟಾಯ್ಫೊಯ್ಡೆಂಬದು ಇವುಗಳೊಳಗೊಂದು) ನಿದಾನ ಹೇಳುವಲ್ಲಿ ಎಷಕಲಿತಿದ್ದ ನೀರಿನ ಉಪ ಯೋಗ, ಗರಿಗಳಲ್ಲಿರುವ ವಿಷಪದಾರ್ಥಗಳ ತಗಲುಎಕೆ, ಅಸಾತ್ಮ್ಯವಾದ ವಾಸನೆಯು ಮೂಗಿನೊಳಗೆ ಸೇರುವದು, ಋತುದೋಷ ಸಹ, ಆ ಜ್ವರಗಳ ಕಾರಣಗಳೊಳಗೆ ಸೇರಿದ ವಾಗಿ ಹೇಳಿದ್ದಾನೆ. ಪಾಶ್ಚಾತ್ಯ ಡಾಕ್ಟರರು ಶೋಧಿಸಿ ಕಂಡುಹಿಡಿದ ಕ್ರಿಮಿಗಳು ಆಯು ರ್ವೇದದಲ್ಲಿ ಉಕ್ತವಾದ ವಿಷದಲ್ಲಿರುವಂಥವಾಗಿರಬಾರದೊ? ಹಾಗಿದ್ದರೆ ಕ್ರಿಮಿಗಳನ್ನು ನಾಶಪಡಿಸುವ ಪ್ರಯತ್ನಕ್ಕಿಂತ ಆ ಕ್ರಿಮಿಗಳಿಗೆ ಕಾರಣವಾದ ವಿಷದ ಪರಿಹಾರಕ್ಕೆ ಯತ್ನಿಸು ವದೇ ಉಚಿತವಲ್ಲವೋ? ಬೇರಬೇರ ಕ್ರಿಮಿಗಳಿಂದ ಉತ್ಪನ್ನವಾದ ಬೇರೆಬೇರೆ ಜಾತಿ ವಿಷಮ ಜ್ವರಗಳು ಕ್ವಿನೀನಿನಿಂದಲೇ ಪರಿಹಾರವಾಗುತ್ತವೆಂಬದರಿಂದ ಆ ಕ್ರಿಮಿಗಳೆಲ್ಲಾ ಒಂದೇ ಜಾತಿ ವಿಷದಿಂದ ಉದ್ಭವವಾಗುವದಾಗಿರಬಹುದೆಂಬ ಅಭಿಪ್ರಾಯವು ಬಲಪಡುವದಿಲ್ಲವೋ? ಗೊಬ್ಬರದ ದೋಷಪರಿಹಾರಕ್ಕೆ ಗೊಬ್ಬರದ ಹುಳಗಳ ನಾಶನಕ್ಕೆ ಯತ್ನಿಸುವದಕ್ಕಿಂತ ಗೊಬ್ಬರ ವನ್ನೆ ದೂರಹಾಕುವದು ಒಳ್ಳೇದಲ್ಲವೋ? ಪ್ಲೇಗರೋಗದಲ್ಲಿ ಕಾಣುವ ಕ್ರಿಮಿಯನ್ನು ಬೇರೊಂದು ಕ್ರಮದಲ್ಲಿ ಬೆಳಿಸಿದರೆ, ಅದು ರೂಪಾಂತರವನ್ನು ಹೊಂದುತ್ತದೆಂತ ಒಬ್ಬರು ಪಾಶ್ಚಾತ್ಯ ಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ ಎಂತ ವರ್ತಮಾನಪತ್ರಗಳು ಕಲವು ಕಾಲದ ಹಿಂದೆ ಪ್ರಕಟಿಸಿದ್ದು ನೆನವು ಬರುತ್ತದೆ ಅದು ಹ್ಯಾಗಿದ್ದರೂ ನಾನಾ ರೋಗಗಳಲ್ಲಿ ಕಾಣುವ ನಾನಾ ಕ್ರಿಮಿಗಳು ಆಯಾ ರೋಗಗಳ ಲಕ್ಷಣಗಳಲ್ಲದೆ, ಆ ರೋಗಗಳಿಗೆ ಹೇತುವಲ್ಲ ಎಂಬ ಮತವು ನಿರ್ಧಾರಣೀಯವಾಗಿ ಉಂಟು. ಸಾಧಾರಣವಾಗಿ, ವಿಷಮವಲ್ಲದ ಬಿಡದೆ ಬರುವ ಜ್ವರವು ಪ್ರಥಮ ಆರು ದಿನಗಳ ಪರಿಯಂತ ತರುಣ, ಅನಂತರ 12ನೇ ದಿನದ ವರೆಗೆ ಮಧ್ಯ, ಆ ಮೇಲೆ ಜೀರ್ಣ ಎಂತ ಆಯುರ್ವೇದದಲ್ಲಿ ವಿಭಾಗಮಾಡಲ್ಪಟ್ಟು, ತರುಣಜ್ವರದಲ್ಲಿ ಸ್ನಾನಗಳು, ಲೇಪನಗಳು, ಸ್ನೇಹಗಳು, ಶೋಧನಗಳು, ಹಗಲುನಿದ್ರೆ, ವ್ಯವಾಯ, ವ್ಯಾಯಾಮ, ತಣ್ಣೀರು, ಸಿಟ್ಟು, ಬೀಸುವ ಗಾಳಿ, ಭೋಜನ ಸಹ ವರ್ಜ್ಯವಾಗಿ ಹೇಳಲ್ಪಟ್ಟವೆ. ಟಾಯ್ಫೊಯ್ಡಿನಲ್ಲಿ ದ್ರವ ಪದಾರ್ಥವನ್ನೇ ಆಹಾರವಾಗಿ ಕೊಡಬೇಕೆಂಬದು ಆಯುರ್ವೇದಕ್ಕೆ ಸಮ್ಮತವಾದರೂ, ಹಾಲು ಸ್ನೇಹಯುಕ್ತವಾದ್ದರಿಂದ ತರುಣಜ್ವರದಲ್ಲಿ ಪ್ರಶಸ್ತವಲ್ಲ ಜ್ವರದ ವೇಗವನ್ನು ತಡೆಯಲಿಕ್ಕೆ ಪ್ರಯತ್ನಿಸಬಾರದೆಂತ ಡಾಕ್ಟರ ರೂಸಿಟರ ದೊರೆಗಳು ಹೇಳಿದ ಮತವು ಆಯುರ್ವೇದಸಮ್ಮತ ವಾದದ್ದು ಹಾಲು ಮತ್ತು ಔಷಧಸಿದ್ಧವಾದ ತುಪ್ಪ ಜೀರ್ಣ (ಹಳೇ) ಜ್ವರದಲ್ಲಿ ಬಹಳ

ಪ್ರಶಸ್ತ. ಜ್ವರಾರಂಭದಲ್ಲಿ ರೋಗಿಯು ಬಲಿಷ್ಠನಾಗಿದ್ದರೆ ಒಂದು ರಾತ್ರಿ, ಮೂರು ರಾತ್ರಿ, ಅಥವಾ ಒಂದು ಹಗಲೂರಾತ್ರಿ ಬಾಯಾರಿಕೆಗೆ ಮಾತ್ರ ಕುಡಿಯುತ್ತಾ, ಲಂಘನಮಾಡುವದ ರಿಂದ ಜಠರಾಗ್ನಿಯು ಆಹಾರವಿಲ್ಲದೆ ದೋಷಗಳನ್ನೇ ಪಚನಮಾಡಿ ಅನೇಕ ಜ್ವರಗಳಲ್ಲಿ ಆರೋಗ್ಯವನ್ನುಂಟುಮಾಡುವದು. ಆದರೆ ಲಂಘನವು ವಾತವನ್ನು ಪ್ರಕೋಪಮಾಡುತ್ತದಾದ್ದರಿಂದ, ವಾತದೋಷವೇ ಪ್ರಧಾನವಾಗಿದ್ದ ರೋಗಿಗೆ, ಮತ್ತು ಬಸುರಿ, ಬಾಲ, ವೃದ್ಧ, ದುರ್ಬಲ ಮುಂತಾದ ವರ್ಗಗಳಿಗೆ ಸೇರಿದ ರೋಗಿಗಳಿಗೆ ಲಂಘನವು ಹಿತವಲ್ಲ. ಲಂಘನದಿಂದ ರೋಗಿಯ ಬಲ ಕಡಿಮೆಯಾಗದಂತೆ ನೋಡಿಕೊಳ್ಳಬೇಕು. ಇಷ್ಟೇ ಅಲ್ಲದೆ ಸಾಮ (ಅಜೀರ್ಣವುಳ್ಳ), ನಿರಾಮ ಎಂಬ ಜ್ವರಭೇದವನ್ನೂ, ದೀಪನ, ಪಾಚನ, ಶಮನ ಎಂಬ ಔಷಧಭೇದಗಳನ್ನೂ, ಅವುಗಳನ್ನುಪಯೋಗಿಸುವದಕ್ಕೆ ಯುಕ್ತಕಾಲವನ್ನು ರೋಗಿಯ ಪರೀಕ್ಷೆಯಿಂದ ತಿಳಿಯುವ ಕ್ರಮವನ್ನೂ, ಇವೇ ಮುಂತಾದ ಅನೇಕ ಸೂಕ್ಷ್ಮವಿಚಾರಗಳನ್ನು ಸೂಚಿಸಿ, ಪ್ರತಿವರ್ಗದ ಜ್ವರಕ್ಕೆ ಪ್ರತ್ಯಪ್ರತ್ಯೇಕ ಔಷಧಯೋಗವನ್ನು ಬಹುಬುದ್ಧವಾಗಿ ಆಯುರ್ವೇದವು ಹೇಳುತ್ತದೆ ತರುಣಜ್ವರದಲ್ಲಿ ಔಷಧ ಕೊಡುವ ಅವಶ್ಯವಿದ್ದಲ್ಲಿ ಅದಕ್ಕೆ ಯುಕ್ತವಾಗಿ ಹೇಳಲ್ಪಟ್ಟ ಔಷಧಗಳೊಳಗೊಂದನ್ನೇ ಕೊಡತಕ್ಕದ್ದೆಂತಲೂ, ತರುಣಜ್ವರದಲ್ಲಿ ಚೊಗರುರುಚಿಯುಳ್ಳ ಎಲ್ಲ ಕಷಾಯಗಳು ನಿಷಿದ್ಧವೆಂತಲೂ, ಜ್ವರಾತಿಸಾರದಲ್ಲಿ ಜ್ವರಕ್ಕೂ ಅತಿಸಾರಕ್ಕೂ ಪ್ರತ್ಯಪ್ರತ್ಯೇಕ ಚಿಕಿತ್ಸೆ ಮಾಡದೆ ೨ ಎರಡು ಲಕ್ಷಣಗಳಿಗೂ ಪ್ರತೀಕಾರವಾದ ಕಷಾಯಾದಿಯೋಗಗಳನ್ನೇ ಉಪಯೋಗಿಸತಕ್ಕದ್ದೆಂತಲೂ ಆಯುರ್ವೇದಗ್ರಂಥಗಳು ಹೇಳುತ್ತವೆ. ಜ್ವರವು ಎಲ್ಲಾ ರೋಗಗಳೊಳಗೆ ಅತಿ ಕಠಿನವಾದ್ದಾಗಿ ತಿಳಿದು, ಆಯುರ್ವೇದಗ್ರಂಥಕಾರರು ಅದರ ಚಿಕಿತ್ಸೆಯಲ್ಲಿ ಬಹು ಸೂಕ್ಷ್ಮವಿಚಾರಗಳನ್ನು ಮಾಡಿ, ಬಹು ವಿಸ್ತಾರವಾಗಿ ಬರೆದಿದ್ದಾರೆ. ಒಟ್ಟಾರೆ ಜ್ವರದ ಚಿಕಿತ್ಸೆಯಲ್ಲಿ ನಮ್ಮ ಪಂಡಿತರು ತಮ್ಮ ಗ್ರಂಥಗಳಲ್ಲಲ್ಲದೆ ಪಾಶ್ಚಾತ್ಯ ವೈದ್ಯರಿಂದ ಕಲಿತುಕೊಳ್ಳಬೇಕಾದ ಅಂಶ ಯಾವದೂ ಕಾಣುವದಿಲ್ಲ. ಸನ್ನಿಪಾತಜ್ವರದ ಚಿಕಿತ್ಸೆಯಲ್ಲಿ ಬಹು ನಿಪುಣರೆಂತ ಪ್ರಸಿದ್ಧಿಹೊಂದಿದ ಒಬ್ಬರು ಆಯುರ್ವೇದ ಪಂಡಿತರು ಸ್ವಲ್ಪ ಕಾಲಕ್ಕೆ ಪೂರ್ವದಲ್ಲಿ ಇದೇ ಊರಲ್ಲಿ ಇದ್ದ ಸಂಗತಿ ನಮಗೆ ಸ್ವತಃ ತಿಳಿದದ್ದು. ಈಗಲೂ ಅಂಥಾ ಬುದ್ಧಿಶಾಲಿಗಳು ಅಲ್ಲಲ್ಲಿಯಾದರೂ ಇಲ್ಲದೆ ಇರಲಾರರು.

24. ಆಯುರ್ವೇದಕ್ಕೆ ತ್ರಿದೋಷನ್ಯಾಯದ ಯಥಾರ್ಥತೆಯು ಬುನಾದಿಯಾಗಿದೆ ಎಂಬದು ನಿಸ್ಸಂಶಯವಾದ್ದು. ರೋಗಗಳ ಪರೀಕ್ಷೆ, ಔಷಧಗಳ ಜ್ಞಾನ, ಚಿಕಿತ್ಸಾಕ್ರಮ ಮುಂತಾದ ವೈದ್ಯದ ಎಲ್ಲಾ ಅಂಗಗಳ ವಿಚಾರದಲ್ಲಿಯೂ ಅದು ವ್ಯಾಪಿಸಿಕೊಂಡು ಉಂಟು. ತ್ರಿದೋಷವಿಯುಕ್ತವಾದ ಆಯುರ್ವೇದ ಎಂದರೆ ವರ್ಣಾಶ್ರಮಧರ್ಮವನ್ನೊಪ್ಪದ ಹಿಂದು ಎಂದಂತೆ ಅಸಂಗತ ವಚನವಾಗುವದು. ಅಂಥಾ ತ್ರಿದೋಷನ್ಯಾಯವು ಅಶಾಸ್ತ್ರೀಯ ಎಂತ ಪಾಶ್ಚಾತ್ಯ ಪಂಡಿತರು ಮಾತ್ರವಲ್ಲ, ಅವರ ಮತವನ್ನೇ ಆಧಾರವಾಗಿಟ್ಟುಕೊಂಡ ಕೆಲವರು ಭಾರತೀಯರು ಸಹ ಹೇಳತೊಡಗಿದ್ದಾರಾದ್ದರಿಂದ, ಅದರ ಕುರಿತು ಸ್ವಲ್ಪ ವಿಚಾರಮಾಡುವದು ಅತ್ಯಗತ್ಯವಾಗಿದೆ. ತ್ರಿದೋಷನ್ಯಾಯದ ಪ್ರತಿಪಾದನಕ್ಕೆ ಉಪದೇಶ, ಪ್ರತ್ಯಕ್ಷ, ಉಪಮಾನ ಅನುಮಾನ, ಇವು ನಾಲ್ಕು ಸಾಧನಗಳೆಂತ ಉಕ್ತವಾಗಿದೆ. ಉಪದೇಶ ಎಂಬದು ವೇದ ಮತ್ತು ಸತ್ತ್ವೈಕ ಗುಣಾಢ್ಯರೂ, ತ್ರಿಕಾಲಜ್ಞಾನಿಗಳೂ ಆಗಿದ್ದ ಮುನಿಗಳ ವಚನ. ಹಿಂದುಮತದಲ್ಲಿ ವಿಶ್ವಾಸವಿಲ್ಲದವರ ಸಮಾಧಾನಕ್ಕೆ ಉಪದೇಶ ಎಂಬ ಪ್ರಧಾನ ಸಾಧನವು

ನಿರರ್ಥಕ. ಆದಾಗ್ಯೂ, ಈ ಜಗತ್ತಿನಲ್ಲಿರುವ ಅನಂತವಾದ ಪದಾರ್ಥಗಳ ಉಪಯೋಗವನ್ನು ಕ್ರಮಪಡಿಸುವದಕ್ಕೂ, ಸಂಖ್ಯಾತೀತವಾದ ಪ್ರಾಣಿಗಳ ಸುಖದುಃಖಗಳನ್ನು ಗೊತ್ತುಮಾಡಿ, ದುಃಖವನ್ನು ಪರಿಹರಿಸಿ, ಸುಖಾಭಿವೃದ್ಧಿಯನ್ನು ಸಂಪಾದಿಸುವದಕ್ಕೂ ಸಾಧನವಾಗಿರುವ ಅತಿಮಹತ್ತಾದ ತ್ರಿದೋಷನ್ಯಾಯವು ಎಂಥಾ ಮನುಷ್ಯನಿಗಾದರೂ ಕಲ್ಪನೆಮಾಡುವದಕ್ಕೆ ಸಾಧ್ಯವಾದ್ದಲ್ಲ ಎಂತಲೂ, ಅಂಥಾ ನ್ಯಾಯವನ್ನು ಸೃಷ್ಟಿಸುವ ಅಚಿಂತನೀಯವಾದ ಶ್ರಮವನ್ನು ಪಡಕೊಳ್ಳಲಿಕ್ಕೆ ಯಾವನಿಗಾದರೂ ನಿಮಿತ್ತವಿಲ್ಲ ಎಂತಲೂ, ಆ ನ್ಯಾಯವು ಸಿದ್ಧಾಂತವಲ್ಲವಾಗಿದ್ದರೆ ಇಂಥಾ ಜನನಿಬಿಡವಾದ ಮಹಾ ದ್ವೀಪದಲ್ಲಿ ಅನಾದಿಯಿಂದ ಈವರೆಗೂ ಸರ್ವ ಪೂಜ್ಯವಾಗಿ ಆಚರಣದಲ್ಲಿರುತ್ತಿದ್ದಿಲ್ಲ ಎಂತಲೂ ವಿಚಾರವಂತರಾದ ಸರ್ವರಿಗೂ ತೋರಬೇಕು. ಜಗತ್ಪ್ರಸಿದ್ಧವಾದ ವೇದಾಂತತತ್ವವಿಚಾರಕ್ಕೆ ಜನ್ಮಭೂಮಿಯಾದ ಈ ಭರತವರ್ಷದಲ್ಲಿ, ಆ ವಿಚಾರದಲ್ಲಿ ಬಹುಪಕ್ಷಗಳು ಇದ್ದೇ ಇದ್ದವಾದರೂ, ಈ ಆಯುರ್ವೇದೀಯ ತ್ರಿದೋಷನ್ಯಾಯಕ್ಕೆ ವಿಪಕ್ಷ ಎಂದೂ ಇರಲಿಲ್ಲ ಎಂಬ ತಥ್ಯವನ್ನು ಸಹ ಈಗಿನ ವಿಪಕ್ಷವಾದಿಗಳು ಆಲೋಚಿಸತಕ್ಕದ್ದು. ಆಯುರ್ವೇದವನ್ನು ಶೋಧಿಸಿ, ದೋಷಗಳನ್ನು ಹೋಗಗೊಳಿಸಿ ಪರಿಷ್ಕಾರಮಾಡಲಿಕ್ಕೆ ಬೇಕಾದಷ್ಟು ಬುದ್ಧಿಶಕ್ತಿಯುಳ್ಳ ಪಂಡಿತರು ಈ ದೇಶೀಯರಲ್ಲಿ ಚರಕಾದಿಗಳ ಕಾಲದನಂತರ ಜನಿಸದೆ ಆದರಲ್ಲಿ ದೋಷಗಳು ಉಳಿದಿರಬಹುದೆಂತ ಕೆಲವರು ನೆನಸಬಹುದು. ಆದರೆ ರಸ, ಲೋಹ ಮುಂತಾದವುಗಳ ಭಸ್ಮಕ್ರಮ, ಮಾತ್ರಾದಿಗಳ ಉಪಯೋಗಕ್ರಮ, ನಾಡೀಪರೀಕ್ಷೆ, ಅರ್ಕ (arrack, spirits) ಗಳಾಗಿ ಔಷಧಗಳನ್ನು ಉಪಯೋಗಿಸುವ ವಿಧಾನ ಮುಂತಾದ ಸೂಕ್ಷ್ಮವಿಚಾರಪರವಾದ ಅನೇಕ ಉಪಯುಕ್ತ ಅವಯವಗಳನ್ನು ಆಯುರ್ವೇದಕ್ಕೆ ಕಾಲಾಂತರಗಳಲ್ಲಿ ಕೂಡಿಸಿ, ಅದನ್ನು ಅಭಿವೃದ್ಧಿಗೊಳಿಸಿದ್ದು ಕಾಣುತ್ತದೆ. ಹಸ್ತಿನಾಪುರದ ಸಮೀಪದಲ್ಲಿರುವ ಕುತುಬ್ ಎಂಬ ಮಹಜೀದಿಯಲ್ಲಿ ನೆಲದಿಂದ ಮೂವತ್ತು ಅಡಿ ಎತ್ತರವಾದ ಸ್ಥಾನದಲ್ಲಿ ಸ್ಥಾಪಿತವಾದ ಆರ್ವತ್ತು ಅಡಿ ಎತ್ತರದ ಪರಿಷ್ಕೃತ ಕಬ್ಬಿಣದ ಕಂಬದಲ್ಲಿ ಸಂಸ್ಕೃತಭಾಷೆಯಲ್ಲಿ ನಾಲ್ಕನೇ ಶತಮಾನದ ಶಾಸನವಿರುತ್ತದೆಂತಲೂ, ಅಂಥಾ ಕಂಬವನ್ನು ಈಗಿನ ಮಹದ್ಯಂತ್ರಗಳ ಸಹಾಯದಿಂದಲೂ ತಯಾರಿಸುವದು ಸುಲಭವಲ್ಲ ಎಂತಲೂ ತಿಳಿದು, ಪಾಶ್ಚಾತ್ಯ ರಸಾಯನಶಾಸ್ತ್ರ ಎದ್ವಾಂಸರಾದ ಸರ್ ಎಚ್. ಇ. ರೊಸ್ಕೊ ದೊರೆಗಳು ಆಗಿನ ಹಿಂದುಗಳ ಬುದ್ಧಿಚಮತ್ಕಾರಕ್ಕೆ ಆಶ್ಚರ್ಯಪಡುತ್ತಿದ್ದಾರೆಂತ ಒಂದು ವರ್ತಮಾನಪತ್ರಪ್ರಕಟಿತವಾದ ಲೇಖನದಿಂದ* ಕಾಣುತ್ತದೆ. ಅಂಕಗಣಿತ, ಬೀಜಗಣಿತ, ಲೀಲಾವತಿ ಮುಂತಾದ ಮಹಾ ಗಣಿತಶಾಸ್ತ್ರಗಳನ್ನು ಪರಿಷ್ಕರಿಸಿ, ಅವುಗಳಿಂದ ತಿಳಿಯತಕ್ಕ ಚಂದ್ರಾದಿ ಗ್ರಹಗಳ ಗತಿಕ್ರಮಗಳ ಫಲವಾದ ಮಹಾನಕ್ಷತ್ರ, ನಿತ್ಯನಕ್ಷತ್ರ, ಶುಕ್ರಾದಿ ಗ್ರಹಗಳ ಉದಯಾಸ್ತಗಳು, ಗ್ರಹಣ ಮುಂತಾದ ಯೋಗಗಳನ್ನು ವಿದ್ಯಾವಂತರೆನಿಸಿಕೊಳ್ಳದ ಪಂಚಾಂಗಕಾರರು, ಅಗತ್ಯವುಳ್ಳ ಗಣಿತವನ್ನು ಕವಡೆಗಳಿಂದಲೇ ಮಾಡಿ, ನಿಶ್ಚಯಿಸಿ, ಜನಸಾಮಾನ್ಯದ ಉಪಯೋಗಕ್ಕೆ ಬೇಕಾದ ವಿವರಗಳನ್ನೆಲ್ಲಾ ತಿಳಿಸುವ ಹಾಗಿನ ಮಹಚ್ಚಮತ್ಕಾರದ ಕ್ರಮವನ್ನು ಕಂಡುಹಿಡಿದ ನಮ್ಮ ಪೂರ್ವಿಕರ ಪಾಂಡಿತ್ಯವಿಶೇಷವನ್ನು ನಮ್ಮ ವಾಚಕರ ನೆನಪಿಗೆ ತರಬಹುದು. ಮೇಲೆ ಪ್ರಸ್ತಾಪಿಸಿದ ಮಾತ್ರಾಕ್ರಮದ ನಿರ್ಮಾಣವೇ ನಮ್ಮ ಪೂರ್ವಿಕರ ಮಹತ್ಪಾಂಡಿತ್ಯವನ್ನು

*Article by T S Natarajan, M A, *New India* supplement of 13 8 1921

ಸ್ಥಾಪಿಸತಕ್ಕಂಥಾದ್ದು. ಪಾಶ್ಚಾತ್ಯವೈದ್ಯದಲ್ಲಿಯೂ ಮಾತ್ರಾಕ್ರಮ ಉಂಟು. ಒಬ್ಬ ರೋಗಿಗೆ ಅರ್ಧಗ್ರೈನ್ ಅಫೀಮನ್ನು ಅಥವಾ ಐದು ಗ್ರೈನ್ ಹಿಂಗನ್ನು ಕೊಡಬೇಕೆಂತಿದ್ದರೆ, ಅಷ್ಟೇ ಅಫೀಮಿನ ಅಥವಾ ಹಿಂಗಿನ ಸಂಗಡ ಸಾಧಕತ್ವವಾಗಲೀ ಬಾಧಕತ್ವವಾಗಲೀ ಇಲ್ಲದ ಬೇರೆ ಯಾವದಾದರೊಂದು ಹಿಟ್ಟು, ಗೋಂದು ಮುಂತಾದ್ದನ್ನು ಕೂಡಿಸಿ ಕಲಸಿ, ಮಾತ್ರೆ ಮಾಡಿ ಕೊಡುತ್ತಾರೆ. ಆಯುರ್ವೇದೀಯ ಮಾತ್ರಾಕ್ರಮ ಹಾಗಿನದಲ್ಲ. ಸಾಧಾರಣವಾಗಿ ಅನೇಕ ಔಷಧಗಳು ಸೇರಿರುವ ಒಂದು ಮಾತ್ರೆಯು ಪ್ರಮಾಣದಲ್ಲಿ ಒಂದು ಹೆಸರಕಾಳಿನಷ್ಟು, ಉದ್ದಿನ ಕಾಳಿನಷ್ಟು, ಮೆಣಸಿನ ಕಾಳಿನಷ್ಟು, ಅಥವಾ ಒಂದು ಗುಲುಗುಂಜಿಯಷ್ಟು ಇರುತ್ತದಷ್ಟೆ. ಇಂಥಾ ಮಾತ್ರೆಯ ಗುಣವು ಅದರಲ್ಲಿರುವ ಎಷದ್ರವ್ಯಗಳ ಮೇಲಿನದಕ್ಕಿಂತಲೂ ಇತರ ಶುಂಠಿ, ಲವಂಗ, ಬಜೆ ಇತ್ಯಾದಿ ಸಾಧಾರಣ ವಸ್ತುಗಳ ಮೇಲೆ ಅಧಿಕವಾಗಿ ಆಧರಿಸಿರುತ್ತದೆ. ಆ ಶುಂಠಿ ಮುಂತಾದ ಸಾಧಾರಣವಾದ ಬೇರುಕಾಳುಗಳನ್ನು ಪ್ರತ್ಯೇಕವಾಗಿ ಪುಡಿಮಾಡಿ ಇಟ್ಟರೆ, ಆ ಪುಡಿಯು ಒಂದೆರಡು ತಿಂಗಳುಗಳೊಳಗೆ ಸತ್ವಹೀನವಾಗಿ ನಿಷ್ಪ್ರಯೋಜನವಾಗುತ್ತದೆ; ಆದರೆ ಮಾತ್ರೆಯಲ್ಲಿ ಸೇರಿದ ಅದೇ ವಸ್ತುಗಳ ಗುಣವು ಬಲವತ್ತಾಗಿ ದೀರ್ಘಕಾಲ ಉಳಿಯುತ್ತದೆ. ಮಹಾಜ್ವರಾಂಕುಶ ಮಾತ್ರೆಗೆ ಸೇರಿದ ತ್ರಿಕಟುವಿನ ಖಾರ ಮತ್ತು ಅದನ್ನು ಅರಿಯುವದಕ್ಕೆ ಉಪಯೋಗಿಸಲ್ಪಟ್ಟ ಲಿಂಬೀರಸದ ಹುಳಿ ಆರು ವರ್ಷಕಾಲದನಂತರವೂ ಹಾಗೆಯೇ ಉಳಿದದ್ದನ್ನು ಪರೀಕ್ಷಿಸಿ ನೋಡಿದ್ದೇವೆ ಆ ಮಹಾಜ್ವರಾಂಕುಶ ಎಂಬ 1½ ಗ್ರೈನ್ ತೂಕದ ಮಾತ್ರೆಯಲ್ಲಿ ಶುಂಠಿ-ಹಿಪ್ಪಲಿ-ಮೆಣಸುಗಳು ¼ ಗ್ರೈನ್ ಪ್ರಕಾರ ಸೇರಿ 1 ಗ್ರೈನ್, ಉಮ್ಮತ್ತನ ಬೀಜ ¼ ಗ್ರೈನ್, ಪಾದರಸ-ಗಂಧಕ-ವತ್ಸನಾಭಿಗಳು ¼ ಗ್ರೈನ ಪ್ರಕಾರ ಸೇರಿ ½ ಗ್ರೈನ್ ಅಧಿಕ ಪಕ್ಷದಲ್ಲಿ ಇರಬಹುದು. ಈ ಲೆಕ್ಕದಲ್ಲಿ ಲಿಂಬೀರಸದ ಅಂಶವನ್ನು ಬಿಟ್ಟದೆ. ಈ ಮಾತ್ರೆಯು ಬಹು ವಿಧವಾದ ಜ್ವರಗಳಲ್ಲಿ, ವಿಶೇಷವಾಗಿ ವಿಷಮಜ್ವರಗಳಲ್ಲಿ, ಬಹಳ ಸಫಲವಾಗುತ್ತದೆ. ಈ ಪ್ರಯೋಜನವನ್ನು ಸಾಧಿಸುವದಕ್ಕೆ ಆ ಮಾತ್ರೆಯಲ್ಲಿ ಸೇರಿದ ಏಳು ಬಗೆ ಔಷಧಗಳೊಳಗೆ ಯಾವದಾದರೊಂದಕ್ಕೆನೇ ಪ್ರತ್ಯೇಕವಾಗಿ ಶಕ್ತಿ ಇರುವದಿಲ್ಲ. ಗಂಧಕ ಮತ್ತು ವತ್ಸನಾಭಿ ಪಾದರಸವನ್ನು ಕೊಂದು ಅದಕ್ಕೆ ಕರ್ಮಸಾಧಕ ಶಕ್ತಿಯನ್ನು ಕೊಡುವದಕ್ಕೆ ಸೇರಿಸಲ್ಪಟ್ಟವೆಂತಲೂ, ಹಾಗೆ ಕರ್ಮದಕ್ಷತೆಯನ್ನು ಪಡೆದ ಪಾದರಸವು ತನ್ನ ಜತೆಯಲ್ಲಿರುವ ತ್ರಿಕಟು ಮುಂತಾದ ದ್ರವ್ಯಗಳನ್ನು ಸುರಕ್ಷಿತವಾಗಿ ಕಾಪಾಡಿ, ಅವುಗಳಿಗೆ ಮಹತ್ತಾದ ಶಕ್ತಿಯನ್ನು ಕೊಟ್ಟು, ಅವುಗಳ ಕೆಲಸಗಳನ್ನು ಶೀಘ್ರವಾಗಿಯೂ ಸಂಪೂರ್ಣವಾಗಿಯೂ ಮಾಡಿಸುತ್ತದೆ ಎಂತಲೂ ಆಲೋಚಿಸಲಿಕ್ಕೆ ಕಾರಣ ಉಂಟು. ಪ್ರತ್ಯೇಕವಾದ ¼ ಗ್ರೈನ್ ಶುಂಠಿಯಿಂದಾಗಲಿ, ಹಿಪ್ಪಲಿಯಿಂದಾಗಲಿ, ಕಾಳುಮೆಣಸಿನಿಂದಾಗಲಿ ಯಾವ ಕೆಲಸವೂ ಆಗದು. ಈ ಗುಣವಿರುವದರಿಂದ ಪಾದರಸವು ಯೋಗವಾಹಿ ಎಂತ ವರ್ಣಿಸಲ್ಪಟ್ಟದೆ, ಅಂದರೆ ಜತೆದ್ರವ್ಯಗಳಿಂದ ಕೆಲಸಮಾಡಿಸತಕ್ಕಂಥಾದ್ದು. ಮಾತ್ರೆಯಿಂದ ಪರಿಹಾರವಾಗತಕ್ಕ ರೋಗಗಳಿಗೆ ಉಕ್ತವಾದ ಔಷಧಗಳಲ್ಲಿ ಎಲ್ಲವು ಮಾತ್ರೆಯಲ್ಲಿ ಕೂಡಿಸಲ್ಪಡಲಿಕ್ಕೆ ಯುಕ್ತವಾಗುವದಿಲ್ಲ. ಅವುಗಳೊಳಗೆ ಕೆಲವು ಎಣ್ಣೆ-ನೀರುಗಳಂತೆ ಒಂದಕ್ಕೊಂದು ಕೂಡಿಕೊಳ್ಳದಂಥವು ಇರಬಹುದು. ಸಂಯೋಗದಿಂದಲೇ ಮಾತ್ರೆ ಕಟ್ಟುವದಕ್ಕೆ ಬೇಕಾದಷ್ಟು ಅಂಟು ಉಂಟಾಗಬೇಕು. ಹೀಗೆ ಒಂದು ಮಾತ್ರೆಯ ಯೋಗವನ್ನು ಕಲ್ಪಿಸುವದಕ್ಕೆ ರಸಾಯನಶಾಸ್ತ್ರವನ್ನೂ ಆಯುರ್ವೇದವನ್ನೂ ಆಧರಿಸಿಕೊಂಡು ಬಹಳ ಸೂಕ್ಷ್ಮವಿಚಾರ ಮಾಡ

ಬೇಕಾಗುತ್ತದೆ. ಆ ಯೋಗದಂತೆ ಮಾತ್ರೆಗಳನ್ನು ತಯಾರಿಸುವದಕ್ಕೆ ಅನೇಕ ಸಂಗತಿಗಳಲ್ಲಿ ಮತ್ತೂ ಹೆಚ್ಚು ಶ್ರಮ ಬೇಕಾಗುತ್ತದೆ. ಹೀಗೆ ಯೋಗಗಳನ್ನು ಕಲ್ಪಿಸಿ, ಆ ಯೋಗಗಳ ಪ್ರಕಾರ ಮಾತ್ರೆಗಳನ್ನು ಮಾಡಿ, ಆ ಮಾತ್ರೆಗಳನ್ನು ರೋಗಿಗಳಿಗೆ ಕೊಟ್ಟು ಸಿಕ್ಕಿದ ಫಲ ಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ಸಫಲವಾಗಿ ಕಂಡ ಯೋಗಗಳನ್ನು ಮಾತ್ರ ಪ್ರಕಟ ಮಾಡುತ್ತಾ ಬಂದಿದ್ದಾರ. ಇಂಥಾ ಯೋಗಗಳು ಆಯುರ್ವೇದಗ್ರಂಥಗಳಲ್ಲಿ ನೂರಾರು ಇರುತ್ತವೆ. ಇಂಥಾ ಅನೇಕ ದೃಷ್ಟಾಂತಗಳಿಂದ ಈ ಭರತವರ್ಷದಲ್ಲಿ ಆಗಿಂದಾಗ್ಗೆ ಮಹಾ ಜ್ಞಾನಿಗಳು ಹುಟ್ಟಿ, ಬೇರೆ ಬೇರೆ ಶಾಸ್ತ್ರಶಾಖೆಗಳಲ್ಲಿ ಮಹತ್ಕಾರ್ಯಗಳನ್ನು ಪೂರೈಸು ತ್ತಿದ್ದಾರೆಂಬ್ಯೂ, ಅಂಧಪರನ್ನು ಪ್ರಕಾಶಕ್ಕೆ ತರುವ ಅನುಕೂಲ್ಯವು ಕಡಿಮೆಯಾದ ದೆಸೆಯಿಂದ, ಅವರು ಸಾಮಾನ್ಯ ಜನತೆಯೊಳಗೆ ಅಡಗಿದ್ದು, ಲೋಕಪ್ರಸಿದ್ಧಿಗೆ ಬಾರದೆಹೋಗುವವರಾಗು ತ್ತಿದ್ದಾರೆಂತ ತೋರಿಸಬಹುದು. 'ಉಪದೇಶ'ವನ್ನು ಬಿಟ್ಟರೆ, ಎರಡನೇ ಪ್ರಧಾನ ಸಾಧನವು ಪ್ರತ್ಯಕ್ಷ, ಅಂದರೆ, ಆಯುರ್ವೇದಕ್ರಮವನ್ನು ಉಪಯೋಗಿಸಿ, ಅದರಲ್ಲಿ ಹೇಳಲ್ಪಟ್ಟ ಗುಣ ದೋಷಗಳು ಕಾಣುತ್ತವೋ ಇಲ್ಲವೋ ಎಂಬದನ್ನು ಪರೀಕ್ಷಿಸುವದು ಈ ವಿಷಯದಲ್ಲಿ 'ಹುಚ್ಚು ಬಿಡದೆ ಮದುವೆಯಾಗದು, ಮದುವೆಯಾಗದೆ ಹುಚ್ಚು ಬಿಡದು' ಎಂಬ ನ್ಯಾಯವೇ ಬಲವಾಗಿದೆ. ಪಾಶ್ಚಾತ್ಯ ಶಾಸ್ತ್ರ ಪ್ರಕಾರ ನಮ್ಮ ವೈದ್ಯವು ಶಾಸ್ತ್ರೀಯವೆಂತ ಮುಂದಾಗಿ ತೋರಿಸಬೇಕಂದರ ಅದು ಹ್ಯಾಗೆ ಸಾಧ್ಯವಾಗುವದು? ಅವರ ಶಾಸ್ತ್ರವೇ ಅವ್ಯವಸ್ಥೆಯಲ್ಲಿ ಇರುತ್ತದೆಂಬದನ್ನು ಸೂಚಿಸುವ ಕೆಲವು ಸಂಗತಿಗಳನ್ನು ಹಿಂದೆ ಪ್ರಸ್ತಾಪಿಸಿದ್ದೇವೆ. ಕಬ್ಬಿಣ, ಬೆಳ್ಳಿ, ಭಂಗಾರ ಮುಂತಾದ ಲೋಹಗಳು ಅವರ ಮೂಲಭೂತಗಳ ಪಟ್ಟಿಯಲ್ಲಿ ಸೇರಿ ದಂಥವು, ಈ ನಿರ್ಣಯವನ್ನಾಧರಿಸಿ ಪಾಶ್ಚಾತ್ಯಶಿಕ್ಷಣಪ್ರವೀಣರಾದ ಕೆಲವರು 'ಲೋಹ ಮಾರಣ' ಎಂಬ ಆಯುರ್ವೇದೀಯ ಪದವನ್ನು ಉಚ್ಚರಿಸಿದೊಡನೇ ನಗುತ್ತಿದ್ದರು. ಮೂಲ ಭೂತಗಳಾದ ಲೋಹಗಳು ನಾಯುವದು ಅಥವಾ ಭಸ್ಮವಾಗುವದು ಅಸಾಧ್ಯವೆಂತಲೂ, ಅವು ಮಾರಣಕ್ರಮದಿಂದ ರೂಪಾಂತರವನ್ನು ಹೊಂದಿದಾಗ್ಯೂ, ಆ ರೂಪಭೇದವನ್ನು ಕಳೆದು, ಅವುಗಳನ್ನು ಪುನಃ ನಿಜಸ್ಥಿತಿಗೆ ತರುವದು ಸಾಧ್ಯವೆಂತಲೂ ಅವರ ಮತವಾಗಿತ್ತು. ಇತ್ತ ಲಾಗಿ ಆ ಲೋಹಗಳಿಗೆ ಸುಖದುಃಖಮರಣಗಳಿವೆ ಎಂತಲೂ, ಸತ್ತ ಲೋಹವನ್ನು ಪುನ ರ್ಜೀವ ಮಾಡಲಿಕ್ಕಾಗುವಟಲ್ಲ ಎಂತಲೂ, ಸರ್ ಜಗದೀಶ ಚಂದ್ರಬೋಸರವರು ಪಾಶ್ಚಾತ್ಯ ರಸಾಯನಶಾಸ್ತ್ರಾದಿಗಳ ರೀತಿಯಿಂದಲೇ ಸ್ಥಾಪಿಸಿದ್ದಾರೆ ಈ ಸ್ಥಾಪನವು ಸರಿಯಲ್ಲ ಎಂತ ತೋರಿ ಸುವ ಉಪಾಯ ಕಾಣದೆ, ಅದನ್ನು ಒಪ್ಪಿಕೊಳ್ಳಲಿಕ್ಕೆ ಮನಸ್ಸಿಲ್ಲದೆ, ಪಾಶ್ಚಾತ್ಯ ರಸಾಯನ ಶಾಸ್ತ್ರಜ್ಞರು ಪ್ರಕೃತ ಮೌನಾಚರಣದಲ್ಲಿದ್ದ ಹಾಗ ಕಾಣುತ್ತದೆ ಆ ಸ್ಥಾಪನವನ್ನು ಒಪ್ಪಿ ಕೊಂಡರೆ, ದೀರ್ಘವಾಗಿರುವ ಅವರ ಮೂಲಭೂತಗಳ ಪಟ್ಟಿಯು ಬಹಳಮಟ್ಟಿಗೆ ಸಂಕೋಚಪಡಬೇಕಾದೀತು. ಅಂಥಾ ಶಾಸ್ತ್ರವನ್ನನುಸರಿಸಿ ನಮ್ಮ ತ್ರಿದೋಷನ್ಯಾಯವನ್ನು ಮುಂದಾಗಿ ಸ್ಥಾಪಿಸಿಕೊಡಬೇಕೆನ್ನುವದು ವಿಹಿತವೋ? ಅದಲ್ಲದೆ, ನೀರನ್ನು ಉಪಯೋಗಿಸು ವದಕ್ಕೆ ಅದರಲ್ಲಿ ರಸಾಯನಶಾಸ್ತ್ರ ಪ್ರಕಾರ ಒಂದು ಪಾಲು ಒಕ್ಸಿಜನ್, ಎರಡು ಪಾಲು ಹೈಡ್ರೊಜನ್ ಮತ್ತು ಇಂತಿಷ್ಟು ಬೇರೆ ಪದಾರ್ಥಗಳು ಇರುತ್ತವೆ ಎಂತ ಜನರು ಮುಂದಾಗಿ ಅನುಭವ ಮಾಡಿಕೊಂಡಿದ್ದರೊ? ಜನಿಸಿದ ಶಿಶುವಿಗೆ ತಾಯಿಯು ಮೊಲೆಯನ್ನುಣ್ಣಿಸುವ ಆಚರಣವು ಆ ಮೊಲೆಹಾಲನ್ನು ರಸಾಯನಶಾಸ್ತ್ರರೀತ್ಯಾ ಶೋಧಿಸಿದನಂತರ ಉಂಟಾ

ದದ್ದೊ? ಅಂಗೈ ನೋಡುವದಕ್ಕೆ ಕನ್ನಡಿ ಬೇಡ, ಪ್ರತ್ಯಕ್ಷವನ್ನು ಅನುಮೋದಿಸುವದಕ್ಕೆ ಶಾಸ್ತ್ರಾಧಾರ ಅವಶ್ಯಕವಲ್ಲ. ಆಯುರ್ವೇದ ತತ್ವಗಳು ಪ್ರತ್ಯಕ್ಷಕ್ಕೆ ವಿರುದ್ಧವಾದವು ಎಂತ ಪಾಶ್ಚಾತ್ಯ ವಿದ್ವಾಂಸರು ಸಿದ್ಧಾಂತ ಮಾಡಿಕೊಡುವ ವರೆಗೆ ಅವರಿಗೆ ಆಯುರ್ವೇದವು ಅಶಾಸ್ತ್ರೀಯವೆನ್ನುವದಕ್ಕೆ ಕಾರಣವಿಲ್ಲ.

25. ಆದರೂ, ಜನಸಾಮಾನ್ಯದ ಸಮಾಧಾನಕ್ಕಾಗಿ ಕೆಲವು ಸಂಗತಿಗಳನ್ನು ಹೇಳ ಬಹುದು. ಚಳಿ-ಸೆಕೆ, ಶೀತ-ಉಷ್ಣ, ನೀರು ಬೆಂಕಿ ಎಂಬ ಹಾಗಿನ ದ್ವಂದ್ವಗಳು ಸರ್ವರಿಗೂ ಅನುಭವಸಿದ್ಧ ಇವುಗಳನ್ನು ಕೂಡಿಕೊಂಡು ವಾಯುವು ಸಂಚರಿಸುತ್ತಿರುವದರ ಮೇಲೆ ಜಗತ್ತಿನ ಸಮಸ್ತ ಸ್ಥಾವರ ಜಂಗಮ ಸಜೀವ ವಸ್ತುಗಳ ಸುಖದುಃಖಗಳು ಮತ್ತು ನಿರ್ಜೀವ ವಸ್ತುಗಳ ಗುಣ ಭೇದಗಳು ಆಧರಿಸಿ ಇವೆ ಎಂಬದೇ ತ್ರಿದೋಷ ನ್ಯಾಯ. ಚಳಿ, ಶೀತ, ನೀರು, ತಣಸು, ದ್ರವ ಮುಂತಾದವುಗಳಿಗೆಲ್ಲಾ ಮೂಲ ಚಂದ್ರ, ಮತ್ತು ಮನುಷ್ಯ ದೇಹದಲ್ಲಿ ಈ ವರ್ಗದ ಗುಣಗಳಿಗೆ ಮೂಲ, ಅಥವಾ ಸಾಮಾನ್ಯ ಹೆಸರು, ಕಫ, ಸೆಕೆ, ಉಷ್ಣ, ಬೆಂಕಿ, ಜ್ವಾಲೆ, ಉರಿ ಮುಂತಾದವುಗಳಿಗೆಲ್ಲಾ ಮೂಲ, ಸೂರ್ಯ, ಮತ್ತು ಆ ವರ್ಗದ ಗುಣಗಳಿಗೆ ಈ ದೇಹದಲ್ಲಿ ಮೂಲ, ಅಥವಾ ಸಾಮಾನ್ಯ ಹೆಸರು, ಪಿತ್ತ. ಚರಕನ ಪ್ರಕಾರ ವಾಯುವಿನ ನಿಜ ಲಕ್ಷಣಗಳು ರೂಕ್ಷತ್ವ (ಜಡ್ಡಿಲ್ಲದೆ ಒಣಗಿರುವದು), ಲಘುತ್ವ, ಖರತ್ವ (ಸ್ವಚ್ಛವಾಗಿರುವದು), ಶೈತ್ಯ, ಚಲನೆ ಮತ್ತು ಆಕಾರವಿಲ್ಲದಿರೋಣ ಸುಶ್ರುತನು ವಾಯುವನ್ನು ವರ್ಣಿಸುವಾಗ್ಗೆ, "ಭೂತಗಳ ಸ್ಥಿತಿ, ಉತ್ಪತ್ತಿ, ನಾಶಗಳಿಗೆ ಇವನು ಕಾರಣನು, ಅವ್ಯಕ್ತ (ಅದೃಶ್ಯ) ನಾದಾಗ್ಯೂ ವ್ಯಕ್ತವಾದ (ಪ್ರಕಟವಾದ) ಕರ್ಮ ಮಾಡತಕ್ಕವನು, ಇವನು ರೂಕ್ಷ, ಶೀತ, ಲಘು, ಖರ, ಈ ಗುಣಗಳುಳ್ಳವನು, ಅಡ್ಡವಾಗಿ ಚಲಿಸುವವನು, ದ್ವಿಗುಣನು (ಶಬ್ದಸ್ಪರ್ಶ ಗುಣಗಳರಡುಳ್ಳವನು), ರಜೋಗುಣ ಹೆಚ್ಚಾಗಿ ಉಳ್ಳವನು, ನೆನಸಕೂಡದ ಶಕ್ತಿಯುಳ್ಳವನು, ದೋಷಗಳ ನಾಯಕನು, ಮತ್ತು ರೋಗಸಮೂಹದಲ್ಲಿ ಶೋಧಿಸುವವನು ಆಗಿದ್ದಾನೆ" ಎಂತ ಹೇಳಿದ್ದಾನೆ. ದೇಹದಲ್ಲಿ ಈ ವರ್ಗದ ಲಕ್ಷಣಗಳಿಗೆ ಮೂಲವಾಗಿರುವದಕ್ಕೆ ವಾತ, ಅಥವಾ ವಾಯು, ಅನ್ನುವದಾಗಿರುತ್ತದೆ. ಕಫವು ಬಳುಪು ವರ್ಣಕ್ಕೆ, ಪಿತ್ತವು ಅರಸಿನ ವರ್ಣಕ್ಕೆ ಮತ್ತು ವಾಯುವು ಕಪ್ಪು ವರ್ಣಕ್ಕೆ ಹೇತು. ದೇಹದಲ್ಲಿ ಕೆಂಪು ವರ್ಣಕ್ಕೆ ರಕ್ತವು ಮೂಲವಾದಾಗ್ಯೂ, ರಕ್ತದೋಷಕ್ಕೆಲ್ಲ ಹೇತು ಮತ್ತು ಪ್ರತಿಕ್ರಿಯೆ ಪಿತ್ತದಂತೆಯಾದ್ದರಿಂದ, ಕೆಂಪು ವರ್ಣಕ್ಕೂ ಹೇತು ಪಿತ್ತವೆನ್ನಬಹುದು ಚಂದ್ರ, ಸೂರ್ಯ ವಾಯುಗಳ ಯೋಗಾಯೋಗಾತಿಯೋಗಗಳ ಲಕ್ಷಣಗಳು ಸರ್ವಪ್ರಾಣಿಗಳಲ್ಲಿಯೂ, ಸರ್ವಸ್ಥಾನಗಳಲ್ಲಿಯೂ, ಸರ್ವಪದಾರ್ಥಗಳಲ್ಲಿಯೂ, ಪ್ರತ್ಯಕ್ಷವಾಗಿಯಾಗಲೀ, ದೃಷ್ಟಿಗೋಚರವಲ್ಲದೆಯಾಗಲೀ, ಇರುತ್ತವೆ. ಪೃಥ್ವೀ-ಅಪ್-ತೇಜಃ-ವಾಯು-ಆಕಾಶ ಎಂಬ ಪಂಚ ಮಹಾಭೂತಗಳೊಳಗೆ ಪೃಥ್ವೀ-ಜಲಗಳಿಂದ ಕಫ, ತೇಜಸ್ಸಿನಿಂದ ಪಿತ್ತ, ಆಕಾಶ-ವಾಯುಗಳಿಂದ ವಾತ, ವೃದ್ಧಿಯಾಗುತ್ತವೆ, ಮತ್ತು ತೇಜಃ-ಆಕಾಶಗಳಿಂದ ಕಫ, ಪೃಥ್ವೀ-ಅಪ್-ವಾಯುಗಳಿಂದ ಪಿತ್ತ, ಪೃಥ್ವೀ-ಅಪ್-ತೇಜಸ್ಸುಗಳಿಂದ ವಾತ ಶಮನವಾಗುತ್ತವೆ. ಈ ಪಂಚ ಮಹಾಭೂತಗಳ ಸಂಯೋಗದಿಂದ ದ್ರವ್ಯಗಳ ರಸ ಭೇದಗಳು ಉಂಟಾಗುವದಾಗಿರುತ್ತದೆ. ಅಪ್-ಪೃಥ್ವೀಗಳು ಅಧಿಕವಾಗಿರುವದರಿಂದ ಸೀ; ಪೃಥ್ವೀ-ತೇಜಃ ಅಧಿಕವಾಗಿರುವದರಿಂದ ಹುಳಿ, ಅಪ್-ತೇಜಃ ಅಧಿಕವಾಗಿರುವದರಿಂದ ಉಪ್ಪು; ವಾಯು-ಅಗ್ನಿ ಅಧಿಕವಾಗಿರುವದರಿಂದ ಖಾರ, ವಾಯು-ಆಕಾಶ ಅಧಿ

ಕವಾಗಿರುವದರಿಂದ ಕಹಿ, ಪೃಥ್ವೀ-ವಾಯು ಅಧಿಕವಾಗಿರುವದರಿಂದ ಜೊಗರು; ಈ ಪ್ರಕಾರ ಷಡ್ರಸಗಳ ಉತ್ಪತ್ತಿ. ಆ ಪಂಚ ಮಹಾಭೂತಗಳು ದ್ರವ್ಯಗಳಲ್ಲಿ ಬೇರೆ ಬೇರೆ ತರತಮ ಪ್ರಮಾಣಗಳಲ್ಲಿ ಸಂಯೋಗವಾಗಿರುವದರಿಂದ ದ್ರವ್ಯಗಳ ಅಸಂಖ್ಯೇಯ ಮಿಶ್ರ ರಸಗಳು ಉಂಟಾಗುತ್ತವೆ. ಈ ರಸಗಳಲ್ಲಿ ಕೆಲವು ಶರೀರದಲ್ಲಿ ಜಠರಾಗ್ನಿಯಿಂದ ಪಾಕ ಮಾಡಲ್ಪಡುವಾಗ್ಗೆ ಅನ್ಯ ರಸಗಳಾಗಿ ಪರಿಣಮಿಸುತ್ತವೆ. ಆದ್ದರಿಂದ ದ್ರವ್ಯ ಗುಣ ವರ್ಣದಲ್ಲಿ, ವಿಪಾಕ ರುಚಿ ಬೇರೆ ಇದ್ದರೆ, ಎರಡು ರುಚಿಗಳನ್ನು ಪತ್ಯೇಕವಾಗಿ ಕಾಣಿಸುತ್ತಾರೆ. ದ್ರವ್ಯದಲ್ಲಿ ವೀರ್ಯ-ಶಕ್ತಿ ಎಂಬ ಬೇರೆ ಗುಣಗಳಿವೆ. ಈ ಶಕ್ತಿಯಿಂದ ದ್ರವ್ಯದಲ್ಲ (ಆದ್ಯ) ಅದರ ನಿಜ ರುಚಿಗೂ, ವಿಪಾಕದ ರುಚಿಗೂ, ಬೇರೆಯಾದ ಗುಣ ಕಾಣುವದುಂಟು. ಇವುಗಳನ್ನೆಲ್ಲಾ ಪ್ರತ್ಯಕ್ಷ ಅನುಭವದಿಂದ ನಿಶ್ಚಯಿಸಿ, ಎಲ್ಲಾ ರೋಗಗಳಿಗೂ ಬೇಕಾದಷ್ಟು ಔಷಧಗಳನ್ನು ವರ್ಣಿಸಿದ್ದಾರೆ. ವಾತ-ಪಿತ್ತ-ಕಫಗಳ ಸಾಮಾನ್ಯ ಲಕ್ಷಣಗಳು ಇಂಥವು ಎಂತ ಕಾಣಿಸಿ, ಯಾವ ರೋಗದಲ್ಲಿಯಾದರೂ ಆ ಲಕ್ಷಣಗಳು ಕಂಡರೆ, ಅವು ಆಯಾ ದೋಷದ ಕರ್ಮ ಎಂತ ತಿಳಿಯಬೇಕಾಗಿ ವಿಧಿಸಿದ್ದಾರೆ ಈ ಅಂಶಗಳನ್ನೆಲ್ಲಾ ಸರಿಯಾಗಿ ಕಲಿತ ವೈದ್ಯನಿಗಾದರೂ ದೋಷಗಳ ಬಲಾಬಲ ಭೇದಗಳನ್ನು ಲಕ್ಷಿಸಿ, ಅವುಗಳಿಗೆ ಬೇಕಾದಷ್ಟೇ ಬಲವುಳ್ಳ ಪ್ರತಿಕ್ರಿಯಾಯೋಗವನ್ನು ಕಲ್ಪಿಸುವದಕ್ಕೆ ಬಹು ಕಷ್ಟವಾಗುತ್ತದೆ, ಈ ಕಷ್ಟಕ್ಕ ವೈದ್ಯನ ಸೂಕ್ಮ ಬುದ್ಧಿ ಮತ್ತು ಅನುಭವವೇ ಪರಿಹಾರ ದೋಷಗಳ ನಿಶ್ಚಯಕ್ಕೆ ಶಬ್ದ, ಸ್ಪರ್ಶ, ರೂಪ, ರಸ, ಘ್ರಾಣ, ದೃಷ್ಟಿ, ಮಲ, ಮೂತ್ರ, ನಾಲಿಗೆ, ನಾಡೀ, ಇವುಗಳಲ್ಲಿ ಆ ದೋಷಗಳಿಂದ ಉಂಟಾಗುವ ಭೇದಗಳು ಸವಿಸ್ತಾರವಾಗಿ ವರ್ಣಿಸಲ್ಪಟ್ಟವೆ. ಚಂದ್ರ-ಸೂರ್ಯ-ವಾಯುಗಳ ಪ್ರಬಲತೆ ಭೇದದಿಂದ ಋತು-ಅಯನಾದಿ ಕಾಲಗಳಲ್ಲಿಯೂ, ದೇಶಗಳಲ್ಲಯೂ, ಆ ದೇಶಗಳಲ್ಲಿ ಬೆಳೆಯುವ ದ್ರವ್ಯಗಳಲ್ಲಿಯೂ ಭೇದ ಉಂಟಾಗಿ, ಆ ಭೇದಕ್ಕನುಸಾರವಾಗಿ ಜನರ ದೇಹದಲ್ಲಿರುವ ಕಫ-ಪಿತ್ತ-ವಾಯುಗಳೆಂಬ ದೋಷಗಳಲ್ಲಿ ಹೆಚ್ಚು ಕಡಿಮೆಯಾಗುತ್ತದೆಂಬದು ಸವಿಸ್ತಾರವಾಗಿ ಆಯುರ್ವೇದಗ್ರಂಥಗಳಲ್ಲಿ ವರ್ಣಿಸಲ್ಪಟ್ಟದೆ.

26. ಈಗ ಸಾಧಾರಣವಾಗಿ ಒಬ್ಬ ಕೃಷಿಗಾರನು ಒಂದು ಗಿಡವನ್ನು ನೆಡುವದಕ್ಕ ಸ್ಥಳವನ್ನು ಆರಿಸುವಾಗ್ಗೆ ಆ ಸ್ಥಳಕ್ಕೆ ವ್ಯಾಪಿಸುವ ಸೂರ್ಯನ ಬಿಸಿಲು, ನೆರಳು, ಮತ್ತು ಗಾಳಿ, ಇವುಗಳ ಹೆಚ್ಚು ಕಡಿಮೆಯನ್ನು ವಿಲೋಚಿಸುತ್ತಾನೆ, ಮತ್ತು ಒಂದು ನೆಟ್ಟ ಗಿಡವು ಸುಖವಾಗಿ ಬೆಳೆಯುವದಿಲ್ಲ ಎಂತ ಕಂಡರೆ, ಮುಂದಾಗಿ ಚಂದ್ರ-ಸೂರ್ಯ-ವಾಯುಗಳ ಉಪದ್ರವವನ್ನೇ ಶಂಕಿಸುತ್ತಾನೆ. ಸುಮಾರು ಹದಿನೈದು ವರ್ಷಗಳ ಪೂರ್ವದಲ್ಲಿ ನೆಡಲ್ಪಟ್ಟ ಒಂದು ಹಲಸಿನ ಗಿಡವು ಅದರ ಸುತ್ತಲಿದ್ದ ಆವರಣದಷ್ಟೇ ಎತ್ತರ ಬೆಳೆದು, ಅನಂತರ ವೃದ್ಧಿಯನ್ನು ಪಡೆಯದಿದ್ದದಕ್ಕೆ, ಆ ಮಣ್ಣಿನ ಆವರಣದ ಮೇಲೆ ಸುಮಾರು ಎರಡು ಅಡಿ ಎತ್ತರದವರೆಗೆ ಸೊಪ್ಪುಗಳಿಂದ ಆವರಣವನ್ನು ಮಾಡಲಾಗಿ, ಅಂದಿನಿಂದ ಆ ಗಿಡವು ಸುಖವಾಗಿ ಬೆಳೆಯಲಾರಂಭಿಸಿ, ಕೆಲವು ವರ್ಷಗಳೊಳಗೆ ಮರವಾಗಿ ಫಲವತ್ತಾಯಿತು. ಆ ಸ್ಥಳವು ಎತ್ತರವಾಗಿ, ಬೀಸುವ ಗಾಳಿಯ ಪ್ರಾಬಲ್ಯಾಧಿಕ್ಯದಿಂದ ಆ ಚಿಕ್ಕ ಗಿಡದ ಬೆಳಿಕೆಯು ನಿಂತುಹೋಗಿತ್ತೆಂತ ಕಾಣುತ್ತದೆ. ಪ್ರತಿ ಗಿಡವು ತನ್ನ ಎಲೆಗಳಿಂದ ಪ್ರಕಾಶದ ಜ್ಞಾನವನ್ನು ಪಡೆದು, ಆ ಪ್ರಕಾಶವು ತನಗೆ ಸುಖಕರವಾಗುವ ಹಾಗೆ ತನ್ನ ಬೆಳಿಕೆಯನ್ನು ಸಮಪಾಡಿ ಕೊಳ್ಳುತ್ತದೆಂತ

*Report of his lecture *New India* 24 8 21

ಸರ್ ಜ. ಚಂ. ಬೋಸರವರು ಪಾಶ್ಚಾತ್ಯರೀತಿಯಿಂದ ಶೋಧನ ಮಾಡಿ ಸ್ಥಾಪಿಸಿದ್ದಾರೆ*. ತೆಂಗು ಮುಂತಾದ ಕೆಲವು ಮರಗಳು ತಮ್ಮ ಸಮೀಪಕ್ಕೆ ಬೇರೆ ಮರಗಳ ಕೊಂಬೆಗಳು ಬರುವದನ್ನು ಕಂಡು, ಅವುಗಳನ್ನು ತಪ್ಪಿಸಿಕೊಳ್ಳುವದಕ್ಕಾಗಿ, ಮುಂದಾಗಿಯೇ ತಿರುಗಿ ಬೆಳೆಯುವದನ್ನು ನಮ್ಮ ವಾಚಕರಲ್ಲಿ ಅನೇಕರು ನೋಡಿರಬಹುದು. ಬಳ್ಳಾರಿ, ಅನಂತಪುರ, ಮುಂತಾದ ಕೆಲವು ಜಿಲ್ಲೆಗಳಲ್ಲಿ ಮಳೆ ಮತ್ತು ಪುರಮಟ್ಟುಗಳು ಕಡಿಮೆಯಾದ್ದರಿಂದ ಅಧಿಕವಾಗಿರುವ ಬಿಸಿಲಿನ ಪ್ರತಾಪವನ್ನು ಗಾಳಿಯು ಅನ್ಯ ಕಡೆಗಳಿಗೆ ಒಯ್ದು, ಸಮೀಪದ ತಂಪಾದ ಪ್ರದೇಶಗಳ ತಣಸನ್ನು ಅಲ್ಲಿಗೆ ಬೀಸಿ, ಆ ಜಿಲ್ಲೆಗಳ ಪ್ರಾಣಿಗಳನ್ನು ರಕ್ಷಣೆ ಮಾಡುತ್ತಾ ಉಂಟು ಒಟ್ಟಾರೆ, ಅಲ್ಲಿ ವಾಯುವು ಪ್ರಬಲ ಅಲ್ಲಿಯ ಮಣ್ಣು ಪ್ರಾಯಶಃ ಕರ್ಕಶವಾಗಿರುವದು ಆಯುರ್ವೇದ ಪ್ರಕಾರ ವಾಯುವಿನ ಗುಣ ಅಲ್ಲಿಯ ಜನಜಾನುವಾರುಗಳು ಬಲವಾಗಿದ್ದರೂ ಪುಷ್ಟಿಯುಳ್ಳವಾಗಿರುವದು ಕಡಿಮೆ. ವಾಯುವು ಶೋಷಣ ಗುಣವುಳ್ಳದ್ದೆಂಬ ಆಯುರ್ವೇದೀಯ ತತ್ವವು ಅದಕ್ಕೆ ಕಾರಣವಾಗಿರಬಹುದು. ಸಂಕ್ಷೇಪವಾಗಿ, ನಮ್ಮ ವಾಚಕರು ತ್ರಿದೋಷಗಳ ವಿಷಯದಲ್ಲಿ ಆಯುರ್ವೇದವು ಕೊಟ್ಟಿರುವ ವಿವರಗಳನ್ನು ತಿಳಿದು ನೆನಪಿನಲ್ಲಿಟ್ಟುಕೊಂಡರೆ, ಅವುಗಳನ್ನು ಸಮರ್ಥಿಸುವ ದೃಷ್ಟಾಂತಗಳು ಅವರಿಗೆ ಪ್ರತಿ ದಿನವೂ ಕಾಣುತ್ತಿರುವವು ಎಂಬದರಲ್ಲಿ ಸಂದೇಹವಿಲ್ಲ. ಮೇಲೆ ಪ್ರಸ್ತಾಪಿಸಿದ ದೃಷ್ಟಾಂತಗಳಲ್ಲಿ ಚಂದ್ರ-ಸೂರ್ಯ-ವಾಯುಗಳ ಪ್ರಾಬಲ್ಯಭೇದಗಳನ್ನು ಅನುಮಾನರೀತ್ಯಾ ತಿಳಿಯಬೇಕಷ್ಟೇ ತ್ರಿದೋಷಗಳ ವಿಷಯದಲ್ಲಿ ಅಂಧಾ ಅನುಮಾನಕ್ಕೆ ಅವಕಾಶವಿಲ್ಲ. ಅವುಗಳ ಪ್ರಾಬಲ್ಯದ ಅತಿಯೋಗ-ಹೀನಯೋಗ-ಸಮಯೋಗಗಳ ದೆಸೆಯಿಂದ ಮನುಷ್ಯರಲ್ಲಿ ಉಂಟಾಗುವ ಲಕ್ಷಣಗಳನ್ನು ಪ್ರತ್ಯಪ್ರತ್ಯೇಕ ಸುಲಕ್ಷಿತವಾಗಿ ಹೇಳಿರುತ್ತಾರೆ. ಈ ಲಕ್ಷಣ ವಿಭಾಗಗಳು ಮನುಷ್ಯಯತ್ನದಿಂದಲೇ ಲಬ್ಧವಾದವಾದರೆ, ಅವುಗಳ ಪ್ರತಿಪಾದನಕ್ಕೆ ನಮ್ಮ ಪೂರ್ವಿಕರು ಉಪಯೋಗಿಸಿರಬೇಕಾದ ಶ್ರಮ ಮತ್ತು ಸೂಕ್ಷ್ಮ ಬುದ್ಧಿ ಎಷ್ಟು ಶ್ಲಾಘ್ಯ ಎಂಬುದನ್ನು ನೆನಸುವದಕ್ಕೂ ಈಗಿನವರು ಶಕ್ತರಲ್ಲ. ಅಂಧಾ ಶಾಸ್ತ್ರಪನ್ನು ವಿಚಾರವಿಲ್ಲದೆ ನಿಂದಿಸಿದರೆ, ನಮ್ಮ ಬುದ್ಧಿ ಸಂಕೋಚವನ್ನೇ ಪ್ರದರ್ಶಿಸಿದಂತಾಗುವದು

27 ಸರ್ ಜಗದೀಶ್ವರ ಚಂದ್ರ ಬೋಸರವರು ಇತ್ತಲಾಗಿ ಪ್ರತಿಪಾದಿಸಿರುವ ಇನ್ನೊಂದು ಆಯುರ್ವೇದತತ್ವವನ್ನು ಇಲ್ಲಿ ಸೂಚಿಸುವದು ಯುಕ್ತ (Desmodium gyrans ಎಂಬ) ಒಂದು ಗಿಡದಲ್ಲಿ ನಾಡೀ ಬಡಿತವು ಕಪ್ಪೆಯ ಹೃದಯದಲ್ಲಿದ್ದಂತೆ ಉಂಟೆಂತಲೂ, ಬಿಸಿಯನ್ನು ತಗ್ಗಿಸುವದರಿಂದ ಅದರ ನಾಡಿಯು ಪುಷ್ಟವಾಗಿ, ಅದರ ವೇಗವು ಕಡಿಮೆಯಾಗುತ್ತದೆಂತಲೂ, ಬಿಸಿಯನ್ನು ಏರಿಸಿದರೆ, ನಾಡಿಯು ಸಂಕೋಚವಾಗಿ ಅದರ ವೇಗವು ಅಧಿಕವಾಗುತ್ತದೆಂತಲೂ, ತಕ್ಕ ಯಂತ್ರಗಳಿಂದ ಪ್ರದರ್ಶಿಸಿ ಸ್ಥಾಪಿಸಿದ್ದಾರೆ ಪುನಃ, ಒಂದು ನಾಚಿಕೆ ಗಿಡವನ್ನು ಹಗಲಿನ ಬಳಕಿಗೆ ಎದುರಾಗಿ ಕೋಣೆಯಲ್ಲಿರಿಸಿ, ಸ್ವಲ್ಪಕಾಲದ ಮೇಲೆ ಆ ಕೋಣೆಯನ್ನು ಒಂದೇ ಸರ್ತಿ ಪರದೆಗಳಿಂದ ಮುಚ್ಚಿ ಕತ್ತಲೆ ಮಾಡಿ ಪರೀಕ್ಷಿಸಿದ್ದಲ್ಲಿ, ಅದರ ಎಲೆಗಳು ಮುಚ್ಚಿಕೊಂಡು ಬೊಗ್ಗುವ ಸ್ವಾಭಾವಿಕ ಸಂಕ್ಷೋಭವು ನಿಂತುಹೋಯಿತು. ಮುಕ್ಕಾಲು ಘಂಟೆ ಕಾಲದನಂತರ ಆ ಸಂಕ್ಷೋಭಶಕ್ತಿಯು ಪುನಃ ಕೂಡಲಿಕ್ಕಾರಂಭಿಸಿ, ಒಂದು ಘಂಟೆಯ ನಂತರ ಮೊದಲಿನಂತೆ ಬಲವಾಗಿ ಕಂಡಿತು. ಆ ಶಕ್ತಿಯು ಮಳೆಗಾಲದಲ್ಲಿ ಹೀನವಾಗಿರುತ್ತದೆ

ಆ ಸಂಕ್ಷೋಭಶಕ್ತಿಗೆ ಮೂಲವು ಎಲೆ ಕೈಯ ಬುಡಕ್ಕೆ ಗಿಡದಲ್ಲಿರುವ ಗಂಟು. ಈ ಮೂಲ ಸ್ಥಾನದಲ್ಲಿ ಒಂದು ಬೊಟ್ಟು ತಣ್ಣೀರನ್ನು ಎಲೆಯು ಬೊಗ್ಗಿರುವಾಗ ಹಚ್ಚಿದರಿಂದ, ಎಲೆಯು ನಿಜ ಸ್ಥಿತಿಗೆ ಬರುವದಕ್ಕೆ 15 ಮಿನಿಟು ಕಾಲದ ಬದಲಾಗಿ 45 ಮಿನಿಟು ಕಾಲ ಹಿಡಿಯಿತು ಅನಂತರ 15 ಮಿನಿಟುಗಳ ಕಾಲಾಂತರಗಳಲ್ಲಿ ಮೊದಲಿನಂತೆ ಸಂಕ್ಷೋಭವನ್ನುಂಟುಮಾಡುವದಕ್ಕೆ ಪ್ರಯತ್ನಿಸಿದ್ದು ನಿಷ್ಫಲವಾಯಿತು. ಆ ಮೇಲೆ ಒಂದು ಬೊಟ್ಟು ಬಲವಾದ ಗ್ಲಿಸರೀನನ್ನು (Glycerine) ಹಚ್ಚಿ ನೀರನ್ನು ಆರಿಸಿದ್ದಲ್ಲಿ, ಸಂಕ್ಷೋಭವು ಉಂಟಾಗಿ ಸ್ವಸ್ಥ ಸ್ಥಿತಿಯು ಕಂಡಿತು. ಈ ಪರೀಕ್ಷೆಗಳ ಉಪಲಬ್ಧಿಯು ಆಯುರ್ವೇದದಲ್ಲಿ ಉಕ್ತವಾದ ಪಿತ್ತ ಕಫಗಳ ಕರ್ಮಗಳನ್ನೂ, ನಾಡೀ ಲಕ್ಷಣಗಳನ್ನೂ, ಪ್ರತಿಪಾದಿಸತಕ್ಕಂಥಾದ್ದಾಗಿರುತ್ತದೆ. ಇದೇ ರೀತಿ ಆಯುರ್ವೇದದ ಇತರ ತತ್ವಗಳು ಕ್ರಮೇಣ ಪಾಶ್ಚಾತ್ಯ ವಿದ್ವಾಂಸರ ಶೋಧನೆಗಳಿಂದಲೇ ಪ್ರಮಾಣೀಕರಿಸಲ್ಪಡಬಹುದು ಹ್ಯಾಗಾದರೂ, ಆಯುರ್ವೇದವನ್ನು ತಿರಸ್ಕಾರ ಮಾಡುವದಕ್ಕೆ ಮುಂದಾಗಿ, ಅದರ ತತ್ವಗಳ ಪೂರ್ಣವಾದ ಶೋಧನಕ್ಕೆ ಸರ್ ಜಗದೀಶ್ಚಂದ್ರ ಬೋಸರವರನ್ನು, ಅಥವಾ ಅವರಿಗನುಕೂಲವಿಲ್ಲದಿದ್ದರೆ, ಅವರ ನಿಪುಣ ಶಿಷ್ಯರೊಳಗೊಬ್ಬರನ್ನು, ನಿಯೋಜಿಸಿ, ಬೇಕಾದ ಎಲ್ಲಾ ಅನುಕೂಲತೆಗಳನ್ನು ಒದಗಿಸಿಕೊಟ್ಟು, ಅಂಥಾ ಶೋಧನಗಳ ಫಲಿತಾಂಶಗಳನ್ನು ಸಂಗ್ರಹಿಸುವದು ನಮ್ಮ ಸರಕಾರದ ಕರ್ತವ್ಯವಾಗಿರುತ್ತದೆ ಇಂಥಾ ಬಹು ಸಾರ್ಥಕವಾದ ಕೆಲಸಕ್ಕೆ ಈ ಭರತಖಂಡದಲ್ಲಿರುವ ಅನೇಕ ದೇಶೀಯ ಮಹಾರಾಜರೊಳಗೆ ಯಾರೊಬ್ಬರೂ ಈ ವರೆಗೆ ಮನಸ್ಸು ಕೊಡದಿದ್ದದ್ದು ಶೋಚನೀಯವಾದ ಸಂಗತಿ.

28 ಎಲಾಯತಿಯಲ್ಲಿ ಕಡೇ ಸಾರಿ ನಡೆದ ಮಹಾ ಯುದ್ಧದ ಪ್ರಚಾರಾಂತರದಲ್ಲಿ ಪಾಶ್ಚಾತ್ಯ ವಿದ್ವಾಂಸರು ಹೊಸತಾಗಿ ಕಂಡುಹಿಡಿದ ಒಂದು ವಿಶೇಷವಾದ ಉಪಲಬ್ಧಿಯು ಏನಂದರೆ — ಯಾರಾದರೂ ಯುದ್ಧದಲ್ಲಿ ಗಾಯಪಟ್ಟು ವಿಶೇಷವಾಗಿ ರಕ್ತವು ಸ್ರವಿಸಿ ಹೋಗುವದರಿಂದ ಸಾಯಲಿಕ್ಕೆ ಸಿದ್ಧವಾದರೆ, ಬೇರೆ ಜನರ ದೇಹದಿಂದ ರಕ್ತವನ್ನು ತೆಗೆದು, ಅದನ್ನು ಅವರ ರಕ್ತಶಿರೆಗಳೊಳಗೆ ನಳಿಗೆಗಳಿಂದ ಸೇರಿಸಿದರೆ, ಹಾಗೆ ಹೊಸ ರಕ್ತವು ಒಳಗೆ ಸೇರಿದ ಹಾಗೆ ಆ ಗಾಯಪಟ್ಟವನ ಶ್ವಾಸಗಳು, ನಾಡಿಗಳು ಮುಂತಾದವು ಕೂಡಲೇ ಬಲಪಟ್ಟು, ಅತಿಸ್ವಲ್ಪಕಾಲದೊಳಗ ಅವನಿಗೆ ಆಶ್ಚರ್ಯಕರವಾಗಿ ಸೌಖ್ಯ ಉಂಟಾಗುತ್ತದೆಂಬದು ಮೊದಲೇ ತಿಳಿದಿದ್ದ ಸಂಗತಿಯಾಗಿತ್ತು ಆರೋಗ್ಯವಂತನ ದೇಹದಿಂದ ತೆಗೆದ ರಕ್ತವು ಉಪಯೋಗಿಸಲ್ಪಡುವದಕ್ಕೆ ಮೊದಲೇ ಗಟ್ಟಿಯಾಗಿ ಹೋಗದ ಹಾಗೆ ಮಾಡುವದು, ಈ ಪ್ರತಿರಕ್ತ ಪ್ರದಾನವನ್ನು ಸಾಕಷ್ಟು ಬೇಗನೇ ಮಾಡಲಿಕ್ಕೆ ಅನುಕೂಲಿಸುವದು, ರಕ್ತವನ್ನು ಕೊಡುವದಕ್ಕೆ ಯೋಗ್ಯರಾದ ಮತ್ತು ಸಮ್ಮತಿಸುವ ಜನರನ್ನು ಮುಂದಾಗಿ ಸಂಗ್ರಹಿಸಿಟ್ಟುಕೊಳ್ಳುವದು, ಮುಂತಾದ ಕಷ್ಟಗಳಿಗೆಲ್ಲ ತಕ್ಕ ಪರಿಹಾರಗಳನ್ನು ಮಾಡಿಕೊಂಡಿದ್ದರು ತಿಳಿದ ಮಟ್ಟಿಗೆ ಯಾವ ದೋಷವೂ ಬಾರದಂತೆ ಜಾಗ್ರತೆ ತೆಗೆದುಕೊಂಡು, ಈ ಪ್ರತಿರಕ್ತಪ್ರದಾನವನ್ನು ಮಾಡಿದಾಗ್ಯೂ, ಕೆಲವರು ಅದರಿಂದ ಏನೂ ಪ್ರಯೋಜನ ಪಡಿಯದೆ ಸಾಯುವದು ಕಂಡಿತು. ಇದರ ಕಾರಣವನ್ನು ಒಬ್ಬರು ಅಮೇರಿಕದ ಡಾಕ್ಟರರು ಕಂಡುಹಿಡಿದರು. ಅದೇನೆಂದರೆ — ಮನುಷ್ಯರಲ್ಲಿ ರಕ್ತಭೇದದ ಮೇಲೆ ನಾಲ್ಕು ವರ್ಗಗಳಿವೆ. ಒಂದನೇ ವರ್ಗದೊಳಗೆ ಸೇರಿದ ಯಾವನೊಬ್ಬನ ರಕ್ತವು ಅದೇ ವರ್ಗಕ್ಕೆ ಸೇರಿದ ಇನ್ನೊಬ್ಬನಿಗೆ ಪ್ರಯೋಜನಕರವಾಗುತ್ತ

ದಲ್ಲದೆ, ಇತರ ಮೂರು ವರ್ಗಗಳ ಜನರಿಗೆ ನಿರರ್ಥಕ, ಆದರೆ ಆ ವರ್ಗದವರಿಗೆ ಇತರ ಮೂರು ವರ್ಗಗಳ ಜನರೊಳಗೆ ಯಾರ ರಕ್ತವಾದರೂ ಹಿತವಾಗುತ್ತದೆ. ಇಂಥವರು ನೂರರಲ್ಲಿ ಒಬ್ಬನಂತೆ ಮಾತ್ರ ಇರುತ್ತಾರೆ. 2ನೇ ವರ್ಗದವರ ರಕ್ತವು ಯಾವ ವರ್ಗದವನಿಗಾದರೂ ಹಿತವಾಗುತ್ತದೆ; ಆದರೆ ಆ ವರ್ಗದವನಿಗೆ ರಕ್ತ ಬೇಕಾದರೆ, ಇನ್ನೊಬ್ಬ ಅದೇ ವರ್ಗದವನ ರಕ್ತ ಸಿಕ್ಕಬೇಕಲ್ಲದೆ, ಇತರ ವರ್ಗದವರ ರಕ್ತ ಹಿತವಾಗುವದಿಲ್ಲ ಈ ವರ್ಗದವರು ನೂರರಲ್ಲಿ 44ರಂತೆ ಇರುತ್ತಾರೆ 3ನೇ 4ನೇ ವರ್ಗಗಳ ಜನರ ರಕ್ತವು ಆಯಾ ವರ್ಗದವರಿಗೆ ಮತ್ತು 1ನೇ ವರ್ಗದವರಿಗೆ ಹಿತವಾಗುತ್ತದಲ್ಲದೆ, ಆ ಎರಡು ವರ್ಗಗಳೊಳಗೆ ಒಂದು ವರ್ಗದವರ ರಕ್ತವು ಇತರ ವರ್ಗದವರಿಗೆ ಆಗುವದಿಲ್ಲ ಯಾವನಾದರೂ ಈ ನಾಲ್ಕು ವರ್ಗಗಳೊಳಗೆ ಯಾವದಕ್ಕೆ ಸೇರಿದವನೆಂಬದನ್ನು ಕೆಲವು ಮಿನಿಟುಗಳೊಳಗೆ ಪರೀಕ್ಷಿಸಲಿಕ್ಕಾಗುತ್ತದೆ. ಇದನ್ನು ತಿಳಿದ ಮೇಲೆ ರಕ್ತಪ್ರದಾನಕ್ಕೆ 2ನೇ ವರ್ಗದವರನ್ನೇ ಅಥವಾ ರಕ್ತ ನಷ್ಟವಾದವರ ವರ್ಗದ ಜನರನ್ನೇ ಆರಿಸುತ್ತಿದ್ದರು ಈ ರಕ್ತಜಾತಿಭೇದವು ರೋಗ ಮುಂತಾದ ಸಂಗತ್ಯಾನುಸಾರವಾಗಿ ಉಂಟಾಗುವದಲ್ಲ, ಹುಟ್ಟುವಾಗಲೇ ಇರುವಂಥಾದ್ದು. ಜನಿಸಿದ ಶಿಶುವನ್ನು ಆಗಲೇ ಪರೀಕ್ಷೆಮಾಡಿದರೆ ಈ ರಕ್ತಭೇದವು ಕಾಣುತ್ತದೆ. ತಾಯಿಯ ವರ್ಗ ಬೇರೆ, ಶಿಶುವಿನ ವರ್ಗ ಬೇರೆಯಾಗಿರುವದುಂಟು. ಈ ಅಭಿಪ್ರಾಯವನ್ನು ಒಬ್ಬ ಪ್ರಸಿದ್ಧ ಡಾಕ್ಟರರು* ಒರದ ಲೇಖನದಿಂದ ತೆಗದದ್ದು ಮನುಷ್ಯ ರಕ್ತದಲ್ಲಿ ಜನ್ಮತಃ ಭೇದವುಂಟೆಂತಾದರ ಸತ್ತ್ವ-ರಜಃ-ತಮಃ ಎಂಬ ಅಥವಾ ವಾತ, ಪಿತ್ತ, ಕಫ ಎಂಬ ಪ್ರಕೃತಿಭೇದಗಳು, ಬ್ರಹ್ಮ-ಕ್ಷತ್ರ-ವೈಶ್ಯ-ಶೂದ್ರ ಎಂಬ ವರ್ಣಭೇದಗಳು ಮುಂತಾದ ಹಿಂದು ಮತೋಕ್ತ ವಿಭಾಗಗಳು ಜನ್ಮತಃ ಇರಲಾರವು ಎಂತ ನಿಶ್ಚಯವಾಗಿ ಹೇಳುವದು ಹ್ಯಾಗೆ? ಹ್ಯಾಗಿದ್ದರೂ, ಮೊನ್ನೆ ವರೆಗೆ ಅಸಾಧ್ಯವೆಂದದ್ದು ನಿನ್ನೆ ಸಾಧ್ಯವಾಯಿತು, ನಿನ್ನೆ ವರೆಗೆ ಅಸಾಧ್ಯವೆಂದದ್ದು ಈ ದಿನ ಸಾಧ್ಯವಾಯಿತು ಎಂತಾದ ಮೇಲೆ, ಇಂದು ಅಸಾಧ್ಯ ಅಥವಾ ಅಸಂಭವನೀಯವೆಂತ ಕಂಡವುಗಳು, ಕೆಲವು ಮಟ್ಟಿಗಾದರೂ ನಾಳೆ ಸಾಧ್ಯವಾಗಬಾರದು ಯಾಕೆ?

*Geoffrey Keynes, M D Asst Professor surgical unit, S Bartholomew's Hospital, (*New India* supplement, June 19, 1920)

2) ಆಯುರ್ವೇದಚಿಕಿತ್ಸಾಕ್ರಮದ ಸಾರ್ಥಕತ್ವದ ಶೋಧನಕ್ಕೆ ನಿಯುಕ್ತರಾದ ಡಾಕ್ಟರ ಕೋಮನ್‌ನವರು, ಚರಕ-ಸುಶ್ರುತ-ವಾಗ್ಭಟ-ಸಾಧವನಿದಾನಾದಿ ಗ್ರಂಥಗಳನ್ನು ನೋಡಿ, ತ್ರಿದೋಷಗಳ ತತ್ತ್ವವನ್ನು ತಿಳಿಯುವದಕ್ಕೆ ಅಧಿಕವಾಗಿ ಪ್ರಯತ್ನಿಸಿದ ಹಾಗೆ ತಾನು ಹೆಚ್ಚುಹೆಚ್ಚು ಅಗಾಧವಾದ ಕೆಸರಿಗೆ ಇಳಿದ ಹಾಗೆ ಆಯಿತೆಂತಲೂ, ಪೂರ್ವದ ಮಹರ್ಷಿಗಳ ಕಾಲದಲ್ಲಿ ತ್ರಿದೋಷನ್ಯಾಯವು ಚಿಕಿತ್ಸೆಗೊಂದು ಆಧಾರವಾಗಿರಬಹುದಾದರೂ, ಅದು ಈಗಿನ ಕಾಲದ ವಿಚಾರಪರವಾದ ಶಾರೀರಶಾಸ್ತ್ರದ ಎದುರಿನಲ್ಲಿ ನಿಲ್ಲತಕ್ಕದ್ದಲ್ಲ ಎಂತಲೂ, ಮೇಲಿಂದ ಮೇಲೆ ತಮ್ಮ ಅಭಿಪ್ರಾಯವನ್ನು ಹೇಳಿ, ಆಯುರ್ವೇದೀಯ ಪಂಡಿತರು ಉಪಯೋಗಿಸುವ ಔಷಧಗಳಲ್ಲಿ ಮತ್ತು ಯೋಗಗಳಲ್ಲಿ ಪ್ರಯೋಜನಕರವಾದವುಗಳನ್ನು ಕುರಿತು ಒಂದು ದೀರ್ಘವಾದ ವಿಜ್ಞಾಪನಪತ್ರವನ್ನು ಸರಕಾರಕ್ಕೆ ಬರಕೊಂಡಿದ್ದಾರೆ ಅವರು ಮಾಡಿದ ಆ ಕೆಲಸವು ಅಪಾರ್ಥ ಮಾತ್ರವಲ್ಲ, ಅಪಕಾರಕ ಎಂತ ಸ್ವಲ್ಪ ವಿಚಾರಮಾಡಿದ್ದಲ್ಲಿ ಸರ್ವರಿಗೂ ಗೊತ್ತಾಗುವದು. ಇವರೇ ಆಯುರ್ವೇದದ ರೋಗವಿಭಾಗ, ಔಷಧಗಳ ಗುಣ

ಪಾಠ, ಚಿಕಿತ್ಸಾಕ್ರಮ, ಪಥ್ಯಾಪಚಾರ ಮುಂತಾದ ಎಲ್ಲಾ ಅಂಗಗಳು ತ್ರಿದೋಷನ್ಯಾಯವನ್ನು ಆಧರಿಸಿ ನಿಂತಿವೆ ಎಂತ ಬರೆದಿದ್ದಾರೆ. ಆಯುರ್ವೇದಗ್ರಂಥಗಳಲ್ಲಿ ಉಕ್ತವಾದ ರೋಗಗಳ ಹೆಸರುಗಳಿಗೂ ಪಾಶ್ಚಾತ್ಯವೈದ್ಯಾನುಸಾರವಾದ ರೋಗಗಳ ಹೆಸರುಗಳಿಗೂ ಲೇಶಮಾತ್ರ ಹೋಲುವಿಕೆಯೂ ಇಲ್ಲ ಎಂತಲೂ ಅವರೇ ಹೇಳಿದ್ದಾರೆ. ಹಾಗಂದ ಮೇಲೆ ಆಯುರ್ವೇದೀಯ ಗ್ರಂಥಗಳ ಆಧಾರದ ಮೇಲೆ ಆಸ್ಪತ್ರಿಗಳಲ್ಲಿಯ ರೋಗಿಗಳಿಗೆ ದೇಶೀಯ ಔಷಧಗಳನ್ನು, ತ್ರಿದೋಷನ್ಯಾಯವನ್ನು ಬಟ್ಟು, ಉಪಯೋಗಿಸಿ ಪರೀಕ್ಷಿಸಿದ್ದೆಂಬದು ಸರಿಯಾದ್ದೋ? ಇಂಥಾ ಅಸಂಬದ್ಧ ಪ್ರಯತ್ನಾಪಸರದಲ್ಲಿ ಎಷ್ಟು ರೋಗಗಳಿಗೆ ಎಷ್ಟು ಸಂಕಷ್ಟ ಉಂಟಾಗಿರಬಹುದು? ಯಾವದಾದರೊಂದು ರೋಗಕ್ಕ ಉದಾಹೃತವಾದ ಔಷಧವು ಇಂಥಾ ಲಕ್ಷಣಗಳು ಕಂಡಾಗ್ಗೆ, ಇಂಥಾ ಕಾಲದಲ್ಲಿ, ಇಂಥಾ ಪ್ರದೇಶದಲ್ಲಿ, ಇಂಥಾ ಪ್ರಕೃತಿಯವನಿಗೆ, ಇಂಥಾ ಸಾತ್ಮ್ಯದವನಿಗೆ, ಇಂಥಾ ಸ್ಥಿತಿಯವನಿಗೆ, ಇಂಥಾ ಬಲದವನಿಗೆ, ಇಂಥಾ ಶರೀರದವನಿಗೆ, ಇಂಥಾ ಪ್ರಮಾಣದಲ್ಲಿ, ಇಂಥಾ ಪಥ್ಯಾದಿ ಆಚಾರದಲ್ಲಿ, ಗುಣಕರವೆಂತಲ್ಲದೆ, ಸಾಮಾನ್ಯವಾಗಿ ಒಂದು ರೋಗಕ್ಕ ಒಂದು ಔಷಧ ಎಂಬ ನ್ಯಾಯ ಆಯುರ್ವೇದದಲ್ಲಿ ಇಲ್ಲ. ಆದರಿಂದ, ಈ ಭೇದಗಳನ್ನು ತಿಳಿಯದವರು ಆಯುರ್ವೇದೀಯ ಯೋಗಗಳ ಸ್ಪರ್ಶನ ಮಾಡದಿರುವದೇ ಎಷಿತವಾದ್ದು ಡಾಕ್ಟರ್ ಕೋಪುನವರು ಮಾಡಿದ ಹಾಗಿನ ಪರೀಕ್ಷಾಪ್ರಯತ್ನಗಳಿಂದ ಅನೇಕ ರೋಗಗಳಿಗೆ ಕೆಡಕು ಉಂಟಾಗುವದರಲ್ಲಿ ಸಂದೇಹವಿಲ್ಲ. ಉದಾಹರಣಾರ್ಥವಾಗಿ ಅವರು ಹಸಿಶುಂಠಿಯ ಉಪಯೋಗದ ಕುರಿತು ಬರೆದಿರುವ ಅಭಿಪ್ರಾಯವನ್ನು ನೋಡಬಹುದು. ಕೆಲವು ಉದರವ್ಯಾಧಿಗಳಲ್ಲಿ ಇವರು ಹಸಿಶುಂಠಿಯ ರಸವನ್ನು ಉಪಯೋಗಿಸಿದ್ದಲ್ಲಿ ಮೂತ್ರವು ಧಾರಾಳವಾಗಿ ಹೋಗಿ, ಉದರದ ಬಾಕು ವಾಸಿಯಾದ್ದರಿಂದ, ಹಸೀ ಶುಂಠಿಯ ರಸಕ್ಕೆ ಮೂತ್ರಕಾರಿ (diuretic) ಗುಣವಿದೆ ಎಂತ ಅಭಿಪ್ರಾಯಪಟ್ಟ ಹಾಗೆ ಬರೆದಿದ್ದಾರೆ. ಮೂತ್ರಕೃಚ್ಛ್ರವ್ಯಾಧಿಯಲ್ಲಿ ಶುಂಠಿಯನ್ನು ಉಪಯೋಗಿಸಬಾರದೆಂತ ಆಯುರ್ವೇದೀಯ ವಿಶೇಷವಿಧಿ ಇರುತ್ತದೆ. ಶುಂಠಿಯಲ್ಲ ಕಟ್ಟನ್ನು ಅಥವಾ ಹಿಡಿತವನ್ನು ಬಿಡಿಸುವ ಗುಣವಿರುತ್ತದೆ. ಒಣಶುಂಠಿಯಲ್ಲಿ ಮಲವನ್ನು ಒಣಗಿಸುವ ಗುಣವಿದ್ದರೂ, ಹಸಿ ಶುಂಠಿಯು ಮಲಮೂತ್ರಗಳೆರಡನ್ನೂ ಸಡಿಲಿಸುತ್ತದೆ. ಸಾಧಾರಣವಾಗಿ ಮಲ ಸಡಿಲಾದರೆ, ಮೂತ್ರ ಕಡಿಮೆ ಮತ್ತು ಮೂತ್ರ ಹೆಚ್ಚಾದರೆ ಮಲ ಕಡಿಮೆ. ರೋಗಗಳನ್ನು ಹಾಲು ಮತ್ತು ಗಂಜಿಯ ಪಥ್ಯದಲ್ಲಟ್ಟಿದ್ದರೆಂತ ಕಾಣುತ್ತದೆ. ಹಾಗೆ ರೋಗಿಯು ದ್ರವಪದಾರ್ಥಗಳನ್ನೇ ಅಧಿಕವಾಗಿ ಸೇವಿಸಿದರಿಂದಲೂ, ಮೂತ್ರವು ಕಟ್ಟಿಕೊಳ್ಳುವ ದೋಷ ಶುಂಠಿರಸದಿಂದ ಪರಿಹಾರವಾದ್ದರಿಂದಲೂ, ಕೆಲವು ಸಂಗತಿಗಳಲ್ಲಿ ಮೂತ್ರವೇ ಅಧಿಕವಾಗಿ ಹೋಗಿರಬಹುದು. ಆದರೆ, ಉಷ್ಣಾಧಿಕ್ಯವಿದ್ದಲ್ಲಿ, ಅಥವಾ ರೋಗಿಯು ಉಷ್ಣವಾದ ಪಥ್ಯದಲ್ಲಿದ್ದರೆ, ಅಥವಾ ಒಳಗೆ ಎಲ್ಲಿಯಾದರೂ ವ್ರಣಾದಿಗಳು ಇದ್ದರೆ, ಶುಂಠಿರಸದ ಉಪಯೋಗದಿಂದ ರೋಗಿಗೆ ಅಪಾಯವಾದೀತೆಂಬದರಲ್ಲಿ ಸಂದೇಹವಿಲ್ಲ. ಪುನಃ ದಶಮೂಲಗಳನ್ನು ಜ್ವರಹರವರ್ಗದ ಔಷಧಗಳೊಳಗೊಂದಾಗಿ ಕಾಣಿಸಿದ್ದಾರೆ. ದಶಮೂಲಗಳು ತ್ರಿದೋಷಹರವಾದ್ದರಿಂದ ಸನ್ನಿಪಾತಜ್ವರದಲ್ಲಿ ವಿಶೇಷವಾಗಿ ಉಪಯೋಗಿಸಲ್ಪಡುತ್ತವಾದರೂ, ಇತರ ಜ್ವರಗಳಲ್ಲಿ ಮತ್ತು ತರುಣಜ್ವರದಲ್ಲಿ ಅವುಗಳ ಕಷಾಯವನ್ನು ಉಪಯೋಗಿಸಿದರೆ, ವಿಷಮವಾಗಿ ಜ್ವರವು ಸನ್ನಿಪಾತಕ್ಕೆ ಬೀಳಲಿಕ್ಕೆ ಸಾಕು. ಅದಲ್ಲದೆ, ಉಷ್ಣ-ಶೀತ ಭೇದದ ಮೇಲೆ ಒಂದೆರಡು ಬೇರೆ

ಔಷಧಗಳನ್ನು ಕೂಡಿಸಿಕೊಳ್ಳದೆ ಬರೇ ದಶಮೂಲಗಳ ಕಷಾಯವನ್ನು ಜ್ವರಕ್ಕೆ ಕೊಡುವದು ಆಯುರ್ವೇದಕ್ರಮದಲ್ಲಿ ಅಪರೂಪ. ಮತ್ತು ದಶಮೂಲಾದಿ ಕಷಾಯಗಳು ಬೇರೆ ಅನೇಕ ರೋಗಗಳಲ್ಲಿಯೂ ಹೇಳಲ್ಪಟ್ಟವೆ. ಆದ್ದರಿಂದ ದಶಮೂಲಗಳ ಕಷಾಯವನ್ನು ಜ್ವರಹರ ಔಷಧಗಳ ಪಟ್ಟಿಯಲ್ಲಿ ವಿಶೇಷವಾಗಿ ಸೇರಿಸಿದ್ದು ಸುಯಲ್ಲ.

30. ಈಗ, ಒಂದೇ ನಾಡಿಯಲ್ಲಿ ವಾತ-ಪಿತ್ತ-ಕಫ ಎಂಬ ಮೂರು ಸ್ಥಾನಗಳಿವೆ ಎನ್ನುವದು ಕೇವಲ ಅಸಂಬದ್ಧವಾದ ಎಂಬ ಪ್ರಮೇಯವನ್ನು ಸ್ವಲ್ಪ ಆಲೋಚಿಸುವ. ಸಿದಿಯು ಗಾಳಿಯನ್ನು ಬಲದಿಂದ ಹೊರಗೆ ದೂಕುವಂತೆ, ಹೃದಯವು ಧಮನಿಯೊಳಗೆ ಒಡ್ಡುವ ರಕ್ತವು ಬೇರ ಬೇರೆ ತೆರೆಗಳಾಗಿ ಪ್ರವಾಹಿಸುವಾಗ್ಗೆ ಆ ತೆರೆಗಳ ಪ್ರಾಬಲ್ಯದಿಂದುಂಟಾಗುವ ಧನುಸಿಯ ಉಬ್ಬುವಿಕೆಗಳೇ ನಾಡೀ ಒಡಿತಗಳಾಗಿರುವದರಿಂದ, ಆ ಬಡಿತಗಳೊಳಗೆ ಒಂದು ವಾತ, ಒಂದು ಪಿತ್ತ, ಒಂದು ಕಫ ಎಂಬ ಭೇದಗಳುಂಟಾಗುವದು ಹ್ಯಾಗೆ? ಹೃದಯದಿಂದ ರಕ್ತವು ಹೊರಗೆ ಧಮನಿಗೆ ಬರುವಾಗಲೇ ಭೇದಪರುತ್ತದೆನ್ನುವ ಪಕ್ಷದಲ್ಲಿ, ಒಂದು ಸರ್ತಿ ಒಂದ ರಕ್ತದ ತೆರೆಯು ಮುಂದೆ ಹೋದಲ್ಲೆಲ್ಲಾ ಒಂದೇ ವಿಧದ ಒಡಿತಗಳು ಕಾಣಬೇಕಲ್ಲದೆ, ಆಯುರ್ವೇದದ ಪಂಡಿತರು ಹೇಳುವಂತೆ, ಹೆಬ್ಬೆಟ್ಟಿನ ಮೂಲದ ಕಳಗೆ ಇಟ್ಟ ಮೂರು ಬೆರಳುಗಳೊಳಗೆ ತರ್ಜನಿಗೆ ಮುಟ್ಟುವಂಥಾದ್ದು ವಾತ, ಮಧ್ಯಮ ಬೆರಳಿಗೆ ತಗಲುವಂಥಾದ್ದು ಪಿತ್ತ, ಅನಾಮಿಕಯ ಅಡಿಯದು ಕಫ ಎಂಬ ಮೂರು ವಿಧವಾದ ಒಡಿತಗಳು ಉಂಟಾಗುವದು ಹ್ಯಾಗೆ? ಎಂತ ಪ್ರತಿಪಕ್ಷದವರು ಕೇಳುವ ಪ್ರಶ್ನೆಗಳಿಗೆ ಉತ್ತರ ಕೂಡಲು ಅಸಮರ್ಥರಾದ ಅನೇಕ ಆಯುರ್ವೇದೀಯ ಪಂಡಿತರುಗಳೇ ಆಯುರ್ವೇದದಲ್ಲಿಯೂ ಮೂರು ದೋಷಗಳಿಗೆ ನಾಡಿಯಲ್ಲಿ ಮೂರು ಜೀರೆ ಜೀರೆ ಸ್ಥಾನಗಳಿವ ಎಂತ ಇಲ್ಲ ಎಂದು ಹೇಳಿ, ಈ ವಾದಕ್ಕೆ ವಿರೋಧವಾಗಿರುವ ಶಾಸ್ತ್ರೋಕ್ತ ಶ್ಲೋಕಗಳನ್ನು ಬಿಟ್ಟು ಬಿಟ್ಟು, ಆರಂಭದ ನಾಡಿ ವಾತ, ಮಧ್ಯದ್ದು ಪಿತ್ತ, ಅಂತ್ಯದ್ದು ಕಫ ಎನ್ನುವ ಶ್ಲೋಕಕ್ಕೆ ಮೂರು ಬೆರಳುಗಳ ಅಟಿಯಲ್ಲಿಯೂ ಒಂದನೇ ಸರ್ತಿದು ವಾತ, ಎರಡನೇ ಸರ್ತಿದು ಪಿತ್ತ, ಮೂರನೇ ಸರ್ತಿದು ಕಫ ಎಂಬ ಅರ್ಥ ಹೇಳಲಕ್ಕೂ ಬರೆಯಲಕ್ಕೂ ತೊಡಗಿಸಿದ್ದಾರೆ ಶಬ್ದಕಲ್ಪದ್ರುಮವು ಈ ಪಕ್ಷವನ್ನು ಎತ್ತಿ ಹಿಡಿದು, ಸ್ಥಾನಭೇದವು ಎಲ್ಲಿಯೂ ಹೇಳಲ್ಪಡಲಿಲ್ಲವಾದ್ದರಿಂದ ತರ್ಜನೀದು ಒಂದನೇದು ಎಂಬ ಅರ್ಥವಲ್ಲ ಎಂತಲೂ, ಒಂದನೇದು ಎಂಬದು ಮೊಳಕೈಯ ಬುಡವನ್ನು ತಿಕ್ಕಿದ ಎರಡನೇ ಕ್ಷಣದಲ್ಲಿ ಕಾಣುವಂಥಾದ್ದು ಎಂತಲೂ ಹೇಳುತ್ತದೆ ಇದೆಲ್ಲಾ ನನಗೆ ಒಂದು ಶೋಚನೀಯವಾಗಿ ಕಾಣುತ್ತದೆ ಅಶಾಸ್ತ್ರೀಯವಾದ್ದು ನಮ್ಮ ಶಾಸ್ತ್ರದಲ್ಲಿ ಕಾಣುತ್ತದೆಂದರೆ ನಮಗೆ ಅಪಮಾನ ಎಂಬ ಅನುಚಿತಭಾವ ಅಥವಾ ದುರ್ವಾತ್ಸಲ್ಯ ಈ ಉದ್ಯಮಕ್ಕೆ ಕಾರಣವಾಗಿರಬೇಕು ಮೂರು ಬೆರಳುಗಳ ಅಡಿಯಲ್ಲಿಯೂ ಏಕರೀತಿಯಾಗಿರುವ ಒಡಿತಗಳೊಳಗೆ ಒಂದನೇದು ಯಾವದು ಎಂಬದನ್ನು ಗೊತ್ತುಮಾಡುವದು ಅಸಾಧ್ಯ ಎಂಬ ಗ್ರಹಿಕೆ ಆ ಪಕ್ಷದ ಪಂಡಿತರಿಗೆ ಹುಟ್ಟದೆ, ಹುರಿಯುವ ಬಾಣಲನ್ನು ಬಿಟ್ಟು ಉರಿಯುವ ಬೆಂಕಿಗೆ ಹಾರುವ ಪ್ರಯತ್ನವನ್ನು ಅವರು ಮಾಡುವದು ಆಶ್ಚರ್ಯ ಶಬ್ದಕಲ್ಪದ್ರುಮವು ಕೊಡುವ ಸಮಾಧಾನವು ಹಾಸಾಸ್ಪದವಾದದ್ದು. ಯಾಕೆಂದರೆ ಮೊಳಕೈಯ ಬುಡವನ್ನು ತಿಕ್ಕಿಕೊಳ್ಳಬೇಕೆಂಬದು ಅಗತ್ಯವಲ್ಲ; ಅನೇಕ ಆಧರಣೀಯವಾದ ಗ್ರಂಥಗಳು ಈ ತಿಕ್ಕುವಿಕೆಯನ್ನು ಎತ್ತಲೇ ಇಲ್ಲ; ಹಾಗೆ ತಿಕ್ಕಿದನಂತರದ ಕ್ಷಣವನ್ನು ನಿಶ್ಚಯಿಸುವದು ಅಸಾಧ್ಯ, ಒಮ್ಮೆ ತಿಕ್ಕಿದ

ಮಾತ್ರದಿಂದ ಆ ಕೈಯ ನಾಡಿಯ ಗತಿಗಳೆಲ್ಲ ಭೇದವಾಗುತ್ತವೆಂಬದು ಕೇವಲ ಅಸಂಗತ, ಇವೇ ಮೊದಲಾದ ಅನೇಕ ಕಾರಣಗಳಿಂದ ಈ ನೂತನ ವ್ಯಾಖ್ಯಾನವು ಅನಾಧೇಯ ವಾದ್ದೆಂತ ತೋರಿಸಬಹುದು ಈಗ, ಪ್ರತ್ಯಕ್ಷ ಫಲವನ್ನು ಒಪ್ಪಿಕೊಳ್ಳುವದಕ್ಕೆ ಕಾರಣವನ್ನು ಗೊತ್ತುಮಾಡಿಕೊಳ್ಳುವದು ಅವಶ್ಯಕವಲ್ಲ. ಕಾರಣವನ್ನು ಅರಿಯದೆ ನಾವು ಒಪ್ಪಿಕೊಳ್ಳುವ ಪ್ರತ್ಯಕ್ಷವಾದ ಭಾವಗಳು ಅಸಂಖ್ಯೇಯವಾಗಿವೆ. ಜ್ಞಾನಾಸಂಪೂರ್ಣತೆಯು ನರಜನ್ಮದ ಲಕ್ಷಣಗಳಲ್ಲಿ ಒಂದು. ಇದಲ್ಲದಿದ್ದರೆ, ದೇವರೆಂಬ ಭಾವಕ್ಕೆ ಎಡೆಯೇ ಇರುತ್ತಿದ್ದಿಲ್ಲ. ಪ್ರತ್ಯಕ್ಷ ವಾಗಿ ಆಯುರ್ವೇದ ನಿರ್ದಿಷ್ಟವಾದ ಮೂರು ಸ್ಥಾನಗಳ ನಾಡೀಗತಿಗಳಲ್ಲಿ ಭೇದ ಉಂಟೋ, ಇಲ್ಲವೋ, ಎಂಬದನ್ನು ನಿಃಸಂಶಯವಾಗಿ ಗೊತ್ತುಮಾಡಲಿಕ್ಕೆ ಪಾಶ್ಚಾತ್ಯಕ್ರಮದಲ್ಲಿ ಈಗ ಬಹಳ ಸುಲಭವಾದ ಯುಕ್ತಿ ಉಂಟು. ನಾಡಿಯು ತನ್ನ ಗತಿಯನ್ನು ಕಾಗದದ ಮೇಲೆ ಗೀಚಿ ತೋರಿಸುವ ಹಾಗಿನ ಸ್ಫಿಗ್ಮೊಗ್ರಾಫ್ (Sphygmograph) ಎಂಬ ಯಂತ್ರವನ್ನು ನಿರ್ಮಾಣಮಾಡಿರುತ್ತಾರೆ. ನಾಡಿಯು ಸ್ಪಷ್ಟವಾಗಿ ಕಾಣುವ ಸ್ಥಾನದಲ್ಲಿ ಆ ಯಂತ್ರವನ್ನು ಇರಿಸಿ, ಅದು ಗೀಚಿ ತೋರಿಸುವ ನಾಡಿಯ ನಾನಾ ಪ್ರಕಾರವಾದ ಗತಿಭೇದಗಳನ್ನು ಪರೀಕ್ಷಿಸಿ, ವಿಚಾರಮಾಡಿದ್ದಾರ ಅದೇ ರೀತಿಯಾಗಿ ಆ ಯಂತ್ರವನ್ನು ಹೆಬ್ಬೆಟ್ಟಿನ ಮೂಲದ ಕೆಳಗಿನ ಮೂರು ನಾಡೀಸ್ಥಾನಗಳಲ್ಲಿ ಇಟ್ಟು, ಲಬ್ಧವಾಗುವ ಲಿಪಿಗಳನ್ನು ಹೋಲಿಸಿ ನೋಡಿದರೆ, ಆಯುರ್ವೇದೀಯ ನಾಡೀಶಾಸ್ತ್ರದ ತಥ್ಯವು ಯಥಾವತ್ತಾಗಿ ಕಂಡುಬರುವದು.

31. ಹಾರೀತಸಂಹಿತಾ ಮತ್ತು ದತ್ತಾತ್ರೇಯಸಂಹಿತಾ ಎಂಬ ಪೂರ್ವಗ್ರಂಥಗಳಲ್ಲಿ ನಾಡೀಪರೀಕ್ಷೆವಿಧಾನಗಳು ಸವಿಸ್ತಾರವಾಗಿ ಹೇಳಲ್ಪಟ್ಟವೆ ಎಂತ ಮೈಸೂರು ಹೊಸ ಪಂಡಿತ ಭೀಮರಾಯರ ವೈದ್ಯಸಂಗ್ರಹ ಎಂಬ ಪುಸ್ತಕವು ಹೇಳುತ್ತದೆ. ಆದರೆ ಆ ಗ್ರಂಥಗಳು ಬಹಳ ಪುರಾತನದವುಗಳಾಗಿರಲಿಕ್ಕಿಲ್ಲ ಎಂತ ಕಾಣುತ್ತದೆ. ಯಾಕೆಂದರೆ, ಚರಕ-ಸುಶ್ರುತಾದಿ ಪ್ರಸಿದ್ಧವಾದ ಪುರಾತನ ಸಂಹಿತೆಗಳಲ್ಲಿ ನಾಡೀಪರೀಕ್ಷೆಯ ಪ್ರಸ್ತಾವವೇ ಕಾಣುವದಿಲ್ಲ ವಾಗ್ಭಟನ ಎಷ್ಟೋ ಶತಮಾನಗಳನಂತರ ಉಂಟಾದ ವಂಗಸೇನನ ಗ್ರಂಥದಲ್ಲಿ ಸಹ ಅದರ ನಿರ್ದೇಶವಿಲ್ಲ. ಶಾರ್ಙ್ಗಧರಸಂಹಿತೆಯಲ್ಲಿ ನಾಡೀಪರೀಕ್ಷೆಯು ಸೂಕ್ಷ್ಮವಾಗಿ ಹೇಳಲ್ಪಟ್ಟದೆ. ಆ ಗ್ರಂಥವು 1350-1400ನೆ ಇಸವಿಗಳ ಮಧ್ಯಕಾಲದಲ್ಲಿ ಉಂಟಾದ್ದೆಂತ ಪ್ರ. ಚ. ರಾಯರವರ ಮತವಾಗಿರುತ್ತದೆ; ಹ್ಯಾಗೂ, 600 ವರ್ಷಗಳ ಹಿಂದೆಯೇ ಅದು ರಚಿತವಾದ್ದೆಂಬದರಲ್ಲಿ ಸಂದೇಹವಿಲ್ಲ. ಭಾವಪ್ರಕಾಶದಲ್ಲಿಯೂ ನಾಡೀಪರೀಕ್ಷೆ ವಿಧಾನ ಉಂಟು. ಆ ಗ್ರಂಥವು ಸುಮಾರು 1550ನೆ ಇಸವಿಯಲ್ಲಿ ಹುಟ್ಟಿದ್ದೆಂತ ಅದೇ ರಾಯರವರು ಹೇಳುತ್ತಾರೆ ಶಾರ್ಙ್ಗಧರನ ಗ್ರಂಥದಲ್ಲಿ ಕಾರಾಂಗುಷ್ಠ ಮೂಲದಲ್ಲಿರುವ ಧಮನಿಯೂ ವಾತಾದಿದೋಷಗಳಲ್ಲಿ ಮತ್ತು ಕೆಲವು ರೋಗಗಳಲ್ಲಿ ಹ್ಯಾಗೆ ನಡೆಯುತ್ತದೆಂಬದು ಸಾಮಾನ್ಯವಾಗಿ ಹೇಳಲ್ಪಟ್ಟದೆ; ಒಟ್ಟು 8½ ಶ್ಲೋಕಗಳು ಮಾತ್ರ ಈ ವಿಷಯವನ್ನು ಹೇಳುತ್ತವೆ. ಭಾವಪ್ರಕಾಶದಲ್ಲಿ ನಾಡೀಪರೀಕ್ಷೆ ಕುರಿತು ಇರುವ 12 ಶ್ಲೋಕಗಳೊಳಗೆ ಅಂಗುಷ್ಠಮೂಲದಲ್ಲಿರುವ ನಾಡಿಯನ್ನು ಮೂರು ಬೆರಳುಗಳಿಂದ ಮುಟ್ಟಿ ಪರೀಕ್ಷಿಸತಕ್ಕದ್ದಾಗಿಯೂ, ವಾತಾಧಿಕ್ಯದಲ್ಲಿ ತರ್ಜನಿಯ ತಲಕ್ಕೂ, ಪಿತ್ತಾಧಿಕ್ಯದಲ್ಲಿ ಮಧ್ಯಮ ಬೆರಳಿನ ತಲಕ್ಕೂ, ಕಫಾಧಿಕ್ಯದಲ್ಲಿ ಮೂರನೇ ಬೆರಳಿನ ತಲಕ್ಕೂ ನಾಡಿಯು ಬಲವಾಗಿ ಕಾಣುವದೆಂತಲೂ ನಿರ್ದೇಶಿಸುವ ವಚನಗಳಿವೆ. ಈ ಗ್ರಂಥದಲ್ಲಿ ಶಾರ್ಙ್ಗಧರನ ಬಹಳ ಶ್ಲೋಕಗಳು ಅಲ್ಪ ಭೇದದೊಡನೆ ಅಲ್ಲಲ್ಲಿ

ಕಾಣುತ್ತವೆ. ಆದ್ದರಿಂದ ಶಾರ್ಙ್ಗಧರನ ಕಾಲದಲ್ಲಿ ಗೊತ್ತಿಲ್ಲದ ವಾತಾದಿಗಳ ಸ್ಥಾನಭೇದವು ಭಾವಪ್ರಕಾಶದ ಕಾಲದೊಳಗೆ ದೃಢಪಟ್ಟಿತ್ತು ಎಂಬ ಊಹೆ ಸಹಜವಾಗಿ ಉಂಟಾಗುತ್ತದೆ. ಭಾವಪ್ರಕಾಶದನಂತರ ಹೊರಟ ಪ್ರಸಿದ್ಧ ಗ್ರಂಥಗಳೆಲ್ಲಾ ಆ ಭೇದವನ್ನು ಅನುಮೋದಿಸಿಯವೆ. ಭಾವಪ್ರಕಾಶವನ್ನು ರಚಿಸಿದವನು ಮಹಾಪಂಡಿತನಾಗಿದ್ದನೆಂಬದು ಸರ್ವಸಮ್ಮತವಾದ ಸಂಗತಿ. ಫರಂಗಿರೋಗದ ನಿದಾನ—ಲಕ್ಷಣಾದಿಗಳನ್ನು ಸರಿಯಾಗಿ ವಿವರಿಸಿ, ಅದಕ್ಕೆ ಪ್ರತಿ ಕ್ರಿಯೆಯಾಗಿ ರಸಕರ್ಪೂರ ಎಂಬ ವಿಷದ್ರವ್ಯವನ್ನು ಬಾಧಕಬಾರದ ರೀತಿಯಿಂದ ಹೊಟ್ಟೆಗೆ ಕೂಡುವ ವಿಧಾನವನ್ನು ಈ ಭಾವಪ್ರಕಾಶವೇ ಆರಂಭಿಸಿದ್ದೆಂತ ಪ್ರ. ಚ. ರಾಯರವರು ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ. ಅಂಧಾ ಮಹಾಪಂಡಿತನು ನಾಡೀಪರೀಕ್ಷೆಯ ವಿಷಯ ದಲ್ಲಿ ಸಿದ್ಧಾಂತವಲ್ಲದ ಅಂಶವನ್ನು ತನ್ನ ಗ್ರಂಥದಲ್ಲಿ ಸೇರಿಸಲಕ್ಕೆ ಕಾರಣವಿಲ್ಲ ನಮ್ಮ ವೈದ್ಯಾರಂಭದ ಅನೇಕ ವರ್ಷಗಳ ವರಗೆ ನಾಡಿಯ ವಾತಾದಿ ಸ್ಥಾನಭೇದಗಳಲ್ಲಿ ಅಪನಂಬಿಕೆಯುಳ್ಳವರಾಗಿ ಈಗಿನ ಪಾಶ್ಚಾತ್ಯ ಡಾಕ್ಟರರಂತೆಯೇ ನಾಡಿಯ ಬಡಿತಗಳನ್ನು ಗಡಿಯಾರ ಹಿಡಿದು ಲೆಕ್ಕಮಾಡುತ್ತಿದ್ದೆವು ಭಾವಪ್ರಕಾಶಾದಿ ಆಧರಣೀಯ ಗ್ರಂಥಗಳನ್ನು ಓದಿದ ಮೇಲೆ ಸ್ವಾಭಾವಿಕವಾಗಿ ನಮ್ಮ ಲಕ್ಷ್ಯವು ನಾಡಿಯ ಸ್ಥಾನಭೇದಗಳ ಮೇಲೆ ಬಿದ್ದು, ಪರೀಕ್ಷಿಸುತ್ತಾ ಬಂದ ಹಾಗೆ ಆ ಭೇದಗಳ ತಥ್ಯವು ಖಚಿತವಾಗುತ್ತಾ ಬಂತು. ಈಗ ಸುಮಾರು ಇಪ್ಪತ್ತೈದು ವರ್ಷಗಳ ಕಾಲದಲ್ಲಿ ಎಷ್ಟೋ ಸಹಸ್ರ ರೋಗಿಗಳ ನಾಡಿಯನ್ನು ಪರೀಕ್ಷಿಸಿ, ಆ ಭೇದಗಳು ನಿಜವಾದವು ಎಂತ ಪೂರ್ಣ ಸಮಾಧಾನ ಪಟ್ಟಿದ್ದೇವೆ ವಾತಾದಿ ದೋಷಗಳಿಗೆ ಲಕ್ಷ್ಯವಿಟ್ಟು ರೋಗಕ್ಕೆ ಚಿಕಿತ್ಸೆ ಮಾಡತಕ್ಕ ವೈದ್ಯರಿಗೆ ಆ ನಾಡೀಸ್ಥಾನಭೇದ ಗಳು ಅತಿಪ್ರಯೋಜನಕರವಾಗಿವೆ ಸಾಧಾರಣವಾಗಿ ವಾತದಲ್ಲಿ ಸರ್ಪನ ಅಥವಾ ಬಿಗ ಳೆಯ ಗತಿ, ಪಿತ್ತದಲ್ಲಿ ಕಪ್ಪೆಯ ಗತಿ, ಕಫದಲ್ಲಿ ಹಂಸದ ಅಥವಾ ಪಾರಿವಾಳದ ಗತಿ, ಮತ್ತು ಇಂಥಿಂಥಾ ರೋಗದಲ್ಲಿ ಇಂಥಿಂಥಾ ಗತಿ ಕಾಣುವದೆಂತ ಹೇಳಲ್ಪಟ್ಟ ಏವರಗಳ ವಿಚಾರದಿಂದ ಮಹತ್ಪ್ರಯೋಜನವನ್ನು ಪಡೆಯುವದು ಪಂಡಿತರುಗಳಿಗೆ ಸಹ ಪ್ರಾಯಶಃ ಅಸಾಧ್ಯವೆನ್ನ ಬಹುದು. ಆದರೆ ಮೂರು ಬೆರಳುಗಳ ಅಡಿ ಪ್ರತ್ಯೇಕವಾಗಿ ಕಾಣುವ ವಾತ-ಪಿತ್ತ-ಕಫ ಗಳೊಳಗೆ ಯಾವದರಲ್ಲಿ ದೋಷ ಕಾಣುತ್ತದೆಂಬದನ್ನು ತಿಳಿಯುವದು ಸಾಮಾನ್ಯ ಜನರಿಗೆ ಸಹ ಅಲ್ಪಯತ್ನದಿಂದ ಸಾಧ್ಯವಾದೀತು. ಫಿಡಿಲನ್ನು ಕಲಿಯಲಿಚ್ಛಿಸುವ ವಿದ್ಯಾರ್ಥಿಗೆ ರ-ಗ-ಮ-ಧ-ನಿ-ಸ ಎಂಬ ಸ್ವರಗಳು ಹುಟ್ಟುವದಕ್ಕೆ ಯಾವ ಯಾವ ಸ್ಥಾನದಲ್ಲಿ ಬೆರಳನ್ನಿಡ ಬೇಕಂಬದನ್ನು ತಿಳಿಸುವದಕ್ಕೆ ಆರಂಭದಲ್ಲಿ ಫಿಡಿಲಿನ ಮೇಲೆ ಸುಣ್ಣದ ಬೊಟ್ಟುಗಳನಿಟ್ಟು ಕೂಡುವದು ಅಗತ್ಯವಾಗಬಹುದಾದರೂ, ಕೆಲವು ದಿನಗಳ ಅಭ್ಯಾಸದಿಂದ ಫಿಡಿಲನ್ನು ಕಣ್ಣಿನಿಂದ ನೋಡದೆನೇ, ಸ್ವರಕ್ಕೆ ತಕ್ಕವಾದ ಸ್ಥಾನದಲ್ಲಿ ಬೆರಳನ್ನಿಡುವದಕ್ಕೆ ಆ ವಿದ್ಯಾರ್ಥಿಯು ಹ್ಯಾಗೆ ಸಮರ್ಥನಾಗುತ್ತಾನೋ, ಹಾಗೆಯೇ ಪ್ರತಿಯೊಬ್ಬನು ತನ್ನ ಕೈಯ ಹೆಬ್ಬೆಟ್ಟಿನ ಬುಡ ದಲ್ಲಿ, ಸೌಖ್ಯವಿರುವಾಗಲೇ, ತನ್ನ ಎರಡನೆ ಕೈಯ ತರ್ಜನ್ಯಾದಿ ಮೂರು ಬೆರಳುಗಳನ್ನು ನಾಡೀ ಪೆಟ್ಟುಗಳು ಅವುಗಳಿಗೆ ತಗಲುವ ಹಾಗೆ ಇಟ್ಟು, ಕೆಲವು ದಿವಸ ಅಭ್ಯಾಸ ಮಾಡಿದರೆ, ಬೆರಳುಗಳನ್ನು ಒಂದಕ್ಕೊಂದು ಎಷ್ಟು ಹತ್ತಿರವಾಗಿ ಇಡತಕ್ಕದ್ದೆಂಬದನ್ನು ತಿಳಿಯಬಹುದು. ಹಾಗೆ ಸರಿಯಾಗಿ ಬೆರಳುಗಳನ್ನಿಟ್ಟಲ್ಲಿ ಒಂದೊಂದು ಬೆರಳಿನ ಅಡಿಯಲ್ಲಿ ಒಂದೊಂದು ವಿಧವಾಗಿ ನಾಡಿಯು ಬಡಿಯುತ್ತಿರುವದು ಕಾಣುತ್ತದೆ. ಒಂದು ತನ್ನ ಸ್ಥಾನದಲ್ಲಿಯೇ ಮಿಕ್ಕ ಎರಡ

ಕ್ಕಿಂತ ಬಲವಾಗಿರುವದು, ಒಂದು ತನ್ನ ಸ್ಥಾನವನ್ನು ಬಿಟ್ಟು ಪಕ್ಕದಲ್ಲಿ ಬಡಿಯುವದು, ಒಂದು ಉಯ್ಯಾಲೆಯಂತೆ ಒಂದು ಪೆಟ್ಟು ಆಚೆಗೆ ಒಂದು ಪೆಟ್ಟು ಈಚೆಗೆ ಆಗಿ ಹೊಡಿಯುತ್ತಿರುವದು, ಒಂದು ಸ್ತಬ್ಧವಾಗಿರುವದು, ಒಂದರ ಬಡಿತಗಳಲ್ಲಿ ಮುಂಚಿಲ್ಲದಿರುವದು, ಒಂದು ಬಲವಾಗಿ ಜುಜ್ಜುತ್ತಿರುವದು, ಒಂದರ ಬಡಿತಗಳ ನಡುವೆ ಒಂದೊಂದು ಲೋಪ ಕಾಣುವದು ಅಥವಾ ಒಂದೊಂದು ಮಾತ್ರ ಸ್ಥಾನ ಬಿಟ್ಟಿರುವದು, ಮುಂತಾದ ಬಹು ವಿಧವಾದ ಭೇದಗಳು ದೋಷಗಳ ಭೇದಗಳಿಗೆ ಸರಿಯಾಗಿ ಕಾಣುವವು ಇವುಗಳಿಂದ ರೋಗಿಗೆ ವಾತಾದಿ ದೋಷಗಳೊಳಗೆ ಯಾವದು ಉಪದ್ರವಕರವಾಗಿದೆ ಎಂಬದನ್ನು ತಿಳಿದು, ಆ ದೋಷವು ಯಾವ ಅಂಗ ವಿಶೇಷದಲ್ಲಿ ಯಾವ ರೀತಿಯಾಗಿ ಉಪದ್ರವ ಕೊಡುತ್ತದೆಂಬದನ್ನು ರೋಗಿಯ ಹೇಳಿಕೆಗಳಿಂದಲೂ, ಮಲಮೂತ್ರಾದಿಗಳ ಪರೀಕ್ಷೆಯಿಂದಲೂ ಸುಲಭವಾಗಿ ಗೊತ್ತು ಮಾಡ ಬಹುದು. ದೃಷ್ಟಾಂತವಾಗಿ ಒಬ್ಬನಲ್ಲಿ ಮಧ್ಯಮ ಬೆರಳಿನ ಅಡಿ ನಾಡಿಯು ಸ್ತಬ್ಧವಾಗಿದೆ ಅಥವಾ ಸ್ಥಾನ ಬಿಟ್ಟು ಇದೆ ಎಂತ ಕಂಡರೆ, ಅವನಲ್ಲಿ ಪಿತ್ತವು ತನ್ನ ಕೆಲಸವನ್ನು ಸರಿಯಾಗಿ ಮಾಡದೆ, ಅಥವಾ ಅನ್ಯಸ್ಥಾನಕ್ಕೆ ಹೋಗಿ, ಉಪದ್ರವ ಕೊಡುತ್ತದೆಂಬದು ಸ್ಪಷ್ಟ ಆ ದೋಷಯುಕ್ತವಾದ ಪಿತ್ತಕ್ಕೆ ವಾಯುವಿನ ಸಹಾಯವಾಗಲೀ ಕಫದ ಸಹಾಯವಾಗಲೀ ಉಂಟೋ ಎಂತ ತಿಳಿದರೆ, ತಕ್ಕವಾದ ಕಷಯಾದಿ ಪ್ರತಿಕ್ರಿಯೆಯನ್ನು ಕಲ್ಪಿಸುವದಕ್ಕೆ ಬಹಳ ಅನುಕೂಲವಾಗುತ್ತದೆ. ಪಿತ್ತವೂ ವಾಯುವೂ ಕೂಡಿಕೊಂಡರೆ ಪಿತ್ತಕ್ಕೆ, ಪಿತ್ತವೂ ಕಫವೂ ಕೂಡಿಕೊಂಡರೆ ಕಫಕ್ಕೆ, ವಾಯುವೂ ಕಫವೂ ಕೂಡಿಕೊಂಡರೆ ವಾತಕ್ಕೆ, ಮುಖ್ಯವಾಗಿ ಪ್ರತಿಕ್ರಿಯೆ ಮಾಡಬೇಕಾಗಿ ವಿಧಿಯುಂಟು ಹೀಗೆ, ಯಾವನಾದರೂ ತನಗೆ ಉಪದ್ರವಕಾರಿಯಾಗಿರುವ ದೋಷವನ್ನು ಮತ್ತು ತಾನು ಸಾಧಾರಣವಾಗಿ ಸೇವಿಸುವ ಅನ್ನಪಾನವಿಹಾರಾದಿಗಳ ಗುಣದೋಷಗಳನ್ನು ಅರಿತವನಾದರೆ, ಅವನ ದೋಷವಿಕಾರವನ್ನು ಸಾಧಾರಣ ಸಂಗತಿಯಲ್ಲಿ ಪಥ್ಯಬಂದಲೇ ಗೆಲ್ಲುವದಕ್ಕಾಗುತ್ತದೆ ಶಾರೀರಶಾಸ್ತ್ರವನ್ನು ಸರಿಯಾಗಿ ಕಲಿತವನಿಗೆ ನಾಡಿಯು ಅತಿಸೂಕ್ಷ್ಮವಾಗಿರುವದು, ಅತಿಮಂದವಾಗಿರುವದು, ಅತಿವೇಗವುಳ್ಳದ್ದಾಗಿರುವದು, ಮುಂ ಕಾಣಿಸದೆ ಬಾರುತ್ತಿರುವದು, ಬಲಹೀನವಾಗಿರುವದು, ಮೃದುವಾಗಿ ಒತ್ತಿದರೆ ಬೊಗ್ಗುವದು, ಕರ್ಕಶವಾಗಿರುವದು, ಕ್ರಮವಾದ ಲೋಪಗಳುಳ್ಳದ್ದಾಗಿರುವದು, ಸವೂರವಾಗಿರುವದು, ಮುಂತಾದ ಬಹುವಿಧವಾದ ಲಕ್ಷಣಗಳು ರೋಗಿಯ ಸ್ಥಿತಿಯನ್ನೂ ಅವನಿಗೆ ಹ್ಯಾಗೆ ಚಿಕಿತ್ಸೆ ಮಾಡತಕ್ಕದ್ದೆಂಬದನ್ನೂ ಚನ್ನಾಗಿ ತಿಳಿಸುವವು ತನ್ನ ದೇಹದ ಸ್ಥಿತಿಯನ್ನು ಸರಿಯಾಗಿ ವರ್ಣಿಸಲಿಕ್ಕೆ ಲಜ್ಜೆ ಪಡುವ ಸ್ತ್ರೀಯರ, ಅಥವಾ ತಿಳಿಯದ ಹೆಡ್ಡರ, ಅಥವಾ ಮಕ್ಕಳ, ರೋಗನಿದಾನಕ್ಕೆ ನಾಡೀಪರೀಕ್ಷೆಯು ಬಹಳ ಪ್ರಯೋಜನಕರವಾಗಿರುತ್ತದೆ. ಇದಲ್ಲದೆ ಕೆಲವು ರೋಗಗಳು ತಮಗೆ ಇಂಥಾ ದೋಷ ಉಂಟೆಂತ ಏನೋ ಕಾರಣದಿಂದ ನೆನಸಿಕೊಂಡಿದ್ದು, ಆ ಕಲ್ಪನೆಗೆ ಬಲವಾಗುವ ಹಾಗಿನ ಕೆಲವು ಲಕ್ಷಣಗಳನ್ನೇ ಹೇಳಿದರೂ, ಅವರ ಪ್ರಬಲವಾದ ದೋಷ ಬೇರೆಯೇ ಆಗಿರುವದುಂಟು, ಅಂಥಾ ಸಂಗತಿಯಲ್ಲಿ ಚಿಕಿತ್ಸಕರಿಗೆ ನಾಡೀಪರೀಕ್ಷೆ ತಿಳಿಯದಿದ್ದರೆ, ರೋಗ ಒತ್ತಟ್ಟು, ಚಿಕಿತ್ಸೆ ಒತ್ತಟ್ಟು ಆಗಿ ಅನರ್ಥವುಂಟಾಗಬಹುದು

32. ಹೃದಯಕ್ಕೂ ಧಮನಿಗೂ ನಡುವೆ ಇರುವ ಬಾಗಲಿನ ತೆರೆಯುವಿಕೆ-ಮುಚ್ಚುವಿಕೆಗಳಿಗನುಸಾರವಾಗಿ ಉಂಟಾದ ನಾಡೀಬಡಿತಗಳು ಎಲ್ಲಾ ಕಡೆಗಳಲ್ಲಿಯೂ ಏಕರೀತಿ

ಯಾಗಿರುವದಿಲ್ಲ ಎಂಬದು ಪಾಶ್ಚಾತ್ಯವಿದ್ವಾಂಸರ ಶೋಧನದಿಂದಲೇ ನಿಶ್ಚಿತವಾಗಿದೆ. ಹ್ಯಾಗಂದರೆ ಕೈನಾಡಿಯಲ್ಲಿ ಪೆಟ್ಟಿನ ಲೋಪ ಕಂಡರೆ, ಹೃದಯದ ಕೆಲಸದಲ್ಲಿ ದೋಷ ಉಂಟೆಂತ ಎಣಿಸಬಾರದಾಗಿಯೂ, ಆ ಲೋಪವು ಧಮನಿಯ ಆವರಣದ ಅಥವಾ ಹೊದಿ

* Clinical Manual by James Finlayson, M D, 1886

ಕೆಯ ದುರ್ಬಲತೆಯಿಂದುಂಟಾಗಬಹುದೆಂತ ಅವರ ಒಂದು ಪುಸ್ತಕವು* ಹೇಳುತ್ತದೆ. ಆವರಣದ ದುರ್ಬಲತೆಯಿಂದ ಲೋಪ ಉಂಟಾಗುವದಾದರೆ, ಆ ಬಲಹೀನವಾದ ಸ್ಥಾನ ದಾಟಿದ ಮೇಲೆ ನಾಡಿಯು ನಿಜಸ್ಥಿತಿಗೆ ಬರುವದು ಮತ್ತು ನಾಡಿಯು ಉಬ್ಬದೆ ಉಂಟಾದ ತಡೆಯಿಂದ ಹಿಂದೆ ಭೇದವುಂಟಾಗದಿರುವದು ಹ್ಯಾಗೆ ಎಂಬದನ್ನು ಗ್ರಹಿಸುವದು ಕಷ್ಟ ಆ ಕಾರಣದಿಂದ ಮೂರು ಬೆರಳುಗಳನ್ನಿಟ್ಟಲ್ಲಿ ಒಂದು ಬೆರಳಿನ ಅಡಿಯಲ್ಲಿ ಮಾತ್ರ ಲೋಪಗಳು ಕಂಡು, ಎಕ್ಕ ಎರಡು ಬೆರಳುಗಳ ಅಡಿಯ ನಾಡೀ ಬಡಿತಗಳು ಸರಿಯಾಗಿರಬಹುದೋ? ಪುನಃ ಕೈನಾಡಿಯ ಪೆಟ್ಟುಗಳು ಹೃದಯದ ಪೆಟ್ಟುಗಳಿಗನುಸರಿಸಿ ಇರುವದಿಲ್ಲವೆಂತಲೂ, ಹೃದಯದಲ್ಲಿ 70 ರಿಂದ 80 ರ ವರೆಗೆ ಪೆಟ್ಟುಗಳು ಕಾಣುತ್ತಿರುವಾಗ್ಗೆ, ಕೈನಾಡಿಯಲ್ಲ ನಾಲ್ವತ್ತೇ ಪೆಟ್ಟುಗಳು ಕಂಡದ್ದುಂ ಟಂತಲೂ, ಅದೇ ಪುಸ್ತಕದಲ್ಲ ಹೇಳಲ್ಪಟ್ಟಿದೆ. ಹಾಗಾದ ಮೇಲೆ ಕೈನಾಡಿಯು ಹೃದಯದ ಕೆಲಸವನ್ನೇ ಸೂಚಿಸುತ್ತದೆಂತಲೂ, ಹೃದಯದಿಂದ ಉಂಟಾದ ನಾಡಿಯ ಗತಿಯು ಮಾರ್ಗ ತ್ವೇನ ಭೇದವಾಗಲಾರದೆಂತಲೂ ಹೇಳುವ ಆಕ್ಷೇಪಣವು ನಿಷ್ಪ್ರಯೋಜನವಾಯಿತು ತರ್ಜ ನೀ ಬೆರಳ ಅಡಿಯ ನಾಡಿಯು ವಾತ, ಮಧ್ಯಮಯ ಅಡಿಯದು ಪಿತ್ತ ಮತ್ತು ಅನಾಮಿಕೆಯ ಅಡಿಯದು ಕಫ ಎಂಬ ಎಘಾಗ ಮಾತ್ರ ಪ್ರತಿಪಾದನಕ್ಕೆ ಉಳಿದಂತಾಯಿತು ಇದರ ಪ್ರತಿ ಪಾದನವನ್ನು ತ್ರಿದೋಷನ್ಯಾಯವನ್ನೇ ನಿರಾಕರಿಸುವವರಿಗೆ ಸಮಾಧಾನಕರವಾಗಿ ಮಾಡು ವದಕ್ಕೆ ಪ್ರತ್ಯಕ್ಷಶೋಧನವಲ್ಲದೆ ಬೇರೆ ಉಪಾಯವಿಲ್ಲ. ಗಂಡಸರ ನಾಡೀಪರೀಕ್ಷೆಯನ್ನು ಬಲದ ಕೈ ಹಿಡಿದು, ಹೆಂಗಸರ ನಾಡೀಪರೀಕ್ಷೆಯನ್ನು ಅವರ ಎಡದ ಕೈ ಹಿಡಿದು, ಮಾಡ ಬೇಕೆಂತ ಆಯುರ್ವೇದೀಯ ಪಂಡಿತರು ಹೇಳುತ್ತಾರೆ ಎರಡು ಕೈಗಳ ನಾಡಿಗಳು ಒಂದೇ ರೀತಿಯಾಗಿರುವದಿಲ್ಲವೆಂತಲೂ, ಒಬ್ಬ ರೋಗಿಯನ್ನು ಪರೀಕ್ಷಿಸುವ ಡಾಕ್ಟರನು ಒಂದು ದಿನ ಎಡಪ ಕೈಯ ನಾಡಿಯನ್ನೂ, ಮತ್ತೊಂದು ದಿನ ಬಲದ ಕೈಯ ನಾಡಿಯನ್ನೂ, ಪರೀಕ್ಷಿಸಿದರೆ ತಪ್ಪಿಬಿದ್ದಾನು ಎಂತಲೂ, ಮೇಲೆ ನಿರ್ದಿಷ್ಟವಾದ ಪಾಶ್ಚಾತ್ಯವಿದ್ವಾಂಸರ ಪುಸ್ತಕದಲ್ಲಿ ಎಚ್ಚರ ಸಲಾಗಿದೆ 1886ನೇ ಇಸವಿಯನಂತರ ಆ ಭಾಗದವರಲ್ಲಿ ಎಷ್ಟೆಲ್ಲ ಮತಭೇದ-ಸಂಸ್ಕಾರಗಳು ಆಗಿಯವೋ ತಿಳಿಯದು, ಆದರೆ, ಹಾಗೆ ಉಂಟಾಗಿರಬಹುದಾದ ಪರಿಷ್ಕಾರಫಲಗಳೆಲ್ಲ ಆಯು ರ್ವೇದೀಯ ಪಕ್ಷಕ್ಕೆ ಸಾಧಕವಾಗಿಯೇ ಇರಬಹುದೆಂತ ನಂಬಿದ್ದೇವೆ. ನಾಡಿಯ ಗತಿಯು ಮಂದವಾಗುವದು ಮತ್ತು ಪುಷ್ಟಿಯಾಗುವದು ಕಫದಿಂದ ಮತ್ತು ಕ್ಷೀಣವಾಗಿ ವೇಗವುಳ್ಳ ದ್ದಾಗುವದು ಪಿತ್ತದಿಂದ ಎಂಬ ಆಯುರ್ವೇದೀಯ ತತ್ತ್ವವು ಗಿಡಗಳ ಮೇಲೆ ಸರ್ ಜೋಸ ರವರು ಮಾಡಿದ ಹಿಂದೆ ಪ್ರಸ್ತಾಪಿಸಲ್ಪಟ್ಟ ಅನುಸಂಧಾನಗಳಿಂದ ಸ್ಥಾಪಿತವಾಗಿದೆ

33 ಯಾವ ಕ್ರಮವನ್ನಾದರೂ ಅಭಿವೃದ್ಧಿಗೆ ತರುವ ಉದ್ಯಮದಲ್ಲಿ ಆದರ ಆ ಘುಸಿಕ ದೋಷಗಳನ್ನು ಪರಿಹರಿಸಿಕೊಳ್ಳುವದು ಪ್ರಥಮ ಕರ್ತವ್ಯ ಎಂಬದರಿಂದ ಮಾತ್ರ ವರ್ತಮಾನ ಆಯುರ್ವೇದೀಯ ಚಿಕಿತ್ಸಾಕ್ರಮದಲ್ಲಿಯೂ, ಪಾಶ್ಚಾತ್ಯ ಚಿಕಿತ್ಸಾಕ್ರಮದಲ್ಲಿಯೂ ಕಾಣುವ ಕೆಲವು ದೋಷಗಳನ್ನು ನಿರೂಪಿಸಬೇಕಾಯಿತು. ಪ್ರತಿ ರೋಗಿಯ ಸಂಗತಿಯಲ್ಲಿ

ಯೂ ದೋಷಗಳ ಬಲಾಬಲಭೇದಗಳನ್ನೂ, ಔಷಧಗಳ ರಸಾದಿ ಪ್ರಭಾವಾಂತ ಸರ್ವಗುಣ ಗಳನ್ನೂ, ಅವುಗಳ ಬಲಾಬಲಭೇದಗಳನ್ನೂ ಪರ್ಯಾಲೋಚಿಸಿ, ಆಯಾ ಸಂಗತಿಗಳಿಗೆ ಯುಕ್ತವಾದ ನವೀನ ಯೋಗಗಳನ್ನು ಕಲ್ಪಿಸಿ, ಅಥವಾ ಪುರಾತನ ಯೋಗಗಳಲ್ಲಿ ಅಗತ್ಯವಾದ ಭೇದಗಳನ್ನು ಮಾಡಿ, ಚಿಕಿತ್ಸೆ ನಡಿಸುವಷ್ಟು ಪಾಂಡಿತ್ಯವುಳ್ಳವರು ಯಾವಾಗಲಾದರೂ ಕತಿಚಿ ತ್ತಾಗಿಯೇ ಇರುವರಷ್ಟೆ ವಿಿಕ್ಕವರೆಲ್ಲಾ ಚರಕಾಚಾರ್ಯರು ಹೇಳಿರುವಂತೆ ಪುರಾತನವಾದ ಪ್ರಸಿದ್ಧ ಯೋಗಗಳನ್ನು ಉಪಯೋಗಿಸುತ್ತಿರುವದೇ ಲೇಸು ಆದರೆ, ಅಂಧವರು ತಾವು ನಡಿ ಸುವ ಚಿಕಿತ್ಸೆಯ ನ್ಯೂನತೆಯನ್ನು ಸದಾ ನೆನಪಿನಲ್ಲಿಟ್ಟುಕೊಂಡು, ಕ್ರಮೇಣವಾದರೂ ನಿರ್ದೋ ಷವಾದ ದಾರಿಯನ್ನು ಸೇರಲಿಕ್ಕ ಯತ್ನಿಸತಕ್ಕದ್ದು. ನಮ್ಮ ಪೂರ್ವಿಕರು ಯೋಗಗಳನ್ನು ಮಾಡಿ ಪ್ರಕಟಿಸುವಾಗ್ಗೆ, ಅಂಧಾ ಯೋಗಗಳು ರೋಗದ ಅಲ್ಪ ವಿಶೇಷಗಳಿಂದ ನಿಷ್ಪ್ರಯೋಜನ ವಾಗದಂತೆ ಜಾಗ್ರತೆ ತೆಗೆದುಕೊಂಡಿದ್ದರಾದ್ದರಿಂದ, ಈಗಿನ ಪಾಂಡಿತ್ಯವು ಹೀನಸ್ಥಿತಿಯದಾದರೂ ಅವುಗಳಿಂದ ರೋಗಿಗಳು ಪ್ರಯೋಜನ ಹೊಂದುತ್ತಾ ಇದ್ದು, ಆಯುರ್ವೇದದ ಕೀರ್ತಿಯು ಅಸ್ತವಾಗದೆ ಉಳಿದದೆ ಇಷ್ಟರಿಂದಲೇ ನಾವು ಸಂತುಷ್ಟರಾಗಿರದೆ, ಚರಕಾದಿಗಳು ತೋರಿಸಿ ರುವ ಎಶಾಲವಾದ ಮಾರ್ಗಗಳನ್ನು ಹಿಡಿದು, ಮುಂದೆ ಹೋಗಲಿಕ್ಕೆ ಯತ್ನಿಸುವದೇ ನಮ್ಮೆಲ್ಲ ವರ ಕರ್ತವ್ಯ. ಪಾಶ್ಚಾತ್ಯ ವೈದ್ಯದಲ್ಲಿಯೂ ಅನೇಕ ದೋಷಗಳು ಇದ್ದಾಗ್ಯೂ, ಅದರಿಂದ ನಮ್ಮ ಜನರು ಮಹತ್ತಾದ ಪ್ರಯೋಜನವನ್ನು ಪಡೆಯುತ್ತಿದ್ದಾರೆಂಬದರಲ್ಲಿ ಸಂದೇಹವಿಲ್ಲ ಕೈಕಾಲು ಮುರಕೊಂಡವರು, ಗಾಯಪಟ್ಟವರು, ವ್ರಣದವರು, ಅಶ್ಮರೀವ್ಯಾಧಿಯವರು, ಮೂಢಗರ್ಭಗಳು ಮುಂತಾದ ಬಹು ವಿಧವಾದ ರೋಗವರ್ಗದವರಿಗೆ ಡಾಕ್ಟರರಿಂದ ಸಿಕ್ಕುವ ಪ್ರಯೋಜನವನ್ನು ಎಷ್ಟು ಹೊಗಳಿದರೂ ಅತಿಶಯವಾಗದು. ಅವರ ಉಷ್ಣಪ್ರದರ್ಶಕ ಕಡ್ಡಿ, ಮೂತ್ರಭಾರಪ್ರದರ್ಶಕ ಕಡ್ಡಿ, ಮೂತ್ರದಲ್ಲಿರುವ ಮಧು ಮುಂತಾದ ದೋಷಗಳನ್ನು ಸುಲಭ ವಾಗಿ ಪರೀಕ್ಷಿಸುವ ಕ್ರಮ, ಹೃದಯಾದಿಗಳ ಶಬ್ದಶೋಧನನಳಿಗೆ, ಇವೇ ಮುಂತಾದ ಯಂತ್ರೋ ಪಕರಣಗಳು ಆಯುರ್ವೇದೀಯ ಪಂಡಿತರಿಗೂ ಪ್ರಯೋಜನಕರವಾಗಿರುತ್ತವೆ ಶಸ್ತ್ರ ಪ್ರಯೋಗ ಮಾಡುವದಕ್ಕೆ ಅನುಕೂಲವಾಗಿ ರೋಗಿಯ ಬೋಧತಪ್ಪಿಸುವ ಕ್ರಮ ಮತ್ತು ಔಷಧಗಳನ್ನು ಚರ್ಮದೊಳಗೆ, ಮಾಂಸದೊಳಗೆ, ಅಥವಾ ರಕ್ತನಾಳದೊಳಗೆ, ಯಂತ್ರದಿಂದ ಹೊಗಿಸುವ ಕ್ರಮ ಬಹಳ ಉಪಯೋಗವುಳ್ಳವುಗಳಾಗಿರುತ್ತವೆ ರೋಗಿಗಳ ಮೃತಶರೀರಗಳ ಶೋಧನದಿಂದ ಅವರು ಪ್ರಕಟಿಸುವ ಅನುಭವಗಳು ಆಯುರ್ವೇದೀಯ ಚಿಕಿತ್ಸೆಯ ತತ್ವಗಳನ್ನು ತಿಳಿಯುವದಕ್ಕೆ ಉಪಯುಕ್ತವಾಗುತ್ತವೆ ಒಟ್ಟಾರೆ, ಪಾಶ್ಚಾತ್ಯ ಕ್ರಮದವರು ಆಯುರ್ವೇದೀ ಯ ತ್ರಿದೋಷ ನ್ಯಾಯವನ್ನೂ, ಉಷ್ಣ, ಶೀತ ಎಂಬ ಭೇದವನ್ನೂ ಒಪ್ಪಿಕೊಂಡು ಅನುಸರಿಸಿದ ಪಕ್ಷದಲ್ಲಿ, ಅವರ ಕ್ರಮವು ಉತ್ಕೃಷ್ಟವಾಗುವದಲ್ಲದೆ, ಎರಡು ಕ್ರಮಗಳೂ ಒಂದಕ್ಕೊಂದು ಸಹಾಯಕವಾಗಿ ನಿಂತು, ಬಹು ಶೀಘ್ರವಾಗಿ ಅಭಿವೃದ್ಧಿಯನ್ನು ಹೊಂದಿ, ಲೋಕಕ್ಕೆ ಅತ್ಯಂತ ಸುಖದಾಯಕವಾಗುವವು ಎಂಬದರಲ್ಲಿ ಸಂದೇಹವಿಲ್ಲ.

ಆಯುರ್ವೇದಸಾರ

ಪ್ರಥಮ ಭಾಗ

ಆಯುರ್ವೇದಸಾರ

ಪ್ರಥಮ ಭಾಗ.

(ಸೂತ್ರ, ಶರೀರ, ವಿಮಾನ, ಇಂದ್ರಿಯ ಮತ್ತು ಸಿದ್ಧಿಸ್ಥಾನಗಳು)

॥ ಶ್ರೀ ಗುರುಭ್ಯೋ ನಮಃ ॥

ನಮೋ ನೃಸಿಂಹದೇವಾಯ ಜನಾನಾಂ ಸುಖಹೇತವೇ ।
ಯಃ ಪ್ರೇತಃಸ್ಯಾನ್ಮಮಾನೇನ ಯತ್ನೇನ ರಮಯಾ ಸಹ ॥
ಬುದ್ಧಿದಶ್ಚ ಮರುತ್ಪುತ್ರೋ ವಿಘ್ನಹಾರೀ ಗಜಾನನಃ ।
ಧನ್ವಂತರಶ್ಚ ಜ್ಞಾನಾಯ ಪ್ರಸನ್ನಾಸ್ಸಂತು ಮೇ ಧ್ರುವಂ ॥

Iನೇ ಅಧ್ಯಾಯ.

ಆರೋಗ್ಯಪ್ರಶಂಸಾ.

1 ಇಹ ಖಲು ಪುರುಷೇಣಾನುಪಹತಸತ್ವಬುದ್ಧಿಪೌರುಷಪರಾಕ್ರಮೇಣ ಹಿತ
ಮುಹ ಚಾಮುಷ್ಮಿಂಶ್ಚ ಲೋಕೇ ಸಮನುಪಶ್ಯತಾ ತಿಸ್ರ ಏಷಣಾಃ ಪರ್ಯೇ
ಷ್ಟವ್ಯಾ ಭವಂತಿ (ಚ 55)

ಇಹಲೋಕದ ಮತ್ತು ಪರಲೋಕದ ಹಿತದ ಕಡೆಗೆ ದೃಷ್ಟಿಯುಳ್ಳ ಪುರುಷನು ಸತ್ವ-ಬುದ್ಧಿ-ಪೌರುಷ-ಪರಾಕ್ರಮಗಳು ಕುಂದದಿರುವಾಗ ಮೂರು ಬಯಕೆಗಳನ್ನು ಬಯಸತಕ್ಕದ್ದು

ತದ್ಯಥಾ — ಪ್ರಾಣೈಷಣಾ-ಧನೈಷಣಾ-ಪರಲೋಕೈಷಣೇತಿ ।
ಆಸಾಂ ತು ಖಲ್ವೇಷಣಾನಾಂ ಪ್ರಾಣೈಷಣಾಂ ತಾವತ್ ಪೂರ್ವತರಮಾಪದ್ಯೇತ್ ।
ಕಸ್ಮಾತ್ ಪ್ರಾಣತ್ಯಾಗೇ ಹಿ ಸರ್ವತ್ಯಾಗಃ । (ಚ 55)

ಅವು ಯಾವವೆಂದರೆ — ಪ್ರಾಣಾಪೇಕ್ಷೆ-ಧನಾಪೇಕ್ಷೆ-ಪರಲೋಕಾಪೇಕ್ಷೆ. ಇವುಗಳಲ್ಲಿ ಪ್ರಾಣಾಪೇಕ್ಷೆಯನ್ನು ಮುಂದಾಗಿ ಪೂರೈಸಿಕೊಳ್ಳಬೇಕು. ಯಾಕಂದರೆ ಪ್ರಾಣತ್ಯಾಗವಾದಲ್ಲಿ ಸರ್ವತ್ಯಾಗವಾಗುತ್ತದೆ.

2. ಸರ್ವಮನ್ಯತ್ ಪರಿತ್ಯಜ್ಯ ಶರೀರಮನುಪಾಲಯೇತ್ ।
ತದಭಾವೇ ಹಿ ಭಾವಾನಾಂ ಸರ್ವಾಭಾವಶ್ಶರೀರಿಣಾಂ ॥ (ಚ. 225)

ಬೇರೆ ಸರ್ವಸ್ವವನ್ನು ಬಿಟ್ಟಾದರೂ ಶರೀರವನ್ನು ರಕ್ಷಿಸಿಕೊಳ್ಳಬೇಕು ಯಾಕಂದರೆ, ದೇಹಧಾರಿಗೆ ಶರೀರ ಹೋದರೆ ಸರ್ವವೂ ಹೋಗುತ್ತದ

3 ಧರ್ಮಾರ್ಥಕಾಮಮೋಕ್ಷಾಣಾಮಾರೋಗ್ಯಂ ಮೂಲಮುತ್ತಮಂ ।
ರೋಗಾಸ್ತಸ್ಯಾಪಹರ್ತಾರಃ ಶ್ರೇಯಸೋ ಜೀವಿತಸ್ಯ ಚ ॥ (ಚ 2)

ಧರ್ಮ ಅರ್ಥ, ಕಾಮ, ಮೋಕ್ಷಗಳಿಗೆ ಮುಖ್ಯವಾದ ಮೂಲವು ಆರೋಗ್ಯವಾಗಿರುತ್ತದೆ ರೋಗಗಳು ಅಂಥಾ ಮೂಲವನ್ನು ಭೇದಿಸಿ, ಪ್ರಾಣಕ್ಕೂ ಸದ್ಗತಿಗೂ ಹಾನಿಯನ್ನುಂಟುಮಾಡುತ್ತವೆ

4. ಅತೋ ರುಗ್ಭ್ಯಸ್ತನುಂ ರಕ್ಷೇನ್ನರಃ ಕರ್ಮವಿಪಾಕವಿತ್ ।
ಧರ್ಮಾರ್ಥಕಾಮಮೋಕ್ಷಾಣಾಂ ಶರೀರಂ ಸಾಧನಂ ಯತಃ ॥ (ಶಾ 17.)

ಧರ್ಮ, ಅರ್ಥ, ಕಾಮ ಮೋಕ್ಷಗಳಿಗೂ ಅವಶ್ಯವಾದ ಸಾಧನವು ಶರೀರವಾದ್ದರಿಂದ, ಅದನ್ನು ಕರ್ಮಗಳ ಪರಿಣಾಮವನ್ನು ತಿಳಿದ ಮನುಷ್ಯನು ರೋಗಗಳ ದೆಸೆಯಿಂದ ರಕ್ಷಿಸಿಕೊಳ್ಳಬೇಕು.

5 ಆರೋಗ್ಯಾದ್ಬಲಮಾಯುಶ್ಚ ಸುಖಂ ಚ ಲಭತೇ ಮಹತ್ ।
ಇಷ್ಟಾಂಶ್ಚಾಪ್ಯನುರಾನ್ ಭಾವಾನ್ ಪುರುಷಃ ಶುಭಲಕ್ಷಣಃ ॥ (ಚ 407.)

ಶುಭಲಕ್ಷಣವುಳ್ಳ ಪುರುಷನು ಆರೋಗ್ಯವನ್ನು ಪಡೆದು, ಅದರಿಂದ ಬಲವನ್ನೂ, ಆಯುಷ್ಯವನ್ನೂ, ಮಹತ್ಸುಖವನ್ನೂ ಇನ್ನು ಬೇರೆ ಇಷ್ಟಸಿದ್ಧಿಗಳನ್ನೂ ಲಭಿಸುತ್ತಾನೆ

6 ಶರೀರಂ ನಾಮ ಚೇತನಾಧಿಷ್ಠಾನಭೂತಂ ಪಂಚಭೂತವಿಕಾರಸಮುದಾಯಾತ್ಮಕಂ । (ಚ 244)

ಶರೀರವೆಂಬದು ಮನೋಬುದ್ಧೀಂದ್ರಿಯವ್ಯಾಪಾರಗಳಿಂದ ಕೂಡಿಕೊಂಡಿರುವ ಪಂಚ ಮಹಾಭೂತಗಳಿಂದ ಕಟ್ಟಿದ ಚೇತನದ ವಾಸಸ್ಥಾನ.

7 ಶರೀರಂ ಸತ್ವಸಂಜ್ಞಂ ಚ ವ್ಯಾಧೀನಾಮಾಶ್ರಯೋ ಮತಃ । (ಚ 5.)

ಸತ್ವಯುಕ್ತವಾದ ಶರೀರವೇ ವ್ಯಾಧಿಗಳಿಗ ಆಶ್ರಯವಾಗಿರುತ್ತದೆ

IIನೇ ಅಧ್ಯಾಯ.

(a) ಶರೀರವರ್ಣನ — ಆಯುರ್ವೇದಾನುಸಾರ

1 ತಚ್ಚ ಷಡಂಗಂ ಶಾಖಾಶ್ಚತಸ್ರೋ ಮಧ್ಯಂ ಪಂಚಮಂ ಷಷ್ಠಂ ಶಿರ ಇತಿ | (ಸು 329)

ಅಂಗಗಳು — ಈ ಶರೀರಕ್ಕ ಕೈಕಾಲುಗಳೆಂಬ ನಾಲ್ಕು ಶಾಖೆಗಳು (limbs), ಮಧ್ಯ ಅಂದರೆ ಮುಂಡ (trunk), ಮತ್ತು ಶಿರಸ್ಸು (head)—ಹೀಗೆ ಆರು ಅಂಗಗಳು.

ಷಡಂ ಕೊರಳು ಸಹಿತವಾದ ಶಿರಸ್ಸು (ಶಿರೋಗ್ರೀವಮ್) ಎಂತ ಪ 151

2 ಮಸ್ತಕೋದರ ಸೃಷ್ಟ ನಾಭಿ ಲಲಾಟ ನಾಸಾ ಚಿಬುಕ ವಸ್ತಿ ಗ್ರೀವಾ ಇತ್ಯೇತಾ ಏಕ್ಯಕಾ | ಕರ್ಣ ನೇತ್ರ ನಾಸಾ ಭ್ರೂ ಶಂಖಾಂಸ ಗಂಡ ಕಕ್ಷ ಸ್ತನ ವೃಷಣ ಪಾರ್ಶ್ವ ಸ್ಫಿಗ್ಬಾಹು ಬಾಹೂರು ಪ್ರಭೃತಯೋ ದ್ವೇ ದ್ವೇ | ಏಂಶತಿರಂಗುಲಯಃ (ಸು 329)

ಪ್ರತ್ಯಂಗಗಳು

ಕಪಾಲ (skull), ಹೊಟ್ಟ (belly), ಬೆನ್ನು (back), ಹೊಕ್ಕಳು (navel), ಹಣ್ (forehead), ಮೂಗು (nose), ಗಡ್ಡ (chin) ಕಿಬ್ಬೊಟ್ಟೆ (lower belly), ಕೊರಳು (neck), ಇವುಗಳು ಒಂದೊಂದಾಗಿಯೂ, ಕಿವಿ (ear), ಕಣ್ಣು (eye), ಮೂಗಿನ ರಂಧ್ರ (nostril), ಹುಬ್ಬು (eyebrow), ಕನ್ನೆ (temple), ಹಗಲು (shoulder), ಗಲ್ಲ (cheek) ಕಂಕಳು (armpit), ಮೊಲೆ (breast), ಅಂಡ (scrotum), ಪಕ್ಕ (side of thorax), ಅಂಡು (buttock), ಮೊಣಕಾಲು (knee), ತೋಳು (arm) ತೊಡೆ (thigh) ಮೊದಲಾದವು ಎರಡೆರಡಾಗಿಯೂ, ಇರುತ್ತವೆ ಇಪ್ಪತ್ತು ಬೆರಳುಗಳು

ಪರಾ ಅಂಗಗಳ ಬೇರೆ ಚಿಕ್ಕ ಚಿಕ್ಕ ಭಾಗಗಳಿಗೆ ನೇರಬೇರೆಯಾಗಿ ಇಟ್ಟ ಹಸರುಗಳು ಬಹಳ ಇವೆ ಅವುಗಳೊಳಗೆ ಅನೇಕವು ಈ ಅಧ್ಯಾಯದಲ್ಲಿ ಮುಂದೆ ಕಣ್ಣು, ಎಲುಬು, ಮರ್ಮ ಮೊದಲಾದವುಗಳ ವರ್ಣನೆಯಲ್ಲಿ ಕಾಣುವನ.

3. ಶ್ರವಣ ನಯನ ವದನ ಘ್ರಾಣ ಗುದ ಮೇಢ್ರಾಣಿ ನವ ಸ್ರೋತಾಂಸಿ ನರಾಣಾಂ ಬಹಿರ್ಮುಖಾನ್ಯೇ ತಾನ್ಯೇವ ಸ್ತ್ರೀಣಾಮುಪರಾಣಿ ಚ ತ್ರೀಣಿ ದ್ವೇ ಸ್ತನಯೋರಧಸ್ತಾದ್ರಕ್ತವಹಂ ಚ | (ಸು. 330.)

ಸ್ರೋತಸ್ಸುಗಳು

2 ಕಿವಿ, 2 ಕಣ್ಣು, 1 ಬಾಯಿ 2 ಮೂಗಿನ ಸೊಳ್ಳೆ, 1 ಗುಲದ್ವಾರ 1 ಮೂತ್ರದ್ವಾರ, ಇವು 9 ಗಂಡಸಿಗೆ, ಇವಲ್ಲದೆ ಮೊಲೆಗಳು (nipples) 2, ಮತ್ತು ಕೆಳಗೆ ರಕ್ತಸ್ರಾವದ ಮಾರ್ಗ (vagina) 1, ಹೀಗೆ 3 ಕೂಡಿ 12 ಹೆಂಗಸಿಗೆ, ಹೊರಮುಖವುಳ್ಳ ಸೋಪಾನಗಳು (orifices)

4 ತಸ್ಯ ಪುನಃ ಸಂಖ್ಯಾನಂ | ತ್ವಚಃ ಕಲಾ ಧಾತವೋ ಮಲಾ ದೋಷಾ ಯಕೃತ್ಪ್ಲೀಹಾನೌ ಫುಪ್ಫುಸ ಉಂಡುಕೋ ಹೃದಯಮಾಶಯಾ ಅಂತ್ರಾಣಿ

*

ತ್ವಕ್ಪರ್ಯಂತ ಒಳಗಿನ ಅಂಗ ವಿಸರ್ಜನೆಯ

ವೃಕ್ಕೌ ಸ್ರೋತಾಂಸಿ ಕಂಡರಾ ಜಾಲಾನಿ ಕೂರ್ಚಾ ರಜ್ಜವಃ ಸೇವನ್ಯಃ
ಸಂಘಾತಾಃ ಸೀಮಂತಾ ಅಸ್ಥೀನಿ ಸಂಧಯಃ ಸ್ನಾಯವಃ ಪೇಶ್ಯೋ
ಮರ್ಮಾಣಿ ಸಿರಾ ಧಮನ್ಯೋ ಯೋಗವಹಾನಿ ಸ್ರೋತಾಂಸಿ ಚ ।
(ಸು. 329.)

ಶರೀರರಚನೆಯ ವಿವರ — ಚರ್ಮಗಳು (skins), ಕಲಾ ಎಂಬ ಭಾಗಗಳು (tissues), ಧಾತುಗಳು (vital products), ಮಲಗಳು (excretions), ದೋಷಗಳು (humours), ಯಕೃತ್ ಅಧವಾ ಕಾಲಖಂಡ (liver), ಪ್ಲೀಹ (spleen), ಫುಪ್ಫುಸ ಎಂಬ ಎಡ ಶ್ವಾಸಕೋಶ (left lung), ಉಂಡುಕ, ಹೃದಯ (heart), ಆಶಯಗಳು (reservoirs), ಕರುಳುಗಳು (intestines), ವೃಕ್ಕಗಳ ಜೋಡು (kidneys), ಸ್ರೋಪಾನಗಳು (channels or vessels), ಕಂಡರೆಗಳು (ದೊಡ್ಡ ನರಗಳು) (ligaments), ಜಾಲ ಎಂಬ ಮಾಂಸಾದಿಗಳ ಬಲೆಗಳು (membranes), ಕೂರ್ಚಾ ಎಂಬ ಕಟ್ಟುಗಳು (sheaves), ರಜ್ಜು ಎಂಬ ಹಗ್ಗಗಳು (cords), ಸೇವನೀ ಎಂಬ ನರದ ಹೊಲಿಗೆಗಳು (sutures), ಸಂಘಾತ ಎಂಬ ಎಲುಬುಗಳ ಕೂಟಗಳು (confluence of bones), ಸೀಮಂತಗಳೆಂಬ ಜೋಡಣೆ ಅಂಚುಗಳು (dividing lines), ಎಲುಬುಗಳು (bones), ಸಂಧಿಗಳು (joints), ನರಗಳು (nerves), ಮಾಂಸಖಂಡಗಳು (muscles), ಮರ್ಮಗಳು (vital parts), ಸಿರೆಗಳು (capillaries), ಧಮನೀ ನಾಡಿಗಳು (arteries and veins), ಮತ್ತು (ಅನ್ನಪಾನಪ್ರಾಣಾದಿ) ಯುಕ್ತ ದ್ರವ್ಯಗಳನ್ನು ಸಾಗಿಸುವ ನಾಳಗಳು (canals with outside openings).

1 ಪರಾ ಈ ಪಟ್ಟಿಯಲ್ಲಿ 'ಫುಪ್ಫುಸ' ಶಬ್ದ ಏಕವಚನದಲ್ಲಿ ಉಂಟು ಕ್ಲೋಮ' ಕಾಣುವಿಲ್ಲ ಚರಕನ ಕೋಷ್ಠಾಂಗಗಳ ಪಟ್ಟಿಯಲ್ಲಿ (ವಿ 152) 'ಫುಪ್ಫುಸ' ಕಾಣುವಿಲ್ಲ, 'ಕ್ಲೋಮ' ಏಕವಚನದಲ್ಲಿ ಉಂಟು ಸುಶ್ರುತವೇ ಸ್ರೋತಸ್ಸುಗಳನ್ನು ವಿವರಿಸುವಲ್ಲಿ, 'ನೀರನ್ನು ಸಾಗಿಸುವ ಸ್ರೋತಸ್ಸುಗಳಿಗೆ ತಾಲು ಮತ್ತು ಕ್ಲೋಮ ಮೂಲ' ಎಂತ ಹೇಳುತ್ತದೆ (ಮುಂದಿನ 76ನೇ ಸಂ ನೋಡು) ಇದೇ ಅಭಿಪ್ರಾಯ ಚರಕದಲ್ಲಿಯೂ ಕಾಣುತ್ತದ ಇದಲ್ಲದೆ ಸುಶ್ರುತದಲ್ಲಿಯೇ ಹೃದಯದ ಕೆಳಗೆ ಎಡಭಾಗದಲ್ಲಿ ಪ್ಲೀಹ ಮತ್ತು ಫುಪ್ಫುಸ ಮತ್ತು ಬಲಭಾಗದಲ್ಲಿ, ಯಕೃತ್ ಮತ್ತು ಕ್ಲೋಮ ಇಂತಿದೆ ಎಂತ ಹೇಳಿದ (ಸಂ 61 ನೋಡು) ಶಬ್ದಕಲ್ಪದ್ರುಮದಲ್ಲಿ ಕ್ಲೋಮ, ಫುಪ್ಫುಸ ಮತ್ತು ಜಲಕ ಎಂಬ ಹೆಸರುಗಳು ಒಂದಕ್ಕೊಂದೇ ಎಂತ ಕಾಣಿಸಿಯದ ಶ್ವಾಸಕೋಶದಲ್ಲಿ ಎರಡು ಶಾಖಗಳಿದ್ದು, ಅವುಗಳೂಳಗೊಂದು ಹೃದಯದ ಎಡಕ್ಕೂ, ಒಂದು ಹೃದಯದ ಬಲಕ್ಕೂ ಇರುವದರಿಂದ, ಅವುಗಳನ್ನು ಎಡದ ಶ್ವಾಸಕೋಶ ಮತ್ತು ಬಲದ ಶ್ವಾಸಕೋಶ ಎಂತ ಬೇರೆಯಾಗಿ ನಿರ್ದೇಶಿಸುವದು ಈಗ ಪಾತಾತ್ಪರ್ಯ ರೂಢಿಯಾಗಿದೆ (ಸಂ 124 ನೋಡು) ಆದದರಿಂದ 'ಫುಪ್ಫುಸ' ಎಂಬದು ಎಡಶ್ವಾಸಕೋಶವೆಂತಲೂ 'ಕ್ಲೋಮ' ಎಂಬದು ಬಲಶ್ವಾಸಕೋಶ ವೆಂತಲೂ ತಿಳಿಯಬೇಕಾಗುತ್ತದೆ ಪಾಚಕ ಒತ್ತದ ಕೆಲಸವು ನಡೆಯುವದು ಹೆಚ್ಚಾಗಿ ಆಮಾಶಯದ ಬಲಭಾಗದಲ್ಲಾ ದ್ದರಿಂದ, ಅದಕ್ಕೆ ಮೇಲೆ ಇಂತಿರುವ ಬಲ ಶ್ವಾಸಕೋಶವು ಉದಕವಾಹಿಸ್ರೋತಸ್ಸುಗಳಿಗೆ ಮೂಲವೆಂತ ಪೂರ್ವಿಕರು ಅಲೋಚಿಸಿರಬಹುದು

2 'ವೃಕ್ಕ' ಶಬ್ದವು ಅಮರದಲ್ಲಾಗಲಿ, ಶಬ್ದಕಲ್ಪದ್ರುಮದಲ್ಲಾಗಲ, ಎಲ್ಲನ್ನ ಡಿಕ್ಷನೆರಿಯಲ್ಲಾಗಲಿ ಕಾಣುವಿಲ್ಲ ಬೃಕ್ಕ-ಅಧವಾ 'ಬುಕ್ಕೆ' ಶಬ್ದವು ಮೂತ್ರಜನಕ ಕಾಯಿಗಳಿಗೂ ಬರುತ್ತದಂತ ವಿ ಡಿಕ್ಷನೆರಿಯಲ್ಲಿ ಕಾಣುತ್ತದೆ, ಆದರೆ ಆ ಶಬ್ದಗಳಿಗೆ ಬೇರೆ ಅರ್ಥಗಳನ್ನೇ ಅಮರ ವ್ಯಾಖ್ಯಾನದಲ್ಲಿಯೂ ಶಬ್ದಕಲ್ಪದ್ರುಮದಲ್ಲಿಯೂ ಹೇಳಿರುತ್ತದ ಆಪ್ಟರ ಡಿಕ್ಷನರಿಯಲ್ಲಿ ಮೂತ್ರಜನಕ ಕಾಯಿ (kidney)ಗೆ 'ವೃಕ್ಕಃ, ವೃಕ್ಕಂ' ಎಂತ ಕಾಣಿಸಿರುತ್ತದೆ ಮೇದಸ್ಸಿನ ಮತ್ತು ರಕ್ತದ ಸಾರವಿಂದ ವೃಕ್ಕಗಳೆರಡು ಉಂಟಾಗುತ್ತದಂತಲೂ, ಅವುಗಳಿಂದ ಹೊಟ್ಟೆಯಲ್ಲಿರುವ ಮೇದಸ್ಸು ಪುಷ್ಟವಾದಲ್ಲಪುತ್ತದಂತಲೂ ಘಾನಸ್ರಕಾರದಲ್ಲಿ (ವ 14) ಹೇಳಲ್ಪಟ್ಟಿದೆ ಸುಶ್ರುತದಲ್ಲಿಯೇ ಮೇದೂ ವಹವಾದರಡು ಸ್ರೋತಸ್ಸುಗಳಿಗೆ ವೃಕ್ಕಗಳರಡು ಮತ್ತು ಕಟಿಯು ಮೂಲವೆಂತಲೂ, ಅವುಗಳ ವೇಧದಿಂದ ಸ್ಥೂಲತೋಷ ಉಂಟಾಗುತ್ತದಂತಲೂ ಹೇಳಿಯದೆ (ಸಂ 76 ನೋಡು) ಸುಶ್ರುತದಲ್ಲಿಯೂ ಚರಕದಲ್ಲಿಯೂ 'ವೃಕ್ಕೌ' ಎಂತ ದ್ವಿವಚನ ಶಬ್ದವೇ ಉಪಯೋಗಿಸಲ್ಪಟ್ಟಿರುತ್ತದ ಮೂತ್ರಾಶಯದ ವರ್ಣನದಲ್ಲಿ (ಸಂ 8 ನೋಡು) ಅದಕ್ಕೆ

ಮೂತ್ರವು ಬಂದು ಕೂಡುವದು ಆಮಾಶಯದ ಸಮೀಪವಿಂದ (ಆಮಾಶಯ, ಪಕ್ವಾಶಯಗಳ ಮಧ್ಯವಿಂದ ಎಂತ ವ್ಯಾಖ್ಯಾನಕಾರ) ಎಂತ ಹೇಳಲ್ಪಟ್ಟಿದೆ ಇದರಿಂದೆಲ್ಲ ಊಹಿಸಬಹುದಾದ್ದೇನೆಂದರೆ ವೃಕ್ಕಗಳಿರಡೆಂಬದು 135ನೆ ಸಂಖ್ಯೆಯಲ್ಲಿ ವಿವರಿಸಿದ ಮೂತ್ರಜನಕಕಾಯಿಗಳೇ ಎಂತಲೂ, ಅವುಗಳಿಗೆ ಸಮೀಪವಿರುವ ಮೇದಸ್ಸಿನ ಮುಖ್ಯ ಸ್ಥಾನಕ್ಕೆ ಅವು ಸಂಬಂಧ ಪಟ್ಟವೆಂತ ಪೂರ್ವಿಕರು ತಿಳಿದಿದ್ದರಲ್ಲದೆ, ಈಗಿನವರು ಹೇಳುವ ಅವುಗಳಿಗೂ ಮೂತ್ರಾಶಯಕ್ಕೂ ಇರುವ ಸಂಬಂಧವನ್ನು ಕಂಡು ಹಿಡಿದಿರಲಿಲ್ಲ ಎಂತ ಸಹ ಆಗಿರುತ್ತದೆ

3 'ಉಂಡುಕ' ಶಬ್ದ ಶಬ್ದಕಲ್ಪದ್ರುಮದಲ್ಲಾಗಲಿ ಎಲ್ಲಿಸ್ಸ ಟಿಕ್ಕನೆರಿಯಲ್ಲಾಗಲಿ, ಅಮರದಲ್ಲಾಗಲಿ ಕಾಣುವದಿಲ್ಲ ಚರಕನ ಕೋಷ್ಠಾಂಗಗಳ ಪಟ್ಟಿಯಲ್ಲಿ 'ಉಂಡುಕ' ಇಲ್ಲ, ಅದರ ಸ್ಥಾನದಲ್ಲಿ ಪುರೀಷಾಧಾನ (ಅಥವಾ ಪುರೀಷಾಧಾರ) ಎಂಬದು ಸುಶ್ರುತನ ಪಟ್ಟಿಯಲ್ಲಿ ಇಲ್ಲವಿದ್ದದ್ದು ಕಾಣುತ್ತದೆ ಸುಶ್ರುತದಲ್ಲಿಯೇ ಉಂಡುಕವು ರಕ್ತದ ಕಟ್ಟುವಿಂದುಂಟಾಗುವದೆಂತಲೂ (ಪು 320), 'ಮಲಧರಾ' ಎಂಬ ಕಲೆಯು ಉಂಡುಕದಲ್ಲಿನ ಮಲವನ್ನು ಪ್ರತ್ಯೇಕಿಸುತ್ತದೆಂತಲೂ (ಸಂ 53) ಹೇಳಲ್ಪಟ್ಟಿದೆ ಭಾವಪ್ರಕಾಶದಲ್ಲಿ ಅಂತ್ರಗಳ ವರ್ಣನೆಯ ಕೂಡಲೇ ಉಂಡುಕ-ಕಟೀ-ಪ್ರೀಕ ಮುಂತಾದ ನಾಳಿಯ ಕೆಳಗಣ ಅಂಗಗಳು ನಮೂದಿಸಲ್ಪಟ್ಟಿವೆ ಚರಕನ ಪಟ್ಟಿಯಲ್ಲಿ ಕಾಣುವ 'ಪುರೀಷಾಧಾರ' ಎಂಬದು ಉಂಡುಕವೇ ಎಂತಲೂ, ಅದು ಗುದಕ್ಕೆ ಸಮೀಪ ಇರುವಂಥಾದ್ದೆಂತಲೂ, 'ಮಲ' ಎಂಬದರಲ್ಲಿ ಮೂತ್ರ ಸಹ ಸೇರಿದೆ ಎಂತ ತಿಳಿಯಬೇಕೆಂತಲೂ 'ಸಬಂಧ ಸಂಗ್ರಹ' ವ್ಯಾಖ್ಯಾನವು ಹೇಳುತ್ತದೆ ಆಹಾರರಸದ ದ್ರವವು ಹೀರಿ ಹೋಗಿ, ಕಿಟ್ಟವು ಗಟ್ಟಿಯಾಗಿ ಮಲದ ವಾಸನೆ ಪಡೆಯುವದು ಪಾಶ್ಚಾತ್ಯ ಶಾಸ್ತ್ರರೀತ್ಯಾ ಸಹ ಸ್ಥೂಲಾನ್ವಯದಲ್ಲಿ ಎಂತ ತಿಳಿಯುವದರಿಂದ, ಉಂಡುಕವು ಗುದಕ್ಕೆ ಮೇಲೆ ಮಲಸ್ಥಾನವಾದ ಸ್ಥೂಲಾನ್ತ್ರದ ಕೊನೆ ಬಾಗ ಆಗಿರಬೇಕು 'ಉಂಡುಕ' ಶಬ್ದಕ್ಕೆ ಸುಶ್ರುತ ಹೇಳುವ ಮಲಾಶಯಕ್ಕೆ ಸೇರಿದ ಹೊಟ್ಟೆಯ ಒಂದು ಭಾಗ ಎಂತ ವಾಚಸ್ಪತ್ಯದಲ್ಲಿ ಅರ್ಥ ಹೇಳಲ್ಪಟ್ಟಿದೆ—ಪಕ್ವಾಶಯದೊಂದು ಭಾಗದಲ್ಲಿ ಪ್ರತ್ಯೇಕಿಸಲ್ಪಟ್ಟ ಮಲಕ್ಕೆ ಆಧಾರವಾದ ಎಡೆಯು ಉಂಡುಕ ಎಂತ ನಿರ್ದೇಶಿಸಲ್ಪಡುತ್ತದಂತ ಇದೇ ಸಬಂಧ ಸಂಗ್ರಹವು ಸಹ ಹೇಳುತ್ತದ

5 ತ್ವಙ್ಮಃ ಸಪ್ತ । ಕಲಾಃ ಸಪ್ತ । ಆಶಯಾಃ ಸಪ್ತ । ಧಾತವಃ ಸಪ್ತ । ಸಪ್ತ ಸಿರಾ ಶತಾನಿ । ಪಂಚ ಪೇಶೀ ಶತಾನಿ । ನವ ಸ್ನಾಯವಃ ಶತಾನಿ । ತ್ರೀಣಿ ಅಸ್ಥಿ ಶತಾನಿ । ದ್ವೇದಶೋತ್ತರೇ ಸಂಧಿ ಶತೇ । ಸಪ್ತೋತ್ತರಂ ಮರ್ಮಶತಂ । ಚತುರ್ವಿಂಶತಿರ್ಧಮನ್ಯಃ । ತ್ರಯೋ ದೋಷಾಸ್ತ್ರಯೋ ಮಲಾಃ । (ಸು 329.)

ತ್ವಗಾದ್ಯವಯವಗಳ ಸಂಖ್ಯೆ

ಚರ್ಮ, ಕಲೆ, ಆಶಯ, ಧಾತು, ಇವು ಏಳೇಳು, ಸಿರಾ ನಾಳಗಳು 700, ಮಾಂಸ ಪಿಂಡಗಳು 500, ನರಗಳು 900, ಎಲುಬುಗಳು 300, ಸಂಧಿಗಳು 210, ಮರ್ಮಗಳು 107, ಧಮನೀ ನಾಡಿಗಳು 24, ದೋಷಗಳು ಮೂರು; ಮತ್ತು ಮಲಗಳು ಮೂರು

6 ಆಶಯಾಸ್ತು ವಾತಾಶಯಃ ಪಿತ್ತಾಶಯಃ ಶ್ಲೇಷ್ಮಾಶಯೋ ರಕ್ತಾಶಯಃ ಆಮಾಶಯಃ ಪಕ್ವಾಶಯೋ ಮೂತ್ರಾಶಯಃ ಸ್ತ್ರೀಣಾಂ ಗರ್ಭಾಶಯೋಽಷ್ಟಮ ಇತಿ (ಸು. 329)

ಆಶಯಗಳ ಪೆಸರುಗಳು

ವಾತಾಶಯ, ಪಿತ್ತಾಶಯ, ಶ್ಲೇಷ್ಮಾಶಯ, ರಕ್ತಾಶಯ, ಆಮಾಶಯ, ಪಕ್ವಾಶಯ, ಮೂತ್ರಾಶಯ, ಎಂಬ ಏಳು ಆಶಯಗಳು ಸಾಮಾನ್ಯವಲ್ಲದೆ ಸ್ತ್ರೀಯರಿಗೆ ಗರ್ಭಾಶಯ ಹೆಚ್ಚು.

7. ಶ್ಲೇಷ್ಮಾಶಯ ಸ್ಯಾಮುರಸಿ ತಸ್ಮಾದಾಮಾಶಯಸ್ತ್ವಧಃ । ಊರ್ಧ್ವಮಗ್ನ್ಯಾಶಯೋ ನಾಭೇರ್ಮಧ್ಯಭಾಗೇ ವ್ಯವಸ್ಥಿತಃ ॥ ತಸ್ಯೋಪರಿ ತಿಲಂ ಜ್ಞೇಯಂ ತದಧಃ ಪವನಾಶಯಃ । ಮಲಾಶಯಸ್ತ್ವಧಸ್ತಸ್ಮಾದ್ವಸ್ತಿರ್ಮೂತ್ರಾಶಯಸ್ತ್ವಧಃ ॥ (ಶಾ 13)

ಕಫ, ಆಮ, ಅಗ್ನಿ, ತಿಲ ಪವನ, ಈ ಆಶಯಗಳ ಸ್ಥಾನ

ಎದೆಯಲ್ಲ ಕಫಾಶಯ, ಅದರ ಕೆಳಗೆ ಆಮಾಶಯ, ಹೊಕ್ಕುಳ ಮೇಲ್ಗಡೆ ಮಧ್ಯಭಾಗದಲ್ಲಿ ಅಗ್ನ್ಯಾಶಯ ಅದರ ಮೇಲೆ ತಿಲ, ಅದರ ಕೆಳಗೆ ವಾತಾಶಯ, ಅದರ ಕೆಳಗೆ ಮಲಾಶಯ, ಅದರ ಕೆಳಗೆ ಮೂತ್ರಾಶಯವಾದ ಪಸ್ತಿ.

ಪರಾ ಪಕ್ವಾಶಯವೆಂದರೂ ಮಲಾಶಯವೆಂದರೂ ಒಂದೇ (ಫಾ ಪ್ರ) ತಿಲ ಎಂದರೂ ಕ್ಲೋಮ ಎಂದರೂ ಒಂದೇ 'ಮಫ್ಫ' ಎಂಬಲ್ಲಿ 'ವಾಮ' (ಅಂದರೆ ಎತ) ಎಂಬ ಪಾಠ ಕಾಣುತ್ತದೆ ಅದು ಸರಿಯಲ್ಲ ಫಾವ ಪ್ರಕಾಶದ ಪ್ರಕಾರ ಎದೆಯಲ್ಲ ರಕ್ತಾಶಯ, ಅದರ ಕೆಳಗೆ ಕಫಾಶಯ, ಅದರ ಕೆಳಗೆ (ನಾಭಿಗೂ ಮೊಲೆಗಳಿಗೂ ಮಧ್ಯ) ಆಮಾಶಯ (stomach), ಆಮಾಶಯಕ್ಕೂ ಪಕ್ವಾಶಯಕ್ಕೂ ಮಧ್ಯ ಪಿತ್ತಾಶಯ (gall bladder), ನಾಭಿಯ ಮೇಲ್ಗಡೆ ಮಧ್ಯಭಾಗದಲ್ಲಿ ಅಗ್ನ್ಯಾಶಯ (pancreas), ನಾಭಿಯ ಕೆಳಗೆ ವಾತಾಶಯ, ಅದರ ಕೆಳಗೆ ಪಕ್ವಾಶಯ ಇದೇ ಮಲಾಶಯ ಮತ್ತು ಅದರ ಕೆಳಗೆ ಮೂತ್ರಾಶಯ (bladder) ವಾಗ್ಭಟನು ರಕ್ತಾಶಯ ಬಿಟ್ಟು ಉಳಿದ ಕಫ, ಆಮ, ಪಿತ್ತ ನಾತ, ಮಲ, ಮೂತ್ರ ಈ ಆಶಯಗಳು ಯಥಾಕ್ರಮ ಹೆಂಡಿನದಕ್ಕೆ ಮುಂಡಿನದು ಕೆಳಗಾಗಿರುತ್ತದಂತ ಹೇಳಿದ್ದಾನೆ

೪. ನಾಭೇ ಶ್ಚಾಸ್ಯ ಕಟೀ ಮುಷ್ಕ ಗುದ ಪಬ್ಬ್ಹಣ ಶೇಫಸಾಂ ।
ಏಕದ್ವಾರಸ್ತನುತ್ವಕ್ಕೋ ಮಧ್ಯೇ ವಸ್ತಿರಧೋಮುಖಃ ॥
ಅಲಾಬ್ವಾ ಇವ ರೂಪೇಣ ಸಿರಾಸ್ನಾಯುಪರಿಗ್ರಹಃ ।
ವಸ್ತಿರ್ವಸ್ತಿಶಿರಶ್ಚೈವ ಪೌರುಷಂ ವೃಷಣೌ ಗುದಂ ॥
ಏಕಸಂಬಂಧನೋಹ್ಯೇತೇ ಗುದಾಸ್ಥಿವಿವರಸ್ಥಿತಾಃ ।
ಮೂತ್ರಾಶಯೋ ಮಲಾಧಾರಃ ಪ್ರಾಣಾಯತನಮುತ್ತಮಂ ॥

ಮೂತ್ರಾಶಯದ ಒವರಣ ಪಕ್ವಾಶಯಗತಾಸ್ತತ್ರ ನಾಡ್ಯೋ ಮೂತ್ರವಹಾಸ್ತು ಯಾಃ ।
ತರ್ಪಯಂತಿ ಸದಾ ಮೂತ್ರಂ ಸರಿತಃ ಸಾಗರಂ ಯಥಾ ॥
ಸೂಕ್ಷ್ಮತ್ವಾನ್ನೋಪಲಭ್ಯಂತೇ ಮುಖಾನ್ಯಾಸಾಂ ಸಹಸ್ರಶಃ ।
ನಾಡೀಭಿರುಪನೀತಸ್ಯ ಮೂತ್ರಸ್ಯಾಮಾಶಯಾಂತರಾತ್ ॥
ಜಾಗ್ರತಃ ಸ್ವಪತಶ್ಚೈವ ಸ ನಿಸ್ಯಂದೇನ ಪೂರ್ಯತೇ ।
ಆಮುಖಾತ್ಸಲಿಲೇನ್ಯಸ್ತಃ ಪಾತ್ರೇರ್ಧ್ಯಃ ಪೂರ್ಯತೇ ನವಃ ॥
ಘಟೋ ಯಥಾ ತಥಾ ಏದ್ವಿವಸ್ತಿರ್ಮೂತ್ರೇಣ ಪೂರ್ಯತೇ ॥ (ಸು 257.)

ಮೂತ್ರಾಶಯವು, ಹೊಕ್ಕಳು, ಬೆನ್ನು, ಸೂಂಟ, ಅಂಡ, ಗುದ ಸೊಂಟದ ಪಕ್ಕ, (ತೊಡೆಗೂ ಅಂಡಿಗೂ ಸಂದು), ಮೇಢ್ರ, ಇವುಗಳ ಮಧ್ಯದಲ್ಲಿ ಮುಖ ಕೆಳಗಾಗಿ ಇರುತ್ತದೆ ಆದಕ್ಕೆ ಒಂದೇ ದ್ವಾರ, ಮತ್ತು ಅದರ ಚರ್ಮ ಅಥವಾ ಹೊದಿಕೆಯು ತೆಳ್ಳಗೆ. ಅದು ರೂಪದಲ್ಲಿ ಸೋರೆಕಾಯಿಯ ಹಾಗೆ ಇದ್ದು ಸಿರಾನಾಳಗಳಿಂದಲೂ, ನರಗಳಿಂದಲೂ ಸುತ್ತಲ್ಪಟ್ಟಿರುತ್ತದೆ. ಮೂತ್ರಾಶಯ, ಮೂತ್ರಾಶಯದ ತಲೆ ಮೇಢ್ರ, ಅಂಡಗಳು, ಗುದ, ಇವು ಗುದದೆಲುಬಿನ ಹೂಂಡ(ಕೂಪ)ದಲ್ಲಿ ನಿಂತಿರುವದರಿಂದ, ಒಂದೇ ಸಂಬಂಧವುಳ್ಳವು. ಮೂತ್ರಾಶಯವು ಮಲಾಧಾರವಾಗಿ, ಮುಖ್ಯವಾದ ಪ್ರಾಣದ ಮನೆಯಾಗಿರುತ್ತದೆ ನದಿಗಳು ಸಾಗರವನ್ನು ಹ್ಯಾಗೆ ತೃಪ್ತಿಗೊಳಿಸುತ್ತವೋ, ಹಾಗೆ ಮೂತ್ರವಾಹಿಯಾದ ನಾಳಗಳು ಪಕ್ವಾಶಯವನ್ನು ಸೇರಿ, ಮೂತ್ರವನ್ನು ಸದಾಕಾಲ ಸುರಿಯುತ್ತಾ ಇರುತ್ತವೆ. ಸಹಸ್ರ ಕಟ್ಟಿಯಲ್ಲಿರುವ ಈ ನಾಳಗಳ

ಮುಖಿಗಳು ಸೂಕ್ಷ್ಮವಾದ ದೆಸೆಯಿಂದ ಕಾಣುವದಿಲ್ಲ. ನಾಳಗಳು ಆಮಾಶಯದ ಸಮೀಪ ದಿಂದ ತರುವ ಮೂತ್ರವು ಎಚ್ಚರವಿರುವಾಗಲೂ, ನಿದ್ದೆಹೋದಾಗಲೂ, ಒಸರುತ್ತಾ ಇರುವದ ರಿಂದ, ಮೂತ್ರಾಶಯವು ತುಂಬುತ್ತದೆ ಮುಖದ ವರೆಗೆ ನೀರಲ್ಲಿ ಮುಳುಗಿಸಿಟ್ಟ ಹೊಸ ಗಡಿಗೆಯು ಹ್ಯಾಗೆ ಪಾರ್ಶ್ವಗಳಿಂದ ತುಂಬುತ್ತದೋ, ಹಾಗೆಯೇ ಮೂತ್ರಾಶಯವು ಮೂತ್ರ ದಿಂದ ತುಂಬುತ್ತದೆಂತ ತಿಳಿಯಬೇಕು.

9 ವಸ್ತಿಸ್ತು ಸ್ಥೂಲ ಗುದಮುಷ್ಕ ಸೇವನೀ ಶುಕ್ರ ಮೂತ್ರ ವಾಹಿನೀನಾಂ ನಾಡೀನಾಂ ಮಧ್ಯೇ ಮೂತ್ರಾಧಾರೋ ಜಲವಹಾನಾಂ ಸರ್ವಸ್ರೋತಸಾಮು ದಧಿರಿವಾಪಗಾನಾಂ ಪ್ರತಿಷ್ಠಿತೋ ಭವತಿ | ಬಹುಭಿಶ್ಚ ತನ್ಮೂಲೈರ್ಮರ್ಮ ಸಂಜ್ಞಕೈಃ ಸ್ರೋತೋಭಿರ್ಗಗನಮಿವ ದಿನಕರಕರೈರ್ವ್ಯಾಪ್ತಮಿದಂ ಶರೀರಂ (ಜ 904)

ವಸ್ತಿಯು ದೊಡ್ಡ ಗುದ, ಅಂಡದ ಸೇವನೀ. ಶುಕ್ರ-ಮೂತ್ರಗಳ ನಾಳಗಳು ಇವುಗಳ ಮಧ್ಯ ಇರುವ ಮೂತ್ರಾಧಾರ. ಇದು ನದಿಗಳಿಗೆ ಸಮುದ್ರ ಹ್ಯಾಗೋ ಹಾಗೆ ನೀರನ್ನು ಸಾಗಿಸುವ ಸರ್ವ ನಾಳಗಳಿಗೆ ನಿಧಿಯಾಗಿ ಪ್ರತಿಷ್ಠಿತವಾಗಿರುತ್ತದೆ. ಅದರ ಮೂಲವಾಗಿ ಹೊರಟ ಮರ್ಮ ಎಂಬ ಹೆಸರಿನ ಬಹು ನಾಳಗಳಿಂದ, ಆಕಾಶವು ಸೂರ್ಯನ ಕಿರಣಗಳಿಂದ ಹ್ಯಾಗೋ, ಹಾಗೆ ಈ ಶರೀರವು ವ್ಯಾಪ್ತವಾಗಿರುತ್ತದೆ

10 ಮಾಂಸ ಸಿರಾ ಸ್ನಾಯ್ವಸ್ಥಿ ಜಾಲಾನಿ ಪ್ರತ್ಯೇಕಂ ಚತ್ವಾರಿ ಚತ್ವಾರಿ | ತಾನಿ ಮಣಿಬಂಧಗುಲ್ಫಸಂಶ್ರಿತಾನಿ ಪರಸ್ಪರಸಿಬದ್ಧಾನಿ ಪರಸ್ಪರಸಂ
ಜಾಲಗಳು ಶ್ಲಿಷ್ಟಾನಿ ಪರಸ್ಪರಗವಾಕ್ಷಿತಾನಿ ಚೇತಿ ತೈರ್ಗವಾಕ್ಷಿತಮಿದಂ ಶರೀರಂ | (ಸು 330)

ಮಾಂಸ, ಸಿರಾನಾಳ, ನರ, ಎಲುಬು, ಇವುಗಳ ಬಲೆಗಳು ಪ್ರತಿಪ್ರತ್ಯೇಕ ನಾಲ್ಕು ನಾಲ್ಕು, ಅಂತು 16 ಇವು ಕೈಕಾಲುಗಳ ಮಣಿಗಂಟುಗಳನ್ನು ಆಶ್ರಯಿಸಿಕೊಂಡೂ, (ಅಂದರೆ ಒಂದೊಂದು ಗಂಟಿನಲ್ಲಿ ಒಂದೊಂದು ತರದ್ದು ಒಂದರಂತೆ ನಾಲ್ಕು) ಒಂದಕ್ಕೊಂದು ಕಟ್ಟಲ್ಪಟ್ಟು, ಒಂದಕ್ಕೊಂದು ಅಪ್ಪಿಕೊಂಡು, ಮತ್ತು ಒಂದಕ್ಕೊಂದು ಗವಾಕ್ಷ ಕಂಡಿ ರೂಪವಾಗಿ, ಇರುತ್ತವೆ. ಮತ್ತು ಅವುಗಳು ಈ ಶರೀರಕ್ಕೆ ಗವಾಕ್ಷಗಳಾಗಿವೆ ಅಂದರೆ
(ನಿರಂತರ ಜಾಲಾಕಾರರಂಧ್ರನಿಕರ ಪರಿಕಲಿತಂ) (ಭಾ. ಪ್ರ 34)
ಎಡೆಬಿಡದ ಬಲೆಯಾಕಾರದ ರಂಧ್ರಗಳ ಸಮೂಹದಿಂದ ಈ ಶರೀರವು ರಚಿಸಲ್ಪಟ್ಟಿದೆ

11. ಷಟ್ ಕೂರ್ಚಾಸ್ತೇ ಹಸ್ತಪಾದಗ್ರೀವಾಮೇಢ್ರೇಷು | ಹಸ್ತಯೋರ್ದ್ವೌ
ಕೂರ್ಚಗಳು ಪಾದಯೋರ್ದ್ವೌ ಗ್ರೀವಾಮೇಢ್ರಯೋರೇಕೈಕಃ (ಸು 330)

ಕೈಗಳಲ್ಲಿ ಎರಡು, ಪಾದಗಳಲ್ಲಿ ಎರಡು, ಕುತ್ತಿಗೆಯಲ್ಲಿ ಒಂದು, ಮೇಢ್ರದಲ್ಲಿ ಒಂದು ಹೀಗೆ ಆರು ಕೂರ್ಚಕಟ್ಟುಗಳು.

ಕೂರ್ಚಾ ಅಪಿ ಶಿರಾಸ್ನಾಯುಮಾಂಸಾಸ್ಥಿ ಪ್ರಭವಾಃ ಸ್ಮೃತಾಃ | (ಭಾ. ಪ್ರ. 34)

ಕೂರ್ಚಗಳು ಸಹ ಸಿರಾನಾಳ, ನರ, ಮಾಂಸ, ಎಲುಬು ಇವುಗಳಿಂದ ಹುಟ್ಟಿದವಾಗಿರುತ್ತವೆ.

12 ರಜ್ಜುಗಳು

ಮಹತ್ಸ್ರೋ ಮಾಂಸರಜ್ಜವಷ್ಟತಸ್ರಃ ವೃಷ್ಣ್ಯವಂಶಮುಭಯತಃ ಪೇಶೀ ನಿಬಂಧನಾರ್ಥಂ ದ್ವೇ ಬಾಹ್ಯೇ ಆಭ್ಯಂತರೇ ಚ ದ್ವೇ | (ಸು. 330.)

ದೊಡ್ಡ ಮಾಂಸದ ಹಗ್ಗಗಳು ನಾಲ್ಕು ಪೆನ್ನೆಲುಬನ (ಪೆನ್ನಕೋಲು) ಇತ್ತಟ್ಟು ಮಾಂಸ ಖಂಡಗಳನ್ನು ಕಟ್ಟುವ ಉದ್ದಿಶ್ಯ ಹೊರಭಾಗ ಎರಡು, ಒಳಭಾಗ ಎರಡು, ಹೀಗೆ

13 ಸೇವನಿಗಳು

ಸಪ್ತಸೇವನ್ಯಃ ಶಿರಸಿ ಏಭಕ್ತ್ಯಾಃ ಪಂಚ ಜಿಹ್ವಾಶೇಫಸೋರೇಕೈಕಾ ತಾಃ ಪರಿಹರ್ತವ್ಯಾಃ ಶಸ್ತ್ರೇಣ (ಸು 330)

ಸೇವನಿಗಳು (ಹೊಲಿಗೆಗಳು) ಏಳರಲ್ಲಿ ಐದು ತಲೆಯಲ್ಲಿ, ಒಂದು ನಾಲಿಗೆಯಲ್ಲಿ, ಒಂದು ಮೇಢ್ರದಲ್ಲಿ ಇವುಗಳಿಗೆ ಶಸ್ತ್ರ ತಾಗಿಸಬಾರದು

ತಿರಸ್ಸು ಇಂದ್ರಿಯಗಳಿಗೆ ಆಶ್ರಯಸ್ಥಾನ

ತಿರಸಿ ಇಂದ್ರಿಯಾಣಿ ಇಂದ್ರಿಯಪ್ರಾಣವಹಾನಿ ಚ ಸ್ರೋತಾಂಸಿ ಸೂರ್ಯಮಿವ ಗಭಸ್ತಯಃ ಸಂಶ್ರಿತಾನಿ | (ಚ 904).

ತಲೆಯಲ್ಲಿ ಇಂದ್ರಿಯಗಳು ಮತ್ತು ಇಂದ್ರಿಯಗಳ ಪ್ರಾಣವಾಹಿನಿಯಾದ ನಾಳಗಳು ಸೂರ್ಯನನ್ನು ಕಿರಣಗಳು ಆಶ್ರಯಿಸಿಕೊಂಡಿರುವಂತೆ ಆಶ್ರಯಿಸಿಕೊಂಡಿರುತ್ತವೆ

14. ಎಲುಬುಗಳ ಕೂಟಗಳು

ಚತುರ್ದಶಾಸ್ಥ್ನಾಂ ಸಂಘಾತಾಃ | ತೇಷಾಂ ತ್ರಯೋ ಗುಲ್ಫಜಾನು ಸಂಧ್ಯಂಸೇಷು | ಏತೇನೇತರ ಸಕ್ಥಿ ಬಾಹೂ ಚ ವ್ಯಾಖ್ಯಾತೌ | ತ್ರಿಕ ಶಿರಸೋರೇಕೈಕಃ | (ಸು. 330)

ಕಾಲಿನ ಮತ್ತು ಕೈಯ ಮಣಿಗಂಟು ಮತ್ತು ಮೊಣಗಂಟು, ತೊಡೆ ಅಂಡುಗಳ ಸಂದು, ತೋಳಿಗೂ ಹಗಲಿಗೂ ಸಂದು ಶಿರಸ್ಸು, ಕುತ್ತಿಗೆ ಸಂದು, ಇವುಗಳಲ್ಲಿ ಒಂದೊಂದರಂತೆ 14 ಎಲುಬುಗಳ ಕೂಟಗಳು.

ಸರಾ ವಾಗ್ಭಟನ ಪ್ರಕಾರ ತಲೆಯಲ್ಲಿ ಐದು ಮತ್ತು ಒಟ್ಟು ಹದಿನೆಂಟು

15. ಸೀಮಂತಗಳು

ಚತುರ್ದಶೈವ ಸೀಮಂತಾಃ | ತೇ ಚಾಸ್ಥಿಸಂಘಾತವದ್ಗಣನೀಯಾ ಯತ ಸ್ತೈರ್ಯುಕ್ತಾ ಅಸ್ಥಿಸಂಘಾತಾಃ | (ಸು 330)

ಸೀಮಂತಗಳು ಸಹ 14. ಇವುಗಳ ಗಣನೆಯು ಎಲುಬುಗಳ ಕೂಟಗಳಂತೆ. ಯಾಕೆಂದರೆ ಎಲುಬುಗಳ ಕೂಟಗಳು ಸೀಮಂತಗಳಿಂದ ಕೂಡಿಸಲ್ಪಟ್ಟಿರುತ್ತವೆ

ಸಂಘಾತಾಃ ಸೀವಿತಾಯೈಸ್ತು ಸೀಮಂತಾಸ್ತೇ ಪ್ರಕೀರ್ತಿತಾಃ | (ಭಾ. ಪ್ರ 34)

ಎಲುಬುಗಳ ಸಮೂಹಗಳು ಯಾವವುಗಳಿಂದ ಹೊಲಿಯಲ್ಪಟ್ಟವೋ, ಅವುಗಳು ಸೀಮಂತವೆಂದು ಪ್ರಸಿದ್ಧವಾಗಿವೆ.

16 ತ್ರೀಣಿಷಷ್ಟ್ಯೇನ್ಯಸ್ಥಿಶತಾನಿ ವೇದವಾದಿನೋ ಭಾಷಂತೇ, ಶಲ್ಯತಂತ್ರೇ ತು ತ್ರೀಣ್ಯೇವ ಶತಾನಿ । ತೇಷಾಂ ಸಪಂಶಮಸ್ಥಿಶತಂ ಶಾಖಾಸು । ಸಪ್ತದ ಶೋತ್ತರಂ ಶತಂ ಶ್ರೋಣೌ ಪಾರ್ಶ್ವ ಪೃಷ್ಠೋದರೋರಸ್ಸು, । ಗ್ರೀವಾಂ ಪ್ರತ್ಯೂರ್ಧ್ವಂ ತ್ರಿಷಷ್ಟಿಃ । ಏವಮಸ್ಥ್ನಾಂ ತ್ರೀಣಿ ಶತಾನಿ ಪೂರ್ಯಂತೇ ।

ಎಲುಬುಗಳ ಸಂಖ್ಯೆ ಮತ್ತು ಸ್ಥಾನ

(ಸು 331)

ಎಲುಬುಗಳು 360 ಎಂತ ವೇದವಾದಿಗಳು ಹೇಳುವದಾದರೂ, ಶಲ್ಯತಂತ್ರ ಪ್ರಕಾರ ಮುನ್ನೂರೇ, ಅವುಗಳ ತಪಶೀಲು ಹ್ಯಾಗಂದರ —

	ಸುಶ್ರುತ (331)		**ಚರಕ** (351)	**ಪಾಶ್ಚಾತ್ಯಶಾಸ್ತ್ರಪ್ರಕಾರ**
ಪಾದದ ಪೆರಳ್ಳಿಲ್ಲಿ ಮೂರು ಮೂತರಂತೆ ಐದು ಪೆರಳ್ಳಿಲ್ಲಿ	15		15	
ಪಾದದ ತಲ—ಕೂರ್ಚ ಮತ್ತು ಗಂಟುಕೂಡಿ	10		9	
ಹಿಮ್ಮಡಿ . . .	1		1	
(ಮೊಣ) ಕಾಲು	2		2	
ಮೊಣಕಾಲಗಂಟು .	1		1	
ತೊಡೆ . . .	1		1	
		ಉಗುರು	5	
	30		34	
ಎರಡು ಕಾಲುಗಳ್ಳು ಕೂಡಿ	60		68	
ಅದೇ ರೀತಿ ಎರಡು ಕೈಗಳ್ಳಿಲ್ಲಿ	60	ಉಗುರುಗಳ್ಳು	10	
		ಪೆರಳ್ಳುಗಳ್ಳು	30	
		ಹಸ್ತದ ಕಟ್ಟಿನಲ್ಲಿ	10	
		ಮಣಿಗಂಟಿನಲ್ಲಿ	4	
		ಕೈ (ಮುಂಗೈ ಅಥವಾ ಮೊಳಕೈ)ಯಲ್ಲಿ	4	
		ಮೊಳಕೈ ಗಂಟು	2	
		ತೋಳ್ಳುಗಳ್ಳು	2	68
ಒಟ್ಟು ತಾಖೆಗಳ್ಳಿಲ್ಲಿ	120		130	134
ಗುದ 1, ಭಗ 1, ನಿತಂಬ 2, ಶಿಕ 1 (ಸೊಂಟದ ನಡು), ಕೂಡಿ ಸೊಂಟದಲ್ಲಿ . .			5	

	ಸುಶ್ರುತ	ಚರಕ	ಪಾಶ್ಚಾತ್ಯಶಾಸ್ತ್ರಪ್ರಕಾರ
ಎದೆಗೂಡಿನ ಪಕ್ಕದ ಎಲುಬು ಗಳು	72	72	24
ಬೆನ್ನಿನಲ್ಲಿ	30	35	26
ಎದೆಯಲ್ಲಿ	8	15	1
ಕತ್ತಿಗೆ ಸಂದು	2	2	
		ಹೆಗಲು (ಜತ್ರು) 2	
ಅಂತು ಮುಂಡದಲ್ಲಿ	117	131	51
ಕೊರಳ್ಳು ಗವತ್ತು ಗಂಟಲ ನಾಳ 4	13	15	15 (ನಾಳ 1 ಕೂಡ)
ಪವಡೆ	2	3	
ಹಲ್ಲು	32	32	32
ಮೂಗು	3	3	
ತಾಲು	1	2	
ಗಂಡಸ್ಥಲ	2	2	
ಕೆನ್ನೆ (ಹುಬ್ಬು)	2	2	
ಮಸ್ತಕ	6	(ಲಲಾಟ 2 ಮಸ್ತಕ 4) 6	6
ಕಿವಿ	2	ಕಣ್ಣು 2 ಹಲ್ಲುಗಳ ಜಿಡ್ಡು 32	6
ಅಂತು ಶಿರಸ್ಸಿನಲ್ಲಿ (ಕುತ್ತಿಗೆಯಿಂದ ಮೇಲೆ)	63	99	61
ಜುಮ್ಲ	**300**	**360**	**246**

ಸರಾ (ಸುಶ್ರುತನ ಮತ್ತು ಚರಕನ ಮೂಲ ವರ್ಣನವನ್ನು ಗ್ರಂಥವಿಸ್ತಾರದ ಭಯದಿಂದ ಇಲ್ಲಿ ಲೋಪ ಮಾಡಿದ) ಪಾಶ್ಚಾತ್ಯ ವೈದ್ಯರು ಉಗುರುಗಳನ್ನು ಹೊರ ಚರ್ಮದ ವಿಕಾರವನ್ನಾಗಿ ತಿಳಿಯುತ್ತಾರೆ ಸುಶ್ರುತದಲ್ಲಿಯೂ ಉಗುರುಗಳನ್ನು ಅಸ್ಥಿಯ ಮಲವೆಂತ ಎಣಿಸಿ ಅಸ್ಥಿಗಳ ಸಂಖ್ಯಾತದಲ್ಲಿ ಜಿಟ್ಟುಜಿಟ್ಟದೆ

ಕಫಃ ಪಿತ್ತಂ ಮಲಃ ಖೇಷು ಪ್ರಸ್ವೇದೋ ನಖರೋಮ ಚ |
ಸ್ನೇಹೋಕ್ಷ್ಮಾತ್ವಗ್ ವಿಶಾ ಮೋಜೋ ಧಾತೂನಾಂ ಕ್ರಮಶೋ ಮಲಾಃ || (ವಾ. 156)

ರಸದಿಂದ ಕಫ, ರಕ್ತದಿಂದ ಪಿತ್ತ, ಮಾಂಸದಿಂದ ಕರ್ಣಾದಿ ಸ್ರೋತಸ್ಸುಗಳಲ್ಲಿ ಕಾಣುವ ಕುಗ್ಗಿ ಮುಂತಾದ್ದು, ಮೇದಸ್ಸಿನಿಂದ ಬೆವರು, ಎಲುಬಿನಿಂದ ಉಗುರು ಮತ್ತು ರೋಮ, ಮಜ್ಜೆಯಿಂದ ಕಣ್ಣು-ಚರ್ಮಗಳಲ್ಲಿ ಕಾಣುವ ಜಿಡ್ಡು, ಶುಕ್ರದಿಂದ ಓಜಸ್ಸು, ಮಲವಾಗಿ ಪರಿಣಮಿಸುತ್ತದೆ.

ಪರಾ ಶುಕ್ರದಲ್ಲಿ ಮಲವೇ ಇಲ್ಲವೆಂತಲೂ ನಖಗಳು ಕಂಡರೆಗಳ ಪ್ರಕೋಪವೆಂತಲೂ ಸುಶ್ರುತಾದಿಗಳ ಪಕ್ಷ ಇರುತ್ತದೆ ಪಾಶ್ಚಾತ್ಯಶಾಸ್ತ್ರಜ್ಞರು ಪಕ್ಕದ ಎಲುಬುಗಳನ್ನು, ಪ್ರತಿ ಪಕ್ಕದಲ್ಲಿ 12ರಂತೆ 24 ಆಗಿ ಎಣಿಸಿದ್ದಾರೆ ಆದರೆ ಆ 12 ಎಲುಬುಗಳ ಪ್ರತಿಯೊಂದರಲ್ಲಿ ಎರಡು ಕೊನೆಗಳೂ ಮೃದು ಅಸ್ಥಿಗಳು, ಮತ್ತು ಮಧ್ಯ ಗಟ್ಟಿ ಅಸ್ಥಿ ಹೀಗೆ ಮೂರು ಖಂಡಗಳಿರುವದರಿಂದ ಒಟ್ಟು ಪಕ್ಕದ ಎಲುಬುಗಳ ಸಂಖ್ಯೆ 72 ಆಗಿ ಚರಕಾದಿಗಳಲ್ಲಿ ಎಣಿಸಲ್ಪಟ್ಟಿದೆ

ಹಾಗೆಯೇ ಎದೆ ಕೋಲಸ್ಥಿಗೆ ಇತ್ತಟ್ಟು ಏಳೇಳು ಮೃದ್ವಸ್ಥಿ ಕೂಡಿರುವದರಿಂದ ಒಂದು ಪಕ್ಷ ಒಂದೇ, ಇನ್ನೊಂದು ಪಕ್ಷ 8, ಮತ್ತೊಂದು ಪಕ್ಷ 15 ಎಂತ ಎಣಿಸಲಿಕ್ಕೆ ಕಾರಣವೆಂತ ಕಾಣುತ್ತದೆ ಇವೇ ಮೊದಲಾದ ಕಾರಣಗಳಿಂದ ಎಲುಬುಗಳ ಗಣನೆಗಳಲ್ಲಿ ವ್ಯತ್ಯಾಸಗಳು ಕಾಣುವವು ಪಾತ್ಕಾತ್ಯ ವೈದ್ಯರೊಳಗಿನ್ನೊಬ್ಬರ ಪುಸ್ತಕದಲ್ಲಿ ಸಹ ಈ ಶರೀರದ ಒಟ್ಟು ಎಲುಬುಗಳ ಸಂಖ್ಯೆಯು 200 ಎಂತ ಕಾಣಿಸಿಯದೆ (ಸಂ 24 ನೋಡು)

17. ಏತಾನಿ ಪಂಚವಿಧಾನಿ ಭವಂತಿ | ತದ್ಯಥಾ |
ಕಪಾಲ ರುಚಕ ತರುಣ ವಲಯ ನಲಕ ಸಂಜ್ಞಾನಿ | ತೇಷಾಂ ಖಾನು
ಎಲುಬುಗಳ ರಚನಾಭೇದಗಳು
ನಿತಂಖಾಂಸ ಗಂಡ ತಾಲು ಶಂಖ ಶಿರಸ್ಸು ಕಪಾಲಾನಿ | ದಶನಾಸ್ತು
ರುಚಕಾನಿ | ಘ್ರಾಣ ಕರ್ಣ ಗ್ರೀವಾಕ್ಷಿ ಕೂಷೇಷು ತರುಣಾನಿ |
ಪಾಣಿ ಪಾದ ಪಾರ್ಶ್ವ ಪೃಷ್ಠೋದರೋರಸ್ಸು ವಲಯಾನಿ | ಶೇಷಾಣಿ
ನಲಕಸಂಜ್ಞಾನಿ | (ಸು. 331)

ಎಲುಬುಗಳು 5 ವಿಧ. ಕಪಾಲ, ರುಚಕ, ತರುಣ, ವಲಯ, ನಲಕ ಎಂತ. ಅವುಗಳಲ್ಲಿ ನೊಣಗಂಟು. ಅಂಡು, ಹೆಗಲು, ದವಡೆ, ಕಾಲು, ಕೆನ್ನೆ, ತಲೆ, ಇವುಗಳ ಎಲುಬುಗಳು ಕಪಾಲಗಳೆಂತಲೂ, ಹಲ್ಲುಗಳು ರುಚಕಗಳು (ರುಚಿಪ್ರದಗಳು) ಎಂತಲೂ, ಮೂಗು, ಕಿವಿ, ಕುತ್ತಿಗೆ ಕಣ್ಣಿನ ಚೀಲ, ಇವುಗಳಲ್ಲಿರುವವು ತರುಣಗಳು (ಮೃದು) ಎಂತಲೂ, ಹಸ್ತ, ಪಾದ, ಪಕ್ಕ, ಬೆನ್ನು, ಹೊಟ್ಟೆ, ಎದೆ, ಇವುಗಳ ಎಲುಬುಗಳು ವಲಯ(ಒಳೆ)ಗಳು ಎಂತಲೂ, ಉಳಿದವು ನಳಕ (ನಳಿಗೆ)ಗಳು ಎಂತಲೂ ವಿಭಕ್ತವಾಗಿವೆ

18. ಅಭ್ಯಂತರಗತೈಃ ಸಾರೈರ್ಯಥಾ ತಿಷ್ಠಂತಿ ಭೂರುಹಾಃ |
ಅಸ್ಥಿಸಾರೈಸ್ತಥಾದೇಹಾ ಧ್ರಿಯಂತೇ ದೇಹಿನಾಂ ಧ್ರುವಂ ||
ತಸ್ಮಾಚ್ಛಿರಾನಷ್ಟೇಷು ತ್ವಙ್ಮಾಂಸೇಷು ಶರೀರಿಣಾಂ |
ಎಲುಬುಗಳ ಸ್ರಯೋಜನ
ಅಸ್ಥೀನಿ ನ ವಿನಶ್ಯಂತಿ ಸಾರಾಣ್ಯೇತಾನಿ ದೇಹಿನಾಂ ||
ಮಾಂಸಾನ್ಯತ್ರ ನಿಬದ್ಧಾನಿ ಸಿರಾಭಿಃ ಸ್ನಾಯುಭಿಸ್ತಥಾ |
ಅಸ್ಥೀನ್ಯಾಲಂಬನಂ ಕೃತ್ವಾ ನ ಶೀರ್ಯಂತೇ ಪತಂತಿ ವಾ || (ಸು 331-32)

ಮರಗಳು ಒಳಗಿನ ತಿರಳುಗಳ ಬಲದಿಂದ ಹ್ಯಾಗೆ ನಿಂತಿರುತ್ತವೋ, ಹಾಗೆಯೇ ಪ್ರಾಣಿಗಳ ದೇಹಗಳು ಎಲುಬೆಂಬ ತಿರಳುಗಳಿಂದ ಗಟ್ಟಿಯಾಗಿ ಆಧರಿಸಲ್ಪಟ್ಟಿರುತ್ತವೆ. ಆದ್ದರಿಂದ ಪ್ರಾಣಿಗಳ ಚರ್ಮ-ಮಾಂಸಗಳು ಸ್ವಲ್ಪ ಕಾಲದಲ್ಲಿಯೇ ನಾಶವಾದಾಗ್ಯೂ, ಎಲುಬುಗಳು ನಾಶವಾಗುವದಿಲ್ಲ. ಇವು ದೇಹಧಾರಿಗಳ ತಿರುಳಾಗಿರುತ್ತವೆ. ಇವುಗಳಲ್ಲಿ ಮಾಂಸಗಳನ್ನು ನರಗಳಿಂದಲೂ ನಾಳಗಳಿಂದಲೂ ಕಟ್ಟಿರುವದರಿಂದ, ಎಲುಬುಗಳು ಕಡಿದುಹೋಗದೆ ಮತ್ತು ಬೀಳದೆ ಆಧರಿಸಿಕೊಂಡು ಇರುತ್ತವೆ.

19. ದಂತಾನಾಂ ಪತನಂ ಜನ್ಮ ಪುನಃ ಪಾತೇತ್ಪಸಂಭವಃ |
ದಂತಪತನ ಮತ್ತು ತಲಗಳಲ್ಲಿ ರೋಮ ಹುಟ್ಟದಿರೋಣ
ತಲೇಷ್ವನುದ್ಭವೋ ಲೋಮ್ನಾಮೇತತ್ಸರ್ವಂ ಸ್ವಭಾವತಃ ||
(ಭಾ ಪ್ರ. 35.)

ಹಲ್ಲುಗಳು ಬೀಳುವದು ಪುನಃ ಹುಟ್ಟುವದು. ಎರಡನೇ ಬಿದ್ದರೆ ಪುನಃ ಹುಟ್ಟದಿರುವದು, ಅಂಗೈ ಅಂಗಾಲುಗಳಲ್ಲಿ ರೋಮ ಹುಟ್ಟದಿರುವದು, ಇದೆಲ್ಲಾ ಸ್ವಾಭಾವಿಕ (ಅಂದರೆ ಈಶ್ವರನ ಮಹಿಮೆ)

20. ಕರುಳುಗಳು — ಸಾರ್ಧತ್ರಿವ್ಯಾಮಾನ್ಯಂತ್ರಾಣಿ ಪುಂಸಾಂ ಸ್ತ್ರೀಣಾಮರ್ಧವ್ಯಾಮ ಹೀನಾನಿ | (ಸು. 329.)

ಕರುಳುಗಳು ಗಂಡಸರಲ್ಲಿ ಮೂರುವರೆ ಮಾರು ಉದ್ದವಾಗಿಯೂ, ಹೆಂಗಸರಲ್ಲಿ ಅರ್ಧ ಮಾರು ಕಡಿಮೆಯಾಗಿಯೂ ಇರುತ್ತವೆ

21 ಕಂಡರೆಗಳ ಸ್ಥಾನ — ಷೋಡಶ ಕಂಡರಾಃ | ತಾಸಾಂ ಚತಸ್ರಃ ಪಾದಯೋಸ್ತಾವತ್ಯೋ ಹಸ್ತ ಗ್ರೀವಾಪೃಷ್ಠೇಷು | ತತ್ರ ಹಸ್ತಪಾದಗತಾನಾಂ ಕಂಡರಾಣಾಂ ಸಖಾಃ ಪ್ರರೋಹಾಃ | ಗ್ರೀವಾ ಹೃದಯ ಸಿಬಂಧಿನೀನಾಮಧೋಭಾಗಗತಾ ನಾಂ ಮೇಢ್ರಂ ಶ್ರೋಣಿ ಪೃಷ್ಠ ನಿಬಂಧಿನೀನಾಮಧೋಭಾಗಗತಾನಾಂ ಬಿಂಬಃ | ಮೂರ್ಧೋರು ವಕ್ಷೋಽಕ್ಷಿ ಪಿಂಡಾದೀನಾಂ ಚ | (ಸು. 330.)

ಕಂಡರೆಗಳು 16. ಅವುಗಳೊಳಗೆ 4 ಪಾದಗಳಲ್ಲಿಯೂ, 4 ಹಸ್ತಗಳಲ್ಲಿಯೂ, 4 ಕೂರಳಲ್ಲಿಯೂ, 4 ಬೆನ್ನಿನಲ್ಲಿಯೂ ಇರುತ್ತವೆ. ಅವುಗಳಲ್ಲಿ ಹಸ್ತಪಾದಗಳೊಳಗೆ ಹೋದ ಕಂಡರೆಗಳಿಗೆ ಉಗುರುಗಳು ಅಂಕುರಗಳು, ಕುತ್ತಿಗೆಯನ್ನೂ ಹೃದಯವನ್ನೂ ಕಟ್ಟಿ ಕೆಳಗೆ ಹೋದವುಗಳಿಗೆ ಮೇಢ್ರವು; ಮತ್ತು ಸೊಂಟವನ್ನೂ ಬೆನ್ನನ್ನೂ ಕಟ್ಟಿ ಕೆಳಗೆ ಹೋದವುಗಳಿಗೆ ಬಿಂಬವು (ಅಂಡು) ಮತ್ತು ತಲೆ, ತೊಡೆ, ಎದೆ, ಕಣ್ಣು, ಇವುಗಳ ಪಿಂಡಗಳು ಮುಂತಾದವುಗಳ ಗೋಲ ಸಹ.

ಪರಾ ಭಾವಪ್ರಕಾಶದ ಟೀಕೆಯ ಅಭಿಪ್ರಾಯವು ಈ ಅರ್ಥವನ್ನು ಬಲಪಡಿಸುತ್ತಿದೆ ಆದರೆ ಸಿಬಂಧನಸಂಗ್ರಹ ವ್ಯಾಖ್ಯಾನದಲ್ಲಿ 'ಅಕ್ಷಿ' ಎಂಬಲ್ಲ 'ಅಂಸ' ಎಂಬ ಪಾಠ ಇಟ್ಟು ಕುತ್ತಿಗೆಯಿಂದ ಮೇಲೆ ಹೋದ ಕಂಡರೆಗಳಿಗೆ ಮಸ್ತಕದ ಮಂಡಲವು ಅಂಕುರ, ಪಾದಗಳಿಂದ ಮೇಲೆ ಹೋದ ಕಂಡರೆಗಳಿಗೆ ತೊಡೆಯ ಮಂಡಲವು ಅಂಕುರ. ಪೆಸ್ತಿಸಿಂದ ಮೇಲೆ ಹೋದ ಕಂಡರೆಗಳಿಗೆ ಎದೆ ಮಂಡಲವು ಸ್ತನಮಂಡಲ ಸಹ, ಅಂಕುರ, ಕೈಗಳಿಂದ ಮೇಲೆ ಹೋದ ಕಂಡರೆಗಳಿಗೆ ತೋಳಿನ ಬುತ ಅಂಕುರ, ಎಂತ ಅರ್ಥ ಬರೆಯಲ್ಪಟ್ಟಿದೆ

ಮಹತ್ಯಃ ಸ್ನಾಯವಃ ಪ್ರೋಕ್ತಾಃ ಕಂಡರಾಃ | (ಭಾ. ಪ್ರ. 33)

ದೊಡ್ಡ ನರಗಳಿಗೆ (ಸ್ನಾಯು) ಕಂಡರೆ ಎಂತ ಹೆಸರು.

22. ಕಂಡರೆಗಳ ಉಪಯೋಗ — ಪ್ರಸಾರಣಾಕುಂಚನಯೋರಂಗಾನಾಂ ಕಂಡರಾ ಮತಾಃ | (ಶಾ. 16.)

ಅಂಗಗಳನ್ನು ಮಡಚುವದಕ್ಕೂ ಚಾಚುವದಕ್ಕೂ, ಕಂಡರೆಗಳು ಉಪಯೋಗವುಳ್ಳವು

23. ಎಲುಬುಗಳ ಸಂದುಗಳಲ್ಲಿ ಸ್ಥಿರ, ಚರ ಎಂಬ ಎರಡು ವಿಧ — ಸಂಧಯಸ್ತ್ವಿದ್ವಿವಿಧಾಶ್ಚೇಷ್ಟಾವಂತಃ ಸ್ಥಿರಾಶ್ಚ | ಶಾಖಾಸು ಹನ್ವೋಃ ಕಟ್ಯಾಂಚ ಚೇಷ್ಟಾವಂತಸ್ತು ಸಂಧಯಃ | ಶೇಷಾಸ್ತು ಸಂಧಯಸ್ಸರ್ವೇ ವಿಜ್ಞೇಯಾ ಹಿ ಸ್ಥಿರಾ ಬುಧೈಃ || (ಸು. 332.)

ಎಲುಬುಗಳ ಸಂದುಗಳು ಸ್ಥಿರವಾದವು ಎಂತಲೂ ಅಲ್ಲಾಡತಕ್ಕವು ಎಂತಲೂ, ಎರಡು

ವಿಧ. ಕೈಕಾಲುಗಳೆಂಬ ಶಾಖೆಗಳಲ್ಲಿಯೂ, ದವಡೆಗಳಲ್ಲಿಯೂ, ಸೊಂಟದಲ್ಲಿಯೂ ಇರುವ ಸಂಧಿಗಳು ಅಲ್ಲಾಡತಕ್ಕವು. ಮಿಕ್ಕ ಎಲ್ಲಾ ಸಂಧಿಗಳು ಸ್ಥಿರವಾದವುಗಳೆಂತ ತಿಳಿಯತಕ್ಕದ್ದು.

24. ಸಂಖ್ಯೆ ಮತ್ತು ಸ್ಥಾನಗಳು ಸಂಘಾತಸ್ತು ದಶೋತ್ತರೇ ದ್ವೇಶತೇ | (ಸು. 332.)

ಎಲುಬುಗಳ ಸಂದುಗಳು ಒಟ್ಟು 210. ಅವುಗಳ ವಿವರ —

ಪರಾ —ಗ್ರಂಥವಿಸ್ತಾರ ಭಯಕ್ಕಾಗಿ ಮೂಲವನ್ನು ಬಿಟ್ಟದೆ

ಅಂಗುಷ್ಠದಲ್ಲಿ 2 ಮಿಕ್ಕ 4 ಬೆರಳುಗಳ ಒಂದೊಂದರಲ್ಲಿ 3, ಹೀಗೆ	14	
ಮಣಿಗಂಟು, ಮೊಣಗಂಟು, ತೊಡೆಸಂದು ಇವುಗಳಲ್ಲಿ . . .	3	
	17	
ಇನ್ನೊಂದು ಕಾಲಲ್ಲಿ ಅದೇ ರೀತಿ	17	
	34	
ಹಾಗೆಯೇ ಎರಡು ಕೈಗಳಲ್ಲಿ	34	
ಅಂತು ಎರಡು ಶಾಖೆಗಳಲ್ಲಿ . . .	68	68
ಸೊಂಟದ ಕಪಾಲಗಳಲ್ಲಿ	3	
ಬೆನ್ನಿನ ಕೋಲಿನಲ್ಲಿ	24	
ಪಕ್ಕಗಳಲ್ಲಿ . . .	24	
ಎದೆಯಲ್ಲಿ	8	
ಅಂತು ಕೋಷ್ಠದಲ್ಲಿ . . .	59	59
ಕೊರಳಲ್ಲಿ	8	
ಕುತ್ತಿಗೆಯಲ್ಲಿ	3	
ನಾಡಿಗಳಲ್ಲಿ ಹೃದಯ, ಕ್ಲೋಮಗಳಿಗೆ ಕೂಡಿದವು	18	
ಹಲ್ಲುಗಳ ಮೂಲಗಳಲ್ಲಿ	32	
ಕುತ್ತಿಗೆಯ ಮಣಿಗಂಟು	1	
ಮೂಗಿನಲ್ಲಿ	1	
ರೆಪ್ಪೆಗಳ ಮಂಡಲಗಳಿಂದ ಹುಟ್ಟಿದವು, ಕಣ್ಣಿನಲ್ಲಿರುವವು . .	2	
ಗಲ್ಲದಲ್ಲಿ	2	
ಕಿವಿ	2	
ಕೆನ್ನೆ	2	
ದವಡೆಯ ಸಂದು	2	
ಕೆನ್ನೆ ಮತ್ತು ಹುಬ್ಬುಗಳ ಸುತ್ತು	4	
ತಲೆಯ ಕಪಾಲಗಳಲ್ಲಿ	5	
ಮಸ್ತಕದಲ್ಲಿ	1	
ಅಂತು ಕಂಠದ ಮೇಲ್ಭಾಗದಲ್ಲಿ	83	83
ಜುಮ್ಲಾ		210

25. ತ ಏತೇ ಸಂಧಯೋಷ್ಟ ವಿಧಾಃ | ಕೋರೋದೂಖಲ ಸಾಮುದ್ಗ ಪ್ರತರ ತುನ್ನಸೇವನೀ ವಾಯಸತುಂಡ ಮಂಡಲ ಶಂಖಾವರ್ತಾಃ | ತೇಷಾ ಮಂಗುಲಿ ಮಣಿಬಂಧ ಗುಲ್ಫ ಜಾನು ಕೂರ್ಪರೇಷು ಕೋರಾಃ ಸಂಧಯಃ | ಕಕ್ಷಾ ವಂಕ್ಷಣ ದಶನೇಷೂದೂಖಲಾಃ | ಅಂಸ ಪೀರ ಗುದ ಭಗ ನಿತಂಬೇಷು ಸಾಮುದ್ಗಾಃ | ಗ್ರೀವಾ ಪೃಷ್ಠ ವಂಶಯೋಃ ಪ್ರತರಾಃ | ಶಿರಃ ಕಟೀ ಕಪಾಲೇಷು ತುನ್ನಸೇವನೀ | ಹನ್ವೋ ರುಭಯತಸ್ತು ವಾಯಸತುಂಡಾಃ | ಕಂಠ ಹೃದಯ ನೇತ್ರ ಕ್ಲೋಮ ನಾಡೀಷು ಮಂಡಲಾಃ | ಶ್ರೋತ್ರ ಶೃಂಗಾಟಕೇಷು ಶಂಖಾವರ್ತಾಃ | ತೇಷಾಂ ನಾಮಭಿರೇವಾಕೃತಯಃ ಪ್ರಾಯೇಣ ವ್ಯಾಖ್ಯಾತಾಃ | (ಸು 332-33)

ಸಂಧಿಗಳು ಆಕಾರದಲ್ಲಿ ಆಪ್ತ ವಿಧ

ಆ ಸಂದುಗಳು ಎಂಟು ವಿಧ. 1 ಕೋರಾಕಾರ (ಮೊಗ್ಗೆಯ ಆಕಾರ, ಮೊಸೆಯುಳ್ಳದ್ದು), 2 ಉದೂಖಲಾಕಾರ (ಒರಳಿನಂತೆ), 3. ಸಾಮುದ್ಗಾಕಾರ (ಸಂಪುಷ್ಟದಂತೆ), 4 ಪ್ರತರಾಕಾರ (ಡೋಣಿ ಬದಲಿಗೆ ಉಪಯೋಗಿಸುವ ಚಟ್ಟಿಮರನ ತುಂಡಿನಾಕಾರ), 5. ತುನ್ನ ಸೇವನೀ (ಭಾಗ ಕೂಡಿಸಿದ ಹೊಲಿಗೆ) ಆಕಾರ, 6 ವಾಯಸ ತುಂಡ (ಕಾಗೆ ಮೋತಿಯ)ದ ಆಕಾರ, 7. ಮಂಡಲಾಕಾರ (ಉರುಟಾಗಿಯೂ ಚಟ್ಟಿಯಾಗಿಯೂ ಇರುವದು), 8. ಶಂಖಾವರ್ತಾಕಾರ (ಶಂಖದ ಸುಳಿಯ ಆಕಾರ). ಅವುಗಳಲ್ಲಿ ಬೆರಳು, ಕೈಯ ಮಣಿಗಂಟು, ಕಾಲಿನ ಮಣಿಗಂಟು, ಮೊಣಕಾಲಗಂಟು, ಮೊಳಕೈಗಂಟು, ಇವುಗಳಲ್ಲಿರುವ ಸಂದುಗಳು ಕೋರಾಕಾರ, ಕಂಕುಳ ಸಂದು, ತೊಡೆಸಂದು, ಮತ್ತು ಹಲ್ಲುಗಳಲ್ಲಿ ಒರಳಾಕಾರ, ಹೆಗಲ ಪೀರ, ಗುದ, ಭಗ, ಅಂಡು, ಇವುಗಳಲ್ಲಿನ ಸಂದುಗಳು ಸಂಪುಟಾಕಾರ; ಕರುಳು ಮತ್ತು ಬೆನ್ನೆಲುಬು ಇವುಗಳಲ್ಲಿರುವ ಸಂದುಗಳು ಪ್ರತರಾಕಾರ, ಶಿರಸ್ಸು ಮತ್ತು ಸೊಂಟದ ಕಪಾಲಗಳು, ಇವುಗಳಲ್ಲಿನವು ತುನ್ನಸೇವನಿಯಾಕಾರ, ದವಡೆಗಳೆರಡರ ಇತ್ತಟ್ಟು ಇರುವವುಗಳು ಕಾಗೆ ಮೋತಿಯಾಕಾರ, ಕುತ್ತಿಗೆ, ಹೃದಯ, ಕಣ್ಣು, ಮತ್ತು ಕ್ಲೋಮ ಇವುಗಳ ನಾಳಗಳಲ್ಲಿರುವವು ಮಂಡಾಲಾಕಾರ; ಕಿವಿಗಳೊಳಗಿನವು ಶಂಖಾವರ್ತಾಕಾರ.

26 ನವಸ್ನಾಯುಶತಾನಿ | ತಾಸಾಂ ಶಾಖಾಸು ಷಟ್ಶತಾನಿ ದ್ವೇಶತೇ ತ್ರಿಂಶಜ್ಜ ಕೋಷ್ಠೇ | ಗ್ರೀವಾಂ ಪ್ರತ್ಯೂರ್ಧ್ವಂ ಸಪ್ತತಿಃ | ಏಕೈಕಸ್ಯಾಂ ಪಾದಾಂ ಗುಲ್ಯಾಂ ಷಟ್ ನಿಚಿತಾಸ್ತ್ರಿಂಶತಾ | ತಾವತ್ಯ ಏವ ತಲಕೂರ್ಚ ಗುಲ್ಫೇಷು | ತಾವತ್ಯ ಏವ ಜಂಘಾಯಾಂ | ದಶ ಜಾನುನೀ ಚತ್ವಾರಿಂ ಶದೂರೌ | ದಶವಜ್ಜಣೇ | ಶತಮಧ್ಯರ್ಧಮೇವಮೇಕಸ್ಮಿನ್ ಸಕ್ಥ್ನಿ ಭವಂತಿ | ಏತೇನೇತರ ಸಕ್ಥಿ ಬಾಹೂ ಚ ವ್ಯಾಖ್ಯಾತೌ | ಷಷ್ಟಿಕಟ್ಯಾಂ | ಅಶೀತಿಃ ಪೃಷ್ಠೇ | ಪಾರ್ಶ್ವಯೋಃ ಷಷ್ಟಿಃ | ಉರಸಿ ತ್ರಿಂಶತ್ | ಷಟ್ ತ್ರಿಂಶದಾಗ್ರೀವಾಯಾಂ | ಮೂರ್ಧ್ನಿ ಚತುಸ್ತ್ರಿಂಶತ್ | ಏವಂ ನವಸ್ನಾಯುಶತಾನಿ ವ್ಯಾಖ್ಯಾತಾನಿ | (ಸು. 333.)

ನರಗಳ (ಸ್ನಾಯುಗಳ) ಸಂಖ್ಯೆ ಮತ್ತು ಸ್ಥಾನ

ಸ್ನಾಯು ಎಂಬ ನರಗಳು 900. ಇವುಗಳ ವಿವರ—

ಕಾಖೆಗಳಲ್ಲಿ	600
ಕೋಷ್ಠ ಎಂಬ ಮುಂಡದಲ್ಲಿ	230

ಕುತ್ತಿಗೆಯ ಮೇಲೆ . . .		70	
		900	
ಪ್ರತಿ ಪಾದದ ಬೆರಳ್ಗಳಲ್ಲಿ ಒರಂತೆ 5 ಬೆರಳ್ಗಳಲ್ಲಿ		30	
ಪಾದತಲ ಕೂರ್ಚ ಮತ್ತು ಮಣಿಗಂಟಿನಲ್ಲಿ		30	
ಮೊಣಕಾಲಲ್ಲಿ		30	
ಮೊಣಗಂಟಿನಲ್ಲಿ		10	
ತೊಡೆಯಲ್ಲಿ .		40	
ಅಂಡಿಗೂ ತೊಡೆಗೂ ಮಧ್ಯ		10	
		150	
ಇದೇ ಪ್ರಕಾರ ಇನ್ನೊಂದು ಕಾಲಲ್ಲಿ .		150	
ಎರಡು ಕೈಗಳಲ್ಲಿ .		300	
ಕಾಖೆಗಳಲ್ಲಿ ಒಟ್ಟು .		600	600
ಸೊಂಟದಲ್ಲಿ		60	
ಪೆನ್ನಿನಲ್ಲಿ .		80	
ಪಕ್ಕಗಳಲ್ಲಿ .		60	
ಎದೆಯಲ್ಲಿ .		30	
		230	230
ಕೊರಳಲ್ಲಿ .		36	
ತಲೆಯಲ್ಲಿ .		34	
	ಅಂತ್ಯ	70	70
			900

27. स्नायूच्छ्तुर्विधा विद्यात्तास्तु सर्वा निबोधमे ।
प्रतानवत्यो वृत्ताश्च पृथ्वश्च शुषिरास्तथा ॥
प्रतानवत्यः शाखासु सर्व संधिषु चाप्यध ।
वृत्तास्तु कण्डराः सर्वा विज्ञेयाः कुशलैरिह ॥
उमपक्वाशयान्तेषु वस्तौ च शुषिराः खलु ॥
पार्श्वोरसि तथा पृष्ठे पृथुलाश्च शिरस्यध ॥
नार्यधा फलकास्तीक्ष्णा बन्धनैर्बहुभिर्युता ।
नरगळोळगे भारक्षमा भवेदप्सु नियुक्तासुसमाहिता ॥
साल्कु ಎಳ ಏವಮेव शरीरेस्मिन् यावन्तः संधयः स्मृताः ।
स्नायुभिर्बहुभिर्बद्धास्तेन भारसहा नराः ॥
सह्यस्थीनि नवापेक्ष्यो न सिरा न च संधयः ।
व्यापादितास्तथा हन्युर्यधा स्नायुः शरीरिणाम्

ಯಃ ಸ್ನಾಯೂಃ ಪ್ರವಿಜಾನಾತಿ ಬಾಹ್ಯಾಶ್ಚಾಭ್ಯಂತರಾಸ್ತಥಾ ।
ಸ ಗೂಢಂ ಶಲ್ಯಮಾಹರ್ತುಂ ದೇಹಾಚ್ಚಕ್ನೋತಿ ದೇಹಿನಾಂ ॥
(ಸು. 333-34.)

ಸ್ನಾಯು (ನರಗಳು) 4 ವಿಧ; (1) ಹಾಸಿ ಅಥವಾ ಚಾಚಿಕೊಂಡಿರುವಂಥವು, (2) ದುಂಡಾಗಿರುವಂಥವು, (3) ಸ್ಥೂಲವಾಗಿರುವಂಥವು, ಮತ್ತು (4) ಛಿದ್ರಯುಕ್ತವಾದಂಥವು. ಕೈಕಾಲುಗಳೆಂಬ ಶಾಖೆಗಳಲ್ಲಿಯೂ ಸರ್ವ ಸಂದುಗಳಲ್ಲಿಯೂ ಇರುವವು 1ನೇ ಜಾತಿಯವು; ಕಂಡರೆಗಳೆಲ್ಲಾ 2ನೇ ಜಾತಿಯವು; ಆಮಾಶಯ ಪಕ್ವಾಶಯಗಳ ಸಮೀಪ ಪ್ರಾಂತಗಳಲ್ಲಿ ಮತ್ತು ಮೂತ್ರಾಶಯದಲ್ಲಿರುವಂಥವು 4ನೇ ಜಾತಿಯವು; ಪಕ್ಕಗಳಲ್ಲಿಯೂ, ಎದೆಯಲ್ಲಿಯೂ, ಬೆನ್ನಿನಲ್ಲಿಯೂ, ಶಿರಸ್ಸಿನಲ್ಲಿಯೂ ಇರುವಂಥವು 3ನೇ ಜಾತಿಯವು, ಆಗಿರುತ್ತವೆ. ಮನುಷ್ಯರು ಬಹು ಹಗ್ಗದ ಕಟ್ಟುಗಳಿಂದ ಹಲಿಗೆಗಳನ್ನು ಸರಿಯಾಗಿ ಜೋಡಿಸಿ ಬಿಗಿದು ಮಾಡಿದ ಹಡಗು ಹ್ಯಾಗೆ ಭಾರ ಸಹಿಸುವ ಸಾಮರ್ಥ್ಯವುಳ್ಳದ್ದಾಗಿರುತ್ತದೊ, ಹಾಗೆಯೇ ಈ ಶರೀರದಲ್ಲಿ ಇರುವ ಸಂದುಗಳು ಬಹು ನರಗಳಿಂದ ಬಿಗಿಯಲ್ಪಟ್ಟಿರುವದರಿಂದ, ಮನಷ್ಯರು ಭಾರವನ್ನು ಸಹಿಸ ಸಮರ್ಥರಾಗಿದ್ದಾರೆ ಈ ನರಗಳಿಗೆ ಕೆಡಕು ಬಂದಲ್ಲಿ ಮರಣ ಉಂಟಾದ ಹಾಗೆ, ಎಲುಬುಗಳಿಗಾಗಲಿ, ಮಾಂಸಖಂಡಗಳಿಗಾಗಲಿ, ಸಿರಾನಾಳಗಳಿಗಾಗಲಿ, ಸಂದುಗಳಿಗಾಗಲಿ, ಕೆಡಕು ಬಂದಲ್ಲಿ ಆಗಲಿಕ್ಕಿಲ್ಲ. ಯಾವನು ಒಳಗೂ ಹೊರಗೂ ಇರತಕ್ಕ ನರಗಳನ್ನು ಚನ್ನಾಗಿ ಬಲ್ಲನೋ ಅವನು ಮನುಷ್ಯರ ಶರೀರದೊಳಗೆ ಅಡಗಿರುವ ಶಲ್ಯವನ್ನು ಹೊರಗೆ ತೆಗೆದುಬಿಡಲಿಕ್ಕೆ ಶಕ್ತಿಯುಳ್ಳವನಾಗುತ್ತಾನೆ.

ಸ್ನಾಯವೋ ಬಂಧನಂ ಪ್ರೋಕ್ತಾ ದೇಹೇ ಮಾಂಸಾಸ್ಥಿಮೇದಸಾಂ । (ಶಾ. 16.)
ನರಗಳು ದೇಹದಲ್ಲಿ ಮಾಂಸ, ಎಲುಬು ಮತ್ತು ಮೇದಸ್ಸಿಗೆ ಕಟ್ಟಾಗಿರುತ್ತವೆ.

28. ಪಂಚ ಪೇಶೀ ಶತಾನಿ ಭವಂತಿ । ತಾಸಾಂ ಚತ್ವಾರಿಶತಾನಿ ಶಾಖಾಸು । ಕೋಷ್ಠೇ ಷಟ್‌ಷಷ್ಟಿಃ । ಗ್ರೀವಾಂ ಪ್ರತ್ಯೂರ್ಧ್ವಂ ಜತುಸ್ತ್ರಿಂಶತ್ । ಏಕೈಕಸ್ಯಾಂ ತು ಪಾದಾಂಗುಲ್ಯಾಂ । ತಿಸ್ರಸ್ತಿಸ್ರಸ್ತಾಃ ಪಂಚದಶ । ದಶಪ್ರಪದೇ । ಪಾದೋಪರಿ ಕೂರ್ಚಸನ್ನಿವಿಷ್ಟಾಸ್ತಾವತ್ಯ ಏವ । ದಶಗುಲ್ಫತಲಯೋಃ । ಗುಲ್ಫಜಾನ್ವಂತರೇ ವಿಂಶತಿಃ । ಪಂಚ ಜಾನುನಿ । ವಿಂಶತಿರೂರೌ । ದಶವಙ್ಕ್ಷಣೇ । ಶತಮೇವಮೇತಸ್ಮಿನ್ ಸಕ್ಥ್ನಿ ಭವಂತಿ । ಏತೇನೇತರ ಸಕ್ಥಿ ಬಾಹೂ ಚ ವ್ಯಾಖ್ಯಾತೌ । ತಿಸ್ರಃ ಪಾಯೌ । ಏಕಾಮೇಢ್ರೇ । ಸೇವನ್ಯಾಂ ಚಾಪರಾ । ದ್ವೇ ವೃಷಣಯೋಃ ।
ಮಾಂಸಖಂಡಗಳ ಸಂಖ್ಯೆ ಮತ್ತು ಸ್ಥಾನ
ಸ್ಫಿಜೋಃ ಪಂಚಪಂಚ । ದ್ವೇವಸ್ತಿ ಶಿರಸಿ । ಪಂಚೋದರೇ । ನಾಭ್ಯಾಮೇಕಾ । ವೃಷ್ಣೋರ್ಧ್ವ ಸನ್ನಿವಿಷ್ಟಾಃ ಪಂಚಪಂಚ, ದೀರ್ಘಾ । ಷಟ್ ಪಾರ್ಶ್ವಯೋಃ । ದಶವಕ್ಷಸಿ । ಅಕ್ಷತಾಂಸೌಪ್ರತಿ ಸಮಂತಾತ್ ಸಪ್ತ । ದ್ವೇ ಹೃದಯಾಮಾಶಯಯೋಃ । ಷಟ್ ಯಕೃತ್ ಪ್ಲೀಹೋಂಡುಕೇಷು । ಗ್ರೀವಾಯಾಂ ಚತಸ್ರಃ । ಅಷ್ಟೌ ಹನ್ವೋಃ । ಏಕೈಕಾಕಾಕಲಕಗಲಯೋಃ । ದ್ವೇ ತಾಲುನಿ । ಏಕಾ ಜಿಹ್ವಾಯಾಂ । ಓಷ್ಠಯೋರ್ದ್ವೇ ।

ಘೋಣಾಯಾಂ ದ್ವೇ । ದ್ವೇ ನೇತ್ರಯೋಃ । ಗಂಡಯೋಶ್ಚತಸ್ರಃ ।
ಕರ್ಣಯೋರ್ದ್ವೇ । ಚತಸ್ರೋಲಲಾಟೇ । ಏಕಾಶಿರಸೀತ್ಯೇವಮೇತಾನಿ
ಪಂಚಪೇಶೀ ಶತಾನಿ । (ಸು. 334.)

ಮಾಂಸಖಂಡಗಳು ಒಟ್ಟು 500 ಆಗಿರುತ್ತವೆ. ಅವುಗಳೊಳಗೆ 400 ಶಾಖೆಗಳಲ್ಲಿಯೂ, 66 ಕೋಷ್ಠದಲ್ಲಿಯೂ, 34 ಕುತ್ತಿಗೆಯಿಂದ ಮೇಲೆಯೂ ಇರುವಂಥವು. ಅವುಗಳ ವಿವರ·—

ಪಾದದ ಪ್ರತಿ ಬೆರಳಲ್ಲಿ 3ರಂತೆ	15	
ಪಾದದ ತುದಿಭಾಗದಲ್ಲಿ	10	
ಪಾದದ ಮೇಲ್ಭಾಗ ಕೂರ್ಚದಲ್ಲಿ	10	
ಮಣಿಗಂಟಿನಲ್ಲಿ ಮತ್ತು ಅಂಗಾಲಲ್ಲಿ	10	
ಮಣಿಗಂಟಿಗೂ ಮೊಣಗಂಟಿಗೂ ಮಧ್ಯ .	20	
ಮೊಣಗಂಟಿನಲ್ಲಿ	5	
ತೊಡೆಯಲ್ಲಿ	20	
ತೊಡೆಬುಡದ ಸಂದಿನಲ್ಲಿ	10	
ಈ ಪ್ರಕಾರ ಒಂದು ಕಾಲಲ್ಲಿ . . .	100	
ಇದೇ ಮೇರೆಗೆ ಇನ್ನೊಂದು ಕಾಲಲ್ಲಿಯೂ ಎರಡು ಕೈಗಳಲ್ಲಿಯೂ .	300	
ಹೀಗೆ ಶಾಖೆಗಳಲ್ಲಿ	400	400
ಗುದದಲ್ಲಿ	3	
ಮೇಢ್ರದಲ್ಲಿ (ಶಿಶ್ನ)	1	
(ಶಿಶ್ನದ) ಸೇವನಿಯಲ್ಲಿ . . .	1	
ಅಂಡಗಳಲ್ಲಿ	2	
ಎರಡು ಅಂಡುಗಳ ಮೇಲ್ಭಾಗದಲ್ಲಿ . .	10	
ಮೂತ್ರಾಶಯದ ತಲೆಯಲ್ಲಿ	2	
ಹೊಟ್ಟೆಯಲ್ಲಿ	5	
ಹೊಕ್ಕುಳಲ್ಲಿ	1	
ಬೆನ್ನಿನ ಮೇಲೆ ಉದ್ದಕ್ಕೆ ಇರುವಂಥವು . . .	10	
ಪಕ್ಕಗಳಲ್ಲಿ	6	
ಎದೆಯಲ್ಲಿ	10	
(ಕುತ್ತಿಗೆಯ) ಅಚ್ಚು ಮರ ಮತ್ತು ಹೆಗಲುಗಳ ಸುತ್ತು . .	7	
ಹೃದಯದಲ್ಲಿ ಮತ್ತು ಅವಾಶಯದಲ್ಲಿ	2	
ಪಿತ್ತಕೋಶ, ಪ್ಲೀಹ ಮತ್ತು ಉಂಡುಕಗಳಲ್ಲಿ . . .	6	
ಅಂತು ಕೋಷ್ಠದಲ್ಲಿ	66	66
ಕೊರಳಲ್ಲಿ	4	
ದವಡೆಯ ಕೆಳಗೆ	8	

ಕಾಕಲ ಎಂಬ ಕುತ್ತಿಗೆಯ ಮಣಿಗಂಟಿನಲ್ಲಿಯೂ, ಗಂಟಲಿನಲ್ಲಿಯೂ

ಒಂದೊಂದು ಹೀಗೆ	2	
ತಾಲುವಿನಲ್ಲಿ	2	
ನಾಲಿಗೆಯಲ್ಲಿ	1	
2 ತುಟಿಗಳಲ್ಲಿ	2	
ಮೂಗಿನಲ್ಲಿ	2	
2 ಕಣ್ಣುಗಳಲ್ಲಿ	2	
2 ಗಲ್ಲಗಳಲ್ಲಿ	4	
2 ಕಿವಿಗಳಲ್ಲಿ	2	
ಹಣೆಯಲ್ಲಿ	4	
ತಲೆಯಲ್ಲಿ	1	
ಅಂತು ಕುತ್ತಿಗೆಯ ಮೇಲೆ	34	**34**
ಜುಮ್ಲಾ		**500**

29. ಮಾಂಸಗಳ ಪ್ರಯೋಜನ

ಸಿರಾಸ್ನಾಯ್ವಸ್ಥಿಸಂಧಯಶ್ಚ ಶರೀರಿಣಾಂ | ಪೇಶೀಭಿಃ ಸಂವೃತಾನ್ಯತ್ರ ಬಲವಂತಿ ಭವಂತ್ಯತಃ || (ಸು. 334.)

ಮನುಷ್ಯರ ಸಿರಾನಾಳಗಳು, ನರಗಳು, ಎಲುಬುಗಳ ತುಂಡುಗಳು ಮತ್ತು ಸಂದುಗಳು ಮಾಂಸಖಂಡಗಳಿಂದ ಸುತ್ತಲ್ಪಟ್ಟಿರುವದರಿಂದ ಬಲವುಳ್ಳವಾಗಿರುತ್ತವೆ.

30. ಸ್ತ್ರೀಯರಲ್ಲಿ ಅಧಿಕವಾಗಿರುವ ಮಾಂಸಖಂಡಗಳು

ಸ್ತ್ರೀಣಾಂ ತು ವಿಂಶತಿರಧಿಕಾ | ದಶ ತಾಸಾಂ ಸ್ತನಯೋರೇಕೈಕಸ್ಮಿನ್ ಪಂಚ ಪಂಚ ಯೌವನೇ ತಾಸಾಂ ಪರಿವೃದ್ಧಿಃ | ಅಪತ್ಯಪಥೇ ಚತಸ್ರಸ್ತಾಸಾಂ ಪ್ರಸೃತೇಭ್ಯಂತರತೋ ದ್ವೇ ಮುಖಾಶ್ರಿತೇ ಬಾಹ್ಯೇ ಚ ಪ್ರವೃತ್ತೇ ದ್ವೇ | ಗರ್ಭಛಿದ್ರಸಂಶ್ರಿತಾಸ್ತಿಸ್ರಃ | ಶುಕ್ರಾರ್ತವಪ್ರವೇಶಿನ್ಯಸ್ತಿಸ್ರ ಏವ |

ಗರ್ಭಾಶಯ ಸ್ಥಾನ

ಪಿತ್ತಪಕ್ವಾಶಯಮಧ್ಯೇ ಗರ್ಭಾಶಯೋ ಯತ್ರ ಗರ್ಭಸ್ತಿಷ್ಠತಿ | (ಸು. 334-35)

ಹೆಂಗಸರಿಗೆ ಮಾಂಸಖಂಡಗಳು 20 ಹೆಚ್ಚು; ಅವುಗಳಲ್ಲಿ ಮೊಲೆಗಳ ಒಂದೊಂದರಲ್ಲಿ 5ರಂತೆ 10; ಇವು ಯೌವನದಲ್ಲಿ ಬೆಳೆಯುತ್ತವೆ, ಶಿಶುಮಾರ್ಗದಲ್ಲಿ 4; ಇವುಗಳಲ್ಲಿ ಎರಡು ಒಳಗೆ ಬಿಡಿಸಿಕೊಂಡು ಇವೆ, ಎರಡು ಹೊರಗೆ ಮುಖದಲ್ಲಿ ಇರಿಸಲ್ಪಟ್ಟವೆ; ಗರ್ಭಛಿದ್ರದಲ್ಲಿ 3; ಶುಕ್ಲಶೋಣಿತಗಳನ್ನು ಪ್ರವೇಶ ಮಾಡಿಸುವವು 3; ಹೀಗೆ 20. ಪಿತ್ತಾಶಯಕ್ಕೂ ಪಕ್ವಾಶಯಕ್ಕೂ ಮಧ್ಯದಲ್ಲಿ ಗರ್ಭಾಶಯವು ಇರುತ್ತದೆ ಅದರಲ್ಲಿ ಗರ್ಭ ನಿಲ್ಲುವಂಥಾದ್ದಾಗಿರುತ್ತದೆ.

31. ಮಾಂಸಗಳಲ್ಲಿ ಭೇದಗಳು

ತಾಸಾಂ ಬಹಲ-ಪೇಲವ-ಸ್ಥೂಲಾಣು-ಪೃಥು-ವೃತ್ತ-ಹ್ರಸ್ವ-ದೀರ್ಘ-ಸ್ಥಿರ-ಮೃದು-ಶ್ಲಕ್ಷ್ಣ-ಕರ್ಕಶ-ಭಾವಾಃ ಸಂಧ್ಯಸ್ಥಿಸಿರಾಸ್ನಾಯುಪ್ರಚ್ಛಾದಕಾ ಯಥಾ ದೇಶಂ ಸ್ವಭಾವತ ಏವ ಭವಂತಿ | (ಸು. 335.)

ಆ ಮಾಂಸಖಂಡಗಳಿಗೆ ಅಯಾ ಭಾಗದಲ್ಲಿ ಸಂದು, ಎಲುಬು, ಸಿರಾನಾಳ, ಮತ್ತು ನರ ಇವುಗಳನ್ನು ಮುಚ್ಚುವದಕ್ಕೆ ತಕ್ಕ ಹಾಗೆ, ಗಟ್ಟಿ, ನೂತನ, ದೊಡ್ಡದು, ಸಣ್ಣದು, ತೋರ, ದುಂಡಗೆ, ಗಿಡ್ಡ, ಉದ್ದ, ನಸೆ, ದೊರಗು, ಸ್ಥಿರ, ಮೃದು, ಈ ಗುಣಗಳು ಸ್ವಭಾವ ದಿಂದಲೇ ಉಂಟಾಗುತ್ತವ.

32. ಯೋನಿಯಾಕೃತಿ ಮತ್ತು ಗರ್ಭಸ್ಥಾನ

ಶಂಖನಾಭ್ಯಾಕೃತಿಯೋ೯ನಿ ಸ್ತ್ರ್ಯಾವರ್ತಾ ಸಾ ಪ್ರಕೀರ್ತಿತಾ | ತಸ್ಯಾಸ್ತೃತೀಯೇ ತ್ವಾವರ್ತೇ೯ ಗರ್ಭಶಯ್ಯಾ ಪ್ರತಿಷ್ಠಿತಾ || (ಸು. 335)

ಶಂಖನಾಭಿಯಾಕಾರವುಳ್ಳ ಯೋನಿಯಲ್ಲಿ ಮೂರು ಸುಳಿಗಳು ಅಂದರೆ ಅಂಕಣಗಳಿವೆ. ಮೂರನೇ ಅಂಕಣದಲ್ಲಿ ಗರ್ಭದ ಹಾಸಿಗೆಯು ಸ್ಥಾಪಿತವಾಗಿದೆ.

33. ಶರೀರಕ್ಕೆ ಪ್ರಾಣಗಳು

ಅಗ್ನಿಃ ಸೋಮೋ ವಾಯುಃ ಸತ್ವಂ ರಜಸ್ತಮಃ ಪಂಚೇಂದ್ರಿಯಾಣಿ ಭೂತಾತ್ಮೇತಿ ಪ್ರಾಣಾಃ | (ಸು. 318.)

ಈ ಶರೀರಕ್ಕೆ ಅಗ್ನಿ, ಚಂದ್ರ ಮತ್ತು ವಾಯು, ಸತ್ವರಜಸ್ತಮೋಗುಣಗಳು, ಪಂಚೇಂದ್ರಿಯಗಳು ಮತ್ತು ಜೀವಾತ್ಮ, ಪ್ರಾಣಗಳು ಅಂದರೆ ಅಷ್ಟು ಮುಖ್ಯವಾದವು.

34. ತೊಗಲುಗಳ ಉತ್ಪತ್ತಿ ಮತ್ತು ಸಂಖ್ಯೆ

ತಸ್ಯ ಖಲ್ವೇವಂ ಪ್ರವೃತ್ತಸ್ಯ ಶುಕ್ರಶೋಣಿತಸ್ಯಾಭಿಪಚ್ಯಮಾನಸ್ಯ ಕ್ಷೀರಸ್ಯೇವ ಸಂತಾನಿಕಾಃ ಸಪ್ತ ತ್ವಚೋ ಭವಂತಿ | (ಸು. 318.)

ಈ ಪ್ರಕಾರ ಉತ್ಪನ್ನವಾದ ಶುಕ್ರ ಶೋಣಿತದ ಮಿಶ್ರವು ಪಾಕವಾಗುವಾಗ್ಗೆ, ಹಾಲಿನಲ್ಲಿ ಕೆನೆ ಉಂಟಾದ ಹಾಗೆ, ಏಳು ಚರ್ಮಗಳು ಉಂಟಾಗುತ್ತವ

35. 1ನೇ ತೊಗಲಿನ ವಿವರಣ

ತಾಸಾಂ ಪ್ರಥಮಾऽವಭಾಸಿನೀ ನಾಮ ಯಾ ಸರ್ವವರ್ಣಾನವಭಾಸಯತಿ ಪಂಚವಿಧಾಂ ಚ ಛಾಯಾಂ ಪ್ರಕಾಶಯತಿ ಸಾ ವ್ರೀಹೇರಷ್ಟಾದಶಭಾಗಪ್ರಮಾಣಾ ಸಿಧ್ಮಪದ್ಮಕಂಟಕಾಧಿಷ್ಠಾನಾ | (ಸು. 318.)

ಅವುಗಳಲ್ಲಿ ಒಂದನೇದು ಅವಭಾಸಿನೀ ಎಂಬದು. ಅದು ಸರ್ವ ವರ್ಣಗಳನ್ನು ಹೊಳಿಸುವದಲ್ಲದೆ ಐದು ವಿಧವಾದ ಛಾಯೆಯನ್ನು ಪ್ರಕಟಿಸುತ್ತದೆ. ಅದು ಭತ್ತದ 18ನೇ 1 ಭಾಗ ದಷ್ಟು ದಪ್ಪವಾಗಿದ್ದು, ಸಿಬ್ಬು ಮತ್ತು ಪದ್ಮ ಕಂಟಕ ವ್ಯಾಧಿಗಳಿಗೆ (ಒಳಪಟ್ಟ ಅಂದರೆ) ಆಶ್ರಯಸ್ಥಾನವಾಗಿರುತ್ತದೆ.

ಷರಾ ಚರಕಸಂಹಿತೆಯಲ್ಲಿ ಚರ್ಮಗಳು ಆರೆಂತ ಹೇಳಿ ಮೂರನೇದು ಸಿಬ್ಬಕ್ಕೂ ಬಿಳೇ ಕುಷ್ಠದ ಕಲೆಗಳಿಗೂ ಅಧಿಷ್ಠಾನವೆಂತಲೂ, ನಾಲ್ಕನೇದು ಕುಷ್ಠಸಂಭವಕ್ಕೆ ಸ್ಥಾನವೆಂತಲೂ, ಐದನೇದು ಅವಾಚೀ, ವಿದ್ರಧಿಗಳು ಹುಟ್ಟುವದಕ್ಕೆ ಸ್ಥಾನವೆಂತಲೂ, ಆರನೇದರಲ್ಲಿ ಅರೂಂಷಿ ಹುಟ್ಟುವಂಥಾದ್ದೆಂತಲೂ ಕಾಣಿಸಿಯದೆ

36. 2ನೇ ತೊಗಲಿನ ವಿವರಣ

ದ್ವಿತೀಯಾ ಲೋಹಿತಾ ನಾಮ ಷೋಡಶಭಾಗಪ್ರಮಾಣಾ ತಿಲಕಾಲಕನ್ಯಚ್ಛವ್ಯಂಗಾಧಿಷ್ಠಾನಾ | (ಸು. 318.)

ಎರಡನೇದು ಲೋಹಿತಾ (ರಕ್ತವರ್ಣ) ಎಂಬ ಹೆಸರಿನದು. ಇದು ಭತ್ತದ 16ನೇ 1 ಅಂಶದಷ್ಟು ದಪ್ಪವಾಗಿದ್ದು, ಎಳ್ಳು, ಮಚ್ಚೆ, ಬಂಗು, ಇವುಗಳಿಗೆ ಸ್ಥಾನ.

37. 3ನೇ ತೂಗಲಿನ ವಿವರಣ ತೃತೀಯಾ ಶ್ವೇತಾ ನಾಮ ದ್ವಾದಶಭಾಗಪ್ರಮಾಣಾ ಚರ್ಮದಲಾಜಗಲ್ಲೀಮಶಕಾಧಿಷ್ಠಾನಾ | (ಸು. 318.)

ಮೂರನೇದು ಶ್ವೇತಾ (ಬಿಳೇದು) ಎಂಬ ಹೆಸರಿನದು. ಇದು ಭತ್ತದ 12ನೇ 1 ಅಂಶ ದಷ್ಟು ದಪ್ಪವಾಗಿದ್ದು ಚರ್ಮದಲ, ಅಜಗಲ್ಲೀ, ಮಶಕ ಎಂಬ ಚರ್ಮವ್ಯಾಧಿಗಳಿಗೆ ಸ್ಥಾನ ವಾಗಿರುತ್ತದೆ.

38. 4ನೇ ತೂಗಲಿನ ವಿವರಣ ಚತುರ್ಥೀ ತಾಮ್ರಾ ನಾಮಾಷ್ಟಭಾಗಪ್ರಮಾಣಾ ವಿವಿಧ-ಕಿಲಾಸಕುಷ್ಠಾಧಿಷ್ಠಾನಾ | (ಸು. 318)

ನಾಲ್ಕನೇದು ತಾಮ್ರಾ (ಕೆಂಪು) ಎಂಬ ಹೆಸರಿನದು. ಅದು ಭತ್ತದ 8ನೇ ಭಾಗದಷ್ಟು ದಪ್ಪ. ನಾನಾ ವಿಧದ ಬಿಳೇ ಕುಷ್ಠಗಳಿಗೆ ಸ್ಥಾನ.

39. 5ನೇ ತೂಗಲಿನ ವಿವರಣ ಪಂಚಮೀ ವೇದಿನೀ ನಾಮ ವ್ರೀಹಿಪಂಚಭಾಗಪ್ರಮಾಣಾ ಕುಷ್ಠವಿಸರ್ಪಾಧಿಷ್ಠಾನಾ | (ಸು. 318)

ಐದನೇದು ವೇದಿನೀ ಎಂಬ ಹೆಸರಿನದು. ಅದು ಭತ್ತದ 5ನೇ 1 ಭಾಗದಷ್ಟು ದಪ್ಪವಾ ಗಿದ್ದು, ಕುಷ್ಠಕ್ಕೂ, ವಿಸರ್ಪಕ್ಕೂ ಸ್ಥಾನವಾಗಿರುತ್ತದೆ.

40. 6ನೇ ತೂಗಲಿನ ವಿವರಣ ಷಷ್ಠೀ ರೋಹಿಣೀ ನಾಮ ವ್ರೀಹಿಪ್ರಮಾಣಾ ಗ್ರಂಥ್ಯಪಚ್ಯರ್ಬುದಶ್ಲೀಪದಗಲಗಂಡಾಧಿಷ್ಠಾನಾ | (ಸು. 318.)

ಆರನೇದು ರೋಹಿಣೀ ಎಂಬ ಹೆಸರಿನದು. ಅದು ಭತ್ತದಷ್ಟು ದಪ್ಪವಾಗಿದ್ದು, ಗ್ರಂಥಿ, ಅಪಚಿ, ಅರ್ಬುದ, ಶ್ಲೀಪದ, ಗಲಗಂಡ, ಇವುಗಳಿಗೆ ಸ್ಥಾನವಾಗಿರುತ್ತದೆ.

41. 7ನೇ ತೂಗಲಿನ ವಿವರಣ ಸಪ್ತಮೀ ಮಾಂಸಧರಾ ನಾಮ ವ್ರೀಹಿದ್ವಯಪ್ರಮಾಣಾ ಭಗಂದರವಿದ್ರಧ್ಯರ್ಶೋಧಿಷ್ಠಾನಾ | (ಸು. 318)

ಏಳನೇದು ಮಾಂಸಧರಾ ಎಂಬ ಹೆಸರುಳ್ಳದ್ದು. ಅದು 2 ಭತ್ತದಷ್ಟು ದಪ್ಪ. ಭಗಂದರ, ವಿದ್ರಧಿ, ಮೂಲವ್ಯಾಧಿ ಇವುಗಳಿಗೆ ಸ್ಥಾನ.

ಷರಾ ಇದಕ್ಕೆ ಸ್ಫೋಲಾ (ಅಂದರೆ ದಪ್ಪ) ಎಂಬ ಹೆಸರೂ ಅದೆ (ತಾ 14)

42. ತೂಗಲುಗಳ ಪ್ರಮಾಣಗಳಿಗೆ ಅಪವಾದ ಯದೇತತ್ ಪ್ರಮಾಣಂ ನಿರ್ದಿಷ್ಟಂ ತನ್ಮಾಂಸಲೇಷ್ವವಕಾಶೇಷು ನ ಲಲಾಟೇ ಸೂಕ್ಷ್ಮಾಂಗುಲ್ಯಾದಿಷು || (ಸು. 318.)

ಮೇಲೆ ಹೇಳಿದ ಪ್ರಮಾಣವು ಮಾಂಸವುಳ್ಳ ಸ್ಥಳಗಳ ವಿಷಯದಲ್ಲಿ ಅಲ್ಲದೆ, ಹಣೆ, ಸಣ್ಣ ಬೆರಳು ಇತ್ಯಾದಿಗಳಿಗೆ ಲಗಾವಲ್ಲ.

43. ಕಲೆಗಳ ಎವರಣ ಧಾತ್ವಾಶಯಾಂತರಸ್ಥಸ್ತು ಯಃ ಕ್ಲೇದಸ್ತ್ವಧಿತಿಷ್ಠತಿ । ದೇಹೋ
ಷ್ಮಣಾ ವಿಪಕ್ವಶ್ಚ ಸಾ ಕಲೇತ್ಯಭಿಧೀಯತೇ ॥ (ಶಾ. 13.)

ರಸಾದಿ ಧಾತುಗಳು ಇರುವ ಸ್ಥಾನಗಳ ಒಳಗೆ ದೇಹದ ಉಷ್ಣತೆಯಿಂದ ಪಕ್ವವಾದ ಯಾವ ದ್ರವ ಇರುತ್ತದೋ, ಅದಕ್ಕೆ ಕಲಾ ಎಂಬ ಹೆಸರು.

ಷರಾ 'ವಿಪಕ್ವೋಯ' ಎಂಬ ಪಾರವಿದೆ ಆದು ಸರಿ ಕಾಣುವದಿಲ್ಲ

44. ಕಲೆಗಳ ಸಂಖ್ಯೆ ಕಲಾಃ ಖಿಲ್ವಪಿ ಸಪ್ತ ಸಂಭವಂತಿ ಧಾತ್ವಾಶಯಾಂತರಮರ್ಯಾದಾಃ
(ಸು. 318.)

ಧಾತುಗಳ ಸ್ಥಾನಗಳೊಳಗಡಗಿರುವ ಕಲೆಗಳು ಸಹ ಏಳಾಗಿ ವಿಭಾಗಿಸಲ್ಪಟ್ಟವೆ.

45. ಕಲೆಗಳ ಸ್ಥಾನ ವ ರೂಪ
ಯಥಾ ಹಿ ಸಾರಃ ಕಾಷ್ಠೇಷು ಛಿದ್ಯಮಾನೇಷು ದೃಶ್ಯತೇ ।
ತಥಾ ಧಾತುರ್ಹಿ ಮಾಂಸೇಷು ಛಿದ್ಯಮಾನೇಷು ದೃಶ್ಯತೇ ॥
ಸ್ನಾಯುಭಿಶ್ಚ ಪ್ರತಿಚ್ಛನ್ನಾನ್ ಸಂತತಾಂಶ್ಚ ಜರಯುಣಾ । ಶ್ಲೇಷ್ಮಣಾ
ವೇಷ್ಟಿತಾಂಶ್ಚಾಪಿ ಕಲಾಭಾಗಾಂಸ್ತು ತಾನ್ ವಿದುಃ ॥ (ಸು. 318.)

ಒಡೆಯಲ್ಪಡುವ ಕಟ್ಟಿಗೆತುಂಡುಗಳಲ್ಲಿ ತಿರುಳು ಕಾಣುವಂತೆ, ಮಾಂಸಖಂಡಗಳನ್ನು ಕೊಯ್ಯುವಾಗ್ಗೆ ಅವುಗಳಲ್ಲಿ ಧಾತುವು ಕಾಣುತ್ತದೆ. ಆಯಾ ಧಾತುವಿನ ಕಲೆಯು ನರಗಳಿಂದ ಮುಚ್ಚಲ್ಪಟ್ಟು, ಜರಾಯುವಿನಿಂದ ವ್ಯಾಪಿಸಲ್ಪಟ್ಟು ಮತ್ತು ಕಫದಿಂದ ಸುತ್ತಲ್ಪಟ್ಟು ಇರುತ್ತದೆಂತ ತಿಳಿದಿದ್ದಾರೆ.

46. ಮಾಂಸಧರಾ ಎಂಬ ಪ್ರಥಮ ಕಲೆ
ತಾಸಾಂ ಪ್ರಥಮಾ ಮಾಂಸಧರಾ ನಾಮ । ಯಸ್ಯಾಂ ಮಾಂಸ-
ಸಿರಾಸ್ನಾಯು-ಧಮನೀ-ಸ್ರೋತಸಾಂ ಪ್ರತಾನಾ ಭವಂತಿ ।
ಯಥಾ ಬಿಸ-ಮೃಣಾಲಾನಿ ವಿವರ್ಧಂತೇ ಸಮಂತತಃ ।
ಭೂಮೌ ಪಂಕೋದಕಸ್ಥಾನಿ ತಥಾ ಮಾಂಸೇ ಸಿರಾದಯಃ ॥ (ಸು. 319.)

ಕಲೆಗಳಲ್ಲಿ 1ನೇದು ಮಾಂಸಧರಾ (ಮಾಂಸಾಧಾರವಾದದ್ದು) ಎಂಬ ಹೆಸರಿನದು. ಅದರಲ್ಲಿ ಸಿರಾನಾಳಗಳು, ನರಗಳು, ಧಮನಿಗಳು, ಸ್ರೋತಸ್ಸುಗಳು ಸಹ ಬೆಳೆಯುತ್ತವೆ. ಭೂಮಿಯಲ್ಲಿ ಕೆಸರುನೀರಿನಲ್ಲಿರುವ ನೈದಿಲೆಯ ಮತ್ತು ಕಮಲದ ದಂಟುಗಳು ಹ್ಯಾಗೆ ಎಲ್ಲಾ ಕಡೆಗೆ ಹಬ್ಬಿ ವೃದ್ಧಿಯಾಗುತ್ತವೋ ಹಾಗೆಯೇ ಮಾಂಸದಲ್ಲಿರುವ ಸಿರಾನಾಳಾದಿಗಳು ಬೆಳೆಯುತ್ತವೆ.

47. ರಕ್ತಧರಾ ಎಂಬ 2ನೇ ಕಲೆ
ದ್ವಿತೀಯಾ ರಕ್ತಧರಾ ನಾಮ । ಮಾಂಸಸ್ಯಾಭ್ಯಂತರತಃ ತಸ್ಯಾಂ
ಶೋಣಿತಂ ವಿಶೇಷತಶ್ಚ ಸಿರಾಸು ಯಕೃತ್ಪ್ಲೀಹ್ನೋಶ್ಚ ಭವತಿ ।
(ಸು. 319).

ಎರಡನೇದು ರಕ್ತಧರಾ (ರಕ್ತಾಧಾರವಾದದ್ದು) ಎಂಬ ಹೆಸರಿನದು. ಮಾಂಸಖಂಡಗಳ ಒಳಗೆ ಇರುತ್ತದೆ. ಮತ್ತು ಅದರಲ್ಲಿ, ಮುಖ್ಯವಾಗಿ ಪಿತ್ತಕೋಶ ಮತ್ತು ಪ್ಲೀಹಗಳಲ್ಲಿರುವ ನಾಳಗಳಲ್ಲಿ, ರಕ್ತವು ಉಂಟಾಗುತ್ತದೆ.

ವೃಕ್ಷಾದ್ಯಥಾಭಿಪ್ರಹತಾತ್ ಕ್ಷೀರಿಣಃ ಕ್ಷೀರಮಾವಹೇತ್ | ಮಾಂಸಾ
ದೇವಂ ಕ್ಷತಾತ್ ಕ್ಷಿಪ್ರಂ ಶೋಣಿತಂ ಸಂಪ್ರಸಿಚ್ಯತೇ || (ಸು. 319.)

ಹಾಲಿರುವ ಮರವನ್ನು ಕಡಿದಾಗ್ಗೆ ಹ್ಯಾಗೆ ಹಾಲು ಸುರಿಯುವದೋ, ಹಾಗೆ ಮಾಂಸ ವನ್ನು ಕಡಿದರೆ ಬೇಗನೇ ರಕ್ತವು ಹೊರಗೆ ಸ್ರವಿಸುವದು.

48. ಮೇದೋಧರಾ ಎಂಬ 3ನೇ ಕಲೆ

ತೃತೀಯಾ ಮೇದೋಧರಾ ನಾಮ | ಮೇದೋ ಹಿ ಸರ್ವ ಭೂತಾನಾ
ಮುದರಸ್ಥಮಣ್ವಸ್ಥಿಷು ಚ ಮಹತ್ಸು ಚ ಮಜ್ಜಾ ಭವತಿ |
(ಸು. 319.)

3ನೇದು ಮೇದೋಧರಾ (ಮೇದಸ್ಸನ್ನು ಧರಿಸುವಂಥಾದ್ದು) ಎಂಬ ಹೆಸರಿನದು. ಮೇದಸ್ಸು ಸರ್ವ ಜನರ ಹೊಟ್ಟೆಯಲ್ಲಿ ಮತ್ತು ಸೂಕ್ಷ್ಮ ಎಲುಬುಗಳಲ್ಲಿ ಇರುತ್ತದೆ. ದೊಡ್ಡ ಎಲುಬು ಗಳಲ್ಲಿ ಅದು ಮಜ್ಜೆಯಾಗುತ್ತದೆ.

49. ಮಜ್ಜೆ ಮೇದಸ್ಸು ಮತ್ತು ವಸೆಗಳ ಭೇದ

ಸ್ಥೂಲಾಸ್ಥಿಷು ವಿಶೇಷೇಣ ಮಜ್ಜಾತ್ವಭ್ಯಂತರಾಶ್ರಿತಃ | ಅಧೇತರೇಷು
ಸರ್ವೇಷು ಸರಕ್ತಂ ಮೇದ ಉಚ್ಯತೇ || ಶುದ್ಧ ಮಾಂಸಸ್ಯ ಯಃ ಸ್ನೇಹಃ
ಸಾ ವಸಾ ಪರಿಕೀರ್ತಿತಾ | (ಸು. 319.)

ಮಜ್ಜೆಯು ವಿಶೇಷವಾಗಿ ದೊಡ್ಡ ಎಲುಬುಗಳ ಒಳಗಿನ ಎಡೆಗಳಲ್ಲಿ ಇರುತ್ತದೆ. ಇತರ ಎಲ್ಲಾ ಎಲುಬುಗಳಲ್ಲಿ ರಕ್ತಯುಕ್ತವಾಗಿರುವಂಥಾದ್ದು ಮೇದಸ್ಸು ಎಂತ ಕರೆಯಲ್ಪಡುತ್ತದೆ. ಬರೇ ಮಾಂಸದಲ್ಲಿರುವ ಪಸೆಯು ವಸೆಯೆಂತ ಪ್ರಸಿದ್ಧವಾಗಿದೆ.

50. ಕಫಧರಾ ಎಂಬ 4ನೇ ಕಲೆ

ಚತುರ್ಥೀ ಶ್ಲೇಷ್ಮಧರಾ ನಾಮ | ಸರ್ವಸಂಧಿಷು ಪ್ರಾಣ-
ಭೃತಾಂ ಭವತಿ | (ಸು. 319.)

ನಾಲ್ಕನೇದು ಶ್ಲೇಷ್ಮಧರಾ (ಕಫಧಾರಿ) ಎಂಬ ಹೆಸರಿನದು. ಅದು ಪ್ರಾಣಿಗಳ ಸರ್ವ ಸಂದುಗಳಲ್ಲಿ ಇರುತ್ತದೆ.

ಪ ರಾ (ಯಕೃತ್ ಪ್ಲೀಹ್ನೋಶ್ಚತುರ್ಥಕಾ ಶಾ 13.) 4ನೇದು ಯಕೃತ್‌ಪ್ಲೀಹಗಳ ಕಲೆ ಎಂತ ಶಾರ್ಙ್ಗಧರೆ ಯಲ್ಲಿ ಹೇಳಲ್ಪಟ್ಟದ್ದು ಸರಿ ಕಾಣುವದಿಲ್ಲ

51. ಕಫದ ಪ್ರಯೋಜನ

ಸ್ನೇಹಾಭ್ಯಕ್ತೇ ಯಥಾ ತ್ವಕ್ಷೇ ಚಕ್ರಂ ಸಾಧು ಪ್ರವರ್ತತೇ |
ಸಂಧಯಃ ಸಾಧುವರ್ತಂತೇ ಸಂಶ್ಲಿಷ್ಟಾಃ ಶ್ಲೇಷ್ಮಣಾ ತಥಾ ||
(ಸು. 319.)

ಅಚ್ಚುಮರಕ್ಕೆ ಎಣ್ಣೆ ಮುಂತಾದ ಜಿಡ್ಡನ್ನು ಸವರುವದರಿಂದ ಚಕ್ರವು ಹ್ಯಾಗೆ ಚನ್ನಾಗಿ ತಿರುಗುತ್ತದೋ, ಹಾಗೆ ಸಂದುಗಳು ಕಫದಿಂದ ಕೂಡಿರುವದರಿಂದ ಒಳ್ಳೇದಾಗಿ ತಿರುಗುತ್ತವೆ.

52. ಮಲಧರಾ ಎಂಬ 5ನೇ ಕಲೆ

ಪಂಚಮಿಾ ಪುರೀಷಧರಾ ನಾಮ | ಯಾಂತಃಕೋಷ್ಠೇ ಮಲಮಭಿವಿಬಜತೇ ಪಕ್ವಾಶಯಸ್ಥಾ | (ಸು. 319.)

5ನೇದು ಪುರೀಷಧರಾ (ಮಲಧಾರಿ) ಎಂಬ ಹೆಸರಿನದು. ಅದು ಕೋಷ್ಠದೊಳಗೆ ಪಕ್ವಾಶಯದಲ್ಲಿದ್ದು ಮಲವನ್ನು ಪ್ರತ್ಯೇಕಿಸುತ್ತದೆ.

ಷರಾ "ಪಂಚಮಿಾ ಚ ತಥಾಂತ್ರಾಣಾಂ" | (ತಾ 13) 5ನೇದು ಕರುಳುಗಳಿಗೆ ಸಂಬಂಧವಾದದ್ದೆಂತ ಶಾರ್ಙ್ಗಧರ ಸಂಹಿತೆಯಲ್ಲಿ ಹೇಳಿಯದೆ

53. ಮಲಧರೆಯ ಕೆಲಸ

ಯಕೃತ್ ಸಮಂತಾತ್ ಕೋಷ್ಠಂ ಚ ತಥಾಂತ್ರಾಣಿ ಸಮಾಶ್ರಿತಾ | ಉಂಡುಕಸ್ಥಂ ವಿಭಜತೇ ಮಲಂ ಮಲಧರಾ ಕಲಾ ||
(ಸು. 319-20.)

ಪಿತ್ತಕೋಶದ ಸುತ್ತು ಕೋಷ್ಠವನ್ನೂ ಹಾಗೆಯೇ ಕರುಳುಗಳನ್ನೂ ಆಶ್ರಯಿಸಿಕೊಂಡು, ಮಲಧರಾ ಎಂಬ ಕಲೆಯು ಉಂಡುಕದಲ್ಲಿರುವ ಮಲವನ್ನು ಪ್ರತ್ಯೇಕಿಸುತ್ತದೆ.

54. ಪಿತ್ತಧರಾ ಎಂಬ 6ನೇ ಕಲೆ

ಷಷ್ಠೀ ಪಿತ್ತಧರಾ ನಾಮ | ಯಾ ಚತುರ್ವಿಧಮನ್ನಪಾನಮುಪಯುಕ್ತಮಾಮಾಶಯಾತ್ ಪ್ರಚ್ಯುತಂ ಪಕ್ವಾಶಯೋಪಸ್ಥಿತಂ ಧಾರಯತಿ |
(ಸು. 320.)

6ನೇದು ಪಿತ್ತಧರಾ (ಪಿತ್ತಧಾರಿ) ಎಂಬ ಹೆಸರಿನದು. ಅದು ಪಕ್ವಾಶಯಕ್ಕೆ ಸಮೀಪ ಇದ್ದು, ಆಮಾಶಯದಿಂದ ಕೆಳಗೆ ಬರುವ ಉಪಯೋಗಿಸಲ್ಪಟ್ಟ ನಾಲ್ಕು ವಿಧವಾದ ಅನ್ನಪಾನಗಳನ್ನು ಪಚನಮಾಡುವದಕ್ಕಾಗಿ ಹಿಡಿಯುತ್ತದೆ.

ಷರಾ ಷಷ್ಠೀ ಚಾಗ್ನಿಧರಾ ಮತಾ | ಅಂದರೆ "6ನೇದು ಅಗ್ನಿಧರಾ" ಎಂತ-(ತಾ. 13)

55. ಪಿತ್ತಧರೆಯ ಕೆಲಸ

ಅಶಿತಂ ಖಾದಿತಂ ಪೀತಂ ಲೀಢಂ ಕೋಷ್ಠಗತಂ ನೃಣಾಂ |
ತಜ್ಜೀರ್ಯತಿ ಯಥಾಕಾಲಂ ಶೋಷಿತಂ ಪಿತ್ತತೇಜಸಾ || (ಸು 320.)

ಉಂಡದ್ದು, ತಿಂದದ್ದು, ಕುಡಿದದ್ದು, ನೆಕ್ಕಿದ್ದು, ಸಹ ಮನುಷ್ಯರ ಕೋಷ್ಠದೊಳಗೆ ಹೋದ ಮೇಲೆ ಪಿತ್ತದ ಪ್ರತಾಪದಿಂದ ಒಣಗಿಸಲ್ಪಟ್ಟು ಕಾಲಕ್ರಮದಲ್ಲಿ ಜೀರ್ಣವಾಗುತ್ತದೆ.

56. ಶುಕ್ರಧರಾ ಎಂಬ 7ನೇ ಕಲೆ

ಸಪ್ತಮಿಾ ಶುಕ್ರಧರಾ ನಾಮ | ಯಾ ಸರ್ವಪ್ರಾಣಿನಾಂ ಸರ್ವಶರೀರವ್ಯಾಪಿನೀ | (ಸು. 320.)

7ನೇದು ಶುಕ್ರಧರಾ (ಇಂದ್ರಿಯಧಾರಿ) ಎಂಬ ಹೆಸರಿನದು. ಅದು ಸರ್ವ ಪ್ರಾಣಿಗಳ ಇಡೀ ಶರೀರವನ್ನು ವ್ಯಾಪಿಸಿರುತ್ತದೆ.

57. ಶುಕ್ರಪ್ರವೃತ್ತಿ ಮಾರ್ಗ

ಯಥಾ ಪಯಸಿ ಸರ್ಪಿಸ್ತು ಗೂಢಶ್ಚೇಕ್ಷೌ ರಸೋ ಯಥಾ |
ಶರೀರೇಷು ತಥಾ ಶುಕ್ರಂ ನೃಣಾಂ ವಿದ್ಯಾದ್ಭಿಷಗ್ವರಃ ||
ದ್ವ್ಯಂಗುಲೇ ದಕ್ಷಿಣೇ ಪಾರ್ಶ್ವೇ ವಸ್ತಿದ್ವಾರಸ್ಯ ಚಾಪ್ಯಧಃ |

ಮೂತ್ರಸ್ರೋತಃಪಥಾಚ್ಚುಕ್ರಂ ಪುರುಷಸ್ಯ ಪ್ರವರ್ತತೇ ||
ಕೃತ್ಸ್ನದೇಹಾಶ್ರಿತಂ ಶುಕ್ರಂ ಪ್ರಸನ್ನಮನಸಸ್ತಥಾ |
ಸ್ತ್ರೀಷು ವ್ಯಾಯಚ್ಛತಶ್ಚಾಪಿ ಹರ್ಷಾತ್ತತ್ ಸಂಪ್ರವರ್ತತೇ || (ಸು. 320.)

ಹಾಲಿನಲ್ಲಿ ತುಪ್ಪವು ಮತ್ತು ಕಬ್ಬಿನಲ್ಲಿ ಬೆಲ್ಲದ ರಸವು ಅಡಗಿರುವ ಹಾಗೆ, ಮನುಷ್ಯರ ಇಡೀ ಶರೀರದಲ್ಲಿ ಶುಕ್ರಧಾತು ಇರುತ್ತದಾಗಿ ವೈದ್ಯನು ತಿಳಿಯತಕ್ಕದ್ದು. ಮೂತ್ರ ನಾಳದ ದ್ವಾರಕ್ಕೆ ಕೆಳಗೆ ಬಲಪಾರ್ಶ್ವದ ಎರಡು ಅಂಗುಲದಲ್ಲಿ ಮೂತ್ರದ ಮಾರ್ಗವಾಗಿಯೇ ಪುರುಷನ ಶುಕ್ರಧಾತುವು ಚಲಿಸುತ್ತದೆ. ಶುಕ್ರವು ಇಡೀ ಶರೀರವನ್ನು ವ್ಯಾಪಿಸಿಕೊಂಡಿರುವ ದಾದರೂ ಸಂತುಷ್ಟ ಮನಸ್ಸಿಂದ ಮನುಷ್ಯನು ಸ್ತ್ರೀಭೋಗ ಮಾಡುವಾಗ್ಗೆ ಹರ್ಷದ ಬಲದಿಂದ ಶುಕ್ರವು ಒಟ್ಟಾಗಿ ಹೊರಗೆ ಸ್ರವಿಸುತ್ತದೆ.

58. ಗೃಹೀತಗರ್ಭಾಣಾಮಾರ್ತವವಹಾನಾಂ ಸ್ರೋತಸಾಂ ವರ್ತ್ಮಾನ್ಯ
ವರುಧ್ಯಂತೇ ಗರ್ಭೇಣ ತಸ್ಮಾದ್ಗೃಹೀತಗರ್ಭಾಣಾಮಾರ್ತವಂ ನ
ಗರ್ಭಿಣಿಯರಲ್ಲಿ ಆರ್ತವ ಗತಿ ದೃಶ್ಯತೇ | ತತಸ್ತದಧಃ ಪ್ರತಿಹತಮೂರ್ಧ್ವಮಾಗತಮಪರಂ ಜೋಪಚೀಯಮಾನಮಪರೇತ್ಯಭಿಧೀಯತೇ | ಶೇಷಂ ಜೋರ್ಧ್ವತರಮಾಗತಂ ಪಯೋಧರಾವಭಿಪ್ರತಿಪದ್ಯತೇ ತಸ್ಮಾದ್ಗರ್ಭಿಣ್ಯಃ ಪೀನೋನ್ನತಪಯೋಧರಾ ಭವಂತಿ | (ಸು. 320.)

ಗರ್ಭಿಣಿಯಾದ ಸ್ತ್ರೀಯರಲ್ಲಿ, ಶೋಣಿತ ಹರಿಯತಕ್ಕ ಸ್ರೋತಸ್ಸುಗಳು ಗರ್ಭದಿಂದ ತಡೆಯಲ್ಪಡುವ ದೆಸೆಯಿಂದ, ಶೋಣಿತವು ಕಾಣುವದಿಲ್ಲ (ಮುಟ್ಟಾಗುವದಿಲ್ಲ). ಆ ಶೋಣಿತವು ಕೆಳಗಿನ ಮಾರ್ಗ ಮುಚ್ಚಿಹೋದ್ದರಿಂದ ಮೇಲೆ ಹೋಗಿ, ಅಪರವಾಗಿ (ಅಂದರೆ ಬೇರೆ ದಿಕ್ಕಿನಲ್ಲಿ) ಕೂಡುವದರಿಂದ 'ಅಪರಾ' ಎಂಬ ಹೆಸರಿನ ಜರಾಯುವಾಗಿ ಪರಿಣಮಿಸುತ್ತದೆ. ಉಳಿದ ಶೋಣಿತವು ಇನ್ನೂ ಮೇಲಕ್ಕೆ ಹೋಗಿ, ಸ್ತನಗಳನ್ನು ಹೊಂದಿ, ರೂಪಾಂತರ ಹೊಂದುತ್ತದೆ. ಆದ್ದರಿಂದ ಗರ್ಭಿಣಿಯ ಸ್ತನಗಳು ಎತ್ತರ ಮತ್ತು ಅಗಲವಾಗುತ್ತವೆ.

59. ಸಿರಾಸ್ನಾಯುಗಳ ಭೇದ ಮೇದಸಃ ಸ್ನೇಹಮಾದಾಯ ಸಿರಾಸ್ನಾಯುತ್ವಮಾಪ್ನುಯಾತ್ |
ಸಿರಾಣಾಂ ಚ ಮೃದುಃ ಪಾಕಃ ಸ್ನಾಯೂನಾಂ ಚ ತತಃ ಖರಃ ||
(ಸು. 321.)

ಸಿರಾನಾಳಗಳು ಮೇದಸ್ಸಿನ ಜಿಡ್ಡನ್ನು ಪಡೆದು ನರಗಳಾಗುತ್ತವೆ. ಸಿರೆಗಳು ಮೃದು ಪಾಕದಿಂದ ಮತ್ತು ನರಗಳು ಅದಕ್ಕೂ ಏರಾದ ಖರಪಾಕದಿಂದ ಆಗುತ್ತವೆ.

60. ವಿದ್ಯಾದ್ ದ್ವ್ಯಂಗುಲ ಬಾಹುಲ್ಯಂ ಸ್ವಾಂಗುಷ್ಠೋದರಸಮ್ಮಿತಂ |
ದ್ವ್ಯಂಗುಲಂ ಸರ್ವತಃ ಸಾರ್ಧಂ ಭಿಷಗ್ಮಯನಬುದ್ಬುದಂ ||
ಕಣ್ಣಿನ ವರ್ಣನ ಸುವೃತ್ತಂ ಗೋಸ್ತನಾಕಾರಂ ಸರ್ವಭೂತಗುಣೋದ್ಭವಂ |
ಪಲಂ ಭುವೋಽಗ್ನಿತೋರಕ್ತಂ ವಾತಾತ್ ಕೃಷ್ಣಂ ಸಿತಂ ಜಲಾತ್ ||

ಆಕಾಶಾದಶ್ರುಮಾರ್ಗಾಶ್ಚ ಜಾಯಂತೇ ನೇತ್ರಬುದ್ಬುದೇ ।
(ದೃಷ್ಟಿಂ ಚಾತ್ರ ತಥಾ ವಕ್ಷ್ಯೇ ಯಥಾ ಬ್ರೂಯಾದ್ವಿಶಾರದಃ ।।)
ನೇತ್ರಾಯಾಮತ್ರಿಭಾಗಂ ತು ಕೃಷ್ಣಮಂಡಲಮುಚ್ಯತೇ ।
ಕೃಷ್ಣಾತ್ಸಪ್ತಮಮಿಚ್ಛಂತಿ ದೃಷ್ಟಿಂ ದೃಷ್ಟಿವಿಶಾರದಾಃ ।।
ಮಂಡಲಾನಿ ಚ ಸಂಧೀಂಶ್ಚ ಪಟಲಾನಿ ಚ ಲೋಚನೇ ।
ಯಥಾಕ್ರಮಂ ವಿಜಾನೀಯಾತ್ ಪಂಚ ಷಟ್ ಚ ಷಡೇವ ಚ ।।
ಪಕ್ಷ್ಮವರ್ತ್ಮ ಶ್ವೇತಕೃಷ್ಣದೃಷ್ಟೀನಾಂ ಮಂಡಲಾನಿ ತು ।
ಆನುಪೂರ್ವಂ ತು ತೇ ಮಧ್ಯಾಶ್ಚತ್ವಾರೋಽಂತ್ಯಾ ಯಥೋತ್ತರಂ ।।
ಪಕ್ಷ್ಮವರ್ತ್ಮಗತಃ ಸಂಧಿರ್ವರ್ತ್ಮಶುಕ್ಲಗತೋಪರಃ ।
ಶುಕ್ಲಕೃಷ್ಣಗತಸ್ತ್ವನ್ಯಃ ಕೃಷ್ಣದೃಷ್ಟಿಗತೋಽಪರಃ ।।
ತತಃ ಕನೀನಕಗತಃ ಷಷ್ಠಶ್ಚಾಪಾಂಗಗಃ ಸ್ಮೃತಃ ।
ದ್ವೇ ವರ್ತ್ಮಪಟಲೇ ವಿದ್ಯಾಚ್ಚತ್ವಾರ್ಯನ್ಯಾನಿ ಚಾಕ್ಷಿಣಿ ।।
ಜಾಯಂತೇ ತಿಮಿರಂ ಯೇಷು ವ್ಯಾಧಿಃ ಪರಮದಾರುಣಃ ।
ತೇಜೋ ಜಲಾಶ್ರಿತಂ ಬಾಹ್ಯಂ ತೇಷ್ವನ್ಯತ್ ಪಿಶಿತಾಶ್ರಿತಂ ।।
ಮೇದಸ್ತೃತೀಯಂ ಪಟಲಮಾಶ್ರಿತಂ ತ್ವಸ್ಥಿಚಾಪರಂ ।
ಪಂಚಮಾಂಶ ಸಮಂ ದೃಷ್ಟೇಸ್ತೇಷಾಂ ಬಾಹುಲ್ಯಮಿಷ್ಯತೇ ।।
ಸಿರಾಣಾಂ ಕಂಡರಾಣಾಂ ಚ ಮೇದಸಃ ಕಾಲಕಸ್ಯ ಚ ।
ಗುಣಾಃ ಕಾಲಾತ್ಪರಃ ಶ್ಲೇಷ್ಮಾ ಬಂಧನೇಽಕ್ಷ್ಣೋಃ ಸಿರಾಯುತಃ ।।
ಸಿರಾನುಸಾರಿಭಿರ್ದೋಷೈರ್ವಿಗುಣೈರೂರ್ಧ್ವಮಾಗತೈಃ ।
ಜಾಯಂತೇ ನೇತ್ರಭಾಗೇಷು ರೋಗಾಃ ಪರಮದಾರುಣಾಃ ।। (ಸು. 658-59.)

ಕಣ್ಣುಗುಳ್ಳೆಯು ತನ್ನ ಹೆಬ್ಬೆಟ್ಟಿನ ಹೊಟ್ಟೆ ಲೆಕ್ಕದಲ್ಲಿ 2 ಅಂಗುಲ ಉದ್ದ (ಒಳಗಿನ ಕಂತ) $2\frac{1}{2}$ ಅಂಗುಲ ಸುತ್ತುವರಿ, ಪರಿಮಾಣವುಳ್ಳದ್ದಾಗಿಯೂ, ಶುದ್ಧ ಉರುಟಾಗಿಯೂ ದನದ ಮೊಲೆಯ ಆಕಾರವಾಗಿಯೂ ಇರುತ್ತದೆ ಅದು ಪಂಚಭೂತಗಳ ಗುಣಗಳಿಂದ ಹುಟ್ಟಿದ್ದು. ಭೂಗುಣದಿಂದ ಮಾಂಸ, ತೇಜೋಗುಣದಿಂದ ರಕ್ತ, ವಾಯುಗುಣದಿಂದ ಕಫ್ಫ, ಜಲಗುಣ ದಿಂದ ಬಿಳೇದು, ಮತ್ತು ಆಕಾಶಗುಣದಿಂದ ಕಣ್ಣೀರಿನ ಮಾರ್ಗಗಳು, ಕಣ್ಣುಗುಳ್ಳೆಯಲ್ಲ ಉಂಟಾಗುತ್ತವೆ ಕಣ್ಣಿನ ಅಗಲದಲ್ಲಿ 3ನೇ 1 ಭಾಗವು ಕೃಷ್ಣಮಂಡಲ(ಕರೀ ಗುಡ್ಡೆ) ಎಂತ ಹೇಳಲ್ಪಡುತ್ತದೆ ಕೃಷ್ಣಮಂಡಲದ 7ನೇ 1 ಭಾಗವು ದೃಷ್ಟಿ (ಬೊಂಬೆ) ಇರಬೇಕಾಗಿ ಬಲ್ಲ ವರು ಹೇಳುತ್ತಾರೆ. ಕಣ್ಣಿನಲ್ಲಿ 5 ಮಂಡಲಗಳು, 6 ಸಂಧಿಗಳು, ಮತ್ತು 6 ಪಟಲಗಳು, ಇದ್ದಾವೆ. ಶೀಮ (ರೆಪ್ಪೆ ಕೂದಲು), ರೆಪ್ಪೆ, ಬಿಳೇ ಗುಡ್ಡೆ (ಬಿಳೇ ಆಲಿ) ಕಫ್ಫ ಗುಡ್ಡೆ (ಕರೇ ಆಲಿ) ದೃಷ್ಟಿ ಇವು ಐದು ಮಂಡಲಗಳು. ಇವುಗಳಲ್ಲಿ ದೃಷ್ಟಿಮಂಡಲವು ಕರೇ ಆಲಿಯ ಮಧ್ಯ, ಕರೇ ಆಲಿಯು ಬಿಳೇ ಆಲಿಯ ಮಧ್ಯ, ಬಿಳೇ ಆಲಿಯು ರೆಪ್ಪೆಗಳ ಮಧ್ಯ, ರೆಪ್ಪೆಗಳು ಶೀಮೆಗೆ ಮಧ್ಯ ಇರುತ್ತವೆ. ಯಥೋತ್ತರವಾಗಿ ರೆಪ್ಪೆಯು ಶೀಮೆಗೆ, ಬಿಳೇ ಆಲಿಯು ರೆಪ್ಪೆಗೆ, ಕರೇ ಆಲಿಯು ಬಿಳೇ ಆಲಿಗೆ, ದೃಷ್ಟಿಯು ಕರೇ ಆಲಿಗೆ, ಅಂತ್ಯವಾಗಿರುತ್ತವೆ. ಶೀಮೆಗೂ ರೆಪ್ಪೆಗೂ 1,

ರೆಪ್ಪೆಗೂ ಬಿಳೀ ಆಲಿಗೂ 1, ಬಿಳೀ ಆಲಿಗೂ ಕರೀ ಆಲೆಗೂ 1, ಕರೀ ಆಲಿಗೂ ದೃಷ್ಟಿಗೂ 1, ಒಳ ಮೂಲೆಯಲ್ಲಿ (ಮೂಗಿನ ಕಡೆ) 1, ಹೊರ ಮೂಲೆಯಲ್ಲಿ (ಕಡೆಗಣ್ಣಿನಲ್ಲಿ) 1, ಹೀಗೆ 6 ಸಂಧಿಗಳು. ರೆಪ್ಪೆಪಟಲಗಳು 2, ಕಣ್ಣಿನೊಳಗೆ ಬಹು ಕರಿಣವಾದ ತಿಮಿರ, (ಕುರುಡುತನ), ಎಂಬ ವ್ಯಾಧಿಗೆ ಸ್ಥಾನವಾದ ಬೇರೆ 4, ಹೀಗೆ 6 ಪಟಲಗಳು (ಆವರಣ ಗಳು) ಇವೆ. ಆ ನಾಲ್ಕರಲ್ಲಿ ಹೊರಗಿನ 1ನೇದು ತೇಜಸ್ಸು (ರಕ್ತ) ಮತ್ತು ಜಲಗಳನ್ನೂ, 2ನೇದು ಮಾಂಸವನ್ನೂ, 3ನೇದು ಮೇದಸ್ಸನ್ನೂ, 4ನೇದು ಎಲುಬನ್ನೂ ಆಶ್ರಯಿಸಿರುತ್ತವೆ. ಆ 4 ಪಟಲಗಳ ದಪ್ಪವು ದೃಷ್ಟಿಯ 5ನೇ 1 ಅಂಶದಷ್ಟು ಇದೆ. ಸಿರಾನಾಳಗಳು ಕಂಡರೆ ಗಳು, ಮೇದಸ್ಸು, ಕಪ್ಪು (ಕಾಲಕ ಎಂಬ ಎಲುಬು ಎಂತ ಕೆಲವರು) ಮತ್ತು ಆ ಕಪ್ಪಿನ ನಂತರ ಇರುವ ಸಿರಾನಾಳಗಳಿಂದ ಕೂಡಿದ ಶ್ಲೇಷ್ಮವು, ಕಣ್ಣನ್ನು ಹಿಡಿದು ನಿಲ್ಲಿಸುವ ಹಗ್ಗ ಗಳಾಗಿರುತ್ತವೆ. ಸಿರಾನಾಳಗಳನ್ನನುಸರಿಸಿ ಮೇಲಕ್ಕೆ ಬಂದ ವಾತಾದಿದೋಷಗಳು ವಿಕಾರ ಹೊಂದಿದಾಗ್ಗೆ ನೇತ್ರಭಾಗಗಳಲ್ಲಿ ಅತಿ ಕರಿನವಾದ ರೋಗಗಳು ಹುಟ್ಟುತ್ತವೆ.

ಷರಾ ಉಪಾಂತ್ಯ ಶ್ಲೋಕಕ್ಕೆ 'ಕೃಷ್ಣಮಂಡಲವು ಸಿರಾ-ಕಂಡರಾ-ಮೇದಸ್ಸುಗಳಿಂದ ಮತ್ತು ಅದರ ಹೊರಗಿನ ಬಿಳೀ ಗುಡ್ಡೆಯು ಸಿರಾಯುತವಾದ ಕವದಿಂದ ಆಧಂಸಲ್ಪಟ್ಟವೆ' ಎಂತ ಕೆಲವರು ಅರ್ಥ ಬರೆದಿರುವದು ಮಾತ್ರವಲ್ಲದೆ, 'ಕಾಲ ಕಸ್ಯ ಚ' ಎಂಬಲ್ಲಿ 'ಕೃಷ್ಣಬಂಧನೇ' ಎಂತಲೂ 'ಗುಣಾಃ' ಎಂಬಲ್ಲಿ 'ಗುಣಃ' ಎಂತಲೂ ಪಾರವಿಟ್ಟಿದ್ದಾರಾಗಿ ನಿ ಸಂ ವ್ಯಾ ಹೇಳುತ್ತದೆ

61. ಹೃದಯ, ಪ್ಲೀಹ, ಫುಪ್ಫುಸ, ಯಕೃತ್, ಕ್ಲೋಮಗಳ ಸ್ಥಾನಗಳು

ಶೋಣಿತಕಫಪ್ರಸಾದಜಂ ಹೃದಯಂ ಯದಾಶ್ರಯಾ ಹಿ ಧಮನ್ಯಃ ಪ್ರಾಣವಹಾಃ | ತಸ್ಯಾಧೋ ವಾಮತಃ ಪ್ಲೀಹಾ ಫುಪ್ಫುಸಶ್ಚ ದಕ್ಷಿಣತೋ ಯಕೃತ್ ಕ್ಲೋಮ ಚ | (ಸು. 321.)

ಶೋಣಿತಕಫಗಳ ಪ್ರಸಾದದಿಂದ ಹೃದಯ ಉಂಟಾಗುವದಾಗಿರುತ್ತದೆ. ಧಮನೀ ಎಂಬ ಪ್ರಾಣನಾಡಿಗಳು ಆ ಹೃದಯವನ್ನು ಆಶ್ರಯಿಸಿಕೊಂಡಿರುತ್ತವೆ. ಅದರ ಕೆಳಗೆ ಎಡ ಭಾಗದಲ್ಲಿ ಪ್ಲೀಹವೂ ಫುಪ್ಫುಸ ಎಂಬ ಎಡ ಶ್ವಾಸಕೋಶವೂ, ಬಲ ಭಾಗದಲ್ಲಿ ಪಿತ್ತಕೋಶವೂ, ಮತ್ತು ಕ್ಲೋಮ ಎಂಬ ಬಲ ಶ್ವಾಸಕೋಶವೂ ಇರುತ್ತವೆ.

62. ಯಕೃತ್, ಪ್ಲೀಹ, ಫುಪ್ಫುಸ, ಉಂಡುಕಗಳ ಉತ್ಪತ್ತಿ

ಗರ್ಭಸ್ಯ ಯಕೃತ್‌ಪ್ಲೀಹಾನೌ ಶೋಣಿತಜೌ | ಶೋಣಿತ ಫೇನಪ್ರಭವಃ ಫುಪ್ಫುಸಃ ಶೋಣಿತಕಿಟ್ಟಪ್ರಭವ ಉಂಡುಕಃ (ಸು. 320.)

ಗರ್ಭದಲ್ಲಿ ಶೋಣಿತದಿಂದ ಯಕೃತ್ ಪ್ಲೀಹಗಳೂ, ಶೋಣಿತದ ನೊರೆಯಿಂದ ಫುಪ್ಫುಸವೂ, ಶೋಣಿತದ ಮಡ್ಡಿಯಿಂದ ಉಂಡುಕವೂ ಉಂಟಾಗುತ್ತವೆ

63. ಹೃದಯ ವರ್ಣನ

ತದ್ಧೃದಯಂ ವಿಶೇಷೇಣ ಚೇತನಾಸ್ಥಾನಮತಸ್ತಸ್ಮಿನ್ ತಮಸಾವೃತೇ ಸರ್ವಪ್ರಾಣಿನಃ ಸ್ವಪಂತಿ | (ಸು. 321.)

ಆ ಹೃದಯವು ಚೇತನಕ್ಕೆ ಮುಖ್ಯಸ್ಥಾನವಾಗಿರುತ್ತದೆ. ಅದರಲ್ಲಿ ತಮಸ್ಸಿನ ಆವರಣ ಉಂಟಾದರೆ ಸರ್ವ ಪ್ರಾಣಿಗಳು ನಿದ್ರೆ ಹೋಗುತ್ತವೆ.

64. ಹೃದಯದ ಆಕಾರ ಪುಂಡರೀಕೇಣ ಸದೃಶಂ ಹೃದಯಂ ಸ್ಯಾದಧೋಮುಖಂ |
ಜಾಗ್ರತಸ್ತದ್ವಿಕಸತಿ ಸ್ವಪತಶ್ಚ ನಿಮೀಲತಿ || (ಸು. 321.)

ಹೃದಯವು ಕೆಳಮುಖವುಳ್ಳ ತಾವರೆಮೊಗ್ಗೆಯಂತೆ ಇರುವದು. ಎಚ್ಚರವಾಗಿರುವಾಗ್ಗೆ ಅದು ಅರಳಿಕೊಂಡೂ, ನಿದ್ರಾಸ್ಥಿತಿಯಲ್ಲಿ ಮುಚ್ಚಿಕೊಂಡೂ ಇರುತ್ತದೆ.

65 ಹೃದಯದ ಸ್ಥಾನ ಸ್ತನಯೋರ್ಮಧ್ಯಮಧಿಷ್ಠಾಯೋರಸ್ಯಾಮಾಶಯದ್ವಾರಂ
ಸತ್ವರಜಸ್ತಮಸಾಮಧಿಷ್ಠಾನಂ ಹೃದಯಂ ನಾಮ | (ಸು, 341.)

ಎದೆಯಲ್ಲಿ ಎರಡು ಸ್ತನಗಳಿಗೆ ಮಧ್ಯ, ಆಮಾಶಯದ ಬಾಗಿಲಲ್ಲಿ, ನಿಂತಿರುವ ಸತ್ವರ ಜಸ್ತಮೋಗುಣಗಳ ಮನೆಯು ಹೃದಯ ಎಂಬದು.

66. ಹೃದಯದ ಪ್ರಾಮುಖ್ಯ ತಸ್ಯೋಪಘಾತಾನ್ಮೂರ್ಛಾಯಂ ಭೇದಾನ್ಮರಣಮೃಚ್ಛತಿ ಯದ್ಧಿ
ತತ್ಸ್ಪರ್ಶವಿಜ್ಞಾನಂ ಧಾರಿ ತತ್ತತ್ರ ಸಂಶ್ರಿತಂ || ತತ್ಪರಸ್ಯೌಜಸಃ
ಸ್ಥಾನಂ ತತ್ರ ಚೈತನ್ಯಸಂಗ್ರಹಃ | ಹೃದಯಂ ಮಹದರ್ಧಶ್ಚ ತಸ್ಮಾ
ದುಕ್ತಂ ಚಿಕಿತ್ಸಕೈಃ || ತೇನ ಮೂಲೇನ ಮಹತಾ ಮಹಾಮೂಲಾ
ಮತಾ ದಶ | ಓಜೋವಹಾಃ ಶರೀರೇ ವಾ ವಿಧಮ್ಯಂತೇ ಸಮಂತತಃ ||
ಯೇನೌಜಸಾ ವರ್ತಯಂತಿ ಪ್ರೀಣಿತಾಃ ಸರ್ವದೇಹಿನಃ | ಯದೃತೇ
ಸರ್ವಭೂತಾನಾಂ ಜೀವಿತಂ ನಾವತಿಷ್ಠತೇ || (ಚ. 192-93.)

ಹೃದಯಕ್ಕೆ ಸಮೀಪ ಪೆಟ್ಟು ತಗಲಿದರೆ ಮೂರ್ಛೆಯೂ, ಕಡಿದರೆ ಮರಣವೂ ಸಂಭವಿಸುತ್ತವೆ. ಯಾಕಂದರೆ ಅದನ್ನು ಸ್ಪರ್ಶಜ್ಞಾನವೆಂಬದೂ, ಧಾರಣಶಕ್ತಿಯೆಂಬದೂ, ಆಶ್ರಯಿಸಿಕೊಂಡಿರುತ್ತವೆ, ಅದು ಉತ್ಕೃಷ್ಟವಾದ ಓಜಸ್ಸಿನ ಸ್ಥಾನ; ಅದರಲ್ಲಿ ಚೇತನಾಶಕ್ತಿಗಳು ಸಂಗ್ರಹವಾಗಿರುತ್ತವೆ. ಆದ್ದರಿಂದ ಹೃದಯಕ್ಕೆ ಮಹದರ್ಧ (ಮಹದ್ಧನ)ವೆಂತ ವೈದ್ಯರು ಹೇಳುತ್ತಾರೆ. ಆ ಮಹಾಮೂಲದಿಂದ ಹೊರಡುವ ಹತ್ತು ನಾಡಿಗಳಿಗೆ ಮಹಾ ಮೂಲಗಳೆಂದು ಕರೆಯುತ್ತಾರೆ. ಶರೀರದಲ್ಲೆಲ್ಲಾ ಓಜಸ್ಸನ್ನು (ಅಂದರೆ ಓಜೋಮಯವಾದ ರಕ್ತವನ್ನು) ಸಂಚಾರ ಪಡಿಸುವ ಆ ನಾಡಿಗಳನ್ನು ಹೃದಯವು ತಿದಿಯೋಪಾದಿಯಲ್ಲಿ ವಿಶೇಷವಾಗಿ ಊದುತ್ತದೆ. ಆ ಓಜಸ್ಸೆಂಬ ರಕ್ತದಿಂದ ಸರ್ವ ಪ್ರಾಣಿಗಳು ಬಲಗೊಂಡು ಬದುಕುತ್ತವೆ. ಆ ಹೃದಯವಿಲ್ಲದೆ ಯಾವ ಜಂತುವಿಗಾದರೂ ಜೀವವು ನಿಲ್ಲಲಾರದು.

67. ಉಚ್ಛ್ವಾಸ ನಿಃಶ್ವಾಸ ನಾಭಿಸ್ಥಃ ಪ್ರಾಣಪವನಃ ಸ್ಪೃಷ್ಟ್ವಾ ಹೃತ್ಕಮಲಾಂತರಂ | ಕಂಠಾ
ದ್ಬಹಿರ್ವಿನಿರ್ಯಾತಿ ಪಾತುಂ ವಿಷ್ಣುಪದಾಮೃತಂ || ಪೀತ್ವಾ ಚಾಂಬರ
ಪೀಯೂಷಂ ಪುನರಾಯಾತಿ ವೇಗತಃ | ಪ್ರೀಣಯನ್ ದೇಹಮಖಿ
ಲಂ ಜೀವಯನ್ ಜಠರಾನಲಂ || (ಶಾ. 16-7.)

ನಾಭಿಸ್ಥಾನವಾಗಿರುವ ಪ್ರಾಣವಾಯುವು ಹೃತ್ಕಮಲದ ಭಾಗವನ್ನು ಮುಟ್ಟಿಕೊಂಡು, ಕಂಠದ್ವಾರವಾಗಿ ವಿಷ್ಣುಪಾದಾಮೃತವನ್ನು ಪಾನಮಾಡುವದಕ್ಕೋಸ್ಕರ ಹೊರಗೆ ಹೋಗು

ತ್ತದೆ. ಮತ್ತು ಆಕಾಶದ ಅಮೃತವನ್ನು ಕುಡಿದು ಬೇಗನೇ ಹಿಂತಿರುಗಿ ಬಂದು, ಜಠರಾಗ್ನಿಯನ್ನು ವರ್ಧಿಸಿ, ಇಡೀ ದೇಹವನ್ನು ತೃಪ್ತಿಗೊಳಿಸುತ್ತದೆ.

68. ಸ್ರೋತಸ್ಸುಗಳು ಎಂಬದರ ಸಾಮಾನ್ಯ ಅರ್ಥ

ಸ್ರೋತಾಂಸಿ ಖಲು ಪರಿಣಾಮಮಾಪದ್ಯಮಾನಾನಾಂ ಧಾತೂನಾಮಭಿವಾಹೀನಿ ಭವಂತಿ | (ಚ. 259.)

ಸ್ರೋತಸ್ಸುಗಳು ಧಾತುಗಳನ್ನು ಪಾಕವಾದ (ತಯಾರಾದ) ಹಾಗೆ ಸಾಗಿಸಿಕೊಂಡು ಹೋಗುವ ನಾಳಗಳಾಗಿರುತ್ತವೆ

ಸ್ರೋತಾಂಸಿ ಸಿರಾ ಧಮನ್ಯೋ ರಸವಾಹಿನ್ಯೋ ನಾಡ್ಯಃ ಪಂಥಾನೋ ಮಾರ್ಗಾಃ ಶರೀರಛಿದ್ರಾಣಿ ಸಂವೃತಾಸಂವೃತಾನಿ ಸ್ಥಾನಾನಿ ಆಶಯಾಃ ಆಲಯಾಃ ನಿಕೇತಾಶ್ಚೇತಿ ಶರೀರಧಾತ್ವವಕಾಶಾನಾಂ ಲಕ್ಷ್ಯಾಲಕ್ಷ್ಯಾಣಾಂ ನಾಮಾನಿ | (ಚ 261.)

ಸ್ರೋತಸ್ಸು, ಸಿರೆ, ಧಮನೀ, ರಸವಾಹಿನೀ, ನಾಡೀ, ಪಂಥಾ, ಮಾರ್ಗ, ಮುಚ್ಚಿರುವ ಅಥವಾ ತೆರೆದಿರುವ ಶರೀರಛಿದ್ರ, ಸ್ಥಾನ, ಆಶಯ, ಆಲಯ, ನಿಕೇತ, ಇವುಗಳೆಲ್ಲ ಶರೀರ ಧಾತುಗಳ ದೃಶ್ಯಾದೃಶ್ಯವಾದ ಎಡೆಗಳ ಹೆಸರುಗಳು.

ಇದಾ ಈ ಅಧ್ಯಾಯದಿಂದ ಚರಕಸಂಹಿತೆಯಲ್ಲಿ ಪ್ರಾಣ, ನೀರು, ಅನ್ನ, ರಸ, ರಕ್ತ, ಮಾಂಸ, ಮೇದಸ್ಸು, ಎಲುಬು, ಮಜ್ಜೆ, ಶುಕ್ರ, ಮೂತ್ರ, ಪುರೀಷ, ಬೆವರು, ಇವುಗಳ ಆಶ್ರಯಸ್ಥಾನಗಳಿಗೆಲ್ಲ ಸ್ರೋತಸ್ಸುಗಳೆಂತಲೇ ಬರೆದು, ಪ್ರಾಣಸ್ರೋತಸ್ಸುಗಳಿಗೆ ಹೃದಯವು ಮೂಲವೆಂತಲೂ, ನೀರಿನ ಸ್ರೋತಸ್ಸಿಗೆ ತಾಲು ಮತ್ತು ಕ್ಲೋಮ ಮೂಲವೆಂತಲೂ, ಅನ್ನದ ಸ್ರೋತಸ್ಸಿಗೆ ಆಮಾಶಯವೂ, ಪಡಪಕ್ಕವೂ, ಮೂಲವೆಂತಲೂ, ರಸದ ಸ್ರೋತಸ್ಸಿಗೆ ಹೃದಯ ಮತ್ತು 10 ಧಮನೀನಾಡಿಗಳು, ರಕ್ತದ ಸ್ರೋತಸ್ಸಿಗೆ ಯಕೃತ್ತು ಮತ್ತು ಪ್ಲೀಹ, ಮಾಂಸವಾಹಿನೀ ಸ್ರೋತಸ್ಸಿಗೆ ನರ ಮತ್ತು ತೊಗಲು ಮಜ್ಜಾವಾಹಿನೀ ಸ್ರೋತಸ್ಸಿಗೆ ಎಲುಬುಗಳು ಮತ್ತು ತೂಡೆಗಳು, ಶುಕ್ರವಾಹಿನೀ ಸ್ರೋತಸ್ಸಿಗೆ ಅಂಡಗಳು ಮತ್ತು ಮೇಢ್ರ, ಮೂತ್ರವಾಹಿನೀ ಸ್ರೋತಸ್ಸಿಗೆ ವಸ್ತಿ ಮತ್ತು ಸೊಂಟದ ಕೆಳಬದಿ ಪಕ್ಕಗಳು, ಪುರೀಷವಾಹಿನೀ ಸ್ರೋತಸ್ಸಿಗೆ ಪಕ್ವಾಶಯ ಮತ್ತು ದೊಡ್ಡ ಗುದ, ಮತ್ತು ಬೆವರಿನ ಸ್ರೋತಸ್ಸಿಗೆ ಮೇದಸ್ಸು ಮತ್ತು ರೋಮಕೂಪಗಳು ಮೂಲಗಳೆಂತ ಸಹ ಕಾಣಿಸಿಯದೆ (ಚ 260-261) ಆದರೆ ಸುಶ್ರುತನ ಮತದಲ್ಲಿ ಧಮನೀ, ಸಿರಾ, ಸ್ರೋತಸ್ಸುಗಳಂಬವು ಬೇರೆಬೇರೆ (ಮುಂದಿನ 69 ಮತ್ತು 76ನೇ ಸಂಖ್ಯೆಗಳನ್ನು ನೋಡು)

69. ಧಮನೀ ಸಿರಾ ಸ್ರೋತಸ್ಸುಗಳ ಭೇದ

ಅನ್ಯಾ ಏವ ಹಿ ಧಮನ್ಯಃ ಸ್ರೋತಾಂಸಿ ಚ ಸಿರಾಭ್ಯಃ ಕಸ್ಮಾದ್ವ್ಯಂಜನಾನ್ಯತ್ವಾನ್ಮೂಲಸನ್ನಿಯಮಾತ್ ಕರ್ಮವೈಶೇಷ್ಯಾದಾಗಮಾಚ್ಚ | (ಸು. 355.)

ಧಮನಿಗಳು, ಸ್ರೋತಸ್ಸುಗಳು, ಮತ್ತು ಸಿರಾ ಎಂಬವು ಬೇರೆಬೇರೆಯೇ. ಯಾಕೆಂದರೆ: ಕುರುಹು ಬೇರೆ, ಮೂಲ ಬೇರೆ, ಕೆಲಸ ಬೇರೆ ಸಹ ಇರುವದರಿಂದ, ಮತ್ತು ಶಾಸ್ತ್ರಾಧಾರ ಇರುವದರಿಂದ.

ಇದಾ ಮುಂದೆ ನಂ 78 ನೋಡು

70. ನಾಭಿಯಿಂದ ಹೊರಟ ಧಮನಿಗಳ ಸಂಖ್ಯೆ

ಚತುರ್ವಿಂಶತಿರ್ಧಮನ್ಯೋ ನಾಭಿಪ್ರಭವಾ ಅಭಿಹಿತಾಃ || (ಸು. 355.)

24 ಧಮನಿಗಳು ನಾಭಿಯಿಂದ ಹೊರಡುವವಾಗಿ ಹೇಳಲ್ಪಟ್ಟವೆ.

ತಾಸಾಂ ತು ನಾಭಿಪ್ರಭವಾಣಾಂ ಧಮನೀನಾಮೂರ್ಧ್ವಗಾ ದಶ ದಶ ಚಾಧೋಗಾಮಿನ್ಯಶ್ಚತಸ್ರಸ್ತಿರ್ಯಗ್ಗಾಃ | (ಸು 355)

ಆ ಧಮನಿಗಳಲ್ಲಿ ಮೇಲಕ್ಕೆ ಹೋಗುವವು 10, ಕೆಳಕ್ಕೆ ಹೋಗುವವು 10, ಮತ್ತು ಅಡ್ಡ ಹೋಗುವವು 4.

71. ಊರ್ಧ್ವಗಾಃ ಶಬ್ದ-ಸ್ಪರ್ಶ-ರೂಪ-ರಸ-ಗಂಧ-ಪ್ರಶ್ವಾಸೋಚ್ಛ್ವಾಸ-ಜೃಂಭಿತ-ಕ್ಷುದ್ಧಸಿತ-ಕಥಿತ ರುದಿತಾದೀನಾ ವಿಶೇಷಾನಭಿವಹಂತ್ಯಃ ಶರೀರಂ ಧಾರಯಂತಿ | ತಾಸ್ತು ಹೃದಯಮಭಿಪ್ರಪನ್ನಾ ಸ್ತ್ರಿಧಾ ಜಾಯಂತೇ ತಾಸ್ತ್ರಿಂಶತ್ | ತಾಸಾಂ ತು ವಾತಪಿತ್ತಕಫಶೋಣಿತರಸಾನಾ ದ್ವೇ ದ್ವೇ ವಹತಸ್ತಾದಶ ಶಬ್ದರೂಪರಸಗಂಧಾನಷ್ಟಾಭಿರ್ಗೃಹ್ಣೀತೇ | ದ್ವಾಭ್ಯಾಂ ಭಾಷತೇ ಚ ದ್ವಾಭ್ಯಾಂ ಘೋಷಂ ಕರೋತಿ ದ್ವಾಭ್ಯಾಂ ಸ್ಪಪಿತಿ ದ್ವಾಭ್ಯಾಂ ಪ್ರತಿಬುಧ್ಯತೇ | ದ್ವೇ ಚಾಶ್ರುವಾಹಿನ್ಯೌ | ದ್ವೇ ಸ್ತನ್ಯಂ ಸ್ತ್ರಿಯಾ ವಹತಃ ಸ್ತನಸಂಶ್ರಿತೇ | ತೇ ಏವ ಶುಕ್ರಂ ನರಸ್ಯ ಸ್ತನಾಭ್ಯಾಮಭಿವಹತಃ | ತಾಸ್ತ್ವೇತಾಸ್ತ್ರಿಂಶತ್ ಸವಿಭಾಗಾ ವ್ಯಾಖ್ಯಾತಾ ಏತಾಭಿರೂರ್ಧ್ವಂ ನಾಭೇರುದರಪಾರ್ಶ್ವಪೃಷ್ಠೋರಃಸ್ಕಂಧ ಗ್ರೀವಾ ಬಾಹವೋ ಧಾರ್ಯಂತೇ ಯಾಪ್ಯಂತೇ ಚ | (ಸು. 355-56.)

ಮೇಲೆ ಹೋಗುವ ಧಮನಿಗಳ ಕೆಲಸ

ಮೇಲೆ ಹೋಗುವ ಧಮನಿಗಳು ಶಬ್ದ, ಸ್ಪರ್ಶ, ರೂಪ, ರಸ, ಗಂಧ (ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು) ಇವುಗಳ ಜ್ಞಾನ, ಉಸುರು ಎಳೆಯುವದು, ಉಸುರು ಬಿಡುವದು, ಆಕಳಿಕೆ, ಹಸಿವು, ನಗೆ. ಮಾತು, ಅಳುವಿಕೆ, ಇವೇ ಮೊದಲಾದ ವಿಶೇಷಗಳನ್ನು ನಡಿಸುತ್ತಾ, ಶರೀರವನ್ನು ಆಧರಿಸುತ್ತವೆ. ಮತ್ತು ಅವು ಹೃದಯವನ್ನು ಸೇರಿದ ಮೇಲೆ, ಮೂರು ನೂರಾಗಿ ಹೊರಟು ಮೂವತ್ತಾಗುತ್ತವೆ. ಆ ಮೂವತ್ತರಲ್ಲಿ ವಾತ ಪಿತ್ತ, ಕಫ, ರಕ್ತ, ರಸ, ಇವುಗಳನ್ನು ವಹಿಸುವಂಧವು ಎರಡೆರಡರಂತೆ 10. ಶಬ್ದ, ರೂಪ, ರಸ, ಗಂಧಗಳನ್ನು ಒಂದಕ್ಕೆರಡರ ಪ್ರಕಾರ, ಎಂಟು ಧಮನಿಗಳು ಹಿಡಿಯುತ್ತವೆ. ಎರಡರಿಂದ ಮಾತಾಡುವದು, ಎರಡರಿಂದ ಶಬ್ದಮಾಡುವದು, ಎರಡರಿಂದ ನಿದ್ದೆಹೋಗುವದು, ಎರಡರಿಂದ ಎಚ್ಚರವಾಗುವದು, ಎರಡು ಕಣ್ಣಿನೀರು ಸುರಿಸುವವು, ಎರಡು ಸ್ತ್ರೀಯರ ಮೊಲೆಗಳಲ್ಲಿ ನಿಂತು ಹಾಲು ಉಂಟುಮಾಡುವವು, ಅದೇ ಎರಡು ಗಂಡಸರ ಸ್ತನಗಳಿಂದ ಶುಕ್ರವನ್ನು ಸಾಗಿಸುತ್ತವೆ. ಹೀಗೆ 30 ಮತ್ತು ಅವುಗಳ ಭೇದಗಳು. ಈ 30ರಿಂದ ನಾಭಿಯ ಮೇಲ್ಗಡೆಯ ಹೊಟ್ಟೆ, ಪಕ್ಕಗಳು, ಬೆನ್ನು, ಎದೆ, ಮುಂಡ, ಕೊರಳು ಮತ್ತು ಕೈಗಳು, ಇವುಗಳ ಧಾರಣೆ (ನಿಲ್ಲುವಿಕೆ) ಮತ್ತು ಪ್ರವರ್ತನೆ, ಅಂದರೆ ಸ್ಥಿತಿಗತಿಗಳು ಉಂಟಾಗುತ್ತವೆ

72. ಅಧೋಗತಾಸ್ತು ವಾತಮೂತ್ರಪುರೀಷಶುಕ್ರಾರ್ತವಾದೀನ್ಯಧೋ ವಹಂತಿ | ತಾಸ್ತು ಪಿತ್ತಾಶಯಮಭಿ ಪ್ರತಿಪನ್ನಾಸ್ತತ್ರಸ್ಥಮೇವಾನ್ನ

ಪಾನರಸಂ ವಿಪಕ್ವಮೌಷ್ಣ್ಯಾದ್ವಿವೇಚಯಂತ್ಯೋಽಭಿವಹಂತ್ಯಃ ಶರೀರಂ ತರ್ಪಯಂತ್ಯರ್ಪಯಂತಿ ಚೋರ್ಧ್ವಗತಾನಾಂ ತಿರ್ಯ್ಗಗತಾನಾಂ ರಸ ಸ್ಥಾನಂ ಚಾಭಿಪೂರಯಂತಿ ಮೂತ್ರಪುರೀಷಸ್ವೇದಾಂಶ್ಚ ವಿವೇಚಯಂ ತ್ಯಾಮಪಕ್ವಾಶಯಾಂತರೇ ಚ ತ್ರಿಧಾ ಜಾಯಂತೇ ತಾಸ್ತ್ರಿಂಶತ್ |

ಕೆಳಗೆ ಹೋಗುವ ಧಮನಿಗಳ ಕೆಲಸ

ತಾಸಾಂ ತು ವಾತಪಿತ್ತಕಫಶೋಣಿತರಸಾನ್ ದ್ವೇ ದ್ವೇ ವಹತಸ್ತಾ ದಶ ದ್ವೇ ಅನ್ನವಾಹಿನ್ಯಾವಂತ್ರಾಶ್ರಿತೇ ತೋಯವಹೇ ದ್ವೇ ಮೂತ್ರ ವಸ್ತಿಮಭಿಪ್ರಪನ್ನೇ ಮೂತ್ರವಹೇ ದ್ವೇ ಶುಕ್ರವಹೇ ದ್ವೇ ಶುಕ್ರಪ್ರಾದು ರ್ಭಾವಾಯ ದ್ವೇ ವಿಸರ್ಗಾಯ ತೇ ಏವ ರಕ್ತಮಭಿವಹತೋ ನಾರೀಣಾ ಮಾರ್ತವಸಂಜ್ಞಂ | ದ್ವೇ ವರ್ಚೋನಿರಸನ್ಯೌ ಸ್ಥೂಲಾಂತ್ರಪ್ರತಿ ಬದ್ಧೇ | ಅಷ್ಟಾವನ್ಯಾಸ್ತಿರ್ಯಗ್ಗಾನಾಂ ಧಮನೀನಾಂ ಸ್ವೇದಮರ್ಪ ಯಂತಿ | ತಾಸ್ತ್ವೇತಾಸ್ತ್ರಿಂಶತ್ ಸವಿಭಾಗಾ ವ್ಯಾಖ್ಯಾತಾ ಏತಾಭಿರ ಧೋ ನಾಭೇಃ ಪಕ್ವಾಶಯಕಟೀಮೂತ್ರಪುರೀಷಗುದವಸ್ತಿಮೇಢ್ರ ಸಕ್ಥೀನಿ ಧಾರ್ಯಂತೇ ಯಾಪ್ಯಂತೇ ಚ | (ಸು. 356.)

ಕೆಳಗೆ ಹೋಗುವ ಧಮನಿಗಳು ವಾತ, ಮೂತ್ರ, ಪುರೀಷ, ಶುಕ್ರ, ಶೋಣಿತ ಮುಂತಾ ದವುಗಳನ್ನು ಕೆಳಗೆ ಸಾಗಿಸುತ್ತವೆ. ಅವು ಪಿತ್ತಾಶಯಕ್ಕೆ ಹೋಗಿ, ಅಲ್ಲಿ ಉಷ್ಣತೆ ಯಿಂದ ಪಕ್ವವಾದ ಅನ್ನಪಾನಗಳ ರಸವನ್ನು ಪ್ರತ್ಯೇಕಿಸಿ ಮುಂದೆ ಸಾಗಿಸುತ್ತಾ, ಶರೀರಕ್ಕೆ ಅರ್ಪಿಸಿ ತೃಪ್ತಿಗೊಳಿಸುತ್ತವೆ. ಮತ್ತು ಮೇಲಕ್ಕೂ ಅಡ್ಡಕ್ಕೂ ಹೋದ ಧಮನಿಗಳ ರಸ ಸ್ಥಾನವನ್ನು ಭರ್ತಿ ಮಾಡುತ್ತವೆ. ಮೂತ್ರ, ಪುರೀಷ, ಬೆವರು, ಇವುಗಳನ್ನು ಪ್ರತ್ಯೇಕಿಸು ತ್ತವೆ. ಆಮ ಮತ್ತು ಪಕ್ವಾಶಯದ ಮಧ್ಯದಲ್ಲಿ ಅವು ಮೂರುಮೂರಾಗಿ ಒಡೆದು 30 ಶಾಖೆ ಗಳಾಗುತ್ತವ. ಅವುಗಳಲ್ಲಿ ಎರಡೆರಡು ವಾತ, ಪಿತ್ತ, ಕಫ, ರಕ್ತ, ರಸಗಳನ್ನು ಸಾಗಿಸುವಂಧ ವು, ಒಟ್ಟು ಹತ್ತು, ಎರಡು ಕರುಳಿನಲ್ಲಿದ್ದು ಅನ್ನವನ್ನು ಸಾಗಿಸುವಂಧವು, ಎರಡು ನೀರನ್ನು ಸಾಗಿಸುವಂಧವು, ಎರಡು ಮೂತ್ರಾಶಯವನ್ನು ಹೊಕ್ಕು ಮೂತ್ರವನ್ನು ಸಾಗಿಸುವಂಧವು; ಎರಡು ಶುಕ್ರವನ್ನು ಹೊರಡಿಸುವಂಧವು; ಎರಡು ಶುಕ್ರವನ್ನು ಹೊರಗೆ ಬಿಡುವಂಧವು; ಇವೇ ಹೆಂಗಸರಲ್ಲಿ ಆರ್ತವ ಎಂಬ ರಕ್ತವನ್ನು ಹೊತ್ತು ಸಾಗಿಸುವವು, ದೊಡ್ಡ ಕರುಳಿಗೆ ಕಟ್ಟಲ್ಪಟ್ಟ ಎರಡು ಪುರೀಷವನ್ನು ಹೊರಪಡಿಸುತ್ತವೆ, ಉಳಿದ ಎಂಟು ಅಡ್ಡಹೋದ ಧಮನಿ ಗಳು ಬೆವರನ್ನು ಅರ್ಪಿಸುತ್ತವೆ. ಹೀಗೆ ಅವು 30 ಮತ್ತು ಅವುಗಳ ಭೇದಗಳು ವಿವರಿಸಲ್ಪಟ್ಟ ದ್ದಾಯಿತು. ಇವುಗಳಿಂದ ನಾಭಿಯ ಕೆಳಗೆ ಪಕ್ವಾಶಯ, ಸೊಂಟ, ಮೂತ್ರ, ಪುರೀಷ, ಗುದ, ಮೂತ್ರಾಶಯ, ಮೇಢ್ರ, ಮತ್ತು ಕಾಲುಗಳು ಆಧರಿಸಲ್ಪಟ್ಟು ನಡಿಸಲ್ಪಡುತ್ತವೆ. ಅಂದರೆ ಅವುಗಳ ಸ್ಥಿತಿಗತಿ ನಡಿಸಲ್ಪಡುತ್ತದೆ.

73. ತಿರ್ಯಗ್ಗತಾನಾಂ ತು ಚತಸೃಣಾಂ ಧಮನೀನಾಮೇಕೈಕಾ ಶತಧಾ ಸಹಸ್ರಧಾ ಚೋತ್ತರೋತ್ತರಂ ವಿಭಜ್ಯಂತೇ | ತಾಸ್ತ್ವಸಂಖ್ಯಾ ಸ್ತಾಭಿ ರಿದಂ ಶರೀರಂ ಗವಾಕ್ಷಿತಂ ಏಬದ್ಧಮಾತತಂ ಚ | ತಾಸಾಂ ಮುಖಾನಿ

ರೋಮಕೂಪಪ್ರತಿಬದ್ಧಾನಿ । ಯೈಃ ಸ್ವೇದಮಭಿವಹಂತಿ ರಸಂ ಚಾಪಿ ಸಂತರ್ಪಯಂತ್ಯಂತರ್ಬಹಿಶ್ಚ ತೈರೇವ ಚಾಭ್ಯಂಗಪರಿಷೇಕಾವ

ಅಡ್ಡ ಹೋಗುವ ಧಮನಿಗಳ ಕೆಲಸ

ಗಾಹಾಲೇಪನವೀರ್ಯಾಣ್ಯಂತಃಶರೀರಮಭಿಪ್ರತಿಪದ್ಯಂತೇ ತ್ವಚಿ ವಿಪಕ್ವಾನಿ ತೈರೇವ ಸ್ಪರ್ಶಸುಖಮಸುಖಂ ವಾ ಗೃಹ್ಣಾತಿ । ತಾಸ್ತ್ವೇತಾಶ್ಚತಸ್ರೋ ಧಮನ್ಯಃ ಸರ್ವಾಂಗಗತಾಃ ಸವಿಭಾಗಾ ವ್ಯಾಖ್ಯಾತಾಃ । (ಸು. 356-57.)

ಅಡ್ಡಹೋಗುವ ನಾಲ್ಕು ಧಮನಿಗಳು ಮುಂದೆ ಹೋದ ಹಾಗೆ ಒಂದೊಂದರಲ್ಲಿ ನೂರೋ, ಸಹಸ್ರವೋ, ಶಾಖೆಗಳಾಗಿ ವಿಭಾಗವಾಗುತ್ತವೆ. ಅವು ಇಂತಿಷ್ಟೆಂದು ಗಣನೆ ಮಾಡಲಿಕ್ಕೆ ಶಕ್ಯವಲ್ಲ. ಅವು ಈ ಶರೀರಕ್ಕೆ ಗವಾಕ್ಷಿ ಕಂಡಿಗಳ ಹಾಗೆ ನಿಂತು ಶರೀರವನ್ನು ಕಟ್ಟಿಯೂ ಹಾಸಿಯೂ ಇಡುತ್ತವೆ. ಅವುಗಳ ಮುಖಗಳು ರೋಮಕೂಪಗಳಿಗೆ ಎದುರಾಗಿ ಸ್ಥಾಪಿಸಲ್ಪಟ್ಟವೆ. ಆ ಮುಖಗಳಿಂದ ಬೆವರನ್ನು ಹೊರಡಿಸುತ್ತವೆ. ಮತ್ತು ರಸ ಧಾತುವನ್ನು ಚರ್ಮಕ್ಕೆ ಒಳಗೂ ಹೊರಗೂ ಒದಗಿಸಿಕೊಡುತ್ತವೆ. ಆ ಮುಖಗಳಿಂದಲೇ ಅಭ್ಯಂಗ, ಅಭಿಷೇಕ (ನೀರನ್ನು ಮೇಲಿಂದ ಸುರಿಸಿ ಸ್ನಾನ), ಅವಗಾಹ (ಮುಳುಗಿ ಸ್ನಾನ), ಲೇಪನ, ಇವುಗಳು ಚರ್ಮದಲ್ಲಿ ಉಂಟಾಗುವ ಪಾಕದ ವೀರ್ಯವನ್ನು ಶರೀರದೊಳಗೆ ವ್ಯಾಪಿಸುವಂತೆ ಮಾಡುವವು. ಅವುಗಳಿಂದಲೇ ಮನುಷ್ಯನು ಸ್ಪರ್ಶದ ಸುಖಾಸುಖಗಳನ್ನು ಪಡೆಯುತ್ತಾನೆ. ಹೀಗೆ ಸರ್ವಾಂಗವ್ಯಾಪಿನಿಗಳಾದ ಆ ನಾಲ್ಕು ಧಮನಿಗಳನ್ನು ಮತ್ತು ಅವುಗಳ ಭೇದಗಳನ್ನು ವಿವರಿಸಿದ್ದಾಯಿತು.

74. ಧಮನಿಗಳ ರಚನೆ

ಯಥಾ ಸ್ವಭಾವತಃ ಖಾನಿ ಮೃಣಾಲೇಷು ಬಿಸೇಷು ಚ । ಧಮನೀನಾಂ ತಥಾ ಖಾನಿ ರಸೋಯೈರುಪಚೀಯತೇ ॥ (ಸು. 357.)

ಸ್ವಾಭಾವಿಕವಾಗಿ ತಾವರೆದಂಟುಗಳೊಳಗೂ, ನೈದಿಲೆದಂಟುಗಳೊಳಗೂ ಹ್ಯಾಗೆ ಖಾಲಿ ಎಡೆಗಳು ಇರುತ್ತವೋ ಹಾಗೆಯೇ ಧಮನೀನಾಡಿಗಳಲ್ಲಿ ಖಾಲಿ ಎಡೆಗಳಿದ್ದು, ಅವುಗಳಿಂದ ರಸಧಾತುವು ಕೂಡಿಸಲ್ಪಡುತ್ತದೆ.

75. ಧಮನ್ಯೋ ರಸವಾಹಿನ್ಯೋ ಧಮಂತಿ ಪವನಂ ತನೌ । (ಶಾ. 16.)

ರಸವನ್ನು ಹರಿಸುವ ಧಮನೀನಾಡಿಗಳು ಶರೀರದಲ್ಲಿ ಗಾಳಿಯನ್ನು ತಿದಿಯಿಂದ ತುಂಬಿಸಿದ ಹಾಗೆ ತುಂಬಿಸುತ್ತವೆ.

76. ತಾನಿ ತು ಪ್ರಾಣಾನ್ನೋದಕ-ರಸ-ರಕ್ತ-ಮಾಂಸ-ಮೇದೋ-ಮೂತ್ರ-ಪುರೀಷ-ಶುಕ್ರಾರ್ತವವಹಾನಿ ಯೇಷ್ವಧಿಕಾರ ಏಕೇಷಾಂ ಬಹೂನಿ । ಏತೇಷಾಂ ವಿಶೇಷಾ ಬಹವಃ । ತತ್ರ ಪ್ರಾಣವಹೇ ದ್ವೇ ತಯೋರ್ಮೂಲಂ ಹೃದಯಂ ರಸವಾಹಿನ್ಯಶ್ಚ ಧಮನ್ಯಃ । ತತ್ರ ವಿದ್ಧಸ್ಯ ಕ್ರೋಶನ-ವಿನಮನ-ಮೋಹನ-ಭ್ರಮಣ-ವೇಪನಾನಿ ಮರಣಂ ವಾ ಭವತಿ । ಅನ್ನವಹೇ ದ್ವೇ ತಯೋರ್ಮೂಲಮಾಮಾಶಯೋಽನ್ನವಾಹಿನ್ಯಶ್ಚ

ಧಮನ್ಯಸ್ತತ್ರ ವಿದ್ಧಸ್ಯಾಧ್ಮಾನಂ ಶೂಲಾನ್ನದ್ವೇಷೌ ಛರ್ದಿಃ ಪಿಪಾಸಾಂ ಧ್ಯಂ ಮರಣಂ ವಾ । ಉದಕವಹೇ ದ್ವೇ ತಯೋರ್ಮೂಲಂ ತಾಲು ಕ್ಲೋಮ ಚ । ತತ್ರ ವಿದ್ಧಸ್ಯ ಪಿಪಾಸಾ ಸದ್ಯೋ ಮರಣಂ ಚ । ರಸವ ಹೇ ದ್ವೇ ತಯೋರ್ಮೂಲಂ ಹೃದಯಂ ರಸವಾಹಿನ್ಯಶ್ಚ ಧಮನ್ಯಸ್ತತ್ರ ವಿದ್ಧಸ್ಯ ಶೋಷಃ ಪ್ರಾಣವಹವಿದ್ಧವಚ್ಚ ಮರಣಂ ತಲ್ಲಿಂಗಾನಿ ಚ । ರಕ್ತವಹೇ ದ್ವೇ ತಯೋರ್ಮೂಲಂ ಯಕೃತ್-ಪ್ಲೀಹಾನೌ ರಕ್ತವಾಹಿ ನ್ಯಶ್ಚ ಧಮನ್ಯಸ್ತತ್ರ ವಿದ್ಧಸ್ಯ ಶ್ಯಾವಾಂಗತಾ ಜ್ವರೋ ದಾಹಃ ಪಾಂಡು ತಾ ಶೋಣಿತಾತಿಗಮನಂ ರಕ್ತನೇತ್ರತಾ ಚೇತಿ । ಮಾಂಸವಹೇ ದ್ವೇ ತಯೋರ್ಮೂಲಂ ಸ್ನಾಯುತ್ವಚಂ ರಕ್ತವಹಾಶ್ಚ ಧಮನ್ಯಸ್ತತ್ರ ವಿದ್ಧ ಸ್ಯ ಶ್ವಯಥುರ್ಮಾಂಸಶೋಷಃ ಸಿರಾಗ್ರಂಥಯೋ ಮರಣಂ । ಮೇ ದೋವಹೇ ದ್ವೇ ತಯೋರ್ಮೂಲಂ ಕಟೀವೃಕ್ಕೌ ಚ ತತ್ರ ವಿದ್ಧಸ್ಯ ಸ್ವೇದಾಗಮನಂ ಸ್ನಿಗ್ಧಾಂಗತಾ ತಾಲುಶೋಷಃ ಸ್ಥೂಲಶೋಷತಾ ಪಿಪಾಸಾ ಚ । ಮೂತ್ರವಹೇ ದ್ವೇ ತಯೋರ್ಮೂಲಂ ವಸ್ತಿರ್ಮೇಢ್ರಂ ಚ ತತ್ರ ವಿದ್ಧಸ್ಯಾನದ್ಧವಸ್ತಿತಾ ಮೂತ್ರನಿರೋಧಃ ಸ್ತಬ್ಧಮೇಢ್ರತಾ ಚ । ಪುರೀಷವಹೇ ದ್ವೇ ತಯೋರ್ಮೂಲಂ ಪಕ್ವಾಶಯೋ ಗುದಂ ಚ ತತ್ರ ವಿದ್ಧಸ್ಯಾನಾಹೋ ದುರ್ಗಂಧತಾ ಗ್ರಥಿತಾಂತ್ರತಾ ಚ । ಶುಕ್ರ ವಹೇ ದ್ವೇ ತಯೋರ್ಮೂಲಂ ಸ್ತನೌ ವೃಷಣೌ ಚ ತತ್ರ ವಿದ್ಧಸ್ಯ ಕ್ಲೀ ಬತಾ ಚಿರಾತ್ ಪ್ರಸೇಕೋ ರಕ್ತಶುಕ್ರತಾ ಚ । ಆರ್ತವವಹೇ ದ್ವೇ ತಯೋರ್ಮೂಲಂ ಗರ್ಭಾಶಯ ಆರ್ತವವಾಹಿನ್ಯಶ್ಚ ಧಮನ್ಯಸ್ತತ್ರ ವಿದ್ಧಾಯಾಂ ವಂಧ್ಯಾತ್ವಂ ಮೈಥುನಾಸಹಿಷ್ಣುತ್ವಮಾರ್ತವನಾಶಶ್ಚ ।

(ಸು. 357-85.)

ಪ್ರಾಣವಹಾದಿ ಸ್ರೋತಸ್ಸು ಗಳ ಮೂಲ ಗಳು ಮತ್ತು ಅವುಗಳ ವೇಧ ಜ ವಿಕಾರ ಗಳು

ಸ್ರೋತಸ್ಸುಗಳು ಪ್ರಾಣ, ನೀರು, ಅನ್ನರಸ, ರಕ್ತ, ಮಾಂಸ, ಮೇದಸ್ಸು, ಮೂತ್ರ, ಪುರೀಷ, ಶುಕ್ರ, ರಜಸ್ಸು, ಇವುಗಳನ್ನು ಸಾಗಿಸುವಂಥವು. ಇವುಗಳ ಮೂಲವೇಧದ ಲಕ್ಷಣ ಗಳು (ಶಲ್ಯತಂತ್ರದವರು) ತಿಳಿಯಬೇಕಾದವುಗಳು ಕೆಲವರ ಮತದಲ್ಲಿ ಬಹಳ ಇರುತ್ತವೆ. ಇವುಗಳಲ್ಲಿ ವಿಶೇಷಗಳು ಬಹಳ ಇವೆ. ಅವ್ರಗಳಲ್ಲಿ ಪ್ರಾಣ ಸಾಗಿಸುವಂಥವು ಎರಡು; ಅವು ಗಳ ಮೂಲ ಹೃದಯ ಮತ್ತು ಧಾತುವಾಹಿಯಾದ ಧಮನೀನಾಡಿಗಳು, ಅಲ್ಲಿ ಗಾಯವಾದರೆ ಕೂಗುವದು, ಬೊಗ್ಗುವದು, ಮೂರ್ಛ, ಭ್ರಮೆ, ನಡುಕು, ಇವು ಅಥವಾ ಮರಣ ಉಂಟಾಗು ತ್ತದೆ. ಅನ್ನಸಾಗಿಸುವ ಸ್ರೋತಸ್ಸುಗಳು ಎರಡು; ಅವುಗಳ ಮೂಲ ಆಮಾಶಯ, ಮತ್ತು ಅನ್ನವಾಹಿಯಾದ ಧಮನಿಗಳು; ಅಲ್ಲಿ ಗಾಯಪಟ್ಟರೆ, ಹೊಟ್ಟೆಯುಬ್ಬರ, ಶೂಲೆ, ಅನ್ನದ್ವೇಷ, ವಾಂತಿ, ಬಾಯಾರಿಕೆ, ಕಣ್ಣುಕತ್ತಲೆ, ಅಥವಾ ಮರಣ ಸಂಭವಿಸುವದು. ಉದಕವಾಹಿಗಳು ಎರಡು; ಅವುಗಳ ಮೂಲ ತಾಲು, ಮತ್ತು ಕ್ಲೋಮ, ಅಲ್ಲಿ ಗಾಯಪಟ್ಟರೆ ಬಾಯಾರಿಕೆ ಮತ್ತು ಕೂಡಲೇ ಮರಣ ಉಂಟಾಗುವದು ರಸವಾಹಿ ಸ್ರೋತಸ್ಸುಗಳು ಎರಡು; ಅವುಗಳ ಮೂಲ ಹೃದಯ, ಮತ್ತು ರಸವಾಹಿ ಧಮನೀನಾಡಿಗಳು; ಅಲ್ಲಿ ಗಾಯವಾದರೆ ಕ್ಷಯ ಮತ್ತು

ಪ್ರಾಣವಹ ಸ್ರೋತಸ್ಸು ಗಾಯವಟ್ಟಾಗ ಉಂಟಾಗುವ ಮರಣ ಮತ್ತು ಲಕ್ಷಣಗಳು ಕಾಣುವವು. ರಕ್ತವಾಹಿ ಸ್ರೋತಸ್ಸುಗಳು ಎರಡು; ಅವುಗಳ ಮೂಲ—ಪಿತ್ತಕೋಶ, ಪ್ಲೀಹ ಮತ್ತು ರಕ್ತವಾಹಿಯಾದ ಧಮನಿಗಳು; ಅಲ್ಲಿ ಗಾಯವಾದರೆ, ಅಂಗವು ಕಪಿಶ (ಅರಸಿನ ಕಪ್ಪು) ವರ್ಣವಾಗುವದು, ಜ್ವರ, ಉರಿ, ಬಿಳುಪು ವರ್ಣ, ರಕ್ತ ಅತಿಯಾಗಿ ಹೋಗುವದು, ಕಣ್ಣು ಕೆಂಪಾಗುವದು, ಈ ಲಕ್ಷಣಗಳುಂಟಾಗುವವು. ಮಾಂಸವಾಹಿ ಸ್ರೋತಸ್ಸುಗಳು ಎರಡು; ಅವುಗಳ ಮೂಲ—ನರ, ಚರ್ಮ, ಮತ್ತು ರಕ್ತವಾಹಿ ಧಮನಿಗಳು, ಅಲ್ಲಿ ಗಾಯವಾದರೆ, ಮೈ ಬಾತುಹೋಗುವಿಕೆ, ಮಾಂಸ ಒಣಗುವಿಕೆ, ಸಿರೆಗಳಲ್ಲಿ ಗಂಟುಗಳು, ಮರಣ, ಈ ಲಕ್ಷಣಗಳುಂಟಾಗುವವು. ಮೇದೋವಾಹಿ ಸ್ರೋತಸ್ಸುಗಳು ಎರಡು, ಅವುಗಳ ಮೂಲ—ಸೊಂಟ ಮತ್ತು ವೃಕ್ಕುಗಳು; ಅಲ್ಲಿ ಗಾಯವಾದರೆ, ಬೆವರುವದು, ಅಂಗಗಳಲ್ಲಿ ಬಿಡ್ಡು, ತಾಲು ಒಣಗುವದು, ಶರೀರ ದೊಡ್ಡದಾಗಿ ಊದಿಕೊಳ್ಳುವದು, ಮತ್ತು ಬಾಯಾರಿಕೆ, ಈ ಲಕ್ಷಣಗಳು ಕಾಣುವವು. ಮೂತ್ರವಾಹಿ ಸ್ರೋತಸ್ಸುಗಳು ಎರಡು, ಅವುಗಳ ಮೂಲ—ಮೂತ್ರಾಶಯ ಮತ್ತು ಶಿಶ್ನ; ಅಲ್ಲಿ ಗಾಯವಾದಲ್ಲಿ, ಮೂತ್ರಾಶಯ ಒಳಗೆ ಎಳೆದುಕೊಳ್ಳುವದು, ಮೂತ್ರಸಿಕ್ಕು, ಶಿಶ್ನ ಸ್ತಬ್ಧವಾಗುವದು, ಈ ಲಕ್ಷಣಗಳು ಉಂಟಾಗುವವು. ಪುರೀಷವಾಹಿ ಸ್ರೋತಸ್ಸುಗಳು ಎರಡು, ಅವುಗಳಿಗೆ ಮೂಲ—ಪಕ್ವಾಶಯ ಮತ್ತು ಗುದ; ಅಲ್ಲಿ ಗಾಯವಾದರೆ ಮಲಬದ್ಧತೆ, ದುರ್ಗಂಧತೆ, ಮತ್ತು ಕರುಳು ಗಂಟುಬೀಳುವದು, ಈ ಲಕ್ಷಣಗಳು ತೋರುವವು. ಶುಕ್ರವಾಹಿ ಸ್ರೋತಸ್ಸುಗಳು ಎರಡು; ಅವುಗಳ ಮೂಲ—ಮೊಲೆಗಳು ಮತ್ತು ಅಂಡಗಳು, ಅಲ್ಲಿ ಗಾಯವಾದರೆ, ನಪುಂಸಕತ್ವ, ವಿಳಂಬವಾಗಿ ಶುಕ್ರಪ್ರವೃತ್ತಿ ಮತ್ತು ಶುಕ್ರವು ರಕ್ತವರ್ಣವಾಗುವದು, ಈ ಲಕ್ಷಣಗಳು ಕಾಣುವವು. ರಜೋವಹ ಸ್ರೋತಸ್ಸುಗಳು ಎರಡು, ಅವುಗಳಿಗೆ ಮೂಲ—ಗರ್ಭಾಶಯ, ಮತ್ತು ರಜೋವಹ ಧಮನಿಗಳು; ಅಲ್ಲಿ ಗಾಯವಾದರೆ, ಬಂಜೆತನ, ಮೈಥುನ ಸಹಿಸಕೂಡದಿರುವದು, ಮತ್ತು ರಜಸ್ಸು ಇಲ್ಲದೆ ಹೋಗುವದು, ಈ ಲಕ್ಷಣಗಳು ಕಾಣುವವು.

ಷರಾ ಹಿಂದಿನ 68ನೇ ಸಂ ನೋಡು

77. ವಾತವಹೋರ್ನಿರಸನಂ ಸ್ಥೂಲಾಂತ್ರಪ್ರತಿಬದ್ಧಂ ಗುದಂ ನಾಮ ಮರ್ಮ | ತತ್ರ ಸದ್ಯೋ ಮರಣಂ | ಅಲ್ಪಮಾಂಸ ಶೋಣಿತೋಽಭ್ಯಂತರತಃ ಕಟ್ಯಾಂ ಮೂತ್ರಾಶಯೋ ವಸ್ತಿರ್ನಾಮ ತತ್ರಾಪಿ ಸದ್ಯೋ ಮರಣಮಶ್ಮರೀವ್ರಣಾದೃತೇ ತತ್ರಾಪ್ಯುಭಯತೋ ಭಿನ್ನೇ ನ ಜೀವತ್ಯೇಕತೋ ಭಿನ್ನೇ ಮೂತ್ರಸ್ರಾವೀ ವ್ರಣೋ ಭವತಿ | ಸ ತು ಯತ್ನೇನೋಪಕ್ರಾಂತೋ ರೋಹತಿ | (ಸು. 341.)

ಗುದ ವಸ್ತಿ ಗಳ ಸ್ಥಾನ ಗಳು ಮತ್ತು ಅವುಗಳ ವೇಧ ಜ ಎಕಾರ ಗಳು

ದೊಡ್ಡ ಕರುಳಿಗೆ ಬಿಗಿಯಲ್ಪಟ್ಟಿದ್ದು, ವಾಯುವನ್ನೂ ಮಲವನ್ನೂ ಹೊರಪಡಿಸತಕ್ಕ ಮರ್ಮಸ್ಥಾನವು ಗುದ ಎನ್ನಿಸಿಕೊಳ್ಳುತ್ತದೆ, ಅಲ್ಲಿ ಗಾಯವಾದರೆ ಕೂಡಲೇ ಮರಣ. ಸೊಂಟದ ಒಳಭಾಗದಲ್ಲಿರುವ ಅಲ್ಪ ಮಾಂಸ ಮತ್ತು ರಕ್ತ ಕೂಡಿರುವ ಮೂತ್ರಾಶಯವು 'ವಸ್ತಿ' ಎನ್ನಿಸಿಕೊಳ್ಳುತ್ತದೆ; ಅಲ್ಲಿ ಕೂಡ ಗಾಯವಾದರೆ ಕೂಡಲೇ ಮರಣವುಂಟಾಗುವದು. ಅಶ್ಮರಿ ಬಿಟ್ಟು ಇತರ ಸಂಗತಿಯಲ್ಲಿ ಎರಡು ಪಾರ್ಶ್ವವೂ ಭಿನ್ನವಾದರೆ, ಬದುಕುವದಿಲ್ಲ,

ಒಂದೇ ಕಡೆಯಲ್ಲಿ ಭಿನ್ನವಾದರೆ ಮೂತ್ರ ಸುರಿಯುತ್ತಿರುವ ವ್ರಣವುಂಟಾಗುವದು. ಆ ವ್ರಣವು ಪ್ರಯತ್ನದಿಂದ ಚಿಕಿತ್ಸೆ ಮಾಡಿದರೆ ವಾಸಿಯಾಗುವದು.

ಪರಾ ಗುದವು 3 ಸುಳಿಗಳುಳ್ಳದ್ದೆಂತಲೂ ಅವುಗಳೊಳಗೆ 1ನೇ ಪ್ರವಾಹಿನೀ ಎಂಬದು $1\frac{1}{2}$ ಅಂಗುಲ ಉದ್ದ, 2ನೇ ಉತ್ಸರ್ಜನೀ ಎಂಬದು $1\frac{1}{2}$ ಅಂಗುಲ ಉದ್ದ, 3ನೇ ಸಂವರಣೀ ಎಂಬದು 1 ಅಂಗುಲ ಉದ್ದ ಮೂರೂ ಅಡ್ಡ 1 ಅಂಗುಲ ಆಗಲ ಎಂತಲೂ, 3ನೇ ಸುಳಿಯು ಗುದೌಷ್ಠ (ಗುದದ ತುಟಿ) ದಿಂದ 1 ಅಂಗುಲ ಮೇಲೆ ಆದೆಯೆಂತಲೂ, ಆ ಗುದೌಷ್ಠವು ರೋಮದ ಸುತ್ತು ಒಡಿದು ಅರ್ಧ ಅಂಗುಲ ಇರುತ್ತದೆಂತಲೂ ಬೇರೆ ಭಾಗಗಳಲ್ಲಿ ವರ್ಣಿಸಲ್ಪಟ್ಟದೆ (ಸಂ 251)

78. ಸ್ರೋತಸ್ಸಿನ ಎವರ — ಮೂಲಾದ್ಬಾದಂತರಂ ದೇಹೇ ಪ್ರಸೃತಂತ್ವಭಿವಾಹಿ ಯತ್ |
ಸ್ರೋತಸ್ತದಿತಿ ವಿಜ್ಞೇಯಂ ಸಿರಾಧಮನಿವರ್ಜಿತಂ || (ಸು. 358.)

ಧಮನೀ ಮತ್ತು ಸಿರೆಯಲ್ಲದ ಹೃದಯಾದಿ ಛಿದ್ರದಿಂದ ಹೊರಟು ದೇಹದಲ್ಲಿ ಪಸರಿಸಿ (ಆಹಾರಾದಿಗಳನ್ನು) ಮುಂದಕ್ಕೆ ಸಾಗಿಸುವಂಥಾ ಎಡೆ ಯಾವದೋ ಅದನ್ನು ಸ್ರೋತಸ್ಸು ಎಂತ ತಿಳಿಯತಕ್ಕದ್ದು.

ಪರಾ ಹಿಂದಿನ 68ನೇ ಮತ್ತು 69ನೇ ಸಂ ನೋಡು

79. ಸಪ್ತ ಸಿರಾ ಶತಾನಿ ಭವಂತಿ | ಯಾಭಿರಿದಂ ಶರೀರಮಾರಾಮ ಇವ
ಜಲಹಾರಿಣೀಭಿಃ ಕೇದಾರ ಇವ ಚ ಕುಲ್ಯಾಭಿರುಪಸ್ನೇಹ್ಯತೇಽನು
ಸಿರಾನಾಳಗಳ ಸಂಖ್ಯೆ ಮತ್ತು ಕೆಲಸ — ಗೃಹ್ಯತೇ ಚಾಕುಂಚನಪ್ರಸಾರಣಾದಿಭಿರ್ವಿಶೇಷೈಃ | ದ್ರುಮಪತ್ರ
ಸೇವನೀನಾಮಿವ ಚ ತಾಸಾಂ ಪ್ರತಾನಾನಾಸ್ತಾಸಾಂ ನಾಭಿರ್ಮೂಲಂ
ತತಶ್ಚ ಪ್ರಸರಂತ್ಯೂರ್ಧ್ವಮಧಸ್ತಿರ್ಯಕ್ಚ | (ಸು. 345-46.)

ಸಿರಾ ಎಂಬ ನಾಳಗಳು ಒಟ್ಟು 700. ತೋಟವನ್ನು ದೊಡ್ಡ ನೀರು ಹೋಗುವ ದಂಬೆಗಳು ಮತ್ತು ಗದ್ದೆಯನ್ನು ಚಿಕ್ಕ ತೋಡುಗಳು ಹ್ಯಾಗೋ, ಹಾಗೆ ಈ ಶರೀರವನ್ನು ಸಿರಾನಾಳಗಳು, ಚಿರುಟುವ ಅಥವಾ ಮುದುರುವ ಮತ್ತು ಎಸ್ತರಿಸುವ ವಿಶೇಷ ಲಕ್ಷಣಗಳಿಂದ ಕೂಡಿಕೊಂಡು, ಪಸೆ ಮಾಡಿ ಅನುಗ್ರಹಿಸುತ್ತವೆ. ಮರದ ಎಲೆಗಳಲ್ಲಿ ನರಗಳ ಹೊಲಿಗೆಗಳು ಹ್ಯಾಗೋ, ಹಾಗೆ ಸಿರಾನಾಳಗಳು ಹಬ್ಬಿರುತ್ತವೆ. ಅವುಗಳಿಗೆ ಮೂಲ ನಾಭಿ; ಅಲ್ಲಿಂದ ಮೇಲಕ್ಕೂ, ಕೆಳಕ್ಕೂ, ಅಡ್ಡವಾಗಿಯೂ ಪಸರಿಸುತ್ತವೆ.

80. ನಾಭಿಯಲ್ಲಿಯ ಸಿರೆಗಳು — ಸಿರಾಭಿರಾವೃತಾ ನಾಭಿಶ್ಚಕ್ರನಾಭಿರಿವಾರಕೈಃ | (ಸು. 346.)

ಚಕ್ರದ ಅಚ್ಚು ಮರನ್ನು (ಅರಕಗಳು) ಗೂಟಗಳು ಹ್ಯಾಗೋ, ಹಾಗೆ ಹೊಕ್ಕಳನ್ನು ಸಿರೆಗಳು ಸುತ್ತಿರುತ್ತವೆ.

81. ತಾಸಾಂ ಮೂಲಸಿರಾಶ್ಚತ್ವಾರಿಂಶತ್ ತಾಸಾಂ ವಾತವಾಹಿನ್ಯೋ ದಶ
ಪಿತ್ತವಾಹಿನ್ಯೋ ದಶ ಕಫವಾಹಿನ್ಯೋ ದಶ ದಶ ರಕ್ತವಾಹಿನ್ಯಃ |
ಮೂಲ ಸಿರೆಗಳ ಎಧಗಳು ಮತ್ತು ಸಂಖ್ಯೆ — ತಾಸಾಂ ತು ವಾತವಾಹಿನೀನಾಂ ವಾತಸ್ಥಾನಗತಾನಾಂ ಪಂಚಸಪ್ತತಿ
ಶತಂ ಭವತಿ ತಾವತ್ಯ ಏವ ಪಿತ್ತವಾಹಿನ್ಯಃ ಪಿತ್ತಸ್ಥಾನೇ ಕಫವಾಹಿ
ನ್ಯಶ್ಚ ಕಫಸ್ಥಾನೇ ರಕ್ತವಾಹಿನ್ಯಶ್ಚ ಯಕೃತ್ಪ್ಲೀಹ್ನೋರೇವಮೇತಾನಿ
ಸಪ್ತಸಿರಾಶತಾನಿ | (ಸು. 346.)

ಮೂಲಸಿರಾನಾಳಗಳು 40. ಇವುಗಳಲ್ಲಿ ವಾತವಾಹಿಗಳು 10, ಪಿತ್ತವಾಹಿಗಳು 10, ಕಫ ವಾಹಿಗಳು 10, ಮತ್ತು ರಕ್ತವಾಹಿಗಳು 10. ವಾತವಾಹಿಗಳು ವಾತಸ್ಥಾನವನ್ನು ಸೇರಿದ ಮೇಲೆ 175 ಆಗುತ್ತವೆ, ಅಷ್ಟೇ ಪಿತ್ತವಾಹಿಗಳು ಪಿತ್ತಸ್ಥಾನವನ್ನು ಸೇರಿದ ಮೇಲೆ, ಕಫವಾಹಿ ಗಳು ಕಫಸ್ಥಾನವನ್ನು ಸೇರಿದ ಮೇಲೆ, ಮತ್ತು ರಕ್ತವಾಹಿಗಳು ಯಕೃತ್‌ಪ್ಲೀಹಗಳನ್ನು ಸೇರಿದ ಮೇಲೆ ಆಗುತ್ತವೆ, ಹೀಗೆ 700 ಸಿರಾನಾಳಗಳು.

82. ತತ್ರ ವಾತವಾಹಿನ್ಯಃ ಸಿರಾ ಏಕಸ್ಮಿನ್ ಸಕ್ಥ್ನಿ ಪಂಚವಿಂಶತಿಃ | ಏತೇ ನೇತರ ಸಕ್ಥಿ ಬಾಹೂ ಚ ವ್ಯಾಖ್ಯಾತಾ | ವಿಶೇಷತಸ್ತು ಕೋಷ್ಠೇ ಚತುಸ್ತ್ರಿಂಶತ್ ತಾಸಾಂ ಗುದಮೇಢ್ರಾಶ್ರಿತಾಃ ಶ್ರೋಣ್ಯಾಮಷ್ಟೌ ದ್ವೇ ದ್ವೇ ಪಾರ್ಶ್ವಯೋಃ ಷಟ್ ಪೃಷ್ಠೇ ತಾವತ್ಯ ಏವ ಜೋದರೇ ದಶ ವಕ್ಷಸಿ | ಏಕಚತ್ವಾರಿಂಶಜ್ಜತ್ರುಣ ಊರ್ಧ್ವಂ ತಾಸಾಂ ಚತುರ್ದಶ ಗ್ರೀವಾಯಾಂ | ಕರ್ಣಯೋಶ್ಚತಸ್ರಃ | ನವ ಜಿಹ್ವಾಯಾಂ | ಷಟ್ ನಾಸಿಕಾಯಾಂ | ಅಷ್ಟೌ ನೇತ್ರಯೋಃ | ಏವಮೇತತ್ ಪಂಚಸಪ್ತ್ಯಧಿಕ ಶತಂ ವಾತವಹಾನಾಂ ಸಿರಾಣಾಂ ವ್ಯಾಖ್ಯಾತಂ | ಏಷ ಏವ ವಿಭಾಗಃ ಶೇಷಾಣಾಮಪಿ | ವಿಶೇಷತಸ್ತು ಪಿತ್ತವಾಹಿನ್ಯೋ ನೇತ್ರಯೋರ್ದಶ ಕರ್ಣಯೋರ್ದ್ವೇ | ಏವಂ ರಕ್ತವಹಾಃ ಕಫವಹಾಶ್ಚ | (ಸು. 346.)

ಬೇರೆ ಬೇರೆ ಅಂಗವಿಭಾಗಗಳಲ್ಲಿರುವ ಸಿರೆಗಳ ಸಂಖ್ಯೆ

ವಾತವಾಹಿ ಸಿರೆಗಳು ಒಂದೊಂದು ಕಾಲಲ್ಲಿ 25ರಂತೆ ಎರಡು ಕಾಲುಗಳಲ್ಲಿ		50
ಅದೇ ಮೇರೆಗೆ ಎರಡು ಕೈಗಳಲ್ಲಿ . . .		50
ಕೋಷ್ಠದಲ್ಲಿ (ಮುಂಡ)		34
ಸೊಂಟದಲ್ಲಿ ಗುದ ಮತ್ತು ಮೇಢ್ರಗಳನ್ನು ಆಶ್ರಯಿಸಿರುವಂಥವು .	8	
ಎರಡು ಪಕ್ಕಗಳಲ್ಲಿ ಎರಡೆರಡರಂತೆ	4	
ಬೆನ್ನಿನಲ್ಲಿ	6	
ಹೊಟ್ಟೆಯಲ್ಲಿ	6	
ಎದೆಯಲ್ಲಿ	10	
	34	
ಕುತ್ತಿಗೆಸಂದಿನ ಮೇಲೆ		41
ಕೊರಳಲ್ಲಿ	14	
ಕಿವಿಗಳಲ್ಲಿ	4	
ನಾಲಿಗೆಯಲ್ಲಿ	9	
ಮೂಗಿನಲ್ಲಿ	6	
ಕಣ್ಣುಗಳಲ್ಲಿ	8	
	41	
ಅಂತೂ		175

ಪಿತ್ತ, ಕಫ, ರಕ್ತವಾಹಿ ಸಿರಾನಾಳಗಳ ಸಂಖ್ಯಾವಿಭಾಗವು ಇದೇ ಪ್ರಕಾರ. ಆದರೆ ವಿಶೇಷವೇನಂದರೆ ಪಿತ್ತವಾಹಿ ಸಿರೆಗಳು ಕಣ್ಣುಗಳಲ್ಲಿ 10, ಮತ್ತು ಕಿವಿಗಳಲ್ಲಿ 2, ಹೀಗೆಯೇ ರಕ್ತವಾಹಿ ಮತ್ತು ಕಫವಾಹಿಗಳು

83. ಕ್ರಿಯಾಣಾಮಪ್ರತೀಘಾತಮಮೋಹಂ ಬುದ್ಧಿಕರ್ಮಣಾಂ ।
ಸಿರೆಗಳಲ್ಲಿಯ ವಾಯುವಿನ ಕೆಲಸ ಕರೋತ್ಯನ್ಯಾನ್ ಗುಣಾಂಶ್ಚಾಪಿ ಸ್ವಾಃ ಸಿರಾಃ ಪವನಶ್ಚರನ್ ॥
(ಸು. 347.)

ವಾಯುವು ತನ್ನ ಸಿರೆಗಳಲ್ಲಿ ಸಂಚರಿಸಿ ಶರೀರದ ಕೆಲಸಗಳನ್ನು ತಡೆಯಿಲ್ಲದೆ ನಡಿಸೋಣ, ಬುದ್ಧಿಕರ್ಮಗಳನ್ನು ಸ್ವಚ್ಛವಿರಿಸೋಣ ಮತ್ತು ಬೇರೆ ಗುಣಗಳನ್ನು ಮಾಡುತ್ತದೆ.

84. ಭ್ರಾಜಿಷ್ಣುತಾಮನ್ನರುಚಿಮಗ್ನಿದೀಪ್ತಿಮರೋಗತಾಂ ।
ಸಿರೆಗಳಲ್ಲಿಯ ಪಿತ್ತದ ಕೆಲಸ ಸಂಸರ್ಪತ್ ಸ್ವಾಃ ಸಿರಾಃ ಪಿತ್ತಂ ಕುರ್ಯಾಚ್ಚಾನ್ಯಾನ್ಗುಣಾನಪಿ ॥
(ಸು. 347.)

ಪಿತ್ತವು ತನ್ನ ಸಿರೆಗಳಲ್ಲಿ ಹರಿದು, ಶೋಭೆ, ಅನ್ನರುಚಿ, ಅಗ್ನಿಯ ಚುರುಕು, ರೋಗ ಇಲ್ಲದಿರೋಣ, ಇವುಗಳನ್ನು ಮತ್ತು ಬೇರೆ ಗುಣಗಳನ್ನು ಮಾಡುತ್ತದೆ.

85. ಸ್ನೇಹಮುಂಗೇಷು ಸಂಧೀನಾಂ ಸ್ಥೈರ್ಯಂ ಬಲಮುದೀರ್ಣತಾಂ ।
ಸಿರೆಗಳಲ್ಲಯ ಕಫದ ಕೆಲಸ ಕರೋತ್ಯನ್ಯಾನ್ಗುಣಾಂಶ್ಚಾಪಿ ಬಲಾಸಃ ಸ್ವಾಃ ಸಿರಾಶ್ಚರನ್ ॥
(ಸು. 347.)

ಕಫವು ತನ್ನ ಸಿರೆಗಳಲ್ಲಿ ಸಂಚರಿಸಿ, ಅಂಗಗಳಲ್ಲಿ ಪಸೆ, ಸಂದುಗಳ ದಾರ್ಢ್ಯ, ಬಲ, ಪುಷ್ಟಿ, ಇವುಗಳನ್ನು ಮತ್ತು ಬೇರೆ ಗುಣಗಳನ್ನು ಮಾಡುತ್ತದೆ.

86. ಧಾತೂನಾಂ ಪೂರಣಂ ವರ್ಣಂ ಸ್ಪರ್ಶಜ್ಞಾನಮಸಂಶಯಂ ।
ಸಿರೆಗಳಲ್ಲಿಯ ರಕ್ತದ ಕೆಲಸ ಸ್ವಾಃ ಸಿರಾಃ ಸಂಚರದ್ರಕ್ತಂ ಕುರ್ಯಾಚ್ಚಾನ್ಯಾನ್ಗುಣಾನಪಿ ॥
(ಸು. 347.)

ರಕ್ತವು ತನ್ನ ಸಿರೆಗಳಲ್ಲಿ ಸಂಚರಿಸಿ, ಧಾತುಗಳನ್ನು ಪೂರ್ಣ ಮಾಡೋಣ, ವರ್ಣ, ಸ್ಪರ್ಶಜ್ಞಾನ ಇವು ಮತ್ತು ಬೇರೆ ಗುಣಗಳನ್ನು ನಿಶ್ಚಯವಾಗಿ ಮಾಡುತ್ತದೆ.

87. ವಾತ, ಪಿತ್ತ, ಕಫ, ರಕ್ತಗಳ ಸಿರೆಗಳು ಬೇರೆಬೇರೆಯಾಗಿ ರುವದಿಲ್ಲ ನ ಹಿ ವಾತಂ ಸಿರಾಃ ಕಾಶ್ಚಿನ್ನ ಪಿತ್ತಂ ಕೇವಲಂ ತಥಾ ।
ಶ್ಲೇಷ್ಮಾಣಂ ವಾ ವಹಂತ್ಯೇತಾ ಅತಃ ಸರ್ವವಹಾಃ ಸ್ಮೃತಾಃ ॥
(ಸು. 347.)

ಯಾವ ಸಿರಾನಾಳಗಳಾದರೂ ಬರೇ ವಾತವನ್ನು ಅಥವಾ ಬರೇ ಪಿತ್ತವನ್ನು ಅಥವಾ ಬರೇ ಕಫವನ್ನು ಹೊತ್ತಿರುವದಿಲ್ಲ. ಆದ್ದರಿಂದ ಸಿರಾನಾಳಗಳು ಸರ್ವವಾಹಿಗಳೆಂತ ಹೇಳಲ್ಪಟ್ಟವೆ.

ಪ್ರದುಷ್ಟಾನಾಂ ಹಿ ದೋಷಾಣಾಮುಚ್ಚ್ರಿತಾನಾಂ ಪ್ರಧಾವತಾಂ ।
ಧ್ರುವಮುನ್ಮಾರ್ಗಗಮನಮತಃ ಸರ್ವವಹಾಃ ಸ್ಮೃತಾಃ ॥ (ಸು. 347.)

ದೋಷಗಳು ಕೆಟ್ಟು, ಕೂಡಿಕೊಂಡು ಓಡುವಾಗ ಸಿರೆಯೊಳಗಣ ಗತಿಯು ಕ್ರಮ ಬಿಟ್ಟುಹೋಗುವದು ನಿಶ್ಚಯ. ಆದ್ದರಿಂದ ಸಿರೆಗಳು ಸರ್ವವಹಾಗಳೆನ್ನಿಸಿಕೊಂಡವೆ.

88. ಸಿರೆಗಳ ವರ್ಣಾದಿ ಭೇದಗಳು

ತತ್ರಾರುಣಾ ವಾತವಹಾಃ ಪೂರ್ಯಂತೇ ವಾಯುನಾ ಸಿರಾಃ ।
ಪಿತ್ತಾದುಷ್ಣಾಶ್ಚ ನೀಲಾಶ್ಚ ಶೀತಾ ಗೌರ್ಯಃ ಸ್ಥಿರಾಃ ಕಫಾತ್ ॥
ಅಸೃಗ್ವಹಾಸ್ತು ರೋಹಿಣ್ಯಃ ಸಿರಾ ನಾತ್ಯುಷ್ಣಶೀತಲಾಃ । (ಸು. 347.)

ವಾತವಾಹಿ ಸಿರೆಗಳು ಕೆಂಪು ಒತ್ತಿದ ಕಪ್ಪು ವರ್ಣವಾಗಿದ್ದು ವಾಯುವಿನಿಂದ ತುಂಬಿರುತ್ತವೆ. ಸಿರೆಗಳು ಪಿತ್ತದ ದೆಸೆಯಿಂದ ನೀಲವರ್ಣವಾಗಿಯೂ, ಬಿಸಿಯಾಗಿಯೂ, ಇರುವವು, ನುತ್ತು ಕಫದ ದೆಸೆಯಿಂದ ಶೀತವಾಗಿಯೂ, ಬಿಳೇದಾಗಿಯೂ, ಸ್ಥಿರವಾಗಿಯೂ ಇರುವವು. ರಕ್ತವಾಹಿ ಸಿರಗಳು ಅತ್ಯುಷ್ಣತೆಯಾಗಲಿ ಅತಿಶೀತತೆಯಾಗಲಿ ಇಲ್ಲದೆ ಕೆಂಪಾಗಿ ಇರುವವು.

89. ಸಿರೆಗಳು ಸರ್ವಾಂಗ ವ್ಯಾಪಿಗಳು

ವ್ಯಾಪ್ನುವಂತ್ಯಭಿತೋ ದೇಹಂ ನಾಭಿತಃ ಪ್ರಸೃತಾಃ ಸಿರಾಃ ।
ಪ್ರತಾನಾಃ ಪದ್ಮಿನೀಕಂದಾದ್ಬಿಸಾದೀನಾಂ ಯಥಾ ಜಲಂ ॥
(ಸು. 349.)

ತಾವರೆಗಡ್ಡೆಯಿಂದ ಹೊರಟ ಮೃಣಾಲಾದಿಗಳ ಹಂಬುಗಳು ಹ್ಯಾಗೆ ನೀರನ್ನು ವ್ಯಾಪಿಸುತ್ತವೋ, ಹಾಗೆಯೇ ಹೊಕ್ಕುಳಿಂದ ಹೊರಟ ಸಿರೆಗಳು ದೇಹವನ್ನು ಎಲ್ಲಾ ಕಡೆಗಳಲ್ಲಿಯೂ ವ್ಯಾಪಿಸುತ್ತವೆ.

90. ಹೃದಯದ ಹತ್ತು ಮೂಲ ಸಿರೆಗಳು

ದಶ ಮೂಲಸಿರಾ ಹೃತ್ ಸ್ಥಾಸ್ತಾಃ ಸರ್ವಂ ಸರ್ವತೋ ವಪುಃ । ರಸಾ
ತ್ಮಕಂ ವಹಂತ್ಯೋಜಸ್ತನ್ನಿಬದ್ಧಂ ಹಿ ಚೇಷ್ಟಿತಂ ॥ ಸ್ಥೂಲಮೂಲಾಃ
ಸುಸೂಕ್ಷ್ಮಾಗ್ರಾಃ ಪತ್ರರೇಖಾಪ್ರತಾನವತ್ । ಭಿದ್ಯಂತೇ ತಾಸ್ತತಃ
ಸಪ್ತಶತಾನ್ಯಾಸಾಂ ಭವಂತಿ ತು ॥ (ವಾ. 153)

ಮೂಲಸಿರಾನಾಳಗಳು 10. ಇವು ಹೃದಯದಲ್ಲಿದ್ದು ರಸಾತ್ಮಕವಾದ ಓಜಸ್ಸನ್ನು (ರಕ್ತವನ್ನು) ಇಡೀ ಶರೀರಕ್ಕೆ ಸರ್ವಕಡೆಗಳಲ್ಲಿಯೂ ಪ್ರಾಪಿಸುತ್ತವೆ. ಮನುಷ್ಯರ ಚೇಷ್ಟೆಗಳು (ವಾಕ್ಕಾಯಮನೋವ್ಯಾಪಾರಗಳು) ಅದನ್ನು ಹೊಂದಿರುತ್ತವೆ. ಬುಡ ತೋರವಾಗಿಯೂ ಕೊನೆ ಬಹು ಸೂಕ್ಷ್ಮವಾಗಿಯೂ ಎಲೆಯೊಳಗಣ ರೇಖೆಗಳ ಹಬ್ಬಿನಂತೆ, ಭಿನ್ನವಾಗುತ್ತವೆ. ಹಾಗೆ ಅವುಗಳು ಒಟ್ಟು 700 ಆಗುತ್ತವೆ.

91. ಸಿರಾಧಮನಿಗಳ ಸಾಮಾನ್ಯ ಕೆಲಸ

ಸಿರಾಧಮನ್ಯೋ ನಾಭಿಸ್ಥಾಃ ಸರ್ವಂ ವ್ಯಾಪ್ಯ ಸ್ಥಿತಾಸ್ತನುಂ । ಪುಷ್ಣಂತಿ ಚಾನಿಶಂ ವಾಯೋಃ ಸಂಯೋಗಾತ್ಸರ್ವಧಾತುಭಿಃ (ಶಾ.)

ನಾಭಿಯೇ ಮೂಲಸ್ಥಾನವಾಗಿರುವ ಸಿರಾಧಮನಿಗಳು ಇಡೀ ಶರೀರವನ್ನು ವ್ಯಾಪಿಸಿ ನಿಂತು, ವಾಯುವಿನ ಸಹಾಯದಿಂದ ಶರೀರವನ್ನು ಸರ್ವ ಧಾತುಗಳಿಂದ ಪೋಷಿಸುತ್ತವೆ.

ಪರಾ ಮುಂದಿನ ಸಂ 108 ನೋಡು

92. ಬಿಳಿಕಿಯಿಲ್ಲದ ಅಂಗಗಳು (ದೃಷ್ಟಿ ಮತ್ತು ರೋಮಕೂಪ) ದೃಷ್ಟಿಶ್ಚ ರೋಮಕೂಪಾಶ್ಚ ನ ವರ್ಧಂತೇ ಕದಾಚನ | ಧ್ರುವಾಣ್ಯೇತಾನಿ ಮತ್ಯಾ೯ನಾಮಿತಿ ಧನ್ವಂತರೇರ್ಮತಂ || (ಸು. 324.)

ಮನುಷ್ಯರ ದೃಷ್ಟಿಯೂ, ರೋಮಕೂಪಗಳೂ ಯಾವಾಗಲಾದರೂ ವೃದ್ಧಿ ಹೊಂದುವದಿಲ್ಲ, ಇವು ಸ್ಥಿರವಾದವು, ಎಂತ ಧನ್ವಂತರಿಯ ಮತವಾಗಿರುತ್ತದೆ.

93. ನಾಭಿಯ ಸ್ಥಾನ ಪಕ್ವಾಮಾಶಯಯೋರ್ಮಧ್ಯೇ ಸಿರಾಪ್ರಭವಾ ನಾಭಿರ್ನಾಮ | (ಸು. 341.)

ಪಕ್ವಾಶಯಕ್ಕೂ ಆಮಾಶಯಕ್ಕೂ ಮಧ್ಯದಲ್ಲಿ ಇರುವ ಸಿರಾನಾಳಗಳ ಮೂಲವು ನಾಭಿ (ಹೊಕ್ಕುಳು) ಎಂಬ ಹೆಸರಿನದು.

94. ಮರ್ಮಗಳ ಸಾಮಾನ್ಯ ಲಕ್ಷಣ ಮರ್ಮಾಣಿ ನಾಮ ಮಾಂಸಸಿರಾಸ್ನಾಯ್ವಸ್ಥಿಸಂಧಿಸನ್ನಿಪಾತಾಸ್ತೇಷು ಸ್ವಭಾವತ ಏವ ವಿಶೇಷೇಣ ಪ್ರಾಣಾಸ್ತಿಷ್ಠಂತಿ | (ಸು. 338.)

ಮಾಂಸಖಂಡ, ಸಿರಾನಾಳ, ನರ, ಎಲುಬು, ಸಂದು, ಇವು ಒಟ್ಟಾಗಿರುವ ಸ್ಥಾನಗಳು ಮರ್ಮಗಳೆನ್ನಿಸಿಕೊಳ್ಳುತ್ತವೆ. ಅಲ್ಲಿ ಸ್ವಾಭಾವಿಕವಾಗಿಯೇ ಪ್ರಾಣಗಳು ಮುಖ್ಯವಾಗಿ ನಿಂತಿರುತ್ತವೆ.

95. ಮರ್ಮಗಳ ಸಂಖ್ಯೆ ಮತ್ತು ವಿಭಾಗಗಳು ಸಪ್ತೋತ್ತರಂ ಮರ್ಮ ಶತಂ | ತಾನಿ ಮರ್ಮಾಣಿ ಪಂಚಾತ್ಮಕಾನಿ | ತದ್ಯಥಾ | ಮಾಂಸಮರ್ಮಾಣಿ | ಸಿರಾಮರ್ಮಾಣಿ | ಸ್ನಾಯುಮರ್ಮಾಣಿ | ಅಸ್ಥಿಮರ್ಮಾಣಿ | ಸಂಧಿಮರ್ಮಾಣಿ ಚೇತಿ | (ಸು 336.)

ಮರ್ಮಗಳು 107. ಆ ಮರ್ಮಗಳು, ಮುಖ್ಯಾಶ್ರಯ ಭಾಗದ ಮೇಲೆ 5 ವಿಧ. ಹ್ಯಾಗಂದರೆ. ಮಾಂಸಮರ್ಮ, ಸಿರಾನಾಳಮರ್ಮ, ನರಮರ್ಮ, ಎಲುಬು ಮರ್ಮ, ಮತ್ತು ಸಂದು ಮರ್ಮ ಎಂತ.

ತತ್ರೈಕಾದಶ ಮಾಂಸಮರ್ಮಾಣಿ | ಏಕಚತ್ವಾರಿಂಶತ್ ಸಿರಾಮರ್ಮಾಣಿ | ಸಪ್ತವಿಂಶತಿಃ ಸ್ನಾಯುಮರ್ಮಾಣಿ | ಅಷ್ಟಾವಸ್ಥಿಮರ್ಮಾಣಿ | ವಿಂಶತಿಃ ಸಂಧಿಮರ್ಮಾಣಿ | ತದೇತತ್ ಸಪ್ತೋತ್ತರಂ ಮರ್ಮ ಶತಂ | (ಸು. 336.)

ಅವುಗಳೊಳಗೆ ಮಾಂಸಮರ್ಮಗಳು 11, ಸಿರಾಮರ್ಮಗಳು 41, ನರಮರ್ಮಗಳು 27, ಎಲುಬು ಮರ್ಮಗಳು 8, ಸಂದು ಮರ್ಮಗಳು 20, ಹೀಗೆ 107 ಮರ್ಮಗಳ ವಿವರ.

96. ಆಯಾ ಅಂಗ ವಿಭಾಗಗಳಲ್ಲಿ ನರ ಮರ್ಮಗಳ ಸಂಖ್ಯೆಗಳು

ತೇಷಾಮೇಕಾದಶೈಕಸ್ಮಿನ್ ಸಕ್ಥ್ನಿ ಭವಂತಿ | ಏತೇನೇತರ ಸಕ್ಥಿ ಬಾಹೂ ಚ ವ್ಯಾಖ್ಯಾತೌ | ಉದರೋರ ಸೋದ್ವಾದಶ | ಚತುರ್ದಶ ಪೃಷ್ಠೇ ಗ್ರೀವಾಂ ಪ್ರತ್ಯೂರ್ಧ್ವಂ ಸಪ್ತತ್ರಿಂಶತ್ | (ಸು 336.)

ಅವುಗಳಲ್ಲಿ ಒಂದೊಂದು ಕಾಲಲ್ಲಿ 11, ಒಂದೊಂದು ಕೈಯಲ್ಲಿ 11, ಹೊಟ್ಟೆ ಮತ್ತು ಎದೆಯಲ್ಲಿ 12, ಬೆನ್ನಿನಲ್ಲಿ 14, ಕುತ್ತಿಗೆಯ ಮೇಲೆ 37.

97. ಕಾಲುಗಳಲ್ಲಿಯ ಮರ್ಮ ಸ್ಥಳಗಳು

ತತ್ರ ಸಕ್ಥಿಮರ್ಮಾಣಿ ಕ್ಷಿಪ್ರ-ತಲಹೃದಯ-ಕೂರ್ಚ-ಕೂರ್ಚಶಿರೋ-ಗುಲ್ಫೇಂದ್ರವಸ್ತಿ-ಜಾನ್ವಾಣ್ಯೂರ್ವೀ-ಲೋಹಿತಾಕ್ಷಾಣಿ-ವಿಟಪಂ ಚೇತಿ | ಏತೇನೇತರಂ ಸಕ್ಥಿ ವ್ಯಾಖ್ಯಾತಂ | (ಸು 337.)

ಅವುಗಳೊಳಗೆ ಕಾಲು ಮರ್ಮಗಳು ಯಾವವೆಂದರೆ 1 ಕ್ಷಿಪ್ರ (ಉಂಗುಷ್ಠಕ್ಕೂ 1ನೇ ಬೆರಳಿಗೂ ಮಧ್ಯ), 2. ತಲಹೃದಯ (ಮಧ್ಯದ ಬೆರಳಿಗೆ ಸರಿಯಾಗಿ ಪಾದದಡಿ ಮಧ್ಯ), 3. ಕೂರ್ಚ (ಕ್ಷಿಪ್ರದ ಬೆನ್ನಿನಲ್ಲಿ ಇಕ್ಕಡೆ), 4. ಕೂರ್ಚಶಿರಸ್ಸು (ಮಣಿಗಂಟಿನ ಕೆಳಗೆ ಇಕ್ಕಡೆ), 5. ಗುಲ್ಫ, ಅಂದರೆ ಮಣಿಗಂಟು (ಪಾದ ಮತ್ತು ಮೊಣಕಾಲಿನ ಸಂದು), 6. ಇಂದ್ರವಸ್ತಿ, (ಹಿಮ್ಮಡಕ್ಕೆ ಸರಿಯಾಗಿ ಮೊಣಕಾಲಿನ ಮಧ್ಯ), 7 ಜಾನು ಅಂದರೆ ಮೊಣಗಂಟು (ಮೊಣಕಾಲು ಮತ್ತು ತೊಡೆ ಕೂಡುವ ಸಂದು), 8. ಆಣಿ (ಮೊಣಗಂಟಿನ ಮೇಲೆ ಇತ್ತಟ್ಟು ಮೂರು ಅಂಗುಲ), 9. ಊರ್ವೀ (ತೊಡೆ ಮಧ್ಯದಲ್ಲಿ), 10. ಲೋಹಿತಾಕ್ಷ (ಊರ್ವಿ ಮೇಲ್ಗಡೆ ಅಂಡಿನ ಸಂಧಿಗೆ ಕೆಳಗಡೆ ತೊಡೆಯ ಬುಡದಲ್ಲಿ), 11. ವಿಟಪ (ಅಂಡಿಗೂ ಅಂಡಕ್ಕೂ ನಡುವೆ). ಇದೇ ಪ್ರಕಾರ ಇನ್ನೊಂದು ಕಾಲಿನಲ್ಲಿಯೂ ಮರ್ಮಗಳಿವೆ.

98. ಕೈಗಳ ಮರ್ಮಗಳು

ಕಾಲಲ್ಲಿ ಗುಲ್ಫ, ಜಾನು, ವಿಟಪ (5, 7, 11) ಇವುಗಳಲ್ಲಿರುವ ಮರ್ಮಗಳು, ಕೈಯಲ್ಲಿ ಮಣಿಬಂಧ (ಮಣಿಗಂಟು) ಕೂರ್ಪರ (ಮೊಳಕೈಗಂಟು), ಕಕ್ಷಧರ (ಕಂಕುಳಿಗೂ ಎದೆಗೂ ನಡುವೆ) ಇವುಗಳಲ್ಲಿರುವವು, ಉಳಿಕ್ಕ ಕೈ ಮರ್ಮಗಳು ಕಾಲಿನಂತೆಯೇ. ಈ ಪ್ರಕಾರ ಎರಡು ಕೈಗಳಲ್ಲಿ 22 ಮರ್ಮಗಳು·—

(ಬಾಹುಮರ್ಮಾಣಿ ತು ಕ್ಷಿಪ್ರ-ತಲಹೃದಯ-ಕೂರ್ಚ-ಕೂರ್ಚಶಿರೋ-ಮಣಿಬಂಧೇಂದ್ರವಸ್ತಿ-ಕೂರ್ಪರಾಣ್ಯೂರ್ವೀ-ಲೋಹಿತಾಕ್ಷಾಣಿ ಕಕ್ಷಧರಂ ಚೇತಿ |) (ಸು. 337.)

99. ಹೊಟ್ಟೆ ಮತ್ತು ಎದೆಯ ಮರ್ಮಗಳು

ಉದರೋರಸಸ್ತು | ಗುದವಸ್ತಿನಾಭಿಹೃದಯಸ್ತನಮೂಲ ಸ್ತನರೋಹಿತಾಪಲಾಪಾನ್ಯಪಸ್ತಂಭಾ ಚೇತಿ | (ಸು. 337.)

ಹೊಟ್ಟೆ ಮತ್ತು ಎದೆಯಲ್ಲಿರುವ ಮರ್ಮಗಳು ಯಾವವೆಂದರೆ:—1. ಗುದ*, 2. ವಸ್ತಿ*, 3. ನಾಭಿ*, 4. ಹೃದಯ*, 5. ಸ್ತನಮೂಲಗಳೆರಡು (ಮೊಲೆಯ ಕೆಳಗಡೆ ಇತ್ತಟ್ಟು ಎರಡು ಅಂಗುಲದಲ್ಲಿ), 6. ಸ್ತನರೋಹಿತಗಳೆರಡು (ಮೊಲೆಯ ತೊಟ್ಟಿಗೆ ಮೇಲೆ ಇತ್ತಟ್ಟು ಎರಡು ಅಂಗುಲದಲ್ಲಿ), 7. ಅಪಲಾಪಗಳೆರಡು (ಹೆಗಲ ಕೆಳಗೆ ಪಕ್ಕದ ಮೇಲ್ಭಾಗದ ಇತ್ತಟ್ಟು), 8. ಅಪಸ್ತಂಭಗಳೆರಡು (ಎದೆಯ ಇತ್ತಟ್ಟು ವಾತವಾಹಿಯಾದ ನಾಡಿಗಳೆರಡು) (Bronchi), ಹೀಗೆ 12 ಮರ್ಮಗಳು.

ಷರಾ ವಿವರಣದ ಮೂಲವನ್ನು ಬಿಟ್ಟಿದೆ (*ಮೊದಲು ವರ್ಣಿಸಿಯದೆ)

100. ಪೃಷ್ಠಮರ್ಮಾಣಿ ತು ಕಟೀಕತರುಣ ಕುಕುಂದರ ನಿತಂಬ
ಬೆನ್ನಿನ ಮರ್ಮಗಳು ಪಾರ್ಶ್ವ ಸಂಧಿ ಬೃಹತ್ಯಂಸಫಲಕಾನ್ಯಂಸೌ ಚೇತಿ |
(ಸು. 337)

ಬೆನ್ನಿನ ಮರ್ಮಗಳು 1. ಕಟೀಕತರುಣಗಳೆರಡು (ಬೆನ್ನಕೋಲೆಲುಬಿನ ಇತ್ತಟ್ಟು ಸೊಂಟದ ಎಲುಬುಗಳು). 2. ಕುಕುಂದರಗಳೆರಡು (ಬೆನ್ನಕೋಲೆಲುಬಿನ ಇತ್ತಟ್ಟು ಸ್ವಲ್ಪ ಗುಂಡಿಯಾಗಿರುವ ಪ್ರತಿ ತೊಡೆಗೆ ಹಿಂಬದಿ ಭಾಗಗಳು). 3. ನಿತಂಬಗಳೆರಡು (ಪಕ್ಕಗಳ ನಡು ಸ್ಥಳಕ್ಕೆ ಕಟ್ಟಲ್ಪಟ್ಟಿರುವಂಥ ಮತ್ತು ಸೊಂಟದ ಅಡ್ಡೆಲುಬುಗಳೆರಡರ ಮೇಲ್ಗಡೆ ಆಶಯಕ್ಕೆ ಮುಚ್ಚಳಗಳಾಗಿರುವವು). 4. ಪಾರ್ಶ್ವಸಂಧಿಗಳೆರಡು (ತೊಡೆಯ ಹಿಂದಿನ ಪಾರ್ಶ್ವದ ಮಧ್ಯಕ್ಕೆ ಮೇಲೂ ಅಡ್ಡವೂ ಇರುವಂಥಾದ್ದು ಮತ್ತು ಪಾರ್ಶ್ವಗಳ ನಡುವಿಗೆ ಕಟ್ಟಿರುವಂಥಾದ್ದು). 5. ಬೃಹತಿಗಳೆರಡು (ಬೆನ್ನಕೋಲಿಗೆ ಇತ್ತಟ್ಟು ಸ್ತನದ ಬುಡಕ್ಕೆ ನೆಟ್ಟಗಿರುವವು). 6. ಅಂಸಫಲಕಗಳೆರಡು (ಬೆನ್ನಕೋಲಿಗೆ ಇತ್ತಟ್ಟು ಬೆನ್ನಿನಲ್ಲಿ ಕುತ್ತಿಗೆಯ ತ್ರಿಕಕ್ಕೆ ಕಟ್ಟಿರುವಂಥಾದ್ದು). 7. ಅಂಸಗಳೆರಡು (ತೋಳತಲೆಗೂ ಕೊರಳಿಗೂ ಮಧ್ಯ ಅಂಸಪೀಠವನ್ನೂ ತೋಳತಲೆಯನ್ನೂ ಜೋಡಿಸುವಂಥಾದ್ದು), ಹೀಗೆ 14.

ಷರಾ ವಿವರಗಳ ಮೂಲವನ್ನು ಬಿಟ್ಟಿದೆ

101. ಜತ್ರೂರ್ಧ್ವಂ ಮರ್ಮಾಣಿ ಚತಸ್ರೋ ಧಮನ್ಯೋಷ್ಟೌ ಮಾತೃಕಾ
ಕುತ್ತಿಗೆಯ ಮೇಲಿನ ಭಾಗದ ಮರ್ಮಗಳು ದ್ವೇ ಕೃಕಾಟಿಕೇ ದ್ವೇ ವಿಧುರೇ ದ್ವೌ ಫಣೌ ದ್ವಾವಪಾಂಗೌ ದ್ವಾವಾ
ವರ್ತೌ ದ್ವಾವುತ್ಕ್ಷೇಪೌ ದ್ವೌ ಶಂಖಾವೇಕಾ ಸ್ಥಪನೀ ಪಂಚ ಸೀಮಂತಾಶ್ಚ
ತ್ವಾರಿ ಶೃಂಗಾಟಕಾನ್ಯೇಕೋಽಧಿಪತಿರಿತಿ | (ಸು. 337.)

ಹೆಗಲಿಗೆ ಮೇಲಿನ ಮರ್ಮಗಳು. (1) ಧಮನಿಗಳು 4, (ಕುತ್ತಿಗೆ ನಾಳದ ಇತ್ತಟ್ಟು 1 ನೀಲ, 1 ಮನ್ಯಾ, ಹೀಗೆ ನೀಲ 2, ಮನ್ಯಾ 2); (2) ಮಾತೃಕೆಗಳು 8, (ಕೊರಳಿಗೆ ಇತ್ತಟ್ಟು ನಾಲ್ಕರಂತೆ ಇರುವ 2 ಸಿರಾನಾಳಗಳು); (3) ಕೊರಳು ಮತ್ತು ಶಿರಸ್ಸು ಕೂಡುವ ಸಂದಿನಲ್ಲಿ ಕೃಕಾಟಿಕಾ ಎಂಬವು 2; (4) (ಕಿವಿಯ ಹಿಂದಕಡೆಯ ಕೆಳಗೆ ಇರುವ) ವಿಧುರಾ ಎಂಬವು 2; (5) (ಮೂಗಿನ ಮಾರ್ಗದ ಇತ್ತಟ್ಟು ಬಾಯಿಯ ಒಳಗೆ ಕಟ್ಟಿರುವ) ಫಣ ಎಂಬವು 2; (6) ಅಪಾಂಗಗಳೆರಡು (ಹುಬ್ಬುಗಳ ಬಾಲಗಳ ಕೆಳಗೆ ಮತ್ತು ಕಣ್ಣುಗಳ ಹೊರಗೆ ಇರುವವು),

(7) ಆವರ್ತಗಳೆರಡು (ಹುಬ್ಬುಗಳ ಮೇಲ್ಗಡೆ ಕುಣಿಯಲ್ಲಿರುವವು); (8) ಉತ್ಕ್ಷೇಪಗಳೆರಡು (ಶಂಖಗಳ ಮೇಲ್ಗಡೆ ಕೂದಲ ಅಂಚಿನಲ್ಲಿರುವವು); (9) ಶಂಖಗಳೆರಡು (ಕಿವಿಗಳಿಗೂ ಹಣೆಗೂ ಮಧ್ಯ ಹಬ್ಬುಗಳ ಬಾಲದ ಕೊನೆಯ ಮೇಲ್ಗಡೆ ಇರುವವು); (10) ಸ್ಥಪನೀ 1 (ಎರಡು ಹುಬ್ಬುಗಳ ಮಧ್ಯ); (11) ಸೀಮಂತಗಳು 5 (ತಲೆಯಲ್ಲಿಯ ಸಂದುಗಳ ಭಾಗಗಳು); (12) ಶೃಂಗಾಟಕಗಳು 4 (ಮೂಗು, ಕಿವಿ, ಕಣ್ಣು, ನಾಲಿಗೆ, ಇವುಗಳನ್ನು ತೃಪ್ತಿಗೊಳಿಸುವ ಸಿರಾನಾಳಗಳ ಮಧ್ಯ ಸಿರೆಗಳ ಕೂಡಿಕೆಯ ಸ್ಥಳಗಳು), (13) ಅಧಿಪತಿ 1 (ಮಸ್ತಕ ಅಥವಾ ನೆತ್ತಿಯ ಒಳಗೂ ಹೊರಗೂ ಸಿರಾನಾಳಗಳು ಮತ್ತು ಸಂದುಗಳು ಕೂಡುವ ರೋಮದ ಸುಳಿ), ಹೀಗೆ ಕುತ್ತಿಗೆಯ ಮೇಲ್ಗಡೆಗೆ ಇರುವ 37 ಮರ್ಮಗಳು.

102. ತತ್ರ ತಲಹೃದಯೇಂದ್ರವಸ್ತಿ - ಗುದ-ಸ್ತನರೋಹಿತಾನಿ ಮಾಂಸ ಮರ್ಮಾಣಿ | ನೀಲ-ಧಮನೀ - ಮಾತೃಕಾ - ಶೃಂಗಾಟಕಾಪಾಂಗ - ಸ್ಥಪನೀ-ಫಣ-ಸ್ತನಮೂಲಾಪಲಾಪಾಪಸ್ತಂಭ-ಹೃದಯ-ನಾಭಿ-ಪಾರ್ಶ್ವ ಸಂಧಿ-ಬೃಹತೀಲೋಹಿತಾಕ್ಷೋರ್ವ್ಯಃ ಸಿರಾಮರ್ಮಾಣಿ | ಆಣಿ-ಏಟಪ-ಕಕ್ಷಧರ-ಕೂರ್ಚ-ಕೂರ್ಚಶಿರೋ-ವಸ್ತಿ-ಕ್ಷಿಪ್ರಾಂಸ-ವಿಧುರೋತ್ಕ್ಷೇಪಾಃ ಸ್ನಾಯುಮರ್ಮಾಣಿ | ಕಟೀಕತರುಣ-ನಿತಂಬಾಂಸಫಲಕ-ಶಂಖಾಸ್ಥ್ಯಸ್ಥಿ ಮರ್ಮಾಣಿ | ಜಾನು - ಕೂರ್ಪರ - ಸೀಮಾಂತಾಧಿಪತಿ - ಗುಲ್ಫ - ಮಣಿಬಂಧ - ಕುಕುಂದರಾವರ್ತ - ಕೃಕಾಟಿಕಾಶ್ಚೇತಿ ಸಂಧಿಮರ್ಮಾಣಿ | (ಸು. 337.)

ಉಕ್ತ ಮರ್ಮಗಳು ಯಾವ ಯಾವ ಜಾತಿಯವೆಂಬದು

ಅವುಗಳಲ್ಲಿ ತಲಹೃದಯ, ಇಂದ್ರವಸ್ತಿ, ಗುದ, ಸ್ತನರೋಹಿತ, ಎಂಬವು ಮಾಂಸಮರ್ಮಗಳು, ನೀಲ, ಧಮನೀ, ಮಾತೃಕಾ, ಶೃಂಗಾಟಕಾ, ಅಪಾಂಗ, ಸ್ಥಪನೀ, ಫಣ, ಸ್ತನಮೂಲ, ಅಪಲಾಪ, ಅಪಸ್ತಂಭ, ಹೃದಯ, ನಾಭಿ, ಪಾರ್ಶ್ವಸಂಧಿ, ಬೃಹತೀ, ಲೋಹಿತಾಕ್ಷ, ಉರ್ವಿ, ಎಂಬವು ಸಿರಾಮರ್ಮಗಳು, ಆಣಿ, ಏಟಪ, ಕಕ್ಷಧರ, ಕೂರ್ಚ, ಕೂರ್ಚಶಿರಸ್ಸು, ವಸ್ತಿ, ಕ್ಷಿಪ್ರ, ಅಂಸ, ವಿಧುರ, ಉತ್ಕ್ಷೇಪ, ಎಂಬವು ನರಗಳ (ಸ್ನಾಯು) ಮರ್ಮಗಳು, ಕಟೀಕತರುಣ, ನಿತಂಬ, ಅಂಸಫಲಕ, ಶಂಖ, ಎಂಬವು ಅಸ್ಥಿ (ಎಲುಬಿನ) ಮರ್ಮಗಳು, ಜಾನು, ಕೂರ್ಪರ, ಸೀಮಂತ, ಅಧಿಪತಿ, ಗುಲ್ಫ, ಮಣಿಬಂಧ, ಕುಕುಂದರ, ಆವರ್ತ, ಕೃಕಾಟಿಕಾ, ಎಂಬವು ಸಂಧಿ (ಸಂದು) ಮರ್ಮಗಳು ಆಗಿರುತ್ತವೆ.

103. ತಾನ್ಯೇತಾನಿ ಪಂಚ ವಿಕಲ್ಪಾನಿ ಮರ್ಮಾಣಿ ಭವಂತಿ | ತದ್ಯಥಾ | ಸದ್ಯಃ ಪ್ರಾಣಹರಾಣಿ ಕಾಲಾಂತರಪ್ರಾಣಹರಾಣಿ ವಿಶಲ್ಯಘ್ನಾನಿ ವೈಕಲ್ಯಕರಾಣಿ ರುಜಾಕರಾಣೀತಿ | ತತ್ರ ಸದ್ಯಃ ಪ್ರಾಣಹರಾಣ್ಯೇಕೋನ ವಿಂಶತಿಃ | ಕಾಲಾಂತರಪ್ರಾಣಹರಾಣಿ ತ್ರಯಸ್ತ್ರಿಂಶತ್ | ತ್ರೀಣಿ ವಿಶಲ್ಯಘ್ನಾನಿ | ಚತುಶ್ಚತ್ವಾರಿಂಶದ್ವೈಕಲ್ಯಕರಾಣಿ | ಅಷ್ಟೌ ರುಜಾಕರಾಣೀತಿ | (ಸು. 337-38.)

ಪ್ರಭಾವದ ಮೇಲೆ ಮರ್ಮಗಳೊಳಗೆ ಐದು ವಿಧ

ಈ ಮರ್ಮಗಳಲ್ಲಿ ಐದು ರೂಪಾಂತರಗಳಿವೆ, ಹ್ಯಾಗಂದರೆ: (1) ಸದ್ಯದಲ್ಲಿ ಪ್ರಾಣ ತೆಗೆಯುವಂಥವು. (2) ಕಾಲಾಂತರದಲ್ಲಿ ಪ್ರಾಣ ತೆಗೆಯುವಂಥವು. (3) ತಗಲಿದ ಶಲ್ಯ ವನ್ನು (ಬಾಣ, ಮೊಳೆ ಇತ್ಯಾದಿ) ತೆಗೆದುಬಿಟ್ಟ ಕೂಡಲೇ ಕೊಲ್ಲುವಂಥವು. (4) ಅಂಗ ವೈರೂಪ್ಯವನ್ನುಂಟುಮಾಡುವಂಥವು. (5) ರೋಗವನ್ನುಂಟುಮಾಡುವಂಥವು. ಹೀಗಿರು ವಂಥವುಗಳಲ್ಲಿ ಸದ್ಯಃ ಕೊಲ್ಲುವಂಥವು 19, ಕಾಲಾಂತರದಿಂದ ಕೊಲ್ಲುವವು 33, ಶಲ್ಯ ತೆಗೆ ದೊಡನೆ ಕೊಲ್ಲುವಂಥವು 3, ಅಂಗವೈರೂಪ್ಯ ಮಾಡುವಂಥವು 44, ರೋಗ ಉಂಟುಮಾಡು ವವು 8 ಆಗಿರುತ್ತವೆ.

104. ಸದ್ಯಃ ಪ್ರಾಣ ಹರ ಮರ್ಮ ಗಳು

ಶೃಂಗಾಟಕಾನ್ಯಧಿಪತಿಃ ಶಂಖೌ ಕಂಠಶಿರೋ ಗುದಂ ।
ಹೃದಯಂ ವಸ್ತಿನಾಭೀ ಚ ಘ್ನಂತಿ ಸದ್ಯೋ ಹತಾನಿ ತು ॥
(ಸು. 338.)

(4) ಶೃಂಗಾಟಕ, (1) ಅಧಿಪತಿ, (2) ಶಂಖ, (8) ಮಾತೃಕೆ, (1) ಗುದ, (1) ಹೃದಯ, (1) ವಸ್ತಿ, (1) ನಾಭಿ, ಈ (19) ಮರ್ಮಗಳು ಗಾಯಪಟ್ಟರೆ ಸದ್ಯದಲ್ಲಿ ಮರಣವು ಸಂಭವಿಸುತ್ತದೆ.

ಶಿರಸಿ ಅಭಿಹತೇ ಮನ್ಯಾಸ್ತಂಭಾರ್ದಿತ-ಚಕ್ಷುರ್ವಿಭ್ರಮ-ಮೋಹವೇಷ್ಟನ
ಚೇಷ್ಟಾನಾಶ-ಕಾಸ-ಶ್ವಾಸ-ಹನುಗ್ರಹ-ಮೂಕಗದ್ಗದತ್ವಾಕ್ಷಿನಿಮಿಲನ
ಗಂಡಸ್ಯಂದನ-ಜೃಂಭಣ-ಲಾಲಾಸ್ರಾವ-ಸ್ವರಹಾನಿ-ವದನಜಿಹ್ಮತ್ವಾದೀನಿ ।
(ಚ 904.)

ತಲೆಗೆ ಪೆಟ್ಟು ತಗಲಿದರೆ, ಮನ್ಯಾಸ್ತಂಭ (ಕೊರಳಿನ ಹಿಂಭಾಗ ಹಿಡಕೊಳ್ಳುವದು), ಆರ್ದಿತ (ಮುಖಾರ್ಧದ ವಾತ), ಕಣ್ಣು ತಿರುಗಿಸುವಿಕೆ, ಕಣ್ಣು ಕತ್ತಲೆ, ಅಂಗಚಲನನಾಶ, ಕೆಮ್ಮು, ಉಬ್ಬಸ, ದವಡೆಹಿಡಕೊಳ್ಳುವಿಕೆ, ಮೂಕತನ, ಗದ್ಗದ ಮಾತು, ಕಣ್ಣುಮುಚ್ಚಿ ಹೋಗುವದು, ಗಂಡಸ್ಥಳದಲ್ಲಿ ನೀರಿಳಿಯುವದು, ಬಾಯಿ ಕಳೆಯುವದು (ಆಕಳಿಕೆ), ಜೊಲ್ಲು ಸುರಿಯುವದು, ಸ್ವರ ನಿಂತುಹೋಗುವದು, ಮುಖ ಮತ್ತು ನಾಲಿಗೆ ಓರೆಯಾಗುವದು, ಇತ್ಯಾದಿ ಲಕ್ಷಣಗಳು ಉಂಟಾಗುವವು.

105. ಕಾಲಾಂತರ ಪ್ರಾಣಹರ

ವಕ್ಷ್ಯೋಮರ್ಮಾಣಿ ಸೀಮಂತ-ತಲ-ಕ್ಷಿಪ್ರೇಂದ್ರವಸ್ತಯಃ ।
ಕಟೀಕತರುಣೀ ಸಂಧೀ ಪಾರ್ಶ್ವಜೌ ಬೃಹತೀ ಚ ಯಾ ॥
ನಿತಂಬಾವಿತಿ ಚೈತಾನಿ ಕಾಲಾಂತರಹರಾಣಿ ತು । (ಸು. 338.)

ಎದೆಯ ಮರ್ಮಗಳು (8), ಸೀಮಂತ (5), ತಲ (4), ಕ್ಷಿಪ್ರ (4), ಇಂದ್ರವಸ್ತಿ (4), ಕಟೀಕತರುಣ (2), ಪಾರ್ಶ್ವಸಂಧಿ (2), ಬೃಹತೀ (2), ನಿತಂಬ (2), ಎಂಬ ಮರ್ಮಗಳು (33) ಕಾಲಾಂತರದಿಂದ ಮರಣವನ್ನು ಪ್ರಾಪಿಸುವವು.

ಪರಾ ಎದೆಯ ಮರ್ಮಗಳು 99ನೇ ಸಂಖ್ಯೆಯ 5, 6, 7 ಮತ್ತು 8

106. ಎಶಲ್ಯಘ್ನ

ಉತ್ಕ್ಷೇಪೌ ಸ್ಥಪನೀ ಚೈವ ವಿಶಲ್ಯಘ್ನಾನಿ ನಿರ್ದಿಶೇತ್ । (ಸು. 338.)

ಉತ್ಕ್ಷೇಪಗಳೆಂಬವು 2, ಸ್ಥಪನೀ 1, ಈ ಮೂರು ಮರ್ಮಗಳಿಗೆ ಹೊಕ್ಕ ಶಲ್ಯವನ್ನು ತೆಗೆದೊಡನೆ ಮರಣಪ್ರಾಪ್ತವಾಗುವದಾಗಿ ತಿಳಿಯತಕ್ಕದ್ದು.

107. ಲೋಹಿತಾಕ್ಷಾಣಿ ಜಾನೂರ್ವೀ ಕೂರ್ಚಾ ಏಟಪ ಕೂರ್ಪರಾಃ |
ಕುಕುಂದರೇ ಕಕ್ಷಧರೇ ವಿಧುರೇ ಸಕೃಕಾಟಿಕೇ ||

ವೈಕಲ್ಯಕರ ಅಂಸಾಂಸಫಲಕಾಪಾಂಗಾ ನೀಲೇ ಮನ್ಯೇ ಫಣೌ ತಥಾ |
ವೈಕಲ್ಯಕರಣಾನ್ಯಾಹುರಾವರ್ತೌ ದ್ವೌ ತಥೈವ ಚ || (ಸು. 358.)

ಲೋಹಿತಾಕ್ಷ (4), ಆಣಿ (4), ಜಾನು (2), ಊರ್ವೀ (4), ಕೂರ್ಚ (4), ಏಟಪ (2), ಕೂರ್ಪರ (2), ಕುಕುಂದರ (2), ಕಕ್ಷಧರ (2), ವಿಧುರ (2), ಕೃಕಾಟಿಕಾ (2), ಅಂಸ (2), ಅಂಸಫಲಕ (2), ಅಪಾಂಗ (2), ನೀಲ (2), ಮನ್ಯ (2), ಫಣ (2), ಆವರ್ತ (2), ಈ ಹೆಸರಿನ ಮರ್ಮಗಳು (44) ಅಂಗವೈರೂಪ್ಯ ಉಂಟುಮಾಡುವಂಥವು.

108. ರೋಗಕಾರಕ ಮರ್ಮಗಳು ಗುಲ್ಫೌದ್ವೌ ಮಣಿಬಂಧೌ ದ್ವೌ ದ್ವೇ ದ್ವೇ ಕೂರ್ಚಶಿರಾಂಸಿ ಚ |
ರುಜಾಕರಾಣಿ ಜಾನೀಯಾದಷ್ಟಾವೇತಾನಿ ಬುದ್ಧಿಮಾನ್ ||
(ಸು. 338.)

ಗುಲ್ಫಗಳೆರಡು, ಮಣಿಬಂಧಗಳೆರಡು, ಹಸ್ತಪಾದಗಳಲ್ಲಿರುವ ಕೂರ್ಚಶಿರಸ್ಸುಗಳು ನಾಲ್ಕು, ಹೀಗೆ 8 ಮರ್ಮಗಳು ರೋಗವನ್ನುಂಟುಮಾಡತಕ್ಕವು.

ಕ್ಷಿಪ್ರಾಣಿ ವಿದ್ಧಮಾತ್ರಾಣಿ ಘ್ನಂತಿ ಕಾಲಾಂತರೇಣ ಚ | (ಸು 338)

ಚುಚ್ಚಿದ ಮಾತ್ರದಿಂದ ಕ್ಷಿಪ್ರಗಳು ಸಹ ಕಾಲಾಂತರದಿಂದ ಕೊಲ್ಲುತ್ತವೆ.

109. ಚತುರ್ವಿಧಾ ಯಾಸ್ತು ಸಿರಾಃ ಶರೀರೇ ಪ್ರಾಯೇಣ ತಾ ಮರ್ಮಸು ಸನ್ನಿವಿಷ್ಟಾಃ | ಸ್ನಾಯ್ವಸ್ಥಿಮಾಂಸಾನಿ ತಥೈವ ಸಂಧೀನ್ ಸಂತರ್ಪ್ಯ ದೇಹಂ ಪ್ರತಿಪಾಲಯಂತಿ || (ಸು. 339.)

ಶರೀರದಲ್ಲಿ ವಾತಾದಿ ನಾಲ್ಕು ವಿಧವಾಗಿ ಇರುವ ಸಿರಾನಾಳಗಳು ಹೆಚ್ಚಾಗಿ ಮರ್ಮಗಳಲ್ಲಿ ಕೂಡಿರುತ್ತವೆ. ಅವು, ನರ, ಎಲುಬು, ಮಾಂಸಖಂಡ, ಮತ್ತು ಸಂದುಗಳನ್ನು ತೃಪ್ತಿಪಡಿಸಿ, ದೇಹವನ್ನು ಕಾಪಾಡುತ್ತವೆ.

110. ತತ್ರ ಸದ್ಯಃ ಪ್ರಾಣಹರಮಂತೇ ವಿದ್ಧಂ ಕಾಲಾಂತರೇಣ ಮಾರಯತಿ |
ಮರ್ಮಗಳ ಸಮಾಪದ ಹುಚ್ಚಿದರ ಫಲಗಳು ಕಾಲಾಂತರಪ್ರಾಣಹರಮಂತೇ ವಿದ್ಧಂ ವೈಕಲ್ಯಮಾಪಾದಯತಿ |
ವಿಶಲ್ಯಪ್ರಾಣಹರಮಂತೇ ವಿದ್ಧಂ ಕಾಲಾಂತರೇಣ ಕ್ಲೇಶಯತಿ ರು
ಜಾಂ ಚ ಕರೋತಿ | ರುಜಾಕರಮತೀವ್ರವೇದನಂ ಭವತಿ | (ಸು. 340.)

ಸದ್ಯಃ ಪ್ರಾಣಹರವಾದ ಮರ್ಮದ ಸಮೀಪದಲ್ಲಿ ಚುಚ್ಚಿದರೆ, ಕಾಲಾಂತರದಿಂದ ಮರಣವು ಸಂಭವಿಸುತ್ತದೆ. ಕಾಲಾಂತರದಿಂದ ಪ್ರಾಣ ತೆಗೆಯತಕ್ಕ ಮರ್ಮದ ಸಮೀಪ ಚುಚ್ಚಿದರೆ ಅಂಗವೈರೂಪ್ಯ ಉಂಟಾಗುವದು. ಶಲ್ಯ ತೆಗೆದೊಡನೆ ಪ್ರಾಣ ತೆಗೆಯತಕ್ಕ ಮರ್ಮದ ಸಮೀಪದಲ್ಲಿ ಚುಚ್ಚಿದರೆ ಕಾಲಾಂತರದಿಂದ ನೋವು ಮತ್ತು ರೋಗವುಂಟಾಗುವವು. ರೋಗ ಉಂಟುಮಾಡತಕ್ಕದ್ದು ಮಂದವಾದ ನೋವು ಆಗುತ್ತದೆ.

ಷರಾ 3ನೇ 4ನೇ ವಾಕ್ಯಗಳ ಪಾಠಾಂತರವಿರುತ್ತದೆ ಆದರ ಪ್ರಕಾರ ವಿಶಲ್ಯ ಪ್ರಾಣಹರದ ಅಂತವೇಧದಿಂದ ವೈಕಲ್ಯವು, ಮತ್ತು ವೈಕಲ್ಯಕರದ ಅಂತವೇಧವಿಂದ ನೋವು ಮತ್ತು ರೋಗ, ಮತ್ತು ರುಜಾಕರದ ಅಂತವೇಧವಿಂದ ತೀವ್ರವಲ್ಲದ ನೋವು ಉಂಟಾಗುತ್ತದೆಂತ ಅರ್ಥವಾಗುತ್ತದೆ

111. ತತ್ರ ಸದ್ಯಃಪ್ರಾಣಹರಾಣಿ ಸಪ್ತರಾತ್ರಾಭ್ಯಂತರಾನ್ಮಾರಯಂತಿ । ಕಾಲಾಂತರಪ್ರಾಣಹರಾಣಿ ಸಕ್ಷ್ಣಾನ್ಮಾಸಾದ್ವಾ । ತೇಷ್ವಪಿ ತು ಕ್ಷಿಪ್ರಾಣಿ ಕದಾಚಿದಾಶು ಮಾರಯಂತಿ । ವಿಶಲ್ಯಪ್ರಾಣಹರಾಣಿ ವೈಕಲ್ಯಕರಾಣಿ ಚ ಕದಾಚಿದತ್ಯಭಿಹತಾನಿ ಮಾರಯಂತಿ । (ಸು. 340)

ಮರ್ಮಭೇದ ಫಲಿಸುವ ವಿಧಾನಗಳು

ಸದ್ಯದಲ್ಲಿ ಪ್ರಾಣಹರವಾದ ಮರ್ಮಗಳು ಏಳು ರಾತ್ರಿಗಳೊಳಗೆ ಕೊಲ್ಲುತ್ತವೆ; ಕಾಲಾಂತರ ಪ್ರಾಣಹರಗಳು ಒಂದು ಪಕ್ಷ ಅಥವಾ ಮಾಸದಲ್ಲಿ, ಅವುಗಳಲ್ಲಿ ಕ್ಷಿಪ್ರ ಎಂಬ ಮರ್ಮಗಳು ಒಂದಾನೊಂದು ವೇಳೆ ಬೇಗನೇ ಮರಣವನ್ನು ಪ್ರಾಪಿಸುತ್ತವೆ. ವಿಶಲ್ಯಪ್ರಾಣಹರಗಳು ಮತ್ತು ವೈಕಲ್ಯಕರಗಳು ಒಂದೊಂದು ಸಾರಿ, ಅತಿಯಾಗಿ ಗಾಯಪಟ್ಟರೆ, ಮರಣವನ್ನು ಉಂಟುಮಾಡುತ್ತವೆ.

112. ತ್ವಕ್ಪರ್ಯಂತಸ್ಯ ದೇಹಸ್ಯ ಯೋಽಯಮಂಗವಿನಿಶ್ಚಯಃ । ಶಲ್ಯಜ್ಞಾನಾದೃತೇ ನೈಷ ವರ್ಣ್ಯತೇಽಂಗೇಷು ಕೇಷುಚಿತ್ ॥ ತಸ್ಮಾನ್ನಿಸ್ಸಂಶಯಂ ಜ್ಞಾನಂ ಹರ್ತ್ರಾ ಶಲ್ಯಸ್ಯ ವಾಂಛತಾ । ಶೋಧಯಿತ್ವಾ ಮೃತಂ ಸಮ್ಯಗ್‌ದೃಷ್ಟ್ವೋಽಂಗವಿನಿಶ್ಚಯಃ । ಪ್ರತ್ಯಕ್ಷತೋ ಹಿ ಯದ್ದೃಷ್ಟಂ ಶಾಸ್ತ್ರದೃಷ್ಟಂ ಚ ಯದ್ಭವೇತ್ । ಸಮಾಸತಸ್ತದುಭಯಂ ಭೂಯೋ ಜ್ಞಾನವಿವರ್ಧನಂ ॥ (ಸು. 335.)

ಮೃತಶೋಧನೆಯ ಆವಶ್ಯಕತೆ

ದೇಹದ ಚರ್ಮ ಪರ್ಯಂತವಾದ ಅಂಗಗಳ ನಿಶ್ಚಯವು ಯಾವ ಭಾಗಗಳಲ್ಲಿಯಾದರೂ ಶಸ್ತ್ರಜ್ಞಾನದಿಂದಲ್ಲದೆ ವರ್ಣಿಸಲ್ಪಡುವದಿಲ್ಲ. ಆದ್ದರಿಂದ ಶಸ್ತ್ರಹಿಡಿಯುವಂಧವನು ನಿಃಸಂಶಯವಾದ ಜ್ಞಾನವನ್ನು ಪಡೆಯುವದಕ್ಕೋಸ್ಕರ ಮೃತನ ಶವವನ್ನು ಚನ್ನಾಗಿ ಶೋಧಿಸಿ ಅಂಗದ ನಿಜಸ್ಥಿತಿಯನ್ನು ನೋಡಬೇಕು. ಹಾಗೆ ಪ್ರತ್ಯಕ್ಷವಾಗಿ ನೋಡಿದ್ದು ಮತ್ತು ಶಾಸ್ತ್ರದಿಂದ ಕಂಡದ್ದು ಸಹ ಎರಡೂ ಒಟ್ಟು ಕೂಡಿದರೆ, ಮತ್ತಷ್ಟು ಜ್ಞಾನವೃದ್ಧಿಯಾಗುತ್ತದೆ.

ಷರಾ ಕೋಷ್ಠದ ಅಂಗಗಳು 15 ಎಂತ ಚರಕಸಂಹಿತೆಯಲ್ಲಿ ಹೇಳಲ್ಪಟ್ಟಿದೆ ಅವುಗಳ ಹೆಸರು

ಚರಕನ ಪ್ರಕಾರ ಅಂಗ ವಿಭಾಗ 1 ನಾಭಿ, 2 ಹೃದಯ, 3 ಕ್ಲೋಮ, 4 ಯಕೃತ್, 5 ಪ್ಲೀಹ, 6 ವೃಕ್ಕುಗಳೆರಡು, 7 ವಸ್ತಿ, 8 ಪುರೀಷಾಧಾರ, 9 ಆಮಾಶಯ, 10 ಪಕ್ವಾಶಯ, 11 ಉತ್ತರ ಗುದ, 12 ಅಧರ ಗುದ, 13 ಕ್ಷುದ್ರಾಂತ್ರ, 14 ಸ್ಥೂಲಾಂತ್ರ, 15 ವಪಾವಹನ (ಚ 352)

ಚರ್ಮ, ರಕ್ತ, ಮಾಂಸ, ಮೇದಸ್ಸು, ನಾಭಿ, ಹೃದಯ, ಕ್ಲೋಮ, ಯಕೃತ್, ಪ್ಲೀಹ, 2 ವೃಕ್ಕಗಳು, ವಸ್ತಿ, ಮಲಾಧಾನ, ಆಮಾಶಯ, ಪಕ್ವಾಶಯ, ಉತ್ತರ ಗುದ, ಕೆಳಗಿನ ಗುದ, ಸಣ್ಣ ಕರುಳು, ದೊಡ್ಡ ಕರುಳು, ವಪೆ, ವಪಾವಹನ, ಇವು ಇಪ್ಪತ್ತು ತಾಯಿಯ ಸಂಬಂಧದಿಂದ ಹುಟ್ಟುವಂಥವುಗಳಾಗಿ ವರ್ಣಿಸಲ್ಪಟ್ಟವೆ (ಚ 326)

ಚರಕನ 2 ಪಟ್ಟಿಗಳಲ್ಲಿಯೂ ಫುಫ್ಫುಸವು ಕಾಣುವದಿಲ್ಲ ಮತ್ತು ಸುಶ್ರುತನ ಅಂಗಗಳ ಪಟ್ಟಿಯಲ್ಲಿ ಕ್ಲೋಮ ಕಾಣುವದಿಲ್ಲ (4ನೇ ಸಂ ನೋಡು)

ಈ ಕೆಳಗಣ ವಿವರಣದಲ್ಲಿ ಎರಡೂ ಪ್ರತ್ಯೇಕವಾಗಿ ಕಾಣಿಸಲ್ಪಟ್ಟಿವೆ

ಹೃದಯಾದ್ವಾಮತೋ೨ಧಶ್ಚ ಫುಫ್ಫುಸೋ ರಕ್ತಫೇನಜಃ | ಅಧಸ್ತು
ದಕ್ಷಿಣೇ ಭಾಗೇ ಹೃದಯಾತ್ಕ್ಲೋಮ ತಿಷ್ಠತಿ || ಜಲವಾಹಿಸಿರಾ
ಮೂಲಂ ತೃಷ್ಣಾಚ್ಛಾದನಕೃನ್ನತಂ (ಭಾ ಪ್ರ 14)

ಈ ಸಂದೇಹದ ಮತ್ತು ವೃಕ್ಕ, ಉಂಡುಕಗಳನ್ನು ಕುರಿತು ಕಾಣುವ ಸಂದೇಹದ ನಿವೃತ್ತಿಗೆ 4ನೇ ಸಂಖ್ಯೆಯ ಅಡಿಯ ಷಡಾ ನೋಡು

'ವಪಾವಹನ' ಎಂಬದು ಚರಕನ ಎರಡು ಪಟ್ಟಿಗಳಲ್ಲಿಯೂ ಕಾಣುತ್ತದೆ ಸುಶ್ರುತನ ಅಂಗಗಳ ಪಟ್ಟಿಯಲ್ಲಿ ಅದು ಇಲ್ಲ 'ಮೇದಸ್ತುವಪಾವಪಾ' ಎಂತ ಅಮರವು ಹೇಳುತ್ತದಾದ್ದರಿಂದ ಮೇದಸ್ಸೆಂದರೂ ವಪೆಯೆಂದರೂ ಒಂದೇ ಎಂಬ ಅರ್ಥವನ್ನಾಧರಿಸಿ, ಇತ್ತಲಾಗಿನ ನಿಘಂಟುಕಾರರು 'ವಪಾ' ಎಂದರೆ ಮೇದಃ ಎಂತ ಅರ್ಥ ಬರವಿದ್ದಾರಾಗಿ ಕಾಣುತ್ತದೆ ಆದರೆ 48ನೇ ಸಂಖ್ಯೆಯಲ್ಲಿ ಮೇದಃ, ವಸಾ, ಮಜ್ಜಾ ಎಂಬವು ಬೇರೆ ಬೇರೆ ಚರಪಿಗಳಾಗಿ ವರ್ಣಿಸಲ್ಪಟ್ಟವೆ ಅದಲ್ಲದೆ ಚರಕನ 2ನೇ ಪಟ್ಟಿಯಲ್ಲಿಯೇ 'ಮೇದಃ' ಪ್ರತ್ಯೇಕವಾಗಿ ಕಾಣುತ್ತದೆ ಶಬ್ದಕಲ್ಪದ್ರುಮದಲ್ಲಿ ಚರಕನ 2ನೇ ಪಟ್ಟಿಯನ್ನೆತ್ತಿ ಬರೆದು, 'ವಪಾ' ಎಂಬದು ಹೃದಯದಲ್ಲರುವ ಧಾತು ಎಂತ ಅರ್ಥ ಹೇಳಲ್ಪಟ್ಟಿದೆ ಇದಕ್ಕೆ ಆಧಾರ ಕಾಣಲಿಲ್ಲ ಮೇಲಿನ ಅಮರನ ವಾಕ್ಯಕ್ಕೆ ಕನ್ನಡದಲ್ಲಿ ಅರ್ಥ ಬರೆದ ಒಂದು ಟೀಕೆಯಲ್ಲಿ 'ವಪೆ' ಎಂಬದು "ಹೊಕ್ಕುಳ ಕೆಳಗಡೆ ಬಟ್ಟಿಯೋಪಾದಿಯಾಗಿರುವ ಪೊರೆಯ ಮಾಂಸದ ಪೆಸರು" ಎಂತ ವಿವರಿಸಲ್ಪಟ್ಟಿರುತ್ತದೆ ಚರಕನ 2 ಪಟ್ಟಿಗಳಲ್ಲಿಯೂ ವಪೆಯು ಸ್ಥೂಲಾಂತ್ರದನಂತರ ಉಕ್ತವಾಗಿದೆ ಹೃದಯ ಮತ್ತು ಶ್ವಾಸಕೋಶಗಳು ನಿಂತಿರುವ ಮೇಲಿನ ಅಂತಸ್ಸವಾದ ಎದೆಗೂ, ಆಮಾಶಯ ಯಕೃತ್-ಪ್ಲೀಹಾದಿಗಳು ನಿಂತಿರುವ ಹೊಟ್ಟೆಯುಂಬ ಕೆಳಗಿನ ಅಂತಸ್ಥಕ್ಕೂ ಮಧ್ಯ ಹಾಸಿರುವ ಮಾಂಸಾದಿಗಳ ಹಾಳೆ ಹಾಗಿನ ಮುಚ್ಚಿಗೆಗೆ (123 ನೇ ಸಂ ನೋಡು) ಒಂದು ಕನ್ನಡ ಶಾರೀರಶಾಸ್ತ್ರಗ್ರಂಥದಲ್ಲಿ 'ವಪೆ' ಎಂಬ ಶಬ್ದವು ಉಪಯೋಗಿಸಲ್ಪಟ್ಟಿದೆ ಈ ಮುಚ್ಚಿಗೆಯು ನಾಭಿಯ ಕೆಳಗಿರುವದಲ್ಲವಾದರೂ, ಅದು ಸ್ಥೂಲಾಂತ್ರಕ್ಕೆ ಒತ್ತುವಪ್ಪು ಸಮೀಪವಿರುತ್ತದೆ ಆದರೆ ಚರಕನ ಎರಡು ಪಟ್ಟಿಗಳಲ್ಲಿಯೂ 'ವಪಾವಹನ'ವನ್ನು ಕಾಣಿಸಿ, 2ನೇ ಪಟ್ಟಿಯಲ್ಲಿ ಮಾತ್ರ ಚರ್ಮ-ರಕ್ತ-ಮಾಂಸ-ಮೇದಸ್ಸುಗಳೊಂದಿಗೆ 'ವಪಾ' ಎಂಬದನ್ನು ಹೆಚ್ಚಾಗಿ ಸೇರಿಸಿರುವದನ್ನು ಆಲೋಚಿಸಿದರೆ, ಮೇಲೆ ಪ್ರಸ್ತಾಪಿಸಿದ ಅಂತಸ್ಥಗಳ ನಡುವಿರುವ ಮುಚ್ಚಿಗೆಗೆ 'ವಪಾವಹನ' ಎಂತಲೂ, ಮೇಲಿನ ಅಂತಸ್ಥದ ಒಳಭಾಗದ ಅಡಿಯಂಚಾದ ಆ ಮುಚ್ಚಿಗೆಯ ಮೇಲಿನ ತಲದ ಮೇಲೆ ಇರುವ 'pluera' ಎಂಬ ವಸಾಯುಕ್ತವಾದ ಮತ್ತು ತೆಳುವಾದ ಪೊರೆಗೆ 'ವಪೆ'ಯೆಂತಲೂ, ಚರಕನ ನಿರ್ದೇಶವಾಗಿರಬಹುದೆಂತ ಕಾಣುತ್ತದೆ ಆ 'ಪ್ಲೂರಾ' ಎಂಬದನ್ನು ಬಟ್ಟಿಗೆ ಹೋಲಿಸಬಹುದು

113. ಧಾತುಗಳು ರಸಾಸೃಙ್ಮಾಂಸ-ಮೇದೋ೨ಸ್ಥಿ-ಮಜ್ಜಾ-ಶುಕ್ರಾಣಿ ಧಾತವಃ | (ವಾ. 2.)

ರಸ, ರಕ್ತ, ಮಾಂಸ, ಮೇದಸ್ಸು, ಎಲುಬು, ಮಜ್ಜಾ, ಶುಕ್ರ, ಇವು ಏಳು ಧಾತುಗಳು.

ಷಡಾ 'ಉತ್ತಮ ಶರೀರ'ದಲ್ಲಿ ಆಯಾ ಜನರ ಕೈಯಂಜಲಿ ಪ್ರಕಾರ ನೀರು 10, ರಸ 9, ರಕ್ತ 8, ಪುರೀಷ 7, ಕಫ 6, ಪಿತ್ತ 5, ಮೂತ್ರ 4, ವಸೆ 3, ಮೇದಸ್ಸು 2, ಮಜ್ಜೆ 1, ಮೆದುಳು, ಶುಕ್ರ ಮತ್ತು ಕಫೌಜಸ್ಸು ಅರ್ಧರ್ಧ ಅಂಜಲಿ ಇರುತ್ತದೆಂತಲೂ, ಇದರ ಮೇಲೆ ಹೆಚ್ಚು ಕಡಿಮೆಗಳನ್ನು ಊಹಿಸತಕ್ಕದ್ದೆಂತಲೂ ಚರಕ ಹೇಳುತ್ತದೆ (ಸು 353)

114. ಮಲಗಳು ಮಲಾ ಮೂತ್ರ-ಶಕೃತ್-ಸ್ವೇದಾದಯಃ | (ವಾ. 2.)

ಮೂತ್ರ, ಹೇಲು, ಬೆವರು ಇವೇ ಮೊದಲಾದವು ಮಲಗಳು.

115. ದೋಷಗಳು. ವಾಯುಃ ಪಿತ್ತಂ ಕಫಶ್ಚೇತಿ ತ್ರಯೋ ದೋಷಾಃ ಸಮಾಸತಃ । (ವಾ. 1.)

ವಾಯು, ಪಿತ್ತ ಮತ್ತು ಕಫ ಎಂಬವು ಮೂರು ಮುಖ್ಯ ದೋಷಗಳು.

116. ವಾತ ಪಿತ್ತ ಕಫಗಳಿಗೂ ಧಾತು-ಮಲ ಎಂಬ ಹೆಸರುಗಳಿವೆ

ಶರೀರದೂಷಣಾದ್ದೋಷಾ ಧಾತವೋ ದೇಹಧಾರಣಾತ್ ।
ವಾತ-ಪಿತ್ತ-ಕಫಾ ಜ್ಞೇಯಾ ಮಲಿನೀಕರಣಾನ್ಮಲಾಃ ॥ (ಶಾ. 15)

ವಾತ, ಪಿತ್ತ, ಕಫ ಎಂಬವು ಶರೀರವನ್ನು ಕೆಡಿಸುವದರಿಂದ ದೋಷಗಳೆಂತಲೂ, ದೇಹವನ್ನು ಉಳಿಸುವದರಿಂದ ಧಾತುಗಳೆಂತಲೂ, ದೇಹವನ್ನು ಮಲಿನ ಮಾಡುವದರಿಂದ ಮಲಗಳೆಂತಲೂ ತಿಳಿಯುತ್ತಾರೆ.

117. ಆಹಾರಪಾಕ ಕ್ರಮ ಶಾ ಪ್ರಕಾರ

ಯಾತ್ಯಾಮಾಶಯಮಾಹಾರಃ ಪೂರ್ವಂ ಪ್ರಾಣಾನಿಲೇರಿತಃ ।
ಮಾಧುರ್ಯಂ ಫೇನಭಾವಂ ಚ ಷಡ್ರಸೋಪಿ ಲಭೇತ ಸಃ ॥
ಅಧ ಪಾಚಕಪಿತ್ತೇನ ವಿದಗ್ಧಶ್ಚಾಮ್ಲತಾಂ ವ್ರಜೇತ್ ।
ತತಃ ಸಮಾನಮರುತಾ ಗ್ರಹಣೀಮಭಿನೀಯತೇ ॥
ಗ್ರಹಣ್ಯಾಂ ಪಾಚಿತಃ ಕೋಷ್ಠೇ ವಹ್ನಿನಾ ಜಾಯತೇ ಕಟುಃ ।
ರಸೋ ಭವತಿ ಸಂಪಕ್ವಾದಪಕ್ವಾದಾಮಸಂಭವಃ ॥
ವಹ್ನೇರ್ಬಲೇನ ಮಾಧುರ್ಯಂ ಸ್ನಿಗ್ಧತಾಂ ಯಾತಿ ತದ್ರಸಃ ।
ಪುಷ್ಣಾತಿ ಪಿತ್ತಧರಾ ನಾಮ ಸಾ ಕಲಾ ಪರಿಕೀರ್ತಿತಾ ॥
ಪಕ್ವಾಮಾಶಯಮಧ್ಯಸ್ಥಾ ಗ್ರಹಣೀತ್ಯಭಿಧೀಯತೇ ।
ಪುಷ್ಣಾತಿ ಧಾತೂನಖಿಲಾನ್ ಸಮ್ಯಕ್ ಪಕ್ವೋಽಮೃತೋಪಮಃ ॥
ಮಂದವಹ್ನಿವಿದಗ್ಧಶ್ಚ ಕಟುರ್ವಾಽಮ್ಲೋ ಭವೇದ್ರಸಃ ।
ವಿಷಭಾವಂ ವ್ರಜೇದ್ವಾಪಿ ಕುರ್ಯಾದ್ವಾ ರೋಗಸಂಕರಂ ॥
ಆಹಾರಸ್ಯ ರಸಃ ಸಾರಃ ಸಾರಹೀನೋ ಮಲದ್ರವಃ ।
ಶಿರಾಭಿಸ್ತಜ್ಜಲಂ ನೀತಂ ವಸ್ತೌ ಮೂತ್ರತ್ವಮಾಪ್ನುಯಾತ್ ॥
ತತ್ಕಿಟ್ಟಂ ಚ ಮಲಂ ಜ್ಞೇಯಂ ತಿಷ್ಠೇತ್ಪಕ್ವಾಶಯೇ ಚ ತತ್ ।
ಬಲಿತ್ರಿತಯಮಾಗೇರ್ಣ ಯಾತ್ಯಪಾನೇನ ನೋದಿತಂ ॥
ಪ್ರವಾಹಿಣೀ ಸರ್ಜನೀ ಚ ಗ್ರಾಹಿಕೇತಿ ಬಲಿತ್ರಯಂ ।
ರಸಸ್ತು ಹೃದಯಂ ಯಾತಿ ಸಮಾನಮರುತೇರಿತಃ ॥
ರಂಜಿತಃ ಪಾಚಿತಸ್ತತ್ರ ಪಿತ್ತೇನಾಯಾತಿ ರಕ್ತತಾಂ ।
ರಕ್ತಂ ಸರ್ವಶರೀರಸ್ಥಂ ಜೀವಸ್ಯಾಧಾರಮುತ್ತಮಂ ॥
ಸ್ನಿಗ್ಧಂ ಗುರುತರಂ ಸ್ವಾದು ವಿದಗ್ಧಂ ಪಿತ್ತವದ್ಭವೇತ್ ।
ಪಾಚಿತಾಃ ಪಿತ್ತತಾಪೇನ ರಸಾದ್ಯಾ ಧಾತವಃ ಕ್ರಮಾತ್ ॥
ಶುಕ್ರತ್ವಂ ಯಾತಿ ಮಾಸೇನ ತಥಾ ಸ್ತ್ರೀಣಾಂ ರಜೋ ಭವೇತ್ । (ಶಾ. 19).

ಆಹಾರವು ಪ್ರಾಣವಾಯುವಿನ ಬಲದಿಂದ ಪ್ರಥಮತಃ ಆಮಾಶಯಕ್ಕೆ ಹೋಗುತ್ತದೆ. ಅದು ಷಡ್ರಸಗಳಿಂದ ಕೂಡಿದುದಾಗಿದ್ದರೂ, ಅಲ್ಲಿ ಸೀಯಾಗುತ್ತದೆ ಮತ್ತು ನೊರೆಯ ರೂಪವನ್ನು ಹೊಂದುತ್ತದೆ. ಅನಂತರ ಪಾಚಕಪಿತ್ತದಿಂದ ಅತಿಯಾಗಿ ಕಾಯಿಸಲ್ಪಟ್ಟರೆ ಹುಳಿಯಾಗುತ್ತದೆ. ಅನಂತರ ಸಮಾನವಾಯುವಿನ ಬಲದಿಂದ ಗ್ರಹಣಿಗೆ ಹೋಗುತ್ತದೆ. ಆ ಗ್ರಹಣೀ ಎಂಬಲ್ಲಿ ಉದರಾಗ್ನಿಯಿಂದ ಪಕ್ವವಾಗಿ, ಖಾರರುಚಿಯುಳ್ಳದ್ದಾಗುತ್ತದೆ. ಸರಿಯಾಗಿ ಪಕ್ವವಾದರೆ, ರಸವಾಗಿ ಪರಿಣಮಿಸುವದು. ಪಕ್ವವಾಗದೆ ಹೋದರೆ, ಆಮವುಂಟಾಗುತ್ತದೆ. ಆ ರಸವು ಅಗ್ನಿಬಲದಿಂದ ಪುನಃ ಸೀಯಾಗಿ ಮತ್ತು ಜಿಡ್ಡುಳ್ಳ ಸ್ವಭಾವದ್ದಾಗಿ ಪುಷ್ಟಿಮಾಡುತ್ತದೆ. ಪಕ್ವಾಶಯಕ್ಕೂ ಆಮಾಶಯಕ್ಕೂ ಮಧ್ಯ ಇರುವ ಆ ಕಲೆಯು ಪಿತ್ತಧರಾ ಎಂತ ಪ್ರಸಿದ್ಧವಾಗಿದೆ. ಅದಕ್ಕೆ ಗ್ರಹಣಿ ಎಂತ ಕರೆಯುತ್ತಾರೆ ಸರಿಯಾಗಿ ಪಕ್ವವಾದ ರಸವು ಅಮೃತ ಸಮಾನವಾಗಿ ಸಮಸ್ತ ಧಾತುಗಳನ್ನು ಪೋಷಿಸುತ್ತದೆ ಆದರೆ ಮಂದಾಗ್ನಿದೆಸೆಯಿಂದ ವ್ಯತಿರಿಕ್ತವಾಗಿ ಪಕ್ವವಾದ ರಸವು ಖಾರ ಅಥವಾ ಹುಳಿಯಾಗುವದು, ಅಥವಾ ವಿಷರೂಪವಾಗುತ್ತದೆ, ಅಥವಾ ಅನೇಕ ರೋಗಗಳನ್ನುಂಟುಮಾಡುತ್ತದೆ. ಆಹಾರದ ಸಾರವೇ ರಸ ಎಂಬದು, ಸಾರ ಹೋಗಿ ಉಳಿದದ್ದು ದ್ರವರೂಪವಾದ ಮಲ. ದ್ರವರೂಪವಾದ ಮಲದ ನೀರು ಸಿರಾನಾಳಗಳ ಮುಖವಾಗಿ ವಸ್ತಿಯನ್ನು ಹೊಂದಿ ಮೂತ್ರರೂಪವಾಗುತ್ತದೆ. ಅದರ ಮಡ್ಡೀ ಮಲ ಎಂಬದು. ಅದು ಪಕ್ವಾಶಯದಲ್ಲಿ ನಿಂತು ಅಪಾನವಾಯುವಿನ ಬಲದಿಂದ ಮೂರು ಸುಳಿಗಳುಳ್ಳ ಗುದದ್ವಾರವಾಗಿ ಹೊರಗೆ ಹೋಗುತ್ತದೆ ಆ ಮೂರು ಸುಳಿಗಳ ಹೆಸರು· 1. ಪ್ರವಾಹಿಣೀ, 2. ಸರ್ಜನೀ, 3. ಗ್ರಾಹಿಕಾ. ಆ ರಸವು ಸಮಾನವಾಯುವಿನ ಬಲದಿಂದ ಹೃದಯಕ್ಕೆ ಹೋಗುತ್ತದೆ ಅಲ್ಲಿ ಪಿತ್ತದಿಂದ ಪಕ್ವವಾಗಿ ವರ್ಣ ಬದಲಾದ ಮೇಲೆ, ಅದು ರಕ್ತವೆನಿಸಿಕೊಳ್ಳುತ್ತದೆ. ರಕ್ತವು ಶರೀರದ ಸರ್ವ ಕಡೆಯಲ್ಲಿಯೂ ವ್ಯಾಪಿಸಿ ಜೀವಕ್ಕೆ ಉತ್ತಮವಾದ ಆಧಾರವಾಗುತ್ತದೆ. ರಕ್ತವು ಜಿಡ್ಡುಳ್ಳದ್ದಾಗಿಯೂ, ಭಾರವಾಗಿಯೂ, ಸೀಯಾಗಿಯೂ ಇರುತ್ತದೆ. ಪಾಕ ವ್ಯತಿರಿಕ್ತವಾದಲ್ಲಿ ಪಿತ್ತದಂತೆ ಕೆಡಕುಮಾಡುವದು. ಪಿತ್ತದ ಬಿಸಿಯಿಂದ ಪಾಕವಾದ ಹಾಗೆ ರಸಾದಿ ಧಾತುಗಳು ಕ್ರಮವಾಗಿ ಆಗಿ ಒಂದು ತಿಂಗಳ ಸಮಯದಲ್ಲಿ ಶುಕ್ರ ರೂಪವನ್ನು ಹೊಂದುತ್ತವೆ ಹಾಗೆ ಹೆಂಗಸರಲ್ಲಿ ರಜಸ್ರಾಗುವದಾಗಿರುತ್ತದೆ.

118. ತತ್ರ ಪಾಂಚಭೌತಿಕಸ್ಯ ಚತುರ್ವಿಧಸ್ಯ ಷಡ್ರಸಸ್ಯ ದ್ವಿವಿಧವೀರ್ಯಸ್ಯಾಷ್ಟವಿಧವೀರ್ಯಸ್ಯ ವಾನೇಕಗುಣಸ್ಯೋಪಯುಕ್ತಸ್ಯಾಹಾರಸ್ಯ ಸಮ್ಯಕ್ಪರಿಣತಸ್ಯ ಯಸ್ತೇಜೋಭೂತಃ ಸಾರಃ ಪರಮಸೂಕ್ಷ್ಮಃ ಸ ರಸ ಇತ್ಯುಚ್ಯತೇ | ತಸ್ಯ ಚ ಹೃದಯಂ ಸ್ಥಾನಂ ಸ ಹೃದಯಾಚ್ಚತುರ್ವಿಂಶತಿಂ ಧಮನೀರನುಪ್ರವಿಶ್ಯೋರ್ಧ್ವಗಾ ದಶ ದಶ ಚಾಧೋಗಾಮಿನ್ಯಶ್ಚತಸ್ರಸ್ತಿರ್ಯಗ್ಗಾಃ ಕೃತ್ಸ್ನಂ ಶರೀರಮಹರಹಸ್ತರ್ಪಯತಿ ವರ್ಧಯತಿ ಧಾರಯತಿ ಯಾಪಯತಿ ಜೀವಯತಿ ಚಾದೃಷ್ಟಹೇತುಕೇನ ಕರ್ಮಣಾ | ತಸ್ಯ ಶರೀರಮನುಧಾವತೋಽನುಮಾನಾದ್ಗತಿರುಪಲಕ್ಷಯಿತವ್ಯಾ ಕ್ಷಯವೃದ್ಧಿವೈಕೃತೈಃ | ತಸ್ಮಿನ್ ಸರ್ವಶರೀರಾವ

ಸುಶ್ರುತ ಪ್ರಕಾರ

ಯವದೋಷಧಾತುಮಲಾಶಯಾನುಸಾರಿಣಿ ರಸೇ ಜಿಜ್ಞಾಸಾ ಕಿಮಯಂ ಸೌಮ್ಯಸ್ತೈಜಸ ಇತಿ । ಅತ್ರೋಚ್ಯತೇ ಸ ಖಲು ದ್ರವಾನುಸಾರೀ ಸ್ನೇಹನಜೀವನತರ್ಪಣಧಾರಣಾದಿಭಿರ್ವಿಶೇಷೈಃ ಸೌಮ್ಯ ಇತ್ಯವಗಮ್ಯತೇ । ಸ ಖಲ್ವಾಪ್ಯೋ ರಸೋ ಯಕೃತ್ಪ್ಲೀಹಾನೌ ಪ್ರಾಪ್ಯ ರಾಗಮುಪೈತಿ ।

ರಂಜಿತಾಸ್ತೇಜಸಾತ್ತ್ವಪಃ ಶರೀರಸ್ಥೇನ ದೇಹಿನಾಂ ।
ಅವ್ಯಾಪನ್ನಾಃ ಪ್ರಸನ್ನೇನ ರಕ್ತಮಿತ್ಯಭಿಧೀಯತೇ ॥ (ಸು. 47.)

ಪಂಚಭೂತಗಳಿಂದುಂಟಾದ ನಾಲ್ಕು ವಿಧವಾದ (ಅಂದರೆ ನುಂಗಿದ್ದು, ಕುಡಿದದ್ದು, ನೆಕ್ಕಿದ್ದು, ತಿಂದದ್ದು) ಷಡ್ರಸಗಳುಳ್ಳ, ಎರಡು ವಿಧ (ಉಷ್ಣ, ಶೀತ), ಅಥವಾ 8 ವಿಧ (ಶೀತ, ಸ್ನಿಗ್ಧ, ರೂಕ್ಷ, ವಿಶದ, ಪಿಚ್ಛಿಲ, ಮೃದು, ತೀಕ್ಷ್ಣ, ಉಷ್ಣ) ವೀರ್ಯವುಳ್ಳ, ಅಥವಾ ಅನೇಕ ಗುಣವುಳ್ಳ (ಉಪಯೋಗಿಸಲ್ಪಟ್ಟ) ಆಹಾರವು ಚನ್ನಾಗಿ ಪಕ್ವವಾದಾಗ್ಗೆ ತೇಜೋಭೂತವಾದ ಮತ್ತು ಅತ್ಯಂತ ಸೂಕ್ಷ್ಮವಾದ ಯಾವ ಸಾರವು ಉಂಟಾಗುತ್ತದೋ, ಅದು ರಸ ಎಂತ ಕರೆಯಲ್ಪಡುತ್ತದೆ ಮತ್ತು ಅದಕ್ಕೆ ಹೃದಯವು ಸ್ಥಾನ. ಅದು ಆ ಹೃದಯದಿಂದ ಹೊರಟು 24 ಧಮನೀನಾಡಿಗಳನ್ನು ಪ್ರವೇಶಿಸಿ, 10 ಮೇಲಕ್ಕೆ, 10 ಕೆಳಗೆ, 4 ಅಡ್ಡವಾಗಿ ಚಲಿಸಿ, ದೃಷ್ಟಿಗೋಚರವಲ್ಲದ ಹೇತುವುಳ್ಳ ಕೆಲಸದಿಂದ ಇಡೀ ಶರೀರವನ್ನು ದಿನೇ ದಿನೇ ತೃಪ್ತಿ ಹೊಂದಿಸುತ್ತದೆ, ಬೆಳಿಸುತ್ತದೆ, ಆಧರಿಸುತ್ತದೆ, ನಡಿಸುತ್ತದೆ, ಮತ್ತು ಬದುಕಿಸುತ್ತದೆ. ಶರೀರದೊಳಗೆ ಓಡ್ಯಾಡುತ್ತಿರುವ ಆ ರಸದ ಗತಿಯನ್ನು ಕ್ಷಯ-ವೃದ್ಧಿ ವಿಕಾರಗಳಿಂದ ಅನುಮಾನಕ್ರಮದಲ್ಲಿ ಊಹಿಸಬೇಕಾದದ್ದು ಶರೀರದ ಸರ್ವ ಅವಯವ-ದೋಷ-ಧಾತು-ಮಲಾಶಯಗಳನ್ನು ಅನುಸರಿಸಿ ಹೋಗುವ ಆ ರಸದ ವಿಷಯದಲ್ಲಿ ಇದೊಂದು ಜಿಜ್ಞಾಸ, ಅದು ಸೌಮ್ಯವೋ, ತೈಜಸವೋ? ಎಂಬದು ಇದಕ್ಕೆ ಉತ್ತರವೇನಂದರೆ· ಆ ರಸವು ದ್ರವ ಪದಾರ್ಥವನ್ನನುಸರಿಸಿರುವದರಿಂದಲೂ, ಸ್ನೇಹನ (ಪಸೆಮಾಡುವದು), ಜೀವನ (ಬದುಕಿಸುವದು), ತರ್ಪಣ (ತೃಪ್ತಿಗೊಳಿಸುವದು), ಧಾರಣ (ಆಧರಿಸುವದು), ಇವೇ ಮೊದಲಾದ ವಿಶೇಷಗಳಿಂದ ಯುಕ್ತವಾದ್ದರಿಂದಲೂ ಸೌಮ್ಯ ಎಂತ ತಿಳಿದುಬರುತ್ತದೆ. ಆ ಜಲರೂಪವಾದ ರಸವು ಯಕೃತ್‌ಪ್ಲೀಹಗಳನ್ನು ಸೇರಿ, ವರ್ಣವನ್ನು ಹೊಂದುತ್ತದೆ. ಮನುಷ್ಯರ ದೇಹದಲ್ಲಿನ ಪ್ರಸನ್ನವಾದ ತೇಜಸ್ಸಿನಿಂದ (ಬಿಸಿಯಿಂದ) ಆ ದ್ರವವು ಕೆಡದೆ ಇದ್ದು, ವರ್ಣ ಹೊಂದಿ, ರಕ್ತ ಎಂಬ ಹೆಸರು ಪಡೆಯುತ್ತದೆ

119. ಆಹಾರಪರಿಣಾಮಕರಾಸ್ತು ಇಮೇ ಭಾವಾ ಭವಂತಿ । ತದ್ಯಥಾ । ಉಷ್ಮಾ ವಾಯುಃ ಕ್ಲೇದಃ ಸ್ನೇಹಃ ಕಾಲಃ ಸಂಯೋಗಶ್ಚೇತಿ । .... ಉಷ್ಮಾಪಚತಿ ವಾಯುರಪಕರ್ಷತಿ ಕ್ಲೇದಃ ಶೈಥಿಲ್ಯಮಾಪಾದಯತಿ ಸ್ನೇಹೋ ಮಾರ್ದವಂ ಜನಯತಿ ಕಾಲಃ ಪರ್ಯಾಪ್ತಿಮಭಿನಿರ್ವರ್ತಯತಿ ಸಂಯೋಗಸ್ತು ಏಷಾಂ ಪರಿಣಾಮಧಾತುಸಾಮ್ಯಕರಃ ಸಂಪದ್ಯತೇ । (ಚ. 347.)

ಚರಕ ಪ್ರಕಾರ

ಆಹಾರವನ್ನು ಪರಿಣಾಮಹೊಂದಿಸುವ (ಪಾಕ ಮಾಡಿ ಸಾರ್ಥಕ ಮಾಡುವ) ಭಾವಗಳು ಇವು ಆಗಿರುತ್ತವೆ. ಯಾವವೆಂದರೆ ಉಷ್ಮತೆ (ಬಿಸಿ), ವಾಯು, ದ್ರವತ್ವ, ಸ್ನೇಹ, ಕಾಲ, ಸಂಯೋಗ (ಕೂಡುವಿಕೆ) ಎಂಬವು. ಉಷ್ಮತೆಯು ಬೇಯಿಸುತ್ತದೆ, ವಾಯುವು ಪ್ರತ್ಯೇಕಿಸುತ್ತದೆ, ದ್ರವತ್ವವು ಸಡಿಲಿಸುತ್ತದೆ, ಸ್ನೇಹವು ಮೃದು ಮಾಡುತ್ತದೆ ಕಾಲವು ಪೂರ್ಣ ಗೊಳಿಸುತ್ತದೆ, ಭಾವಗಳ ಸಂಯೋಗದಿಂದ ಪರಿಣಾಮಧಾತುವು (ದೇಹಧಾತುಗಳಿಗೆ) ಸಾಮ್ಯ ವಾಗಿ ಫಲಿಸುತ್ತದೆ.

ಪರಿಣಾಮತಸ್ತ್ವಾಹಾರಸ್ಯ ಗುಣಾಃ ಶರೀರಗುಣಭಾವಮಾಪದ್ಯಂತೇ | (ಚ. 347.)

ಆ ಪರಿಣಾಮದ ದೆಸೆಯಿಂದ ಆಹಾರದ ಗುಣಗಳು ಶರೀರದ ಗುಣಭಾವವನ್ನು ಹೊಂದು ತ್ತವೆ.

ಷರಾ ಚರಕಸಂಹಿತೆಯ 'ಗ್ರಹಣೀ ಚಿಕಿತ್ಸಿತಮ್' ಅಧ್ಯಾಯದಲ್ಲಿ ಆಹಾರಪಾಕಕ್ರಮವು ಸವಿಸ್ತಾರ ಹೇಳಲ್ಪಟ್ಟಿದೆ (ಚ 655-59)

ಶರೀರಧಾತವಸ್ತ್ವೇವಂ ದ್ವಿವಿಧಾಃ ಸಂಗ್ರಹೇಣ ಮಲಭೂತಾಃ ಪ್ರಸಾದ ಭೂತಾಶ್ಚ | ತತ್ರ ಮಲಭೂತಾಸ್ತೇ ಶರೀರಸ್ಯ ಯೇ ಬಾಧಕರಾಃ ಸ್ಯುಃ | (ಚ. 347.)

ಹೀಗೆ ಶರೀರಧಾತುಗಳು ಒಟ್ಟಾರೆ ಎರಡು ವಿಧ ಮಲರೂಪವಾದವು ಮತ್ತು ಪ್ರಸಾದರೂಪವಾದವು ಅವುಗಳೊಳಗೆ ದೇಹಕ್ಕೆ ಬಾಧಕ ಉಂಟುಮಾಡತಕ್ಕವು ಮಲರೂಪ ವಾದವು.

ಪ್ರಕುಪಿತಾಶ್ಚ ವಾತ-ಪಿತ್ತ-ಶ್ಲೇಷ್ಮಾಣೋ ಯೇ ಚಾನ್ಯೇಪಿ ಕೇಚಿತ್ ಶರೀರೇ ತಿಷ್ಠಂತಿ ಭಾವಾಃ ಶರೀರಸ್ಯೋಪಘಾತಾಯೋಪಪದ್ಯಂತೇ ಸರ್ವಾಂ ಸ್ತಾನ್ ಮಲಾನ್ ಸಂಪ್ರಚಕ್ಷ್ಮಹೇ | ಇತರಾಂಸ್ತು ಪ್ರಸಾದೇ ಗುರ್ವಾ ದೀಂಶ್ಚ ದ್ರವ್ಯಾನ್ತಾನ್ ಗುಣಭೇದೇನ ರಸಾದೀಂಶ್ಚ ಶುಕ್ರಾನ್ತಾನ್ ದ್ರವ್ಯಭೇದೇನ | (ಚ. 347.)

ಕೋಪ ಹೊಂದಿದ ವಾತ ಪಿತ್ತ ಶ್ಲೇಷ್ಮಗಳು ಮತ್ತು ಶರೀರದಲ್ಲಿ ನಿಲ್ಲುವ ಬೇರೆ ಕೆಲವು ಭಾವಗಳು ಸಹ ಯಾವವು ಶರೀರಕ್ಕೆ ಕೆಡಕು ಮಾಡತಕ್ಕವುಗಳಾಗುತ್ತವೋ ಅವುಗಳ ನ್ನೆಲ್ಲಾ ಮಲಗಳೆಂತ ಹೇಳುತ್ತೇವೆ. ಇತರ ಪ್ರಸಾದರೂಪವಾದ ಭಾವಗಳನ್ನು ಗುಣಭೇದ ದಿಂದ ಗುರು ಎಂಬಲ್ಲಿಂದ ದ್ರವ ಎಂಬ ವರೆಗಿನ ವಿಶೇಷಣಗಳಿಂದಲೂ, ದ್ರವ್ಯಭೇದದಿಂದ, ರಸ ಹಿಡಿದು ಶುಕ್ರ ಎಂಬ ವರೆಗಿನ ವಿಶೇಷಣಗಳಿಂದಲೂ, ಸೂಚಿಸುತ್ತೇವೆ.

ಪ್ರಕೃತಿಭೂತಾನಾಂ ತು ಖಲು ವಾತಾದೀನಾಂ ಫಲಮಾರೋಗ್ಯಂ | (ಚ. 347.)

ಸ್ವಸ್ಥಸ್ಥಿತಿಯಲ್ಲಿರುವ ವಾತಾದಿಗಳ ಫಲವು ಆರೋಗ್ಯವಾಗಿರುತ್ತದೆ. ಅಂದರೆ ವಾತ ಪಿತ್ತಶ್ಲೇಷ್ಮಗಳು ತಮ್ಮ ನಿಜಸ್ಥಿತಿಯಲ್ಲಿದ್ದರೆ ಆರೋಗ್ಯವುಂಟಾಗುತ್ತದೆ.

120. ಪಿತ್ತಂ ಪಂಚಾತ್ಮಕಂ ತತ್ರ ಪಕ್ವಾಮಾಶಯಮಧ್ಯಗಂ ।
ಪಂಚಭೂತಾತ್ಮಕತ್ವೇಽಪಿ ಯತ್ತೈಜಸಗುಣೋದಯಾತ್ ॥
ತ್ಯಕ್ತದ್ರವತ್ವಂ ಪಾಕಾದಿಕರ್ಮಣಾನಲಶಬ್ದಿತಂ ।
ಪಚತ್ಯನ್ನಂ ವಿಭಜತೇ ಸಾರಕಿಟ್ಟೌ ವೃಧಕ್ ತಥಾ ॥
ತತ್ರಸ್ಥಮೇವ ಪಿತ್ತಾನಾಂ ಶೇಷಾಣಾಮಪ್ಯನುಗ್ರಹಂ ।
ವಾಗ್ಭಟ ಕರೋತಿ ಬಲದಾನೇನ ಪಾಚಕಂ ನಾಮ ತತ್ ಸ್ಮೃತಂ ॥
ಪ್ರಕಾರ ಆಮಾಶಯಾಶ್ರಯಂ ಪಿತ್ತಂ ರಂಜಕಂ ರಸರಂಜನಾತ್ ।
ಬುದ್ಧಿಮೇಧಾಭಿಮಾನಾದ್ಯೈರಭಿಪ್ರೇತಾರ್ಥಸಾಧನಾತ್ ॥
ಸಾಧಕಂ ಹೃದ್ಗತಂ ಪಿತ್ತಂ ರೂಪಾಲೋಚನತಃ ಸ್ಮೃತಂ ।
ದೃಕ್‌ಸ್ಥಮಾಲೋಚಕಂ ತ್ವಕ್‌ಸ್ಥಂ ಭ್ರಾಜಕಂ ಭ್ರಾಜನಾತ್ತ್ವಜಃ ॥
(ವಾ. 58-9.)

ಪಂಚ ವಿಧವಾದ ಪಿತ್ತವು ಪಕ್ವಾಶಯಕ್ಕೂ ಆಮಾಶಯಕ್ಕೂ ಮಧ್ಯ ಇರುತ್ತದೆ. ಅದು ಪಂಚಭೂತಗಳಿಂದ ಹುಟ್ಟಿದ್ದಾದರೂ, ತೇಜಸ ಗುಣವೇ ಹೆಚ್ಚಾಗಿರುವದರಿಂದ ದ್ರವತ್ವವನ್ನು ಬಿಟ್ಟು, ಪಾಕ ಮೊದಲಾದ ಕರ್ಮಗಳನ್ನು ಮಾಡುವದರಿಂದ ಅಗ್ನಿ ಎಂಬ ಹೆಸರು ಪಡೆದು, ಅನ್ನವನ್ನು ಪಚನಮಾಡಿ ಸಾರವನ್ನೂ, ಮಡ್ಡನ್ನೂ ಪ್ರತ್ಯೇಕಿಸುತ್ತದೆ. ಮತ್ತು ಅಲ್ಲಿಯೇ ನಿಂತು, ಇತರ ಶರೀರದೊಳಗಣ ಪಿತ್ತಗಳಿಗೆ ಬಲಕೂಟ್ಟು, ಅನುಗ್ರಹ ಮಾಡುತ್ತದೆ. ಅಂಥಾ ಪಿತ್ತಕ್ಕೆ ಪಾಚಕಪಿತ್ತ ಎಂತ ಹೆಸರು. ಆಮಾಶಯದಲ್ಲಿರುವ ಪಿತ್ತವು ಅನ್ನರಸಕ್ಕೆ ವರ್ಣ ಕೊಡುವದರಿಂದ ರಂಜಕಪಿತ್ತ ಎಂತಲೂ, ಹೃದಯದಲ್ಲಿರುವ ಪಿತ್ತವು, ಬುದ್ಧಿ, ಗ್ರಹಿಕೆ, ಅಭಿಮಾನ ಮೊದಲಾದ ಗುಣಗಳಿಂದ ಇಷ್ಟಾರ್ಥ ಸಾಧಿಸುವದರಿಂದ ಸಾಧಕಪಿತ್ತ ಎಂತಲೂ, ಕಣ್ಣುಗಳಲ್ಲಿರುವ ಪಿತ್ತವು ರೂಪವನ್ನೂ, ದೃಷ್ಟಿಯನ್ನೂ ಕೊಡುವದರಿಂದ ಆಲೋಚಕಪಿತ್ತ ಎಂತಲೂ, ಚರ್ಮದಲ್ಲಿರುವ ಪಿತ್ತವು ಚರ್ಮದ ಹೂಳಪಿಗೆ ಹೇತುವಾದ್ದರಿಂದ ಭ್ರಾಜಕಪಿತ್ತ ಎಂತಲೂ ಹೆಸರುಗೊಂಡವೆ.

ಇದಾ ಯಕೃತ್‌ಪ್ಲೀಹಗಳಲ್ಲಿಯ ಪಿತ್ತವು ರಂಜಕ ಎಂತ ಸುಶ್ರುತ (ಮುಂದೆ VII ಅ. ನೋಡು)

ಅನ್ನಸ್ಯ ಪಕ್ತಾ ಪಿತ್ತಂ ತು ಪಾಚಕಾಖ್ಯಂ ಪುರೇರಿತಂ ।
ದೋಷಧಾತುಮಲಾದೀನಾಮೂಷ್ಮೋತ್ಸಾತ್ತ್ರೇಯಶಾಸನಂ ॥
ತದಧಿಷ್ಠಾನಮನ್ನಸ್ಯ ಗ್ರಹಣಾದ್ ಗ್ರಹಣೀ ಮತಾ ।
ಸೈವ ಧನ್ವಂತರಿಮತೇ ಕಲಾ ಪಿತ್ತಧರಾಹ್ವಯಾ ॥
ಆಯುರಾರೋಗ್ಯವೀರ್ಯೌಜೋಭೂತಧಾತ್ವಗ್ನಿಪುಷ್ಟಯೇ ।
ಸ್ಥಿತಾ ಪಕ್ವಾಶಯದ್ವಾರಿ ಭುಕ್ತಮಾರ್ಗಾರ್ಗಲೇವ ಸಾ ॥
ಭುಕ್ತಮಾಮಾಶಯೇ ರುದ್ಧ್ವಾ ಸಾ ವಿಪಾಚ್ಯ ನಯತ್ಯಧಃ ।
ಬಲವತ್ಯಬಲಾ ತ್ವನ್ನಮಾಮಮೇವ ವಿಮುಂಚತಿ ॥
ಗ್ರಹಣ್ಯಾಂ ಬಲಮಗ್ನಿರ್ಹಿ ಸ ಚಾಪಿ ಗ್ರಹಣೀಬಲಃ ।
ದೂಷಿತೇಽಗ್ನಾವತೋ ದುಷ್ಟಾ ಗ್ರಹಣೀ ರೋಗಕಾರಿಣೀ ॥

ಯದನ್ನಂ ದೇಹಧಾತ್ವೋಜೋಬಲವರ್ಣಾದಿಪೋಷಣಂ ।
ತತ್ರಾಗ್ನಿರ್ಹೇತುರಾಹಾರಾನ್ನ ಹ್ಯಪಕ್ವಾದ್ರಸಾದಯಃ ॥
ಅನ್ನಂ ಕಾಲೇಽಭ್ಯವಹೃತಂ ಕೋಷ್ಠಂ ಪ್ರಾಣಾನಿಲಾಹೃತಂ ।
ದ್ರವೈರ್ವಿಭಿನ್ನಸಂಘಾತಂ ನೀತಂ ಸ್ನೇಹೇನ ಮಾರ್ದವಂ ॥
ಸಂಧುಕ್ಷಿತಃ ಸಮಾನೇನ ಪಚತ್ಯಾಮಾಶಯಸ್ಥಿತಂ ।
ಪೌದರ್ಯಾಗ್ನಿರ್ಯಥಾ ಬಾಹ್ಯಃ ಸ್ಥಾಲೀಸ್ಥಂ ತೋಯತಂಡುಲಂ ॥
ಆದೌ ಷಡ್ರಸಮಪ್ಯನ್ನಂ ಮಧುರೀಭೂತಮಾರಯೇತ್ ।
ಫೇನೀಭೂತಂ ಕಫಂ ಯಾತಂ ವಿದಾಹಾದಮ್ಲತಾಂ ತತಃ ॥
ಪಿತ್ತಮಾಮಾಶಯಾತ್ಕುರ್ಯಾಚ್ಛ್ಯವಮಾನಂ ಚ್ಯುತಂ ಪುನಃ ।
ಅಗ್ನಿನಾ ಶೋಷಿತಂ ಪಕ್ವಂ ಪಿಂಡಿತಂ ಕಟು ಮಾರುತಂ ॥
ಭೌಮಾಪ್ಯಾಗ್ನೇಯವಾಯವ್ಯಾಃ ಪಂಚೋಷ್ಮಾಣಃ ಸನಾಭಸಾಃ ।
ಪಂಚಾಹಾರಗುಣಾನ್ ಸ್ವಾನ್ ಸ್ವಾನ್ ಪಾರ್ಥಿವಾದೀನ್ ಪಚಂತ್ಯನು ॥
ಯಥಾಸ್ವಂ ತೇ ಚ ಪುಷ್ಣಂತಿ ಪಕ್ತ್ವಾ ಭೂತಗುಣಾನ್ ಪೃಥಕ್ ।
ಪಾರ್ಥಿವಾಃ ಪಾರ್ಥಿವಾನೇವ ಶೇಷಾಃ ಶೇಷಾಂಶ್ಚ ದೇಹಗಾನ್ ॥
ಕಿಟ್ಟಂ ಸಾರಶ್ಚ ತತ್ಪಕ್ವಮನ್ನಂ ಸಂಭವತಿ ದ್ವಿಧಾ ।
ತತ್ರಾಚ್ಛಂ ಕಿಟ್ಟಮನ್ನಸ್ಯ ಮೂತ್ರಂ ವಿದ್ಯಾದ್ ಘನಂ ಶಕೃತ್ ॥
ಸಾರಸ್ತು ಸಪ್ತಧೌರ್ಯಾಯೋ ಯಥಾಸ್ವಂ ಪಚ್ಯತೇಽಗ್ನಿಭಿಃ ।
ರಸಾದ್ರಕ್ತಂ ತತೋ ಮಾಂಸಂ ಮಾಂಸಾನ್ಮೇದಸ್ತತೋಽಸ್ಥಿ ಚ ॥
ಅಸ್ಥ್ನೋ ಮಜ್ಜಾ ತತಃ ಶುಕ್ರಂ ಶುಕ್ರಾದ್ಗರ್ಭಃ ಪ್ರಜಾಯತೇ ।
ಕಫಃ ಪಿತ್ತಂ ಮಲಃ ಖೇಷು ಪ್ರಸ್ವೇದೋ ನಖರೋಮಸು ಚ ॥
ಸ್ನೇಹೋಽಕ್ಷಿ-ತ್ವಗ್-ವಿಶಾಮೋಜೋಧಾತೂನಾಂ ಕ್ರಮಶೋ ಮಲಾಃ ।
ಪ್ರಸಾದಕಿಟ್ಟೌ ಧಾತೂನಾಂ ಪಾಕಾದೇವಂ ದ್ವಿಧರ್ಷ್ಯತಃ ॥
ಪರಸ್ಪರೋಪಸಂಸ್ತಂಭಾದ್ಧಾತುಸ್ನೇಹಪರಂಪರಾ ।
ಕೇಚಿದಾಹುರಹೋರಾತ್ರಾತ್ ಷಡಹಾದಪರೇ ಪರೇ ॥
ಮಾಸೇನ ಯಾತಿ ಶುಕ್ರತ್ವಮನ್ನಂ ಪಾಕಕ್ರಮಾದಿಭಿಃ ।
ಸಂತತಂ ಭೋಜ್ಯಧಾತೂನಾಂ ಪರಿವೃತ್ತಿಸ್ತು ಚಕ್ರವತ್ ॥ (ವಾ. 155-56.)

ಅನ್ನವನ್ನು ಪಾಕಮಾಡುವಂಥಾದ್ದು ಪಾಚಕಪಿತ್ತ ಎಂತ ಮೊದಲು ಹೇಳಿದೆ. ದೋಷ, ಧಾತು, ಮಲಾದಿಗಳ ಉಷ್ಣತೆಯು ಪಚನಮಾಡುವದೆಂತ ಆತ್ರೇಯರು ಹೇಳಿದ್ದಾರೆ. ಅದರ ಸ್ಥಾನವು, ಆಹಾರವನ್ನು ಹಿಡಕೊಳ್ಳುವದರಿಂದ, ಗ್ರಹಣೀ ಎನ್ನಿಸಿಕೊಳ್ಳುತ್ತದೆ. ಅದೇ, ಧನ್ವಂತರಿಯ ಮತಪ್ರಕಾರ ಪಿತ್ತಧರಾ ಎಂಬ ಕಲೆ ಅದು ಆಯುಸ್ಸು, ಆರೋಗ್ಯ, ಶಕ್ತಿ, ಓಜಸ್ಸು, ಭೂತ (ಪಂಚಭೂತಗಳು), ಧಾತು, ಅಗ್ನಿ,* ಇವುಗಳ ಪೋಷಣೆಗೋಸ್ಕರ ಪಕ್ವಾಶಯದ ಬಾಗಲಲ್ಲಿ ಅನ್ನಮಾರ್ಗಕ್ಕೆ ಅಗಳಿಯಂತೆ ನಿಂತಿದೆ. ಬಲವಾಗಿದ್ದರೆ ಅದು ಆಹಾರ

* ಷಡಾ ಪಂಚಮಹಾಭೂತಗಳ ಮತ್ತು ಧಾತುಗಳ ಅಗ್ನಿ ಎಂತ ಒಬ್ಬರು ಅರ್ಥ ಬರೆಸಿದ್ದಾರೆ

ವನ್ನು ಆಮಾಶಯದಲ್ಲಿ ತಡೆದಿಟ್ಟು ಪಚನಮಾಡಿ ಕೆಳಗೆ ಸಾಗಿಸುತ್ತದೆ. ಅಬಲಿಯಾದರೆ, ಆಹಾರವನ್ನು ಆಮವಾಗಿ ಕೆಳಕ್ಕೆ ಬಿಡುತ್ತದೆ ಗ್ರಹಣಿಗೆ ಬಲ ಅಗ್ನಿ, ಮತ್ತು ಆ ಅಗ್ನಿಗೆ ಬಲ ಗ್ರಹಣೀ ಆಗಿರುತ್ತದೆ. ಅಗ್ನಿ ಕೆಟ್ಟರೆ ಗ್ರಹಣಿಯು ಕೆಟ್ಟು ರೋಗಗಳನ್ನುಂಟುಮಾಡುವದು. ಅನ್ನವು ದೇಹ, ಧಾತು, ಓಜಸ್ಸು, ಬಲ, ವರ್ಣಾದಿಗಳನ್ನು ಪೋಷಿಸುವದಕ್ಕೆ ಹೇತು ಅಗ್ನಿ ಯಾಗಿರುತ್ತದೆ. ಅಪಕ್ವವಾದ ಆಹಾರದಲ್ಲಿರುವ ರಸಾದಿಗಳು ಪೋಷಣೆ ಮಾಡುವದಿಲ್ಲ. ಪ್ರಾಣವಾಯುವಿನ ಬಲದಿಂದ ಕೋಷ್ಠದೊಳಗೆ ಸೇರಿದ ಆಹಾರವು ಆಮಾಶಯದಲ್ಲಿ ನಿಂತು, ದ್ರವಗಳಿಂದ ಒಡೆದು, ತೆಳ್ಳಗಾಗಿ, ಜಿಡ್ಡಿನಿಂದ ಮೃದುವಾಗುತ್ತದೆ, ಮತ್ತು ಅದನ್ನು ಉದರದ ಅಗ್ನಿಯು ಸಮಾನವಾಯುವಿನಿಂದ ಕೂಡಿಕೊಂಡು, ಪಾತ್ರದಲ್ಲಿರುವ ನೀರು ಮತ್ತು ಅಕ್ಕಿ ಯನ್ನು ಹೊರಗಿನ ಅಗ್ನಿಯು ಹ್ಯಾಗೋ, ಹಾಗೆ ಪಾಕಮಾಡುತ್ತದೆ. ಪ್ರಥಮದಲ್ಲಿ ಆಹಾರದ ಷಡ್ರಸಗಳು ಸೀ ರೂಪವಾಗುತ್ತದೆನ್ನಬೇಕು ಕಫ ಕೂಡಿ ನೊರೆಯುಳ್ಳದ್ದಾಗಿರುತ್ತದೆ. ಅನಂತರ ಅತಿ ಅಧವಾ ವಿಷಮವಾದ ಪಾಕದಿಂದ ಹುಳಿಯಾಗುತ್ತದೆ. ಅನಂತರ ಆಮಾಶಯ ದಿಂದ ಕೆಳಗೆ ಬಿಟ್ಟ ಮತ್ತು ಬಿಡುತ್ತಿರುವ ಅನ್ನವನ್ನು ಪಿತ್ತವು ತನ್ನ ಅಗ್ನಿಯಿಂದ ಒಣಗಿಸಿ, ಪಾಕಮಾಡಿ, ಖಾರ ವಾಯುಗಳಿಂದ ಕೂಡಿದ ಪಿಂಡವನ್ನಾಗಿ ಮಾಡುತ್ತದೆ. ಅನಂತರ ಪೃಥ್ವೀ, ಅಪ್, ಅಗ್ನಿ, ವಾಯು, ಆಕಾಶ ಎಂಬ ಪಂಚಭೂತಗಳಿಗೆ ಸಂಬಂಧವಾದ ಪಂಚ ಅಗ್ನಿಗಳು ಆಹಾರದಲ್ಲಿರುವ ತಮ್ಮತಮ್ಮ ಪೃಥ್ವ್ಯಾದಿ ಐದು ಗುಣಗಳನ್ನು ಪಾಕಮಾಡುತ್ತವೆ. ಈ ಪ್ರಕಾರ ಬೇರೆಬೇರೆ ಪಾಕದಿಂದ ಪೃಥ್ವೀಗುಣಗಳು ದೇಹದಲ್ಲಿರುವ ಪೃಥ್ವೀಗುಣ ಗಳನ್ನೂ, ಉಳಿಕ್ಕವು ಇತರ ಗುಣಗಳನ್ನೂ ಪೋಷಿಸುತ್ತವೆ. ಆ ಪ್ರಕಾರ ಪಕ್ವವಾದ ಆಹಾ ರವು ಕಿಟ್ಟಪೆಂತಲೂ, ಸಾರವೆಂತಲೂ, ಎರಡು ಪಾಲಾಗುತ್ತದೆ. ಅದರಲ್ಲಿ ಸ್ವಚ್ಛವಾದ ಕಿಟ್ಟವು ಮೂತ್ರ, ದಪ್ಪವಾದದ್ದು ಹೇಲು. ಸಾರವು ಪುನಃ ಏಳು ವಿಧವಾದ ಅಗ್ನಿಗಳಿಂದ ತಮ್ಮತಮ್ಮ ಸ್ಥಾನಗಳಲ್ಲಿ ಪಚನವಾಗುತ್ತದೆ ಹೀಗೆ ರಸದಿಂದ ರಕ್ತವು, ರಕ್ತದಿಂದ ಮಾಂಸವು, ಮಾಂಸದಿಂದ ಮೇದಸ್ಸು, ಮೇದಸ್ಸಿನಿಂದ ಎಲುಬು, ಎಲುಬಿನಿಂದ ಮಜ್ಜೆ, ಮಜ್ಜೆಯಿಂದ ಶುಕ್ರ, ಶುಕ್ರದಿಂದ ಗರ್ಭವುಂಟಾಗುತ್ತದೆ. ಕಫ, ಪಿತ್ತ, ಸ್ರೋತಸ್ಸುಗಳಲ್ಲಿರುವ ಮಲ, ಬೆವರು, ಉಗುರು ಮತ್ತು ರೋಮಗಳು, ಕಣ್ಣುಗಳಲ್ಲಿ ಮತ್ತು ಚರ್ಮದಲ್ಲಿರುವ ಜಿಡ್ಡು, ಓಜಸ್ಸು, ಇವು 7 ಯಥಾಕ್ರಮವಾಗಿ ರಸಾದಿ ಶುಕ್ರಾಂತ 7 ಧಾತುಗಳ ಮಲವಾಗಿರುತ್ತವೆ. ಹೀಗೆ ಧಾತುಗಳ ಪಾಕದಿಂದ ಪ್ರಸಾದ-ಕಿಟ್ಟವೆಂಬ ಎರಡು ಭಾಗಗಳಾಗಿರುತ್ತವೆ. ಹೀಗೆ ಪರ ಸ್ಪರ ಆಧರಣೆಯ ದೆಸೆಯಿಂದ ಧಾತುಗಳೊಳಗಿನ ಸ್ನೇಹಪರಂಪರೆಯು (ಸಾರದ ಧಾತ್ವಂತರ ಗತಿಯು) ಕೆಲವರು ಒಂದು ಹಗಲು ಮತ್ತು ರಾತ್ರಿಯಿಂದ ಎಂತಲೂ—ಕೆಲವರು ಆರು ದಿನ ಗಳಿಂದ ಎಂತಲೂ ಹೇಳುತ್ತಾರೆ—ಕಡೇ ಪಕ್ಷದಲ್ಲಿ ಆಹಾರವು ಪಾಕಕ್ರಮಾದಿಗಳಿಂದ ಒಂದು ತಿಂಗಳಲ್ಲಿ ಶುಕ್ರರೂಪವನ್ನು ಹೊಂದುತ್ತದೆ. ಆಹಾರದ ಧಾತುಗಳು ಎಡೆಬಿಡದೆ ಚಕ್ರದಂತೆ ಪರಿವರ್ತನೆ ಮಾಡುತ್ತಿರುತ್ತವೆ.

ಷರಾ —'ಗ್ರಹಣೀ' ಎಂಬದು ಕ್ಷುದ್ರಾನ್ತ್ರದ ಬುಡವಾದ 'ಡ್ಯುವೊಡೇನಮ್' (ಸಂ 133 ನೋಡು) ಆಹಾರಾದಿ ದ್ರವ್ಯಗಳ ಸಾರವನ್ನು ಹೀರಿ ಉಪಯೋಗಿಸಿಕೊಳ್ಳುವ ಕೆಲಸವು ಅನ್ನನಾಳದ ಬುಡವಾದ ಬಾಯಿ ಹಿಡಿದು ಕೊನೆಯಾದ ಗುದದ ವರೆಗೆ ಹೆಚ್ಚುಕಡಿಮೆಯಾಗಿ ನಡೆಯುತ್ತಿರುತ್ತದಾದರೂ, ಪಚನದ ಹೆಚ್ಚಿನ ಅಂಶವು ಗ್ರಹಣಿಯಲ್ಲಿ ನಡೆಯು ವದಾಗಿರುತ್ತದೆ ಯಾಕೆಂದರೆ ಜೀರ್ಣವು ಪೂರ್ತಿಯಾಗುವದಕ್ಕೆ ಅಗ್ನ್ಯಾಶಯದ (ಸಂ 138 ನೋಡು) ಮೇದೋಹೀರಕ ರಸವೂ, ಪಿತ್ತಾಶಯದ ಪಿತ್ತರಸವೂ, ಗ್ರಹಣಿಯಲ್ಲಿಯೇ ಉತ್ಪತ್ತಿಯಾಗುವ ಒಂದು ರಸವೂ, ಹೆಚ್ಚಾಗಿ ಗ್ರಹಣಿಯಲ್ಲಿ

ನಡೆಯುತ್ತಿರುವ ಮೂಲಭೂತಗಳ ಸಂಯೋಗವಿಯೋಗಗಳ ಹೇತುವಿನಿಂದ ಉಂಟಾಗುವ ಸ್ವಭಾವಿಕವಾದ ಉಷ್ಣತೆಯೂ, ಇವೆಲ್ಲಾ ಅತ್ಯಗತ್ಯವಾದವು ಅಗ್ನ್ಯಾಶಯದಿಂದ ಹೊರಟ ಒಂದು ಸ್ರೋತಸ್ಸು ಮತ್ತು ಪಿತ್ತಾಶಯದಿಂದ ಹೊರಟ ಒಂದು ಸ್ರೋತಸ್ಸು ಗ್ರಹಣಿಯ ಹೊಟ್ಟೆಯಲ್ಲಿ ಒಟ್ಟುಗೂಡಿ ಒಂದೇ ಸ್ರೋತಸ್ಸಾಗಿ ಒಳಗೆ ಸೇರುತ್ತದೆ, ಮತ್ತು ಅದರ ದ್ವಾರ ಆ ಎರಡು ಆಶಯಗಳ ರಸಗಳು ಗ್ರಹಣಿಯಲ್ಲಿ ಆಹಾರದೊಂದಿಗೆ ಸೇರುವದಾಗಿರುತ್ತದೆ ಹೀಗಿರುವದೇ, ಮೇಲೆ ಎತ್ತಿದ ವಹನಗಳಲ್ಲಿ ಜೀರ್ಣಮಾಡುವ ಶಕ್ತಿಯು ಪಾಚಕಪಿತ್ತವೆಂತ ಒಂದು ಕಡೆಯಲ್ಲಿ, ಗ್ರಹಣಿ ಎಂತ ಒಂದು ಕಡೆಯಲ್ಲಿ, ಪಿತ್ತಧರೆ ಕಲೆ ಎಂತ ಇನ್ನೊಂದು ಕಡೆಯಲ್ಲಿ, ಪಾಚಕಾಗ್ನಿ ಎಂತ ಮತ್ತೊಂದು ಕಡೆಯಲ್ಲಿ, ಪಾಂಚಭೌತಿಕ ಅಗ್ನಿ ಎಂತ ಬೇರೊಂದು ಕಡೆಯಲ್ಲಿ ಸಹ ಕಾಣುವದಕ್ಕೆ ಕಾರಣವಾಗಿರಬಹುದು ಪಾಯಿಯ ಎಂಜಲು ಮುಂತಾದ ದ್ರವಗಳು ಸೇರಿ ಉಂಟಾಗುವ ಕ್ಲೇದನ ಸ್ನೇಪನಗಳಿಂದಲೂ, ಆಮಾಶಯದ ಊಷ್ಮವಾಯುಗಳ ಪ್ರೇರಣದಿಂದ ಉಂಟಾಗುವ ಪಕ್ವಗಳ ಮಾಂಸಖಂಡಗಳ ಸಂಕೋಚನಪ್ರಸರಣವ್ಯಾಪಾರಗಳಿಂದಲೂ, ಆಹಾರವು ಆಮಾಶಯದಲ್ಲಿ ಸ್ವಲ್ಪ ಕರಗುವದಲ್ಲದೆ, ನೊರೆ ಕೂಡಿಕೊಂಡು, ರುಚಿಯಲ್ಲಿ ಸೀಯಾಗುತ್ತದೆ ಆನಂತರ ಅಲ್ಲಿಯೇ ಗಾಸ್ಟ್ರಿಕ್ ಜ್ಯೂಸ್ (gastric juice) ಎಂಬ ಹುಳಿ ರಸವು ಅದರೊಂದಿಗೆ ಸೇರಿ, ಆ ಆಹಾರವು ಹುಳಿಯಾಗುತ್ತದೆ ಅದು ಗ್ರಹಣಿಯನ್ನು ಸೇರಿದ ಮೇಲೆ ಅಲ್ಲಿಯ ಪಾಕದಿಂದ ಅದರ ಹುಳಿರುಚಿಯು ಹೋಗಿ, ಪುನಃ ಮಧುರ ಮತ್ತು ಪಾರ ರುಚಿಗಳು ಉಂಟಾಗುತ್ತವೆ ಈ ಪಾರರುಚಿಗೂ ಬಿತ್ತನ್ನು ಪಚನ ಮಾಡುವದಕ್ಕೂ, ಮೇದೋಧೀರಕರಸವೇ ಮುಖ್ಯ ಕಾರಣ ಆಹಾರದ ಸಾರ ಮತ್ತು ಮಲ ಪ್ರತ್ಯೇಕವಾಗುವಂಥಾದ್ದು ಹೆಚ್ಚಾಗಿ ಗ್ರಹಣಿಯಲ್ಲಿ ಆಗಿರುತ್ತದೆ ಸಪೂರ ಸ್ರೋತಸ್ಸಾದ ಗ್ರಹಣಿಯನ್ನು ಒಲೆಗೂ, ಅದರಲ್ಲ ನಾನಾ ಕಾರಣಗಳಿಂದ ಉಂಟಾಗುವ ಪಿಸಿಯನ್ನು ಉರಿಗೂ' ಅದಕ್ಕೆ ಮೇಲೆ ಅಡ್ಡಕ್ಕೆ ನಿಂತಿರುವ ಸ್ಥೂಲ ಜೀಲವಾದ ಆಮಾಶಯದೊಳಗಿನ ಹೆಚ್ಚು ದ್ರವದಿಂದ ಕೂಡಿರುವ ಆಹಾರದ ಕಾಳುಗಳನ್ನು ಒಲೆ ಮೇಲೆ ಬೇಯಲಿಕ್ಕೆ ಇಟ್ಟ ಪಾತ್ರದೊಳಗಿನ ತುಂಬ ನೀರು ಕೂಡಿರುವ ಅಕ್ಕಿಕಾಳುಗಳಿಗೂ ಚರಕಾದಿಗಳು ಹೋಲಿಸಿದ್ದಾಗಿಯೂ, ಆಮಾಶಯದಲ್ಲ ಮೊದಲು ಉಂಟಾಗುವ ಮಧುರತ್ವವು ಎಳೇ ಪಾಕದಿಂದ ಎಂತಲೂ ಕಡೆಗೆ ಉಂಟಾಗುವ ಹುಳಿಯು ಅತಿಪಾಕದಿಂದ ಎಂತಲೂ ಸುಶ್ರುತಾದಿಗಳು ಅಭಿಪ್ರಾಯ ಪಟ್ಟದ್ದಾಗಿಯೂ ಕಾಣುತ್ತದ

121. ರಸಾದಿಗಳ ಪಾಕಕಾಲ

ಸ (ರಸಃ) ಖಲು ತ್ರೀಣಿ ತ್ರೀಣಿ ಕಲಾಸಹಸ್ರಾಣಿ ಪಂಚದಶ ಚ ಕಲಾ ಏಕೈಕಸ್ಮಿನ್ ಧಾತಾವವತಿಷ್ಠತೇ ಏವಂ ಮಾಸೇನ ರಸಃ ಶುಕ್ರೀಭವತಿ ಸ್ತ್ರೀಣಾಂ ಚಾರ್ತವಮಿತಿ | (ಸು 48)

ರಸವು ಒಂದೊಂದು ಧಾತುವಿನಲ್ಲಿ 3015 ಕಲಾಕಾಲದ ವರೆಗೆ, ಅಂದರೆ 5 ದಿನ, ನಿಲ್ಲುತ್ತದೆ, ಹೀಗೆ ಒಂದು ತಿಂಗಳಲ್ಲಿ ರಸವು ಗಂಡಸರಲ್ಲಿ ಶುಕ್ರವಾಗುತ್ತದೆ. ಮತ್ತು ಹೆಂಗಸರಲ್ಲಿ ರಜಸ್ಸು ಆಗುತ್ತದೆ

ವಿಂಶತಿಕಲೋ ಮುಹೂರ್ತಃ ಕಲಾದಶಭಾಗಶ್ಚ | (ಸು. 19.)

ಮುಹೂರ್ತ ಅಥವಾ 2 ಗಳಿಗೆಗೆ $20\frac{1}{10}$ ಕಲೆಗಳು ಆಗಿರುತ್ತವೆ.

ಪರಾ ಆಯುರ್ವೇದಗ್ರಂಥಗಳಲ್ಲಿ ಅಲ್ಲಲ್ಲಿ ಹೇಳಿರುವ ಶಾರೀರವರ್ಣನೆಗಳನ್ನೆಲ್ಲಾ ಒಟ್ಟಾಗಿ ಸೇರಿಸಿ ಸವಿಸ್ತಾರ ಬರೆದರೆ, ಅದೇ ಒಂದು ದೊಡ್ಡ ಗ್ರಂಥವಾಗಬಹುದು ಶಸ್ತ್ರಚಿಕಿತ್ಸೆ ನಡಸಲಪೇಕ್ಷಿಸುವವರು ಅವುಗಳನ್ನೆಲ್ಲಾ ಸಂಪೂರ್ಣವಾಗಿ ಓದಿ ತಿಳಿಯತಕ್ಕದ್ದು ಮಾತ್ರವಲ್ಲದೆ, ಮೃತಶರೀರದ ಪರೀಕ್ಷೆಯಿಂದ ಆ ಜ್ಞಾನವನ್ನು ಪೂರ್ತಿಪಡಿಸಿಕೊಳ್ಳಬೇಕು ಕಾಯಚಿಕಿತ್ಸೆಗೆ ಬೇಕಾದ ಕೆಲವು ಮುಖ್ಯ ಅಂಶಗಳನ್ನು ಮಾತ್ರ ಈ ಅಧ್ಯಾಯದಲ್ಲಿ ಸೇರಿಸಿಯದೆ ಉಳಿದ ಕೆಲವು ಅಂಶಗಳನ್ನು ಬೇಕಾದ ಹಾಗೆ ಚಿಕಿತ್ಸಾಭಾಗದಲ್ಲಿ ಎವರಿಸಲಾಯಿತು

(b) ಶಾರೀರವರ್ಣನ—ಪಾಶ್ಚಾತ್ಯರೀತ್ಯಾ.

ಶರೀರದ ಅಂಗಪ್ರತ್ಯಂಗಗಳ ಕುರಿತು ಪ್ರಾಚೀನ ಹಿಂದು ವೈದ್ಯಗ್ರಂಥಗಳಲ್ಲಿರುವ ವಿವರಣಗಳನ್ನೂ, ಪಾಶ್ಚಾತ್ಯ ಶಾಸ್ತ್ರಜ್ಞರು ಮಾಡಿದ ಶೋಧನೆಗಳ ಫಲಿತಾಂಶಗಳನ್ನೂ, ಪರ್ಯಾಲೋಚಿಸಿದ್ದಲ್ಲಿ ತೋರುವ, ನಮ್ಮ ವೈದ್ಯರು ತಿಳಿಯಬೇಕಾದ, ಕೆಲವು ಅಂಶಗಳು ಈ ಭಾಗದಲ್ಲಿ ವರ್ಣಿಸಲಾಗುತ್ತವೆ.

ಚರ್ಮಗಳು

122. ಪಾಶ್ಚಾತ್ಯರೀತ್ಯಾ ಚರ್ಮಗಳು ಮುಖ್ಯವಾಗಿ ಎರಡು ಅವುಗಳಲ್ಲಿ 1ನೇದು ನಾಲ್ಕು ಪದರುಗಳುಳ್ಳದ್ದು, 2ನೇದು 2 ಪದರುಗಳುಳ್ಳದ್ದು, ಇವೆರಡು ಚರ್ಮಗಳಿಗೆ ಮತ್ತು ಅವುಗಳಿಗಾಧಾರವಾದ ಮಾಂಸಖಂಡ ಅಥವಾ ಎಲುಬಿಗೆ ಮಧ್ಯಕ್ಕೆ ಇನ್ನೊಂದು ಹೊದಿಕೆಯುಂಟು 1ನೇ ಚರ್ಮವು ಕೈಕಾಲುಗಳ ಪಾದತಲಗಳಲ್ಲಿಯೂ, ಬೆನ್ನಿನಲ್ಲಿಯೂ ಅತಿ ದಪ್ಪವಾಗಿದೆ. ಬೆನ್ನಿನ ಚರ್ಮವು ಕಾಲಿಂಚಿನಷ್ಟು ದಪ್ಪವಿರಬಹುದು. ಮೂರನೇ ಹೊದಿಕೆಯು ಹೊಟ್ಟೆಯ ಚರ್ಮಗಳ ಅಡಿಯಲ್ಲಿ ಬಹಳ ದಪ್ಪವಾಗಿರುತ್ತದೆ. 2ನೇ ಚರ್ಮದಲ್ಲಿ ಸ್ವೇದದ ಗಂಟುಗಳು (ಅಥವಾ ಗೋಲಗಳು) ಮತ್ತು ಮೇದಸ್ಸಿನ ಗ್ರಂಥಿಗಳು ಇರುತ್ತವೆ ಸೆಕೆಗುಳ್ಳೆ ಎದ್ದಾಗ್ಗೆ, 1ನೇ ಚರ್ಮವು 2ನೇ ಚರ್ಮದಿಂದ ಪ್ರತ್ಯೇಕವಾಗುತ್ತದೆ. ಒಂದನೇ ಚರ್ಮದ ಬುಡದಲ್ಲಿ ಕಪ್ಪುವರ್ಣದ ಸೂಕ್ಷ್ಮವಾದ ಚೀಲಗಳು ಇರುವ ದೆಸೆಯಿಂದ ಮನುಷ್ಯನ ಕಪ್ಪುವರ್ಣ ಉಂಟಾಗುವದು ಮೇದಸ್ಸಿನ ಗ್ರಂಥಿಗಳೊಳಗಿನ ರಸವು ಹೊರಗೆ ಒರುವರೆ ಅಡ್ಡಿಯಾದಾಗ ಮೊಡಗಳು ಉಂಟಾಗುತ್ತವೆ. ಆ ಗ್ರಂಥಿಗಳು ಮುಖದಲ್ಲಿಯೂ ಮೂಗಿನ ಇತ್ತಟ್ಟೂ ಹೆಚ್ಚಾಗಿ ಇರುತ್ತವೆ. ಈ ಗ್ರಂಥಿಗಳಿಂದ ಹೊರಟುಬರುವ ಜಿಡ್ಡಾದ ರಸದಿಂದಲೇ ಹೊರಗಿನ ಚರ್ಮವೂ, ಕೂದಲುಗಳೂ, ನುಣುಪಾಗಿರುವದು ಎಂತ ಕಾಣುತ್ತದೆ (ಸುಶ್ರುತದಲ್ಲಿ 7ನೇ ಚರ್ಮವಾಗಿ ಕೂಡಿಸಿದ ಮಾಂಸಧರಾ ಎಂಬದು ಪಾಶ್ಚಾತ್ಯರಂತೆ ಚರಕನು ಚರ್ಮವಲ್ಲ ಎಂತ ಎಣಿಸಿರಬೇಕು ಪ್ರಥಮ ನಾಲ್ಕು ಚರ್ಮಗಳು ಪಾಶ್ಚಾತ್ಯರೀತ್ಯಾ ಹೊರ ಚರ್ಮಕ್ಕೂ, 5ನೇ 6ನೇ ಚರ್ಮಗಳು ಒಳಗಿನ ಚರ್ಮಕ್ಕೂ ಸೇರಿದ ಪದರುಗಳಾಗಿರಬಹುದು)

ಎಲುಬುಗಳು

123. ಶಿರಸ್ಸಿಗೂ ಮುಂಡಕ್ಕೂ ಆಧಾರವಾಗಿ ಅವುಗಳ ಭಾರವನ್ನು ಹೊತ್ತಿರುವದು ಬೆನ್ನಕೋಲೆಲುಬು ಇದರಲ್ಲಿ 33 ತುಂಡುಗಳು ಇವೆ. ಅವುಗಳಲ್ಲ ಕುತ್ತಿಗೆಯ ಹಿಂಬದಿ 7, ಎದೆಯ ಪಂಜರದ ಹಿಂಬದಿ 12, ಶ್ರೋಣಿ ಅಥವಾ ಸೊಂಟದ ಭಾಗದಲ್ಲಿ 5, ಇವುಗಳ ಕೆಳಗೆ 9. ಈ ಕಡೇ ಒಂಭತ್ತು ಬಾಲ್ಯದಲ್ಲಿ ಬೇರೆ ಬೇರೆಯಾಗಿದ್ದರೂ ಪ್ರಾಯಸ್ಥರಲ್ಲಿ ಕಡೇ ನಾಲ್ಕು ಕೂಡಿ 1, ಅದರ ಮೇಲಿನ 5 ಕೂಡಿ 1, ಹೀಗೆ 2 ಎಲುಬುಗಳಾಗಿ ಕಾಣುತ್ತವೆ. ಬಾಲವುಳ್ಳ ಪ್ರಾಣಿಗಳಲ್ಲಿ ಬಾಲವು ಬೆನ್ನೆಲುಬಿನ ಕೆಳಗಿನ ತುದಿಗೆ ಕೂಡಿರುತ್ತದೆ. ಬೆನ್ನಕೋಲಿನ ತುಂಡುಗಳೆಲ್ಲಾ ಸಾಧಾರಣ ಒಂದೇ ಮಾದರಿ. ಪ್ರತಿಯೊಂದು ಒಂದೂವರೆ ಇಂಚು ಅಗಲ ಮತ್ತು ಅರ್ಧ ಇಂಚು ದಪ್ಪವಾದ ಉರುಟು ತುಂಡಾಗಿದ್ದು, ಅದರ ಬೆನ್ನಬದಿಯಲ್ಲಿ ಒಂದು ಗೊಣಸು ಇರುತ್ತದೆ. ಈ ತುಂಡುಗಳು, ಮಧ್ಯ ಮೃದ್ವಸ್ಥಿ

ಯಿಟ್ಟು, ಸ್ನಾಯುಗಳಿಂದ ಕೂಡಿಸಿ ಬಿಗಿಯಲ್ಪಟ್ಟಿರುವದರಿಂದ ಕೋಲು ಒಂದೇ ಎಲುಬಾಗಿ ಕಾಣುವದಲ್ಲದೆ, ಗೊಣಸುಗಳ ಮಧ್ಯ ಒಂದೇ ನಾಳವುಂಟಾಗಿ, ಅದರೊಳಗೆ ನರದ ಮುಖ್ಯ ಹಗ್ಗ ಹೋಗಿ, ತಲೆಯೊಳಗಣ ಮೆದುಳಿಗೆ ಕೂಡುವದು. ಮೇಲಿನ ತುದಿಯ ಎರಡು ಎಲುಬಿನ ತುಂಡುಗಳು ತಲೆಯನ್ನೂ ಕೊರಳನ್ನೂ ಬೇಕಾದ ಹಾಗೆ ತಿರುಗಿಸಲಿಕ್ಕೆ ಅನುಕೂಲವಾಗಿ ಇರುತ್ತವೆ. ಮಿಕ್ಕ ತುಂಡುಗಳು ಅಲ್ಪಸ್ವಲ್ಪ ಚಲನೆಗೆ ಎಡೆಕೊಡುತ್ತವೆ ತಲೆಯೆಲುಬುಗಳಲ್ಲಿ ಕೆಳಗಿನ ದವಡೆ ಮಾತ್ರ ಬಿಜಾಗರಿರೂಪದ ಸಂದಿನಲ್ಲಿ ಆಧರಿಸಿದ್ದು, ಚಲನೆಗೆ ಅನುಕೂಲವಾಗಿರುವದು ಹೊರತು, ಉಳಿದ ಎಲುಬುಗಳೆಲ್ಲಾ ಒಂದಾಗಿ ಬಿಗಿಯಲ್ಪಟ್ಟವೆ. ಇದರಲ್ಲಿ ಎದುರಲ್ಲಿ ಕಣ್ಣುಗಳಿಗೆ ರಂಧ್ರಗಳು ಅಲ್ಲದೆ, ಬೆನ್ನಕೋಲಿನೊಳಗಿನ ನರದ ಹಗ್ಗಕ್ಕೆ ಒಂದು ರಂಧ್ರ ಇರುತ್ತದೆ. ಎದೆಕೋಲೆಲುಬಿನ ಕೆಳಗಿನ ತುದಿಯು ಮೃದ್ವಸ್ಥಿಯಾಗಿರುತ್ತದೆ. ಇದಕ್ಕೆ ಪಕ್ಕದೆಲುಬುಗಳು 12ರಲ್ಲಿ ಮೇಲಿನ ಏಳು ಕೂಡಿಕೊಂಡಿವೆ; ಅನಂತರದ 3 ಪಕ್ಕೆಲುಬುಗಳು ಅದನ್ನು ಸೇರುವ ಮೊದಲೇ ಒಂದಕ್ಕೊಂದು ಕೂಡಿಕೊಳ್ಳುತ್ತವೆ. ಉಳಿದ ಎರಡು ಎದೆಕೋಲಿಗೆ ಮುಟ್ಟದೆ, ಮಧ್ಯದಲ್ಲಿಯೇ ಅಂತ್ಯವಾಗಿ, ತೇಲಿ ನಿಂತ ಹಾಗೆ ಇವೆ. ಇವು ಹನ್ನೆರಡೂ ಹಿಂದೆ ಬೆನ್ನಕೋಲಿಗೆ ಕೂಡಿವೆ. ಸೊಂಟದಲ್ಲಿ ಅಂಡುಗಳ ಎರಡು ಎಲುಬುಗಳು ಮುಂದಿನಿಂದ ಒಂದಕ್ಕೊಂದು ಕೂಡಿವೆ; ಹಿಂದಿನ ಬೆನ್ನಕೋಲಿನ (9 ತುಂಡುಗಳಿಂದ ಕೂಡಿರುವ) ಕಡೇ ತುಂಡುಗಳೆರಡಕ್ಕೆ ಇತ್ತಟ್ಟು ಕೂಡುತ್ತವೆ. ಈ ಕೂಟಿನ ಮೇಲ್ಬದಿಯು ಹೊಟ್ಟೆಯ ಕಳಭಾಗಕ್ಕೆ ಆಧಾರವಾಗಿದೆ. ಹೊರಬದಿ ಇತ್ತಟ್ಟು ತೊಡೆ ಎಲುಬುಸಂದುಗಳು ಇರುತ್ತವೆ.

124. ದೇಹದ ಮುಂಡವು ಮಾಂಸಖಂಡಗಳಿಂದಲೂ, ಸ್ನಾಯುಗಳಿಂದಲೂ, ಮಾಡಲ್ಪಟ್ಟ ಕಮಾನಾಕಾರ (ಕೆಳಮುಖವಾದ ಅರ್ಧಚಂದ್ರಾಕಾರ)ವಾಗಿರುವ ಒಂದು ಹಾಳೆಯಿಂದ ಎರಡು ಅಂತಸ್ತುಗಳಾಗಿ ವಿಭಾಗಿಸಲ್ಪಟ್ಟದೆ ಈ ಹಾಳೆಗೆ ವಪಾವಹನ ಎಂದು ಹೆಸರು. ಎದುರು ಭಾಗದಲ್ಲಿ ಈ ಹಾಳೆಯ ಮೇಲಿನ ತುದಿಯು ಎದೆಕೋಲಿನ ಕೆಳಗಿನ ತುದಿಗೂ, ಅಲ್ಲಿ ಕೂಡುವ ಪಕ್ಕದೆಲುಬುಗಳ ತುದಿಗಳಿಗೂ ಬಿಗಿಯಲ್ಪಟ್ಟದೆ; ಹಿಂಬದಿ.

ವಪಾವಹನ

ಕಂಬಗಳ ಹಾಗೆ ಇರುವ ಎರಡು ಬಲವಾದ ಸ್ನಾಯುಗಳಿಂದ ಬೆನ್ನಿನ ಕೋಲೆಲುಬಿಗೂ, ಪಕ್ಕಗಳಲ್ಲಿ, ಕೆಳಗಿನ ಪಕ್ಕೆಲುಬುಗಳಿಗೂ, ವಪಾವಹನವು ಜೋಡಿಸಲ್ಪಟ್ಟದೆ. ಈ ಹಾಳೆಯಲ್ಲಿ ಅನ್ನನಾಳಕ್ಕೂ, ಕೆಲವು ಧಮನೀಗಳಿಗೂ ಬೇಕಾದಷ್ಟು ಮಾತ್ರ ರಂಧ್ರಗಳಿವೆ. ವಪಾವಹನದ ಮೇಲ್ಗಡೆಯ ಅಂತಸ್ತಿನಲ್ಲಿ ಚೇತನಾಸ್ಥಾನವಾದ ಹೃದಯವೂ, ಶ್ವಾಸಕೋಶಗಳೂ, ಇವುಗಳ ಮೂಲವಾದ ಕಫಾಶಯವೂ ಇರುತ್ತವೆ. ಯಕೃತ್, ಪ್ಲೀಹ, ಅಮಾಶಯ, ಮುಂತಾದವುಗಳಿಂದ ಕೂಡಿದ ಹೊಟ್ಟೆ ಅಥವಾ ಕೋಷ್ಠವು ವಪಾವಹನದ ಕೆಳಗೆ ಇರುತ್ತದೆ.

125. ಉಚ್ಛ್ವಾಸಕಾಲದಲ್ಲಿ ಈ ವಪಾವಹನದ ಮಧ್ಯಭಾಗವು ತಗ್ಗುವದರಿಂದ ಕಮಾನು ಕಡಿಮೆಯಾಗುತ್ತದೆ; ಎದೆಯ ಕೋಲೆಲುಬಿನ ತುದಿ ಸ್ವಲ್ಪ ಎದುರು ಬರುತ್ತದೆ; ಮತ್ತು ಪಕ್ಕದ ಎಲುಬುಗಳು ಸ್ವಲ್ಪ ಮೇಲಕ್ಕೆ ಹೋಗುತ್ತವೆ. ಮಾಂಸಖಂಡಗಳ

ಶ್ವಾಸಕೋಶ

ಸಂಕೋಚನಶಕ್ತಿಯಿಂದ ಉಂಟಾಗುವ ಈ ಚಲನೆಗಳಿಂದ ಮೇಲಿನ ಅಂತಸ್ತಿನ ಜಾಗವು ವೃದ್ಧಿಯಾಗಿ, ಶ್ವಾಸಕೋಶಗಳಲ್ಲಿರುವ ಅಸಂಖ್ಯೇಯವಾದ ಚಿಕ್ಕ ವಾಯುಚೀಲಗಳು ತುಂಬಿ ಉಬ್ಬುವದಕ್ಕೆ ಎಡೆಯಾಗುತ್ತದೆ. ಎದೆಯ ಕೋಲೆಲುಬು, ವಪಾವಹನ, ಮತ್ತು ಪಕ್ಕೆಲುಬುಗಳು ಯಥಾಸ್ಥಾನಗಳಿಗೆ ತಿರುಗಿದೊಡನೆ, ಪುನಃ ಸ್ಥಳಸಂಕೋಚವಾಗುವದರಿಂದ, ಶ್ವಾಸಕೋಶಗಳ ವಾಯುಚೀಲಗಳಲ್ಲಿ ಹೆಚ್ಚಿದ್ದ ಗಾಳಿಯು ಹೊರಗೆ ಹೋಗುವದೇ ನಿಃಶ್ವಾಸ. ಹಿಂದೆ ಬಿನ್ನಿನ ಕೋಲೆಲುಬುಗಳು, ಎದುರು ಎದೆಯ ಕೋಲೆಲುಬು, ಮೇಲೆ ಚಟ್ಟಿಯಾಗಿರುವ 1ನೇ ಪಕ್ಕೆಲುಬುಗಳು ಮತ್ತು ಹೆಗಲ ಎಲುಬುಗಳು, ಪಕ್ಕಗಳಲ್ಲಿ ಪಕ್ಕೆಲುಬುಗಳು ಮತ್ತು ಈ ಎಲ್ಲಾ ಎಲುಬುಗಳಿಗೆ ಸಂಯುಕ್ತವಾದ ಮಾಂಸಖಂಡಗಳು, ಕೆಳಗೆ ವಪಾವಹನ ಮತ್ತು ಇವುಗಳಿಗೆಲ್ಲಾ ಹೊದಿಕೆಗಳು, ಇಷ್ಟು ಬಂದೋಬಸ್ತುಳ್ಳ ಪಂಜರದಲ್ಲಿ ಚೇತನಾಸ್ಥಾನವಾದ ಹೃದಯ ಮತ್ತು ಅದಕ್ಕೆ ಸಂಬಂಧಪಟ್ಟ ಶ್ವಾಸಕೋಶಗಳು ಸ್ಥಾಪಿಸಲ್ಪಟ್ಟವೆ ಯಾಕಂದರೆ ಮುಖದ್ವಾರದಿಂದ ಕಫಾಶಯಕ್ಕಾಗಿ ಶ್ವಾಸಕೋಶಗಳಿಗೆ ಹೊರಗಿನ ಗಾಳಿಯು ಹೋಗಬೇಕಲ್ಲದೆ, ಆ ಪಂಜರದಲ್ಲಿ ಬೇರೆ ಎಲ್ಲಿಯಾದರೂ ರಂಧ್ರ ಬಿದ್ದು ಹೊರಗಿನ ಗಾಳಿಯು ಶ್ವಾಸಕೋಶಗಳಿಗೂ ಪಂಜರದ ಒಳಗಿನ ಹೊದಿಕೆಗೂ ಮಧ್ಯ ಇರುವ ಎಡೆಯಲ್ಲಿ ಸೇರಿದ ಪಕ್ಷದಲ್ಲಿ, ಕೂಡಲೇ ಶ್ವಾಸಕೋಶಗಳ ವ್ಯಾಪಾರವು ನಿಂತು ಮರಣ ಉಂಟಾಗುವದು. ಶ್ವಾಸಕೋಶಗಳ ಹೊರಭಾಗದಲ್ಲಿ ಗಾಳಿ ಇಲ್ಲದೆ ಇರುವದರಿಂದ, ಹೊರಗಿನಿಂದ ಮೂಗು, ಬಾಯಿಗಾಗಿ ಶ್ವಾಸಕೋಶಗಳೊಳಗೆ ಸೇರುವ ಗಾಳಿಯು ಚಿಕ್ಕ ಚಿಕ್ಕ ವಾಯುಚೀಲಗಳನ್ನು ತುಂಬ ಉಬ್ಬಿಸುತ್ತದೆ ಈ ಕಾರಣದಿಂದ ಶ್ವಾಸಕೋಶಗಳು ಎದೆಯ ಮೂಲದಲ್ಲಿ ಮಾತ್ರ ವಿನಾ ಉಳಿದ ಸರ್ವತ್ರ ಪಂಜರಕ್ಕೆ ಅವಲಂಬಿಸದೆ ಇರುವದಾದರೂ, ಪಂಜರದ ಒಳಬದಿಗೆ ಒತ್ತಿಕೊಂಡೇ ಇದ್ದು, ಪಂಜರವು ದೊಡ್ಡದು ಸಣ್ಣದು ಆದ ಹಾಗೆ, ಶ್ವಾಸಕೋಶಗಳು ಸಣ್ಣವು ದೊಡ್ಡವು ಆಗುವವು. ಶ್ವಾಸಕೋಶಗಳು ಎರಡು ಗಾಳಿ ಚೀಲಗಳುಳ್ಳ ತಿದಿಯಂತೆ ಇರುವವು ಈ ತಿದಿಕೊಳಿವೆಯ ಮುಖವು ಬಾಯಿಯೊಳಗಿರುವ ಅನ್ನನಾಳದ್ವಾರದ ಎದುರು ಇರುವದು. ಕಿರುನಾಲಿಗೆಯನ್ನುವಂಧಾದ್ದು ಕೊಳಿವೆಬಾಯಿಯ ಮುಚ್ಚಳ. ಸೇವಿಸಿದ ಅನ್ನಪಾನಾದಿಗಳು ಶ್ವಾಸಕೋಶಗಳ ಕೊಳಿವೆದ್ವಾರದೊಳಗೆ ಬೀಳದೆ ದಾಟಿಹೋಗುವದಕ್ಕೋಸ್ಕರ, ಕಿರಿನಾಲಿಗೆಯು ಆ ದ್ವಾರವನ್ನು ಮುಚ್ಚಿಡುವದು. ಆ ಕೊಳಿವೆಯು ಗಂಟಲನ್ನು ದಾಟಿ, ಎದೆಯೊಳಗೆ ಸೇರಿದೊಡನೆ, ಎರಡು ಶಾಖೆಗಳಾಗಿ ಒಡೆದು, ಒಂದು ಬಲದ ಶ್ವಾಸಕೋಶದೊಳಗೂ, ಒಂದು ಎಡದ ಶ್ವಾಸಕೋಶದೊಳಗೂ ಹೋಗಿ, ಉತ್ತರೋತ್ತರ ಕವಲುಗಳೊಳಗೆ ಕವಲುಗಳಾಗಿ, ಕೊನೆಗೆ ಅತಿ ಸೂಕ್ಷ್ಮವಾಗಿ, ತೊಟ್ಟುಗಳ ಹಾಗೆ ಚಿಕ್ಕ ಗಾಳಿಚೀಲಗಳಲ್ಲಿ ಸೇರುತ್ತವೆ. ನೊರೆಗುಳ್ಳೆಗಳ ಹಾಗೆ ತೋರುವ ಈ ಗಾಳಿ ಚೀಲಗಳ ಹೊದಿಕೆಯನ್ನು ಸುತ್ತಿಕೊಂಡು ಸೂಕ್ಷ್ಮವಾದ ರಕ್ತನಾಳಗಳು ಇರುತ್ತವೆ ಈ ರಕ್ತನಾಳಗಳ ಹೊದಿಕೆಯೂ, ಗಾಳಿಚೀಲದ ಹೊದಿಕೆಯೂ, ಅತಿ ತೆಳ್ಳಗಾಗಿದ್ದು, ನಾಳಗಳಲ್ಲಿರುವ ರಕ್ತಕ್ಕೂ, ಚೀಲಗಳಲ್ಲಿರುವ ಪ್ರಾಣವಾಯುವಿಗೂ ಸಂಪರ್ಕವಾಗುತ್ತದೆ. ಗಾಳಿಯಿಂದ ರಕ್ತವು ಬೇಕಾದ ಗುಣವನ್ನು ಆಕರ್ಷಿಸಿಕೊಂಡು, ತನ್ನಲ್ಲಿರುವ ಮಲವನ್ನು ಆ ಗಾಳಿಗೆ ಸೇರಿಸಿಬಿಡುತ್ತದೆ. ಹೀಗೆ ರಕ್ತವು ಶುದ್ಧವಾಗುತ್ತದೆ. ಕಫಾಶಯವಾದ ತಿದಿ ಕೊಳಿವೆಯು ಪ್ರಥಮತಃ ಕವಲೊಡೆಯುವ ಸ್ಥಳದಲ್ಲಿ ಶ್ವಾಸಕೋಶಗಳೆರಡು ಒಂದಕ್ಕೊಂದು

ಕೂಡುತ್ತವೆ. ಅಲ್ಲಿಯೇ ಶ್ವಾಸಕೋಶಗಳೆರಡು ಹಿಂಬದಿಯ ಬೆನ್ನೆಲುಬಿಗೆ ಕಟ್ಟಲ್ಪಟ್ಟವೆ. ಅದನ್ನು ಶ್ವಾಸಕೋಶಗಳ ಮೂಲವನ್ನುವರು. ಎದೆಗೂಡಿನ ಒಳಬದಿಯ ಹೊದಿಕೆಯು ಶ್ವಾಸ ಕೋಶಗಳೆರಡರ ಹೊದಿಕೆಯ ಹೊರಗೆ ಎರಡನೇ ಚೀಲವೆಂಬಂತೆ ಎರಡು ಭಾಗಗಳಾಗಿ, ಎದೆಯ ಕೋಲೆಲುಬಿನ ಬಲಬದಿಗೆ ಒಂದು ಭಾಗ, ಮತ್ತು ಎಡಬದಿಗೆ ಒಂದು ಭಾಗದಂತೆ ನಿಂತಿವೆ. ಹೃದಯವು ಇದಕ್ಕೆ ಹೊರಗಾಗಿ ಪ್ರತ್ಯೇಕ ಚೀಲವಾಗಿರುತ್ತದೆ ಶ್ವಾಸಕೋಶಗಳ ಮೂಲವು, ಎದೆಯ ಕೋಲೆಲುಬಿಗೆ ಪಕ್ಕದ 1—2ನೇ ಎಲುಬುಗಳು ಕೂಡುವ ಮಧ್ಯ ಸ್ಥಳದ ಹಿಂದೆ, ಮತ್ತು ಬೆನ್ನೆಲುಬಿನ 3ನೇ 4ನೇ ಅಡ್ಡ ಮೊಳೆಗಳ ಎದುರು ಆಗಿರುತ್ತದೆ.

126. ಶ್ವಾಸಕೋಶಗಳ ಮೂಲದಲ್ಲಿ ಎದುರುಭಾಗ ಹೃದಯವು ನಿಂತಿದೆ. (ಇದರ ಆಕಾರವು ಅರಳಲಿಕ್ಕೆ ಸಿದ್ಧವಾದ ತಾವರಮೊಗ್ಗೆಯ ಹಾಗಿನದೆನ್ನಬಹುದು.) ಆದರ

ಹೃದಯ

ಬುಡವು ಎದೆಯ ಕೋಲೆಲುಬಿನ ಆಡಿಯಲ್ಲಿ 3ನೇ ಪಕ್ಕಲುಬು ಸೇರುವಲ್ಲಿ, ಎಡ ಬದಿಯು ಬಲಬದಿಗಿಂತ ಸ್ವಲ್ಪ ಮೇಲೆ ನಿಲ್ಲುವ ಹಾಗೆ ಓರೆಯಾಗಿ ಇದೆ ಕಮಲದ ಕೊನೆಯು ಪಂಜರದ ಎಡಭಾಗದಲ್ಲಿ, 5ನೇ 6ನೇ ಪಕ್ಕೆಲುಬುಗಳ ಮಧ್ಯ ಗೂಡಿನ ಎದುರಿನ ಆವರಣಕ್ಕ ತಗಲಕೊಂಡು ಉಂಟು 3ನೇ ಪಕ್ಕಲುಬಿನ ಮೇಲಿನ ಅಂಚಿನಲ್ಲಿ ಎದೆಯ ಕೋಲೆಲುಬಿಗೆ ಅರ್ಧ ಇಂಚು ಬಲ ಹಿಡಿದು, ಒಂದು ಇಂಚು ಎಡದ ವರೆಗೆ ಕಮಲದ ಬುಡದ ಅಂಚು ಇರುವದು ಕೊನೆಯು ಎಡದ ಮೊಲೆತೊಟ್ಟಿನಿಂದ ಸುಮಾರು 2 ಇಂಚು ಕೆಳಗಿನ ಬಿಂದುವಿನಿಂದ ನೆಟ್ಟಗೆ 1 ಇಂಚು ಬಲಕ್ಕೆ (ಅಂದರೆ ಎದೆಯ ಕೋಲೆಲುಬಿನ ಕಡೆ) ಇರುವದು. ಈ ಕೊನೆಯ ಅಡಿಬದಿಯು ವಪಾವಹನದ ಮಧ್ಯದ ಸ್ನಾಯುವಿನ ಮೇಲೆ ಬಿಗಿಯಲ್ಪಟ್ಟದೆ. ಒಡವು ದೊಡ್ಡದಾದ ಧಮನಿ ಮುಂತಾದ ಹೃದಯಕ್ಕೆ ಸಂಬಂಧ ಪಟ್ಟ ನಾಡಿಗಳಿಗೆ ಸುತ್ತಿ ಅಂಟಿಕೊಂಡು ಇದೆ. ಹೃದಯದಲ್ಲಿ 4 ಅಂಕಣಗಳು. ಬಲಬದಿ 2, ಎಡಬದಿ 2 ಎಡಬದಿಗೂ ಬಲಬದಿಗೂ ಮಧ್ಯ ಪೂಂಸದ ಗೋಡೆ ಇದೆ. ಅದರಲ್ಲಿ ದ್ವಾರ ಇಲ್ಲ. ಈ ಗೋಡೆಯು ಓರೆಯಾಗಿರುತ್ತದೆ ಆದ್ದರಿಂದ ಎದುರಿನಲ್ಲಿ ಬಲಬದಿಯೇ ಹೆಚ್ಚಾಗಿ ಕಾಣುತ್ತದೆ. ಎಡಬದಿಯ ಹೆಚ್ಚಿನ ಅಂಶವು ಆದರ ಆಡಿಯಲ್ಲಿ ಆಡಗಿಯದೆ. ಎರಡು ಬದಿಗಳಲ್ಲಿಯೂ ಮೇಲಿನ ಅಂಕಣದಿಂದ ಕಳಗಿನ ಅಂಕಣಕ್ಕೆ ಒರುವ ಹಾಗೆ ದ್ವಾರವಿದೆ ಈ ದ್ವಾರಗಳ ಮುಚ್ಚಳಗಳು ಕೆಳಗಿನ ಅಂಕಣಗಳಲ್ಲಿದ್ದು, ಮೇಲಕ್ಕೆ ತೆರೆಯಲಾರವು, ಆದ್ದರಿಂದ ಮೇಲಿನ ಅಂಕಣದಿಂದ ರಕ್ತವು ಕೆಳಗಿನ ಅಂಕಣಕ್ಕೆ ಬಂದ ಮೇಲೆ ದ್ವಾರವು ಮುಚ್ಚಿಕೊಳ್ಳುವದರಿಂದ ರಕ್ತವು ಮೇಲಿನ ಅಂಕಣಕ್ಕೆ ತಿರುಗಿ ಹೋಗಲಿಕ್ಕೆ ಸಾಧ್ಯವಿಲ್ಲ. ಬಲದ ಅಂಕಣಗಳ ಮಧ್ಯದ್ವಾರದ ಮುಚ್ಚಳದಲ್ಲಿ 3 ತುಂಡುಗಳಿವ. ಎಡ ಅಂಕಣಗಳ ಮಧ್ಯದ ಮುಚ್ಚಳಕ್ಕೆ ಎರಡೇ ತುಂಡುಗಳು. ಇಡೀ ಹೃದಯದ ಪರಿಮಾಣವು ಆಯಾ ಮನುಷ್ಯನ ಕೈಮುಷ್ಟಿಯಷ್ಟು ಎಂಬದು ಸಾಧಾರಣವಾದ ಹೇಳಿಕೆ. ಹೃದಯಕ್ಕೆ 2 ಹೊದಿಕೆಗಳು ಇವೆ. 2ನೇ ಹೊದಿಕೆಯು 1ನೇ ಹೊದಿಕೆಗೆ ಹೃದಯದ ಮೂಲದಲ್ಲಿ ಮಾತ್ರ ಕೂಡಿರುವದರಿಂದ, ಹೃದಯವು ಒಂದು ಪ್ರತ್ಯೇಕ ಚೀಲದೊಳಗೆ ಇರುವ ಹಾಗೆ ಕಾಣುತ್ತದೆ. ತೆಳ್ಳಗಾಗಿರುವ ಚೀಲವು ಮೂಲದಲ್ಲಿ ಮಾತ್ರ ಮೇದಸ್ಸಿನಿಂದ ತುಂಬಿ ದಪ್ಪವಾಗಿರುತ್ತದೆ. ಕೆಳಗಿನ ಅಂಕಣಗಳಿಗೂ ಮೇಲಿನ ಅಂಕಣಗಳಿಗೂ ನಡುವೆ ಅಡ್ಡವಾಗಿ ಹೆಚ್ಚು ಮೇದಸ್ಸಿರುವ ಒಂದು ಕಂತ

ವಾದ ಗೀರು ಉಂಟು. ಚೀಲವನ್ನು ಸೀಳಿದರೆ, ಅದರ ಮೈಯಿಂದ ಅರಸಿನವಾದ ರಸ ಬರುವದು. 4 ಅಂಕಣಗಳಲ್ಲಿ ಮೇಲಿನ ಅಂಕಣಗಳಿಗಿಂತ ಕೆಳಗಣ ಅಂಕಣಗಳು ಸ್ಥೂಲವಾದ ಹೊದಿಕೆಯುಳ್ಳವು ಕೆಳಗಣ ಅಂಕಣಗಳೆರಡರಲ್ಲಿ ಎಡದ್ದು ಬಲದ್ದಕ್ಕಿಂತ ಸುಮಾರು 3 ಪಾಲಷ್ಟು ದಪ್ಪವಾದ ಹೊದಿಕೆಯುಳ್ಳದ್ದು. (ಕಮಲದ ಹೋಲಿಕೆಗೆ ಬಲ ಪಡುವ ಹಾಗೆ) ಹೃದಯದ ಮೂಲದ ಎಡಬಲಗಳಲ್ಲಿ ಮೇಲಣ ಅಂಕಣಗಳಿಗೆ ಕೂಡಿ ಕೊಂಡ ಎರಡು ಕಿವಿಗಳಿವೆ. ಕೈಗಳು, ತಲೆ, ಕುತ್ತಿಗೆ ಮೊದಲಾದ ಮೇಲಿನ ಭಾಗಗಳಿಂದ ರಕ್ತವನ್ನು ಹೃದಯಕ್ಕೆ ಸಾಗಿಸುವ ಧಮನಿ ಒಂದು, ಕಾಲುಗಳು ಹೊಟ್ಟೆ ಮೊದಲಾದ ಕೆಳಗಿನ ಭಾಗಗಳಿಂದ ರಕ್ತವನ್ನು ತರುವ ಧಮನಿ ಒಂದು, ಹೃದಯದೊಳಗೆನೇ ಸಂಚರಿಸುವ ರಕ್ತವನ್ನು ತರುವ ಧಮನಿ ಒಂದು, ಹೀಗೆ 3 ಧಮನಿಗಳು ಬಲದ ಬದಿಯ ಮೇಲಿನ ಅಂಕಣದೊಳಗೆ ಸೇರುತ್ತವೆ. ಅದೇ ಬದಿಯ ಕೆಳಗಿನ ಅಂಕಣದಿಂದ ಒಂದು ಧಮನಿ ಹೊರಟು, 2 ಕವಲುಗಳಾಗಿ ಒಡೆದು, 2 ಶ್ವಾಸಕೋಶಗಳಿಗೆ ರಕ್ತವನ್ನು ಸಾಗಿಸುತ್ತದೆ. ಶ್ವಾಸಕೋಶಗಳೊಳಗೆ ಸಂಚಾರಮಾಡುವ ನಾಡಿಗಳು 4 ಧಮನಿಗಳಾಗಿ, ಎಡದ ಬದಿಯ ಮೇಲಿನ ಅಂಕಣದೊಳಗೆ ಸೇರುತ್ತವೆ. ಅದೇ ಬದಿಯ ಕೆಳಗಿನ ಅಂಕಣದಿಂದ ಒಂದು ದೊಡ್ಡ ಧಮನಿಯು ಹೊರಟು ಉತ್ತರೋತ್ತರ ಕವಲುಗಳಾಗುತ್ತಾ, ಶುದ್ಧವಾದ ರಕ್ತವನ್ನು ಶರೀರದ ಎಲ್ಲಾ ಪ್ರದೇಶಕ್ಕೂ ಒಯ್ಯುತ್ತದೆ. ಹೃದಯದ ಮೇಲಿನ ಅಂಕಣಗಳೆರಡೂ ಏಕಕಾಲದಲ್ಲಿ ಸಂಕೋಚವಾಗುತ್ತವೆ. ಆಗ್ಗೆ ಅವುಗಳಲ್ಲಿ ತುಂಬಿದ್ದ ರಕ್ತವು ಕೆಳಗಿನ ಅಂಕಣದೊಳಗೆ ಸೇರುತ್ತದೆ. ಅನಂತರ ಕೆಳಗಿನ 2 ಅಂಕಣಗಳು ಏಕಕಾಲದಲ್ಲಿ ಸಂಕೋಚವಾಗುತ್ತವೆ. ಆಗ್ಗೆ ಅವುಗಳಲ್ಲಿ ತುಂಬಿದ್ದ ರಕ್ತವು ಅಲ್ಲಿಂದ ಹೊರಡುವ ಧಮನೀಮೂಲಕ ಹೊರಗೆ ಹೋಗುತ್ತದೆ. ಕೆಳಗಿನ ಅಂಕಣಗಳು ಸಂಕೋಚವಾಗುವಾಗ್ಗೆ, ಮೇಲಿನ ಅಂಕಣಗಳು ಸಡಿಲಾಗಿ (ಅಂದರೆ ವಿಸ್ತರಿಸಿ) ಸಂಬಂಧಪಟ್ಟ ಧಮನಿಗಳಿಂದ ರಕ್ತವು ಅವುಗಳೊಳಗೆ ಬಂದು ಸೇರುತ್ತದೆ. ಮೇಲಿನ ಅಂಕಣಗಳು ಸಂಕೋಚವಾಗುವಷ್ಟರಲ್ಲಿ, ಕೆಳಗಣ ಅಂಕಣಗಳು ಖಾಲಿಯಾಗುತ್ತವೆ. ಹೃದಯದ ಕೆಳಗಣ ಅಂಕಣಗಳಿಂದ ಹೊರಡುವ 2 ಧಮನಿಗಳ ದ್ವಾರದಲ್ಲಿಯೂ, ಧಮನಿಯ ರಕ್ತವು ತಿರುಗಿ ಹೃದಯಕ್ಕೆ ಬಾರದ ಹಾಗೆ, ಧಮನಿಯ ಕಡೆಗೆ ಮಾತ್ರ ತೆರೆಯತಕ್ಕ ಮುಚ್ಚಳವಿದೆ. ಹೃದಯದ ಕೊನೆಗೆ ಎದುರಾಗಿ ಎದೆಗೆ ಕಿವಿಕೊಟ್ಟರೆ 2 ಸ್ವರಗಳು ಕೇಳುತ್ತವೆ. 1ನೇದು ಅಬ್ ಎಂಬ ಹಾಗಿನದು, 2ನೇದು ಡುವ್ ಎಂಬ ಹಾಗಿನದು. 1ನೇ ಸ್ವರವು ಅಂಕಣಗಳ ಮಧ್ಯದ ಮುಚ್ಚಳಗಳು ಏಕಕಾಲದಲ್ಲಿ ಮುಚ್ಚುವದರಿಂದಲೂ, 2ನೇ ಸ್ವರವು ಧಮನಿಗಳೆರಡರ ದ್ವಾರಗಳು ಮುಚ್ಚುವದರಿಂದಲೂ, ಉಂಟಾಗುವಂಥವು. ಈ 2 ಶಬ್ದಗಳನಂತರ ಸ್ವಲ್ಪ ವಿರಾಮಕಾಲ ಕಾಣುತ್ತದೆ. ಮೇಲಿನ ಅಂಕಣಗಳೊಳಗೆ ಬಂದು ಕೂಡುವ ಧಮನಿಗಳ ದ್ವಾರಗಳ ಮುಚ್ಚಳವಿಲ್ಲ. ಆ ಅಂಕಣಗಳ ಸಂಕೋಚಾವಸರದಲ್ಲಿ, ಆ ದ್ವಾರಗಳು ಮಾಂಸಸಂಕೋಚನವ್ಯಾಪಾರದಿಂದಲೇ ಮುಚ್ಚಿ ಹೋಗುತ್ತವೆ.

127. ಎಡಬದಿಯ ಕೆಳಗಣ ಅಂಕಣದಿಂದ ಹೊರಟ ರಕ್ತವು ತುಂಬಿದ್ದ ಧಮನಿಯೊಳಗೆ ಬಲಾತ್ಕಾರದಿಂದ ಸೇರುವ ದೆಸೆಯಿಂದ, ರಕ್ತವು ಧಮನಿಯನ್ನು ಉಬ್ಬಿಸಿಕೊಂಡು

ಪ್ರವಹಿಸುತ್ತದೆ. (ಯಾತದ ಮರಿಗೆಯ ನೀರು, ತುಂಬಿದ ತೋಡಿಗೆ ಸೇರಿದಷ್ಟಕ್ಕೆ ಹ್ಯಾಗೆ ತೆರೆಯಾಗಿ ಮುಂದೆ ಮುಂದೆ ಹೋಗುತ್ತದೋ, ಹಾಗೆ) ಒಂದೊಂದು ಸರ್ತಿ ಧಮನಿಗೆ ಸೇರಿದ ರಕ್ತವು ಒಂದೊಂದು ತೆರೆಯ ರೂಪವಾಗಿ ಮುಂದೆ ಪ್ರವಾಹವಾಗುತ್ತದೆ. ಇದೇ ನಾಡಿಯೆಂಬದು. ಹೃದಯದಿಂದ ರಕ್ತವನ್ನು ಮುಂದೆ ಸಾಗಿಸುವ ಧಮನಿಗಳು ಮತ್ತು ಅವುಗಳ ಎಗಲುಗಳು ಎಲ್ಲೆಲ್ಲಾ ಇರುತ್ತವೋ, ಅಲ್ಲೆಲ್ಲಾ ನಾಡಿಗಳು ಕಾಣುವವು. ಆದರೆ ಬಹುಸೂಕ್ಷ್ಮವಾದ ಕೊನೆಗಳಲ್ಲಿ ನಾಡಿಯು ಸ್ಪರ್ಶವಾಗದು. (ಹೃದಯದ ಬಲಬದಿಯ ಮೇಲಿನ ಅಂಕಣಕ್ಕೆ ಎರಡು ಮುಖ್ಯವಾದ ರಕ್ತನಾಳಗಳು ಸೇರುತ್ತವೆಂತ ಹೇಳಿದೆಯಷ್ಟೆ. ಹಿಂದೂ ವೈದ್ಯಗ್ರಂಥಗಳಲ್ಲಿ ಕಾಣುವ ಊರ್ಧ್ವಗವಾದ ಹತ್ತು ಧಮನಿಗಳಲ್ಲಿ ವಾತ, ಪಿತ್ತ, ಕಫ, ರಸ, ರಕ್ತ ಇವುಗಳ ಒಂದೊಂದಕ್ಕೆ ಎರಡರ ಪ್ರಕಾರ ಹತ್ತು ಎಂತಲೂ ಈ ಧಾತುಗಳಿಗೆಲ್ಲಾ ಪ್ರತಿಪತ್ಯೇಕ ನಾಳಗಳಿಲ್ಲದೆ ಒಂದರಲ್ಲಿಯೇ ಎಲ್ಲವೂ ಇರುತ್ತವೆಂತಲೂ, ಹೇಳಿರುವದರಿಂದ ಪಾಶ್ಚಾತ್ಯ ಶೋಧನೆಯಲ್ಲಿ ಕಾಣುವ (superior vena cava and inferior vena cava) 'ಸುಪೀರಿಯರ್ ವೆನಕಾವಾ' ಮತ್ತು 'ಇನ್‌ಫೀರಿಯರ್ ವೆನಕಾವಾ' ಎಂಬ ಎರಡು ರಕ್ತನಾಳಗಳೇ ಹತ್ತು ಧಮನಿಗಳಾಗಿ ವರ್ಣಿಸಲ್ಪಟ್ಟಿರಬಹುದು.)

ನಾಡಿ

ಸಾಮಾನ್ಯವಾಗಿ ಮನುಷ್ಯನ ನಾಡಿಯು ಮಿನಿಟಿಗ 72 ಇರುವದು. ವಯೋಭೇದಗಳಿಂದಲೂ, ಧಾತುಭೇದಗಳಿಂದಲೂ, ದೋಷಗಳಿಂದಲೂ, ನಾಡಿಯು ವ್ಯತ್ಯಾಸವಾಗುತ್ತದೆ. ನಾಡಿಯು (ಅಂದರೆ ರಕ್ತದ ತೆರೆಯು) ಒಂದು ಸೆಕುಂದಿಗೆ (ಮಿನಿಟಿನ 60ನೇ 1 ಅಂಶದ ಕಾಲ) 30 ಅಡಿ ಪ್ರಕಾರ ಸಂಚರಿಸುವದರಿಂದ, ಹೃದಯದಿಂದ ಕೈ ಮಣಿಗಂಟಿಗೆ ಹೋಗಲಿಕ್ಕೆ 1 ಸೆಕುಂದಿನ 10ನೇ 1 ಅಂಶದ ಕಾಲ ಸಾಕಾಗುತ್ತದೆ. ಆದರೆ ರಕ್ತಪ್ರವಾಹವು ಅದಕ್ಕಿಂತ ಮೆಲ್ಲಗಾಗಿರುವದರಿಂದ, ಹೃದಯದಿಂದ ಹೊರಟ ರಕ್ತವು ಕೈಮಣಿಗಂಟಿಗೆ ಸೇರುವದಕ್ಕೆ ಸುಮಾರು 5 ಸೆಕುಂದಕಾಲ ಬೇಕಾಗುವದು. ರಕ್ತವು ಪುನಃ ಹೃದಯಕ್ಕೆ ಬರುವ ನಾಳಗಳಲ್ಲಿ ನಾಡಿಯ ಬಡತ ಇರುವದಿಲ್ಲ. ಒಬ್ಬ ಮನುಷ್ಯನು ಸಾಧಾರಣವಾಗಿ ಮಿನಿಟಿಗೆ 17 ಅಥವಾ 18 ಸಾರಿ ಶ್ವಾಸ ಬಿಡುತ್ತಾನೆ ಆದರೆ ಇದು ಸಹ ನಾಡಿ ಬಡತದಂತೆ ವ್ಯತ್ಯಾಸವಾಗುತ್ತದೆ. ಒಂದು ಕಪ್ಪೆಯ ಹೃದಯವು ದೇಹದಿಂದ ಕತ್ತರಿಸಿ ಪ್ರತ್ಯೇಕಿಸಲ್ಪಟ್ಟ ಮೇಲೆ, ಒಣಗದ ಹಾಗೆ ಜಾಗ್ರತೆ ತೆಗೆದುಕೊಂಡರೆ, ಕೆಲವು ಘಂಟೆಗಳ ವರೆಗೂ ಬಡೆಯುತ್ತಾ ಇರುವದು. ಇದರಿಂದ ಹೃದಯಕ್ಕೆ ಮೆದುಳಿನ ಸಹಾಯವು ಅಗತ್ಯವಾದದ್ದಲ್ಲ ಎಂತ ಸ್ಪಷ್ಟವಾಗುತ್ತದೆ.

128 ಬಾಯಿಯೊಳಗೆ ಶ್ವಾಸಕೋಶಕ್ಕೆ ಹೋಗುವ ಶ್ವಾಸಕೊಳವೆಯ ದ್ವಾರದ ಹಿಂದ ಕಡೆಯಿಂದ ಅನ್ನನಾಳವು ಅಥವಾ ಅನ್ನವಾಹಿಯು ಪ್ರಾರಂಭವಾಗಿ ಕೆಳಗೆ ಹೋಗಿ ಎದೆಯ ಮಧ್ಯದೆಲುಬಿನ ಸ್ವಲ್ಪ ಎಡಕ್ಕೆ ವಪಾವಹನದೊಳಗಿನ ದ್ವಾರದಿಂದ ಆಮಾಶಯಕ್ಕೆ ಕೂಡುತ್ತದೆ

ಅನ್ನನಾಳ

129. ಈ ಆಮಾಶಯವು (ಅನ್ನಕೋಶವು) ವಪಾವಹನದ ಕೆಳಗೆ ಅಡ್ಡವಾಗಿಯೂ, ತೋರವಾಗಿಯೂ, ಒಂದು ಚೀಲದಂತೆ ಕಾಣುವ ಅನ್ನನಾಳದ ಒಂದು ವಿಸ್ತೃತ ಭಾಗ. (ತೋರ

ಆಮಾಶಯ

ಮಟ್ಟಿಗೆ ದೊಡ್ಡ ಮಲ್ಲೋವಾ ಮಾವಿನ ಕಾಯಿಯ ಆಕಾರವೆನ್ನಬಹುದು.) ಎಡದಲ್ಲಿ ತೋರವಾದ ಬುಡ, ಬಲದಲ್ಲಿ ಸವೂರವಾದ ಕೊನೆ, ಮೇಲಕ್ಕೆ ಸವೂರ ಬದಿ. ಅದು ಸಾಧಾರಣವಾಗಿ ತುಂಬಿದಾಗ್ಗೆ 10-12 ಇಂಚು ಉದ್ದ, 4-5 ಇಂಚು ಅಗಲವಿರುತ್ತದೆ. ಖಾಲಿಯಾದಾಗ್ಗೆ ಕೃಶವಾಗಿ ಬೆನ್ನಿಗೆ ಸಮೀಪದಲ್ಲಿರುವದರಿಂದ ಎದೆಯ ಗುಳಿ ತಗ್ಗಾಗಿ ಕಾಣುತ್ತದೆ. ಆಗ್ಗೆ ಪಿತ್ತಕೋಶದ ಎಡಭಾಗವು ಅದಕ್ಕೆ ಅಡ್ಡವಾಗಿರುವದು. ಒಳ್ಳೇದಾಗಿ ತುಂಬಿದಾಗ್ಗೆ ಎದುರಿಗ ಉಬ್ಬಿ, ಹತ್ತರ ಇದ್ದ ಅಂಗಗಳನ್ನು ಒತ್ತುತ್ತದೆ. ಅದರಿಂದ ಅದಕ್ಕೆ ಮೇಲ್ಗಡೆ ಎದೆಯಲ್ಲಿರುವ ಹೃದಯ ಮತ್ತು ಎಡದ ಶ್ವಾಸಕೋಶಗಳ ವ್ಯಾಪಾರಗಳಿಗೆ ಸಹ ಅಭ್ಯಂತರ ಬರುವದುಂಟು. ಆಮಾಶಯದ ಕೊನೆಯು ಎದುರಿಗೆ ಬಲದ 8ನೇ ಪಕ್ಕೆಲುಬಿನ ತುದಿಯಲ್ಲಿ (ಅಂದರೆ ಮೃದ್ವಸ್ಥಿಭಾಗದಲ್ಲಿ) ಪಿತ್ತಕೋಶದಿಂದ ಮುಚ್ಚಿಕೊಂಡು ಇರುವದು. ಆದ್ದರಿಂದ ನಿಜಸ್ಥಿತಿಯಲ್ಲ ಹೊರಗಿನ ಸ್ಪರ್ಶನಕ್ಕೆ ಸಿಕ್ಕದು.

130 ಪ್ಲೀಹವು ಆಮಾಶಯದ ಎಡದ ಕೊನೆಗೆ, ಅದರ ಅಡಿಬದಿ ಮತ್ತು ಸ್ವಲ್ಪ ಮಟ್ಟಿಗೆ ಸಣ್ಣ ಕರುಳುಗಳಿಂದ ಮರೆಮಾಡಲ್ಪಟ್ಟು, 9, 10, 11ನೇ ಎಡದ ಪಕ್ಕೆಲುಬುಗಳ ಸ್ಥಾನದಲ್ಲ ಇರುತ್ತದೆ ಅದು ಬಾತಿದ್ದಾಗ್ಗೆ, ಎಡದ 10, 11ನೇ ಪಕ್ಕೆಲುಬುಗಳ ಅಡಿಯಲ್ಲಿ ಹೊರಗಿನಿಂದ ಒತ್ತಿ ನೋಡಿದರೆ ಮುಟ್ಟಸಿಕ್ಕಬಹುದು. ಮತ್ತು ಹೊರಗೆ ಸಹ ಗಟ್ಟಿಯಾಗಿ ಕಾಣಬಹುದು., ನಿಜಸ್ಥಿತಿಯಲ್ಲಿರುವಾಗ್ಗೆ ಹೊರಗಿನ ಸ್ಪರ್ಶಕ್ಕೆ ಕಾಣದು. ದ್ವಾರನಾಳ (ಮುಖ)ವಿಲ್ಲದ ಗ್ರಂಥಿಗಳಲ್ಲಿ ಇದು ಅತ್ಯಂತ ದೊಡ್ಡದು ಅದು ಸುಮಾರು 5 ಇಂಚು ಉದ್ದ ಇರುತ್ತದೆ ಮತ್ತಗಾಗಿಯೂ, ಕಪ್ಪು ಒತ್ತಿದ ಕಂಪಾಗಿಯೂ ಇರುವದು. ಇದರಲ್ಲರುವ ರಕ್ತದಲ್ಲಿ 60 ಕಂಪು ಜೀವಬೀಜಗಳಿಗೆ 1 ಬಿಳೇ ಬೀಜದಂತೆ ಇವೆ; ಬೇರೆ ಕಡೆಯ ರಕ್ತದಲ್ಲ 400ಕ್ಕೆ 1ರಂತೆ ಇರುವದಷ್ಟೆ. ರಕ್ತದ ಕೆಂಪುವರ್ಣವು ಈ ಕೆಂಪು ಜೀವಬೀಜಗಳ (corpuscles) ದೆಸೆಯಿಂದ ಉಂಟಾಗುವಂಥಾದ್ದು. ಪಾಂಡು, ವಿಷಮಜ್ವರ ಇತ್ಯಾದಿ ರೋಗಗಳಲ್ಲಿ ಈ ಪ್ಲೀಹವು ದೊಡ್ಡದಾಗುವದುಂಟು. ನಾಯಿಯ ಪ್ಲೀಹವನ್ನು ಅಪಾಯ ಬಾರದಂತೆ ತೆಗೆದುಬಿಟ್ಟದ್ದರಿಂದ, ಅದರಲ್ಲಿ ವಿಶೇಷವಾದ ಭೇದವೇನೂ ಕಾಣಲಿಲ್ಲ. ಮನುಷ್ಯರ ಪ್ಲೀಹವನ್ನು ಸಹ ಅಪಾಯವಿಲ್ಲದೆ ತೆಗೆದದ್ದುಂಟೆಂತ ಕಾಣುತ್ತದೆ. ಹೃದಯದ ಎಡಬದಿ ಕೆಳಗಣ ಅಂಕಣದಿಂದ ಹೊರಟ ದೊಡ್ಡ ಧಮನಿಯ ಒಂದು ಕವಲು ಈ ಪ್ಲೀಹಕ್ಕೆ ಹೋಗಿಯದೆ. ಅಲ್ಲಿಂದ ಹೊರಟ ಮಲಿನ ರಕ್ತವು ಕ್ರಮೇಣ ಯಕೃತ್ತೆಂಬ ಪಿತ್ತಕೋಶಕ್ಕೆ ಹೋಗುತ್ತದೆ.

ಪ್ಲೀಹ

131. ಪಿತ್ತಕೋಶವು ಹೊಟ್ಟೆಯ ಬಲಬದಿಯಲ್ಲಿ ವಪಾವಹನಕ್ಕೆ ತಾಗಿ ಕೆಳಗೆ ಇರುತ್ತದೆ. ಇದರ ಕಮಾನಾಕಾರವಾದ ಮೇಲಿನ ಅಂಚಿನ ಅತ್ಯಂತ ಎತ್ತರದ ಬಿಂದು ಬಲದ ಮೊಲೆತೊಟ್ಟಿನಿಂದ ಸುಮಾರು ಒಂದು ಇಂಚಿಗೆ ನೆಟ್ಟಗೆ ಕೆಳಗೆ ಇರುತ್ತದೆ. ಅದು ಎದೆಯೆಲುಬಿನ ಕೆಳಗಿನ ತುದಿಯನ್ನು ದಾಟಿ ಎಡಮೊಲೆಯ ಲೈನ್ (ಪಂಕ್ತಿ) ವರೆಗೆ ಪಸರಿಸಿರುತ್ತದೆ. ಹೊಟ್ಟೆಯ ಮಧ್ಯರೇಖೆಯಲ್ಲಿ ಎದೆಯೆಲುಬಿನ ತುದಿಗೂ, ಹೊಕ್ಕುಳಿಗೂ, ಮಧ್ಯದ ವರೆಗೆ ಅಗಲವಾಗಿ ಆಮಾಶಯದ ಎದುರು ಬದಿ ಇರುವದರಿಂದ,

ಪಿತ್ತಕೋಶ (ಯಕೃತ್)

ಈ ಸ್ಥಳದಲ್ಲಿ ಹೊರಗಿನ ಸ್ಪರ್ಶನಕ್ಕೆ ಸಿಕ್ಕಬಹುದು. ಬಲದ ಹೊಟ್ಟೆಯಲ್ಲಿ ಕಡೇ ಪಕ್ಕೆಲುಬಿನ ಬುಡದ ಕೆಳ ಅಂಚಿನಿಂದ ಸುಮಾರು ಅರ್ಧ ಇಂಚು ಕೆಳಗಿನ ವರೆಗೆ ಪಿತ್ತಕೋಶದ ಕೆಳಗಿನ ತೆಳ್ಳಗಾದ ಅಂಚು ವಿಾರಿರುವದಾದರೂ, ಅನುಭವ ಇಲ್ಲದವರಿಗೆ ಅಲ್ಲಿ ಆ ಕೋಶವು ಸ್ಪರ್ಶನಕ್ಕೆ ಸಿಕ್ಕುವದು ಪ್ರಯಾಸ. ಬಲಬದಿಯಲ್ಲಿ 6ನೇ 7ನೇ ಪಕ್ಕೆಲುಬುಗಳ ನಡುವೆ ಸೂಚಿಯನ್ನು ಚುಚ್ಚಿದರೆ, ಅದು ಪ್ರಥಮತಃ ಶ್ವಾಸಕೋಶವನ್ನು ಹೊಕ್ಕು. ಅನಂತರ ವಪಾವಹನವನ್ನು ತೂತುಮಾಡಿ, ಪಿತ್ತಕೋಶಕ್ಕ ಹೋಗುವದು ತೋರಮಟ್ಟಿಗೆ ಪಿತ್ತಕೋಶದ ಮೇಲಿನ ಅಂಚು ಎದೆಯೆಲುಬಿನ ಕೆಳತುದಿಯ ಲೈಸಿಗೆ ಸರಿ ಇರುವದೆನ್ನಬಹುದು ಪಿತ್ತಕೋಶವು ದೇಹದಲ್ಲಿರುವ ಗ್ರಂಥಿಗಳಲ್ಲ ಅತ್ಯಂತ ದೊಡ್ಡದು. ಅದು ಭಾರದಲ್ಲಿ 3 ರಾತ್ಲಿಗೆ ಮೇಲೆ $3\frac{1}{4}$ ರಾತ್ಲು ವರೆಗೆ ಇರುವದು. ಅದರ ಭಾರವು ಇಡೀ ಶರೀರದ ಭಾರದ 40ನೇ 1 ಅಂಶದಿಂದ 36ನೇ 1 ಅಂಶದ ವರೆಗೆ ಇರುತ್ತದೆ. ಅದು ಮುಖ್ಯವಾದ ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟದೆ. ಅವ್ವಗಳಲ್ಲಿ ಬಲಭಾಗ ದೊಡ್ಡದು. ಕೋಶವು ವರ್ಣದಲ್ಲಿ ಕಪ್ಪು ಒತ್ತಿದ ಕೆಂಪಾಗಿರುವದು. ಈ ಪಿತ್ತಕೋಶದ ಕೆಳ ಅಂಚಿನ ಎದುರುಗಡೆಯಲ್ಲಿ ಪಿತ್ತಾಶಯವು (gall-bladder) ಇರುವದು ಪಿತ್ತಕೋಶದಲ್ಲಿ ಉಂಟಾದ ಪಿತ್ತವು, ಜೀರ್ಣದ ಕೆಲಸ ನಡೆಯದೆ ಇರುವಾಗ್ಗೆ, ಪಿತ್ತಾಶಯಕ್ಕ ಇಳಿದು ಅಲ್ಲಿ ದಾಸ್ತಾನಾಗುತ್ತದೆ. ಪಿತ್ತವು ಭಂಗಾರದ ಹಳದಿ ವರ್ಣವಾಗಿಯೂ, ದಪ್ಪವಾಗಿಯೂ, ಅಂಟುಳ್ಳದ್ದಾಗಿಯೂ, ಇರುತ್ತದೆ. 24 ಘಂಟೆಯ ಒಂದು ದಿನದಲ್ಲಿ ಕೂಡುವ ಪಿತ್ತವು ಸುಮಾರು 8 ಕುಡುತೆಯಾಗಬಹುದಾಗಿ ಎಣಿಸಿದ್ದಾರೆ.

132. ಹೃದಯದ ಎಡಬದಿಯ ಕೆಳಗಣ ಅಂಕಣದಿಂದ ಹೊರಟ ದೊಡ್ಡ ಧಮನಿಯ ಒಂದು ಕವಲು ಈ ಪಿತ್ತಕೋಶಕ್ಕೆ ಸೇರಿ ಸಂಚಾರಮಾಡುವದು. ಇದರ ಜೊತೆಯಲ್ಲಿ, ಆಮಾಶಯ, ಪಕ್ವಾಶಯ ಮತ್ತು ಪ್ಲೀಹ, ಇವುಗಳೊಳಗೆ ಸಂಚರಿಸಿ ಹೃದಯಕ್ಕೆ ತಿರುಗಿ ಸೇರತಕ್ಕ ರಕ್ತವು ಈ ಪಿತ್ತಕೋಶಕ್ಕೆ ಬಂದು ಸೇರಿ, ಮುಂದೆ ಹೋಗುತ್ತದೆ. ಆ ಎರಡು ನಾಳಗಳ ಜೊತೆಯಲ್ಲಿ ಪಿತ್ತನಾಳಗಳು ಇರುತ್ತವೆ. ಈ ಪಿತ್ತನಾಳಗಳು ಕೂಡಿಕೊಂಡು ಹೊರಟು, ಕ್ಷುದ್ರಾಂತ್ರದ ಆದಿಭಾಗಕ್ಕೆ ಹೋಗಿ ಸೇರುತ್ತವ. ಪಿತ್ತಕೋಶದಲ್ಲಿ ಪಿತ್ತವು ತಯಾರಾಗುವದಲ್ಲದೆ, ಪಕ್ವಾಶಯದಲ್ಲಿ ಸಿರೆಗಳೊಳಗೆ ಸೇರಿದ ಮಧುರ ರಸದ ಹೆಚ್ಚಿನ ಅಂಶವು ಪಿತ್ತಕೋಶಕ್ಕೆ ಬಂದು. ಪಿಟ್ಟಿನ (starchy) ಮಾದರಿಯಾದ ಗ್ಲೈಕೊಜನ್ ಎಂಬ ಗಟ್ಟಿಪದಾರ್ಥವಾಗಿ ನಿಲ್ಲುತ್ತದೆ. ಈ ಪದಾರ್ಥವು ಆಹಾರದಲ್ಲಿ ಮಧುರರಸವು ಕಡಿಮೆಯಾದಾಗ್ಗೆ ಪುನಃ ಮಧುರರಸವಾಗಿ ಆಹಾರದೊಂದಿಗೆ ಸೇರುತ್ತದೆ. ಅದು ಸಜೀವ ಮಾಂಸಖಂಡಗಳಲ್ಲಿಯೂ, ರಕ್ತದೊಳಗಣ ಬಿಳೇ ಜೀವಬೀಜಗಳಲ್ಲಿಯೂ, ಮೆದುಳಿನಲ್ಲಿಯೂ, ಗರ್ಭದಲ್ಲಿ ಸಹ ಇರುತ್ತದೆ.

ಪಿತ್ತನಾಳ

133. ಕ್ಷುದ್ರಾಂತ್ರವು ಆಮಾಶಯದ ಕೊನೆಯಿಂದ ಹೊರಡುವದು. ಇದರ ಬುಡ ಸುಮಾರು 10 ಇಂಚು ಉದ್ದದ ವರೆಗಿನ ಅಂಶವು ಪ್ರಥಮತಃ ಬಲಕ್ಕೆ, ಅನಂತರ ಕೆಳಗೆ, ಆ ಮೇಲೆ ಎಡಕ್ಕೆ ಮಾಲಿಕೊಂಡು ಕೊಳಿಕೆಯ ಆಕಾರವಾಗಿರುವದು. ಇದಕ್ಕೆ 'ಡ್ಯುವೊಡೇನಮ್' ಅನ್ನುತ್ತಾರೆ. ಇದರ ಕೆಳಗಿನ ಸ್ವಲ್ಪ ಕೆಂಪಾಗಿರುವ ಭಾಗಕ್ಕೆ 'ಜೆಜೂನಮ್' ಎಂತಲೂ

ಅಂತ್ರಗಳು

ಉಳಿದ ಭಾಗಕ್ಕೆ 'ಇವೇಯುಮ' ಎಂತಲೂ ಹೇಳುತ್ತಾರೆ. ಇದರ ಸಂದು ಹಿಂಬದಿ ಹೊಟ್ಟೆಯ ಬೆನ್ನಿಗೆ ಬಿಗಿಯಲ್ಪಟ್ಟದೆ. ಕ್ಷುದ್ರಾಂತ್ರನಾಳವು ಒಟ್ಟು ಸುಮಾರು 20 ಅಡಿ ಉದ್ದ ಇರುವದು. ಬುಡದ ಸುಮಾರು 10 ಇಂಚು ಅಲ್ಲದೆ ಉಳಿದ ದ್ದೆಲ್ಲಾ ಸುರುಳಿಗಳಾಗಿ ಹೊಟ್ಟೆಯ ಮಧ್ಯ ಮತ್ತು ಕೆಳಗಿನ ಭಾಗಗಳಲ್ಲಿರುವದು. ಇದರ ಕೂನೆಯು ಸ್ಥೂಲಾಂತ್ರದ ಬುಡಕ್ಕೆ ಕೂಡುತ್ತದೆ. ಅಲ್ಲಿ ಸ್ಥೂಲಾಂತ್ರಕ್ಕೆ ಸೇರಿದ ದ್ರವ್ಯವು ತಿರುಗಿ ಕ್ಷುದ್ರಾಂತ್ರಕ್ಕ ಬಾರದ ಹಾಗೆ ಒಳಬದಿ ತುಟಿಗಳು (ಮುಚ್ಚಳಗಳು) ಇವೆ. ಆ ಸಂಧಿಯಲ್ಲಿ ಕೆಳಗೆ ಒಂದು ಬಾಲದ ಹಾಗಿನ ಬೆಳಿಕೆ ಇರುತ್ತದೆ. ಅದು ಬಲಸೊಂಟದ ಸಮೀಪ ಹೊಟ್ಟೆಯ ಬಲಬದಿಗೆ (groin) ಇರುತ್ತದೆ. ಸ್ಥೂಲಾಂತ್ರದ ನಾಳವು ಕ್ಷುದ್ರಾಂತ್ರ ನಾಳಕ್ಕಿಂತ ಹೆಚ್ಚು ತೋರವಾಗಿ, ನೆರಿಕಟ್ಟಿಕೊಂಡು ಇರುತ್ತದೆ ಸ್ಥೂಲಾಂತ್ರದ ನಾಳವು ನೆಟ್ಟಗೆ ಮೇಲಕ್ಕ ಪಿತ್ತಕೋಶದ ಸಮೀಪದ ವರೆಗೆ ಹೋಗಿ, ಅನಂತರ ನೆಟ್ಟಗೆ ಅಡ್ಡವಾಗಿ ಪ್ರವರ್ತಿಸಿ, ಹೊಟ್ಟೆಯ ಎಡಬದಿಯಲ್ಲಿ ಕೆಳಗೆ ಇಳಿಯುತ್ತದೆ ಸ್ಥೂಲಾಂತ್ರವು ಅದರ ತುದಿಯಾದ ಗುದ ಕೂಡಿ ಸುಮಾರು 6 ಅಡಿ ಉದ್ದವಿರುತ್ತದೆ. ಅಡ್ಡವಾಗಿ ನಿಂತ ಸ್ಥೂಲಾಂತ್ರದ ನಾಳವು ನಾಭಿಯಿಂದ 2-3 ಇಂಚುಗಳಿಗೆ ಮೇಲೆ ಇರುವದು. ಮೇಲಕ್ಕೆ ಹೋಗುವ ನಾಳವು ಬಲದ ವೃಕ್ಕಿನ ಎದುರಾಗಿಯೂ, ಕೆಳಗೆ ಬರುವ ನಾಳವು ಎಡದ ವೃಕ್ಕಿಗೆ ಎದುರಾಗಿಯೂ ಇರುತ್ತದೆ. ನಾಭಿಯ ಕೆಳಗಿರುವ ಹೊಟ್ಟೆಯ ಭಾಗವು ಕ್ಷುದ್ರಾಂತ್ರದಿಂದ ತುಂಬಿರುತ್ತದೆ. ಸ್ಥೂಲಾಂತ್ರಕ್ಕೆ ಸೇರುವಷ್ಟರಲ್ಲಿ ಅನ್ನರಸವು ಅರ್ಧ ಗಟ್ಟಿಯಾದ ಸ್ಥಿತಿಗ ಬಂದಿರುತ್ತದೆ. ಅದರಲ್ಲಿ ರಸವು ಮುಂದೆ ಹೋದ ಹಾಗೆ ನೀರಿನ ಅಂಶವು ಹೀರಿ ಹೋಗಿ, ಉತ್ತರೋತ್ತರ ಗಟ್ಟಿಯಾಗುತ್ತಾ ಮಲವಾಗಿ, ಗುದಕ್ಕೆ ಸೇರುತ್ತದೆ ಪಚನವೆಲ್ಲಾ ಸಾಧಾರಣ ಮಟ್ಟಿಗೆ, ರಸವು ಸ್ಥೂಲಾಂತ್ರಕ್ಕೆ ಸೇರುವ ಮೊದಲೇ ತೀರಿಹೋಗುತ್ತದೆ ಅಂತ್ರಗಳ ನಾಳದಲ್ಲಿರುವ ಸೂಕ್ಷ್ಮವಾದ ಮಾಂಸಗಳ ಸಂಕೋಚನಾದಿ ವ್ಯಾಪಾರಗಳ ಬಲದಿಂದ ರಸವು ಮುಂದಕ್ಕೆ ತೆರೆಗಳೋಪಾದಿ ಒಯ್ಯಲ್ಪಡುತ್ತದೆ

134. ಸ್ಥೂಲಾಂತ್ರದ ತುದಿಯೇ ಗುದಸ್ಥಾನ ಇದು ಸುಮಾರು ಹತ್ತು ಇಂಚು ಉದ್ದವಾಗಿದೆ. ಇದರ ಹೊರ ದ್ವಾರವೇ ಆಸನವೆಂಬದು.

ಗುದ

135. ಗುದಕ್ಕೆ ಮುಂದುಗಡೆ, ಹೊಟ್ಟೆಯ ಕೆಳತುದಿಯಾದ ಸೊಂಟ ಕೂಪಕದ ಮೇಲೆ, ಮಧ್ಯರೇಖೆಯಲ್ಲಿ ಮೂತ್ರಾಶಯವಿರುವದು. ಇದು ತೆಳ್ಳಗಾದ ಆವರಣವುಳ್ಳ ಚೀಲ. ಇದರಲ್ಲಿ ಮೂತ್ರ ತುಂಬಿದ ಹಾಗೆ ಇದು ಉಬ್ಬುತ್ತದೆ. ಖಾಲಿಯಾದಾಗ್ಗೆ ಬಹು ಚಿಕ್ಕದಾಗಿರುವದು. ಸಾಧಾರಣವಾಗಿ ವಿಸ್ತರಿಸಿರುವಾಗ್ಗೆ ಅದು 4 ಕುಡುತೆ ಹಿಡಿಯುವಷ್ಟು ದೊಡ್ಡದಾಗಿರುವದು. ವೃಕ್ಕುಗಳಿಂದ ಮೂತ್ರಸ್ರೋತಸ್ಸುಗಳ (ureters) ದ್ವಾರ ಒರುತ್ತಿರುವ ಮೂತ್ರವನ್ನು ದಾಸ್ತಾನುಮಾಡಿ, ಆಗಾಗ್ಗೆ ಹೊರಗೆ ಬಿಡುವಂಧಾದ್ದು ಮೂತ್ರಾಶಯದ ಕೆಲಸವಾಗಿರುತ್ತದೆ. ವಿಶೇಷವಾಗಿ ವಿಸ್ತರಿಸಿದಾಗ್ಗೆ ಕೂಪಕದಿಂದ ಮೇಲಕ್ಕೆ ವಿಸ್ತರಿಸಿ, ಕ್ಷುದ್ರಾಂತ್ರವನ್ನು ದೂಡಿಕೊಂಡು ಇರುವದರಿಂದ, ಕೆಳಗಿನ ಹೊಟ್ಟೆಯು ಉಬ್ಬಿಕೊಂಡು, ಗಟ್ಟಿಯಾಗಿ ಕಾಣುವದು. ಈ ಉಬ್ಬುವಿಕೆಯು ಕೆಲವು ಸಂಗತಿ

ಮೂತ್ರಾಶಯ

ಗಳಲ್ಲಿ ಮೇಲೆ ಹೊಕ್ಕುಳ ವರೆಗೂ ಕಾಣಬಹುದು ಈ ಬಾಕು ಹೊರಗಿನಿಂದ ಕಣ್ಣಿಗೆ ಕಾಣುವದಲ್ಲದೆ, ಕೈಗೆ ಗಟ್ಟಿಯಾಗಿ ಮುಟ್ಟುವದು; ಮತ್ತು ಗುದದೊಳಗೆ ಬೆರಳನ್ನು ಹಾಕಿ ನೋಡಿದರೂ ತಿಳಿಯುವದು.

136 ಮೂತ್ರಕ್ಕೆ ಮೂಲಸ್ಥಾನಗಳಾದ ವೃಕ್ಕುಗಳೆರಡು ಸೊಂಟದ ಬೆನ್ನೆಲುಬಿನ ಇತ್ತಟ್ಟು, ಹೊಟ್ಟೆಯ ಹಿಂಬದಿಗೆ ಇರುತ್ತವೆ, ಬಲದ್ದು ಯಕೃತ್ತಿನ ಕೆಳಗೆ, ಎಡದ್ದು ಪ್ಲೀಹದ ಕೆಳಗೆ. ಬಲದ್ದು ಎಡದ್ದಕ್ಕಿಂತ ಸುಮಾರು ಮುಕ್ಕಾಲು ಇಂಚಿಗೆ ಕೆಳಗೆ ಇರುವದು. ಬಲವಾಗಿ ಉಚ್ಛ್ವಾಸ ಮಾಡಿದಾಗ್ಗೆ, ಎರಡು ವೃಕ್ಕುಗಳೂ ಪಪಾವಹನದಿಂದ ಸ್ವಲ್ಪಕಡಿಮೆ ಅರ್ಧ ಇಂಚಿನಷ್ಟು ಕೆಳಗೆ ಒತ್ತಲ್ಪಡುತ್ತವ. ಹೆಚ್ಚಾಗಿ ಬಾತು ಹೋದ ಹೊರತು ವೃಕ್ಕುಗಳು ಹೊರಗಿನ ಸ್ಪರ್ಶನಕ್ಕೆ ಸಿಕ್ಕವು. ಅವುಗಳಲ್ಲಿ ಪ್ರತಿಯೊಂದು 10-12 ತೊಲೆ ಭಾರವಿರುವದು

ವೃಕ್ಕುಗಳು

ಅವುಗಳೆರಡರ ಉದ್ದ ಸುಮಾರು 4 ಇಂಚು, ಅಗಲ ಸುಮಾರು 2½ ಇಂಚು ಇರುತ್ತದೆ ಚಟ್ಟಿಯಾಗಿರುವದರಿಂದ ದಪ್ಪದಲ್ಲಿ ಒಂದು ಇಂಚಿಗೆ ಹಚ್ಚು ಇರುವದಿಲ್ಲ. ತೋರಮಟ್ಟಿಗೆ ಎರಡೂ ಸಮ್ಮುಖ, ಅರ್ಧಚಂದ್ರಾಕಾರವಾಗಿ ನಿಂತಿರುವವು (ಸಾಧಾರಣ ಹಲ್ಲೇಕಾಯಿಯ ಆಕಾರ). ಇವುಗಳ ಒಂದೊಂದರಿಂದ ಸುಮಾರು 15 ಇಂಚು ಉದ್ದದ ಸಪೂರವಾಗಿಯೂ ಬಳೇದಾಗಿಯೂ ಇರುವ ಒಂದು ಸ್ರೋತಸ್ಸು ಹೊರಟು ಮೂತ್ರಾಶಯಕ್ಕೆ ಕೂಡಿರುತ್ತದೆ ಈ ಸ್ರೋತಸ್ಸುಗಳಿಗೆ ಮೂತ್ರವನ್ನು ವಸ್ತಿಗೆ, ಒರತೆ ನೀರಿನಂತೆ, ಬೊಟ್ಟುಬೊಟ್ಟಾಗಿ ಒಯ್ಯುತ್ತಿರುವದೇ ಕೆಲಸ

137. ಮೂತ್ರಾಶಯದಿಂದ ಪ್ರತ್ಯೇಕ ಹೊರಗೆ ಹೋಗುವ ಒಂದು ನಾಳ ಅಥವಾ ಮೂತ್ರದ್ವಾರ (urethra) ಇರುತ್ತದೆ. ಇದು ಮೂತ್ರವನ್ನು ಹೊರಗೆ ಬಿಡುತ್ತದೆ. ಈ

ಮೂತ್ರನಾಳ

ನಾಳದ ಕೆಲಸವು ಇಚ್ಛೆಗೆ ಒಳಪಟ್ಟಿರುವದು. ವೃಕ್ಕುಗಳಿಂದ ಮೂತ್ರಾಶಯಕ್ಕೆ ಒಯ್ಯುವ ಸ್ರೋತಸ್ಸುಗಳು ಇಚ್ಛೆಗೆ ಒಳಪಟ್ಟಿರುವದಿಲ್ಲ. ಸಾಧಾರಣವಾಗಿ ದಿನಕ್ಕೆ 10 ಕುಡುತೆ ಮೂತ್ರ ಒಬ್ಬ ಪ್ರಾಯಸ್ಥನಲ್ಲಿ ಉಂಟಾಗುತ್ತದೆ. ಚಿಕ್ಕ ಕೂಸು ಹೊಯ್ಯುವ ಮೂತ್ರವು ದಿನಕ್ಕೆ ಸುಮಾರು 2 ಕುಡುತೆಯಾಗಬಹುದು. ಮೂತ್ರದ ಪರಿಮಾಣವು, ಹವೆಯ ಭೇದ ಮೊದಲಾದ ಸಂಗತ್ಯಾನುಸಾರ ಹೆಚ್ಚು ಕಡಿಮೆಯಾಗುವದು.

138. ಆಮಾಶಯದ ಹಿಂದಕಡೆ ಹೊಟ್ಟೆಗೆ ಅಡ್ಡವಾಗಿ 6—8 ಇಂಚು ಉದ್ದ, ಸರಾಸರಿ 1½ ಇಂಚು ದಪ್ಪ ಆದ, ಭಾರದಲ್ಲಿ 6 ತೊಲೆಯಿಂದ 9 ತೊಲೆ ವರೆಗಿರುವ ಒಂದು

ಕಣಿಯ

ಪ್ರತ್ಯಂಗವಿರುವದು ಇದಕ್ಕೆ 'ಕಣಿಯ' ಎಂತ ಒಬ್ಬ ಗ್ರಂಥಕರ್ತರು, ಮೇದೋಜೀರಕ ಎಂತ ಇನ್ನೊಬ್ಬರು, ಕನ್ನಡ ಹೆಸರಿಟ್ಟಿದ್ದಾರೆ. ಇದರಲ್ಲಿ ಬಾಯಿಯ ಎಂಜಲಿನಂತೆ ಸ್ವಚ್ಛವಾದ, ಅಂಟಾದ, ಮತ್ತು ಖಾರರುಚಿಯುಳ್ಳ ಒಂದು ರಸ ಇರುತ್ತದೆ. ಈ ಅಂಗದ ಎದುರುಭಾಗವು ಆಮಾಶಯದಿಂದಲೂ, ಸ್ಥೂಲಾಂತ್ರದ ಅಡ್ಡವಾಗಿರುವ ಭಾಗದಿಂದಲೂ ಮರಪಟ್ಟದೆ. ಅದರ ರಸವು ಕ್ಷುದ್ರಾಂತ್ರದ ಆದಿಭಾಗದಲ್ಲಿ, ಅಂದರೆ 'ಡ್ಯುವೊಡೇನಮಿ'ನಲ್ಲಿ, ಆಮಾಶಯ ದಾಟಿ ಬಂದ ಅನ್ನರಸಕ್ಕ ಪಿತ್ತದ ಜೊತೆಯಲ್ಲಿ ಕೂಡಿ ಪಚನ ಮಾಡುತ್ತದೆ.

139. ಕಣ್ಣುಗುಡ್ಡೆಗಳು (ಗುಳ್ಳೆಗಳು) ಹಣೆಯ ಕೆಳಗಿರುವ ಎರಡು ಚಿಕ್ಕ ಗುಹೆಯ ಹಾಗಿನ ಎಲುಬಿನ ಗುಣಿಗಳಲ್ಲಿ ಇರುತ್ತವೆ ಅವುಗಳು ಎದುರುಭಾಗದಲ್ಲಿ ರೆಪ್ಪೆಗಳಿಂದಲೂ, ಮಿಕ್ಕ ಎಲ್ಲಾ ಕಡೆಗಳಲ್ಲಿಯೂ ಎಲುಬಿನ ಆವರಣಗಳಿಂದಲೂ, ರಕ್ಷಿತವಾಗಿವೆ.

ಕಣ್ಣು

ನೇತ್ರನರವು ಗುಡ್ಡೆಯ ಹಿಂಬದಿ ತೊಟ್ಟಿನ ಹಾಗಿದ್ದು, ಮದುಳಿಗೆ ಕಪಾಲದ ಒಂದು ತೂತಿನಿಂದ ಕೂಡುತ್ತದೆ. ಕಣ್ಣು ತೆರೆಯುವದು ಮೇಲಿನ ರೆಪ್ಪೆ ಎತ್ತುವದರಿಂದಾಗುತ್ತದೆ. ರೆಪ್ಪೆಯ ಒಳಬದಿಯ ಪರೆಯೇ ಗುಡ್ಡೆಯ ಎದುರುಭಾಗವನ್ನು ತೆಳ್ಳಗಿನ ಪರೆಯಾಗಿ ಮುಚ್ಚಿರುತ್ತದೆ. ಕಣ್ಣುಗುಡ್ಡೆಯನ್ನು ಹೊರಕ್ಕೂ, ಒಳಕ್ಕೂ, ಮೇಲಕ್ಕೂ ಕೆಳಕ್ಕೂ, ತಿರುಗಿಸುವ ಹಾಗೆ 4 ನೆಟ್ಟಗಾದ ಮಾಂಸಖಂಡಗಳು ಗುಡ್ಡೆಯ ಹಿಂಬದಿಯಿಂದ ಎದುರುಬದಿ ವರೆಗೆ ವ್ಯಾಪಿಸಿಕೊಂಡಿರುತ್ತವೆ. ಬೇರೆ ಎರಡು ಮಾಂಸಖಂಡಗಳು ಗುಡ್ಡೆಯ ಪಕ್ಕಗಳಲ್ಲಿರುತ್ತವೆ. ಕಣ್ಣೀರಿನ ಗೋಳವು ಕಣ್ಣಬೇಳೆಯ ಹೊರಕೊನೆಯ (ಅಪಾಂಗ) ಪಕ್ಕದಲ್ಲಿ ಇರುತ್ತದೆ. ಈ ಗೋಳದಿಂದ ಹೊರಟ ನೀರು ಕಣ್ಣಬೇಳೆಯನ್ನು ನೆನೆಸಿ ಅದರ ಒಳಕೊನೆ (ಕನೀನಕ) ಯಲ್ಲಿ ಒಂದು ನಾಳದೊಳಗೆ ಸೇರುತ್ತದೆ. ಈ ನಾಳವು ಪ್ರತಿ ರೆಪ್ಪೆಗೆ ಒಂದರಂತೆ ಇರುತ್ತದೆ. ಮೇಲಿನ ಮತ್ತು ಕೆಳಗಿನ 2 ರೆಪ್ಪೆಗಳಿಗೆ ಸಂಬಂಧಪಟ್ಟ 2 ನಾಳಗಳು ಒಟ್ಟುಕೂಡಿ ಒಂದೇ ನಾಳವಾಗಿ ಮೂಗಿನೊಳಗೆ ಹೋಗುತ್ತದೆ ಈ ನೀರಿಗಿಂತ ದಪ್ಪವಾದ ದ್ರವವು ರೆಪ್ಪೆಯೊಳಗೆ ಇರುವ ಬೇರೆ ಚಿಕ್ಕಚಿಕ್ಕ ಚೀಲಗಳಿಂದ ಹೊರಟುಬರುತ್ತದೆ. ಕಣ್ಣುಗುಡ್ಡೆಯ ಎದುರಿನ $\frac{1}{6}$ ಭಾಗವು ಒಳಗಿನ $\frac{5}{6}$ ಭಾಗದ ಗೋಲದ ಲೈನ್ ಬಿಟ್ಟು ಹೊರಗೆ ವಿಸ್ತರಿಸಿರುವದು. ಈ ಗುಡ್ಡೆಗೆ ಎರಡು ಪರೆಗಳು ಆವರಣಗಳಾಗಿವ, ಹೊರಗಿನದು ಬಿಳೇದು, ಒಳಗಿನದು ಕರೇದು. ಈ ಕರೇ ಆವರಣವು ಎದುರುಭಾಗದಲ್ಲಿ ಬಿಳೇ ಆವರಣವನ್ನು ಬಿಟ್ಟು ಒಂದು ಪರದೆಯ ಹಾಗೆ ಅಡ್ಡನಿಂತಿರುವದು. ಹೊರಗಿನ ಬಿಳೇ ಆವರಣವು ಕನ್ನಡಿಯಂತೆ ಸ್ವಚ್ಛವಾಗಿದ್ದರೂ, ಅದರ ಒಳಭಾಗದಲ್ಲಿಯ ಕಪ್ಪು ಪರದೆಯ ದೆಸೆಯಿಂದ ಆ ಅಂಶವು ಕಪ್ಪಾಗಿ ಹೊರಗೆ ಸಹ ಕಾಣುವದು. ಇದೇ ಕೃಷ್ಣಮಂಡಲ ಈ ಕೃಷ್ಣಮಂಡಲದ ಮಧ್ಯದ ರಂಧ್ರವೇ ದೃಷ್ಟಿಮಂಡಲ. ದೃಷ್ಟಿಮಂಡಲದ ಹಿಂಬದಿ ಕೃಷ್ಣಮಂಡಲಕ್ಕೆ ತಾಗಿ ಎರಡು ಪಾರ್ಶ್ವವೂ ಸ್ವಲ್ಪ ಗೋಲಾಗಿರುವ ಒಂದು ಕನ್ನಡಿಯ ಹಾಗಿನ ಮಣಿ ಇರುತ್ತದೆ. ಈ ಕಪ್ಪಾದ ಮಣಿಯ ಹಿಂದಿನ ಪಾರ್ಶ್ವವು ನಿರ್ಮಲವಾದ ಮತ್ತು ದಪ್ಪವಾದ ದ್ರವಪದಾರ್ಥದಿಂದ ತುಂಬಿರುತ್ತದೆ ಹಾಗೆಯೇ ಕೃಷ್ಣಮಂಡಲಕ್ಕೂ ಎದುರಿನ ಶ್ವೇತಮಂಡಲಕ್ಕೂ ಮಧ್ಯ ಕೂಡ ನೀರಿನ ಹಾಗೆ ತೆಳ್ಳಗಾದ ದ್ರವಪದಾರ್ಥದಿಂದ ತುಂಬರುತ್ತದೆ. ಕರೇ ಆವರಣದ ಒಳ ಅಂಚಿನಲ್ಲಿ ಕೃಷ್ಣಮಣಿಯ ಹಿಂಭಾಗದ ಗುಡ್ಡೆಯ ಅಂಶಕ್ಕೆ, ಅಂದರೆ $\frac{2}{3}$ ಅಂಶಕ್ಕೆ, ನರಗಳಿಂದ ತುಂಬಿದ ಇನ್ನೊಂದು ಆವರಣ ಇರುತ್ತದೆ. ಈ ಆವರಣದ ಮಧ್ಯ ದೃಷ್ಟಿಮಂಡಲಕ್ಕೆ ಎದುರಾಗಿ ನರದ ಮೂಲವಿರುತ್ತದೆ ಹೊರಗಿನ ವಸ್ತುವಿನ ಮೇಲೆ ಬಿದ್ದ ಬೆಳಕು ಕಣ್ಣಿನೊಳಗಿರುವ ಕೃಷ್ಣಮಣಿಯನ್ನು ದಾಟಿಹೋಗಿ, ಆ ವಸ್ತುವಿನ ಪ್ರತಿಬಿಂಬವು ಆ ನರದ ಮಂಡಲದ ಮೇಲೆ ಉಂಟಾದರೇನೇ, ಆ ವಸ್ತುವು ನಮಗೆ ಕಾಣುವದು. ಹಾಗೆ ಆಗಬೇಕಾದರೆ, ಕೃಷ್ಣಮಣಿಯ ಶಕ್ತಿಗೆ ತಕ್ಕಷ್ಟೇ ದೂರದಲ್ಲಿ ವಸ್ತು ಇರಬೇಕು. ಈ ಭೇದದಿಂದಲೇ ಸಮೀಪದೃಷ್ಟಿ, ದೂರದೃಷ್ಟಿ, ಎಂಬ ಕೊರತೆಗಳು ಉಂಟಾಗುವದಾಗಿರುತ್ತದೆ. ಸಾಧಾರಣವಾಗಿ 5–6 ಇಂಚಿಗೂ ಹತ್ತರ ಇರುವ ವಸ್ತುವು ಸರಿಯಾಗಿ ದೃಷ್ಟಿಗೆ ಕಾಣದು. ಆದರೆ ಸಮೀಪದೃಷ್ಟಿಯವಗೆ ಕಾಣುವದು.

ಆ ಕೃಷ್ಣಮಣಿಯ ಗೋಲಾಕಾರವು ಪ್ರಾಯದಿಂದ ಸ್ವಲ್ಪಮಟ್ಟಿಗೆ ಹೆಚ್ಚು ಕಡಿಮೆ ಆಗುತ್ತದೆ. ದೃಷ್ಟಿಮಂಡಲವು ಬೇಕಾದ ಹಾಗ ದೊಡ್ಡದು ಅಥವಾ ಸಣ್ಣದು ಆಗುತ್ತದೆ. ಕಣ್ಣುಮುಚ್ಚಿದಾಗ್ಗೆ ಗುಡ್ಡೆ ಸ್ವಲ್ಪ ಮೇಲಕ್ಕೂ ಒಳಕ್ಕೂ ತಿರುಗಿ ನಿಲ್ಲುತ್ತದೆ

140. ಮೂಗಿನ ಮುಚ್ಚಿಗೆಯ (ಬುಡದ ಮೇಲಿನ) 3ನೇ 1 ಅಂಶದಲ್ಲಿ ಎರಡು ಕಣ್ಣುಗಳ ನಡುವೆ ಮೆದುಳಿನ ಅಡಿಯಾಗಿರುವ ಎಲುಬಿನಲ್ಲಿರುವ ಅನೇಕವಾದ (ಸುಮಾರು 20) ರಂಧ್ರಗಳ ಮುಖವಾಗಿ ಮೆದುಳಿನಿಂದ ಹೊರಟುಬಂದ ನರಗಳು ಪಸರಿಸಿ ಇವೆ.

ಮೂಗು

ಮೂಗಿನ ಆ ಭಾಗದಲ್ಲೇ ವಾಸನೆಯ ಜ್ಞಾನ ಉಂಟಾಗುವಂಥಾದ್ದು. ಸಾಧಾರಣವಾಗಿ ಎಡದ ಸೊಳ್ಳೆಯು ಬಲದ ಸೊಳ್ಳೆಗಿಂತ ಸ್ವಲ್ಪ ಸಪೂರವಾಗಿರುತ್ತದೆ. ಈ ಸೊಳ್ಳೆಗಳ ಒಳಗಿನ ದ್ವಾರಗಳು ಬಾಯಿಯೊಳಗೆ ತಾಲುವಿನ ಹಿಂದಕಡೆ ಇರುತ್ತವೆ. ಪನ್ನೀರನ್ನು ಅಥವಾ ಬೇರೆ ಪರಿಮಳವುಳ್ಳ ದ್ರವವನ್ನು ಮೂಗಿನ ಸೊಳ್ಳೆಗಳೊಳಗೆ ತುಂಬಿಸಿದಾಗ್ಗೆ ಪರಿಮಳ ಜ್ಞಾನವಿರುವದಿಲ್ಲವಾದ್ದರಿಂದ ಒಕ್ಸಿಜನ್ ಎಂಬ ಪ್ರಾಣವಾಯುವು ಆ ಜ್ಞಾನಕ್ಕೆ ಅವಶ್ಯಕವೆಂತ ತಿಳಿಯುತ್ತಾರೆ.

141. ಕಿವಿಯಲ್ಲಿ ಒಳಕಿವಿ, ಹೊರಕಿವಿ, ಮಧ್ಯಕಿವಿ, ಎಂಬ 3 ಭಾಗಗಳಿವೆ. ಹೊರ ಕಿವಿಯ ಸ್ರೋತಸ್ಸು (ಅಂದರೆ ತೂತು) ಸುಮಾರು 1¼ ಇಂಚು ಉದ್ದವಿದೆ. ಮಧ್ಯಕಿವಿಯಿಂದ ಎಲುಬು, ಮೃದು ಎಲುಬು ಮೊದಲಾದವುಗಳಿಂದ ಮಾಡಲ್ಪಟ್ಟ ಒಂದು ನಾಳವು ಹೊರಟು ಗಂಟಲಿಗೆ ಕೂಡಿಯದೆ. ಈ ನಾಳದೊಳಗೆ ಬಾಯಿಯಿಂದ ಗಾಳಿಯು ಮಧ್ಯ ಕಿವಿಗೆ ಹೋಗುತ್ತದೆ ನುಂಗುವ ಕಾಲದಲ್ಲಿ ಬಾಯಿಯಲ್ಲಿರುವ ಈ ನಾಳದ

ಕಿವಿ

ದ್ವಾರವು ತೆರೆಯುತ್ತದೆ. ಇದು ಸುಮಾರು 1½ ಇಂಚು ಉದ್ದವಿದೆ. ಹೊರ ಕಿವಿಗೂ ಮಧ್ಯಕಿವಿಗೂ ಇರುವ ಒಂದೇ ದ್ವಾರವು ಪರದೆ ಹಾಗಿನ ಒಂದು ತೆಳ್ಳಗಿನ ಸ್ವಚ್ಛವಾದ ಪರೆಯಿಂದ ಮುಚ್ಚಲ್ಪಟ್ಟದೆ ಈ ಮುಚ್ಚಳವಿಲ್ಲದಿದ್ದರೆ, ಕಿವಿಗೆ ಹೊಕ್ಕ ಗಾಳಿ ಮುಂತಾದ್ದು ಬಾಯಿಗೆ ಬರುತ್ತಿತ್ತು. ಮಧ್ಯಕಿವಿಗೂ ಒಳಕಿವಿಗೂ ಮಧ್ಯ ಇರುವ 2 ರಂಧ್ರಗಳು ಸಹ ಪರೆಗಳಿಂದ ಮುಚ್ಚಲ್ಪಟ್ಟವೆ. ಮಧ್ಯಕಿವಿ, ಒಳಕಿವಿ ಸಹ ಕಪಾಲದ ಭಾಗವಾದ ಕೆನ್ನೆಲುಬಿನೊಳಗೆ ಇರುತ್ತವೆ. ಮಧ್ಯದ ಕಿವಿಯೊಳಗೆ ಮೂರು ಸೂಕ್ಷ್ಮವಾದ ಎಲುಬುಗಳಿಂದ ಕೂಡಿದ ಅಲಗಾಡುವ ಒಂದು ಸರಪಣಿಯ ಹಾಗಿನದು ಹೊರಕಿವಿಯ ಒಳಗಿನ ಅಂತ್ಯದ ಪರೆಯಿಂದ ಒಳಕಿವಿಗೆ ಕೂಡಿರುತ್ತದೆ. ಒಳಕಿವಿಯು ಕೇಳುವಿಕೆಗೆ ಮುಖ್ಯವಾದ ಅಂಗವಾಗಿ, ವರ್ಣಿಸಲಿಕ್ಕೆ ಕಷ್ಟವಾದ ಆಕಾರವುಳ್ಳದ್ದಾಗಿದೆ. ಶಬ್ದಜ್ಞಾನಕ್ಕೆ ಕಾರಣವಾದ ಮೆದುಳಿನ ನರವು ಈ ಒಳಕಿವಿಯಲ್ಲಿ ಪಸ್ತರಿಸಿಯದೆ. ಈ ಒಳಕಿವಿಯ ಮಧ್ಯ ಇರುವ ಅನೇಕವಾದ ಅರೆಗಳಲ್ಲಿ ಒಂದು ಅಂಟಾಗಿರುವ ದ್ರವಪದಾರ್ಥವಿದೆ. ಶಬ್ದಕ್ಕೆ ಹೇತು ವಾಯುವಿನ ತೆರೆಗಳು ಈ ತೆರೆಗಳು ಮಧ್ಯಕಿವಿಯ ಪರೆಗೆ ಬಡಿಯುವದರಿಂದ ಅದು ಅದರುತ್ತದೆ. ಈ ಚಲನೆಯು ಮಧ್ಯಕಿವಿಯ ಅಲಗಾಡುವ 3 ಎಲುಬುಗಳ ಪರಿಮುಖವಾಗಿ ಒಳಕಿವಿಯ ದ್ವಾರಕ್ಕೆ ತಗಲಿ, ಅಲ್ಲಿಂದ ಅದನ್ನು ಶ್ರೋತ್ರ ನರವು ಮೆದುಳಿಗೆ ಒಯ್ಯುತ್ತದೆ. ಗಾಳಿಯಲ್ಲಿ ಶಬ್ದವು ಒಂದು ಸೆಕುಂದಿಗೆ 1100 ಅಡಿ ಪ್ರಕಾರ ಸಂಚಾರಮಾಡುತ್ತದೆ.

ವಾಯುವಿನ ತೆರೆಗಳು 1 ಸೆಕುಂದಿಗೆ 30ಕ್ಕೂ ಕಡಿಮೆಯಾಗಿ ಬಂದರೆ, ಆ ಸ್ವರವು ಮನುಷ್ಯರಿಗೆ ಕೇಳದು. ತಾರಕದಲ್ಲಿ ಸೆಕುಂದಿಗೆ 30,000 ತೆರೆಗಳಂತೆ ಬರುವದರಿಂದ, ಉಂಟಾದ ಶಬ್ದವನ್ನು ಕೂಡ ಕೇಳಲಿಕ್ಕೆ ಸಾಮರ್ಥ್ಯವುಳ್ಳವರು ಕೆಲವರು ಇದ್ದರೂ, ಅದಕ್ಕಿಂತ ಬಹು ತಗ್ಗಿನ ಸ್ವರವಾದ ಬಾವಲಿಯ ಕೂಗನ್ನು, ಅಥವಾ ಇಲಿಯ ಕಿರಿಕಿರಿಯನ್ನು ಸಹ ಕೇಳಲಿಕ್ಕೆ ಕೂಡದವರೂ ಇರುವದುಂಟು.

142. ಬಾಲ್ಯದಲ್ಲಿ 6 ತಿಂಗಳನಂತರ 2½ ವರ್ಷಗಳ ಒಳಗೆ 20 ಹಲ್ಲುಗಳು ಬರುತ್ತವೆ. ಈ ಹಂಗಾಮಿ ಹಲ್ಲುಗಳು 6 ವರ್ಷ ಪ್ರಾಯದನಂತರ 13ನೇ ವರ್ಷದೊಳಗೆ ಬಿದ್ದು ಹೋಗಿ, ಅವುಗಳ ಸ್ಥಾನದಲ್ಲಿ ಹೊಸ ಹಲ್ಲುಗಳು ಬರುತ್ತವೆ. ಅನಂತರ ಬೇರೆ 12 ಹಲ್ಲುಗಳು ಹುಟ್ಟಿ, 21ನೇ ವರ್ಷ ಪ್ರಾಯದೊಳಗೆ 32 ಹಲ್ಲುಗಳು ಪೂರ್ತಿಯಾಗುತ್ತವೆ. ಪ್ರತಿ ಸಾಲಿನ 16ರಲ್ಲಿ ಎಡಬಲಗಳಲ್ಲಿ ಎಂಟೆಂಟು ಯಥಾಕ್ರಮವಾಗಿ ಒಂದಕ್ಕೊಂದು ಸದೃಶವಾಗಿವೆ ಪ್ರತಿ ಹಲ್ಲಿಗೆ ತಲೆ, ಕುತ್ತಿಗೆ ಮತ್ತು ಬೇರು, ಎಂಬ 3 ಭಾಗಗಳು ಇವೆ. ಸಿಜಿಯ (ವಸಡಿನ) ಮೇಲಿನ ಭಾಗ, ತಲೆ, ಅದಕ್ಕೆ ಎನೇಮಲ್ ಎಂಬ ಗಟ್ಟಿ ಅಂಟಿನ ಕವಚವಿದೆ. ಸಿಜಿಯಲ್ಲಿ ಅಡಗಿರುವ ಭಾಗವು ಕುತ್ತಿಗೆ ಬೇರು ಅಥವಾ ಬೇರುಗಳು ದವಡೆ ಎಲುಬಿನಲ್ಲಿರುವ ಗುಣಿಗಳಲ್ಲಿ ಹುಗಿದಿರುತ್ತವೆ ಹಲ್ಲು ಬೇರೆ ಎಲುಬುಗಳಿಗಿಂತ ಗಟ್ಟಿಯಾಗಿರುತ್ತದೆ. ಅದರೊಳಗಿನ ತಿರುಳಿನಲ್ಲಿ ಸೂಕ್ಷ್ಮವಾದ ರಕ್ತನಿರೆಗಳು ಮತ್ತು ನರಗಳು ತುಂಬಿರುವವು.

ಹಲ್ಲುಗಳು

143. ನಾಲಿಗೆಯು ಮುಖ್ಯವಾಗಿ ಎರಡು ಸರಸವಾದ ಮಾಂಸದ ಸಂಯೋಗದಿಂದ ರಚಿತವಾಗಿ, ಎರಡು ಪರೆಗಳಿಂದ ಹೊದಿಸಲ್ಪಟ್ಟ ಅಂಗವಾಗಿದೆ. ಅದು ಉಚ್ಚಾರಕ್ಕೂ, ಅಗಿಯುವದಕ್ಕೂ, ನುಂಗುವದಕ್ಕೂ ಮುಖ್ಯ ಸಹಾಯ ಮಾಡುತ್ತದೆ. ಅದರ ಮೇಲಿನ ಕಫಯುಕ್ತವಾದ ಹೊದಿಕೆಯಲ್ಲಿ ರುಚಿಗೆ ಕಾರಣವಾದ ಸೂಕ್ಷ್ಮವಾದ ಮೊನೆಗಳು (ನಾಲಿಗೆಯ ಮುಳ್ಳು) ಇವ. ಮತ್ತು ಆ ಹೊದಿಕೆಯ ಅಡಿಯಲ್ಲಿ ಎಂಜಲಿನ ಚಿಕ್ಕ ಗ್ರಂಥಿಗಳು ಇವೆ. ಬಾಯಿಯಲ್ಲಿ ಬರತಕ್ಕ ರಸಗಳಿಗೆ ಮೂಲವಾದ ಗ್ರಂಥಿಗಳು ಮುಖ್ಯವಾಗಿ ನಾಲಿಗೆಯ ಹಿಂಬದಿಯಲ್ಲಿಯೂ, ಬದಿಗಳಲ್ಲಿಯೂ, ತುದಿಯಲ್ಲಿಯೂ, ತುದಿಯ ಬುಡದ ಎರಡು ಪಕ್ಕಗಳಲ್ಲಿಯೂ ವಿಸ್ತರಿಸಿವೆ. ಇವಲ್ಲದೆ ಪ್ರತಿ ಕವಿಯ ಎದುರು ಒಂದೊಂದರಂತೆ ಎರಡು, ಕೆಳಗಿನ ದವಡೆಯ ಅಡಿ ಇತ್ತಟ್ಟು ಒಂದೊಂದರಂತೆ ಎರಡು, ನಾಲಿಗೆಯ ಅಡಿಯಲ್ಲಿ ಒಂದು ಜೋಡು, ಹೀಗೆ ಆರು ದೊಡ್ಡ ಗ್ರಂಥಿಗಳು ಸಹ ಬಾಯಿಯಲ್ಲಿ ಬರುವ ರಸ ಅಥವಾ ಎಂಜಲಿಗೆ ತಮ್ಮ ರಸವನ್ನು ಚಿಕ್ಕನಾಳಗಳ ದ್ವಾರಾ ಕಳುಹಿಸುತ್ತವೆ. ರುಚಿಜ್ಞಾನಕ್ಕೆ ವಸ್ತುವು ಒದ್ದೆಯಾಗಿರುವದು ಅಗತ್ಯ; ಆ ಕೆಲಸವನ್ನು ಎಂಜಲು ಮಾಡುತ್ತದೆ; ಮತ್ತು ಹಿಟ್ಟು ಮುಂತಾದವುಗಳ ಜೀರ್ಣಕ್ಕೆ ಎಂಜಲು ಬಹಳ ಉಪಯೋಗಕರವಾದದ್ದು. ಬಾಯಿಯೊಳಗೆ ಎಂಜಲು ದಿನ 1ರ 1 ಕುತ್ತಿ*ಯಿಂದ 2 ಕುತ್ತಿ ವರೆಗೆ ಇಳಿಯುತ್ತದೆಂತ ಎಣಿಸಿದ್ದಾರೆ.

ನಾಲಿಗೆ

* ಪರಾ 1 ಕುತ್ತಿ=2 ಪೈಂಟ್ (Pint)

144 ತಾಲುವಿನ ಹೊದಿಕೆಯು ನಾಲಿಗೆಯ ಹೊದಿಕೆಗೆ ಸದೃಶವಾಗಿದೆ. ಅದರಲ್ಲಿಯೂ ರುಚಿಮೊಗ್ಗುಗಳು ಅಥವಾ ಮೊನೆಗಳು ಇವೆ, ಆದರೆ, ನಾಲಿಗೆಯಲ್ಲಿ ಇರುವಷ್ಟು ಅಲ್ಲ.

ತಾಲು

145 ಸುಂಗುವಿಕೆ ಎಂಬದರಲ್ಲಿ ಮೂರು ಕೆಲಸಗಳಿವೆ, ಆಹಾರವು ನಾಲಿಗೆಯ ಬುಡಕ್ಕೆ ಹೋಗುವದು, ಕಫನಾಳದ ದ್ವಾರವನ್ನು ದಾಟುವದು, ಮತ್ತು ಅನ್ನನಾಳದೊಳಗೆ ಸೇರುವದು. ಇವುಗಳೊಳಗೆ ಒಂದನ್ನೇದು, ಇಚ್ಛೆಗೊಳಪಟ್ಟು, ನಾಲಿಗೆಯಿಂದ ಮಾಡಲ್ಪಡುತ್ತದೆ. ಎರಡನೇ ಮೂರನೇ ಕಲಸಗಳು ನಮ್ಮ ಸ್ವಾಧೀನವಿಲ್ಲ. ಸುಂಗುವ ಸಮಯದಲ್ಲಿ ತಾಲುವಿನ ಹಿಂಭಾಗವು, ಎತ್ತಿಕೊಂಡು, ಮೂಗಿನೊಳಕ್ಕೆ ಹೋಗುವ ರಂಧ್ರಗಳನ್ನು ಮುಚ್ಚಿಬಿಡುತ್ತದೆ, ಹಾಗೆಯೇ ಕಫನಾಳದ ದ್ವಾರವು ಮುಚ್ಚಿ ಹೋಗುತ್ತದೆ.

ಸುಂಗುವಿಕೆ

IIIನೇ ಅಧ್ಯಾಯ.

(a) ಆಯುರ್ವೇದರೀತ್ಯಾ ಪಂಚ ಮಹಾಭೂತಗಳು.

ಪೃಥಿವ್ಯಪ್ತೇಜೋವಾಯ್ವಾಕಾಶಾನಾಂ ಸಮುದಾಯಾದ್ದ್ರವ್ಯಾಭಿ
ನಿರ್ವೃತ್ತಿರುತ್ಕರ್ಷಸ್ತ್ವಭಿವ್ಯಂಜಕೋ ಭವತೀದಂ ಪಾರ್ಥಿವಮಿದ
ಪಂಚಭೂತ ಮಾಪ್ಯಮಿದಂ ತೈಜಸಮಿದಂ ವಾಯವ್ಯಮಿದಮಾಕಾಶೀಯಮಿತಿ |
ಗಳ ಹೆಸರು (ಸು. 152)

ಭೂಮಿ, ನೀರು, ಅಗ್ನಿ, ವಾಯು, ಆಕಾಶ ಎಂಬ ಪಂಚ ಮಹಾಭೂತಗಳ ಕೂಡು ಏಕೆಯಿಂದ ದ್ರವ್ಯವು ಉಂಟಾಗುವದು ಹೆಚ್ಚಾಗಿ ಯಾವ ಭೂತ ಇರುತ್ತದೋ, ಅದರ ಮೇಲೆ ಇದು ಪಾರ್ಥಿವ (ಭೂಸಂಬಂಧವಾದದ್ದು), ಇದು ಆಪ್ಯ (ಜಲಸಂಬಂಧವಾದದ್ದು), ಇದು ತೈಜಸ (ತೇಜಸ್ಸಂಬಂಧವಾದದ್ದು), ಇದು ವಾಯವ್ಯ (ವಾಯುಸಂಬಂಧವಾದದ್ದು), ಇದು ಆಕಾಶೀಯ (ಆಕಾಶಸಂಬಂಧವಾದದ್ದು) ಎಂಬ ಭೇದಗಳಾಗಿರುತ್ತವೆ.

2 ಕರ್ಮಭಿಸ್ತ್ವನುವಿಧಾಯಂತೇ ನಾನಾ ದ್ರವ್ಯಾಶ್ರಯಾ ಗುಣಾಃ |
ಹ್ಲಾದನಃ ಸ್ತಂಭನಃ ಶೀತೋ ಮೂರ್ಚ್ಛಾತೃಟ್‌ಸ್ತೇದದಾಹಜಿತ್ |
ಉಷ್ಣಸ್ತದ್ವಿಪರೀತಃ ಸ್ಯಾತ್ ಪಾಚನಶ್ಚ ವಿಶೇಷತಃ || ಸ್ನೇಹಮಾರ್ದ
ವಕೃತ್ ಸ್ನಿಗ್ಧೋ ಬಲವರ್ಣಕರಸ್ತಥಾ | ರೂಕ್ಷಸ್ತದ್ವಿಪರೀತಃ ಸ್ಯಾತ್
ವಿಶೇಷಾತ್ ಸ್ತಂಭನಃ ಖರಃ || ಪಿಚ್ಛಿಲೋ ಜೀವನೋ ಬಲ್ಯಃ
ಸಂಧಾನಃ ಶ್ಲೇಷ್ಮಲೋ ಗುರುಃ | ವಿಶದೋ ವಿಪರೀತೋಽಸ್ಮಾತ್
ಕ್ಲೇದಾಕರ್ಷಣರೋಪಣಃ || ದಾಹಪಾಕಕರಸ್ತೀಕ್ಷ್ಣಃ ಸ್ರಾವಣೋ
ಮೃದುರಸ್ತಥಾ | ಸಾದೋಪಲೇಪಬಲಕೃದ್ ಗುರುಸ್ತರ್ಪಣಬೃಂಹ
ಣಃ || ಲಘುಸ್ತದ್ವಿಪರೀತಃ ಸ್ಯಾಲ್ಲೇಖನೋ ರೋಪಣಸ್ತಥಾ | ದಶಾ
ದ್ರವ್ಯಾಶ್ರಯ ಏಂತಿ ಕರ್ಮತಃ ಪ್ರೋಕ್ತಾಸ್ತೇಷಾಂ ಕರ್ಮವಿಶೇಷಣೈಃ || ದಶೈ
ಗುಣಗಳು ವಾನ್ಯಾನ್ಯವಕ್ಷ್ಯಾಮಿ ದ್ರವಾದೀಂಸ್ತಾನ್ನಿಬೋಧ ಮೇ | ದ್ರವಃ ಪ್ರಕ್ಲೇ
ದನಃ ಸಾಂದ್ರಃ ಸ್ಥೂಲಃ ಸ್ಯಾದ್ಬಂಧಕಾರಕಃ || ಶ್ಲಕ್ಷ್ಣಃ ಪಿಚ್ಛಿಲವಜ್ಜ್ಞೇ
ಯಃ ಕರ್ಕಶೋ ವಿಶದೋ ಯಥಾ | ಸುಖಾಸುಬಂಧೀ ಸೂಕ್ಷ್ಮಶ್ಚ
ಸುಗಂಧೋ ರೋಚನೋ ಮೃದುಃ | ದುರ್ಗಂಧೋ ವಿಪರೀತೋಽಸ್ಮಾ
ದ್ಧೃಲ್ಲಾಸಾರುಚಿಕಾರಕಃ || ಸರೋಽನುಲೋಮನಃ ಪ್ರೋಕ್ತೋ
ಮದೋ ಯಾತ್ರಾಕರಃ ಸ್ಮೃತಃ | ವ್ಯವಾಯೀ ಚಾಖಿಲಂ ದೇಹಂ
ವ್ಯಾಪ್ಯ ಪಾಕಾಯ ಕಲ್ಪತೇ || ವಿಕಾಸೀ ವಿಕಸನ್ನೈವಂ ಧಾತುಬಂಧಾನ್
ವಿಮೋಚಯೇತ್ | ಅಶುಕಾರೀ ತಥಾಶುತ್ವಾದ್ಧಾವತ್ಯಂಭಸಿ ತೈಲ
ವತ್ || ಸೂಕ್ಷ್ಮಸ್ತು ಸೌಕ್ಷ್ಮ್ಯತ್ಸೂಕ್ಷ್ಮೇಷು ಸ್ರೋತಸ್ಸ್ವನುಸರಃ

ಸ್ಮೃತಃ | ಗುಣಾ ವಿಂಶತಿರಿತ್ಯೇವಂ ಯಥಾವತ್ಪರಿಕೀರ್ತಿತಾಃ ||
(ಸು. 240-41.)

ದ್ರವ್ಯಗಳಲ್ಲಿ ಆಶ್ರಯಿಸಿರುವ ಗುಣಗಳು ಅವುಗಳ ಕರ್ಮಗಳಿಂದ ಊಹಿಸಲ್ಪಡುತ್ತವೆ. ಈ ವಿಚಾರದಲ್ಲಿ ಪ್ರಥಮ ಹತ್ತು ಗುಣಗಳು ಯಾವವೆಂದರೆ – (1) ಶೀತ; (2) ಉಷ್ಣ, (3) ಸ್ನಿಗ್ಧ; (4) ರೂಕ್ಷ; (5) ಪಿಚ್ಛಿಲ; (6) ವಿಶದ; (7) ತೀಕ್ಷ್ಣ, (8) ಮೃದು; (9) ಗುರು; (10) ಲಘು. ವಿಶೇಷ ಕರ್ಮಗಳ ಭೇದದ ಮೇಲೆ ಬೇರೆ ಹತ್ತು ದ್ರವಾದಿ ಗುಣಗಳು ಇವೆ. ಅವುಗಳು ಯಾವವೆಂದರೆ — (1) ದ್ರವ, (2) ಸ್ಥೂಲ, (3) ಶ್ಲಕ್ಷ್ಣ, (4) ಕರ್ಕಶ; (5) ಸರ, (6) ಮದ, (7) ವ್ಯವಾಯಿ, (8) ವಿಕಾಸಿ, (9) ಆಶು, (10) ಸೂಕ್ಷ್ಮ ಇವು ಹತ್ತು ಕೂಡಿ ಒಟ್ಟು ಇಪ್ಪತ್ತು ಗುಣಗಳು.

1. **ಶೀತವು**— ಸಂತೋಷಕರ, ಸ್ತಂಭನ (ರಕ್ತಸ್ರುತಿ ಮುಂತಾದ್ದನ್ನು ನಿಲ್ಲಿಸತಕ್ಕಂಥಾದ್ದು), ಮತ್ತು ಮೂರ್ಛೆ, ಬಾಯಾರಿಕೆ, ಬೆವರು, ಮತ್ತು ಉರಿ, ಇವುಗಳನ್ನು ಜಯಿಸತಕ್ಕದ್ದು

2. **ಉಷ್ಣ** — ಶೀತಕ್ಕೆ ವಿರುದ್ಧವಾದದ್ದು—ಮುಖ್ಯವಾಗಿ ಪಚನಮಾಡುವ ಗುಣವುಳ್ಳದ್ದು.
ಷರಾ ಪಾಚನ ಅಂದರೆ ವ್ರಣಾದಿಗಳನ್ನು ಪಕ್ವಮಾಡುವಂಥಾದ್ದೆಂತ ಸಿ ಸಂ ವ್ಯಾ

3. **ಸ್ನಿಗ್ಧ** — ಜಿಡ್ಡನ್ನುಂಟುಮಾಡುವದು, ಮೃದು ಮಾಡುವದು, ಮತ್ತು ಬಲವರ್ಣಗಳನ್ನು ವೃದ್ಧಿಸುವದು.

4. **ರೂಕ್ಷ** — ಸ್ನಿಗ್ಧಕ್ಕೆ ವಿರುದ್ಧವಾದದ್ದು ಮುಖ್ಯವಾಗಿ ಸ್ತಂಭನ, ಮತ್ತು ದರಗು (ಗರಸು).

5. **ಪಿಚ್ಛಿಲ**— ಬದುಕಿಸುವಂಥಾದ್ದು, ಬಲಕರ, ಕೂಡಿಸುವಂಥಾದ್ದು, (ಗಾಯ, ಒಡಕು ಮುಂತಾದವುಗಳನ್ನು), ಕಫಕರ ಮತ್ತು ಭಾರವಾದದ್ದು.

6. **ವಿಶದ**— ಪಿಚ್ಛಿಲಕ್ಕೆ ವಿರುದ್ಧವಾದದ್ದು. ತಣಸನ್ನು ಎಳಕೊಳ್ಳುವದು ಮತ್ತು ಬೆಳಿಸುವದು

7. **ತೀಕ್ಷ್ಣ** — ಉರಿಯನ್ನೂ ಪಾಕವನ್ನೂ ಮಾಡತಕ್ಕದ್ದು. ಸುರಿಯುವ ಹಾಗೆ ಮಾಡುವದು.

8. **ಮೃದು**— ತೀಕ್ಷ್ಣಕ್ಕೆ ವಿರುದ್ಧವಾದದ್ದು
ಷರಾ ಕೆಲವು ಗ್ರಂಥಗಳಲ್ಲಿ ಮೃದುವು, ಕರ್ಕಶ ಅಥವಾ ಖರ(ಅಥವಾ ಕಠಿನ)ಕ್ಕೆ ವಿರುದ್ಧವಾದದ್ದೆಂತ ಕಾಣಿಸಿಯದೆ

9. **ಗುರು**— ಜಾಡ್ಯವನ್ನೂ, ಕೊಳೆ ಮುಂತಾದ ಉಪಲೇಪವನ್ನೂ, ಬಲವನ್ನೂ, ತೃಪ್ತಿಯನ್ನೂ, ಪುಷ್ಟಿಯನ್ನೂ ಉಂಟುಮಾಡತಕ್ಕದ್ದು.
ಷರಾ 'ಬಲ' ಎಂದರೆ ಕಫ ಎಂತ. ಸಿ ಸಂ ವ್ಯಾ

10. **ಲಘು**— ಗುರುವಿಗೆ ವಿರುದ್ಧವಾದದ್ದು, ಧಾತುಮಲಾದಿಗಳನ್ನು ಒತ್ತಿಸುವಂಥಾದ್ದು, ಮತ್ತು (ವ್ರಣಾದಿಗಳನ್ನು) ಬೆಳಿಸುವಂಥಾದ್ದು.

11. **ದ್ರವ**— ಒದ್ದೆಮಾಡುವಂಥಾದ್ದು.

12. **ಸ್ಥೂಲ**— ದಪ್ಪ ಮತ್ತು ಕೂಡಿಸುವಂಥಾದ್ದು.

13. **ಶ್ಲಕ್ಷ್ಣ** — 'ಪಿಚ್ಛಿಲ'ದಂತೆ.

14. **ಕರ್ಕಶ** — 'ವಿಶದ'ದಂತೆ.

15. **ಸರ** — (ವಾತಮಲಗಳನ್ನು) ಪ್ರವರ್ತಿಸುವಂಥಾದ್ದು.

16. **ಮದ** — ಬುದ್ಧಿಕೆಡಿಸತಕ್ಕದ್ದು.

17. **ವ್ಯವಾಯಿ** — ಇಡೀ ಶರೀರಕ್ಕೆ ಅಪಕ್ವವಾಗಿಯೇ ವ್ಯಾಪಿಸಿದನಂತರ ಪಚನವಾಗುವಂಥಾದ್ದು.

18. **ವಿಕಾಸಿ** — ಅರಳಿಸಿದಂತೆ ಧಾತುಬಂಧಗಳನ್ನು ವಿಮೋಚಿಸುವದು.

19. **ಆಶುಕಾರಿ** — ನೀರಲ್ಲಿ ಬಿಟ್ಟ ತೈಲಬಿಂದು ಕೂಡಲೇ ಪಸರಿಸುವಂತೆ ಕ್ಷಿಪ್ರ ಕೆಲಸ ಮಾಡುವಂಥಾದ್ದು.

20. **ಸೂಕ್ಷ್ಮ** — ಸೂಕ್ಷ್ಮವಾದ ದೆಸೆಯಿಂದ ಸೂಕ್ಷ್ಮವಾದ ಸ್ರೋತಸ್ಸುಗಳಲ್ಲಿ ಹಿಂಬಾಲಿಸಿ ಹೋಗತಕ್ಕಂಥಾದ್ದು. ಸುಗಂಧವು ಮೃದು, ಸುಖಕರ, ಸೂಕ್ಷ್ಮ, ರುಚಿಯನ್ನುಂಟುಮಾಡತಕ್ಕದ್ದು. ದುರ್ಗಂಧವು ಅದಕ್ಕೆ ವಿರುದ್ಧ, ಹೃಲ್ಲಾಸವನ್ನೂ ಅರುಚಿಯನ್ನೂ ಉಂಟುಮಾಡತಕ್ಕದ್ದು.

ಇದಕ್ಕೆ ಬೇರೆ ಗ್ರಂಥಗಳಲ್ಲಿ ದ್ರವ್ಯಗಳಲ್ಲಿಯ 20 ಗುಣಗಳ ಗಣನೆಯಲ್ಲಿ, ಮದ, ವ್ಯವಾಯಿ ಮತ್ತು ವಿಕಾಸಿ ಇವು ಕೂಡಿದ್ದು ಕಾಣುವದಿಲ್ಲ ಅವುಗಳ ಬದಲಿಗೆ ಭಾ ಪ್ರ ದಲ್ಲಿ ಶುಷ್ಕ, ಮಂದ, ಸ್ಥಿರ, ಇವು ಸೇರಿಸಲ್ಪಟ್ಟಿವೆ ವಾಗ್ಭಟದಲ್ಲಿ ಗುರು, ಮಂದ, ಶೀತ ಸ್ನಿಗ್ಧ, ಶ್ಲಕ್ಷ್ಣ, ಪಿಚ್ಛಿಲ, ಮೃದು, ಸ್ಥಿರ, ಸೂಕ್ಷ್ಮ, ಎಶದ ಇವು ಹತ್ತನ್ನು ನಮೂದಿಸಿ, ಮಿಕ್ಕ ಹತ್ತು ಇವುಗಳಿಗೆ ವಿರುದ್ಧವಾದ ಗುಣಗಳು ಎಂತ ಹೇಳಲ್ಪಟ್ಟಿದೆ ಇದಲ್ಲದೆ ಭಾವಪ್ರಕಾಶದಲ್ಲಿ ತೀಕ್ಷ್ಣಕ್ಕೆ ವಿರುದ್ಧ ಗುಣ ಶ್ಲಕ್ಷ್ಣ, ಮೃದುವಿಗೆ ವಿರುದ್ಧ ಗುಣ ಕರ್ಕಶ ದ್ರವಕ್ಕೆ ವಿರುದ್ಧ ಶುಷ್ಕ, ಆಶುಕಾರಿಗೆ ವಿರುದ್ಧ ಮಂದ ಎಂತ ಮತ್ತು ಬೇರೊಂದು ಗ್ರಂಥದಲ್ಲಿ ತೀಕ್ಷ್ಣಕ್ಕೆ ವಿರುದ್ಧ ಮಂದ ಎಂತ, ಮುಂತಾದ ಭೇದಗಳು ಕಾಣುತ್ತವೆ 'ಸುಗಂಧ' ಮತ್ತು 'ದುರ್ಗಂಧ' ಸಹ ಗುಣಗಳು ಎಂತ ಸಿ ಸಂ ವ್ಯಾ ಹೇಳುತ್ತದೆ ಆದರೆ ಅವು 'ಸರ'ದ ಭೇದಗಳೇ ಎಂಬ ವಕ್ಷವು ಸರಿ ಕಾಣುತ್ತದೆ ಹ್ಯಾಗಾದರೂ, ಮೇಲೆ ಎವರಿಸಿದ ಎಲ್ಲಾ ಗುಣವಾಚಕ ಪದಗಳ ಅರ್ಥವನ್ನು ವಾಚಕರು ಸರಿಯಾಗಿ ಗ್ರಹಿಸಿ ನೆನಪಿನಲ್ಲಿಟ್ಟುಕೊಳ್ಳುವದು ಅವಶ್ಯಕ

3. ಪಚೇನ್ನಾಮಂ ವಹ್ನಿಕೃದ್ಯದ್ದೀಪನಂ ತದ್ಯಥಾ ಮಿಸಿಃ ।
ಪಚತ್ಯಾಮನ್ನ ಯತ್ ಕುರ್ಯಾದನಲಂ ತದ್ಧಿ ಪಾಚನಮ್ ॥
ನಾಗಕೇಸರವದ್ವಿದ್ಯಾಚ್ಚಿತ್ರೋ ದೀಪನಪಾಚನಃ ।
ನ ಶೋಧಯತಿ ನ ದ್ವೇಷ್ಟಿ ಸಮಾನ್ ದೋಷಾಂಸ್ತಧೋದ್ಧರಾನ್ ॥
ಸಮೀಕರೋತಿ ಯತ್ ಜ್ಞೇಯಂ ಶಮನಸ್ತದ್ಯಥಾಮೃತಾ ।

ದೀಪನ ಪಾಚನಾದಿ ದ್ರವ್ಯ ಗುಣಗಳು

ಕೃತ್ವಾ ಪಾಕಮ್ಮಲಾನಾಂ ಯದ್ಧಿತ್ವಾ ಬನ್ಧಮಧೋ ನಯೇತ್ ॥
ತಚ್ಛಾನುಲೋಮನಂ ಜ್ಞೇಯಂ ಯಥಾ ಪ್ರೋಕ್ತಾ ಹರೀತಕೀ ।
ಪಕ್ತವ್ಯಂ ಯದಪಕ್ತ್ವೈವ ಶ್ಲಿಷ್ಟಂ ಕೋಷ್ಠೇ ಮಲಾದಿಕಮ್ ॥
ನಯತ್ಯಧಃ ಸ್ರಂಸನನ್ತದ್ಯಥಾ ಸ್ಯಾತ್ ಕೃತಮೂಲಕಃ ।
ಮಲಾದಿಕಮಬದ್ಧಂ ಯದ್ಬದ್ಧಂ ವಾ ಪಿಂಡಿತಮ್ಮಲೈಃ ॥
ಭಿತ್ವಾಧಃ ಪಾತಯತಿ ತದ್ಭೇದನಂ ಕಟುಕೋ ಯಥಾ ।
ವಿಪಕ್ವಂ ಯದಪಕ್ವಂ ವಾ ಮಲಾದಿ ದ್ರವತಾನ್ನಯೇತ್ ॥
ರೇಚಯತ್ಯಪಿ ತತ್ ಜ್ಞೇಯಂ ರೇಚನಂ ತ್ರಿವೃತಾ ಯಥಾ ।

ಅಪಕ್ವಪಿತ್ತಶ್ಲೇಷ್ಮಾಣಂ ಬಲಾದೂರ್ಧ್ವಂ ನಯೇತ್ತು ಯತ್ ||
ವಮನಂ ತದ್ಧಿ ವಿಜ್ಞೇಯಂ ಮದನಸ್ಯ ಫಲಂ ಯಥಾ |
ಸ್ವಾನಾದ್ಬಹಿರ್ನಯೇದೂರ್ಧ್ವಮಧೋ ವಾ ಮಲಸಂಚಯಂ ||
ದೇಹೇ ಸಂಶೋಧನನ್ತತ್ಸ್ಯಾದ್ದೇವದಾಲೀಫಲಂ ಯಥಾ |
ಶ್ಲಿಷ್ಟಾನ್ ಕಫಾದಿಕಾನ್ದೋಷಾನುನ್ಮೂಲಯತಿ ಯದ್ಬಲಾತ್ |
ಛೇದನಸ್ತದ್ಯಥಾ ಕ್ಷಾರೋ ಮರಿಚಾನಿ ಶಿಲಾಜತು |
ಧಾತೂನ್ಮಲಾನ್ವಾ ದೇಹಸ್ಯ ಎಶೋಷ್ಯೋಲ್ಲೇಖಯೇಚ್ಚ ಯತ್ ||
ಲೇಖನನ್ತದ್ಯಥಾ ಕ್ಷೌದ್ರನ್ನೀರಮುಷ್ಣಂ ವಚಾ ಯವಾಃ |
ದೀಪನಂ ಪಾಚನಂ ಯತ್ಸ್ಯಾದುಷ್ಣತ್ವಾದ್ಬ್ರವಶೋಷಕಮ್ ||
ಗ್ರಾಹಿ ತಚ್ಚ ಯಥಾ ಶುಂಠೀ ಜೀರಕಂ ಗಜಪಿಪ್ಪಲೀ |
ರೌಕ್ಷ್ಯಚ್ಛೈತ್ಯಾತ್ಕಷಾಯತ್ವಾಲ್ಲಘುಪಾಕಾಚ್ಚ ಯದ್ಭವೇತ್ ||
ಸ್ತಂಭಕೃತ್ ಸ್ತಂಭನಂ ತತ್ಸ್ಯಾದ್ಯಥಾ ಟುಟುಕವತ್ಸಕೌ |
ರಸಾಯನಂ ಚ ತಜ್ಜ್ಞೇಯಂ ಯಜ್ಜರಾವ್ಯಾಧಿನಾಶನಮ್ ||
ಯಥಾಮೃತಾ ರುದನ್ತೀ ಚ ಗುಗ್ಗುಲುಶ್ಚ ಹರೀತಕೀ |
ಯಸ್ಮಾದ್ರವ್ಯಾದ್ಭವೇತ್ ಸ್ತ್ರೀಷು ಹರ್ಷೋ ವಾಜೀಕರಂ ಚ ತತ್ ||
ಯಥಾ ನಾಗಬಲಾದ್ಯಾಃ ಸ್ಯುರ್ವೀರ್ಜಂ ಚ ಕಪಿಕಚ್ಛ್ವಜಮ್ |
ಯಸ್ಮಾಚ್ಛುಕ್ರಸ್ಯ ವೃದ್ಧಿಃ ಸ್ಯಾಚ್ಛುಕ್ರಲಂ ಚ ತದುಚ್ಯತೇ ||
ಯಥಾಶ್ವಗಂಧಾ ಮುಶಲೀ ಶರ್ಕರಾ ಚ ಶತಾವರೀ |
ಪ್ರವರ್ತಕಾನಿ ಕಥ್ಯನ್ತೇ ಜನಕಾನಿ ಚ ರೇತಸಃ ||
ದುಗ್ಧಂ ಮಾಷಾಶ್ಚ ಭಲ್ಲಾತಫಲಮಜ್ಞಾತಮಲಾನಿ ಚ |
ಪ್ರವರ್ತನೀ ಸ್ತ್ರೀಶುಕ್ರಸ್ಯ ರೇಚನಂ ಬೃಹತೀಫಲಂ ||
ಜಾತೀಫಲಂ ಸ್ತಂಭನಂ ಸ್ಯಾತ್ ಕಾಲಿಂದಂ ಕ್ಷಯಕಾರಿ ಚ |
ದೇಹಸ್ಯ ಸೂಕ್ಷ್ಮಛಿದ್ರೇಷು ವಿಶೇತ್ತತ್ಸೂಕ್ಷ್ಮಮುಚ್ಯತೇ ||
ತದ್ಯಥಾ ಸೈಂಧವಂ ಕ್ಷೌದ್ರಂ ನಿಂಬಸ್ನೈಲಂ ರುಬೂದ್ಭವಂ |
ಪೂರ್ವಂ ವ್ಯಾಪ್ಯಾಖಿಲಂ ಕಾಯಂ ತತಃ ಪಾಕಂ ಚ ಗಚ್ಛತಿ ||
ವ್ಯವಾಯಿ ತದ್ಯಥಾ ಭಂಗಾ ಫೇಸಂ ಚಾಹಿಸಮುದ್ಭವಮ್ |
ಸನ್ಧಿಬಂಧಾಂಸ್ತು ಶಿಥಿಲಾನ್ ಯತ್ಕರೋತಿ ವಿಕಾಶಿ ತತ್ ||
ವಿಶ್ಲೇಷ್ಯಾಜಚ್ಚ ಧಾತುಭ್ಯೋ ಯಥಾ ಕ್ರಮುಕಕೋದ್ರವೌ |
ಬುದ್ಧಿಂ ಲುಂಪತಿ ಯದ್ದ್ರವ್ಯಂ ಮದಕಾರಿ ತದುಚ್ಯತೇ ||
ತಮೋಗುಣಪ್ರಧಾನಂ ಚ ಯಥಾ ಮದ್ಯಸುರಾದಿಕಮ್ |
ವ್ಯವಾಯಿ ಚ ವಿಕಾಶಿ ಸ್ಯಾತ್ **ಶ್ಲೇಷ್ಮಛೇದಿ* ಮದಾವಹಮ್** ||
ಆಗ್ನೇಯಂ ಜೀವಿತಹರಂ ಯೋಗವಾಹಿ ಸ್ಮೃತಂ ವಿಷಮ್ |
ನಿಜವೀರ್ಯೇಣ ಯದ್ದ್ರವ್ಯಂ ಸ್ರೋತೋಭ್ಯೋ ದೋಷಸಂಚಯಮ್ ||
ನಿರಸ್ಯತಿ ಪ್ರಮಾಥಿಸ್ಯಾತ್ತದ್ಯಥಾ ಮರಿಚಂ ವಚಾ |

ಪೈಚ್ಛಿಲ್ಯಾದ್ಗೌರವಾದ್ದ್ರವ್ಯಂ ರುದ್ಧಾ ರಸವಹಾಃ ಸಿರಾಃ |
ಧತ್ತೇ ಯದ್ಗೌರವಂ ತತ್ಸ್ಯಾದಭಿಷ್ಯನ್ದಿ ಯಥಾ ದಧಿ ||
(ಚಿ. ಸಾ. ಸಂ. 1029-30.)

* ಇದಾ 'ಸೂಕ್ಷ್ಮಶ್ಲೇಷ್ಮ ಮಹಾವಪಮ' ಎಂಬ ಪಾಠ ತಪ್ಪಾಗಿರಬೇಕು ಛಾ ಪ್ರ ಪುಟ 76 ನೋಡು

1. ದೀಪನ = ಆಮವನ್ನು ಪಾಕಮಾಡದೆ ಅಗ್ನಿಯನ್ನುಂಟುಮಾಡುವಂಥಾದ್ದು. ಉದಾ ಸೋಪಿ.

2. ಪಾಚನ = ಅಗ್ನಿಯನ್ನುಂಟುಮಾಡದೆ ಆಮವನ್ನು ಪಾಕಮಾಡತಕ್ಕದ್ದು. ಉದಾ. ನಾಗಕೇಸರ.

3. ದೀಪನಪಾಚನ = ಆಮವನ್ನು ಪಾಕಮಾಡಿ ಅಗ್ನಿಯನ್ನುಂಟುಮಾಡತಕ್ಕದ್ದು. ಉದಾ: ಚಿತ್ರಮೂಲ.

4. ಶಮನ = ಶೋಧನೆ ಮಾಡದೆಯೂ, ಸಮವಾಗಿರುವ ದೋಷಗಳಿಗೆ ವಿರೋಧಮಾಡದೆಯೂ, ಉದ್ರೇಕವಾದ ದೋಷಗಳನ್ನು ಸಮಮಾಡುವಂಥಾದ್ದು. ಉದಾ ಅಮೃತಬಳ್ಳಿ.

5. ಅನುಲೋಮನ = ಮಲಗಳನ್ನು ಪಾಕಮಾಡಿ, ಕಟ್ಟು ಒಡೆದು, ಕೆಳಗೆ ಒಯ್ಯುವಂಥಾದ್ದು. ಉದಾ ಅಣಿಲೆಕಾಯಿ

6. ಸ್ರಂಸನ = ಪಾಕವಾಗತಕ್ಕದ್ದನ್ನು ಪಚನಮಾಡದೇನೇ ಹೊಟ್ಟೆಯೊಳಗೆ ಹಿಡಕೊಂಡ ಮಲ ಮುಂತಾದ್ದನ್ನು ಕೆಳಗೆ ಒಯ್ಯತಕ್ಕದ್ದು. ಉದಾ ಕಕ್ಕೆಮರ (ಕೊಂದೆ)

7. ಭೇದನ = ಮಲ ಮುಂತಾದ್ದನ್ನು ಶಿಥಿಲವಾದದ್ದಾಗಲೀ, ದೋಷಗಳಿಂದ ಬದ್ಧವಾಗಿ ಗಟ್ಟಿಯಾದದ್ದಾಗಲಿ, ಒಡೆದು ಕೆಳಗೆ ಬೀಳಿಸುವಂಥಾದ್ದು. ಉದಾ ಕಟುಕರೋಹಿಣಿ.

8. ರೇಚನ = ಮಲಾದಿಗಳನ್ನು, ಪಕ್ವವಾಗಿರಲಿ ಅಥವಾ ಪಕ್ವವಾಗದೆ ಇರಲಿ, ನೀರು ಮಾಡಿ ಕೆಳಗೆ ಸುರಿಸುವಂಥಾದ್ದು. ಉದಾ ತಿಗಡೆ

9. ವಮನ = ಪಕ್ವವಾಗದ ಪಿತ್ತ ಕೂಡಿದ ಕಫವನ್ನು ಬಲಾತ್ಕಾರದಿಂದ ಮೇಲಕ್ಕೆ ಒಯ್ಯುವಂಥಾದ್ದು. ಉದಾ ಮಂಗಾರೆಕಾಯಿ (ಮಾಯಿಫಲ).

10. ಸಂಶೋಧನ = ದೇಹದಲ್ಲಿರುವ ಮಲಸಂಗ್ರಹವನ್ನು ಸ್ಥಾನದಿಂದ ಹೊರಡಿಸಿ, ಮೇಲಕ್ಕಾಗಲಿ ಕೆಳಕ್ಕಾಗಲಿ ಒಯ್ಯುವಂಥಾದ್ದು. ಉದಾ ದೇವದಾಳಿಫಲ.

11. ಛೇದನ = ಹಿಡಕೊಂಡಿದ್ದ ಕಫಾದಿ ದೋಷಗಳನ್ನು ಬಲಾತ್ಕಾರದಿಂದ ಕೀಳತಕ್ಕದ್ದು. ಉದಾ. ಕ್ಷಾರ ಮೆಣಸುಗಳು ಮತ್ತು ಶಿಲಾಜತು

12. ಲೇಖನ = ದೇಹದ ಮಲಗಳನ್ನಾಗಲಿ, ಧಾತುಗಳನ್ನಾಗಲಿ, ಒಣಗಿಸಿ ಕೃಶಮಾಡ (ಬತ್ತಿಸ)ತಕ್ಕದ್ದು. ಉದಾ ಜೀನು, ಬಿಸಿನೀರು, ಬಜೆ, ಇಂದ್ರಜೀವಿ.

13. ಗ್ರಾಹಿ = ದೀಪನ ಪಾಚನ ಗುಣಗಳುಳ್ಳದ್ದಾಗಿ, ಉಷ್ಣತೆಯಿಂದ ದ್ರವವನ್ನು ಒಣಗಿಸತಕ್ಕದ್ದು. ಉದಾ ಒಣಶುಂಠಿ, ಜೀರಿಗೆ ಮತ್ತು ಗಜಹಿಪ್ಪಲಿ.

14. ಸ್ತಂಭನ = ರೂಕ್ಷತೆ, ಶೈತ್ಯ, ಜೊಗರು, ಲಘುಪಾಕ, ಈ ಗುಣಗಳಿಂದ (ಪ್ರತಿಲೋಮವಾಯುವನ್ನುಂಟುಮಾಡಿ ಮಲಾದಿಗಳನ್ನು) ತಡೆಯತಕ್ಕದ್ದು. ಉದಾ. ಕೊಡಸಿಗ ಮತ್ತು ಆನೆಮುಂಗು.

15. ರಸಾಯನ = ಮುದಿತನವನ್ನೂ ವ್ಯಾಧಿಗಳನ್ನೂ ನಾಶಮಾಡತಕ್ಕದ್ದು. ಉದಾ: ಅಮೃತಬಳ್ಳಿ, ಅಡವೀಕಡಲೆ, ಗುಗ್ಗುಳ ಮತ್ತು ಆನೆಲೆಕಾಯಿ. (ಪಾಠಾಂತರದಲ್ಲಿ. ಆನೆಲೆ ಕಾಯಿ, ದಂತಿ, ಗುಗ್ಗುಳ ಮತ್ತು ಶಿಲಾಜತು) (ಭಾ. ಪ್ರ.)

16. ವಾಜೀಕರ = ಸ್ತ್ರೀಯರ ವಿಷಯದಲ್ಲಿ ಹರ್ಷವನ್ನುಂಟುಮಾಡತಕ್ಕದ್ದು. ಉದಾ ಆನೆಕಡೀರು ಆದಿಯಾದ ವರ್ಗ. ಮತ್ತು ನಾಯಿಸೊಣಗಿನ ಬೀಜ. (ಪಾರಾಂತರದಲ್ಲಿ. ಅಶ್ವಗಂಧಿ, ನೆಲತಾಳಿಗಡ್ಡೆ, ಸಕ್ಕರೆ ಮತ್ತು ಶತಾವರಿ.) (ಭಾ. ಪ್ರ.)

17. ಶುಕ್ರಲ = ಶುಕ್ರವನ್ನು ವೃದ್ಧಿಮಾಡತಕ್ಕದ್ದು. ಉದಾ ಅಶ್ವಗಂಧಿ, ನೆಲತಾಳಿ ಗಡ್ಡೆ, ಸಕ್ಕರೆ, ಶತಾವರಿ. (ಪಾರಾಂತರದಲ್ಲಿ ಆನೆಕಡೀರು ಆದಿಯಾದ ವರ್ಗ ಮತ್ತು ನಾಯಿ ಸೊಣಗಿನ ಬೀಜ.) (ಭಾ. ಪ್ರ)

ರೇತೋಜನಕ ಮತ್ತು ರೇತಃಪ್ರವರ್ತಕ. ಉದಾ ಹಾಲು, ಉದ್ದುಗಳು, ಗೇರು ಕಾಯಿಪೊಪ್ಪು ಮತ್ತು ಸಣ್ಣನೆಲ್ಲಿ

ಶುಕ್ರಪ್ರವರ್ತನ — ಉದಾ ಸ್ತ್ರೀ.

ಶುಕ್ರರೇಚಕ — ಉದಾ ಗುಳ್ಳದಕಾಯಿ

ಶುಕ್ರಸ್ತಂಭನ — ಉದಾ ಜಾಯಿಕಾಯಿ

ಶುಕ್ರಕ್ಷಯಕಾರಿ — ಉದಾ ಕಲ್ಲಂಗಡಿ (ಬಚ್ಚಂಗಾಯಿ).

18. ಸೂಕ್ಷ್ಮ = ದೇಹದೊಳಗಣ ಸೂಕ್ಷ್ಮವಾದ ರಂಧ್ರಗಳೊಳಗೆ ಪ್ರವೇಶಮಾಡ ತಕ್ಕದ್ದು. ಉದಾ ಸೈಂಧವಲವಣ, ಜೇನು, ಕಪಿಬೇವು ಮತ್ತು ಹರಳಣ್ಣೆ.

19. ವ್ಯವಾಯಿ = ಮುಂದಾಗಿ ಇಡೀ ಶರೀರವನ್ನು ವ್ಯಾಪಿಸಿ, ಅನಂತರ ಪಾಕವಾಗು ವಂಥಾದ್ದು. ಉದಾ ಭಂಗಿ ಮತ್ತು ಅಫೀಮು.

20. ವಿಕಾಸಿ = ಧಾತುಗಳಿಂದ ಓಜಸ್ಸನ್ನು ಪ್ರತ್ಯೇಕಿಸಿಬಿಟ್ಟು, ದೇಹದ ಸಂದುಕಟ್ಟು ಗಳನ್ನು ಸಡಿಲುಮಾಡತಕ್ಕದ್ದು. ಉದಾ. ಅಡಿಕೆ ಮತ್ತು ಕೋದ್ರವ ಧಾನ್ಯ (ಹಾರಕ?).

21. ಮದಕಾರಿ = ತಮೋಗುಣ ಪ್ರಧಾನವಾಗಿ, ಬುದ್ಧಿಯನ್ನು ಕೆಡಿಸತಕ್ಕದ್ದು. ಉದಾ. ಮದ್ಯ, ಸಾರಾಯಿ ಮುಂತಾದದ್ದು

22. ವಿಷ = ವ್ಯವಾಯಿ, ವಿಕಾಸಿ, ಮದಕಾರಿ, ಕಫಪಿತ್ತೇದಕರ, ಆಗ್ನೇಯ (ಸುಡುವ) ಯೋಗವಾಹಿ (ಜೊತೆದ್ರವ್ಯದ ಗುಣವನ್ನು ವಹಿಸಿಕೊಳ್ಳುವ) ಮತ್ತು ಪ್ರಾಣಹರ ಈ ಗುಣಗಳಿಂದ ಕೂಡಿದ್ದು.

23. ಪ್ರಮಾಥಿ = ತನ್ನ ವೀರ್ಯದಿಂದ ಸ್ರೋತಸ್ಸುಗಳೊಳಗಣ ದೋಷಸಂಗ್ರಹವನ್ನು ಹೋಗಲಾಡಿಸತಕ್ಕದ್ದು. ಉದಾ ಕಾಳುಮೆಣಸು ಮತ್ತು ಬಜೆ.

24. ಅಭಿಷ್ಯನ್ದಿ = ತನ್ನ ಪಿಚ್ಛಿಲತೆಯಿಂದಲೂ, ಗುರುತ್ವದಿಂದಲೂ ರಸವಾಹಿಗಳಾದ ಸಿರಾನಾಳಗಳಲ್ಲಿ ತಡೆಯಾಗಿ ನಿಂತು, ಗುರುತ್ವವನ್ನುಂಟುಮಾಡತಕ್ಕದ್ದು. ಉದಾ. ಮೊಸರು.

ವಿದಾಹಿ

ವಿದಾಹಿದ್ರವ್ಯಮುದ್ಗಾರಮಮ್ಲಂ ಕುರ್ಯಾತ್ತಥಾ ತೃಷಾಮ್ ।
ಹೃದಿ ದಾಹಂ ಚ ಜನಯೇತ್ಪಾಕಂ ಗಚ್ಛತಿ ತಚ್ಚಿರಾತ್ ॥ (ಭಾ. ಪ್ರ. 76.)

ಹುಳಿ ತೇಗನ್ನೂ, ಬಾಯಾರಿಕೆಯನ್ನೂ, ಎದೆಯಲ್ಲಿ ಉರಿಯನ್ನೂ, ಹುಟ್ಟಿಸಿ, ಸಾವಕಾಶದಿಂದ ಪಾಕವಾಗತಕ್ಕ ದ್ರವ್ಯವು 'ವಿದಾಹಿ'.

ಯೋಗವಾಹಿ

ಗೃಹ್ಣಾತಿ ಯೋಗವಾಹಿದ್ರವ್ಯಂ ಸಂಸರ್ಗಿವಸ್ತುಗುಣಾನ್ | ಪಚ್ಯಮಾನಂ ಯದ್ಧೈತನ್ಮಧುಜಲತೈಲಾಜ್ಯಸೂತಲೋಹಾದಿ || (ಭಾ. ಪ್ರ. 77.)

ಪಚನಕಾಲದಲ್ಲಿ ಜೊತೆವಸ್ತುವಿನ ಗುಣಗಳನ್ನು ಯೋಗವಾಹಿದ್ರವ್ಯವು ಪಡೆಕೊಳ್ಳುತ್ತದೆ. ಉದಾ ಜೇನು, ನೀರು, ತೈಲ, ತುಪ್ಪ, ಪಾದರಸ, ಕಬ್ಬಿಣ ಮುಂತಾದದ್ದು.

4. ಪಾರ್ಥಿವದ ಲಕ್ಷಣಗಳು

ತತ್ರ ಸ್ಥೂಲ-ಸಾರ-ಸಾಂದ್ರ-ಮಂದ-ಸ್ಥಿರ-ಖರ-ಗುರು-ಕಠಿನ-ಗಂಧಬಹುಲಮಾಷತ್ಕಷಾಯಂ ಪ್ರಾಯಶೋ ಮಧುರಮಿತಿ ಪಾರ್ಥಿವಂ ತತ್ ಸ್ಥೈರ್ಯ-ಬಲ-ಸಂಘಾತೋಪಚಯಕರಂ ವಿಶೇಷತಶ್ಚಾಧೋಗತಿಸ್ವಭಾವಮಿತಿ | (ಸು 152)

ಅದರಲ್ಲಿ ತೋರ, ತಿರುಳು, ದಪ್ಪ, ಜಡತ್ವ, ಸ್ಥಿರತ್ವ, ದೊರಗು, ಭಾರ, ಗಟ್ಟಿ, ಈ ಗುಣಗಳು ಮತ್ತು ಹೆಚ್ಚಾಗಿ ವಾಸನೆಯುಳ್ಳದ್ದಾಗಿಯೂ, ಸ್ವಲ್ಪ ಜೊಗರು, ಹೆಚ್ಚಾಗಿ ಸೀರುಚಿಯುಳ್ಳದ್ದಾಗಿಯೂ, ಇರುವ ಪದಾರ್ಥವು ಪಾರ್ಥಿವ. ಅದು ದೃಢತ್ವವನ್ನೂ, ಬಲವನ್ನೂ, ಕೂಡಿಸುವಿಕೆಯನ್ನೂ, ಪುಷ್ಟಿಯನ್ನೂ, ಮಾಡುವ ಶಕ್ತಿಯುಳ್ಳದ್ದೂ, ವಿಶೇಷವಾಗಿ ಕೆಳಗೆ ಹೋಗುವ ಸ್ವಭಾವದ್ದೂ ಆಗಿರುತ್ತದೆ

ಷರಾ ಪಾಠಾಂತರದಲ್ಲಿ 'ಸಾರ' ಮತ್ತು ಖರ' ಕಾಣುವುದಿಲ್ಲ

5. ಆಪ್ಯದ ಲಕ್ಷಣಗಳು

ಶೀತ-ಸ್ತಿಮಿತ-ಸ್ನಿಗ್ಧ-ಮಂದ-ಗುರು-ಸಾರ-ಸಾಂದ್ರ-ಮೃದು-ಪಿಚ್ಛಿಲ-ರಸಬಹುಲಮಾಷತ್ಕಷಾಯಾಮ್ಲ-ಲವಣಂ ಮಧುರರಸಪ್ರಾಯಮಾಪ್ಯಂ ತತ್ ಸ್ನೇಹನ-ಪ್ರಹ್ಲಾದನ-ಕ್ಲೇದನ-ಬಂಧನ-ವಿಷ್ಯಂದನಕರಮಿತಿ | (ಸು. 152.)

ಶೀತ, ಒದ್ದೆ, ಪಸೆ (ಜಿಡ್ಡು), ಜಾಡ್ಯ, ಭಾರ, ತಿರುಳು, ದಪ್ಪ, ಮೃದು, ಅಂಟು, ಈ ಗುಣಗಳು ಮತ್ತು ಹೆಚ್ಚಾಗಿ ರಸವುಳ್ಳ, ಸ್ವಲ್ಪವಾಗಿ ಜೊಗರು, ಹುಳಿ ಮತ್ತು ಉಪ್ಪು, ಮತ್ತು ಹೆಚ್ಚಾಗಿ ಸೀರಸವುಳ್ಳ ಪದಾರ್ಥವು ಆಪ್ಯ. ಅದು ಪಸೆ ಮಾಡುವದು, ಸಂತೋಷ ಪಡಿಸುವದು, ಒದ್ದೆಮಾಡುವದು, ಕಟ್ಟುವದು, ದ್ರವ ಸುರಿಯುವದು, ಈ ಕೆಲಸಗಳನ್ನು ಮಾಡತಕ್ಕದ್ದಾಗಿದೆ

ಷರಾ 'ಸಾರ' ಎಂಬಲ್ಲಿ 'ಸರ' ಎಂತಲೂ ಪಾಠವಿದೆ. ಆದರೆ ಕಫವು 'ಸಾರ'ವುಳ್ಳದ್ದೆಂತ ಚ ಸಹ ಹೇಳುತ್ತದೆ (IX ಆ 23 ಸಂ ನೋಡು)

6. ತೈಜಸದ ಲಕ್ಷಣಗಳು

ಉಷ್ಣ-ತೀಕ್ಷ್ಣ-ಸೂಕ್ಷ್ಮ-ರೂಕ್ಷ-ಖರ-ಲಘು-ವಿಶದಂ ರೂಪಗುಣಬಹುಲಮಾಷದಮ್ಲ-ಲವಣಂ ಕಟುಕರಸಪ್ರಾಯಂ ವಿಶೇಷತಶ್ಚೋರ್ಧ್ವಗತಿಸ್ವಭಾವಮಿತಿ ತೈಜಸಂ ತದ್ದಹನ-ಪಚನ-ದಾರಣ-ತಾಪನ-ಪ್ರಕಾಶನ-ಪ್ರಭಾವರ್ಣಕರಮಿತಿ | (ಸು. 152.)

ಉಷ್ಣ, ತೀಕ್ಷ್ಣ, ಸೂಕ್ಷ್ಮ, ರೂಕ್ಷ, ಖರ, ಲಘು, ವಿಶದ ಇವು ಮತ್ತು ಹೆಚ್ಚಾಗಿ ರೂಪ ಗುಣ ಇರುವ, ಸ್ವಲ್ಪವಾಗಿ ಹುಳಿ ಮತ್ತು ಉಪ್ಪು, ಮತ್ತು ಹೆಚ್ಚಾಗಿ ಖಾರ ರಸವುಳ್ಳ, ವಿಶೇಷ ವಾಗಿ ಮೇಲಕ್ಕೆ ಹೋಗುವ ಸ್ವಭಾವವುಳ್ಳ ಪದಾರ್ಥವು ತೇಜಃಸಂಬಂಧವಾದದ್ದು. ಅದು ಸುಡುವದು, ಪಾಕ ಮಾಡುವದು, ಸೀಳುವದು, ಬಿಸಿ ಮಾಡುವದು, ಬೆಳಗುವದು, ತೇಜಸ್ಸು ಮತ್ತು ವರ್ಣ, ಇವುಗಳನ್ನುಂಟುಮಾಡುವದು, ಈ ಕೆಲಸಗಳನ್ನು ಮಾಡತಕ್ಕದ್ದಾಗಿದೆ.

ಪರಾ ಉಷ್ಣಾದಿ ಗುಣವಾಚಕಪದಗಳ ವಿವರಣಕ್ಕೆ ಮೇಲಿನ 2ನೇ ಸಂ ನೋಡು

7 ಸೂಕ್ಷ್ಮ-ರೂಕ್ಷ-ಖರ-ಶಿಶಿರ-ಲಘು-ವಿಶದಂ ಸ್ಪರ್ಶಬಹುಲವಿಷತ್ತಿಕ್ತಂ ವಿಶೇಷತಃ ಕಷಾಯಮಿತಿ ವಾಯವೀಯಂ ತದ್ವೈಶದ್ಯ ಲಾಘವ-ಗ್ಲಪನ-ವಿರೂಕ್ಷಣ-ವಿಚಾರಣಕರಮಿತಿ | (ಸು. 152)

ವಾಯವೀಯದ ಲಕ್ಷಣ

ಸೂಕ್ಷ್ಮ, ರೂಕ್ಷ, ಬಿರುಸು, ತಣ್ಣಗೆ, ಹಗುರ, ವಿಶದ ಈ ಗುಣಗಳು ಮತ್ತು ಹೆಚ್ಚಾಗಿ ಸ್ಪರ್ಶ (ಮುಟ್ಟುವಿಕೆ) ಗುಣ ಇರುವ, ಸ್ವಲ್ಪ ಕಹಿ, ಹೆಚ್ಚಾಗಿ ಚೊಗರುರುಚಿಯುಳ್ಳ ಪದಾರ್ಥವು ವಾಯುಸಂಬಂಧವಾದದ್ದು. ಅದು ಶುದ್ದಪಡಿಸುವಿಕೆ, ಹಗುರ ಮಾಡುವದು, ದುರ್ಬಲ ಪಡಿಸುವದು, ಒಣಗಿಸುವಿಕೆ, ಚಂಚಲತೆ ಇವುಗಳನ್ನುಂಟುಮಾಡುತ್ತದೆ.

8. ಶ್ಲಕ್ಷ್ಣ-ಸೂಕ್ಷ್ಮ-ಮೃದು-ವ್ಯವಾಯಿ-ವಿವಿಕ್ತಮವ್ಯಕ್ತರಸಂ ಶಬ್ದಬಹುಲ ಮಾಕಾಶೀಯಂ ತನ್ಮಾರ್ದವ-ಶೌಷಿರ್ಯ-ಲಾಘವಕರಮಿತಿ | (ಸು. 152.)

ಆಕಾಶೀಯದ ಲಕ್ಷಣ

ನುಣುಪು, ಸೂಕ್ಷ್ಮ, ಮೃದು, ವ್ಯವಾಯಿ, ವಿಭಜನೆ, ಈ ಗುಣಗಳುಳ್ಳದ್ದೂ, ಕಾಣದ ರುಚಿಯುಳ್ಳದ್ದೂ, ಶಬ್ದಗುಣ ಹೆಚ್ಚಾಗಿಯುಳ್ಳದ್ದೂ ಆದ ಪದಾರ್ಥವು ಆಕಾಶೀಯ. ಅದು ಮೃದು ಮಾಡುವದು, ಕೊರೆಯುವದು, ಹಗುರ ಮಾಡುವದು, ಈ ಕೆಲಸಗಳನ್ನು ಮಾಡುತ್ತದೆ

9. ವಿರೇಚನದ್ರವ್ಯಾಣಿ ಪೃಥಿವ್ಯಂಬುಗುಣಭೂಯಿಷ್ಠಾನಿ ಪೃಥಿವ್ಯಾಪೋ ಗುರ್ವ್ಯೋ ಗುರುತ್ವಾದಧೋಗಚ್ಛಂತಿ ತಸ್ಮಾದ್ವಿರೇಚನಮಧೋಗುಣ ಭೂಯಿಷ್ಠಮನುಮಾನಾತ್ | (ಸು. 153.)

ಪೃಥ್ವೀ ವಾಯುಗಳು ವಿರೇಚಕ

ವಿರೇಚನ ಮಾಡಿಸುವ ದ್ರವ್ಯಗಳಲ್ಲಿ ಪೃಥ್ವೀಗುಣ ಮತ್ತು ಜಲಗುಣಗಳು ವಿಶೇಷವಾಗಿರುತ್ತವೆ. ಪೃಥ್ವೀ ಮತ್ತು ನೀರು ಭಾರವುಳ್ಳವುಗಳಾಗಿ, ಭಾರದ ದೆಸೆಯಿಂದ ಕೆಳಗೆ ಹೋಗುತ್ತವೆ. ಆದ್ದರಿಂದ ವಿರೇಚನವು ಕೆಳಗೆ ಹೋಗುವ ಗುಣದಿಂದ ತುಂಬಿದ್ದೆಂತ ಊಹಿಸ ಬೇಕಾದದ್ದು.

10. ವಮನದ್ರವ್ಯಾಣ್ಯಗ್ನಿವಾಯುಗುಣಭೂಯಿಷ್ಠಾನ್ಯಗ್ನಿವಾಯೂ ಹಿ ಲಘೂ ಲಘುತ್ವಾಚ್ಚ ತಾನ್ಯೂರ್ಧ್ವಮುತ್ತಿಷ್ಠಂತಿ ತಸ್ಮಾದ್ವಮನಮವ್ಯೂರ್ಧ್ವ ಗುಣಭೂಯಿಷ್ಠಮುಕ್ತಂ | (ಸು. 153.)

ಅಗ್ನಿ ವಾಯುಗಳು ವಮನ

ವಮನ (ವಾಂತಿ) ಮಾಡಿಸುವ ದ್ರವ್ಯಗಳಲ್ಲಿ ಅಗ್ನಿ ಮತ್ತು ವಾಯುಗಳ ಗುಣಗಳು ಹೆಚ್ಚಾಗಿರುವಂಥವು. ಅಗ್ನಿ ಮತ್ತು ವಾಯು ಲಘುವಾದವು ಮತ್ತು ಲಘುತ್ವದ ದೆಸೆಯಿಂದ

ಅವು ಮೇಲಕ್ಕೆ ಏರುತ್ತವೆ. ಆದ್ದರಿಂದ ವಮನವು ಊರ್ಧ್ವಗುಣ ಹೆಚ್ಚಾಗಿರುವಂಥಾದ್ದೆಂತ ಹೇಳಲ್ಪಡುತ್ತದೆ.

11. ವಮನ ವಿರೇಚನ ಗಳೆರಡನ್ನೂ ಮಾಡಿಸುವ ದ್ರವ್ಯಗಳು — ಉಭಯಗುಣಭೂಯಿಷ್ಠಮುಭಯತೋಭಾಗಂ | (ಸು. 153.)

ಈ ಎರಡು ವಿಧದ ಗುಣಗಳೂ ಹೆಚ್ಚಾಗಿದ್ದರೆ, ಅಂಥಾ ದ್ರವ್ಯಗಳು ಎರಡು ಭಾಗಗಳಲ್ಲಿಯೂ (ಮೇಲಕ್ಕೂ ಕೆಳಗೂ) ಹೋಗತಕ್ಕವು.

12. ಆಕಾಶ-ಸಂಶಮನ — ಆಕಾಶಗುಣಭೂಯಿಷ್ಠಂ ಸಂಶಮನಂ | (ಸು. 153.)

ಆಕಾಶಗುಣ ಹೆಚ್ಚಾಗುಳ್ಳ ದ್ರವ್ಯವು ಜನ್ನಾಗಿ ಶಮನ (ಸರಿಪಡಿಸುವಿಕೆ) ಮಾಡತಕ್ಕಂಥಾದ್ದು.

ಪರಾ 'ಶಮನ'ದ ಅರ್ಥಕ್ಕೆ ಸಂ ೧ ನೋಡು

13. ವಾಯುವು ಶೋಷಕ — ಸಂಗ್ರಾಹಕಮನಿಲಗುಣಭೂಯಿಷ್ಠಮನಿಲಸ್ಯ ಶೋಷಣಾತ್ಮಕತ್ವಾತ್ | (ಸು. 153.)

ವಾಯುಗುಣ ಹೆಚ್ಚಾಗುಳ್ಳ ದ್ರವ್ಯವು ಒಳ್ಳೇ ಗ್ರಾಹಿ ಯಾಕಂದರೆ ವಾಯುವಿಗೆ ಒಣಗಿಸುವ ಗುಣವಿದೆ.

ಪರಾ 'ಗ್ರಾಹಿ'ಯ ಅರ್ಥಕ್ಕೆ ಸಂ 3 ನೋಡು

14. ಅಗ್ನಿದೀಪನ — ದೀಪನಮಗ್ನಿಗುಣಭೂಯಿಷ್ಠಂ | (ಸು. 153.)

ಅಗ್ನಿಗುಣ ಹೆಚ್ಚಾಗುಳ್ಳ ಪದಾರ್ಥವು ದೀಪನಮಾಡತಕ್ಕಂಥಾದ್ದು.

ಪರಾ 'ದೀಪನ'ದ ಅರ್ಥಕ್ಕೆ ಸಂ 3 ನೋಡು

15. ಅನಿಲಾನಲ-ಲೇಖನ — ಲೇಖನಮನಿಲಾನಲಗುಣಭೂಯಿಷ್ಠಂ | (ಸು. 153.)

ವಾಯು ಮತ್ತು ಅಗ್ನಿ ಇವೆರಡು ಗುಣಗಳು ಹೆಚ್ಚಾಗಿದ್ದರೆ, ಆ ದ್ರವ್ಯವು 'ಲೇಖನ'ವನ್ನು ಮಾಡುವದು.

ಪರಾ 'ಲೇಖನ'ದ ಅರ್ಥಕ್ಕೆ ಸಂ 3 ನೋಡು

16. ಪೃಥ್ವ್ಯಂಬು-ಬೃಂಹಣ — ಬೃಂಹಣಂ ಪೃಥಿವ್ಯಂಬುಗುಣಭೂಯಿಷ್ಠಂ | (ಸು. 153.)

ಪೃಥ್ವೀ ಮತ್ತು ಜಲ ಇವೆರಡು ಗುಣಗಳು ಹೆಚ್ಚಾಗಿರುವ ಪದಾರ್ಥಗಳು ಪುಷ್ಟಿಮಾಡತಕ್ಕವು.

ಏವಮೌಷಧಕರ್ಮಾಣ್ಯನುಮಾನಾತ್ಸಾಧಯೇತ್ | (ಸು. 153.)

ಈ ಪ್ರಕಾರ ಊಹಿಸಿ, ಔಷಧಕರ್ಮಗಳನ್ನು ಸಾಧಿಸಬೇಕಾಗಿದೆ.

17. ಭೂತೇಜೋವಾರಿಜೈರ್ದ್ರವ್ಯೈಃ ಶಮಂ ಯಾತಿ ಸಮೀರಣಃ ।
ಭೂಮ್ಯಂಬುವಾಯುಜೈಃ ಪಿತ್ತಂ ಕ್ಷಿಪ್ರಮಾಪ್ನೋತಿ ನಿರ್ವೃತಿಂ ॥
ಖತೇಜೋನಿಲಜೈಃ ಶ್ಲೇಷ್ಮಾ ಶಮಮೇತಿ ಶರೀರಿಣಾಂ ।
ವಿಯತ್ಪವನಜಾತಾಭ್ಯಾಂ ವೃದ್ಧಿಮಾಪ್ನೋತಿ ಮಾರುತಃ ॥
ಆಗ್ನೇಯಮೇವ ಯದ್ದ್ರವ್ಯಂ ತೇನ ಪಿತ್ತಮುದೀರ್ಯತೇ ।
ವಸುಧಾಜಲಜಾತಾಭ್ಯಾಂ ಬಲಾಸಃ ಪರಿವರ್ಧತೇ ॥
ಏವಮೇತದ್ಗುಣಾಧಿಕ್ಯಂ ದ್ರವ್ಯೇ ದ್ರವ್ಯೇ ವಿನಿಶ್ಚಿತಂ ।
ದ್ವಿಶೋ ವಾ ಬಹುಶೋ ವಾಽಪಿ ಜ್ಞಾತ್ವಾ ದೋಷೇಽವಚಾರಯೇತ್ ॥
(ಸು. 153.)

ದೋಷಗಳ ಕೋಪನಕ್ಕೆ ಮತ್ತು ಶಮನಕ್ಕೆ ಕಾರಣವಾದ ಭೂತಗಳು

ಪೃಥ್ವೀ, ಅಗ್ನಿ, ಜಲ, ಇವುಗಳ ಗುಣಗಳು ಹೆಚ್ಚಾಗುಳ್ಳ ದ್ರವ್ಯಗಳಿಂದ ವಾಯುವು ಶಮನವಾಗುತ್ತದೆ. ಪೃಥ್ವೀ, ಜಲ, ವಾಯು ಇವುಗಳ ಗುಣಗಳು ಹೆಚ್ಚಾಗುಳ್ಳ ಪದಾರ್ಥಗಳಿಂದ ಪಿತ್ತವು ಬೇಗನೇ ನಿವೃತ್ತಿಹೊಂದುತ್ತದೆ. ಆಕಾಶ, ಅಗ್ನಿ, ವಾಯು ಇವುಗಳ ಗುಣಗಳು ಹೆಚ್ಚಾಗುಳ್ಳ ಪದಾರ್ಥಗಳಿಂದ ಮನುಷ್ಯರ ಕಫವು ಶಮನ ಹೊಂದುತ್ತದೆ. ಆಕಾಶ ಮತ್ತು ವಾಯು ಇವುಗಳ ಗುಣಗಳು ಹೆಚ್ಚಾಗುಳ್ಳ ಪದಾರ್ಥಗಳಿಂದ ವಾಯು ವೃದ್ಧಿಯಾಗುತ್ತದೆ. ಅಗ್ನಿಗುಣ ಹೆಚ್ಚುಳ್ಳ ಪದಾರ್ಥದಿಂದ ಪಿತ್ತವು ಕೆದರುತ್ತದೆ ಪೃಥ್ವೀ, ಜಲ ಇವುಗಳ ಗುಣಗಳು ಹೆಚ್ಚಾಗುಳ್ಳ ಪದಾರ್ಥಗಳಿಂದ ಕಫವು ವೃದ್ಧಿಯಾಗುತ್ತದೆ. ಈ ಪ್ರಕಾರ ಆಯಾ ದ್ರವ್ಯಗಳಲ್ಲಿ, ನಿಶ್ಚಯಿಸಲ್ಪಟ್ಟ ಗುಣಾಧಿಕ್ಯವನ್ನು ತಿಳಿದು ದೋಷಕ್ಕೆ ತಕ್ಕ ಹಾಗೆ ಎರಡು ಅಥವಾ ಹೆಚ್ಚು ಪದಾರ್ಥಗಳನ್ನು ಕೂಡಿಸಿಕೊಳ್ಳಬೇಕು.

ಪರಾ ಶ್ಲೋಕದ ಅಂತ್ಯಭಾಗದಲ್ಲಿ 'ದೋಷೇಷು ಚಾಚರೇತ್' ಎಂತ ಪಾರ ಇಟ್ಟು ರೋಗಗಳಲ್ಲಿ ಎರಡು ಅಥವಾ ಹೆಚ್ಚು ದೋಷಗಳಿಗೆ ಆಚರಿಸಬೇಕು ಎಂಬ ಅರ್ಥ ಸಿ ಸಂ ವ್ಯಾಖ್ಯಾನದಲ್ಲಿ ಹೇಳಲ್ಪಟ್ಟದೆ

18. ತತ್ರ ಯ ಇಮೇ ಗುಣಾ ವೀರ್ಯಸಂಜ್ಞಕಾಃ ಶೀತೋಷ್ಣ-ಸ್ನಿಗ್ಧ-ರೂಕ್ಷ-ಮೃದು-ತೀಕ್ಷ್ಣ-ಪಿಚ್ಛಿಲ-ವಿಶದಾಸ್ತೇಷಾಂ ತೀಕ್ಷ್ಣೋಷ್ಣಾವಾಗ್ನೇಯೌ । ಶೀತಪಿಚ್ಛಿಲಾವಂಬುಗುಣಭೂಯಿಷ್ಠೌ । ಪೃಥಿವ್ಯಂಬುಗುಣಭೂಯಿಷ್ಠಃ ಸ್ನೇಹಃ । ತೋಯಾಕಾಶಗುಣಭೂಯಿಷ್ಠಂ ಮೃದುತ್ವಂ । ವಾಯು ಗುಣಭೂಯಿಷ್ಠಂ ರೌಕ್ಷ್ಯಂ । ಕ್ಷಿತಿಸಮೀರಣಗುಣಭೂಯಿಷ್ಠಂ ವೈಶದ್ಯಂ । (ಸು. 153-54.)

ದ್ರವ್ಯಗಳ ಅಷ್ಟವೀರ್ಯಗಳು ಮತ್ತು ಅವುಗಳ ಲಕ್ಷಣಗಳು

ವೀರ್ಯ ಎಂಬ ಗುಣಗಳಾದ ಶೀತ, ಉಷ್ಣ, ಸ್ನಿಗ್ಧ, ರೂಕ್ಷ, ಮೃದು, ತೀಕ್ಷ್ಣ, ಪಿಚ್ಛಿಲ, ವಿಶದ ಎಂಬವುಗಳಲ್ಲಿ, ತೀಕ್ಷ್ಣ ಮತ್ತು ಉಷ್ಣ ಅಗ್ನಿಸಂಬಂಧವಾದವು, ಶೀತ ಮತ್ತು ಪಿಚ್ಛಿಲ, ಜಲಗುಣ ಹೆಚ್ಚಾಗಿರುವವು; ಸ್ನೇಹವು, ಪೃಥಿವೀ ಮತ್ತು ಜಲಗುಣಗಳು ಹೆಚ್ಚಾಗುಳ್ಳದ್ದು, ಮೃದುತ್ವವು, ಜಲ ಮತ್ತು ಆಕಾಶಗುಣಗಳು ಹೆಚ್ಚಾಗುಳ್ಳದ್ದು; ರೌಕ್ಷ್ಯವು ವಾಯುಗುಣ ಹೆಚ್ಚಾಗುಳ್ಳದ್ದು; ಮತ್ತು ವಿಶದಗುಣವು ಪೃಥಿವೀ ಮತ್ತು ವಾಯುಗುಣಗಳು ಹೆಚ್ಚಾಗುಳ್ಳದ್ದು.

19. ವೀರ್ಯ ಕರ್ಮಗಳು

ತತ್ರೋಷ್ಣಸ್ನಿಗ್ಧೌ ವಾತಘ್ನೌ । ಶೀತಮೃದುಪಿಚ್ಛಿಲಾಃ ಪಿತ್ತಘ್ನಾಃ । ತೀಕ್ಷ್ಣರೂಕ್ಷವಿಶದಾಃ ಶ್ಲೇಷ್ಮಘ್ನಾಃ । ಗುರುಪಾಕೋ ವಾತಪಿತ್ತಘ್ನಃ । ಲಘುಪಾಕಃ ಶ್ಲೇಷ್ಮಘ್ನಃ । (ಸು. 154)

ಅವುಗಳಲ್ಲಿ ಉಷ್ಣ ಮತ್ತು ಸ್ನಿಗ್ಧ, ವಾತವನ್ನು ನಾಶಮಾಡುತ್ತವೆ. ಶೀತ, ಮೃದು ಮತ್ತು ಪಿಚ್ಛಿಲ, ಪಿತ್ತವನ್ನು ನಾಶಮಾಡತಕ್ಕವು. ತೀಕ್ಷ್ಣ, ರೂಕ್ಷ, ಮತ್ತು ವಿಶದಗಳು ಶ್ಲೇಷ್ಮವನ್ನು ನಾಶಮಾಡತಕ್ಕವು. ಗುರುಪಾಕದಿಂದ ವಾತಪಿತ್ತಗಳು ಮತ್ತು ಲಘುಪಾಕದಿಂದ ಶ್ಲೇಷ್ಮವು ನಾಶವಾಗುತ್ತವೆ.

20. ಅಷ್ಟವೀರ್ಯಗಳು ಹ್ಯಾಗೆ ಗ್ರಾಹ್ಯ

ತೇಷಾಂ ಮೃದುಶೀತೋಷ್ಣಾಃ ಸ್ಪರ್ಶಗ್ರಾಹ್ಯಾಃ । ಪಿಚ್ಛಿಲವಿಶದೌ ಚಕ್ಷುಃಸ್ಪರ್ಶಾಭ್ಯಾಂ । ಸ್ನಿಗ್ಧರೂಕ್ಷೌ ಚಾಕ್ಷುಷೌ । ಶೀತೋಷ್ಣೌ ಸುಖದುಃಖೋತ್ಪಾದನೇನ । ಗುರುಪಾಕಃ ಸ್ಪಷ್ಟಪುರೀಷಮೂತ್ರತಯಾ ಕಫೋತ್ಕ್ಲೇಶೇನ ಚ । ಲಘುರ್ಬದ್ಧಪುರೀಷಮೂತ್ರತಯಾ ಮಾರುತಕೋಪೇನ ಚ । ತತ್ರ ತುಲ್ಯಗುಣೇಷು ಭೂತೇಷು ರಸವಿಶೇಷಮುಪಲಕ್ಷಯೇತ್ । ತದ್ಯಥಾ । ಮಧುರೋ ಗುರುಶ್ಚ ಪಾರ್ಥಿವಃ । ಮಧುರಃ ಸ್ನಿಗ್ಧಶ್ಚಾಪ್ಯ ಇತಿ । (ಸು 154.)

ಅವುಗಳಲ್ಲಿ ಮೃದು ಶೀತ ಮತ್ತು ಉಷ್ಣ ಈ ಗುಣಗಳನ್ನು ಸ್ಪರ್ಶನದಿಂದ ತಿಳಿಯತಕ್ಕದ್ದು, ಪಿಚ್ಛಿಲ ಮತ್ತು ವಿಶದ ಗುಣಗಳನ್ನು ನೋಡಿಯೂ ಮುಟ್ಟಿಯೂ ತಿಳಿಯತಕ್ಕದ್ದು, ಸ್ನಿಗ್ಧ ಮತ್ತು ರೂಕ್ಷ ಗುಣಗಳು ನೋಡಿ ತಿಳಿಯಲು ಸಾಧ್ಯವಾದವು, ಮತ್ತು ಶೀತ ಮತ್ತು ಉಷ್ಣಗಳು ಸುಖದುಃಖಗಳನ್ನುಂಟುಮಾಡುವದರಿಂದ ತಿಳಿದುಬರುತ್ತವೆ. ಗುರುಪಾಕವನ್ನು ಮಲ ಮೂತ್ರಗಳ ಸಡಿಲುವಿಕೆಯಿಂದಲೂ ಕಫವೃದ್ಧಿಯಿಂದಲೂ ತಿಳಿಯಬೇಕು. ಮತ್ತು ಲಘುಪಾಕವನ್ನು ಮಲಮೂತ್ರಬದ್ಧತೆ ಮತ್ತು ವಾಯುಪ್ರಕೋಪದಿಂದ ತಿಳಿಯಬೇಕು. ಭೂತಗಳಲ್ಲಿ ಗುಣಗಳು ಸದೃಶವಾಗಿರುವಲ್ಲಿ, ರಸಭೇದವನ್ನು ನೋಡಿಕೊಳ್ಳಬೇಕು, ಹ್ಯಾಗಂದರೆ ಪೃಥ್ವೀ ಸಂಬಂಧವಾದದ್ದು ಸೀ ಮತ್ತು ಗುರು, ಜಲಸಂಬಂಧವಾದದ್ದು ಸೀ ಮತ್ತು ಸ್ನಿಗ್ಧ, ಹೀಗೆ—

ಪರಾ ತೇತೋಷ್ಣ ಇತ್ಯಾದಿ ವಾಕ್ಯಕ್ಕೆ 'ತೀಕ್ಷ್ಣೋ ಮುಖದುಃಖೋತ್ಪಾದನೇನ ಚ' ಎಂಬ ಪಾಠಾಂತರವಿದೆ ಅಂದರೆ 'ಮತ್ತು ಮುಖದಲ್ಲಿ ಉಂಟಾಗುವ ಅಸುಖದಿಂದ ತೀಕ್ಷ್ಣವನ್ನು ತಿಳಿಯತಕ್ಕದ್ದು' ಎಂತ ಈ ಪಾಠವೇ ಸರಿ ಎಂತ ಕಾಣುತ್ತದೆ

21. ದೇಹದ ಸ್ಥಿತ್ಯಾದಿ ದ್ರವ್ಯಾಶ್ರಯ

ಗುಣಾ ಯ ಉಕ್ತಾ ದ್ರವ್ಯೇಷು ಶರೀರೇಷ್ವಪಿ ತೇ ತಥಾ । ಸ್ಥಾನವೃದ್ಧಿಕ್ಷಯಾಸ್ತಸ್ಮಾದ್ದೇಹಿನಾಂ ದ್ರವ್ಯಹೇತುಕಾಃ ॥ (ಸು. 154.)

ದ್ರವ್ಯಗಳಲ್ಲಿ ಯಾವ ಗುಣಗಳು ಹೇಳಲ್ಪಟ್ಟವೋ, ಆ ಗುಣಗಳು ಶರೀರಗಳಲ್ಲಿಯೂ ಹಾಗೆಯೇ ಇರುವದರಿಂದ, ದೇಹಧಾರಿಗಳ ಯಥಾಸ್ಥಿತಿ, ವೃದ್ಧಿ ಮತ್ತು ಕ್ಷಯಗಳಿಗೆ ದ್ರವ್ಯಗಳೇ ಹೇತುಗಳಾಗಿರುತ್ತವೆ.

(b) ಪಾಶ್ಚಾತ್ಯರೀತ್ಯಾ ಮೂಲಭೂತಗಳು.

22. ಪಾಶ್ಚಾತ್ಯ ರಸಾಯನಶಾಸ್ತ್ರಜ್ಞರು ಇಷ್ಟರಲ್ಲೇ ಸುಮಾರು 65 ಮೂಲಭೂತಗಳನ್ನು ಕಂಡುಹಿಡಿದಿದ್ದಾರೆ. ಅವುಗಳಲ್ಲಿ ಈ ಕೆಳಗಣ ಪದಾರ್ಥಗಳು ಸೇರಿವೆ.

ಪಾಶ್ಚಾತ್ಯರೀತ್ಯಾ ಮೂಲಭೂತಗಳು

1. ಎಲುಮಿನಿಯಮ್ (ಇದರಿಂದ ಮಾಡಲ್ಪಟ್ಟ ಪಾತ್ರೆಗಳು ಇತ್ತಲಾಗಿ ಈ ದೇಶದಲ್ಲಿ ಉಪಯೋಗದಲ್ಲಿವೆ), 2. ಸೌವೀರ ಪಾಷಾಣ, 3. ಶಂಖಪಾಷಾಣ, 4. ಕಾರ್ಬನು (ಇದ್ದಲಿನಲ್ಲಿಯೂ ಕಟ್ಟಿಗೆಮಸಿಯಲ್ಲಿಯೂ ಹೆಚ್ಚಾಗಿರುವದರಿಂದ ಅಂಗಾರ ವಾಯುವೆಂತ ಕೆಲವರು ಹೆಸರಿಟ್ಟಿದ್ದಾರೆ), 5. ಕ್ಯಾಲ್ಸಿಯಮ್ (ಸುಣ್ಣದಲ್ಲಿ ಹೆಚ್ಚಾಗಿರುವ ಪದಾರ್ಥ), 6. ಕ್ಲೋರಿನ್ (ಉಪ್ಪಿನಲ್ಲಿರುವ ವಾಯು), 7. ತಾಮ್ರ, 8. ಚಿನ್ನ, 9. ಹೈಡ್ರೊಜನ್ (ನೀರಿನಲ್ಲಿ ಹೆಚ್ಚಾಗಿರುವ ವಾಯು), 10. ಕಬ್ಬಿಣ, 11. ಪಾದರಸ, 12. ನಿಕ್ಕಲ್ (ಪರದೇಶದಿಂದ ಒಂದ ನಿಕ್ಕೆಲ್‌ಬೆಳ್ಳಿ ಸಾಮಾನುಗಳು ವಾಡಿಕೆಯಾಗಿವೆ), 13. ನೈಟ್ರೊಜನ್ (ಇದಕ್ಕೆ 'ನಿರ್ಗುಣವಾಯು' ಎಂತ ಕನ್ನಡ ಗ್ರಂಥಕಾರರು ಹೆಸರಿಟ್ಟಿದ್ದಾರೆ), 14 ಓಕ್ಸಿಜನ್ (ಇದಕ್ಕೆ ಕೆಲವು ಕನ್ನಡ ಗ್ರಂಥಕಾರರು 'ಪ್ರಾಣವಾಯು' ವೆಂತ ಹೆಸರಿಟ್ಟಿದ್ದಾರೆ), 15. ಪೊಟೇಸ್ಸಿಯಮ್ (ಇದು ಪುರದ ಬೂದಿಯಲ್ಲಿ ಹೆಚ್ಚಾಗಿರುವದು, 16. ಸಿಲಿಕನ್ (ಇದು ಸಮುದ್ರಕಿನಾರೆಯ ಮಳಲನಲ್ಲಿ, ಪರ್ವತ ಇತ್ಯಾದಿಗಳಲ್ಲಿ ಧಾರಾಳವಾಗಿ ಇದೆ), 17. ಬೆಳ್ಳಿ, 18. ಸೋಡಿಯಮ್ (ಇದು ಉಪ್ಪಿನಲ್ಲಿ ಕ್ಲೋರೀನಿನೊಂದಿಗೆ ಸೇರಿರುವದು), 19 ಗಂಧಕ, 20. ತವರ, 21 ಕಪರ್‌ಸುತ್ತು.

ಭೂಮಿಯಲ್ಲಿರುವ ಮೂಲಭೂತಗಳ ಪ್ರಮಾಣ

23. ಭೂಮಿಯಲ್ಲಿ ಶೇಕಡಾ 44 ಓಕ್ಸಿಜನ್ ವಾಯು, 22·8 ಸಿಲಿಕನ್, 9·9 ಎಲುಮಿನಿಯಮ್, 9 9 ಕಬ್ಬಿಣ, 6·6 ಕೇಲ್ಸಿಯಮ್, 2·7 ಮೆಗ್ನೀಸಿಯಮ್, 2·4 ಸೋಡಿಯಮ್, 1·7 ಪೊಟೇಸ್ಸಿಯಮ್, ಇರುವದಾಗಿ ಎಣಿಸಿದ್ದಾರೆ

ನೀರಿನಲ್ಲಿರುವ ಮೂಲಭೂತಗಳ ಪ್ರಮಾಣ

24. ನೀರಿನ ಪ್ರಮಾಣದಲ್ಲಿ, 2 ಪಾಲು ಹೈಡ್ರೊಜನ್, 1 ಪಾಲು ಓಕ್ಸಿಜನ್, ಭಾರದಲ್ಲಿ, 1 ಪಾಲು ಹೈಡ್ರೊಜನ್, 8 ಪಾಲು ಓಕ್ಸಿಜನ್ ಇರುತ್ತವೆ.

ಗಾಳಿಯಲ್ಲಿರುವ ಮೂಲಭೂತಗಳ ಪ್ರಮಾಣ

25. ಗಾಳಿಯ ಪ್ರಮಾಣದಲ್ಲಿ ಶೇಕಡಾ 21 ಪಾಲು ಓಕ್ಸಿಜನ್, 79 ಪಾಲು ನೈಟ್ರೊಜನ್ ಇರುವದಾಗಿ ಎಣಿಸಿದ್ದಾರೆ.

ಮೂಲಭೂತಗಳ ಸಂಯೋಗ ಗುಣ

26. ಈ ಮೂಲಭೂತಗಳಲ್ಲಿ ಪರಸ್ಪರ ಒಂದೊಂದಾಗಿಯೂ, ಅನೇಕವಾಗಿಯೂ ಬೇರೆಬೇರೆ ಪ್ರಮಾಣಗಳಲ್ಲಿ ಸಂಯೋಗವಾಗುವದರಿಂದ ವ್ಯತಿರಿಕ್ತ ಗುಣಗಳುಳ್ಳ ಹೊಸ ದ್ರವ್ಯಗಳು ಅಸಂಖ್ಯೇಯವಾಗಿ ಉಂಟಾಗುತ್ತವೆ. ಕಾರ್ಬನ್ ಎಂಬ ಒಂದು ಮೂಲಭೂತದ ಸಂಯೋಗದಿಂದಾಗತಕ್ಕ ದ್ರವ್ಯಗಳೇ ಅಸಂಖ್ಯೇಯವಾಗಿ ಎಣಿಸುತ್ತಾರೆ; ಮತ್ತು ಆ ಮೂಲಭೂತಗಳಲ್ಲಿ ಸಂಯುಕ್ತವಾಗದೆ, ಪ್ರತ್ಯೇಕವಾಗಿ

ಲೋಕದಲ್ಲಿ ದೊರಕುವವುಗಳು ಬಹು ಕಡಿಮೆ. ಪ್ರತ್ಯಕ್ಷವಾಗಿ ದೊರೆಯುವ ದ್ರವ್ಯಗಳಲ್ಲಿ ಯಾವ ಯಾವ ಮೂಲಭೂತಗಳು ಯಾವ ಯಾವ ಪ್ರಮಾಣಗಳಿಂದ ಸಂಯುಕ್ತವಾಗಿವೆ ಎಂದು ನಿಶ್ಚಯಿಸುವರೆ ಸೂಕ್ಷ್ಮ ಮತ್ತು ತಕ್ಕವಾದ ಯಂತ್ರಗಳು, ಮಹತ್ಪಾಂಡಿತ್ಯ ಮತ್ತು ದೀರ್ಘ ಶೋಧನೆಗಳು ಅವಶ್ಯಕವಾಗಿವೆ. ಹಾಗೆ ಗೊತ್ತುಮಾಡಿಕೊಂಡರೂ, ಆದರಿಂದಲೇ ಆ ದ್ರವ್ಯಗಳ ಗುಣ ನಿಶ್ಚಿತವಾಗುವದಿಲ್ಲ. ಮನುಷ್ಯಶರೀರದಲ್ಲಿ ಯಾವ ಮೂಲಭೂತ ಕಡಿಮೆ ಯಾ ಹೆಚ್ಚು ಆಗಿದೆ, ಯಾವ ಔಷಧದಲ್ಲಿ ಆ ಭೂತ ಹೆಚ್ಚು ಯಾ ಕಡಿಮೆ ಉಂಟು, ಅಂಥಾ ಔಷಧವನ್ನು ಯಾವ ಯೋಗದಲ್ಲಿ ಕೊಡಬಹುದು ಎಂಬಿತ್ಯಾದಿ ಎಲ್ಲಾ ಅವಶ್ಯಕವಾದ ಸೂಕ್ಷ್ಮಜ್ಞಾನವನ್ನು ಸಾಕಷ್ಟು ಸಂಪಾದಿಸುವದು ಅಸಾಧ್ಯವೆನ್ನಲೇ ಬೇಕು. ಲೋಕದಲ್ಲಿ ಔಷಧವಾಗಿ ಉಪಯೋಗಿಸಲಿಕ್ಕೆ ತಕ್ಕವಾಗಿರುವ ವಸ್ತುಗಳು ಅಪರಿಸಂಖ್ಯೇಯವಾಗಿವೆ. ಆದ್ದರಿಂದ ಚರಕಾದಿ ವೈದ್ಯಗ್ರಂಥಗಳಲ್ಲಿ ವಿವರಿಸುವ ಪೃಥಿವ್ಯಾದಿ ಪಂಚ ಮಹಾಭೂತಗಳ ರೂಪಕಾರ್ಯಾದಿ ಭೇದಗಳನ್ನು ತಿಳಿದು ವರ್ತಿಸುವದೇ ಸಾಧಾರಣ ಸಾಧ್ಯ. ಆದರೆ ಈ ಕೆಳಗೆ ಬರೆದ ಕೆಲವು ಭಾವಗಳನ್ನು ತಿಳಿದಿರುವುದು ಒಳ್ಳೆಯದು.

27. ಈ ದೇಹದ ರಚನೆಯಲ್ಲಿ ಸುಮಾರು 16 ಮೂಲಭೂತಗಳಿವೆ. ಅವುಗಳಲ್ಲಿ ಈ ಕೆಳಗಣವು ಸೇರಿ ಇವೆ — ಓಕ್ಸಿಜನ್ ವಾಯು, ಹೈಡ್ರೊಜನ್ ವಾಯು, ಕಾರ್ಬನ್, ನೈಟ್ರೊಜನ್, ಗಂಧಕ, ಕ್ಲೋರಿನ್, ಕ್ಯಾಲ್ಸಿಯಮ್, ಸೋಡಿಯಮ್, ಪೊಟೇಸ್ಸಿಯಮ್, ಕಬ್ಬಿಣ ಮತ್ತು ಸಿಲಿಕನ್. ಇವುಗಳಲ್ಲಿ ಓಕ್ಸಿಜನ್, ನೈಟ್ರೊಜನ್ ಮತ್ತು ಹೈಡ್ರೊಜನ್ ಮಾತ್ರ ಪ್ರತ್ಯೇಕವಾಗಿ ಕಾಣಸಿಕ್ಕುವವು. ಮಿಕ್ಕವುಗಳೆಲ್ಲಾ ಸಂಯೋಗವಾಗಿಯೇ ಇರುತ್ತವೆ. ಓಕ್ಸಿಜನ್, ಫುಪ್ಫುಸಕ್ಲೋಮಗಳಲ್ಲಿಯೂ, ದೇಹದ ರಸಪದಾರ್ಥಗಳಲ್ಲಿಯೂ, ನೈಟ್ರೊಜನ್ ರಸಪದಾರ್ಥಗಳಲ್ಲಿಯೂ, ಹೈಡ್ರೊಜನ್ ಅನ್ನನಾಳದಲ್ಲಿ ಸಂಯುಕ್ತಪದಾರ್ಥಗಳು ವಿಯುಕ್ತವಾಗುವ ದೆಸೆಯಿಂದ ಉಂಟಾಗಿಯೂ, ಕಾಣುವವು.

ದೇಹದಲ್ಲಿರುವ ಮೂಲಭೂತಗಳು

28. ದೇಹದಲ್ಲಿ ಸಾರಭೂತವಾದ ಮಾಂಸಾದಿ ಅಂಗಗಳ ಪೋಷಣೆಗೆ ನೈಟ್ರೊಜನೂ, ಬಿಸಿ ಮತ್ತು ವೇಗ ಇವುಗಳ ಪೋಷಣೆಗೆ ಕಾರ್ಬನ್ ಎಂಬ ಭೂತವೂ, ಮಿಶ್ರವೆಂತ ಎಣಿಸಿ ಆಹಾರದ್ರವ್ಯಗಳನ್ನು ನಾಲ್ಕು ಜಾತಿಗಳಾಗಿ ವಿಭಾಗಿಸುತ್ತಾರೆ —

ನಾಲ್ಕು ವಿಧವಾದ ಆಹಾರದ್ರವ್ಯಗಳು

1. ಮಾಂಸಪೋಷಕವಾದ (ನೈಟ್ರೊಜನ್ ಭೂಯಿಷ್ಠವಾದ) ವು
2. ಅಂಟು ಅಥವಾ ಪಿಷ್ಟ (ಕಾರ್ಬನ್ ಭೂತ ಭೂಯಿಷ್ಠ) ಪದಾರ್ಥಗಳು.
3. ಸ್ನೇಹಗಳು.
4. ಖನಿಜಗಳು.

2ನೇ ವರ್ಗದಲ್ಲಿ ಗೋದಿ, ಜೋಳ, ಅಕ್ಕಿ, ಕೂವೆಹಿಟ್ಟು, ಬಟ್ಟಾಟೆ, ಇತ್ಯಾದಿಗಳಲ್ಲಿರುವ ಅಂಟೂ, ಸಕ್ಕರೆ, ಬೆಲ್ಲ, ಕಬ್ಬು, ಸೀ ಹಣ್ಣುಗಳು, ಇತ್ಯಾದಿ ಮಧುರಪದಾರ್ಥಗಳೂ, ಸೇರಿವೆ. ಅಂಟಿನಲ್ಲಿ, ಕಾರ್ಬನ್ 6 ಪಾಲಿಗೆ ಹೈಡ್ರೊಜನ್ 10 ಪಾಲು, ಓಕ್ಸಿಜನ್ 5 ಪಾಲು,

ಸಂಯುಕ್ತವಾಗಿರುವವು. ಜೀರ್ಣಕಾಲದಲ್ಲಿ ವಿಯುಕ್ತವಾಗುವಾಗ್ಗೆ, ಓಕ್ಸಿಜನಿಗೆ ಸರಿ 2 ಪಾಲು ಹೈಡ್ರೊಜನ್ ಇರುವದರಿಂದ, ಇವೆರಡು ಸಂಯೋಗವಾಗಿ ನೀರಾಗಿ ಪರಿಣಮಿಸಿ, ಕಾರ್ಬನ್ 6 ಪಾಲು ಮಾತ್ರ ಪೂರ ಪ್ರತ್ಯೇಕ ಉಳಿಯುವದು. ಹಾಗೆಯೇ ಕಬ್ಬಿನಲ್ಲಿರುವ ಕಾ. 12, ಹೈ. 22, ಓ. 11, ವಿಯುಕ್ತವಾಗುವಾಗ್ಗೆ ಪೂರ ಹೈ ಮತ್ತು ಓ. ನೀರಾಗಿ ಪರಿಣಮಿಸಿ, ಕಾ. 12 ಪಾಲು ಮಾತ್ರ ಪ್ರತ್ಯೇಕ ಉಳಿಯುವದು. 3ನೇ ವರ್ಗದಲ್ಲಿ ಕೂಡ ಕಾ. ಹೈ. ಮತ್ತು ಓ. ಇರುವದಾದರೂ, ಹೈಡ್ರೊಜನ್ ಪೂರಾ ನೀರಾಗಿ ಪರಿಣಮಿಸುವದಕ್ಕೆ ಸಾಕಷ್ಟು ಓಕ್ಸಿಜನ್ ಇರುವದಿಲ್ಲ. ಈ ವರ್ಗದಲ್ಲಿ ಸೇರಿದ ಒಂದು ಪದಾರ್ಥದಲ್ಲಿ ಕಾ. 16, ಹೈ 32, ಓ. 2, ಇನ್ನೊಂದರಲ್ಲಿ ಕಾ. 18, ಹೈ 36, ಓ. 2 ಇರುತ್ತದೆ. ಆದ್ದರಿಂದ ನೀರಿನ ಸಂಯೋಗಪ್ರಮಾಣಕ್ಕೆ ಮಿಕ್ಕಿ, ಮೊದಲನೇದರಲ್ಲಿ 28 ಪಾಲು, ಎರಡನೇದರಲ್ಲಿ 32 ಪಾಲು, ಹೈಡ್ರೊಜನ್ ಹೆಚ್ಚು ಉಂಟು. 4ನೇ ವರ್ಗದಲ್ಲಿ ಉಪ್ಪುಗಳು, ಕಬ್ಬಿಣ, ನೀರು ಮೊದಲಾದವುಗಳು ಸೇರಿವೆ.

ಕೆಲವು ಆಹಾರ ಪದಾರ್ಥಗಳ ಲಕ್ಷಣಗಳು

29. ವಾಡಿಕೆಯಾಗಿರುವ ಕೆಲವು ಆಹಾರದ್ರವ್ಯಗಳೊಳಗೆ ಮೇಲಿನ ಕ್ರಮದಲ್ಲಿ ಇರುವ ಭೇದಗಳನ್ನು ಈ ಕೆಳಗಣ ಪಟ್ಟಿಯಿಂದ ತಿಳಿಯಬಹುದು.

ಆಹಾರ	ನೀರು	ಮಾಂಸಪೋಷಕದ್ರವ್ಯ	ಅಂಟು	ಶರ್ಕರೆ	ಸ್ನೇಹ	ಉಪ್ಪುಗಳು
	100 ಭಾಗಗಳಲ್ಲಿ					
ಗೋದಿರೊಟ್ಟಿ	40	8	47	2·2	1·5	1·3
" ಹಿಟ್ಟು	15	11	70·3	—	2	1·7
ಅಕ್ಕಿ	10	5	79	4·2	0·8	5
ಬಟಾಟೆ	74	1·5	18	5 4	0·1	1
ಮಾಂಸ	75	15	—	—	8·4	1·6
ಹಾಲು	86·7	4	—	5	3·7	0·6
ಮೊಟ್ಟೆ	73·5	13·5	—	—	11·6	1
ಬೆಣ್ಣೆ	6	0·3	—	—	91	2·7
ಸಕ್ಕರೆ	3	—	—	96·5	—	·5
ಬಿಳೇಮೀನು	78	18·1	—	—	2·9	1

ಇದರಿಂದ ಮಾಂಸ, ಮೊಟ್ಟೆ, ಮೀನು ತಿನ್ನುವವರಿಗಿಂತ ಗೋದಿರೊಟ್ಟಿ ತಿನ್ನುವವರು, ಇವರಿಗಿಂತ ಅಕ್ಕಿ ಉಪಯೋಗಿಸುವವರು ಹೆಚ್ಚು ಆಹಾರ ತೆಗೆದುಕೊಳ್ಳುವದು ಆವಶ್ಯಕ ಯಾಕೆಂಬುವದು ತಿಳಿಯಬಹುದು.

30. ಸ್ವಸ್ಥಸ್ಥಿತಿಯಲ್ಲಿ ಜೀರ್ಣವಾಗುವದಕ್ಕೆ ಸರಿಯಾಗಿ ಬೆಂದ ಅಕ್ಕಿ (ಅನ್ನ), ಸಾಗು, ತಪಿಯಾಕ, ಕೂವೆಹಿಟ್ಟು, ಅಥವಾ ಓಟ್‌ಮೀಲ್, ಇದಕ್ಕೆ 1-2 ಘಂಟೆ, ಗೋದಿರೊಟ್ಟಿಗೆ

ಕೆಲವು ಆಹಾರಪದಾರ್ಥಗಳ ಜೀರ್ಣಕ್ಕೆ ಕಾಲ

3-4 ಘಂಟೆ, ಬಟಾಟೆಗೆ $2\frac{1}{2}$-$3\frac{1}{2}$ ಘಂಟೆ, ಸೀಬೆಹಣ್ಣಿಗೆ (apple) 3-4 ಘಂಟೆ. ಹಸಿ ಮೊಟ್ಟೆಗೆ $1\frac{1}{2}$ ಘಂಟೆ, ಹುರಿದ ಅಥವಾ ಗಟ್ಟಿಯಾಗುವ ವರೆಗೆ ಬೇಯಿಸಿದ ಮೊಟ್ಟೆಗೆ 3-$3\frac{1}{2}$ ಘಂಟೆ, ಕೋಳಿಗೆ $2\frac{1}{2}$-4 ಘಂಟೆ, ಹಂದಿಮಾಂಸ ಸುಟ್ಟದಕ್ಕೆ 5 ಘಂಟೆ, ಬೇಯಿಸಿದ ಕುರಿಮಾಂಸಕ್ಕೆ 3 ಘಂಟೆ, ಆಡಿನ ಮರಿ ಮಾಂಸಕ್ಕೆ $2\frac{1}{2}$ ಘಂಟೆ. ಬೇಯಿಸಿದ ಎಮ್ಮಾನಿಗೆ $1\frac{1}{2}$-$2\frac{1}{2}$ ಘಂಟೆ, ಮತ್ತು ಬೇಯಿಸಿದ ದನದ ಅಥವಾ ಎತ್ತಿನ ಮಾಂಸಕ್ಕೆ 3 ಘಂಟೆ ಕಾಲ ಬೇಕಾಗುತ್ತದೆಂತ ಎಣಿಸಿದ್ದಾರೆ

IVನೇ ಅಧ್ಯಾಯ.

ಷಡ್ರಸಗಳು.

1. ಆಕಾಶ-ಪವನ-ದಹನ-ತೋಯ-ಭೂಮಿಷು ಯಥಾಸಂಖ್ಯಮೇಕೋತ್ತರ ಪರಿವೃದ್ಧಾಃ ಶಬ್ದ-ಸ್ಪರ್ಶ-ರೂಪ-ರಸ-ಗಂಧಾಃ | ತಸ್ಮಾದಾಪ್ಯೋ ರಸಃ ಪರಸ್ಪರಸಂಸರ್ಗಾತ್ ಪರಸ್ಪರಾನುಗ್ರಹಾತ್ ಪರಸ್ಪರಾನುಪ್ರವೇಶಾಚ್ಚ ಸರ್ವೇಷು ಸರ್ವೇಷಾಂ ಸಾನ್ನಿಧ್ಯಮಸ್ತ್ಯುತ್ಕರ್ಷಾಪಕರ್ಷಾತ್ತು ಗ್ರಹಣಂ | (ಸು. 154.)

ಜಲದಿಂದ ರಸದ ಉತ್ಪತ್ತಿ

ಆಕಾಶ, ವಾಯು, ಅಗ್ನಿ, ಜಲ, ಪೃಥ್ವೀ ಇವುಗಳಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಗಳು ಏಕೋತ್ತರವೃದ್ಧಿಯಾಗಿ ಇವೆ ಅಂದರೆ, ಆಕಾಶದಲ್ಲಿ ಶಬ್ದ, ವಾಯುವಿನಲ್ಲಿ ಶಬ್ದ ಮತ್ತು ಸ್ಪರ್ಶ, ಅಗ್ನಿಯಲ್ಲಿ ಶಬ್ದ, ಸ್ಪರ್ಶ, ರೂಪ, ಜಲದಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಪೃಥ್ವಿಯಲ್ಲಿ (ಗಂಧ ಸೇರಿಕೊಂಡು) ಶಬ್ದಾದಿ ಐದು ಪೂರಾ ಇರುತ್ತವೆ. ಆದ್ದರಿಂದ ರಸ ಎಂಬದು ಜಲಕ್ಕೆ ಸಂಬಂಧವಾದದ್ದು. ಸರ್ವ ವಸ್ತುಗಳಲ್ಲಿಯೂ ಪಂಚಭೂತಗಳೆಲ್ಲಾ ಪರಸ್ಪರ ಸೇರಿಕೊಂಡೂ, ಪರಸ್ಪರ ಬಲಪಡಿಸಿಕೊಂಡೂ, ಪರಸ್ಪರ ಪ್ರವೇಶಮಾಡಿಕೊಂಡೂ, ಇರುತ್ತವ. ಅವುಗಳು ಹೆಚ್ಚು ಕಡಿಮೆಯಾಗಿ ಕೂಡಿಕೊಂಡು ಇರುವ ದೆಸೆಯಿಂದ ವಸ್ತುಭೇದ ಉಂಟಾ ಗುವದಾಗಿರುತ್ತದೆ.

2. ಸೌಮ್ಯಾಃ ಖಲು ಆಪೋಽಂತರಿಕ್ಷಪ್ರಭವಾಃ ಪ್ರಕೃತಿಶೀತಾ ಲಘ್ವ್ಯಶ್ಚ ಅವ್ಯಕ್ತರಸಾಶ್ಚ ತಾಸ್ತ್ವಂತರಿಕ್ಷಾದ್ ಭ್ರಶ್ಯಮಾನಾ ಭ್ರಷ್ಟಾಶ್ಚ ಪಂಚಮಹಾ ಭೂತವಿಕಾರಗುಣಸಮನ್ವಿತಾ ಜಂಗಮಸ್ಥಾವರಾಣಾಂ ಭೂತಾನಾಂ ಮೂರ್ತೀರಭಿಪ್ರೀಣಯಂತಿ ತಾಸು ಮೂರ್ತಿಷು ಷಡ್ವಿಮೂರ್ಚ್ಛಂತಿ ರಸಾಃ | (ಚ. 144)

ಷಡ್ರಸಗಳ ಉತ್ಪತ್ತಿ

ನೀರು ಚಂದ್ರನ ದೆಸೆಯಿಂದ ಅಂತರಿಕ್ಷದಲ್ಲಿ ಹುಟ್ಟುವದಾಗಿರುತ್ತದೆ. ಅದು ಶೀತ ಪ್ರಕೃತಿಯುಳ್ಳದ್ದಾಗಿಯೂ, ಲಘುವಾಗಿಯೂ, ತಿಳಿಯಲಾರದ ರುಚಿಯುಳ್ಳದ್ದಾಗಿಯೂ ಇರು ತ್ತದೆ ಅಂತರಿಕ್ಷದಿಂದ ಕೆಳಗೆ ಬೀಳುತ್ತಿರುವ, ಮತ್ತು ಬಿದ್ದ ಆ ನೀರು ಪಂಚಮಹಾಭೂತಗಳ ವಿಕಾರಗುಣಗಳಿಂದ ಕೂಡಿಕೊಂಡು, ಸ್ಥಾವರ ಜಂಗಮಗಳೆಂಬ ಸಮಸ್ತ ವಸ್ತುಗಳ ಮೂರ್ತಿಗಳನ್ನು ತೃಪ್ತಿಗೊಳಿಸುತ್ತದೆ. ಅಂಥಾ ಮೂರ್ತಿಗಳಲ್ಲಿ ಆರು ವಿಧವಾಗಿ ರಸಗಳು ವ್ಯಕ್ತವಾಗುತ್ತವ.

3. ಸ ಖಲ್ವಾಪ್ಯೋ ರಸಃ ಶೇಷಭೂತಸಂಸರ್ಗಾದ್ವಿದಗ್ಧಃ ಷೋಢಾ ವಿಭಜ್ಯತೇ | ತದ್ಯಥಾ | ಮಧುರೋಽಮ್ಲೋ ಲವಣಃ ಕಟುಕಸ್ತಿಕ್ತಃ ಕಷಾಯ ಇತಿ | ತೇ ಚ ಭೂಯಃ ಪರಸ್ಪರ-ಸಂಸರ್ಗಾತ್ತ್ರಿಷಷ್ಟಿಧಾ ಭಿದ್ಯಂತೇ | (ಸು. 154-55.)

ರಸಭೇದಗಳು

ಆ ಜಲಸಂಬಂಧವಾದ ರಸವು ಇತರ ಮಹಾಭೂತಗಳ ಯೋಗದಿಂದ ಪಕ್ವವಾಗಿ (ಅಂದರೆ ರೂಪಾಂತರ ಹೊಂದಿ) ಆರು ವಿಧವಾಗಿ ಪರಿಣಮಿಸುತ್ತದೆ. ಹ್ಯಾಗಂದರೆ:— ಸೀ,

ಹುಳಿ, ಉಪ್ಪು, ಖಾರ, ಕಹಿ, ಚೊಗರು ಎಂಬದಾಗಿ. ಇವುಗಳು ಪುನಃ ಪರಸ್ಪರ ಸಂಸರ್ಗದಿಂದ 63 ವಿಧವಾಗುತ್ತವೆ.

ಷಂಣಾ ಎದಗ್ಧ (ಅಂದರೆ ವಿಶೇಷವಾಗಿ ಸುಡಲ್ಪಟ್ಟಂಥಾ) ಶಬ್ದದ ಉಪಯೋಗದಿಂದ ಮೂಲಭೂತಗಳು ಒಂದಕ್ಕೊಂದು ಸಂಯೋಗವಾಗುವಾಗ್ಗೆ ಬಿಸಿಯುಂಟಾಗುತ್ತದೆಂಬದನ್ನು ನಮ್ಮ ಪೂರ್ವಿಕರು ತಿಳಿದಿದ್ದರೆಂಬದು ಊಹ್ಯ V ಅ 18 ಸಂ ಷಣಾ ನೋಡು

4. ತತ್ರ ಭೂಮ್ಯಂಬುಗುಣಬಾಹುಲ್ಯಾನ್ಮಧುರಃ | ಭೂಮ್ಯಗ್ನಿಗುಣಬಾಹುಲ್ಯಾದಮ್ಲಃ | ತೋಯಾಗ್ನಿಗುಣಬಾಹುಲ್ಯಾಲ್ಲವಣಃ | ವಾಯ್ವಗ್ನಿಗುಣಬಾಹುಲ್ಯಾತ್ಕಟುಕಃ | ವಾಯ್ವಾಕಾಶಗುಣಬಾಹುಲ್ಯಾತ್ತಿಕ್ತಃ | ಪೃಥಿವ್ಯನಿಲಗುಣಬಾಹುಲ್ಯಾತ್ಕಷಾಯ ಇತಿ | (ಸು. 155)

ಷಡ್ರಸಗಳಲ್ಲಿರುವ ಮಹಾಭೂತಗಳು

ಅವುಗಳಲ್ಲಿ ಪೃಥಿವೀ, ಜಲಗಳ ಗುಣ ಹೆಚ್ಚಿರುವದರಿಂದ ಸೀ, ಪೃಥಿವೀ, ಅಗ್ನಿಗಳ ಗುಣ ಹೆಚ್ಚಿರುವದರಿಂದ ಹುಳಿ, ಜಲ, ಅಗ್ನಿಗಳ ಗುಣ ಹೆಚ್ಚಿರುವದರಿಂದ, ಉಪ್ಪು, ವಾಯು, ಅಗ್ನಿಗಳ ಗುಣ ಹೆಚ್ಚಿರುವದರಿಂದ ಖಾರ; ವಾಯು, ಆಕಾಶಗಳ ಗುಣ ಹೆಚ್ಚಿರುವದರಿಂದ ಕಹಿ; ಪೃಥಿವೀ, ವಾಯುಗಳ ಗುಣ ಹೆಚ್ಚಿರುವದರಿಂದ ಚೊಗರು; ಹೀಗೆ ಆರು ರಸಗಳು ಉಂಟಾಗುವದಾಗಿರುತ್ತವೆ

5. ತತ್ರ ಮಧುರಾಮ್ಲಲವಣಾ ವಾತಘ್ನಾಃ | ಮಧುರತಿಕ್ತಕಷಾಯಾಃ ಪಿತ್ತಘ್ನಾಃ | ಕಟುತಿಕ್ತಕಷಾಯಾಃ ಶ್ಲೇಷ್ಮಘ್ನಾಃ | (ಸು. 155.)

ರಸಗಳ ದೋಷಶಮನ ಗುಣ

ಅವುಗಳಲ್ಲಿ ಸೀ, ಹುಳಿ ಮತ್ತು ಉಪ್ಪು ವಾತ ನಾಶಮಾಡುವಂಥವು; ಸೀ, ಕಹಿ, ಮತ್ತು ಚೊಗರು ಪಿತ್ತ ನಾಶಮಾಡುತ್ತವೆ, ಖಾರ, ಕಹಿ, ಮತ್ತು ಚೊಗರು ಕಫನಾಶನ ಕಾರಿಗಳು.

6. ತತ್ರ ವಾಯುರಾತ್ಮನೈವಾತ್ಮಾ ಪಿತ್ತಮಾಗ್ನೇಯಂ ಶ್ಲೇಷ್ಮಾ ಸೌಮ್ಯಃ ಇತಿ | ತ ಏವ ರಸಾಃ ಸ್ವಯೋನಿವರ್ಧನಾ ಅನ್ಯಯೋನಿಪ್ರಶಮನಾಶ್ಚ | ಕೇಚಿದಾಹುರಗ್ನೀಷೋಮೀಯತ್ವಾಜ್ಜಗತೋ ರಸಾ ದ್ವಿವಿಧಾಃ ಸೌಮ್ಯಾ ಆಗ್ನೇಯಾಶ್ಚ | ತತ್ರಮಧುರತಿಕ್ತಕಷಾಯಾಃ ಸೌಮ್ಯಾಃ | ಕಟ್ವಮ್ಲಲವಣಾ ಆಗ್ನೇಯಾಃ | ಮಧುರಾಮ್ಲಲವಣಾಃ ಸ್ನಿಗ್ಧಾ ಗುರವಶ್ಚ | ಕಟುತಿಕ್ತಕಷಾಯಾ ರೂಕ್ಷಾ ಲಘವಶ್ಚ | ಸೌಮ್ಯಾಃ ಶೀತಾ ಆಗ್ನೇಯಾಶ್ಚೋಷ್ಣಾಃ | (ಸು. 155.)

ಸೌಮ್ಯ ಆಗ್ನೇಯ ಎಂಬ ಭೇದ

ಅವುಗಳೊಳಗೆ ವಾಯುವು ತನ್ನಿಂದಲೇ ಹುಟ್ಟಿದ್ದು; ಪಿತ್ತವು ಅಗ್ನಿಯಿಂದ; ಮತ್ತು ಕಫವು ಚಂದ್ರನಿಂದ, ಅವೇ ರಸಗಳು ಸ್ವಯೋನಿಭೂತಗಳನ್ನು ವೃದ್ಧಿಸಿ, ಬೇರೆ ಯೋನಿಭೂತಗಳನ್ನು ಶಮನವಾಡುತ್ತವೆ. ಕೆಲವರು ಈ ಜಗತ್ತು ಅಗ್ನಿಯಿಂದ ಮತ್ತು ಸೋಮ(ಚಂದ್ರ)ನಿಂದ ಹುಟ್ಟಿದ್ದಾದ್ದರಿಂದ, ರಸಗಳು ಸಹ ಆಗ್ನೇಯ, ಸೌಮ್ಯ, ಎಂಬ ಎರಡು ವಿಧ ಎಂತ ಅನ್ನುತ್ತಾರೆ. ಈ ವಿಭಾಗದಲ್ಲಿ ಸೀ, ಕಹಿ, ಮತ್ತು ಚೊಗರು ಸೌಮ್ಯಗಳು. ಮತ್ತು ಖಾರ,

ಹುಳಿ ಮತ್ತು ಉಪ್ಪು ಆಗ್ನೇಯಗಳು. ಸೀ, ಹುಳಿ ಮತ್ತು ಉಪ್ಪು ಸ್ನಿಗ್ಧ ಮತ್ತು ಗುರು. ಖಾರ, ಕಹಿ ಮತ್ತು ಜೊಗರು ರೂಕ್ಷ ಮತ್ತು ಲಘು. ಸೌಮ್ಯ ಎಂಬದು ಶೀತ, ಆಗ್ನೇಯ ಎಂಬದು ಉಷ್ಣ.

7. ತತ್ರ ಶೈತ್ಯ-ರೌಕ್ಷ್ಯ-ಲಾಘವ-ವೈಶದ್ಯ-ವೈಷ್ಟಂಭ್ಯ-ಗುಣಲಕ್ಷಣೋ ವಾಯುಸ್ತಸ್ಯ ಸಮಾನಯೋನಿಃ ಕಷಾಯೋ ರಸಃ ಸೋಽಸ್ಯ ಶೈತ್ಯಾತ್ ಶೈತ್ಯಂ ವರ್ಧಯತಿ ರೌಕ್ಷ್ಯಾದ್ರೌಕ್ಷ್ಯಂ ಲಾಘವಾಲ್ಲಾಘವಂ ವೈಶದ್ಯಾದ್ವೈಶದ್ಯಂ ವೈಷ್ಟಂಭ್ಯಾದ್ವೈಷ್ಟಂಭ್ಯಮಿತಿ | (ಸು 155)

ಚೊಗರಿನ ವಾಯುವೃದ್ಧಿ ಗುಣ

ಅದರಲ್ಲಿ ವಾಯುವಿನ ಲಕ್ಷಣ ಶೀತ, ರೂಕ್ಷ, ಲಘು, ವಿಶದ, ವಿಷ್ಟಂಭ ಗುಣಗಳು. ಅದಕ್ಕೆ ಸಮಾನಯೋನಿಯುಳ್ಳ ರಸವು ಜೊಗರು ಆ ರಸವು ಶೈತ್ಯಗುಣದಿಂದ ವಾಯುವಿನ ಶೈತ್ಯವನ್ನೂ, ರೂಕ್ಷಗುಣದಿಂದ ರೌಕ್ಷ್ಯವನ್ನೂ, ಲಘುತ್ವದಿಂದ ಲಘುತ್ವವನ್ನೂ, ವಿಶದಗುಣದಿಂದ ವೈಶದ್ಯವನ್ನೂ, ಎಷ್ಟಂಭನಗುಣದಿಂದ ವಿಷ್ಟಂಭನಭಾವವನ್ನೂ ವೃದ್ಧಿಮಾಡುತ್ತದೆ

ಷರಾ ರೂಕ್ಷ ಮುಂತಾದ ವಿಶೇಷಣಪದಗಳ ಅರ್ಥಕ್ಕೆ III ಅ 2 ಸಂ ನೋಡು

8. ಔಷ್ಣ್ಯ-ತೈಕ್ಷ್ಣ್ಯ-ರೌಕ್ಷ್ಯ-ಲಾಘವ-ವೈಶದ್ಯ-ಗುಣಲಕ್ಷಣಂ ಪಿತ್ತಂ ತಸ್ಯ ಸಮಾನಯೋನಿಃ ಕಟುಕೋ ರಸಃ ಸೋಽಸ್ಯೌಷ್ಣ್ಯಾದೌಷ್ಣ್ಯಂ ವರ್ಧಯತಿ ತೈಕ್ಷ್ಣ್ಯಾತ್ತೈಕ್ಷ್ಣ್ಯಂ ರೌಕ್ಷ್ಯಾದ್ರೌಕ್ಷ್ಯಂ ಲಾಘವಲ್ಲಾಘವಂ ವೈಶದ್ಯಾದ್ವೈಶದ್ಯಮಿತಿ | (ಸು. 155.)

ಖಾರದ ಪಿತ್ತ ವೃದ್ಧಿ ಗುಣ

ಉಷ್ಣತೆ, ತೀಕ್ಷ್ಣತೆ, ರೂಕ್ಷತೆ, ಲಘುತ್ವ, ವಿಶದತ್ವ, ಈ ಗುಣಗಳು ಪಿತ್ತದ ಲಕ್ಷಣಗಳು, ಅದಕ್ಕೆ ಸಮಾನಯೋನಿಯುಳ್ಳ ರಸವು ಖಾರ, ಆ ರಸವು ಉಷ್ಣತೆಯಿಂದ ಪಿತ್ತದ ಉಷ್ಣತೆಯನ್ನೂ, ತೀಕ್ಷ್ಣತೆಯಿಂದ ತೀಕ್ಷ್ಣತೆಯನ್ನೂ, ರೂಕ್ಷತ್ವದಿಂದ ರೂಕ್ಷತ್ವವನ್ನೂ, ಲಘುತ್ವದಿಂದ ಲಘುತ್ವವನ್ನೂ, ವಿಶದತ್ವದಿಂದ ವಿಶದತ್ವವನ್ನೂ ವೃದ್ಧಿಮಾಡುತ್ತದೆ.

ಷರಾ 'ತೀಕ್ಷ್ಣ' ಮುಂತಾದ ವಿಶೇಷಣಪದಗಳ ಅರ್ಥ ಅ III, 2ರಲ್ಲಿ ಕಾಣುತ್ತದೆ

9. ಮಾಧುರ್ಯ-ಸ್ನೇಹ-ಗೌರವ-ಶೈತ್ಯ-ಪೈಚ್ಛಿಲ್ಯ-ಗುಣಲಕ್ಷಣಃ ಶ್ಲೇಷ್ಮಾ ತಸ್ಯ ಸಮಾನಯೋನಿರ್ಮಧುರೋ ರಸಃ ಸೋಽಸ್ಯ ಮಾಧುರ್ಯಾನ್ಮಾಧುರ್ಯಂ ವರ್ಧಯತಿ ಸ್ನೇಹಾತ್ಸ್ನೇಹಂ ಗೌರವಾದ್ಗೌರವಂ ಶೈತ್ಯಾತ್ ಶೈತ್ಯಂ ಪೈಚ್ಛಿಲ್ಯಾತ್ಪೈಚ್ಛಿಲ್ಯಮಿತಿ | ತಸ್ಯ ಪುನರನ್ಯಯೋನಿಃ ಕಟುಕೋ ರಸಃ ಸ ಶ್ಲೇಷ್ಮಣಃ ಪ್ರತ್ಯನೀಕತ್ವಾತ್ ಕಟುಕತ್ವಾನ್ಮಾಧುರ್ಯಮಭಿಭವತಿ ರೌಕ್ಷ್ಯಾತ್ಸ್ನೇಹಂ ಲಾಘವಾದ್ಗೌರವಮೌಷ್ಣ್ಯಾತ್ ಶೈತ್ಯಂ ವೈಶದ್ಯಾತ್ಪೈಚ್ಛಿಲ್ಯಮಿತಿ | ತದೇತನ್ನಿದರ್ಶನಮಾತ್ರಮುಕ್ತಂ | (ಸು. 155. 6.)

ಸೀಯ ಕಫ ವೃದ್ಧಿ ಗುಣ ಮತ್ತು ಅದಕ್ಕೆ ಶತ್ರು ಖಾರ

ಮಾಧುರ್ಯ, ಸ್ನೇಹ, ಗೌರವ, ಶೈತ್ಯ, ಪೈಚ್ಛಿಲ್ಯ ಈ ಗುಣಗಳು ಕಫದ ಲಕ್ಷಣಗಳು. ಅದಕ್ಕೆ ಸಮಾನಯೋನಿಯುಳ್ಳ ರಸವು ಸೀ ಆ ರಸವು ಮಾಧುರ್ಯದಿಂದ ಕಫದ ಮಾಧುರ್ಯವನ್ನೂ, ಸ್ನೇಹದಿಂದ ಸ್ನೇಹವನ್ನೂ, ಗೌರವದಿಂದ ಗುರುತ್ವವನ್ನೂ ಶೈತ್ಯದಿಂದ ಶೈತ್ಯವನ್ನೂ, ಪೈಚ್ಛಿಲ್ಯದಿಂದ ಪಿಚ್ಛಿಲತ್ವವನ್ನೂ, ವೃದ್ಧಿ ಪಡಿಸುತ್ತದೆ. ಮತ್ತು ಅದಕ್ಕೆ ವಿರೋಧಯೋನಿಯಿಂದ ಹುಟ್ಟಿದ ರಸವು ಖಾರ. ಅದು ಶ್ಲೇಷ್ಮಕ್ಕೆ ಶತ್ರುವಾದದ್ದರಿಂದ, ಖಾರದಿಂದ ಸೀಯನ್ನೂ, ರೂಕ್ಷತೆಯಿಂದ ಸ್ನೇಹವನ್ನೂ, ಲಘುತ್ವದಿಂದ ಗುರುತ್ವವನ್ನೂ, ಉಷ್ಣತೆಯಿಂದ ಶೈತ್ಯವನ್ನೂ, ವೈಶದ್ಯದಿಂದ ಪೈಚ್ಛಿಲ್ಯವನ್ನೂ ಜಯಿಸುತ್ತದೆ. ಇದು ಉದಾಹರಣವಾಗಿ ಮಾತ್ರ ಹೇಳಿದ್ದಾಗಿರುತ್ತದೆ

ಇದೇ ಪ್ರಕಾರ ಬೇರೆ ರಸಗಳ ವಿಷಯವಾಗಿ ಸ್ವಯೋನಿ ಮತ್ತು ವಿರೋಧಿ ಭೇದಗಳನ್ನು ತಿಳಿಯತಕ್ಕದ್ದಿಂತ ತಾತ್ಪರ್ಯ ದ್ರವ್ಯಗಳ ಗುಣವಾಚಕ ಪದಗಳ ಅರ್ಥ ಅ III 2ರಲ್ಲಿ ಕಾಣುತ್ತದೆ

10. तत्र यः परितोषमुत्पादयति प्रह्लादयति तर्पयति जीवयति मुखावलेपं जनयति श्लेष्माणं चाभिवर्धयति स मधुरः । यो दंतहर्षमुत्पादयति मुखास्रावं जनयति श्रद्धां चोत्पादयति सोऽम्लः । यो भुक्तरुचिमुत्पादयति कफप्रसेकं जनयति मार्दवं चापादयति स लवणः । यो जिह्वाग्रं बाधते उद्वेगं जनयति शिरो गृह्णीते नासिकां च स्रावयति स कटुकः । यो गले चोषमुत्पादयति मुखवैशद्यं जनयति भुक्तरुचिं चापादयति हर्षं च स तिक्तः । यो वक्त्रं परिशोषयति जिह्वां स्तंभयति कंठं बध्नाति हृदयं कर्षति पीडयति च स कषायः । (सु. 156)

ಮಧುರಾದಿ ರಸಗಳ ಲಕ್ಷಣಗಳು

ಯಾವ ರಸವು ಸಂತೋಷವನ್ನೂ, ಆನಂದವನ್ನೂ, ಉಂಟುಮಾಡುತ್ತದೋ, ತೃಪ್ತಿಗೊಳಿಸುತ್ತದೋ, ಬದುಕಿಸುತ್ತದೋ, ಬಾಯಿಯೊಳಗೆ ಮಲವನ್ನುಂಟುಮಾಡುತ್ತದೋ, ಮತ್ತು ಕಫವನ್ನು ಹೆಚ್ಚಿಸುತ್ತದೋ ಅದು ಸೀ. ಯಾವದು ದಂತಹರ್ಷ (ಹಲ್ಲುಗಳಲ್ಲಿ ಜುಮ್ಮು)ವನ್ನುಂಟುಮಾಡುತ್ತದೋ, ಬಾಯಿಯೊಳಗೆ ದ್ರವವನ್ನು ಸುರಿಸುತ್ತದೋ, ಮತ್ತು ರುಚಿಯನ್ನುಂಟುಮಾಡುತ್ತದೋ, ಅದು ಹುಳಿ. ಯಾವದು ಆಹಾರದ ರುಚಿಯನ್ನುಂಟು ಮಾಡುತ್ತದೋ, ಕಫ ಸುರಿಯುವ ಹಾಗೆ ಮಾಡುತ್ತದೋ ಮತ್ತು ಮೃದುತ್ವವನ್ನುಂಟುಮಾಡುತ್ತದೋ, ಅದು ಉಪ್ಪು ಯಾವದು ನಾಲಿಗೆಯ ತುದಿಯನ್ನು ಬಾಧಿಸುತ್ತದೋ, ಅಸಂತೋಷ ಅಥವಾ ಮೇಲೆ ಅಮಲೇರಿಕೆಯನ್ನುಂಟುಮಾಡುತ್ತದೋ, ತಲೆಗೇರಿ ಹಿಡಕೊಳ್ಳುತ್ತದೋ ಮತ್ತು ಮೂಗಿನಲ್ಲಿ ದ್ರವ ಸುರಿಯುವಂತೆ ಮಾಡುತ್ತದೋ ಅದು ಖಾರ ಯಾವದು ಗಂಟಲನ್ನು ಒಣಗಿಸುತ್ತದೋ ಮತ್ತು ಬಾಯಿಯು ಶುಚಿಯಾಗುವ ಹಾಗೂ, ಆಹಾರವು ರುಚಿಯಾಗುವ ಹಾಗೂ ಮಾಡಿ ಸುಖ ಕೊಡುತ್ತದೋ, ಅದು ಕಹಿ. ಯಾವದು ಬಾಯಿಯನ್ನು ಒಣಗಿಸು

ತ್ತದೋ, ನಾಲಿಗೆಯನ್ನು ರುಚಿ ತಿಳಿಸದ ಹಾಗೆ (ಅಂದರೆ ಜಡವಾಗಿ) ಮಾಡುತ್ತದೋ, ಕಂಠವನ್ನು ಕಟ್ಟುತ್ತದೋ ಮತ್ತು ಹೃದಯವನ್ನು ಸೆಳದು ಪೀಡಿಸುತ್ತದೋ ಅದು ಜೊಗರು.

11. ತತ್ರ ಮಧುರೋ ರಸೋ ರಸ-ರಕ್ತ-ಮಾಂಸ-ಮೇದೋಽಸ್ಥಿ-ಮಜ್ಜೌಜಃ ಶುಕ್ರ-ಸ್ತನ್ಯವರ್ಧನಶ್ಚಕ್ಷುಷ್ಯಃ ಕೇಶ್ಯೋ ವರ್ಣ್ಯೋ ಬಲಕೃತ್ಸಂಧಾನಃ ಶೋಣಿತರಸಪ್ರಸಾದನೋ ಬಾಲ-ವೃದ್ಧ-ಕ್ಷತ-ಕ್ಷೀಣ-ಹಿತಃ ಷಟ್ಪದ-ಪಿಪೀಲಿಕಾನಾಮಿಷ್ಟತಮಸ್ತೃಷ್ಣಾ-ಮೂರ್ಚಾ-ದಾಹ-ಪ್ರಶಮನಃ ಷಡಿಂದ್ರಿಯಪ್ರಸಾದನಃ ಕೃಮಿಕಫಕರಶ್ಚೇತಿ | ಸ ಏವಂ ಗುಣೋಽಪ್ಯೇಕ ಏವಾತ್ಯರ್ಥಮಾಸೇವ್ಯಮಾನಃ ಕಾಸ-ಶ್ವಾಸಾಲಸಕ-ವಮಥು-ವದನಮಾಧುರ್ಯ-ಸ್ವರೋಪಘಾತ-ಕೃಮಿ-ಗಲಗಂಡಾನಾಪಾದಯತಿ ತಥಾರ್ಬುದ-ಶ್ಲೀಪದ-ವಸ್ತಿ-ಗುದೋಪಲೇಪಾಽಭಿಷ್ಯಂದಪ್ರಭೃತೀನ್ ಜನಯತಿ | (ಸು. 156)

ಸೀ ರಸದ ಗುಣ ದೋಷಗಳು

ಅವುಗಳಲ್ಲಿ ಸೀ ರಸವು ರಸ, ರಕ್ತ, ಮಾಂಸ, ಮೇದಸ್ಸು, ಎಲುಬು, ಮಜ್ಜೆ, ಓಜಸ್ಸು, ಶುಕ್ರ, ಮೊಲೆಹಾಲು, ಇವುಗಳನ್ನು ವರ್ಧಿಸುತ್ತದೆ; ಕಣ್ಣುಗಳಿಗೂ, ಕೂದಲುಗಳಿಗೂ, ಒಳ್ಳೆದು; ವರ್ಣ ಕೊಡುತ್ತದೆ, ಬಲವನ್ನುಂಟುಮಾಡುತ್ತದೆ, ಒಡಕನ್ನು ಕೂಡಿಸುವ ಸ್ವಭಾವದ್ದು; ರಕ್ತವನ್ನೂ ರಸವನ್ನೂ ಶುದ್ಧಮಾಡುತ್ತದೆ, ಬಾಲಕರಿಗೂ, ವೃದ್ಧರಿಗೂ, ಗಾಯಪಟ್ಟವರಿಗೂ, ಕ್ಷೀಣವಾದವರಿಗೂ ಹಿತ, ನೊಣಗಳಿಗೂ, ಇರುವೆಗಳಿಗೂ, ಅತಿ ಇಷ್ಟವಾದದ್ದು; ಬಾಯಾರಿಕೆ, ಮೂರ್ಛೆ, ಉರಿ, ಇವುಗಳನ್ನು ಶಮನಮಾಡುವಂಥಾದ್ದು, ಐರು ಇಂದ್ರಿಯಗಳನ್ನು ಶುದ್ಧಮಾಡತಕ್ಕಂಥಾದ್ದು, ಮತ್ತು ಕ್ರಿಮಿಯನ್ನೂ ಕಫವನ್ನೂ ಉಂಟುಮಾಡುತ್ತದೆ. ಅದು ಈ ಗುಣಗಳುಳ್ಳದ್ದಾದಾಗ್ಯೂ, ಅದನ್ನೇ ಅತಿಯಾಗಿ ಸೇವಿಸಿದರೆ, ಕೆಮ್ಮು, ಉಬ್ಬಸ, ಹೊಟ್ಟೆಯುಬ್ಬರ, ವಾಂತಿ, ಬಾಯಿ ಸೀಯಾಗುವಿಕೆ, ಸ್ವರ ಬೀಳೋಣ, ಕ್ರಿಮಿ, ಗಲಗಂಡ, ಈ ವ್ಯಾಧಿಗಳನ್ನು ಹೊಂದಿಸುವದು, ಹಾಗೆಯೇ ಅರ್ಬುದ, ಐನೆಕಾಲು, ವಸ್ತಿಗುದಗಳಲ್ಲಿ ಮಲಲೇಪ ಮತ್ತು ಸ್ರಾವ ಮುಂತಾದ ರೋಗಗಳನ್ನು ಹುಟ್ಟಿಸುವದು.

12. ಅಮ್ಲೋ ಜರಣಃ ಪಾಚನಃ ಪವನನಿಗ್ರಹಣೋಽನುಲೋಮನಃ ಕೋಷ್ಠ ವಿದಾಹೀ ಬಹಿಃಶೀತಃ ಕ್ಲೇದನಃ ಪ್ರಾಯಶೋ ಹೃದ್ಯಶ್ಚೇತಿ | ಸ ಏವಂ ಗುಣೋಽಪ್ಯೇಕ ಏವಾತ್ಯರ್ಥಮುಪಸೇವ್ಯಮಾನೋ ದಂತಹರ್ಷ-ನಯನಸಂಮೀಲನ-ರೋಮಸಂವೇಜನ-ಕಫವಿಲಯನ-ಶರೀರಶೈಥಿಲ್ಯಾನ್ಯಾಪಾದಯತಿ ತಥಾ ಕ್ಷತಾಭಿಹತ-ದಗ್ಧ-ದಷ್ಟ-ಭಗ್ನ-ಶೂನ-ರುಗ್ಣ-ಪ್ರಚ್ಯುತಾವಮೂತ್ರಿತ-ವಿಸರ್ಪಿತ-ಚ್ಛಿನ್ನ-ಭಿನ್ನ-ವಿದ್ರೋತ್ಪಿಷ್ಟಾದೀನಿ ಪಾಚಯತ್ಯಾಗ್ನೇಯಸ್ವಭಾವಾತ್ ಪರಿದಹತಿ ಕಂಠಮುರೋಹೃದಯಂ ಚೇತಿ | (ಸು. 156-57.)

ಹುಳಿರಸದ ಗುಣದೋಷಗಳು.

ಹುಳಿ ರಸವು, ಕರಗಿಸುವ, ಪಾಕಮಾಡುವ, ವಾಯುವನ್ನು ನಿಗ್ರಹಮಾಡುವ, ವಾತ ಮೂತ್ರಮಲಗಳನ್ನು ಕ್ರಮ ಪಡಿಸುವ, ಹೊಟ್ಟೆಯೊಳಗೆ ಉರಿಯನ್ನುಂಟುಮಾಡುವ ಗುಣ

ಗಳುಳ್ಳದ್ದು; ಹೊರಗೆ ಶೀತ; ತ್ಯಾವವನ್ನುಂಟುಮಾಡುತ್ತದೆ; ಮತ್ತು ಸಾಧಾರಣವಾಗಿ ಹಿತ ಕಾಣುವಂಥಾದ್ದು. ಈ ಗುಣಗಳುಳ್ಳದ್ದಾದಾಗ್ಯೂ, ಅದೊಂದನ್ನೇ ಅತಿಯಾಗಿ ಸೇವಿಸಿದ್ದಲ್ಲಿ ಹಲ್ಲುಜುಮ್ಮು, ಕಣ್ಣುಮುಚ್ಚುವದು, ರೋಮ ನೆಟ್ಟಗಾಗುವದು, ಕಫ ನಾಶಮಾಡುವದು, ಶರೀರವನ್ನು ಸಡಿಲುಮಾಡುವದು, ಈ ದುರ್ಗುಣಗಳುಂಟಾಗುವವು, ಮತ್ತು ನೋಯಿಸಿದ, ಹೊಡೆದ, ಸುಟ್ಟ, ಕಚ್ಚಿದ, ಒಡೆದ, ಬಾತ, ಜೊಗ್ಗಿದ, ಜಾರಿದ (ವಿಷಜಂತುಗಳಿಂದ) ಮೂತ್ರಿಸಲ್ಪಟ್ಟ, (ವಿಷಜಂತು ಮೊದಲಾದ್ದನ್ನು ಮುಟ್ಟಿ) ಹರಿದುಬಂದ, ಕಡಿದ, ಒಡೆದ, ಚುಚ್ಚಿದ, ಪುಡಿಯಾದ ಅಥವಾ ಅರಚಿದ ದೋಷಗಳನ್ನು ಪಾಚನಮಾಡುತ್ತದೆ. ಮತ್ತು ಅದರ ಆಗ್ನೇಯ ಸ್ವಭಾವದಿಂದ ಕಂರದಲ್ಲಿ, ಎದೆಯಲ್ಲಿ ಮತ್ತು ಹೃದಯದಲ್ಲಿ ಉರಿಯನ್ನುಂಟುಮಾಡುತ್ತದೆ.

13. ಲವಣಃ ಸಂಶೋಧನಃ ಪಾಚನೋ ವಿಸ್ಲೇಷಣಃ ಕ್ಲೇದನಃ ಶೈಥಿಲ್ಯಕೃದುಷ್ಣಃ ಸರ್ವರಸಪ್ರತ್ಯನೀಕೋ ಮಾರ್ಗವಿಶೋಧನಃ ಸರ್ವಶರೀರಾವಯವಮಾರ್ದವಕರಶ್ಚೇತಿ | ಸ ಏವಂ ಗುಣೋಪ್ಯೇಕ ಏವಾತ್ಯರ್ಥಮಾಸೇವ್ಯಮಾನೋ ಗಾತ್ರಕಂಡೂ-ಕೋಠ-ಶೋಫ-ವೈವರ್ಣ್ಯ-ಪುಂಸ್ತ್ವೋಪಘಾತೇಂದ್ರಿಯೋಪತಾಪಾನ್ ತಥಾ ಮುಖಾಕ್ಷಿಪಾಕಂ ರಕ್ತ-ಪಿತ್ತ-ವಾತಶೋಣಿತಾಮ್ಲಿಕಾಪ್ರಭೃತೀನಾಪಾದಯತಿ | (ಸು. 157.)

ಉಪ್ಪುರಸದ ಗುಣದೋಷಗಳು

ಉಪ್ಪುರಸವು ದೇಹ ಶೋಧನೆ ಮಾಡುವ, ಪಾಕಮಾಡುವ, ಬಿಡಿಸುವ, ದ್ರವವನ್ನು ಸುರಿಸುವ, ಸಡಿಲುಮಾಡುವ, ಗುಣವುಳ್ಳದ್ದು, ಉಷ್ಣ, ಸರ್ವ ರಸಗಳಿಗೂ ಶತ್ರು. (ಮೂತ್ರನಾಡಿ ಮುಂತಾದ) ಮಾರ್ಗಗಳನ್ನು ಶೋಧನೆಮಾಡುತ್ತದೆ, ಮತ್ತು ಶರೀರದ ಸರ್ವ ಅವಯವಗಳನ್ನು ಮೃದುಮಾಡುತ್ತದೆ. ಈ ಗುಣಗಳುಳ್ಳದ್ದಾದರೂ, ಅದನ್ನು ಒಂದನ್ನಾಗಿಯೇ ಅತಿಯಾಗಿ ಸೇವಿಸಿದರೆ, ಶರೀರದಲ್ಲಿ ತುರಿ, ಕೋಷ್ಠ, ಶೋಫ, ವರ್ಣವಿಕಾರ, ಪುರುಷತ್ವ ನಾಶ, ಶುಕ್ರ ನಾಶ, ಇಂದ್ರಿಯಗಳಲ್ಲಿ ಉರಿ, ಇವುಗಳನ್ನು, ಹಾಗೆಯೇ ಬಾಯಿಯ ಮತ್ತು ಕಣ್ಣುಗಳ ಕರ್ಮಹಾನಿ, ರಕ್ತಪಿತ್ತ, ವಾತರಕ್ತ, ಹುಳಿತೇಗು ಮುಂತಾದ ರೋಗಗಳನ್ನು ಉಂಟು ಮಾಡುತ್ತದೆ.

14. ಕಟುಕೋ ದೀಪನಃ ಪಾಚನೋ ರೋಚನಃ ಶೋಧನಃ ಸ್ಥೌಲ್ಯಾಲಸ್ಯ-ಕಫ-ಕೃಮಿ-ವಿಷ-ಕುಷ್ಠ-ಕಂಡೂಪಶಮನಃ ಸಂಧಿಬಂಧವಿಚ್ಛೇದನೋವಸಾದನಃ ಸ್ತನ್ಯ-ಶುಕ್ರ-ಮೇದಸಾಮುಪಹಂತಾ ಚೇತಿ | ಸ ಏವಂ ಗುಣೋಪ್ಯೇಕ ಏವಾತ್ಯರ್ಥಮುಪಸೇವ್ಯಮಾನೋ ಭ್ರಮ-ಮದ-ಗಲತಾಲ್ವೋಷ್ಠ-ಶೋಫ-ಗಾತ್ರಸಂತಾಪ-ಬಲವಿಘಾತ-ಕಂಪ-ತೋದ-ಭೇದಕೃತ್ ಕರ-ಚರಣ-ಪಾರ್ಶ್ವ-ವೃಷ್ಣವ್ರಭೃತಿಷು ಚ ವಾತಶೂಲಾನಾಪಾದಯತಿ | (ಸು. 157.)

ಖಾರರಸದ ಗುಣ ದೋಷಗಳು.

ಖಾರವು ಅಗ್ನಿ ಉಂಟುಮಾಡುವ, ಪಚನಮಾಡುವ, ರುಚಿಕೊಡುವ, ಶೋಧಿಸುವ, ಸ್ಥೂಲತೆಯನ್ನೂ, ಆಲಸ್ಯವನ್ನೂ, ಕಫವನ್ನೂ, ಕ್ರಿಮಿಯನ್ನೂ, ವಿಷವನ್ನೂ, ಕುಷ್ಠವನ್ನೂ, ತುರಿಯನ್ನೂ, ಶಮನಮಾಡುವ, ಸಂದುಕಟ್ಟುಗಳನ್ನು ಕಡಿಯುವ, ಉತ್ಸಾಹವಿಲ್ಲದ ಹಾಗೆ

ಮಾಡುವ, ಮೊಲೆಹಾಲನ್ನೂ, ಶುಕ್ರವನ್ನೂ, ಮೇದಸ್ಸನ್ನೂ, ನಾಶಮಾಡುವ ಗುಣವುಳ್ಳದ್ದು; ಅದು ಈ ಗುಣಗಳುಳ್ಳದ್ದಾದಾಗ್ಯೂ ಅದನ್ನು ಒಂದನ್ನೇ ಅತಿಯಾಗಿ ಸೇವಿಸಿದರೆ, ತಲೆತಿರುಕು, ಎಚ್ಚರವಿಲ್ಲದಿರುವಿಕೆ, ಕಂರದ, ತಾಲುವಿನ ಮತ್ತು ತುಟಿಗಳ ಒಣಗುವಿಕೆ, ಶರೀರದಲ್ಲಿ ಉರಿ, ಬಲನಾಶ, ನಡುಕು, ನೋವು, ಒಡತ, ಇವುಗಳನ್ನೂ, ಕಾಲು, ಕೈ, ಪಕ್ಕ, ಬೆನ್ನು ಮೊದಲಾದವುಗಳಲ್ಲಿ ವಾತದ ಶೂಲೆಗಳನ್ನೂ ಉಂಟುಮಾಡುತ್ತದೆ.

15. ತಿಕ್ತಶ್ಚೇದನೋ ರೋಚನೋ ದೀಪನಃ ಶೋಧನಃ ಕಂಡೂ-ಕೋಠ ತೃಷ್ಣಾ-ಮೂರ್ಚ್ಛಾ-ಜ್ವರ-ಪ್ರಶಮನಃ ಸ್ತನ್ಯಶೋಧನೋ ವಿಣ್ಮೂತ್ರ-ಕ್ಲೇದ-ಮೇದೋ-ವಸಾ-ವೃಯೋಪಶೋಷಣಶ್ಚೇತಿ | ಸ ಏವಂ ಗು ಣೋಽಪ್ಯೇಕ ಏವಾತ್ಯರ್ಥಮುಪಸೇವ್ಯಮಾನೋ ಗಾತ್ರಮನ್ಯಾಸ್ತಂಭಾ ಕ್ಷೇಪಕಾರ್ದಿತ-ಶಿರಃಶೂಲ-ಭ್ರಮ-ತೋದ-ಭೇದ-ಚ್ಛೇದಾಸ್ಯವೈರಸ್ಯಾ ನ್ಯಾಪಾದಯತಿ | (ಸು. 157)

ಕಹಿರಸದ ಗುಣ ದೋಷಗಳು

ಕಹಿಯು ಕಡಿಯುವ, ರುಚಿಯನ್ನುಂಟುಮಾಡುವ, ಅಗ್ನಿಯನ್ನುಂಟುಮಾಡುವ, (ವಮನ ವಿರೇಚನ ರೂಪದಿಂದ) ಶೋಧಿಸುವ, ತುರಿಯನ್ನೂ, ಕುಷ್ಠವನ್ನೂ, ಬಾಯಾರಿಕೆಯನ್ನೂ, ಮೂರ್ಚ್ಛೆಯನ್ನೂ, ಜ್ವರವನ್ನೂ ಶಾಂತಮಾಡುವ, ಮೊಲೆಹಾಲನ್ನು ಶುದ್ಧಿಮಾಡುವ, ಮತ್ತು ಮಲ, ಮೂತ್ರ, ದ್ರವ, ಮೇದಸ್ಸು, ವಸಾ, ಕೀವು, ಇವುಗಳನ್ನು ಒಣಗಿಸುವ, ಗುಣವುಳ್ಳದ್ದು. ಆದಾಗ್ಯೂ, ಅದನ್ನು ಒಂದನ್ನೇ ಅತಿಯಾಗಿ ಸೇವಿಸಿದರೆ, ಗಾತ್ರಸ್ತಂಭ, (ಜಲನಾಶಕ್ಯತೆ), ಮನ್ಯಾಸ್ತಂಭ, ನಡುಕು, ಅರೆ ತಲೆವಾತ, ತಲೆಶೂಲೆ, ಭ್ರಮ, ನೋವು, ಒಡತ, ತುಂಡಾಗುವಿಕೆ, ಬಾಯಿರುಚಿ ಕಡುವದು, ಇವುಗಳನ್ನು ತರುತ್ತದೆ.

16. ಕಷಾಯಃ ಸಂಗ್ರಾಹಕೋ ರೋಪಣಃ ಸ್ತಂಭನಃ ಶೋಧನೋ ಲೇಖನಃ ಶೋಷಣಃ ಪೀಡನಃ ಕ್ಲೇದೋಪಶೋಷಣಶ್ಚೇತಿ | ಸ ಏವಂ ಗುಣೋಽ ಪ್ಯೇಕ ಏವಾತ್ಯರ್ಥಮುಪಸೇವ್ಯಮಾನೋ ಹೃತ್ಪೀಡಾಸ್ಯಶೋಷೋದರಾ ಧ್ಮಾನ-ವಾಕ್ಯಗ್ರಹ-ಮನ್ಯಾಸ್ತಂಭ-ಗಾತ್ರಸ್ಫುರಣ-ಚುಮುಚುಮೂಯ ನಾಕುಂಚನಾಕ್ಷೇಪಣಪ್ರಭೃತೀನ್ ಜನಯತಿ | (ಸು. 157-58.)

ಜೊಗರು ರಸದ ಗುಣ ದೋಷಗಳು

ಜೊಗರು (ಮಲ) ಸಂಗ್ರಹಿಸುವ, (ವ್ರಣಾದಿಗಳನ್ನು) ಬೆಳಿಸುವ, ಸ್ತಂಭನ (ತಡಿಸುವ) ಶೋಧಿಸುವ, ಲೇಖನ (ಕೊರೆಯುವ), ಒಣಗಿಸುವ, ಪೀಡಿಸುವ, ಮತ್ತು ಒದ್ದೆಯನ್ನಾರಿಸುವ ಗುಣವುಳ್ಳದ್ದು. ಆದಾಗ್ಯೂ ಅದನ್ನು ಒಂದನ್ನೇ ಅತಿಯಾಗಿ ಸೇವಿಸಿದರೆ, ಹೃದಯದ ಪೀಡೆ, ಕ್ಷಯ, ಉದರವ್ಯಾಧಿ, ಹೊಟ್ಟೆಯುಬ್ಬರ, ಮಾತಿನ ತಡೆ, ಕುತ್ತಿಗೆ ಹಿಂದೆ ಹಿಡಕೊಳ್ಳುವದು, ಶರೀರದಲ್ಲಿ ಸಿಡತ, ಮತ್ತು ಚುಮುಚುಮು, ಮುದುರುವಿಕೆ, ನಡುಕು ಮುಂತಾದ ರೋಗಗಳನ್ನು ಹುಟ್ಟಿಸುತ್ತದೆ.

ಪರಾ ಗುಣವಾಚಕಪದಗಳ ಅರ್ಥಕ್ಕೆ ಹಿಂದಿನ IIIನೇ ಅ. 2ನೇ ಸಂ ನೋಡು

17. ತತ್ರೈಷಾಂ ರಸಾನಾಂ ಸಂಯೋಗಾತ್ತ್ರಿಷಷ್ಟಿರ್ಭವಂತಿ । ತದ್ಯಥಾ ।
ರಸಸಂಯೋಗಗಳ ಭೇದಗಳು
ಪಂಚದಶ ದ್ವಿಕಾ ವಿಂಶತಿಸ್ತ್ರಿಕಾಃ ಪಂಚದಶ ಚತುಷ್ಕಾಃ ಷಟ್ ಪಂಚಕಾ ಏಕಶಃ ಷಡ್ರಸಾ ಏಕಃ ಷಟ್ಕ ಇತಿ । (ಸು. 159.)

ಆ ಆರು ರಸಗಳ ಸಂಯೋಗಗಳು 63 ಆಗುತ್ತವೆ, ಹ್ಯಾಗೆಂದರೆ ಎರಡೆರಡಾಗಿ 15, (ಸೀ ಹುಳಿ, ಸೀ ಉಪ್ಪು, ಸೀ ಖಾರ, ಸೀ ಕಹಿ, ಸೀ ಚೊಗರು; ಹುಳಿ ಉಪ್ಪು, ಹುಳಿ ಖಾರ, ಹುಳಿ ಕಹಿ, ಹುಳಿ ಚೊಗರು, ಉಪ್ಪು ಖಾರ, ಉಪ್ಪು ಕಹಿ, ಉಪ್ಪು ಚೊಗರು; ಖಾರ ಕಹಿ, ಖಾರ ಚೊಗರು, ಕಹಿ ಚೊಗರು); ಮೂರುಮೂರಾಗಿ 20, ನಾಲ್ಕುನಾಲ್ಕಾಗಿ 15, ಐದೈದಾಗಿ 6, ಒಂದೊಂದಾಗಿ 6, ಆರು ಒಟ್ಟಾಗಿ 1, ಹೀಗೆ

18. ಸಂಯೋಗಾಃ ಸಪ್ತಪಂಚಾಶತ್ಕಲ್ಪನಾ ತು ತ್ರಿಷಷ್ಟಿಧಾ ।
ರಸಭೇದಗಳ ಉಪಯೋಗ
ರಸಾನಾಂ ತತ್ರ ಯೋಗ್ಯತ್ವಾತ್ ಕಲ್ಪಿತಾ ರಸಚಿಂತಕೈಃ ॥
ಕ್ವಚಿದೇಕೋ ರಸಃ ಕಲ್ಪ್ಯಃ ಸಂಯುಕ್ತಾಶ್ಚ ರಸಾಃ ಕ್ವಚಿತ್ ।
ದೋಷೌಷಧಾದೀನ್ ಸಂಚಿಂತ್ಯ ಭಿಷಜಾ ಸಿದ್ಧಿಮಿಚ್ಛತಾ ॥ (ಚ. 143.)

ಸಂಯುಕ್ತ ರಸಗಳು 57, ಪ್ರತ್ಯೇಕರಸಗಳು 6, ಹೀಗೆ 63 ವಿಧವಾದ ರಸಗಳ ಉಪಯೋಗವನ್ನು ಆ ರಸಗಳ ಯುಕ್ತತೆ ಮೇಲೆ ನಿಶ್ಚಯಿಸುತ್ತಾರೆ ಸಿದ್ಧಿಯನ್ನಪೇಕ್ಷಿಸುವ ವೈದ್ಯನು ದೋಷಗಳು, ಔಷಧಗಳು, ಮುಂತಾದವುಗಳನ್ನು (ಅಂದರೆ ದೇಶಕಾಲಾದಿಗಳನ್ನು ಸಹ) ಆಲೋಚಿಸಿಕೊಂಡು, ಕೆಲವು ಸಂಗತಿಗಳಲ್ಲಿ ಒಂದೇ ರಸವನ್ನೂ ಕೆಲವು ಸಂಗತಿಗಳಲ್ಲಿ ಸಂಯುಕ್ತರಸಗಳನ್ನೂ ಉಪಯೋಗಿಸತಕ್ಕದ್ದು.

19. ಎಲ್ಲಾ ರಸಗಳು ಆರು ರಸಗಳ ಭೇದಗಳೇ
ವ್ಯಕ್ತಃ ಶುಕ್ತಸ್ಯ ಚಾದೌ ಚ ರಸೋ ದ್ರವ್ಯಸ್ಯ ಲಕ್ಷ್ಯತೇ ।
ವಿಪರ್ಯಯೇಣಾನುರಸೋ ರಸೋ ನಾಸ್ತಿ ಹಿ ಸಪ್ತಮಃ ॥
(ಚ. 143)

ಶುದ್ಧವಾದ ದ್ರವ್ಯದಲ್ಲಿ ಪ್ರಧಾನ ರಸವು (ಷಡ್ರಸಗಳೊಳಗಿನದು) ಆರಂಭದಲ್ಲಿ ಮತ್ತು ಅನುರಸವು ವ್ಯತಿಕ್ರಮದಿಂದ ಕಾಣುತ್ತದೆ. ಆದರೆ (ಮಧುರಾದಿ ಆರು ರಸಗಳಲ್ಲದೆ) ಏಳನೇ ರಸವು ಇರುವದಿಲ್ಲ.

20. ರಸಭೇದಗಳು ತಾರತಮ್ಯದ ಮೇಲೆ ಅಸಂಖ್ಯೇಯ
ತೇ ರಸಾನುರಸತೋ ರಸಭೇದಾಸ್ತಾರತಮ್ಯಪರಿಕಲ್ಪನ
ಯಾ ಚ । ಸಂಭವಂತಿ ಗಣನಾಂ ಸಮತೀತಾ ದೋಷಭೇಷ
ಜವಶಾದುಪಯೋಜ್ಯಾಃ । (ವಾ. 53.)

ರಸಗಳು ಮತ್ತು ಅನುರಸಗಳು, ಎಂಬ ಆ ರಸಭೇದಗಳನ್ನು ಪ್ರಮಾಣದಲ್ಲಿ ಹೆಚ್ಚು ಕಡಿಮೆಯಾಗಿ ಕೂಡಿಸುವದರಿಂದ, ಅಸಂಖ್ಯೇಯವಾದ ರಸಭೇದಗಳು ಉಂಟಾಗುತ್ತವೆ. ಅವುಗಳನ್ನು ದೋಷಗಳ ಮತ್ತು ಔಷಧಗಳ ಬಲವಿಚಾರದಿಂದ ಉಪಯೋಗಿಸತಕ್ಕದ್ದು.

21. ತತ್ರ ಮಧುರಾವಮ್ಲೌ ರಸವೀರ್ಯವಿರುದ್ಧೌ ಮಧುರಲವಣೌ ಚ ಮಧುರ ಕಟುಕೌ ಚ ಸರ್ವತಃ । ಮಧುರತಿಕ್ತೌ ರಸವಿಪಾಕಾಭ್ಯಾಂ ಮಧುರ

ಪರಸ್ಪರ ವಿರುದ್ಧ ರಸಗಳು

ಕಷಾಯೌ ಚಾಮ್ಲಲವಣೌ ರಸತಃ | ಅಮ್ಲಕಟುಕೌ ರಸವಿಪಾಕಾಭ್ಯಾಮಮ್ಲತಿಕ್ತಾವಮ್ಲಕಷಾಯೌ ಚ ಸರ್ವತಃ | ಲವಣಕಟುಕೌ ರಸವಿಪಾಕಾಭ್ಯಾಂ ಲವಣತಿಕ್ತೌ ಲವಣಕಷಾಯೌ ಚ ಸರ್ವತಃ | ಕಟುತಿಕ್ತೌ ರಸವೀರ್ಯಾಭ್ಯಾಂ ಕಟುಕಷಾಯೌ ತಿಕ್ತಕಷಾಯೌ ಚ ರಸತಃ | (ಸು. 79.)

ರಸ-ವೀರ್ಯ-ವಿಪಾಕಭೇದಗಳಿಂದ ವಿರುದ್ಧವಾದ ದ್ವಂದ್ವರಸಗಳು ಹ್ಯಾಗಂದರೆ —

ರಸವೀರ್ಯವಿಪಾಕಗಳಿಂದಲೂ ವಿರುದ್ಧ	ರಸ ಮತ್ತು ವೀರ್ಯ ವಿರುದ್ಧ	ರಸ ಮತ್ತು ವಿಪಾಕ ವಿರುದ್ಧ	ರಸ ವಿರುದ್ಧ
ಸೀ-ಉಪ್ಪು,	ಸೀ-ಹುಳಿ,	ಸೀ-ಕಹಿ,	ಸೀ-ಚೊಗರು,
ಸೀ-ಖಾರ,		ಹುಳಿ-ಖಾರ,	ಹುಳಿ-ಉಪ್ಪು,
ಹುಳಿ-ಕಹಿ,	ಖಾರ-ಕಹಿ		ಖಾರ-ಚೊಗರು,
ಹುಳಿ-ಚೊಗರು,		ಉಪ್ಪು-ಖಾರ	ಕಹಿ-ಚೊಗರು
ಉಪ್ಪು-ಕಹಿ,			
ಉಪ್ಪು-ಚೊಗರು			

22. ತರತಮ ಯೋಗಗಳಲ್ಲಿ ಅತಿ ರುಕ್ಷಾದಿ ವರ್ಜ್ಯ

ತರತಮಯೋಗಯುಕ್ತಾಂಶ್ಚ ಭಾವಾನತಿರುಕ್ಷಾನತಿಸ್ನಿಗ್ಧಾನತ್ಯುಷ್ಣಾನತಿಶೀತಾನಿತ್ಯೇವಮಾದೀನ್ ವಿವರ್ಜಯೇತ್ | (ಸು. 79.)

ರಸಗಳನ್ನು ಹೆಚ್ಚು ಕಡಿಮೆಯಾಗಿ ಕೂಡಿಸುವಲ್ಲಿ ಅತಿರೂಕ್ಷ, ಅತಿಸ್ನಿಗ್ಧ, ಅತ್ಯುಷ್ಣ, ಅತಿಶೀತ, ಇತ್ಯಾದಿ ಭಾವಗಳು ಬಾರದಂತೆ ಜಾಗ್ರತೆ ಇರಬೇಕು.

23 ವಿರುದ್ಧ ಯೋಗಗಳ ಹಿತಾಹಿತ

ವಿರುದ್ಧಾನ್ಯೇವಮಾದೀನಿ ರಸವೀರ್ಯವಿಪಾಕತಃ | ತಾನ್ಯೇಕಾಂತಾಹಿತಾನ್ಯೇವ ಶೇಷಂ ವಿದ್ಯಾದ್ಧಿತಾಹಿತಂ | (ಸು 80.)

ರಸದಿಂದಲೂ, ವೀರ್ಯದಿಂದಲೂ, ವಿಪಾಕದಿಂದಲೂ, ವಿರುದ್ಧವಾದ, ಇವೇ ಮೊದಲಾದವುಗಳು ಪೂರ್ಣವಾಗಿ ಅಹಿತವೇ. ಉಳಿದ ಮಾನವಿರುದ್ಧ, ಸಂಯೋಗವಿರುದ್ಧ, ಕರ್ಮವಿರುದ್ಧಾದಿಗಳು ಸಮಯಾನುಸಾರ ಹಿತವಾಗಬಹುದು.

ಪರಾ 'ರಸವೀರ್ಯ' ವಿಪಾಕತಃ ಎಂಬದಕ್ಕೆ 'ವೀರ್ಯತೋಯಾಸಿಕಾಸಿ ಚ' ಎಂಬ ಪಾಠಾಂತರವನ್ನಿಟ್ಟು 'ವೀರ್ಯ ವಿರುದ್ಧವಾದವುಗಳು ಪೂರ್ಣ ಅಹಿತ' ಎಂಬ ಅರ್ಥ ನಿ ಸಂ ವ್ಯಾಖ್ಯಾನದಲ್ಲಿ ಕಾಣುತ್ತದೆ

24. ದ್ರವ್ಯಗಳ ರಸಾದಿ ಪಂಚಾವಸ್ಥೆಗಳು

ದ್ರವ್ಯೇ ರಸೋ ಗುಣೋ ವೀರ್ಯಂ ವಿಪಾಕಃ ಶಕ್ತಿರೇವ ಚ | ಸಂಬಂಧೇನ ಕ್ರಮಾದೇತಾಃ ಪಂಚಾವಸ್ಥಾಃ ಪ್ರಕೀರ್ತಿತಾಃ || (ಶಾ. 7.)

ವಸ್ತುವನ್ನು ಕೂಡಿಕೊಂಡು, ರಸ, ಗುಣ, ವೀರ್ಯ, ವಿಪಾಕ, ಶಕ್ತಿ ಎಂಬ ಐದು ಅವಸ್ಥೆಗಳಿರುತ್ತವೆ.

25. ದ್ರವ್ಯದ ವೀರ್ಯ ಲಕ್ಷಣ

ಚರಕಸ್ತ್ವಾಹ ವೀರ್ಯಂ ತದ್ಯೇನ ಯಾ ಕ್ರಿಯತೇ ಕ್ರಿಯಾ | ನಾವೀರ್ಯಂ ಕುರುತೇ ಕಿಂಚಿತ್ ಸರ್ವಾ ವೀರ್ಯ ಕೃತಾ ಹಿ ಸಾ || (ವಾ. 49.)

ಯಾವದೊಂದು ಕೆಲಸವು ಯಾವದರಿಂದ ಮಾಡಲ್ಪಡುತ್ತದೋ, ಅದೇ ವೀರ್ಯ ಎಂತ ಚರಕನ ಮತ. ವೀರ್ಯವಿಲ್ಲದ ಯಾವದಾದರೊಂದು ಏನನ್ನೂ ಮಾಡುವದಿಲ್ಲ ಎಲ್ಲಾ ಕೆಲಸವು ವೀರ್ಯದಿಂದಲೇ ಆಗುವದು.

26. ವೀರ್ಯ ಭೇದಗಳು

ತಚ್ಚ ವೀರ್ಯಂ ದ್ವಿವಿಧಮುಷ್ಣಂ ಶೀತಂ ಚಾಗ್ನಿಸೋಮೀಯತ್ವಾಜ್ಜಗತಃ | ಕೇಚಿದಷ್ಟವಿಧಮಾಹುರುಷ್ಣಂ ಶೀತಂ ಸ್ನಿಗ್ಧಂ ರೂಕ್ಷಂ ವಿಶದಂ ಪಿಚ್ಛಿಲಂ ಮೃದು ತೀಕ್ಷ್ಣಂ ಚೇತಿ | (ಸು 149)

ಈ ಜಗತ್ತು ಅಗ್ನಿ ಮತ್ತು ಚಂದ್ರ, ಇವುಗಳ ಅಂಶಗಳಿಂದ ತುಂಬಿದ್ದಾದ್ದರಿಂದ, ಆ ವೀರ್ಯ ಎಂಬದು ಎರಡು ವಿಧ ಉಷ್ಣ ಮತ್ತು ಶೀತ. ಕೆಲವರು 8 ವಿಧವೆನ್ನುತ್ತಾರೆ. ಯಾವ ವೆಂದರೆ ಉಷ್ಣ, ಶೀತ, ಸ್ನಿಗ್ಧ, ರೂಕ್ಷ, ವಿಶದ, ಪಿಚ್ಛಿಲ, ಮೃದು, ತೀಕ್ಷ್ಣ ಎಂಬವು

ಇದಕ್ಕೆ ಉಷ್ಣಾದಿ ವೀರ್ಯವಾಚಕ ಶಬ್ದಗಳ ಅರ್ಥ IIIನೇ ಅ 2ನೇ ಸಂಜ್ಞೆಯಲ್ಲಿ ಕಾಣುತ್ತದೆ

27. ರಸಗುಣಕ್ಕೆ ವೀರ್ಯವಾದ ಗುಣವುಳ್ಳ ದ್ರವ್ಯಗಳ ದೃಷ್ಟಾಂತಗಳು

ಏತಾನಿ ವೀರ್ಯಾಣಿ ಸ್ವಬಲಗುಣೋತ್ಕರ್ಷಾದ್ರಸಮಭಿಭೂಯಾತ್ಮಕರ್ಮ ಕುರ್ವಂತಿ ಯಥಾ ತಾವನ್ಮಹತ್ಪಂಚಮೂಲಂ ಕಷಾಯಂ ತಿಕ್ತಾನುರಸಂ ವಾತಂ ಶಮಯತ್ಯುಷ್ಣವೀರ್ಯತ್ವಾತ್ ತಥಾ ಕುಲತ್ಥಃ ಕಷಾಯಃ ಕಟುಕಃ ಪಲಾಂಡುಃ ಸ್ನೇಹಭಾವಾಚ್ಚ | ಮಧುರಶ್ಚೇಕ್ಷುರಸೋ ವಾತಂ ವರ್ಧಯತಿ ಶೀತವೀರ್ಯತ್ವಾತ್ | ಕಟುಕಾ ಪಿಪ್ಪಲೀ ಪಿತ್ತಂ ಶಮಯತಿ ಮೃದುಶೀತವೀರ್ಯತ್ವಾದಮ್ಲಮಾಮಲಕಂ ಲವಣಂ ಸೈಂಧವಂ ಚ | ತಿಕ್ತಾ ಕಾಕಮಾಚೀ ಪಿತ್ತಂ ವರ್ಧಯತ್ಯುಷ್ಣವೀರ್ಯತ್ವಾನ್ಮಧುರಾ ಮತ್ಸ್ಯಾಶ್ಚ | ಕಟುಕಂ ಮೂಲಕಂ ಶ್ಲೇಷ್ಮಾಣಂ ವರ್ಧಯತಿ ಸ್ನಿಗ್ಧವೀರ್ಯತ್ವಾತ್ | ಅಮ್ಲಂ ಕಪಿತ್ಥಂ ಶ್ಲೇಷ್ಮಾಣಂ ಶಮಯತಿ ರೂಕ್ಷವೀರ್ಯತ್ವಾನ್ಮಧುರಂ ಕ್ಷುದ್ರಂ ಚ | ತದೇತನ್ನಿದರ್ಶನಮಾತ್ರಮುಕ್ತಂ | (ಸು. 149-50)

ಈ ವೀರ್ಯಗಳು ತಮ್ಮ ಬಲಗುಣಗಳ ಆಧಿಕ್ಯದಿಂದ ರಸಗುಣವನ್ನು ಅಡಗಿಸಿ, ತಮ್ಮ ಕರ್ಮಗಳನ್ನು ಮಾಡುತ್ತವೆ ಹ್ಯಾಗಂದರೆ, ಮಹತ್ಪಂಚಮೂಲವು ಕಹಿ ಒತ್ತಿದ ಜೊಗರು ರುಚಿಯುಳ್ಳದ್ದಾದಾಗ್ಯೂ, ತನ್ನ ಉಷ್ಣವೀರ್ಯದಿಂದ ವಾತವನ್ನು ಶಮನಮಾಡುತ್ತದೆ, ಹಾಗೆಯೇ ಜೊಗರುರುಚಿಯುಳ್ಳದ್ದಾದ ಹುರುಳಿಯೂ, ಖಾರವಾದ ನೀರುಳ್ಳಿಯೂ, ತಮ್ಮ ಸ್ನೇಹವೀರ್ಯದಿಂದ ವಾತವನ್ನು ಶಮನಮಾಡುತ್ತವೆ. ಕಬ್ಬಿನ ರಸವು ಸೀಯಾದಾಗ್ಯೂ, ತನ್ನ ಶೀತವೀರ್ಯದ ದೆಸೆಯಿಂದ ವಾತವನ್ನು ವೃದ್ಧಿಮಾಡುತ್ತದೆ. ಹಿಪ್ಪಲಿಯು ಖಾರವಾದಾಗ್ಯೂ, ಮೃದು ಮತ್ತು ಶೀತವೀರ್ಯವುಳ್ಳದ್ದಾದ್ದರಿಂದ, ಪಿತ್ತವನ್ನು ಶಮನಮಾಡುತ್ತದೆ; ಹಾಗೆಯೇ

ಹುಳಿಯಾದ ನೆಲ್ಲಿಯು ಮತ್ತು ಉಪ್ಪಾದ ಸೈಂಧವಲವಣವು, ಕಹಿಯಾದ ಕಾಗೆಗಿಡವು (ಗಣಿಕೆ) ತನ್ನ ಉಷ್ಣವೀರ್ಯದಿಂದ ಪಿತ್ತವನ್ನು ವೃದ್ದಿಮಾಡುತ್ತದೆ; ಹಾಗೆಯೇ ಮಧುರವಾದ ವಿಾನುಗಳು. ಖಾರವಾದ ಮುಲ್ಲಂಗಿಯು ತನ್ನ ಸ್ನಿಗ್ಧವೀರ್ಯದಿಂದ ಕಫವನ್ನು ವೃದ್ದಿಸುತ್ತದೆ. ಕಪಿತ್ಥವು (ಬೇಲ) ಹುಳಿಯಾದಾಗ್ಯೂ, ರೂಕ್ಷವೀರ್ಯವುಳ್ಳದ್ದಾದ್ದರಿಂದ, ಕಫವನ್ನು ಕಡಿಮೆಮಾಡುತ್ತದೆ; ಹಾಗೆಯೇ ಸೀಯಾದ ಜೇನು. ಇಷ್ಟು ಉದಾಹರಣಾರ್ಥವಾಗಿ ಮಾತ್ರ ಹೇಳಿದ್ದಾಗಿರುತ್ತದೆ.

28. ಮಧುರಂ ಕಿಂಚಿದುಷ್ಣಂ ಸ್ಯಾತ್ ಕಷಾಯಂ ತಿಕ್ತಮೇವ ಚ ।
ಯಥಾ ಮಹತ್ಪಂಚಮೂಲಂ ಯಥಾ ಚಾನೂಪಮಾಮಿಷಂ ॥

ರಸಗಳ ಸಾಮಾನ್ಯ ಗುಣ ಮತ್ತು ಬಲಾಬಲ ವಿಚಾರ

ಲವಣಂ ಸೈಂಧವಂ ನೋಷ್ಣಮಮ್ಲಮಾಮಲಕಂ ತಥಾ ।
ಅರ್ಕಾಗರುಗುಡೂಚೀನಾಂ ತಿಕ್ತಾನಾಮುಷ್ಣಮುಚ್ಯತೇ ॥
ಕಿಂಚಿದಮ್ಲಂ ಹಿ ಸಂಗ್ರಾಹಿ ಕಿಂಚಿದಮ್ಲಂ ಭಿನತ್ತಿ ಚ ।
ಯಥಾ ಕಪಿತ್ಥಂ ಸಂಗ್ರಾಹಿ ಭೇದಿ ಚಾಮಲಕಂ ತಥಾ ॥
ಪಿಪ್ಪಲೀ ನಾಗರಂ ವೃಷ್ಯಂ ಕಟು ಚಾವೃಷ್ಯಮುಚ್ಯತೇ ।
ಕಷಾಯಃ ಸ್ತಂಭನಃ ಶೀತಃ ಸೋಽಭಯಾತ್ವನ್ಯಥಾ ಮತಾ ॥
ತಸ್ಮಾದ್ರಸೋಪದೇಶೇನ ನ ಸರ್ವಂ ದ್ರವ್ಯಮಾದಿಶೇತ್ ।
ದೃಷ್ಟೇ ತುಲ್ಯರಸೇಪ್ಯೇವಂ ದ್ರವ್ಯೇ ದ್ರವ್ಯೇ ಗುಣಾಂತರಂ ॥
ರೌಕ್ಷ್ಯಾತ್ಕಷಾಯೋ ರೂಕ್ಷಾಣಾಮುತ್ತಮೋ ಮಧ್ಯಮಃ ಕಟುಃ ।
ತಿಕ್ತೋಽವರಸ್ತಧೂಷ್ಣಾನಾಮುಷ್ಣತ್ವಾಲ್ಲವಣಃ ಪರಃ ॥
ಮಧ್ಯೋಽಮ್ಲ ಕಟುಕಶ್ಚಾಂತ್ಯಃ ಸ್ನಿಗ್ಧಾನಾಂ ಮಧುರಃ ಪರಃ ।
ಮಧ್ಯೋಽಮ್ಲೋ ಲವಣಶ್ಚಾಂತ್ಯೋ ರಸಃ ಸ್ನೇಹಾಸ್ನಿರುಚ್ಯತೇ ॥
ಮಧ್ಯಃ ಕೃಷ್ಣಾವರಾಃ ಶೈತ್ಯಾತ್ ಕಷಾಯಸ್ವಾದುತಿಕ್ತಕಾಃ ।
ತಿಕ್ತಾತ್ಕಷಾಯೋ ಮಧುರಃ ಶೀತಾತ್ ಶೀತತರಃ ಪರಃ ॥
ಸ್ವಾದುರ್ಗುರುತ್ವಾದಧಿಕಃ ಕಷಾಯಾಲ್ಲವಣೋಽವರಃ ।
ಅಮ್ಲಾತ್ ಕಟುಸ್ತತಸ್ತಿಕ್ತೋ ಲಘುತ್ವಾದುತ್ತಮೋ ಮತಃ ॥
ಕೇಚಿಲ್ಲಘೂನಾಮವರಮಿಚ್ಛಂತಿ ಲವಣಂ ರಸಂ ।
ಗೌರವೇ ಲಾಘವೇ ಚೈವ ಸೋಽವರಸ್ತೂಭಯೋರಪಿ ॥ (ಚ. 148.)

ಮಧುರವಾದವುಗಳಲ್ಲಿಯೂ, ಜೊಗರು ಮತ್ತು ಕಹಿವಸ್ತುಗಳಲ್ಲಿಯೂ, ಕೆಲವು ಉಷ್ಣವೀರ್ಯ ಉಳ್ಳವು ಇರುತ್ತವೆ, ಉದಾ ಬೃಹತ್ಪಂಚಮೂಲ ಮತ್ತು ಜಲಾಶ್ರಯಪ್ರಾಣಿಗಳ ಮಾಂಸ. ಸೈಂದವ ಉಪ್ಪು ಉಪ್ಪಾದರೂ, ನೆಲ್ಲಿಯು ಹುಳಿಯಾದರೂ, ಉಷ್ಣವಲ್ಲ. ಕಹಿವಸ್ತುಗಳಾದ ಎಕ್ಕೆ, ಅಗರುಗಂಧ, ಮತ್ತು ಅಮೃತಬಳ್ಳಿ, ಇವುಗಳಲ್ಲಿ ಉಷ್ಣವಿರುತ್ತದೆ. ಹುಳಿಯಾದವುಗಳಲ್ಲಿ ಕೆಲವು ಮಲಬದ್ಧ ಮಾಡುತ್ತವೆ, ಕೆಲವು ಭೇದಿ ಮಾಡಿಸುತ್ತವೆ; ಉದಾ. ಬೇಲವು ಮಲಬದ್ಧಕರ, ಮತ್ತು ನೆಲ್ಲಿಯು ಭೇದಿಮಾಡಿಸುತ್ತದೆ. ಖಾರವಾದ ವಸ್ತುಗಳು ವೃಷ್ಯವಲ್ಲವೆಂತ ಎಣಿಸುವದಾದರೂ, ಹಿಪ್ಪಲಿ ಮತ್ತು ಶುಂಠಿ ವೃಷ್ಯ

ವಾಗಿರುತ್ತವೆ. ಜೊಗರುವಸ್ತುಗಳು ಮಲಕಟ್ಟಿಸುವ ಮತ್ತು ಶೀತಸ್ವಭಾವದ್ದಾದರೂ, ಜೊಗರಾದ ಅಣಿಲೆಕಾಯಿಯು ತದ್ವಿರುದ್ಧಗುಣ ಉಳ್ಳದ್ದಾಗಿ ಎಣಿಸಲ್ಪಡುತ್ತದೆ. ಆದ್ದರಿಂದ ರಸಗಳನ್ನು ಕುರಿತು ಬರೆದಿರುವ ಉಪದೇಶಗಳನ್ನು ಆಧರಿಸಿ ಸರ್ವ ವಸ್ತುಗಳನ್ನು ಉಪಯೋಗಿಸಬಾರದು. ಹೀಗೆ ರಸವು ಸಮಾನವಾಗಿ ಕಂಡರೂ, ಬೇರೆಬೇರೆ ವಸ್ತುಗಳಲ್ಲಿ ವ್ಯತ್ಯಾಸಗುಣಗಳು ಕಾಣುತ್ತವೆ. ರೂಕ್ಷಸ್ವಭಾವವುಳ್ಳ ಪದಾರ್ಥಗಳಲ್ಲಿ, ಆ ಗುಣವು ಜೊಗರಿನಲ್ಲಿ ಹೆಚ್ಚು, ಖಾರದಲ್ಲಿ ಮಧ್ಯಮ, ಮತ್ತು ಕಹಿಯಲ್ಲಿ (ಕಡೇ ಪಕ್ಷ) ಕಡಿಮೆ, ಹಾಗೆಯೇ ಉಷ್ಣಪದಾರ್ಥಗಳಲ್ಲಿ, ಉಷ್ಣತ್ವವು ಉಪ್ಪಿನಲ್ಲಿ ಹೆಚ್ಚು, ಹುಳಿಯಲ್ಲಿ ಮಧ್ಯಮ, ಮತ್ತು ಖಾರದಲ್ಲಿ ಕಡಿಮೆ ಸ್ನಿಗ್ಧವಾದ ವಸ್ತುಗಳಲ್ಲಿ, ಆ ಗುಣವು ಸೀಯಲ್ಲಿ ಹೆಚ್ಚು, ಹುಳಿಯಲ್ಲಿ ಮಧ್ಯಮ, ಮತ್ತು ಉಪ್ಪಿನಲ್ಲಿ ಕಡಿಮೆ ಶೀತವಾದ ವಸ್ತುಗಳಲ್ಲಿ ಆ ಗುಣವು ಸೀಯಲ್ಲಿ ಹೆಚ್ಚು, ಜೊಗರಿನಲ್ಲಿ ಮಧ್ಯಮ, ಮತ್ತು ಕಹಿಯಲ್ಲಿ ಕಡಿಮೆಯಾದ್ದರಿಂದ ಕಹಿಗಿಂತ ಜೊಗರು ಶೀತ, ಜೊಗರಿಗಿಂತಲೂ ಮಧುರವು ಶೀತ. ಭಾರವಾದ ಗುಣವು (ಗುರುತ್ವ) ಸೀಯಲ್ಲಿ ಹೆಚ್ಚು, ಜೊಗರಿನಲ್ಲಿ ಮಧ್ಯಮ, ಉಪ್ಪಿನಲ್ಲಿ ಕಡಿಮೆ. ಲಘುತ್ವಗುಣವು ಕಹಿಯಲ್ಲಿ ಹೆಚ್ಚು, ಖಾರದಲ್ಲಿ ಮಧ್ಯಮ, ಹುಳಿಯಲ್ಲಿ ಕಡಿಮೆ. ಲಘುತ್ವವು ಕಡಿಮೆಯಾಗಿರುವದು ಉಪ್ಪಿನಲ್ಲಿ ಎಂತ ಕೆಲವರ ಪಕ್ಷವಿರುತ್ತದೆ ಉಪ್ಪಿನಲ್ಲಿ ಗುರುತ್ವ ಮತ್ತು ಲಘುತ್ವ, ಎರಡೂ ಕಡೇ ಪಕ್ಷವಾಗಿ ಇರುತ್ತವೆ.

29. ಸೀವಸ್ತುಗಳಲ್ಲಿ ಕಫಕರವಲ್ಲದವು — ಮಧುರಂ ಶ್ಲೇಷ್ಮಲಂ ಪ್ರಾಯೋ ಜೀರ್ಣಾಚ್ಛಾಲಿಯವಾದೃತೇ | ಮುದ್ಗಾದ್ಗೋಧೂಮತಃ ಕ್ಷೌದ್ರಾತ್ ಸಿತಾಯಾ ಜಾಂಗಲಾಮಿಷಾತ್ || (ವಾ. 53.)

ಹಳೇ ಶಾಲಿ ಎಂಬ ಅಕ್ಕಿ, ಯವೆ, ಹೆಸರು, ಗೋದಿ, ಜೇನು, ಕಲ್ಲುಸಕ್ಕರೆ, ಕಾಡುಮೃಗಗಳ ಮಾಂಸ ಇವುಗಳಲ್ಲದೆ ಇತರ ಸೀವಸ್ತುಗಳು ಹೆಚ್ಚಾಗಿ ಕಫವೃದ್ಧಿಕರ.

30. ಹುಳಿ ದ್ರವ್ಯಗಳಲ್ಲಿ ಪಿತ್ತಕರವಲ್ಲದವು — ಪ್ರಾಯೋಽಮ್ಲಂ ಪಿತ್ತಜನನಂ ದಾಡಿಮಾಮಲಕಾದೃತೇ | (ವಾ. 53.)

ದಾಳಿಂಬ ಮತ್ತು ನೆಲ್ಲಿ ಅಲ್ಲದೆ ಇತರ ಹುಳಿವಸ್ತುಗಳು ಹೆಚ್ಚಾಗಿ ಪಿತ್ತವನ್ನು ಉಂಟುಮಾಡತಕ್ಕವು ಆಗಿರುತ್ತವೆ.

31. ಉಪ್ಪಿನಲ್ಲಿ ಕಣ್ಣಿಗೆ ಅಪಥ್ಯವಲ್ಲದ್ದು — ಅಪಥ್ಯಂ ಲವಣಂ ಪ್ರಾಯಶ್ಚಕ್ಷುಷೋಽನ್ಯತ್ರ ಸೈಂಧವಾತ್ | (ವಾ. 53.)

ಸೈಂದುಪ್ಪು ಅಲ್ಲದೆ ಇತರ ಉಪ್ಪುಗಳು ಹೆಚ್ಚಾಗಿ ಕಣ್ಣುಗಳಿಗೆ ಅಪಥ್ಯ.

32. ಕಹಿಖಾರಗಳಲ್ಲಿ ವಾತಪ್ರಕೋಪನ ಮತ್ತು ಅವೃಷ್ಯತ್ವ ಇಲ್ಲದವು — ತಿಕ್ತಂ ಕಟು ಚ ಭೂಯಿಷ್ಠಮವೃಷ್ಯಂ ವಾತಕೋಪನಂ | ಋತೇಽಮೃತಾಪಟೋಲಾಭ್ಯಾಂ ಶುಂಠೀಕೃಷ್ಣಾರಸೋನತಃ || (ವಾ. 53.)

ಅಮೃತಬಳ್ಳಿ, ಕಹಿಪಡುವಲ ಅಲ್ಲದ ಕಹಿಗಳು ಮತ್ತು ಶುಂಠಿ, ಹಿಪ್ಪಲಿ, ಬೆಳ್ಳುಳ್ಳಿ ಅಲ್ಲದ ಖಾರವಸ್ತುಗಳು ವಾತಪ್ರಕೋಪವನ್ನುಂಟುಮಾಡತಕ್ಕವು ಮತ್ತು ಪೌರುಷ್ಯವನ್ನು ಕಡಿಮೆ ಮಾಡತಕ್ಕವು.

33. ಕಿಂಚಿದ್ರಸೇನ ಕುರುತೇ ಕರ್ಮ ಪಾಕೇನ ವಾಪರಂ | ಗುಣಾಂತರೇಣ ವೀರ್ಯೇಣ ಪ್ರಭಾವೇಣೈವ ಕಿಂಚನ || ಯದ್ಯದ್ದ್ರವ್ಯೇ ರಸಾದೀನಾಂ ಬಲವತ್ತ್ವೇನ ವರ್ತತೇ | ಅಭಿಭೂಯೇತರಾಂಸ್ತತ್ತತ್ಕಾರಣತ್ವಂ ಪ್ರಪದ್ಯತೇ || (ವಾ. 49.)

ಸಂಯೋಗದಲ್ಲಿ ಬಲಾಬಲವಿಚಾರ.

ಕೆಲವು ದ್ರವ್ಯಗಳು ರಸದ ಬಲದಿಂದ, ಕೆಲವು ದ್ರವ್ಯಗಳು ರಸದ ವಿಪಾಕವಿಶೇಷದಿಂದ, ಕೆಲವು ವೀರ್ಯವಿಶೇಷದಿಂದ, ಕೆಲವು ಪ್ರಭಾವದಿಂದ ಕೆಲಸ ಮಾಡುತ್ತವೆ. ಯಾವ ಯಾವ ದ್ರವ್ಯದಲ್ಲಿ ರಸಾದಿಗಳೊಳಗೆ ಯಾವದ್ಯಾವದು ಬಲವಾಗಿರುತ್ತದೋ, ಅದು ಇತರ ಗುಣಗಳನ್ನು ಜಯಿಸಿ, ಕೆಲಸಮಾಡುವ ಶಕ್ತಿಯುಳ್ಳದ್ದಾಗುತ್ತದೆ

34. ವಿರುದ್ಧಗುಣಸಂಯೋಗೇ ಭೂಯಸಾಲ್ಪಂ ಹಿ ಜೀಯತೇ | ರಸಂ ವಿಪಾಕಸ್ತೌ ವೀರ್ಯಂ ಪ್ರಭಾವಸ್ತಾನ್ಯಪೋಹತಿ || (ವಾ. 50.)

ವಿರುದ್ಧಗುಣಸಂಯೋಗ

ವಿರುದ್ಧಗುಣಗಳುಳ್ಳ ದ್ರವ್ಯಗಳು ಕೂಡಿದಾಗ್ಗೆ, ಬಲವಾದದ್ದು ಅಲ್ಪವಾದದ್ದನ್ನು ಜಯಿಸುತ್ತದೆ, ಮತ್ತು ರಸದ ಗುಣವನ್ನು ವಿಪಾಕದ ಗುಣವೂ, ಅವೆರಡನ್ನು ವೀರ್ಯಗುಣವೂ, ಮತ್ತು ಅವು ಮೂರನ್ನು ಪ್ರಭಾವಗುಣವೂ ಅಡಗಿಸುತ್ತವೆ.

35. ಕೇಚಿತ್ತ್ರಿವಿಧಮಿಚ್ಛಂತಿ ಮಧುರಮಮ್ಲಂ ಕಟುಕಂ ಚೇತಿ ತತ್ತುನ ಸಮ್ಯಕ್ ಭೂತಗುಣಾದಾಗಮಾಚ್ಚಾಮ್ಲೋ ವಿಪಾಕೋ ನಾಸ್ತಿ ಪಿತ್ತಂ ಹಿ ವಿದಗ್ಧಮಮ್ಲತಾಮುಪೈತ್ಯಗ್ನೇರ್ಮಂದತ್ವಾತ್ | ಯದ್ಯೇವಂ ಲವಣೋಽಪ್ಯನ್ಯಃ ಪಾಕೋ ಭವಿಷ್ಯತಿ ಶ್ಲೇಷ್ಮಾ ಹಿ ವಿದಗ್ಧೋ ಲವಣತಾಮುಪೈತಿ || (ಸು. 150.)

ವಿಪಾಕವಿಚಾರ

ಷ ರಾ 'ಅಗ್ನೇರ್ಮಂದತ್ವಾತ್' ಎಂಬಲ್ಲಿ 'ಅಗ್ನೇಯತ್ವಾತ್' ಎಂಬ ಪಾಠಾಂತರವಿದೆ ಸಿ ಸಂ

ವಿಪಾಕವು ಸೀ, ಹುಳಿ, ಖಾರ, ಎಂತ ಮೂರು ವಿಧವೆಂಬದಾಗಿ ಕೆಲವರು ಹೇಳುತ್ತಾರೆ. ಆದರೆ ಅದು ಸರಿಯಲ್ಲ. ಭೂತದ ಗುಣದಿಂದಲೂ, ಶಾಸ್ತ್ರದಿಂದಲೂ ಹುಳಿ ವಿಪಾಕವೆಂಬದು ಇಲ್ಲ. ಅಗ್ನಿ ಮಂದವಾದ (ಪಾಠಾಂತರ ಪ್ರಕಾರ ಅಗ್ನಿಗುಣದ) ದೆಸೆಯಿಂದ ಪಿತ್ತವೇ ಕ್ರಮ ತಪ್ಪಿ ಪಾಕವಾದರೆ ಹುಳಿಯಾಗುವಂಥಾದ್ದು. ಹಾಗಲ್ಲವಾದರೆ, ಉಪ್ಪು ಇನ್ನೊಂದು ವಿಪಾಕ ಎಂತ ಎಣಿಸಬೇಕಾದೀತು. ಆದರೆ ಶ್ಲೇಷ್ಮವು ಕ್ರಮ ತಪ್ಪಿ ಪಾಕವಾದರೆ ಉಪ್ಪಾಗುವಂಥಾದ್ದಾಗಿರುತ್ತದೆ.

ಷ ರಾ ವಿಪಾಕಗಳು ನಾಲ್ಕು ಎಂಬದು ಚರಕನ ಮತ

ಕಟುತಿಕ್ತಕಷಾಯಾಣಾಂ ವಿಪಾಕಃ ಪ್ರಾಯಶಃ ಕಟುಃ |
ಅಮ್ಲೋಲವಣಂ ಪಚ್ಯತೇ ಸ್ವಾದುರ್ಮಧುರಂ ಲವಣಸ್ತಥಾ || (ಚ 149)

ಹುಳಿಯಿಂದ ಹುಳಿ, ಸೀಯಿಂದ ಸೀ, ಉಪ್ಪಿನಿಂದ ಉಪ್ಪು, ಖಾರ, ಕಹಿ, ಮತ್ತು ಚೊಗರುಗಳಿಂದ ಖಾರ, ಹೀಗೆ ನಾಲ್ಕು ವಿಪಾಕಗಳು

36. ಉಗಮೇ ಹಿ ದ್ವಿವಿಧ ಏವ ಪಾಕೋ ಮಧುರಃ ಕಟುಕಶ್ಚ | ತಯೋರ್ಮಧುರಾಖ್ಯೋ ಗುರುಃ ಕಟುಕಾಖ್ಯೋ ಲಘುರಿತಿ | ತತ್ರ ಪೃಥಿವ್ಯಪ್ತೇಜೋವಾಯ್ವಾಕಾಶಾನಾಂ ದ್ವೈವಿಧ್ಯಂ ಭವತಿ ಗುಣಸಾಧರ್ಮ್ಯಾದ್ಗುರುತಾ ಲಘುತಾ ಚ ಪೃಥಿವ್ಯಾಪಶ್ಚ ಗುರ್ವ್ಯಃ ಶೇಷಾಣಿ ಲಘೂನಿ | (ಸು, 150-51.)

ದ್ವಿವಿಧವಿಪಾಕ ಮೆಬದಕ್ಕೆ ಕಾರಣ

ಶಾಸ್ತ್ರರೀತ್ಯಾ ಪಾಕವು ಎರಡೇ ವಿಧ — ಸೀ ಮತ್ತು ಖಾರ ಅದರಲ್ಲಿ ಮಧುರ ಎಂಬದು ಗುರು, ಖಾರ ಎಂಬದು ಹಗುರ. ಪೃಥಿವ್ಯಾದಿ ಪಂಚಭೂತಗಳೊಳಗೆ, ಗುಣದ ಸಾಮಾನ್ಯತೆಯಿಂದ ಗುರುತ್ವ, ಲಘುತ್ವ ಎಂಬ ಎರಡು ವಿಧಗಳಿವೆ ಪೃಥಿವೀ ಮತ್ತು ಜಲ ಗುರು; ಮಿಕ್ಕ ತೇಜಸ್ಸು, ವಾಯು ಮತ್ತು ಆಕಾಶ ಲಘು.

37. ಜಾರರೇಣಾಗ್ನಿನಾ ಯೋಗಾದ್ಯದ್ಯದೇತಿ ರಸಾಂತರಂ |
ರಸಾನಾಂ ಪರಿಣಾಮಾಂತೇ ಸ ವಿಪಾಕ ಇತಿ ಸ್ಮೃತಃ ||
(ವಾ. 49)

'ವಿಪಾಕ'ದ ಅರ್ಥ

ಜಠರಾಗ್ನಿಯ ಯೋಗದಿಂದ ರಸಗಳು ಪಕ್ವವಾಗಿ ಅಂತ್ಯದಲ್ಲಿ ಯಾವ ರಸಭೇದವು ಪರಿಣಮಿಸುತ್ತದೋ ಅದಕ್ಕೆ ವಿಪಾಕ ಎಂತ ಹೆಸರು.

38. ರಸವೀರ್ಯವಿಪಾಕಾನಾಂ ಸಾಮಾನ್ಯಂ ಯಸ್ಯ ಲಕ್ಷ್ಯತೇ |
ವಿಶೇಷಃ ಕರ್ಮಣಾಂ ಚೈವ ಪ್ರಭಾವಸ್ತಸ್ಯ ಚ ಸ್ಮೃತಃ ||
(ಚ. 149.)

ಪ್ರಭಾವ ಅಥವಾ ತಕ್ಕ ಯೆಂಬದರ ಅರ್ಥ

ಸಮಾನವಾದ ರಸವೀರ್ಯವಿಪಾಕಗಳುಳ್ಳ ವಸ್ತುಗಳು (ಬೇರೆ) ವಿಶೇಷ ಕೆಲಸಗಳನ್ನು ಮಾಡುವಂಥಾ ಗುಣಕ್ಕೆ ಪ್ರಭಾವ ಎಂತ ಹೆಸರು.

39. ದ್ರವ್ಯೇಷು ಪಚ್ಯಮಾನೇಷು ಯೇಷ್ವಂಬುಪೃಥಿವೀಗುಣಾಃ |
ನಿರ್ವರ್ತಂತೇಽಧಿಕಾಸ್ತತ್ರ ಪಾಕೋ ಮಧುರ ಉಚ್ಯತೇ ||
ತೇಜೋಽನಿಲಾಕಾಶಗುಣಾಃ ಪಚ್ಯಮಾನೇಷು ಯೇಷು ತು |
ನಿರ್ವರ್ತಂತೇಽಧಿಕಾಸ್ತತ್ರ ಪಾಕಃ ಕಟುಕ ಉಚ್ಯತೇ || (ಸು. 151.)

ದ್ವಿವಿಧವಿಪಾಕಗಳ ಭೇದ

ಯಾವ ದ್ರವ್ಯಗಳು ಪಾಕವಾಗುತ್ತಿರುವಾಗ್ಗೆ, ಪೃಥ್ವೀ ಮತ್ತು ಜಲಗುಣಗಳು ಹೆಚ್ಚಾಗಿ ಉಂಟಾಗುತ್ತವೋ, ಅವುಗಳ ಪಾಕವು ಮಧುರ ಎಂತ ಹೇಳಲ್ಪಡುತ್ತದೆ. ಮತ್ತು ಯಾವ

ದ್ರವ್ಯಗಳ ಪಾಕದಲ್ಲಿ ತೇಜಸ್ಸು, ವಾಯು, ಆಕಾಶಗುಣಗಳು ಹೆಚ್ಚಾಗಿ ಪರಿಣಮಿಸುತ್ತವೋ ಅವುಗಳ ಪಾಕವು ಖಾರ ಎಂತ ಹೇಳಲ್ಪಡುತ್ತದೆ.

40. ಪ್ರಭಾವಪತೀ ಪದ ದೃಷ್ಟಾಂತ

ಕಟುಕಃ ಕಟುಕಃ ಪಾಕೇ ವೀರ್ಯೋಷ್ಣಶ್ಚಿತ್ರಕೋ ಮತಃ ।
ತದ್ವದ್ದಂತೀ ಪ್ರಭಾವಾತ್ತು ವಿರೇಚಯತಿ ಮಾನವಂ ॥
(ಚ. 149.)

ಚಿತ್ರಮೂಲವು ಖಾರರಸವುಳ್ಳದ್ದು, ಅದರ ವಿಪಾಕವೂ ಖಾರ, ವೀರ್ಯದಲ್ಲಿ ಉಷ್ಣ. ದಂತಿಯು ಅದೇ ರಸ, ವೀರ್ಯ, ವಿಪಾಕವುಳ್ಳದ್ದಾದರೂ ಅದರ ಪ್ರಭಾವದಿಂದ ಮನುಷ್ಯರಲ್ಲಿ ವಿರೇಚನ ಮಾಡಿಸುತ್ತದೆ (ಈ ಗುಣವು ಚಿತ್ರಮೂಲದಲ್ಲಿ ಇಲ್ಲ)

41. ಪ್ರಸಿದ್ಧ ಸ್ವಭಾವದ ಔಷಧಗಳ ಉಪಯೋಗ

ಅವಿಮಾಮಾಂಸ್ಯಾನ್ಯಚಿಂತ್ಯಾನಿ ಪ್ರಸಿದ್ಧಾನಿ ಸ್ವಭಾವತಃ ।
ಆಗಮೇನೋಪಯೋಜ್ಯಾನಿ ಭೇಷಜಾನಿ ವಿಚಕ್ಷಣೈಃ ॥
ಪ್ರತ್ಯಕ್ಷಲಕ್ಷಣಫಲಾಃ ಪ್ರಸಿದ್ಧಾಶ್ಚ ಸ್ವಭಾವತಃ ।
ನೌಷಧೀರ್ಹೇತುಭಿರ್ವಿದ್ವಾನ್ ಪರೀಕ್ಷೇತ ಕಥಂಚನ ॥
(ಸು 151.)

ಬುದ್ಧಿವಂತರು ಪ್ರಸಿದ್ಧವಾದ ಸ್ವಭಾವವುಳ್ಳ ಔಷಧಗಳ ವಿಷಯದಲ್ಲಿ ಸಂಶಯವಾಗಲಿ, ಯೋಚನೆಯಾಗಲಿ ಮಾಡದೆ ಶಾಸ್ತ್ರಪ್ರಕಾರ ಉಪಯೋಗಿಸತಕ್ಕದ್ದು. ಸ್ವಭಾವದ ಕುರಿತು ಪ್ರಸಿದ್ಧವಾದ ಔಷಧಗಳ ಲಕ್ಷಣಗಳು ಮತ್ತು ಫಲಗಳು ಪ್ರತ್ಯಕ್ಷವಾಗಿರುವಾಗ, ವಿದ್ವಾಂಸನು ಆ ಔಷಧಗಳನ್ನು ಹ್ಯಾಗೂ ಹೇತುಗಳಿಂದ ಪರೀಕ್ಷಿಸಬಾರದು.

42. ಒಟ್ಟಾಗಿ ಉಪಯೋಗಿಸಲ್ಪಡಬಾರದ ಪದಾರ್ಥಗಳು

ಸರ್ವಾನೇವ ಮತ್ಸ್ಯಾನ್ನ ಪಯಸಾಭ್ಯವಹರೇದ್ವಿಶೇಷತಸ್ತು ಚಿಲಿಚಿಮಂ | ಸ ಹಿ ಮಹಾಭಿಷ್ಯಂದಿತಮತ್ವಾತ್ ಸ್ಥೂಲ ಲಕ್ಷಣತರಾನೇತಾನ್ ವ್ಯಾಧೀನುಪಜನಯತ್ಯಾಮವಿಷಮುದೀರಯತಿ ಚ ॥ (ಚ. 151)

ಹಾಲಿನೊಂದಿಗೆ ಯಾವ ಮಾಂಸವನ್ನಾದರೂ, ವಿಶೇಷವಾಗಿ ಚಿಲಿಚಿಮ ಎಂಬ ಜಾತಿದನ್ನು, ತಿನ್ನಬಾರದು. ಅದರಲ್ಲಿ (ಚಿಲಿಚಿಮದಲ್ಲಿ) ಅತ್ಯಂತ ಅಭಿಷ್ಯಂದಿಗುಣವಿರುವದರಿಂದ (ಮಾಂಸ ನಲ್ಲಿ ಉರಿಶೀತ ಎಂಬ ವಿರುದ್ಧ ವೀರ್ಯವಿರುವದರಿಂದ ರಕ್ತವು ಕೆಡುವದು ಮತ್ತು ಮಹಾಭಿಷ್ಯಂದಿಗುಣವಿರುವದರಿಂದ ಮಾರ್ಗವು ತಡೆಯಲ್ಪಡುತ್ತದೆ), ರಕ್ತಸಂಬಂಧವಾದ ಮತ್ತು ಮಲಮೂತ್ರಾದಿಗಳ ತಡೆಸಂಬಂಧವಾದ ರೋಗಗಳು ಹುಟ್ಟುತ್ತವೆ, ಮತ್ತು ಆಮ ವಿಷದ ಉತ್ಪತ್ತಿಯುಂಟಾಗುತ್ತದೆ.

ಗ್ರಾಮ್ಯಾನೂಪೌದಕಪಿಶಿತಾನಿ ಮಧುತಿಲಗುಡಪಯೋಮಾಷಮೂಲಕಬಿಸೈರ್ವಿರೂಢಧಾನ್ಯೈಶ್ಚ ನೈಕಧಾ ಅದ್ಯಾತ್ । ತನ್ಮೂಲಂ ಚ ಬಾಧಿರ್ಯಾನ್ಧ್ಯವೇಪಥುಜಾಡ್ಯವಿಕಲಮೂಕತಾಮೈನಿಣ್ಯಮಥವಾ ಮರಣಮಾಪ್ನೋತಿ ॥ (ಚ. 151.)

ಗ್ರಾಮವಾಸಿಯಾದ ಪ್ರಾಣಿಗಳ ಮತ್ತು ಜಲಾಶ್ರಯ ಪ್ರಾಣಿಗಳ ಮಾಂಸಗಳನ್ನು ಜೇನು, ಎಳ್ಳು, ಬೆಲ್ಲ, ಹಾಲು, ಉದ್ದು, ಮುಲ್ಲಂಗಿ, ಸೈದಿಲೆದಂಟು ಮತ್ತು ಮೊಳಕೆ ಬರಿಸಿದ ಧಾನ್ಯ ಇವುಗಳೊಂದಿಗೆ ಒಟ್ಟಾಗಿ ತಿನ್ನಬಾರದು ಹಾಗೆ ತಿಂದದ್ದರ ಮೂಲವಾಗಿ ಕಿವುಡ ತನ, ಕುರುಡತನ, ನಡುಕು, ಜಾಡ್ಯ ಗಲಿಬಲಿ, ಮೂಕತನ, ಮಿಸ್ಮಿಣಿಸ್ವರ, ಇವು ಅಥವಾ ಮರಣಪ್ರಾಪ್ತಿಯಾಗುವದು.

ನ ಮೂಲಕಲಶುನಕೃಷ್ಣಗಂಧಾರ್ಜಕಸುಮುಖಸುರಸಾದೀನಿ ಭಕ್ಷಯಿತ್ವಾ
ಪಯಃ ಸೇವ್ಯಂ ಕುಷ್ಠಬಾಧಭಯಾತ್ ॥ (ಚ 151)

ಮೂಲಂಗಿಗಡ್ಡೆ, ಬೆಳ್ಳುಳ್ಳಿ, ನುಗ್ಗೆಕೋಡು, ಬಳೇ ತುಳಸಿ, ಕಾಡು ತುಳಸಿ, ಕರೇ ತುಳಸಿ, ಇತ್ಯಾದಿಗಳನ್ನು ತಿಂದು ಹಾಲು ಕುಡಿಯಬಾರದು ಅದರಲ್ಲಿ ಕುಷ್ಠರೋಗ ಬಾಧೆಯ ಭಯ ವಿರುತ್ತದೆ.

ನ ವಾಸ್ತುಶಾಕಂ ನ ಲಿಕುಚಂ ಪಕ್ವಂ ಮಧುಪಯೋಭ್ಯಾಂ ಸಹೋಪಯೋ
ಜ್ಯಮ್ । ಏತದ್ಧಿ ಮರಣಾಯಾಥವಾ ಬಲವರ್ಣತೇಜೋವೀರ್ಯೋಪ
ರೋಧಾಯಾಲಘುವ್ಯಾಧಯೇ ಷಾಂಡ್ಯಾಯ ಚ ॥ (ಚ. 151.)

ಚಕ್ಕೋತ ಸೊಪ್ಪಾಗಲಿ, ಹೆಬ್ಬಲಸಿನ ಹಣ್ಣಾಗಲಿ, ಜೇನು ಮತ್ತು ಹಾಲುಗಳೊಂದಿಗೆ ಉಪಯೋಗಿಸಲ್ಪಡಬಾರದು, ಇದರಿಂದ ಮರಣ ಅಥವಾ ಬಲವರ್ಣತೇಜಸ್ಸುವೀರ್ಯಗಳ ಹಾನಿ, ಲಘುವಲ್ಲದ ವ್ಯಾಧಿ ಮತ್ತು ಕ್ಲೀಬತ್ವ ಉಂಟಾಗುತ್ತದೆ.

ಇದಕ್ಕೆ ಲಿಕುಚ ಎಂಬದು 'ಒಟೆ ಹುಳಿ' ಎಂತ ಕೆಲವು ಗ್ರಂಥಗಳಲ್ಲಿ ಕಾಣಿಸಿಯದೆ ಆದರೆ ಅದರ ಗುಣಪಾರವೂ, ಕ್ಷುದ್ರಪನಸ (ಸಣ್ಣ ಹಲಸು) ಎಂಬ ನಾಮವೂ, ಹೆಬ್ಬಲಸಿಗೇನೇ ಒಪ್ಪುತ್ತವೆ

ತದೇವ ಲಿಕುಚಪಕ್ವಂ ನ ಮಾಷಸೂಪಗುಡಸರ್ಪಿರ್ಭಿಃ ಸಹೋಪಯೋಜ್ಯಂ
ವೈರೋಧಕತ್ವಾತ್ । (ಚ 152.)

ಅದೇ ಹೆಬ್ಬಲಸಿನ ಹಣ್ಣನ್ನು ಉದ್ದಿನ ತೋವೆ, ಬೆಲ್ಲ ಮತ್ತು ತುಪ್ಪಗಳೊಂದಿಗೆ, ವಿರೋಧ ಮಾಡುವ ಗುಣವಿರುವದರಿಂದ, ಉಪಯೋಗಿಸಬಾರದು.

ತಥಾಮ್ರಾತಕಮಾತುಲುಂಗಲಿಕುಚಕರಮರ್ದಮೋಚದನ್ತಶರಬದರಕೋ
ಶಾಮ್ರಭವ್ಯಜಾಂಬವಕಪಿತ್ಥತಿನ್ತಿಡೀಕಪಾರಾವತಾಕ್ಷೋಟಪನಸನಾಲಿಕೇರ
ದಾಡಿಮಾಮಲಕಾನ್ಯೇವಮ್ಪ್ರಕಾರಾಣಿ ಚಾನ್ಯಾನಿ ಸರ್ವಂ ಚಾಮ್ಲಂ
ದ್ರವಂ ಅದ್ರವಂ ಚ ಪಯಸಾ ಸಹ ವಿರುದ್ಧಮ್ । (ಚ. 152.)

ಅಂಬಟೆಹಣ್ಣು, ಮಾದಳಹಣ್ಣು, ಹೆಬ್ಬಲಸಿನಹಣ್ಣು, ಕರಂಡೆ(ಕಮರಿಕೆ)ಹಣ್ಣು, ಬಾಳೆ ಹಣ್ಣು, ದೊಡ್ಡುಳೀಹಣ್ಣು, ಬೊಗರಿಹಣ್ಣು, ಕೋಶಾಮ್ರ (ಜೂರಿಮಾವು), ಭವ್ಯ (ದೇವಗರಿಗೆ, ಹಿರೇಕಣಿಗು), ನೇರಳೇಹಣ್ಣು, ಬೆಳವಲಹಣ್ಣು, ಹುಣಸೆಹಣ್ಣು, ಪಾರಾವತಹಣ್ಣು, ಅಖರೋಟು, ಹಲಸಿನಹಣ್ಣು, ತೆಂಗಿನಕಾಯಿ, ದಾಳಿಂಬದ ಹಣ್ಣು, ನೆಲ್ಲಿಹಣ್ಣು, ಹೀಗಿರುವ ಬೇರೆಯವುಗಳು ಮತ್ತು ಸರ್ವ ಹುಳಿ ವಸ್ತು, ಹಸಿಯಾಗಲಿ, ಒಣಗಿದ್ದಾಗಲಿ, ಹಾಲಿನೊಂದಿಗೆ ಉಪಯೋಗಿಸಲ್ಪಟ್ಟಲ್ಲಿ ವಿರೋಧ ಉಂಟಾಗುತ್ತದೆ.

ಇದಕ್ಕೆ ಹಾಲಿನೊಂದಿಗೆ ಉಪ್ಪನ್ನು ಸಹ ಉಪಯೋಗಿಸಬಾರದಾಗಿ ಸುಶ್ರುತದಲ್ಲಿ ಹೇಳಿದೆ ಪು 78

ಕಂಗುವರಕಮಕುಷ್ಠಕಕುಲತ್ಥಮಾಷನಿಷ್ಪಾವಾಃ ಪಯಸಾ ಸಹ ವಿರುದ್ಧಾಃ |
(ಚ. 152.)

ಕಂಗು, ವರಕ, ಮಕುಷ್ಠಕ, ಎಂಬ ಧಾನ್ಯಗಳು, ಹುರುಳಿ, ಉದ್ದು ಮತ್ತು ಅವರೆ ಹಾಲಿನೊಂದಿಗೆ ವಿರುದ್ಧವಾದವು

ಪಾಯಸೋ ಮನ್ಥಾನುಪಾನೋ ವಿರುದ್ಧಃ | ಉಪೋದಿಕಾ ತಿಲಕಲ್ಕಸಿದ್ಧಾ
ಹೇತುರತೀಸಾರಸ್ಯ | (ಚ. 152.)

ಪಾಯಸ ತಿಂದು ಹಿಟ್ಟು ಕಲಸಿದ್ದನ್ನು ಕುಡಿಯಬಾರದು. ಎಳ್ಳಿನ ಕಲ್ಕ ಕೂಡಿಸಿ ತಯಾರಿಸಿದ ಬಸಳೆಸೊಪ್ಪಿನ (ಬಚ್ಚಲುಸೊಪ್ಪಿನ) ಅಡಿಗೆ ಅತಿಸಾರಕ್ಕೆ ಹೇತುವಾಗುವದು

ತಥಾ ಕಾಕಮಾಚೀ ಮಧು ಚ ಮರಣಾಯ | (ಚ 152)

ಕಾಗೆಹಣ್ಣು ಮತ್ತು ಜೇನು ಒಟ್ಟಾಗಿ ಸೇವಿಸಲ್ಪಟ್ಟಲ್ಲಿ ಮರಣಕ್ಕೆ ಕಾರಣವಾಗುತ್ತದೆ.

ಮಧು ಚೋಷ್ಣಮುಷ್ಣಾರ್ತಸ್ಯ ಚ ಮಧು ಮರಣಾಯ || (ಚ. 152.)

ಕಾಯಿಸಿದ ಜೇನು ಮತ್ತು ಉಷ್ಣದಿಂದ ಪೀಡಿತನಾದವನಿಗೆ ಜೇನು ಸಹ ಮರಣಕ್ಕೆ ಹೇತು.

ಇದಂ ಸುಶ್ರುತದಲ್ಲಿ 'ಮಧುಚೋಷ್ಣೆ ಭುರುಷ್ಣೇ ವಾ ಎಂತ ಉಂಟು (ಪು 79) ಅಂದರೆ ಜೇನು ಬಿಸಿಯಾಗಿರುವ ಪದಾರ್ಥಗಳೊಂದಿಗೆ ಅಥವಾ ಉಷ್ಣಕಾಲದಲ್ಲಿ ವಿರುದ್ಧ

ಮಧುಸರ್ಪಿಷೀ ತುಲ್ಯೇ ಮಧು ವಾರಿ ಚಾನ್ತರಿಕ್ಷಂ ಸಮಘೃತಂ ಮಧು
ಪುಷ್ಕರಬೀಜಂ ಮಧು ಪೀತ್ವೋಷ್ಣೋದಕಂ ಭಲ್ಲಾತಕೋಷ್ಣೋದಕಮ್ ||
(ಚ. 152.)

ಜೇನು ಮತ್ತು ತುಪ್ಪ ಸಮಾನ ತೂಕ, ಜೇನು ಮತ್ತು ಆಕಾಶದ ನೀರು, ಸಮಪಾಲು ತುಪ್ಪದೊಂದಿಗೆ ತಾವರೆಬೀಜ ಮತ್ತು ಜೇನು, ಜೇನು ಕುಡಿದು ಬಿಸಿನೀರಿನನುಪಾನ, ಗೇರು ಕಾಯಿ ಮತ್ತು ಬಿಸಿನೀರು, ಈ ಯೋಗಗಳು ಸಹ ವಿಷವಾಗಿ ಪರಿಣಮಿಸುತ್ತವೆ.

ಕಾಕಮಾಚೀಂ ಪಿಪ್ಪಲೀಮರಿಚಾಭ್ಯಾಮ್ || (ಸು. 78.)

ಕಾಗೆಸೊಪ್ಪನ್ನು ಹಿಪ್ಪಲೀ ಮೆಣಸುಗಳೊಂದಿಗೆ ಉಪಯೋಗಿಸಬಾರದು.

ಪಿತ್ತೇನ ವಾ ಮಾಂಸಾನಿ || (ಸು. 78.)

ಪಿತ್ತಸಹಿತವಾಗಿ ಮಾಂಸಗಳನ್ನು ಭಕ್ಷಿಸಬಾರದು.

ಸುರಾಕೃಶರಾಪಾಯಸಾಂಶ್ಚ ನೈಕಧ್ಯಮ್ | (ಸು. 78.)

ಸುರಾಮದ್ಯ, ಹುಗ್ಗಿ-ಪಾಯಸಗಳನ್ನು ಒಟ್ಟಾಗಿ ಉಪಯೋಗಿಸಬಾರದು.

ಮತ್ಸ್ಯೈಃ ಸಹೇಕ್ಷುವಿಕಾರಾನ್ || (ಸು. 78.)

ಮೀನುಗಳೊಂದಿಗೆ ಬೆಲ್ಲ ಮುಂತಾದ ಕಬ್ಬಿನ ವಿಕಾರಗಳನ್ನು ಭಕ್ಷಿಸಬಾರದು.

ಗುಡೇನ ಕಾಕಮಾಚೀಂ ಮಧುನಾ ಮೂಲಕಂ ಗುಡೇನ ವಾರಾಹಂ
ಮಧುನಾ ಚ ಸಹ ವಿರುದ್ಧಮ್ || (ಸು. 78-79.)

ಬೆಲ್ಲದೊಂದಿಗೆ ಕಾಗೆಸೊಪ್ಪು, ಜೇನಿನೊಂದಿಗೆ ಮೂಲಂಗಿ, ಬೆಲ್ಲ ಮತ್ತು ಜೇನಿನೊಂದಿಗೆ ಕಾಡಹಂದಿಮಾಂಸ ಸಹ ವಿರುದ್ಧ.

ಕದಲೀಫಲಂ ತಾಲಫಲೇನ ಪಯಸಾ ದಧ್ನಾ ತಕ್ರೇಣ ವಾ || (ಸು. 79)

ಬಾಳೆಹಣ್ಣನ್ನು ತಾಳಿಹಣ್ಣಿನೊಂದಿಗೆ, ಹಾಲಿನೊಂದಿಗೆ, ಮೊಸರೊಂದಿಗೆ ಅಥವಾ ಮಜ್ಜಿಗೆಯೊಂದಿಗೆ, ತಿನ್ನಬಾರದು.

ಲಿಕುಚಫಲಂ ಪಯಸಾ ದಧ್ನಾ ಮಾಷಸೂಪೇನ ವಾ ಮಧುನಾ ಘೃತೇನ ಚ | ಪ್ರಾಕ್ ಪಯಸಃ ಪಯಸೋಽನ್ತೇ ವಾ || (ಸು 79.)

ಹೆಬ್ಬಲಸಿನ ಫಲವನ್ನು ಹಾಲಿನೊಂದಿಗೆ, ಮೊಸರಿನೊಂದಿಗೆ, ಉದ್ದಿನ ತೋವೆಯೊಂದಿಗೆ, ಅಥವಾ ತುಪ್ಪ-ಜೇನುಗಳೊಂದಿಗೆ ತಿನ್ನಬಾರದು, ಮತ್ತು ಅದನ್ನು ಹಾಲಿಗೆ ಮೊದಲಾಗಲಿ ಹಾಲಿನ ಅಂತ್ಯದಲ್ಲಿಯಾಗಲ ಭಕ್ಷಿಸಬಾರದು.

ಕಾಂಸ್ಯಭಾಜನೇ ದಶರಾತ್ರಪರ್ಯುಷಿತಂ ಸರ್ಪಿಃ || (ಸು. 79.)

ಕಂಚಿನ ಪಾತ್ರೆಯಲ್ಲಿ ಹತ್ತು ರಾತ್ರಿ ಉಳಿಸಿದ ತುಪ್ಪ ತ್ಯಾಜ್ಯ.

ಸ್ನೇಹೌ ಮಧುಸ್ನೇಹೌ ಜಲಸ್ನೇಹೌ ವಾ || (ಸು 79.)

ಎರಡು ಜಾತಿ ಸ್ನೇಹಗಳನ್ನು, ಜೇನು ಮತ್ತು ಸ್ನೇಹವನ್ನು, ಅಥವಾ ನೀರು ಮತ್ತು ಸ್ನೇಹವನ್ನು, ಸರಿ ತೂಕ ಕೂಡಿಸಿದರೆ, ವಿರೋಧ ಉಂಟಾಗುತ್ತದೆ.

ಮಧುಸರ್ಪಿರ್ವಸಾತೈಲಪಾನೀಯಾನಿ ದ್ವಿಶಸ್ತ್ರಿಶಃ ಏಕತ್ರ ವಾ ಸಮಾಂಶಾನಿ ವಿರುಧ್ಯನ್ತೇ ಪರಸ್ಪರಮ್ | ಫೆನ್ಯಾಂಶೇ ಅಪಿ ಮಧ್ವಾಜ್ಯೇ ದಿವ್ಯವಾರ್ಯಾನುಪಾನತಃ || (ವಾ 40)

ಜೇನು, ತುಪ್ಪ, ವಸೆ, ತೈಲ, ನೀರು, ಇವುಗಳನ್ನು ಎರಡಾಗಿ, ಮೂರಾಗಿ, ಅಥವಾ ಒಟ್ಟಾಗಿ, ಸಮಾಂಶದಿಂದ ಉಪಯೋಗಿಸಿದರೆ, ಅವು ಪರಸ್ಪರ ವಿರೋಧ ಮಾಡುತ್ತವೆ. ಜೇನು ಮತ್ತು ತುಪ್ಪವನ್ನು ಫೆನ್ಯಾಂಶವಾಗಿ ಉಪಯೋಗಿಸಿದಾಗಲೂ, ಅನುಪಾನಕ್ಕೆ ಆಕಾಶದ ನೀರನ್ನುಪಯೋಗಿಸಿದರೆ, ವಿರೋಧವುಂಟಾಗುತ್ತದೆ.

ಉಷ್ಣೈರ್ದಧಿ ಏವರ್ಜಯೇತ್ || (ಭಾ. ಪ್ರ. 70.)

ಉಷ್ಣಪದಾರ್ಥಗಳೊಂದಿಗೆ ಮೊಸರನ್ನು ಸೇವಿಸಬಾರದು.

ಕೃತಾನ್ನಂ ಚ ಕಷಾಯಂ ಚ ಪುನರುಷ್ಣೀಕೃತಂ ತ್ಯಜೇತ್ || (ಭಾ. ಪ್ರ. 70.)

ಸಿದ್ಧವಾದ ಅನ್ನವನ್ನಾಗಲಿ, ಕಷಾಯವನ್ನಾಗಲಿ, ಪುನಃ ಬಿಸಿ ಮಾಡಿ ಉಪಯೋಗಿಸಬಾರದು.

ಏಕತ್ರ ಬಹುಮಾಂಸಾನಿ ವಿರುಧ್ಯನ್ತೇ ಪರಸ್ಪರಮ್ || (ಭಾ. ಪ್ರ. 70)

ಬಹು ಜಾತಿಯ ಮಾಂಸಗಳನ್ನು ಒಟ್ಟಾಗಿ ಉಪಯೋಗಿಸಿದ್ದಲ್ಲಿ ಅವು ಪರಸ್ಪರ ವಿರೋಧವನ್ನು ಮಾಡುತ್ತವೆ.

ಕ್ಷೀರಮಿತ್ರಾಣಿ·—
ಅಮ್ಲೇಷ್ವಾಮಲಕಂ ಪಥ್ಯಂ ಶರ್ಕರಾ ಮಧುರೇಷು ಚ |
ಪಟೋಲಃ ಶಾಕವರ್ಗೇಷು ಕಟುಕೇಷ್ವಾರ್ದ್ರಕಂ ಭವೇತ್ |
ಕಷಾಯೇಷು ಯವಾಶ್ಚೈವ ಲವಣೇಷು ಚ ಸೈಂಧವಮ್ ||

ಹುಳಿ ಪದಾರ್ಥಗಳೊಳಗೆ ನೆಲ್ಲಿ, ಸೀ ಪದಾರ್ಥಗಳೊಳಗೆ ಸಕ್ಕರೆ, ಶಾಕವರ್ಗಗಳೊಳಗೆ ಪಡುವಲಕಾಯಿ, ಖಾರವಾದ ವಸ್ತುಗಳೊಳಗೆ ಹಸಿ ಶುಂಠಿ, ಜೊಗರು ಪದಾರ್ಥಗಳೊಳಗೆ ಯವೆ, ಮತ್ತು ಉಪ್ಪುಗಳೊಳಗೆ ಸೈಂಧವಲವಣ, ಸಹ ಹಾಲಿಗೆ ಮಿತ್ರರು ಆದ್ದರಿಂದ ಪಥ್ಯವಾದವು.

ಪರಾ ಈ ವಚನವು ಚರಕದಲ್ಲಿಯಾಗಲಿ, ಸುಶ್ರುತದಲ್ಲಿಯಾಗಲಿ, ವಾಗ್ಭಟನ ಅಷ್ಟಾಂಗಹೃದಯದಲ್ಲಿಯಾಗಲಿ ಕಾಣುವದಿಲ್ಲ ಅದಲ್ಲದೆ ಹಾಲಿನೊಂದಿಗೆ ನೆಲ್ಲಿ ವರ್ಜ್ಯ ಎಂತ ಚರಕದಲ್ಲಿ ಕುರಿತಾಗಿ ಹೇಳಲ್ಪಟ್ಟಿದೆ ಸಕ್ಕರೆ, ಹಸಿ ಪಡುವಲಕಾಯಿ, ಹಸಿ ಶುಂಠಿ, ಇವುಗಳು ಹಾಲಿನೊಂದಿಗೆ ತ್ಯಾಜ್ಯವಾಗಿ ಎಲ್ಲಯೂ ಹೇಳಲ್ಪಟ್ಟದ್ದು ಕಾಣುವದಿಲ್ಲವಾದ್ದರಿಂದ, ಹಾಲನ್ನದ ಜೊತೆಯಲ್ಲಿ ಆವಶ್ಯವೆನ್ನಿಸಿದರೆ ಆ ವಸ್ತುಗಳಲ್ಲಿ ಒಂದನ್ನು ಉಪಯೋಗಿಸಬಹುದೆಂತಲೂ ಅದರಿಂದಲೂ ಸಾಧ್ಯವಾಗದ ಸಂಗತಿಯಲ್ಲಿ ಸೈಂಧವಲವಣವನ್ನು ಅಲ್ಪವಾಗಿ ಉಪಯೋಗಿಸಬಹುದೆಂತಲೂ ಕಾಣುತ್ತದೆ

Vನೇ ಅಧ್ಯಾಯ.

ದೇಹಾಧಾರಭೂತವಾದ ದೋಷಧಾತುಗಳ ವಿಚಾರ.

1. ಕಫ ಪಿತ್ತವಾಯುಗಳು ಚಂದ್ರಸೂರ್ಯನಾಯುಗಳಿಗೆ ಸದೃತ

ವಿಸರ್ಗಾದಾನವಿಕ್ಷೇಪೈಃ ಸೋಮಸೂರ್ಯಾನಿಲಾ ಯಥಾ ।
ಧಾರಯಂತಿ ಜಗದ್ದೇಹಂ ಕಫಪಿತ್ತಾನಿಲಾಸ್ತಥಾ ॥
(ಸು. 82.)

ಬಿಡುವದು ಅಥವಾ ಕೊಡುವದು (ರಸಾದಿಗಳ ವೃದ್ಧಿಯಿಂದ ಬಲಕೊಡುವದು), ಎಳೆಕೊಳ್ಳುವದು (ರಸಾದಿಗಳನ್ನು ತೆಗೆದುಕೊಂಡು ಬಲವನ್ನು ಕ್ಷಯಿಸುವದು), ಪಸರಿಸುವದು (ಪ್ರೇರಣ), ಈ ಗುಣಗಳಿಂದ ಕ್ರಮವಾಗಿ ಚಂದ್ರಸೂರ್ಯರು ಮತ್ತು ವಾಯುವು ಈ ಜಗತ್ತನ್ನು ಹ್ಯಾಗೆ ಆಧರಿಸುತ್ತಾರೋ, ಹಾಗೆಯೇ ಕಫ-ಪಿತ್ತ-ವಾಯುಗಳು ಈ ದೇಹವನ್ನು ಆಧರಿಸುತ್ತವೆ

2 ದೇಹದ ಉತ್ಪತ್ತಿ ಸ್ಥಿತಿ ಲಯಗಳು ವಾತ ಪಿತ್ತ ಕಫಗಳಿಂದ

ವಾತಪಿತ್ತಶ್ಲೇಷ್ಮಾಣ ಏವ ದೇಹಸಂಭವಹೇತವಃ । ತೈರೇವಾವ್ಯಾಪನ್ನೈರಧೋಮಧ್ಯೋರ್ಧ್ವಸನ್ನಿವಿಷ್ಟೈಃ ಶರೀರಮಿದಂ ಧಾರ್ಯತೇ ಗಾರಮಿವ ಸ್ಥೂಣಾಭಿಸ್ತಿಸ್ಭಿರತಶ್ಚ ತ್ರಿಸ್ಥೂಣಮಾಹುರೇಕೇ । ತ ಏವ ಚ ವ್ಯಾಪನ್ನಾಃ ಪ್ರಲಯಹೇತವಸ್ತದೇಭಿರೇವ ಶೋಣಿತಚತುರ್ಥೈಃ ಸಂಭವಸ್ಥಿತಿಪ್ರಲಯೇಷ್ವವ್ಯವಿರಹಿತಂ ಶರೀರಂ ಭವತಿ ।

ನತೇರ್ ದೇಹಃ ಕಫಾದಸ್ತಿ ನ ಪಿತ್ತಾನ್ನ ಚ ಮಾರುತಾತ್ ।
ಶೋಣಿತಾದಪಿವಾನಿತ್ಯಂ ದೇಹ ಏತೈಸ್ತು ಧಾರ್ಯತೇ ॥ (ಸು. 81.)

ವಾತ-ಪಿತ್ತ-ಕಫಗಳೇ ಈ ದೇಹಸಂಭವಕ್ಕೆ ಹೇತುಗಳು. ವಾತವು ಶರೀರದ ಕೆಳಗಿನ ಭಾಗದಲ್ಲಿ, ಪಿತ್ತವು ಮಧ್ಯಭಾಗದಲ್ಲಿ, ಕಫವು ಮೇಲಿನ ಭಾಗದಲ್ಲಿ, ಹೀಗೆ ನಿಂತಿರುವ ಅವು (ದೋಷಗಳು) ಕೆಡದೆ ಸಹಜಸ್ಥಿತಿಯಲ್ಲಿರುವಾಗ, ಮನೆಗೆ ಮೂರು ಕಂಬಗಳಂತೆ ಈ ಶರೀರವನ್ನು ಆಧರಿಸುತ್ತವೆ ಆದ್ದರಿಂದ ಕೆಲವರು ಈ ದೇಹವು ಮೂರು ಕಂಬಗಳುಳ್ಳ ಮನೆಯೆಂತ ಹೇಳುತ್ತಾರೆ. ಆ ದೋಷಗಳೇ ಕೆಟ್ಟಾಗ, ದೇಹನಾಶನಕ್ಕೆ ಹೇತುಗಳಾಗುತ್ತವೆ. ಈ ದೋಷಗಳು ಮೂರು ಮತ್ತು ರಕ್ತ, ಇವು ನಾಲ್ಕರಿಂದ ಈ ದೇಹವು ಉತ್ಪತ್ತಿಯಲ್ಲಿಯೂ, ಸ್ಥಿತಿಯಲ್ಲಿಯೂ, ಲಯದಲ್ಲಿಯೂ, ವಿರಹಿತವಾಗುವದಿಲ್ಲ. ಕಫವೂ, ಪಿತ್ತವೂ, ವಾತವೂ, ರಕ್ತವೂ, ಇಲ್ಲದೆ ದೇಹ ಇಲ್ಲ. ಸದಾಕಾಲದಲ್ಲಿಯೂ ಈ ನಾಲ್ಕರಿಂದ ದೇಹವು ಆಧರಿಸಲ್ಪಟ್ಟದೆ.

3. ವಾತ-ಪಿತ್ತ-ಕಫಗಳನ್ನು ಏಕ್ಕು ದೇಹದಲ್ಲಿ ರೋಗಗಳು ಹುಟ್ಟುವವಿಲ್ಲ

ಸರ್ವ ಏವ ನಿಜವಿಕಾರಾ ನಾನ್ಯತ್ರ ವಾತಪಿತ್ತಕಫೇಭ್ಯೋ ನಿವರ್ತಂತೇ । ಯಥಾ ಶಕುನಿಃ ಸರ್ವಾಂ ದಿಶಮಪಿ ಪರಿಪತನ್ ಸ್ವಾಂ ಛಾಯಾಂ ನಾತಿವರ್ತತೇ ತಥಾ ಸ್ವಧಾತುವೈಷಮ್ಯನಿಮಿತ್ತಾಃ ಸರ್ವವಿಕಾರಾ ವಾತಪಿತ್ತಕಫಾನ್ನಾತಿವರ್ತಂತೇ । (ಚ. 109.)

ದೇಹದಲ್ಲಿ ಹುಟ್ಟುವ ಸರ್ವರೋಗಗಳೂ ವಾತ-ಪಿತ್ತ-ಕಫಗಳನ್ನು ಬಿಟ್ಟು ಇರುವದಿಲ್ಲ. ಪಕ್ಷಿಯು ಸರ್ವ ದಿಕ್ಕುಗಳಲ್ಲಿ ಹಾರುವಾಗಲೂ, ತನ್ನ ನೆರಳನ್ನು ದಾಟಿಹೋಗುವದಿಲ್ಲ ಹ್ಯಾಗೋ, ಹಾಗೆಯೇ ಆಯಾ ಧಾತುವಿಷಮವಾಗುವ ದೆಸೆಯಿಂದ ಹುಟ್ಟುವ ರೋಗ ಗಳೆಲ್ಲಾ ವಾತ-ಪಿತ್ತ-ಕಪಗಳನ್ನು ಮಿಕ್ಕಿರುವದಿಲ್ಲ

4. ಸರ್ವ ಏವ ಖಲು ವಾತಪಿತ್ತಶ್ಲೇಷ್ಮಾಣಃ ಪ್ರಕೃತಿಭೂತಾಃ ಪುರುಷ
ಮವ್ಯಾಪನ್ನೇಂದ್ರಿಯಂ ಬಲವರ್ಣಸುಖೋಪಪನ್ನಮಾಯುಷಾ ಮಹ
ವಾತ-ಪಿತ್ತ-ಕಫ ತೋಪಪಾದಯಂತಿ | ಸಮ್ಯಗೇವಾಚರಿತಾ ಧರ್ಮಾರ್ಥಕಾಮಾ
ಗಳೇ ಮನುಷ್ಯನ ನಿಃಶ್ರೇಯಸೇನ ಮಹತಾ ಉಪಪಾದಯಂತಿ ಪುರುಷಮಿಹ ಚಾಮು
ಸುಖದುಃಖಗಳಿಗೆ ಷ್ಮಿಂಶ್ಚ ಲೋಕೇ | ವಿಕೃತಾಸ್ತ್ವೇನಂ ಮಹತಾ ವಿಪರ್ಯಯೇಣೋಪ
ಹೇತು ಪಾದಯಂತಿ | (ಚ. 67.)

ಈ ವಾತ ಪಿತ್ತ ಶ್ಲೇಷ್ಮಗಳೆಲ್ಲಾ ತಮ್ಮ ಸ್ವಸ್ಥಸ್ಥಿತಿಯಲ್ಲಿದ್ದರೆ ಪುರುಷನ ಸಕಲ ಇಂದ್ರಿಯ ಗಳನ್ನು ಕೆಡದಂತೆ ಕಾಪಾಡಿ, ಅವನಿಗೆ ಬಲವರ್ಣಸುಖಗಳನ್ನೂ, ದೀರ್ಘಾಯುಷ್ಯವನ್ನೂ ಪ್ರಾಪಿಸುತ್ತವೆ, ಮತ್ತು ಧರ್ಮ, ಅರ್ಥ, ಕಾಮಗಳನ್ನು ಸರಿಯಾಗಿಯೇ ಆಚರಿಸಿದ್ದಲ್ಲಿ, ಅವು ಗಳಿಂದ ಪುರುಷನಿಗೆ ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ, ಮಹತ್ತಾದ ಶ್ರೇಯಸ್ಸು ಉಂಟಾಗುತ್ತದೆ. ಆದರೆ ಆ ವಾತ-ಪಿತ್ತ-ಕಫಗಳು, ವಿಕಾರ ಹೊಂದಿದರೆ, ಆ ಪುರುಷನಿಗೆ ಮಹತ್ತಾದ ಸಂಕಷ್ಟವನ್ನು ಹೊಂದಿಸುತ್ತವೆ.

5 ತತ್ರ ಸಮಾಸೇನ ವಾತಃ ಶ್ರೋಣಿಗುದಸಂಶ್ರಯಃ | ಶ್ರೋಣಿ
ದೋಷಗಳ ಮುಖ್ಯಾಶ್ರಯ ಗುದಯೋರುಪರ್ಯಧೋ ನಾಭೇಃ ಪಕ್ವಾಶಯಃ ಪಕ್ವಾಮಾಶಯ
ಸ್ಥಾನಗಳು ಮಧ್ಯಂ ಪಿತ್ತಸ್ಯ | ಆಮಾಶಯಃ ಶ್ಲೇಷ್ಮಣಃ | (ಸು. 81-82.)

ಸಂಕ್ಷೇಪವಾಗಿ ಹೇಳುವದಾದರೆ ವಾತವು ಶ್ರೋಣಿಯನ್ನು ಮತ್ತು ಗುದವನ್ನು ಆಶ್ರಯಿ ಸಿರುತ್ತದೆ. ಶ್ರೋಣಿ ಮತ್ತು ಗುದಗಳಿಗೆ ಮೇಲೆ ಹೊಕ್ಕುಳಿಗ ಕೆಳಗೆ ಪಕ್ವಾಶಯವಿದೆ. ಆ ಪಕ್ವಾಶಯಕ್ಕೂ ಆಮಾಶಯಕ್ಕೂ ಮಧ್ಯ ಪಿತ್ತಕ್ಕೆ ಸ್ಥಾನ. ಕಫಕ್ಕೆ ಆಮಾಶಯವು ಸ್ಥಾನ.

6. ಸ್ವಯಂಭೂರೇಷ ಭಗವಾನ್ ವಾಯುರಿತ್ಯಭಿಶಬ್ದಿತಃ |
ಸ್ವಾತಂತ್ರ್ಯಾನ್ನಿತ್ಯಭಾವಾಚ್ಚ ಸರ್ವಗತ್ವಾತ್ತಥೈವ ಚ ||
ಸರ್ವೇಷಾಮೇವ ಸರ್ವಾತ್ಮಾ ಸರ್ವಲೋಕನಮಸ್ಕೃತಃ |
ವಾತಪ್ರಶಂಸಾ ಸ್ಥಿತ್ಯುತ್ಪತ್ತಿವಿನಾಶೇಷು ಭೂತಾನಾಮೇಷ ಕಾರಣಂ ||
ಮತ್ತು ಪಂಚ ಅವ್ಯಕ್ತೋ ವ್ಯಕ್ತಕರ್ಮಾ ಚ ರೂಕ್ಷಃ ಶೀತೋ ಲಘುಃ ಖರಃ |
ವಿಧವಾದ ತಿರ್ಯಗ್ಗೋ ದ್ವಿಗುಣಶ್ಚೈವ ರಜೋಬಹುಲ ಏವ ಚ ||
ವಾಯುವಿನ ಅಚಿಂತ್ಯವೀರ್ಯೋ ದೋಷಾಣಾಂ ನೇತಾ ರೋಗಸಮೂಹರಾಟ್ |
ಸ್ಥಾನ ಮತ್ತು ಕೆಲಸಗಳು ಆಶುಕಾರೀ ಮುಹುಶ್ಚಾರೀ ಪಕ್ವಾಧಾನಗುದಾಲಯಃ |
ದೇಹೇ ವಿಚರತಸ್ತಸ್ಯ ಲಕ್ಷಣಾನಿ ನಿಬೋಧ ಮೇ |

ದೋಷಧಾತ್ವಗ್ನಿಸಮತಾಂ ಸಂಪ್ರಾಪ್ತಿಂ ವಿಷಯೇಷು ಚ ||
ಕ್ರಿಯಾಣಾಮಾನುಲೋಮ್ಯಂ ಚ ಕರೋತ್ಯಕುಪಿತೋಽನಿಲಃ |
ಯಥಾಗ್ನಿಃ ಪಂಚಧಾ ಭಿನ್ನೋ ನಾಮಸ್ಥಾನಾತ್ಮಕರ್ಮಭಿಃ ||
ಭಿನ್ನೋಽನಿಲಸ್ತಥಾ ಹ್ಯೇಕೋ ನಾಮಸ್ಥಾನಕ್ರಿಯಾಮಯೈಃ |
ಪ್ರಾಣೋದಾನೌ ಸಮಾನಶ್ಚ ವ್ಯಾನಶ್ಚಾಪಾನ ಏವ ಚ ||
ಸ್ಥಾನಸ್ಥಾ ಮಾರುತಾಃ ಪಂಚ ಯಾಪಯಂತಿ ಶರೀರಿಣಂ |
ವಾಯುರ್ಯೋ ವಕ್ತ್ರಸಂಚಾರೀ ಸ ಪ್ರಾಣೋ ನಾಮ ದೇಹಧೃಕ್ ||
ಸೋಽನ್ನಂ ಪ್ರವೇಶಯತ್ಯಂತಃ ಪ್ರಾಣಾಂಶ್ಚಾಪ್ಯವಲಂಬತೇ |
ಪ್ರಾಯಶಃ ಕುರುತೇ ದುಷ್ಟೋ ಹಿಕ್ಕಾಶ್ವಾಸಾದಿಕಾನ್ ಗದಾನ್ ||
ಉದಾನೋ ನಾಮ ಯಸ್ಊರ್ಧ್ವಮುಪೈತಿ ಪವನೋತ್ತಮಃ |
ತೇನ ಭಾಷಿತಗೀತಾದಿವಿಶೇಷೋಽಭಿಪ್ರವರ್ತತೇ ||
ಊರ್ಧ್ವಜತ್ರುಗತಾನ್ರೋಗಾನ್ಕರೋತಿ ಚ ವಿಶೇಷತಃ |
ಆಮಪಕ್ವಾಶಯಚರಃ ಸಮಾನೋ ವಹ್ನಿಸಂಗತಃ ||
ಸೋಽನ್ನಂ ಪಚತಿ ತಜ್ಜಾಂಶ್ಚ ವಿಶೇಷಾನ್ವಿವಿನಕ್ತಿ ಹಿ |
ಗುಲ್ಮಾಗ್ನಿಸಂಗಾತೀಸಾರಪ್ರಭೃತೀನ್ಕುರುತೇ ಗದಾನ್ ||
ಕೃತ್ಸ್ನದೇಹಚರೋ ವ್ಯಾನೋ ರಸಸಂವಹನೋದ್ಯತಃ |
ಸ್ವೇದಾಸೃಕ್ಸ್ರವಣೋ ವಾಪಿ ಪಂಚಧಾ ಚೇಷ್ಟಯತ್ಯಪಿ ||
ಕ್ರುದ್ಧಶ್ಚ ಕುರುತೇ ರೋಗಾನ್ವ್ಯಾಯಶಃ ಸರ್ವದೇಹಗಾನ್ |
ಪಕ್ವಾಧಾನಾಲಯೋಽಪಾನಃ ಕಾಲೇ ಕರ್ಷತಿ ಚಾಪ್ಯಯಂ ||
ಸವಿಾರಣಃ ಸಕೃನ್ಮೂತ್ರಶುಕ್ರಗರ್ಭಾರ್ತವಾನ್ಯಧಃ |
ಕ್ರುದ್ಧಶ್ಚ ಕುರುತೇ ರೋಗಾನ್ಘೋರಾನ್ವಸ್ತಿಗುದಾಶ್ರಯಾನ್ ||
ಶುಕ್ರದೋಷಪ್ರಮೇಹಾಸ್ತು ವ್ಯಾನಾಪಾನಪ್ರಕೋಪಜಾಃ |
ಯುಗಪತ್ಕುಪಿತಾಶ್ಚಾಪಿ ದೇಹಂ ಭಿಂದ್ಯುರಸಂಶಯಂ || (ಸು. 243-44.)

ಈ ವಾಯುವು ಸ್ವತಂತ್ರಿಕನಾದ್ದರಿಂದಲೂ, ನಿತ್ಯನಾದ್ದರಿಂದಲೂ, ಸರ್ವವ್ಯಾಪಕನಾದ್ದರಿಂದಲೂ, ಅವನಿಗೆ ಭಗವಂತನಾದ ಸ್ವಯಂಭು ಎಂಬ ಖ್ಯಾತಿ ಉಂಟು. ಸರ್ವ ಸ್ಥಾವರ ಜಂಗಮವಸ್ತುಗಳಲ್ಲಿಯೂ ಸರ್ವಾತ್ಮಕನಾಗಿ (ಸರ್ವ ಕಾರಣಕಾರ್ಯಗಳಿಗೆ ಆತ್ಮನಾಗಿ) ಸರ್ವ ಲೋಕ ಪೂಜಿತನಾಗಿದ್ದಾನೆ, ಭೂತಗಳ ಸ್ಥಿತಿ, ಉತ್ಪತ್ತಿ, ನಾಶಗಳಿಗೆ ಇವನು ಕಾರಣನು, ಅವ್ಯಕ್ತ (ಅದೃಶ್ಯ)ನಾದಾಗ್ಯೂ ವ್ಯಕ್ತವಾದ (ಪ್ರಕಟವಾದ) ಕರ್ಮ ಮಾಡತಕ್ಕವನು. ಇವನು ರೂಕ್ಷ, ಶೀತ, ಲಘು, ಖರ, ಈ ಗುಣಗಳುಳ್ಳವನು, ಅಡ್ಡವಾಗಿ ಚಲಿಸುವವನು, ದ್ವಿಗುಣನು (ಶಬ್ದಸ್ಪರ್ಶಗುಣಗಳೆರಡುಳ್ಳವನು), ರಜೋಗುಣ ಹೆಚ್ಚಾಗುಳ್ಳವನು, ನೆನಸಕೂಡದ ಶಕ್ತಿಯುಳ್ಳವನು, ದೋಷಗಳಿಗೆ ನಾಯಕನು, ಮತ್ತು ರೋಗಸಮೂಹದಲ್ಲಿ ಶೋಭಿಸುವವನು ಆಗಿದ್ದಾನೆ. ಪದೇ ಪದೇ ಚಲಿಸತಕ್ಕ

ಮತ್ತು ಕ್ಷಿಪ್ರಕೆಲಸಮಾಡತಕ್ಕ ಗುಣಗಳುಳ್ಳವನಾಗಿ, ಪಕ್ವಾಶಯಗುದಗಳನ್ನು ಮನೆಯನ್ನಾಗಿ ಮಾಡಿಕೊಂಡು ಇರುತ್ತಾನೆ ದೇಹದಲ್ಲಿ ಸಂಚರಿಸುತ್ತಿರುವ ಆ ವಾಯುವಿನ ಲಕ್ಷಣಗಳನ್ನು ನಾನು ಹೇಳುವದನ್ನು ಕೇಳು. ಕೋಪಗೊಳ್ಳದ ವಾಯುವು, ದೋಷಗಳ, ಧಾತುಗಳ ಮತ್ತು ಅಗ್ನಿಯ ಸಮತ್ವವನ್ನೂ, (ಶಬ್ದಾದಿ) ವಿಷಯಗಳಲ್ಲಿ ಒಳ್ಳೇ ಪ್ರಾಪ್ತಿಯನ್ನೂ, ಕ್ರಿಯೆಗಳ ಕ್ರಮವಾದ ಪ್ರವೃತ್ತಿಯನ್ನೂ ಮಾಡುತ್ತದೆ ಅಗ್ನಿಯು ಹ್ಯಾಗೆ ಹೆಸರು, ಸ್ಥಾನ, ಮತ್ತು ಕರ್ಮಗಳ ಮೇಲೆ ಐದು ವಿಧವಾಗಿ ಭಿನ್ನವಾಗಿದೆಯೋ ಹಾಗೆಯೇ ಒಂದೇಯಾದ ವಾಯುವಿನಲ್ಲಿ ಹೆಸರು, ಸ್ಥಾನ, ಕ್ರಿಯೆ ಮತ್ತು ವಿಕಾರಗಳಿಂದ ಐದು ಭೇದಗಳಾಗಿವೆ. ಪ್ರಾಣ, ಉದಾನ, ಸಮಾನ, ವ್ಯಾನ, ಅಪಾನ ಎಂಬ ಐದು ವಾಯುಗಳು ತಮ್ಮ ತಮ್ಮ ಸ್ಥಾನಗಳಲ್ಲಿದ್ದು, ದೇಹಿಯನ್ನು ಆಧರಿಸುತ್ತವೆ ಬಾಯಿಯಲ್ಲಿ ಸಂಚರಿಸುವ ವಾಯುವೇ ಪ್ರಾಣ, ಅದು ದೇಹವನ್ನು ಧರಿಸುತ್ತದೆ, ಅನ್ನವನ್ನು ಒಳಗೆ ಪ್ರವೇಶಮಾಡಿಸುತ್ತದೆ, ಮತ್ತು ಅದರ ಮೇಲೆ ಪ್ರಾಣಗಳು (ಪ್ರಾಣಸ್ಥಾನಗಳು) ಹೊಂದಿರುತ್ತವೆ, ಮತ್ತು ಆ ಪ್ರಾಣ ವಾಯುವು ಕೆಟ್ಟರೆ, ಹೆಚ್ಚಾಗಿ ಬಿಕ್ಕಟ್ಟು, ಉಬ್ಬಸ ಮುಂತಾದ ರೋಗಗಳನ್ನುಂಟುಮಾಡುತ್ತದೆ. ಉದಾನ ಎಂಬುದು ಮೇಲಕ್ಕೆ ಬರುವ ಉತ್ತಮವಾದ ವಾಯು; ಅದರಿಂದ ಮಾತು, ಗಾನಾದಿ ವಿಶೇಷಗಳು ನಡೆಯುತ್ತವೆ, ಅದು (ಕೆಟ್ಟರೆ) ವಿಶೇಷವಾಗಿ ಕುತ್ತಿಗೆ ಮೇಲಿನ ರೋಗಗಳನ್ನುಂಟುಮಾಡುತ್ತದೆ. ಆಮಾಶಯ ಪಕ್ವಾಶಯಗಳಲ್ಲಿ ಸಂಚರಿಸುವ ವಾಯುವು ಸಮಾನ. ಅದು ಅಗ್ನಿಯಿಂದ ಕೂಡಿಕೊಂಡು, ಅನ್ನವನ್ನು ಪಚನ ಮಾಡಿ, ಅದರಿಂದ ಹುಟ್ಟಿದ (ರಸಮಲಾದಿ) ವಿಶೇಷಗಳನ್ನು ಪ್ರತ್ಯೇಕಿಸುತ್ತದೆ. ಮತ್ತು ಅದು (ಕೆಟ್ಟರೆ) ಗುಲ್ಮ, ಅಗ್ನಿಮಾಂದ್ಯ, ಅತಿಸಾರ, ಮುಂತಾದ ರೋಗಗಳನ್ನುಂಟುಮಾಡುತ್ತದೆ. ವ್ಯಾನ ಎಂಬ ವಾಯುವು ರಸವನ್ನು ಸಾಗಿಸುವ ಕೆಲಸವನ್ನು ಹಿಡಕೊಂಡು, ಇಡಿ ದೇಹವನ್ನು ಸಂಚರಿಸುತ್ತದೆ, ಬೆವರನ್ನೂ ರಕ್ತವನ್ನೂ ಸ್ರವಿಸತಕ್ಕಂಥಾದ್ದು ಮತ್ತು ಪಂಚವಿಧವಾದ ಅಂಗಚೇಷ್ಟೆಗಳನ್ನು ನಡಿಸುತ್ತದೆ, ಮತ್ತು ಅದು ಸಿಟ್ಟುಗೊಂಡರೆ, ಹೆಚ್ಚಾಗಿ ಇಡೀ ದೇಹವ್ಯಾಪಿಯಾದ ರೋಗಗಳನ್ನುಂಟುಮಾಡುತ್ತದೆ. ಅಪಾನವಾಯುವಿಗೆ ಮನೆಯು ಪಕ್ವಾಶಯ; ಈ ವಾಯುವು ಆಯಾ ಕಾಲಗಳಲ್ಲಿ ಮಲ, ಮೂತ್ರ, ಶುಕ್ರ, ಗರ್ಭ, ಶೋಣಿತ, ಇವುಗಳನ್ನು ಕೆಳಗೆ ದೂಡುತ್ತದೆ; ಕೆಟ್ಟಾಗ್ಗೆ, ವಸ್ತಿ ಮತ್ತು ಗುದ ಇವುಗಳನ್ನು ಆಶ್ರಯಿಸಿದ ಘೋರವಾದ ರೋಗಗಳನ್ನುಂಟುಮಾಡುತ್ತದೆ. ಶುಕ್ರದೋಷ ಮತ್ತು ಪ್ರಮೇಹಗಳು ವ್ಯಾನಾಪಾನ ವಾಯುಗಳೆರಡರ ಪ್ರಕೋಪದಿಂದ ಉಂಟಾಗುವಂಥವು ಐದು ವಾಯುಗಳೂ ಒಂದೇ ಸಾರಿ ಕೋಪಗೊಂಡರೆ, ನಿಃಸಂಶಯವಾಗಿ ದೇಹವನ್ನು ನಾಶಮಾಡುವವು

7. ರೋಗಗಳೊಳಗೆ ಸಾಮಾನ್ಯಜನಾನಾತ್ಮಜ ಎಂಬ ಭೇದ

तत्र विकाराः सामान्यजा नानात्मजाश्च । (ज. 110.)

ವಾತ ಪಿತ್ತ ಶ್ಲೇಷ್ಮಗಳಿಂದ ಹುಟ್ಟುವ ವಿಕಾರಗಳೊಳಗೆ ಸಾಮಾನ್ಯವಾದವೆಂತಲೂ, ಪ್ರತ್ಯೇಕ ಅವುಗಳಿಂದ ಹುಟ್ಟಿದವು ಎಂತಲೂ ಎರಡು ವಿಧ.

(नानात्मजाः) अशीतिर्वातविकाराः चत्वारिंशत्पित्तविकाराः विंशतिः श्लेष्मविकाराः । (ज. 110.)

ಎರಡನೇ (ವಾತ ಪಿತ್ತ ಕಫಗಳಿಂದ ಪ್ರತ್ಯೇಕವಾಗಿ ಹುಟ್ಟಿದವು ಎಂಬ) ವಿಭಾಗದಲ್ಲಿ 80 ವಾತವಿಕಾರಗಳೂ, 40 ಪಿತ್ತವಿಕಾರಗಳೂ, 20 ಕಫವಿಕಾರಗಳೂ ಸೇರಿವೆ.

ವಾತಮೂಲವಾದ 80 ರೋಗಗಳ ಹೆಸರು

8 ತತ್ರಾದೌ ವಾತವಿಕಾರಾನನುವ್ಯಾಖ್ಯಾಸ್ಯಾಮಃ | ತದ್ಯಥಾ |

80 ವಾತವಿಕಾರಗಳು ಯಾವವೆಂದರೆ —

1. ನಖಭೇದ(ಶ್ಚ) 2. ವಿಪಾದಿಕಾ (ಚ). 3. ಪಾದಶೂಲಂ (ಚ). 4. ಪಾದಭ್ರಂಶ (ಶ್ಚ). 5. ಸುಪ್ತಪಾದತಾ (ಚ). 6 ವಾತಖುಂಡತಾ (ಚ) 7. ಗುಲ್ಫಗ್ರಹ(ಶ್ಚ) 8. ಪಿಂಡಿಕೋದ್ವೇಷ್ಟನಂ (ಚ) 9. ಗೃಧ್ರಸೀ (ಚ) 10. ಜಾನುಭೇದ(ಶ್ಚ). 11. ಜಾನು ವಿಶ್ಲೇಷ(ಶ್ಚ). 12. ಊರುಸ್ತಂಭ(ಶ್ಚ). 13. ಊರುಸಾದ(ಶ್ಚ) 14. ವಾಂಗುಲ್ಯಂ (ಚ) 15. ಗುದಭ್ರಂಶ(ಶ್ಚ). 16 ಗುದಾರ್ತಿ(ಶ್ಚ) 17. ವೃಷಣೋತ್ಕ್ಷೇಪ(ಶ್ಚ). 18. ಶೇಫಸ್ತಂಭ(ಶ್ಚ) 19 ವಂಕ್ಷಣಾನಾಹ(ಶ್ಚ). 20. ಶ್ರೋಣಿಭೇದ(ಶ್ಚ) 21. ವಿಡ್ಭೇದ(ಶ್ಚ) 22. ಉದಾವರ್ತ(ಶ್ಚ). 23. ಖಂಜತ್ವಂ (ಚ). 24. ಕುಬ್ಜತ್ವಂ (ಚ). 25. ವಾಮನತ್ವಂ (ಚ). 26. ತ್ರಿಕಗ್ರಹ(ಶ್ಚ) 27. ಪೃಷ್ಠಗ್ರಹ(ಶ್ಚ) 28. ಪಾರ್ಶ್ವಾವಮರ್ದ(ಶ್ಚ). 29. ಉದರವೇಷ್ಟ(ಶ್ಚ). 30. ಹೃನ್ಮೋಹ(ಶ್ಚ) 31. ಹೃದ್ದ್ರವ(ಶ್ಚ). 32. ವಕ್ಷ ಉಪರೋಧ(ಶ್ಚ). 33. ವಕ್ಷ ಉದ್ಧರ್ಷ(ಶ್ಚ). 34. ಬಾಹುಶೋಷ(ಶ್ಚ). 35. ಗ್ರೀವಾಸ್ತಂಭ(ಶ್ಚ). 36. ಮನ್ಯಾಸ್ತಂಭ(ಶ್ಚ) 37. ಕಂರೋಧ್ವಂಸ(ಶ್ಚ) 38. ಹನುಸ್ತಂಭ(ಶ್ಚ) 39 ಓಷ್ಠಭೇದ(ಶ್ಚ). 40. ದಂತಭೇದ(ಶ್ಚ). 41. ದಂತಶೈಥಿಲ್ಯಂ (ಚ). 42. ಮೂಕತ್ವಂ (ಚ). 43. ವಾಕ್ಸಂಗ(ಶ್ಚ). 44. ಕಷಾಯಾಸ್ಯತಾ (ಚ). 45 ಮುಖಶೋಷ(ಶ್ಚ). 46 ಅರಸಜ್ಞತಾ (ಚ) 47. ಘ್ರಾಣನಾಶ(ಶ್ಚ). 48. ಕರ್ಣಶೂಲಂ(ಚ). 49. ಅಶಬ್ದಶ್ರವಣಂ (ಚ). 50. ಉಚ್ಚೈಃಶ್ರುತಿ(ಶ್ಚ). 51 ಬಾಧಿರ್ಯಂ (ಚ). 52. ವರ್ತ್ಮಸ್ತಂಭ(ಶ್ಚ). 53. ವರ್ತ್ಮಸಂಕೋಚ(ಶ್ಚ). 54. ತಿಮಿರ(ಶ್ಚ) 55. ಅಕ್ಷಿಶೂಲಂ (ಚ). 56 ಅಕ್ಷಿವ್ಯುದಾಸ(ಶ್ಚ) 57. ಭ್ರೂವ್ಯುದಾಸ(ಶ್ಚ). 58. ಶಂಖಭೇದ(ಶ್ಚ). 59. ಲಲಾಟಭೇದ(ಶ್ಚ). 60. ಶಿರೋರುಕ್ (ಚ). 61. ಕೇಶಭೂಮಿಸ್ಫುಟನಂ (ಚ). 62. ಅರ್ದಿತಂ (ಚ). 63. ಏಕಾಂಗರೋಗ(ಶ್ಚ). 64. ಸರ್ವಾಂಗರೋಗ(ಶ್ಚ). 65. ಪಕ್ಷ್ಮವಧ(ಶ್ಚ). 66. ಅಕ್ಷೇಪಕ(ಶ್ಚ). 67. ದಂಡಕ(ಶ್ಚ). 68. ಶ್ರಮ(ಶ್ಚ). 69. ಭ್ರಮ (ಶ್ಚ). 70. ವೇಪಥು(ಶ್ಚ). 71. ಜೃಂಭಾ (ಚ). 72. ವಿಷಾದ(ಶ್ಚ). 73. ಅತಿಪ್ರಲಾಪ(ಶ್ಚ). 74. ಗ್ಲಾನಿ(ಶ್ಚ). 75. ರೌಕ್ಷ್ಯಂ (ಚ) 76. ವಾರುಷ್ಯಂ (ಚ). 77., 78. ಶ್ಯಾವಾರುಣಭಾಸತಾ (ಚ). 79. ಅಸ್ವಪ್ನ(ಶ್ಚ) 80. ಅನವಸ್ಥಿತತ್ವಂ (ಚ) (ಚ. 110—11.)

9. ವಾತವಿಕಾರಾಣಾಮಪರಿಸಂಖ್ಯೇಯಾನಾಮಾವಿಷ್ಕೃತತಮಾ ವ್ಯಾಖ್ಯಾತಾಃ | ಸರ್ವೇಷ್ವಪಿ ಖಲ್ವೇತೇಷು ವಾತವಿಕಾರೇಷು ಅನ್ಯೇಷು ಚಾನು

ವಾತವಿಕಾರಗಳನ್ನು ಗೊತ್ತುಮಾಡುವ ರೀತಿ

ಕ್ತೇಷು ವಾಯೋರಿದಮಾತ್ಮರೂಪಮಪರಿಣಾಮಿ ಕರ್ಮಣಶ್ಚ ಸ್ವಲಕ್ಷಣಂ ಯದುಪಲಭ್ಯ ತದವಯವಂ ವಾ ವಿಮುಕ್ತಸಂದೇಹಾ ವಾತವಿಕಾರಮೇವಾಧ್ಯವಸ್ಯಂತಿ ಕುಶಲಾಃ | (ಚ. 111)

ಅಸಂಖ್ಯೇಯವಾದ ವಾತವಿಕಾರಗಳಲ್ಲಿ ಅತಿ ವಿಶೇಷವಾಗಿ ಕಾಣಿಸಿಕೊಳ್ಳುವವುಗಳನ್ನು ವರ್ಣಿಸಿದೆವು ಈ ಎಲ್ಲಾ ವಾತವಿಕಾರಗಳಲ್ಲಿಯೂ, ಇಲ್ಲಿ ನಮೂದಿಸಲ್ಪಡದ ಬೇರೆ ವಾತ ವಿಕಾರಗಳಲ್ಲಿಯೂ ವಾಯುವಿನ ಬದಲದ ನಿಜರೂಪವು ಇಂಥಾದ್ದು, ಅದು ಆಯಾ ಅವ ಯವವನ್ನು ಹಿಡಕೊಂಡು ಮಾಡುವ ಕೆಲಸದ ನಿಜಲಕ್ಷಣಗಳು ಇಂಥವು, ಎಂಬದನ್ನು ತಿಳಿದು ಬುದ್ಧಿವಂತರು ನಿಃಸಂದೇಹವಾಗಿ ವಾತವಿಕಾರವನ್ನು ಗೊತ್ತುಮಾಡುತ್ತಾರೆ.

10. ತದ್ಯಥಾ | ರೌಕ್ಷ್ಯಂ ಲಾಘವಂ ವೈಶದ್ಯಂ ಶೈತ್ಯಂ ಗತಿರಮೂರ್ತತ್ವಂ ಚೇತಿ ವಾಯೋರಾತ್ಮರೂಪಾಣಿ | ಏವಂ ವಿಧತ್ವಾಚ್ಚ ಕರ್ಮಣಶ್ಚ ಸ್ವಲಕ್ಷಣಮಿದಮಸ್ಯ ಭವತಿ ತಂ ತಂ ಶರೀರಾವಯವಮಾವಿಶತಃ ಸ್ರಂಸಭ್ರಂಶ-ವ್ಯಾಸಾಂಗಭೇದ-ಸಾದ-ಹರ್ಷ-ತರ್ಷಾವರ್ತ-ಮರ್ದ-ಕಂಪ-ಚಾಲ-ತೋದ-ವ್ಯಧ-ವೇಷ್ಟ-ಭಂಗಾಸ್ತಥಾ ಖರ-ಪರುಷ-ವಿಶದ-ಸುಷಿರ-ತಾರುಣ-ಕಷಾಯ-ವಿರಸತಾ-ಶೋಷ-ಶೂಲ-ಸುಪ್ತಿ-ಸಂಕುಚನ-ಸ್ತಂಭನಾನಿ ವಾಯೋಃ ಕರ್ಮಾಣಿ ತೈರನ್ವಿತಂ ವಾತವಿಕಾರಮೇವಾಧ್ಯವಸ್ಯೇತ್ | (ಚ 111.)

ವಾಯುವಿನ ರೂಪ ಮತ್ತು ಕರ್ಮ

ಹ್ಯಾಗೆಂದರೆ — ರೂಕ್ಷತ್ವ, ಲಘುತ್ವ, ವಿಶದತ್ವ, ಶೈತ್ಯ, ಚಲನೆ, ಮತ್ತು ರೂಪವಿಲ್ಲದಿರೋಣ, ಇವು ವಾಯುವಿನ ನಿಜರೂಪಗಳು, ಹೀಗಿರುವದರಿಂದ ವಾಯುವಿನ ಕೆಲಸದ ನಿಜಲಕ್ಷಣ ಹ್ಯಾಗಾಗುವದೆಂದರೆ — ಶರೀರದ ಆಯಾ ಅವಯವವನ್ನು ಹೊಕ್ಕು, ಸುರಿಯುವದು, ಬೀಳುವದು ಹರಿಯುವದು, ಅಂಗ ಒಡೆಯುವದು, ಆಯಾಸ, ಉಲ್ಲಾಸ, ಆಶೆ ಸುಳಿಯುತ್ತಿರುವದು, ಅರೆಯುವದು, ನಡುಕು, ಚಲನೆ, ನೋವು, ಚುಚ್ಚುವಿಕೆ, ಸುತ್ತುವಿಕೆ, ಕಡಿಯುವಿಕೆ, ಇವುಗಳು ಮತ್ತು ಗಟ್ಟಿ, ದೊರಗು, ಏರಳ, ತಣ್ಣಗೆ, ತರುಣ, ಚೊಗರು, ರಸವಿಲ್ಲದಿರುವಿಕೆ, ಒಣಗುವಿಕೆ, ಶೂಲ, ಸುಪ್ತಿ (ಸ್ಪರ್ಶಜ್ಞಾನ ಹೋಗಿರೋಣ), ಸಂಕೋಚವಾಗುವಿಕೆ, ಸ್ತಬ್ಧವಾಗಿರುವಿಕೆ, ಇವು ವಾಯುವಿನ ಕರ್ಮಗಳು. ಇವುಗಳಿಂದ ಕೂಡಿದ್ದು ವಾತವಿಕಾರವೆಂತಲೇ ನಿಶ್ಚಯಿಸಬೇಕು.

11. ತಂ ಮಧುರಾಮ್ಲಲವಣಸ್ನಿಗ್ಧೋಷ್ಣೈರುಪಕ್ರಮೈರುಪಕ್ರಮೇತ | ಸ್ವೇದ ಸ್ನೇಹಾಸ್ಥಾಪನಾನುವಾಸನ - ಸಸ್ತಿಕರ್ಮ - ಭೋಜನಾಭ್ಯಂಗೋತ್ಸಾದನ-ಪರಿಷೇಕಾದಿಭಿರ್ವಾತಹರೈರ್ವಾತ್ರಾಂ ಕಾಲಂ ಚ ಪ್ರಮಾಣೇಕೃತ್ವಾಸ್ಥಾಪನಾನುವಾಸನಂ ತು ಸರ್ವಥೋಪಕ್ರಮೇಭ್ಯೋ ವಾತೇ ಪ್ರಧಾನತಮಂ ಮನ್ಯಂತೇ ಭಿಷಜಃ | (ಚ 111)

ವಾತರೋಗಗಳಿಗೆ ಸಾಮಾನ್ಯ ಉಪಚಾರ ಕ್ರಮ

ಆ ವಾಯುವಿಗೆ ಸೀ, ಹುಳಿ, ಉಪ್ಪು, ಸ್ನಿಗ್ಧ, ಉಷ್ಣ, ಆದ ಉಪಚಾರಗಳಿಂದ ಉಪಕ್ರಮಿಸಬೇಕು. ಮತ್ತು ಬೆವರಿಸುವದು, ಸ್ನೇಹನ, ಆಸ್ಥಾಪನಾನುವಾಸನಗಳೆಂಬ ವಸ್ತಿಗಳು,

ನಸ್ಯಕರ್ಮ, ಭೋಜನ, ಅಭ್ಯಂಗ, ತಿಕ್ಕುವದು, ಸ್ನಾನ, ಇವೇ ಮೊದಲಾದ ವಾತಹರವಾದ ಉಪಚಾರಗಳನ್ನು ಪ್ರಮಾಣ ಮತ್ತು ಕಾಲ ನೋಡಿಕೊಂಡು ನಡಿಸತಕ್ಕದ್ದು. ಎಲ್ಲಾ ಕ್ರಮಗಳೊಳಗೆ, ಆಸ್ಥಾಪನಾ ಮತ್ತು ಅನುವಾಸನ ಮಾಡುವದು ಅತಿ ಪ್ರಧಾನವಾದದ್ದೆಂತ ವೈದ್ಯರು ತಿಳಕೊಳ್ಳುತ್ತಾರೆ.

ಇವರಾ ಆಸ್ಥಾಪನಾನುವಾಸನ ಕ್ರಮಗಳು ಅ XXIIನೇ ವಸ್ತಿವಿಧಿಯಲ್ಲಿ ವರ್ಣಿಸಲ್ಪಟ್ಟಿವೆ

12. ತದ್ಧ್ಯಾದಿತ ಏವ ಪಕ್ವಾಶಯಮನುಪ್ರವಿಶ್ಯ ಕೇವಲಂ ವೈಕಾರಿಕಂ ವಾತ ಮೂಲಂ ಛಿನತ್ತಿ | ತತ್ರಾವಜಿತೇ ವಾತೇಽಪಿ ಶರೀರಾಂತರ್ಗತಾ ವಾತವಿಕಾರಾಃ ಪ್ರಶಾಂತಿಮಾಪದ್ಯಂತೇ | ಯಥಾ ವನಸ್ಪತೇಮೂರ್ಲೇ ಛಿನ್ನೇಸ್ಕಂಧಶಾಖಾವ ರೋಹಕುಸುಮಫಲಪಲಾಶಾದೀನಾಂ ನಿಯತೋ ವಿನಾಶಸ್ತದ್ವತ್ |
(ಚ. 111-12)

ಆಸ್ಥಾಪನಾನುವಾಸನಗಳ ಪ್ರಶಸ್ತಿ

ಹಾಗೆ ಆಸ್ಥಾಪನ ಮತ್ತು ಅನುವಾಸನರೂಪವಾಗಿ ಉಪಯೋಗಿಸಲ್ಪಟ್ಟ ಔಷಧವು, ಮೊದಲಾಗಿಯೇ ಪಕ್ವಾಶಯವನ್ನು ಹೊಕ್ಕು ವಾತವಿಕಾರದ ಮೂಲವನ್ನೇ ಛೇದಿಸುತ್ತದೆ. ಮತ್ತು ಅಲ್ಲಿ ವಾತವು ಜಯಿಸಲ್ಪಟ್ಟಲ್ಲಿ, ಇಡೀ ಶರೀರದೊಳಗಿರುವ ವಾತವಿಕಾರಗಳೆಲ್ಲಾ ಶಾಂತವಾಗುತ್ತವೆ ಒಂದು ವೃಕ್ಷದ ಬೇರನ್ನೇ ಕಡದ್ದಲ್ಲಿ, ಆ ವೃಕ್ಷದ ಮುಂಡ, ಗೆಲ್ಲು, ಚಿಗುರು, ಪುಷ್ಪ, ಫಲ, ಎಲೆ ಮುಂತಾದವುಗಳೆಲ್ಲಾ ಹ್ಯಾಗೆ ನಾಶವಾಗುತ್ತವೋ ಹಾಗೆ.

13. ಪಿತ್ತಕಫಾದಿಗಳ ಚಲನೆಗೆ ವಾಯುವು ಕಾರಣ

ಪಿತ್ತಂ ಪಂಗುಃ ಕಫಃ ಪಂಗುಃ ಪಂಗವೋ ಮಲಧಾತವಃ | ವಾಯುನಾ ಯತ್ರ ನೀಯಂತೇ ತತ್ರ ಗಚ್ಛಂತಿ ಮೇಘವತ್ ||
(ಶಾ. 15)

ಪಿತ್ತ, ಕಫ ಮತ್ತು ಮಲಧಾತುಗಳು ಪಂಗುಗಳು (ಚಲನಾಶಕ್ತಿ ಇಲ್ಲದವು). ವಾಯುವು ಅವುಗಳನ್ನು ಎಲ್ಲಿಗೆ ನಡಿಸುತ್ತದೋ, ಅಲ್ಲಿಗೆ ಅವುಗಳು ಮೋಡದಂತೆ ಹೋಗುತ್ತವೆ.

14. ತತ್ರ ಬಲವದ್ವಿಗ್ರಹಾತಿವ್ಯಾಯಾಮ-ವ್ಯವಾಯಾಧ್ಯಯನ-ಪ್ರಪತನ-ಪ್ರಧಾವನ-ಪ್ರಪೀಡನಾಭಿಘಾತ-ಲಂಘನ-ಪ್ಲವನ-ತರಣ-ರಾತ್ರಿಜಾಗರಣ-ಭಾರಹರಣ-ಗಜ-ತುರಂಗ-ರಥ-ಪದಾತಿಜಯಾರ್ಥ-ಕಟು-ಕಷಾಯ-ತಿಕ್ತ-ರೂಕ್ಷ-ಲಘು-ಶೀತವೀರ್ಯ-ಶುಷ್ಕಶಾಕ-ವಲ್ಲೂರ-ವರಕೋದ್ದಾಲಕ-ಕೋರದೂಷ-ಶ್ಯಾಮಾಕ-ನೀವಾರ-ಮುದ್ಗ-ಮಸೂರಾಢಕೀ-ಹರೇಣು-ಕಲಾಯ-ನಿಷ್ಪಾವಾನಶನ-ವಿಷಮಾಶನಾಧ್ಯಶನ-ವಾತ-ಮೂತ್ರ-ಪುರೀಷ-ಶುಕ್ರ-ಛರ್ದಿ-ಕ್ಷವಥೂದ್ಗಾರ-ಬಾಷ್ಪ-ವೇಗವಿಘಾತಾದಿಭಿರ್ವಿಶೇಷೈರ್ವಾಯುಃ ಪ್ರಕೋಪಮಾಪದ್ಯತೇ | (ಸು. 84)

ವಾತಪ್ರಕೋಪದ ಕಾರಣಗಳು

ಬಲವಂತರೊಂದಿಗೆ ಲಡಾಯಿ, ಅತಿಯಾದ ದೇಹದಣಿಕೆ, ಮೈಥುನ, ಅಧ್ಯಯನ, ಬೀಳೋಣ, ಓಡೋಣ, ಪೀಡಿಸೋಣ, ಪೆಟ್ಟು, ಹಾರಿ ದಾಟೋಣ, ಹಾರಿ ನಡೆಯೋಣ,

ನೀರು ಈಸಿ ದಾಟೋಣ, ರಾತ್ರಿಜಾಗರ, ಭಾರ ಒಯ್ಯೋಣ, ಅತಿಯಾದ ಆನೆಸವಾರಿ, ಕುದುರೆಸವಾರಿ, ರಥಯಾನ, ಮತ್ತು ಕಾಲನಡಿಕೆ, ಖಾರ, ಜೊಗರು, ಕಹಿ, ರೂಕ್ಷ, ಲಘು, ಶೀತವೀರ್ಯ. ಒಣಗಿದ ಶಾಕ, ಒಣಗಿದ ಮಾನು, ಕಾಡು ಅವರೆ, ಉದ್ದಾಲಕಧಾನ್ಯ (ಕಾಡುಸಾಮೆ), ಕೋರದೂಷಧಾನ್ಯ (ಸಾಮೆಭೇದ), ಸಾಮೆ ಅಕ್ಕಿ, ಕಾಡಭತ್ತ, ಹೆಸರು, ಸಣ್ಣ ಹಸರು, ತೊಗರಿ, ಬಟಾಣಿ, ಕಡಲೆ, ಅವರೆ, ಹಸಿದಿರೋಣ, ವಿಷಮವಾದ ಊಟ, ಅತಿಯಾದ ಊಟ, ವಾತದ, ಮೂತ್ರದ, ಮಲದ, ಶುಕ್ರದ, ವಾಂತಿಯ, ಬಿಕ್ಕಳಿಕೆಯ, ತೇಗಿನ ಮತ್ತು ಕಣ್ಣೀರಿನ ವೇಗವನ್ನು ತಡೆಯೋಣ, ಇವೇ ಮೊದಲಾದ ವಿಶೇಷಗಳಿಂದ ವಾಯುವು ಪ್ರಕೋಪಪಡುತ್ತದೆ

15. ವಾಯು ಪ್ರಕೋಪ ಕಾಲ

ಸ ಶೀತಾಭ್ರಪ್ರವಾತೇಷು ಘರ್ಮಾಂತೇ ಚ ವಿಶೇಷತಃ ।
ಪ್ರತ್ಯೂಷಸ್ಯಪರಾಹ್ಣೇ ತು ಜೀರ್ಣೇಽನ್ನೇ ಚ ಪ್ರಕುಪ್ಯತಿ ।
(ಸು 84)

ವಾಯುವು ಹವೆ ಶೀತವಾದಾಗ್ಗೆ, ಮೋಡದ ಸಮಯದಲ್ಲಿ, ವಿಶೇಷ ಗಾಳಿ ಬೀಸುವ ಸಮಯದಲ್ಲಿ, ವಿಶೇಷವಾಗಿ ಸೆಕೆಕಾಲದ ಅಂತ್ಯದಲ್ಲಿ, ರಾತ್ರಿಯ ಕಡೇ ಜಾಮದಲ್ಲಿ, ಅಪರಾಹ್ಣದಲ್ಲಿ (ದಿನದ 3ನೇ ಭಾಗದಲ್ಲಿ), ಮತ್ತು ಅನ್ನ ಜೀರ್ಣವಾದಾಗ್ಗೆ, ಪ್ರಕೋಪಗೊಳ್ಳುತ್ತದೆ.

16. ಪಿತ್ತಕ್ಕೆ ಮುಖ್ಯ ತ್ರಯಸ್ಥಾನ

ಪಿತ್ತಸ್ಯ ಯಕೃತ್ಪ್ಲೀಹಾನೌ ಹೃದಯಂ ದೃಷ್ಟಿಸ್ತ್ವಕ್ ।
(ಸು 82.)

ಯಕೃತ್, ಪ್ಲೀಹ, ಹೃದಯ, ದೃಷ್ಟಿ, ಚರ್ಮ ಸಹ (ಎಕಾರಹೊಂದದ) ಪಿತ್ತಕ್ಕೆ ಸ್ಥಾನಗಳು.

17. ಅಗ್ನಿಯಾದ ಪಿತ್ತದ ಪಂಚವಿಧಗಳು ಮತ್ತು ಅವುಗಳ ಕೆಲಸಗಳು

ಅತ್ರ ಜಿಜ್ಞಾಸ್ಯಂ ಕಿಂ ಪಿತ್ತವ್ಯತಿರೇಕಾದನ್ಯೋಽಗ್ನಿರಾಹೋಸ್ವಿತ್ಪಿತ್ತಮೇವಾಗ್ನಿರಿತಿ । ಅತ್ರೋಚ್ಯತೇ । ನ ಖಲು ಪಿತ್ತವ್ಯತಿರೇಕಾದನ್ಯೋಽಗ್ನಿರುಪಲಭ್ಯತೇ ಆಗ್ನೇಯತ್ವಾತ್ಪಿತ್ತೇ ದಹನಪಚನಾದಿಷ್ವಭಿವರ್ತಮಾನೇಽಗ್ನಿಪದುಪಚಾರಃ ಕ್ರಿಯತೇಽಂತರಗ್ನಿರಿತಿ ಕ್ಷೀಣೇಷ್ವಗ್ನಿಗುಣೇ ತತ್ಸಮಾನದ್ರವ್ಯೋಪಯೋಗಾದತಿವೃದ್ಧೇ ಶೀತಕ್ರಿಯೋಪಯೋಗಾದಾಗಮಾಚ್ಚ ಪಶ್ಯಾಮೋ ನ ಖಲು ಪಿತ್ತವ್ಯತಿರೇಕಾದನ್ಯೋಽಗ್ನಿರಿತಿ । ತಚ್ಚಾದೃಷ್ಟಹೇತುಕೇನ ವಿಶೇಷೇಣ ಪಕ್ವಾಮಾಶಯಮಧ್ಯಸ್ಥಂ ಪಿತ್ತಂ ಚತುರ್ವಿಧಮನ್ನಪಾನಂ ಪಚತಿ ವಿರೇಚಯತಿ ಚ ರಸಸೋಷ್ಮಮೂತ್ರಪುರೀಷಾಣಿ ತತ್ರಸ್ಥಮೇವ ಚಾತ್ಮಶಕ್ತ್ಯಾ ಶೇಷಾಣಾಂ ಪಿತ್ತಸ್ಥಾನಾನಾಂ ಶರೀರಸ್ಯ ಚಾಗ್ನಿಕರ್ಮಣಾನುಗ್ರಹಂ ಕರೋತಿ ತಸ್ಮಿನ್ಪಿತ್ತೇ ಪಾಚಕೋಽಗ್ನಿರಿತಿ ಸಂಜ್ಞಾ । ಯತ್ತು ಯಕೃತ್ಪ್ಲೀಹ್ನೋಃ ಪಿತ್ತಂ ತಸ್ಮಿನ್ರಂಜಕೋಽಗ್ನಿರಿತಿ ಸಂಜ್ಞಾ ಸ ರಸಸ್ಯ ರಾಗಕೃದುಕ್ತಃ । ಯತ್ಪಿತ್ತಂ ಹೃದಯಸಂಸ್ಥಿತಂ ತಸ್ಮಿನ್ಸಾಧಕೋ

ऽग्निरिति संज्ञा सोऽभिप्रार्थितमनोरथसाधनकृदुक्तः । यद्द्रव्याश्रयं पित्तं तस्मिन्नालोचकोऽग्निरिति संज्ञा स्वरूप ग्रहणेऽधिकृतः । यत्तु त्वचि पित्तं तस्मिन्भ्राजकोऽग्निरिति संज्ञा सोऽभ्यंगपरिषेकावगाहावलेपनादीनां क्रियाद्रव्याणां पक्ता छायानां च प्रकाशकः । (सु 82-83)

ಇಲ್ಲಿ ಅಗ್ನಿಯು ಎತ್ತಲ್ಲದ ಬೇರೊಂದೋ ಅಥವಾ ಪಿತ್ತವೇ ಅಗ್ನಿಯೋ ಎಂಬ ಶಂಕೆ ಉಂಟಾಗುವದು ಅದಕ್ಕೆ ಹೇಳುವದೇನಂದರೆ ಪಿತ್ತ ಬಿಟ್ಟು ಪ್ರತ್ಯೇಕವಾದ ಅಗ್ನಿಯು ಕಾಣುವದಿಲ್ಲ, ಪಿತ್ತವು ತನ್ನ ಅಗ್ನಿಗುಣದಿಂದ ಸುಡುವದು, ಪಚನ ಮಾಡುವದು, ಮುಂತಾದ ಕೆಲಸಗಳನ್ನು ನಡಿಸುತ್ತಿರುವಾಗ್ಗೆ, ಒಳಗಿನ ಅಗ್ನಿ ಎಂತ ತಿಳಿದು, ಅಗ್ನಿಗುಣ ಕಡಿಮೆಯಾದಾಗ್ಗೆ ಅದಕ್ಕೆ ಸಮಾನವಾದ ದ್ರವ್ಯಗಳ ಉಪಯೋಗದಿಂದಲೂ, ಅತಿ ವೃದ್ಧಿಯಾದಾಗ್ಗೆ ಶೀತ ಮಾಡುವ ಪದಾರ್ಥಗಳ ಉಪಯೋಗದಿಂದಲೂ, ಅಗ್ನಿಗೆ ಮಾಡುವಂತೆ ಉಪಚಾರವು ಮಾಡಲ್ಪಡುತ್ತದೆ ಆದ್ದರಿಂದಲೂ, ಶಾಸ್ತ್ರಪ್ರಕಾರವೂ, ಪಿತ್ತ ಬಿಟ್ಟು ಬೇರೆ ಅಗ್ನಿಯು ಇರುವದಿಲ್ಲ ಎಂತ ತಿಳಕೊಳ್ಳುತ್ತೇವೆ ಆ ಪಿತ್ತವು ದೃಷ್ಟಿಗೆ ಗೋಚರವಲ್ಲದ ತನ್ನ ವಿಶೇಷ ಗುಣದಿಂದ, ಪಕ್ವಾಶಯಕ್ಕೂ ಆಮಾಶಯಕ್ಕೂ ಮಧ್ಯ ನಿಂತು, ಚತುರ್ವಿಧವಾದ ಅನ್ನಪಾನಗಳನ್ನು ಪಚನ ಮಾಡಿ, ರಸ, ದೋಷ, ಮೂತ್ರ, ಮತ್ತು ಮಲಗಳನ್ನು ಪ್ರತ್ಯೇಕಿಸುತ್ತದೆ. ಮತ್ತು ಅಲ್ಲಿಯ ಪಿತ್ತವೇ ತನ್ನ ಶಕ್ತಿಯಿಂದ ಶರೀರದ ಇತರ ಪಿತ್ತಸ್ಥಾನಗಳಿಗೂ, ಅಗ್ನಿರೂಪವಾದ ಕೆಲಸಮಾಡಿ, ಅನುಗ್ರಹ ಮಾಡುತ್ತದೆ, ಇಂಥಾ ಪಿತ್ತಕ್ಕೆ 'ಪಾಚಕಾಗ್ನಿ' ಎಂತ ಹೆಸರು. ಯಕೃತ್ಪ್ಲೀಹಗಳಲ್ಲಿ ಯಾವ ಪಿತ್ತ ಇರುತ್ತದೋ ಅದಕ್ಕೆ 'ರಂಜಕಾಗ್ನಿ' ಎಂತ ಹೆಸರು. ಅದು ಅನ್ನರಸಕ್ಕ ವರ್ಣವನ್ನು ಕೊಡುತ್ತದೆಂತ ಹೇಳಲ್ಪಡುತ್ತದೆ. ಹೃದಯದಲ್ಲಿ ಯಾವ ಪಿತ್ತ ಇರುತ್ತದೋ, ಅದಕ್ಕೆ 'ಸಾಧಕಾಗ್ನಿ' ಎಂತ ಹೆಸರು, ಅದು ಬಯಸಲ್ಪಟ್ಟ ಮನೋರಥಗಳನ್ನು ಸಾಧಿಸಿಕೊಡುವಂಥಾದ್ದೆಂತ ಹೇಳುತ್ತಾರೆ. ದೃಷ್ಟಿಯಲ್ಲಿ ಯಾವ ಪಿತ್ತ ಇರುತ್ತದೋ, ಅದಕ್ಕೆ 'ಆಲೋಚಕಾಗ್ನಿ' ಎಂತ ಹೆಸರು, ಸ್ವರೂಪವನ್ನು ತಿಳಿಯುವಂಥಾದ್ದು ಅದರ ಕೆಲಸ. ಚರ್ಮದಲ್ಲಿರುವ ಪಿತ್ತಕ್ಕೆ 'ಭ್ರಾಜಕಾಗ್ನಿ' ಎಂತ ಹೆಸರು; ಅದು ಅಭ್ಯಂಗ, ಪರಿಷೇಕ (ಸುರಕೊಂಡು ಸ್ನಾನ), ಅವಗಾಹ (ಮುಳುಗಿ ಸ್ನಾನ) ಅವಲೇಪ, ಇವೇ ಮೊದಲಾದ ಕ್ರಿಯೆಗಳಲ್ಲಿ ಉಪಯೋಗಿಸಲ್ಪಟ್ಟ ದ್ರವ್ಯಗಳನ್ನು ಪಚನ ಮಾಡುತ್ತದೆ ಮತ್ತು ದೇಹದ ಛಾಯೆ (ವರ್ಣ)ಗಳನ್ನು ಪ್ರಕಾಶಿಸುತ್ತದೆ.

18 ಪಿತ್ತದ ಲಕ್ಷಣ

ಪಿತ್ತಂ ತೀಕ್ಷ್ಣಂ ದ್ರವಂ ಪೂತಿ ನೀಲಂ ಪೀತಂ ತಥೈವ ಚ ।
ಉಷ್ಣಂ ಕಟುರಸಂ ಚೈವ ಎದಗ್ದಂ ಚಾಮ್ಲಮೇವ ಚ ॥
(ಸು. 83.)

ಪಿತ್ತವು ತೀಕ್ಷ್ಣ, ದ್ರವ, ನಾತ (ಹಸಿಮಾಂಸದ ವಾಸನೆಯುಳ್ಳ), ನೀಲ, ಅರಸಿನ, ಉಷ್ಣ, ಮತ್ತು ಖಾರರಸ ಉಳ್ಳದ್ದು ಆಗಿರುತ್ತದೆ. ಅದು ವಿರುದ್ಧ ಪಾಕವಾದರೆ, ಹುಳಿಯೇ ಆಗುತ್ತದೆ.

ಪರಾ 1 ಪಿತ್ತವು ಆಮ ಕೂಡಿಕೊಂಡಿರುವಾಗ ನೀಲ, ಆಮವಿಲ್ಲದಾಗ ಅರಸಿನ ಎಂತ ನಿ ಸಂ ವಾ ೨ ಸಂಯುಕ್ತವಾಗಿರುವ ಭೂತಗಳು ವಿಯೋಗವಾಗುವಾಗಲೂ, ಪ್ರತ್ಯೇಕವಾದ ಭೂತಗಳು ಸಂಯೋಗವಾಗುವಾಗಲೂ ಬಿಸಿಯುಂಟಾಗುತ್ತದೆಂಬದು ಪಾಶ್ಚಾತ್ಯ ರಸಾಯನಶಾಸ್ತ್ರದಲ್ಲಿ ನಿರ್ಣೀತವಾದ ಅಂಶ ಸುಟ್ಟು ತಣ್ಣಗಾದ ಚಿಪ್ಪುಸುಣ್ಣಕ್ಕೆ ತಣ್ಣೀರು ಕೂಡಿಸಿದರೂ ಮರಳಲಕ್ಕಾರಂಭಿಸುವದು ಎಲ್ಲರಿಗೂ ತಿಳಿದಿದೆಯಷ್ಟೆ ಹಾಗೆಯೇ ಒಂದು ಕಬ್ಬಿಣದ ತುಂಡಿಗೆ ಕಲುಬು ಹಿಡಿಯುವಾಗಲೂ ಬಿಸಿಯುಂಟಾಗುತ್ತದೆ, ಆದರೆ ಆ ಬಿಸಿಯು ಅಲ್ಪವಾಗಿ ಬೇಗನೇ ಶಾಂತವಾಗುವದರಿಂದ, ಸ್ಪರ್ಶಕ್ಕೆ ತಿಳಿಯುವದಿಲ್ಲ ಶರೀರದಲ್ಲಿ ಪಚನ ಎಂಬದು ಮುಖ್ಯವಾಗಿ ದ್ರವ್ಯಗಳ ಸಂಯೋಗ ವಿಯೋಗ ಕೆಲಸಗಳೇ ಆದ್ದರಿಂದ ಪಂಚಾತ್ಮಕ ಪಿತ್ತಕ್ಕೆ ಪಂಚ ಅಗ್ನಿಗಳಂತ ಹಿಂದು ಪೈದ್ಯದಲ್ಲಿ ವಿವರಿಸಿದ್ದು ಅಯುಕ್ತವಾಗಿ ಕಾಣಲಾರದು

19. ಪಿತ್ತವಿಕಾರಾಶ್ಚತ್ವಾರಿಂಶದತ ಊರ್ಧ್ವಂ ವ್ಯಾಖ್ಯಾಸ್ಯನ್ತೇ। ತದ್ಯಥಾ। ಓಷಶ್ಚ ಪ್ಲೋಷಶ್ಚ ದಾಹಶ್ಚ ದವಥುಶ್ಚ ಧೂಮಕಶ್ಚ ಅಮ್ಲಕಶ್ಚ ವಿದಾಹಶ್ಚ ಅಂತರ್ದಾಹಶ್ಚ ಅಂಸದಾಹಶ್ಚ ಉಷ್ಮಾಧಿಕ್ಯಂ ಚ ಅತಿಸ್ವೇದಶ್ಚಾಂಗ ಗಂಧಶ್ಚ ಅಂಗಾವಯವದರಣಂ ಚ ಶೋಣಿತಕ್ಲೇದಶ್ಚ ಮಾಂಸಕ್ಲೇದಶ್ಚ ತ್ವಗ್ದಾಹಶ್ಚ ಮಾಂಸದಾಹಶ್ಚ ತ್ವಙ್ಮಾಂಸದರಣಂ ಚ ಚರ್ಮದರಣಂ ಚ ರಕ್ತಕೋಠಾಶ್ಚ ರಕ್ತವಿಸ್ಫೋಟಾಶ್ಚ ರಕ್ತಪಿತ್ತಂ ಚ ರಕ್ತಮಂಡಲಾನಿ ಚ ಹರಿತತ್ವಂ ಚ ಹಾರಿದ್ರತ್ವಂ ಚ ನೀಲಿಕಾ ಚ ಕಕ್ಷಾ ಚ ಕಾಮಲಾ ಚ ತಿಕ್ತಾಸ್ಯತಾ ಚ ಪೂತಿಮುಖತಾ ಚ ತೃಷ್ಣಾಯಾ ಅಧಿಕ್ಯಂ ಚ ಅತೃಪ್ತಿಶ್ಚ ಅಸ್ಯಪಾಕಶ್ಚ ಗಲಪಾಕಶ್ಚ ಅಕ್ಷಿಪಾಕಶ್ಚ ಗುದ ಪಾಕಶ್ಚ ಮೇಢ್ರಪಾಕಶ್ಚ ಜೀವಾದಾನಂ ಚ ತಮಃ ಪ್ರವೇಶಶ್ಚ ಹರಿತ-ಹಾರಿದ್ರ-ಮೂತ್ರನೇತ್ರವರ್ಚಸ್ತ್ವಂ ಚೇತಿ ಚತ್ವಾರಿಂಶತ್ ಪಿತ್ತವಿಕಾರಾಃ। ಪಿತ್ತವಿಕಾರಾಣಾಮವರಿಸಂಖ್ಯೇಯಾನಾಮಾಪಕ್ಷ್ಯತಮಾ ವ್ಯಾಖ್ಯಾತಾ ಭವಂತಿ। (ಚ 112.)

ಪಿತ್ತಮೂಲವಾದ 40 ವಿಕಾರಗಳ ಹೆಸರು

40 ಪಿತ್ತ ವಿಕಾರಗಳು ಯಾವವೆಂದರೆ —

1. ಸುಡುವದು. 2. ಜ್ವಾಲೆ. 3. ಉರಿ 4. ಬಾಕು. 5. ಹೊಗೆತೇಗು. 6. ಹುಳಿತೇಗು 7. ಗಂಟಲು ಉರಿ 8 ಒಳಗೆ ಉರಿ 9. ಹೆಗಲು ಉರಿ. 10 ಹೆಚ್ಚು ಬಿಸಿ 11. ಹೆಚ್ಚು ಬೆವರು 12 ಮೈವಾಸನೆ 13. ಅಂಗ ಮತ್ತು ಅವಯವ ಸೀಳಿದಂತಾಗುವದು 14. ರಕ್ತ ನೀರಾಗುವದು 15 ಮಾಂಸ ಕರಗುವದು 16. ಚರ್ಮದ ಉರಿ. 17 ಮಾಂಸದ ಉರಿ 18. ಚರ್ಮದ ಮಾಂಸ ಸೀಳುವದು. 19. ಚರ್ಮ ಸೀಳುವದು. 20. ರಕ್ತಕೋಷ್ಠ. 21. ರಕ್ತಗುಳ್ಳೆ. 22. ರಕ್ತಪಿತ್ತ. 23. ರಕ್ತಮಂಡಲ. 24. ಹಸರು. 25. ಅರಸಿನ. 26. ಕರಿಸಿಬ್ಬ. 27. ಕಂಕುಳಬಾವು. 28. ಕಾಮಲೆ. 29. ಬಾಯಿಕಹಿ. 30. ಬಾಯಿವಾಸನೆ. 31. ಹೆಚ್ಚು ಬಾಯಾರಿಕೆ. 32. ತೃಪ್ತಿಯಿಲ್ಲದೆ ಇರುವದು 33. ಬಾಯಿಹುಣ್ಣು 34. ಗಂಟಲಹುಣ್ಣು. 35 ಬೆಂದ ಕಣ್ಣು 36. ಬೆಂದ ಆಸನ. 37. ಬೆಂದ ಮೇಢ್ರ. 38. ಜೀವಾದಾನ (ಜೀವ ತೆಗೆಯುವದು). 39. ಕಣ್ಣುಕತ್ತಲೆ. 40. ಹಸರು ಅಥವಾ ಹಳದಿ ವರ್ಣದ ಮೂತ್ರ, ಕಣ್ಣು ಮತ್ತು ವರ್ಚಸ್ಸು

ಅಸಂಖ್ಯೇಯವಾದ ಪಿತ್ತವಿಕಾರಗಳಲ್ಲಿ ಇವು ಅತಿ ವಿಶೇಷವಾಗಿ ಕಾಣಿಸಿಕೊಳ್ಳುವವಾದ್ದರಿಂದ ವರ್ಣಿಸಲ್ಪಟ್ಟವೆ.

ಪರಾ 40 ಪಿತ್ತವಿಕಾರಗಳ ಹೆಸರುಗಳು ಶಾರ್ಙ್ಗಧರಸಂಹಿತೆಯಲ್ಲಿಯೂ ಭಾವಪ್ರಕಾಶದಲ್ಲಿಯೂ ವಿವರಿಸಲ್ಪಟ್ಟಿವೆ. ಈ ಪಟ್ಟಿಗಳಲ್ಲಿ ಪರಸ್ಪರ ವ್ಯತ್ಯಾಸಗಳು ಕೆಲವು ಕಾಣುತ್ತವೆ ಅವರವರು ತಮಗೆ ಮುಖ್ಯವಾಗಿ ಕಂಡವುಗಳನ್ನು ಕಾಣಿಸಿದ್ದಾರಾಗಿ ಎಣಿಸಬಹುದು ಆದರೆ ಶಾ ಸಂಹಿತೆಯಲ್ಲಿರುವ ಪಟ್ಟಿಯಲ್ಲಿ ಕಾಣುವ ಮತಿಭ್ರಮ, ಅಲ್ಪನಿದ್ರತಾ, ಕಂಠಶೋಷ, ಮುಖಶೋಷ, ಕ್ಲಮ. ಆಂಧತಾ, ಇವುಗಳಲ್ಲಿ ನಾತ ಸಹ ಬಲವಾಗಿರುವ ಹಾಗೆ ಕಾಣುತ್ತದೆ ಭ್ರಮ ಮತ್ತು ಕ್ಲಮ ಎಂಬವು ಭಾ ಪ್ರಕಾಶದಲ್ಲಿ ಗಣನೆಯಲ್ಲಿಯೂ ಕಾಣುವದಲ್ಲದೆ, ಅಕಾಲಪಲಿತ ಸಹ ಅಲ್ಲಿ ತೋರಿಸಲ್ಪಟ್ಟಿದೆ ಆ ರೋಗದಲ್ಲಿ ಕಫವೂ ಬಲವಾಗಿರುತ್ತದೆ

20. ಸರ್ವೇಷ್ವಪಿ ಖಲ್ವೇತೇಷು ಪಿತ್ತವಿಕಾರೇಷ್ವನ್ಯೇಷು ಚಾಸುಕ್ತೇಷು ಪಿತ್ತಸ್ಯೇದಮಾತ್ಮರೂಪಮಪರಿಣಾಮಿ ಕರ್ಮಣಶ್ಚ ಸ್ವಲಕ್ಷಣಂ ಯತ್ತದುಪಲಭ್ಯ ತದವಯವಂ ವಾ ಏಮುಕ್ತಸಂದೇಹಾಃ ಪಿತ್ತವಿಕಾರಮೇವಾಧ್ಯವಸ್ಯಂತಿ ಕುಶಲಾಃ | ತದ್ಯಥಾ | ಔಷ್ಣ್ಯಂ ತೈಕ್ಷ್ಣ್ಯಂ ಲಾಘವಮನತಿಸ್ನೇಹೋ ವರ್ಣಶ್ಚ ಶುಕ್ಲಾರುಣವರ್ಜ್ಯೋ ಗಂಧಶ್ಚ ಏಸ್ರೋ ರಸೌ ಚ ಕಟುಕಾಮ್ಲೌ ಪಿತ್ತಸ್ಯಾತ್ಮರೂಪಾಣಿ | ಏವಂ ವಿಧತ್ವಾಚ್ಚ ಕರ್ಮಣಃ ಸ್ವಲಕ್ಷಣಮಿದಮಸ್ಯ ಭವತಿ | ತಂ ತಂ ಶರೀರಾವಯವಮಾವಿಶತೋ ದಾಹೋಷ್ಮಪಾಕಸ್ವೇದಕ್ಲೇದಕೋಥಸ್ರಾವರಾಗಾಃ ಯಥಾಸ್ವಂ ಚ ಗಂಧವರ್ಣರಸಾದಿಭಿರ್ನಿರ್ವರ್ತನಂ ಪಿತ್ತಸ್ಯ ಕರ್ಮಾಣಿ ತೈರಸ್ತಿತಂ ಪಿತ್ತವಿಕಾರಮೇವಾಧ್ಯವಸ್ಯೇತ್ | (ಚ 112.)

ಪಿತ್ತವಿಕಾರಗಳನ್ನು ಗೊತ್ತುಮಾಡುವ ರೀತಿ

ಈ ಎಲ್ಲಾ ಪಿತ್ತವಿಕಾರಗಳಲ್ಲಿಯೂ, ಇಲ್ಲಿ ವರ್ಣಿಸದ ಬೇರೆ ಪಿತ್ತವಿಕಾರಗಳಲ್ಲಿಯೂ, ಪಿತ್ತದ ಬದಲದ ನಿಜರೂಪವು ಇಂಥಾದ್ದು, ಅಥವಾ ಅದು ಯಾವದಾದರೂ ಅವಯವವನ್ನು ಹೊಂದಿ ಮಾಡತಕ್ಕ ಕೆಲಸದ ನಿಜಲಕ್ಷಣವು ಇಂಥಾದ್ದು, ಎಂಬದರ ಮೇಲೆ ಬುದ್ಧಿವಂತರು ಪಿತ್ತವಿಕಾರಗಳನ್ನು ನಿಃಸಂದೇಹವಾಗಿ ಗೊತ್ತುಮಾಡುತ್ತಾರೆ. ಅದು ಹ್ಯಾಗಂದರೆ ಬಿಸಿ, ತೀವ್ರತೆ, ಲಘುತ್ವ, ಅತಿಯಲ್ಲದ ಜಿಡ್ಡು, ಬಿಳೇದು ಮತ್ತು ಕಪ್ಪು ಒತ್ತಿದ ಕೆಂಪು (ಅರುಣ) ಅಲ್ಲದ ವರ್ಣ, ಹಸಿಮಾಂಸದ ವಾಸನೆ, ರುಚಿಯಲ್ಲಿ ಖಾರ ಮತ್ತು ಹುಳಿ, ಇವು ಪಿತ್ತದ ನಿಜರೂಪಗಳು. ಹೀಗಿರುವದರಿಂದ ಅದರ ಕೆಲಸದ ನಿಜಲಕ್ಷಣವು ಏನಾಗಿರುವದೆಂದರೆ ಆಯಾ ಶರೀರಾವಯವವನ್ನು ಹೊಕ್ಕು, ಅಲ್ಲಿ ಉರಿ, ಬಿಸಿ, ಪಾಕ (ಬೇಯಿಸುವಿಕ, ಹುಣ್ಣು), ಬೆವರು, ತ್ಯಾಪ, ಕೊಳೆ, ರಕ್ತಾದಿಸ್ರಾವ ನೋವು ಇವು ಮತ್ತು ತನ್ನ ಗಂಧ, ವರ್ಣ, ರಸಾದಿಗಳಿಂದ ಪರಿಣಾಮ ಹೊಂದಿಸುವದು, ಪಿತ್ತದ ಕೆಲಸಗಳಾಗಿರುತ್ತವೆ. ಇವುಗಳಿಂದ ಕೂಡಿದ್ದನ್ನು ಪಿತ್ತವಿಕಾರವೆಂತಲೇ ನಿಶ್ಚಯಿಸಬೇಕು.

21. ತಂ ಮಧುರ-ತಿಕ್ತ-ಕಷಾಯ-ಶೀತೈರುಪಕ್ರಮೈರುಪಕ್ರಮೇತ ಸ್ನೇಹವಿರೇಕಪ್ರದೇಹಪರಿಷೇಕಾಭ್ಯಂಗಾವಗಾಹಾದಿಭಿಃ ಪಿತ್ತಹರೈರ್ಮಾತ್ರಾಂ ಕಾಲಂ ಚ ಪ್ರಮಾಣೀಕೃತ್ಯ | ವಿರೇಚನಂ ತು ಸರ್ವೋಪಕ್ರಮೇಭ್ಯಃ ಪಿತ್ತೇ ಪ್ರಧಾನತಮಂ ಮನ್ಯಂತೇ ಭಿಷಜಃ | ತದ್ವ್ಯಾದಿತ ಏವಾಮಾಶಯಮನುಪ್ರವಿಶ್ಯ ಕೇವಲಂ ವೈಕಾರಿಕಂ ಪಿತ್ತಮೂಲಂ ಚಾಪಕರ್ಷತಿ | ತತ್ರಾವಜಿತೇ ಪಿತ್ತೇಽಪಿ ಶರೀರಾಂತರ್ಗತಾಃ ಪಿತ್ತವಿಕಾರಾಃ ಪ್ರಶಾಂತಿ

ಪಿತ್ತರೋಗಗಳಿಗೆ ಸಾಮಾನ್ಯ ಉಪಚಾರಕ್ರಮ

ಮಾಪದ್ಯಂತೇ । ಯಥಾಗ್ನೌ ವ್ಯವೋಢೇ ಕೇವಲಮಗ್ನಿಗೃಹಂ ಚ ಶೀತಂ ಭವತಿ ತದ್ವತ್ । (ಚ. 112-13.)

ಆ ಪಿತ್ತವಿಕಾರಕ್ಕೆ ಸೀ, ಕಹಿ, ಒಗರು, ಶೀತವಾದ ಔಷಧೋಪಚಾರಗಳಿಂದಲೂ, ಕಾಲ ಮತ್ತು ಪರಿಮಾಣಗಳ ಕುರಿತು ಪ್ರಮಾಣಗಳಿಗೆ ಲಕ್ಷ್ಯ ಕೊಟ್ಟು, ಸ್ನೇಹನ, ವಿರೇಚನ, ಲೇಪನ, ಪರಿಷೇಕ, ಅಭ್ಯಂಗ, ಮುಳುಗಿ ಸ್ನಾನ, ಇವು ಮುಂತಾದ ಕ್ರಮಗಳಿಂದಲೂ ಉಪಕ್ರಮಿಸಬೇಕು. ಆ ಪಿತ್ತವಿಕಾರಗಳನ್ನು ಜಯಿಸುವದಕ್ಕೆ ಸರ್ವ ಉಪಕ್ರಮಗಳಲ್ಲಿ ವಿರೇಚನವು ಅತ್ಯಂತ ಪ್ರಧಾನವೆಂತ ವೈದ್ಯರು ಎಣಿಸುತ್ತಾರೆ. ಅದು ಆರಂಭದಿಂದಲೇ ಆಮಾಶಯವನ್ನು ಹೊಕ್ಕು, ವಿಕಾರವನ್ನುಂಟುಮಾಡುವ ಪಿತ್ತದ ಮೂಲವನ್ನೇ ತೆಗೆದುಬಿಡುತ್ತದೆ. ಅಲ್ಲಿರುವ ಪಿತ್ತವನ್ನು ಜಯಿಸಿದ್ದಲ್ಲಿ, ಶರೀರದೊಳಗಣ ಪಿತ್ತವಿಕಾರಗಳೆಲ್ಲಾ ಶಾಂತವಾಗುತ್ತವೆ. ಕೋಣೆಯಲ್ಲಿರುವ ಬೆಂಕಿಯನ್ನು ನೊಂದಿಸಿದರೆ, ಇಡೀ ಕೋಣೆಯೇ ಹ್ಯಾಗೆ ಶೀತವಾಗುತ್ತದೋ ಹಾಗೆ.

22. ಕ್ರೋಧ - ಶೋಕ - ಭಯಾಯಾಸೋಪವಾಸ - ವಿದಗ್ಧ - ಮೈಥುನೋಪ
ಗಮನ-ಕಟ್ವಮ್ಲ-ಲವಣ-ತೀಕ್ಷ್ಣೋಷ್ಣ-ಲಘು-ವಿದಾಹಿ-ತಿಲ-ತೈಲ-ಪಿಣ್ಯಾ
ಪಿತ್ತಪ್ರಕೋಪ ಕಾರಣಗಳು ಕ-ಕುಲತ್ಥ - ಸರ್ಷಪಾತಸೀ - ಹರಿತಕಶಾಕ - ಗೋಧಾ - ಮತ್ಸ್ಯಾಜಾವಿಕ
ಮಾಂಸ-ದಧಿ-ತಕ್ರ-ಕೂರ್ಚಿಕಾ-ಮಸ್ತು-ಸೌವೀರಕ-ಸುರಾ ವಿಕಾರಾಮ್ಲ
ಫಲಕಟ್ವರಾರ್ಕಪ್ರಭೃತಿಭಿಃ ಪಿತ್ತಂ ಪ್ರಕೋಪಮಾಪದ್ಯತೇ । (ಸು. 84)

ಸಿಟ್ಟು, ಶೋಕ, ಭಯ, ಆಯಾಸ, ಉಪವಾಸ, ವಿಷಮಾಗ್ನಿ, ಮೈಥುನ, ಖಾರ, ಹುಳಿ, ಉಪ್ಪು, ತೀಕ್ಷ್ಣ, ಉಷ್ಣ, ಲಘು, ಸುಡುವ ಸ್ವಭಾವದ್ದು, ಎಳ್ಳು, ಎಳ್ಳೆಣ್ಣೆ, ಹಿಂಡಿ, ಹುರುಳಿ, ಸಾಸಿವೆ, ಅತಸೀಬೀಜ, ಹರಿತಕಶಾಕ, ಉಡುವಿನ ಮಾಂಸ, ಮೀನು, ಆಡಿನ ಮಾಂಸ, ಕುರಿಮಾಂಸ, ಮೊಸರು, ಮಜ್ಜಿಗೆ, ಹಾಲು ಮತ್ತು ಮಜ್ಜಿಗೆ ಬೆರಸಿ ಕಾಯಿಸಿದ್ದು, ಮೊಸರಿನ ನೀರು, ಹುಳಿ ಕಲಗಚ್ಚು, ಎಲ್ಲಾ ಹೆಂಡಗಳು, ಹುಳಿ ಹಣ್ಣುಗಳು, ಬೆಣ್ಣೆ ತೆಗೆಯದ ಮಜ್ಜಿಗೆ, ಬಿಸಿಲು, ಮುಂತಾದ್ದರಿಂದ ಪಿತ್ತವು ಪ್ರಕೋಪಪಡುತ್ತದೆ.

ಷರಾ ಇನ್ನೊಂದು ಪಾಠದಲ್ಲಿ 'ಅರ್ಕ' (ಬಿಸಿಲು) ಕಾಣುವದಿಲ್ಲ

23. ತದುಷ್ಣೈರುಷ್ಣಕಾಲೇ ಚ ಮೇಘಾಂತೇ ಚ ವಿಶೇಷತಃ ।
ಪಿತ್ತಪ್ರಕೋಪ ಕಾಲ ಮಧ್ಯಾಹ್ನೇ ಚಾರ್ಧರಾತ್ರೇ ಚ ಜೀರ್ಯತ್ಯನ್ನೇ ಚ ಕುಪ್ಯತಿ ॥
(ಸು. 84)

ಪಿತ್ತವು ಬಿಸಿ ಪದಾರ್ಥಗಳಿಂದಲೂ, ಉಷ್ಣಕಾಲದ (ಗ್ರೀಷ್ಮಋತುವಿನ)ಲ್ಲಿಯೂ, ಮುಖ್ಯವಾಗಿ ಮೋಡದ ಅಂತ್ಯದಲ್ಲಿ (ಶರದೃತುವಿನಲ್ಲಿ)ಯೂ, ಮಧ್ಯಾಹ್ನದಲ್ಲಿಯೂ, ಅರ್ಧರಾತ್ರಿಯಲ್ಲಿಯೂ, ಅನ್ನ ಜೀರ್ಣವಾಗುತ್ತಿರುವಾಗಲೂ ಪ್ರಕೋಪಗೊಳ್ಳುತ್ತದೆ.

24. ಶ್ಲೇಷ್ಮಸ್ಥಾನಾನ್ಯತ ಊರ್ಧ್ವಂ ವಕ್ಷ್ಯಾಮಃ । ತತ್ರಾಮಾಶಯಃ ಪಿತ್ತಾ
ಶಯಸ್ಯೋಪರಿಷ್ಟಾತ್ತತ್ರ ತ್ವನೀಕತ್ವಾದೂರ್ಧ್ವಗತಿತ್ವಾತ್ತೇಜಸಶ್ಚಂದ್ರ ಇ

ಕಫಕ್ಕೆ ಮುಖ್ಯಾಶ್ರಯಸ್ಥಾನವಾದ ಆಮಾಶಯದ ಕೆಲಸ

ವಾದಿತ್ಯಸ್ಯ ಸ ಚತುರ್ವಿಧಸ್ಯಾಹಾರಸ್ಯಾಧಾರಃ। ಸ ಚ ತತ್ಪ್ರೋದಕೈ ರ್ಗುಣೈರಾಹಾರಃ ಪ್ರಕ್ಲಿನ್ನೋ ಛಿನ್ನಸಂಘಾತಃ ಸುಖಜರಶ್ಚ ಭವತಿ । (ಸು. 83.)

ಶ್ಲೇಷ್ಮಸ್ಥಾನಗಳು ಇನ್ನು ಮುಂದೆ ಹೇಳಲ್ಪಡುತ್ತವೆ. ಆ ಸ್ಥಾನಗಳಲ್ಲಿ ಆಮಾಶಯವು ಆದಿತ್ಯನಿಗೆ ಚಂದ್ರನು ಹ್ಯಾಗೋ ಹಾಗೆ ಪಿತ್ತದ ತೇಜೋಗುಣವು ಊರ್ಧ್ವಗತಿದ್ದಾದ್ದರಿಂದ ಪಿತ್ತಾಶಯಕ್ಕೆ ಮೇಲಿನ ಭಾಗದಲ್ಲಿ ಶತ್ರುವಾಗಿ ನಿಂತಿರುತ್ತದೆ, ಮತ್ತು ಚತುರ್ವಿಧವಾದ ಆಹಾರಕ್ಕೆ ಆಧಾರವಾಗಿದೆ. ಅಲ್ಲಿ ದ್ರವಗುಣಗಳಿಂದ ಆಹಾರವು ತೆಳ್ಳಗಾಗಿ, ಒಡೆದು, ಜೀರ್ಣಕ್ಕೆ ಸುಲಭವಾಗುವ ಹಾಗೆ ಪರಿಣಮಿಸುತ್ತದೆ.

ಮಾಧುರ್ಯಾತ್ಪಿಚ್ಛಿಲತ್ವಾಚ್ಚ ಪ್ರಕ್ಲೇದಿತ್ವಾತ್ತಥೈವ ಚ ।
ಆಮಾಶಯೇ ಸಂಭವತಿ ಶ್ಲೇಷ್ಮಾ ಮಧುರಶೀತಲಃ ॥ (ಸು. 88.)

ಆಹಾರದ ಸೀಯಿಂದಲೂ, ಪಿಚ್ಛಿಲತ್ವದಿಂದಲೂ, ನೀರನ್ನು ಹೆಚ್ಚಿಸುವ ಗುಣದಿಂದಲೂ, ಆಮಾಶಯದಲ್ಲಿ ಕಫವು ಮಧುರ ಮತ್ತು ಶೀತಲಗುಣಗಳುಳ್ಳದ್ದಾಗುತ್ತದೆ

25. ಸ ತತ್ರಸ್ಥ ಏವ ಸ್ವಶಕ್ತ್ಯಾ ಶೇಷಾಣಾಂ ಶ್ಲೇಷ್ಮಸ್ಥಾನಾನಾಂ ಶರೀರಸ್ಯ ಜೋದಕಕರ್ಮಣಾನುಗ್ರಹಂ ಕರೋತಿ । ಉರಸ್ಥಸ್ತ್ರಿಕಸಂಧಾರಣಮಾತ್ಮವೀರ್ಯೇಣಾನ್ನರಸಸಹಿತೇನ ಹೃದಯಾವಲಂಬನಂ ಕರೋತಿ । ಜಿಹ್ವಾಮೂಲಕಂಠಸ್ಥೋ ಜಿಹ್ವೇಂದ್ರಿಯಸ್ಯ ಸೌಮ್ಯತ್ವಾತ್ತಾ ಸಮ್ಯಗ್ರಸಜ್ಞಾನೇ ವರ್ತತೇ । ಶಿರಸ್ಥಃ ಸ್ನೇಹಸಂತರ್ಪಣಾಧಿಕೃತತ್ವಾದಿಂದ್ರಿಯಾಣಾಮಾತ್ಮವೀರ್ಯೇಣಾನುಗ್ರಹಂ ಕರೋತಿ । ಸಂಧಿಸ್ಥಸ್ತು ಶ್ಲೇಷ್ಮಾ ಸರ್ವಸಂಧಿಸಂಶ್ಲೇಷಾತ್ಸರ್ವಸಂಧ್ಯನುಗ್ರಹಂ ಕರೋತಿ । (ಸು. 83.)

ಕಫದ ಪಂಚವಿಧ ಕರ್ಮಗಳು

ಕಫವು ಆಮಾಶಯದಲ್ಲಿಯೇ ನಿಂತು, ತನ್ನ ಶಕ್ತಿಯಿಂದ ದೇಹದಲ್ಲಿರುವ ಇತರ ಕಫ ಸ್ಥಾನಗಳಿಗೆ ನೀರಾಶ್ರಯ ಕೊಟ್ಟು ಅನುಗ್ರಹಮಾಡುತ್ತದೆ ಎದೆಯಲ್ಲಿರುವ ಕಫವು ತ್ರಿಕ ಎಂಬ ಕುತ್ತಿಗೆಯ ಹಿಂಭಾಗವನ್ನು ಸ್ಥಾನದಲ್ಲಿರಿಸುತ್ತದೆ. ಮತ್ತು ತನ್ನ ವೀರ್ಯದಿಂದ ಅನ್ನ ರಸದೊಂದಿಗೆ ಕೂಡಿಕೊಂಡು ಹೃದಯವನ್ನು ಅದರ ಕೆಲಸಮಾಡುತ್ತಿರುವಂತೆ ಆಧರಿಸುತ್ತದೆ. ನಾಲಿಗೆಯ ಬುಡದಲ್ಲಿ ಮತ್ತು ಕಂಠದಲ್ಲಿರುವ ಕಫವು ಸೌಮ್ಯಸ್ವಭಾವದ್ದಾದ್ದರಿಂದ ಜಿಹ್ವೇಂದ್ರಿಯಕ್ಕೆ ರುಚಿ ತೋರಿಸುವ ಶಕ್ತಿಯನ್ನು ಕೊಡುತ್ತಿರುತ್ತದೆ. ತಲೆಯಲ್ಲಿರುವ ಕಫವು ಜಿಡ್ಡನ್ನು ಕೊಟ್ಟು ತೃಪ್ತಿಪಡಿಸುವ ಅಧಿಕಾರ ಉಳ್ಳದ್ದಾಗಿರುವದರಿಂದ, ತನ್ನ ವೀರ್ಯದಿಂದ ಇಂದ್ರಿಯಗಳಿಗೆಲ್ಲಾ ಅನುಗ್ರಹ ಮಾಡುತ್ತದೆ. ಸಂದುಗಳಲ್ಲಿರುವ ಕಫವು ಸರ್ವ ಸಂದುಗಳನ್ನು ಜೋಡಿಸುವ ಶಕ್ತಿಯುಳ್ಳದ್ದಾದ್ದರಿಂದ, ಸರ್ವ ಸಂದುಗಳಿಗೂ ಅನುಗ್ರಹ ಮಾಡುತ್ತದೆ.

26. ಕಫದ ಲಕ್ಷಣ

ಶ್ಲೇಷ್ಮಾ ಶ್ವೇತೋ ಗುರುಃ ಸ್ನಿಗ್ಧಃ ಪಿಚ್ಛಿಲಃ ಶೀತ ಏವ ಚ ।
ಮಧುರಸ್ತ್ವವಿದಗ್ಧಃ ಸ್ಯಾದ್ವಿದಗ್ಧೋ ಲವಣಃ ಸ್ಮೃತಃ ॥ (ಸು. 83.)

ಕಫವು ಬಿಳ್ಳಗೆ, ಭಾರವುಳ್ಳದ್ದು, ಜಿಡ್ಡುಳ್ಳದ್ದು, ಅಂಟಾಗಿರುವದು, ಮತ್ತು ಶೀತವಾಗಿರುವ ದಲ್ಲದೆ ವ್ಯತಿರಿಕ್ತವಾಗಿ ಪಾಕವಾದರೆ ಉಪ್ಪು, ಅಲ್ಲವಾದರೆ ಸ್ವಾಭಾವಿಕವಾಗಿ ಸೀ, ಆಗಿರುವದು.

27. ಶ್ಲೇಷ್ಮವಿಕಾರಾಶ್ಚ ವಿಂಶತಿರತ ಊರ್ಧ್ವಂ ವ್ಯಾಖ್ಯಾಸ್ಯನ್ತೇ। ತದ್ಯಥಾ।
ತೃಪ್ತಿಶ್ಚ ತಂದ್ರಾ ಚ ನಿದ್ರಾಧಿಕ್ಯಂ ಚ ಸ್ತೈಮಿತ್ಯಂ ಚ ಗುರುಗಾತ್ರತಾ
ಕಫಮೂಲವಾದ 20 ರೋಗಗಳ ಹೆಸರು
ಚ ಆಲಸ್ಯಂ ಚ ಮುಖಮಾಧುರ್ಯಂ ಚ ಮುಖಸ್ರಾವಶ್ಚ ಉದ್ಗಾರಶ್ಚ
ಶ್ಲೇಷ್ಮೋದ್ಗರಣಂ ಚ ಮಲಸ್ಯಾಧಿಕ್ಯಂ ಚ ಕಂಠೋಪಲೇಪಶ್ಚ ವಲಾಶಶ್ಚ
ಹೃದಯೋಪಲೇಪಶ್ಚ ಧಮನೀಪ್ರತಿಚಯಶ್ಚ ಗಲಗಂಡಶ್ಚ ಅತಿಸ್ಥೌಲ್ಯಂ ಚ
ಶೀತಾಗ್ನಿತಾ ಚ ಉದರ್ದಶ್ಚ ಶ್ವೇತಾವಭಾಸತಾ ಚ ಶ್ವೇತಮೂತ್ರನೇತ್ರ
ವರ್ಚಸ್ತ್ವಂ ಚೇತಿ ವಿಂಶತಿಃ ಶ್ಲೇಷ್ಮಾಧಿಕಾರಾಃ। (ಚ. 113.)

ಇಪ್ಪತ್ತು ಕಫ ವಿಕಾರಗಳು ಯಾವವೆಂದರ

1 ತೃಪ್ತಿ. 2 ತಂದ್ರಾ (ನಿಶ್ಚೆತನ್ಯ). 3 ಹೆಚ್ಚು ನಿದ್ರೆ. 4. ಜಡತ್ವ. 5. ಭಾರವಾದ ಶರೀರ. 6 ಆಲಸ್ಯ. 7 ಸೀಯಾದ ಬಾಯಿ. 8. ಬಾಯಿಯಲ್ಲಿ ನೀರು ಬರುವದು. 9. ತೇಗು. 10. ಕಫ ಬಾಯಿಗೆ ಬರುವದು. 11. ಹೆಚ್ಚು ಮಲ. 12. ಕಂಠದಲ್ಲಿ ಲೇಪ (ಅಗ್ರ). 13. ಕಫ. 14. ಹೃದಯದಲ್ಲ ಲೇಪ. 15. ಧಮನಿಗಳ ಬಂಧ. 16 ಕುತ್ತಿಗೆಯ ಗಂಟು ಬಾಕು. 17. ಅತಿಯಾಗಿ ಸ್ಥೂಲವಾಗಿರುವದು. 18. ಅಗ್ನಿ ಶೀತವಾಗಿರುವದು. 19. ಉದರ್ದ (ನೀರು ಕೋಟಲೆ ಭೇದ) 20. ಶರೀರವರ್ಣ, ಮೂತ್ರ, ಕಣ್ಣು, ಮತ್ತು ವರ್ಚಸ್ಸು ಬಿಳೇದಾಗಿರುವದು, ಇವು 20 ಕಫವಿಕಾರಗಳು.

28. ಶ್ಲೇಷ್ಮವಿಕಾರಾಣಾಮಪರಿಸಂಖ್ಯೇಯಾನಾಮಾವಿಷ್ಕೃತತಮಾ ವ್ಯಾಖ್ಯಾತಾಃ। ಸರ್ವೇಷ್ವಪಿ ತು ಖಲ್ವೇತೇಷು ಶ್ಲೇಷ್ಮವಿಕಾರೇಷ್ವನ್ಯೇಷು ಚಾನುಕ್ತೇಷು ಶ್ಲೇಷ್ಮಣ ಇದಮಾತ್ಮರೂಪಮಪರಿಣಾಮಿ ಕರ್ಮಣಶ್ಚ
ಕಫರೋಗಗಳನ್ನು ಗೊತ್ತು ಮಾಡುವ ರೀತಿ
ಸ್ವಲಕ್ಷಣಂ ಯದುಪಲಭ್ಯತೇ ತದವಯವಂ ವಾ ವಿಮುಕ್ತಸಂದೇಹಾಃ
ಶ್ಲೇಷ್ಮವಿಕಾರಮಧ್ಯವಸ್ಯಂತಿ ಕುಶಲಾಃ। ತದ್ಯಥಾ। ಶ್ವೈತ್ಯ-ಶೈತ್ಯ-ಗೌರವ-
ಮಾಧುರ್ಯ-ಮಾಸ್ರಯಾರ್ಣಿ ಶ್ಲೇಷ್ಮಣ ಆತ್ಮರೂಪಾಣ್ಯೇವಂ ವಿಧತ್ವಾ
ಚ್ಚ ಕರ್ಮಣಃ ಸ್ವಲಕ್ಷಣಮಿದಮಸ್ಯ ಭವತಿ। ತಂ ತಂ ಶರೀರಾವಯವ
ಮಾಶ್ರಿತಃ ಶ್ವೈತ್ಯ-ಶೈತ್ಯ-ಕಂಡೂ-ಸ್ತೈರ್ಯ-ಗೌರವ-ಸ್ನೇಹ-ಸ್ತಂಭ-ಸುಪ್ತಿ-
ಕ್ಲೇದೋಪದೇಹ-ಬಂಧ-ಮಾಧುರ್ಯ-ಚಿರಕಾರಿತ್ವಾನಿ ಶ್ಲೇಷ್ಮಣಃ
ಕರ್ಮಾಣಿ ತೈರನ್ವಿತಂ ಶ್ಲೇಷ್ಮವಿಕಾರಮೇವಾಧ್ಯವಸ್ಯೇತ್। (ಚ 113.)

ಸಂಖ್ಯೆಯಿಲ್ಲದ ಕಫರೋಗಗಳಲ್ಲಿ ಅತಿ ಹೆಚ್ಚಾಗಿ ಕಾಣಿಸಿಕೊಳ್ಳುವವುಗಳನ್ನು ಮಾತ್ರ ವರ್ಣಿಸಲಾಯಿತು. ಈ ಎಲ್ಲಾ ಶ್ಲೇಷ್ಮವಿಕಾರಗಳಲ್ಲಿಯೂ ಇಲ್ಲಿ ಹೇಳಲ್ಪಡದ ಬೇರೆಯವು ಗಳಲ್ಲಿಯೂ ಕಫದ ಬದಲದ ನಿಜ ಸ್ವರೂಪವು ಇಂಥಾದ್ದೆಂಬದನ್ನೂ, ಅದು ಯಾವದಾದ

ರೊಂದು ಅವಯವವನ್ನು ಸೇರಿ ಮಾಡುವ ಕೆಲಸದಲ್ಲಿ ಅದರ ಲಕ್ಷಣವನ್ನೂ, ತಿಳಿದುಕೊಂಡು, ಬುದ್ಧಿವಂತರು ಶ್ಲೇಷ್ಮವಿಕಾರವನ್ನು ನಿಃಸಂದೇಹವಾಗಿ ಗೊತ್ತುಮಾಡುತ್ತಾರೆ. ಹ್ಯಾಗಂದರೆ. ಬಿಳುಪು, ಶೈತ್ಯ, ಭಾರತ್ವ, ಮಧುರತ್ವ ಮತ್ತು ಮಾತ್ಸರ್ಯ, ಇವು ಕಫದ ನಿಜ ರೂಪಗಳು; ಹೀಗಿರುವದರಿಂದ, ಅದರ ಕೆಲಸದ ಸ್ವಲಕ್ಷಣವು ಹ್ಯಾಗಾಗುವದಂದರೆ ಆಯಾ ಶರೀರಾವಯವವನ್ನು ಹೊಕ್ಕು ಬಿಳುಪು, ಶೈತ್ಯ, ತುರಿಕೆ, ಸ್ಥಿರತ್ವ, ಭಾರತ್ವ, ಪಸೆ, ನಿಶ್ಚೇಷ್ಟತೆ, ನಿದ್ರೆ, ದ್ರವಿಸುವದು, ಉಪಾಂಗವಾಗಿ ಬೆಳಿಕೆ, ತಡೆ, ಮಧುರತ್ವ, ವಿಳಂಬನ, ಇವುಗಳನ್ನು ಮಾಡುವಂಥಾದ್ದು ಕಫದ ಕರ್ಮವಾಗಿರುತ್ತದೆ. ಈ ಕರ್ಮಗಳಿಂದ ಕೂಡಿದಂಥಾದ್ದನ್ನು ಕಫ ವಿಕಾರವೆಂತಲೇ ನಿಶ್ಚಯಿಸತಕ್ಕದ್ದು

29. ತಂ ಕಟುಕ-ತಿಕ್ತ-ಕಷಾಯ-ತೀಕ್ಷ್ಣೋಷ್ಣ-ರೂಕ್ಷೈರುಪಕ್ರಮೈರುಪಕ್ರಮೇತ | ಸ್ವೇದನ-ವಮನ-ಶಿರೋವಿರೇಚನ-ವ್ಯಾಯಾಮಾದಿಭಿಃ ಶ್ಲೇಷ್ಮ ಹರೈರ್ಮಾತ್ರಾಂ ಕಾಲಂ ಚ ಪ್ರಮಾಣೀಕೃತ್ಯ | ವಮನಂ ತು ಸರ್ವೋಪಕ್ರಮೇಭ್ಯಃ ಶ್ಲೇಷ್ಮಣಿ ಪ್ರಧಾನತಮಂ ಮನ್ಯಂತೇ ಭಿಷಜಃ | ತದ್ಧ್ಯುದಿತ ಏವಾಮಾಶಯಮನುಪ್ರವಿಶ್ಯ ಕೇವಲಂ ವೈಕಾರಿಕಂ ಶ್ಲೇಷ್ಮಮೂಲಮುಪಕರ್ಷತಿ | ತತ್ರಾವಚಿತೇ ಶ್ಲೇಷ್ಮಣ್ಯಪಿ ಶರೀರಾಂತರ್ಗತಾಃ ಶ್ಲೇಷ್ಮ ವಿಕಾರಾಃ ಪ್ರಶಾಂತಿಮಾಪದ್ಯಂತೇ ಯಥಾ ಭಿನ್ನೇ ಕೇದಾರಸೇತೌ ಶಾಲಿ-ಯವ-ಷಷ್ಟಿಕಾದೀನ್ಯಭಿಷ್ಯಂದ್ಯಮಾನಾನಿ ಅಂಭಸಾ ಪ್ರಶೋಷಮಾಪದ್ಯಂತೇ ತದ್ವದಿತಿ | (ಚ. 113-14)

ಕಫರೋಗಗಳಿಗೆ ಸಾಮಾನ್ಯ ಉಪಚಾರಕ್ರಮ

ಅಂಥಾ ಕಫವಿಕಾರಕ್ಕೆ ಖಾರ, ಕಹಿ, ಚೊಗರು, ತೀಕ್ಷ್ಣ, ಉಷ್ಣ, ರೂಕ್ಷಗುಣವುಳ್ಳವುಗಳಾದ ಉಪಚಾರಗಳಿಂದಲೂ, ಪರಿಮಾಣಕ್ಕೂ, ಕಾಲಕ್ಕೂ, ಲಕ್ಷ್ಯವಿಟ್ಟು, ಬೆವರಿಸುವದು, ವಾಂತಿಮಾಡಿಸುವದು, ಶಿರೋವಿರೇಚನ, ವ್ಯಾಯಾಮ, ಮೊದಲಾದ ಕಫಹರವಾದ ಕ್ರಮಗಳಿಂದಲೂ ಉಪಕ್ರಮಿಸಬೇಕು. ಶ್ಲೇಷ್ಮವಿಕಾರದಲ್ಲಿ ಸರ್ವ ಉಪಕ್ರಮಗಳೊಳಗೆ ವಾಂತಿಮಾಡಿಸುವದು ಅತಿ ಮುಖ್ಯವಾದದ್ದೆಂಬದು ವೈದ್ಯರ ಮತ. ಅದು ಆದಿಯಲ್ಲಿಯೇ ಆಮಾಶಯವನ್ನು ಹೊಕ್ಕು, ವಿಕಾರವನ್ನುಂಟುಮಾಡುವ ಕಫದ ಮೂಲವನ್ನೇ ಕಿತ್ತುಬಿಡುತ್ತದೆ; ಅಲ್ಲಿಯ ಕಫವನ್ನು ಜಯಿಸಿದ್ದಲ್ಲಿ, ಶರೀರದೊಳಗಿರುವ ಕಫವಿಕಾರಗಳೆಲ್ಲಾ ಶಮನವಾಗುತ್ತವೆ; ಹ್ಯಾಗೆ ಗದ್ದೆಯ ಕಟ್ಟಹುಣಿ ಕಡಿದರೆ, ನೀರಿನಿಂದ ಸೊಕ್ಕಿ ಬೆಳೆಯುತ್ತಿರುವ ಭತ್ತ, ಗೋದಿ, ಷಷ್ಟಿಕಾದಿಗಳು ಒಣಗುತ್ತವೋ, ಹಾಗೆ.

30. ದಿವಾಸ್ವಪ್ನಾವ್ಯಾಯಾಮಾಲಸ್ಯ-ಮಧುರಾಮ್ಲ-ಲವಣ-ಶೀತ-ಸ್ನಿಗ್ಧ-ಗುರು-ಪಿಚ್ಛಿಲಾಭಿಷ್ಯಂದಿ-ಹಾಯನಕ-ಯವಕ-ನೈಷಧೇಕ್ಷುಟ-ಮಾಷ-ಮಹಾಮಾಷ-ಗೋಧೂಮ-ತಿಲ-ಪಿಷ್ಟವಿಕೃತಿ-ದಧಿ-ದುಗ್ಧ-ಕೃಶರಾ-ಪಾಯಸೇಕ್ಷುವಿಕಾರಾನೂಪೌದಕಮಾಂಸ-ವಸಾ-ವಿಸ-ಮೃಣಾಲ-ಕಶೇರುಕ-ಶೃಂಗಾಟಕ-ಮಧುರವಲ್ಲೀಫಲಸಮಶನಾಧ್ಯಶನಪ್ರಭೃತಿಭಿಃ ಶ್ಲೇಷ್ಮಾ ಪ್ರಕೋಪಮಾಪದ್ಯತೇ | (ಸು. 84-85.)

ಕಫಪ್ರಕೋಪಕಾರಣಗಳು

ಹಗಲು ನಿದ್ರೆ, ವ್ಯಾಯಾಮವಿಲ್ಲದಿರೋಣ, ಆಲಸ್ಯ, ಸೀ, ಹುಳಿ, ಉಪ್ಪು, ಶೀತ, ಜಿಡ್ಡು, ಭಾರ, ಪಿಚ್ಚಿಲ (ಅಂಟು), ಅಭಿಷ್ಯಂದಿ (ಅತಿಯಾಗಿ ತ್ಯಾವವನ್ನುಂಟುಮಾಡುವ), ಹಾಯನಕ ಅಕ್ಕಿ, ಯವಧಾನ್ಯ, ನೈಷಧ ಎಂಬ ಧಾನ್ಯ, ಇತ್ಕಟ ಧಾನ್ಯ ಉದ್ದು, ಅಲಸಂದಿ, ಗೋದಿ, ಎಳ್ಳು, ಅಕ್ಕಿಹಿಟ್ಟು, ಇವುಗಳಿಂದ ಮಾಡಿದ ಪದಾರ್ಥಗಳು, ಮೊಸರು, ಹಾಲು, ಕಿಚ್ಚಡಿ, ಪಾಯಸ, ನಾನಾ ವಿಧದ ಕಬ್ಬು, ಜಲದ ಮತ್ತು ಜಲ ಸಮೀಪದ ಜಂತುಗಳ ಮಾಂಸ ಮತ್ತು ಚರಬಿ, ತಾವರಗಡ್ಡೆ ಮತ್ತು ದಂಟುಗಳು, ಕಶೇರುಹುಲ್ಲು, ಶೃಂಗಾಟಕ (ನೀರಿನಲ್ಲಿ ಬೆಳೆಯುವ ನೆಗ್ಗಿಲು) ಸೀಯಾದ ಮತ್ತು ಬಳ್ಳಿಯ ಫಲಗಳು, ಭರ್ತಿಯಾದ ಊಟ, ಅತಿಯಾದ ಊಟ, ಮುಂತಾದವುಗಳಿಂದ ಕಫಪ್ರಕೋಪ ಉಂಟಾಗುತ್ತದೆ.

ಪರಾ ಮಧುರಫಲ ಎಂದರೆ ತಾಳೆ ತೆಂಗು ಮೊದಲಾದವೆಂತಲೂ ವಲ್ಲೀಫಲ ಎಂದರೆ ಸೋರೇಕಾಯಿ ಮುಂತಾದವೆಂತಲೂ ಸಿ ಸಂ ವ್ಯಾ

31. ಕಫ ಪ್ರಕೋಪಕಾಲ

ನ ಶೀತೈಃ ಶೀತಾಕಾಲೇ ಚ ವಸಂತೇ ಚ ವಿಶೇಷತಃ |
ಪೂರ್ವಾಹ್ಣೇ ಚ ಪ್ರದೋಷೇ ಚ ಭುಕ್ತಮಾತ್ರೇ ಪ್ರಕುಪ್ಯತಿ ||
(ಸು. 85)

ಆ ಕಫವು ಶೀತವಾದ ದ್ರವ್ಯಗಳಿಂದಲೂ, ಶೀತಕಾಲದಲ್ಲಿಯೂ, ಮುಖ್ಯವಾಗಿ ವಸಂತ ಋತುವಿನಲ್ಲಿಯೂ, ಹಗಲಲ್ಲ ಪೂರ್ವಾಹ್ನದಲ್ಲಿಯೂ, ರಾತ್ರಿಯಲ್ಲಿ ಪ್ರದೋಷಕಾಲದಲ್ಲಿಯೂ, ಉಂಡಮಾತ್ರದಲ್ಲಿಯೂ, ಪ್ರಕೋಪಗೊಳ್ಳುತ್ತದೆ.

32. ರಕ್ತಕ್ಕೆ ಮುಖ್ಯಸ್ಥಾನ

ಶೋಣಿತಸ್ಯ ಸ್ಥಾನಂ ಯಕೃತ್ಪ್ಲೀಹಾನೌ | ತತ್ರಸ್ಥಮೇವ ಶೇಷಾಣಾಂ ಶೋಣಿತಸ್ಥಾನಾನಾಮನುಗ್ರಹಂ ಕರೋತಿ |
(ಸು 83)

ರಕ್ತದ ಸ್ಥಾನವು ಯಕೃತ್ಪ್ಲೀಹಗಳು, ಅಲ್ಲಿರುವ ರಕ್ತವು ಇತರ ರಕ್ತಸ್ಥಾನಗಳಿಗೆ ಅನುಗ್ರಹ ಮಾಡುತ್ತದೆ.

33. ರಕ್ತದ ಲಕ್ಷಣ

ಅನುಷ್ಣಶೀತಂ ಮಧುರಂ ಸ್ನಿಗ್ಧಂ ರಕ್ತಂ ಚ ವರ್ಣತಃ |
ಶೋಣಿತಂ ಗುರು ಪಿಸ್ರಂ ಸ್ಯಾದ್ವಿದಾಹಶ್ಚಾಸ್ಯ ಪಿತ್ತವತ್ ||
(ಸು. 83-84.)

ರಕ್ತವು ಬಿಸಿಯೂ ಅಲ್ಲದೆ ಶೀತವೂ ಅಲ್ಲದೆಯೂ, ಸೀಯಾಗಿಯೂ, ಜಿಡ್ಡುಳ್ಳದ್ದಾಗಿಯೂ, ವರ್ಣದಲ್ಲಿ ಕೆಂಪಾಗಿಯೂ, ಭಾರವಾಗಿಯೂ, ಹಸಿಮಾಂಸದ ವಾಸನೆಯುಳ್ಳದ್ದಾಗಿಯೂ ಇರುತ್ತದೆ; ಮತ್ತು ಇದಕ್ಕೆ ಪಿತ್ತದಂತೆಯೇ ಸುಡುತ ಉಂಟಾಗುತ್ತದೆ.

34. ರಕ್ತಪ್ರಕೋಪಕ್ಕೆ ಕಾರಣ

ಪಿತ್ತಪ್ರಕೋಪಣೈರೇವ ಚಾಭೀಕ್ಷ್ಣಂ ದ್ರವ-ಸ್ನಿಗ್ಧ-ಗುರುಭಿಶ್ಚಾಹಾರೈರ್ದಿವಾಸ್ವಪ್ನ-ಕ್ರೋಧಾನಲಾತಪ-ಶ್ರಮಾಭಿಘಾತಾಜೀರ್ಣ-ವಿರುದ್ಧಾಧ್ಯಶನಾದಿಭಿರಸೃಕ್ ಪ್ರಕೋಪಮಾಪದ್ಯತೇ | (ಸು. 85.)

ಪಿತ್ತಪ್ರಕೋಪ ಮಾಡತಕ್ಕಂಥವುಗಳಿಂದಲೂ, ಹೆಚ್ಚಾಗಿ ಸೇವಿಸಲ್ಪಟ್ಟ ದ್ರವಸ್ನಿಗ್ಧಗುರು ಆದ ಆಹಾರಗಳಿಂದಲೂ, ಹಗಲುನಿದ್ರೆ, ಸಿಟ್ಟು, ಬೆಂಕಿ, ಬಿಸಿಲು, ಶ್ರಮ, ಪೆಟ್ಟು, ಅಜೀರ್ಣ, ವಿರೋಧವಾದ ಮತ್ತು ಅತಿಯಾದ ಊಟ, ಇವು ಮೊದಲಾದವುಗಳಿಂದಲೂ ರಕ್ತವು ಪ್ರಕೋಪಗೊಳ್ಳುತ್ತದೆ.

35. ಯಸ್ಮಾದ್ರಕ್ತಂ ವಿನಾ ದೋಷೈರ್ನ ಕದಾಚಿತ್ಪ್ರಕುಪ್ಯತಿ ತಸ್ಮಾತ್ತಸ್ಯ ಯಥಾದೋಷಂ ಕಾಲಂ ವಿದ್ಯಾತ್ಪ್ರಕೋಪಣೇ (ಸು. 85.)

ರಕ್ತಪ್ರಕೋಪಕಾಲ

ರಕ್ತವು ದೋಷಗಳಿಂದ ಕೂಡಿಕೊಂಡಲ್ಲದೆ ಯಾವಾಗಲಾದರೂ ಪ್ರಕೋಪವಡುವದಿಲ್ಲವಾದ್ದರಿಂದ, ಅದರ ಪ್ರಕೋಪಣಕಾಲವನ್ನು (ಕೋಪಗೊಂಡ) ಆಯಾ ದೋಷಗಳಿಂದ ತಿಳಿಯತಕ್ಕದ್ದು.

36. ತೇಷಾಮೇಭಿರಾತಂಕವಿಶೇಷೈಃ ಪ್ರಕುಪಿತಾನಾಂ ಪರ್ಯುಷಿತಕಿಣ್ವೋದಕಪಿಷ್ಟಸಮವಾಯ ಇವೋದ್ರಿಕ್ತಾನಾಂ ಪ್ರಸರೋ ಭವತಿ | ತೇಷಾಂ ವಾಯುರ್ಗತಿಮತ್ತ್ವಾತ್ ಪ್ರಸರಣಹೇತುಃ ಸತ್ಯವ್ಯಚೈತನ್ಯೇ ಸ ಹಿ ರಜೋಭೂಯಿಷ್ಠೋ ರಜಶ್ಚ ಪ್ರವರ್ತಕಂ ಸರ್ವಭಾವಾನಾಂ | ಯಥಾ ಮಹಾನುದಕಸಂಚಯೋಽತಿವೃದ್ಧಃ ಸೇತುಮವದಾರ್ಯಾಪರೇಣೋದಕೇನವ್ಯಾಮಿಶ್ರಃ ಸರ್ವತಃ ಪ್ರಧಾವತ್ಯೇವಂ ದೋಷಾಃ ಕದಾಚಿದೇಕಶೋ ದ್ವಿಶಃ ಸಮಸ್ತಾಃ ಶೋಣಿತಸಹಿತಾ ವಾನೇಕಧಾ ಪ್ರಸರಂತಿ | ತದ್ಯಥಾ | ವಾತಃ ಪಿತ್ತಂ ಶ್ಲೇಷ್ಮಾ ಶೋಣಿತಂ ವಾತಪಿತ್ತೇ ವಾತಶ್ಲೇಷ್ಮಾಣೌ ಪಿತ್ತಶ್ಲೇಷ್ಮಾಣೌ ವಾತಶೋಣಿತೇ ಪಿತ್ತಶೋಣಿತೇ ಶ್ಲೇಷ್ಮಶೋಣಿತೇ ವಾತಪಿತ್ತಶೋಣಿತಾನಿ ವಾತಶ್ಲೇಷ್ಮಶೋಣಿತಾನಿ ಪಿತ್ತಶ್ಲೇಷ್ಮಶೋಣಿತಾನಿ ವಾತಪಿತ್ತಕಫಾಃ ವಾತಪಿತ್ತಕಫಶೋಣಿತಾನೀತ್ಯೇವಂ ಪಂಚದಶಧಾ ಪ್ರಸರಂತಿ | (ಸು. 85-86)

ದೋಷಗಳ ಪ್ರಸರಣ ಮತ್ತು ಸಂಯೋಗ

ಈ ವಿವಿಧವಾದ ಆತಂಕಗಳಿಂದ ಪ್ರಕೋಪಗೊಂಡ ದೋಷಗಳು, ಹಿಂದಿನ ದಿನ ಕಿಣ್ವ (ಕಳ್ಳುಮಾಡುವಲ್ಲಿ ಹುಳಿಸುವದಕ್ಕೆ ಉಪಯೋಗಿಸುವ ಬೀಜ)ದ ನೀರಿನಿಂದ ಕಲಸಿಟ್ಟ ಅಕ್ಕಿ ಹಿಟ್ಟಿನ ಮಿಶ್ರದಂತೆ, ಉಕ್ಕಿ, ವೃದ್ಧಿಯಾಗಿ ಪ್ರಸರಿಸುತ್ತವೆ. ಅವುಗಳೊಳಗೆ ವಾಯುವು ಚೇತನವಿಲ್ಲದ್ದಾದರೂ, ಗತಿಯುಳ್ಳದ್ದಾದ್ದರಿಂದ, ಪ್ರಸರಿಸುವಿಕೆಗೆ ಹೇತು. ಯಾಕಂದರೆ ಆ ವಾಯುವು ರಜೋಗುಣದಿಂದ ತುಂಬಿದ್ದು, ಮತ್ತು ರಜಸ್ಸು ಸರ್ವ ಭಾವ(ಪದಾರ್ಥ)ಗಳನ್ನೂ ಪ್ರವರ್ತಿಸತಕ್ಕದ್ದಾಗಿರುತ್ತದೆ ಒಂದು ದೊಡ್ಡ ನೀರಿನ ಸಂಗ್ರಹವು ಅತಿ ವೃದ್ಧಿಯಾದರೆ, ಕಟ್ಟಣವನ್ನು ಕಡಕೊಂಡು ಹೋಗಿ, ಬೇರೆ ನೀರಿನೊಂದಿಗೆ ಸೇರಿ, ಸರ್ವ ಕಡೆಗಳಲ್ಲಿಯೂ ಹ್ಯಾಗೆ ಹರಿದೋಡುತ್ತದೋ, ಹಾಗೆಯೇ ದೋಷಗಳು ಕೆಲವು ವೇಳೆ ಒಂದೊಂದಾಗಿ, ಎರಡೆರಡಾಗಿ, ಒಟ್ಟಾಗಿ, ಅಥವಾ ರಕ್ತಸಹಿತವಾಗಿ, ಅನೇಕ ಪ್ರಕಾರವಾಗಿ ಪ್ರಸರಿಸುತ್ತವೆ. ಹ್ಯಾಗಂದರೆ, ವಾತ, ಪಿತ್ತ, ಕಫ, ರಕ್ತಗಳು (ಒಂದೊಂದಾಗಿ), ವಾತಪಿತ್ತ, ವಾತಕಫ, ಪಿತ್ತಕಫ, ವಾತ

ರಕ್ತ, ಪಿತ್ತರಕ್ತ, ಕಫರಕ್ತ, ವಾತಪಿತ್ತರಕ್ತಗಳು, ವಾತಕಫರಕ್ತಗಳು, ಪಿತ್ತಕಫರಕ್ತಗಳು, ವಾತಪಿತ್ತಕಫಗಳು, ವಾತಪಿತ್ತಕಫರಕ್ತಗಳು (ಒಟ್ಟಾಗಿ), ಹೀಗೆ 15 ವಿಧವಾಗಿ ಪ್ರಸರಿಸುತ್ತವೆ.

37 ಕೃತ್ಸ್ನೋऽರ್ಧಾऽವಯವೇ ವಾಪಿ ಯತ್ರಾಂಗೇ ಕುಪಿತೋ ಭೃಶಂ ।
ದೋಷಗಳು ಇಡೀ ದೇಹವನ್ನು ಅಥವಾ ಭಾಗವನ್ನು ಪೀಡಿಸುವದಕ್ಕೆ ಕಾರಣ
ದೋಷೋ ವಿಕಾರಂ ನಭಸಿ ಮೇಘವತ್ತತ್ರ ವರ್ಷತಿ ॥
ನಾತ್ಯರ್ಥಂ ಕುಪಿತಶ್ಚಾಪಿ ಲೀನೋ ಮಾರ್ಗೇಷು ತಿಷ್ಠತಿ ।
ನಿಃಪ್ರತ್ಯನೀಕಃ ಕಾಲೇನ ಹೇತುಮಾಸಾದ್ಯ ಕುಪ್ಯತಿ ॥ (ಸು 86.)

ಇಡೀ ಅಥವಾ ಅರ್ಧ ಅವಯವದಲ್ಲಿ, ಯಾವ ಅಂಗದಲ್ಲಿ ದೋಷವು ಪ್ರಕೋಪಗೊಂಡದೋ ಅಲ್ಲಿ, ಆ ದೋಷವು ಆಕಾಶದಲ್ಲಿರುವ ಮೋಡದಂತೆ, ವಿಕಾರವನ್ನು ಸುರಿಯುತ್ತದೆ. ಆದರೆ ಅತಿಯಾಗಿ ಕೋಪಗೊಳ್ಳದ ದೋಷವು ಕ್ಷೀಣವಾಗಿ ಮಾರ್ಗಗಳಲ್ಲಿಯೇ ಸುಮ್ಮಗೆ ನಿಲ್ಲುತ್ತದೆ ಮತ್ತು ಕಾಲಾಂತರದಲ್ಲಿ ಹೇತು ಸಿಕ್ಕಿ ಪ್ರಕೋಪಪಡೆಯುತ್ತದೆ

38. ತತ್ರ ವಾಯೋಃ ಪಿತ್ತಸ್ಥಾನಗತಸ್ಯ ಚ ಪಿತ್ತವತ್ಪ್ರತೀಕಾರಃ, ಪಿತ್ತಸ್ಯ ಕಫಸ್ಥಾನಗತಸ್ಯ ಕಫವತ್, ಕಫಸ್ಯ ಚ ವಾತಸ್ಥಾನಗತಸ್ಯ ವಾತವದೇಷ ಕ್ರಿಯಾಽಭಿಭಾಗಃ । (ಸು 86.)
ಅನ್ಯಸ್ಥಾನ ಹೊಂದಿದ ದೋಷಕ್ಕೆ ಉಪಚಾರಕ್ರಮ

ವಾತವು ಪಿತ್ತಸ್ಥಾನಕ್ಕೆ ಹೋದಾಗ್ಗೆ ಪಿತ್ತದಂತೆ, ಪಿತ್ತವು ಕಫಸ್ಥಾನಕ್ಕ ಹೋದಾಗ್ಗೆ ಕಫದಂತೆ, ಕಫವು ವಾತಸ್ಥಾನಕ್ಕ ಹೋದಾಗ್ಗ ವಾತದಂತೆ ಪ್ರತೀಕಾರಮಾಡತಕ್ಕದ್ದಾಗಿರುತ್ತದೆ

39. ಏವಂ ಕುಪಿತಾಸ್ತಾಂಸ್ತಾನ್ ಶರೀರಪ್ರದೇಶಾನಾಗತ್ಯ ತಾಂಸ್ತಾನ್ ವ್ಯಾಧೀನ್ ಜನಯಂತಿ । ತೇ ಯದೋದರಸನ್ನಿವೇಶಂ ಕುರ್ವಂತಿ ತದಾ ಗುಲ್ಮ-ವಿದ್ರಧ್ಯುದರಾಗ್ನಿಸಂಗಾನಾಹ-ಬಸೂಚಿಕಾತಿಸಾರ-ಪ್ರಭೃತೀನ್ ಜನಯಂತಿ ವಸ್ತಿಗತಾಃ ಪ್ರಮೇಹಾಶ್ಮರೀ-ಮೂತ್ರಾಘಾತ-ಮೂತ್ರದೋಷ-ಪ್ರಭೃತೀನ್ । ಮೇಢ್ರಗತಾ ನಿರುದ್ಧಪ್ರಕಾಶೋಪದಂಶ-ಶೂಕದೋಷ-ಪ್ರಭೃತೀನ್ । ಗುದಗತಾ ಭಗಂದರಾರ್ಶಃಪ್ರಭೃತೀನ್ । ವೃಷಣಗತಾ ವೃದ್ಧೀಃ । ಊರ್ಧ್ವಜತ್ರುಗತಾಸ್ತೂರ್ಧ್ವಜಾನ್ । ತ್ವಙ್ಮಾಂಸಶೋಣಿತಸ್ಥಾಃ ಕ್ಷುದ್ರರೋಗಾನ್ ಕುಷ್ಠಾನಿ ವಿಸರ್ಪಾಂಶ್ಚ । ಮೇದೋಗತಾ ಗ್ರಂಥ್ಯಪಚ್ಯರ್ಬುದ-ಗಲಗಂಡಾಲಜೀಪ್ರಭೃತೀನ್ । ಅಸ್ಥಿಗತಾ ವಿದ್ರಧ್ಯನುಶಯೀಪ್ರಭೃತೀನ್ । ಪಾದಗತಾಃ ಶ್ಲೀಪದ-ವಾತಶೋಣಿತ-ವಾತಕಂಟಕಪ್ರಭೃತೀನ್ । ಸರ್ವಾಂಗಗತಾ ಜ್ವರ-ಸರ್ವಾಂಗರೋಗ-ಪ್ರಭೃತೀನ್ । (ಸು. 86.)
ದೋಷಪ್ರವೇಶದಿಂದ ಆಯಾ ಅಂಗಗಳಲ್ಲಿ ಉಂಟಾಗುವ ರೋಗಭೇದಗಳು

ಹೀಗೆ ಕೋಪಗೊಂಡ ದೋಷಗಳು, ಆಯಾ ಶರೀರಭಾಗಗಳನ್ನು ಸೇರಿ, ಆಯಾ ರೋಗಗಳನ್ನು ಹುಟ್ಟಿಸುತ್ತವೆ. ಅವುಗಳು ಉದರದೊಳಗೆ ಗಟ್ಟಿಯಾಗಿ ನಿಂತಲ್ಲಿ, ಗುಲ್ಮ, ವಿದ್ರಧಿ,

ಉದರರೋಗ, ಅಗ್ನಿದೋಷ, ಆನಾಹ, ವಿಷೂಚಿಕಾ, ಅತಿಸಾರ, ಮೊದಲಾದ ರೋಗಗಳನ್ನುಂಟುಮಾಡುತ್ತವೆ. ಮೂತ್ರಾಶಯವನ್ನು ಸೇರಿದಾಗ, ಪ್ರಮೇಹ, ಅಶ್ಮರೀ, ಮೂತ್ರತಡೆ, ಮೂತ್ರದೋಷ, ಇತ್ಯಾದಿ ರೋಗಗಳನ್ನೂ, ಮೇಢ್ರವನ್ನು ಸೇರಿದಾಗ, ನಿರುದ್ಧಪ್ರಕಾಶ, ಉಪದಂಶ, ಶೂಕದೋಷ ಮುಂತಾದ ರೋಗಗಳನ್ನೂ; ಆಸನವನ್ನು ಸೇರಿದಾಗ, ಭಗಂದರ, ಅರ್ಶಸ್ಸು, ಮೊದಲಾದ ರೋಗಗಳನ್ನೂ, ಅಂಡವನ್ನು ಸೇರಿದಾಗ ವೃದ್ಧಿಯೆಂಬವುಗಳನ್ನೂ; ಕುತ್ತಿಗೆ ಮೇಲೆ ಸೇರಿದಾಗ, ಮೇಲ್ಭಾಗದಲ್ಲಿ ಹುಟ್ಟುವ ರೋಗಗಳನ್ನೂ, ಚರ್ಮ, ಮಾಂಸ, ರಕ್ತ, ಇವುಗಳಲ್ಲಿ ನಿಂತಾಗ, ಕ್ಷುದ್ರರೋಗಗಳನ್ನೂ, ಕುಷ್ಠಗಳನ್ನೂ ಮತ್ತು ವಿಸರ್ಪಗಳನ್ನೂ; ಮೇದಸ್ಸಿನೊಳಗೆ ಸೇರಿದಾಗ, ಗ್ರಂಥಿ, ಅಪಚೀ, ಅರ್ಬುದ, ಗಲಗಂಡ, ಅಲಜೀ, ಮುಂತಾದ ರೋಗಗಳನ್ನೂ, ಅಸ್ಥಿಯಲ್ಲಿ ಸೇರಿದಾಗ, ವಿದ್ರಧಿ, ಅನುಶಯೀ, ಮುಂತಾದ ರೋಗಗಳನ್ನೂ; ಪಾದಗಳಲ್ಲಿ ಸೇರಿಕೊಂಡರ, ಶ್ಲೀಪದ, ವಾತಶೋಣಿತ, ವಾತಕಂಟಕ, ಮುಂತಾದ ರೋಗಗಳನ್ನೂ, ಸರ್ವಾಂಗಗಳಲ್ಲಿ ವ್ಯಾಪಿಸಿದಾಗ, ಜ್ವರ, ಸರ್ವಾಂಗರೋಗ ಮುಂತಾದವುಗಳನ್ನೂ ಹುಟ್ಟಿಸುತ್ತವೆ.

40. ದೋಷಸಂಸರ್ಗ ಎರುವ ರೋಗಗಳಿಗೆ ಸಾಮಾನ್ಯ ಪ್ರತೀಕಾರ ಕ್ರಮ

ಸಂಸರ್ಗೇ ಯೋ ಗರೀಯಾನ್ ಸ್ಯಾದುಪಕ್ರಮ್ಯಃ ಸ ವೈ ಭವೇತ್ | ಶೇಷದೋಷಾವಿರೋಧೇನ ಸನ್ನಿಪಾತೇ ತಥೈವ ಚ || (ಸು. 87)

ದೋಷಗಳು ಕೂಡಿಕೊಂಡಾಗ್ಗೆ, ಯಾವದು ಹೆಚ್ಚು ಬಲವುಳ್ಳದ್ದಾಗಿದೋ, ಅದಕ್ಕೆ ತಕ್ಕದಾದ, ಮತ್ತು ಎಕ್ಕ ಕೋಪಗೊಂಡ ದೋಷಗಳಿಗೆ ವಿರೋಧವಾಗದ, ಚಿಕಿತ್ಸೆಯನ್ನು ಉಪಕ್ರಮಿಸಬೇಕು ಹಾಗೆಯೇ ತ್ರಿದೋಷ ಅಥವಾ ಸನ್ನಿಪಾತದಲ್ಲಿ.

41. ದೋಷಕ್ಷಯ ನಿದಾನ

ಕ್ಷಯಃ ಪುನರೇಷಾಮತಿಸಂಶೋಧನಾತಿಸಂಶಮನ-ವೇಗವಿಧಾರಣಾ ಸಾತ್ಮ್ಯಾನ್ನ-ಮನಸ್ತಾಪ-ವ್ಯಾಯಾಮಾನಶನಾತಿಮೈಥುನೈರ್ಭವತಿ | (ಸು. 53.)

ಈ ದೋಷಧಾತುಮಲಗಳ ಕ್ಷಯವು, ಅತಿಯಾಗಿ ಸಂಶೋಧನ, ಸಂಶಮನ ಕ್ರಮಗಳನ್ನು ನಡಿಸುವದರಿಂದಲೂ, (ತೇಗು, ಸೀನು, ಇತ್ಯಾದಿ) ವೇಗಗಳನ್ನು ತಡೆಯುವದರಿಂದಲೂ, ಅಹಿತವಾದ ಆಹಾರದಿಂದಲೂ, ಮನಸ್ತಾಪದಿಂದಲೂ, ಮೈದಂಡನೆಯಿಂದಲೂ ಉಪವಾಸದಿಂದಲೂ, ಅತಿ ಮೈಥುನದಿಂದಲೂ ಉಂಟಾಗುತ್ತದೆ.

ಪರಾ ಈ ವಚನದಲ್ಲಿ ಕಾಣಿಸಿದ ಕಾರಣಗಳಿಂದ ಕಫ ಪಿತ್ತಗಳ ಕ್ಷಯವಲ್ಲದೆ ವಾತಕ್ಷಯವಾಗಲಾರದಾದ್ದರಿಂದ ಕೆಲವರು ಈ ವಚನವನ್ನೇ ಇಲ್ಲಿ ಪಿಟ್ಟುಪಿಟ್ಟಿದ್ದಾರೆಂತ ನಿ ಸಂ ವ್ಯಾ ಹೇಳುತ್ತದೆ

42. ದೋಷಗಳ ಕ್ಷಯಲಕ್ಷಣ ಮತ್ತು ಅವುಗಳ ಪ್ರತೀಕಾರದ ರೀತಿ

ತತ್ರ ವಾತಕ್ಷಯೇ ಮಂದಚೇಷ್ಟತಾಲ್ಪವಾಕ್ತ್ವಮಲ್ಪಹರ್ಷೋ ಮೂಢ ಸಂಜ್ಞತಾ ಚ | ಪಿತ್ತಕ್ಷಯೇ ಮಂದೋಷ್ಮಾಗ್ನಿತಾ ನಿಷ್ಪ್ರಭತ್ವಂ ಚ | ಶ್ಲೇಷ್ಮಕ್ಷಯೇ ರೂಕ್ಷತಾಂತರ್ದಾಹ ಉಮಾಶಯೇತರಾಶಯಶಿರಸಾಂ ಶೂನ್ಯತಾ ಸಂಧಿಶೈಥಿಲ್ಯಂ ತೃಷ್ಣಾ ದೌರ್ಬಲ್ಯಂ ಪ್ರಜಾಗರಣಂ ಚ | ತತ್ರ ಸ್ವಯೋನಿವರ್ಧನದ್ರವ್ಯಾಣ್ಯೇವ ಪ್ರತೀಕಾರಃ | (ಸು. 53.)

ವಾತವು ಕ್ಷೀಣವಾದಾಗ್ಗೆ ಅಂಗಚೇಷ್ಟೆಗಳು ಮಂದವಾಗುತ್ತವೆ ಮತ್ತು ಅಲ್ಪಭಾಷಣ, ಅಲ್ಪಹರ್ಷ, ಮೂಢವಾದ ಎಚ್ಚರ ಸಹ ಉಂಟಾಗುತ್ತವೆ, ಪಿತ್ತವು ಕ್ಷಯವಾದಾಗ್ಗೆ, ಮಂದವಾದ ಬಿಸಿ, ಮಂದವಾದ ಅಗ್ನಿ, ವರ್ಚಸಿಲ್ಲದಿರೋಣ, ಮತ್ತು ಕಫವು ಕ್ಷಯವಾದಾಗ್ಗೆ ರೂಕ್ಷತ್ವ, ಒಳಗೆ ಉರಿ, ಆಮಾಶಯವಲ್ಲದ ಇತರ ಆಶಯಗಳಲ್ಲಿಯೂ, ಶಿರಸ್ಸಿನಲ್ಲಿಯೂ ಶೂನ್ಯಭಾವ, ಸಂದುಗಳು ಸಡಿಲಾಗಿರೋಣ, ಬಾಯಾರಿಕೆ, ಬಲಹೀನತೆ, ನಿದ್ರೆಯಿಲ್ಲದಿರೋಣ, ಸಹ ಉಂಟಾಗುತ್ತವೆ ಈ ದೋಷಗಳಿಗೆ ಆಯಾ ಯೋನಿಯನ್ನು ವರ್ಧಿಸುವ ದ್ರವ್ಯಗಳೇ ಪ್ರತಿಕಾರವಾಗಿರುತ್ತವೆ.

43. ರಸಃ ಪ್ರೀಣಯತಿ ರಕ್ತಪುಷ್ಟಿಂ ಚ ಕರೋತಿ | ರಕ್ತಂ ವರ್ಣಪ್ರಸಾದಂ ಮಾಂಸಪುಷ್ಟಿಂ ಜೀವಯತಿ ಚ | ಮಾಂಸಂ ಶರೀರಪುಷ್ಟಿಂ ಮೇದಸಶ್ಚ |

ಸಪ್ತಧಾತುಗಳ ಕರ್ಮಗಳು

ಮೇದಃ ಸ್ನೇಹಸ್ವೇದೌ ದೃಢತ್ವಂ ಪುಷ್ಟಿಮಸ್ಥ್ನಾಂ ಚ | ಅಸ್ಥಿ ದೇಹಧಾರಣಂ ಮಜ್ಜ್ಞಃ ಪುಷ್ಟಿಂ ಚ | ಮಜ್ಜಾ ಪ್ರೀತಿಂ ಸ್ನೇಹಂ ಬಲಂ ಶುಕ್ರಪುಷ್ಟಿಂ ಪೂರಣಮಸ್ಥ್ನಾಂ ಚ ಕರೋತಿ | ಶುಕ್ರಂ ಧೈರ್ಯಂ ಹ್ಯವಸಂ ಪ್ರೀತಿಂ ದೇಹಬಲಂ ಹರ್ಷಂ ಬೀಜಾರ್ಥಂ ಚ | (ಸು. 52.)

ರಸಧಾತುವು ತೃಪ್ತಿಯನ್ನೂ, ರಕ್ತಪುಷ್ಟಿಯನ್ನೂ ಉಂಟುಮಾಡುತ್ತದೆ. ರಕ್ತವು ವರ್ಣ ಶುದ್ಧತೆಯನ್ನೂ, ಮಾಂಸಪುಷ್ಟಿಯನ್ನೂ ಕೊಟ್ಟು ಬದುಕಿಸುತ್ತದೆ ಮಾಂಸವು ಶರೀರದ ಮತ್ತು ಮೇದಸ್ಸಿನ ಪುಷ್ಟಿಯನ್ನುಂಟುಮಾಡುತ್ತದೆ ಮೇದಸ್ಸು ಜಿಡ್ಡನ್ನೂ, ಬೆವರನ್ನೂ, ದೃಢತೆಯನ್ನೂ, ಎಲುಬುಗಳ ಪುಷ್ಟಿಯನ್ನೂ ಉಂಟುಮಾಡುತ್ತದೆ ಅಸ್ಥಿಧಾತುವು ದೇಹದ ಆಧರಿಸುವಿಕೆಯನ್ನೂ, ಮಜ್ಜಾಧಾತುವಿನ ಪುಷ್ಟಿಯನ್ನೂ ಮಾಡುತ್ತದೆ. ಮಜ್ಜಾಧಾತುವು ಪ್ರೀತಿಯನ್ನೂ, ಸ್ನೇಹವನ್ನೂ, ಬಲವನ್ನೂ, ಶುಕ್ರಪುಷ್ಟಿಯನ್ನೂ, ಅಸ್ಥಿಗಳ ಪೂರ್ತಿಯನ್ನೂ ಮಾಡುತ್ತದೆ. ಶುಕ್ರವು ಧೈರ್ಯವನ್ನೂ, ಶೀಘ್ರವಾಗಿ ಸ್ರಾವವನ್ನೂ, ಪ್ರೀತಿಯನ್ನೂ, ದೇಹದ ಬಲವನ್ನೂ, ಹರ್ಷವನ್ನೂ, ಬೀಜಾರ್ಥವನ್ನೂ ಸಂಪಾದಿಸುತ್ತದೆ.

44. ರಸಕ್ಷಯೇ ಹೃತ್ಪೀಡಾ ಕಂಪಃ ಶೂನ್ಯತಾ ತೃಷ್ಣಾ ಚ | ಶೋಣಿತಕ್ಷಯೇ ತ್ವಕ್ಪಾರುಷ್ಯಮಮ್ಲಶೀತಪ್ರಾರ್ಥನಾ ಸಿರಾಶೈಥಿಲ್ಯಂ ಚ | ಮಾಂಸಕ್ಷಯೇ ಸ್ಫಿಗ್ಗಂಡೌಷ್ಠೋಪಸ್ಥೋರುವಕ್ಷಃಕಕ್ಷಾಪಿಂಡಿಕೋದರಗ್ರೀವಾಶುಷ್ಕತಾ ರೌಕ್ಷ್ಯತೋದೌ ಗಾತ್ರಾಣಾಂ ಸದನಂ ಧಮನೀಶೈಥಿಲ್ಯಂ ಚ | ಮೇದಃಕ್ಷಯೇ ಪ್ಲೇಹಾಭಿವೃದ್ಧಿಃ ಸಂಧಿಶೂನ್ಯತಾ ರೌಕ್ಷ್ಯಂ ಮೇದುರಮಾಂಸಪ್ರಾರ್ಥನಾ ಚ | ಅಸ್ಥಿಕ್ಷಯೇಽಸ್ಥಿತೋದೋ ದಂತನಖಭಂಗೋ ರೌಕ್ಷ್ಯಂ ಚ | ಮಜ್ಜಕ್ಷಯೇಽಲ್ಪಶುಕ್ರತಾ ಪರ್ವಭೇದೋಽಸ್ಥಿನಿಸ್ತೋದೋಽಸ್ಥಿಶೂನ್ಯತಾ ಚ | ಶುಕ್ರಕ್ಷಯೇ ಮೇಢ್ರವೃಷಣವೇದನಾಽಶಕ್ತಿರ್ಮೈಥುನೇ ಚಿರಾದ್ವಾ ಪ್ರಸೇಕಃ ಪ್ರಸೇಕೇ ಚಾಲ್ಪರಕ್ತಶುಕ್ರದರ್ಶನಂ ಚ | ತತ್ರಾಪಿ ಸ್ವಯೋನಿವರ್ಧನದ್ರವ್ಯೋಪಯೋಗಃ ಪ್ರತೀಕಾರಃ | (ಸು. 53.)

ಧಾತುಗಳ ಕ್ಷಯಲಕ್ಷಣ

ರಸಧಾತುವು ಕಡಿಮೆಯಾದಾಗ್ಗೆ ಹೃದಯದಲ್ಲಿ ನೋವು, ನಡುಕು, (ಆಮಾಶಯದಲ್ಲಿ ಅಥವಾ ಮನಸ್ಸಿನಲ್ಲಿ) ಖಾಲಿಭಾವ, ಬಾಯಾರಿಕೆ ಸಹ ಉಂಟಾಗುತ್ತವೆ. ರಕ್ತ ಕಡಿಮೆಯಾದಾಗ್ಗೆ, ಚರ್ಮ ದೊರಗಾಗೋಣ, ಹುಳಿ ಸೀಯ ಇಚ್ಛೆ, ಮತ್ತು ಸಿರಾನಾಡಿಗಳು ಸಡಿಲಾಗೋಣ; ಮಾಂಸಕ್ಷಯದಲ್ಲಿ, ಅಂಡು, ಕೆಪ್ಪಟೆ, ತುಟಿ, ಉಪಸ್ಥ, ತೊಡೆ, ಎದೆ, ಕಂಕುಳು, ಮೊಣಕಾಲ ಒಳಭಾಗ, ಹೊಟ್ಟೆ ಮತ್ತು ಕೊರಳು ಇವುಗಳ ಒಣಗೋಣ, ರೂಕ್ಷತೆ (ಜಿಡ್ಡಿಲ್ಲದಿರೋಣ), ನೋವು, ಸರ್ವಾಂಗ ಬಚ್ಚುಏಕೆ, ಮತ್ತು ಧಮನಿಗಳು ಸಡಿಲಾಗೋಣ; ಮೇದಃಕ್ಷಯದಲ್ಲಿ ಪ್ಲೀಹ ವೃದ್ಧಿಯಾಗೋಣ, ಸಂದುಗಳಲ್ಲಿ ಬಲಹೀನತೆ, (ಚರ್ಮದಲ್ಲಿ) ರೂಕ್ಷತ್ವ, ಮತ್ತು ಅತಿ ಸ್ನಿಗ್ಧವಾದ ಪದಾರ್ಥಗಳಲ್ಲಿಯೂ, ಮಾಂಸಗಳಲ್ಲಿಯೂ ಅಭಿಲಾಷೆ; ಎಲುಬಿನ ಕ್ಷಯದಲ್ಲಿ, ಎಲುಬುಗಳ ನೋವು, ಹಲ್ಲುಗಳ ಮತ್ತು ಉಗುರುಗಳ ಭಂಗ, ಮತ್ತು ರೂಕ್ಷಭಾವ; ಮಜ್ಜಾ ಧಾತುವು ಕ್ಷಯವಾದಲ್ಲಿ, ಶುಕ್ರಾಲ್ಪವಾಗಿರೋಣ, ಗಂಟುಗಳಲ್ಲಿ ತುಂಡಾದ ನೋವು. ಎಲುಬುಗಳೊಳಗೆ ಸಿಡತ, ಮತ್ತು ಎಲುಬುಗಳಲ್ಲಿ ಬಲಹೀನತೆ, ಶುಕ್ರಕ್ಷಯದಲ್ಲಿ ಶಿಶ್ನದ ಮತ್ತು ಅಂಡಗಳ ನೋವು, ಮೈಥುನಪಷಯದಲ್ಲಿ ಅಶಕ್ತಿ, ಮೆಲ್ಲಗಾಗಿ ಇಂದ್ರಿಯಚಲನೆ, ಮತ್ತು ಚಲಿಸಿದ ಶುಕ್ರವು ಅಥವಾ ರಕ್ತವು ಅಲ್ಪವಾಗಿರೋಣ, ಅಥವಾ ಅಲ್ಪವಾದ ರಕ್ತಮಿಶ್ರವಾದ ಶುಕ್ರ, ಈ ದೋಷಗಳು ಕಾಣುವವು. ಇವುಗಳಿಗೆ ಸಹ ಆಯಾ ಧಾತುಗಳ ಯೋನಿಯನ್ನು ವೃದ್ಧಿಮಾಡತಕ್ಕ ದ್ರವ್ಯಗಳನ್ನುಪಯೋಗಿಸುವದೇ ಪ್ರತೀಕಾರವಾಗಿರುತ್ತದೆ

45. ಪುರೀಷಕ್ಷಯೇ ಹೃದಯಪಾರ್ಶ್ವಪೀಡಾ ಸಶಬ್ದಸ್ಯ ಚ ವಾಯೋರೂರ್ಧ್ವಗಮನಂ ಕುಕ್ಷೌ ಸಂಚರಣಂ ಚ | ಮೂತ್ರಕ್ಷಯೇ ವಸ್ತಿತೋದೋಽಲ್ಪಮೂತ್ರತಾ ಚ | ಅತ್ರಾಪಿ ಸ್ವಯೋನಿವರ್ಧನದ್ರವ್ಯಾಣ್ಯೇವ ಪ್ರತೀಕಾರಃ | ಸ್ವೇದಕ್ಷಯೇ ಸ್ತಬ್ಧರೋಮಕೂಪತಾ ತ್ವಕ್‌ಶೋಷಃ ಸ್ಪರ್ಶವೈಗುಣ್ಯಂ ಸ್ವೇದನಾಶಶ್ಚ ತತ್ರಾಭ್ಯಂಗಃ ಸ್ವೇದೋಪಯೋಗಶ್ಚ | ಆರ್ತವಕ್ಷಯೇ ಯಥೋಚಿತಕಾಲಾದರ್ಶನಮಲ್ಪತಾ ವಾ ಯೋನಿವೇದನಾ ಚ | ತತ್ರ ಸಂಶೋಧನಮಾಗ್ನೇಯಾನಾಂ ಚ ದ್ರವ್ಯಾಣಾಂ ವಿಧಿವದುಪಯೋಗಃ | ಸ್ತನ್ಯಕ್ಷಯೇ ಸ್ತನಯೋರ್ಮ್ಲಾನತಾ ಸ್ತನ್ಯಾಸಂಭವೋಽಲ್ಪತಾ ವಾ ತತ್ರ ಶ್ಲೇಷ್ಮವರ್ಧನದ್ರವ್ಯೋಪಯೋಗಃ | ಗರ್ಭಕ್ಷಯೇ ಗರ್ಭಾಸ್ಪಂದನಮನುನ್ನತಕುಕ್ಷಿತಾ ಚ ತತ್ರ ಪ್ರಾಪ್ತವಸ್ತಿಕಾಲಾಯಾಃ ಕ್ಷೀರವಸ್ತಿಪ್ರಯೋಗೋ ಮೇಧ್ಯಾನ್ನೋಪಯೋಗಶ್ಚೇತಿ | (ಸು 53-54.)

ಪುರೀಷಾದಿ ಮಲಗಳ ಕ್ಷಯಲಕ್ಷಣ ಮತ್ತು ಆದರ ಪ್ರತೀಕಾರಕ್ರಮ

ಪುರೀಷವು ಕ್ಷಯವಾದಾಗ್ಗೆ, ಹೃದಯದಲ್ಲಿಯೂ, ಪಕ್ಕಗಳಲ್ಲಿಯೂ ಪೀಡೆ, ವಾಯುವು ಶಬ್ದದೊಡನೆ ಊರ್ಧ್ವವಾಗಿ ಹೋಗುವದು ಮತ್ತು ಹೊಟ್ಟೆಯಲ್ಲಿ ಸಂಚರಿಸುವದು. ಮೂತ್ರವು ಕ್ಷಯವಾದಾಗ್ಗೆ, ಮೂತ್ರಾಶಯದಲ್ಲಿ ನೋವು ಮತ್ತು ಮೂತ್ರ ಅಲ್ಪವಾಗುವದು. ಈ ಎರಡು ದೋಷಗಳಿಗೂ ಸ್ವಯೋನಿವರ್ಧಿಸತಕ್ಕ ದ್ರವ್ಯಗಳನ್ನು ಸೇವಿಸುವದೇ ಪ್ರತೀಕಾರವಾಗಿರುತ್ತದೆ. ಬೆವರು ಕ್ಷಯವಾದಾಗ್ಗೆ ರೋಮಗುಂಡಿಗಳು ಸ್ತಬ್ಧವಾಗಿರುವದು, ಚರ್ಮ ಒಣಗಿರುವದು, ಸ್ಪರ್ಶಜ್ಞಾನ ವಿಕಾರವಾಗಿರುವದು, ಮತ್ತು ಬೆವರದೆ ಇರೋಣ, ಈ ದೋಷಗಳು ಕಾಣುವವು. ಇದಕ್ಕೆ ಅಭ್ಯಂಗಮಾಡಿಸುವದು ಮತ್ತು ಬೆವರಿಸುವ ಉಪಕ್ರಮ

ನಡಿಸುವದು ಪ್ರತೀಕಾರವಾಗಿರುತ್ತದೆ. ರಜಸ್ಸು ಕ್ಷಯವಾದಲ್ಲಿ, ರಜಸ್ಸು ತಕ್ಕ ಕಾಲಗಳಲ್ಲಿ ಕಾಣದೆ ಇರುವದು, ಅಥವಾ ಅಲ್ಪವಾಗಿ ಕಾಣಿಸಿಕೊಳ್ಳುವದು, ಮತ್ತು ಯೋನಿಯಲ್ಲಿ ವೇದನೆ ಸಹ ಉಂಟಾಗುವದು. ಇದಕ್ಕೆ ಶೋಧನಕ್ರಮ ನಡಿಸಿ, ಆಗ್ನೇಯ ಗುಣವುಳ್ಳ ದ್ರವ್ಯಗಳನ್ನು ವಿಧಿಪ್ರಕಾರ ಉಪಯೋಗಿಸುವದು ಪ್ರತೀಕಾರವಾಗಿರುತ್ತದೆ. ಮೊಲೆಹಾಲು ಕ್ಷಯವಾದಾಗ್ಗೆ ಮೊಲೆಗಳು ಬಾಡಿರುವದು, ಮತ್ತು ಹಾಲು ಇಲ್ಲದಿರುವದು, ಅಥವಾ ಅಲ್ಪವಾಗಿ ಇರುವದು, ಈ ದೋಷಗಳು ಕಾಣುವವು. ಇದಕ್ಕೆ ಕಫವೃದ್ಧಿ ಮಾಡತಕ್ಕ ದ್ರವ್ಯಗಳನ್ನುಪಯೋಗಿಸುವದು, ಪ್ರತೀಕಾರ ಗರ್ಭಕ್ಷಯವಾದಾಗ್ಗೆ, ಗರ್ಭ ಹಂದದೆ ಇರುವದು, ಮತ್ತು ಹೊಟ್ಟೆ ಏರದಿರುವದು, ಈ ಲಕ್ಷಣಗಳು ಕಾಣುವವ. ಅದಕ್ಕೆ ಸ್ತ್ರೀಗೆ ವಸ್ತಿ ಕೊಡುವ ಕಾಲ ಬಂದ ಮೇಲೆ ಹಾಲಿನ ವಸ್ತಿ ಪ್ರಯೋಗಿಸುವದು ಮತ್ತು ಬುದ್ದಿದಾರ್ಢ್ಯ ಕೊಡತಕ್ಕ (ಹಾಲು ತುಪ್ಪ ಮುಂತಾದ ಸ್ನಿಗ್ಧ) ಆಹಾರವನ್ನುಪಯೋಗಿಸುವದು.

46. ವೃದ್ಧಿಃ ಪುನರೇಷಾಂ ಸ್ವಯೋನಿವರ್ಧನಾಭ್ಯು*ಪಸೇವನಾದ್ಭವತಿ | ತತ್ರ ವಾತವೃದ್ಧೌ ತ್ವಕ್ಪಾರುಷ್ಯಂ ಕಾರ್ಶ್ಯಂ ಕಾರ್ಷ್ಣ್ಯಂ ಗಾತ್ರಸ್ಫುರಣಮುಷ್ಣಕಾಮಿತಾ ನಿದ್ರಾನಾಶೋಽಲ್ಪಬಲತ್ವಂ ಗಾಢವರ್ಚಸ್ತ್ವಂ ಚ | ಪಿತ್ತವೃದ್ಧೌ ಪೀತಾವಭಾಸತಾ ಸಂತಾಪಃ ಶೀತಕಾಮಿತ್ವಮಲ್ಪನಿದ್ರತಾ ಮೂರ್ಚ್ಛಾ ಬಲಹಾನಿರಿಂದ್ರಿಯದೌರ್ಬಲ್ಯಂ ಪೀತವಿಣ್ಮೂತ್ರನೇತ್ರತ್ವಂ ಚ | ಶ್ಲೇಷ್ಮವೃದ್ಧೌ ಶೌಕ್ಲ್ಯಂ ಶೈತ್ಯಂ ಸ್ಥೈರ್ಯಂ ಗೌರವಮವಸಾದಸ್ತಂದ್ರಾ ನಿದ್ರಾ ಸಂಧ್ಯಸ್ಥಿವಿಶ್ಲೇಷಶ್ಚ | ರಸೋಽತಿವೃದ್ಧೋ ಹೃದಯೋತ್ಕ್ಲೇದಂ ಪ್ರಸೇಕಂ ಚಾಪಾದಯತಿ | ರಕ್ತಂ ರಕ್ತಾಂಗಾಕ್ಷತಾಂ ಸಿರಾಪೂರ್ಣತ್ವಂ ಚ | ಮಾಂಸಂ ಸ್ಫಿಗ್ಗಂಡೌಷ್ಠೌಪಸ್ಫೌರುಬಾಹುಜಂಘಾಸು ವೃದ್ಧಿಂ ಗುರುಗಾತ್ರತಾಂ ಚ | ಮೇದಃ ಸ್ನಿಗ್ಧಾಂಗತಾಮುದರಪಾರ್ಶ್ವವೃದ್ಧಿಂ ಕಾಸಶ್ವಾಸಾದೀನಾಂ ದೌರ್ಗಂಧ್ಯಂ ಚ | ಅಸ್ಥಿ ಅಧ್ಯಸ್ಥೀನ್ಯಧಿದಂತಾಂಶ್ಚ | ಮಜ್ಜಾ ಸರ್ವಾಂಗನೇತ್ರಗೌರವಂ | ಶುಕ್ರಂ ಶುಕ್ರಾಶ್ಮರೀಮತಿಪ್ರಾದುರ್ಭಾವಂ ಚ | ಪುರೀಷಮಾಟೋಪಂ ಕುಕ್ಷೌ ಶೂಲಂ ಚ | ಮೂತ್ರಂ ಮುಹುರ್ಮುಹುಃ ಪ್ರವೃತ್ತಿಂ ವಸ್ತಿತೋದಮಾಧ್ಮಾನಂ ಚ | ಸ್ವೇದಸ್ತ್ವಚೋ ದೌರ್ಗಂಧ್ಯಂ ಕಂಡೂಂ ಚ | ಆರ್ತವಮಂಗಮರ್ದಮತಿಪ್ರವೃತ್ತಿಂ ದೌರ್ಬಲ್ಯಂ ಚ | ಸ್ತನ್ಯಂ ಸ್ತನಯೋರಾಪೀನತ್ವಂ ಮುಹುರ್ಮುಹುಃ ಪ್ರವೃತ್ತಿಂ ತೋದಂ ಚ | ಗರ್ಭೋ ಜರರಾಭವೃದ್ಧಿಂ ಶೋಥಂ ಚ | ತೇಷಾಂ ಯಥಾಸ್ವಂ ಸಂಶೋದನಂ ಕ್ಷಪಣಂ ಚ ಕ್ಷಯಾದಿವೃದ್ಧ್ಯೋಃ ಕ್ರಿಯಾವಿಶೇಷೈಃ ಪ್ರತಿಕುರ್ವೀತ | (ಸು. 54.)

ದೋಷ, ಧಾತು, ಮಲಗಳ ವೃದ್ಧಿ ಲಕ್ಷಣ ಮತ್ತು ಅದರ ಪ್ರತೀಕಾರ

* ಷರಾ ಸ್ವಯೋನಿವರ್ಧನಾತ್ಯುಪಸೇವನಾದ್ಭವತಿ ಎಂಬ ಪಾಠಾಂತರವಿದೆ

ದೋಷಧಾತು ಮಲಗಳ ವೃದ್ಧಿಯು ಆಯಾ ಯೋನಿ ವೃದ್ಧಿಮಾಡತಕ್ಕ ಪದಾರ್ಥಗಳನ್ನೇ ಹೆಚ್ಚಾಗಿ ಸೇವಿಸುವದರಿಂದ ಉಂಟಾಗುತ್ತದೆ ಅವುಗಳಲ್ಲಿ ವಾತವೃದ್ಧಿಯಾದಾಗ್ಗೆ, ಚರ್ಮ ದೊರಗಾಗುವಿಕೆ, ಕೃಶವಾಗೋಣ, ಕಪ್ಪಾಗೋಣ, ದೇಹದಲ್ಲಿ ಚುಮುಚುಮು, ಬಿಸಿಯ ಅಪೇಕ್ಷೆ, ನಿದ್ರೆಯಿಲ್ಲದೆ ಹೋಗೋಣ, ಬಲ ಕಡಿಮೆಯಾಗೋಣ, ಮತ್ತು ಮಲ ಕಾದು

ಹೋಗೋಣ; ಪಿತ್ತವೃದ್ಧಿಯಾದಾಗ್ಗೆ, ಅರಸಿನ ವರ್ಣ, ಉರಿ, ಶೀತದ ಅಪೇಕ್ಷೆ, ಅಲ್ಪ ನಿದ್ರೆ, ಮೂರ್ಚ್ಛೆ, ಬಲಹಾನಿ, ಇಂದ್ರಿಯಗಳ ದುರ್ಬಲತೆ ಮತ್ತು ಮಲ, ಮೂತ್ರ, ಕಣ್ಣು, ಕೂಡ ಅರಸಿನವಾಗೋಣ, ಕಫ ವೃದ್ಧಿಯಾದಾಗ್ಗೆ, ಬಿಳೇ ವರ್ಣ, ಶೈತ್ಯ, ಅಂಗಗಳು ಸರಿಯಾಗಿ ಚಲಿಸದೆ ಸ್ಥಿರವಾಗಿರುವಿಕೆ, ಭಾರವಾಗಿರುವಿಕೆ, ಉತ್ಸಾಹವಿಲ್ಲದಿರೋಣ, ಆಲಸ್ಯ, ನಿದ್ರೆ, ಮತ್ತು ಎಲುಬುಸಂದುಗಳು ಶಿಥಿಲವಾಗೋಣ, ರಸವೃದ್ಧಿಯಾದಾಗ್ಗೆ, ಹೃದಯದಲ್ಲಿ ಸಂಕಟ (ವಾಂತಿಬರುವ ಹಾಗಿನ ಸಂಕಟ) ಮತ್ತು ಜೊಲ್ಲು, ರಕ್ತವೃದ್ಧಿಯಾದಾಗ್ಗೆ, ಅಂಗ ಮತ್ತು ಕಣ್ಣು ಕೆಂಪಾಗೋಣ, ಮತ್ತು ಸಿರಾನಾಳಗಳು ತುಂಬಿರೋಣ, ಮಾಂಸವೃದ್ಧಿಯಾದಾಗ್ಗೆ, ಅಂಡ, ಕೆಪ್ಪಟೆ, ತುಟಿ, ಉಪಸ್ಥ, ತೊಡೆ, ತೋಳು, ಮೊಣಕಾಲುಗಳಲ್ಲಿ ವೃದ್ಧಿ. ಮತ್ತು ದೇಹ ಭಾರವಾಗೋಣ, ಮೇದಸ್ಸು ವೃದ್ಧಿಯಾದಾಗ್ಗೆ, ಅಂಗಗಳು ಜಿಡ್ಡುಳ್ಳದ್ದಾಗೋಣ, ಹೊಟ್ಟೆ ಮತ್ತು ಪಕ್ಕಗಳ ಪೃದ್ಧಿ, ಕೆಮ್ಮು, ಉಬ್ಬಸ, ಮುಂತಾದವು, ಮತ್ತು ದುರ್ವಾಸನೆ, ಅಸ್ಥಿಧಾತು ವೃದ್ಧಿಯಾದಾಗ್ಗೆ, ಎಲುಬು ಮತ್ತು ಹಲ್ಲುಗಳು ಅಧಿಕವಾಗಿ ಉಂಟಾಗೋಣ, ಮಜ್ಜೆ ವೃದ್ಧಿಯಾದಾಗ್ಗೆ, ಸರ್ವಾಂಗ ಮತ್ತು ಕಣ್ಣುಗಳು ಭಾರವಾಗೋಣ; ಶುಕ್ರವೃದ್ಧಿಯಾದಾಗ್ಗೆ, ಶುಕ್ರಾಶ್ಮರೀ ಎಂಬ ಕಲ್ಲುಮೂತ್ರದ ವ್ಯಾಧಿ, ಮತ್ತು ಶುಕ್ರವು ಅತಿಯಾಗಿ ಹೊರಗೆ ಬರೋಣ, ಮಲವೃದ್ಧಿಯಾದಾಗ್ಗೆ, ಹೊಟ್ಟೆಯುಬ್ಬರ, ಮತ್ತು ಹೊಟ್ಟೆ ಶೂಲೆ, ಮೂತ್ರವೃದ್ಧಿಯಾದಾಗ್ಗೆ, ಪದೇಪದೇ ಮೂತ್ರ ಬರೋಣ, ಮೂತ್ರಾಶಯದಲ್ಲಿ ನೋವು ಮತ್ತು ಉಬ್ಬರ, ಬೆವರು ವೃದ್ಧಿಯಾದಾಗ್ಗೆ, ಚರ್ಮದಲ್ಲಿ ದುರ್ವಾಸನೆ ಮತ್ತು ತುರಿಕೆ; ರಜಸ್ಸು ವೃದ್ಧಿಯಾದಾಗ್ಗೆ, ಅಂಗ ಹಿಸಿಕಿದ ಸಂಕಟ, ರಜಸ್ಸು ಹೆಚ್ಚಾಗಿ ಹೊರಗೆ ಹೋಗೋಣ ಮತ್ತು ಅಶಕ್ತಿ, ("ಪೌರ್ಗಂಧ್ಯ"—ಅಂದರೆ ದುರ್ವಾಸನೆ—ಎಂಬ ಪಾಠವೂ ಉಂಟು), ಮೊಲೆಹಾಲು ವೃದ್ಧಿಯಾದಾಗ್ಗೆ, ಮೊಲೆಗಳು ದೊಡ್ಡವಾಗೋಣ, ಪದೇಪದೇ ಹಾಲು ಇಳಿಯೋಣ, ಮತ್ತು ನೋವು, ಗರ್ಭವು ಅತಿ ವೃದ್ಧಿಯಾದಾಗ್ಗೆ, ಹೊಟ್ಟೆ ಬೆಳೆಯೋಣ, ಮತ್ತು ಊದು, ("ಸ್ವೇದಂ"—ಅಂದರೆ ಬೆವರು—ಎಂಬ ಪಾಠವೂ, "ದೌರ್ಬಲ್ಯಂ"—ಅಂದರೆ ದುರ್ಬಲತೆ—ಎಂಬ ಪಾಠವೂ ಉಂಟು) ಸಹ ಉಂಟಾಗುತ್ತವೆ. ಈ ವಿಕಾರಗಳಿಗೆ ಯಥಾಯೋಗ್ಯವಾಗಿ ಶೋಧನೆ ವಿಧಿ ನಡಿಸುವಂಥಾದ್ದು, ಕ್ಷೀಣಮಾಡುವದು ಮತ್ತು ಕ್ಷಯವಾಗುವದಕ್ಕೆ ವಿರುದ್ಧವಲ್ಲದ ವಿಶೇಷ ಕ್ರಮಗಳನ್ನು ನಡಿಸುವದು ಪ್ರತಿಕ್ರಿಯೆ ಆಗಿರುತ್ತದೆ.

ಹಿಂದಿನ ಧಾತು ವೃದ್ಧಿಯಿಂದ ಮುಂದಿನವುಗಳ ವೃದ್ಧಿ

47. ಪೂರ್ವಃ ಪೂರ್ವೋಽತಿವೃದ್ಧತ್ವಾತ್ ವರ್ಧಯೇದ್ಧಿ ಪರಂ ಪರಂ । ತಸ್ಮಾದತಿಪ್ರವೃದ್ಧಾನಾಂ ಧಾತೂನಾಂ ಹ್ರಾಸನಂ ಹಿತಂ ॥ (ಸು. 54.)

ಧಾತುಗಳಲ್ಲಿ ಹಿಂದೆ ಹಿಂದಿನದು ಅತಿಯಾಗಿ ವೃದ್ಧಿಯಾಗುವದರ ದೆಸೆಯಿಂದ ಮುಂದೆ ಮುಂದಿನದು ವೃದ್ಧಿಗೊಳ್ಳುವದಾದ್ದರಿಂದ, ಅತ್ಯಂತ ವೃದ್ಧಿಯಾದ ಧಾತುಗಳನ್ನು ಕಡಿಮೆ ಮಾಡುವದು ಹಿತವಾಗಿರುತ್ತದೆ.

ಬಲದ ಲಕ್ಷಣ.

48. ರಸಾದೀನಾಂ ಶುಕ್ರಾಂತಾನಾಂ ಧಾತೂನಾಂ ಯತ್ಪರಂ ತೇಜಸ್ತತ್ ಖಲ್ವೋಜಸ್ತದೇವ ಬಲಮಿತ್ಯುಚ್ಯತೇ ಸ್ವಶಾಸ್ತ್ರಸಿದ್ಧಾಂತಾತ್ । ತತ್ರ

ಬಲೇನ ಸ್ಥಿರೋಪಚಿತಮಾಂಸತಾ ಸರ್ವಚೇಷ್ಟಾಸ್ವಪ್ರತಿಘಾತಃ ಸ್ವರ ವರ್ಣಪ್ರಸಾದೋ ಬಾಹ್ಯಾನಾಮಾಭ್ಯಂತರಾಣಾಂ ಚ ಕರಣಾನಾ ಮಾತ್ಮಕಾರ್ಯಪ್ರತಿಪತ್ತಿರ್ಭವತಿ || (ಸು. 35.)

ರಸಾದಿ ಶುಕ್ರಾಂತ ಏಳು ಧಾತುಗಳನಂತರದ ತೇಜಸ್ಸು ಯಾವದೋ ಅದೇ ಓಜಸ್ಸು, ಆ ಓಜಸ್ಸಿಗೆ ಶಾಸ್ತ್ರಸಿದ್ಧಾಂತ ಪ್ರಕಾರ ಬಲವೆಂತ ಹೇಳುತ್ತಾರೆ. ಆ ಬಲದಿಂದ ಸ್ಥಿರವಾಗಿ ಮಾಂಸ ಕೂಡಿರೋಣ, ಯಾವ ಚೇಷ್ಟಗೂ (ಶರೀರವಾಙ್ಮನೋವ್ಯಾಪಾರಗಳಿಗೂ) ಆತಂಕ ಏಲ್ಲದಿರೋಣ, ಸ್ವರವೂ ವರ್ಣವೂ ಪ್ರಸನ್ನವಾಗಿರೋಣ, ಹೊರಗಿನ ಮತ್ತು ಒಳಗಿನ ಕರಣಗಳು (ಕರ್ಮೇಂದ್ರಿಯ ಬುದ್ಧೀಂದ್ರಿಯಗಳು) ತಮ್ಮ ತಮ್ಮ ಕೆಲಸಗಳನ್ನು ನಡಿಸುತ್ತಿರೋಣ, ಇವು ಫಲಿಸುತ್ತವೆ.

49. ಸಹಜ-ಕಾಲಜ-ಯುಕ್ತಿಜ ಎಂಬ ಬಲ ಭೇದಗಳು

ತ್ರಿವಿಧಂ ಬಲಮಿತಿ ಸಹಜಂ ಕಾಲಜಂ ಯುಕ್ತಿಕೃತಂ ಚ | ತತ್ರ ಸಹಜಂ ಯಚ್ಛರೀರಸತ್ವಯೋಃ ಪ್ರಾಕೃತಂ | ಕಾಲಕೃತಮೃತುವಿಭಾಗಜಂ ವಯಸ್ಕೃತಂ ಚ | ಯುಕ್ತಿಕೃತಂ ಪುನಃ ತದಾಹಾರಚೇಷ್ಟಾಯೋಗಜಂ | (ಚ. 59.)

ಬಲವು 3 ವಿಧ, ಸಹಜ, ಕಾಲಜ, ಮತ್ತು ಯುಕ್ತಿಜ ಶರೀರದ ಮತ್ತು ಸತ್ವದ ಪ್ರಕೃತಿ ಬಲವೇ ಸಹಜ, ಋತುವನ್ನೂ ವಯಸ್ಸನ್ನೂ ಆಶ್ರಯಿಸಿದ ಬಲವು ಕಾಲಜ, ಆಹಾರ ಮತ್ತು ಚೇಷ್ಟೆಗಳ ಯೋಗದಿಂದ ಉಂಟಾದ ಬಲವು ಯುಕ್ತಿಜ.

50. ಬಲದಲ್ಲಿ ದೋಷ ಉಂಟಾಗುವದಕ್ಕೆ ಕಾರಣ

ಓಜಃ ಸೋಮಾತ್ಮಕಂ ಸ್ನಿಗ್ಧಂ ಶುಕ್ಲಂ ಶೀತಂ ಸ್ಥಿರಂ ರಸಂ | ವಿವಿಕ್ತಂ ಮೃದು ಮೃತ್ಸ್ನಂ ಚ ಪ್ರಾಣಾಯತನಮುತ್ತಮಂ || ದೇಹಸ್ಯಾವಯವ ಸ್ತೇನ ವ್ಯಾಪ್ತೋ ಭವತಿ ದೇಹಿನಾಂ | ತದಭಾವಾಚ್ಚ ಶೀರ್ಯಂತೇ ಶರೀರಾಣಿ ಶರೀರಿಣಾಂ || ಆಭಿಘಾತಾತ್ ಕ್ಷಯಾತ್ಕೋಪಾಚ್ಛೋಕಾದ್ಧ್ಯಾನಾತ್ ಶ್ರಮಾತ್ ಕ್ಷುಧಃ | ಓಜಃ ಸಂಕ್ಷೀಯತೇ ಹ್ಯೇಭ್ಯೋ ಧಾತು ಗ್ರಹಣನಿಃಸೃತಂ || ತೇಜಃ ಸವಿಾರಿತಂ ತಸ್ಮಾದ್ವಿಸ್ರಂಸಯತಿ ದೇಹಿನಃ | (ಸು 55.)

ಓಜಸ್ಸು ಚಂದ್ರಸಂಬಂಧವಾದದ್ದು, ಜಿಡ್ಡುಳ್ಳದ್ದು, ಬೆಳ್ಳಗೆ, ಶೀತ, ಸ್ಥಿರಪಡಿಸುವಂಥಾದ್ದು, ದ್ರವ, ನಿರ್ಮಲ, ಮೃದು, ಪಿಚ್ಚಿಲ, ಮತ್ತು ಪ್ರಾಣಕ್ಕೆ ಮುಖ್ಯವಾದ ಮನೆ ಶರೀರಧಾರಿಗಳ ದೇಹದ ಅವಯವವು ಅದರಿಂದ ವ್ಯಾಪಿಸಲ್ಪಟ್ಟದೆ. ಅದು ಇಲ್ಲದೆ ಹೋದರೆ ಶರೀರಧಾರಿಗಳ ಶರೀರಗಳು ಲಯವಾಗುತ್ತವೆ ಗಾಯದಿಂದಲೂ, ಕ್ಷಯದಿಂದಲೂ, ಕೋಪದಿಂದಲೂ, ಶೋಕದಿಂದಲೂ, ಧ್ಯಾನದಿಂದಲೂ, ಶ್ರಮದಿಂದಲೂ, ಹಸಿವೆಯಿಂದಲೂ ಓಜಸ್ಸು ಕ್ಷಯವಾಗುತ್ತದೆ; ಮತ್ತು ಅವುಗಳ ದೆಸೆಯಿಂದ ತನ್ನ (ಹೃದಯಾದಿ) ಸ್ಥಾನಗಳಿಂದ ಹೊರಟ ಧಾತುವು ವಾಯುವಿನ ಪ್ರೇರಣೆಯಿಂದ ದೇಹಧಾರಿಯಲ್ಲಿ ಹೊರಗೆ ಸ್ರವಿಸುತ್ತದೆ

51. ಬಲದಲ್ಲಿ ಮೂರು ಎಥವಾದ ದೋಷಗಳು — ತ್ರಯೋ ದೋಷಾ ಬಲಸ್ಯೋಕ್ತಾ ವ್ಯಾಪದ್ವಿಸ್ರಂಸನಕ್ಷಯಾಃ | (ಸು. 55.)

ಬಲಕ್ಕೆ ಕೆಡುವಿಕೆ, ಸ್ರವಿಸುವಿಕೆ ಮತ್ತು ಕ್ಷಯ ಎಂಬ ಮೂರು ದೋಷಗಳು ಉಂಟಾಗುತ್ತವೆ.

52 ಅವುಗಳ ಲಕ್ಷಣ — ವಿಶ್ಲೇಷಸಾದೌ ಗಾತ್ರಾಣಾಂ ದೋಷವಿಸ್ರಂಸನಂ ಶ್ರಮಃ | ಅಪ್ರಾಚುರ್ಯಂ ಕ್ರಿಯಾಣಾಂ ಚ ಬಲವಿಸ್ರಂಸಲಕ್ಷಣಂ || ಗುರುತ್ವಂ ಸ್ತಬ್ಧತಾಂಗೇಷು ಗ್ಲಾನಿರ್ವರ್ಣಸ್ಯ ಭೇದನಂ | ತಂದ್ರಾ ನಿದ್ರಾ ವಾತಶೋಫೋ ಬಲವ್ಯಾಪದಿ ಲಕ್ಷಣಂ || ಮೂರ್ಚ್ಛಾ ಮಾಂಸಕ್ಷಯೋ ಮೋಹಃ ಪ್ರಲಾಪೋಽಜ್ಞಾನಮೇವ ಚ | ಪೂರ್ವೋಕ್ತಾನಿ ಚ ಲಿಂಗಾನಿ ಮರಣಂ ಚ ಬಲಕ್ಷಯೇ || (ಸು 56.)

ಅಂಗಗಳ ಶಿಥಿಲತೆ, ಆಯಾಸ, ವಾತಾದಿ ದೋಷಗಳ ಸ್ಥಾನಭ್ರಂಶ, ಶ್ರಮ, ಕೆಲಸಕ್ಕೆ ಹಿಂಜರಿಯುವಿಕೆ, ಇವು ಬಲ ಸ್ರವಿಸಿ ನಷ್ಟವಾದದ್ದರ ಲಕ್ಷಣಗಳು. ಭಾರ, ಸ್ತಬ್ಧತೆ, ಅಂಗಗಳಲ್ಲಿ ಬಳಲುವಿಕೆ, ವರ್ಣಹಾನಿ, ಆಯಾಸ, ನಿದ್ರೆ, ವಾಯುವಿನ ಊದು, ಇವು ಬಲ ಕೆಡುವಿಕೆಯ ಲಕ್ಷಣಗಳು ಮೂರ್ಚ್ಛೆ, ಮಾಂಸಕ್ಷಯ, ಭ್ರಮೆ, ಪ್ರಲಾಪ, ಅಜ್ಞಾನ, ಮೊದಲು ಹೇಳಿದ ಲಕ್ಷಣಗಳು, ಮತ್ತು ಮರಣ, ಬಲಕ್ಷಯದ ಲಕ್ಷಣಗಳಾಗಿರುತ್ತವೆ.

53. ಬಲದೋಷಗಳಿಗೆ ಉಪಚಾರಕ್ರಮ — ತತ್ರ ವಿಸ್ರಂಸೇ ವ್ಯಾಪನ್ನೇ ಚ ಕ್ರಿಯಾವಿಶೇಷೈರವಿರುದ್ಧೈರ್ಬಲಮಾಸ್ಥಾಪಯೇತ್ಾ ನಷ್ಟಸಂಜ್ಞಮಿತರಂ ಚ ವರ್ಜಯೇತ್ಾ | (ಸು. 56.)

ಅವುಗಳಲ್ಲಿ ಶಿಥಿಲತ್ವದಲ್ಲಿಯೂ, ಕೆಡುವಿಕೆಯಲ್ಲಿಯೂ, ವಿರುದ್ಧವಲ್ಲದ (ರಸಾಯನಾದಿ) ವಿಶೇಷ ಕ್ರಮಗಳಿಂದ ಬಲವನ್ನು ಸ್ಥಿರಪಡಿಸಬೇಕು ಬಲಕ್ಷಯದಿಂದ ಎಚ್ಚರಿಕೆ ಕಳೆದು ಹೋದವರನ್ನು ಚಿಕಿತ್ಸೆ ಮಾಡದೆ ಬಿಡಬೇಕು.

54. ವಸಾಧಾತುವಿನ ಲಕ್ಷಣ — ತೇಜೋಽಪ್ಯಾಗ್ನೇಯಂ ಕ್ರಮಶಃ ಪಚ್ಯಮಾನಾನಾಂ ಧಾತೂನಾಮಭಿನಿರ್ವೃತ್ತಮಂತರಸ್ಥಂ ಸ್ನೇಹಜಾತಂ ವಸಾಖ್ಯಂ ಸ್ತ್ರೀಣಾಂ ವಿಶೇಷತೋ ಭವತಿ | ತೇನ ಮಾರ್ದವ-ಸೌಕುಮಾರ್ಯ-ಮೃದ್ವಲ್ಪರೋಮತೋತ್ಸಾಹ-ದೃಷ್ಟಿಸ್ಥಿತಿಪಕ್ತಿಕಾಂತಿದೀಪ್ತಯೋ ಭವಂತಿ | (ಸು. 56.)

ಅಗ್ನಿಸಂಬಂಧವಾದ ತೇಜಸ್ಸು ಕ್ರಮದಂತೆ ಪಾಕವಾಗುತ್ತಿರುವ ಸಪ್ತಧಾತುಗಳಿಂದ ಹೊರಟು, ಚಿಡ್ಡಿನ ಕೂಟವಾಗಿ ಅಂತರಗಳಲ್ಲಿ ನಿಂತು, ವಸೆಯೆಂಬ ಹೆಸರು ಪಡೆದು, ಸ್ತ್ರೀಯರಲ್ಲಿ ವಿಶೇಷವಾಗಿ ಇರುತ್ತದೆ. ಅದರಿಂದ ಮೃದುತ್ವ, ಕೋಮಲಾಂಗತ್ವ, ರೋಮಗಳು ಮೃದುವಾಗಿಯೂ ಅಲ್ಪವಾಗಿಯೂ ಇರೋಣ, ಉತ್ಸಾಹ, ದೃಷ್ಟಿಯಲ್ಲಿಯೂ, ಸ್ಥಿತಿಯಲ್ಲಿಯೂ, ಪಚನಶಕ್ತಿಯಲ್ಲಿಯೂ, ಕಾಂತಿಯಲ್ಲಿಯೂ ಚುರುಕು, ಈ ಗುಣಗಳು ಉಂಟಾಗುತ್ತವೆ.

55. ತತ್ಕಷಾಯ-ತಿಕ್ತ-ಶೀತ-ರೂಕ್ಷ-ವಿಷ್ಟಂಭಿ-ವೇಗವಿಘಾತ-ವ್ಯವಾಯ-ವ್ಯಾಯಾಮ-ವ್ಯಾಧಿಕರ್ಷಣೈಶ್ಚ ವಿಕ್ರಿಯತೇ | ತಸ್ಯಾಪಿ ವಾರುಷ್ಯವರ್ಣ ಭೇದತೋದನಿಷ್ಪ್ರಭತ್ವಾನಿ ವಿಸ್ರಂಸನೇ ಭವಂತಿ | ಕಾರ್ಶ್ಯಂ ಮಂದಾಗ್ನಿತಾಧಸ್ತಿರ್ಯಕ್ಚ್ಯುತಿರ್ವ್ಯಾಪತ್ತೌ ದೃಷ್ಟ್ಯಗ್ನಿಬಲಹಾನ್ಯನಿಲಪ್ರಕೋಪಮರಣಾನಿ ಕ್ಷಯೇ ತತ್ರಾಪಿ ಸ್ನೇಹಪಾನಾಭ್ಯಂಗಪ್ರದೇಹಪರಿಷೇಕಸ್ನಿಗ್ಧಲಘ್ವನ್ನಾನಿ ಕ್ಷಯೇ ವಿದಧೀತ | (ಸು. 56)

ವಸಾದೋಷಗಳ ಮೂರು ವಿಧಗಳು ಮತ್ತು ಅವುಗಳಿಗೆ ಪರಿಹಾರ

ಆ ವಸೆಯು, ಚೊಗರು, ಕಹಿ, ಶೀತ, ರೂಕ್ಷ, ವಿಷ್ಟಂಭಿ ಸ್ವಭಾವದ ಆಹಾರಗಳಿಂದಲೂ, ವೇಗವನ್ನು ತಡೆಯುವದರಿಂದಲೂ, ಪುರುಷಸಂಗದಿಂದಲೂ, ಮೃದಂಡನೆಯಿಂದಲೂ, ವ್ಯಾಧಿ ಪೀಡೆಯಿಂದಲೂ, ವಿಕಾರ ಹೊಂದುತ್ತದೆ ಅದು ಸ್ರವಿಸಿ ನಷ್ಟವಾದಾಗ್ಗೆ, ದರಗುಮೈ, ವರ್ಣಭೇದ, ನೋವು, ಪ್ರಭೆಯಿಲ್ಲದಿರೋಣ, ಈ ಲಕ್ಷಣಗಳು ಕಾಣುವವು. ಕೃಶತೆ, ಅಗ್ನಿ ಮಂದತೆ, ಅಡ್ಡವಾಗಿಯೂ ಅಧೋಮುಖವಾಗಿಯೂ ಸ್ರವಿಸಿಹೋಗೋಣ, ಇವು ವಸೆ ಕೆಟ್ಟದರ ಲಕ್ಷಣಗಳು ದೃಷ್ಟಿ, ಅಗ್ನಿ, ಬಲ, ಇವುಗಳ ಹಾನಿ, ವಾಯುಪ್ರಕೋಪ, ಮತ್ತು ಮರಣ, ಇವು ವಸೆಯು ಕ್ಷಯವಾದ ಲಕ್ಷಣಗಳು ಆಗಲೂ ತೈಲಾದಿ ಸ್ನೇಹಗಳ ಪಾನಾಭ್ಯಂಗನಗಳಿಂದಲೂ, ಲೇಪಗಳಿಂದಲೂ, ಸ್ನಾನಗಳಿಂದಲೂ, ಬಿಡ್ಡಳ್ಳ ಮತ್ತು ಲಘುವಾದ ಆಹಾರಗಳಿಂದಲೂ ವಸೆಯ ಕ್ಷಯವನ್ನು ಉಪಚರಿಸಬೇಕು

56. ದೋಷಧಾತುಮಲಕ್ಷೀಣೋ ಬಲಕ್ಷೀಣೋಽಪಿ ವಾ ನರಃ | ಸ್ವಯೋನಿವರ್ಧನಂ ಯತ್ತದನ್ನಪಾನಂ ಪ್ರಕಾಂಕ್ಷತಿ || ಯದ್ಯದಾಹಾರಜಾತಂ ಹಿ ಕ್ಷೀಣಃ ಪ್ರಾರ್ಥಯತೇ ನರಃ | ತಸ್ಯ ತಸ್ಯ ಸ ಲಾಭೇ ತು ತಂ ತಂ ಕ್ಷಯಮಪೋಹತಿ || ಯಸ್ಯ ಧಾತುಕ್ಷಯಾದ್ವಾಯುಃ ಸಂಜ್ಞಾಕರ್ಮ ಚ ನಾಶಯೇತ್ | ಪ್ರಕ್ಷೀಣಂ ಚ ಬಲಂ ಯಸ್ಯ ನಾಸೌ ಶಕ್ಯಶ್ಚಿಕಿತ್ಸಿತುಮ್ || (ಸು. 56)

ಧಾತ್ವಾದಿಗಳ ಕ್ಷೀಣತೆಯಲ್ಲಿ ಅನ್ನಪಾನ ವಿಚಾರ

ದೋಷಧಾತುಮಲಗಳ ಕ್ಷೀಣತೆ ಹೊಂದಿದ ಅಥವಾ ಬಲಕ್ಷೀಣವಾದ ಮನುಷ್ಯನು ಸ್ವಯೋನಿ (ಅಂದರೆ ಕ್ಷೀಣವಾದ ದೋಷ-ಧಾತು-ಮಲ ಅಥವಾ ಬಲ) ವೃದ್ಧಿಸತಕ್ಕದ್ದಾದ ಅನ್ನಪಾನವನ್ನು ಅಪೇಕ್ಷಿಸುತ್ತಾನೆ ಯಾವ ಯಾವ ಆಹಾರ ಸಮೂಹವನ್ನು ಕ್ಷೀಣವಾದ ಮನುಷ್ಯನು ಅಪೇಕ್ಷಿಸುತ್ತಾನೋ, ಅದದು ಲಭ್ಯವಾದರೆ ಅದು ಆಯಾ ಕ್ಷಯವನ್ನು ಪರಿಹರಿಸುತ್ತದೆ. ಯಾವನ ಧಾತುಕ್ಷಯದಿಂದ ವಾಯುವು ಸಂಜ್ಞಾಕರ್ಮ (ಎಚ್ಚರ)ವನ್ನು ನಾಶಮಾಡುತ್ತದೋ ಅಂಥವನೂ, ಯಾವನ ಬಲವು ಬಹಳವಾಗಿ ಕ್ಷೀಣವಾಗಿದೆಯೋ ಅವನೂ ಚಿಕಿತ್ಸೆಗೆ ಶಕ್ತನಲ್ಲ

57. ದೋಷಃ ಪ್ರಕುಪಿತೋ ಧಾತೂನ್ ಕ್ಷಪಯತ್ಯಾತ್ಮತೇಜಸಾ | ಇದ್ಧಃ ಸ್ವತೇಜಸಾ ವಹ್ನಿರುಟಾಗತಮಿವೋದಕಂ || ವೈಲಕ್ಷಣ್ಯಾಚ್ಛರೀರಾಣಾಮಸ್ಥಾಯಿತ್ವಾತ್ತಥೈವ ಚ | ದೋಷಧಾತುಮಲಾನಾಂ ತು ಪರಿಮಾಣಂ ನ ವಿದ್ಯತೇ || ಏಷಾಂ ಸಮತ್ವಂ ಯಚ್ಚಾಪಿ ಭಿಷಗ್ಭಿರವಧಾರ್ಯತೇ |

ದೋಷಧಾತುಮಲಗಳ ಪರಿಮಾಣದ ವಿಚಾರ

ನ ತತ್ಸ್ವಾಸ್ಥ್ಯದೃತೇ ಶಕ್ಯಂ ವಕ್ತುಮನ್ಯೇನ ಹೇತುನಾ || ದೋಷಾ
ದೀನಾಂ ತ್ವಸಮತಾಮನುಮಾನೇನ ಲಕ್ಷಯೇತ್ | ಅಪ್ರಸನ್ನೇಂದ್ರಿ
ಯಂ ವೀಕ್ಷ್ಯ ಪುರುಷಂ ಕುಶಲೋ ಭಿಷಕ್ || (ಸು. 58.)

ಕೋಪಗೊಂಡ (ವಾತಾದಿ) ದೋಷವು ತನ್ನ ಶಕ್ತಿಯಿಂದ (ರಸಾದಿ) ಧಾತುಗಳನ್ನು, ಉರಿಯುವ ಬೆಂಕಿಯು ತನ್ನ ಶಕ್ತಿಯಿಂದ ಗಡಿಗೆಯೊಳಗಣ ನೀರನ್ನು ಹ್ಯಾಗೋ ಹಾಗೆ, ಬತ್ತಿ ಸುತ್ತದೆ. ಶರೀರಗಳು ಬೇರೆ ಬೇರೆ ಲಕ್ಷಣಗಳುಳ್ಳವಾಗಿರುವದರಿಂದಲೂ, ಒಂದೇ ಸ್ಥಿತಿಯಲ್ಲಿರ ತಕ್ಕವಲ್ಲವಾದ್ದರಿಂದಲೂ ದೋಷಗಳ, ಧಾತುಗಳ ಮತ್ತು ಮಲಗಳ ಪರಿಮಾಣವು ತಿಳಿ ಯಲು ಸಾಧ್ಯವಿಲ್ಲ. ಅವುಗಳು ಸಮವಾಗಿರುತ್ತವೆಂತ ವೈದ್ಯನು ತಿಳಿಯುವದು ಆಯಾ ಮನುಷ್ಯನ ಸ್ವಸ್ಥಸ್ಥಿತಿಯ ಮೇಲೆಯಲ್ಲದೆ ಬೇರೆ ಕಾರಣದಿಂದ ಹೇಳಲು ಶಕ್ಯವಲ್ಲ. ಮನುಷ್ಯನ ಇಂದ್ರಿಯಗಳು ಪ್ರಸನ್ನವಾಗಿರದ್ದನ್ನು ನೋಡಿ ಕುಶಲನಾದ ವೈದ್ಯನು ದೋಷಾದಿಗಳು ಸರಿ ಯಿಲ್ಲವೆಂಬದನ್ನು ಊಹೆಯಿಂದ ಗೊತ್ತುಮಾಡತಕ್ಕದ್ದು.

VIನೇ ಅಧ್ಯಾಯ

ವ್ಯಾಧಿ.

1. ವ್ಯಾಖ್ಯಾನ ತದ್ದುಃಖಸಂಯೋಗಾ ವ್ಯಾಧಯ ಇತ್ಯುಚ್ಯಂತೇ । (ಸು. 4.)

ಜನರಿಗೆ ದುಃಖವನ್ನುಂಟುಮಾಡುವ ಸಂಯೋಗ(ಕೂಡುವಿಕೆ)ಗಳಿಗೆ ವ್ಯಾಧಿಗಳೆಂದು ಹೇಳುತ್ತಾರೆ.

2. ತಚ್ಚ ದುಃಖಂ ತ್ರಿವಿಧಮಾಧ್ಯಾತ್ಮಿಕಮಾಧಿಭೌತಿಕಮಾಧಿದೈವಿಕಮಿತಿ । ತತ್ತು ಸಪ್ತವಿಧಂ ವ್ಯಾಧಾವುಪನಿಪತತಿ । ತೇ ಪುನಃ ಸಪ್ತವಿಧಾ ವ್ಯಾಧಯಃ । ತದ್ಯಥಾ । ಆದಿಬಲಪ್ರವೃತ್ತಾ ಜನ್ಮಬಲಪ್ರವೃತ್ತಾ ದೋಷಬಲಪ್ರವೃತ್ತಾಃ ಸಂಘಾತಬಲಪ್ರವೃತ್ತಾಃ ಕಾಲಬಲಪ್ರವೃತ್ತಾ ದೈವಬಲಪ್ರವೃತ್ತಾಃ ಸ್ವಭಾವಬಲಪ್ರವೃತ್ತಾ ಇತಿ । ತತ್ರಾದಿಬಲಪ್ರವೃತ್ತಾ ಯೇ ಶುಕ್ರ ಶೋಣಿತದೋಷಾನ್ತರಯಾಃ ಕುಷ್ಠಾರ್ಶಃಪ್ರಭೃತಯಃ । ತೇಽಪಿ ದ್ವಿವಿಧಾ ಮಾತೃಜಾಃ ಪಿತೃಜಾಶ್ಚ । ಜನ್ಮಬಲಪ್ರವೃತ್ತಾ ಯೇ ಮಾತುರಪಚಾರಾತ್ ಪಂಗುಜಾತ್ಯಂಧಬಧಿರಮೂಕಖುಣ್ಯಾವಾಮನಪ್ರಭೃತಯೋ ಜಾಯಂತೇ । ತೇಽಪಿ ದ್ವಿವಿಧಾ ರಸಕೃತಾ ದೌಹೃದಾಪಚಾರಕೃತಾಶ್ಚ । ದೋಷಬಲಪ್ರವೃತ್ತಾ ಯ ಆತಂಕಸಮುತ್ಪನ್ನಾ ಮಿಥ್ಯಾಹಾರಾಚಾರಭವಾಶ್ಚ । ತೇಽಪಿ ದ್ವಿವಿಧಾ ಉಮಾಶಯ ಸಮುತ್ಥಾಃ ಪಕ್ವಾಶಯಸಮುತ್ಥಾಶ್ಚ ಪುನಶ್ಚ ದ್ವಿವಿಧಾಃ ಶಾರೀರಾ ಮಾನಸಾಶ್ಚ । ತ ಏತ ಆಧ್ಯಾತ್ಮಿಕಾಃ ॥ ಸಂಘಾತಬಲಪ್ರವೃತ್ತಾ ಯ ಆಗಂತವೋ ದುರ್ಬಲಸ್ಯ ಬಲವದ್ವಿಗ್ರಹಾತ್ತೇಽಪಿ ದ್ವಿವಿಧಾಃ ಶಸ್ತ್ರಕೃತಾ ವ್ಯಾಲಾದಿಕೃತಾಶ್ಚ । ಏತ ಆಧಿಭೌತಿಕಾಃ । ಕಾಲಬಲಪ್ರವೃತ್ತಾ ಯೇ ಶೀತೋಷ್ಣವಾತವರ್ಷಾ ಪ್ರಭೃತಿನಿಮಿತ್ತಾಸ್ತೇಽಪಿ ದ್ವಿವಿಧಾ ವ್ಯಾಪನ್ನರ್ತುಕೃತಾ ಅವ್ಯಾಪನ್ನರ್ತುಕೃತಾಶ್ಚ । ದೈವಬಲಪ್ರವೃತ್ತಾ ಯೇ ದೈವದ್ರೋಹಾದಭಿಶಸ್ತಕಾ ಅಥರ್ವಕೃತಾ ಉಪಸರ್ಗಕೃತಾಶ್ಚ । ತೇಽಪಿ ದ್ವಿವಿಧಾ ವಿದ್ಯುದಶನಿಕೃತಾಃ ಪಿಶಾಚಾದಿಕೃತಾಶ್ಚ ಪುನಶ್ಚ ದ್ವಿವಿಧಾಃ ಸಂಸರ್ಗಜಾ ಆಕಸ್ಮಿಕಾಶ್ಚ । ಸ್ವಭಾವಬಲಪ್ರವೃತ್ತಾಃ ಕ್ಷುತ್ಪಿಪಾಸಾಜರಾಮೃತ್ಯುನಿದ್ರಾಪ್ರಭೃತಯಸ್ತೇಽಪಿ ದ್ವಿವಿಧಾಃ ಕಾಲಕೃತಾ ಅಕಾಲಕೃತಾಶ್ಚ । ತತ್ರ ಪರಿರಕ್ಷಣಕೃತಾಃ ಕಾಲಕೃತಾ ಅಪರಿರಕ್ಷಣಕೃತಾ ಅಕಾಲಕೃತಾಃ । ಏತ ಆಧಿದೈವಿಕಾಃ । ತತ್ರ ಸರ್ವವ್ಯಾಧ್ಯವರೋಧಃ । (ಸು. 93-94.)

ವ್ಯಾಧಿಯ ವಿಧಗಳು

ಆ ದುಃಖವು ಮೂರು ವಿಧ —1. ಆಧ್ಯಾತ್ಮಿಕ, 2. ಆಧಿಭೌತಿಕ, 3 ಆಧಿದೈವಿಕ ಎಂತ. ಅದು ಏಳು ವಿಧವಾದ ವ್ಯಾಧಿಯಲ್ಲಿ ಸೇರಿರುವದಾಗುತ್ತದೆ. ಆ ತ್ರಿವಿಧವಾದ ವ್ಯಾಧಿಗಳನ್ನು ಪುನಃ ಏಳು ವಿಧವಾಗಿ ವಿಭಾಗಿಸಬಹುದು; ಹ್ಯಾಗಂದರೆ 1 ಆದಿಬಲದಿಂದ ಹುಟ್ಟಿದವು,

2. ಜನ್ಮಬಲದಿಂದ ಹುಟ್ಟಿದವು, 3. ದೋಷಬಲದಿಂದ ಹುಟ್ಟಿದವು, 4. ಸಂಘಾತಬಲದಿಂದ ಹುಟ್ಟಿದವು, 5. ಕಾಲಬಲದಿಂದ ಹುಟ್ಟಿದವು, 6. ದೈವಬಲದಿಂದ ಹುಟ್ಟಿದವು, 7. ಸ್ವಭಾವ ಬಲದಿಂದ ಹುಟ್ಟಿದವು, ಹೀಗೆ. ಅವುಗಳೊಳಗೆ ಆದಿಬಲದಿಂದ ಹುಟ್ಟಿದವು ಎಂಬವು ಶುಕ್ರ ಶೋಣಿತಗಳ ದೋಷಗಳೇ ಮೂಲವಾದ ಕುಷ್ಠರೋಗ, ಅರ್ಶಸ್ಸು (ಮೂಲವ್ಯಾಧಿ) ಮುಂತಾದವು, ಅವುಗಳು ತಾಯಿಯ ಶೋಣಿತದಿಂದ ಹುಟ್ಟಿದವು, ತಂದೆಯ ಶುಕ್ರದಿಂದ ಹುಟ್ಟಿದವು, ಎಂತ ಎರಡು ವಿಧ. ಜನ್ಮಬಲದಿಂದ ಹುಟ್ಟಿದವು ಎಂಬವು ತಾಯಿಯ ಅಹಿತಾಚರಣೆಯ ದೆಸೆಯಿಂದ ಹುಟ್ಟುವ ಪಂಗು (ಅಂಗಹೀನತೆ), ಹುಟ್ಟು ಕುರುಡ, ಹುಟ್ಟು ಕಿವುಡ, ಹುಟ್ಟು ಮೂಕ, ಮೂಗಿನಿಂದ ಮಾತಾಡುವವ, ಕುಂಟ, ಮುಂತಾದವರು, ಈ ಜಾತಿಯವು ಎರಡು ವಿಧ ರಸದಿಂದ ಉಂಟಾದವು, ಬಯಕೆಗೆ ಅಪಚಾರ ಮಾಡಿದ್ದರಿಂದ ಉಂಟಾದವು ಎಂತ. ದೋಷಬಲದಿಂದ ಹುಟ್ಟಿದವು ಎಂಬವು ಆತಂಕ(ಇತರ ರೋಗ)ದಿಂದಲೂ, ತಪ್ಪಾದ ಆಹಾರ-ಆಚಾರಗಳಿಂದಲೂ ಹುಟ್ಟಿದವು, ಇವುಗಳಲ್ಲಿ ಆಮಾಶಯದಲ್ಲಿ ಹುಟ್ಟಿದವು, ಪಕ್ವಾಶಯದಲ್ಲಿ ಹುಟ್ಟಿದವು ಎಂತ ಎರಡು ವಿಧ, ಪುನಃ ಶರೀರಕ್ಕ ಸಂಬಂಧಪಟ್ಟವು, ಮನಸ್ಸಿಗೆ ಸಂಬಂಧ ಪಟ್ಟವು, ಎಂತ ಎರಡು ವಿಧ. ಇವುಗಳೆಲ್ಲಾ (ಆದಿಬಲ, ಜನ್ಮಬಲ, ದೋಷಬಲಗಳಿಂದ ಹುಟ್ಟಿದವು) ಆತ್ಮಸಂಬಂಧವಾದ ದುಃಖಗಳು ಸಂಘಾತ(ಪೆಟ್ಟಿನ)ಬಲದಿಂದ ಹುಟ್ಟಿದವು, ಎಂಬವು ಬಲಹೀನನು ಬಲವಂತನೊಂದಿಗೆ ಕಾದಾಡಿ ಬರುವಂಥವು, ಅವುಗಳೊಳಗೆ ಶಸ್ತ್ರಗಳಿಂದ ಉಂಟಾದವು, ಹುಲಿ ಮೊದಲಾದವುಗಳಿಂದ ಉಂಟಾದವು ಎಂತ ಎರಡು ವಿಧ, ಇವು ಆಧಿಭೌತಿಕ ದುಃಖಗಳಾಗಿರುತ್ತವೆ. ಕಾಲಬಲದಿಂದ ಹುಟ್ಟಿದವು ಎಂಬವು, ಶೀತಕಾಲ, ಉಷ್ಣಕಾಲ, ವಾತಕಾಲ, ಮಳೆಗಾಲ ಮುಂತಾದವುಗಳ ನಿಮಿತ್ತ ಹುಟ್ಟುವಂಥವು, ಅವುಗಳಲ್ಲಿ ಎರಡು ವಿಧ. ದುಷ್ಟವಾದ ಋತುವಿನಿಂದ ಹುಟ್ಟಿದವು, ನಿಜಸ್ಥಿತಿಯ ಋತುವಿನಿಂದ ಹುಟ್ಟಿದವು. ದೇವದ್ರೋಹದ ದೆಸೆಯಿಂದ ಅಪವಾದದಿಂದುಂಟಾದವು, ಮಾಟಾದಿ ಅಥವಾ ವೇದ ಮಂತ್ರಪ್ರಭಾವದಿಂದುಂಟಾದವು, ಮತ್ತು ಪಿಶಾಚಾದಿ ಬಾಧೆಯಿಂದುಂಟಾದವು ಸಹ ದೈವ ಬಲದಿಂದ ಹೊರಟವು, ಅವುಗಳು ಸಹ ಎರಡು ವಿಧ ಸಿಡಿಲುಮಿಂಚುಗಳಿಂದುಂಟಾದವು, ಪಿಶಾಚಾದಿಗಳಿಂದುಂಟಾದವು, ಪುನಃ ಸಂಸರ್ಗ(ಸಂಪರ್ಕ)ದಿಂದುಂಟಾದವು, ಆಕಸ್ಮಿಕವಾಗಿ ಉಂಟಾದವು ಎಂಬ ಎರಡು ವಿಧ. ಸ್ವಭಾವಬಲದಿಂದ ಉಂಟಾದವು ಎಂಬವು, ಹಸಿವು, ತೃಷೆ, ಮುದಿತನ, ಮೃತ್ಯು, ನಿದ್ರೆ, ಮುಂತಾದವು. ಅವು ಸಹ ಎರಡು ವಿಧ. ಕಾಲದಿಂದ ಉಂಟಾದವು, ಅಕಾಲದಿಂದ ಉಂಟಾದವು. ಅವುಗಳಲ್ಲಿ ಸಂರಕ್ಷಣೆಯಿದ್ದು ಉಂಟಾದವು, ಕಾಲದಿಂದುಂಟಾದವು, ಪರಿರಕ್ಷಣೆಯಿಲ್ಲದೆ ಉಂಟಾದವು, ಅಕಾಲದಿಂದುಂಟಾದವು. ಇವುಗಳೆಲ್ಲಾ ಆಧಿದೈವಿಕವಾದ ದುಃಖಗಳು.

ಪರಾ 'ಆಪಿಶಸ್ತಕಾ' ಅಂದರೆ ಋಷಿಗಳ ಸಿಟ್ಟಿನಿಂದ ಅಥವಾ ಶಾಪದಿಂದುಂಟಾದವು ಎಂತಲೂ ಜ್ವರಾದಿರೋಗ ಪೀಡಿತರ ಸಂಪರ್ಕದಿಂದುಂಟಾದವು ಉಪಸರ್ಗಜಾ' ಎಂತಲೂ ದೇವಾದಿಗಳಿಗೆ ದ್ರೋಹಕರಾದವರ ಸಂಪರ್ಕದಿಂದುಂಟಾದವು 'ಸಂಸರ್ಗಜಾ' ಎಂತಲೂ ಸಿ ಸಂ ವ್ಯಾ ಹೇಳುತ್ತದೆ

3. ವ್ಯಾಧಿಗಳಿಗೆ ದೋಷಗಳೇ ಮೂಲ

ಸರ್ವೇಷಾಂ ಚ ವ್ಯಾಧೀನಾಂ ವಾತಪಿತ್ತಶ್ಲೇಷ್ಮಾಣ ಏವ ಮೂಲಂ ತಲ್ಲಿಂಗತ್ವಾದ್ದೃಷ್ಟಫಲತ್ವಾದಾಗಮಾಚ್ಚ | (ಸು. 94.)

ಸರ್ವ ವ್ಯಾಧಿಗಳಿಗೂ ವಾತ ಪಿತ್ತ ಶ್ಲೇಷ್ಮಗಳೇ ಮೂಲ. ಅವುಗಳ ಲಕ್ಷಣಗಳಿರುವದ ರಿಂದಲೂ, ಅವುಗಳಿಗೆ ತಕ್ಕ ಪರಿಹಾರದಿಂದ ಫಲ ಕಾಣುವದರಿಂದಲೂ, ಶಾಸ್ತ್ರಾಧಾರವಿರುವದ ರಿಂದಲೂ.

4. ದೋಷಧಾತುಮಲಸಂಸರ್ಗಾದಾಯತನವಿಶೇಷಾನ್ನಿಮಿತ್ತತಶ್ಚ ಷಾಂ ವಿ ಕಲ್ಪಾ ಭವಂತಿ | ದೋಷದೂಷಿತೇಷ್ವತ್ಯರ್ಥಂ ಧಾತುಷು ಸಂಜ್ಞಾ ಕ್ರಿ ಯತೇ ರಸಜೋಽಯಂ ಶೋಣಿತಜೋಽಯಂ ಮಾಂಸಜೋಽಯಂ ಮೇ ದೋಜೋಽಯಮಸ್ಥಿಜೋಽಯಂ ಮಜ್ಜಜೋಽಯಂ ಶುಕ್ರಜೋಽ ಯಂ ವ್ಯಾಧಿರಿತಿ | (ಸು. 94.)

ಧಾತ್ವಾದಿ ಭೇದದ ಮೇಲೆ ವ್ಯಾಧಿಭೇದ

ವಾತಾದಿ ದೋಷಗಳು, ರಸಾದಿ ಧಾತುಗಳು, ಸ್ವೇದಾದಿ ಮಲಗಳು, ಇವುಗಳು ಒಂದಕ್ಕೊಂದು ಕೂಡುವದರ ದೆಸೆಯಿಂದಲೂ, ಸ್ಥಾನವಿಶೇಷದ ದೆಸೆಯಿಂದಲೂ, ಹೇತುವಿನ ದೆಸೆಯಿಂದಲೂ, ವಾತಾದಿ ದೋಷಗಳ ವಿಕಾರಗಳು ಉಂಟಾಗುತ್ತವೆ. ಧಾತುಗಳು ದೋಷಗಳಿಂದ ಅತಿಯಾಗಿ ಕೆಡಿಸಲ್ಪಟ್ಟಾಗ್ಗೆ, ಅದನ್ನು ಸೂಚಿಸುವದಕ್ಕಾಗಿ ಈ ವ್ಯಾಧಿಯು ರಸದಿಂದುತ್ಪನ್ನವಾದದ್ದು, ಇದು ರಕ್ತದಿಂದುತ್ಪನ್ನವಾದದ್ದು, ಇದು ಮಾಂಸದಿಂದುತ್ಪನ್ನವಾದದ್ದು ಇದು ಮೇದಸ್ಸಿನಿಂದುತ್ಪನ್ನವಾದದ್ದು, ಇದು ಎಲುಬಿನಿಂದ ಹುಟ್ಟಿದ್ದು, ಇದು ಮಜ್ಜೆಯಿಂದ ಹುಟ್ಟಿದ್ದು, ಇದು ಶುಕ್ರದಿಂದುತ್ಪನ್ನವಾದದ್ದು, ಎಂಬ ಸಂಜ್ಞೆಮಾಡಲ್ಪಡುತ್ತದೆ

5. ತತ್ರಾನ್ನಾಶ್ರದ್ಧಾರೋಚಕಾವಿಪಾಕಾಂಗಮರ್ದ-ಜ್ವರ - ಹೃಲ್ಲಾಸ-ತೃಪ್ತಿ-ಗೌರವ-ಹೃತ್ಪಾಂಡುರೋಗ-ಮಾಗ್ರ್ಯೋಪರೋಧ-ಕಾರ್ಶ್ಯ-ವೈರಸ್ಯಾಂಗ ಸಾದಾಕಾಲವಲಪಲಿತದರ್ಶನ-ಪ್ರಭೃತಯೋ ರಸದೋಷಜಾ ವಿಕಾರಾಃ | (ಸು. 94.)

ರಸದೋಷಜ ವ್ಯಾಧಿಗಳು

ಈ ಪಕ್ಷದಲ್ಲಿ, ಅನ್ನದಲ್ಲಿ ಉದಾಸೀನ, ಅರುಚಿ, ಅಜೀರ್ಣ, ಮೈಬತ್ತಿಬರುವಿಕೆ, ಜ್ವರ, ಬಿಕ್ಕಟ್ಟು, ತೃಪ್ತಿ, ಮೈಭಾರ, ಹೃದಯರೋಗ, ಪಾಂಡುರೋಗ, ದ್ವಾರಗಳ ತಡೆ, ಕೃಶತೆ, ಬಾಯಿ ಒಣಗುವದು, ಅಂಗಗಳ ಬಾಡ್ಯ, ಕಾಲಕ್ಕೆ ಮೊದಲೇ ನರೆ ಮತ್ತು ನೆರಿ ಕಾಣುವದು, ಇವು ಮೊದಲಾದ ವಿಕಾರಗಳು ರಸದೋಷದಿಂದ ಉಂಟಾಗತಕ್ಕವು

6. ಕುಷ್ಠ - ವಿಸರ್ಪ - ಪಿಡಿಕಾ - ಮಶಕ - ನೀಲಿಕಾ - ತಿಲಕಾಲಕ - ಸ್ನಚ್ಛ - ವ್ಯಂ ಗೇಂದ್ರಲುಪ್ತ - ಪ್ಲೀಹ - ವಿದ್ರಧಿ - ಗುಲ್ಮ - ವಾತಶೋಣಿತಾರ್ಶೋಽರ್ಬು ದಾಂಗಮರ್ದಾಸೃಗ್ದರ - ರಕ್ತಪಿತ್ತಪ್ರಭೃತಯೋ ರಕ್ತದೋಷಜಾಃ | (ಸು. 94-95.)

ರಕ್ತದೋಷಜ ವ್ಯಾಧಿಗಳು

ಕುಷ್ಠರೋಗ, ವಿಸರ್ಪ, ಬೊಕ್ಕೆ, ಮಶಕ (ಕರಿ ದದ್ದು), ನೀಲಿಕಾ (ಕರಿ ಸಿಬ್ಬು), ತಿಲ ಕಾಲಕ (ಎಳ್ಳು), ಮಚ್ಚೆ, ಬಂಗು, ಇಂದ್ರಲುಪ್ತ (ರೋಮ ಉದುರುವದು), ಪ್ಲೀಹವ್ಯಾಧಿ, ವಿದ್ರಧಿ (ಹುಣ್ಣು), ಗುಲ್ಮ, ವಾತರಕ್ತ, ಮೂಲವ್ಯಾಧಿ, ಅರ್ಬುದ, ಮೈನೋವು, ಅಸೃಗ್ದರ, ರಕ್ತಪಿತ್ತ, ಮುಂತಾದವು ರಕ್ತದೋಷದಿಂದುಂಟಾಗುವ ವಿಕಾರಗಳು.

7. ಗುದಮುಖಮೇಢ್ರಪಾಕಾಶ್ಚ ಅಧಿಮಾಂಸಾರ್ಬುದಾಶೋ೯ಽಧಿಜಿಹ್ವೋ
ಪಜಿಹ್ವೋಪಕುಶಗಲಶುಂಡಿಕಾಲಜೀಮಾಂಸಸಂಘಾತೌಷ್ಠಪ್ರಕೋಪಗಲ
ಗಂಡಮಾಲಾಪ್ರಭೃತಯೋ ಮಾಂಸದೋಷಜಾಃ | (ಸು 95)

ಮಾಂಸದೋಷಜ ವ್ಯಾಧಿಗಳು

ಅಸನ, ಬಾಯಿ, ಮೇಢ್ರ ಇವುಗಳು ಬೆಂದುಹೋಗುವದು, ಅಧಿಮಾಂಸ (ದಂತಮೂಲ ರೋಗಗಳೊಳಗೊಂದು), ಅರ್ಬುದ, ಅರ್ಶಸ್ಸು, ಅಧಿಜಿಹ್ವ ಉಪಜಿಹ್ವ (ಇವೆರಡು ಜಿಹ್ವಾ ರೋಗಭೇದಗಳು), ಉಪಕುಶ (ದಂತಮೂಲ ರೋಗಭೇದ), ಗಲಶುಂಡಿಕಾ (ತಾಲು ರೋಗಭೇದ), ಅಲಜೀ (ನೇತ್ರಸಂಧಿರೋಗಭೇದ), ಮಾಂಸಸಂಘಾತ (ತಾಲುರೋಗದ ಭೇದ), ತುಟಿರೋಗ, ಗಂಡಮಾಲೆ ಮುಂತಾದವು ಮಾಂಸದೋಷದಿಂದುಂಟಾಗುವ ವಿಕಾರಗಳಾ ಗಿರುತ್ತವೆ

8. ಮೇದೋದೋಷ ಜ ವ್ಯಾಧಿಗಳು

ಗ್ರಂಥಿ-ವೃದ್ಧಿ-ಗಲಗಂಡಾರ್ಬುದ-ಮೇದೋಜೌಷ್ಠಪ್ರಕೋ-
ಪ ಮಧುಮೇಹಾತಿಸ್ಥೌಲ್ಯಾತಿಸ್ವೇದ - ಪ್ರಭೃತಯೋ ಮೇ
ದೋದೋಷಜಾಃ | (ಸು. 95.)

ಗ್ರಂಥಿ, ಅಂಡವೃದ್ಧಿ, ಗಲಗಂಡ (ಕುತ್ತಿಗೆಯಲ್ಲಿ ಆಗುವ ಅಂಡರೂಪವಾದ ಬೆಳಿಕೆ), ಅರ್ಬುದ, ಮೇದಸ್ಸಿನಿಂದ ಉಂಟಾಗತಕ್ಕ ತುಟಿರೋಗ, ಮಧುಮೇಹ (ಪ್ರಮೇಹಭೇದ), ಅತಿಸ್ಥೂಲತೆ, ಅತಿ ಬೆವರು, ಮುಂತಾದವು ಮೇದಸ್ಸಿನ ದೋಷದಿಂದ ಉಂಟಾಗತಕ್ಕ ವಿಕಾರಗಳು.

9 ಅಸ್ಥಿದೋಷಜ ವ್ಯಾಧಿಗಳು

ಅಧ್ಯಸ್ಥ್ಯಧಿದಂತಾಸ್ಥಿತೋದಶೂಲಕುನಖಪ್ರಭೃತಯೋ-
ಽಸ್ಥಿದೋಷಜಾಃ | (ಸು. 95)

ಅಧಿಕವಾದ ಎಲುಬು, ಅಧಿದಂತ (ದಂತರೋಗಭೇದ), ಎಲುಬಿನ ಸಿಡತ ಮತ್ತು ಶೂಲೆ, ಕುನಖ (ಕ್ಷುದ್ರರೋಗಭೇದ) ಮುಂತಾದವು ಅಸ್ಥಿದೋಷದಿಂದ ಉಂಟಾಗತಕ್ಕ ವಿಕಾರ ಗಳು.

10. ಮಜ್ಜಾದೋಷ ಜವ್ಯಾಧಿಗಳು

ತಮೋದರ್ಶನ-ಮೂರ್ಚ್ಛಾ-ಭ್ರಮ-ಪರ್ವಗೌರವ-ಸ್ಥೂಲ
ಮೂಲೋರುಜಂಘಾ - ನೇತ್ರಾಭಿಸ್ಯಂದ - ಪ್ರಭೃತಯೋ
ಮಜ್ಜದೋಷಜಾಃ | (ಸು. 95.)

ಕಣ್ಣುಕತ್ತಲೆ, ಮೂರ್ಚ್ಛೆ, ಭ್ರಮೆ (ತಲೆತಿರುಕು), ಗಂಟುಗಳು ಭಾರವಾಗುವದು. ತೊಡೆಯ ಮತ್ತು ಮೊಣಕಾಲಿನ ಮೂಲಗಳು ಸ್ಥೂಲವಾಗುವದು, ಕಣ್ಣಿನಿಂದ ನೀರು ಸುರಿಯುವದು, ಮುಂತಾದವು ಮಜ್ಜಾದೋಷದಿಂದ ಉಂಟಾಗತಕ್ಕ ವಿಕಾರಗಳು.

11. ಶುಕ್ರದೋಷ ಜವ್ಯಾಧಿಗಳು

ಕ್ಲೈಬ್ಯಾಪ್ರಹರ್ಷಶುಕ್ರಾಶ್ಮರೀಶುಕ್ರಮೇಹ ಶುಕ್ರದೋಷಾ
ದಯಶ್ಚ ತದ್ದೋಷಜಾಃ | (ಸು. 95.)

ನಪುಂಸಕತ್ವ, ಕಾಮಪ್ರಹರ್ಷವಿಲ್ಲದಿರುವದು, ಶುಕ್ರಾಶ್ಮರೀ (ಅಶ್ಮರೀಭೇದ), ಶುಕ್ರ

ಮೂತ್ರ (ಪ್ರಮೇಹಭೇದ), ಶುಕ್ರದೋಷ, ಮುಂತಾದವು ಶುಕ್ರದೋಷದಿಂದ ಉಂಟಾಗ ತಕ್ಕ ವಿಕಾರಗಳು.

12 ಮಲಾಯತನ ದೋಷದ ವ್ಯಾಧಿಗಳು — ತ್ವಗ್ದೋಷಾಃ ಸಂಗೋಽತಿಪ್ರವೃತ್ತಿರ್ವಾ ಮಲಾಯತನ ದೋಷಾಃ | (ಸು. 95)

(ಕುಷ್ಠಾದಿ) ಚರ್ಮದೋಷಗಳು, ಮಲಬದ್ಧತೆ, ಅಥವಾ ಮಲ ಅತಿಯಾಗಿ ಹೋಗು ವದು, ಇವು ಮಲಸ್ಥಾನದ ದೋಷದಿಂದ ಉಂಟಾಗತಕ್ಕ ವಿಕಾರಗಳು.

13. ಇಂದ್ರಿಯಾಯತನ ವ್ಯಾಧಿಗಳು — ಇಂದ್ರಿಯಾಣಾಮಪ್ರವೃತ್ತಿರಯಥಾಪ್ರವೃತ್ತಿರ್ವೇಂದ್ರಿಯಾಯತನದೋಷಾಃ | (ಸು. 95)

ಇಂದ್ರಿಯಗಳು ಪ್ರವರ್ತಿಸದಿರುವದು, ಅಥವಾ ಕ್ರಮತಪ್ಪಿ ಪ್ರವರ್ತಿಸುವದು, ಇಂದ್ರಿಯ ಸ್ಥಾನದ ದೋಷದಿಂದ ಉಂಟಾಗತಕ್ಕ ವಿಕಾರಗಳು.

ಇತ್ಯೇವಂ ಸಮಾಸ ಉಕ್ತೋ ವಿಸ್ತರಸಿಮಿತ್ತಾನಿ ಚೈಷಾಂ ಪ್ರತಿರೋಗಂ ವಕ್ಷ್ಯಾಮಃ | (ಸು 95.)

ಹೀಗೆ ಸಂಕ್ಷೇಪವಾಗಿ ಹೇಳಲ್ಪಟ್ಟಿತು ಅವುಗಳ ಲಕ್ಷಣಗಳನ್ನು ವಿಸ್ತಾರವಾಗಿ ಆಯಾ ರೋಗದ ಸಂದರ್ಭದಲ್ಲಿ ಹೇಳುವವು

14. ಶರೀರದ ಅಂಗ ವಿಭಾಗದಲ್ಲಿ ವ್ಯಾಧಿಯಾಗಲಕ್ಕೆ ಕಾರಣ — ಕುಪಿತಾನಾಂ ಹಿ ದೋಷಾಣಾಂ ಶರೀರೇ ಪರಿಧಾವತಾಂ | ಯತ್ರ ಸಂಗಃ ಸ್ವವೈಗುಣ್ಯಾದ್ವ್ಯಾಧಿಸ್ತತ್ರೋಪಜಾಯತೇ || (ಸು 95.)

ಕೋಪಗೊಂಡ ದೋಷಗಳು ಶರೀರದೊಳಗೆಲ್ಲಾ ಓಡುತ್ತಿರುವಾಗ್ಗೆ, ಎಲ್ಲಿ ತಮ್ಮ ವಿರುದ್ಧ ಗುಣದಿಂದ* ಸಂಗ ಆಗುತ್ತದೋ, ಅಲ್ಲಿ ವ್ಯಾಧಿಯುಂಟಾಗುತ್ತದೆ

* ಸ್ರೋತಸ್ಸಿನ ವಿರುದ್ಧಗುಣದಿಂದ ಎಂತ ಸಿ ಸಂ ವ್ಯಾ

15 ದೋಷಗಳಿಗೂ ವ್ಯಾಧಿಗಳಿಗೂ ಇರುವ ಸಂಬಂಧದ ವಿಚಾರ — ಭೂಯೋಽತ್ರ ಜಿಜ್ಞಾಸ್ಯಂ ಕಿಂ ವಾತಾದೀನಾಂ ಜ್ವರಾದೀನಾಂ ಚ ನಿತ್ಯಃ ಸಂಶ್ಲೇಷಃ ಪರಿಚ್ಛೇದೋ ವೇತಿ | ಯದಿ ನಿತ್ಯಃ ಸಂಶ್ಲೇಷಃ ಸ್ಯಾತ್ತರ್ಹಿ ನಿತ್ಯಾತುರಾಃ ಸರ್ವ ಏವ ಪ್ರಾಣಿನಃ ಸ್ಯುಃ | ಅಥಾಪ್ಯಸ್ಯಥಾ ವಾತಾದೀನಾಂ ಜ್ವರಾದೀನಾಂ ಚಾನ್ಯತ್ರ ವರ್ತಮಾನಾನಾಮನ್ಯತ್ರ ಲಿಂಗಂ ನ ಭವತೀತಿ ಕೃತ್ವಾ ಯದುಚ್ಯತೇ ವಾತಾದಯೋ ಜ್ವರಾದೀನಾಂ ಮೂಲಾನೀತಿ ತನ್ನ | ಅತ್ರೋಚ್ಯತೇ | ದೋಷಾನ್ ಪ್ರತ್ಯಾಖ್ಯಾಯ ಜ್ವರಾದಯೋ ನ ಭವಂತಿ | ಅಥ ಚ ನ ನಿತ್ಯಃ ಸಂಬಂಧೋ ಯಥಾ ಹಿ ವಿದ್ಯುದ್ವಾತಾಶನಿವರ್ಷಾಣ್ಯಾಕಾಶಂ ಪ್ರತ್ಯಾಖ್ಯಾಯ ನ ಭವಂತಿ | ಸತ್ಯವ್ಯಾಕಾಶೇ ಕದಾಚಿನ್ನ ಭವಂತಿ | ಅಥ ಚ ಸಮಿತ್ತತಸ್ತತ ಏವೋತ್ಪತ್ತಿರಿತಿ ತರಂಗ

ಬುದ್ಬುದಾದಯಶ್ಚೋದಕವಿಶೇಷಾ ಏವ । ವಾತಾದೀನಾಂ ಜ್ವರಾದೀನಾಂ ಚ ನಾಪ್ಯೇವಂ ಸಂಶ್ಲೇಷೋ ನ ಪರಿಚ್ಛೇದಃ ಶಾಶ್ವತಿಕಃ । ಅಥ ಚ ನಿಮಿತ್ತತ ಏವೋತ್ಪತ್ತಿರಿತಿ । (ಸು 95-6.)

ಇಲ್ಲಿ ಪುನಃ ಒಂದು ಶಂಕೆ ಉಂಟಾಗತಕ್ಕದ್ದು ವಾತಾದಿ ದೋಷಗಳು ಮತ್ತು ಜ್ವರಾದಿ ರೋಗಗಳು ನಿತ್ಯವಾಗಿ ಕೂಡಿರುತ್ತವೋ ಅಥವಾ ನಿತ್ಯವಾಗಿ ಅಗಲಿರುತ್ತವೋ? ನಿತ್ಯವಾಗಿ ಕೂಡಿರುವದಾದರೆ, ಪ್ರಾಣಿಗಳೆಲ್ಲಾ ನಿತ್ಯದಲ್ಲೂ ರೋಗಿಗಳಾಗಿರಬೇಕಷ್ಟೆ ಪ್ರತಿ ಪಕ್ಷದಲ್ಲಿ, ಪ್ರತ್ಯೇಕವಿರುವ ವಾತಾದಿ ದೋಷಗಳ ಮತ್ತು ಜ್ವರಾದಿ ರೋಗಗಳ ಬೇರೆಬೇರೆ ಕುರುಹು ಕಾಣುವದಿಲ್ಲ. ಆದ್ದರಿಂದ, ವಾತಾದಿಗಳು ಜ್ವರಾದಿಗಳಿಗೆ ಮೂಲಗಳಂಬದು ಸರಿಯಲ್ಲ. ಇದಕ್ಕೆ ಸಮಾಧಾನವೇನಂದರೆ ದೋಷಗಳನ್ನು ಬಿಟ್ಟು ಜ್ವರಾದಿಗಳು ಉಂಟಾಗುವದಿಲ್ಲ. ಆದರೆ ನಿತ್ಯಸಂಬಂಧವಲ್ಲ. ಮಿಂಚು, ಗಾಳಿ, ಸಿಡಿಲು, ಮತ್ತು ಮಳೆ ಆಕಾಶವನ್ನು (ಮೇಘವನ್ನು) ಬಿಟ್ಟು ಆಗುವದಿಲ್ಲ ಆಕಾಶವಿದ್ದಾಗ್ಯೂ, ಕೆಲವು ವೇಳೆ ಅವುಗಳು ಉಂಟಾಗುವದಿಲ್ಲ. ನಿಮಿತ್ತ ದೊರಕಿದಾಗ್ಗೆ, ಆದರಿಂದಲೇ ಉತ್ಪತ್ತಿಯಾಗುತ್ತದೆ ಹ್ಯಾಗೋ, ಹಾಗೆ ತೆರೆಗಳು, ನೀರಮೇಲಣ ಗುಳ್ಳೆಗಳು, ಮುಂತಾದವು ನೀರಿನ ವಿಕಾರಗಳೇ. ಹಾಗೆಯೇ ವಾತಾದಿಗಳ ಮತ್ತು ಜ್ವರಾದಿಗಳ ಯೋಗವಾಗಲಿ, ವಿಯೋಗವಾಗಲಿ ಶಾಶ್ವತವಾಗಿರುವದಿಲ್ಲ, ನಿಮಿತ್ತ ಕಾರಣದಿಂದಲೇ ಉತ್ಪತ್ತಿಯಾಗುವದಾಗಿರುತ್ತದೆ

16 ವ್ಯಾಧಿಗಳು ಅಸಂಖ್ಯೇಯ ಆದರೆ ದೋಷ ಪರಿಸಂಖ್ಯೇಯ

ತತ್ರ ವ್ಯಾಧಯೋಽಪರಿಸಂಖ್ಯೇಯಾ ಭವಂತ್ಯತಿಬಹುತ್ವಾದ್ದೋಷಾಸ್ತು ಪರಿಸಂಖ್ಯೇಯಾ ಅನತಿಬಹುತ್ವಾತ್ ತಸ್ಮಾದ್ದ್ಯಧೋಚಿತಂ ವಿಕಾರಾ ಉದಾಹರಣಾರ್ಥಂ ಅನವಶೇಷೇಣ ಚ ದೋಷಾ ವ್ಯಾಖ್ಯಾಸ್ಯಂತೇ । (ಚ. 264)

ವ್ಯಾಧಿಗಳು ಅತಿ ಬಹಳ ಇರುವದರಿಂದ, ಅವು ಇಂತಿಷ್ಟೇ ಎಂತ ಗಣನೆ ಮಾಡಲಿಕ್ಕೆ ಸಾಧ್ಯವಿಲ್ಲ ದೋಷಗಳಾದರೆ ಅತಿ ಬಹುವಲ್ಲದ್ದರಿಂದ ಪರಿಮಿತ ಸಂಖ್ಯೆಯವಾಗಿವೆ ಆದ್ದರಿಂದ ದೋಷಗಳನ್ನು ನಿಶ್ಶೇಷವಾಗಿ ವರ್ಣಿಸಿ, ಉದಾಹರಣಾರ್ಥವಾಗಿ ವಿಕಾರಗಳನ್ನು ಯಥೋಚಿತವಾಗಿ ವಿವರಿಸಲಾಗುತ್ತದೆ

17. ದೋಷ ವ್ಯಾಧಿ ಯ ಉಪಚಾರ ರೀತಿ

ನಾಸ್ತಿ ರೋಗೋ ವಿನಾ ದೋಷೈರ್ಯಸ್ಮಾತ್ತಸ್ಮಾದ್ವಿಚಕ್ಷಣಃ । ಅನುಕ್ತಮಪಿ ದೋಷಾಣಾಂ ಲಿಂಗೈರ್ವ್ಯಾಧಿಮುಪಾಚರೇತ್ ॥ (ಸು. 130.)

ದೋಷಗಳಿಂದ ವಿನಾ ರೋಗವು ಹುಟ್ಟುವದಿಲ್ಲವಾದ್ದರಿಂದ, ಹೇಳದೆ ಇದ್ದ ರೋಗವನ್ನಾದರೂ ದೋಷಗಳ ಲಕ್ಷಣಗಳಿಂದ ಬುದ್ಧಿವಂತನು ಉಪಚರಿಸಬೇಕು.

18. ನ ಹಿ ಸರ್ವ ವಿಕಾರಾಣಾಂ ನಾಮತೋಽಸ್ತಿ ಧ್ರುವಾ ಸ್ಥಿತಿಃ । ಸ ಏವ ಕುಪಿತೋ ದೋಷಃ ಸಮುತ್ಥಾನವಿಶೇಷತಃ ॥

ವ್ಯಾಧಿಯ ಹೆಸರಿನ ಮೇಲೆ ಆಧರಿಸ ಕೂಡದು

ಸ್ಥಾನಾಂತರಾಣಿ ಚ ಪ್ರಾಪ್ಯ ವಿಕಾರಾನ್ಕುರುತೇ ಬಹೂನ್ |
ತಸ್ಮಾದ್ವಿಕಾರಪ್ರಕೃತೀರಧಿಷ್ಠಾನಾಂತರಾಣಿ ಚ ||
ಬುಧ್ವಾ ಹೇತುವಿಶೇಷಾಂಶ್ಚ ತೀಕ್ಷ್ಣಂ ಕುರ್ಯಾದುಪಕ್ರಮಂ | (ವಾ. 63.)

ಸರ್ವ ವಿಕಾರಗಳನ್ನು ಹೆಸರು ಕೊಟ್ಟು ಖಂಡಿತವಾಗಿ ಗೊತ್ತುಮಾಡಲಿಕ್ಕೆ ಸಾಧ್ಯವಿಲ್ಲ. ಅದೇ ದೋಷವು ಬೇರೆಬೇರೆ ಕಾರಣಗಳಿಂದ ಕೆದರು, ಸ್ಥಾನಾಂತರಗಳನ್ನು ಸೇರು, ಬಹಳವಾದ ವಿಕಾರಗಳನ್ನು ಉಂಟುಮಾಡುತ್ತದೆ ಆದ್ದರಿಂದ, ವಿಕಾರದ ಪ್ರಕೃತಿಗಳನ್ನೂ ಆಶ್ರಯಸ್ಥಾನ ಭೇದಗಳನ್ನೂ ಹೇತುವಿಶೇಷಗಳನ್ನೂ ತಿಳಿದು ತೀಕ್ಷ್ಣವಾಗಿ ಉಪಕ್ರಮ ಮಾಡತಕ್ಕದ್ದು

19 ಚತ್ವಾರೋ ರೋಗಾ ಭವಂತಿ ಆಗಂತುವಾತಪಿತ್ತಶ್ಲೇಷ್ಮನಿಮಿತ್ತಾಃ | ತೇಷಾಂ ಚತುರ್ಣಾಮಪಿ ರೋಗಾಣಾಂ ರೋಗತ್ವಮೇಕವಿಧಂ ದುಃಖಸಾಮಾನ್ಯಾತ್ | ದ್ವಿವಿಧಾ ಪುನಃ ಪ್ರಕೃತಿರೇಷಾಮಾಗಂತು ನಿಜ ವಿಭಾಗಾತ್ ದ್ವಿವಿಧಂ ಚೈಷಾಮಧಿಷ್ಠಾನಂ ಮನಃಶರೀರವಿಶೇಷಾತ್ | ಏಕಾದಶಾ ಪುನರೇಷಾಮುಪರುಸಂಖ್ಯೇಯಾಃ ಪ್ರಕೃತ್ಯಧಿಷ್ಠಾನಲಿಂಗಾಯತನ ವಿಕಲ್ಪವಿಶೇಷಾಣಾಮಪರಿಸಂಖ್ಯೇಯತ್ವಾತ್ | ಮುಖಾನಿ ತು ಖಲ್ವಾ ಗಂತೋಃ ನಖದಶನಪತನಾಭಿಚಾರಾಭಿಶಾಪಾಭಿಷಂಗವ್ಯಧಬಂಧಪೀಡ ನರಜ್ಜುದಹನಮಂತ್ರಾಶನಿಭೂತೋಪಸರ್ಗಾದೀನಿ | ನಿಜಸ್ಯ ತು ಮುಖಂ ವಾತಪಿತ್ತಶ್ಲೇಷ್ಮಣಾಂ ವೈಷಮ್ಯಂ | (ಚ 109-10)

ವ್ಯಾಧಿಗಳಲ್ಲಿ ನಿಜ ಆಗಂತುಕ ಎಂಬ ಭೇದ

ವಾತ, ಪಿತ್ತ, ಕಫ ನಿಮಿತ್ತವಾದವು, ಆಗಂತು (ಹೊರಗಿನಿಂದ ಬಂದವು) ಎಂತ ರೋಗಗಳು ನಾಲ್ಕು ವಿಧ. ಈ ನಾಲ್ಕು ವಿಧ ರೋಗಗಳಲ್ಲಿ ದುಃಖವು ಸಾಮಾನ್ಯವಾದ್ದರಿಂದ ರೋಗತ್ವವು ಒಂದೇ ವಿಧ. ಪುನಃ ಇವುಗಳ ಪ್ರಕೃತಿಯು, ನಿಜ, ಆಗಂತು ಎಂಬ ಭೇದದಿಂದ ಎರಡು ವಿಧ. ಮತ್ತು ಅವುಗಳ ಆಶ್ರಯಸ್ಥಾನವು ಮನಸ್ಸು, ಶರೀರ ಎಂಬ ಭೇದದಿಂದ ಎರಡು ವಿಧ ಪುನಃ ಇವುಗಳ ಪ್ರಕೃತಿ, ಅಧಿಷ್ಠಾನ, ಹೇತು, ಮನೆ, ರೂಪಾಂತರ, ಇವುಗಳ ವಿಶೇಷಗಳ ಅಗಣಿತತ್ವದ ದೆಸೆಯಿಂದ, ರೋಗವಿಕಾರಗಳು ಸಂಖ್ಯೆ ಪರಿಮಿತಿಯಿಲ್ಲದವು ಆಗಿರುತ್ತವೆ. ಆದರೆ ಆಗಂತುರೋಗದ ಮುಖಗಳು, ಉಗುರು, ಹಲ್ಲು, ಬೀಳೋಣ, ಮಾಟಾದಿ ಅಥರ್ವಣ, ಶಾಪ, ಅಣೆಭಾಷೆ, ಚುಚ್ಚುಮಕೆ, ನಿರ್ಬಂಧ, ಹಿಸುಕುವಿಕೆ, ಹಗ್ಗ, ಸುಡುವಿಕೆ, ಮಂತ್ರ, ಸಿಡಿಲು, ಭೂತ, ಉಪಸರ್ಗ,* ಇವೇ ಮೊದಲಾದವಾಗಿರುತ್ತವೆ, ನಿಜ ರೋಗದ ಮುಖವು ವಾತಪಿತ್ತಶ್ಲೇಷ್ಮಗಳ ವಿಷಮತ್ವವಾಗಿರುತ್ತದೆ.

* ಮೇಲೆ 2ನೇ ಸಂಖ್ಯೆಯ ಪರಾ ನೋಡು

20. ಆಗಂತುವ್ಯಾಧಿಯಲ್ಲಿ ದೋಷ ವೈಷಮ್ಯ ವ್ಯಥಾನಂತರ ಉಂಟಾಗುವದು

ಆಗಂತುರ್ಹಿ ವ್ಯಥಾಪೂರ್ವಸಮುತ್ಪನ್ನೋ ಜಘನ್ಯಂ ವಾತಪಿತ್ತಶ್ಲೇಷ್ಮಣಾಂ ವೈಷಮ್ಯಮಾಪಾದಯತಿ | ನಿಜೋ ತು ವಾತಪಿತ್ತಶ್ಲೇಷ್ಮಾಣಃ ಪೂರ್ವಂ ವೈಷಮ್ಯಮಾಪದ್ಯಂತೇ ಜಘನ್ಯಂ ವ್ಯಥಾಮಭಿನಿರ್ವರ್ತಯಂತಿ | (ಚ. 110)

ಆಗಂತುರೋಗವು ವ್ಯಥೆಯನ್ನು ಕೂಡಿಕೊಂಡೇ ಉತ್ಪನ್ನವಾಗಿ, ಆನಂತರ ವಾತ ಪಿತ್ತ

ಕಫಗಳ ವಿಷಮಭಾವವನ್ನು ತರುತ್ತದೆ. ನಿಜ ರೋಗದಲ್ಲಿಯಾದರೆ, ಆದಿಯಲ್ಲಿಯೇ ವಾತ ಪಿತ್ತ ಕಫಗಳು ವಿಷಮಭಾವವನ್ನು ಹೊಂದಿ, ಅನಂತರ ವ್ಯಧೆಯನ್ನು ತರುತ್ತವೆ.

21. ಪ್ರಸಂಗಾದ್ಗಾತ್ರಸಂಸ್ಪರ್ಶಾನ್ನಿಃಶ್ವಾಸಾತ್ಸಹಭೋಜನಾತ್ ।
ಸಾಂಕ್ರಮಿಕ ರೋಗಗಳು
ಸಹಶಯ್ಯಾಸನಾಚ್ಚಾಪಿ ವಸ್ತ್ರಮಾಲ್ಯಾನುಲೇಪನಾತ್ ॥
ಕುಷ್ಠಂ ಜ್ವರಶ್ಚ ಶೋಷಶ್ಚ ನೇತ್ರಾಭಿಷ್ಯಂದ ಏವ ಚ ।
ಔಪಸರ್ಗಿಕರೋಗಾಶ್ಚ ಸಂಕ್ರಾಮಂತಿ ನರಾನ್ನರಂ ॥ (ಸು. 264.)

ಮೈಧುನ, ಮೈ ಮುಟ್ಟುವದು, ಹೊರಶ್ವಾಸ, ಒಟ್ಟಿಗೆ ಉಣ್ಣುವದು, ಒಟ್ಟಿಗೆ ಮಲಗುವದು, ಒಟ್ಟಿಗೆ ಕೂತುಕೊಳ್ಳುವದು, ವಸ್ತ್ರ, ಮಾಲೆ, ಗಂಧಾದಿಲೇಪನ, ಇವುಗಳ ಮೂಲಕ ಸಂಪರ್ಕ, ಇವುಗಳಿಂದ ಕುಷ್ಠವ್ಯಾಧಿ, ಜ್ವರ, ಕ್ಷಯ. ನೀರು ಸುರಿಯುವ ಕಣ್ಣಿನ ವ್ಯಾಧಿ, ಮತ್ತು ಆಧಿದೈವಿಕರೂಪವಾದ ಪಿಲಿಗೆ, ಕೋರ ಮುಂತಾದ ರೋಗಗಳು ಜನದಿಂದ ಜನಕ್ಕೆ ಬದಲಿಬರುತ್ತವೆ.

ಷರಾ ಮೇಲಿನ 2ನೇ ಶ್ಲೋಕದ ಪ್ರಥಮ 2 ಚರಣಗಳ ಸ್ಥಾನದಲ್ಲಿ-
"ಕಂಡೂಕುಷ್ಠೋಪದಂಶಶ್ಚ ಭೂತೋನ್ಮಾದವ್ರಣಜ್ವರಾಃ" । ಎಂತ (ಭಾ ಪ್ರ 539)
ಇದರಿಂದ ತುರಿ ಪಿಟ್ಟ, ಉಪದಂಶ (ಸ್ತ್ರೀಸಂಗಾದ ವ್ಯಾಧಿ), ದೈವಜ ಹುಚ್ಚು ಮತ್ತು ವ್ರಣ ಇವು ಸಹ ಸಾಂಕ್ರಾಮಿಕ ವ್ಯಾಧಿಗಳಿಂತ ಹೇಳಿದಂತಾಯಿತು 'ಪ್ರಸಂಗಾತ್' ಅಂದರೆ ಪದೇಪದೇ ಅಭ್ಯಾಸವಾಗಿ ಮಾಡಿದ ಎಂಬ ಅರ್ಥ ಬರೆದದ್ದು ಕಾಣುತ್ತದೆ ಅದು ಸರಿ ಕಾಣುವದಿಲ್ಲ

ಗಂಧರೋಗಃ ಫಿರಂಗೋಽಯಂ ಜಾಯತೇ ದೇಹಿನಾಂ ಧ್ರುವಂ ।
ಫಿರಂಗಿನೋಽಂಗಸಂಸರ್ಗಾತ್ ಫಿರಂಗಿಣ್ಯಾಃ ಪ್ರಸಂಗತಃ ॥
ಗಂಧರೋಗ
ವ್ಯಾಧಿರಾಗಂತುಜೋ ಹ್ಯೇಷ ದೋಷಾಣಾಮತ್ರ ಸಂಕ್ರಮಃ ।
ಭವೇತ್ತಂ ಲಕ್ಷಯೇತ್ತೇಷಾಂ ಲಕ್ಷಣೈರ್ಭಿಷಜಾಂ ವರಃ ॥ (ಭಾ ಪ್ರ 562.)

ಫಿರಂಗಿರೋಗ ಉಳ್ಳವನ ಮೈಮುಟ್ಟುವದರಿಂದ, ಅಥವಾ ಫಿರಂಗಿರೋಗ ಉಳ್ಳವಳ ಸಹವಾಸದಿಂದ, ಫಿರಂಗಿ ಎಂಬ ರೋಗವು ಮನುಷ್ಯರಿಗೆ ನಿಶ್ಚಯವಾಗಿ ಬರುತ್ತದೆ. ಅದು ಗಂಧ ರೋಗ ಮತ್ತು ಆಗಂತುಕ. ಅದರಲ್ಲಿ ದೋಷಗಳು ಬದಲಿಬರುತ್ತವೆ. ಅವುಗಳ ಲಕ್ಷಣಗಳಿಂದ ಅದನ್ನು ವೈದ್ಯಶ್ರೇಷ್ಠನು ಪರೀಕ್ಷಿಸಬೇಕು

22. ಸ್ನೇಹಾದಿ ಕ್ರಿಯಾಸಾಧ್ಯ ವ್ಯಾಧಿಗಳಲ್ಲಿ ಶಸ್ತ್ರಕರ್ಮ ಅಪ್ರಶಸ್ತ
ದ್ವಿವಿಧಾ ವ್ಯಾಧಯಃ ಶಸ್ತ್ರಸಾಧ್ಯಾಃ ಸ್ನೇಹಾದಿಕ್ರಿಯಾ ಸಾಧ್ಯಾಶ್ಚ । ತತ್ರ ಶಸ್ತ್ರಸಾಧ್ಯೇಷು ಸ್ನೇಹಾದಿಕ್ರಿಯಾ ನ ಪ್ರತಿಷಿಧ್ಯತೇ । ಸ್ನೇಹಾದಿಕ್ರಿಯಾಸಾಧ್ಯೇಷು ಶಸ್ತ್ರಕರ್ಮ ನ ಕ್ರಿಯತೇ । (ಸು. 93)

ವ್ಯಾಧಿಗಳು ಶಸ್ತ್ರಪ್ರಯೋಗದಿಂದ ಸಾಧ್ಯವಾದವು, ಸ್ನೇಹಾದಿಕ್ರಿಯೆಗಳಿಂದ ಸಾಧ್ಯವಾದವು ಎಂತ ಎರಡು ವಿಧ. ಅವುಗಳಲ್ಲಿ ಶಸ್ತ್ರಸಾಧ್ಯವಾದ ವ್ಯಾಧಿಗಳಿಗೆ ಸ್ನೇಹಾದಿಕ್ರಿಯೆಯು ನಿಷೇಧಿಸಲ್ಪಟ್ಟಿರುವದಿಲ್ಲ, ಆದರೆ ಸ್ನೇಹಾದಿಕ್ರಿಯೆಗಳಿಂದ ಸಾಧ್ಯವಾದ ರೋಗಗಳಲ್ಲಿ ಶಸ್ತ್ರಕರ್ಮವು ನಡಿಸಲ್ಪಡುವದಿಲ್ಲ.

VIIನೇ ಅಧ್ಯಾಯ

ಪ್ರಸಿದ್ಧವಾದ ರೋಗಗಳ ಹೆಸರು ಮತ್ತು ಭೇದಗಳು

ರೋಗಾಣಾಂ ಗಣನಾ ಪೂರ್ವಂ ಮುನಿಭಿರ್ಯಾ ಪ್ರಕೀರ್ತಿತಾ ।
ಮಯಾತ್ರ ಪ್ರೋಚ್ಯತೇ ಸೈವ ತದ್ಭೇದಾ ಬಹವೋ ಮತಾಃ ॥ ೧ ॥
ಪಂಚವಿಂಶತಿರುದ್ದಿಷ್ಟಾ ಜ್ವರಾಸ್ತದ್ಭೇದ ಉಚ್ಯತೇ ।
ಪೃಥಗ್ದೋಷೈಸ್ತ್ರಯೋದ್ವಂದ್ವಭೇದೇನ ತ್ರಿವಿಧಃ ಸ್ಮೃತಃ ॥ ೨ ॥
ಏಕಶ್ಚ ಸನ್ನಿಪಾತೇನ ತದ್ಭೇದಾ ಬಹವಃ ಸ್ಮೃತಾಃ ।
ಪ್ರಾಯಶಃ ಸನ್ನಿಪಾತೇನ ಪಂಚ ಸ್ಯುರ್ವಿಷಮಜ್ವರಾಃ ॥ ೩ ॥
ಸಂತತಃ ಸತತಶ್ಚೈವ ಅನ್ಯೇದ್ಯುಷ್ಕಸ್ತೃತೀಯಕಃ ।
ಚಾತುರ್ಥಕಶ್ಚ ಪಂಚೈತೇ ಕೀರ್ತಿತಾ ವಿಷಮಜ್ವರಾಃ ॥ ೪ ॥

ಪೂರ್ವದಲ್ಲಿ ಮುನಿಗಳಿಂದ ವಿವರಿಸಲ್ಪಟ್ಟ ರೋಗಗಳ ಗಣನೆಯು ಇಲ್ಲಿ ಹೇಳಲ್ಪಡುತ್ತದೆ. ಅವುಗಳ ಭೇದಗಳು ಬಹಳವಾಗಿವೆ ಎಂತ ತಿಳಿದಿದ್ದಾರೆ

1 ಜ್ವರಗಳು (Fevers) 25 — ವಾತ, ಪಿತ್ತ, ಕಫ ದೋಷಗಳಿಂದ 3, ಎರಡೆರಡು ಕೂಡಿ 3, ಬಹು ಭೇದಗಳುಳ್ಳ ಸನ್ನಿಪಾತದಿಂದ (ಮೂರೂ ಕೂಡಿ) 1, ಹೀಗೆ 7. ಸಂತತ (ಬಿಡದೆ ಬರುವದು), ಸತತ (ಹಗಲು ಒಂದು ಬಿಟ್ಟು ಪುನಃ ರಾತ್ರಿ ಬರುವದು), ಅನ್ಯೇದ್ಯುಷ್ಕ (ಒಂದು ಹೊತ್ತು ಬಿಟ್ಟು ಬರುವದು), ತೃತೀಯಕ (ದಿನ ಬಿಟ್ಟು ಬರುವದು), ಚಾತುರ್ಥಕ (2 ದಿನ ಬಿಟ್ಟು ಬರುವದು), ಹೀಗೆ 5 ವಿಷಮಜ್ವರಗಳು (Malarial fevers), ಇವು ಹೆಚ್ಚಾಗಿ ಸನ್ನಿಪಾತದಿಂದ ಉಂಟಾಗತಕ್ಕವು

ತಥಾಗಂತುಜ್ವರೋಽಪ್ಯೇಕಸ್ತ್ರಯೋದಶವಿಧೋ ಮತಃ ।
ಅಭಿಚಾರಗ್ರಹಾವೇಶಶಾಪೈರಾಗಂತುಕಸ್ತ್ರಿಧಾ ॥ ೫ ॥
ಶ್ರಮಾಚ್ಛೇದಾತ್ ಕ್ಷತಾದ್ದಾಹಾಜ್ಜತುರ್ಥಾ ಘಾತಜೋ ಜ್ವರಃ ।
ಕಾಮಾದ್ಭೀತೇಃ ಶುಚೋ ರೂಷಾದ್ವಿಷಾದೌಷಧಗಂಧತಃ ॥ ೬ ॥
ಅಭಿಷಂಗಜ್ವರಾಃ ಷಟ್ ಸ್ಯುರೇವಂ ಜ್ವರ ವಿನಿರ್ಣಯಃ ।

ಆಗಂತುಜ್ವರ 13 ವಿಧ. ಅಭಿಚಾರ (ಮಾಟಾದಿ), ಗ್ರಹಾವೇಶ, ಶಾಪದಿಂದುಂಟಾದವು 3; ಶ್ರಮದಿಂದ, ಕಡಿಯುವದರಿಂದ, ಪೆಟ್ಟಿನಿಂದ, ಅಥವಾ ಹುಣ್ಣಿನಿಂದ, ಉರಿ ತಾಗುವದರಿಂದ, ಇವು 4 ಘಾತಜ, ಕಾಮದಿಂದ, ಭಯದಿಂದ, ಶೋಕದಿಂದ, ಸಿಟ್ಟಿನಿಂದ, ವಿಷದಿಂದ, ಔಷಧದ ವಾಸನೆಯಿಂದ, ಇವು 6 ಅಭಿಷಂಗ ಜ್ವರ, ಹೀಗೆ 13 ಆಗಂತು ಸೇರಿ 26.

ಅತಿಸಾರ

ಪೃಥಗ್ದೋಷೈಃ ಸಮಸ್ತೈಶ್ಚ ಶೋಕಾದಾಮಾದ್ಭಯಾದಪಿ ॥ ೭ ॥
ಅತಿಸಾರಃ ಸಪ್ತಧಾ ಸ್ಯಾದಾ

2. ಅತಿಸಾರ (Diarrhœa) 7 ದೋಷಗಳು ಮೂರರಿಂದ ಪೃಥಕ್ 3, ಸನ್ನಿಪಾತದಿಂದ 1, ಶೋಕದಿಂದ 1, ಆಮದಿಂದ 1, ಭಯದಿಂದ 1, ಹೀಗೆ 7.

ಗ್ರಹಣೀ

ಗ್ರಹಣೀ ಪಂಚಧಾ ಮತಾ ।
ಪೃಥಗ್ದೋಷೈಃ ಸನ್ನಿಪಾತಾತ್ತ್ಥಾಮೇನ ಚ ಪಂಚಮೀ ॥ ೮ ॥

3. ಗ್ರಹಣೀ (Diarrhœa due to liver disorder) 5 — ಮೂರು ದೋಷಗಳಿಂದ ಪೃಥಕ್ 3, ಸನ್ನಿಪಾತದಿಂದ 1, ಆಮದಿಂದ 1, ಹೀಗೆ 5

ಪ್ರವಾಹಿಕಾ

ಪ್ರವಾಹಿಕಾ ಚತುರ್ಧಾ ಸ್ಯಾತ್ ಪೃಥಗ್ದೋಷೈಸ್ತ್ಥಾಸ್ರಜಃ ।

4. ಪ್ರವಾಹಿಕಾ (Dysentery) 4 — ಮೂರು ದೋಷಗಳಿಂದ ಪೃಥಕ್ 3, ರಕ್ತದಿಂದ 1, ಹೀಗೆ 4

ಅಜೀರ್ಣ
ವಿಷಾಜೀರ್ಣ

ಅಜೀರ್ಣಂ ತ್ರಿವಿಧಂ ಪ್ರೋಕ್ತಂ ವಿಷ್ಟಂಭಂ ವಾಯುನಾ ಮತಂ ॥ ೯ ॥
ಪಿತ್ತಾದ್ವಿದಗ್ಧಂ ವಿಜ್ಞೇಯಂ ಕಫೇನಾಮಂ ತದುಚ್ಯತೇ ।
ವಿಷಾಜೀರ್ಣಂ ರಸಾದೇಕಂ

5 ಅಜೀರ್ಣ (Indigestion) 3 — ವಾಯುವಿನಿಂದ ವಿಷ್ಟಂಭ (ಹೊಟ್ಟೆ ಬಿಗಿಯುವದು 1, ಪಿತ್ತದಿಂದ ವಿದಗ್ಧ 1, ಕಫದಿಂದ ಆಮ 1, ಹೀಗೆ 3

6 (ರಸದಿಂದ) ವಿಷಾಜೀರ್ಣ 1.

ಅಲಸ

ದೋಷೈಃ ಸ್ಯಾದಲಸಸ್ತ್ರಿಧಾ ॥ ೧೦ ॥

7 ಅಲಸ (Flatulence) 3 — ಮೂರು ದೋಷಗಳಿಂದ ಪೃಥಕ್.

ವಿಷೂಚೀ, ದಂಡಾಲಸಕ, ವಿಲಂಬಿಕಾ

ವಿಸೂಚೀ ತ್ರಿವಿಧಾ ಪ್ರೋಕ್ತಾ ದೋಷೈಃ ಸಾ ಸ್ಯಾತ್ಪೃಥಕ್ ಪೃಥಕ್ ।
ದಂಡಕಾಲಸಕಶ್ಚೈವ ವಿಕೈಕಂ ಸ್ಯಾದ್ವಿಲಂಬಿಕಾ ॥ ೧೧ ॥

8. ವಿಷೂಚೀ 3 — ಮೂರು ದೋಷಗಳಿಂದ ಪೃಥಕ್

9. ದಂಡಾಲಸಕ 1.

10. ವಿಲಂಬಿಕಾ 1.

ಅರ್ಶಸ್ಸು

ಅರ್ಶಾಂಸಿ ಷಡ್ವಿಧಾನ್ಯಾಹುರ್ವಾತ-ಪಿತ್ತ-ಕಫಾಸ್ರತಃ ।
ಸನ್ನಿಪಾತಾಶ್ಚ ಸಂಸರ್ಗಾತ್ತೇಷಾಂ ಭೇದೋ ದ್ವಿಧಾ ಸ್ಮೃತಃ ॥ ೧೨ ॥
ಸಹಜೋತ್ತರ-ಜನ್ಮಭ್ಯಾಂ ತಥಾ ಶುಷ್ಕಾರ್ದ್ರಭೇದತಃ ।

11. ಅರ್ಶಸ್ಸು (Piles) 6 — ವಾತದಿಂದ, ಪಿತ್ತದಿಂದ, ಕಫದಿಂದ, ರಕ್ತದಿಂದ, ಸನ್ನಿಪಾತದಿಂದ, ಸಂಸರ್ಗದಿಂದ. ಹೀಗೆ. ಇವುಗಳಲ್ಲಿ, ಹುಟ್ಟುವಾಗಲೇ ಇದ್ದದ್ದು, ಅನಂತರ

ಹುಟ್ಟಿದ್ದೆಂಬ ಎರಡು ಭೇದಗಳಿವೆ. ಅದಲ್ಲದೆ ಶುಷ್ಕ (ಒಣಗಲು), ಆರ್ದ್ರ (ರಕ್ತ ಕಾಣು ವಂಥಾದ್ದು (Bleeding), ಎಂಬ ಎರಡು ಭೇದಗಳೂ ಇವೆ.

ಚರ್ಮಕೀಲ ತ್ರಿಧೈವ ಚರ್ಮಕೀಲಾನಿ ವಾತಾತ್ಪಿತ್ತಾತ್ಕಫಾದಪಿ ॥ ೧೩ ॥

12. ಚರ್ಮಕೀಲಗಳು 3 —ವಾತ, ಪಿತ್ತ, ಕಫಗಳಿಂದ ಪ್ರತ್ಯೇಕವಾಗಿ

ದ್ವಾವಿಂಶತಿ ಪ್ರಕಾರೇಣ ಕೃಮಯಃ ಸ್ಯುರ್ದ್ವಿಧಾ ಚ ತೇ ।
ಬಾಹ್ಯಾಸ್ತ್ವಧಾಭ್ಯಂತರಾಃ ಸ್ಯುಃ ತೇಷು ಯೂಕಾ ಬಹಿಶ್ಚರಾಃ ॥ ೧೪ ॥
ಲಿಕ್ಷಾಶ್ಚಾನ್ಯೇಽಭ್ಯಂತರಾಸ್ಸ್ಯುಃ ಕಫಾತ್ತೇ ಹೃದಯಾದಿಕಾಃ ।
ಅಂತ್ರಾದಾ ಉದರಾವೇಷ್ಟಾ ಗುರವಶ್ಚ ಮಹಾಂಕುರಾಃ ॥ ೧೫ ॥
ಕ್ರಿಮಿ ಸುಗಂಧಾ ದರ್ಭಕುಸುಮಾಸ್ತಧಾ ರಕ್ತಾಚ್ಚ ಮಾತರಃ ।
ಸೌರಸಾ ಲೋಮವಿಧ್ವಂಸಾ ರೋಮದ್ವೀಪಾ ಉದುಂಬರಾಃ ॥ ೧೬ ॥
ಕೇಶಾದಾಶ್ಚ ತಥೈವಾನ್ಯೇ ಶಕೃಜ್ಜಾತಾ ಮಕೇರುಕಾಃ ।
ಲೇಲಿಹಾಶ್ಚ ಸಲೂನಾಶ್ಚ ಸೌಸುರಾದಾಶ್ಚ ಕೇರುಕಾಃ ॥ ೧೭ ॥
ತಥಾನ್ಯೇ ಕಫರಕ್ತಾಭ್ಯಾಂ ಸಂಜಾತಾಃ ಸ್ನಾಯುಕಾಃ ಸ್ಮೃತಾಃ ।
ವ್ರಣಸ್ಯ ಕೃಮಯಶ್ಚಾನ್ಯೇ ಏಷಮಾ ಬಾಹ್ಯಯೋನಯಃ ॥ ೧೮ ॥

13 ಕ್ರಿಮಿಗಳು (Worms) 22 ವಿಧ.—ಇವುಗಳಲ್ಲಿ ಹೊರಗಿನವು, ಒಳಗಿನವು ಎಂತ ಎರಡು ಭೇದ, 1 ಯೂಕ, 2 ಲಿಕ್ಷಾ, ಎಂಬವು ಹೊರಗಿನವು, ಉಳಿದ ಒಳಗಿನವು ಯಾವ ವೆಂದರೆ 3 ಹೃದಯಾದ, 4 ಅಂತ್ರಾದ, 5 ಉದರಾವೇಷ್ಟಾ, 6. ಗುರವ, 7. ಮಹಾಂ ಕುರಾ, 8. ಸುಗಂಧಾ, 9 ದರ್ಭಕುಸುಮ, ಇವು ಕಫದಿಂದ, 10. ಮಾತರ, 11. ಸೌರಸಾ, 12. ಲೋಮವಿಧ್ವಂಸಾ, 13 ರೋಮದ್ವೀಪಾ, 14. ಉದುಂಬರಾ, 15. ಕೇಶಾದಾ, ಇವು ರಕ್ತದಿಂದ, 16. ಮಕೇರುಕಾ, 17. ಲೇಲಿಹಾ, 18. ಸಲೂನಾ, 19. ಸೌಸುರಾದಾ, 20. ಕೇರುಕಾ, ಇವು ಮಲದಲ್ಲಿ ಉಂಟಾಗತಕ್ಕವು, 21. ಸ್ನಾಯುಕಾ, ಕಫರಕ್ತಗಳಿಂದ ಹುಟ್ಟುವವು, 22. ವ್ರಣಗಳಲ್ಲಿ ಆಗತಕ್ಕ ಕ್ರಿಮಿಗಳು, ಇವು ಹೊರಗಿನವು, ಏಷಮ.

(ಸರಾ ಭಾವಪ್ರಕಾಶದಲ್ಲಿ ಪ್ರಥಮ 20 ಮಾತ್ರ ಹೇಳಿ, ಕ್ರಿಮಿಗಳು ಪೈಸರಿಂದ 20 ವಿಧ ಎಂತ ಕಾಣಿಸಿಯದೆ)

ಪಾಂಡು ಪಾಂಡುರೋಗಾಶ್ಚ ಪಂಚ ಸ್ಯುಃ ವಾತ-ಪಿತ್ತ-ಕಫೈಸ್ತ್ರಿಧಾ ।
ತ್ರಿದೋಷೈರ್ಮೃತ್ತಿಕಾಭಿಶ್ಚ

14. ಪಾಂಡುರೋಗ (Anæmia) 5 ಮೂರು ದೋಷಗಳಿಂದ ಪೃಥಕ್ ಮತ್ತು ಸಮಸ್ತವಾಗಿ 4, ಮೃತ್ತಿಕೆಯಿಂದ 1, ಹೀಗೆ

ಕಾಮಿಲೆ ತಥೈಕಾ ಕಾಮಲಾ ಸ್ಮೃತಾ ॥ ೧೯ ॥

15. ಕಾಮಿಲೆ (Jaundice) 1.

ಕುಂಭಕಾಮಿಲೆ ಸ್ಯಾತ್ಕುಂಭಕಾಮಲಾ ಚೈಕಾ

16. ಕುಂಭಕಾಮಿಲೆ 1.

ಹಲೀಮಕ ತಥೈಕಂ ಚ ಹಲೀಮಕಂ |

17. ಹಲೀಮಕ 1.

ರಕ್ತಪಿತ್ತ ರಕ್ತಪಿತ್ತಂ ತ್ರಿಧಾ ಪ್ರೋಕ್ತಂ ಊರ್ಧ್ವಗಂ ಕಫಸಂಭವಂ ॥ ೨೦ ॥
ಅಧೋಗಂ ಮಾರುತಂ ಜ್ಞೇಯಂ ತದ್ದ್ವಯೇನ ದ್ವಿಮಾರ್ಗಗಂ |

18 ರಕ್ತಪಿತ್ತ (Haemorrhage, internal) 3 ಊರ್ಧ್ವಮುಖವಾದದ್ದು ಕಫದಿಂದ, ಅಧೋಮುಖವಾದದ್ದು ವಾಯುವಿನಿಂದ, ಎರಡು ಮಾರ್ಗಗಳಾಗಿಯೂ ಇರುವದು ಆ ಎರಡು ದೋಷಗಳು ಕೂಡುವದರಿಂದ. ಹೀಗೆ

ಕೆಮ್ಮು ಕಾಸಾಃ ಪಂಚ ಸಮುದ್ದಿಷ್ಟಾಸ್ತೇ ತ್ರಯಃ ಸ್ಯುಸ್ತ್ರಿಭಿರ್ಮಲೈಃ ॥ ೨೧ ॥
ಉರಃಕ್ಷತಾಚ್ಚತುರ್ಥಃ ಸ್ಯಾತ್ ಕ್ಷಯಾದ್ಧಾತೋಶ್ಚ ಪಂಚಮಃ |

19. ಕೆಮ್ಮು (Cough) 5 ಮೂರು ದೋಷಗಳಿಂದ ಪ್ರಥಕ್ 3, ಉರಃಕ್ಷತದಿಂದ 1, ಧಾತುಕ್ಷಯದಿಂದ 1, ಹೀಗೆ

ಕ್ಷಯ ಕ್ಷಯಾಃ ಪಂಚೈವ ವಿಜ್ಞೇಯಾಸ್ತ್ರಿಭಿರ್ದೋಷೈಸ್ತ್ರಯಶ್ಚ ತೇ ॥ ೨೨ ॥
ಚತುರ್ಥಃ ಸನ್ನಿಪಾತೇನ ಪಂಚಮಃ ಸ್ಯಾದುರಃಕ್ಷತಾತ್ |

20. ಕ್ಷಯ (Consumption) 5 ಮೂರು ದೋಷಗಳಿಂದ ಪೃಥಕ್ 3, ಸನ್ನಿಪಾತದಿಂದ 1, ಉರಃಕ್ಷತದಿಂದ 1 ಹೀಗೆ 5

ಶೋಷ ಶೋಷಾಃ ಸ್ಯುಃ ಷಟ್ಪ್ರಕಾರೇಣ ಸ್ತ್ರೀಪ್ರಸಂಗಾಚ್ಛುಚೋ ವ್ರಣಾತ್ ॥ ೨೩ ॥
ಅಧ್ವಶ್ರಮಾಚ್ಚ ವ್ಯಾಯಾಮಾದ್ವಾರ್ಧಕ್ಯಾದಪಿ ಜಾಯತೇ |

21 ಶೋಷ 6 ಸ್ತ್ರೀಪ್ರಸಂಗದಿಂದ 1, ಶೋಕದಿಂದ 1, ವ್ರಣದಿಂದ 1, ಪ್ರಯಾಣ ಶ್ರಮದಿಂದ 1, ಮೈದಂಡನೆಯಿಂದ 1, ವೃದ್ಧಾಪ್ಯದಿಂದ 1, ಹೀಗೆ.

ಶ್ವಾಸ ಶ್ವಾಸಾಶ್ಚ ಪಂಚ ವಿಜ್ಞೇಯಾಃ ಕ್ಷುದ್ರಃ ಸ್ಯಾತ್ತಮಕಸ್ತಥಾ ॥ ೨೪ ॥
ಊರ್ಧ್ವಶ್ವಾಸೋ ಮಹಾಶ್ವಾಸಶ್ಛಿನ್ನಶ್ವಾಸಶ್ಚ ಪಂಚಮಃ |

22. ಶ್ವಾಸ (Asthma) 5 ಕ್ಷುದ್ರ, ತಮಕ, ಊರ್ಧ್ವಶ್ವಾಸ, ಮಹಾಶ್ವಾಸ, ಛಿನ್ನಶ್ವಾಸ, ಎಂಬವು.

ಪಿಕ್ಕಟ್ಟು ಕಥಿತಾಃ ಪಂಚ ಹಿಕ್ಕಾಸ್ತು ತಾಸ್ತು ಕ್ಷುದ್ರಾನ್ನಜಾ ತಥಾ ॥ ೨೫ ॥
ಗಂಭೀರಾ ಯಮಲಾ ಚೈವ ಮಹತೀ ಪಂಚಮೀ ತಥಾ |

23. ಬಿಕ್ಕಟ್ಟು (Hiccup) 5 ಕ್ಷುದ್ರ, ಅನ್ನಜ, ಗಂಭೀರಾ, ಯಮಲಾ, ಮಹತೀ ಎಂಬವು.

ಅಗ್ನಿವಿಕಾರ

ಚತ್ವಾರೋಽಗ್ನೇರ್ವಿಕಾರಾಃ ಸ್ಯುರ್ವಿಷಮೋ ವಾತಸಂಭವಃ ॥ ೨೬ ॥
ತೀಕ್ಷ್ಣಃ ಪಿತ್ತಾತ್ಕಫಾನ್ಮಂದೋ ಭಸ್ಮಕೋ ವಾತಪಿತ್ತತಃ ।

24. ಅಗ್ನಿವಿಕಾರ (Digestive disorders) 4 ವಾತದಿಂದ ವಿಷಮ, ಪಿತ್ತದಿಂದ ತೀಕ್ಷ್ಣ, ಕಫದಿಂದ ಮಂದ, ವಾತಪಿತ್ತದಿಂದ ಭಸ್ಮಕ, ಹೀಗೆ

ಅರೋಚಕ

ಪಂಚೈವಾರೋಚಕಾಃ ಜ್ಞೇಯಾ ವಾತಪಿತ್ತಕಫೈಸ್ತ್ರಿಧಾ ॥ ೨೭ ॥
ಸನ್ನಿಪಾತಾನ್ಮನಸ್ತಾಪಾತ್

25. ಅರೋಚಕ (Distelish) 5 ವಾತ, ಪಿತ್ತ, ಕಫಗಳಿಂದ ಪೃಥಕ್ 3, ಮತ್ತು ಸನ್ನಿಪಾತದಿಂದ 1, ಮನಸ್ತಾಪದಿಂದ 1, ಹೀಗೆ

ಛರ್ದಯಃ ಸಪ್ತಧಾ ಮತಾಃ ।
ಶಿಶಿರಾದಿ ಮೂರು ಋತುಗಳು ಆಗಿರುತ್ತವೆ. ಲಘು ಮತ್ತು ರೂಕ್ಷವಾದ ಓಷಧಿಗಳಿಂದ ಅದೇ ಗುಣವುಳ್ಳದ್ದಾದ ವಾಯುವು ಅದೇ ಸ್ವಭಾವದ ದೇಹದಲ್ಲಿ ಸಂಗ್ರಹವಾಗುತ್ತದೆ ಮತ್ತು ಕಾಲದ ಉಷ್ಣತೆಯಿಂದ ಕೋಪಗೊಳ್ಳುವದಿಲ್ಲ. ಹುಳಿ ವಿಪಾಕವುಳ್ಳ ಓಷಧಿಗಳಿಂದಲೂ, ನೀರುಗಳಿಂದಲೂ ಅದೇ ಗುಣವುಳ್ಳ ಪಿತ್ತವು ಸಂಗ್ರಹವಾಗುತ್ತದೆ ಮತ್ತು ಕಾಲದ ಶೈತ್ಯದಿಂದ ಕೋಪಗೊಳ್ಳುವದಿಲ್ಲ. ಸ್ನಿಗ್ಧ ಮತ್ತು ಶೀತವಾದ ಓಷಧಿಗಳಿಂದಲೂ, ನೀರುಗಳಿಂದಲೂ, ಅದೇ ಗುಣವುಳ್ಳ ಕಾಲದಲ್ಲಿಯೂ ದೇಹದಲ್ಲಿಯೂ, ಕಫವು ಸಂಗ್ರಹವಾಗುತ್ತದೆ ಮತ್ತು (ಕಾಲಸಂಬಂಧವಾದ) ಒಣಗುವಿಕೆಯ ದೆಸೆಯಿಂದ ಕೋಪಗೊಳ್ಳುವದಿಲ್ಲ.

14. ಹೇಮಂತೋ ಗ್ರೀಷ್ಮೋ ವರ್ಷಾಶ್ಚೇತಿ ಶೀತೋಷ್ಣವರ್ಷಲಕ್ಷಣಾಸ್ತ್ರಯಃ
ಸಾಮಾನ್ಯ ಋತುಲಕ್ಷಣ ಚರಕನ ಪ್ರಕಾರ
ಋತವೋ ಭವಂತಿ | ತೇಷಾಮಂತರೇಷ್ವಿತರೇ ಸಾಧಾರಣಲಕ್ಷಣಾಸ್ತ್ರಯಃ
ಋತವಃ ಪ್ರಾವೃಟ್ ಶರದ್ವಸಂತಾ ಇತಿ | ಪ್ರಾವೃಡಿತಿ ಪ್ರಥಮಃ ಪ್ರವೃಷ್ಟೇಃ
ಕಾಲಸ್ತಸ್ಯ ಅನುಬಂಧೋ ವರ್ಷಾ ಏವಮೇತೇ ಸಂಶೋಧನಮಧಿ
ಕೃತ್ಯ ಷಡ್ವಿಧಮ್ಯಂತೇ ಋತವಃ | (ಚ 300)

ಹೇಮಂತ, ಗ್ರೀಷ್ಮ ಮತ್ತು ವರ್ಷ ಎಂಬ ಮೂರು ಋತುಗಳು ಕ್ರಮವಾಗಿ ಶೀತ, ಉಷ್ಣ ಮತ್ತು ಮಳೆಯ ಲಕ್ಷಣವುಳ್ಳದ್ದಾಗಿವೆ ಅವುಗಳ ನಡುವೆ ಸಾಧಾರಣ ಲಕ್ಷಣವುಳ್ಳ ಬೇರೆ ಮೂರು ಋತುಗಳು ಪ್ರಾವೃಟ್, ಶರತ್, ವಸಂತ ಎಂಬವುಗಳಾಗಿರುತ್ತವೆ. ಪ್ರಾವೃಟ್ ಎಂಬದು ಮಳೆಗೆ ಪ್ರಥಮಕಾಲ, ಅದಕ್ಕೆ ವರ್ಷ ಋತುವು ಕೂಡಿಬರುತ್ತದೆ. ಸಂಶೋಧನ ವಿಚಾರದಲ್ಲಿ ಋತುಗಳನ್ನು ಹೀಗೆ ವಿಭಾಗ ಮಾಡುತ್ತಾರೆ

ಪ ರಾ ಪ್ರಾವೃಟ್ ಎಂಬದು ಆಷಾಢ-ಶ್ರಾವಣ ಮತ್ತು ವರ್ಷಾ ಎಂಬದು ಭಾದ್ರಪದ-ಆಶ್ವಿಯುಜ ಎಂಬ ಸುಶ್ರುತನ ವಚನ ಹಿಂದೆ ಹೇಳಿಯದೆ (ಸಂ 7 ನೋಡು)

15. ಶೀತೇ ಶೀತಾನಿಲಸ್ಪರ್ಶಸಂರುದ್ಧೋ ಬಲಿನಾಂ ಬಲೀ |
ಪಕ್ತಾ ಭವತಿ ಹೇಮಂತೇ ಮಾತ್ರಾದ್ರವ್ಯಗುರುಕ್ಷಮಃ ||
ಸ ಯದಾ ನೇಂಧನಂ ಯುಕ್ತಂ ಲಭತೇ ದೇಹಜಂ ತದಾ |
ರಸಂ ಪಿನಸ್ತ್ಯತೋ ವಾಯುಃ ಶೀತಃ ಶೀತೇ ಪ್ರಕುಪ್ಯತಿ ||
ತಸ್ಮಾತ್ತುಷಾರಸಮಯೇ ಸ್ನಿಗ್ಧಾಮ್ಲಲವಣಾನ್ ರಸಾನ್ |
ಔದಕಾನೂಪಮಾಂಸಾನಾಂ ಮೇಧ್ಯಾನಾಮುಪಯೋಜಯೇತ್ ||
ಹೇಮಂತಋತು ಏಲೇಶಯಾನಾಂ ಮಾಂಸಾನಿ ಪ್ರಸಹಾನಾಂ ಭೃತಾನಿ ಚ |
ಏನಲ್ಲಿ ಕರ್ತವ್ಯ ಭಕ್ಷಯೇನ್ಮದಿರಾಂ ಸೀಧುಂ ಮಧು ಚಾನುಪಿಬೇನ್ನರಃ ||
ಗೌರಸಾನಿಕ್ಷುವಿಕೃತೀರ್ವಸಾಂ ತೈಲಂ ನವೌದನಂ |
ಹೇಮಂತೇಽಭ್ಯಸ್ಯತಸ್ತ್ವೀಯಮುಷ್ಣಂ ಚಾಯುರ್ನ ಹೀಯತೇ ||
ಅಭ್ಯಂಗೋತ್ಸಾದನಂ ಮೂರ್ಧ್ನಿ ತೈಲಂ ಜೈಂತಾಕಮಾತಪಂ |
ಭಜೇದ್ಭೂಮಿಗೃಹಂ ಚೋಷ್ಣಮುಷ್ಣಂ ಗರ್ಭಗೃಹಂ ತಥಾ ||

ವರ್ಜಯೇದನ್ನಪಾನಾನಿ ಲಘೂನಿ ವಾತಲಾನಿ ಚ |
ಪ್ರವಾತಂ ಪ್ರಮಿತಾಹಾರಮುದಮಂಥಂ ಪಿಮಾಗಮೇ || (ಚ. 35.)

ಶೀತವಾದ ಹೇಮಂತಋತುವಿನಲ್ಲಿ, ಬಲವಂತರಾದ ಜನರಲ್ಲಿ* ಬಲವಂತನಾದ ಪಾಚಕಾಗ್ನಿಯು ಶೀತವಾದ ಗಾಳಿಯ ಸ್ಪರ್ಶದಿಂದ ತಡೆಯಲ್ಪಟ್ಟು, ಗುರುವಾದ ಆಹಾರಪ್ರಮಾಣಗಳನ್ನು ದ್ರವ್ಯಗಳನ್ನೂ ಪಚನಮಾಡುವ ಶಕ್ತಿಯುಳ್ಳವನಾಗುತ್ತಾನೆ ಪಾಚಕನಾದ ಆ ಅಗ್ನಿಗೆ ತಕ್ಕ ಇಂಧನ ಸಿಕ್ಕದೆ ಹೋದಾಗ, ದೇಹದಲ್ಲಿ ಹುಟ್ಟಿದ ರಸವನ್ನೇ ಕೆಡಿಸುತ್ತಾನೆ ಆದ್ದರಿಂದ ಶೀತಸ್ವಭಾವದ್ದಾದ ವಾಯುವು ಶೀತಕಾಲದಲ್ಲಿ ಪ್ರಕೋಪಗೊಳ್ಳುತ್ತಾನೆ. ಆದರಿಂದ ಚಳಿ ಅಥವಾ ಹಿಮಕಾಲದಲ್ಲಿ ಜನರು ಸ್ನಿಗ್ಧ, ಹುಳಿ, ಉಪ್ಪುರಸಗಳನ್ನೂ, ಶುಚಿಯಾದ ಜಲಪ್ರಾಣಿಗಳ ಮಾಂಸವನ್ನೂ ಉಪಯೋಗಿಸಬೇಕು, ಹಾಗೆಯೇ ಬಿಲದಲ್ಲಿ ವಾಸವಾಗಿರುವ ಪ್ರಾಣಿಗಳ ಮತ್ತು ಬೇಟೆ ಮೃಗಪಕ್ಷಿಗಳ ಮಾಂಸಗಳನ್ನೂ ಭಕ್ಷಿಸಿ, ದ್ರಾಕ್ಷಾಮದ್ಯವನ್ನೂ, ಜೆಲ್ಲದ ಮದ್ಯವನ್ನೂ, ಮತ್ತು ಪುಷ್ಪಮದ್ಯವನ್ನೂ ಕುಡಿಯಬೇಕು, ಹಾಲು, ಮಜ್ಜಿಗೆ, ಕಬ್ಬಿನಿಂದಾಗುವ ಪದಾರ್ಥಗಳು, ವಸೆ, ತೈಲ, ಹೂಸ ಅನ್ನ, ಬಿಸಿ ನೀರು, ಇವುಗಳನ್ನೂ ಹೇಮಂತದಲ್ಲಿ ಅಭ್ಯಾಸಮಾಡಿದ್ದಲ್ಲಿ, ಆಯುಃ ಕ್ಷೀಣವಾಗದಿರುವದು ಅಭ್ಯಂಗ, ಪರಿಮಳದ ಪುಡಿಯಿಂದ ಮೈ ತಿಕ್ಕಿಸಿಕೊಳ್ಳುವದು, ತಲೆಗೆ ತೈಲ, ಜೇಂತಾಕ ಎಂಬ ಸ್ವೇದ, ಒಸಿಲು ಮತ್ತು ಉಷ್ಣವಾದ ನೆಲ, ಮನೆ ಮತ್ತು ಗರ್ಭಗೃಹ, ಇವುಗಳು ಸೇವಿಸಲ್ಪಡಬೇಕು * * * ಲಘುವಾಗಿ, ವಾತವೃದ್ಧಿಮಾಡತಕ್ಕ ಅನ್ನಪಾನಗಳನ್ನೂ, ಬಿರುಗಾಳಿಯನ್ನೂ, ತಕ್ಕ ಪ್ರಮಾಣಕ್ಕೆ ಕಡಿಮೆಯಾದ ಆಹಾರವನ್ನೂ, ಗಂಜಿನೀರನ್ನೂ, ಹಿಮ ಒಂದಾಗ್ಗೆ ವರ್ಜಿಸತಕ್ಕದ್ದು.

* ಜನರು ದಕ್ಷಿಣಾಯನದ ಆದಿಯಲ್ಲಿ ಮತ್ತು ಉತ್ತರಾಯಣದ ಅಂತ್ಯದಲ್ಲಿ ದುರ್ಬಲರಾಗಿಯೂ, ಅಯನ ಮಧ್ಯಕಾಲದಲ್ಲಿ ಮಧ್ಯಬಲರಾಗಿಯೂ ದಕ್ಷಿಣಾಯನದ ಅಂತ್ಯದಲ್ಲಿ ಮತ್ತು ಉತ್ತರಾಯಣದ ಆದಿಯಲ್ಲಿ ಶ್ರೇಷ್ಠಬಲರಾಗಿಯೂ ಇರುತ್ತಾರೆ (ಚ ಸೂ).

16. ಹೇಮಂತಶಿಶಿರೇ ತುಲ್ಯೇ ಶಿಶಿರೇಽಲ್ಪಂ ವಿಶೇಷಣಂ |
ರೌಕ್ಷ್ಯಮಾದಾನಜಂ ಶೀತಂ ಮೇಘಮಾರುತವರ್ಷಜಂ ||

ಶಿಶಿರಋತುವಿಗೆ ತಕ್ಕ ಉಪಚಾರ

ತಸ್ಮಾದ್ಧೈಮಂತಿಕಃ ಸರ್ವಃ ಶಿಶಿರೇ ವಿಧಿರಿಷ್ಯತೇ |
ನಿವಾತಮುಷ್ಣಮಧಿಕಂ ಶಿಶಿರೇ ಗೃಹಮಾಶ್ರಯೇತ್ ||
ಕಟುತಿಕ್ತಕಷಾಯಾಣಿ ವಾತಲಾನಿ ಲಘೂನಿ ಚ |
ವರ್ಜಯೇದನ್ನಪಾನಾನಿ ಶಿಶಿರೇ ಶೀತಲಾನಿ ಚ || (ಚ. 35-36.)

ಶಿಶಿರಋತುವು (ಮಾಘ - ಫಾಲ್ಗುಣ) ಹೇಮಂತಋತು(ಮಾರ್ಗಶೀರ್ಷ - ಪುಷ್ಯ)ವಿಗೆ ಸಮಾನ, ಅಲ್ಪವಿಶೇಷವಿರುವದ್ಯಾವದೆಂದರೆ ಉತ್ತರಾಯಣಸಂಬಂಧವಾದ ರೂಕ್ಷತ್ವ ಮತ್ತು ಮೋಡ, ಗಾಳಿ, ಮಳೆಗಳಿಂದ* ಹುಟ್ಟಿದ ಶೈತ್ಯ, ಇವೆರಡು. ಆದ್ದರಿಂದ ಹೇಮಂತಋತುವಿಗೆ ಹೇಳಿದ ವಿಧಿ ಸರ್ವವೂ ಶಿಶಿರಋತುವಿಗೆ ಪ್ರಶಸ್ತವಾಗುತ್ತದೆ. ಜೀಸುವ ಗಾಳಿಯಿಲ್ಲದ ಮತ್ತು ಉಷ್ಣ ಅಧಿಕವಾದ ಮನೆಯನ್ನು ಶಿಶಿರದಲ್ಲಿ ಆಶ್ರಯಿಸತಕ್ಕದ್ದು. ಪಾರ, ಕಹಿ, ಜೊಗರು

* ಶಿಶಿರದಲ್ಲಿ ಮೋಡ, ಗಾಳಿ, ಮಳೆಗಳು ಕಾಣುವದು ಇಲ್ಲಿಗಿಂತ ಉತ್ತರ ದೇಶದಲ್ಲಿ ಹೆಚ್ಚು ಇರಬೇಕು

ಗಳೂ, ವಾತವೃದ್ಧಿಕರವಾದ, ಲಘುವಾದ ಮತ್ತು ಶೀತಕರವಾದ ಅನ್ನಪಾನಗಳೂ, ಶಿಶಿರ ಋತುವಿನಲ್ಲಿ ವರ್ಜಿಸಲ್ಪಡಬೇಕು.

17. ಹೇಮನ್ತೇ ನಿಚಿತಃ ಶ್ಲೇಷ್ಮಾ ದಿನಕ್ಕರ್ದ್ಯಾಭಿರೀರಿತಃ ।
ಕಾಯಾಗ್ನಿಂ ಬಾಧತೇ ರೋಗಾಂಸ್ತತಃ ಪ್ರಕುರುತೇ ಬಹೂನ್ ॥
ತಸ್ಮಾದ್ವಸನ್ತೇ ಕರ್ಮಾಣಿ ವಮನಾದೀನಿ ಕಾರಯೇತ್ ।
ವಸಂತಋತು ಏಗೆ ತಕ್ಕ ಉಪಚಾರ
ಗುರ್ವಮ್ಲಸ್ನಿಗ್ಧಮಧುರಂ ದಿವಾಸ್ವಪ್ನಂ ಚ ವರ್ಜಯೇತ್
ವ್ಯಾಯಾಮೋದ್ವರ್ತನಂ ಧೂಮಂ ಕವಲಗ್ರಹಮಂಜನಂ ।
ಸುಖಾಂಬುನಾ ಶೌಚವಿಧಿಂ ಶೀಲಯೇತ್ಕುಸುಮಾಗಮೇ ॥ (ಚ. 36.)

ಹೇಮಂತಋತುವಿನಲ್ಲಿ* ಕೂಡಿದ ಕಫವು ಸೂರ್ಯನ ಪ್ರಭೆಯಿಂದ ಕೆದರಿ, ದೇಹದ ಅಗ್ನಿಯನ್ನು ಬಾಧಿಸಿ, ಅದರಿಂದ ಅನೇಕ ರೋಗಗಳನ್ನು ಉಂಟುಮಾಡುತ್ತದೆ. ಅದರಿಂದ ವಸಂತ ಋತು(ಚೈತ್ರ-ವೈಶಾಖ)ವಿನಲ್ಲಿ ವಮನಾದಿ ಕರ್ಮಗಳನ್ನು ನಡಿಸತಕ್ಕದ್ದು. ಗುರು, ಹುಳಿ, ಸ್ನಿಗ್ಧ ಮತ್ತು ಸೀ ವಸ್ತುಗಳು, ಹಗಲು ನಿದ್ರೆ, ಸಹ ವರ್ಜ್ಯಗಳು. ವ್ಯಾಯಾಮ, ಮೈ ತಿಕ್ಕಿಸಿ ಕೊಳ್ಳೋಣ, ಧೂಮಪಾನ, ಕವಲಗ್ರಹ, ಅಂಜನ ಮತ್ತು ಸುಖವಾದ (ಬಿಸಿ) ನೀರಿನಿಂದ ಶೌಚವಿಧಿ, ಇವುಗಳನ್ನು ವಸಂತಋತು ಬಂದಾಗ ಅಭ್ಯಾಸಮಾಡಬೇಕು.

*ಶಿಶಿರಋತುವಿನಲ್ಲಿ ಕೂಡಿದ ಕಫ ಎಂತ ವಾ (ಪು 10)

18 ಮಯೂಖೈರ್ಜಗತಃ ಸಾರಂ ಗ್ರೀಷ್ಮೇ ಪೀಯತೇ ರವಿಃ ।
ಸ್ವಾದು ಶೀತಂ ದ್ರವಂ ಸ್ನಿಗ್ಧಮನ್ನಪಾನಂ ತದಾ ಹಿತಂ ॥
ಶೀತಂ ಸಶರ್ಕರಂ ಮಂಥಂ ಜಾಂಗಲಾನ್ ಮೃಗಪಕ್ಷಿಣಃ ।
ಘೃತಂ ಪಯಃ ಸಶಾಲ್ಯನ್ನಂ ಭಜನ್ ಗ್ರೀಷ್ಮೇ ನ ಸೀದತಿ ॥
ಮದ್ಯಮಲ್ಪಂ ನ ವಾ ಪೇಯಮಥವಾ ಸುಬಹೂದಕಂ ।
ಗ್ರೀಷ್ಮಋತು ಏಗೆ ತಕ್ಕ ಉಪಚಾರ
ಲವಣಾಮ್ಲಕಟೂಷ್ಣಾನಿ ವ್ಯಾಯಾಮಂ ಚಾತ್ರ ವರ್ಜಯೇತ್ ॥
ದಿವಾ ಶೀತಗೃಹೇ ನಿದ್ರಾಂ ನಿಶಿ ಚಂದ್ರಾಂಶುಶೀತಲೇ ।
ಭಜೇಚ್ಚನ್ದನದಿಗ್ಧಾಂಗಃ ಪ್ರವಾತೇ ಹರ್ಮ್ಯಮಸ್ತಕೇ ॥
ವ್ಯಜನೈಃ ಪಾಣಿಸಂಸ್ಪರ್ಶೈಶ್ಚನ್ದನೋದಕಶೀತಲೈಃ ।
ಸೇವ್ಯಮಾನೋ ಭಜೇದಸ್ಯಾಂ ಮುಕ್ತಾಮಣಿವಿಭೂಷಿತಃ ।
ಕಾನನಾನಿ ಚ ಶೀತಾನಿ ಜಲಾನಿ ಕುಸುಮಾನಿ ಚ ।
ಗ್ರೀಷ್ಮಕಾಲೇ ನಿಷೇವೇತ ಮೈಥುನಾದ್ವಿರತೋ ನರಃ ॥ (ಚ. 36.)

ಗ್ರೀಷ್ಮಋತು(ಜ್ಯೇಷ್ಠ-ಆಷಾಢ)ವಿನಲ್ಲಿ ಸೂರ್ಯನು ತನ್ನ ಕಿರಣಗಳಿಂದ ಜಗತ್ತಿನ ಸಾರವನ್ನು ಪಾನಮಾಡುತ್ತಾನೆ ಆಗ್ಗೆ ಸೀ, ಶೀತ, ದ್ರವ ಮತ್ತು ಸ್ನಿಗ್ಧವಾದ ಅನ್ನಪಾನಗಳು ಹಿತ; ಮತ್ತು ಸಕ್ಕರೆ ಕೂಡಿದ. ತಣ್ಣಗಾದ, ಮಂಥ, ಕಾಡುಮೃಗಪಕ್ಷಿಗಳ ಮಾಂಸ, ತುಪ್ಪ, ಹಾಲು, ಶಾಲ್ಯನ್ನ, ಇವುಗಳನ್ನು ಗ್ರೀಷ್ಮದಲ್ಲಿ ಸೇವಿಸಿದ್ದಲ್ಲಿ, ಅಸುಖ ಉಂಟಾಗಲಾರದು. ಮದ್ಯವನ್ನು ಕುಡಿಯದೆ ಇರಬೇಕು, ಅಥವಾ, ಅಲ್ಪವಾಗಿ ಹೆಚ್ಚು ನೀರು ಕೂಡಿಸಿ ಸೇವಿಸ

ಬೇಕು. ಉಪ್ಪು, ಹುಳಿ, ಖಾರ, ಉಷ್ಣಗಳನ್ನೂ ವ್ಯಾಯಾಮವನ್ನೂ ವರ್ಜಿಸತಕ್ಕದ್ದು. ಹಗಲು ತಂಪಾದ ಮನೆಯಲ್ಲಿ, ರಾತ್ರಿ ಚಂದ್ರಕಿರಣಗಳಿಂದ ತಂಪಾದ ಒಳ್ಳೇ ಗಾಳಿ ಇರುವ ಅರಮನೆಯ ಉಪ್ಪರಿಗೆಯಲ್ಲಿ, ದೇಹಕ್ಕೆ ಚಂದನವನ್ನು ಲೇಪಿಸಿಕೊಂಡು, ನಿದ್ರೆಮಾಡಬೇಕು. ಬೀಸಣಿಗೆಗಳಿಂದಲೂ, ಚಂದನೋದಕದಿಂದ ತಂಪಾದ ಕೈಸ್ಪರ್ಶಗಳಿಂದಲೂ, ಸೇವೆಮಾಡಿಸಿ ಕೊಂಡು, ಮುತ್ತುಮಣಿಗಳಿಂದ ಭೂಷಿತನಾಗಿ, ವನಗಳನ್ನು ಭೋಗಿಸಬೇಕು. ತಂಪಾದ ನೀರುಗಳನ್ನೂ, ಪುಷ್ಪಗಳನ್ನೂ, ಗ್ರೀಷ್ಮಕಾಲದಲ್ಲಿ ಉಪಯೋಗಿಸತಕ್ಕದ್ದು ಆದರೆ ಮೈಥುನವನ್ನು ಬಿಟ್ಟಿರಬೇಕು

19 ಆದಾನದುರ್ಬಲೇ ದೇಹೇ ಪಕ್ತಾ ಭವತಿ ದುರ್ಬಲಃ ।
ನ ವರ್ಷಾಸ್ವನಿಲಾದೀನಾಂ ದೂಷಣೈರ್ಬಾಧ್ಯತೇ ಪುನಃ ॥
ಭೂವಾಸ್ಪಾನ್ತೋಷಸಿಸ್ಯಂದಾತ್ ವಾಕಾದಮ್ಲಾಜ್ಜಲಸ್ಯ ಚ ।
ವರ್ಷಾಸ್ವಗ್ನಿಬಲೇ ಕ್ಷೀಣೇ ಕುಪ್ಯಂತಿ ವಪನಾದಯಃ ॥
ತಸ್ಮಾತ್ತಾಧಾರಣಃ ಸರ್ವೋ ಽಪಿರ್ವರ್ಷಾಸು ಚೇಷ್ಯತೇ ।
ಉದಮಂಥಂ ದಿವಾಸ್ವಪ್ನಮವಶ್ಯಾಯಂ ನದೀಜಲಂ
ವ್ಯಾಯಾಮಮಾತಪಂ ಚೈವ ವ್ಯವಾಯಂ ಚಾತ್ರ ವರ್ಜಯೇತ್ ।
ವರ್ಷಋತು ಏಗೆ ತಕ್ಕ ಉಪಚಾರ
ಪಾನಭೋಜನಸಂಸ್ಕಾರಾನ್ ಪ್ರಾಯಃ ಕ್ಲೇದ್ಯಾನ್ತಿತಾನ್ಪ್ರಜೇತ್
ವ್ಯಕ್ತಾಮ್ಲಲವಣಸ್ನೇಹಂ ವಾತಾವರ್ಷಾಕುಲೇಽಹನಿ ।
ಅಶೀತಶೀತೇ ಭೋಕ್ತವ್ಯಂ ವರ್ಷಾಸ್ವನಿಲಶಾಂತಯೇ ॥
ಅಗ್ನಿಂ ಸಂರಕ್ಷತಾ ಯತ್ನಗೋಧೂಮಶಾಲಯಃ ।
ಪುರಾಣಾ ಜಾಂಗಲೈರ್ಮಾಂಸೈರ್ಭೋಜ್ಯಾ ಯೂಷೈಶ್ಚ ಸಂಸ್ಕೃತೈಃ ॥
ಪಿಬೇತ್ಕ್ಲೋದ್ಯಾನ್ವಿತಂ ಚಾಲ್ಪಂ ಮಾಧ್ವೀಕಾರಿಷ್ಟಮಂಬು ವಾ ।
ಮಾಹೇಂದ್ರಂ ತಪ್ತಶೀತಂ ವಾ ಕೌಪಂ ಸಾರಸಮೇವ ವಾ ॥
ಪ್ರಘರ್ಷೋದ್ವರ್ತನಸ್ನಾನಗಂಧಮಾಲ್ಯವರೋ ಭವೇತ್ ।
ಲಘುಶುದ್ಧಾಂಬರಃ ಸ್ವಾದಂ ಭಜೇದಕ್ಲೇದಿವಾರ್ಹಿಕಂ ॥ (ಚ. 37.)

ಉತ್ತರಾಯಣದ ಸೂರ್ಯನ ಸ್ವೀಕಾರಗುಣದ ದೆಸೆಯಿಂದ ದುರ್ಬಲವಾದ ದೇಹದಲ್ಲಿ ಪಚನಶಕ್ತಿಯು ದುರ್ಬಲವಾಗಿ, ವರ್ಷಋತು(ಶ್ರಾವಣ-ಭಾದ್ರಪದ)ವಿನಲ್ಲಿ ವಾಯ್ವಾದಿಗಳ ದೋಷಗಳಿಂದ ಪುನಃ ಬಾಧಿಸಲ್ಪಡುತ್ತದೆ. ವರ್ಷಋತುಕಾಲದಲ್ಲಿ ಭೂಮಿಯ ತ್ಪಾವದಿಂದಲೂ, ಮೇಘದ ಸುರಿಯುವಿಕೆಯಿಂದಲೂ, ನೀರಿನ ಹುಳಿಪಾಕದಿಂದಲೂ, ವಾಯ್ವಾದಿದೋಷಗಳು ಕ್ಷೀಣವಾದ ಅಗ್ನಿಬಲವುಳ್ಳವನಲ್ಲಿ ಕೋಪಗೊಳ್ಳುತ್ತವೆ ಆದ್ದರಿಂದ (ಮೂರು ದೋಷಗಳಿಗೂ ಬಾಧಕವಿಲ್ಲದ) ಸಾಧಾರಣ ವಿಧಿ ಸರ್ವವೂ ವರ್ಷಋತುವಿನಲ್ಲಿ ಪ್ರಶಸ್ತವಾಗಿರುತ್ತದೆ. ನೀರು ಹಿಟ್ಟು (ಉದಮಂಥ), ಹಗಲು ನಿದ್ರೆ, ಹಿನಿ, ನದೀನೀರು, ವ್ಯಾಯಾಮ, ಬಿಸಿಲು, ವ್ಯವಾಯ (ಗ್ರಾಮ್ಯಧರ್ಮ), ಇವುಗಳನ್ನು ವರ್ಜಿಸಬೇಕು. ಜೇನು ಕೂಡಿಸಿ ತಯಾರಿಸಲ್ಪಟ್ಟ ಪಾನಭೋಜನಗಳನ್ನು ಹೆಚ್ಚಾಗಿ ಉಪಯೋಗಿಸತಕ್ಕದ್ದು ವರ್ಷಋತುವಿನೊಳಗೆ ಗಾಳಿಮಳೆಗಳ ಬಾಧೆಯುಳ್ಳ ಮತ್ತು ವಿಶೇಷ ಶೀತವಾದ ದಿನದಲ್ಲಿ, ವಾತಶಾಂತಿಗಾಗಿ

ಹುಳಿ, ಉಪ್ಪು ಮತ್ತು ಸ್ನೇಹಗಳನ್ನು ಸ್ವಲ್ಪ ಹೆಚ್ಚಾಗಿ ಭುಂಜಿಸಬೇಕು. ಹಳೆದಾದ ಯವೆ, ಗೋದಿ, ಅಕ್ಕಿಗಳನ್ನು, ಸರಿಯಾಗಿ ತಯಾರಿಸಿದ ಜಾಂಗಲಮಾಂಸಗಳ ಮತ್ತು ಸಾರುಗಳ ಜೊತೆಯಿಂದ ಭುಂಜಿಸಿ, ಅಗ್ನಿಯನ್ನು ರಕ್ಷಿಸಿಕೊಳ್ಳಬೇಕು ಅಲ್ಪವಾಗಿ ಶರಾಬು ಮತ್ತು ಅರಿಷ್ಟ (ಕಷಾಯದ ಹುಳಿ)ಗಳನ್ನು ಅಥವಾ ಕುದಿಸಿ ತಣಿಸಲ್ಪಟ್ಟ ಮಳೆನೀರನ್ನಾಗಲಿ, ಬಾವಿ ನೀರನ್ನಾಗಲಿ, ಸರೋವರ ನೀರನ್ನಾಗಲಿ, ಜೇನು ಕೂಡಿಸಿಕೊಂಡು ಕುಡಿಯಬೇಕು. ಮೈ ತಿಕ್ಕುವಿಕ, ಲೇಪ, ಸ್ನಾನ, ಗಂಧ, ಮಾಲಾಧರಣಗಳಲ್ಲಿ ಪರನಾಗಿ, ಶುದ್ಧವಾದ ಮತ್ತು ಹಗುರವಾದ ವಸ್ತ್ರಗಳನ್ನು ಧರಿಸಿಕೊಂಡು ತಣಸು ಇಲ್ಲದ ಮತ್ತು ಮಳೆಗಾಲಕ್ಕೆ ತಕ್ಕದ್ದಾದ ಸ್ಥಳವನ್ನು ಆಶ್ರಯಿಸಿರಬೇಕು

20) ಸಪಾರ್ಶೀತೋಚಿತಾಂಗಾನಾಂ ಸಹಸೈವಾರ್ಕರಶ್ಮಿಭಿಃ ।
ತಪ್ತಾನಾಮಾಚಿತಂ ಪಿತ್ತಂ ಪ್ರಾಯಃ ಶರದಿ ಕುಪ್ಯತಿ ॥
ತತ್ರಾನ್ನಪಾನಂ ಮಧುರಂ ಲಘು ಶೀತಂ ಸತಿಕ್ತಕಮ್ ।
ಪಿತ್ತಪ್ರಶಮನಂ ಸೇವ್ಯಂ ಮಾತ್ರಯಾ ಸುಪ್ರಕಾಂಕ್ಷಿತೈಃ ॥
ಲಾವಾನ್ಕಪಿಂಜಲಾನೇಣಾನುರಭ್ರಾನ್ ಶರಭಾನ್ ಶಶಾನ್ ।
ಶಾಲೀನ್ ಸಯವಗೋಧೂಮಾನ್ ಸೇವ್ಯಾನಾಹುರ್ಘನಾತ್ಯಯೇ ॥
ತಿಕ್ತಸ್ಯ ಸರ್ಪಿಷಃ ಪಾನಂ ವಿರೇಕೋ ರಕ್ತಮೋಕ್ಷಣಂ ।
ಧಾರಾಧರಾತ್ಯಯೇ ಕಾರ್ಯಮಾತಪಸ್ಯ ಚ ವರ್ಜನಂ ॥
ಶರದೃತು ಏಗೆ ತಕ್ಕ ಉಪಚಾರ
ವಸಾಂ ತೈಲಮವಶ್ಯಾಯಮೌದಕಾನೂಪಮಾಮಿಷಂ ।
ಕ್ಷಾರಂ ದಧಿ ದಿವಾಸ್ವಪ್ನಂ ಪ್ರಾಗ್ವಾತಂ ಚಾತ್ರ ವರ್ಜಯೇತ್ ॥
ದಿವಾ ಸೂರ್ಯಾಂಶುಸಂತಪ್ತಂ ನಿಶಿ ಚಂದ್ರಾಂಶುಶೀತಲಂ ।
ಕಾಲೇನ ಪಕ್ವಂ ನಿರ್ದೋಷಮಗಸ್ತ್ಯೇನಾವಿಷೀಕೃತಂ ॥
ಹಂಸೋದಕಮಿತಿ ಖ್ಯಾತಂ ಶಾರದಂ ವಿಮಲಂ ಶುಚಿ ।
ಸ್ನಾನಪಾನಾವಗಾಹೇಷು ಶಸ್ಯತೇ ತದ್ಯಥಾಮೃತಂ ॥
ಶಾರದಾನಿ ಚ ಮಾಲ್ಯಾನಿ ವಾಸಾಂಸಿ ವಿಮಲಾನಿ ಚ ।
ಶರತ್ಕಾಲೇ ಪ್ರಶಸ್ಯಂತೇ ಪ್ರದೋಷೇ ಚಂದ್ರರಶ್ಮಯಃ ॥
(ಚ 37-38)

ವರ್ಷಋತುವಿನ ಶೀತದಿಂದ ಕೂಡಿದ ಶರೀರಗಳು ಸೂರ್ಯನ ರಶ್ಮಿಗಳಿಂದ ಒಡನೆ ಕಾಯಿಸಲ್ಪಡುವದರಿಂದ, ಪಿತ್ತವು ಕೂಡಿ ಹೆಚ್ಚಾಗಿ, ಶರದೃತು (ಆಶ್ವಿಯುಜ-ಕಾರ್ತಿಕ) ವಿನಲ್ಲಿ ಕೋಪಗೊಳ್ಳುತ್ತದೆ. ಆಗ್ಗೆ ಸೀಯಾದ, ಲಘುವಾದ, ಶೀತವಾದ, ಕಹಿರಸ ಕೂಡಿದ ಮತ್ತು ಪಿತ್ತಶಮನಕರವಾದ ಆಹಾರಪಾನಗಳು, ಪ್ರಮಾಣವರಿತು, ಚೆನ್ನಾಗಿ ಅಪೇಕ್ಷೆ ಹುಟ್ಟಿದ ಮೇಲೆ, ಸೇವಿಸಲ್ಪಡಬೇಕು. ಲಾವ, ಕಪಿಂಜಲ, ಎಂಬ ಪಕ್ಷಿಗಳು ಏಣ ಎಂಬ ಜಿಂಕೆ, ಕುರಿ, ಶರಭ, ಮೊಲ, ಇವುಗಳ ಮಾಂಸಗಳು, ಶಾಲ್ಯಕ್ಕಿಗಳು, ಯವೆ, ಮತ್ತು ಗೋದಿ, ಮಳೆ ದಾಟಿದ ಮೇಲೆ ಉಪಯೋಗಿಸಲ್ಪಡತಕ್ಕವೆಂತ ಹೇಳುತ್ತಾರೆ. ಕಹಿ ತುಪ್ಪದ

ಪಾನ, ಎರೇಚನ, ರಕ್ತ ಬಿಡೋಣ, ಬೆಸಿಲು ತಪ್ಪಿಸಿಕೊಳ್ಳೋಣ, ಇವುಗಳನ್ನು ಮೋಡಗಳು ಅಂತ್ಯವಾದ ಮೇಲೆ ಆಚರಿಸತಕ್ಕದ್ದು. ಪಸ, ತೈಲ, ಏಮು, ಜಲಸಂಬಂಧವಾದ ಪ್ರಾಣಿಗಳ ಮಾಂಸ, ಕ್ಷಾರ, ಮೊಸರು, ಹಗಲು ನಿದ್ರೆ, ಮೂಡಣ ದಿಕ್ಕಿನ ಗಾಳಿ ಸಹ ವರ್ಜ್ಯವಾಗಿರುತ್ತವೆ. ಹಗಲು ಸೂರ್ಯನ ಕಿರಣಗಳಿಂದ ತಪ್ತವಾಗಿ ರಾತ್ರಿ ಚಂದ್ರಕಿರಣಗಳಿಂದ ಶೀತಲವಾದ, ಕಾಲದಿಂದ ಪಕ್ವವಾದ, ಅಗಸ್ತ್ಯನಿಂದ ವಿಷರಹಿತವಾಗಿ ಮಾಡಲ್ಪಟ್ಟ, ನಿರ್ದೋಷವಾದ, ನಿರ್ಮಲವಾದ, ರುಚಿಯಾದ, ಮತ್ತು ಹಂಸೋದಕ ಎಂತ ಪ್ರಾತಿಗೂಂಡ ಶರತ್ಕಾಲದ ನೀರು ಸ್ನಾನಪಾನಾವಗಾಹಗಳಿಗ ಅಮೃತಸಮಾನವಾದದ್ದು ಶರತ್ಕಾಲಸಂಬಂಧವಾದ ಹೂವಿನ ಮಾಲೆಗಳು, ನಿರ್ಮಲವಾದ ವಸ್ತ್ರಗಳು, ಮತ್ತು ಪ್ರದೋಷಕಾಲದ ಚಂದ್ರಕಿರಣಗಳು ಶರದೃತುವಿನಲ್ಲಿ ಪ್ರಶಸ್ತವಾಗಿರುತ್ತವೆ

21 ಚಾತ್ಮಿಯಲ್ಲಿ ಶೀತೋಷ್ಣ ಕಾಲಭೇದ

ಶೀತೇ ಶೀತಪ್ರತೀಕಾರ ಉಷ್ಣೇ ಚೋಷ್ಣನಿವಾರಣಂ |
ಕೃತ್ವಾ ಕುರ್ಯಾತ್ಕ್ರಿಯಾಂ ಪ್ರಾಪ್ತಾಂ ಕ್ರಿಯಾಕಾಲಂ
ನ ಹಾಪಯೇತ || (ಸು 1.30)

ಶೀತಕಾಲದಲ್ಲಿ ಶೀತಕ್ಕ ಪ್ರತೀಕಾರವನ್ನೂ ಉಷ್ಣಕಾಲದಲ್ಲಿ ಉಷ್ಣದ ನಿವಾರಣವನ್ನೂ ಮಾಡಿಕೊಂಡು, ಯೋಗ್ಯವಾದ ಔಷಧೋಪಚಾರಗಳನ್ನು ತಕ್ಕ ಕಾಲದಲ್ಲಿಯೇ ನಡಿಸತಕ್ಕದ್ದು

IX ನೇ ಅಧ್ಯಾಯ.

ಶರೀರದಲ್ಲಿರುವ ನಾರ ಸತ್ವ ಬಲಾದಿ ಭೇದಗಳ ವಿಚಾರ.

1 ಅಥ ಸಾರಾಣಾಂ ವಕ್ಷ್ಯಾಮಃ। ಸ್ಮೃತಿಭಕ್ತಿಪ್ರಜ್ಞಾಶೌರ್ಯಶೌಚೋಪೇತಂ ಕಲ್ಯಾಣಾಭಿನಿವೇಶಂ ಸತ್ವಸಾರಂ ವಿದ್ಯಾತ್ ಸ್ನಿಗ್ಧಂ ಸಂಹತಶ್ಲೇತಾಸ್ಥಿದಂತಸಮಂ ಬಹುಲಕಾಮಪ್ರಮಂ ಶುಕ್ರೇಣ। ಅಕೃಶಮುತ್ತಮಬಲಂ ಸ್ನಿಗ್ಧಗಂಭೀರಸ್ವರಂ ಸೌಭಾಗ್ಯೋಪಪನ್ನಂ ಮಹಾನೇತ್ರಂ ಚ ಮಜ್ಞಾ। ಮಹಾಶರೀರಸ್ಕಂಧದೃಢದಂತಹನ್ವಸ್ಥಿನಖಮಸ್ಥಿಭಿಃ। ಸ್ನಿಗ್ಧಮೂತ್ರಸ್ವೇದಸ್ವರಂ ಬೃಹಚ್ಛರೀರಮಾಯಾಸಸಮರ್ಥಂ ಮೇದಸಾ। ಅಭಿದ್ರಗಾತ್ರಂ ಗೂಢಾಸ್ಥಿಸಂಧಿಂ ಮಾಂಸೋಪಚಿತಂ ಚ ಮಾಂಸೇನ। ಸ್ನಿಗ್ಧತಾಮ್ರನಖನಯನತಾಲುಜಿಹ್ವೌಷ್ಠಪಾಣಿಪಾದತಲಂ ರಕ್ತೇನ। ಸುಪ್ರಸನ್ನಮೃದುತ್ವಗ್ರೋಮಾಣಂ ತ್ವಕ್ಸಾರಂ ವಿದ್ಯಾದಿತ್ಯೇಷಾಂ ಪೂರ್ವಂ ಪೂರ್ವಂ ಪ್ರಧಾನಮಾಯುಃ-ಸೌಭಾಗ್ಯಯೋರಪಿ। (ಸು. 129)

ನಾರ ಸಾರ ಲಕ್ಷಣಗಳು.

ಸಾರಗಳು ಹೇಳಲ್ಪಡುತ್ತವೆ ನೆನವು, ಭಕ್ತಿ, ಒಳ್ಳೇ ತಿಳುವಳಿಕೆ, ಶೌರ್ಯ, ಶೌಚ, ಇವುಗಳಿಂದ ಕೂಡಿದವನಾಗಿ ಸದ್ವೃತ್ತಿಯಲ್ಲಿ ಆಸಕ್ತನಾದವನನ್ನು ಸತ್ವಸಾರದವನೆಂದೂ, ಸ್ನಿಗ್ಧ, ಗಟ್ಟಿ ಮತ್ತು ಬಿಳೀ ಎಲುಬು-ಹಲ್ಲು-ಉಗುರುಗಳಿಂದ ಯುಕ್ತನಾಗಿ ಹೆಚ್ಚು ಕಾಮ ಮತ್ತು ಮಕ್ಕಳುಳ್ಳವನನ್ನು ಶುಕ್ರಸಾರದವನೆಂದೂ, ಕೃಶನಲ್ಲದ, ಉತ್ತಮ ಒಲವುಳ್ಳ, ಸ್ನಿಗ್ಧ ಮತ್ತು ಗಂಭೀರವಾದ ಸ್ವರವುಳ್ಳ, ಸೌಭಾಗ್ಯಸಂಪನ್ನನಾದ ಮತ್ತು ದೊಡ್ಡ ಕಣ್ಣುಗಳುಳ್ಳ ಪುರುಷನನ್ನು ಮಜ್ಜಾಸಾರದವನೆಂದೂ, ದೊಡ್ಡದಾದ ತಲೆ-ಮುಂಡೆಗಳುಳ್ಳ ಮತ್ತು ದೃಢವಾದ ಹಲ್ಲು-ದವಡೆ-ಎಲುವು-ಉಗುರುಗಳುಳ್ಳವನನ್ನು ಎಲುವುಸಾರದವನೆಂದೂ, ಸ್ನಿಗ್ಧವಾದ ಮೂತ್ರ-ಬೆವರು-ಸ್ವರಗಳು ಮತ್ತು ದೊಡ್ಡ ಶರೀರ, ಇವು ಉಳ್ಳವನಾದ ಮತ್ತು ಆಯಾಸ ಸಹನಶಕ್ತಿಯುಳ್ಳ ಪುರುಷನನ್ನು ಮೇದಸ್ಸಾರದವನೆಂದೂ, ಭರ್ತಿಯಾದ ಶರೀರ ಅಡಗಿದ ಎಲುಬುಸಂಧಿಗಳು ಮತ್ತು ಮಾಂಸದ ಬೆಳಿಕ, ಇವು ಉಳ್ಳವನನ್ನು ಮಾಂಸಸಾರನೆಂದೂ, ಸ್ನಿಗ್ಧವಾದ ಮತ್ತು ಕೆಂಪಾದ ಉಗುರು-ಕಣ್ಣು-ತಾಲು-ನಾಲಿಗೆ-ತುಟಿ-ಕೈಕಟ್ಟು-ಕಾಲುತಟ್ಟು, ಇವುಗಳುಳ್ಳವನನ್ನು ರಕ್ತಸಾರನೆಂದೂ, ಒಳ್ಳೇ ನಿರ್ಮಲವಾದ ಮತ್ತು ಮೃದುವಾದ ಚರ್ಮ ರೋಮಗಳುಳ್ಳವನನ್ನು ಚರ್ಮಸಾರನೆಂದೂ ತಿಳಿಯಬೇಕು ಇವುಗಳೊಳಗೆ ಹಿಂದೆ ಹಿಂದಿನದು ಆಯುಸ್ಸು ಮತ್ತು ಸೌಭಾಗ್ಯಕ್ಕೆ ಪ್ರಧಾನವಾಗಿರುತ್ತದೆ

2. ರಸಸಿಮಿತ್ತಮೇವ ಸ್ಫಾಲ್ಯಂ ಕಾರ್ಶ್ಯಂ ಚ। ತತ್ರ ಶ್ಲೇಷ್ಮಲಾಹಾರಸೇವಿನೋಽಧ್ಯಶನಶೀಲಸ್ಯಾವ್ಯಾಯಾಮಿನೋ ದಿವಾಸ್ವಪ್ನರತಸ್ಯ ಚಾಮ ಏವಾನ್ನರಸೋ ಮಧುರತರಶ್ಚ ಶರೀರಮನುಕ್ರಾಮನ್ನತಿಸ್ನೇಹಾನ್ಮೇದೋ ಜನಯತಿ। ತದತಿಸ್ಫಾಲ್ಯಮಾಪಾದಯತಿ ತಮತಿಸ್ಥೂಲಂ ಕ್ಷುದ್ರಶ್ವಾಸಃ ಪಾಸಾಕ್ಷುತ್ಸ್ವಪ್ನಸ್ವೇದಗಾತ್ರದೌರ್ಗಂಧ್ಯಕ್ರಥನಗಾತ್ರಸಾದಗದ್ಗದತ್ವಾಸಿ

ಸ್ಫಾಲ್ಯ ಲಕ್ಷಣ ಮತ್ತು ಕಾರಣ ಆದಕ್ಕೆ ಪರಿಹಾರ

ಕ್ಷಿಪ್ರಮೇವಾವಿಶಂತಿ ಸೌಕುಮಾರ್ಯಂ ಮೇದಸಃ ಸರ್ವಾಕ್ರಿಯಾಸ್ವಸಮರ್ಥಃ ಕಫಮೇದೋನಿರುದ್ಧಮಾರ್ಗತ್ವಾಚ್ಚಾಲ್ಪಶ್ವಾಸೋ ಭವತ್ಯಾವೃತಮಾರ್ಗತ್ವಾದೇವಂ ಶೇಷಾ ಧಾತವೋ ನಾಪ್ಯಾಯಂತೇಽತ್ಯರ್ಥಮತೋಽಲ್ಪಪ್ರಾಣೋ ಭವತಿ ಪ್ರಮೇಹ-ಪಿಡಕಾ-ಜ್ವರ-ಭಗಂದರ-ವಿದ್ರಧಿ-ವಾತವಿಕಾರಾಣಾಮನ್ಯತಮಂ ಸ್ಪಾಸ್ಯ ಪಂಚತ್ವಮುಪಯಾತಿ ಸರ್ವ ಏವ ಚಾಸ್ಯ ರೋಗಾ ಬಲವಂತೋ ಭವಂತ್ಯಾವೃತಮಾರ್ಗತ್ವಾತ್ ಸ್ರೋತಸಾಮತಸ್ತಸ್ಯೋತ್ಪತ್ತಿಹೇತುಂ ಪರಿಹರೇತ್ | ಉತ್ಪನ್ನೇ ತು ವಿಲಾಜತುಗುಗ್ಗುಲುಗೋಮೂತ್ರತ್ರಿಫಲಾಲೋಹರಜೋರಸಾಂಜನ ಮಧುಯವಮುದ್ಗಕೋರದೂಷಕಶ್ಯಾಮಾಕೋದ್ದಾಲಕಾದೀನಾಂ ರುಕ್ಷಣಚ್ಛೇದನೀಯಾನಾಂ ಚ ದ್ರವ್ಯಾಣಾಂ ಏಭಿರನುಪಯೋಗೋ ವ್ಯಾಯಾಮೋ ಲೇಖನವಸ್ತ್ಯುಪಯೋಗಶ್ಚೇತಿ | (ಸು ೫೬-೫೭)

ಸ್ಥೂಲತ ಮತ್ತು ಕೃಶತ ಆಹಾರರಸದಿಂದಲೇ ಉಂಟಾಗುವಂಥವು ಅವುಗಳಲ್ಲಿ ಕಫ ವೃದ್ಧಿಕರವಾದ ಆಹಾರವನ್ನು ಸೇವಿಸುವ, ಮಿತಿಮೀರಿ ಉಣ್ಣುವ ಶೀಲವುಳ್ಳ, ವ್ಯಾಯಾಮ (ದೇಹದಂಡನೆ) ಮಾಡದ, ಹಗಲು ನಿದ್ರೆಯನ್ನು ಪ್ರೀತಿಸುವ, ಮನುಷ್ಯನ ಅನ್ನರಸವು ಪಕ್ವವಾಗದೇನೇ, ಹೆಚ್ಚು ಕೀಯಾಗಿಯೇ, ಶರೀರವನ್ನು ಸಂಚರಿಸಿ, ಅತಿ ಬಿಟ್ಟಿನ ದೆಸೆಯಿಂದ ಮೇದಸ್ಸನ್ನುಂಟುಮಾಡುತ್ತದೆ ಅದು ಅತಿ ಸ್ಥೂಲತೆಯನ್ನು ತರುತ್ತದೆ ಇಂಥಾ ಅತಿ ಸ್ಥೂಲನಲ್ಲಿ ಸಣ್ಣ ಶ್ವಾಸ, ಬಾಯಾರಿಕೆ, ಜ್ವರ, ನಿದ್ರೆ, ಬೆವರು, ದುರ್ವಾಸನೆ, ಗೊರಕ, ಸೊಣ್ಣೋವು, ಸ್ಪಷ್ಟವಲ್ಲದ ಮಾತು ಮತ್ತು ಗಟ್ಟಿಯಲ್ಲದ ಮೇದಸ್ಸು, ಈ ದೋಷಗಳು ಶೀಘ್ರವಾಗಿ ಪ್ರವೇಶಮಾಡುತ್ತವೆ. ಕಫ ಮತ್ತು ಮೇದಸ್ಸುಗಳಿಂದ ಮಾರ್ಗಗಳೆಲ್ಲಾ ತಡೆಯಲ್ಪಡುವದರಿಂದ, ಅಂಥವನು ಸರ್ವ ಕೆಲಸಗಳಲ್ಲಿಯೂ ಅಸಮರ್ಥನೂ, ಅಲ್ಪ ಸ್ತ್ರೀಸಂಭೋಗಶಕ್ತಿಯುಳ್ಳವನೂ ಆಗುತ್ತಾನೆ ಹೀಗೆ ಮಾರ್ಗಗಳು ಮುಚ್ಚಿಹೋಗುವ ದೆಸೆಯಿಂದ. ಮುಕ್ಕ ಧಾತುಗಳು ಹೆಚ್ಚಾಗಿ ಪುಷ್ಟಿಯಾಗುವದಿಲ್ಲ ಈ ಕಾರಣದಿಂದ ಅಲ್ಪಶ್ವಾಸವುಳ್ಳವನಾಗುತ್ತಾನೆ ಪ್ರಮೇಹ, ಪಿಡಕ, ಜ್ವರ, ಭಗಂದರ, ವಿದ್ರಧಿ ಮತ್ತು ವಾತವಿಕಾರಗಳು ಇವುಗಳೊಳಗೆ ಯಾವದನ್ನಾದರೂ ಪಡೆದು ಮರಣವನ್ನು ಸಮೀಪಿಸುತ್ತಾನೆ. ಇವನಿಗೆ ಎಲ್ಲಾ ರೋಗಗಳೂ, ಸ್ರೋತಸ್ಸುಗಳ ಮಾರ್ಗ ಮುಚ್ಚಿಹೋದ ಕಾರಣದಿಂದ, ಬಲವಂತವಾಗಿಯೇ ಪರಿಣಮಿಸುವವು ಆದ್ದರಿಂದ ಅದರ ಉತ್ಪತ್ತಿಯಾಗದಂತೆ ಕಾರಣವನ್ನು ಪರಿಹರಿಸಬೇಕು ಉತ್ಪನ್ನವಾಗಿ ಹೋದರೆ, ವಿಲಾಜತು, ಗುಗ್ಗುಳ, ಗೋಮೂತ್ರ, ತ್ರಿಫಲೆ, ಕಬ್ಬಣದ ದೂಳು, ರಸಾಂಜನ, ಜೇನು, ಯವ, ಹೆಸರು, ಕೋರದೂಷಕ ಧಾನ್ಯ, ಶ್ಯಾಮಕ್ಕಿ, ಉದ್ದಾಲಕ ಧಾನ್ಯ, ಇವು ಮೊದಲಾದ ವಿಶೇಷವಾಗಿ ರೂಕ್ಷಣ ಮತ್ತು ಛೇದನಗುಣವುಳ್ಳ ದ್ರವ್ಯಗಳನ್ನು ವಿಧಿಯರಿತು ಉಪಯೋಗಿಸೋಣ, ವ್ಯಾಯಾಮ ಮತ್ತು ಲೇಖನವಸ್ತಿಯ ಉಪಯೋಗ, ಈ ಪರಿಹಾರಗಳನ್ನು ಮಾಡತಕ್ಕದ್ದು

3. ಮೇದೋಮಾಂಸಾತಿವೃದ್ಧತ್ವಾಜ್ಜಘನಸ್ಫಿಗುದರಸ್ತನಃ |
ಸ್ಥೌಲ್ಯಲಕ್ಷಣ ಅಯಥೋಪಚಯೋತ್ಸಾಹೋ ನರೋಽತಿಸ್ಥೂಲ ಉಚ್ಯತೇ || (ಚ. 115.)

ಮೇದಸ್ಸೂ, ಮಾಂಸವೂ, ಅತಿಯಾಗಿ ಬೆಳೆದ ದೆಸೆಯಿಂದ ಯಾವನ ಅಂಡುಗಳು, ಹೊಟ್ಟೆ ಮತ್ತು ಮೊಲೆಗಳು ಅಲ್ಲಾಡುತ್ತಿರುವವೋ, ಮತ್ತು ಉತ್ಸಾಹವು ಬಿಳಿಕೆಗೆ ತಕ್ಕವಾಗಿಲ್ಲವೋ ಆ ಮನುಷ್ಯನು ಅತಿ ಸ್ಥೂಲನೆಂದು ಹೇಳಲ್ಪಡುತ್ತಾನೆ

4 ವಾತಘ್ನಾನ್ಯನ್ನಪಾನಾನಿ ಶ್ಲೇಷ್ಮಮೇದೋಹರಾಣಿ ಚ ।
ರೂಕ್ಷೋಷ್ಣಾ ವಸ್ತಯಸ್ತೀಕ್ಷ್ಣಾ ರೂಕ್ಷಾಣ್ಯುದ್ವರ್ತನಾನಿ ಚ ॥
ಗುಡೂಚೀ-ಭದ್ರಮುಸ್ತಾನಾಂ ಪ್ರಯೋಗಸ್ತ್ರಿಫಲಸ್ತಥಾ ।
ತಕ್ರಾರಿಷ್ಟಪ್ರಯೋಗಸ್ತು ಪ್ರಯೋಗೋ ಮಾಕ್ಷಿಕಸ್ಯ ಚ ॥
ವಿಡಂಗನಾಗರಂ ಕ್ಷಾರಃ ಕಾಲಲೋಹರಜೋ ಸುಧೂ ।
ಯವಾಮಲಕಚೂರ್ಣಂ ಚ ಪ್ರಯೋಗಃ ಶ್ರೇಷ್ಠ ಉಚ್ಯತೇ ।
ಬಿಲ್ವಾದಿಪಂಚಮೂಲಸ್ಯ ಪ್ರಯೋಗಃ ಕ್ವಾಥಸಂಯುತಃ ।
ಸ್ಥೌಲ್ಯಕ್ಕೆ ಪರಿಹಾರ ಶಿತಾಜತುಪ್ರಯೋಗಸ್ತು ಸಾಗ್ನಿಮಂಥರಸಾ ತಥಾ ॥
ಪ್ರಸಾತಿಕಾ ಪ್ರಿಯಂಗುಶ್ಚ ಶ್ಯಾಮಾಕಾ ಯವಕಾ ಯವಾಃ ।
ಜೂರ್ಣಾಹ್ವಾಃ ಕೋದ್ರವಾ ಮುದ್ಗಾಃ ಕುಲತ್ಥಾಶ್ಚಕ್ರಮರ್ದಕಾಃ ॥
ಆಢಕೀನಾಂ ಚ ಬೀಜಾನಿ ಪಟೋಲಾಮಲಕೈಃ ಸಹ ।
ಭೋಜನಾರ್ಥಂ ಪ್ರಯೋಜ್ಯಾನಿ ಪಾನಂ ಚಾನುಮಧೂದಕಂ ॥
ಅರಿಷ್ಟಾಂಶ್ಚಾನುಪಾನಾರ್ಥೇ ಮೇದೋಮಾಂಸಕಫಾಪಹಾನ್ ।
ಅತಿಸ್ಥೌಲ್ಯವಿನಾಶಾಯ ಸಂಯೋಜ್ಯಾ ಪ್ರಯತೈರ್ನರೈಃ ॥
ಪ್ರಜಾಗರಂ ವ್ಯವಾಯಂ ಚ ವ್ಯಾಯಾಮಂ ಚಿಂತನಾನಿ ಚ ।
ಸ್ಥೌಲ್ಯಮುಚ್ಚೈಸ್ಸರಿತ್ಯಕ್ತುಂ ಕ್ರಮೇಣಾಧಿಪ್ರವರ್ಧಯೇತ್ ॥ (ಚ 116-117)

ವಾತಶಮನಕರವಾದ ಮತ್ತು ಕಫಮೇದೋಹರವಾದ ಅನ್ನಪಾನಗಳು, ರೂಕ್ಷಗುಣವುಳ್ಳ ಮತ್ತು ಉಷ್ಣವಾದ ವಸ್ತಿಗಳು, ತೀಕ್ಷ್ಣ ಮತ್ತು ರೂಕ್ಷವಾದ ಉದ್ವರ್ತನಗಳು (ಮರ್ದನಗಳು), ಮತ್ತು ಅಮೃತಬಳ್ಳಿ, ಭದ್ರಮುಷ್ಟಿ ಮತ್ತು ತ್ರಿಫಲೆ, ಇವುಗಳ ಪ್ರಯೋಗ, ತಕ್ರಾರಿಷ್ಟದ ಪ್ರಯೋಗ, ಜೇನಿನ ಪ್ರಯೋಗ, ಮತ್ತು ವಾಯುವಿಡಂಗ ಶುಂಠಿ, ಯವಕ್ಷಾರ, ಕರೇ ಕಬ್ಬಿಣದ ಪುಡಿ, ಜೇನು, ಇಂದ್ರಜೌ ನಲ್ಲಜಟ್ಟು, ಇವುಗಳ ಚೂರ್ಣದ ಪ್ರಯೋಗ, ಸಹ ಶ್ರೇಷ್ಠವೆಂತ ಹೇಳಲ್ಪಟ್ಟವು, ಹಾಗಯೇ ಬಿಲ್ವಾದಿ ಪಂಚಮೂಲಗಳ ಕಷಾಯವನ್ನು ಜೇನು ಕೂಡಿಸಿ ಸೇವಿಸುವದು, ಶಿಲಾಜತುವಿನ ಪ್ರಯೋಗ, ನರುವಲುರಸದಲ್ಲಿ ಕರ್ಪೂರವನ್ನು ಸೇವಿಸುವದು ಸಮ ಪ್ರಶಸ್ತ ಭೋಜನಕ್ಕೆ ಬೀರಸಾಲೆ ಅಕ್ಕಿ, ಪ್ರಿಯಂಗು, ಶ್ಯಾಮಕ್ಕಿ, ಯವಕ ಎಂಬ ಭತ್ತ, ಯವೆಗೋದಿ, ಸಣ್ಣಕ್ಕಿ, ಸಾಬಕ್ಕಿ, ಹೆಸರು ಹುರುಳಿ, ಚಗತೆಸೊಪ್ಪು, ತೊಗರೀಕಾಳು, ಪಡುವಲಕಾಯಿ ಮತ್ತು ನೆಲ್ಲಜಟ್ಟು, ಇವುಗಳನ್ನು ಪ್ರಯೋಗಿಸತಕ್ಕದ್ದು. ಕುಡಿಯುವದಕ್ಕೆ ಜೇನು ಕೂಡಿದ ನೀರು ಪ್ರಶಸ್ತ. ಅನುಪಾನಕ್ಕೆ ಮೇದಸ್ಸನ್ನೂ, ಮಾಂಸವನ್ನೂ, ಕಫವನ್ನೂ, ಹೋಗಗೊಳಿಸತಕ್ಕ ಅರಿಷ್ಟಗಳನ್ನು ವಿಚಾರದಿಂದ ಅತಿ ಸ್ಥೌಲ್ಯನಾಶನಕ್ಕೆ ತಕ್ಕ ಹಾಗೆ ಪ್ರಯೋಗಿಸಬೇಕು. ಹೆಚ್ಚು ಜಾಗರಣೆ ಸ್ತ್ರೀಸಂಭೋಗ, ವ್ಯಾಯಾಮ,

ಮತ್ತು ಚಿಂತನೆಗಳು, ಇವುಗಳನ್ನು ಸ್ವಲ್ಪಸಿವಾರಣಾಪೇಕ್ಷೆಯುಳ್ಳವನು ಕ್ರಮದಿಂದ ವೃದ್ಧಿ ಮಾಡಿಕೊಳ್ಳಬೇಕು.

ಪಥ್ಯ ಶಿಲಾಜತುವನ್ನು ಸರುವಲರಸ ಕೂಡಿಸಿ ಸೇವಿಸತಕ್ಕದ್ದಾಗಿ ಪಾಗ ಚ (ಪ 70)

5 ತತ್ರ ಪುನರ್ವಾತಲಾಹಾರಸೇವಿನೋಽತಿವ್ಯಾಯಾಮ-ವ್ಯವಾಯಾಧ್ಯಯನ-ಭಯ-ಶೋಕ-ಧ್ಯಾನ-ರಾತ್ರಿಜಾಗರಣ-ಪಿಪಾಸಾ-ಕ್ಷುತ್ಕ್ಷಾಮಾಯಾಲ್ಪಾಶನ-ಪ್ರಭೃತಿಭಿರುಪಶೋಷಿತೋ ರಸಧಾತುಃ ಶರೀರಮನನುಕ್ರಾಮನಲ್ಪತ್ವಾನ್ನ ಪ್ರೀಣಯತಿ ತಸ್ಮಾದತಿಕಾರ್ಶ್ಯಂ ಚ ಭವತಿ | ಸೋಽತಿಕೃಶಃ ಕ್ಷುತ್ಪಿಪಾಸಾತೀತೋಷ್ಣವಾತವರ್ಷಭಾರಾದಾನೇಷ್ವಸಹಿಷ್ಣುರ್ವಾತರೋಗಪ್ರಾಯೋಽಲ್ಪಪ್ರಾಣಶ್ಚೇಷ್ಟಾಕ್ರಿಯಾಸು ಭವತಿ ಶ್ವಾಸ-ಕಾಸ-ಶೋಷ-ಪ್ಲೀಹೋದರಾಗ್ನಿಸಾದ-ಗುಲ್ಮ-ರಕ್ತಪಿತ್ತಾನಾಮನ್ಯತಮಂ ಪ್ರಾಪ್ಯ ಮರಣಮುಪಯಾತಿ | ಸರ್ವ ಏವ ಚಾಸ್ಯ ರೋಗಾ ಬಲವಂತೋ ಭವಂತ್ಯಲ್ಪಪ್ರಾಣತ್ವಾದತಸ್ತ್ವೋತ್ಪತ್ತಿಹೇತುಂ ಪರಿವರ್ಜಯೇತ್ | ಉತ್ಪನ್ನೇ ತು ಪಯಸ್ಯಾಶ್ವಗಂಧಾ-ವಿದಾರೀ-ನಿದಾರಿಗಂಧಾ-ಶತಾವರೀ-ಬಲಾತಿಬಲಾ-ನಾಗಬಲಾನಾಂ ಮಧುರಕಾಮನ್ಯಾಸಾಂ ಚೌಷಧೀನಾಮುಪಯೋಗಃ ಕ್ಷೀರ-ದಧಿ-ಘೃತ-ಮಾಂಸ-ಶಾಲಿ-ಷಷ್ಟಿಕ-ಯವ-ಗೋಧೂಮಾನಾಂ ಚ ದಿವಾಸ್ವಪ್ನಬ್ರಹ್ಮಚರ್ಯವ್ಯಾಯಾಮಬೃಂಹಣಸ್ನೇಹಪಯೋಗಶ್ಚೇತಿ | (ಸು. 37)

ಕಾರ್ಶ್ಯಲಕ್ಷಣ ಮತ್ತು ಕಾರಣ ಮತ್ತು ಅದಕ್ಕೆ ಪರಿಹಾರ

ಪುನಃ ವಾತ ವೃದ್ಧಿಮಾಡತಕ್ಕ ಆಹಾರಗಳನ್ನು ಸೇವಿಸುವವನ ರಸಧಾತುವು ಅತಿಯಾದ ಕಾಯದಣಿಕೆ, ಸಂಭೋಗ, ಅಧ್ಯಯನ, ಭಯ, ಶೋಕ, ಧ್ಯಾನ, ರಾತ್ರಿಜಾಗರಣ, ಬಾಯಾರಿಕೆ, ಹಸಿವು, ಜೊಗರುಪದಾರ್ಥಗಳ ಉಪಯೋಗ ಅಲ್ಪಾಹಾರ, ಮುಂತಾದ ಕಾರಣಗಳಿಂದ ಕಡಿಮೆಯಾಗಿ, ಅಲ್ಪವಾದ ದೆಸೆಯಿಂದ ಶರೀರವನ್ನೆಲ್ಲಾ ವ್ಯಾಪಿಸದ ಪ್ರಯುಕ್ತ, ಶರೀರವನ್ನು ತಕ್ಕ ಹಾಗ ತೃಪ್ತಿಗೊಳಿಸುವುಲ್ಲ ಅದರಿಂದ ಅವನು ಅತಿ ಕೃಶನಾಗುತ್ತಾನೆ ಹಾಗೆ ಅತಿ ಕೃಶನಾದವನು ಹಸಿವು, ತೃಷ್ಣ, ಲಂಘನ, ಉಷ್ಣ, ಗಾಳಿ, ಮಳೆ, ಭಾರಹೊರುವಿಕೆ, ಇವುಗಳನ್ನು ಸಹಿಸಲಾರದವನೂ, ವಾತರೋಗಾಸ್ಪದನೂ, ಕೆಲಸಗಳನ್ನು ಮಾಡುವಲ್ಲಿ ಉಬ್ಬಸಪಡತಕ್ಕವನೂ ಆಗಿ, ಉಬ್ಬಸ, ಕೆಮ್ಮು, ಕ್ಷಯ, ಪ್ಲೀಹೋದರ, ಅಗ್ನಿಮಾಂದ್ಯ, ಗುಲ್ಮ, ರಕ್ತಪಿತ್ತ, ಈ ರೋಗಗಳಲ್ಲಿ ಯಾವದನ್ನಾದರೂ ಪಡೆದು, ಮರಣವನ್ನು ಸಮಾಪಿಸುತ್ತಾನೆ. ಇವನಿಗೆ, ಸಿತ್ರಾಣಿಯಾದ ದೆಸೆಯಿಂದ ಎಲ್ಲಾ ರೋಗಗಳೂ ಬಲವಂತವಾಗುತ್ತವೆ. ಆದ್ದರಿಂದ ಅದರ ಉತ್ಪತ್ತಿಯಾಗದಂತೆ ಹೇತುವನ್ನು ಪರಿಹರಿಸಿಬೇಕು ಉತ್ಪನ್ನವಾಗಿ ಹೋದರೆ, ಕ್ಷೀರಕಾಕೋಲಿ ಅಶ್ವಗಂಧಿ, ನೆಲಕುಂಬಳಗಡ್ಡೆ, ಮೂರಲೆ, ಶತಾವರಿ, ಕಡೀರು, ದೊಡ್ಡಕಡೀರು, ಆನೆಕಡೀರು ಮತ್ತು ಬೇರೆ ಮಧುರವಾದ ಔಷಧಗಳನ್ನೂ, ಹಾಲು, ಮೊಸರು, ತುಪ್ಪ, ಮಾಂಸ, ಶಾಲ್ಯನ್ನ, 60 ದಿನಕ್ಕೆ ಬೆಳೆಯುವ ಅಕ್ಕಿಯ ಅನ್ನ ಯವೆ ಮತ್ತು ಗೋದಿ, ಇವುಗಳನ್ನೂ ಉಪಯೋಗಿಸುವದಲ್ಲದೆ, ಹಗಲು ನಿದ್ರೆ, ಬ್ರಹ್ಮಚರ್ಯ, ವ್ಯಾಯಾಮ ಇಲ್ಲದಿರೋಣ ಮತ್ತು ಬೃಂಹಣಕರವಾದ ವಸ್ತಿ, ಇವುಗಳನ್ನು ಸಹ ಉಪಯೋಗಿಸತಕ್ಕದ್ದು.

6. ಸ್ವಪ್ನೋ ಹರ್ಷಃ ಸುಖಾ ಶಯ್ಯಾ ಮನಸೋ ನಿರ್ವೃತಿಃ ಶಮಃ |
ಚಿಂತಾವ್ಯವಾಯವ್ಯಾಯಾಮವಿರಾಮಃ ಪ್ರಿಯದರ್ಶನಂ ||
ನವಾನ್ನಾನಿ ನವಂ ಮದ್ಯಂ ಗ್ರಾಮ್ಯಾನೂಪೌದಕಾ ರಸಾಃ |
ಸಂಸ್ಕೃತಾನಿ ಚ ಮಾಂಸಾನಿ ದಧಿ ಸರ್ಪಿಃ ಪಯಾಂಸಿ ಚ
ಇಕ್ಷವಃ ಶಾಲಯೋ ಸೂಪಾ ಗೋಧೂಮಾ ಗುಡವೈಕೃತಂ |
ವಸ್ತ್ರಯಃ ಸ್ನಿಗ್ಧಮಧುರಾಸ್ತೈಲಾಭ್ಯಂಗಶ್ಚ ಸರ್ವದಾ ||
ಸ್ನಿಗ್ಧಮುದ್ವರ್ತನಂ ಸ್ನಾನಂ ಗಂಧಮಾಲ್ಯನಿಷೇವಣಂ |
ಶುಕ್ಲೋ ವಾಸೋ ಯಥಾಕಾಲಂ ದೋಷಾಣಾಮವಸೇಚನಂ ||
ರಸಾಯನಾನಾಂ ಸೃಷ್ಟ್ಯಾನಾಂ ಯೋಗಾನಾಮುಪಸೇವನಂ |
ಹರ್ತ್ರಾತಿಕಾರ್ಶ್ಯಮಾದತ್ತೇ ಸೃಜ್ಯಾಮುಪಚಯಂ ಪರಂ ||
ಅಚಿಂತನಾಚ್ಚ ಕಾರ್ಯಾಣಾಂ ಧ್ರುವಂ ಸಂತರ್ಪಣೇನ ಚ |
ಸ್ವಪ್ನಪ್ರಸಂಗಾಚ್ಚ ನರೋ ವರಾಹ ಇವ ಪುಷ್ಯತಿ || (ಚ 117)

ಕಾರ್ಶ್ಯಕ್ಕೆ ಪಂಹಾರ

ನಿದ್ರೆ, ಹರ್ಷ, ಸುಖವಾದ ಹಾಸಿಗೆ, ಮನಃಶಾಂತತೆ, ಸಮಾಧಾನ, ಚಿಂತೆಯನ್ನೂ, ಮೈಥುನವನ್ನೂ, ವ್ಯಾಯಾಮವನ್ನೂ ಬಿಟ್ಟಿರುವದು, ಪ್ರಿಯವಾದವರ ಅಥವಾ ಪ್ರಿಯರಾದವರ ದರ್ಶನ, ಹೊಸ ಅನ್ನಗಳು, ಹೊಸ ಮದ್ಯ, ಊರಲ್ಲಿ ಅಥವಾ ಜಲಭೂಯಿಷ್ಠವಾದ ಸ್ಥಳಗಳಲ್ಲಿ, ಅಥವಾ ನೀರಲ್ಲಿ ಬೆಳೆದ ಪ್ರಾಣಿಗಳ ಮಾಂಸದಿಂದ ತಯಾರಿಸಿದ ರಸಗಳು, ಒಳ್ಳೆದಾದ ಮಾಂಸಗಳ ಪಕ್ವಗಳು, ಮೊಸರು, ತುಪ್ಪ, ಹಾಲುಗಳು, ಕಬ್ಬುಗಳು, ಶಾಲ್ಯನ್ನಗಳು, ಉದ್ದಿನ ಬಾತಿಗಳು, ಗೋಧಿಬಾತಿಗಳು, ಬೆಲ್ಲದಿಂದ ತಯಾರಿಸಿದ ಪದಾರ್ಥಗಳು, ಸ್ನಿಗ್ಧ ಮತ್ತು ಮಧುರವಾದ ವಸ್ತ್ರಗಳು, ನಿತ್ಯ ತೈಲಾಭ್ಯಂಗ, ಸ್ನಿಗ್ಧವಾದ ಉದ್ವರ್ತನ, ಸ್ನಾನ, ಗಂಧಮಾಲ್ಯಗಳ ಸೇವನ, ಬಿಳೇ ವಸ್ತ್ರಗಳ ಧಾರಣ, ಉಚಿತಕಾಲದಲ್ಲಿ ದೋಷಗಳನ್ನು ಹೊರಗೆ ಹಾಕೋಣ, ರಸಾಯನಗುಣವುಳ್ಳ ಮತ್ತು ವೃಷ್ಯಗುಣವುಳ್ಳ ಯೋಗಗಳನ್ನು ಸೇವಿಸುತ್ತಿರುವದು, ಇವುಗಳಿಂದ ಮನುಷ್ಯರ ಅತಿ ಕೃಶತೆಯು ಹೋಗಿ, ಉತ್ತಮವಾದ ಧಾತುಕೂಡುವಿಕೆಯು ಉಂಟಾಗುವದು ಕಾರ್ಯಗಳ ಚಿಂತನೆ ಬಿಟ್ಟಿರುವದರಿಂದಲೂ, ಸಂತರ್ಪಣ ಉಪಚಾರದಿಂದಲೂ, ನಿದ್ರೆಯನ್ನು ಹೆಚ್ಚಾಗಿ ಸೇವಿಸುವದರಿಂದಲೂ, ಮನುಷ್ಯನು, ಹಂದಿಯಂತೆ, ಪುಷ್ಟಿಯಾಗುವನು.

7. ಯಃ ಪುನರುಭಯಸಾಧಾರಣಾನ್ಯುಪಸೇವೇತ ತಸ್ಯಾನ್ನರಸಃ ಶರೀರ
ಮನುಕ್ರಾಮನ್ ಸಮಾನಾ ಧಾತೂನುಪಚಿನೋತಿ ಸಮಧಾತುತ್ವಾನ್ಮ
ಧ್ಯಶರೀರೋ ಭವತಿ ಸರ್ವಕ್ರಿಯಾಸು ಸಮರ್ಥ ಕ್ಷುತ್ಪಿಪಾಸಾಶೀತೋ
ಷ್ಣವರ್ಷಾತಪಸಹೋ ಬಲವಾಂಶ್ಚ ಸ ಸತತಮನುಪಾಲಯಿತವ್ಯ ಇತಿ |
(ಸು. 57-58.)

ಮಧ್ಯಶರೀರದ ಲಕ್ಷಣ

ಪುನಃ ಯಾವನು ಉಭಯಸ್ಥಿತಿಗಳಿಗೂ ಸಾಮಾನ್ಯವಾದವುಗಳನ್ನೇ ಸೇವಿಸುತ್ತಾ ಬರುತ್ತಾನೋ, ಅವನ ಅನ್ನರಸವು ಶರೀರವನ್ನೆಲ್ಲಾ ವ್ಯಾಪಿಸಿ, ಎಲ್ಲಾ ಧಾತುಗಳನ್ನು ಸಮವಾಗಿ

ಕೂಡಿಸುತ್ತದೆ. ಧಾತುಗಳು ಸಮವಾಗಿರುವ ದೆಸೆಯಿಂದ ಅವನ ಶರೀರವು ಮಧ್ಯಸ್ಥಿತಿದ್ದಾಗಿರುವದು (ಅಂದರೆ, ಸ್ಥೂಲವೂ ಅಲ್ಲ ಕೃಶವೂ ಅಲ್ಲದ್ದು). ಅವನು ಸರ್ವ ಕೆಲಸಗಳಲ್ಲಿಯೂ ಸಮರ್ಥನೂ, ಹಸಿವು-ತೃಷೆ-ಶೀತ-ಉಷ್ಣ-ಮಳೆ-ಬಿಸಿಲುಗಳನ್ನು ಸಹಿಸುವ ಶಕ್ತಿಯುಳ್ಳವನೂ, ಬಲವಂತನೂ ಆಗಿರುವನು. ಆ ಸ್ಥಿತಿಯೇ ಸದಾ ಕಾಪಾಡಲ್ಪಡಬೇಕು.

8 ಮಧ್ಯಶರೀರ ಪ್ರಶಂಸಾ

ಅತ್ಯಂತಗರ್ಹಿತಾವೇತೌ ಸದಾ ಸ್ಥೂಲಕೃಶೌ ನರೌ ।
ಶ್ರೇಷ್ಠೋ ಮಧ್ಯಶರೀರಸ್ತು ಕೃಶಃ ಸ್ಥೂಲಾತ್ತು ಪೂಜಿತಃ ।
(ಸು. 58)

ಸ್ಥೂಲನಾದವನೂ, ಕೃಶನಾದವನೂ, ಇಬ್ಬರು ಸದಾಕಾಲದಲ್ಲಿಯೂ ಅತ್ಯಂತ ಕೆಟ್ಟ ಸ್ಥಿತಿಯವರು. ಮಧ್ಯಶರೀರದವನು ಉತ್ತಮ ಆದರೆ ಸ್ಥೂಲಶರೀರದವನಿಗಿಂತಲೂ ಕೃಶ ಶರೀರದವನೇ ಪೂಜ್ಯ.

ಕರ್ಶಯೇದ್ಬೃಂಹಯೇಚ್ಚಾಽಪಿ ಸದಾ ಸ್ಥೂಲಕೃಶೌ ನರೌ ।
ರಕ್ಷಣಂ ಚೈವ ಮಧ್ಯಸ್ಯ ಕುರ್ಯಾತ ಸತತಂ ಭಿಷಕ್ ॥ (ಸು. 132)

ಸ್ಥೂಲರನ್ನು ಕೃಶಪಡಿಸುವಂತೆಯೂ ಕೃಶರನ್ನು ಪುಷ್ಟಿಪಡಿಸುವಂತೆಯೂ ಮಧ್ಯಶರೀರದವರ ಇದ್ದ ಸ್ಥಿತಿಯನ್ನು ಕಾಪಾಡುವಂತೆಯೂ ವೈದ್ಯನು ಯಾವಾಗಲೂ ಪ್ರಯತ್ನಿಸಬೇಕು.

ಬಲಪರೀಕ್ಷೆ

ಬಲಮಭಿಹಿತಗುಣಂ ದೌರ್ಬಲ್ಯಂ ಚ ಸ್ವಭಾವದೋಷಋರಾದಿಭಿರಪೇಕ್ಷಿತವ್ಯಂ । ಯಸ್ಮಾದ್ಬಲವತಃ ಸರ್ವಕ್ರಿಯಾಪ್ರವೃತ್ತಿಸ್ತಸ್ಮಾದ್ಬಲಮೇವ ಪ್ರಧಾನಮಧಿಕರಣಾನಾಂ ।

ಕಶ್ಚಿತ್ಕೃಶಾಃ ಸ್ಥಾಣವಂತಃ ಸ್ಥೂಲಾಶ್ಚಾಲ್ಪಬಲಾ ನರಾಃ ।
ತಸ್ಮಾತ್ತೌ ಸ್ಥಿರತ್ವವ್ಯಾಯಾಮೈರ್ಬಲಂ ವೈದ್ಯಃ ಪ್ರತಿಕರ್ಮಯೇತ್ ॥ (ಸು. 132.)

ನಿರ್ದಿಷ್ಟವಾದ ಗುಣಗಳುಳ್ಳ ಬಲವನ್ನೂ ದುರ್ಬಲತೆಯನ್ನೂ, ಸ್ವಭಾವ, ದೋಷ, ಋತುತನ, ಮುಂತಾದವುಗಳಿಂದ ಪರೀಕ್ಷಿಸಿ ತಿಳಿಯತಕ್ಕದ್ದು ಸರ್ವ (ಔಷಧೋಪಚಾರಾದಿ) ಕೆಲಸಗಳ ಪ್ರವೃತ್ತಿಯು ಬಲವಂತನಿಗೇನೇ ನಡೆಯತಕ್ಕದ್ದಾದ್ದರಿಂದ, ಸಾಧನಗಳೊಳಗೆ ಬಲವೇ ಪ್ರಧಾನವಾದದ್ದಾಗಿರುತ್ತದೆ. ಕಲವರು ಕೃಶರಾದಾಗ್ಯೂ, ಬಲವಂತರಾಗಿಯೂ, ಕೆಲವರು ಸ್ಥೂಲರಾದಾಗ್ಯೂ, ಅಲ್ಪ ಬಲವುಳ್ಳವರಾಗಿಯೂ ಇರುವವರಿಂದ, ಬಲವನ್ನು ಸ್ಥಿರತ್ವ ಮತ್ತು ದಣಿಕೆ ಶಕ್ತಿಗಳಿಂದ ವೈದ್ಯನು ಗೊತ್ತುಮಾಡಬೇಕು.

ಷರ್ ಬಲದ ವರ್ಣನೆಗೆ V ಅ 48 ಸಂ (124ನೇ ಪುಟ) ನೋಡು

10. ಸತ್ವರಜಸ್ತಮಸ್ಸಂಜ್ಞಕಗಳು

ಸತ್ವಂ ತು ವ್ಯಸನಾಭ್ಯುದಯಕ್ರಿಯಾದಿಸ್ವಾನೇಷ್ವವೈಕಲ್ಯಕರಂ ।
ಸತ್ವವಾನ್ಸಹತೇ ಸರ್ವಂ ಸಂಸ್ತಭ್ನಾತ್ಯಾಸ

ಮಾತ್ಮನಾ । ರಾಜಸಃ ಸ್ತಭ್ಯಮಾನೋಽನ್ಯೈಃ ಸಹತೇ ನೈವ ತಾಮಸಃ ॥ (ಸು. 132)

ವ್ಯಸನದ ಮತ್ತು ಇಷ್ಟಲಾಭದ ಕೆಲಸಗಳು ಮುಂತಾದ ಸಂಗತಿಗಳಲ್ಲಿ ಸತ್ವವು ಸಮಚಿತ್ತತ್ವವನ್ನುಂಟುಮಾಡುತ್ತದೆ. ಸತ್ವವಂತನು ತನ್ನನ್ನು ತಾನೇ (ಅಂದರೆ ತನ್ನ ಮನಸ್ಸನ್ನು ತನ್ನ ಬುದ್ಧಿಯಿಂದಲೇ) ತಡೆದು ಸಿಲ್ಲಿಸಿಕೊಂಡು, ಸರ್ವವನ್ನು ಸಹಿಸುತ್ತಾನೆ. ರಜೋಗುಣದವನು ಅನ್ಯರಿಂದ ನಿಲ್ಲಿಸಲ್ಪಟ್ಟು (ಅಂದರೆ ಮನಸ್ಸಿನ ದೃಢತ್ವವನ್ನು ಹೊಂದಿ) ಸಹಿಸುತ್ತಾನೆ ತಮೋಗುಣದವನು ಸಹಿಸುವದೇ ಇಲ್ಲ

11. ಸಾತ್ಮ್ಯಸರೂಪಣ

ಸಾತ್ಮ್ಯಾನಿ ತು ದೇಶಕಾಲಜಾತ್ಮ್ಯಕೃತುರೋಗವ್ಯಾಯಾಮೋದಕದಿವಾಸ್ವಪ್ನರಸಪ್ರಭೃತೀನಿ ಪ್ರಕೃತಿಪುರುದ್ಭಾವನ್ಯಾನಿ ಯಾನ್ಯಬಾಧಕರಾಣಿ ಭವಂತಿ ।

ಯೋ ರಸಃ ಕಲ್ಪತೇ ಯಸ್ಯ ಸುಖಾಯೈವ ನಿಷೇವಿತಃ ।
ವ್ಯಾಯಾಮಜಾತಮನ್ಯದ್ವಾ ತತ್ತಸ್ಯಾತ್ಮ್ಯಮಿತಿ ನಿರ್ದಿಶೇತ್ (ಸು. 132.)

ಯಾವ ದೇಶ, ಕಾಲ, ಜಾತಿ, ಋತು, ರೋಗ, ವ್ಯಾಯಾಮ, ನೀರು, ಹಗಲುನಿದ್ರೆ, ರಸ ಮುಂತಾದವುಗಳು, ಸ್ವಾಭಾವಿಕವಾಗಿ ಬರುದ್ದವಾದವುಗಳಾದರೂ, ಬಾಧಕ ಮಾಡುವದಿಲ್ಲವೋ, ಅವು ಸಾತ್ಮ್ಯಗಳಾಗಿರುತ್ತವೆ ಯಾವನಿಗೆ ಯಾವ ರಸವೂ, ವ್ಯಾಯಾಮ ಸಮುದಾಯವೂ, ಅಥವಾ ಬೇರೊಂದು ಸೇವಿಸಲ್ಪಟ್ಟಲ್ಲ, ಅದರಿಂದ ಸುಖವೇ ಉಂಟಾಗುತ್ತದೋ, ಅದು ಅವನಿಗೆ ಸಾತ್ಮ್ಯ ಎಂತ ನಿಶ್ಚಯಿಸಬೇಕು

ಸರಂ 'ಜಾತ' ಎಂಬಲ್ಲಿ 'ತಾನಿ' ಎಂಬ ಪಾಠವಿರಬಹುದು ಆ ಪಾಠದಿಂದ ವಾಕ್ಯದ ತಾತ್ಪರ್ಯವು ಸ್ಪಷ್ಟವಾಗುವದು ಜಾತಿಸಾತ್ಮ್ಯ ಎಂದರೆ ಮನುಷ್ಯ ಪಶು-ಮೃಗ ಮುಂತಾದ ಜಾತಿಗಳಿಗೆ ಇರುವ ಎಂಥ ಸಾತ್ಮ್ಯ ಎಂತ ಸಂ ವ್ಯಾ ಗಾಯಾಮ ನೀರು ಹಗಲುನಿದ್ರೆ ಮಧುರಾದಿ ರಸ ಸಹ, ದೇಶಕ್ಕೂ ಕಾಲಕ್ಕೂ ಋತುವಿಗೂ ರೋಗಕ್ಕೂ ವಿರುದ್ಧವಾಗಿ ಹೇಳಲ್ಪಟ್ಟವಾದರೂ, ಯಾವಗೆ ಬಾಧಕ ಮಾಡುವುಲ್ಲವೋ ಆ ತರಿಗೆ ಸಾತ್ಮ್ಯ ಎಂಬ ತಾತ್ಪರ್ಯವು ಇಲ್ಲಿ ಕಾಣುತ್ತದೆ

12 ಸರ್ವರಸ ಸಾತ್ಮ್ಯ-ಏಕರಸ ಸಾತ್ಮ್ಯ-ಮತ್ತು ವಾ ಎಲ್ಲ ಸಾತ್ಮ್ಯ

ಸಾತ್ಮ್ಯಂ ನಾಮ ತದ್ಯತ್ ಸಾತತ್ಯೇನೋಪಯುಜ್ಯಮಾನಮುಪಶೇತೇ ತತ್ರ ಯೇ ಘೃತ-ಕ್ಷೀರ-ತೈಲ-ಮಾಂಸರಸ-ಸಾತ್ಮ್ಯಾಃ ಸರ್ವರಸಸಾತ್ಮ್ಯಾಸ್ತೇ ಬಲವಂತಃ ಕ್ಲೇಶಸಹಾಶ್ಚಿರಜೀವಿನಶ್ಚ ಭವಂತಿ । ರೂಕ್ಷಸಿತ್ಯಾಃ ಪುನರೇಕರಸಸಾತ್ಮ್ಯಾಶ್ಚ ಯೇ ತೇ ಪ್ರಾಯೇಣಾಲ್ಪಬಲಾಶ್ಚಾಕ್ಲೇಶಸಹಾ ಅಲ್ಪಾಯುಷೋಽಲ್ಪಸಾಧನಾಶ್ಚ ಭವಂತಿ । ವ್ಯಾಮಿಶ್ರಸಾತ್ಮ್ಯಾಸ್ತು ಯೇ ತೇ ಮಧ್ಯಬಲಾಃ ಸಾತ್ಮ್ಯಮಿತ್ತತಃ । (ಚ. 298)

ನಿತ್ಯದಲ್ಲಿಯೂ ಸೇವಿಸುತ್ತಾ ಒರುವ ಯಾವದು ಒಗ್ಗುತ್ತದೋ ಅದಕ್ಕೆ ಸಾತ್ಮ್ಯ ಎಂಬದು. ಅದರಲ್ಲಿ ತುಪ್ಪ, ಹಾಲು, ಎಣ್ಣೆ, ಮಾಂಸರಸ, ಮತ್ತು ಸರ್ವ ರಸಗಳು ಯಾರಿಗೆ ಸಾತ್ಮ್ಯವಾಗಿವೆಯೋ ಅವರು ಬಲವಂತರಾಗಿಯೂ, ಕಷ್ಟಸಹನಶಕ್ತಿಯುಳ್ಳವರಾಗಿಯೂ, ಚಿರಜೀವಿಗಳಾಗಿಯೂ ಇರುವರು. ರೂಕ್ಷವದಾರ್ಥಗಳನ್ನೇ ನಿತ್ಯದಲ್ಲು ಸೇವಿಸುವವರಾಗಿಯೂ, ಒಂದೇ ರಸಸಾತ್ಮ್ಯವುಳ್ಳವರಾಗಿಯೂ ಯಾರು ಇರುತ್ತಾರೋ, ಅವರು ಹೆಚ್ಚಾಗಿ ಅಲ್ಪಬಲ

ವುಳ್ಳವರೂ, ಕಷ್ಟವನ್ನು ಸಹಿಸಲಾರದವರೂ, ಅಲ್ಪಾಯುಸ್ಸುಳ್ಳವರೂ, ಅಲ್ಪಸಂಪನ್ನರೂ, ಆಗಿರುತ್ತಾರೆ. ಯಾರು ಮಿಶ್ರಸಾತ್ಮ್ಯವುಳ್ಳವರಾಗಿದ್ದಾರೋ, ಅವರು ಸಾತ್ಮ್ಯದ ಕಾರಣದಿಂದ, ಮಧ್ಯಬಲವುಳ್ಳವರಾಗುತ್ತಾರೆ

13 ವಿರುದ್ಧ ಅನ್ನ ಪಾನಾದಿ ಗಳಿಂದ ಜಾತ ಸಲ್ಪತದವರು

ವ್ಯಾಯಾಮಶೀಲೋ ಬಲವಾನ್ ತರುಶ್ಚ | ಸ್ನಿಗ್ಧೋಽಗ್ನಿ ಮಾಂಶ್ಚಾಪಿ ಮಹಾಶನಶ್ಚ || ಆಪ್ನೋತಿ ರೋಗಾನ್ನ ವಿರುದ್ಧಜಾತಾನ್ | ಅಭ್ಯಾಸತೋ ವಾಲ್ಪತಯಾ ಚ ಜಂತುಃ || (ಸು. 80)

ವ್ಯಾಯಾಮವರನೂ, ಬಲವಂತನೂ, ತರುಣವಯಸ್ಕನವನೂ, ಸ್ನಿಗ್ಧನೂ, ಅಗ್ನಿಬಲವುಳ್ಳವನೂ, ಹೆಚ್ಚು ಊಟ್ಟವನೂ, ಆಗಿರುವ ಜಂತು, ವಿರುದ್ಧವಸ್ತುಗಳನ್ನು ಅಭ್ಯಾಸ ಮಾಡಿದರೆ, ಅಥವಾ ಅಲ್ಪವಾಗಿ ಉಪಯೋಗಿಸಿದರೆ, ರೋಗಗಳನ್ನು ಪಡೆಯುವದಿಲ್ಲ

14 ಉತ್ತಮಸಾತ್ಮ್ಯಕೆ ಯತ

ತತ್ತ್ರಿವಿಧಂ ಪ್ರವರಾವರಮಧ್ಯಭಾಗೇನ ಸಪ್ತವಿಧಂ ಚ ರಸೈಕೈಕತ್ವೇನ ಸರ್ವರಸೋಪಯೋಗಾಚ್ಚ | ತತ್ರ ಸರ್ವರಸಂ ಪ್ರವರಮವರಮೇಕರಸಂ ಮಧ್ಯಮಂ ತು ಪ್ರವರಾವರಮಧ್ಯಸ್ಥಂ | ತತ್ರಾವರಮಧ್ಯಾಭ್ಯಾಂ ಸಾತ್ಮ್ಯಾಭ್ಯಾಂ ಕ್ರಮೇಣ ಪ್ರವರಮುಪಪಾದಯೇತ್ ಸಾತ್ಮ್ಯಂ | (ಚ 241)

ಸಾತ್ಮ್ಯವು ಮೂರು ವಿಧ ಉತ್ತಮ, ಹೀನ, ಮಧ್ಯಮ, ಎಂಬ ಭೇದಗಳಿಂದ, ಮತ್ತು ಏಳು ವಿಧ ಒಂದೊಂದೇ ರಸದ ಉಪಯೋಗ, ಮತ್ತು ಸರ್ವ ರಸಗಳ ಉಪಯೋಗ ಎಂಬ ಭೇದಗಳಿಂದ. ಅವುಗಳಲ್ಲಿ ಸರ್ವ ರಸವು ಉತ್ತಮ, ಏಕರಸವು ಹೀನ, ಉತ್ತಮಹೀನಗಳ ಮಧ್ಯಸ್ಥಿತಿಯು ಮಧ್ಯಮ ಅವುಗಳಲ್ಲಿ ಹೀನಮಧ್ಯಮ ವರ್ಗಗಳ ಸಾತ್ಮ್ಯಗಳನ್ನು ಕ್ರಮೇಣ ಒದಗಿಸಿ, ಉತ್ತಮ ಸಾತ್ಮ್ಯಕ್ಕೆ ತರಬೇಕು

15 ದೇಶಭೇದಗಳು (ಅನೂಪ ಜಾಂಗಲ, ಸಾಧಾರಣ)

ದೇಶಸ್ತ್ವನೂಪೋ ಜಾಂಗಲಃ ಸಾಧಾರಣ ಇತಿ | ತತ್ರ ಬಹೂದಕಸ್ನೋನ್ನತನದೀವರ್ಷಗಹನೋ ಮೃದುಶೀತಾನಿಲೋ ಬಹುಸುಹಾವರ್ಷತಪ್ರಕ್ಷೋ ಮೃದುಸುಕುಮಾರೋಪಚಿತಶರೀರಮನುಷ್ಯಸಾಮ್ಯಃ ಕಫಜಾತರೋಗಭೂಯಿಷ್ಠಶ್ಚಾನೂಪಃ | ಅಕಾಶಸಸ್ಯಃ ಸ್ಥವಿರ ತಾಲ್ಪಕಂಟಕಿಪ್ಯಕ್ಷಪ್ರಾಯೋಽಲ್ಪವರ್ಷಪ್ರಸವನೋದಪಾನೋದಕ ಸ್ಯಾಯ ಉಷ್ಣಪ್ರಚಾರುಣವಾತಃ ಪ್ರವರಬಾಲ್ಪಶೈಲಃ ಸ್ಫಿರಕೃಶಶರೀರ ಮನುಷ್ಯಪ್ರಾಯೋ ವಾತಪಿತ್ತರೋಗಭೂಯಿಷ್ಠಶ್ಚ ಜಾಂಗಲಃ | ಉಭಯದೇಶಲಕ್ಷಣಃ ಸಾಧಾರಣ ಇತಿ |

ಸಮಾಃ ಸಾಧಾರಣೇ ಯಸ್ಮಾಚ್ಚೀತವರ್ಷೋಷ್ಣಮಾರುತಾಃ |
ದೋಷಾಣಾಂ ಸಮತಾ ಜಂತೋಸ್ತಸ್ಮಾತ್ಸಾಧಾರಣೋ ಮತಃ ||
ನ ತಥಾ ಬಲವಂತಃ ಸ್ಯುರ್ಜಲಜಾ ವಾ ಸ್ಥಲಾಶ್ರಿತಾಃ |

ಸ್ವದೇಶೇ ನಿಚಿತಾ ದೋಷಾ ಅನ್ಯಸ್ಮಿನ್ ಕೋಪಮಾಗತಾಃ ||
ಉಚಿತೇ ವರ್ತಮಾನಸ್ಯ ನಾಸ್ತಿ ದೇಶಕೃತಂ ಭಯಂ |
ಆಹಾರಸ್ವಪ್ನಚೇಷ್ಟಾದೌ ತದ್ದೇಶಸ್ಯ ಗುಣೇ ಸತಿ || (ಸು. 132-133.)

ದೇಶವು ಅನೂಪ, ಜಾಂಗಲ, ಸಾಧಾರಣ ಎಂತ ಮೂರು ವಿಧ. ಅವುಗಳಲ್ಲಿ, ಬಹಳವಾದ ನೀರು, ಎತ್ತರತಗ್ಗು, ನದಿ ಮತ್ತು ಮಳೆಗಳ ಆತಂಕವಿರುವ ಮೃದು ಮತ್ತು ಶೀತವಾದ ಗಾಳಿಯುಳ್ಳ, ಬಹು ಮಹಾ ಪರ್ವತ ಮತ್ತು ವೃಕ್ಷಗಳುಳ್ಳ, ಸ್ನಿಗ್ಧ, ನೂತನ ಮತ್ತು ಸ್ಥೂಲ ಶರೀರವುಳ್ಳ ಮನುಷ್ಯರು ಹೆಚ್ಚು ಪಕ್ವವಾಗಿ ಇರುವ, ಮತ್ತು ಕಫ ವಾತರೋಗಗಳು ತುಂಬವಾಗಿರುವ ದೇಶವು ಅನೂಪವನ್ನೆನಿಸಿಕೊಳ್ಳುತ್ತದೆ ಆಕಾಶಕ್ಕೆ ಸಮವಾದ (ಅಂದರೆ ಬೈಲಾಗಿರುವ), ವೃಕ್ಷಗಳು ಹೆಚ್ಚು ಪಕ್ಷ ಬಹು ವಿರಲವಾಗಿಯೂ, ಅಲ್ಪವಾಗಿಯೂ, ಮುಳ್ಳುಳ್ಳವಾಗಿಯೂ ಇರುವ, ಬಹುಪಕ್ಷವಾಗಿ ಮುಳೆನೀರು, ಝರೀನೀರು ಮತ್ತು ಬಾವಿನೀರು ಅಲ್ಪವಾಗಿರುವ, ಜಿಂಕೆಯೂ, ತೀವ್ರವೂ ಆದ ಗಾಳಿಯುಳ್ಳ, ವಿರಲವಾಗಿ ಚಿಕ್ಕ ಗುಡ್ಡಗಳಿರುವ, ಮನುಷ್ಯರು ಹೆಚ್ಚು ಪಕ್ಷ ಸ್ಥಿರವೂ ಕೃಶವೂ ಆದ ಶರೀರವುಳ್ಳವರಾಗಿರುವ, ವಾತೋತ್ತರರೋಗಗಳೇ ಹೆಚ್ಚಾಗಿರುವ ದೇಶವು ಜಾಂಗಲ ಎಂಬುದು ಉಭಯಲಕ್ಷಣಗಳುಳ್ಳ ದೇಶಕ್ಕೆ ಸಾಧಾರಣ ಎನ್ನುತ್ತಾರೆ 'ಸಾಧಾರಣ' ದೇಶದಲ್ಲಿ ಶೀತ, ಮಳೆ, ಉಷ್ಣ ಮತ್ತು ಗಾಳಿ ಸಮವಾಗಿರುವದರಿಂದಲೂ, ಜಂತುಜನ ದೋಷಗಳು ಸಮವಾಗಿರುವದರಿಂದಲೂ ಆ ದೇಶವು ಸಾಧಾರಣ ಎಂತ ಎಣಿಸಲ್ಪಡುತ್ತದೆ ಜಲಪ್ರಾಣಿಗಳು ನೆಲಕ್ಕೆ ತರಲ್ಪಟ್ಟಲ್ಲಿ ಅಷ್ಟು ಬಲವುಳ್ಳವಾಗಿರುವದಿಲ್ಲ (ಅಥವಾ ಅನೂಪದೇಶದಲ್ಲಿ ಹುಟ್ಟಿದ ರೋಗಗಳೂ ಜಾಂಗಲ ದೇಶಕ್ಕೆ ಹೋದ ಮೇಲೆ ಅಷ್ಟು ಬಲವಂತವಾಗಿರುವದಿಲ್ಲ) ಹಾಗೆಯೇ ಸ್ವದೇಶದಲ್ಲಿ ಕೂಡಿದ ದೋಷಗಳು ಪರದೇಶದಲ್ಲಿ ಕೋಪಗೊಳ್ಳುತ್ತವಾದರೂ ಅಷ್ಟು ಬಲವಂತವಾಗುವದಿಲ್ಲ ಉಚಿತವಾದ ಆಹಾರ, ನಿದ್ರೆ, ಚೇಷ್ಟಾದಿಗಳಲ್ಲಿ ವರ್ತಿಸುವ ಮನುಷ್ಯನಿಗೆ, ಅವು ಆ ದೇಶಗುಣಕ್ಕೆ ತಕ್ಕವಾಗಿದ್ದಲ್ಲಿ, ದೇಶದಿಂದ ಉಂಟಾಗತಕ್ಕ ಭಯವಿರುವದಿಲ್ಲ

ಪರಾ ಛಾಯಪ್ರಕಾಶದಲ್ಲಿ, ಸುಶ್ರುತದಲ್ಲಿ ವೃದ್ಧವಾಗ್ಭಟದಲ್ಲಿ ಎತ್ತಿ ಹೇಳಿರುವಂತೆ ಯಾವನಾದರೂ ಒಂದು ಕೆಟ್ಟ ದೇಶಕ್ಕೆ ಹೋದಾಗ, ಆ ದೇಶಕ್ಕೆ ಯುಕ್ತವಾದ ಆಹಾರ, ನಿದ್ರೆ ಕ್ರಿಯೆಗಳನ್ನು ಆಚರಿಸುತ್ತಾ ಬಂದರೆ ಅವನಿಗೆ ಭಯವಿಲ್ಲ ಮತ್ತು ಸ್ವದೇಶದಲ್ಲಿ ಕೂಡಿಕೊಂಡ ದೋಷಗಳು, ಜಲಸಂಬಂಧವಾದದ್ದಾಗಲಿ, ಸ್ಥಳಸಂಬಂಧವಾದದ್ದಾಗಲಿ ಅನ್ಯ ದೇಶದಲ್ಲಿ ಕೋಪಗೊಂಡರೂ, ಅಷ್ಟು ಬಲವಂತವಾಗುವದಿಲ್ಲ" ಎಂಬ ಅಭಿಪ್ರಾಯವು ತೋರಿಬರುತ್ತದೆ

16. ಪ್ರಾಗಭಿಹಿತೋಽಗ್ನಿರನ್ನಸ್ಯ ವಾಚಕಃ | ಸ ಚತುರ್ವಿಧೋ ಭವತಿ ದೋಷಾನಭಿವನ್ನ ಏಕೋ ವಿಕೃಯಾಮಾಪನ್ನಸ್ತ್ರಿವಿಧೋ ಭವತಿ ವಿಷಮೋ ವಾತೇನ ತೀಕ್ಷ್ಣಃ ಪಿತ್ತೇನ ಮಂದಃ ಶ್ಲೇಷ್ಮಣಾ ಚತುರ್ಧಾ ಸಮಃ ಸರ್ವಸಾಮಾನ್ಯಾದಿತಿ | ತತ್ರ ಯೋ ಯಥಾಕಾಲಮನ್ನಮುಪಯುಕ್ತಂ ಸಮ್ಯಕ್ಪಚತಿ ಸ ಸಮಃ ಸಮೈರ್ದೋಷೈಃ | ಯಃ ಕದಾಚಿತ್ಸಮ್ಯಕ್ಪಚತಿ ಕದಾಚಿದಾಧ್ಮಾನ-ಶೂಲೋದಾವರ್ತಾತಿಸಾರ-ಜ್ವರಗೌರವಾಂತ್ರಕೂಜನ-ಪ್ರವಾಹಣಾನಿ ಕೃತ್ವಾ ಸ ವಿಷಮಃ | ಯಃ ಪ್ರಭೂತಮಪ್ಯುಪಯುಕ್ತಮನ್ನಮಾಶು ಪಚತಿ ಸ ತೀಕ್ಷ್ಣಃ ಸ ಏವಾಭಿವರ್ಧಮಾನೋಽತ್ಯಗ್ನಿರಿತ್ಯಾಖ್ಯಾಯತೇ ಸ ಮುಹುರ್ಮುಹುಃ ಪ್ರಭೂತಮಪ್ಯುಪಯುಕ್ತಮಾ

ಅಗ್ನಿಭೇದಗಳು

ಶುತರಂ ಪಚತಿ ಪಾಕಾಂತೇ ಚ ಗಲತಾಲ್ವೋಷ್ಠಶೋಷ-ದಾಹ-ಸಂತಾಪಾನ್ ಜನಯತಿ | ಯಃ ಸ್ವಲ್ಪಮಪ್ಯುಪಯುಕ್ತಮುದರಶಿರೋಗೌರವ-ಕಾಸ-ಶ್ವಾಸ-ಪ್ರಸೇಕ-ಛರ್ದಿ-ಗಾತ್ರಸದನಾನಿ ಕೃತ್ವಾ ಮಹತಾ ಕಾಲೇನ ಪಚತಿ ಸ ಮಂದಃ |

ವಿಷಮೋ ವಾತಜಾನ್ರೋಗಾನ್ ತೀಕ್ಷ್ಣಃ ಪಿತ್ತನಿಮಿತ್ತಜಾನ್ |
ಕರೋತ್ಯಗ್ನಿಸ್ತಥಾ ಮಂದೋ ವಿಕಾರಾನ್ ಕಫಸಂಭವಾನ್ || (ಸು 130.)

ಆಹಾರವನ್ನು ಪಚನಮಾಡುವುದಕ್ಕಾದ್ದು ಅಗ್ನಿ ಎಂತ ಹೊದಲು ಹೇಳಿದೆ ಆ ಅಗ್ನಿಯು ನಾಲ್ಕು ವಿಧ ದೋಷಯುಕ್ತವಲ್ಲದ್ದು ಒಂದು, ಮತ್ತು ತಕ್ಕಾಗಿ ಕೆಲಸಮಾಡುವುದಕ್ಕಾದ್ದು ಮೂರು ವಿಧ ಆಗಿರುತ್ತದೆ ವಾತದಿಂದ ವಿಷಮ ಪಿತ್ತದಿಂದ ತೀಕ್ಷ್ಣ, ಕಫದಿಂದ ಮಂದ, ನಾಲ್ಕನೇದು ಸರ್ವವೂ ಸಮವಾದ ದೆಸೆಯಿಂದ ಸಮ, ಹೀಗೆ ನಾಲ್ಕು ಅವುಗಳಲ್ಲಿ, ಉಪಯೋಗಿಸಲ್ಪಟ್ಟ ಆಹಾರವನ್ನು ತಕ್ಕ ಕಾಲದಲ್ಲಿ ಚೆನ್ನಾಗಿ ಪಚನಮಾಡುವ ಅಗ್ನಿಯು ಯಾವದೋ, ಅದು ಸಮದೋಷಗಳಿಂದ ಯುಕ್ತವಾದ ಸಮ ಎಂಬದು ಯಾವದು ಕೆಲವು ಸಮಯಗಳಲ್ಲಿ ಚೆನ್ನಾಗಿ ಪಚನಮಾಡಿ ಕೆಲವು ಸಮಯಗಳಲ್ಲಿ ಹೊಟ್ಟೆಯುಬ್ಬರ, ಶೂಲೆ, ಉದಾವರ್ತ, ಅತಿಸಾರ, ಹೊಟ್ಟೆಭಾರ, ಕರುಳುಕೂಗು ಪ್ರವಾಹ, ಇವುಗಳನ್ನುಂಟುಮಾಡಿ ಪಚನಮಾಡುತ್ತದೋ, ಅದು ವಿಷಮಾಗ್ನಿ ಯಾವದು ಉಪಯೋಗಿಸಲ್ಪಟ್ಟ ಆಹಾರವು ಅತಿಯಾಗಿದ್ದರೂ, ಅದನ್ನು ಬೇಗನೇ ಪಚನಮಾಡುತ್ತದೋ, ಅದು ತೀಕ್ಷ್ಣಾಗ್ನಿ, ಅದೇ ಅಗ್ನಿಯು ಅಧಿಕವೃದ್ಧಿಯಾದರೆ ಅತ್ಯಗ್ನಿ ಎಂತ ಕರೆಯಲ್ಪಡುತ್ತದೆ ಅದು ಅಧಿಕಪ್ರಮಾಣವಾಗಿ ಪದೇಪದೇ ಉಪಯೋಗಿಸಲ್ಪಟ್ಟ ಆಹಾರವನ್ನಾದರೂ ಒಹು ತೀಕ್ಷ್ಣವಾಗಿ ಪಚನಮಾಡಿ, ಸಾಕಾಂತ್ಯದಲ್ಲಿ ಗಂಟಲು, ತಾಲು, ಮತ್ತು ತುಟಿ, ಇವುಗಳ ಒಣಗುವಿಕ, ಉರಿಯುವಿಕ, ಮತ್ತು ಬಸಿಯಾಗುವಿಕೆಯನ್ನುಂಟುಮಾಡುತ್ತದೆ ಯಾವ ಅಗ್ನಿಯು ಸ್ವಲ್ಪವಾಗಿ ಉಪಯೋಗಿಸಲ್ಪಟ್ಟ ಆಹಾರವನ್ನು ಸಹ, ಹೊಟ್ಟೆಭಾರ, ತಲೆಭಾರ, ಕೆಮ್ಮು, ಉಬ್ಬಸ, ಬಾಯಿಸೀರು (ಜೊಲ್ಲು), ವಾಂತಿ, ಮೈಬಚ್ಚುಕೆ, ಇವುಗಳನ್ನುಂಟುಮಾಡಿ ಬಹುಕಾಲದಿಂದ (ಸಾವಕಾಶದಿಂದ) ಜೀರ್ಣಮಾಡುತ್ತದೋ, ಅದು ಮಂದ ಎಂಬದು ವಿಷಮಾಗ್ನಿಯು ವಾತಜನ್ಯವಾದ ರೋಗಗಳನ್ನೂ, ತೀಕ್ಷ್ಣಾಗ್ನಿಯು ಪಿತ್ತಜನ್ಯವಾದ ರೋಗಗಳನ್ನೂ, ಮಂದಾಗ್ನಿಯು ಕಫಜನ್ಯವಾದ ರೋಗಗಳನ್ನೂ, ಉಂಟುಮಾಡುತ್ತದೆ

17. ತತ್ರ ಸಮೋ ಪರಿರಕ್ಷಣಂ ಕುರ್ಯಾತ್ ವಿಷಮೋ ಸ್ನಿಗ್ಧಾವ್ಲಲವಣೈಃ ಕ್ರಿಯಾ ಉತ್ತೇಷ್ಣೈಃ ಪ್ರತಿಕುರ್ಯಾತ್ ತೀಕ್ಷ್ಣೇ ಮಧುರಸ್ನಿಗ್ಧಶೀತೈರ್ವಿರೇಕೈಶ್ಚ | ಏವಮೇವಾತ್ಯಗ್ನೌ ವಿಶೇಷೇಣ ಪಾಯಿಷ್ಣುಶ್ಚ ಕ್ಷೀರದಧಿಸರ್ಪಿರ್ಭಿರ್ಮಂದೇ ಕಟುತಿಕ್ತಕಷಾಯೈರ್ವಮನೈಶ್ಚ |

ದುಷ್ಟ ಅಗ್ನಿಗೆ ಪರಿಹಾರ

ಅಗ್ನಿಯು ಸಮವಾಗಿರುವಲ್ಲಿ ಅದನ್ನು ಸಮವಾಗಿಯೇ ಇರುವ ಹಾಗೆ ಕಾಪಾಡಿಕೊಳ್ಳಬೇಕು. ವಿಷಮವಾಗಿದ್ದರೆ, ಸ್ನಿಗ್ಧ, ಹುಳಿ ಮತ್ತು ಉಪ್ಪು ವಿಶೇಷವಾಗಿರುವ ಉಪಚಾರಗಳಿಂದ ಅದಕ್ಕೆ ಪ್ರತೀಕಾರವನ್ನು ಮಾಡತಕ್ಕದ್ದು. ತೀಕ್ಷ್ಣವಾಗಿದ್ದಲ್ಲಿ, ಸೀ, ಸ್ನಿಗ್ಧ ಮತ್ತು ಶೀತ

ವಾದ ಔಷಧಿಗಳಿಂದಲೂ, ಏರೇಚನಗಳಿಂದಲೂ ಪ್ರತೀಕಾರಮಾಡುವದು. ಅತ್ಯಗ್ನಿಯ ಸಂಗತಿಯಲ್ಲಿಯೂ ಅದೇ ಪ್ರಕಾರ. ಮತ್ತು ವಿಶೇಷವಾಗಿ ಎಮ್ಮೆಯ ಹಾಲು, ಮೊಸರು, ತುಪ್ಪಗಳಿಂದ, ಮುಂದಾಗ್ಗೆ ಬಾರ, ಕಪಿ ಮತ್ತು ಚೊಗರು ರುಚಿಯುಳ್ಳ ಔಷಧಿಗಳಿಂದಲೂ, ವಮನಗಳಿಂದಲೂ, ಉಪಚರಿಸಬೇಕು.

18 ಜಾಠರೋ ಭಗವಾನಗ್ನೀಶ್ವರೋಽನ್ನಸ್ಯ ಪಾಚಕಃ |
ಜಠರಾಗ್ನಿಗೆ ವಾಯುವಿನ ಸಹಾಯ ಸೌಕ್ಷ್ಮ್ಯಾದ್ರಸಾನಾದದಾನೋ ನವೇಕ್ಷ್ಯಂ ಸ್ಪೃಷ್ಟುಂ ಶಕ್ಯತೇ ||
ಪ್ರಾಣಾಪಾನಸಮಾನೈಸ್ತು ಸರ್ವತಃ ಪರಿಪಾಲ್ಯತೇ |
ಧ್ಮಾಯತೇ ಪಾಲ್ಯತೇ ಚಾಗ್ನಿಃ ಸ್ವೇ ಸ್ವೇ ಸ್ಥಾನೇ ವ್ಯವಸ್ಥಿತೈಃ || (ಸು 131)

ಜಠರದಲ್ಲಿ ಸಿಂತು ಅನ್ನಪಾನವನ್ನು ಪಚನಮಾಡಿ ರಸಗಳನ್ನು ಸ್ವೀಕರಿಸುತ್ತಾ ಇರುವ ಭಗವಂತನೂ ಸ್ವಾಮಿಯೂ ಆದ ಅಗ್ನಿಯು ಸೂಕ್ಷ್ಮವಾದದರಿಂದ ಪರೀಕ್ಷೆಗ ಯಾವಾಗಲಾದರೂ ಒಕ್ಕತಕ್ಕವನಲ್ಲ ತಮ್ಮತಮ್ಮ ಸ್ಥಾನಗಳಲ್ಲಿ ಸ್ಥಿರವಾಗಿ ಸಿಂತಿರುವ ಪ್ರಾಣ, ಅಪಾನ, ಸಮಾನ, ಎಂಬ ಮೂರು ವಾಯುಗಳು ಆ ಅಗ್ನಿಯನ್ನು ಸರ್ವಕಡೆಗಳಿಂದ ಊದಿ ಪಾಲಿಸುತ್ತಾರೆ

19 ವಯಸ್ತ್ರಿವಿಧಂ ಬಾಲಂ ಮಧ್ಯಂ ವೃದ್ಧಮಿತಿ | ತತ್ರೋನಷೋಡಶವರ್ಷಾ ಬಾಲಾಸ್ತೇಽಪಿ ತ್ರಿವಿಧಾಃ ಕ್ಷೀರಪಾಃ ಕ್ಷೀರಾನ್ನಾದಾ ಅನ್ನಾದಾ ಇತಿ | ತೇಷು ಸಂವತ್ಸರಪರಾಃ ಕ್ಷೀರಪಾ ದ್ವಿಸಂವತ್ಸರಪರಾಃ ಕ್ಷೀರಾನ್ನಾದಾಃ ಪರತೋಽನ್ನಾದಾ ಇತಿ | ಷೋಡಶಸಪ್ತತ್ಯೋರಂತರೇ ಮಧ್ಯಂ ವಯಸ್ತಸ್ಯ ವಿಕಲ್ಪೋ ವೃದ್ಧಿಯೌವನಂ ಸಂಪೂರ್ಣತಾ ಹಾನಿರಿತಿ | ತತ್ರಾಪಂಚತೇರ್ವೃದ್ಧಿರಾತ್ರಿಂಶತೋ ಯೌವನಮಾಚತ್ವಾರಿಂಶತಃ ಸರ್ವಧಾತ್ವಿಂದ್ರಿಯಬಲವೀರ್ಯಸಂಪೂರ್ಣತಾ | ಅತ ಊರ್ಧ್ವಮಾಷಷ್ಟೇರ್ಹಾನಿರ್ಯಾವತ್ಸಪ್ತತಿರಿತಿ | ಸಪ್ತತೇರೂರ್ಧ್ವಂ ಕ್ಷೀಯಮಾಣಧಾತ್ವಿಂದ್ರಿಯಬಲವೀರ್ಯೋತ್ಸಾಹಮಹಸ್ಸಹಸಿ ವಲೀಪಲಿತಖಾಲಿತ್ಯಜುಷ್ಟಂ ಕಾಸಶ್ವಾಸಪ್ರಭೃತಿಭಿರುಪದ್ರವೈರಭಿಭೂಯಮಾನಂ ಸರ್ವಕ್ರಿಯಾಸ್ವಸಮರ್ಥಂ ಜೀರ್ಣಾಗಾರಮಿವಾಭಿವೃಷ್ಟಮವಸೀದಂತಂ ವೃದ್ಧಮಾಚಕ್ಷತೇ | ತತ್ರೋತ್ತರೋತ್ತರಾಸು ವಯೋಽವಸ್ಥಾಸೂತ್ತರೋತ್ತರಾ ಭೇಷಜಮಾತ್ರಾವಿಶೇಷಾ ಭವಂತ್ಯುಕ್ತೇ ಚ ಪರಿಹಾಣೇಸ್ತತ್ರಾದ್ಯಾಪೇಕ್ಷಯಾ ಪ್ರತಿಕರ್ಮೋಕ್ತಂ | (ಸು 131)

ವಯಸ್ಸು ಬಾಲ, ಮಧ್ಯ, ವೃದ್ಧ ಎಂತ ಮೂರು ಎಳ. ಅದರಲ್ಲಿ 16 ವರ್ಷಕ್ಕೆ ಕೆಳಗಿನವರು ಬಾಲರು ಆ ಬಾಲರಲ್ಲಿಯೂ ಹಾಲು ಕುಡಿಯುವವರು, ಹಾಲನ್ನೂ ಅನ್ನವನ್ನೂ ಉಣ್ಣುವವರು, ಅನ್ನ ಉಣ್ಣುವವರು, ಎಂಬ ಮೂರು ಭೇದಗಳಿವೆ ಅವರೊಳಗೆ ಒಂದು ವರ್ಷ ಪ್ರಾಯದ ವರೆಗಿನವರು ಹಾಲುಣ್ಣುವವರು, ಅದಕ್ಕೆ ಮೇಲೆ ಎರಡು ವರ್ಷ ಪ್ರಾಯದ ವರಗಿನವರು ಹಾಲನ್ನೂ ಅನ್ನವನ್ನೂ ಉಣ್ಣುವವರು, ಅದಕ್ಕೆ ಮೇಲಿನ ಪ್ರಾಯದವರು ಅನ್ನ ಉಣ್ಣತಕ್ಕವರು ಆಗಿರುತ್ತಾರೆ 16ನೆಯಿಂದ 70ನೇ ವರೆಗೆ ಮಧ್ಯವಯಸ್ಸು,

ಈ ಮಧ್ಯವಯಸ್ಸಿನ ಭೇದಗಳು ವೃದ್ಧಿ (ಅಂದರೆ ಬೆಳೆಕೆ), ಯೌವನ, ಸಂಪೂರ್ಣತೆ, ಹಾನಿ, ಎಂಬವು. 20 ವರ್ಷಗಳ ವರೆಗೆ ವೃದ್ಧಿ; 30 ವರ್ಷಗಳ ವರೆಗೆ ಯೌವನ, 40 ವರ್ಷಗಳ ವರೆಗೆ ಸರ್ವ ಧಾತು, ಇಂದ್ರಿಯ, ಬಲ, ವೀರ್ಯಗಳು ಸಂಪೂರ್ಣವಾಗಿರೋಣ, ಅದರನಂತರ 70 ವರ್ಷಗಳ ವರಗೆ ಸ್ವಲ್ಪ ಹಾನಿ, 70 ವರ್ಷಗಳನಂತರ ದಿನೇದಿನೇ ಧಾತು, ಇಂದ್ರಿಯ, ಬಲ, ವೀರ್ಯ ಉತ್ಸಾಹಗಳು ಕ್ಷೀಣವಾಗುತ್ತಾ, ನೆರಿ, ಕೂದಲು ಹಣ್ಣಾಗುವಿಕೆ, ಕೂದಲು ಉದುರಿಹೋಗುವದು ಇವುಗಳಿಂದ ಪೂರ್ಣನಾಗಿಯೂ, ಕಮ್ಮು, ಉಬ್ಬಸ ಮುಂತಾದ ಉಪದ್ರವಗಳಿಗಧೀನನಾಗಿಯೂ ಸರ್ವ ಕಲಸಗಳಲ್ಲಿಯೂ ಅಸಮರ್ಥನಾಗಿಯೂ, ಮಳೆಯಿಂದ ನೆನೆದ ಹಳೆ ಮನೆಯಂತೆ ಕುಂದುವವನಾಗಿಯೂ ಇರುವವನನ್ನು ವೃದ್ಧನೆಂದು ಹೇಳುತ್ತಾರೆ. ಪರಿಹಾನಿಕಾಲ ಬಿಟ್ಟು ಇತರ ಅವಿಯುಂದ ಉತ್ತರೋತ್ತರ ವಯೋವಸ್ಥೆಗಳಲ್ಲಿ ವಿಷಧ ಪರಿಮಾಣಗಳನ್ನು ಉತ್ತರೋತ್ತರ ಏರಿಸಿ ಕೊಡತಕ್ಕ ಸಧಿಯಿರುತ್ತದೆ ಆ ಪರಿಹಾನಿಕಾಲದಲ್ಲಿ (16 ವರ್ಷದೊಳಗಿನ ಬಾಲ್ಯನಾದ) ಪ್ರಥಮದ ಅವಸ್ಥೆಗೆ ಉಕ್ತರೀತಿಯಲ್ಲಿ ಪ್ರತೀಕಾರಮಾಡಬೇಕು

20 ಬಾಲೇ ವಿವರ್ಧತೇ ಶ್ಲೇಷ್ಮಾ ಮಧ್ಯಮೇ ಪಿತ್ತಮೇವ ತು ।
ವೃಯಿಸ್ಯಂ ವರ್ಧತೇ ವಾಯುರ್ವೃದ್ಧೇ ತದ್ವೀಕ್ಷ್ಯ ಯೋಜಯೇತ್ ॥
ಬಾಲವೃದ್ಧಯೋಗೆ ಅಗ್ನಿಕ್ಷಾರವಿರೇಕೈಸ್ತು ಬಾಲವೃದ್ಧೌ ಭವರ್ಜಯೇತ್ ।
ಚಿಕಿತ್ಸಾಭೇದ ತತ್ಸಾಧ್ಯೇಷು ವಿಕಾರೇಷು ಮೃದ್ವೀಂ ಕುರ್ಯಾತ್ಕ್ರಿಯಾಂ ಶನೈಃ ॥
(ಸು 131-32)

ಬಾಲವಯಸ್ಸಿನಲ್ಲಿ ಕಫವೂ, ಮಧ್ಯವಯಸ್ಸಿನಲ್ಲಿ ಪಿತ್ತವೂ, ವೃದ್ಧನಲ್ಲಿ ಬಹಳವಾಗಿ ವಾಯುವೂ ವೃದ್ಧಿಯಾಗುತ್ತಾ ಇರುವದರಿಂದ, ಅದನ್ನು ತಿಳಿದು ಯೋಗಗಳನ್ನು ಕಲ್ಪಿಸಬೇಕು ಬಾಲಕರಲ್ಲಿಯೂ, ವೃದ್ಧರಲ್ಲಿಯೂ, ಅಗ್ನಿ (ಸುಟ್ಟಿಡುವದು), ಕ್ಷಾರ ಮತ್ತು ವಿರೇಕ ಕ್ರಮಗಳನ್ನು ವರ್ಜ್ಯಮಾಡಬೇಕು ಆ ಕ್ರಮಗಳಿಂದಲೇ ಸಾಧ್ಯವಾಗತಕ್ಕ ವಿಕಾರಗಳು ಸಂಭವಿಸಿದ್ದಲ್ಲಿ, ಮೃದುವಾದ ಕ್ರಮಗಳನ್ನೇ ಸಲ್ಲಮಲ್ಲಗಾಗಿ ನಡಿಸತಕ್ಕದ್ದು.

21 ತದ್ವಯೋ ಯಥಾವಸ್ಥಾನಭೇದೇನ ತ್ರಿವಿಧಂ ಬಾಲಂ ಮಧ್ಯಂ ವೃದ್ಧಮಿತಿ । ತತ್ರ ಬಾಲಂ ಅಪರಿಪಕ್ವಧಾತುಗುಣಮುಪಾತ್ತಸ್ಯಂಜನಂ ಸುಕುಮಾರಮುಕ್ಲೇಶಸಹಮುಸಂಪೂರ್ಣಬಲಂ ಶ್ಲೇಷ್ಮಧಾತುಪ್ರಾಯಂ ಆಷೋಡಶವರ್ಷಂ । ವಿವರ್ಧಮಾನಧಾತುಗುಣಂ ಪುನಃ ಪ್ರಾಯೇಣಾನವವಯೋಭೇದಗಳ ವಿವರಣೆ ಸ್ಥಿತಸತ್ವಮಾತ್ರಿಂಶದ್ವರ್ಷಮುಪದಿಷ್ಟಂ । ಮಧ್ಯಂ ಪುನಃ ಸಮುಪಾರ್ಜಿತಬಲ-ವೀರ್ಯ-ಪೌರುಷ-ಪರಾಕ್ರಮ-ಗ್ರಹಣ-ಧಾರಣ-ಸ್ಮರಣ-ವಚನ-ವಿಜ್ಞಾನ-ಸರ್ವಧಾತುಗುಣಂ ಬಲಸ್ಥಿತಸಮಸ್ಥಿತಸತ್ವಮವಲೀರ್ಯಸಮಾನಧಾತುಗುಣಂ ಪಿತ್ತಧಾತುಪ್ರಾಯಮಾಷಷ್ಟಿವರ್ಷಮುದ್ದಿಷ್ಟಂ । ಅತಃಪರಂ ಪರಿಹೀಯಮಾನಧಾತ್ವಿಂದ್ರಿಯ-ಬಲ-ಪೌರುಷ-ಪರಾಕ್ರಮ-ಗ್ರಹಣ-ಧಾರಣ-ಸ್ಮರಣ-ವಚನ-ವಿಜ್ಞಾನಂ ಭ್ರಶ್ಯಮಾನಧಾತುಗುಣಂ

ವಾತಧಾತುವ್ಯಾಯಂ ಕ್ರಮೇಣ ಪ್ರಜೀರ್ಣಮುಚ್ಯತೇ ಅವರ್ಷಶತಂ ।
ವರ್ಷಶತಂ ಖಲು ಆಯುಷಃ ಪ್ರಮಾಣಮಸ್ಮಿನ್ ಕಾಲೇ । ಸಂತಿ ಪುನರಧಿ
ಕೋನವರ್ಷಶತಜೀವಿನೋ ಮನುಷ್ಯಾಃ । (ಚ. 299-300.)

ಆ ವಯಸ್ಸು ಅನುಸ್ಥಾಭೇದದಿಂದ ಮೂರು ವಿಧ ಬಾಲ, ಮಧ್ಯ, ಜೀರ್ಣ ಎಂತ ಅವ್ರ ಗಳಲ್ಲಿ ಧಾತುಗುಣಗಳು ಸರಿಯಾಗಿ ಪಕ್ವವಾಗದೆ, (ಗಟ್ಟಿ ಮಾಂಸ ಮುಂತಾದ) ವ್ಯಂಜನಗಳು ಹುಟ್ಟದೆ, ಶರೀರವು ಎಳೆದಾಗಿ, ಕಷ್ಟ ಸಹಿಸಕೂಡದೆ, ಬಲ ಸಂಪೂರ್ಣವಾಗದೆ, ಕಫಧಾತು ವೇ ಅಧಿಕವಾಗಿ, ಇರುವ 16 ವರ್ಷ ಪ್ರಾಯದ ವರೆಗಿನವನೂ, ಆ ಮೇಲೆ ವೃದ್ಧಿಯಾಗು ತ್ತಿರುವ ಧಾತುಗುಣಗಳುಳ್ಳ ಮತ್ತು ಹೆಚ್ಚಾಗಿ ಸ್ಥಿರತ್ವ ಹೊಂದದ ಸತ್ವವುಳ್ಳ 30 ವರ್ಷ ಪ್ರಾಯದ ವರೆಗಿನವನೂ ಬಾಲನೆಂದು ಉಪದಿಷ್ಟವಾಗಿದೆ. ಪುನಃ ಮಧ್ಯವಯಸ್ಸು ಎಂಬದು ಬಲ, ವೀರ್ಯ, ಪೌರುಷ, ಪರಾಕ್ರಮ, (ಮೆದುಳಿನ) ಗ್ರಹಣಶಕ್ತಿ, ಧಾರಣ (ಮೆದುಳಿನಲ್ಲಿ ಟ್ಟುಕೊಳ್ಳುವ) ಶಕ್ತಿ ನೆನಪು, ಮಾತು, ಏಜ್ಞಾನ, ಸರ್ವಧಾತುಗುಣ ಸಹ ಪರ್ತಿಯಾಗಿ ಬಂದಿದ್ದು, ಬಲದಲ್ಲ ಸಿಂತ ಸ್ಥಿರವಾದ ಸತ್ವ ಮತ್ತು ಕುಂದದಿರುವ ಧಾತುಗುಣವುಳ್ಳ, ಪಿತ್ತ ಧಾತುವೇ ಹೆಚ್ಚಾಗಿರುವ, 60ನೇ ವರ್ಷದ ವರೆಗಿನದೆಂದು ಉಪದಿಷ್ಟವಾಗಿದೆ ಅನಂತರ 100 ವರ್ಷ ವರೆಗಿನ ಪ್ರಾಯವು ಜೀರ್ಣವಯಸ್ಸು ಎಂತ ಹೇಳಲ್ಪಡುತ್ತದೆ, ಆಗ್ಗೆ ಕ್ರಮೇಣ ಧಾತು, ಇಂದ್ರಿಯ, ಬಲ, ಪೌರುಷ, ಪರಾಕ್ರಮ, ಗ್ರಹಣ, ಧಾರಣ, ನೆನಪು ಮಾತು ಏಜ್ಞಾನ ಸಹ ಕಡಿಮೆಯಾಗುತ್ತಾ, ಧಾತುಗುಣವು ಕುಂದುತ್ತಾ ಬರುವದಲ್ಲದೆ, ವಾತಧಾತುವೇ ಹೆಚ್ಚಾಗಿರುವದು. ಈ ಕಾಲದಲ್ಲ ಆಯುಃಪ್ರಮಾಣವು 100 ವರ್ಷ ಎಂಬದು ನಿಜ, ಆದರೆ, 100 ವರ್ಷಕ್ಕ ಅಧಿಕವಾಗಿಯೂ, ಕಮ್ಮಿಯಾಗಿಯೂ, ಒದುಕುವ ಜನರು ಇದ್ದಾರೆ.

22 ತತ್ರಾದ್ಯಾತಲಾಃ ಪ್ರಕೃತ್ಯಾ ಕೇಚಿತ್ ಪಿತ್ತಲಾಃ ಕೇಚಿತ್ ಶ್ಲೇಷ್ಮಲಾಃ
ಪ್ರಕೃತಿಭೇದ ಕೇಚಿತ್ ಸಂಸೃಷ್ಟಾಃ ಸಮಧಾತವಃ ಪ್ರಕೃತ್ಯಾ ಕೇಚಿತ್ ಭವಂತಿ ।
(ಚ. 294)

(ಗರ್ಭಾದಿಗಳಲ್ಲಿ ಉಂಟಾದ ದೋಷಗಳಿಂದ) ಕೆಲವರು ವಾತಲಪ್ರಕೃತಿಯವರಾ ಗಿಯೂ, ಕೆಲವರು ಪಿತ್ತಲಪ್ರಕೃತಿಯವರಾಗಿಯೂ, ಕೆಲವರು ಕಫಪ್ರಕೃತಿಯವರಾಗಿಯೂ ಕೆಲವರು ಸಂಸೃಷ್ಟಸಮಧಾತುಪ್ರಕೃತಿಯವರಾಗಿಯೂ ಇರುತ್ತಾರೆ

23 ಶ್ಲೇಷ್ಮಾ ಖಿ ಸ್ನಿಗ್ಧ- ಶ್ಲಕ್ಷ್ಣ-ಮೃದು-ಮಧುರ-ಸಾರ-ಸಾಂದ್ರ-ಮಂದ-
ಸ್ತಿಮಿತ-ಗುರು-ಶೀತ-ವಿಜ್ಜಲಾಜ್ಜಕಃ । ಅಸ್ಯ ಸ್ನೇಹಾತ್ ಶ್ಲೇಷ್ಮಲಾಃ ಸ್ನಿಗ್ಧಾಂ
ಗಾಃ ಶ್ಲಕ್ಷ್ಣತ್ವಾತ್ ಶ್ಲಕ್ಷ್ಣಾಂಗಾಃ ಮೃದುತ್ವಾತ್ ದೃಷ್ಟಿಸುಖಸುಕುಮಾ
ಶ್ಲೇಷ್ಮಪ್ರಕೃತಿ ರಾವವಾತಶರೀರಾಃ ಮಾಧುರ್ಯಾತ್ ಪ್ರಭೂತಶುಕ್ರವ್ಯವಾಯಾ
ಲಕ್ಷಣ ಪತ್ಯಾಃ ಸಾರತ್ವಾತ್ ಸಾರಸಂಹತಸ್ಥಿರಶರೀರಾಃ ಸಾಂದ್ರತ್ವಾದುಪಚಿತ
ಪರಿಪೂರ್ಣಸರ್ವಗಾತ್ರಾಃ ಮಂದತ್ವಾನ್ಮಂದಚೇಷ್ಟಾಹಾರವಿಹಾರಾ
ಸ್ತೈಮಿತ್ಯಾದಲೇಷ್ಟಾರಂಭಕ್ಲೋಭವಿಕಾರಾಃ ಗುರುತ್ವಾತ್ ಸಾರಾಧಿ

ಸ್ನಿಗ್ಧತಯಃ, ಶೈತ್ಯಾದಲ್ಪಕ್ಷುತ್ತೃಷ್ಣಾ-ಸಂತಾಪ-ಸ್ವೇದ-ದೋಷಾಃ, ಏ ಜ್ವಲತ್ವಾತ್ ಸುಶ್ಲಿಷ್ಟಸಾರಬಂಧಸಂಧಾನಾಃ ತಥಾಚ್ಛತ್ವಾತ್ ಪ್ರಸನ್ನದರ್ಶ ನಾನನಾಃ ಪ್ರಸನ್ನಸ್ನಿಗ್ಧವರ್ಣಸ್ವರಾಶ್ಚ ಭವಂತಿ | ತ ಏವಂ ಗುಣಯೋಗಾತ್ ಶ್ಲೇಷ್ಮಲಾ ಬಲವಂತೋ ವಸುಮಂತೋ ವಿದ್ಯಾವಂತ ಓಜಸ್ವಿನಃ ಶಾಂತಾ ಆಯುಷ್ಮಂತಶ್ಚ ಭವಂತಿ | (ಚ. 294)

ಕಫವು ಸ್ನಿಗ್ಧ, ಶ್ಲಕ್ಷ್ಣ, ಮೃದು, ಮಧುರ, ಸಾರವುಳ್ಳ, ಸಾಂದ್ರ (ದಪ್ಪ), ಮಂದ (ಚುರು ಕಿಲ್ಲದ), ಸ್ತಿಮಿತ (ದ್ರವವುಳ್ಳ), ಗುರು, ಶೀತ, ಮೃದುಲ (ಅಂಟುಳ್ಳ) ಮತ್ತು ಅಚ್ಛ (ಸ್ವಚ್ಛ) ವಾಗಿರುತ್ತದೆ. ಕಫಪ್ರಕೃತಿಯವರು ಕಫದ ಸ್ನಿಗ್ಧತೆಯಿಂದ ಸ್ನಿಗ್ಧಾಂಗವುಳ್ಳವರೂ, ಶ್ಲಕ್ಷ್ಣತೆ ಯಿಂದ ಶ್ಲಕ್ಷ್ಣಾಂಗವುಳ್ಳವರೂ, ಮೃದುತ್ವದಿಂದ ದೃಷ್ಟಿಸುಖವಾದ, ಕೋಮಲವಾದ ಮತ್ತು ಸುಂದರವಾದ ಶರೀರವುಳ್ಳವರೂ, ಸಾಧುರ್ಯದಿಂದ ಹೆಚ್ಚು ಶುಕ್ರ, ಸಂಭೋಗಶಕ್ತಿ ಮತ್ತು ಮಕ್ಕಳುಳ್ಳವರೂ, ಸಾರತೆಯಿಂದ ಬಲವಾಗಿ ಕೂಡಿಸಲ್ಪಟ್ಟ ಸ್ಥಿರಶರೀರವುಳ್ಳವರೂ, ಸಾಂದ್ರತೆ ಯಿಂದ ಕೂಡಿ ಬೆಳೆದ ಸರ್ವಾಂಗಸಂಪೂರ್ಣವಾದ ಶರೀರವುಳ್ಳವರೂ, ಮಂದತೆಯಿಂದ ಅಂಗ ಚಲನ, ಆಹಾರ, ವಿಹಾರಗಳಲ್ಲಿ ಮಂದರಾಗಿಯೂ, ಸ್ತಿಮಿತ್ಯದಿಂದ ಮೆಲ್ಲಗಾಗಿ ಆರಂಭಿಸುವ ಮತ್ತು ಪೀಡಿಸುವ ರೋಗವುಳ್ಳವರೂ, ಗುರುತ್ವದಿಂದ ಬಲವಾದ ಗತಿಗಳುಳ್ಳವರೂ, ಶೈತ್ಯ ದಿಂದ ಹಸಿವು, ತೃಷೆ, ಸಕೆ ಬೆವರು ಮತ್ತು ದೋಷಗಳು ಅಲ್ಪವಾಗಿರುವವರೂ, ವಿಜ್ಜಲತ್ವ ದಿಂದ ಚೆನ್ನಾಗಿ ಆಲಿಂಗಿಸಿದ ಮತ್ತು ಬಲವಾದ ಕಟ್ಟುವಿಕೆಗಳೂ ಸಂದುಗಳೂ ಉಳ್ಳವರೂ, ಹಾಗೆಯೇ ಅಚ್ಛತ್ವದಿಂದ ಪ್ರಸನ್ನವಾದ ದೃಷ್ಟಿ ಮತ್ತು ಮುಖವುಳ್ಳವರೂ ಮತ್ತು ಪ್ರಸನ್ನವೂ ಸ್ನಿಗ್ಧವೂ ಆದ ವರ್ಣಸ್ವರಗಳುಳ್ಳವರೂ ಆಗುತ್ತಾರೆ. ಈ ಪ್ರಕಾರದ ಗುಣಗಳ ಯೋಗದಿಂದ ಕಫಪ್ರಕೃತಿಯವರು ಬಲವಂತರೂ, ಆಸ್ತಿವಂತರೂ ವಿದ್ಯಾವಂತರೂ, ತೇಜೋವಂತರೂ, ಶಾಂತರೂ, ಆಯುಷ್ಮಂತರೂ ಆಗುತ್ತಾರೆ

24 ಪಿತ್ತಮುಷ್ಣಂ ತೀಕ್ಷ್ಣಂ ದ್ರವಂ ವಿಸ್ರಮಮ್ಲಂ ಕಟುಕಂ ಚ | ತಸ್ಯೋಷ್ಣಾತ್ ಪಿತ್ತಲಾ ಭವಂತಿ ಉಷ್ಣಾಸಹಾಃ ಶುಷ್ಕಸುಕುಮಾರಾವದಾತ ಗಾತ್ರಾಃ ಪ್ರಭೂತಖಲ್ವಿ-ವ್ಯಂಗ-ತಿಲಕ-ಪಿಡಕಾಃ ಕ್ಷುತ್ಪಿಪಾಸಾವಂತಃ ಕ್ಷಿಪ್ರವಲೀ-ಪಲಿತ-ಖಾಲಿತ್ಯ-ದೋಷಾಃ ಪ್ರಾಯೋ ಮೃದ್ವಲ್ಪಕಪಿಲಶ್ಮಶ್ರು-ಲೋಮ-ಕೇಶಾಃ ತೈಕ್ಷ್ಣ್ಯಾತ್ ತೀಕ್ಷ್ಣಪರಾಕ್ರಮಾಃ ತೀಕ್ಷ್ಣಾಗ್ನಯಃ ಪ್ರಭೂತಾಶನಪಾನಾಃ ಕ್ಲೇಶಾಸಹಿಷ್ಣವೋ ದಂದಶೂಕಾಃ ದ್ರವತ್ವಾಚ್ಚಿ ಥಿಲಮೃದುಸಂಧಿಬಂಧಮಾಂಸಾಃ ಪ್ರಭೂತಸ್ವಿಷ್ಟಸ್ವೇದ-ಮೂತ್ರ-ಪುರೀ ಷಾಶ್ಚ ವಿಸ್ರತ್ವಾತ್ ಪ್ರಭೂತಪೂತಿವಕ್ಷಃ-ಕಕ್ಷ-ಸ್ಕಂಧಾಸ್ಯ-ಶಿರಃ-ಶರೀರ ಗಂಧಾಃ ಕಟ್ವಮ್ಲತ್ವಾತ್ ಅಲ್ಪಶುಕ್ರವ್ಯವಾಯಾಪತ್ಯಾಃ | ತ ಏವಂ ಗುಣಯೋಗಾತ್ ಪಿತ್ತಲಾ ಮಧ್ಯಬಲಾ ಮಧ್ಯಾಯುಷೋ ಮಧ್ಯ ಜ್ಞಾನ-ವಿಜ್ಞಾನ-ವಿತ್ತೋಪಕರಣವಂತಶ್ಚ ಭವಂತಿ | (ಚ. 294-95.)

ಪಿತ್ತಪ್ರಕೃತಿ ಲಕ್ಷಣ

ಪಿತ್ತವು ಉಷ್ಣ, ತೀಕ್ಷ್ಣ, ದ್ರವ, ವಿಸ್ರ (ಮಾಂಸದ ವಾಸನೆಯುಳ್ಳದ್ದು), ಹುಳಿ ಮತ್ತು ಖಾರವಾಗಿರುತ್ತದೆ. ಪಿತ್ತಪ್ರಕೃತಿಯವರು ಪಿತ್ತದ ಉಷ್ಣತೆಯಿಂದ ಉಷ್ಣವನ್ನು ಸಹಿಸಲಾರ

ದವರೂ, ಕೋಮಲ, ಸುಂದರ ಮತ್ತು ಬಾಡಿದ ಅಂಗಗಳುಳ್ಳವರೂ, ಕಲೆ, ಬಂಗು, ಎಳ್ಳು ಮತ್ತು ಗುಳ್ಳೆ ಅಥವಾ ಬೊಕ್ಕೆಗಳು ಹೆಚ್ಚಾಗಿರುವವರೂ, ಹಸಿವು, ತೃಷೆಯುಳ್ಳವರೂ, ನೆರಿ, ನರೆ ಮತ್ತು ಕೂದಲು ಉದುರುವಿಕೆ, ಈ ದೋಷಗಳ ಕ್ಷಿಪ್ರಸಂಭವವುಳ್ಳವರೂ, ಹೆಚ್ಚಾಗಿ ಮೃದು, ಅಲ್ಪ ಮತ್ತು ಕಪಿಲವರ್ಣವಾದ ಮಾಸೆ ರೋಮ, ಕೂದಲುಗಳುಳ್ಳವರೂ, ತೀಕ್ಷ್ಣತೆಯಿಂದ ತೀಕ್ಷ್ಣವಾದ ಪರಾಕ್ರಮವುಳ್ಳವರೂ, ತೀಕ್ಷ್ಣವಾದ ಆಯುಳ್ಳವರೂ, ಹೆಚ್ಚಾಗಿ ಅನ್ನಪಾನ ಸೇವಿಸುವವರೂ, ಕಷ್ಟ ಸಹಿಸಲಾರದವರೂ, ದ್ವೇಷವುಳ್ಳವರೂ, ದ್ರವತ್ವದಿಂದ ಸಂದು ಕಟ್ಟು ಮತ್ತು ಮಾಂಸಗಳು ಶಿಥಿಲ ಮತ್ತು ಮೃದುವಾಗಿರುವವರೂ, ಬೆವರು, ಮೂತ್ರ ಮತ್ತು ಮಲಗಳ ವಿಸರ್ಜನ ಹೆಚ್ಚಾಗಿರುವವರೂ, ಅಸ್ಥಿತೆಯಿಂದ ಬಿದೆ ಕಂಕುಳು, ಭುಜ, ಬಾಯಿ, ತಲೆ ಮತ್ತು ಶರೀರ, ಇವುಗಳು ಹೆಚ್ಚು ದುರ್ವಾಸನೆಯುಳ್ಳವಾಗಿರುವವರೂ, ಕಟ್ಟಿವ್ಲುತ್ವದಿಂದ ಅಲ್ಪವಾಗಿ ಶುಕ್ರ, ಸಂಭೋಗಶಕ್ತಿ ಮತ್ತು ಮಕ್ಕಳುಳ್ಳವರೂ ಆಗಿರುತ್ತಾರೆ ಹೀಗೆ ಗುಣಯೋಗವುಳ್ಳವರಾದ್ದರಿಂದ ಆ ಪಿತ್ತಪ್ರಕೃತಿಯವರು ಮಧ್ಯಮ ಬಲದವರೂ, ಮಧ್ಯಾಯುಷ್ಮಂತರೂ, ಮಧ್ಯಸ್ಥಿತಿಯ ಜ್ಞಾನ ಅಜ್ಞಾನ, ದ್ರವ್ಯ ಮತ್ತು ಸಾಮಿತ್ಯವುಳ್ಳವರೂ ಆಗುತ್ತಾರೆ.

25 ವಾತಸ್ತು ರೂಕ್ಷ-ಲಘು-ಚಲ-ಬಹು-ಶೀಘ್ರ-ಶೀತ-ಪರುಷ-ವಿಶದಸ್ತಸ್ಯ ರೌಕ್ಷ್ಯಾದ್ವಾತಲಾ ರೂಕ್ಷಾವಚಿತಾಲ್ಪಶರೀರಾಃ ಪ್ರತತ-ರೂಕ್ಷ-ಕ್ಷಾಮ-ಫಿನ್ನ-ಸಕ್ತ-ಜರ್ಜರ-ಸ್ವರಾ ಜಾಗರೂಕಾಶ್ಚ ಭವಂತಿ ಲಘುತ್ವಾಚ್ಚ ಲಘು ಚಪಲಗತಿಚೇಷ್ಟಾಹಾರವಿಹಾರಾಃ ಚಲತ್ವಾದನವಸ್ಥಿತಸಂಧ್ಯಕ್ಷಿ-ಭ್ರೂ-ಹನ್ವೋಷ್ಠ-ಜಿಹ್ವಾ-ಶಿರಃ-ಸ್ಕಂಧ-ಪಾಣಿ-ಪಾದಾಃ ಬಹುತ್ವಾತ್ ಬಹು ಪ್ರತಾವಕಂಡರಾಸಿರಾಪ್ರತಾನಾಃ ಶೀಘ್ರತ್ವಾತ್ ಶೀಘ್ರಸಮಾರಂಭಕ್ಷೋಭವಿಕಾರಾಃ ಶೀಘ್ರೋತ್ಪಾಸರಾಗವಿರಾಗಾಃ ಶ್ರುತಗ್ರಾಹಿಣಃ ಅಲ್ಪಸ್ಮೃತಯಶ್ಚ ಶೃತ್ಯಾತ್ ಶೀತಾಸಹಿಷ್ಣವಃ ಪ್ರತತಶೀತಕೋಷ್ಠೋಪಕಸ್ತಂಭಾವಾರುಷ್ಯಾತ್ ಪರುಷಕೇಶ-ಶ್ಮಶ್ರು-ರೋಮ-ನಖ-ದಶನ-ವದನ-ಪಾಣಿ-ಪಾದಾಂಗಾ ವೈಶದ್ಯಾತ್ ಸ್ಫುಟಿತಾಂಗಾವಯವಾಃ ಸತತಸಂಧಿಶಬ್ದಗಾಮಿನಶ್ಚ ಭವಂತಿ । ತ ಏವಂ ಗುಣಯೋಗಾತ್ ವಾತಲಾಃ ಪ್ರಾಯೇಣಾಲ್ಪಬಲಾಶ್ಚಾಲ್ಪಾಯುಷಶ್ಚಾಲ್ಪಾಪತ್ಯಾಶ್ಚಾಲ್ಪಸಾಧನಾಶ್ಚಾಧನ್ಯಾಶ್ಚ । (ಚ. 295)

ವಾತಪ್ರಕೃತಿ ಲಕ್ಷಣ

ವಾತವು ರೂಕ್ಷ, ಲಘು, ಚಲ, ಬಹು, ಶೀಘ್ರ, ಶೀತ, ಪರುಷ, ದೊರಗು, ವಿಶದ, ಗುಣಗಳುಳ್ಳದ್ದಾಗಿರುತ್ತದೆ ವಾತಪ್ರಕೃತಿಯವರು ವಾತದ ರೂಕ್ಷತೆಯಿಂದ ಒಣಗಿದ, ಬೆಳಿಕ ಕಡಿಮೆಯಾದ ಮತ್ತು ಅಲ್ಪವಾದ ಶರೀರವುಳ್ಳವರೂ, ವಿಸ್ತಾರವಾದ, ಒಣಗಿದ, ಕ್ಷೀಣವಾದ, ಒಡೆದ, ವಿರಳವಲ್ಲದ ಮತ್ತು ಅಶಕ್ತಸ್ವರವುಳ್ಳವರೂ, ಜಾಗರೂಕರೂ, ಲಘುತ್ವದಿಂದ ಲಘುವಾದ ಮತ್ತು ಚಪಲವಾದ ನಡಿಕೆ, ಚೇಷ್ಟೆ, ಇಂದ್ರಿಯವ್ಯಾಪಾರ, ಆಹಾರ ಮತ್ತು ವಿಹಾರವುಳ್ಳವರೂ, ಚಲತ್ವದಿಂದ ಸ್ಥಿರವಾಗಿ ನಿಂತಿರದ ಸಂದು, ಕಣ್ಣು, ಹುಬ್ಬು, ದವಡೆ, ತುಟಿ, ನಾಲಿಗೆ, ಶಿರಸ್ಸು, ಭುಜ, ಕೈ, ಕಾಲುಗಳುಳ್ಳವರೂ, ಬಹುತ್ವದಿಂದ ಹೆಚ್ಚು ಮಾತುಳ್ಳವರೂ,

ಹೆಚ್ಚು ಕಂಡರೆಗಳ ಮತ್ತು ಸಿರಾನಾಳಗಳ ಹಬ್ಬುಗಳುಳ್ಳವರೂ, ಶೀಘ್ರತ್ವದಿಂದ ಶೀಘ್ರವಾಗಿ ಆರಂಭಿಸಿ ಕೆದರತಕ್ಕ ರೋಗಗಳುಳ್ಳವರೂ, ಶೀಘ್ರವಾಗಿ ಭಯ ಪ್ರೀತಿ ಮತ್ತು ವೈರಾಗ್ಯವನ್ನು ಪಡುವವರೂ, ಕೇಳಿದ್ದನ್ನು ಗ್ರಹಿಸತಕ್ಕವರೂ, ಅಲ್ಪಸೆನವುಳ್ಳವರೂ, ಶೈತ್ಯದಿಂದ ಶೀತವನ್ನು ಸಹಿಸಕೂಡದವರೂ, ತೆಳ್ಳಗೆ, ಶೀತ ಮತ್ತು ನಡುಗಿಸತಕ್ಕ ಸ್ತಂಭ(ದೇಹದ ಕಂಬ)ವುಳ್ಳವರೂ, ಪಾರುಷ್ಯದಿಂದ ದೊರಗಾದ ಕೂದಲು, ಜಾಸ, ರೋಮ, ಉಗುರು ಹಲ್ಲು, ಜಾಯಿ, ಕೈ, ಕಾಲು ಮತ್ತು ಅಂಗಗಳುಳ್ಳವರೂ, ಬಲದತ್ಪದಿಂದ ಒಡೆದ ಅಂಗ ಸುತ್ತು ಅವಯವಗಳುಳ್ಳವರೂ, ಸದಾಕಾಲ ಸಂದುಗಳ ಶಬ್ದದೊಡನೆ ನಡೆಯುವವರೂ ಆಗುತ್ತಾರೆ ಹೀಗೆ ಗುಣಯುಕ್ತರಾದದರಿಂದ, ಆ ವಾತಪ್ರಕೃತಿಯವರು ಇಚ್ಛಾಗಿ ಅಲ್ಪಬಲವುಳ್ಳವರೂ, ಅಲ್ಪಾಯುಸ್ಸುಳ್ಳವರೂ, ಅಲ್ಪಸಂತತಿಯುಳ್ಳವರೂ ಅಲ್ಪ ಅನುಕೂಲತೆಯುಳ್ಳವರೂ ಭಾಗ್ಯಹೀನರೂ ಆಗುತ್ತಾರೆ.

26. ಸಂಸೃಷ್ಟ ಮತ್ತು ಸಮಧಾತು ಪ್ರಕೃತಿ ನಿರೂಕ್ತಿ

ಸಂಸರ್ಗಾತ್ತು ಸಂಸೃಷ್ಟಲಕ್ಷಣಾಂ ಸರ್ವಗುಣಸಮುದಿತಾ
ಸ್ತು ಸಮಧಾತವಃ ಇತ್ಯೇವಂ ಪ್ರಕೃತಿತಃ ಪರೀಕ್ಷೇತ ।
(ಚ ೨೧೨)

ಮೇಲೆ ಹೇಳಿದ ಮೂರು ಪ್ರಕೃತಿಗಳಲ್ಲಿ ಎರಡರ ಲಕ್ಷಣಗಳು ಕೂಡಿರುವವರು ಸಂಸೃಷ್ಟ ಪ್ರಕೃತಿಯವರೂ, ಆ ಮೂರರ ಗುಣಗಳೆಲ್ಲಾ ಕೂಡಿರುವವರು ಸಮಧಾತುಗಳೂ ಆಗಿರುತ್ತಾರೆ ಈ ಪ್ರಕಾರ ಪ್ರಕೃತಿಯನ್ನು ಪರೀಕ್ಷಿಸತಕ್ಕದ್ದು.

X ನೇ ಅಧ್ಯಾಯ.

ನಾಮಾನ್ಯ ಭೋಜನನಿಯಮಗಳು.

1. ಉಷ್ಣಮಶ್ನೀಯಾದುಷ್ಣಂ ಪಿ ಭುಜ್ಯಮಾನಂ ಸ್ವದತೇ ಭುಕ್ತಂ ಚಾಗ್ನಿ ಮುದೀರ್ಯ್ಯಮುದೀರಯತಿ | ಕ್ಷಿಪ್ರಂ ಚ ಜರಾಂ ಗಚ್ಛತಿ, ವಾತಂ ಚಾನು ಲೋಮಯತಿ ಶ್ಲೇಷ್ಮಾಣಂ ಚ ಪರಿಶೋಷಯತಿ, ತಸ್ಮಾದುಷ್ಣಮಶ್ನೀಯಾತ್ | (ಚ 242)

ಬಿಸಿಯಾಗಿ ಉಣ್ಣಬೇಕು

ಬಿಸಿಯಾಗಿ ಉಣ್ಣಬೇಕು ಯಾಕಂದರ ಬಿಸಿಯಾಗಿ ಉಣ್ಣುವಾಗ್ಗೆ ರುಚಿಯಾಗುತ್ತದೆ, ಉಂಡದ್ದು ಏಳುತ್ತಿರುವ ಅಗ್ನಿಯನ್ನು ಜಾರುಕು ಮಾಡುತ್ತದೆ, ಬೇಗನೆ ಜೀರ್ಣವಾಗುತ್ತದೆ, ವಾಯುವನ್ನು ಅನುಕೂಲವಾಗಿ ಮಾಡುತ್ತದೆ. ಮತ್ತು ಕಫವನ್ನು ಒಣಗಿಸುತ್ತದೆ ಆದ್ದರಿಂದ ಬಿಸಿಯಾಗಿ ಉಣ್ಣತಕ್ಕದ್ದು

2 ಸ್ನಿಗ್ಧಮಶ್ನೀಯಾತ್ | ಸ್ನಿಗ್ಧಂ ಪಿ ಭುಜ್ಯಮಾನಂ ಸ್ವದತೇ ಭುಕ್ತಂ ಚಾಗ್ನಿ ಮುದೀರಯತಿ ಕ್ಷಿಪ್ರಂ ಜರಾಂ ಗಚ್ಛತಿ ವಾತಮನುಲೋಮಯತಿ ದೃಢೀ ಕರೋತಿ | ಶರೀರೋಪಚಯಂ ಬಲಾಭಿವೃದ್ಧಿಂ ಚೋಪಜನಯತಿ, ವರ್ಣ ಪ್ರಸಾದಮಪಿ ಚಾಭಿಸಿರ್ವರ್ತಯತಿ | ತಸ್ಮಾತ್ಸ್ನಿಗ್ಧಮಶ್ನೀಯಾತ್ | (ಚ. 242.)

ಸ್ನಿಗ್ಧವಾಗಿ ಉಣ್ಣಬೇಕು

ಸ್ನಿಗ್ಧವಾಗಿ (ಅಂದರೆ ತುಪ್ಪ, ಎಣ್ಣೆ ಇತ್ಯಾದಿ ಪಸೆಯುಕ್ತವಾಗಿ) ಉಣ್ಣಬೇಕು ಯಾಕಂದರ ಸ್ನಿಗ್ಧವಾಗಿ ಉಣ್ಣುವಾಗ್ಗೆ, ರುಚಿಯಾಗುತ್ತದೆ, ಉಂಡದ್ದು ಅಗ್ನಿಯನ್ನು ಉರಿಸುತ್ತದೆ, ಬೇಗನೇ ಜೀರ್ಣವಾಗುತ್ತದೆ, ವಾತವನ್ನು ಅನುಕೂಲವಾಗುವ ಹಾಗೆ ಮಾಡಿ, ದೃಢ ಮಾಡುತ್ತದೆ, ಮೈಕೂಡುವಿಕೆಯನ್ನೂ, ಬಲವೃದ್ಧಿಯನ್ನೂ ಉಂಟುಮಾಡುತ್ತದೆ; ಮತ್ತು ವರ್ಣವನ್ನು ಪ್ರಸನ್ನವಾಗುವಂತೆ ಮಾಡುತ್ತದೆ ಆದ್ದರಿಂದ ಸ್ನಿಗ್ಧವಾಗಿ ಉಣ್ಣತಕ್ಕದ್ದು

3 ಮಾತ್ರಾವದಶ್ನೀಯಾತ್ | ಮಾತ್ರಾವದ್ಧಿ ಭುಕ್ತಂ ವಾತಪಿತ್ತಕಫಾನ್ ಅವ್ಯಪೀಡಯದಾಯುರೇವ ವಿವರ್ಧಯತಿ ಕೇವಲಂ ಸುಖಂ ಸಮ್ಯಕ್ ಪಕ್ತಂ ವಿಷ್ಟಂಭಂ ಗುದಮನುಪರ್ಯೇತಿ ನ ಚೋಪಾಣಮುಪಹಂತಿ ಅವ್ಯಧಂ ಚ ಪರಿಪಾಕಮೇತಿ | ತಸ್ಮಾನ್ಮಾತ್ರಾವದಶ್ನೀಯಾತ್ | (ಚ. 243)

ಮಿತವಾಗಿ ಉಣ್ಣಬೇಕು

ಮಿತವಾಗಿ, ಅಂದರೆ ಪ್ರಮಾಣವುತ, ಉಣ್ಣಬೇಕು ಯಾಕಂದರೆ ಮಿತವಾಗಿ ಉಂಡದ್ದು ವಾತ ಪಿತ್ತ ಕಫಗಳನ್ನು ವಿಶೇಷವಾಗಿ ಪೀಡಿಸದೆ, ಆಯುಸ್ಸನ್ನೂ, ಕೇವಲ ಸುಖವನ್ನೂ, ವೃದ್ಧಿಮಾಡುತ್ತದೆ. ಚೆನ್ನಾಗಿ ಪಕ್ವವಾಗಿ ಮಲವಾದಂಶವು ಗುದದ ಕಡೆಗೆ ಹೋಗುತ್ತದೆ. ಅಗ್ನಿಯನ್ನು ಕೆಡಿಸುವದಿಲ್ಲ, ಮತ್ತು ಕಷ್ಟವಿಲ್ಲದೆ ಪರಿಪಾಕ ಹೊಂದುತ್ತದೆ. ಆದ್ದರಿಂದ ಯುಕ್ತಪ್ರಮಾಣವಾಗಿ ಉಣ್ಣತಕ್ಕದ್ದು.

4. ಜೀರ್ಣೇऽಶ್ನೀಯಾತ್ । ಅಜೀರ್ಣೇ ಹಿ ಭುಂಜಾನಸ್ಯ ಪೂರ್ವಸ್ಯಾಹಾರಸ್ಯ ರಸಮವರಿಣತಮುತ್ತರೋಽಽಹಾರರಸೋऽಪಸೃಜನ್ ಸರ್ವಾನ್ದೋಷಾನ್ ಪ್ರಕೋಪಯತ್ಯಾಶು। ಜೀರ್ಣೇ ತು ಭುಂಜಾನಸ್ಯ ಸ್ವಸ್ಥಾನಸ್ಥೇಷು ದೋಷೇಷು ಅಗ್ನೌ ಚೋದೀರ್ಣಜಾತಾಯಾಂ ಚ ಬುಭುಕ್ಷಾಯಾಂ ಪ್ರವೃತ್ತೇಷು ಚ ಸ್ರೋತಸಾಂ ಮುಖೇಷು ಚೋದ್ಗಾರೇ ವಿಶುದ್ಧೇ ಹೃದಯೇ ವಿಶುದ್ಧೇ ವಾತಾನುಲೋಮ್ಯೇ ಪ್ರಸೃಷ್ಟೇಷು ಚ ವಾತಮೂತ್ರಪುರೀಷವೇಗೇಷು ಜೀರ್ಣಮುಪಹೃತಪ್ರಾಹಾರಜಾತಂ ಸರ್ವಶರೀರಧಾತೂನಪ್ರದೂಷಯದಾಯುರೇವಾಭಿವರ್ಧಯತಿ ಕೇವಲಂ । ತಸ್ಮಾಜ್ಜೀರ್ಣೇऽಶ್ನೀಯಾತ್ । (ಚ. ೨೪೩)

ಹಸಿದು ಉಣ್ಣುವೀಕು

ಜೀರ್ಣವಾಗಿರುವ ವೇಳೆಯಲ್ಲಿ ಉಣ್ಣಬೇಕು ಯಾಕಂದರೆ ಜೀರ್ಣವಾಗಿರದಾಗ್ಗೆ ಉಣ್ಣುವವನ ಮೊದಲಿನ ಆಹಾರರಸವು ಸಕ್ವವಾಗದೆ ಅನಂತರದ ಆಹಾರರಸದೊಂದಿಗೆ ಕೂಡಿಕೊಂಡು ಸರ್ವ ದೋಷಗಳನ್ನು ಜೇಗನೇ ಪ್ರಕೋಪಿಸುತ್ತದೆ ಜೀರ್ಣವಾಗಿರುವಾಗ್ಗೆ ಉಣ್ಣುವವನ ದೋಷಗಳು ತಮ್ಮ ತಮ್ಮ ಸ್ಥಾನಗಳಲ್ಲಿದ್ದು, ಅಗ್ನಿಯು ಚುರುಕಾಗಿದ್ದು, ಹಸಿವು ಹುಟ್ಟಿ, ಸ್ರೋತಸ್ಸುಗಳ ಮುಖಗಳು ತೆರಕೊಂಡಿದ್ದು, ತೇಗು ಮತ್ತು ಹೃದಯ ಶುದ್ಧವಾಗಿಯೂ, ವಾತವು ಅನುಕೂಲವಾಗಿಯೂ, ವಾತಮೂತ್ರಮಲಗಳ ವೇಗಗಳು ಪ್ರಸರ್ಜನೆಯಾಗಿಯೂ ಇದ್ದು, ಉಂಡ ಆಹಾರಸಮೂಹವು ಜೀರ್ಣವಾಗಿ, ಯಾವ ಶರೀರಧಾತುವಿಗಾದರೂ ದೋಷವನ್ನು ಸೂಡದೆ, ಕೇವಲ ಆಯುಸ್ಸನ್ನೇ ವೃದ್ಧಿ ಮಾಡುತ್ತದೆ ಆದ್ದರಿಂದ ಜೀರ್ಣವಾಗಿ ಉಣ್ಣತಕ್ಕದ್ದು

ಏ ಸ್ನಾಗ್ಧೋಷ್ಣೇ ತ್ರಿವಲೇ ಮಂದೇ ಬ್ಯರಹ್ನೇ ನ ಸಮಾಹರೇತ್ । ಸ್ನಾತರಾಶೇ ತ್ರಿಜೀರ್ಣೇ ತು ಸಾಯಮಾಶೋ ನ ದುಷ್ಯತಿ ॥ ಪೂರ್ವಭುಕ್ತೇ ಬಲಗ್ಲಾನ್ಯೇ ಭುಂಜಾನೋ ಹಂತಿ ಪಾವಕಂ । ಬೆಳಿಗ್ಗಿನ ಹುತ್ತು ರಾತ್ರಿಯ ಊಟಗಳ ಛೇದ ಸಾಯಮಾಶೇ ತ್ರಿಜೀರ್ಣೇ ತು ಪ್ರಾತರ್ಭುಕ್ತಂ ನಿಷೇವಸುಂ ॥ ಭವೇದ್ಯದಿ ಪ್ರಾತರಜೀರ್ಣಶಂಕಾ ತದಾಭಯಾಂ ನಾಗರಸೈಂಧವಾಭ್ಯಾಂ । ಬಿಭೂರ್ಣಿತಾಂ ಪೇತಪಲೇನ ಭುಕ್ತ್ವಾ ಭೋಕ್ತಾ ಹ್ಯಶಂಕೋ ಮಿತಮನ್ನಕಾಲೇ ॥ (ಸಿ ರ)

ಹಗಲು ಒಂದು ಊಟ ಮಾಡಿದ ಮೇಲೆ ಅಗ್ನಿಯು ಸುಂದನಾಗಿರುವಾಗ ಎರಡನೆ (ಸಂಜೆಗೆ ಮೊದಲು) ಉಣ್ಣಬಾರದು. ಬೆಳಿಗ್ಗೆ ಉಂಡದ್ದು ಜೀರ್ಣವಾಗದಿದ್ದರೂ ರಾತ್ರಿ ಉಂಡದ್ದರಿಂದ ದೋಷ ಒರುವದಿಲ್ಲ, ಮೊದಲು ಉಂಡದ್ದು ನಿಶೇಷವಾಗಿ ಸುಡಲ್ಪಟ್ಟ ಮೇಲೆ ಉಣ್ಣುವದರಿಂದ ಅಗ್ನಿಯು ನಾಶವಾಗುತ್ತದೆ. ರಾತ್ರಿ ಉಂಡದ್ದು ಜೀರ್ಣವಾಗದಿರುತ್ತಾ ಬೆಳಿಗ್ಗೆ ಉಂಡದ್ದು ವಿಷಕ್ಕೆ ಸಮಾನವಾಗುವದು ಬೆಳಿಗ್ಗೆ ಜೀರ್ಣವಾಗಲಿಲ್ಲ ಎಂಬ ಅನುಮಾನ ಕಂಡರೆ, ಅಗ್ಗೆ ಅಣಲೆಕಾಯಿಸಿಪ್ಪೆ, ಶುಂಠಿ ಮತ್ತು ಸೈಂಧವಲವಣಗಳನ್ನು ಚೂರ್ಣ ಮಾಡಿ, ತಣ್ಣೀರಿನಲ್ಲಿ ಕಲಸಿ, ತಿಂದು ಆ ಮೇಲೆ ಸಂದೇಹವಿಲ್ಲದೆ ಭೋಜನಕಾಲದಲ್ಲಿ ಮಿತವಾಗಿ ಉಣ್ಣಬಹುದು.

6 ವೀರ್ಯಾವಿರುದ್ಧಮಶ್ನೀಯಾತ್ । ಅವಿರುದ್ಧವೀರ್ಯಮಶ್ನನ್ ಹಿ ನ ವಿರುದ್ಧವೀರ್ಯಾಹಾರಜೃರ್ವಿಕಾರೈರಯಮುಪಸೃಜ್ಯತೇ । ತಸ್ಮಾದ್ವೀರ್ಯಾವಿರುದ್ಧಮಶ್ನೀಯಾತ್ ।

ಪರಸ್ಪರ ವೀರ್ಯ ವಿರುದ್ಧವಲ್ಲದ್ದಾಗಿ ಉಣ್ಣಬೇಕು (ಚ 243)

ವೀರ್ಯವಿರುದ್ಧವಲ್ಲದ್ದಾಗಿ ಉಣ್ಣಬೇಕು ಯಾಕಂದರೆ, ವಿರುದ್ಧವೀರ್ಯವಿಲ್ಲದ ಆಹಾರವನ್ನುಣ್ಣುವವನನ್ನು, ವಿರುದ್ಧವೀರ್ಯವುಳ್ಳ ಆಹಾರದ ದೆಸೆಯಿಂದ ಹುಟ್ಟುವ ರೋಗಗಳು ಸಮಿಾಪಿಸುವದಿಲ್ಲ ಆದ್ದರಿಂದ ವೀರ್ಯವಿರೋಧವಿಲ್ಲದ್ದನ್ನೇ ಉಣ್ಣಬೇಕಾದದ್ದು

ಪರಾ IV ಅ 21 23 42ನೇ ಸಂಖ್ಯೆಗಳನ್ನು ನೋಡು (ಪುಟ 90 91 97)

7 ಇಷ್ಟೇ ದೇಶೇಽಶ್ನೀಯಾತ್ । ಇಷ್ಟೇ ಹಿ ದೇಶೇ ಭುಂಜಾನಸ್ಯ ನಾನಿಷ್ಟದೇಶಜೈರ್ಮನಸೋಽಘಾತಕೃರ್ಭಾವೈರ್ಮನಸೋಽಘಾತಂ ಪ್ರಾಪ್ನೋತಿ । ತಥೇಷ್ಟೈಶ್ಚ ಸರ್ವೋಪಕರಣೈಸ್ತಸ್ಮಾದಿಷ್ಟೇ ದೇಶೇ ತಥೇಷ್ಟಸರ್ವೋಪಕರಣಂ ಚಾಶ್ನೀಯಾತ್ ।

ಹಿತವಾದ ಸ್ಥಳ ಮತ್ತು ಉಪಕರಣಗಳಲ್ಲಿ ಉಣ್ಣಬೇಕು (ಚ 243)

ಇಷ್ಟವಾದ ಸ್ಥಳದಲ್ಲಿ ಉಣ್ಣಬೇಕು ಯಾಕಂದರೆ, ಇಷ್ಟದೇಶದಲ್ಲಿ ಉಣ್ಣುವವನಿಗೆ ಸ್ಥಳವು ಇಷ್ಟವಲ್ಲದ ದೆಸೆಯಿಂದ ಹುಟ್ಟುವ ಮನಸ್ಸನ್ನು ಕೆಡಿಸುವ ಭಾವಗಳಿಂದ ಮನೋವೈಕಲ್ಯವುಂಟಾಗುವದಿಲ್ಲ ಹಾಗೆಯೇ ಸರ್ವ ಉಪಕರಣಗಳು (ಮೇಲೋಗರ ಮುಂತಾದ ಮುಖ್ಯ ಆಹಾರದೊಂದಿಗೆ ಉಪಯೋಗಿಸುವ ಪದಾರ್ಥಗಳು) ಇಷ್ಟವಾದವುಗಳಾಗಿರಬೇಕು ಆದ್ದರಿಂದ ಇಷ್ಟವಾದ ಸ್ಥಳದಲ್ಲಿ ಇಷ್ಟವಾದ ಸರ್ವ ಉಪಕರಣಗಳಿಂದ ಉಣ್ಣಬೇಕು

8 ನಾತಿದ್ರುತಮಶ್ನೀಯಾತ್ । ಅತಿದ್ರುತಂ ಹಿ ಭುಂಜಾನಸ್ಯ ಉತ್ಸ್ನೇಹನಮವಸದನಂ ಭೋಜನಸ್ಯಾಪ್ರತಿಷ್ಠಾನಂ । ಭೋಜ್ಯದೋಷಸಾಮ್ಯಸ್ಯೋಪಲಬ್ಧಿಶ್ಚ ನ ಸಿಯತಾ । ತಸ್ಮಾನ್ನಾತಿದ್ರುತಮಶ್ನೀಯಾತ್ ।

ಅತಿವೇಗವಾಗಿ ಉಣ್ಣಬಾರದು (ಚ 243)

ಅತಿತ್ವರೆಯಿಂದ ಉಣ್ಣಬಾರದು ಯಾಕಂದರೆ, ಅತಿ ತ್ವರೆಯಾಗಿ ಉಣ್ಣುವವನಿಗೆ ಸ್ನೇಹನ ಕಲಸವು ಮತ್ತು ಆಯಾಸವು ಹಚ್ಚಾಗುವದಲ್ಲದೆ, ಭೋಜನವು ತನ್ನ ಸ್ಥಾನಕ್ಕೆ ಸರಿಯಾಗಿ ಸೇರುವದಿಲ್ಲ, ಮತ್ತು ಆಹಾರವು ದೋಷಗಳ ಸದ್ಗುಣಭಾವವನ್ನು ಹೊಂದುವದು ನಿಶ್ಚಯವಲ್ಲ ಆದ್ದರಿಂದ ಅತಿತ್ವರೆಯಾಗಿ ಉಣ್ಣಬಾರದು

9 ನಾತಿವಿಲಂಬಿತಮಶ್ನೀಯಾತ್ । ಅತಿವಿಲಂಬಿತಂ ಹಿ ಭುಂಜಾನೋ ನ ತೃಪ್ತಿಮಧಿಗಚ್ಛತಿ ಬಹು ಭುಂಕ್ತೇ, ಶೀತೀಭವತಿ ಚಾಹಾರಜಾತಂ ವಿಷಮಪಾಕಂ ಚ ಭವತಿ । ತಸ್ಮಾನ್ನಾತಿವಿಲಂಬಿತಮಶ್ನೀಯಾತ್ ।

ಅತಿ ವಿಳಂಬವಾಗಿ ಉಣ್ಣಬಾರದು (ಚ 243)

ಅತಿ ಮೆಲ್ಲಗಾಗಿ ಉಣ್ಣಬಾರದು ಅತಿ ವಿಳಂಬದಿಂದ ಉಣ್ಣುವವನು, ತಪ್ತಿ ಹೊಂದದೆ, ಹಚ್ಚು ಉಣ್ಣುತ್ತಾನೆ, ಮತ್ತು ಉಂಡ ಆಹಾರಸಮೂಹವು ಶೀತವಾಗಿ, ವಿಷಮವಾಗಿ ಪಚನವಾಗುತ್ತದೆ ಆದ್ದರಿಂದ ಅತಿಮೆಲ್ಲಗಾಗಿ ಉಣಬಾರದು

10. ಅಜಲ್ಪನ್ನಹಸನ್ ತನ್ಮನಾ ಭುಂಜೀತ। ಜಲ್ಪತೋ ಹಸತೋಽನ್ಯಮನಸೋ ವಾ ಭುಂಜಾನಸ್ಯ ತ ಏವ ಹಿ ದೋಷಾ ಭವಂತಿ ಯ ಏವಾತಿದ್ರುತ ಮಶ್ನತಃ । ತಸ್ಮಾದಜಲ್ಪನ್ನಹಸಂಸ್ತನ್ಮನಾ ಭುಂಜೀತ । (ಚ. 243.)

ಹರಟುತ್ತಾ ನಗುತ್ತಾ ಉಣ್ಣುವಾರದು

ಹರಟದೆ, ನಗದೆ, ಮನಸ್ಸು ಕೊಟ್ಟು, ಉಣ್ಣಬೇಕು. ಅತಿತ್ವರೆಯಾಗಿ ಉಣ್ಣುವದರಿಂದ, ಯಾವ ದೋಷಗಳು ಉಂಟಾಗುತ್ತವೋ, ಅವೇ ಹರಟುತ್ತಾ, ನಗುತ್ತಾ, ಅನ್ಯಮನಸ್ಸುಳ್ಳವನಾಗಿ ಉಣ್ಣುವವನಿಗೆ ಉಂಟಾಗುತ್ತವೆ. ಆದ್ದರಿಂದ ಹರಟದೆ, ನಗದೆ ಮನಸ್ಸುಕೊಟ್ಟು, ಉಣ್ಣಬೇಕು.

11. ಆತ್ಮಾನಮಭಿಸಮೀಕ್ಷ್ಯ ಭುಂಜೀತ ಸಮ್ಯಕ್ । ಇದಂ ಮಮೋಪಶೇತೇ ಇದಂ ನೋಪಶೇತೇ ಇತಿ । ವಿದಿತಂ ಹಿ ಅಸ್ಯ ಆತ್ಮನ ಆತ್ಮಸಾತ್ಮ್ಯಂ ಭವತಿ । ತಸ್ಮಾದಾತ್ಮನಾತ್ಮಾನಮಭಿಸಮೀಕ್ಷ್ಯ ಭುಂಜೀತ ಸಮ್ಯಗಿತಿ । (ಚ. 244.)

ತನಗೆ ಸಾತ್ಮ್ಯವಾದದ್ದನ್ನು ಉಣ್ಣಬೇಕು

ಇದು ತನಗೆ ಹಿತವಾಗುತ್ತದೆ, ಇದು ತನಗೆ ಕೆಡಕುಮಾಡುವದು, ಎಂತ ತನ್ನ ಪ್ರಕೃತಿಯನ್ನು ನೋಡಿಕೊಂಡು, ತನಗೆ ಒಳ್ಳೇದಾಗುವದನ್ನು ಉಣ್ಣಬೇಕು ಇವನ ಆತ್ಮಕ್ಕೆ ಯಾವದು ತನಗೆ ಸಾತ್ಮ್ಯ ಎಂಬದು ತಿಳಿದೇ ಇರುವದು ಆದ್ದರಿಂದ ತನ್ನನ್ನು ತಾನು ನೋಡಿಕೊಂಡು ಒಳ್ಳೇದಾದದ್ದನ್ನು ಉಣ್ಣಬೇಕೆಂಬದು

12. ತ್ರಿವಿಧಂ ಕುಕ್ಷೌ ಸ್ಥಾಪಯೇದವಕಾಶಾಂಶಮಾಹಾರಸ್ಯಾಹಾರಮುಪಯುಂಜಾನಃ । ತದ್ಯಥೈಕಮವಕಾಶಾಂಶಂ ಮೂರ್ತಾನಾಮಾಹಾರವಿಕಾರಾಣಾಮೇಕಂ ದ್ರವಾಣಾಮೇಕಂ ಪುನರ್ವಾತಪಿತ್ತಶ್ಲೇಷ್ಮಣಾಂ । ಏತಾವತೀಂ ಹ್ಯಾಹಾರಮಾತ್ರಾಮುಪಯುಂಜಾನೋ ನಾಮಾತ್ರಾಹಾರಜಂ ಕಿಂಚಿದಶುಭಂ ಪ್ರಾಪ್ನೋತಿ । (ಚ. 244.)

ಆಹಾರಪಾನಗಳ ಪ್ರಮಾಣ

ಆಹಾರವನ್ನು ಸೇವಿಸುವವರು ಆಹಾರಕ್ಕೆ ಹೊಟ್ಟೆಯಲ್ಲಿ ಮೂರು ವಿಧವಾಗಿ ಎಡೆ ವಿಂಗಡಿಸಬೇಕು. ಹ್ಯಾಗಂದರೆ ಒಂದು ಅಂಶ ನಾನಾ ರೂಪವಾದ ಮೂರ್ತ (ಅಂದರೆ ದ್ರವವಲ್ಲದ, ಗಟ್ಟಿ) ಆಹಾರಗಳಿಗೆ, ಒಂದು ಅಂಶ ದ್ರವಗಳಿಗೆ, ಮತ್ತು ಒಂದು ಅಂಶ ವಾತಪಿತ್ತ ಶ್ಲೇಷ್ಮಗಳಿಗೆ. ಈ ಪ್ರಕಾರ ಮಿತಿಯಿಂದ ಆಹಾರವನ್ನು ಉಪಯೋಗಿಸುವವನಿಗೆ ಆಹಾರದ ಪರಿಮಾಣ ತಪ್ಪಿದರಿಂದುಂಟಾಗತಕ್ಕ ಯಾವ ಅಶುಭವಾದರೂ ಒದಗುವದಿಲ್ಲ.

13. ಕುಕ್ಷೇರಪ್ರಪೀಡನಮಾಹಾರೇಣ ಹೃದಯಸ್ಯಾನವರೋಧಃ ಪಾರ್ಶ್ವಯೋರವಿಪಾಟನಮನತಿಗೌರವಮುದರಸ್ಯ ಪ್ರೀಣನಮಿಂದ್ರಿಯಾಣಾಂ ಕ್ಲುಪ್ತಿಪಾಸೋ ಪರಮಃ ಸ್ಥಾನಾಸನಶಯನಗಮನಪ್ರಶ್ವಾಸೋಚ್ಚ್ವಾಸಹಾಸ್ಯಸಂಕಥಾಸು ಚ ಸುಖಾನುವೃತ್ತಿಃ ಸಾಯಂ ಪ್ರಾತಶ್ಚ ಸುಖೇನ ಪರಿಣಮನಂ । ಬಲವರ್ಣೋಪಚಯಕರತ್ವಂ ಚೇತಿ ಮಾತ್ರಾವತೋ ಲಕ್ಷಣಮಾಹಾರಸ್ಯ ಭವತಿ । (ಚ. 244-45.)

ಮಿತಾಹಾರದ ಲಕ್ಷಣಗಳು

ಆಹಾರವು ಹೊಟ್ಟೆಯನ್ನು ಹೆಚ್ಚಾಗಿ ಪೀಡಿಸದಿರುವದು, ಹೃದಯವನ್ನು ತಡೆಯದಿರುವದು, ಪಕ್ಕಗಳಲ್ಲಿ ಸೀಳಿದ ಹಾಗಿನ ವೇದನೆ ಆಗದಿರುವದು, ಹೊಟ್ಟೆಯು ಅತಿ ಭಾರವಾಗಿ ಕಾಣದಿರುವದು, ಇಂದ್ರಿಯಗಳು ತೃಪ್ತಿಗೊಳ್ಳುವದು, ಹಸಿವು ಮತ್ತು ಬಾಯಾರಿಕೆ ಶಾಂತವಾಗುವದು, ನಿಲ್ಲುವಲ್ಲಿ, ಕೂಡ್ರುವಲ್ಲಿ, ಮಲಗುವಲ್ಲಿ, ನಡೆಯುವಲ್ಲಿ, ಶ್ವಾಸವನ್ನು ಬಿಡುವಲ್ಲಿ ಮತ್ತು ಎಳೆಯುವಲ್ಲಿ, ನಗುವಲ್ಲಿ, ಮಾತಾಡುವಲ್ಲಿ ಸಹ ಸುಖವಾಗಿರುವದು, ಸಂಜೆಯಲ್ಲಿಯೂ ಪ್ರಾತಃಕಾಲದಲ್ಲಿಯೂ ಸುಖವಾಗಿ ಜೀರ್ಣವಾಗಿರುವದು, ಒಲವರ್ಣಗಳನ್ನು ಕೂಡಿಸ ತಕ್ಕದ್ದಾಗಿರುವದು, ಇವು ಮಿತಿಯುಳ್ಳ ಆಹಾರದ ಲಕ್ಷಣಗಳಾಗಿರುತ್ತವೆ

14 ಅಮಾತ್ರವತ್ತ್ವಂ ಪುನರ್ದ್ವಿವಿಧಮಾಚಕ್ಷತೇ । ಹೀನಮಧಿಕಂ ಚ । ತತ್ರ ಹೀನಮಾತ್ರಾಹಾರರಾಶಿಂ ಬಲವರ್ಣೋಪಚಯಕ್ಷಯಕರಮತೃಪ್ತಿಕರ ಮುದಾವರ್ತಕರಮವೃಷ್ಯಮನಾಯುಷ್ಯಮನೌಜಸ್ಯಂ ಮನೋಬು ದ್ವೀಂದ್ರಿಯೋಪಘಾತಕರಂ ಸಾರವಿಧಮನಮಲಕ್ಷ್ಮ್ಯಾವಹಂ ಅಶೀತೇ ಶ್ಚ ವಾತವಿಕಾರಾಣಾಮಾಯತನಮಾಚಕ್ಷತೇ । (ಚ 245)

ಹೀನಾಹಾರದ ದೋಷಗಳು

ಪ್ರಮಾಣವಿಲ್ಲದ್ದೆಂಬದು, ಹೀನ, ಅಧಿಕ ಎಂತ ಎರಡು ವಿಧ ಅವುಗಳಲ್ಲ ಹೀನ (ಕಡಿಮೆ) ಪ್ರಮಾಣವಾಗಿ ಸೇವಿಸುವ ಆಹಾರರಾಶಿಯಿಂದ ಬಲವರ್ಣಗಳ ಕೂಡುವಿಕೆಯು ಕ್ಷಯಿಸುವದು, ತೃಪ್ತಿಯಿಲ್ಲದಿರುವದು, ಉದಾವರ್ತರೋಗ ಉಂಟಾಗುವದು, ಸಂಭೋಗಶಕ್ತಿ, ಆಯುಸ್ಸು ಮತ್ತು ತೇಜಸ್ಸು ಕುಂದುವವು, ಮನೋಬುದ್ಧೀಂದ್ರಿಯಗಳು ಕೆಡುವವು, ಸಾರವು ಆರಿಹೋಗುವದು, ದರಿದ್ರತೆ ಉಂಟಾಗುವದು, ಮತ್ತು 80 ವಿಧವಾದ ವಾತರೋಗಗಳಿಗೆ ಆಶ್ರಯವಾಗುವದು, ಎಂತ ಹೇಳುತ್ತಾರೆ

15 ಅತಿಮಾತ್ರಂ ಪುನಃ ಸರ್ವದೋಷಪ್ರಕೋಪಣಮಿಚ್ಛಂತಿ ಕುಶಲಾಃ । ಯೋಪಿ ಮೂರ್ತಾನಾಮಾಹಾರವಿಕಾರಾಣಾಂ ಸೌಮ್ಯತ್ವಂ ಗತ್ವಾ ಪಶ್ಚಾದ್ದ್ರವೈಸ್ತೃಪ್ತಿಮಾಪದ್ಯತೇ ಭೂಯಸ್ತಸ್ಯಾಮಾಶಯಗತಾ ವಾತ ಪಿತ್ತಶ್ಲೇಷ್ಮಾಣೋಽಭ್ಯವಹಾರೇಣ ಅತಿಮಾತ್ರೇಣ ಅತಿಪ್ರಪೀಡ್ಯಮಾ ನಾಃ ಸರ್ವೇ ಯುಗಪತ್ ಪ್ರಕೋಪಮಾಪದ್ಯಂತೇ । ತೇ ಪ್ರಕುಪಿತಾಸ್ತ ಮೇವಾಹಾರರಾಶಿಮಪರಿಣತಮಾವಿಶ್ಯ ಕುಕ್ಷೇಕದೇಶಮಾಶ್ರಿತಾ ವಿಷ್ಟಂ ಭಯಂತಃ ಸಹಸಾ ವಾಪಿ ಉತ್ತರಾಧರಾಭ್ಯಾಂ ಮಾರ್ಗಾಭ್ಯಾಂ ಪ್ರಚ್ಯಾ ವಯಂತಃ ಪೃಥಕ್ ಪೃಥಗ್ವಿಕಾರಾನಭಿನಿರ್ವರ್ತಯಂತಿ ಅತಿಮಾತ್ರಭೋ ಕ್ತುಃ । ತತ್ರವಾತಃ ಶೂಲಾನಾಹಾಂಗಮರ್ದಮುಖಶೋಷಮೂರ್ಚಾ ಭ್ರಮಾಗ್ನಿವೃಷಮ್ಯಶಿರಾಸಂಕೋಚನಸಂಸ್ತಂಭನಾನಿ ಕರೋತಿ । ಪಿತ್ತಂ ಪುನರ್ಜ್ವರಮತೀಸಾರಮಂತರ್ದಾಹಂ ತೃಷ್ಣಾಮದಭ್ರಮಪ್ರಲಪನಾನಿ । ಶ್ಲೇಷ್ಮಾ ತು ಛರ್ದ್ಯರೋಚಕಾವಿಪಾಕಶೀತಜ್ವರಾಲಸ್ಯಗಾತ್ರಗೌರವಾಧಿ ನಿರ್ವೃತ್ತಿಕರಃ ಸಂಪದ್ಯತೇ । (ಚ 245)

ಅತಿಯಾಗಿ ಉಂಡದ್ದರ ದೋಷಗಳು

ಪುನಃ ಅತಿ ಪ್ರಮಾಣವಾಗಿ ಉಣ್ಣುವದರಿಂದ ಸರ್ವ ದೋಷಗಳೂ ಪ್ರಕೋಪಗೊಳ್ಳುತ್ತವೆಂದು ಸರ್ವವನ್ನೂ ತಿಳಿದವರು ಒಪ್ಪುತ್ತಾರೆ. ಯಾವನು ನಾನಾ ವಿಧವಾಗಿ ತಯಾರಿಸಿದ ಮೂರ್ತಾಹಾರಗಳನ್ನು ಹೊಟ್ಟೆತುಂಬ ಉಂಡು, ಅನಂತರ ದ್ರವಪದಾರ್ಥಗಳಿಂದ ಪುನಃ ತೃಪ್ತಿ ಪಡಿಸಿಕೊಳ್ಳುತ್ತಾನೋ, ಅವನ ಆಮಾಶಯದಲ್ಲಿರುವ ವಾತ-ಪಿತ್ತ-ಕಫಗಳು ಅತಿಯಾಗಿ ಭುಂಜಿಸಿದ ದೆಸೆಯಿಂದ ಅತಿಯಾಗಿ ಪೀಡಿಸಲ್ಪಟ್ಟು, ಎಲ್ಲವೂ ಒಂದೇ ಸಾರಿ ಪ್ರಕೋಪಗೊಳ್ಳುತ್ತವೆ. ಪ್ರಕೋಪಗೊಂಡ ಅವುಗಳು ಪಕ್ವವಾಗದ ಅದೇ ಆಹಾರರಾಶಿಯೊಳಗೆ ಹೊಕ್ಕು, ಹೊಟ್ಟೆಯ ಯಾವದಾದರೊಂದು ಸ್ಥಳವನ್ನು ಆಶ್ರಯಿಸಿ, ಅಕಸ್ಮಾತ್ತಾಗಿ ಬಿಗಿದು ಹಿಡಿದು, ಅಥವಾ ಮೇಲಿನ ಮತ್ತು ಕೆಳಗಿನ ಮಾರ್ಗಗಳೆರಡರಿಂದ ಹೊರಗೆ ಹಾಕುತ್ತಾ, ಅತಿಯಾಗಿ ಉಂಡವನಲ್ಲಿ ಬೇರೆಬೇರೆ ವಿಕಾರಗಳನ್ನುಂಟುಮಾಡುತ್ತವೆ. ಅವುಗಳೊಳಗೆ ವಾತವು, ಶೂಲೆ, ಆನಾಹ, ಅಂಗನೋವು, ಬಾಯಿಒಣಗುವಿಕೆ, ಮೂರ್ಚ್ಛೆ, ಭ್ರಮ, ವಿಷಮಾಗ್ನಿ ಮತ್ತು ಸಿರಾನಾಳಗಳ ಸಂಕೋಚ ಮತ್ತು ಸ್ತಂಭ, ಇವುಗಳನ್ನುಂಟುಮಾಡುತ್ತದೆ; ಪುನಃ ಪಿತ್ತವು, ಜ್ವರ, ಅತಿಸಾರ, ದೇಹದೊಳಗೆ ಉರಿ, ಬಾಯಾರಿಕೆ, ಮದ, ಭ್ರಮ, ಪ್ರಲಾಪ, ಇವುಗಳನ್ನುಂಟುಮಾಡುತ್ತದೆ, ಮತ್ತು ಕಫವು, ವಾಂತಿ, ಅರುಚಿ, ಅಜೀರ್ಣ, ಶೀತಜ್ವರ, ಆಲಸ್ಯ, ಮೈಭಾರ, ಇವುಗಳನ್ನುಂಟುಮಾಡುವದಾಗುತ್ತದೆ.

16. ನ ಖಲು ಕೇವಲಮತಿಮಾತ್ರಮೇವಾಹಾರರಾಶಿಮಾಮಪ್ರದೋಷಕಾರಣಮಿಚ್ಛಂತಿ | ಅಪಿ ತು ಖಲು ಗುರುರೂಕ್ಷಶೀತಶುಷ್ಕದ್ವಿಷ್ಟವಿಷ್ಟಂಭಿ ಏದಾಹ್ಯಶುಚಿವಿರುದ್ಧಾನಾಮಕಾಲೇ ಅನ್ನಪಾನಾನಾಮುಪಸೇವನಂ | ಕಾಮ-ಕ್ರೋಧ-ಲೋಭ-ಮೋಹೇರ್ಷ್ಯಾ-ಹ್ರೀ-ಶೋಕ-ಲೋಭೋದ್ವೇಗ-ಭಯೋಪತಪ್ತೇನ ಮನಸಾ ವಾ ಯದನ್ನಪಾನಮುಪಯುಜ್ಯತೇ ತದಪಿ ಆಮಮೇವ ಪ್ರದೂಷಯತಿ | (ಚ 245.)

ಆಮದೋಷಕ್ಕೆ ಬೇರೆ ಹೇತುಗಳು

ಆದರೆ ಅತಿಯಾಗಿ ಭುಂಜಿಸಿದ ಆಹಾರರಾಶಿ ಮಾತ್ರವೇ ಆಮಪ್ರದೋಷಗಳಿಗೆ ಕಾರಣವೆಂತ ಅಂಗೀಕರಿಸಲ್ಪಡುವದಿಲ್ಲ. ಅದಲ್ಲದೆ, ಗುರು, ರೂಕ್ಷ, ಶೀತ, ಒಣಗಿದ್ದು, ದ್ವೇಷಿಸಲ್ಪಡುವಂಥಾದ್ದು, ಹೊಟ್ಟೆ ಬಿಗಿಯತಕ್ಕಂಥಾದ್ದು, ಉರಿ ಉಂಟುಮಾಡತಕ್ಕಂಥಾದ್ದು, ಅರುಚಿ ಮತ್ತು ವಿರುದ್ಧ, ಆದ ಅನ್ನಪಾನಗಳನ್ನು ಅಕಾಲದಲ್ಲಿ ಸೇವಿಸುವದು, ಅಥವಾ ಕಾಮ, ಕ್ರೋಧ, ಲೋಭ, ಮೋಹ, ಮತ್ಸರ, ನಾಚಿಕೆ, ಶೋಕ, ಲೋಭದಿಂದುಂಟಾದ ದುಃಖ, ಮತ್ತು ಭಯ, ಇವುಗಳಿಂದ ಮನಸ್ಸು ಕಾದಿರುವಾಗ ಉಪಯೋಗಿಸಲ್ಪಟ್ಟ ಅನ್ನಪಾನ ಸಹ, ಆಮದೋಷಗಳನ್ನೇ ಉಂಟುಮಾಡುತ್ತದೆ

17. ವಿರುದ್ಧಾಧ್ಯಶನಾಜೀರ್ಣಾಶನಶೀಲಿನಃ ಪುನರೇವ ದೋಷಮಾಮವಿಷಮಿತ್ಯಾಚಕ್ಷತೇ ಭಿಷಜೋ ವಿಷಸದೃಶಲಿಂಗತ್ವಾತ್, ತತ್ ಪರಮಸಾಧ್ಯಮಾಶುಕಾರಿತ್ವಾತ್, ವಿರುದ್ಧೋಪಕ್ರಮತ್ವಾಚ್ಚೇತಿ | (ಚ. 246.)

ಆಮವಿಷ

ವಿರುದ್ಧವಾಗಿ, ಅಥವಾ ಅತಿಯಾಗಿ, ಅಥವಾ ಜೀರ್ಣವಾಗಿರದೆ, ಅಶನಮಾಡುವ ಶೀಲವುಳ್ಳವನ ದೋಷವು, ವಿಷಸದೃಶವಾದ ಲಕ್ಷಣವುಳ್ಳದ್ದಾದ್ದರಿಂದ, ಆಮವಿಷ ಎಂತ ವೈದ್ಯರು

ಹೇಳುತ್ತಾರೆ. ಅದು ಕ್ಷಿಪ್ರವಾಗಿ ಕೆಲಸಮಾಡುವ ಸ್ವಭಾವದ್ದಾದ್ದರಿಂದಲೂ, ಪರಸ್ಪರ ವಿರುದ್ಧ ಲಕ್ಷಣಗಳುಳ್ಳದ್ದಾಗಿ ಆರಂಭಿಸುವದರಿಂದಲೂ, (ಚಿಕಿತ್ಸೆಗೆ) ಅತ್ಯಂತ ಅಸಾಧ್ಯವಾಗಿರುತ್ತದೆ.

18. ಭೋಜ್ಯಪದಾರ್ಥಗಳ ರಸವಿಚಾರ

ಪೂರ್ವಂ ಮಧುರಮಶ್ನೀಯಾನ್ಮಧ್ಯೇಽಮ್ಲಲವಣೌ ರಸೌ ।
ಪಶ್ಚಾಚ್ಚೇಷ್ಟಾನ್ ರಸಾನ್ ವೈದ್ಯೋ ಭೋಜನೇಷ್ವವಚಾರಯೇತ್ ॥ (ಸು. 235.)

ಆರಂಭದಲ್ಲಿ ಸೀರಸವನ್ನೂ, ಮಧ್ಯದಲ್ಲಿ ಹುಳಿ ಮತ್ತು ಉಪ್ಪು ರಸವುಳ್ಳವುಗಳನ್ನೂ, ಅನಂತರ ಉಳಿದ ರಸವುಳ್ಳವುಗಳನ್ನೂ ಉಣ್ಣಬೇಕಾಗಿ ವೈದ್ಯನು ಭೋಜನಗಳಲ್ಲಿ ವಿಧಿಸಬೇಕು.

19 ಭೋಜನ ನಿಯಮಗಳ ಸಾರಾಂಶ

ಸುಖಮುಚ್ಚೈಃ ಸಮಾಸೀನಃ ಸಮದೇಹೋಽನ್ನತತ್ಪರಃ ।
ಕಾಲೇ ಸಾತ್ಮ್ಯಂ ಲಘು ಸ್ನಿಗ್ಧಂ ಕ್ಷಿಪ್ರಮುಷ್ಣಂ ದ್ರವೋತ್ತರಂ ॥
ಬುಭುಕ್ಷಿತೋಽನ್ನಮಶ್ನೀಯಾನ್ಮಾತ್ರಾವದ್ವಿದಿತಾಗಮಃ ।
(ಸು. 236.)

ಎತ್ತರಸ್ಥಾನದಲ್ಲಿ ಸಮದೇಹನಾಗಿ, ಸುಖವಾಗಿ ಕೂತು, ಅನ್ನದ ಮೇಲೆಯೇ ಮನಸ್ಸುಳ್ಳವನಾಗಿ, ಯುಕ್ತಕಾಲದಲ್ಲಿ, ಹಸಿವು ಇರುವಾಗ್ಗೆ, ತನಗೆ ಸಾತ್ಮ್ಯವಾದ, ಲಘುವಾದ, ಸ್ನಿಗ್ಧವಾದ, ದ್ರವವೇ ಹೆಚ್ಚಾಗಿರುವ ಮತ್ತು ಬಿಸಿಯಾದ ಆಹಾರವನ್ನು, ಶಾಸ್ತ್ರವನ್ನು ತಿಳಿದವನಾಗಿ, ಪ್ರಮಾಣ ತಪ್ಪದೆ, ಬೇಗವಾಗಿ ಉಣ್ಣಬೇಕು.

ತಸ್ಮಾತ್ ಸುಸಂಸ್ಕೃತಂ ಯುಕ್ತ್ಯಾ ದೋಷೈರೇತೈರ್ವಿವರ್ಜಿತಮ್ ।
ಯಥೋಕ್ತಗುಣಸಂಪನ್ನಮುಪಸೇವೇತ ಭೋಜನಂ ।
ವಿಭಜ್ಯ ಕಾಲದೋಷಾದೀನ್ ಕಾಲಯೋರುಭಯೋರಪಿ ॥ (ಸು 23.)

ಆದ್ದರಿಂದ ಕಾಲದೋಷಾದಿಗಳನ್ನು ವಿಚಾರಕ್ಕೆ ತಂದುಕೊಂಡು, ಮೊದಲು ಹೇಳಿದ (ಮಾತ್ರಾದಿ) ದೋಷಗಳಿಲ್ಲದಂಥಾ, ತಕ್ಕ ರೀತಿಯಲ್ಲಿ ಒಳ್ಳೇದಾಗಿ ತಯಾರಿಸಲ್ಪಟ್ಟಂಥಾ ಮತ್ತು ಉಕ್ತವಾದ ಗುಣವುಳ್ಳಂಥಾ ಭೋಜನವನ್ನು, ಹಗಲೂ, ರಾತ್ರಿಯೂ, ಎರಡು ವೇಳೆ ಸೇವಿಸಬೇಕು.

20. ರಾತ್ರಿಭೋಜನ ನಿಯಮ

ರಾತ್ರೌ ಚ ಭೋಜನಂ ಕುರ್ಯಾತ್ಪ್ರಥಮಪ್ರಹರಾಂತರೇ ।
ಕಿಂಚಿದೂನಂ ಸಮಶ್ನೀಯಾದ್ದುರ್ಜರಂ ತತ್ರ ವರ್ಜಯೇತ್ ॥
(ಭಾ. ಪ್ರ. 57.)

ರಾತ್ರಿಯಲ್ಲಿ ಪ್ರಥಮ ಜಾಮದೊಳಗೆ ಭೋಜನವನ್ನು ಮಾಡತಕ್ಕದ್ದು; ಸ್ವಲ್ಪ ಕಡಿಮೆಯಾಗಿ ಉಣ್ಣಬೇಕು; ಮತ್ತು ಜೀರ್ಣಕ್ಕೆ ಕಷ್ಟವಾದ ಪದಾರ್ಥವನ್ನು ವರ್ಜಿಸಬೇಕು.

21. ಹಗಲೂಟದ ಕಾಲನಿಯಮ

ಯಾಮಮಧ್ಯೇ ನ ಭೋಕ್ತವ್ಯಂ ಯಾಮಯುಗ್ಮಂ ನ ಲಂಘಯೇತ್ ।
ಯಾಮಮಧ್ಯೇ ರಸೋತ್ಪತ್ತಿರ್ಯಾಮಯುಗ್ಮಾದ್ಬಲಕ್ಷಯಂ ।
(ಭಾ. ಪ್ರ. 49.)

ಪೂರ್ವಾಹ್ಣದಲ್ಲಿ ಒಂದು ಜಾಮದೊಳಗೆ ಉಣ್ಣಲೂ, ಎರಡು ಜಾಮ ಉಪವಾಸ ವಿರಲೂ, ಬಾರದು, ಪ್ರಥಮಜಾಮದ ಮಧ್ಯದಲ್ಲಿ ಉಂಡರೆ (ದೋಷಕರವಾದ) ರಸ ಉತ್ಪತ್ತಿ ಯಾಗುವದು ಮತ್ತು ಎರಡು ಜಾಮದ ಮೇಲೆ ಉಪವಾಸ ಮಾಡಿದರೆ ಬಲವು ಕ್ಷಯಿಸುವದು.

ಇದರಾ ವಿಳಿಗ್ಗೆ ಗೋದಿರೊಟ್ಟಿ, ಸಜ್ಜಿಗೆ ಉಪ್ಪಿಟ್ಟು, ಅವಲಕ್ಕಿ, ಕರಿದ ಪದಾರ್ಥಗಳು ಮುಂತಾದ ಗುರುವಾದ ಆಹಾರವನ್ನು ಭುಂಜಿಸಿ ಕಾಫಿಕುಡಿಯುವ ಅಭ್ಯಾಸ ಮಾಡಿಕೊಂಡವರು ಈ 21ನೇ ಸಂ ಯ ಮತ್ತು ಹಿಂದಿನ 5ನೇ ಸಂ ಯ ಸೂತ್ರಗಳಿಗೆ ಮನಸ್ಸು ಕೊಡಬೇಕು ಹಿಂದಿನ ದಿನದ ಕಡೇ ಊಟದನಂತರ 12 ಘಂಟೆ ಸಮಯ ಕಳೆಯುವ ವರೆಗೆ ಉಣ್ಣಬಾರದೆಂಬ ತಾತ್ಪರ್ಯವಾದ್ದರಿಂದ ಸಂಜೆಯೊಳಗೆ ರಾತ್ರಿ ಊಟವನ್ನು ತೀರಿಸುವ ನಮ್ಮ ದೇಶದ ಜೈನ ಮತಸ್ಥರಿಗೂ, ಎಲಾಯತಿ ಜನರಿಗೂ, ಅಂಥಾ ವಿಳಿಗ್ಗಿನ ಫಲಾಹಾರಾದಿಗಳು ಹಿತವಾಗುವದಲ್ಲದೆ, ಇತರರಿಗೆ ಅದು ಬಹಳ ಅನಾರೋಗ್ಯಕರವೆಂಬುವದರಲ್ಲಿ ಸಂದೇಹವಿಲ್ಲ

22 ಅಚೋಕ್ಷ್ಯಂ ದುಷ್ಟಮುಚ್ಛಿಷ್ಟಂ ಪಾಷಾಣತೃಣಲೋಷ್ಟವತ್ ।
ದ್ವಿಷ್ಟಂ ವ್ಯುಷಿತಮಸ್ವಾದು ಪೂತಿ ಚಾನ್ನಂ ವಿವರ್ಜಯೇತ್ ॥

ಸಂಧ್ಯಾನ್ನ ಚಿರಸಿದ್ಧಂ ಸ್ಥಿರಂ ಶೀತಮನ್ನಮುಷ್ಣೀಕೃತಂ ಪುನಃ ।
ಅಶಾಂತಮುಪದಗ್ಧಂ ಚ ತಥಾ ಸ್ವಾದು ನ ಲಕ್ಷ್ಯತೇ ॥ (ಸು. 237.)

ನಿರ್ಮಲವಲ್ಲದ, (ವಿಷಾದಿ ತಗಲಿ) ಕೆಟ್ಟುಹೋದ, ಉಚ್ಛಿಷ್ಟವಾದ (ಉಂಡು ಉಳಿದ), ತನಗೆ ಇಷ್ಟವಲ್ಲದ, ಹಳಸಿದ ಅಥವಾ ತಣಿದ, ರುಚಿಯಿಲ್ಲದ, ದುರ್ವಾಸನೆಯುಳ್ಳ ಮತ್ತು ಕಲ್ಲು, ಹುಲ್ಲು ಅಥವಾ ಮಣ್ಣು ಉಳ್ಳ, ಅನ್ನವನ್ನು ವರ್ಜ್ಯ ಮಾಡಬೇಕು. ತಯಾರಿಸಿ ಕಾಲ ವಾದ, ಕಲ್ಲಾದ, ತಣಿದದ್ದನ್ನು ಪುನಃ ಬಿಸಿಮಾಡಿದ, ಬಿಸಿಯದ (ಗಂಜಿ ಸಿಕ್ಕಿಕೊಂಡ), ಮತ್ತು ಸುಟ್ಟು ಹೋದ (ಅಡಿ ಹಿಡಿದ), ಅನ್ನವನ್ನು ಸಹ, ಸ್ವಾದುವಾಗಿದ್ದರೂ, ವರ್ಜಿಸಬೇಕು

23. ಯದ್ಯತ್ಸ್ವಾದುತರಂ ತತ್ರ ಎದಧ್ಯಾದುತ್ತರೋತ್ತರಮ್ । (ಪು. 237.)

ಪದಾರ್ಥಗಳು ಒಂದಕ್ಕೊಂದು ಹೆಚ್ಚು ಸ್ವಾದುವಾಗಿರುವಲ್ಲಿ, ಹೆಚ್ಚು ಸ್ವಾದುವಾದ ಪದಾರ್ಥಗಳನ್ನು ಕಡೆಕಡೆಗೆ (ಉತ್ತರೋತ್ತರವಾಗಿ) ಉಪಯೋಗಿಸತಕ್ಕದ್ದು.

ಸ್ವಾದುಭೋಜನದ ನಿಯಮ ಭುಕ್ತ್ವಾ ಚ ಯತ್ಪಾರ್ಥಯತೇ ಭೂಯಸ್ತತ್ಸ್ವಾದುಭೋಜನಂ ।
(ಸು. 237.)

ಭುಂಜಿಸಿದ ಮೇಲೆ ಪುನಃ ಅದರ ಆಶಯನ್ನು ಯಾವದು ಹುಟ್ಟಿಸುತ್ತದೋ, ಆ ಭೋಜ ನವು ಸ್ವಾದು ಎನ್ನಿಸಿಕೊಳ್ಳುತ್ತದೆ.

24. ಜಲಪಾನ ವಿಧಿ ಅಶಿತಶ್ಚೋದಕಂ ಯುಕ್ತ್ಯಾ ಭುಂಜಾನಶ್ಚಾಂತರಾ ಪಿಬೇತ್ ।
(ಸು. 237.)

ಉಂಡ ಮೇಲೆಯೂ, ಉಣ್ಣುತ್ತಿರುವಾಗ ಎಡೆಯಲ್ಲಿಯೂ, ನೀರನ್ನು ಯುಕ್ತವಾಗಿ ಕುಡಿಯಬೇಕು.

25. ಅತ್ಯಂಬುಪಾನಾದ್ವಿಷಮಾಶನಾದ್ವಾ ಸಂಧಾರಣಾತ್ಸ್ವಪ್ನವಿಪರ್ಯಯಾಚ್ಚ ।

ಅತಿ ಜಲಪಾನಾದಿಗಳ ದೋಷ ಕಾಲೇಽಪಿ ಸಾತ್ಮ್ಯಂ ಲಘು ಚಾಪಿ ಭುಕ್ತಮನ್ನಂ ನ ಪಾಕಂ ಭಜತೇ ನರಸ್ಯ ॥
(ಸು. 239.)

ಅತಿಯಾಗಿ ನೀರು ಕುಡಿಯುವದರಿಂದಲೂ, ವಿಷಮವಾದ ಅಶನದಿಂದಲೂ (ಮೂತ್ರಾದಿ ವೇಗ) ಧಾರಣದಿಂದಲೂ, ನಿದ್ರೆಯ ನಿಯಮ ತಪ್ಪುವದರಿಂದಲೂ, ಸಕಾಲದಲ್ಲಿ ಉಂಡ ಮತ್ತು ಲಘುವೂ, ಸಾತ್ಮ್ಯವೂ, ಆದ ಅನ್ನವಾದರೂ ಮನುಷ್ಯನಿಗೆ ಪಚನವಾಗುವದಿಲ್ಲ.

26. ಹಿತಾಹಿತೋಪಸಂಯುಕ್ತಮನ್ನಂ ಸಮಶನಂ ಸ್ಮೃತಂ |
ಮೂರು ವಿಧ ವಾದ ನಿಂದ್ಯಾಶನ ಬಹುಸ್ತೋಕಮಕಾಲೇ ವಾ ವಿಜ್ಞೇಯಂ ವಿಷಮಾಶನಂ ||
ಸಾಜೀರ್ಣೇ ಭುಜ್ಯತೇ ಯತ್ತು ತದಧ್ಯಶನಮುಚ್ಯತೇ |
ತ್ರಯಮೇತನ್ನಿಹಂತ್ಯಾಶು ಬಹೂನ್ವ್ಯಾಧೀನ್ಕರೋತಿ ವಾ || (ಸು. 240.)

ಹಿತವಾದದ್ದೂ, ಅಹಿತವಾದದ್ದೂ ಕೂಡಿರುವ ಭೋಜನವು ಸಮಶನವೆನ್ನಿಸಿಕೊಳ್ಳುತ್ತದೆ. ಅತಿಯಾಗಿ, ಕಡಿಮೆಯಾಗಿ, ಅಥವಾ ಅಕಾಲದಲ್ಲಿ, ಭುಂಜಿಸಿದ ಅನ್ನವು ವಿಷಮಾಶನ ಎಂತ ತಿಳಿಯಬೇಕು. ಅಜೀರ್ಣವಾದದ್ದು ಇರುವಾಗ್ಗೆ ಉಂಡದ್ದು, ಅಧ್ಯಶನ ಎಂತ ಹೇಳುತ್ತಾರೆ. ಇವು ಮೂರೂ ಬೇಗನೇ ಕೇಡು ಮಾಡುತ್ತವೆ, ಅಥವಾ ಬಹು ವ್ಯಾಧಿಗಳನ್ನುಂಟುಮಾಡುತ್ತವೆ.

27. ಪೇಯಾದಿಗಳ ಗುರುತ್ವಭೇದ ಪೇಯಲೇಹ್ಯಾದ್ಯಭಕ್ಷ್ಯಾಣಾಂ ಗುರು ವಿದ್ಯಾದ್ಯಥೋತ್ತರಂ | (ಸು. 238.)

ಪೇಯ (ಪಾನಕ, ಗಂಜಿ ಮುಂತಾದ ಕುಡಿಯತಕ್ಕವು), ಲೇಹ್ಯ (ಜೇನು ಮುಂತಾದ ನೆಕ್ಕತಕ್ಕವು), ಅದ್ಯ (ಅನ್ನ ಮುಂತಾದ್ದು), ಭಕ್ಷ್ಯ, ಇವುಗಳೊಳಗೆ (1ನೇದಕ್ಕಿಂತ 2ನೇದು, 2ನೇದಕ್ಕಿಂತ 3ನೇದು, 3ನೇದಕ್ಕಿಂತ 4ನೇದು, ಹೀಗೆ) ಯಥೋತ್ತರ ಗುರುವಾದದ್ದೆಂತ ತಿಳಿಯಬೇಕು.

ಆಹಾರಂ ಷಡ್ವಿಧಂ ಜ್ಞೇಯಂ ಪೇಯಂ ಲೇಹ್ಯಂ ತಥೈವ ಚ |
ಭೋಜ್ಯಂ ಭಕ್ಷ್ಯಂ ತಥಾ ಚರ್ವ್ಯಂ ಗುರು ವಿದ್ಯಾದ್ಯಥೋತ್ತರಂ ||
(ನಿ. ರತ್ನಾಕರ.)

ಚೀಪತಕ್ಕದ್ದು, ಕುಡಿಯತಕ್ಕದ್ದು, ನೆಕ್ಕತಕ್ಕದ್ದು, ಉಣ್ಣತಕ್ಕದ್ದು, ತಿನ್ನತಕ್ಕದ್ದು, ಜಗಿಯತಕ್ಕದ್ದು, ಎಂತ ಆಹಾರದಲ್ಲಿ ಆರು ವಿಧಗಳು. ಇವು ಯಥೋತ್ತರ ಗುರುವಾಗಿರುತ್ತವೆ (ಅಂದರೆ ಹಿಂದಣದಕ್ಕಿಂತ ಮುಂದಿನದು ಗುರು).

28. ಪಿಷ್ಟಾನ್ನಂ ನೈವ ಭುಂಜೀತ ಮಾತ್ರಯಾ ವಾ ಬುಭುಕ್ಷಿತಃ |
ಹಿಟ್ಟಿನಿಂದ ಮಾಡಿದ ಅನ್ನ ದ್ವಿಗುಣಂ ಚ ಪಿಬೇತ್ತೋಯಂ ಸುಖಂ ಸಮ್ಯಕ್ ಪ್ರಜೀರ್ಯತಿ ||
(ಸು. 238.)

ಹಿಟ್ಟಿನಿಂದ ತಯಾರಿಸಿದ ಅನ್ನವನ್ನು ತಿನ್ನದೇ ಇರುವದು ಒಳ್ಳೇದು; ಅಥವಾ ಹಸಿವು ಆದ ಸಮಯ ನೋಡಿ, ಮಿತದಿಂದ ತಿಂದು, ಎರಡು ಪಾಲಷ್ಟು ನೀರನ್ನು ಕುಡಿಯಬೇಕು; ಆಗ್ಗೆ ಅದು ಸುಖವಾಗಿ ಮತ್ತು ಸರಿಯಾಗಿ ಜೀರ್ಣವಾಗುತ್ತದೆ.

29. ಅವಲಕ್ಕಿ ಮುಂತಾದ್ದನ್ನು ತಿನ್ನುವುದಕ್ಕೆ ಕಾಲ

ಗುರುಪಿಷ್ಟಮಯಂ ತಸ್ಮಾತ್ತಂಡುಲಾನ್ ಪೃಥುಕಾನಪಿ ।
ನ ಜಾತು ಭುಕ್ತವಾನ್ ಖಾದೇನ್ಮಾತ್ರಾಂ ಖಾದೇದ್ಬುಭುಕ್ಷಿತಃ ॥ (ಚ. 26.)

ಗುರುವಾದ ಹಿಟ್ಟಿನಿಂದ ತಯಾರಿಸಲ್ಪಟ್ಟದ್ದನ್ನು, ಅಕ್ಕಿಯನ್ನು (ಹುರಿದ), ಮತ್ತು ಅವಲಕ್ಕಿಯನ್ನು ಉಂಡ ಮೇಲೆ ಯಾವಾಗಲಾದರೂ ತಿನ್ನಬಾರದು; ಹಸಿದಿದ್ದಾಗ್ಗೆ ಮಿತವಾಗಿ ತಿನ್ನಬಹುದು.

30. ಆಹಾರದಲ್ಲಿ ಗುರು ಲಘು ವಿಚಾರ

ಲಘೂನಿ ಹಿ ದ್ರವ್ಯಾಣಿ ವಾಯ್ವಗ್ನಿಗುಣಬಹುಲಾನಿ ಭವಂತಿ । ಪೃಥಿವೀ ಸೋಮಗುಣಬಹುಲಾನೀತರಾಣಿ । ತಸ್ಮಾತ್ ಸ್ವಗುಣಾದಪಿ ಲಘೂನ್ಯಗ್ನಿ ಸಂಧುಕ್ಷಣಸ್ವಭಾವಾನಿ ಅಲ್ಪದೋಷಾಣಿ ಚೋಪ್ಯಂತೇ ಅಪಿ ಸೌಹಿತ್ಯೋಪಯುಕ್ತಾನಿ । ಗುರೂಣಿ ಪುನರ್ನಾಗ್ನಿಸಂಧುಕ್ಷಣಸ್ವಭಾವಾನ್ಯಸಾ ಮಾನ್ಯಾದತಶ್ಚಾತಿಮಾತ್ರಂ ದೋಷವಂತಿ ಸೌಹಿತ್ಯೋಪಯುಕ್ತಾನಿ ಅನ್ಯತ್ರ ವ್ಯಾಯಾಮಾಗ್ನಿಬಲಾತ್ । ಸೈಷಾ ಭವತ್ಯಗ್ನಿಬಲಾಪೇಕ್ಷಿಣೀ ಮಾತ್ರಾ ನ ಚ ನಾಪೇಕ್ಷತೇ ದ್ರವ್ಯಂ । ದ್ರವ್ಯಾಪೇಕ್ಷಯಾ ಚ ತ್ರಿಭಾಗ ಸೌಹಿತ್ಯಮರ್ಧಸೌಹಿತ್ಯಂ ವಾ ಗುರೂಣಾಮುಪದಿಶ್ಯತೇ । ಲಘೂನಾ ಮಪಿ ಚ ನಾತಿಸೌಹಿತ್ಯಮಗ್ನೇರ್ಯುಕ್ತ್ಯರ್ಧಂ । (ಚ. 25-26.)

ಲಘುವಾದ ದ್ರವ್ಯಗಳಲ್ಲಿ ವಾಯು ಮತ್ತು ಅಗ್ನಿಯ ಗುಣಗಳು ಹೆಚ್ಚಾಗಿರುತ್ತವೆ. ಇತರ ದ್ರವ್ಯಗಳಲ್ಲಿ ಪೃಥ್ವಿ ಮತ್ತು ಚಂದ್ರನ (ನೀರಿನ) ಗುಣಗಳು ಹೆಚ್ಚು. ಆದ್ದರಿಂದ ಲಘು ದ್ರವ್ಯಗಳು ತಮ್ಮ ಗುಣದಿಂದ ಅಗ್ನಿಯನ್ನು ಹೊತ್ತಿಸುವ ಸ್ವಭಾವದವುಗಳು; ಮತ್ತು ಅವು ತೃಪ್ತಿಯಾಗುವಷ್ಟು ಉಪಯೋಗಿಸಲ್ಪಟ್ಟರೂ, ಉಂಟಾಗುವ ದೋಷಗಳು ಅಲ್ಪವಾಗಿರುತ್ತವೆ. ಆದರೆ ಗುರುದ್ರವ್ಯಗಳು ಹೆಚ್ಚಾಗಿ ಅಗ್ನಿಯನ್ನು ಹೊತ್ತಿಸುವ ಸ್ವಭಾವದವಲ್ಲ; ಆದ್ದರಿಂದ ಅವು ತೃಪ್ತಿಯಾಗುವಷ್ಟು ಉಪಯೋಗಿಸಲ್ಪಟ್ಟರೆ, ವ್ಯಾಯಾಮ ಮತ್ತು ಅಗ್ನಿಬಲ ಇಲ್ಲದ್ದಾಗ್ಗೆ, ಅತಿಯಾಗಿ ದೋಷಗಳನ್ನುಂಟುಮಾಡುತ್ತವೆ. ಈ ಪ್ರಮಾಣವು ಅಗ್ನಿಬಲದ ಮೇಲೆ ಹೇಳೋಣಾದದ್ದಾದರೂ, ದ್ರವ್ಯ ಹಿಡಿದು ಪ್ರಮಾಣವಿಲ್ಲ ಎಂತಲ್ಲ. ದ್ರವ್ಯದ ಮೇಲೆ ಪ್ರಮಾಣ ಹ್ಯಾಗಂದರೆ· ಗುರುದ್ರವ್ಯಗಳ ಕುರಿತು ತ್ರಿಭಾಗ (ಮುಕ್ಕಾಲುಪಾಲು) ತೃಪ್ತಿ ಅಥವಾ ಅರ್ಧ ತೃಪ್ತಿ ವಿಹಿತ, ಮತ್ತು ಲಘು ದ್ರವ್ಯಗಳ ಮಟ್ಟಿಗೆ, ಅಗ್ನಿಗೆ ತಕ್ಕಷ್ಟೇ ಅಲ್ಲದೆ, ಅತಿತೃಪ್ತಿ ವಿಹಿತವಾಗಿರುವದಿಲ್ಲ.

31. ಗುರು ಲಘು ವಿಚಾರದ ಆವಶ್ಯಕತೆ

ಗುರುಲಾಘವಚಿಂತೇಯಂ ಪ್ರಾಯೇಣಾಲ್ಪಬಲಾನ್ ಪ್ರತಿ ।
ಮಂದಕರ್ಮಾನನಾರೋಗ್ಯಾನ್ ಸುಕುಮಾರಾನ್ ಸುಖೋಚಿತಾನ್ ॥
ದೀಪ್ತಾಗ್ನಯಃ ಖಿರಾಹಾರಾಃ ಕರ್ಮನಿತ್ಯಾ ಮಹೋದರಾಃ ।
ಯೇ ನರಾಃ ಪ್ರತಿ ತಾಂಶ್ಚಿಂತ್ಯಂ ನಾವಶ್ಯಂ ಗುರುಲಾಘವಂ ॥ (ಚ. 183.)

ಈ ಗುರು-ಲಘು ವಿಚಾರವು ವಿಶೇಷವಾಗಿ ಅಲ್ಪಬಲವುಳ್ಳವರ, ದೇಹಾಯಾಸದ ಕೆಲಸ ಕಡಿಮೆಯಾದವರ, ಆರೋಗ್ಯವಿಲ್ಲದವರ, ಎಳೇ ಶರೀರದವರ, ಮತ್ತು ಸುಖಜೀವಿ

ಗಳ ಮಟ್ಟಿಗೆ ಆಗಿರುತ್ತದೆ. ಪ್ರಜುರವಾದ ಅಗ್ನಿಬಲವುಳ್ಳವರ, ಖರ (ನೂತನವಲ್ಲದ) ಆಹಾರಾಭ್ಯಾಸದವರ, ನಿತ್ಯ ದೇಹಾಯಾಸದ ಕೆಲಸ ಮಾಡುವವರ, ಮತ್ತು ದೊಡ್ಡ ಹೊಟ್ಟೆ ಯುಳ್ಳವರ, ವಿಷಯದಲ್ಲಿ ಗುರು ಲಘು ವಿಚಾರವು ಅವಶ್ಯಕವಿಲ್ಲ

ಕ್ಷುತ್ಸಂಭವತಿ ಪಕ್ವೇಷು ರಸದೋಷಮಲೇಷು ಚ ।
ಕಾಲೇ ವಾ ಯದಿ ವಾಽಕಾಲೇ ಸೋಽನ್ನಕಾಲ ಉದಾಹೃತಃ ॥ (ಭಾ. ಪ್ರ. 49.)

ರಸ, ದೋಷ, ಮಲಗಳು ಪಕ್ವವಾದಾಗ್ಗೆ ಹಸಿವು ಉಂಟಾಗುತ್ತದೆ. ಅದು, ಕಾಲವಾಗಲಿ ಅಕಾಲವಾಗಲಿ, ಭೋಜನಕಾಲವೆಂತ ಹೇಳಲ್ಪಟ್ಟದೆ

32 ದ್ವಾದಶಾಶನಪ್ರವಿಭಾಗಾನ್ ವಕ್ಷ್ಯಾಮಃ। ತತ್ರ ಶೀತೋಷ್ಣ-ಸ್ನಿಗ್ಧ-ರೂಕ್ಷ-
ಹನ್ನೆರಡು ವಿಧದ ಆಶನಗಳು ದ್ರವ-ಶುಷ್ಕೈಕಕಾಲಿಕ-ದ್ವಿಕಾಲಿಕೌಷಧಯುಕ್ತ-ಮಾತ್ರಾಹೀನ-ದೋಷ
ಪ್ರಶಮನ-ವೃತ್ಯರ್ಧಾಃ । (ಸು 906.)

ಶೀತ, ಉಷ್ಣ, ಸ್ನಿಗ್ಧ, ರೂಕ್ಷ, ದ್ರವ, ಶುಷ್ಕ, ಏಕಕಾಲಿಕ, ದ್ವಿಕಾಲಿಕ, ಔಷಧಯುಕ್ತ, ಮಾತ್ರಾಹೀನ, ದೋಷಪ್ರಶಮನ, ವೃತ್ಯರ್ಧ, ಎಂತ ಆಶನಗಳಲ್ಲಿ ಹನ್ನೆರಡು ವಿಧಗಳು.

33. ತೃಷ್ಣೋಷ್ಣಮದದಾಹಾರ್ತಾನ್ ರಕ್ತಪಿತ್ತವಿಷಾತುರಾನ್ ।
ಶೀತಾಹಾರಕ್ಕೆ ಅರ್ಹರು ಮೂರ್ಚ್ಛಾರ್ತಾನ್ ಸ್ತ್ರೀಷು ಚ ಕ್ಷೀಣಾನ್ ಶೀತೈರನ್ನೈರುಪಾಚರೇತ್ ॥ (ಸು. 906.)

ಬಾಯಾರಿಕೆ, ಉಷ್ಣ, ಮದ, ಉರಿ, ರಕ್ತಪಿತ್ತ, ವಿಷ, ಮೂರ್ಚ್ಛೆ, ಇವುಗಳಿಂದ ಪೀಡಿತರಾದವರಿಗೂ, ಸ್ತ್ರೀಸಂಗದಿಂದ ಕ್ಷೀಣರಾದವರಿಗೂ, ಶೀತವಾದ (ತಣ್ಣಗಾದ) ಆಹಾರ ಗಳಿಂದ ಉಪಚಾರಮಾಡತಕ್ಕದ್ದು.

34. ಕಫವಾತಾಮಯಾವಿಷ್ಟಾನ್ ವಿರಿಕ್ತಾನ್ ಸ್ನೇಹಪಾಯಿನಃ ।
ಉಷ್ಣಾಹಾರಕ್ಕೆ ಅರ್ಹರು ಪ್ರಕ್ಲಿನ್ನದೇಹಾಂಶ್ಚ ನರಾನುಷ್ಣೈರನ್ನೈರುಪಾಚರೇತ್ ॥
(ಸು. 907.)

ಕಫ ವಾತರೋಗಗಳುಳ್ಳವರಿಗೂ, ವಿರೇಚನ ಮಾಡಿಸಿಕೊಂಡವರಿಗೂ, (ತೈಲಾದಿ) ಸ್ನೇಹ ಪಾನಮಾಡುತ್ತಿರುವವರಿಗೂ, ದೇಹದಲ್ಲಿ ದ್ರವ ಹೆಚ್ಚುಳ್ಳವರಿಗೂ, ಬಿಸಿಯಾದ ಆಹಾರಗಳಿಂದ ಉಪಚಾರಮಾಡತಕ್ಕದ್ದು.

35. ವಾತಿಕಾನ್ ರೂಕ್ಷದೇಹಾಂಶ್ಚ ವ್ಯಾಯಾಮೋಪಹತಾಂಸ್ತಥಾ ।
ಸ್ನಿಗ್ಧಾಹಾರಕ್ಕೆ ಅರ್ಹರು ವ್ಯಾಯಾಮಿನಶ್ಚಾಪಿ ನರಾನ್ ಸ್ನಿಗ್ಧೈರನ್ನೈರುಪಾಚರೇತ್ ॥
(ಸು. 907.)

ವಾತಪ್ರಕೃತಿಯವರನ್ನೂ, ರೂಕ್ಷವಾದ ಶರೀರವುಳ್ಳವರನ್ನೂ, ವ್ಯಾಯಾಮದಿಂದ ನೊಂದವರನ್ನೂ, ವ್ಯಾಯಾಮನಿತ್ಯರಾದವರನ್ನೂ, ಸ್ನಿಗ್ಧವಾದ ಅಶನಗಳಿಂದ ಉಪಚರಿಸ ಬೇಕು.

36. ಮೇದಸಾऽಭಿಪರೀತಾಂಸ್ತು ಸ್ಥೂಲಾ*ನ್ಮೇಹಾತುರಾನಪಿ ।
ರೂಕ್ಷಾಹಾರಕ್ಕೆ ಅರ್ಹರು ಕಫಾಭಿಪನ್ನದೇಹಾಂಶ್ಚ ರೂಕ್ಷೈರನ್ನೈರುಪಾಚರೇತ್ ॥
(ಸು. 907.)

ಮೇದೋವೃದ್ಧಿಯುಳ್ಳವರನ್ನೂ, ಸ್ಥೂಲರನ್ನೂ, ಮೇಹರೋಗಿಗಳನ್ನೂ, ಕಫಪೀಡಿತ ದೇಹದವರನ್ನೂ, ರೂಕ್ಷವಾದ ಆಹಾರಗಳಿಂದ ಉಪಚರಿಸಬೇಕು

*'ಸ್ನಿಗ್ಧಾನ್' ಎಂಬ ಪಾಠಾಂತರವಿರುತ್ತದೆ

37. ದ್ರವಾಹಾರಕ್ಕೆ ಮತ್ತು ಶುಷ್ಕಾಹಾರಕ್ಕೆ ಅರ್ಹರು
ಶುಷ್ಕದೇಹಾನ್ ಪಿಪಾಸಾರ್ತಾನ್ ದುರ್ಬಲಾನಪಿ ಚ ದ್ರವೈಃ ।
ಪ್ರಕ್ಲಿನ್ನಕಾಯಾನ್ ವ್ರಣಿನಃ ಶುಷ್ಕೈರ್ಮೇಹಿನಮೇವ ಚ ॥
(ಸು. 907.)

ಒಣಗಿದ ಶರೀರದವರನ್ನೂ, ಬಾಯಾರಿಕೆಯಿಂದ ಪೀಡಿತರಾದವರನ್ನೂ, ದುರ್ಬಲರನ್ನೂ, ದ್ರವವಾದ ಆಹಾರಗಳಿಂದಲೂ, ದ್ರವದಿಂದ ವ್ಯಾಪ್ತವಾದ ಶರೀರದವರನ್ನೂ, ವ್ರಣಪೀಡಿತ ರಾದವರನ್ನೂ, ಬಹುಮೂತ್ರವ್ಯಾಧಿಯುಳ್ಳವರನ್ನೂ, ಶುಷ್ಕವಾದ ಆಹಾರಗಳಿಂದಲೂ, ಉಪ ಚರಿಸಬೇಕು

38. ಏಕಕಾಲಾಶನಕ್ಕೆ ಮತ್ತು ಉಭಯ ಕಾಲಾಶನಕ್ಕೆ ಅರ್ಹರು
ಏಕಕಾಲಂ ಭವೇದ್ದೇಯೋ ದುರ್ಬಲಾಗ್ನಿವಿವೃದ್ಧಯೇ ।
ಸಮಾಗ್ನಯೇ ತಥಾऽಹಾರೋ ದೇಯಃ ಕಾಲಮಥೋಭಯಂ॥
(ಸು. 907.)

ದುರ್ಬಲವಾದ ಅಗ್ನಿಯನ್ನು ವೃದ್ಧಿಮಾಡಬೇಕಾದ್ದಲ್ಲಿ ಆಹಾರವನ್ನು ಒಂದೇ ಸಲ (ಹಗಲು) ಕೊಡಬೇಕು. ಅಗ್ನಿಸಮವುಳ್ಳವರಿಗೆ ಎರಡು ಕಾಲಗಳಲ್ಲಿ (ಅಂದರೆ ಹಗಲೂ ರಾತ್ರಿಯೂ) ಆಹಾರವನ್ನು ಕೊಡತಕ್ಕದ್ದು.

39. ಔಷಧಾಹಾರಕ್ಕೆ ಅರ್ಹರು
ಔಷಧದ್ವೇಷಿಣೇ ದೇಯಸ್ತದೌಷಧಸಮಾಯುತಃ ॥
(ಸು. 907.)

ಔಷಧವನ್ನು ದ್ವೇಷಿಸುವವನಿಗೆ ಔಷಧ ಕೂಡಿದ ಆಹಾರವನ್ನು ಕೊಡಬೇಕು.

40. ಹೀನಮಾತ್ರಾ ಹಾರಕ್ಕೆ ಅರ್ಹರು
ಮಂದಾಗ್ನಯೇ ರೋಗಿಣೇ ಚ ಮಾತ್ರಾಹೀನಃ ಪ್ರಶಸ್ಯತೇ ।
(ಸು. 907.)

ಅಗ್ನಿ ಮಂದವಾಗಿ ಉಳ್ಳವನಿಗೆ ಮತ್ತು ರೋಗಿಗೆ ಆಹಾರವನ್ನು ಪ್ರಮಾಣಕ್ಕೆ ಕಡಿಮೆ ಯಾಗಿ ಕೊಡುವದು ಪ್ರಶಸ್ತ.

41. ದೋಷಪ್ರಶಮನಾಶನ
ಯಥಾರ್ಧದತ್ತಶ್ಚಾಹಾರೋ ದೋಷಪ್ರಶಮನಃ ಸ್ಮೃತಃ ।
(ಸು. 907.)

ದೋಷಪ್ರಶಮನ ಆಹಾರ ಎಂಬದು ಯಥಾರ್ಥವಾಗಿ (ಶಾಸ್ತ್ರಪ್ರಕಾರ ತಕ್ಕ ಹಾಗೆ) ಕೂಡಲ್ಪಟ್ಟ ಆಹಾರವಾಗಿರುತ್ತದೆ

42 ವೃತ್ಯರ್ಥಾಪಾ ರಕ್ಕೆ ಆರ್ಷರು ಅತಃ ಪರಂ ತು ಸ್ವಸ್ಥಾನಾಂ ವೃತ್ಯರ್ಥಂ ಸರ್ವಮೇವ ಚ ।

ವೃತ್ಯರ್ಥ (ಬದುಕುವದಕ್ಕೆ ಅಥವಾ ಆರೋಗ್ಯಸ್ಥಿತಿಯನ್ನು ಕಾಪಾಡುವದಕ್ಕ) ಆಹಾರ ವೆಂಬದು, ಸ್ವಸ್ವಸ್ಥಿತಿಯಲ್ಲಿರುವವರಿಗೆ ಅದು ಸರ್ವ ರಸಗಳಿಂದಲೂ ಮಿಶ್ರವಾದದ್ದಾಗಿರಬೇಕು

43 ಘೋಜನದಲ್ಲಿ ಸದಾಚಾರ

ನಾರತ್ನಪಾಣಿರ್ನಾಸ್ನಾತೋ ನೋಪಹತವಾಸಾ ನಾಽಜಪಿತ್ವಾ ನಾಹುತ್ವಾ ದೇವತಾಭ್ಯೋ ನಾಽನಿರೂಪ್ಯ ಪಿತೃಭ್ಯೋ ನಾಽದತ್ವಾ ಗುರುಭ್ಯೋ ನಾತಿಥಿಭ್ಯೋ ನೋಪಾಶ್ರಿತೇಭ್ಯೋ ನಾಪುಣ್ಯಗಂಧೋ ನಾಮಾಲೀ ನಾಪ್ರಕ್ಷಾಲಿತಪಾಣಿಪಾದವದನೋ ನಾಽಶುದ್ಧಮುಖೋ ನೋದಙ್ಮುಖೋ ನ ವಿಮಾನಾಭಕ್ತ್ಯಾತಿಷ್ಟಾಶುಚಿಕ್ಷುಧಿತಪರಿಜರೋ ನ ಪಾತ್ರೀಷ್ವಮೇಧ್ಯಾಸು ನಾದೇಶೇ ನಾಽಕಾಲೇ ನಾಕೀರ್ಣೇ ನಾಽದತ್ವಾಗ್ರಮಗ್ನಯೇ ನಾಪ್ರೋಕ್ಷಿತಂ ಪ್ರೋಕ್ಷಣೋದಕೈರ್ನ ಮಂತ್ರೈರನಭಿಮಂತ್ರಿತಂ ನ ಕುತ್ಸಯನ್ ನ ಕುತ್ಸಿತಂ ನ ಪ್ರತಿಕೂಲೋಪಹಿತಮನ್ನಮಾದದೀತ ।

(ಚ 47)

ರತ್ನಪಾಣಿಯಾಗದೆ (ಕೈಯಲ್ಲಿ ರತ್ನವನ್ನು ಧರಿಸದ), ಸ್ನಾನಮಾಡದೆ, ಅಶುಚಿಯಾದ ವಸ್ತ್ರವನ್ನು ಧರಿಸಿದವನಾಗಿ, ಜಪ ಮಾಡದೆ, ದೇವತೆಗಳಿಗಾಹುತಿ ಕೂಡದೆ, ಪಿತೃಗಳನ್ನು ತೃಪ್ತಿಪಡಿಸದೆ, ಗುರುಗಳಿಗೂ, ಅತಿಥಿಗಳಿಗೂ, ತನ್ನನ್ನಾಶ್ರಯಿಸಿಕೂಂಡವರಿಗೂ ಕೊಡದೆ, ಪುಣ್ಯಗಂಧ ಹಚ್ಚಿಕೊಳ್ಳದ, ಮಾಲೆ ಧರಿಸದೆ, ಕೈಗಳನ್ನೂ ಕಾಲುಗಳನ್ನೂ ಮತ್ತು ಮುಖವನ್ನೂ ತೊಳಕೊಳ್ಳದೆ, ಬಾಯಿಯನ್ನು ಶುಚಿಮಾಡಿಕೊಳ್ಳದೆ, ಉತ್ತರದಿಕ್ಕಿಗೆ ಮುಖವಾಗಿ, ಮಾನಹೀನರು, ತನ್ನಲ್ಲಿ ಭಕ್ತಿಯಿಲ್ಲದವರು, ಎಧೇಯರಲ್ಲದವರು, ಅಶುಚಿಯಾದವರು, ಹಸಿದವರು, ಇಂಥವರನ್ನು ಪರಿಚಾರಕರನ್ನಾಗಿಟ್ಟುಕೊಂಡು, ಕೊಳಕುಪಾತ್ರೆಗಳಲ್ಲಿ, ಯುಕ್ತವಲ್ಲದ ಸ್ಥಳದಲ್ಲಿ, ಯುಕ್ತವಲ್ಲದ ಕಾಲದಲ್ಲಿ, ಮರಯಿಲ್ಲದಲ್ಲಿ, ಅಗ್ರಭಾಗವನ್ನು ಅಗ್ನಿಗೆ ಕೂಡದೆ, ಪ್ರೋಕ್ಷಣೋದಕಗಳಿಂದ ಪ್ರೋಕ್ಷಿಸದೆ, ಮಂತ್ರಗಳಿಂದ ಮಂತ್ರಿಸದೆ, ಬಯ್ಯುತ್ತಾ ಬಯ್ಯಿಸಿಕೊಳ್ಳುತ್ತಾ, ಮತ್ತು ಪ್ರತಿಕೂಲವಾಗಿರಿಸಿದ, ಅನ್ನವನ್ನು ಉಣ್ಣಕೂಡದು

44 ಹಿಂದಿನ ದಿವಸದ ಆಹಾರ ನ ಪರ್ಯುಷಿತಮನ್ಯತ್ರ ಮಾಂಸಹರಿತಕಶುಷ್ಕಶಾಕ ಫಲಭಕ್ಷ್ಯೇಭ್ಯಃ । (ಚ 47)

ಮಾಂಸ, ಶಾಕ, ಒಣಗಿಸಿಟ್ಟ ಶಾಕ, ಹಣ್ಣುಗಳು ಮತ್ತು ಭಕ್ಷಗಳು ಅಲ್ಲದೆ ಬೇರ ಹಿಂದಿನ ದಿವಸದ (ತಂಗಳಾದ) ಯಾವ ಆಹಾರವನ್ನಾದರೂ ಉಣ್ಣಕೂಡದು

45. ವಲ್ಲೂರಂ ಶುಷ್ಕಶಾಕಾನಿ ಶಾಲೂಕಾನಿ ಏಸಾನಿ ಚ ।
ನಾಭ್ಯಸ್ಯೇದ್ಗೌರವಾನ್ಮಾಂಸಂ ಕೃಶಂ ನೈವೋಪಯೋಜಯೇತ್ ॥
ಕೂರ್ಚಿಕಾಂಶ್ಚ ಕಿಲಾಟಾಂಶ್ಚ ಶೌಕರಂ ಗವ್ಯಮಾವಿಷಂ ।
ಅಭ್ಯಾಸಕ್ಕೆ ಪ್ರಶಸ್ತಾಪ್ರಶಸ್ತ ಭೋಜನ ಪದಾರ್ಥಗಳು
ಮತ್ಸ್ಯಾನ್ ದಧಿ ಚ ಮಾಷಾಂಶ್ಚ ಯವಕಾಂಶ್ಚ ನ ಶೀಲಯೇತ್ ॥
ಷಷ್ಟಿಕಾನ್ ಶಾಲಿಮುದ್ಗಾಂಶ್ಚ ಸೈಂಧವಾಮಲಕೇ ಯವಾನ್ ।
ಆಂತರಿಕ್ಷಂ ಪಯಃ ಸರ್ಪಿರ್ಜಾಂಗಲಂ ಮಧು ಚಾಭ್ಯಸೇತ್ ॥
ತಚ್ಚ ನಿತ್ಯಂ ಪ್ರಯುಂಜೀತ ಸ್ವಾಸ್ಥ್ಯಂ ಯೇನಾನುವರ್ತತೇ ।
ಅಜಾತಾನಾಂ ವಿಕಾರಾಣಾಮನುತ್ಪತ್ತಿಕರಂ ಚ ಯತ್ ॥ (ಚ. 26.)

ಒಣಗಿಸಿದ ಮಾಂಸ, ಒಣಗಿಸಿಟ್ಟ ಶಾಕಗಳು, ಕೆಸರಲ್ಲಿ ಬೆಳೆದ ಗಡ್ಡೆಗೆಣಸುಗಳು, ದಂಟುಗಳು, ಇವುಗಳು ಗುರುವಾದದ್ದರಿಂದ ಅಭ್ಯಾಸಮಾಡಬಾರದು. ಕೃಶವಾದ ಮಾಂಸವನ್ನು ಯಾವಾಗಲೂ ಉಪಯೋಗಿಸಕೂಡದು. ಹಾಲುಗಟ್ಟಿ, ಮೊಸರುಗಟ್ಟಿ, ಹಂದಿಮಾಂಸ, ಗೋಮಾಂಸ, ಮೀನುಗಳು, ಮೊಸರು, ಉದ್ದು, ಯವಕ (ಗೋದಿ), ಇವುಗಳನ್ನು ಶೀಲವಾಗಿ ಉಪಯೋಗಿಸಬಾರದು. ಷಷ್ಟಿಕ ಅಕ್ಕಿ, ಶಾಲ್ಯಕ್ಕಿ, ಹೆಸರು, ಸೈಂದುಪ್ಪು, ನೆಲ್ಲಿ, ಯವೆ, ಅಂತರಿಕ್ಷದ ನೀರು, ಹಾಲು. ತುಪ್ಪ, ಜಾಂಗಲ (ಜಂಗಲೀ ಮೃಗಪಕ್ಷಿಗಳ) ಮಾಂಸ, ಜೇನು, ಇವುಗಳನ್ನು ಅಭ್ಯಾಸಮಾಡತಕ್ಕದ್ದು. ಯಾವದು ಸ್ವಸ್ಥಸ್ಥಿತಿಯನ್ನು ಕಾಪಾಡಿ, ಹುಟ್ಟಿರದ ರೋಗಗಳನ್ನು ಹುಟ್ಟದ ಹಾಗೆ ಮಾಡುತ್ತದೋ, ಅದನ್ನು ನಿತ್ಯದಲ್ಲೂ ಹೆಚ್ಚಾಗಿ ಉಪಯೋಗಿಸಬೇಕು.

46. ಶರದ್ಗ್ರೀಷ್ಮವಸಂತೇಷು ಪ್ರಾಯಶೋ ದಧಿ ಗರ್ಹಿತಂ ।
ಮೊಸರುವರ್ಜ್ಯ ಋತುಗಳು
ಹೇಮಂತೇ ಶಿಶಿರೇ ಚೈವ ವರ್ಷಾಸು ದಧಿ ಶಸ್ಯತೇ ॥
(ಸು. 178.)

ಶರತ್ತು, ಗ್ರೀಷ್ಮ ಮತ್ತು ವಸಂತಋತುಗಳಲ್ಲಿ ಮೊಸರು ಹೆಚ್ಚಿನ ಪಕ್ಷ ಅಹಿತ. ಹೇಮಂತ, ಶಿಶಿರ ಮತ್ತು ವರ್ಷಋತುಗಳಲ್ಲಿ ಮೊಸರು ಪ್ರಶಸ್ತ.

47. ಲವಣಾಂಬುಸಮಾಯುಕ್ತಂ ದಧಿ ಶಸ್ತಂ ನಿಶಿ ಧ್ರುವಂ ।
ಜ್ವರಾಸೃಕ್ಪಿತ್ತವೈಸರ್ಪಿಕುಷ್ಠಿನಾಂ ಪಾಂಡುರೋಗಿಣಾಂ ॥
ಮೊಸರುವರ್ಜ್ಯ ರೋಗಗಳು
ಸಂಪ್ರಾಪ್ತಕಾಮಲಾನಾಂ ಚ ಶೋಫಿನಾಂ ಚ ವಿಶೇಷತಃ ।
ವಿಶೇಷಾದ್ಯಕ್ಷ್ಮರೋಗೇ ಚ ಅಪಸ್ಮಾರೇ ಚ ಪೀನಸೇ ॥
ಪ್ರತಿಶ್ಯಾಯಾರ್ದಿತಾನಾಂ ಚ ಭೋಜನೇ ನ ಹಿತಂ ದಧಿ । (ಹಾರೀತ. 39-40.)

ಉಪ್ಪು ಮತ್ತು ನೀರು ಕೂಡಿಸಿದ ಮೊಸರು ರಾತ್ರಿಯಲ್ಲಿ ಉಪಯೋಗಿಸಬಹುದು. ಜ್ವರ, ರಕ್ತಪಿತ್ತ, ವಿಸರ್ಪ, ಕುಷ್ಠ, ಪಾಂಡು, ಕಾಮಲೆ, ಅಪಸ್ಮಾರ ಮತ್ತು ಪೀನಸ, ಈ ರೋಗಗಳಲ್ಲಿ, ವಿಶೇಷವಾಗಿ ಶೋಫ ಮತ್ತು ಯಕ್ಷ್ಮರೋಗದವರಿಗೆ, ಮತ್ತು ನೆಗಡಿಯಿಂದ ಪೀಡಿತರಾದವರಿಗೆ, ಭೋಜನಕ್ಕೆ ಮೊಸರು ಹಿತವಲ್ಲ.

48. ಭೋಜನಾನಂತರದಂತಶೋಧನ
ದಂತಾಂತರಗತಂ ಚಾನ್ನಂ ಶೋಧನೇನಾಹರೇಚ್ಛನೈಃ ।
ಕುರ್ಯಾದನಾಹೃತಂ ತದ್ಧಿ ಮುಖಸ್ಯಾನಿಷ್ಟಗಂಧತಾಂ ॥
(ಸು. 237.)

ಹಲ್ಲುಗಳ ಎಡೆ ಸೇರಿಕೊಂಡ ಅನ್ನವನ್ನು ಮೆಲ್ಲನೆ (ಹುಲ್ಲುಕಡ್ಡಿ ಮುಂತಾದ್ದರಿಂದ) ತೆಗೆದು ಶುಚಿಮಾಡಬೇಕು. ಹಾಗೆ ತೆಗೆಯದೆ ಬಿಟ್ಟರೆ, ಅದರಿಂದ ಬಾಯಿಯಲ್ಲಿ ದುರ್ವಾಸನೆ ಉಂಟಾಗುವದು.

49. ಭೋಜನದಿಂದ ವಾತ ಪಿತ್ತ ಕಫ ವೃದ್ಧಿ
ಜೀರ್ಣೇ ಽನ್ನೇ ವರ್ಧತೇ ವಾಯುರ್ವಿದಗ್ಧೇ ಪಿತ್ತಮೇವ ತು ।
ಭುಕ್ತಮಾತ್ರೇ ಕಫಶ್ಚಾಪಿ ತಸ್ಮಾದ್ಭುಕ್ತೇ ಹರೇತ್ಕಫಂ ॥
(ಸು. 237.)

ಅನ್ನವು ಜೀರ್ಣವಾದಾಗ್ಗೆ ವಾಯು, ಕಿಂಚಿತ್ ಪಾಕವಾದಾಗ್ಗೆ ಪಿತ್ತವು, ಮತ್ತು ಉಂಡ ಕೂಡಲೇ ಕಫವು, ವೃದ್ಧಿಯಾಗುತ್ತದಾದ್ದರಿಂದ, ಉಂಡ ಮೇಲೆ ಕಫವನ್ನು ತೆಗೆದುಬಿಡಬೇಕು.

50. ಭೋಜನಾನಂತರದ ಕರ್ಯಾ
ಭುಕ್ತ್ವಾ ರಾಜವದಾಸೀತ ಯಾವದನ್ನಕ್ಲಮೋ ಗತಃ ।
ತತಃ ಪದಶತಂ ಗತ್ವಾ ವಾಮಪಾರ್ಶ್ವೇ ತು ಸಂವಿಶೇತ್ ॥
ಶಬ್ದರೂಪರಸಾನ್ ಗಂಧಾನ್ ಸ್ಪರ್ಶಾಂಶ್ಚ ಮನಸಃ ಪ್ರಿಯಾನ್ ।
ಭುಕ್ತವಾನುಪಸೇವೇತ ತೇನಾನ್ನಂ ಸಾಧು ತಿಷ್ಠತಿ ॥
ಶಬ್ದ-ರೂಪ-ರಸ-ಸ್ಪರ್ಶ-ಗಂಧಾಶ್ಚಾಪಿ ಜುಗುಪ್ಸಿತಾಃ ।
ಅಶುಚ್ಯನ್ನಂ ತಥಾ ಭುಕ್ತಮತಿಹಾಸ್ಯಂ ಚ ವಾಮಯೇತ್ ॥
ಶಯನಂ ಚಾಸನಂ ವಾಪಿ ನೇಚ್ಛೇದ್ವಾಪಿ ದ್ರವೋತ್ತರಂ ।
ನಾಗಾ‍್ಯತಪೌ ನ ಪ್ಲವನಂ ನ ಯಾನಂ ನಾಪಿ ವಾಹನಂ ॥ (ಸು. 238.)

ಉಂಡ ಮೇಲೆ ಅನ್ನದ ಆಯಾಸ ಹೋಗುವ ವರೆಗೆ ರಾಜನಂತೆ ಕೂತು, ಅನಂತರ ನೂರು ಹೆಜ್ಜೆ ನಡೆದು, ಎಡಪಾರ್ಶ್ವದ ಮೇಲೆ ಮಲಗಬೇಕು. ಉಂಡ ಮೇಲೆ ಮನಸ್ಸಿಗೆ ಪ್ರಿಯವಾದ ಶಬ್ದ, ರೂಪ, ರಸ. ಗಂಧ, ಸ್ಪರ್ಶಗಳನ್ನೇ ಸೇವಿಸಿದ್ದಲ್ಲಿ ಆಹಾರವು ಒಳ್ಳೇದಾಗಿ (ಜೀರ್ಣಕ್ಕೆ ಹಿತವಾಗಿ) ನಿಲ್ಲುವದು. ಅಹಿತವಾದ ಶಬ್ದ, ರೂಪ, ರಸ, ಸ್ಪರ್ಶ ಮತ್ತು ಗಂಧ, ಅಶುಚಿಯಾದ ಅನ್ನ ಮತ್ತು ಅತಿ ಹಾಸ್ಯ, ಉಂಡದ್ದನ್ನು ವಾಂತಿಮಾಡಿಸುವದು. ದ್ರವಪದಾರ್ಥಗಳನ್ನು ಸೇವಿಸಿ ಶಯನವನ್ನಾಗಲಿ, ಆಸನವನ್ನಾಗಲಿ, ಅಪೇಕ್ಷಿಸಬಾರದು. ಬೆಂಕಿ, ಬಿಸಿಲು, ಹಾರೋಣ, ಯಾನ, ವಾಹನ ಸಹ ವರ್ಜ್ಯವಾಗಿರುತ್ತವೆ.

ಪರಾ 'ಪ್ಲವನ' ಎಂದರೆ ಸ್ನಾನ ಅಥವಾ ನೀರನ್ನು ದಾಟುವದು ಎಂತ ಸಿ ಸಂ ವ್ಯಾ

ವ್ಯಾಯಾಮಂ ಚ ವ್ಯವಾಯಂ ಚ ಧಾವನಂ ಯಾನಮೇವ ಚ ।
ಯುದ್ಧಂ ಗೀತಂ ಚ ಪಾರಂ ಚ ಮುಹೂರ್ತಂ ಭುಕ್ತವಾನ್ತ್ಯಜೇತ್ ॥
(ನಿ. ರತ್ನಾಕರ.)

ವ್ಯಾಯಾಮ, ಮೈಥುನ, ಓಡುವದು, ಯಾನ, ಯುದ್ಧ, ಹಾಡುವದು, ಪಾರ ಮಾಡುವದು, ಇವುಗಳನ್ನು ಉಂಡು ಒಂದು ಮುಹೂರ್ತದ ವರೆಗೆ ಬಿಡಬೇಕು.

XI ನೇ ಅಧ್ಯಾಯ.

(ಭೋಜನೇತರ) ದಿನಚರ್ಯಗಳು.

1. ಮೇಧ್ಯಂ ಪವಿತ್ರಮಾಯುಷ್ಯಮಲಕ್ಷ್ಮೀಕಲಿನಾಶನಂ ।
ಶೌಚ ಪಾದಯೋರ್ಮಲಮಾರ್ಗಾಣಾಂ ಶೌಚಾಧಾನಮಭೀಕ್ಷ್ಣಶಃ ॥
(ಚ. 33.)

ಪಾದಗಳನ್ನೂ, ಮಲದ್ವಾರಗಳನ್ನೂ ಪದೇ ಪದೇ ತೊಳೆದು ಶುಚಿಮಾಡಿಕೊಳ್ಳುವದರಿಂದ, ಬುದ್ಧಿಪ್ರಸನ್ನತೆಯೂ, ಆಯುಸ್ಸೂ, ಪವಿತ್ರತೆಯೂ, ವೃದ್ಧಿಯಾಗುವದಲ್ಲದೆ, ದರಿದ್ರತೆಯೂ ಕಲಿಯೂ ನಾಶವಾಗುವವು.

2. ಪಾದಪ್ರಕ್ಷಾಲನಂ ಪಾದಮಲರೋಗಶ್ರಮಾಪಹಂ ।
ಪಾದಪ್ರಕ್ಷಾಲನ ಚಕ್ಷುಃಪ್ರಸಾದನಂ ವೃಷ್ಯಂ ರಕ್ಷೋಘ್ನಂ ಪ್ರೀತಿವರ್ಧನಂ ॥
(ಸು. 505-06.)

ಪಾದಗಳನ್ನು ತೊಳೆಯುವದರಿಂದ ಪಾದಗಳ ಮಲವೂ, ರೋಗವೂ, ಶ್ರಮವೂ, ಪರಿಹಾರವಾಗುವವಲ್ಲದೆ, ದೃಷ್ಟಿಯು ಪ್ರಸನ್ನತೆ ಹೊಂದುತ್ತದೆ; ವೀರ್ಯವೂ ಪ್ರೀತಿಯೂ ವೃದ್ಧಿಯಾಗುತ್ತವೆ; ಮತ್ತು ರಕ್ಷೋಬಾಧೆಯು ನಾಶವಾಗುವದು.

3. ತತ್ರಾದೌ ದಂತಪವನಂ ದ್ವಾದಶಾಂಗುಲಮಾಯತಂ ।
ಕನಿಷ್ಠಿಕಾಪರೀಣಾಹಮೃಜ್ವಗ್ರಂಥಿತಮವ್ರಣಂ ॥
ಅಯುಗ್ಮಗ್ರಂಥಿ ಯಚ್ಚಾಪಿ ಪ್ರತ್ಯಗ್ರಂ ಶಸ್ತಭೂಮಿಜಂ ।
ಅವೇಕ್ಷ್ಯರ್ತುಂ ಚ ದೋಷಂ ಚ ರಸಂ ವೀರ್ಯಂ ಚ ಯೋಜಯೇತ್ ॥
ಕಷಾಯಂ ಮಧುರಂ ತಿಕ್ತಂ ಕಟುಕಂ ಪ್ರಾತರುತ್ಥಿತಃ ।
ನಿಂಬಶ್ಚ ತಿಕ್ತಕೇ ಶ್ರೇಷ್ಠಃ ಕಷಾಯೇ ಖದಿರಸ್ತಥಾ ॥
ಮಧೂಕೋ ಮಧುರೇ ಶ್ರೇಷ್ಠಃ ಕರಂಜಃ ಕಟುಕೇ ತಥಾ ।
ಕ್ಷೌದ್ರವ್ಯೋಷತ್ರಿವರ್ಗಾಕ್ತಂ ಸತೈಲಂ ಸೈಂಧವೇನ ಚ ॥
ಚೂರ್ಣೇನ ತೇಜೋವತ್ಯಾಶ್ಚ ದಂತಾನ್ನಿತ್ಯಂ ವಿಶೋಧಯೇತ್ ।
ದಂತಪವನಕ್ರಮ ಏಕೈಕಂ ಘರ್ಷಯೇದ್ದಂತಂ ಮೃದುನಾ ಕೂರ್ಚಕೇನ ಚ ॥
ದಂತಶೋಧನಚೂರ್ಣೇನ ದಂತಮಾಂಸಾನ್ಯಬಾಧಯನ್ ।
ತದ್ವಾರ್ಗಂಧ್ಯೋಪದೇಹೌ ತು ಶ್ಲೇಷ್ಮಾಣಂ ಚಾಪಕರ್ಷತಿ ॥
ವೈಶದ್ಯಮನ್ನಾಭಿರುಚಿಂ ಸೌಮನಸ್ಯಂ ಕರೋತಿ ಚ ।
ನ ಖಾದೇದ್ಗಲತಾಲ್ವೋಷ್ಠಜಿಹ್ವಾರೋಗಸಮುದ್ಭವೇ ॥
ಅಥಾಸ್ಯಪಾಕೇ ಶ್ವಾಸೇ ಚ ಕಾಸಹಿಕ್ಕಾವಮಿಷು ಚ ।
ದುರ್ಬಲೋ ಜೀರ್ಣಭಕ್ತಶ್ಚ ಮೂರ್ಚ್ಛಾರ್ತೋ ಮದಪೀಡಿತಃ ॥

ಶಿರೋರುಗಾರ್ತಸ್ತ್ಯಷಿತಃ ಶ್ರಾಂತಃ ಪಾಕಕ್ಲಮಾನ್ವಿತಃ ।
ಅರ್ದಿತೋ ಕರ್ಣಶೂಲೀ ಚ ದಂತರೋಗೀ ಚ ಮಾನವಃ ॥
(ಸು. 500-501.)

ಬೆಳಿಗ್ಗೆ ಎದ್ದ ಮೇಲೆ, ಪ್ರಥಮತಃ ಹನ್ನೆರಡಂಗುಲ ಉದ್ದವಾದ, ಕಿರಿಬೆರಳಷ್ಟು ತೋರವಾದ, ನೆಟ್ಟಗಾದ, ಒಂದೇ ತುಂಡಾದ, ಹುಣ್ಣಿಲ್ಲದ, ಜೋಡಲ್ಲದ ಗಂಟುಳ್ಳ, ಹೊಸತಾದ, ಪ್ರಶಸ್ತ ಸ್ಥಳದಲ್ಲಿ ಬೆಳೆದ, ಋತು, ದೋಷ, ರಸ ಮತ್ತು ವೀರ್ಯ, ಇವುಗಳ ವಿಚಾರದ ಮೇಲೆ ಯುಕ್ತವಾದ, ಚೊಗರು, ಸೀ, ಕಹಿ, ಅಥವಾ ಖಾರ, ರುಚಿಯುಳ್ಳ, ಹಲ್ಲು ಉಜ್ಜುವ ಕಡ್ಡಿಯನ್ನು ಸಂಗ್ರಹಿಸಬೇಕು. ಕಹಿ ಜಾತಿಯಲ್ಲಿ ಕಹಿಬೇವು, ಚೊಗರು ಜಾತಿಯಲ್ಲಿ ಖದಿರಮರ, ಸೀ ಜಾತಿಯಲ್ಲಿ ಇಪ್ಪೆಮರ, ಖಾರ ಜಾತಿಯಲ್ಲಿ ಕಾಡು ಹಲ್ಲೆಮರ (ಹೊಂಗೆ), ಶ್ರೇಷ್ಠವಾದದ್ದು. ಆ ಕಡ್ಡಿಯ ತುದಿಯನ್ನು ಕೂರ್ಚಮಾಡಿಕೊಳ್ಳಬೇಕು. ಒಣಶುಂಠಿ, ಹಿಪ್ಪಲಿ, ಮೆಣಸು, ದಾಲ್ಚೀನಿ ಕೆತ್ತೆ, ಯಾಲಕ್ಕಿ, ಮತ್ತು ಪಚ್ಚೆಲೆ, (ಅಥವಾ ದಾಲ್ಚೀನಿ ಎಲೆ), ಇವುಗಳ ಪುಡಿಗೆ ಜೇನು ಮತ್ತು ಎಣ್ಣೆ ಕೂಡಿಸಿ ಕಲಸಿ ಆ ಕೂರ್ಚಕ್ಕೆ ತಾಗಿಸಿಕೊಂಡು ಅದರಿಂದಲೂ, ಸೈಂಧವ ಲವಣದ ಪುಡಿ ಕೂಡಿಸಿದ ತೇಜೋವತಿಯ ಚೂರ್ಣದಿಂದಲೂ, ಹಲ್ಲುಗಳನ್ನು ನಿತ್ಯದಲ್ಲೂ ಶುಚಿಮಾಡಬೇಕು. ಹಲ್ಲಿನ ಮಾಂಸಗಳಿಗೆ ಬಾಧಕ ಬಾರದ ರೀತಿಯಲ್ಲಿ ಮೃದುವಾದ ಕೂರ್ಚದಿಂದಲೂ, ದಂತಶೋಧನದ ಚೂರ್ಣದಿಂದಲೂ ಹಲ್ಲುಗಳನ್ನು ಒಂದೊಂದಾಗಿ ಉಜ್ಜಬೇಕು. ಅದರಿಂದ ಹಲ್ಲಿಗೆ ಹಿಡುಕೊಂಡ ಮಲವೂ, ದುರ್ವಾಸನೆಯೂ, ಕಫವೂ, ಹೋಗಿ ನಿರ್ಮಲತೆಯೂ, ಅನ್ನದ ರುಚಿಯೂ, ಮನಃಸಂತೋಷವೂ, ಉಂಟಾಗುತ್ತವೆ. ಗಂಟಲು, ತಾಲು, ತುಟಿ, ನಾಲಿಗೆ, ಇವುಗಳಿಗೆ ಸಂಬಂಧ ಪಟ್ಟ ರೋಗಗಳಲ್ಲಿಯೂ, ಬಾಯಿಹುಣ್ಣು, ಉಬ್ಬಸ, ಕೆಮ್ಮು, ಬಿಕ್ಕಟ್ಟು ಮತ್ತು ವಾಂತಿ, ಈ ವ್ಯಾಧಿಗಳಲ್ಲಿಯೂ, ಬಲಹೀನನಾದವನೂ, ಹಸಿದವನೂ, ಮದ-ಮೂರ್ಚೆಗಳಿಂದ ಪೀಡಿತನಾದವನೂ, ಶಿರೋರೋಗವುಳ್ಳವನೂ, ಬಾಯಾರಿದವನೂ, ಶ್ರಮಪಟ್ಟವನೂ, ಪಚನಾಯಾಸವುಳ್ಳವನೂ, ಅರ್ದಿತರೋಗವುಳ್ಳವನೂ, ಕಿವಿಶೂಲೆಯವನೂ, ಹಲ್ಲಿನ ರೋಗವುಳ್ಳವನೂ, ದಂತ ಉಜ್ಜುವ ಕಡ್ಡಿಯನ್ನು ಉಪಯೋಗಿಸಬಾರದು.

4. ಕೇಪ್ಯತ್ರ ಕರವೀರಾರ್ಕಕರಂಜಬಕುಲಾಸನಾನ್ ।
ದಂತಕಾಷ್ಠಾರ್ಥಮನ್ಯೇ ತು ಸರ್ವಾನ್ಕಂಟಕಿನೋ ವಿದುಃ ॥
ದಂತಕಾಷ್ಠ ಗುವಾಕತಾಲಹಿಂತಾಲಖರ್ಜೂರೈಃ ಕೇತಕೀಯುತೈಃ ।
ನಾರಿಕೇಲೇನ ತಾಡ್ಯಾ ಚ ನ ಕುರ್ಯಾದ್ದಂತಧಾವನಂ ॥
(ರಾ. ವ. 6-4)

ದಂತಕಾಷ್ಠವಾಗಿ ಉಪಯೋಗಿಸುವದಕ್ಕೆ ಕೆಲವರು ಕಣಿಗಲು, ಎಕ್ಕೆ, ಕಾಡುಹಲ್ಲೆ (ಹೊಂಗೆ), ರೆಂಜೆ, ಅಸನ (ಬೇಬ), ಈ ಮರಗಳನ್ನು ಹೇಳುತ್ತಾರೆ; ಬೇರೆಯವರು ಮುಳ್ಳುಳ್ಳ ಸರ್ವ ಮರಗಳೂ ಆಗಬಹುದೆನ್ನುತ್ತಾರೆ. ಕಂಗು, ತಾಳಿ, ಹಿಂತಾಳಿ, ಖರ್ಜೂರ, ಕೇದಕೆ, ತೆಂಗು, ಬಳ್ಳಿತಾಳಿ, ಈ ವೃಕ್ಷಗಳ ಕಡ್ಡಿಯನ್ನು ಹಲ್ಲುಜ್ಜುವದಕ್ಕೆ ಉಪಯೋಗಿಸಬಾರದು.

ಕರಂಜಕರವೀರಾರ್ಕಮಾಲತೀಕಕುಭಾಸನಾಃ ।
ಶಸ್ಯಂತೇ ದಂತಪವನೇ ಯೇ ಚಾಪ್ಯೇವಂ ವಿಧಾ ದ್ರುಮಾಃ ॥
(ಜ. 31.)

ಹೊಂಗೆ, ಕಣಿಗಲು, ಎಕ್ಕೆ, (ಮಾಲತೀ) ಜಾಜಿ, ಮತ್ತಿ, ಬೇಜ, ಮತ್ತು ಈ ವಿಧವಾದ ಬೇರೆ ಮರಗಳು ಹಲ್ಲುಜ್ಜುವ ಕಡ್ಡಿಗೆ ಪ್ರಶಸ್ತವಾಗಿರುತ್ತವೆ.

5. ಪೌಷ್ಟಿಕಂ ವೃಷ್ಯಮಾಯುಷ್ಯಂ ಶುಚಿರೂಪವಿರಾಜನಂ ।
ಕ್ಷಾರ ಕೇಶಶ್ಮಶ್ರುನಖಾದೀನಾಂ ಕಲ್ಪನಂ ಸಂಪ್ರಸಾಧನಂ ॥
(ಜ. 33.)

ತಲೆಕೂದಲು, ಮಿಾಸೆ, ಉಗುರು ಮುಂತಾದವುಗಳನ್ನು ಕತ್ತರಿಸಿ ಚಂದಮಾಡುವದ ರಿಂದ ಶುಚಿತ್ವವೂ, ರೂಪಪ್ರಕಾಶವೂ, ಆಯುಸ್ಸೂ, ಪುಷ್ಟಿಯೂ, ವೀರ್ಯವೂ, ವೃದ್ಧಿ ಯಾಗುವವು.

ಪಾಪೋಪಶಮನಂ ಕೇಶನಖರೋಮಾಪಮಾರ್ಜನಂ ।
ಹರ್ಷ - ಲಾಘವ - ಸೌಭಾಗ್ಯಕರಮುತ್ಸಾಹವರ್ಧನಂ ॥
(ಸು. 506.)

ಕೂದಲು, ರೋಮ, ಉಗುರುಗಳನ್ನು ತೆಗೆದುಬಿಡುವದರಿಂದ, ಪಾಪವು ಉಪಶಮನ ವಾಗಿ, ಹರ್ಷ, ಲಘುತ್ವ ಮತ್ತು ಸೌಭಾಗ್ಯ ಉಂಟಾಗುವವು, ಮತ್ತು ಉತ್ಸಾಹವು ಹೆಚ್ಚು ವದು.

ತ್ರಿಃಪಕ್ಷಸ್ಯ ಕೇಶಶ್ಮಶ್ರುಲೋಮನಖಾನಾ ಸಂಹಾರಯೇತ್ । (ಜ. 45.)

ಒಂದು ಪಕ್ಷದಲ್ಲಿ ಮೂರು ಸರ್ತಿ ಕೂದಲು, ಮಿಾಸೆ, ರೋಮ, ಮತ್ತು ಉಗುರು, ಇವು ಗಳನ್ನು ಸರಿಯಾಗಿ ತೆಗಿಸಬೇಕು.

ಪಂಚರಾತ್ರಾನ್ನಖಶ್ಮಶ್ರುಕೇಶರೋಮಾಣಿ ಕರ್ತಯೇತ್ ॥ (ಭಾ. ಪ್ರ. 46.)

ಮಿಾಸೆ, ಕೂದಲು, ಉಗುರು, ಮತ್ತು ರೋಮಗಳನ್ನು ಐದು ದಿನಗಳಿಗೊಮ್ಮೆ ಕತ್ತರಿಸ ತಕ್ಕದ್ದು.

ಉತ್ಪಾಟಯೇತ್ತು ಲೋಮಾನಿ ನಾಸಾಯಾ ನ ಕದಾಚನ ।
ತದುತ್ಪಾಟನತೋ ದೃಷ್ಟೇರ್ದೌರ್ಬಲ್ಯಂ ತ್ವರಯಾ ಭವೇತ್ ॥
(ಭಾ. ಪ್ರ. 46.)

ಮೂಗಿನೊಳಗಿನ ರೋಮಗಳನ್ನು ಯಾವಾಗಲಾದರೂ ಕೀಳಿಸಬಾರದು; ಹಾಗೆ ಕಿತ್ತದ್ದ ರಿಂದ ಬೇಗನೇ ದೃಷ್ಟಿಯು ಬಲಹೀನವಾಗುವದು.

6. ಕೇಶಪಾಶೇ ಪ್ರಕುರ್ವೀತ ಪ್ರಸಾಧ್ಯಸ್ಯ ಪ್ರಸಾಧನಂ ।

ಕೂದಲ ಬಾಚೋಣ

ಕೇಶಪ್ರಸಾಧನಂ ಕೇಶ್ಯಂ ರಜೋಜಂತುಮಲಾಪಹಂ ||
(ಭಾ. ಪ್ರ. 46.)

ಜುಟ್ಟಿನಲ್ಲಿ ಬಾಚಬಹುದಾದ್ದನ್ನು ಬಾಚಿ ಸರಿಪಡಿಸಬೇಕು. ಹಾಗೆ ಕೂದಲನ್ನು ಬಾಚುವದರಿಂದ ದೂಳು, ಹೇನು, ಮತ್ತು ಮಲ ಹೋಗಿ, ಕೂದಲುಗಳು ಬೆಳೆಯುವವು.

7 ನಿದ್ರಾದಾಹಶ್ರಮಹರಂ ಸ್ವೇದಕಂಡೂತೃಷಾಪಹಂ |
ಹೃದ್ಯಂ ಮಲಹರಂ ಶ್ರೇಷ್ಠಂ ಸರ್ವೇಂದ್ರಿಯವಿಶೋಧನಂ ||
ತಂದ್ರಾಪಾಪೋಪಶಮನಂ ತುಷ್ಟಿದಂ ಪುಂಸ್ತ್ವವರ್ಧನಂ |
ರಕ್ತಪ್ರಸಾದನಂ ಚಾಪಿ ಸ್ನಾನಮಗ್ನೇಶ್ಚ ದೀಪನಂ ||
ಉಷ್ಣೇನ ಶಿರಸಃ ಸ್ನಾನಮಹಿತಂ ಚಕ್ಷುಷಃ ಸದಾ |
ಶೀತೇನ ಶಿರಸಃ ಸ್ನಾನಂ ಚಕ್ಷುಷ್ಯಮಿತಿ ನಿರ್ದಿಶೇತ್ ||

ಸ್ನಾನ ಶ್ಲೇಷ್ಮಮಾರುತಕೋಪೇ ತು ಜ್ಞಾತ್ವಾ ವ್ಯಾಧಿಬಲಾಬಲಂ |
ಕಾಮಮುಷ್ಣಂ ಶಿರಃಸ್ನಾನಂ ಭೈಷಜ್ಯಾರ್ಧಂ ಸಮಾಚರೇತ್ ||
ಅತಿಶೀತಾಂಬು ಶೀತೇ ಚ ಶ್ಲೇಷ್ಮಮಾರುತಕೋಪನಂ |
ಅತ್ಯುಷ್ಣಮುಷ್ಣಕಾಲೇ ಚ ಪಿತ್ತಶೋಣಿತವರ್ಧನಂ ||
ತಚ್ಚಾತಿಸಾರ-ಜ್ವರಿತ-ಕರ್ಣಶೂಲಾನಿಲಾರ್ತಿಷು |
ಆಧ್ಮಾನಾರೋಚಕಾಜೀರ್ಣಭುಕ್ತವತ್ಸು ಚ ಗರ್ಹಿತಂ ||
(ಸು. 504-505.)

ಸ್ನಾನವು ಸಂತೋಷಕರ, ತೃಪ್ತಿಕರ, ಒಳ್ಳೇ ಮಲಹರ ಅದರಿಂದ ನಿದ್ರೆ, ಉರಿ, ಶ್ರಮ, ಬೆವರು, ತುರಿ, ಬಾಯಾರಿಕೆ, ಆಲಸ್ಯ, ಮತ್ತು ಕಲಿ ಹೋಗುವದಲ್ಲದೆ, ಪುಂಸ್ತ್ವವೃದ್ಧಿ, ಅಗ್ನಿ ದೀಪನ, ಸರ್ವ ಇಂದ್ರಿಯಗಳ ಶುದ್ಧಿ, ಮತ್ತು ರಕ್ತಪ್ರಸನ್ನತೆ ಉಂಟಾಗುವವು. ತಲೆಸ್ನಾನವನ್ನು ಬಿಸಿನೀರಿನಿಂದ ಮಾಡುವದು ಯಾವಾಗಲೂ ಕಣ್ಣಿಗೆ ಅಹಿತವೆಂತಲೂ, ತಣ್ಣೀರಿನಿಂದ ತಲೆಸ್ನಾನಮಾಡುವದು ಕಣ್ಣಿಗೆ ಹಿತವೆಂತಲೂ, ಹೇಳಬೇಕು. ಆದರೆ ಕಫವಾತ ಪ್ರಕೋಪಗೊಂಡಾಗ್ಗೆ, ವ್ಯಾಧಿಯ ಬಲಾಬಲ ನೋಡಿಕೊಂಡು, ಔಷಧವಾಗಿ, ತಲೆಸ್ನಾನವನ್ನು ಬಿಸಿನೀರಿನಿಂದ ಬೇಕಾದಷ್ಟು ಮಾಡಬಹುದು. ಶೀತಕಾಲದಲ್ಲಿ ಅತಿತಣ್ಣಗಾದ ನೀರಿನ ಸ್ನಾನದಿಂದ ಕಫವಾತಗಳು ಪ್ರಕೋಪಗೊಳ್ಳುವವು ಮತ್ತು ಉಷ್ಣಕಾಲದಲ್ಲಿ ಅತಿಬಿಸಿಯಾದ ನೀರಿನ ಸ್ನಾನದಿಂದ ರಕ್ತಪಿತ್ತವು ವೃದ್ಧಿಯಾಗುವದು. ಅತಿಸಾರ, ಜ್ವರ, ಕಿವಿಶೂಲೆ, ವಾತರೋಗ, ಹೊಟ್ಟೆಯುಬ್ಬರ, ಅರುಚಿ, ಅಜೀರ್ಣ, ಈ ರೋಗಗಳಲ್ಲಿಯೂ, ಊಟಮಾಡಿದವರಿಗೂ, ಸ್ನಾನವು ನಿಂದಿತವಾದದ್ದಾಗಿರುತ್ತದೆ.

8. ಅಭ್ಯಂಗೋ ಮಾರ್ದವಕರಃ ಕಫವಾತನಿರೋಧನಃ |

ಅಭ್ಯಂಗ ಧಾತೂನಾಂ ಪುಷ್ಟಿಜನನೋ ಮೃಜಾವರ್ಣಬಲಪ್ರದಃ ||
(ಸು. 502.)

ಶರೀರಕ್ಕೆ ತೈಲಾಭ್ಯಂಗಮಾಡುವದರಿಂದ ಮೈ ಮೃದುವಾಗಿ, ಧಾತುಗಳು ಪುಷ್ಟಿಯಾಗುವವು; ನಿರ್ಮಲತೆ, ವರ್ಣ, ಮತ್ತು ಬಲ ವೃದ್ಧಿಯಾಗುವವು; ಕಫವಾತಗಳು ಶಮನವಾಗುವವು.

ಷರಾ ಸ್ಪರ್ಶಣಶಕ್ತಿಯು ಅಧಿಕವಾಗುವದಾಗಿ ಸಹ ಚ

ಶಿರೋಗತಾಂಸ್ತಥಾ ರೋಗಾನ್ ಶಿರೋಽಭ್ಯಂಗೋಽಪಕರ್ಷತಿ |
ಕೇಶಾನಾಂ ಮಾರ್ದವಂ ದೈಘ್ರ್ಯಂ ಬಹುತ್ವಂ ಸ್ನಿಗ್ಧಕೃಷ್ಣತಾಂ ||
ತಲೆ ಅಭ್ಯಂಗ ಕರೋತಿ ಶಿರಸಸ್ತೃಪ್ತಿಂ ಸುತ್ವಕ್ಕಮಪಿ ಚಾನನಂ |
ಸಂತರ್ಪಣಂ ಚೇಂದ್ರಿಯಾಣಾಂ ಶಿರಸಃ ಪ್ರತಿಪೂರಣಂ ||
* *
* *
ಸದೈವ ಶೀತಲಂ ಜಂತೋರ್ಮೂರ್ಧ್ನಿ ತೈಲಂ ಪ್ರದಾಪಯೇತ್ ||
(ಸು. 502)

ತಲೆ ಮೇಲೆ ತೈಲ ಇಟ್ಟುಕೊಳ್ಳುವ ಶೀಲದಿಂದ ಶಿರೋಗತವಾದ ರೋಗಗಳು ದೂರ ಹೋಗುವವಲ್ಲದೆ, ಕೂದಲುಗಳು ಮೃದು, ಕಪ್ಪು, ಸ್ನಿಗ್ಧ, ಉದ್ದ, ಮತ್ತು ಹೆಚ್ಚು ಆಗುವವು; ತಲೆಯಲ್ಲಿ ಸಮಾಧಾನ ಮತ್ತು ಬಲ ಉಂಟಾಗುವವು, ಇಂದ್ರಿಯಗಳು ತೃಪ್ತಿಗೊಳ್ಳುವವು; ಮತ್ತು ಮುಖದ ಚರ್ಮವು ಪ್ರಸನ್ನತೆಯನ್ನು ಹೊಂದುವದು. ಯಾರಿಗಾದರೂ ತಲೆಗಿಡುವ ತೈಲವು ಯಾವಾಗಲೂ ತಣ್ಣಗಾಗಿರಬೇಕು.

ಷರಾ ನಿತ್ಯದಲ್ಲು ತಲೆ ಮೇಲೆ ಎಣ್ಣೆ ಇಟ್ಟುಕೊಳ್ಳುವದರಿಂದ ಮೇಲಿನ ಗುಣಗಳೂ, ನಿದ್ರಾಲಾಭವೂ, ಸುಖವೂ ಉಂಟಾಗುವವು ಎಂತ ಚ (ಪು 31)

9. ಕರ್ಣಪೂರಣ ಹನುಮನ್ಯಾಶಿರಃಕರ್ಣಶೂಲಘ್ನಂ ಕರ್ಣಪೂರಣಂ |
(ಸು. 502.)

ಕಿವಿಯೊಳಗೆ ತೈಲವನ್ನು ತುಂಬಿಸುವದರಿಂದ ದವಡೆ, ಮನ್ಯಾ (ಕುತ್ತಿಗೆಯ ಹಿಂಬದಿ), ತಲೆ, ಕಿವಿ, ಈ ಭಾಗಗಳ ಶೂಲೆಯು ನಾಶವಾಗುವದು.

ಷರಾ ನಿತ್ಯದಲ್ಲೂ ಕಿವಿಯೊಳಗೆ ತೈಲ ಹಾಕುವದರಿಂದ ಮೇಲಿನ ಗುಣಗಳು ಮಾತ್ರವಲ್ಲದೆ, ಕಿವುಡತನ ಉಂಟಾಗುವದಿಲ್ಲವಾಗಿ ಚ (ಪು 31)

ಕರ್ಣಪೂರಣ ವಿಧಿಗೆ ಮುಂದೆ XXIIIನೇ ಅಧ್ಯಾಯ ನೋಡಿರಿ

10. ಸೇಕಃ ಶ್ರಮಘ್ನೋಽನಿಲಹೃದ್ಭಗ್ನಸಂಧಿಪ್ರಸಾಧಕಃ |
ಕ್ಷತಾಗ್ನಿದಗ್ಧಾಭಿಹತವಿಷೃಷ್ಟಾನಾಂ ರುಜಾಪಹಃ ||
ಸ್ನೇಹಧಾರೆ ಮತ್ತು ಸ್ನೇಹ ಹಚ್ಚಿ ಸ್ನಾನ ಜಲಸಿಕ್ತಸ್ಯ ವರ್ಧಂತೇ ಯಥಾ ಮೂಲೇಽಂಕುರಾಸ್ತರೋಃ |
ತಥಾ ಧಾತುನಿವೃದ್ಧಿರ್ಹಿ ಸ್ನೇಹಸಿಕ್ತಸ್ಯ ಜಾಯತೇ ||
ಸಿರಾಮುಖೈರೋಮಕೂಪೈರ್ಧಮನೀಭಿಶ್ಚ ತರ್ಪಯನ್ |
ಶರೀರಬಲಮಾಧತ್ತೇ ಯುಕ್ತಸ್ನೇಹೋಽವಗಾಹನೇ || (ಸು. 502.)

ಸರ್ವಾಂಗಧಾರೆಯು ಶ್ರಮಹರ, ವಾತಹರ, ಒಡಕನ್ನು ಕೂಡಿಸುವ ಶಕ್ತಿಯುಳ್ಳದ್ದು; ಮತ್ತು ಗಾಯಪಟ್ಟದರ, ಅಗ್ನಿಯಿಂದ ಸುಡಲ್ಪಟ್ಟದರ, ಹೊಡೆಯಲ್ಪಟ್ಟದರ, ಮತ್ತು ಅರಚಿದರ ನೋವನ್ನು ಪರಿಹರಿಸುವದು. ಮರನ ಬುಡಕ್ಕೆ ನೀರನ್ನು ಹೊಯಿದರೆ, ಹ್ಯಾಗೆ ಚಿಗುರುಗಳು

ಬೆಳೆಯುತ್ತವೋ, ಹಾಗೆ ಸ್ನೇಹಧಾರೆ ಮಾಡಿಸಿಕೊಂಡವನ ಧಾತುಗಳು ವೃದ್ಧಿಯಾಗುವ ದಕ್ಕೆ ಸಂದೇಹವಿಲ್ಲ. ಸ್ನಾನಕಾಲದಲ್ಲಿ ಹಚ್ಚಿಕೊಂಡ ಸ್ನೇಹವು ಸಿರೆಗಳ ಮುಖದಿಂದಲೂ, ರೋಮಕೂಪಗಳಿಂದಲೂ, ಧಮನಿಗಳಿಂದಲೂ, ಶರೀರವನ್ನು ತೃಪ್ತಿಗೊಳಿಸಿ, ಬಲವನ್ನುಂಟು ಮಾಡುತ್ತದೆ.

11. ಅಭ್ಯಂಗಾದಿಗಳಿಗೆ ತೈಲ ವಿಚಾರ

ತತ್ರ ಪ್ರಕೃತಿಸಾತ್ಮ್ಯರ್ತುದೇಶದೋಷವಿಕಾರವಿತ್ |
ತೈಲಂ ಘೃತಂ ವಾ ಮತಿಮಾನ್ ಯುಂಜ್ಯಾದಭ್ಯಂಗ-
ಸೇಕಯೋಃ || (ಸು. 503.)

ಅಭ್ಯಂಗಕ್ಕೂ ಧಾರೆಗೂ, ಬುದ್ಧಿವಂತನು ತನ್ನ ಪ್ರಕೃತಿ ಮತ್ತು ಸಾತ್ಮ್ಯವನ್ನೂ, ಋತುವನ್ನೂ, ದೇಶವನ್ನೂ, ಮತ್ತು ದೋಷಗಳ ವಿಕಾರಗಳನ್ನೂ ತಿಳಿದು, ತೈಲವನ್ನು ಅಥವಾ ತುಪ್ಪವನ್ನು ಉಪಯೋಗಿಸತಕ್ಕದ್ದು.

12. ಅಭ್ಯಂಗಾದಿಗಳಿಗೆ ಅಯೋಗ್ಯರು

ಕೇವಲಂ ಸಾಮದೋಷೇಷು ನ ಕಥಂಚನ ಯೋಜಯೇತ್ |
ತರುಣಜ್ವರ್ಯಜೀರ್ಣೇ ಚ ನಾಭ್ಯಕ್ತವ್ಯೌ ಕಥಂಚನ ||
ತಥಾ ವಿರಿಕ್ತೋ ವಾಂತಶ್ಚ ನಿರೂಢೋ ಯಶ್ಚ ಮಾನವಃ |
ಪೂರ್ವಯೋಃ ಕೃಚ್ಛ್ರತಾ ವ್ಯಾಧೇರಸಾಧ್ಯತ್ವಮಥಾಪಿ ವಾ ||
ಶೇಷಾಣಾಂ ತದಹಃ ಪ್ರೋಕ್ತಾ ಅಗ್ನಿಮಾಂದ್ಯಾದಯೋ ಗದಾಃ |
ಸಂತರ್ಪಣಸಮುತ್ಥಾನಾಂ ರೋಗಾಣಾಂ ನೈವ ಕಾರಯೇತ್ || (ಸು. 502.)

ಆಮಸಂಬಂಧವಾದ ದೋಷಗಳಲ್ಲಿ ಬರೇ ಎಣ್ಣೆಯನ್ನು, ಅಥವಾ ಬರೇ ತುಪ್ಪವನ್ನು ಹ್ಯಾಗೂ ಉಪಯೋಗಿಸಬಾರದು, ಮತ್ತು ತರುಣಜ್ವರವುಳ್ಳವನಿಗೂ, ಜೀರ್ಣವಿಲ್ಲದವನಿಗೂ ಅಭ್ಯಂಗವನ್ನು ಯಾವ ವಿಧವಾಗಿಯೂ ಮಾಡಿಸಬಾರದು. ಹಾಗೆಯೇ ಭೇದಿ ಮಾಡಿಸಿಕೊಂಡವನಿಗೂ, ವಾಂತಿಮಾಡಿಸಿಕೊಂಡವನಿಗೂ, ನಿರೂಹ ಎಂಬ ವಸ್ತಿ ಉಪಯೋಗಿಸಿಕೊಂಡವನಿಗೂ, ಅದು ವರ್ಜ್ಯವಾಗಿರುತ್ತದೆ. ಅವರೊಳಗೆ ತರುಣಜ್ವರದವನಾಗಲಿ, ಅಜೀರ್ಣವುಳ್ಳವನಾಗಲಿ, ಅಭ್ಯಂಗನ ಮಾಡಿಸಿಕೊಂಡರೆ, ಅವನ ವ್ಯಾಧಿಯು ಗುಣವಾಗಲಿಕ್ಕೆ ಕಷ್ಟವಾಗುವದು ಅಥವಾ ಅಸಾಧ್ಯವಾಗುವದು. ಮಿಕ್ಕವರಿಗೆ ಅದೇ ದಿವಸ ಅಭ್ಯಂಗಮಾಡಿಸಿದರಿಂದ ಅಗ್ನಿಮಾಂದ್ಯ ಮುಂತಾದ ರೋಗಗಳು ಉಂಟಾಗುವವು ಎಂತ ಹೇಳಲ್ಪಟ್ಟದೆ. ಸಂತರ್ಪಣದಿಂದ ಉಂಟಾದ ರೋಗಗಳಲ್ಲಿಯೂ ಅಭ್ಯಂಗವನ್ನು ಮಾಡಿಸಲೇ ಬಾರದು.

13. ಪಾದಾಭ್ಯಂಗ

ಖರತ್ವಂ ಶುಷ್ಕತಾಂ ರೌಕ್ಷ್ಯಂ ಶ್ರಮಃ ಸುಪ್ತಿಶ್ಚ ಪಾದಯೋಃ |
ಸದ್ಯ ಏವೋಪಶಾಮ್ಯಂತಿ ಪಾದಾಭ್ಯಂಗನಿಷೇವಣಾತ್ ||
ಜಾಯತೇ ಸೌಕುಮಾರ್ಯಂ ಚ ಬಲಂ ಸ್ಥೈರ್ಯಂ ಚ ಪಾದಯೋಃ |
ದೃಷ್ಟಿಃಪ್ರಸಾದಂ ಲಭತೇ ಮಾರುತಶ್ಚೋಪಶಾಮ್ಯತಿ ||
ನ ಚ ಸ್ಯಾದ್ಗೃಧ್ರಸೀವಾತಾಃ ಪಾದಯೋಃ ಸ್ಫುಟನಂ ನ ಚ |
ನ ಶಿರಾಸ್ನಾಯುಸಂಕೋಚಃ ಪಾದಾಭ್ಯಂಗೇನ ಪಾದಯೋಃ || (ಚ. 32.)

ಪಾದಗಳಿಗೆ ತೈಲಾಭ್ಯಂಗಮಾಡುವದರಿಂದ, ಪಾದಗಳು ಮುಳ್ಳಾಗಿ, ಒಣಗಿಕೊಂಡು, ರೂಕ್ಷವಾಗಿ, ಮತ್ತು ನಿರ್ಜೀವವಾಗಿರುವ ದೋಷಗಳು ಮತ್ತು ಪಾದಗಳ ಬಚ್ಚುವಿಕೆ, ಕೂಡಲೇ ಉಪಶಮನವಾಗುವವು; ಪಾದಗಳಲ್ಲಿ ಬಲ, ಸ್ಥಿರತ್ವ, ಮತ್ತು ಕೋಮಲತ್ವ ಉಂಟಾಗುವವು; ದೃಷ್ಟಿಯು ಪ್ರಸನ್ನವಾಗುವದು; ವಾತವು ಶಾಂತವಾಗುವದು; ಗೃಧ್ರಸೀ ವಾತಗಳು, ಪಾದಗಳು ಒಡೆಯುವದು, ಪಾದಗಳಲ್ಲಿ ಸಿರಾನಾಳಗಳ ಮತ್ತು ಸ್ನಾಯುಗಳ ಸಂಕೋಚ, ಈ ರೋಗಗಳು ಪಾದಾಭ್ಯಂಗನ ಮಾಡಿಕೊಳ್ಳುತ್ತಿರುವವನಿಗೆ ಉಂಟಾಗ ಲಾರವು.

14. ಸ್ನಾನಸ್ಯಾನಂತರಂ ಸಮ್ಯಗ್ವಸ್ತ್ರೇಣಾಂಗಸ್ಯ ಮಾರ್ಜನಂ ।
ವಸ್ತ್ರಮಾರ್ಜನ ಕಾಂತಿಪ್ರದಂ ಶರೀರಸ್ಯ ಕಂಡೂತ್ವಗ್ದೋಷನಾಶನಂ ॥ (ಭಾ. ಪ್ರ. 47.)

ಸ್ನಾನಮಾಡಿದನಂತರ ವಸ್ತ್ರದಿಂದ ಮೈಯನ್ನು ಚೆನ್ನಾಗಿ ಉಜ್ಜಿಕೊಳ್ಳುವದರಿಂದ, ಶರೀರಕ್ಕೆ ಕಾಂತಿ ಉಂಟಾಗುವದಲ್ಲದೆ, ತುರಿ ಮತ್ತು ಚರ್ಮದೋಷಗಳು ನಾಶವಾಗುವವು.

15. ನಿರ್ಮಲವಸ್ತ್ರ ಧಾರಣ ಕಾಮ್ಯಂ ಯಶಸ್ಯಮಾಯುಷ್ಯಮಲಕ್ಷ್ಮೀಘ್ನಂ ಪ್ರಹರ್ಷಣಂ ।
ಶ್ರೀಮತ್ಪಾರಿಷದಂ ಶಸ್ತಂ ನಿರ್ಮಲಾಂಬರಧಾರಣಂ ॥
(ಚ. 32.)

ನಿರ್ಮಲವಾದ ವಸ್ತ್ರಗಳನ್ನು ಧರಿಸಿಕೊಳ್ಳೋಣವು ಕಾಮ್ಯವಾದದ್ದು (ಕಾಮೋದ್ದೀಪಕ ವಾದದ್ದು), ಕೀರ್ತಿಕರ, ಆಯುಷ್ಕರ, ಕಲಿನಾಶಕ, ಹರ್ಷಕರ, ಸಂಪದ್ಯುಕ್ತವಾದದ್ದು, ಸಭಾ ಯೋಗ್ಯವಾದದ್ದು ಮತ್ತು ಪ್ರಶಸ್ತವಾದದ್ದು ಆಗಿರುತ್ತದೆ.

16. ಸ್ತ್ರೀಧೃತಂ ವಸನಂ ಶೌರ್ಯಹಾನಿದೌರ್ಭಾಗ್ಯದಾಯಕಂ ।
ತ್ಯಾಜ್ಯವಸ್ತ್ರ ಸಂಧಿತಂ ತ್ರುಟಿತಂ ಚೈವ ದಗ್ಧಂ ಚಾನ್ಯಧೃತಂ ತಥಾ ॥
ದಾರಿದ್ರ್ಯಕಾರಕಂ ಪ್ರೋಕ್ತಂ ರೋಗಕೃಚ್ಚ ಮತಂ ಬುಧೈಃ । (ನಿ. ರ.)

ಸ್ತ್ರೀಯರು ಧರಿಸಿದ ವಸ್ತ್ರವನ್ನು ಪುರುಷನು ಧರಿಸುವದರಿಂದ ಶೌರ್ಯಹಾನಿ ಮತ್ತು ದೌರ್ಭಾಗ್ಯ ಉಂಟಾಗುತ್ತವೆ; ಹಾಗೆಯೇ, ಸಂದುಕೂಡಿಸಿದ, ಹರಿದ, ಸುಟ್ಟ ಮತ್ತು ಅನ್ಯರಿಂದ ಧರಿಸಲ್ಪಟ್ಟ ವಸ್ತ್ರಧಾರಣದಿಂದ ದರಿದ್ರತೆಯೂ, ರೋಗವೂ ಉಂಟಾಗುತ್ತವೆಂತ ಸುಜ್ಞರು ಆಲೋಚಿಸುತ್ತಾರೆ.

ಕದಾಪಿ ನ ಜನೈಃ ಸದ್ಭಿರ್ಧಾರ್ಯಂ ಮಲಿನಮಂಬರಂ ।
ತತ್ತು ಕಂಡೂಕ್ರಿಮಿಕರಂ ಗ್ಲಾನ್ಯಲಕ್ಷ್ಮೀಕರಂ ಪರಂ ॥ (ಭಾ. ಪ್ರ. 48.)

ಸತ್ಪುರುಷರು ಮಲಿನವಾದ ವಸ್ತ್ರವನ್ನು ಯಾವಾಗಲಾದರೂ ಧರಿಸಿಕೊಳ್ಳಬಾರದು. ಅದರಿಂದ ತುರಿ, ಕ್ರಿಮಿ, ಮತ್ತು ದರಿದ್ರತೆ ಉಂಟಾಗುವವು; ಮತ್ತು ಅದು ಉಲ್ಲಾಸವಿಲ್ಲದಂತೆ ಮಾಡುವದು.

17. ವೃಷ್ಯಂ ಸೌಗಂಧ್ಯಮಾಯುಷ್ಯಂ ಕಾಮ್ಯಂ ಪುಷ್ಟಿಬಲಪ್ರದಂ ।
ಗಂಧಮಾಲ್ಯಗಳ ಧಾರಣ ಸೌಮನಸ್ಯಮಲಕ್ಷ್ಮೀಘ್ನಂ ಗಂಧಮಾಲ್ಯನಿಷೇವಣಂ ॥
(ಚ. 82.)

ಗಂಧಪುಷ್ಪಗಳನ್ನು ಧರಿಸುವದರಿಂದ ಸುವಾಸನೆ, ವೀರ್ಯವೃದ್ಧಿ, ಪುಷ್ಟಿ, ಬಲವೃದ್ಧಿ, ಮನಃಸಂತೋಷ, ಕಲಿನಾಶನ, ಮತ್ತು ಆಯುರ್ವೃದ್ಧಿ ಉಂಟಾಗುತ್ತವೆ. ಮತ್ತು ಅದು ಕಾಮ್ಯ.

ಸೌಭಾಗ್ಯದಂ ವರ್ಣಕರಂ ಪ್ರೀತ್ಯೋಜೋಬಲವರ್ಧನಂ ।
ಸ್ವೇದದೌರ್ಗಂಧ್ಯವೈವರ್ಣ್ಯಶ್ರಮಘ್ನಮನುಲೇಪನಂ ॥
(ಸು. 501)

(ಗಂಧಾದಿ) ಅನುಲೇಪನವು ವರ್ಣವನ್ನೂ, ಸೌಭಾಗ್ಯವನ್ನೂ ಕೊಟ್ಟು, ಪ್ರೀತಿಯನ್ನೂ, ತೇಜಸ್ಸನ್ನೂ, ಬಲವನ್ನೂ, ವೃದ್ಧಿಮಾಡುವದು ಮತ್ತು ಬೆವರನ್ನೂ, ದುರ್ವಾಸನೆಯನ್ನೂ, ವರ್ಣವಿಕಾರವನ್ನೂ, ಶ್ರಮವನ್ನೂ ಪರಿಹರಿಸುವದು.

ಸ್ನಾನಂ ಯೇಷಾಂ ನಿಷಿದ್ಧಂ ತು ತೇಷಾಮಪ್ಯನುಲೇಪನಂ ।
(ಸು. 501.)

ಯಾರಿಗೆ ಸ್ನಾನವು ನಿಷಿದ್ಧವೋ ಅವರಿಗೆ ಅನುಲೇಪನ ಸಹ ನಿಷಿದ್ಧ.

18. ಧನ್ಯಂ ಮಂಗಲ್ಯಮಾಯುಷ್ಯಂ ಶ್ರೀಮದ್ವ್ಯಸನಸೂದನಂ ।
ರತ್ನಾಭರಣ ಧಾರಣ ಹರ್ಷಣಂ ಕಾಮ್ಯಮೋಜಸ್ಯಂ ರತ್ನಾಭರಣಧಾರಣಂ ॥
(ಚ. 32.)

ರತ್ನಾಭರಣಧಾರಣವು ಧನವನ್ನೂ, ಮಂಗಲವನ್ನೂ, ಸಂಪತ್ತನ್ನೂ, ಸೂಚಿಸುವದು ಮತ್ತು ಆಯುಸ್ಸನ್ನೂ, ಉಲ್ಲಾಸವನ್ನೂ, ಕಾಮವನ್ನೂ, ತೇಜಸ್ಸನ್ನೂ ವೃದ್ಧಿಮಾಡಿ, ವ್ಯಸನವನ್ನು ನಾಶಮಾಡುವದು.

19. ಕರ್ಪೂರ-ಜಾತಿ-ಕಕ್ಕೋಲ-ಲವಂಗ-ಕಟುಕಾಹ್ವಯೈಃ ।
ಸಚೂರ್ಣಪೂಗೈಃ ಸಹಿತಂ ಪತ್ರಂ ತಾಂಬೂಲಜಂ ಶುಭಂ ॥
ಮುಖವೈಶದ್ಯ-ಸೌಗಂಧ್ಯ-ಕಾಂತಿ-ಸೌಷ್ಠವಕಾರಕಂ ।
ಹನುದಂತಸ್ವರಮಲಜಿಹ್ವೇಂದ್ರಿಯವಿಶೋಧನಂ ॥
ತಾಂಬೂಲ ಸೇವನ ಪ್ರಸೇಕಶಮನಂ ಹೃದ್ಯಂ ಗಲಾಮಯವಿನಾಶನಂ ।
ಪಥ್ಯಂ ಸುಪ್ತೋತ್ಥಿತೇ ಭುಕ್ತೇ ಸ್ನಾತೇ ವಾಂತೇ ಚ ಮಾನವೇ ॥
ರಕ್ತಪಿತ್ತಕ್ಷತಕ್ಷೀಣತೃಷ್ಣಾಮೂರ್ಚ್ಛಾಪರೀತಿನಾಂ ।
ರೂಕ್ಷದುರ್ಬಲಮತ್ಯರ್ಥಾನಾಂ ನ ಹಿತಂ ಚಾಸ್ಯ ಶೋಷಿಣಾಂ ॥
(ಸು. 501-502.)

ಪಚ್ಚೆಕರ್ಪೂರ, ಜಾಯಿಕಾಯಿ, ಗಂಧಮೆಣಸು, ಲವಂಗ, ಕಾಳುಮೆಣಸು, ಸುಣ್ಣ, ಅಡಿಕೆ, ಇವುಗಳು ಸಹಿತವಾದ ಒಳ್ಳೇ ತಾಂಬೂಲದ ಎಲೆಯು ಬಾಯಿಯ ನಿರ್ಮಲತೆ ಮತ್ತು ಪರಿಮಳವನ್ನು ಮತ್ತು ಮುಖದ ಕಾಂತಿ ಮತ್ತು ಪ್ರಶಸ್ತತೆಯನ್ನು ಉಂಟುಮಾಡುವದಲ್ಲದೆ, ದವಡೆ, ಹಲ್ಲು, ಸ್ವರ, ಮಲ, ನಾಲಿಗೆ, ಇವುಗಳನ್ನು ಶೋಧಿಸುವದು; ಮತ್ತು ಅದರಿಂದ ನೆಗಡಿ ಮತ್ತು ಗಂಟಲರೋಗಗಳು ಶಾಂತವಾಗುವವು, ಪ್ರೀತಿಕರವಾದದ್ದು. ನಿದ್ರೆ ಮಾಡಿ ಎದ್ದಾಗ್ಗೆ, ಉಂಡ ಮೇಲೆ, ಸ್ನಾನ ಮಾಡಿದ ಮೇಲೆ, ಮತ್ತು ವಾಂತಿ ಮಾಡಿಸಿಕೊಂಡ ಮೇಲೆ, ಮನುಷ್ಯನಿಗೆ ಅದು ಪಥ್ಯವಾಗಿರುತ್ತದೆ ರಕ್ತಪಿತ್ತ, ಕ್ಷತ, ಕ್ಷೀಣ, ಬಾಯಾರಿಕೆ, ಮೂರ್ಚ್ಛೆ, ಈ ವಿಕಾರಗಳಿಂದ ಪೀಡಿತರಾದವರಿಗೂ, ರೂಕ್ಷವಾದವರಿಗೂ, ಬಲಹೀನರಾದವರಿಗೂ, ಬಾಯಿಹುಣ್ಣಿನವರಿಗೂ, ಅದು ಹಿತವಲ್ಲ.

ಷರಾ ಮೇಲಿನ ವಸ್ತುಗಳೊಳಗೆ ಸುಣ್ಣ ಬಿಟ್ಟು ಏಕ್ಕ ಏಳು ಬಗೆಗಳು ಮತ್ತು ಸಣ್ಣ ಏಲಕ್ಕಿ, ಇವುಗಳನ್ನು ಬಾಯಿಯೊಳಗೆ ಇಟ್ಟುಕೊಳ್ಳಬೇಕಾಗಿ ಚರಕದಲ್ಲಿ ಕಾಣುತ್ತದೆ (ಪು 31) ಈ 8 ಬಗೆಗಳೊಳಗೆ ಕಾಳುಮೆಣಸು ಮತ್ತು ಗಂಧಮೆಣಸು ಬಿಟ್ಟು ಕಾಚನ್ನು ಮತ್ತು ಜಾಪತ್ರೆಯನ್ನು ಕೂಡಿಸಿಕೊಂಡು ತಿನ್ನಬೇಕಾಗಿ ಮತ್ತು

ತಾಂಬುಲಾನುಪಯೋಗಾತ್ಸ್ಯಾತ್ ಶ್ಲೇಷ್ಮಪಿತ್ತಾನಿಲಾನ್ವಿತಃ ।
ದೇಹದೃಕ್ಕೇಶದಂತಾಗ್ನಿಶ್ರೋತ್ರವರ್ಣಬಲಕ್ಷಯಃ ॥
(ರಾ 166)

ತಾಂಬೂಲವನ್ನು ಉಪಯೋಗಿಸದ್ದರಿಂದ ಕಫ-ಪಿತ್ತ-ವಾಯುಗಳಿಂದ ಕೂಡಿಕೊಂಡು, ದೇಹ, ಕಣ್ಣು, ಕೂದಲು, ಹಲ್ಲು, ಜಠರಾಗ್ನಿ, ಕಿವಿ, ಮತ್ತು ಮೈವರ್ಣ, ಇವುಗಳ ಕ್ಷಯ ಉಂಟಾಗುವದೂ ಎಂತ ಸಹ ರಾಜವಲ್ಲಭ ಹೇಳುತ್ತದ (ಆದರೆ 20ನೇ ಸಂ ನೋಡು) ದುರ್ಬಲವಾದ ಹಲ್ಲುಗಳುಳ್ಳವರಿಗೂ, ದೃಷ್ಟಿರೋಗವುಳ್ಳವರಿಗೂ, ಏಷ ಪೀಡಿತರಾದವರಿಗೆ ಸಹ ತಾಂಬೂಲವು ಹಿತವಲ್ಲ ಎಂತ ಧಾ ಪ್ರ ಹೇಳುತ್ತದೆ

ಆದ್ಯಂ ವಿಷೋಪಮಂ ಪೀತಂ ದ್ವಿತೀಯಂ ಭೇದಿ ದುರ್ಜರಂ ।
ತೃತೀಯಾದನುಪಾತವ್ಯಂ ಸುಧಾತುಲ್ಯಂ ರಸಾಯನಂ ॥
(ಭಾ. ಪ್ರ. 53.)

ಒಂದನೇ ಸರ್ತಿಯ ರಸವನ್ನು ಕುಡಿದರೆ, ಅದು ವಿಷಕ್ಕೆ ಸಮ, ಎರಡನೇದು ಜೀರ್ಣಕ್ಕೆ ಕಷ್ಟವಾದದ್ದು ಮತ್ತು ಭೇದಿಕರ, ಮೂರನೇದು ಮೊದಲುಗೊಂಡು ಅಮೃತಸಮಾನ ಮತ್ತು ರಸಾಯನದ ಗುಣವುಳ್ಳವು.

ಷರಾ ಮೇಲೆ ಹೇಳಿದ ಗುಣದೋಷಗಳು ರಾಜವಲ್ಲಭದಲ್ಲಿ ಅಡಿಕೆಗೆ ಹೇಳಲ್ಪಟ್ಟವೆ (ಪು 165)

20. ತಾಂಬೂಲಂ ನಾತಿಸೇವೇತ ನ ವಿರಿಕ್ತೋ ಬುಭುಕ್ಷಿತಃ ।
ದೇಹದೃಕ್ಕೇಶದಂತಾಗ್ನಿಶ್ರೋತ್ರವರ್ಣಬಲಕ್ಷಯಃ ॥
ಶೋಷಃ ಪಿತ್ತಾನಿಲಾಸ್ರಂ ಸ್ಯಾದತಿತಾಂಬೂಲಭಕ್ಷಣಾತ್ ।
(ಭಾ. ಪ್ರ. 53.)

ತಾಂಬೂಲವನ್ನು ಅತಿಯಾಗಿ ಯಾರೂ ಸೇವಿಸಬಾರದು. ವಿರೇಚನ ಮಾಡಿಸಿಕೊಂಡವನಿಗೂ, ಹಸಿದವನಿಗೂ ಅದು ನಿಷಿದ್ಧ. ಅತಿಯಾಗಿ ತಾಂಬೂಲವನ್ನು ಸೇವಿಸುವದರಿಂದ

ಶರೀರ, ಕಣ್ಣು, ಕೂದಲು, ಹಲ್ಲು, ಅಗ್ನಿ, ಕಿವಿ, ವರ್ಣ ಮತ್ತು ಬಲ, ಇವುಗಳ ಕ್ಷಯವೂ, ಶೋಷವೂ, ಪಿತ್ತವಾಯುದುಷ್ಟರಕ್ತವೂ ಉಂಟಾಗುವವು.

21. ತಾಂಬೂಲಪತ್ರಂ ತೀಕ್ಷ್ಣೋಷ್ಣಂ ಕಟು ವಾತಕಫಾಪಹಂ |
ವೀಳ್ಯದೆಲೆಯ ಗುಣ ಪಿತ್ತಕೃತ್ ಸ್ರಂಸನಂ ವೃಷ್ಯಂ ವಹ್ನಿಕೃದ್ವಸ್ತಿಶೋಧನಂ ||
(ರಾ. 163.)

ವೀಳ್ಯದೆಲೆಯು ತೀಕ್ಷ್ಣ, ಉಷ್ಣ, ಖಾರ, ವಾತಕಫಹರ, ಪಿತ್ತಕಾರಿ, ಶಿಥಿಲತ್ವಕಾರಿ, ವೃಷ್ಯ, ಅಗ್ನಿದೀಪನಕಾರಿ, ಮತ್ತು ವಸ್ತಿಶೋಧನಕಾರಿ.

ಪರ್ಣಮೂಲೇ ಭವೇದ್ವ್ಯಾಧಿಃ ಪರ್ಣಾಗ್ರೇ ಪಾಪಸಂಭವಃ |
ಜೀರ್ಣಂ ಪತ್ರಂ ಹರೇದಾಯುಃ ಸಿರಾ ವಹ್ನಿವಿನಾಶಿನೀ ||
(ರಾ. 163.)

ತಾಂಬೂಲದ ಎಲೆಯ ಮೂಲವನ್ನುಪಯೋಗಿಸುವದರಿಂದ ವ್ಯಾಧಿಯೂ, ತುದಿಯನ್ನುಪಯೋಗಿಸುವದರಿಂದ ಪಾಪಸಂಭವವೂ, ನರಗಳ ಉಪಯೋಗದಿಂದ ಅಗ್ನಿನಾಶವೂ, ಹಳೆದಾದ ಎಲೆಯ ಉಪಯೋಗದಿಂದ ಆಯುಃಕ್ಷೀಣತೆಯೂ ಉಂಟಾಗುವವು.

ಪರಾ ಪಾರಾಂತರ ಪ್ರಕಾರ ಮಧ್ಯದ ಭಾಗವನ್ನು ಉಪಯೋಗಿಸಿದರೆ ಆಯುಃಕ್ಷೀಣತೆ ಮತ್ತು ನರಗಳ ಉಪಯೋಗದಿಂದ ಬುದ್ಧಿನಾಶ ಉಂಟಾಗುತ್ತದೆಂತ ಅರ್ಥವಾಗುತ್ತದೆ (ಭಾ ಪ್ರ 53)

22. ಶುಷ್ಕಮಗ್ನಿಕರಂ ಪೂಗಂ ಕಷಾಯಂ ಮಧುರಂ ಪರಂ |
ಪಕ್ವಂ ತು ವಾತಲಂ ರೂಕ್ಷಂ ಭೇದನಂ ಕಫನಾಶನಂ ||
ಅಡಿಕೆಯ ಗುಣ ಗುರ್ವಭಿಷ್ಯಂದಿ ಮಧುರಂ ತೋಯದೃಗ್ವಹ್ನಿನಾಶನಂ |
(ರಾ. 163.)

ಒಣ ಅಡಿಕೆಯು ಅಗ್ನಿಪ್ರದೀಪನಕಾರಿ, ಜೊಗರು, ಸೀ ಮತ್ತು ಉತ್ತಮ; ಹಣ್ಣಡಿಕೆಯು ವಾತವೃದ್ಧಿಕರ, ರೂಕ್ಷ, ಭೇದಿಕಾರಿ, ಮತ್ತು ಕಫನಾಶನಕಾರಿ; ಎಳೇ ಅಡಿಕೆಯು ಗುರು, ಅಭಿಷ್ಯಂದಿ, ಸೀ ಮತ್ತು ಅಗ್ನಿನಾಶನಕಾರಿ.

ಪರಾ ಅಡಿಕೆಯಲ್ಲಿ ಮೋಹನಗುಣವಿರುತ್ತದಾದರೂ, ಸೀರಲ್ಲಿ ನೆನಸಿದ ಹಣ್ಣಡಿಕೆಯು ತ್ರಿದೋಷಹರ (ಭಾ ಪ್ರ 53)

23. ಚೂರ್ಣಂ ಸಏಾರಣಶ್ಲೇಷ್ಮಮೇದೋಹರಮುದಾಹೃತಂ |
ಸುಣ್ಣದ ಗುಣ ಶಂಖಚೂರ್ಣಂ ಕಟು ಕ್ಷಾರಮುಷ್ಣಂ ಕೃಮಿಹರಂ ಪರಂ || (ರಾ. 164.)

ಸುಣ್ಣವು ವಾತ-ಕಫ-ಮೇದಸ್ಸುಗಳನ್ನು ಪರಿಹರಿಸತಕ್ಕದ್ದು. ಶಂಖದ ಸುಣ್ಣವು ಕಟು, ಕ್ಷಾರ, ಉಷ್ಣ ಮತ್ತು ಒಳ್ಳೇ ಕ್ರಿಮಿಹರ.

24. ಕಾಚನ ಗುಣ. ಖದಿರಃ ಕುಷ್ಠವೀಸರ್ಪಮೇಹಪಿತ್ತಕಫಾಪಹಃ | (ರಾ. 164.)

ಕಾಚು ಕುಷ್ಠ, ವಿಸರ್ಪ, ಮೇಹ, ಪಿತ್ತ, ಕಫ, ಇವುಗಳನ್ನು ಪರಿಹರಿಸುವದು.

ಖದಿರಃ ಕಫಪಿತ್ತಘ್ನಶ್ಚೂರ್ಣಂ ವಾತಬಲಾಸನುತ್ |
ಸಂಯೋಗತಸ್ತ್ರಿದೋಷಘ್ನಂ ಸೌಮನಸ್ಯಂ ಕರೋತಿ ಚ || (ಭಾ. ಪ್ರ. 53.)

ಕಾಚು ಕಫಪಿತ್ತವನ್ನೂ, ಸುಣ್ಣವು ವಾತಕಫವನ್ನೂ, ಎರಡೂ ಕೂಡಿ ತ್ರಿದೋಷಗಳನ್ನೂ ಪರಿಹರಿಸುತ್ತವೆ ಮತ್ತು ಮನಃಸಂತೋಷವನ್ನು ಮಾಡುತ್ತವ.

25. ಏಲಕ್ಕಿಗುಣ ಏಲಾ ಮೂತ್ರವಿಬಂಧಘ್ನೀ ತೃಟ್ಛರ್ದಿಕಫವಾತಜಿತ್ |
(ರಾ. 164.)

ಏಲಕ್ಕಿ ಮೂತ್ರಕಟ್ಟನ್ನು ಬಿಡಿಸುವದು ಮತ್ತು ಬಾಯಾರಿಕೆ, ವಾಂತಿ ಮತ್ತು ಕಫವಾತ, ಇವುಗಳನ್ನು ಪರಿಹರಿಸುವದು.

ಏಲಾದ್ವಯಂ ಶೀತಲತಿಕ್ತಮುಕ್ತಂ ಸುಗಂಧಿ ಪಿತ್ತಾರ್ತಿಕಫಾಪಹಾರಿ |
ಕರೋತಿ ಹೃದ್ರೋಗಮಲಾರ್ತಿವಸ್ತಿಪುಂಸ್ತ್ವಘ್ನಮತ್ರ ಸ್ಥ ಏರಾ ಗುಣಾಢ್ಯಾ ||
(ರಾ. ನಿ. 79.)

(ದೊಡ್ಡದು ಮತ್ತು ಸಣ್ಣದು) ಎರಡು ಜಾತಿಯ ಏಲಕ್ಕಿಯೂ ಶೀತಕಾರಿ, ಕಹಿ, ಸುಗಂಧವುಳ್ಳದ್ದು, ಪಿತ್ತಪೀಡೆಯನ್ನು ಮತ್ತು ಕಫವನ್ನು ಪರಿಹರಿಸತಕ್ಕದ್ದು, ಹೃದ್ರೋಗ, ಮಲಪೀಡೆ, ವಸ್ತಿರೋಗ, ಮತ್ತು ಪುಂಸ್ತ್ವ ನಾಶಮಾಡುತ್ತದೆ. ಅವುಗಳೊಳಗೆ ದೊಡ್ಡದೇ ವಿಶೇಷಗುಣವುಳ್ಳದ್ದಾಗಿರುತ್ತದೆ.

26. ಲವಂಗಂ ಕಟುಕಂ ತಿಕ್ತಂ ಲಘು ನೇತ್ರಹಿತಂ ಹಿಮಂ |
ದೀಪನಂ ಪಾಚನಂ ರುಚ್ಯಂ ಕಫಪಿತ್ತಾಸ್ರನಾಶನಂ ||
ಲವಂಗದಗುಣ ತೃಷ್ಣಾಂ ಛರ್ದಿಂ ತಥಾಧ್ಮಾನಂ ಶೂಲಮಾಶು ವಿನಾಶಯೇತ್ |
ಕಾಸಂ ಶ್ವಾಸಂ ಚ ಹಿಕ್ಕಾಂ ಚ ಕ್ಷಯಂ ಕ್ಷಪಯತಿ ಧ್ರುವಂ || (ಭಾ. ಪ್ರ. 94.)

ಲವಂಗವು ಕಟು, ಕಹಿ, ಲಘು, ತಂಪು*, ದೀಪನಕಾರಿ, ಪಾಚನಕಾರಿ, ರುಚಿಕರ, ಕಫ ಮತ್ತು ಪಿತ್ತರಕ್ತಗಳನ್ನು ನಾಶಮಾಡತಕ್ಕದ್ದು; ಬಾಯಾರಿಕೆ, ವಾಂತಿ, ಹೊಟ್ಟೆಯುಬ್ಬರ, ಮತ್ತು ಶೂಲೆಯನ್ನು ಬೇಗನೆ ನಾಶಮಾಡುತ್ತದೆ; ಮತ್ತು ಕೆಮ್ಮು, ಉಬ್ಬಸ, ಬಿಕ್ಕಟ್ಟು, ಕ್ಷಯ, ಇವುಗಳನ್ನು ನಿಶ್ಚಯವಾಗಿ ಕಡಿಮೆಮಾಡುವದು.

* ಉಷ್ಣ ಮತ್ತು ತೀಕ್ಷ್ಣವಾದಾಗ್ಯೂ, ವಿಪಾಕದಲ್ಲಿ ತಂಪು (ರಾ ನಿ 104)

27. ಜಾತೀಫಲಂ ರಸೇ ತಿಕ್ತಂ ತೀಕ್ಷ್ಣೋಷ್ಣಂ ರೋಚನಂ ಲಘು |
ಜಾಯಿಕಾಯಿ ಕಟುಕಂ ದೀಪನಂ ಗ್ರಾಹಿ ಸ್ವರ್ಯಂ ಶ್ಲೇಷ್ಮಾನಿಲಾಪಹಂ ||
ಗುಣ ನಿಹಂತಿ ಮುಖವೈರಸ್ಯ-ಮಲ-ದೌರ್ಗಂಧ್ಯ-ಕೃಷ್ಣತಾಃ |
ಕೃಮಿ-ಕಾಸ-ವಮಿ-ಶ್ವಾಸ-ಶೋಷ-ಪೀನಸ-ಹೃದ್ರುಜಃ || (ಭಾ. ಪ್ರ. 93-94.)

ಜಾಯಿಕಾಯಿ ಕಹಿ, ತೀಕ್ಷ್ಣ, ಉಷ್ಣ, ರುಚಿಕರ, ಲಘು, ಕಟು, ಅಗ್ನಿದೀಪನಕಾರಿ, ಗ್ರಾಹಿ, ಸ್ವರಕಾರಿ, ಕಫವಾತಹರ, ಮತ್ತು ಬಾಯಿಯ ಒಣಗುವಿಕೆ, ಮಲ, ದುರ್ವಾಸನೆ,

ಮತ್ತು ಕರಿವರ್ಣ, ಕ್ರಿಮಿ, ಕೆಮ್ಮು, ವಾಂತಿ, ಉಬ್ಬಸ, ಶೋಷ, ಪೀನಸ, ಮತ್ತು ಹೃದ್ರೋಗ, ಇವುಗಳನ್ನು ಪರಿಹರಿಸುತ್ತದೆ.

28. ಜಾತೀಪತ್ರೀ ಲಘುಃ ಸ್ವಾದುಃ ಕಟೂಷ್ಣಾ ರುಚಿವರ್ಣಕೃತ್ ।
ಜಾಪತ್ರಿಯ ಗುಣ ಕಫ-ಕಾಸ-ವಮಿ-ಶ್ವಾಸ-ತೃಷ್ಣಾ-ಕ್ರಿಮಿ ವಿಷಾಪಹಾ ॥ (ಭಾ. ಪ್ರ. 94.)

ಜಾಪತ್ರೆಯು ಲಘು, ಸೀ, ಕಟು, ಉಷ್ಣ, ರುಚಿಕರ, ವರ್ಣಕರ, ಮತ್ತು ಕಫ, ಕೆಮ್ಮು, ವಾಂತಿ, ಉಬ್ಬಸ, ಬಾಯಾರಿಕೆ, ಕ್ರಿಮಿ, ವಿಷ, ಇವುಗಳನ್ನು ಪರಿಹರಿಸತಕ್ಕಂಥಾದ್ದು.

29. ಕರ್ಪೂರಃ ಶೀತಲೋ ವೃಷ್ಯಶ್ಚಕ್ಷುಷ್ಯೋ ಲೇಖನೋ ಲಘುಃ ।
ಸುರಭಿರ್ಮಧುರಸ್ತಿಕ್ತಃ ಕಫಪಿತ್ತವಿಷಾಪಹಃ ॥
ದಾಹತೃಷ್ಣಾಸ್ಯವೈರಸ್ಯಮೇದೋದೌರ್ಗಂಧ್ಯನಾಶನಃ ।
ಕರ್ಪೂರದ ಗುಣ ಕರ್ಪೂರೋ ದ್ವಿವಿಧಃ ಪ್ರೋಕ್ತಃ ಪಕ್ವಾಪಕ್ವಪ್ರಭೇದತಃ ॥
ಪಕ್ವಾತ್ಕರ್ಪೂರತಃ ಪ್ರಾಹುರಪಕ್ವಂ ಗುಣವತ್ತರಂ ।
ಚೀನಾಕಸಂಜ್ಞಃ ಕರ್ಪೂರಃ ಕಫಕ್ಷಯಕರಃ ಸ್ಮೃತಃ ॥
ಕುಷ್ಠಕಂಡೂವಮಿಹರಸ್ತಥಾತಿಕ್ತರಸಶ್ಚಸಃ । (ಭಾ. ಪ್ರ. 91.)

ಕರ್ಪೂರವು ಶೀತಕಾರಿ, ವೃಷ್ಯ, ಕಣ್ಣಿಗೆ ಹಿತವಾದದ್ದು, ಲೇಖನ, ಲಘು, ಸುವಾಸನೆಯುಳ್ಳದ್ದು, ಸೀ, ಕಹಿ, ಕಫಪಿತ್ತವಿಷಗಳನ್ನು ಪರಿಹರಿಸುವಂಥಾದ್ದು; ಮತ್ತು ಉರಿ, ಬಾಯಾರಿಕೆ, ಬಾಯಿ ಒಣಗುವಿಕೆ, ಮೇದಸ್ಸು, ದುರ್ವಾಸನೆ, ಇವುಗಳನ್ನು ನಾಶಮಾಡುವದು. ಕರ್ಪೂರದಲ್ಲಿ ಅಡಿಗೆ ಕರ್ಪೂರ, ಹಸಿ ಕರ್ಪೂರ, ಎಂಬ ಎರಡು ಭೇದಗಳಿವೆ; ಅವುಗಳೊಳಗೆ ಹಸಿ ಕರ್ಪೂರವೇ ಹೆಚ್ಚು ಗುಣವುಳ್ಳದ್ದು. ಚೀನೀಕರ್ಪೂರವು ಕಫವನ್ನು ಕಡಿಮೆ ಮಾಡುತ್ತದೆ; ಕುಷ್ಠ-ತುರಿಕೆ-ವಾಂತಿಗಳನ್ನು ಪರಿಹರಿಸತಕ್ಕಂಥಾದ್ದು; ಮತ್ತು ಕಹಿರಸವುಳ್ಳದ್ದಾಗಿರುತ್ತದೆ.

30. ಛತ್ರಧಾರಣ ಗುಣ ವರ್ಷಾನಿಲರಜೋಘರ್ಮಹಿಮಾದೀನಾಂ ನಿವಾರಣಂ ।
ವರ್ಣ್ಯಂ ಚಕ್ಷುಷ್ಯಮೌಜಸ್ಯಂ ಶಂಕರಂ ಛತ್ರಧಾರಣಂ ॥
(ಸು. 506.)

ಕೊಡೆಯನ್ನು ಹಿಡಕೊಳ್ಳುವದರಿಂದ ಮಳೆ, ಗಾಳಿ, ದೂಳು, ಬಿಸಿಲು, ಹಿಮ, ಮುಂತಾದವುಗಳ ನಿವಾರಣೆಯಾಗುವದಲ್ಲದೆ, ಅದು ಕಣ್ಣುಗಳಿಗೆ ಹಿತವಾದದ್ದು, ವರ್ಣವನ್ನು ಕಾಪಾಡತಕ್ಕಂಥಾದ್ದು, ತೇಜೋವೃದ್ಧಿಕರ, ಮತ್ತು ಶುಭಕರ.

31. ಶುನಃ ಸರೀಸೃಪವ್ಯಾಲವಿಷಾಣಿಭ್ಯೋ ಭಯಾಪಹಂ ।
ಶ್ರಮಸ್ಖಲನದೋಷಘ್ನಂ ಸ್ಥವಿರೇ ಚ ಪ್ರಶಸ್ಯತೇ ॥
ದಂಡಧಾರಣ ಗುಣ ಸತ್ವೋತ್ಸಾಹಬಲಸ್ಥೈರ್ಯಧೈರ್ಯವೀರ್ಯವಿವರ್ಧನಂ ।
ಅವಷ್ಟಂಭಕರಂ ಚಾಪಿ ಭಯಘ್ನಂ ದಂಡಧಾರಣಂ ॥ (ಸು. 506.)

ದಂಟಿಯನ್ನು ಉಪಯೋಗಿಸುವದರಿಂದ ನಾಯಿ, ಹಾವು, ಬೇಟೆಮೃಗ (ಹುಲಿ ಜಾತಿ), ಕೋಡುಮೃಗ, ಇವುಗಳ ಭಯ ಹೋಗುವದಲ್ಲದೆ, ಶ್ರಮ ಮತ್ತು ಜಾರಿಬೀಳುವ ಸಂಭವ ನಿವಾರಣೆಯಾಗುವದು. ಮುದಿಪ್ರಾಯದಲ್ಲಿ ಪ್ರಶಸ್ತವಾದದ್ದು. ಅದು ಆಧಾರಕರವಾಗಿ, ಭಯವನ್ನು ನಿವಾರಿಸಿ, ಸತ್ವ, ಉತ್ಸಾಹ, ಬಲ, ಸ್ಥಿರತೆ, ಧೈರ್ಯ, ಮತ್ತು ವೀರ್ಯ, ಇವುಗಳನ್ನು ವೃದ್ಧಿಪಡಿಸುವದು.

32. ಬಿಸಿಲುನೆರಳುಗಳ ಗುಣ

ಆತಪಃ ಪಿತ್ತ-ತೃಷ್ಣಾಗ್ನಿ-ಸ್ವೇದ-ಮೂರ್ಚ್ಛಾ-ಭ್ರಮಾಸ್ರಕೃತ್ ।
ದಾಹ-ವೈವರ್ಣ್ಯಕಾರೀ ಚ ಛಾಯಾ ಜೈತಾನಪೋಹತಿ ॥
(ಸು. 507.)

ಬಿಸಿಲು ಪಿತ್ತವನ್ನೂ, ಬಾಯಾರಿಕೆಯನ್ನೂ, ಅಗ್ನಿಯನ್ನೂ, ಬೆವರನ್ನೂ, ಮೂರ್ಚ್ಛೆಯನ್ನೂ, ಭ್ರಮೆಯನ್ನೂ, ರಕ್ತಪ್ರಕೋಪವನ್ನೂ, ಮೈಯುರಿಯನ್ನೂ, ವರ್ಣವಿಕಾರವನ್ನೂ ಉಂಟು ಮಾಡುತ್ತದೆ. ನೆರಳು ಈ ದೋಷಗಳನ್ನು ದೂರ ಮಾಡುತ್ತದೆ.

33. ಚಂಕ್ರಮಣ ಗುಣ

ಅಧ್ವಾ ವರ್ಣ-ಕಫ-ಸ್ಥೌಲ್ಯ-ಸೌಕುಮಾರ್ಯ-ಏನಾಶನಃ ।
ಅತ್ಯಧ್ವಾ ವಿಪರೀತೋಽಸ್ಮಾಜ್ಜರಾ-ದೌರ್ಬಲ್ಯಕೃಚ್ಚ ಸಃ ॥
ಯತ್ತು ಚಂಕ್ರಮಣಂ ನಾತಿದೇಹಪೀಡಾಕರಂ ಭವೇತ್ ।
ತದಾಯುರ್ಬಲಮೇಧಾಗ್ನಿಪ್ರದಮಿಂದ್ರಿಯಬೋಧನಂ ॥ (ಸು. 506.)

ದಾರಿ ನಡೆಯುವದರಿಂದ ವರ್ಣ, ಕಫ, ಸ್ಥೂಲತೆ, ಎಳೇತನ, ಈ ದೋಷಗಳು ನಾಶವಾಗುವವು. ಅತಿಯಾಗಿ ದಾರಿ ನಡೆಯುವದು ಇದಕ್ಕೆ ವಿರುದ್ಧಗುಣವುಳ್ಳದ್ದಾಗಿ, ಮುದಿತನವನ್ನೂ, ಬಲಹೀನತೆಯನ್ನೂ, ಉಂಟುಮಾಡುವದು. ದೇಹಕ್ಕೆ ಅತಿಪೀಡೆಯನ್ನುಂಟುಮಾಡದ ತಿರುಗಾಡುವಿಕೆಯಿಂದ ಆಯುಸ್ಸೂ, ಬಲವೂ, ಜ್ಞಾನಶಕ್ತಿಯೂ, ಜಠರಾಗ್ನಿಯೂ, ವೃದ್ಧಿಯಾಗಿ, ಇಂದ್ರಿಯಗಳು ಚುರುಕಾಗುವವು.

34. ವ್ಯಾಯಾಮ

ಶರೀರಾಯಾಸಜನನಂ ಕರ್ಮ ವ್ಯಾಯಾಮಸಂಜ್ಞಿತಂ ।
(ಸು. 503.)

ಶರೀರಕ್ಕೆ ಆಯಾಸವನ್ನುಂಟುಮಾಡುವ ಕೆಲಸ(ಕುಸ್ತಿ ಮುಂತಾದ್ದ)ಕ್ಕೆ ವ್ಯಾಯಾಮ ಎಂತ ಹೆಸರು.

ಲಾಘವಂ ಕರ್ಮಸಾಮರ್ಥ್ಯಂ ವಿಭಕ್ತಘನಗಾತ್ರತಾ ।
ದೋಷಕ್ಷಯೋಽಗ್ನಿವೃದ್ಧಿಶ್ಚ ವ್ಯಾಯಾಮಾದುಪಜಾಯತೇ ॥
ವ್ಯಾಯಾಮದೃಢಗಾತ್ರಸ್ಯ ವ್ಯಾಧಿರ್ನಾಸ್ತಿ ಕದಾಚನ ।
ವಿರುದ್ಧಂ ವಾ ವಿದಗ್ಧಂ ವಾ ಭುಕ್ತಂ ಶೀಘ್ರಂ ವಿಪದ್ಯತೇ ॥
ಭವಂತಿ ಶೀಘ್ರಂ ನೈತಸ್ಯ ದೇಹೇ ಶಿಥಿಲತಾದಯಃ ।
ನ ಚೈನಂ ಸಹಸಾಽಕ್ರಮ್ಯ ಜರಾ ಸಮಧಿರೋಹತಿ ॥

ನ ಚಾಸ್ತಿ ಸದೃಶಂ ತೇನ ಕಿಂಚಿತ್ ಸ್ಥೌಲ್ಯಾಪಕರ್ಷಕಂ ।
ಸ ಸದಾ ಗುಣಮಾಧತ್ತೇ ಬಲಿನಾಂ ಸ್ನಿಗ್ಧಭೋಜಿನಾಂ ॥
ವಸಂತೇ ಶೀತಸಮಯೇ ಸುತರಾಂ ಸ ಹಿತೋ ಮತಃ ।
ಅನ್ಯದಾಪಿ ಚ ಕರ್ತವ್ಯೋ ಬಲಾರ್ಧೇನ ಯಥಾಬಲಂ ॥
ಹೃದಯಸ್ಯೋ ಯದಾ ವಾಯುರ್ವಕ್ತ್ರಂ ಶೀಘ್ರಂ ಪ್ರಪದ್ಯತೇ ।
ಮುಖಂ ಚ ಶೋಷಂ ಲಭತೇ ತದ್ಬಲಾರ್ಧಸ್ಯ ಲಕ್ಷಣಂ ॥
ಕಿಂ ವಾ ಲಲಾಟೇ ನಾಸಾಯಾಂ ಗಾತ್ರಸಂಧಿಷು ಕಕ್ಷ್ಯಯೋಃ ।
ಯದಾ ಸಂಜಾಯತೇ ಸ್ವೇದೋ ಬಲಾರ್ಧಂ ತು ತದಾದಿಶೇತ್ ॥
ಭುಕ್ತವಾನ್ ಕೃತಸಂಭೋಗಃ ಕಾಸೀ ಶ್ವಾಸೀ ಕೃಶಃ ಕ್ಷಯೀ ।
ರಕ್ತಪಿತ್ತೀ ಕ್ಷತೀ ಶೋಷೀ ನ ತಂ ಕುರ್ಯಾತ್ಕದಾಚನ ॥
ಅತಿವ್ಯಾಯಾಮತಃ ಕಾಸೋ ಜ್ವರಶ್ಛರ್ದಿಃ ಶ್ರಮಃ ಕ್ಲಮಃ ।
ತೃಷ್ಣಾ ಕ್ಷಯಃ ಪ್ರತಮಕೋ ರಕ್ತಪಿತ್ತಂ ಚ ಜಾಯತೇ ॥

(ಭಾ. ಪ್ರ. 46.)

ವ್ಯಾಯಾಮದಿಂದ ಲಘುತ್ವ, ಕೆಲಸಮಾಡುವ ಸಾಮರ್ಥ್ಯ, ಶರೀರದ ಎಲ್ಲಾ ಭಾಗಗಳು ಸರಿಯಾಗಿ ಗಟ್ಟಿಯಾಗಿರೋಣ, ದೋಷಗಳ ಕ್ಷಯ, ಅಗ್ನಿವೃದ್ಧಿ, ಸಹ ಉಂಟಾಗುತ್ತವೆ. ವ್ಯಾಯಾಮದಿಂದ ದೃಢವಾದ ಶರೀರವುಳ್ಳವನಿಗೆ ಯಾವಾಗಲಾದರೂ ರೋಗ ಇಲ್ಲ, ಉಂಡದ್ದು ವಿರುದ್ಧವಾದದ್ದಾದರೂ, ಅತಿಯಾಗಿ ಸುಡಲ್ಪಟ್ಟದ್ದಾದರೂ, (ಹುಳಿಯಾದದ್ದಾದರೂ) ಬೇಗನೇ ಪಚನವಾಗುವದು, ಇಂಥವನಿಗೆ ದೇಹದಲ್ಲಿ ಶಿಥಿಲತ್ವ ಮುಂತಾದ್ದು ಬೇಗನೇ ಉಂಟಾಗಲಾರದು; ಮತ್ತು ಮುದಿತನವು ಇವನಲ್ಲಿ ಒಡನೆ ಆಕ್ರಮಿಸಿ ವೃದ್ಧಿಯಾಗಲಾರದು. ಸ್ಥೂಲತೆಯ ಪರಿಹಾರಕ್ಕೆ ವ್ಯಾಯಾಮಕ್ಕೆ ಸರಿಯಾದದ್ದು ಯಾವದೂ ಇಲ್ಲ. ಸ್ನಿಗ್ಧವಾಗಿ ಭೋಜನ ಮಾಡುವ ಬಲವಂತರಿಗೆ ವ್ಯಾಯಾಮವು ಯಾವಾಗಲೂ ಗುಣ ಕೊಡುತ್ತದೆ. ವಸಂತ ಋತುವಿನಲ್ಲಿಯೂ, ಶೀತಕಾಲದಲ್ಲಿಯೂ, ವ್ಯಾಯಾಮವು ಬಹಳ ಹಿತವೆನ್ನಿಸಿಕೊಂಡದೆ. ಇತರ ಕಾಲದಲ್ಲಿಯೂ ತನ್ನ ಬಲದ ಮೇಲೆ ಲಕ್ಷ್ಯವಿಟ್ಟು ಅರ್ಧ ಬಲದಿಂದ ವ್ಯಾಯಾಮಮಾಡತಕ್ಕದ್ದು. ಹೃದಯದ ವಾಯು ಶೀಘ್ರವಾಗಿ ಬಾಯಿಗೆ ಬರುವದು ಮತ್ತು ಮುಖವು ಬಾಡುವದು ಅರ್ಧ ಬಲದ ಲಕ್ಷಣವೆಂತ ತಿಳಿಯಬೇಕು; ಅಥವಾ, ಹಣೆಯಲ್ಲಿ, ಮೂಗಿನಲ್ಲಿ, ಶರೀರದ ಸಂದುಗಳಲ್ಲಿ, ಮತ್ತು ಕಂಕುಳಲ್ಲಿ ಯಾವಾಗ ಬೆವರು ಬರುತ್ತದೋ ಆಗ್ಗೆ ಬಲಾರ್ಧವಾಯಿತೆಂತ ತಿಳಿಯಬೇಕು. ಉಂಡ ಕೂಡಲೇ, ಸಂಭೋಗ ಮಾಡಿದ ಕೂಡಲೇ, ಮತ್ತು ಕೆಮ್ಮು, ಉಬ್ಬಸ, ಕೃಶತೆ, ಕ್ಷಯ, ರಕ್ತಪಿತ್ತ, ಕ್ಷತ, ಶೋಷ, ಈ ರೋಗಗಳಿಂದ ಪೀಡಿತರಾದವರು ಯಾವಾಗಲಾದರೂ ವ್ಯಾಯಾಮವನ್ನು ಅವಲಂಬಿಸ ಬಾರದು. ವ್ಯಾಯಾಮದ ಸೇವನೆಯು ಅತಿಯಾದರೆ, ಕೆಮ್ಮು, ಜ್ವರ, ವಾಂತಿ, ಶ್ರಮ, ಅಶಕ್ತಿ, ಬಾಯಾರಿಕೆ, ಕ್ಷಯ, ತಮಕವ್ಯಾಧಿ, ರಕ್ತಪಿತ್ತ, ಈ ರೋಗಗಳು ಉಂಟಾಗುವವು.

ಷರಾ ಇದೇ ಅಭಿಪ್ರಾಯಕ್ಕೆ ಸು 503 04 ನೋಡು

ವಯೋಬಲಶರೀರಾಣಿ ದೇಶಕಾಲಾಶನಾನಿ ಚ ।

ಸವಿಾಕ್ಷ್ಯ ಕುರ್ಯಾದ್ವ್ಯಾಯಾಮಮನ್ಯಥಾ ರೋಗಮಾಪ್ನುಯಾತ್ ||
(ಸು. 504.)

ಪ್ರಾಯ, ಬಲ, ಶರೀರ, ದೇಶ, ಕಾಲ, ಮತ್ತು ಆಹಾರ, ಇವುಗಳ ಮೇಲೆ ಲಕ್ಷ್ಯವಿಟ್ಟು ವ್ಯಾಯಾಮವನ್ನು ಮಾಡತಕ್ಕದ್ದು. ಇದಕ್ಕೆ ವಿರೋಧವಾಗಿ ಮಾಡಿದರೆ, ರೋಗಗಳು ಪ್ರಾಪ್ತವಾದಾವು.

35. ಯದಾ ತು ಮನಸಿ ಕ್ಲಾಂತೇ ಕರ್ಮಾತ್ಮಾನಃ ಕ್ಲಮಾನ್ವಿತಾಃ |
ವಿಷಯೇಭ್ಯೋ ನಿವರ್ತಂತೇ ತದಾ ಸ್ವಪಿತಿ ಮಾನವಃ ||
ನಿದ್ರಾಯತ್ತಂ ಸುಖಂ ದುಃಖಂ ಪುಷ್ಟಿಃ ಕಾರ್ಶ್ಯಂ ಬಲಾಬಲಂ |
ವೃಷತಾ ಕ್ಲೀವತಾ ಜ್ಞಾನಮಜ್ಞಾನಂ ಜೀವಿತಂ ನ ಚ ||
ಅಕಾಲೇಽತಿಪ್ರಸಂಗಾಚ್ಚ ನ ಚ ನಿದ್ರಾ ನಿಷೇವಿತಾ |
ಸುಖಾಯುಷೀ ಪರಾಕುರ್ಯಾತ್ಕಾಲರಾತ್ರಿರಿವಾಪರಾ ||
ಸೈವ ಯುಕ್ತಾ ಪುನರ್ಯುಂಕ್ತೇ ನಿದ್ರಾ ದೇಹಂ ಸುಖಾಯುಷಾ |
ಪುರುಷಂ ಯೋಗಿನಂ ಸಿಧ್ಯಾಸತ್ಯಾ ಬುದ್ಧಿರಿವಾಗತಾ ||
ಗೀತಾಧ್ಯಯನಮದ್ಯಸ್ತ್ರೀಕರ್ಮಭಾರಾಧ್ವಕರ್ಶಿತಾಃ |
ಅಜೀರ್ಣಿನಃ ಕ್ಷತಾಃ ಕ್ಷೀಣಾ ವೃದ್ಧಾ ಬಾಲಾಸ್ತಥಾಬಲಾಃ ||
ತೃಷ್ಣಾತೀಸಾರಶೂಲಾರ್ತಾಃ ಶ್ವಾಸಿನಃ ಶೂಲಿನಃ ಕೃಶಾಃ |
ಪತಿತಾಭಿಹತೋನ್ಮತ್ತಾಃ ಕ್ಲಾಂತಾ ಯಾನಪ್ರಜಾಗರೈಃ ||
ಕ್ರೋಧಶೋಕಭಯಕ್ಲಾಂತಾ ದಿವಾಸ್ವಪ್ನೋಚಿತಾಶ್ಚ ಯೇ |
ನಿದ್ರೆ ಸರ್ವ ಏತೇ ದಿವಾಸ್ವಪ್ನಂ ಸೇವೇರನ್ ಸಾರ್ವಕಾಲಿಕಂ ||
ಧಾತುಸಾಮ್ಯಾತ್ತಥಾಹ್ಯೇಷಾಂ ಬಲಂ ಚಾಪ್ಯುಪಚಾಯತೇ |
ಶ್ಲೇಷ್ಮಾ ಪುಷ್ಯತಿ ಚಾಂಗಾನಿ ಸ್ಥೈರ್ಯಂ ಭವತಿ ಚಾಯುಷಃ ||
ಶ್ಲೇಷ್ಮಾ ಚಾದಾನರೂಕ್ಷಾಣಾಂ ವರ್ಧಮಾನೇ ಚ ಮಾರುತೇ |
ರಾತ್ರೀಣಾಂ ಚಾತಿಸಂಕ್ಷೇಪಾದ್ದಿವಾಸ್ವಪ್ನಃ ಪ್ರಶಸ್ಯತೇ ||
ಗ್ರೀಷ್ಮವರ್ಜ್ಯೇಷು ಕಾಲೇಷು ದಿವಾಸ್ವಪ್ನಾತ್ ಪ್ರಕುಪ್ಯತಃ |
ಶ್ಲೇಷ್ಮಪಿತ್ತೇ ದಿವಾಸ್ವಪ್ನಸ್ತಸ್ಮಾತ್ತೇಷು ನ ಶಸ್ಯತೇ ||
ಮೇದಸ್ವಿನಃ ಸ್ನೇಹನಿತ್ಯಾಃ ಶ್ಲೇಷ್ಮಲಾಃ ಶ್ಲೇಷ್ಮರೋಗಿಣಃ |
ದೂಷೀವಿಷಾರ್ತಾಶ್ಚ ದಿವಾ ನ ಶಯೀರನ್ ಕದಾಚನ ||
ಹಲೀಮಕಃ ಶಿರಃಶೂಲಂ ಸ್ತೈಮಿತ್ಯಂ ಗುರುಗಾತ್ರತಾ |
ಅಂಗಮರ್ದೋಽಗ್ನಿನಾಶಶ್ಚ ಪ್ರಲೇಪೋ ಹೃದಯಸ್ಯ ಚ ||
ಶೋಥಾರೋಚಕಹೃಲ್ಲಾಸಪೀನಸಾರ್ಧಾವಭೇದಕಾಃ |
ಕೋಠಾಶ್ಚ ಪಿಡಕಾಃ ಕಂಡೂಸ್ತಂದ್ರಾ ಕಾಸೋ ಗಲಾಮಯಾಃ ||
ಸ್ಮೃತಿಬುದ್ಧಿಪ್ರಮೋಹಾಶ್ಚ ಸಂಶೋಥಃ ಸ್ರೋತಸಾಂ ಜ್ವರಃ |
ಇಂದ್ರಿಯಾಣಾಮಸಾಮರ್ಥ್ಯಂ ವಿಷವೇಗಪ್ರವರ್ತನಂ ||

ಭವೇನ್ನಪ್ರಾಣಾಂ ದಿವಾಸ್ವಪ್ನಸ್ಯಾಹಿತಸ್ಯ ನಿಷೇವಣಾತ್ ।
ತಸ್ಮಾದ್ಧಿತಾಹಿತಂ ಸ್ವಪ್ನಂ ಬುದ್ಧ್ವಾ ಸ್ವಪ್ಯಾತ್ ಸುಖಂ ಬುಧಃ ॥
(ಚ. 117-18.)

ಯಾವಾಗ ಮನಸ್ಸು ಬಳಲುತ್ತಲೇ, ಕರ್ಮಾತ್ಮಗಳು ಸಹ ಬಳಲಿ ತಮ್ಮತಮ್ಮ ವಿಷಯಗಳನ್ನು ಬಿಟ್ಟು ಹಿಂತಿರುಗುತ್ತವೋ, ಆಗ್ಗೆ ಮನುಷ್ಯನು ನಿದ್ರೆಹೋಗುತ್ತಾನೆ. ಸುಖದುಃಖಗಳು, ಸ್ಥೂಲಕೃಶತೆಗಳು, ಬಲಾಬಲಗಳು, ಪೃಷತ್ವ ನಪುಂಸಕತ್ವಗಳು, ಜ್ಞಾನಾಜ್ಞಾನಗಳು, ಜೀವಿತ ಮರಣಗಳು, ಸಹ ನಿದ್ರೆಯನ್ನು ಹೊಂದಿರುತ್ತವೆ. ಅಕಾಲದಲ್ಲಿ ನಿದ್ರೆಮಾಡುವದು, ಅತಿಯಾಗಿ ನಿದ್ರೆಮಾಡುವದು, ಮತ್ತು ನಿದ್ರೆಮಾಡದೆ ಇರುವದು, ಇವು, ಇನ್ನೊಂದು ಕಾಳರಾತ್ರಿಯಂತೆ, ಸುಖವನ್ನೂ, ಆಯುಸ್ಸನ್ನೂ ದೂರಮಾಡುವವು. ಆದರೆ, ಯೋಗಿಯಾದ ಪುರುಷನಿಗೆ ಪ್ರಾಪ್ತವಾದ ಬುದ್ಧಿಯಿಂದ ಸಾಯುಜ್ಯಸಿದ್ಧಿಯಾದಂತೆ, ಅದೇ ನಿದ್ರೆಯು ಯುಕ್ತವಾಗಿದ್ದಾಗ, ಅದರಿಂದ ದೇಹಕ್ಕೆ ಸುಖವೂ, ಆಯುಸ್ಸೂ, ಬಂದು ಕೂಡುವವು. ಹಾಡು, ಅಧ್ಯಯನ, ಮದ್ಯ, ಸ್ತ್ರೀ, ಕೆಲಸ, ಭಾರ, ದಾರಿ, ಇವುಗಳಿಂದ ಬಳಲಿದವರು, ಜೀರ್ಣವಿಲ್ಲದವರು, ಕ್ಷತರು, ಕ್ಷೀಣರು, ಮುದುಕರು, ಬಾಲರು, ಬಲಹೀನರು. ಬಾಯಾರಿಕೆ ಮತ್ತು ಅತಿಸಾರದ ಶೂಲೆ, ಇವುಗಳಿಂದ ಪೀಡಿತರಾದವರು, ಉಬ್ಬಸದವರು, ಶೂಲೆರೋಗವುಳ್ಳವರು, ಕೃಶರು, ಬಿದ್ದವರು, ಪೆಟ್ಟುತಾಗಿದವರು, ಉನ್ಮಾದರೋಗದವರು, ಯಾನದಿಂದ ಅಥವಾ ಜಾಗರಣದಿಂದ ಬಳಲಿದವರು, ಸಿಟ್ಟಿನಿಂದ ಅಥವಾ ಶೋಕದಿಂದ ಅಥವಾ ಭಯದಿಂದ ಆಯಾಸಪಟ್ಟವರು ಮತ್ತು ಹಗಲು ನಿದ್ರೆ ಯಾರಿಗೆ ಸಾತ್ಮ್ಯವೋ ಅವರು, ಇವರೆಲ್ಲಾ* ಯಾವ ಕಾಲದಲ್ಲಿಯಾದರೂ ಹಗಲು ನಿದ್ರೆಯನ್ನು ಸೇವಿಸಬಹುದು. ಹಾಗೆ ಹಗಲು ನಿದ್ರೆಮಾಡುವದರಿಂದ ಅವರಿಗೆ, ಧಾತುಗಳು ಸಮವಾಗಿ, ಬಲವು ಕೂಡಿಬರುವದು; ಶ್ಲೇಷ್ಮವು ಅಂಗಗಳನ್ನು ಪೋಷಣೆಮಾಡುವದು, ಮತ್ತು ಆಯುಸ್ಸಿನ ಸ್ಥಿರತ್ವ ಉಂಟಾಗುವದು. ರಾತ್ರಿಗಳು ಅತಿಸಂಕ್ಷೇಪವಾಗಿ, ವಾಯುವು ವೃದ್ಧಿಯಾಗುತ್ತಾ, (ಉತ್ತರಾಯಣದ ಸೂರ್ಯನ) ಆದಾನದಿಂದ ಕಫ ಕಡಿಮೆಯಾಗಿ, ರೂಕ್ಷವಾದವರಿಗೆ, ಕಫಕರವಾದ ಹಗಲು ನಿದ್ರೆಯು ಪ್ರಶಸ್ತವಾದದ್ದಾಗಿರುತ್ತದೆ. ಗ್ರೀಷ್ಮಋತುವಲ್ಲದೆ ಇತರ ಕಾಲಗಳಲ್ಲಿ ಹಗಲು ನಿದ್ರೆಮಾಡುವದರಿಂದ ಕಫ ಮತ್ತು ಪಿತ್ತ ಪ್ರಕೋಪಪಡುತ್ತವಾದ್ದರಿಂದ, ಆ ಋತುಗಳಲ್ಲಿ ಹಗಲು ನಿದ್ರೆ ಹಿತವಲ್ಲ. ಮೇದಸ್ಸು ಹೆಚ್ಚುಳ್ಳವರೂ, ನಿತ್ಯದಲ್ಲೂ ಸ್ನೇಹ ಉಪಯೋಗಿಸುವವರೂ, ಕಫ ಹೆಚ್ಚಾಗಿರುವವರೂ, ಕಫರೋಗಿಗಳೂ, ದೂಷೀವಿಷಗಳಿಂದ ಪೀಡಿತರೂ, ಯಾವಾಗಲಾದರೂ ಹಗಲು ನಿದ್ರೆಮಾಡಬಾರದು. ಹಲೀಮಕರೋಗ, ತಲೆಶೂಲೆ, ಸ್ತೈಮಿತ್ಯ, ಶರೀರ ಭಾರವಾಗಿರೋಣ, ಅಂಗಗಳ ನೋವು, ಅಗ್ನಿಯಿಲ್ಲದೆ ಹೋಗೋಣ, ಹೃದಯದಲ್ಲಿ ಪ್ರಲೇಪ, ಶೋಫ, ಅರುಚಿ, ಬಿಕ್ಕಟ್ಟು, ಪೀನಸ, ಅರತಲೆ ಒಡೆಯುವದು, ಕೋಷ್ಠ, ಪಿಡಕ, ತುರಿಗಜ್ಜಿ, ತಂದ್ರಾ, ಕೆಮ್ಮು, ಗಂಟಲರೋಗಗಳು, ನೆನಪಿಲ್ಲದಿರುವದು, ಬುದ್ಧಿವ್ಯತ್ಯಾಸ, ಸ್ರೋತಸ್ಸುಗಳ ತಡೆ, ಜ್ವರ, ಇಂದ್ರಿಯಗಳಿಗೆ ಸಾಮರ್ಥ್ಯವಿಲ್ಲದಿರೋಣ, ವಿಷವೇಗಪ್ರವೃತ್ತಿ, ಈ ದೋಷಗಳು ಅಹಿತವಾದ ಹಗಲು ನಿದ್ರೆಯನ್ನು ಸೇವಿಸುವ ಜನರಿಗೆ ಉಂಟಾಗುವವು. ಆದ್ದರಿಂದ ನಿದ್ರೆಯು ಹಿತವೋ ಅಹಿತವೋ ಎಂಬದನ್ನು ವಿಚಾರಬುದ್ಧಿಯಿಂದ ತಿಳಿದು ಬುದ್ಧಿವಂತನು ಸುಖವಾಗಿ ನಿದ್ರೆಮಾಡತಕ್ಕದ್ದು

ಪರಾ * ಇವರೆಲ್ಲ ಹಗಲು ಒಂದು ಮುಹೂರ್ತಕಾಲ ನಿದ್ರೆಮಾಡುವದಕ್ಕೆ ಪ್ರತಿಷೇಧವಿಲ್ಲ ಎಂತಲೂ, ರಾತ್ರಿ ಜಾಗರಣ ಮಾಡಿದವರು ಜಾಗರಣ ಕಾಲದ ಅರ್ಧದ ಮಟ್ಟಿಗೆ ಹಗಲು ನಿದ್ರೆಮಾಡಬಹುದೆಂತಲೂ ಸುಶ್ರುತ (ಪು 322.)

ದಿವಾ ವಾ ಯದಿ ವಾ ರಾತ್ರೌ ನಿದ್ರಾ ಸಾತ್ಮೀಕೃತಾ ತು ಯೈಃ ।
ನ ತೇಷಾಂ ಸ್ವಪತಾಂ ದೋಷೋ ಜಾಗ್ರತಾಂ ಚೋಪಜಾಯತೇ ॥ (ಭಾ. ಪ್ರ. 54.)

ಹಗಲು ಆಗಲಿ, ರಾತ್ರಿಯಾಗಲಿ, ಯಾರು ನಿದ್ರೆಯನ್ನು ಸಾತ್ಮ್ಯಮಾಡಿಕೊಂಡಿದ್ದಾರೋ, ಅವರಿಗೆ (ಹಗಲು) ನಿದ್ರೆಮಾಡಿದ್ದರಿಂದ ದೋಷವಿಲ್ಲ. ನಿದ್ರೆಮಾಡದೆ ಜಾಗರಣೆ ಮಾಡಿದರೇನೇ, ದೋಷ ಉಂಟಾಗುವದು.

ಪರಾ ಇದೇ ತಾತ್ಪರ್ಯ ಸು ದಲ್ಲಿ ಕಾಣುತ್ತದೆ (ಪು 322)

ನಾನಾ ಜಾತೀಯ ನಿದ್ರೆ

ತಮೋಭವಾ ಶ್ಲೇಷ್ಮಸಮುದ್ಭವಾ ಚ ಮನಃಶರೀರಶ್ರಮಸಂಭವಾ ಚ ।
ಆಗಂತುಕೀ ವ್ಯಾಧ್ಯನುವರ್ತನೀ ಚ ರಾತ್ರಿಸ್ವಭಾವಪ್ರಭವಾ ಚ ನಿದ್ರಾ ॥
ರಾತ್ರಿಸ್ವಭಾವಪ್ರಭವಾ ಮತಾ ಯಾ ತಾಂ ಭೂತಧಾತ್ರೀಂ ಪ್ರವದಂತಿ ನಿದ್ರಾಂ ।
ತಮೋಭವಾಮಾಹುರಘಸ್ಯ ಮೂಲಂ ಶೇಷಂ ಪುನರ್ವ್ಯಾಧಿಷು ನಿರ್ದಿಶಂತಿ ॥
(ಚ 119.)

ನಿದ್ರೆಯಲ್ಲಿ, ತಮೋಗುಣವೇ ಆಗಿರುವದೊಂದು, ಕಫದಿಂದ ಹುಟ್ಟುವದೊಂದು, ಮನಸ್ಸಿನ ಮತ್ತು ಶರೀರದ ಶ್ರಮದ ದೆಸೆಯಿಂದ ಹುಟ್ಟುವದೊಂದು, (ಭಂಗಿ ಇತ್ಯಾದಿಯಿಂದ) ಆಗಂತು ಒಂದು, ವ್ಯಾಧಿಯನ್ನನುಸರಿಸಿ ಬರುವದೊಂದು, ರಾತ್ರಿಯ ಸ್ವಭಾವದಿಂದಲೇ ಹುಟ್ಟುವದೊಂದು, ಹೀಗೆ ಭೇದಗಳಿವೆ. ಅವುಗಳೊಳಗೆ ರಾತ್ರಿಸ್ವಭಾವದಿಂದ ಹುಟ್ಟುವ ನಿದ್ರೆಯೇ ಜೀವಿಗಳಿಗೆ ತೊತ್ತಿ ಎನ್ನಿಸಿಕೊಳ್ಳುತ್ತಾಳೆ. ತಮೋಗುಣಜನ್ಯವಾದದ್ದು ಪಾಪಕ್ಕೆ ಮೂಲ, ಮಿಕ್ಕವು ರೋಗಗಳೊಳಗೆ ಸೇರಿದವಾಗಿರುತ್ತವೆ.

ದಿವಾನಿದ್ರೆಯ ಮತ್ತು ರಾತ್ರಿ ಜಾಗರಣದ ದೋಷ

ವಿಕೃತಿರ್ಹಿ ದಿವಾಸ್ವಪ್ನೋ ನಾಮ । ತತ್ರ ಸ್ವಪತಾಮಧರ್ಮಃ ಸರ್ವ ದೋಷಪ್ರಕೋಪಶ್ಚ । ತತ್ಪ್ರಕೋಪಾಚ್ಚ ಕಾಸ-ಶ್ವಾಸ-ಪ್ರತಿಶ್ಯಾಯ-ಶಿರೋಗೌರವಾಂಗಮರ್ದಾರೋಚಕ-ಜ್ವರಾಗ್ನಿದೌರ್ಬಲ್ಯಾನಿ ಭವಂತಿ। ರಾತ್ರಾವಪಿ ಜಾಗರಿತವತಾಂ ವಾತಪಿತ್ತನಿಮಿತ್ತಾಸ್ತ ಏವೋಪದ್ರವಾ ಭವಂತಿ ।

ತಸ್ಮಾನ್ನ ಜಾಗೃಯಾದ್ರಾತ್ರೌ ದಿವಾ ಸ್ವಪ್ನಂ ಚ ವರ್ಜಯೇತ್ ।
ಜ್ಞಾತ್ವಾ ದೋಷಕರಾವೇತೌ ಬುಧಃ ಸ್ವಪ್ನಂ ಮಿತಂ ಚರೇತ್ ॥ (ಸು. 322.)

ಹಗಲು ನಿದ್ರೆ ಎಂಬದು ವಿಕಾರವಾಗಿರುತ್ತದೆ. ಆ ನಿದ್ರೆಯಿಂದ ಅಧರ್ಮವೂ, ಸರ್ವ ದೋಷಗಳ ಪ್ರಕೋಪವೂ, ಉಂಟಾಗುವವು. ಆ ಪ್ರಕೋಪದಿಂದ ಕೆಮ್ಮು, ಉಬ್ಬಸ, ನೆಗಡಿ, ತಲೆಭಾರ, ಮೈನೋವು, ಅರುಚಿ, ಜ್ವರ, ಮತ್ತು ಅಗ್ನಿಮಾಂದ್ಯ ಉಂಟಾಗುವವು. ರಾತ್ರಿ ಜಾಗರ ಮಾಡುವದರಿಂದ ವಾತ ಮತ್ತು ಪಿತ್ತದ ನಿಮಿತ್ತವಾಗಿ ಅದೇ ಉಪದ್ರವಗಳು ಉಂಟಾಗುವವು. ಆದ್ದರಿಂದ ರಾತ್ರಿ ಜಾಗರಮಾಡಬಾರದು; ಹಗಲು ನಿದ್ರೆಯನ್ನು ಬಿಡಬೇಕು. ಇವೆರಡೂ ದೋಷಕರವೆಂಬದನ್ನು ತಿಳಿದು, ಬುದ್ಧಿವಂತನು ಮಿತವಾಗಿ ನಿದ್ರೆಮಾಡಬೇಕಾಗಿರುತ್ತದೆ.

36. ಅತಿಸ್ತ್ರೀಸಂಪ್ರಯೋಗಾಚ್ಚ ರಕ್ಷೇದಾತ್ಮಾನಮಾತ್ಮವಾನ್ ।
ಶೂಲ-ಕಾಸ-ಜ್ವರ-ಶ್ವಾಸ-ಕಾರ್ಶ್ಯ-ಪಾಂಡ್ವಾಮಯ-ಕ್ಷಯಾಃ ॥
ಅತಿವ್ಯವಾಯಾಜ್ಜಾಯಂತೇ ರೋಗಾಶ್ಚಾಕ್ಷೇಪಕಾದಯಃ ।
ವ್ಯವಾಯ ಆಯುಷ್ಮಂತೋ ಮಂದಜರಾ ವಪುರ್ವರ್ಣಬಲಾನ್ವಿತಾಃ ॥
ಸ್ಥಿರೋಪಚಿತಮಾಂಸಾಶ್ಚ ಭವಂತಿ ಸ್ತ್ರೀಷು ಸಂಯತಾಃ ।
ತ್ರಿಭಿಸ್ತ್ರಿಭಿರಹೋಭಿರ್ಹಿ ಸಮಿಯಾತ್ ಪ್ರಮದಾಂ ನರಃ ॥
ಸರ್ವೇಷ್ವೃತುಷು ಘರ್ಮೇಷು ಪಕ್ಷಾತ್ ಪಕ್ಷಾದ್ ವ್ರಜೇದ್ಬುಧಃ। (ಸು 510.)

ಮನುಷ್ಯನು ಅತಿಯಾಗಿ ಸ್ತ್ರೀಸಂಭೋಗಮಾಡದಂತೆ ತನ್ನನ್ನು ವಿಚಾರಬುದ್ಧಿಯಿಂದ ಕಾಪಾಡಿಕೊಳ್ಳಬೇಕು. ಅತಿ ಸ್ತ್ರೀಭೋಗದಿಂದ ಶೂಲೆ, ಕೆಮ್ಮು, ಜ್ವರ, ಉಬ್ಬಸ, ಕೃಶತೆ, ಪಾಂಡುರೋಗ, ಕ್ಷಯ, ಆಕ್ಷೇಪಕ, ಮೊದಲಾದ ರೋಗಗಳು ಸಂಭವಿಸುತ್ತವೆ. ಸ್ತ್ರೀಯರ ವಿಷಯದಲ್ಲಿ ಮಿತವಾಗಿದ್ದವರು ಆಯುಷ್ಮಂತರೂ, ಶರೀರದ ವರ್ಣ ಮತ್ತು ಬಲ ಕೆಡದವರೂ, ಮುದಿತನ ಮೆಲ್ಲಗಾದವರೂ, ಸ್ಥಿರವಾದ ಮಾಂಸ ಕೂಡಿದವರೂ, ಆಗುತ್ತಾರೆ. ಬುದ್ಧಿವಂತನು ಉಷ್ಣಕಾಲದಲ್ಲಿ ಒಂದೊಂದು ಪಕ್ಷ ಬಿಟ್ಟು, ಇತರ ಎಲ್ಲಾ ಋತುಗಳಲ್ಲಿಯೂ ಮೂರು ಮೂರು ದಿನವಾದರೂ ಬಿಟ್ಟು, ಪ್ರಮದೆಯಾದ ಸ್ತ್ರೀಯನ್ನು ಕೂಡಬೇಕಾದದ್ದು.

ಪರಾ "ಗ್ರೀಷ್ಮೇಷು ಪಕ್ಷಾನ್ನಾಸಾದ್ಯ ಜೇದ್ಬುಧಃ" । — ಗ್ರೀಷ್ಮಋತುವಿನಲ್ಲಿ ಪಕ್ಷಕ್ಕೊಮ್ಮೆ ಅಥವಾ ಒಂದು ತಿಂಗಳಿಗೊಮ್ಮೆ ಸ್ತ್ರೀಸಹವಾಸ ಮಾಡಬೇಕು (ರಾ 175)

ಶರೀರೇ ಜಾಯತೇ ನಿತ್ಯಂ ದೇಹಿನಾಂ ಸುರತಸ್ಪೃಹಾ ।
ಅವ್ಯವಾಯಾನ್ಮೇಹಮೇದೋವೃದ್ಧಿಃ ಶಿಥಿಲತಾ ತನೋಃ ॥ (ನಿ. ರತ್ನಾಕರ.)

ಶರೀರಿಗಳಿಗೆಲ್ಲಾ ವ್ಯವಾಯದ ಇಚ್ಛೆಯು ನಿತ್ಯವಾಗಿರುತ್ತದೆ. ಅಂಥಾ ವ್ಯವಾಯವನ್ನು ಬಿಟ್ಟಿರುವದರಿಂದ ಶರೀರದಲ್ಲಿ ಮೇದಸ್ಸಿನ ವೃದ್ಧಿ ಮತ್ತು ದೇಹದ ಶಿಥಿಲತೆ ಉಂಟಾಗುತ್ತವೆ.

37. ಹೆಂಗಸಿಗೂ ಗಂಡಸಿಗೂ ಪ್ರಾಯಕಾಲ
ಪಂಚವಿಂಶೇ ತತೋ ವರ್ಷೇ ಪುಮಾನ್ ನಾರೀ ತು ಷೋಡಶೇ ।
ಸಮತ್ವಾಗತವೀರ್ಯೌ ತೌ ಜಾನೀಯಾತ್ಕುಶಲೋ ಭಿಷಕ್ ॥
(ಸು. 128.)

25 ವರ್ಷ ಪ್ರಾಯದ ಗಂಡಸೂ, 16 ವರ್ಷ ಪ್ರಾಯದ ಹೆಂಗಸೂ, ವೀರ್ಯದಲ್ಲಿ ಸಮತ್ವವನ್ನು ಹೊಂದಿದವರೆಂತ ಪ್ರವೀಣನಾದ ವೈದ್ಯನು ತಿಳಿಯಬೇಕು.

38. ಊನಷೋಡಶವರ್ಷಾಯಾಮಪ್ರಾಪ್ತಃ ಪಂಚವಿಂಶತಿಂ ।
ಯದ್ಯಾದತ್ತೇ ಪುಮಾನ್ಗರ್ಭಂ ಕುಕ್ಷಿಸ್ಥಃ ಸ ವಿಪದ್ಯತೇ ॥
ಅತ್ಯಂತ ಬಾಲೆಯ ವಿಷಯ ಜಾತೋ ವಾ ನ ಚಿರಂ ಜೀವೇಜ್ಜೀವೇದ್ವಾ ದುರ್ಬಲೇಂದ್ರಿಯಃ ।
ತಸ್ಮಾದತ್ಯಂತಬಾಲಾಯಾಂ ಗರ್ಭಾಧಾನಂ ನ ಕಾರಯೇತ್ ॥ (ಸು. 367.)

16 ವರ್ಷ ಪ್ರಾಯವಾಗದವಳಲ್ಲಿ, 25 ವರ್ಷ ಪ್ರಾಯವಾಗದ ಗಂಡಸು ಗರ್ಭಾಧಾನ ಮಾಡಿದರೆ, ಆ ಗರ್ಭಕ್ಕೆ ಹೊಟ್ಟೆಯೊಳಗೇನೇ ಕೆಡಕು ಬರುವದು; ಅಥವಾ ಹುಟ್ಟಿದರೆ, ಅದು ಹೆಚ್ಚುಕಾಲ ಬದುಕದು; ಅಥವಾ ಬದುಕಿದ ಪಕ್ಷದಲ್ಲಿ, ದುರ್ಬಲವಾದ ಇಂದ್ರಿಯಗಳುಳ್ಳವ ನಾಗುವನು; ಆದ್ದರಿಂದ ಅತ್ಯಂತ ಬಾಲೆಯಾದವಳಲ್ಲಿ ಗರ್ಭಾಧಾನವನ್ನು ಮಾಡಕೂಡದು.

ಪರಾ ಗಂಡಸಿಗೆ 20 ವರ್ಷ ಪ್ರಾಯ ಪೂರ್ಣವಾದರೆ ಸಾಕೆಂತ ವಾಗ್ಭಟನ ಅಭಿಪ್ರಾಯ (ಪು 138)

39. ವೃದ್ಧರು ಮತ್ತು ರೋಗಿಗಳ ವಿಷಯ

ಅತಿವೃದ್ಧಾಯಾಂ ದೀರ್ಘರೋಗಿಣ್ಯಾಮನ್ಯೇನ ವಾ ವಿಕಾರೇಣೋಪಸೃಷ್ಟಾಯಾಂ ಗರ್ಭಾಧಾನಂ ನೈವ ಕುರ್ವೀತ | ಪುರುಷಸ್ಯಾಪ್ಯೇವಂವಿಧಸ್ಯ ತ ಏವ ದೋಷಾಃ ಸಂಭವಂತಿ | (ಸು. 367.)

ಅತಿ ವೃದ್ಧಳಾದವಳಲ್ಲಿ, ದೀರ್ಘಕಾಲದ ರೋಗವುಳ್ಳವಳಲ್ಲಿ, ಅಥವಾ ಬೇರೆ ವ್ಯಾಧಿಯಿಂದ ಕೂಡಿರುವವಳಲ್ಲಿ, ಗರ್ಭಾಧಾನವನ್ನು ಮಾಡಕೂಡದು ಪುರುಷನು ಈ ವಿಧದವನಾದಲ್ಲಿಯೂ, ಅವೇ ದೋಷ*ಗಳು ಸಂಭವಿಸುವವು.

ಪರಾ *38ನೇ ಸಂ ನೋಡು

40. ಹೆಂಗಸಿನ ವಯೋಭೇದಗಳು

ಬಾಲೇತಿ ಗೀಯತೇ ನಾರೀ ಯಾವದ್ವರ್ಷಾಣಿ ಷೋಡಶ |
ತತಸ್ತು ತರುಣೀ ಜ್ಞೇಯಾ ದ್ವಾತ್ರಿಂಶದ್ವತ್ಸರಾವಧಿ ||
ತದೂರ್ಧ್ವಮಧಿರೂಢಾ ಸ್ಯಾತ್ಪಂಚಾಶದ್ವತ್ಸರಾವಧಿ |
ವೃದ್ಧಾ ತತ್ಪರತೋ ಜ್ಞೇಯಾ ಸುರತೋತ್ಸವವರ್ಜಿತಾ || (ಭಾ. ಪ್ರ. 57.)

ಹೆಂಗಸು 16 ವರ್ಷಗಳ ವರೆಗೆ ಬಾಲೆಯೆಂತಲೂ, ಅನಂತರ 32 ವರ್ಷಗಳ ವರೆಗೆ ತರುಣಿಯೆಂತಲೂ, ಆ ಮೇಲೆ 50 ವರ್ಷಗಳ ವರೆಗೆ ಪ್ರೌಢೆ ಎಂತಲೂ, ಹೇಳಲ್ಪಡುತ್ತಾಳೆ. ಅದರನಂತರ ಸುರತದ ಹರ್ಷವಿಲ್ಲದ ವೃದ್ಧಳೆಂತ ತಿಳಿಯಬೇಕು.

41. ಸಂತತಿಯಾಗುವದಕ್ಕೆ ಪ್ರಾಯಾವಧಿ

ಪಂಚಪಂಚಾಶತೋ ನಾರೀ ಸಪ್ತಸಪ್ತತಿತಃ ಪುಮಾನ್ |
ದ್ವಾವೇತೌ ನ ಪ್ರಸೂಯೇತೇ ಪ್ರಸೂಯೇತೇ ವ್ಯತಿಕ್ರಮಾತ್ ||
(ರಾಜವಲ್ಲಭ 176.)

55 ವರ್ಷ ಪ್ರಾಯ ಕಳೆದ ಹೆಂಗಸಿನಿಂದಲೂ, 77 ವರ್ಷ ಪ್ರಾಯ ಕಳೆದ ಗಂಡಸಿನಿಂದಲೂ, ಸಂತತಿ ಆಗುವದಿಲ್ಲ. ಕ್ರಮತಪ್ಪಿ ಅಂಧವರಿಂದ ಸಂತತಿ ಆಗುವದುಂಟು.

42. ಮೈಥುನ ವರ್ಜ್ಯಮಾಡಬೇಕಾದವರು

ಅತ್ಯಾಶಿತೋಽಧೃತಿಃ ಕ್ಷುಧ್ವಾನ್ ಸವ್ಯಥಾಂಗಃ ಪಿಪಾಸಿತಃ |
ಬಾಲೋ ವೃದ್ಧೋಽನ್ಯವೇಗಾರ್ತಸ್ತ್ಯಜೇದ್ರೋಗೀ ಚ ಮೈಥುನಂ || (ಭಾ. ಪ್ರ. 58.)

ಅತಿಯಾಗಿ ಉಂಡವನೂ, ಮನಸ್ಸಮಾಧಾನವಿಲ್ಲದವನೂ, ಹಸಿದವನೂ, ಬಾಯಾರಿಕೆವುಳ್ಳವನೂ, ಅಂಗದಲ್ಲಿ ನೋವಿರುವವನೂ, ಬಾಲನೂ, ವೃದ್ಧನೂ, (ಮಲಮೂತ್ರಾದಿ) ಅನ್ಯವೇಗದಿಂದ ಪೀಡಿತನಾದವನೂ, ರೋಗಿಯಾದವನೂ, ಮೈಥುನವನ್ನು ತ್ಯಜಿಸತಕ್ಕದ್ದು.

43. ಹೆಂಗಸಿಗೆ ಮುಟ್ಟಿನ ಕಾಲ

ಮಾಸಿ ಮಾಸಿ ರಜಃ ಸ್ತ್ರೀಣಾಂ ರಸಜಂ ಸ್ರವತಿ ತ್ರ್ಯಹಂ ।
ವತ್ಸರಾದ್ದ್ವಾದಶಾದೂರ್ಧ್ವಂ ಯಾತಿ ಪಂಚಾಶತಃ ಕ್ಷಯಂ ॥
(ವಾ. 138)

ಹೆಂಗಸಿಗೆ 12 ವರ್ಷ ಪ್ರಾಯದನಂತರ ರಸಮೂಲವಾದ ರಜಸ್ಸು ತಿಂಗಳುತಿಂಗಳು ಮೂರು ದಿನ ಸ್ರಾವವಾಗುತ್ತದೆ 50 ವರ್ಷ ಪ್ರಾಯದನಂತರ ಅದು ಕ್ಷಯವನ್ನು ಹೊಂದುವದು.

44. ಸ್ತ್ರೀಯ ಋತುಕಾಲ

ಋತುಸ್ತು ದ್ವಾದಶನಿಶಾಃ ಪೂರ್ವಾಸ್ತಿಸ್ರಶ್ಚ* ನಿಂದಿತಾಃ ।
ಏಕಾದಶೀ ಚ ಯುಗ್ಮಾಸು ಸ್ಯಾತ್ಪುತ್ರೋಽನ್ಯಾಸು ಕನ್ಯಕಾ ॥
(ವಾ. 140)

ಋತುವು 12 ದಿನ, ಮತ್ತು ಪ್ರಥಮ 3 ದಿನಗಳು ಮತ್ತು 11ನೇ ದಿನ ನಿಂದ್ಯವಾದವು ಸರಿಸಂಖ್ಯೆ ದಿವಸಗಳಲ್ಲಿ ಗಂಡು ಶಿಶು, ಏಷಮಸಂಖ್ಯೆ ದಿವಸಗಳಲ್ಲಿ ಹೆಣ್ಣು ಶಿಶು, ಉತ್ಪನ್ನ ವಾಗುವದು

ಷರಾ *"ತಿಸ್ರೋಽತ್ರಃ" ಎಂಬ ಪಾಠಾಂತರವಿದೆ ಆ ಪಾಠದ ಪ್ರಕಾರ 12 ದಿನಗಳೊಳಗೆ ಪ್ರಥಮದ (ಮುಟ್ಟಿನ) 3 ದಿನ ನಿಂದ್ಯ ಎಂಬ ಅರ್ಥ ಸ್ಪಷ್ಟವಾಗುತ್ತದ

ಋತುಸ್ತು ದ್ವಾದಶರಾತ್ರಂ ಭವತಿ ದೃಷ್ಟಾರ್ತವಃ । ಅದೃಷ್ಟಾರ್ತವಾಪ್ಯ
ಸ್ತ್ರೀತ್ಯೇಕೇ ಭಾಷಂತೇ । (ಸು. 313.)

ರಜಸ್ಸು ಕಾಣುವ ಋತು 12 ದಿನಗಳು, ರಜಸ್ಸು ಕಾಣದ ಋತು ದಿನ ಸಹ ಉಂಟೆಂತ ಕೆಲವರು ಹೇಳುತ್ತಾರೆ

ಷರಾ ಮುಟ್ಟಾವ ನಾಲ್ಕನೇ ದಿನ ಹಿಡಿದು ಹನ್ನೆರಡು ದಿನ ಗರ್ಭಾಧಾನಕ್ಕೆ ತಕ್ಕ ಕಾಲ ಎಂತ ಸಿ ಸಂ ವ್ಯಾ — "ದೃಷ್ಟಾರ್ತವಃ" ಎಂಬ ಪದ ಎರಡು ಪ್ರತಿಗಳಲ್ಲಿ ಕಾಣುತ್ತದೆ ಆದರೆ 'ದೃಷ್ಟಾರ್ತವಮ್' ಎಂಬ ಪಾಠಾಂತರವಿದ್ದ ಹಾಗೆ ಕಾಣುತ್ತದೆ ಆನಂತರ ಅದೃಷ್ಟಾರ್ತವಾ' ಎಂಬ ಪದವಿರುವದರಿಂದ 'ದೃಷ್ಟಾರ್ತವಮ್' ಎಂಬ ಪಾಠವೇ ಪ್ರಶಸ್ತವೆಂತ ಕಾಣುತ್ತದೆ

ತ್ರಯೋದಶೀಪ್ರಭೃತಯೋ ನಿಂದ್ಯಾಃ । (ಸು. 309.)

ಮುಟ್ಟಾಗಿ 13ನೇ ದಿನ ಮೊದಲ್ಗೊಂಡು (ಗರ್ಭಾಧಾನಕ್ಕೆ) ನಿಂದ್ಯವಾದವು

ಪುಷ್ಪಕಾಲೇ ಶುಚಿಸ್ತಸ್ಯಾದಪತ್ಯಾರ್ಥೀ ಸ್ತ್ರಿಯಂ ವ್ರಜೇತ್ । (ಸು. 314)

ಸಂತತಿಯ ಅಪೇಕ್ಷೆಯುಳ್ಳವನು ಶುಚಿಯಾಗಿದ್ದು ಋತುಕಾಲದಲ್ಲಿ ಸ್ತ್ರೀಸಂಭೋಗ ಮಾಡ ತಕ್ಕದ್ದು.

ಮೈಥುನದ ನಿಯಮಗಳು

45. ನ ರಜಸ್ವಲಾಂ ನಾತುರಾಂ ನಾಮೇಧ್ಯಾಂ ನಾಶಸ್ತಾಂ ನಾನಿಷ್ಟರೂಪಾ
ಚಾರೋಪಚಾರಾಂ ನಾದಕ್ಷಿಣಾಂ ನಾಕಾಮಾಂ ನಾನ್ಯಕಾಮಾಂ ನಾನ್ಯ
ಸ್ತ್ರಿಯಂ ನಾನ್ಯಯೋನಿಂ ನಾಯೋನೌ ನ ಚೈತ್ಯ-ಚತ್ವರ-ಚತುಷ್ಪಥೋ
ಪವನ-ಶ್ಮಶಾನಾಯತನ-ಸಲಿಲೌಷಧಿ-ದ್ವಿಜ-ಗುರು-ಸುರಾಲಯೇಷು ನ

ಸಂಧ್ಯಯೋಃ ನ ನಿಷಿದ್ಧತಿಥಿಷು ನಾಶುಚಿರ್ನಜಗ್ಧಭೇಷಜೋ ನಾಪ್ರಣೀ
ತಸಂಕಲ್ಪೋ ನಾನುಪಸ್ಥಿತಪ್ರಹರ್ಷೋ ನಾಭುಕ್ತವಾನ್ ನಾತ್ಯಶಿತೋ
ನ ವಿಷಮಸ್ಥೋ ನ ಮೂತ್ರೋಚ್ಚಾರಪೀಡಿತೋ ನ ಶ್ರಮ-ವ್ಯಾಯಾ
ಮೋಪವಾಸ-ಕ್ಲಮಾಭಿಹತೋ ನಾರಹಸಿ ವ್ಯವಾಯಂ ಗಚ್ಛೇತ್ | (ಚ. 4೫.)

ರಜಸ್ವಲೆಯಲ್ಲಿ, ರೋಗಪೀಡಿತಳಲ್ಲಿ, ಶುಚಿಯಾಗಿಲ್ಲದವಳಲ್ಲಿ, ಪ್ರಶಸ್ತವಲ್ಲದವಳಲ್ಲಿ, ಅನಿಷ್ಟವಾದ ರೂಪ ಅಥವಾ ಆಚಾರ ಅಥವಾ ಉಪಚಾರ ಯುಕ್ತಳಾದವಳಲ್ಲಿ, ಅನುಕೂಲಳಲ್ಲದವಳಲ್ಲಿ, ಕಾಮಿಸದವಳಲ್ಲಿ, ಅನ್ಯರನ್ನು ಕಾಮಿಸುವವಳಲ್ಲಿ, ಹೆಂಡತಿಯಲ್ಲದವಳಲ್ಲಿ, ವ್ಯತಿರಿಕ್ತಯೋನಿಯುಳ್ಳವಳಲ್ಲಿ, ಯೋನಿಯಿಲ್ಲದವಳಲ್ಲ, ದೇವರ ಕೋಣೆಯಲ್ಲಿ, ಯಜ್ಞಶಾಲೆಯಲ್ಲಿ, ನಾಲ್ಕು ಮಾರ್ಗಗಳ ಸಂದಿನಲ್ಲಿ, ತೋಟದಲ್ಲಿ, ಶ್ಮಶಾನಗೃಹದಲ್ಲಿ, ನೀರ ಮೇಲೆ, ಔಷಧಾಲಯದಲ್ಲಿ, ಬ್ರಾಹ್ಮಣಸಮೂಹದಲ್ಲಿ, ಗುರುಗಳ ಮುಂದೆ, ದೇವಾಲಯದಲ್ಲಿ, ಎರಡು ಸಂಧ್ಯಾಕಾಲಗಳಲ್ಲಿ, ನಿಷೇಧಿಸಲ್ಪಟ್ಟ ದಿನಗಳಲ್ಲಿ, ಅಶುಚಿಯಾದವನು, ಔಷಧವನ್ನು ಸೇವಿಸಿದವನು, ಮನಃಸಂಕಲ್ಪಮಾಡದವನು, ಹರ್ಷವುಂಟಾಗದವನು, ಉಣ್ಣದವನು, ಅತಿಯಾಗಿ ಉಂಡವನು, ವಿಷಮವಾದ ಸ್ಥಾನವನ್ನಾಶ್ರಯಿಸಿದವನು, ಮಲಮೂತ್ರಗಳ ವೇಗದಿಂದ ಪೀಡಿತನಾದವನು, ಶ್ರಮದಿಂದ. ಅಥವಾ ವ್ಯಾಯಾಮದಿಂದ, ಅಥವಾ ಉಪವಾಸದಿಂದ, ಅಥವಾ ಕ್ಲಮದಿಂದ, ಸೋತವನು, ಮತ್ತು ಗುಪ್ತವಲ್ಲದ ಸ್ಥಳದಲ್ಲಿ, ಮೈಥುನವನ್ನು ಮಾಡ ಕೂಡದು

XII ನೇ ಅಧ್ಯಾಯ.

ಪಾನೀಯಗಳು.

1. ಪಾನೀಯಮಾಂತರಿಕ್ಷಮನಿರ್ದೇಶ್ಯರಸಮಮೃತಂ ಜೀವನಂ ತರ್ಪಣಂ ಧಾರಣಮಾಶ್ವಾಸಜನನಂ ಶ್ರಮಘ್ನಂ ಕ್ಲಮ-ಪಿಪಾಸಾ-ಮದ-ಮೂರ್ಚ್ಛಾ-ತಂದ್ರಾ-ನಿದ್ರಾ-ದಾಹ-ಪ್ರಶಮನಮೇಕಾಂತತಃ ಪಥ್ಯತಮಂ ಚ ತದೇವಾವನಿಪತಿತಮನ್ಯತಮಂ ರಸಮುಪಲಭತೇ ಸ್ಥಾನವಿಶೇಷಾನ್ನ ದೀ-ನದ-ಸರಸ್ತಡಾಗ-ವಾಪೀ-ಕೂಪ-ಚುಂಟೀ-ಪ್ರಸ್ರವಣೋದ್ಭಿದ್ವಿಕಿರ-ಕೇದಾರ-ಪಲ್ವಲಾದಿಷು ಸ್ಥಾನೇಷ್ವವಸ್ಥಿತಮಿತಿ | (ಸು. 169-70.)

ಅಂತರಿಕ್ಷ ನೀರಿನ ಗುಣ

ಅಂತರಿಕ್ಷದ ನೀರಲ್ಲಿ ರಸ ವ್ಯಕ್ತವಾಗಿರುವದಿಲ್ಲ ಅದು ಅಮೃತಸಮಾನವಾದದ್ದು, ಬದುಕಿಸತಕ್ಕಂಥಾದ್ದು, ತೃಪ್ತಿಕರ, ಧೃತಿಯನ್ನೂ ಸಮಾಧಾನವನ್ನೂ ಕೊಡತಕ್ಕಂಥಾದ್ದು, ಶ್ರಮಹರ, ದೇಹಾಯಾಸ, ಬಾಯಾರಿಕೆ, ಮದ, ಮೂರ್ಚ್ಛೆ, ತಂದ್ರೆ, ನಿದ್ದೆಯ ತೂಕಡಿಕೆ (ಅಥವಾ ಅನಿದ್ರೆ) ಮತ್ತು ಉರಿ, ಇವುಗಳನ್ನು ಶಮನಮಾಡತಕ್ಕಂಥಾದ್ದು, ತಾನಾಗಿ ಉತ್ತಮ ಪಥ್ಯವಾದದ್ದು. ಅದೇ ನೀರು ಭೂಮಿಗೆ ಬಿದ್ದು, ಮುಖ್ಯ ನದೀ, ಹೊಳೆ, ಸರಸ್ಸು (ಸರೋವರ), ಹಳ್ಳ (ಕುಂಟೆ), ಕೆರೆ, ಬಾವಿ, ಗುಂಡಿ, ಹರಿದು ಬೀಳುವ ನೀರಿನ ಸ್ಥಳ (ಜುಕ್ಕೆ), ಬುಗ್ಗೆ, ನೀರಹೊಂಡ, ಗದ್ದೆ, ಕೊಳ, ಮುಂತಾದ ಸ್ಥಳಗಳನ್ನಾಶ್ರಯಿಸಿದ ಮೇಲೆ ಸ್ಥಾನಭೇದದಿಂದ ರುಚಿಭೇದವನ್ನು ಪಡೆಯುತ್ತದೆ.

2. ತತ್ರ ಸ್ವಗುಣಭೂಯಿಷ್ಠಾಯಾಂ ಭೂಮಾವಮ್ಲಂ ಲವಣಂ ಚ | ಅಂಬುಗುಣಭೂಯಿಷ್ಠಾಯಾಂ ಮಧುರಂ | ತೇಜೋಗುಣಭೂಯಿಷ್ಠಾಯಾಂ ಕಟುಕಂ ತಿಕ್ತಂ ಚ | ವಾಯುಗುಣಭೂಯಿಷ್ಠಾಯಾಂ ಕಷಾಯಂ ಚ | ಆಕಾಶಗುಣಭೂಯಿಷ್ಠಾಯಾಮವ್ಯಕ್ತರಸಮವ್ಯಕ್ತಂ ಹ್ಯಾಕಾಶಮಿತ್ಯತಸ್ತತ್ ಪ್ರಧಾನಮವ್ಯಕ್ತರಸತ್ವಾತ್ ತತ್ಪೈಯಮಾಂತರಿಕ್ಷ್ಯಾಲಾಭೇ | (ಸು 170.)

ನೀರಿನ ರುಚಿಗೆ ಕಾರಣ

ಆ ನೀರು ಭೂಗುಣವೇ ಹೆಚ್ಚಿರುವ ಭೂಮಿಯಲ್ಲಿ ಹುಳಿ ಮತ್ತು ಉಪ್ಪು ರುಚಿಯುಳ್ಳದ್ದಾಗಿಯೂ, ನೀರಿನ ಗುಣವೇ ಹೆಚ್ಚಿರುವ ಭೂಮಿಯಲ್ಲಿ ಸೀಯಾಗಿಯೂ, ತೇಜೋಗುಣವೇ ಹೆಚ್ಚಾಗಿರುವ ಭೂಮಿಯಲ್ಲಿ ಖಾರ ಮತ್ತು ಕಹಿ ರುಚಿಯುಳ್ಳದ್ದಾಗಿಯೂ, ವಾಯುಗುಣವೇ ಹೆಚ್ಚಾಗಿರುವ ಭೂಮಿಯಲ್ಲಿ ಚೊಗರಾಗಿಯೂ, ಆಕಾಶ ಎಂಬ ಮಹಾಭೂತವು ಅವ್ಯಕ್ತವಾದದ್ದರಿಂದ, ಆಕಾಶಗುಣವೇ ಹೆಚ್ಚಾಗಿರುವ ಭೂಮಿಯಲ್ಲಿ ವ್ಯಕ್ತರಸವಿಲ್ಲದ್ದಾಗಿಯೂ, ಇರುವದು. ಆ ಅವ್ಯಕ್ತರಸವುಳ್ಳ ನೀರೇ ಪ್ರಧಾನವಾದದ್ದು. ಅದನ್ನೇ ಅಂತರಿಕ್ಷದ ನೀರು ದೊರೆಯದಾಗ್ಗೆ ಕುಡಿಯಬೇಕಾದದ್ದು.

3. ತತ್ರಾಂತರಿಕ್ಷಂ ಚತುರ್ವಿಧಂ | ತದ್ಯಥಾ ಧಾರಂ ಕಾರಂ ತೌಷಾರಂ ಹೈಮಮಿತಿ | ತೇಷಾಂ ಧಾರಂ ಪ್ರಧಾನಂ ಲಘುತ್ವಾತ್ | (ಸು. 170.)

ನಾಲ್ಕು ವಿಧವಾದ ಅಂತರಿಕ್ಷ ನೀರು

ಅಂತರಿಕ್ಷದ ನೀರೆಂಬದು 4 ವಿಧ, ಹ್ಯಾಗಂದರೆ· 1. ಮಳೆಧಾರೆ, 2. ಕಲ್ಲುಮಳೆ, 3. ಮಂಜಿನ ನೀರು, 4. ಹಿಮಗಟ್ಟಿಯ ನೀರು ಅವುಗಳೊಳಗೆ ಮಳೆಧಾರೆಯ ನೀರು ಲಘುವಾದದ್ದರಿಂದ ಪ್ರಧಾನವಾದದ್ದು.

4. ಕೀಟಮೂತ್ರಪುರೀಷಾಂಡಶವಕೋಥಪ್ರದೂಷಿತಂ |
ತೃಣಪಣೋರ್ಣೋತ್ಕರಯುತಂ ಕಲುಷಂ ವಿಷಸಂಯುತಂ ||
ಯೋಽವಗಾಹೇತ ವರ್ಷಾಸು ಪಿಬೇದ್ವಾಪಿ ನವಂ ಜಲಂ |
ಸ ಬಾಹ್ಯಾಭ್ಯಂತರಾನ್ ರೋಗಾನ್ ಪ್ರಾಪ್ನುಯಾತ್ ಕ್ಷಿಪ್ರಮೇವ ತು ||
(ಸು. 171)

ವರ್ಷ ಋತುವಿನ ಹೊಸ ನೀರಿನ ದೋಷ

ಹುಳ, ಮೂತ್ರ, ಮಲ, ಮೊಟ್ಟೆ, ಶವ, ಇವುಗಳ ಕೊಳೆಯಿಂದ ದೂಷಿತವಾದ, ಹುಲ್ಲುಗಳ ಮತ್ತು ಎಲೆಗಳ ರಾಶಿಗಳಿಂದ ಕೂಡಿಕೊಂಡಿರುವ, ಕಲಂಕಿತವಾದ, ವಿಷಯುಕ್ತವಾದ, ಮಳೆಗಾಲದ ಹೊಸ ನೀರನ್ನು ಯಾವನು ಕುಡಿಯುತ್ತಾನೋ, ಅಥವಾ ಅಂಥಾ ನೀರಿನಲ್ಲಿ ಸ್ನಾನ ಮಾಡುತ್ತಾನೋ, ಅವನಿಗೆ ಶೀಘ್ರವಾಗಿಯೇ ಒಳಗೂ ಹೊರಗೂ ರೋಗಗಳು ಸಂಭವಿಸುವವು.

ತತ್ರ ವರ್ಷಾಸ್ವಾಂತರಿಕ್ಷಮೌದ್ಭಿದಂ ವಾ ಸೇವೇತ | (ಸು. 171.)

ಆ ವರ್ಷ ಋತುವಿನಲ್ಲ ಅಂತರಿಕ್ಷದ ನೀರನ್ನಾಗಲಿ ಬುಗ್ಗೆನೀರನ್ನಾಗಲಿ ಉಪಯೋಗಿಸಬೇಕು.

5. ತತ್ರ ಯತ್ ಶೈವಾಲ-ಪಂಕ-ಹಟ-ತೃಣ-ಪದ್ಮಪತ್ರ-ಪ್ರಭೃತಿಭಿರವಚ್ಛನ್ನಂ ಶಶಿಸೂರ್ಯಕಿರಣಾನಿಲೈರ್ನಾಭಿಜುಷ್ಟಂ ಗಂಧವರ್ಣರಸೋಪಸೃಷ್ಟಂ ಚ ತದ್ವ್ಯಾಪನ್ನಮಿತಿ ವಿದ್ಯಾತ್ | ತಸ್ಯ ಸ್ಪರ್ಶರೂಪರಸಗಂಧವೀರ್ಯವಿಪಾಕದೋಷಾಃ ಷಟ್ಸಂಭವಂತಿ | (ಸು. 171.)

ದೋಷಕರವಾದ ನೀರಿನ ಲಕ್ಷಣ

ಅಂತರಗಂಗೆ ಗಿಡ, ಕೆಸರು, ಹಟ, ಹುಲ್ಲು, ತಾವರೆ ಎಲೆ, ಇತ್ಯಾದಿಗಳಿಂದ ಮುಚ್ಚಲ್ಪಟ್ಟು, ಚಂದ್ರ ಸೂರ್ಯ ಕಿರಣಗಳಿಂದಲೂ ಗಾಳಿಯಿಂದಲೂ ಶುಚಿಮಾಡಲ್ಪಡದ, ವಾಸನೆ, ವರ್ಣ, ಮತ್ತು ರುಚಿಗಳಿಂದ ಯುಕ್ತವಾದ, (ಕೂಪತಟಾಕಾದಿಗಳ) ನೀರು ಕೆಟ್ಟದ್ದೆಂದು ತಿಳಿಯಬೇಕು. ಸ್ಪರ್ಶದಲ್ಲಿ, ರೂಪದಲ್ಲಿ, ರಸದಲ್ಲಿ, ವಾಸನೆಯಲ್ಲಿ, ವೀರ್ಯದಲ್ಲಿ, ವಿಪಾಕದಲ್ಲಿ, ಹೀಗೆ ಆರು ವಿಧವಾಗಿ ಅದರ ದೋಷಗಳು ಕಂಡುಬರುವವು.

6. ನೀರಿನಲ್ಲಿ ವೀರ್ಯದೋಷ ಮತ್ತು ವಿಪಾಕದೋಷ

ಯದುಪಯುಕ್ತಂ ತೃಷ್ಣಾ-ಗೌರವ-ಶೂಲ-ಕಫ-ಪ್ರಸೇಕಾನಾಪಾದಯತಿ ಸ ವೀರ್ಯದೋಷಃ | ಯದುಪಯುಕ್ತಂ ಚಿರಾದ್ವಿಪಚ್ಯತೇ ವಿಷ್ಟಭ್ನಾತಿ* ವಾ ಸ ವಿಪಾಕದೋಷ ಇತಿ | ತ ಏತೇ ಆಂತರಿಕ್ಷೇ ನ ಸಂತಿ | (ಸು. 171.)

ಯಾವ ನೀರನ್ನು ಉಪಯೋಗಿಸಿದ್ದರಿಂದ, ಬಾಯಾರಿಕೆ, ಗುರುತ್ವ, ಶೂಲೆ, ಕಫ ಮತ್ತು ನೆಗಡಿ ಉಂಟಾಗುತ್ತವೋ, ಅದು ವೀರ್ಯದೋಷವುಳ್ಳದ್ದೆಂತಲೂ, ಯಾವ ನೀರು ಸೇವಿಸಲ್ಪಟ್ಟನಂತರ ಸಾವಕಾಶದಿಂದ ಜೀರ್ಣವಾಗುತ್ತದೋ, ಅಥವಾ ಜೀರ್ಣವಾಗದೆ ನಿಲ್ಲುತ್ತದೋ (ಅಥವಾ ತಡೆಯನ್ನುಂಟುಮಾಡುತ್ತದೋ), ಅದು ವಿಪಾಕದೋಷವುಳ್ಳದ್ದು ಎಂತಲೂ, ತಿಳಿಯಬೇಕು ಈ (ಸ್ಪರ್ಶಾದಿ ಆರು) ದೋಷಗಳು ಅಂತರಿಕ್ಷದ ನೀರಿನಲ್ಲಿರುವದಿಲ್ಲ

ಪಠಾ * ವಿಷ್ಟಮ್ಭಯತಿ' ಎಂತಲೂ ಪಾಠ ಉಂಟು

7 ನೀರಿನ ಶೋಧನ ಕ್ರಮ

ವ್ಯಾಪನ್ನಾನಾಮಗ್ನಿಕ್ವಥನಂ ಸೂರ್ಯಾತಪಪ್ರತಾಪನಂ ತಪ್ತಾಯಃ ಪಿಂಡಸಿಕತಾಲೋಷ್ಟಾನಾಂ ವಾ ನಿರ್ವಾಪಣಂ ಪ್ರಸಾದನಂ ಚ ಕರ್ತವ್ಯಂ ನಾಗಜಂಪಕೋತ್ಪಲಪಾಟಲಾಪುಷ್ಪಪ್ರಭೃತಿಭಿಶ್ಚಾಧಿವಾಸನಮಿತಿ | (ಸು. 171.)

ದೋಷಯುಕ್ತವಾದ ನೀರನ್ನು ಬೆಂಕಿಯಿಂದ ಕುದಿಸಿ, ಅಥವಾ ಸೂರ್ಯನ ಬಿಸಿಲಲ್ಲಿಟ್ಟು ಕಾಯಿಸಿ, ಅಥವಾ ಕಾಯಿಸಿದ ಕಬ್ಬಿಣದ ಗಟ್ಟಿಯನ್ನಾಗಲಿ, ಹೂಯಿಗೆಯನ್ನಾಗಲಿ ಮಣ್ಣಿನ ಗಟ್ಟಿಯನ್ನಾಗಲಿ ಅದರಲ್ಲಿ ಮುಳುಗಿಸಿ, ಹಸನಿಸಿಕೊಳ್ಳಬೇಕು, ಮತ್ತು ನಾಗ ಸಂಪಿಗೆ, ಸಂಪಿಗೆ, ನೆಲಸಂಪಿಗೆ, ಪಾದರಿ, ಈ ಹೂವುಗಳು ಮುಂತಾದವುಗಳಿಂದ ಅದಕ್ಕೆ ಪರಿಮಳ ಕೊಡಬೇಕು.

8 ಜಲಪಾನಕ್ಕೆ ಪ್ರಶಸ್ತ ಪಾತ್ರಗಳು

ಸೌವರ್ಣೇ ರಾಜತೇ ತಾಮ್ರೇ ಕಾಂಸ್ಯೇ ಮಣಿಮಯೇ ತಥಾ | ಪುಷ್ಪಾವತಂಸಂ ಭೌಮೇ ವಾ ಸುಗಂಧಿ ಸಲಿಲಂ ಪಿಬೇತ್ ||
(ಸು. 171-72.)

ಹೂವಿನ ತೊಕ್ಕೆ (ಕಟ್ಟು) ಹಾಕಿ ಸುಗಂಧವಾದ ನೀರನ್ನು ಚಿನ್ನದ, ಅಥವಾ ಬೆಳ್ಳಿಯ, ಅಥವಾ ತಾಮ್ರದ, ಅಥವಾ ಕಂಚಿನ, ಅಥವಾ ರತ್ನದ ಕಲ್ಲಿನ, ಅಥವಾ ಮಣ್ಣಿನ, ಪಾತ್ರೆಯಲ್ಲಿ ಕುಡಿಯಬೇಕು

9. ಅಶುದ್ಧ ಜಲ ಪಾನದ ದೋಷಗಳು

ವ್ಯಾಪನ್ನಂ ವರ್ಜಯೇನ್ನಿತ್ಯಂ ತೋಯಂ ಯದ್ವಾಪ್ಯನಾರ್ತವಂ | ದೋಷಸಂಜನನಂ ಹ್ಯೇತನ್ನಾದದೀತಾಹಿತಂ ತು ತತ್ ||
ವ್ಯಾಪನ್ನಂ ಸಲಿಲಂ ಯಸ್ತು ಪಿಬತೀಹಾಪ್ರಸಾಧಿತಂ | ಶ್ವಯಥುಂ ಪಾಂಡುರೋಗಂ ಚ ತ್ವಗ್ದೋಷಮವಿಪಾಕತಾಂ ||
ಶ್ವಾಸ-ಕಾಸ-ಪ್ರತಿಶ್ಯಾಯ-ಶೂಲ-ಗುಲ್ಮೋದರಾಣಿ ಚ |

ಅನ್ಯಾನ್ಪಾ ವಿಷಮಾನ್ರೋಗಾನ್ ಪ್ರಾಪ್ನುಯಾತ್ಕಿಪ್ರಮೇವ ಚ ||
(ಸು. 172.)

ದುಷ್ಟವಾದ ನೀರನ್ನೂ, ಋತು ತಪ್ಪಿ ಬಂದ ಮಳೆನೀರನ್ನೂ ಯಾವಾಗಲೂ ವರ್ಜ್ಯ ಮಾಡಬೇಕು. ಅದು ಅಹಿತವಾದದ್ದು ಮತ್ತು ದೋಷಗಳನ್ನುಂಟುಮಾಡುವಂಥಾದ್ದು, ಆದ್ದರಿಂದ ಸ್ವೀಕರಿಸತಕ್ಕದ್ದಲ್ಲ. ದೋಷಯುಕ್ತವಾದ ನೀರನ್ನು ಶುಚಿಮಾಡದೆ ಯಾರು ಕುಡಿಯುತ್ತಾನೋ, ಅವನಿಗೆ ಶೋಫೆ, ಪಾಂಡು, ಚರ್ಮರೋಗ, ಅಜೀರ್ಣ, ಉಬ್ಬಸ, ಕೆಮ್ಮು, ನಾಸಾರೋಗ ಶೂಲ, ಗುಲ್ಮ, ಉದರರೋಗಗಳು ಮತ್ತು ಬೇರೆ ವಿಷಮವಾದ ರೋಗಗಳು ಶೀಘ್ರದಲ್ಲಿಯೇ ಸಂಭವಿಸುವವು.

10. ಪ್ರಶಸ್ತವಾದ ನೀರಿನ ಲಕ್ಷಣ

ನಿರ್ಗಂಧಮವ್ಯಕ್ತರಸಂ ತೃಷ್ಣಾಘ್ನಂ ಶುಚಿ ಶೀತಲಂ |
ಅಚ್ಛಂ ಲಘು ಚ ಹೃದ್ಯಂ ಚ ತೋಯಂ ಗುಣವದುಚ್ಯತೇ ||
(ಸು. 172.)

ಯಾವ ವಾಸನೆಯೂ ಇಲ್ಲದ, ಯಾವ ರುಚಿಯೂ ಕಾಣದ, ಬಾಯಾರಿಕೆಯನ್ನು ನಿಲ್ಲಿಸತಕ್ಕ, ನಿರ್ಮಲವಾದ, ಶೀತಲವಾದ, ಸ್ವಚ್ಛವಾದ ಲಘುವಾದ, ಮತ್ತು ಮನೋಹರವಾದ ನೀರು ಗುಣವುಳ್ಳದ್ದೆಂತ ಹೇಳಲ್ಪಡುತ್ತದೆ

11. ಭೂಮಿಯ ನೀರು ಬಿಳಿಗ್ಗಿನದು ಉತ್ತಮ

ತತ್ರ ಸರ್ವೇಷಾಂ ಭೌಮಾನಾಂ ಗ್ರಹಣಂ ಪ್ರತ್ಯೂಷಸಿ,
ತತ್ರಹ್ಯಮಲತ್ವಂ ಶೈತ್ಯಂ ಚಾಧಿಕಂ ಭವತಿ, ಸ ಏವ ಚಾ
ಪಾಂ ಪರೋ ಗುಣ ಇತಿ | (ಸು 173)

ಕೂಪ ತಟಾಕಾದಿ ಭೂಮಿಯ ನೀರನ್ನೆಲ್ಲಾ ಬೆಳಿಗ್ಗೆ ತೆಗೆದಿಡಬೇಕು. ಆಗ್ಗೆ ಅದು ನಿರ್ಮಲವಾಗಿರುವದು, ಮತ್ತು ಅದರಲ್ಲಿ ಶೈತ್ಯವು ಅಧಿಕವಾಗಿರುವದು. ಅದೇ ನೀರುಗಳಲ್ಲಿ ಉತ್ಕೃಷ್ಟವಾದ ಗುಣ

ದಿವಾರ್ಕಕಿರಣೈರ್ಜುಷ್ಟಂ ನಿಶಾಯಾಮಿಂದುರಶ್ಮಿಭಿಃ |
ಅರೂಕ್ಷಮನಭಿಷ್ಯಂದಿ ತತ್ತುಲ್ಯಂ ಗಗನಾಂಬುನಾ ||
ಗಗನಾಂಬು ತ್ರಿದೋಷಘ್ನಂ ಗೃಹೀತಂ ಯತ್ಸುಭಾಜನೇ |
ಬಲ್ಯಂ ರಸಾಯನಂ ಮೇಧ್ಯಂ ಪಾತ್ರಾಪೇಕ್ಷಿ ತತಃ ಪರಂ || (ಸು. 173)

ಹಗಲು ಸೂರ್ಯನ ಕಿರಣಗಳಿಂದಲೂ, ರಾತ್ರಿಯಲ್ಲಿ ಚಂದ್ರನ ರಶ್ಮಿಗಳಿಂದಲೂ, ಸೇವಿಸಲ್ಪಟ್ಟ ಭೂಮಿಯ ನೀರು ರೂಕ್ಷವಾಗಲಿ, ಅಭಿಷ್ಯಂದಿಯಾಗಲಿ ಆಗದೆ, ಆಕಾಶದ ನೀರಿಗೆ ತುಲ್ಯವಾಗಿರುವದು. ಒಳ್ಳೇ ಪಾತ್ರದಲ್ಲಿ ಹಿಡಿದಿಟ್ಟ ಆಕಾಶದ ನೀರು ತ್ರಿದೋಷಹರ. ಬಲಕರ, ರಸಾಯನ, ಮತ್ತು ಬುದ್ಧಿಪ್ರದ, ಅನಂತರದ ಅದರ ಗುಣವು ಪಾತ್ರದ ಮೇಲೆ ಹೊಂದಿರುವದು.

12. ಮೂರ್ಚ್ಛಾಪಿತ್ತೋಷ್ಣದಾಹೇಷು ವಿಷೇ ರಕ್ತೇ ಮದಾತ್ಯಯೇ |
ಭ್ರಮಕ್ಲಮವಿರೇತೇಷು ತಮಕೇ ವಮಥೌ ತಥಾ ||

ತಣ್ಣೀರ ಪಾನ ಪಥ್ಯಾಪಥ್ಯ ವಿಚಾರ

ಊರ್ಧ್ವಗೇ ರಕ್ತಪಿತ್ತೇ ಚ ಶೀತಮಂಭಃ ಪ್ರಶಸ್ಯತೇ |
ಪಾರ್ಶ್ವಶೂಲೇ ಪ್ರತಿಶ್ಯಾಯೇ ವಾತರೋಗೇ ಗಲಗ್ರಹೇ ||
ಆಧ್ಮಾತೇ ಸ್ತಿಮಿತೇ ಕೋಷ್ಠೇ ಸದ್ಯಃಶುದ್ಧೇ ನವಜ್ವರೇ |
ಹಿಕ್ಕಾಯಾಂ ಸ್ನೇಹಪೀತೇ ಚ ಶೀತಾಂಬು ಪರಿವರ್ಜಯೇತ್ || (ಸು. 173.)

ಮೂರ್ಚ್ಛೆ, ಪಿತ್ತದೋಷ, ಉಷ್ಣ, ಉರಿ, ವಿಷದೋಷ, ರಕ್ತದೋಷ, ಮದಾತ್ಯಯ, ಭ್ರಮೆ, ದೇಹಾಯಾಸ, ತಮಕ, ವಾಂತಿ, ಊರ್ಧ್ವಮುಖವಾದ ರಕ್ತಪಿತ್ತ, ಈ ವಿಕಾರಗಳಲ್ಲಿ ತಣ್ಣೀರು ಪ್ರಶಸ್ತವಾದದ್ದು. ಪಾರ್ಶ್ವಶೂಲ, ಪೀನಸ, ವಾತರೋಗ, ಗಲಗ್ರಹ, ಹೊಟ್ಟೆಯುಬ್ಬರ, ಈ ರೋಗಗಳಲ್ಲಿಯೂ, ಹೊಟ್ಟೆಯಲ್ಲಿ ಆಮವಿರುವಾಗ್ಗೆ, ಶೋಧನೆಮಾಡಿಸಿಕೊಂಡ ಕೂಡಲೇ, ಹೊಸ ಜ್ವರದಲ್ಲಿ, ಬಿಕ್ಕಟ್ಟಿನಲ್ಲಿ ಮತ್ತು ಸ್ನೇಹಪಾನ ಮಾಡಿರುವಾಗ್ಗೆ, ಸಹ ತಣ್ಣೀರನ್ನು ವರ್ಜ್ಯ ಮಾಡಬೇಕು

ಷರಾ "ಊರುಚಿ-ಗ್ರಹಣೀ-ಗುಲ್ಮ-ಶ್ವಾಸ-ಕಾಸೇಷು ವಿದ್ರಧೌ" | —ಊರುಚಿ, ಗ್ರಹಣೀ, ಗುಲ್ಮ, ಉಬ್ಬಸ, ಕೆಮ್ಮು, ವಿದ್ರಧಿ, ಈ ರೋಗಗಳಲ್ಲಿಯೂ ತಣ್ಣೀರು ಕೂಡದಾಗಿ ಫಾ ಪ್ರ (ಪು 173)

13 ಸಮುದ್ರದ ನೀರು ಗರ್ಹಿತ

ಸಾಮುದ್ರಮುದಕಂ ವಿಸ್ರಂ ಲವಣಂ ಸರ್ವದೋಷಕೃತ್ ||
(ಸು. 174.)

ಸಮುದ್ರದ ನೀರು ಉಪ್ಪಾಗಿಯೂ, ಹಸೀಮಾಂಸದ ವಾಸನೆಯುಳ್ಳದ್ದಾಗಿಯೂ ಇದ್ದು, ಸರ್ವ ದೋಷಗಳನ್ನು ಉಂಟುಮಾಡತಕ್ಕಂಥಾದ್ದಾಗಿರುತ್ತದೆ.

14. ಬಿಸಿ ನೀರಿನ ಗುಣ

ಕಫಮೇದೋಽನಿಲಾಮಘ್ನಂ ದೀಪನಂ ವಸ್ತಿಶೋಧನಂ |
ಶ್ವಾಸಕಾಸಜ್ವರಹರಂ ಪಥ್ಯಮುಷ್ಣೋದಕಂ ಸದಾ || (ಸು. 174.)

ಕಫ, ಮೇದೋರೋಗ, ವಾಯುರೋಗ, ಆಮದೋಷ, ಉಬ್ಬಸ, ಕೆಮ್ಮು, ಜ್ವರ, ಇವುಗಳನ್ನು ಬಿಸಿನೀರು ನಾಶಮಾಡುವದು, ಅದು ದೀಪನಕಾರಿ, ವಸ್ತಿಶೋಧನೆ ಮಾಡುತ್ತದೆ, ಮತ್ತು ಸದಾಕಾಲದಲ್ಲಿಯೂ ಪಥ್ಯವಾದದ್ದು.

ಷರಾ ಆರ್ಥ ಬತ್ತಿಸಿದ ಬಿಸಿನೀರು ಎಂತ ಸಿ ಸಂ ವ್ಯಾ

15. ಪ್ರಶಸ್ತ ಬಿಸಿನೀರಿನ ಲಕ್ಷಣ

ಯತ್ ಕ್ವಾಥ್ಯಮಾನಂ ನಿರ್ವೇಗಂ ನಿಃಫೇನಂ ನಿರ್ಮಲಂ ಲಘು |
ಚತುರ್ಭಾಗಾವಶೇಷಂ ತು ತತ್ತೋಯಂ ಗುಣವತ್ಸ್ಮೃತಂ ||
(ಸು. 174.)

ನೀರನ್ನು ಕುದಿಸುವಾಗ್ಗೆ ನೊರೆ ಬಾರದೆ ಮತ್ತು ಉಕ್ಕದೆಯೂ, ನಿರ್ಮಲವಾಗಿಯೂ, ಲಘುವಾಗಿಯೂ ಇರುವ ಮತ್ತು ಕಾಲಂಶ ಉಳಿಯುವಂತೆ ಬತ್ತಿಸಿದ ನೀರು ಪ್ರಶಸ್ತವಾದ ದ್ದೆಂತ ತಿಳಿಯುತ್ತಾರೆ.

16. ಹಳೇ ನೀರು ತ್ಯಾಜ್ಯ

ನ ಚ ಪರ್ಯುಷಿತಂ ದೇಯಂ ಕದಾಚಿದ್ವಾರಿ ಜಾನತಾ |
ಅಮ್ಲಾಭೂತಂ ಕಫೋತ್ಕ್ಲೇಶಿ ನ ಹಿತಂ ತತ್ಪಿವಾಸವೇ ||
(ಸು. 174)

ಹುಳಿಯಾದ ಹಿಂದಿನ ದಿನದ ನೀರನ್ನು ತಿಳಿದು ಯಾವಾಗಲಾದರೂ ಕೊಡಬಾರದು. ಅದು ಕಫವನ್ನು ಕೆದರುವದು ಮತ್ತು ಬಾಯಾರಿದವನಿಗೆ ಹಿತವಲ್ಲ

17 ಬತ್ತಿಸಿತಣಿದ ನೀರು ಯಾರಿಗೆ ಪ್ರಶಸ್ತ

ಮದ್ಯಪಾನಾತ್ಸಮುದ್ಭೂತೇ ರೋಗೇ ಪಿತ್ತೋತ್ಥಿತೇ ತಥಾ।
ಸನ್ನಿಪಾತಸಮುತ್ಥೇ ಚ ಶೃತಶೀತಂ ಪ್ರಶಸ್ಯತೇ ॥ (ಸು. 174.)

ಮದ್ಯಪಾನದಿಂದ ಹುಟ್ಟಿದ ರೋಗದಲ್ಲಿಯೂ, ಪಿತ್ತೋದ್ರೇಕದಲ್ಲಿಯೂ, ತ್ರಿದೋಷ ಜನ್ಯರೋಗದಲ್ಲಿಯೂ, ಕುದಿಸಿ ಬತ್ತಿಸಿ ತಣಿಸಲ್ಪಟ್ಟ ನೀರು ಪ್ರಶಸ್ತವಾಗಿರುತ್ತದೆ.

18. ಪಾನೀಯ ಕಡಿಮೆ ಮಾಡಬೇಕಾದವರು

ಅರೋಚಕೇ ಪ್ರತಿಶ್ಯಾಯೇ ಪ್ರಸೇಕೇ ಶ್ವಯಥೌ ಕ್ಷಯೇ।
ಮಂದೇಽಗ್ನಾವುದರೇ ಕುಷ್ಠೇ ಜ್ವರೇ ನೇತ್ರಾಮಯೇ ತಥಾ ॥
ವ್ರಣೇ ಚ ಮಧುಮೇಹೇ ಚ ಪಾನೀಯಂ ಮಂದಮಾಚರೇತ್ । (ಸು. 174.)

ಅರುಚಿ, ಪೀನಸ, ನೆಗಡಿ, ಶೋಫೆ, ಕ್ಷಯ, ಮಂದಾಗ್ನಿ, ಉದರರೋಗ, ಕುಷ್ಠ, ಜ್ವರ, ನೇತ್ರರೋಗ, ವ್ರಣ, ಮಧುಮೇಹ, ಈ ವ್ಯಾಧಿಗಳಲ್ಲಿ ಕುಡಿಯಲಿಕ್ಕೆ ಅಲ್ಪವಾಗಿ (ಸಾಧ್ಯವಾದಷ್ಟು ಕಡಿಮೆಯಾಗಿ) ಕೊಡಬೇಕು.

19. ಉಂಡು ನೀರು ಕುಡಿಯಬಾರದವರು

ನೋರ್ಧ್ವಾಂಗಮಾರುತಾವಿಷ್ಟಾ ನ ಹಿಕ್ಕಾಶ್ವಾಸಕಾಸಿನಃ।
ನ ಗೀತಭಾಷಾಧ್ಯಯನಪ್ರಸಕ್ತಾ ನೋರಸಿ ಕ್ಷತಾಃ ॥
ಪಿಬೇಯುರುದಕಂ ಭುಕ್ತ್ವಾ ತದ್ಧಿ ಕಂಠೋರಸಿ ಸ್ಥಿತಂ।
ಸ್ನೇಹಮಾಹಾರಜಂ ಹತ್ವಾ ಭೂಯೋ ದೋಷಾಯ ಕಲ್ಪತೇ ॥ (ಚ. 181.)

ದೇಹದ ಮೇಲಿನ ಭಾಗದಲ್ಲಿ ವಾಯುವಿನಿಂದ ಪೀಡಿತರಾದವರೂ, ಬಿಕ್ಕಟ್ಟು, ಉಬ್ಬಸ, ಕೆಮ್ಮು, ಈ ರೋಗವುಳ್ಳವರೂ, ಗೀತ, ಭಾಷಣ, ಅಧ್ಯಯನ, ಇವುಗಳಲ್ಲಿ ಪ್ರಸಕ್ತಿಯುಳ್ಳವರೂ, ಎದೆಯಲ್ಲಿ ಕ್ಷತರಾದವರೂ, ಉಂಡು ನೀರನ್ನು ಕುಡಿಯಕೂಡದು. ಯಾಕೆಂದರೆ, ಅದು ಕಂಠದಲ್ಲಿಯೂ, ಎದೆಯಲ್ಲಿಯೂ, ನಿಂತಿರುವ ಆಹಾರಸಂಬಂಧವಾದ ವಸೆಯನ್ನು ಕೆಡಿಸಿ, ಹೆಚ್ಚಾಗಿ ದೋಷಕ್ಕೆ ಕಾರಣವಾಗುವದು.

20. ಕುಡಿದ ನೀರು ಪಾಕವಾಗುವದಕ್ಕೆ ಕಾಲ

ಪೀತಂ ಜಲಂ ಜೀರ್ಯತಿ ಯಾಮಯುಗ್ಮಾತ್
ಯಾಮೈಕಮಾತ್ರಾಚ್ಛೃತಶೀತಲಂ ಚ।
ತದರ್ಧಮಾತ್ರೇಣ ಶೃತಂ ಕದುಷ್ಣಂ
ಪಯಃ ಪ್ರಪಾಕೇ ತ್ರಯ ಏವ ಕಾಲಾಃ ॥ (ಭಾ. ಪ್ರ. 174)

ಕುಡಿದ ನೀರು ತಣ್ಣೀರಾದರೆ ಎರಡು ಜಾಮಗಳಲ್ಲಿ ಜೀರ್ಣವಾಗುವದು; ಕುದಿಸಿ ತಣಿಸಲ್ಪಟ್ಟದ್ದಾದರೆ, ಒಂದೇ ಜಾಮಕಾಲದಲ್ಲಿ ಜೀರ್ಣವಾಗುತ್ತದೆ; ಕುದಿಸಲ್ಪಟ್ಟ. ಅಲ್ಪ ಬಿಸಿಯಾಗಿರುವ ನೀರಾದರೆ, ಅರ್ಧ ಜಾಮದಲ್ಲಿಯೇ ಜೀರ್ಣವಾಗುವದು, ಹೀಗೆ ನೀರು ಜೀರ್ಣವಾಗುವದಕ್ಕೆ ಮೂರೇ ಕಾಲಗಳು.

21. ಸೀಯಾಳದ ನೀರಿನ ಗುಣ
ಸ್ನಿಗ್ಧಂ ಸ್ವಾದು ಹಿಮಂ ಹೃದ್ಯಂ ದೀಪನಂ ವಸ್ತಿಶೋಧನಂ ।
ವೃಷ್ಯಂ ಪಿತ್ತಪಿಪಾಸಾಘ್ನಂ ನಾರಿಕೇಲೋದಕಂ ಗುರು ॥
(ಸು. 174.)

(ಎಳೇ) ತೆಂಗಿನಕಾಯಿಯ ನೀರು ಗುರು, ಸ್ನಿಗ್ಧ, ಸೀ, ಶೀತ, ಮನೋಹರ, ಅಗ್ನಿದೀಪನ ಕಾರಿ, ವಸ್ತಿಶೋಧನಕಾರಿ, ವೃಷ್ಯ ಮತ್ತು ಪಿತ್ತವನ್ನೂ, ಬಾಯಾರಿಕೆಯನ್ನೂ ಪರಿಹರಿಸ ತಕ್ಕುಂಥಾದ್ದು.

22. ಲಿಂಬೆಪಾನಕದ ಗುಣ
ನಿಂಬೂಫಲಭವಂ ಪಾನಮತ್ಯಮ್ಲಂ ವಾತನಾಶನಂ ।
ವಹ್ನಿದೀಪ್ತಿಕರಂ ರುಚ್ಯಂ ಸಮಸ್ತಾಹಾರಪಾಚಕಂ ॥
(ಭಾ ಪ್ರ. 168.)

(ಒಂದು ಪಾಲು ಲಿಂಬೇ ರಸಕ್ಕೆ ಆರು ಪಾಲು ಶರ್ಕರೋದಕ ಮಿಶ್ರಮಾಡಿ, ಲವಂಗದ ಮತ್ತು ಕಾಳುಮೆಣಸಿನ ಪುಡಿ ಧೂಳಿಸಿದ) ಲಿಂಬೆಪಾನಕವು ಅತಿ ಹುಳಿ, ವಾತನಾಶನ, ಅಗ್ನಿ ದೀಪನಕಾರಿ, ರುಚಿಕರ ಮತ್ತು ಸಮಸ್ತ ಆಹಾರವನ್ನು ಪಾಚನಮಾಡುವ ಶಕ್ತಿಯುಳ್ಳದ್ದು.

23. ಹುಳಿಪಾನಕದ ಗುಣ
ಅಮ್ಲಿಕಾಫಲಸಂಭೂತಂ ಪಾನಕಂ ವಾತನಾಶನಂ ।
ಪಿತ್ತಶ್ಲೇಷ್ಮಕರಂ ಕಿಂಚಿತ್ ಸುರುಚ್ಯಂ ವಹ್ನಿಬೋಧನಂ ॥
(ಭಾ. ಪ್ರ. 168.)

(ಸಕ್ಕರೆ, ಮೆಣಸಿನ ಕಾಳು, ಲವಂಗ ಮತ್ತು ಪಚ್ಚೆಕರ್ಪೂರ, ಇವುಗಳಿಂದ ಕೂಡಿದ) ಹುಣಸೆಹಣ್ಣನ್ನು ನೀರಿನಲ್ಲಿ ಕಿವಿಚಿ ಮಾಡಿದ ಪಾನಕವು ವಾತವನ್ನು ನಾಶಮಾಡುತ್ತದೆ; ಸ್ವಲ್ಪ ವಾಗಿ ಪಿತ್ತಶ್ಲೇಷ್ಮಗಳನ್ನು ವೃದ್ಧಿ ಮಾಡುವದು, ಒಳ್ಳೇ ರುಚಿಕರ ಮತ್ತು ಅಗ್ನಿದೀಪನಕಾರಿ

24. ಸಕ್ಕರೆಪಾನಕದ ಗುಣ
ಶರ್ಕರೋದಕಮಾಖ್ಯಾತಂ ಶುಕ್ರಲಂ ಶಿಶಿರಂ ಸರಂ ।
ಬಲ್ಯಂ ರುಚ್ಯಂ ಲಘು ಸ್ವಾದು ವಾತಪಿತ್ತಪ್ರಣಾಶನಂ ॥
ಮೂರ್ಚ್ಛಾ-ಛರ್ದಿ-ತೃಷಾ-ದಾಹ-ಜ್ವರ-ಶಾಂತಿಕರಂ ಪರಂ । (ಭಾ. ಪ್ರ. 167.)

(ಯಾಲಕ್ಕಿ, ಲವಂಗ, ಪಚ್ಚೆಕರ್ಪೂರ ಮತ್ತು ಕಾಳುಮೆಣಸು, ಇವುಗಳಿಂದ ಕೂಡಿದ) ಸಕ್ಕರೆಪಾನಕವು ಶುಕ್ರವೃದ್ಧಿಕರ, ತಂಪು, ಸರ, ಬಲಕರ, ರುಚಿಕರ, ಲಘು, ಸ್ವಾದು, ವಾತ ಪಿತ್ತಹರ, ಮೂರ್ಚ್ಛೆ, ವಾಂತಿ, ಬಾಯಾರಿಕೆ. ಉರಿ ಮತ್ತು ಜ್ವರ, ಇವುಗಳನ್ನು ಶಮನಮಾಡ ತಕ್ಕುಂಥಾದ್ದು ಮತ್ತು ಉತ್ತಮವಾದದ್ದು

25. ಹಾಲಿನ ಪ್ರಶಂಸಾ
ತತ್ರ ಸರ್ವಮೇವ ಕ್ಷೀರಂ ಪ್ರಾಣಿನಾಮಪ್ರತಿಷಿದ್ಧಂ ಜಾತಿಸಾತ್ಮ್ಯಾತ್ ।
ವಾತಪಿತ್ತಶೋಣಿತಮಾನಸವಿಕಾರೇಷ್ವವಿರುದ್ಧಂ । ಜೀರ್ಣಜ್ವರ-ಕಾಸ-
ಶ್ವಾಸ-ಶೋಷ-ಕ್ಷಯ-ಗುಲ್ಮೋನ್ಮಾದೋದರ-ಮೂರ್ಚ್ಛಾ-ಭ್ರಮ-ಮದ-
ದಾಹ-ಪಿಪಾಸಾ-ಹೃದ್ವಸ್ತಿದೋಷ-ಪಾಂಡುರೋಗ-ಗ್ರಹಣೀ-ದೋಷಾ
ರ್ಶಃ-ಶೂಲೋದಾವರ್ತಾತಿಸಾರ-ಪ್ರವಾಹಿಕಾ-ಯೋನಿರೋಗ-ಗರ್ಭಾ

ಸ್ರಾವ-ರಕ್ತಪಿತ್ತ-ಶ್ರಮ-ಕ್ಲಮ-ಹರಂ ಪಾಪ್ಮಾಪಹಂ ಬಲ್ಯಂ ವೃಷ್ಯಂ
ವಾಜೀಕರಣಂ ರಸಾಯನಂ ಮೇಧ್ಯಂ ಸಂಧಾನಮಾಸ್ಥಾಪನಂ ವಯಃ
ಸ್ಥಾಪನಮಾಯುಷ್ಯಂ ಜೀವನಂ ಬೃಂಹಣಂ ವಮನಂ ವಿರೇಚನಂ ಚ
ತುಲ್ಯಗುಣತ್ವಾಚ್ಚೌಜಸೋ ವರ್ಧನಮಿತಿ ಬಾಲ-ವೃದ್ಧ-ಕ್ಷತ-ಕ್ಷೀಣಾ
ನಾಂ ಕ್ಷುದ್ವ್ಯವಾಯವ್ಯಾಯಾಮಕರ್ಶಿತಾನಾಂ ಚ ಪಥ್ಯತಮಂ | (ಸು. 175.)

ಸರ್ವ ಜಾತಿಯ (ದನ, ಆಡು, ಒಂಟೆ, ಕುರಿ, ಎಮ್ಮೆ, ಕುದುರೆ, ನಾರಿ, ಆನೆ) ಹಾಲೂ ಹುಟ್ಟಿನಿಂದಲೇ ಸಾತ್ಮ್ಯವಾದದ್ದರಿಂದ, ಸರ್ವ ಪ್ರಾಣಿಗಳಿಗೂ ನಿಷಿದ್ಧವಲ್ಲದ್ದಾಗಿರುತ್ತದೆ. ವಾತ, ಪಿತ್ತ, ರಕ್ತಸಂಬಂಧವಾದ ರೋಗಗಳಲ್ಲಿಯೂ, ಮನೋವಿಕಾರಗಳಲ್ಲಿಯೂ, ಉಪಯೋಗಿಸುವಲ್ಲಿ ವಿರೋಧವಿಲ್ಲ. ಹಳೆದಾದ ಜ್ವರ, (ಹೊಸ ಜ್ವರದಲ್ಲಿ ಕೂಡದೆಂತ ಪ್ರತ್ಯೇಕ ವಿಧಿ ಉಂಟು), ಕೆಮ್ಮು, ಉಬ್ಬಸ, ಶೋಷ, ಕ್ಷಯ, ಗುಲ್ಮ, ಹುಚ್ಚು, ಉದರವ್ಯಾಧಿ, ಮೂರ್ಚ್ಛೆ, ಭ್ರಮೆ, ಮದ, ಉರಿ, ಬಾಯಾರಿಕೆ, ಹೃದ್ರೋಗ, ವಸ್ತಿರೋಗ, ಪಾಂಡುರೋಗ, ಗ್ರಹಣೀದೋಷ, ಅರ್ಶಸ್ಸು, ಶೂಲೆ, ಉದಾವರ್ತ, ಅತಿಸಾರ, ಪ್ರವಾಹಿಕಾ (ಅತಿಸಾರಭೇದ), ಯೋನಿರೋಗ, ಗರ್ಭಸ್ರಾವ, ರಕ್ತಪಿತ್ತ, ಶ್ರಮ, ಆಯಾಸ, ಇವುಗಳನ್ನು ಪರಿಹರಿಸುತ್ತದೆ, ಪಾಪದ ಬುದ್ಧಿಯನ್ನು ಹೋಗಗೊಳಿಸುತ್ತದೆ, ಬಲಕೊಡುತ್ತದೆ, ವೀರ್ಯ ವೃದ್ಧಿಮಾಡಿ, ವ್ಯವಾಯಬಲವನ್ನುಂಟುಮಾಡುತ್ತದೆ; ಸರ್ವ ಧಾತುಗಳನ್ನು ಪೋಷಿಸುತ್ತದೆ; ಬುದ್ಧಿಯನ್ನು ನಿರ್ಮಲಪಡಿಸುತ್ತದೆ, ಸಂಧಾನಕರ, ಆಸ್ಥಾಪನ, ವಯಃಸ್ಥಾಪನ (ಮುದಿತನವನ್ನು ದೂರ ಮಾಡುವಂಥಾದ್ದು). ಆಯುರ್ವೃದ್ಧಿಕರ, ಒದುಕಿಸುವಂಥಾದ್ದು, ಪುಷ್ಟಿಮಾಡುವಂಥಾದ್ದು, ವಮನಕಾರಿ, ವಿರೇಚನಕಾರಿ ಮತ್ತು ಸಮಾನಗುಣವುಳ್ಳದ್ದಾದ್ದರಿಂದ ತೇಜೋವೃದ್ಧಿಕರ. ಆದ್ದರಿಂದ ಬಾಲರಿಗೂ, ವೃದ್ಧರಿಗೂ, ಗಾಯಪಟ್ಟವರಿಗೂ. ಕ್ಷೀಣರಾದವರಿಗೂ ಮತ್ತು ಹಸಿವು, ವ್ಯವಾಯ, ವ್ಯಾಯಾಮ, ಇವುಗಳಿಂದ ಕೃಶರಾದವರಿಗೂ, ಅತ್ಯಂತ ಪಥ್ಯವಾಗಿರುತ್ತದೆ.

26. ಪಯೋಽಭಿಷ್ಯಂದಿ ಗುರ್ವಾಮಂ ಪ್ರಾಯಶಃ ಪರಿಕೀರ್ತಿತಂ |
ಕಾಯಿಸಿದ ತದೇವೋಕ್ತಂ ಲಘುತರಮನಭಿಷ್ಯಂದಿ ವೈ ಶೃತಂ ||
ಹಾಲಿನ ಗುಣ. ವರ್ಜಯಿತ್ವಾ ಸ್ತ್ರಿಯಾಃ ಸ್ತನ್ಯಮಾಮಮೇವ ಹಿ ತದ್ಧಿತಂ | (ಸು. 176.)

ಹಸಿ ಹಾಲು ಹೆಚ್ಚಾಗಿ ಗುರು ಮತ್ತು ಅಭಿಷ್ಯಂದಿ ಎಂತ ಪ್ರಸಿದ್ಧ; ಅದೇ ಕಾಯಿಸಿ ಬತ್ತಿಸಲ್ಪಟ್ಟರೆ, ಲಘು ಎಂತಲೂ, ಅಭಿಷ್ಯಂದ ಗುಣವಿಲ್ಲದ್ದೆಂತಲೂ ಹೇಳಲ್ಪಟ್ಟದೆ ಆದರೆ ಸ್ತ್ರೀಯ ಹಾಲನ್ನು ಕಾಯಿಸಕೂಡದು; ಅದು ಹಸಿಯಾಗಿಯೇ ಹಿತವಾಗಿರುತ್ತದೆ.

27. ವರ್ಜ್ಯವಾದ ಹಾಲು ಅನಿಷ್ಟಗಂಧಮಮ್ಲಂ ಚ ವಿವರ್ಣಂ ವಿರಸಂ ಚ ಯತ್ |
ವರ್ಜ್ಯಂ ಸಲವಣಂ ಕ್ಷೀರಂ ಯಚ್ಚ ವಿಗ್ರಥಿತಂ ಭವೇತ್ ||
(ಸು. 176.)

ಅಹಿತ ವಾಸನೆಯುಳ್ಳದ್ದೂ, ಹುಳಿಯಾದದ್ದೂ, ವರ್ಣಭೇದವುಳ್ಳದ್ದೂ, ರಸಭೇದವುಳ್ಳದ್ದೂ, ಉಪ್ಪಿನಿಂದ ಕೂಡಿಕೊಂಡಿರುವದೂ, ಕೆಟ್ಟು ಗಟ್ಟಿಯಾದದ್ದೂ, ಆದ ಹಾಲನ್ನು ವರ್ಜಿಸತಕ್ಕದ್ದು.

28. ಧಾರೋಷ್ಣ ಹಾಲಿನ ಗುಣ

ಧಾರೋಷ್ಣಂ ಗುಣವತ್ಕ್ಷೀರಂ ವಿಪರೀತಮತೋಽನ್ಯಥಾ ।
ತದೇವಾತಿಶೃತಂ ಸರ್ವಂ ಗುರು ಬೃಂಹಣಮುಚ್ಯತೇ ॥
(ಸು. 176.)

ಧಾರೋಷ್ಣವಾದ ಹಾಲು ಗುಣವುಳ್ಳದ್ದು, ಧಾರೋಷ್ಣವಲ್ಲದ ಹಸೀ ಹಾಲು ವಿಪರೀತ ಗುಣವುಳ್ಳದ್ದಾಗಿರುತ್ತದೆ. ಯಾವ ಹಾಲಾದರೂ, ಅತಿಯಾಗಿ ಕಾಯಿಸಿ ಬತ್ತಿಸಲ್ಪಟ್ಟರೆ ಗುರು ಮತ್ತು ಪುಷ್ಟಿಕರ ಎಂತ ಹೇಳಲ್ಪಡುತ್ತದೆ.

29. ಲವಣಾಮ್ಲ ಯುಕ್ತವಾದ ಹಾಲು ಅಹಿತ

ನ ಶಸ್ತಂ ಲವಣೈರ್ಯುಕ್ತಂ ಕ್ಷೀರಂ ಚಾಮ್ಲೇನ ವಾ ಪುನಃ ।
ಕರೋತಿ ಕುಷ್ಠಂ ತ್ವಗ್ದೋಷಂ ತಸ್ಮಾನ್ನೈವ ಹಿತಂ ಮತಂ ॥
(ಹಾರೀತ. 38.)

ಉಪ್ಪುಗಳಿಂದ ಅಥವಾ ಹುಳಿಯಿಂದ ಕೂಡಿದ ಹಾಲು ಪ್ರಶಸ್ತವಲ್ಲ; ಅದು ಕುಷ್ಠ ರೋಗವನ್ನೂ, ಚರ್ಮದೋಷವನ್ನೂ, ಉಂಟುಮಾಡುತ್ತದೆ. ಆದ್ದರಿಂದ ಅದನ್ನು ಅಹಿತ ವೆಂದೇ ತಿಳಿದಿದ್ದಾರೆ.

30. ಕಬ್ಬಿನ ಗುಣ ಮತ್ತು ತಿನ್ನುವ ಕಾಲವಿಚಾರ

ಅತೀವಮಧುರೋ ಮೂಲೇ ಮಧ್ಯೇ ಮಧುರ ಏವ ತು ।
ಅಗ್ರೇಷ್ವಕ್ಷಿಷು ವಿಜ್ಞೇಯ ಇಕ್ಷೂಣಾಂ ಲವಣೋ ರಸಃ ॥
(ಸು. 176.)

ಕಬ್ಬು ಬುಡದಲ್ಲಿ ಅತಿ ಸೀ, ಮಧ್ಯದಲ್ಲಿ ಸೀ, ಮತ್ತು ತುದಿಯಲ್ಲಿಯೂ, ಕಣ್ಣುಗಳಲ್ಲಿಯೂ ಉಪ್ಪು ರುಚಿಯುಳ್ಳದ್ದಾಗಿರುತ್ತದೆ.

ಭಕ್ಷಿತೋ ಭೋಜನಾತ್ಪೂರ್ವಂ ಜೇಕ್ಷುಃ ಪಿತ್ತಸ್ಯ ಶಾಮಕಃ ॥
ಭೋಜನೋತ್ತರಕಾಲೇ ಚ ಭಕ್ಷಿತೋ ವಾತಕೋಪನಃ ।
ಭೋಜನೇ ಭಕ್ಷಿತಶ್ಚಾಸಾವತಿಜಾಡ್ಯಕರೋ ಮತಃ ॥ (ನಿ. ರ.)

ಊಟಕ್ಕೆ ಮೊದಲು ತಿಂದ ಕಬ್ಬಿನಿಂದ ಪಿತ್ತಶಮನ ಉಂಟಾಗುತ್ತದೆ, ಭೋಜನೋತ್ತರ ದಲ್ಲಿ ತಿಂದ ಕಬ್ಬು ವಾತವನ್ನು ಪ್ರಕೋಪಿಸುತ್ತದೆ; ಮತ್ತು ಭೋಜನಕಾಲದಲ್ಲಿ ಕಬ್ಬು ತಿಂದರೆ, ಅದರಿಂದ ಅತಿಜಾಡ್ಯ ಉಂಟಾಗುವದು

31 ಜಗಿದ ಕಬ್ಬಿನ ರಸದ ಗುಣ

ಅವಿದಾಹೀ ಕಫಕರೋ ವಾತಪಿತ್ತನಿವಾರಣಃ ।
ವಕ್ತ್ರಪ್ರಹ್ಲಾದನೋ ವೃಷ್ಯೋ ದಂತನಿಷ್ಪೀಡಿತೋ ರಸಃ ॥
(ಸು. 186.)

ಹಲ್ಲಿನಿಂದ ಜಗಿದು ಬಂದ ಕಬ್ಬಿನ ರಸವು ಕಫಕರ, ವಿದಾಹಿಗುಣವಿಲ್ಲದ್ದು, ವಾತಪಿತ್ತ ಹರ, ಬಾಯಿಯೊಳಗೆ ಸಂತೋಷವನ್ನುಂಟುಮಾಡತಕ್ಕಂಧಾದ್ದು ಮತ್ತು ವೃಷ್ಯ.

32. ಆಲೆಯಲ್ಲಿ ತೆಗೆದ ಕಬ್ಬಿನ ರಸದ ಗುಣ

ಗುರುರ್ವಿದಾಹೀ ವಿಷ್ಟಂಭೀ ಯಾಂತ್ರಿಕಸ್ತು ಪ್ರಕೀರ್ತಿತಃ । (ಸು. 186.)

ಯಂತ್ರದಲ್ಲಿ ತೆಗೆದ ಕಬ್ಬಿನ ರಸವು ಗುರು, ಮತ್ತು ವಿದಾಹವನ್ನೂ, ವಿಷ್ಟಂಭನ (ಹೊಟ್ಟೆ ಬಿಗಿದು ಹಿಡಿಯುವಿಕೆ)ವನ್ನೂ, ಉಂಟುಮಾಡುವದು.

33. ಪಕ್ವಮಾಡಿದ ಕಬ್ಬಿನ ರಸದ ಗುಣ — ಪಕ್ವೋ ಗುರುಃ ಸರಃ ಸ್ನಿಗ್ಧಃ ಸತೀಕ್ಷ್ಣಃ ಕಫವಾತನುತ್ । (ಸು. 186.)

ಪಕ್ವಮಾಡಿದ ಕಬ್ಬಿನ ರಸವು ಗುರು, ಸರ, ಸ್ನಿಗ್ಧ, ತೀಕ್ಷ್ಣ, ಮತ್ತು ಕಫವಾತಹರ

34 ರವೆಬೆಲ್ಲದ ಗುಣ — ಫಾಣಿತಂ ಗುರು ಮಧುರಮಭಿಷ್ಯಂದಿ ಬೃಂಹಣಮವೃಷ್ಯಂ ತ್ರಿದೋಷಕೃಚ್ಚ । (ಸು 186)

ರವೆಬೆಲ್ಲವು ಗುರು, ಸೀ. ದ್ರವಪ್ರದ, ಬೃಂಹಣ, ವೃಷ್ಯವಲ್ಲದ್ದು ಮತ್ತು ತ್ರಿದೋಷಗಳನ್ನುಂಟುಮಾಡತಕ್ಕುಂಥಾದ್ದು.

ಮತಾಂತರ — ಬೃಂಹಣಂ ಕಫಶುಕ್ರಕೃತ್ ವಾತಪಿತ್ತಶ್ರಮಾನ್ ಹಂತಿ ಮೂತ್ರವಸ್ತಿವಿಶೋಧನಂ । (ಭಾ. ಪ್ರ. 188.)

ಅದು ಬೃಂಹಣ, ಕಫಕರ, ಶುಕ್ರಕರ, ವಾತಪಿತ್ತಶ್ರಮಗಳನ್ನು ಪರಿಹರಿಸತಕ್ಕುಂಥಾದ್ದು ಮತ್ತು ಮೂತ್ರವಸ್ತಿಯ ಶೋಧನಕಾರಿ.

ಗಟ್ಟಿ (ಅಚ್ಚು) ಬೆಲ್ಲದ ಗುಣ — 35. ಗುಡಃ ಸಕ್ಷಾರಮಧುರೋ ನಾತಿಶೀತಃ ಸ್ನಿಗ್ಧೋ ಮೂತ್ರರಕ್ತಶೋಧನೋ ನಾತಿಪಿತ್ತಜಿದ್ವಾತಘ್ನೋ ಮೇದಃಕಫಕರೋ ಬಲ್ಯೋ ವೃಷ್ಯಶ್ಚ । (ಸು. 186.)

ಕ್ಷಾರಮಿಶ್ರ ಸೀ ರುಚಿಯುಳ್ಳ ಬೆಲ್ಲವು ಅತಿಶೀತವಲ್ಲದ್ದು, ಸ್ನಿಗ್ಧ, ಮೂತ್ರವನ್ನೂ, ರಕ್ತವನ್ನೂ ಶುದ್ಧಿ ಮಾಡತಕ್ಕುಂಥಾದ್ದು, ಅತಿಯಲ್ಲದ ಪಿತ್ತಶಮನ ಗುಣವುಳ್ಳದ್ದು, ವಾತಹರ, ಬಲಕರ, ವೃಷ್ಯ, ಮತ್ತು ಮೇದಸ್ಸನ್ನೂ ಕಫವನ್ನೂ ಉಂಟುಮಾಡತಕ್ಕುಂಥಾದ್ದು.

ಮುದ್ದೆ ಬೆಲ್ಲದ ಗುಣ — 36. ಮತ್ಸ್ಯಂಡೀ ಭೇದಿನೀ ಬಲ್ಯಾ ಲಘ್ವೀ ಪಿತ್ತಾನಿಲಾಪಹಾ ।
ಮಧುರಾ ಬೃಂಹಣೀ ವೃಷ್ಯಾ ರಕ್ತದೋಷಾಪಹಾ ಸ್ಮೃತಾ ॥ (ಭಾ. ಪ್ರ. 189.)

ಮುದ್ದೆಬೆಲ್ಲವು ಭೇದಿಗುಣವುಳ್ಳದ್ದು, ಬಲಕರ, ಲಘು, ಪಿತ್ತವಾಯುಹರ, ಸೀ, ಪುಷ್ಟಿಕರ, ವೃಷ್ಯ, ಮತ್ತು ರಕ್ತದೋಷವನ್ನು ಪರಿಹರಿಸತಕ್ಕುಂಥಾದ್ದು.

ಶುದ್ಧ ಮತ್ತು ಹಳೆ ಬೆಲ್ಲದ ಗುಣ — 37. ಪಿತ್ತಘ್ನೋ ಮಧುರಃ ಶುದ್ಧೋ ವಾತಘ್ನೋಽಸೃಕ್ಪ್ರಸಾದನಃ ।
ಸ ಪುರಾಣೋಽಧಿಕಗುಣೋ ಗುಡಃ ಪಥ್ಯತಮಃ ಸ್ಮೃತಃ ॥ (ಸು. 186.)

ಶುದ್ಧ (ಬಿಳೇ) ಬೆಲ್ಲವು ಪಿತ್ತಹರ, ಸೀ, ವಾತಹರ, ಮತ್ತು ರಕ್ತಶುದ್ಧಿಕರ. ಅದು ಹಳೇದಾದರೆ, ಅಧಿಕಗುಣವುಳ್ಳದ್ದು ಮತ್ತು ಒಳ್ಳೇ ಪಥ್ಯ

38. ಖಂಡಂ ತು ಮಧುರಂ ವೃಷ್ಯಂ ಚಕ್ಷುಷ್ಯಂ ಬೃಂಹಣಂ ಹಿಮಂ ।
ಕಲ್ಲುಸಕ್ಕರೆಯ ಗುಣ ವಾತಪಿತ್ತಹರಂ ಸ್ನಿಗ್ಧಂ ಬಲ್ಯಂ ವಾಂತಿಹರಂ ಪರಂ ॥
(ಭಾ. ಪ್ರ. 189.)

ಕಲ್ಲುಸಕ್ಕರೆಯು ಸೀ, ವೃಷ್ಯ, ದೃಷ್ಟಿಗ ಹಿತವಾದದ್ದು, ಪುಷ್ಟಿಕರ, ತಂಪು, ವಾತಪಿತ್ತಹರ, ಸ್ನಿಗ್ಧ, ಬಲಕರ, ಮತ್ತು ಒಳ್ಳೇ ವಾಂತಿಹರ.

39. ಸಿತಾ ಸಮಧುರಾ ರುಚ್ಯಾ ವಾತಪಿತ್ತಾಸ್ರದಾಹಹೃತ್ ।
ಬಿಳೇ ಸಕ್ಕರೆಯ ಗುಣ ಮೂರ್ಚ್ಛಾಛರ್ದಿಜ್ವರಾನ್ ಹಂತಿ ಸುಶೀತಾ ಶುಕ್ರಕಾರಿಣೀ ॥
(ಭಾ. ಪ್ರ. 189.)

ಬಿಳೇ ಸಕ್ಕರೆಯು ಸೀ, ರುಚಿಕರ, ವಾತ, ಪಿತ್ತರಕ್ತ, ದಾಹ, ಮೂರ್ಚ್ಛೆ, ವಾಂತಿ, ಮತ್ತು ಜ್ವರ, ಇವುಗಳನ್ನು ಶಮನಮಾಡತಕ್ಕಂಥಾದ್ದು, ಒಳ್ಳೇ ಶೀತ ಮತ್ತು ಶುಕ್ರಕಾರಿ.

40. ಮತ್ಸ್ಯಂಡಿಕಾಖಂಡಶರ್ಕರಾವಿಮಲಾಜಾತಾ ಉತ್ತರೋತ್ತರಂ ಶೀತಾಃ
ಸ್ನಿಗ್ಧಾ ಗುರುತರಾ ಮಧುರತರಾ ವೃಷ್ಯಾ ರಕ್ತಪಿತ್ತಪ್ರಸಾದನಾಸ್ತೃಷ್ಣಾ
ಬೆಲ್ಲ ಸಕ್ಕರೆಗಳ ತುಲ್ಯಗುಣ ಪ್ರಶಮನಾಶ್ಚ ।
ಯಥಾ ಯಥೈಷಾಂ ವೈಮಲ್ಯಂ ಮಧುರತ್ವಂ ತಥಾ ತಥಾ ।
ಸ್ನೇಹಗೌರವಶೈತ್ಯಾನಿ ಸರತ್ವಂ ಚ ತಥಾ ತಥಾ ॥ (ಸು. 186.)

ಮುದ್ದೆಬೆಲ್ಲ, ಕಲ್ಲುಸಕ್ಕರೆ, ಮತ್ತು ಸಕ್ಕರೆ ಉತ್ತರೋತ್ತರ ನಿರ್ಮಲವಾಗಿ, ಗುರುತ್ವ ಮತ್ತು ಮಧುರತ್ವ, ಹೆಚ್ಚಾಗುಳ್ಳವು, ಶೀತ, ಸ್ನಿಗ್ಧ, ವೃಷ್ಯ, ಮತ್ತು ರಕ್ತಪಿತ್ತವನ್ನೂ, ಬಾಯಾರಿಕೆಯನ್ನೂ, ಶಮನಮಾಡತಕ್ಕಂಥವು. ಇವುಗಳೊಳಗೆ ನಿರ್ಮಲತ್ವವೂ, ಸೀಯೂ, ಹೆಚ್ಚುಕಡಿಮೆಯಿದ್ದ ಹಾಗೆ, ಸ್ನಿಗ್ಧತೆಯೂ, ಗುರುತ್ವವೂ, ಶೈತ್ಯವೂ, ಸರತ್ವವೂ, ಹೆಚ್ಚುಕಡಿಮೆ ಇವೆಯೆಂದು ತಿಳಿಯಬೇಕು.

41 ಯಾವತ್ಯಃ ಶರ್ಕರಾಃ ಪ್ರೋಕ್ತಾಃ ಸರ್ವಾ ದಾಹಪ್ರಣಾಶನಾಃ ।
ಸಾಮಾನ್ಯವಾಗಿ ಸಕ್ಕರೆಯ ಗುಣ ರಕ್ತಪಿತ್ತಪ್ರಶಮನಾಶ್ಚರ್ದಿಮೂರ್ಚ್ಛಾತೃಷಾಪಹಾಃ ॥
(ಸು. 187.)

(ಇತರ) ಎಲ್ಲಾ ಜಾತಿಸಕ್ಕರೆಗಳು ದಾಹವನ್ನೂ, ರಕ್ತಪಿತ್ತವನ್ನೂ, ವಾಂತಿಯನ್ನೂ, ಮೂರ್ಚ್ಛೆಯನ್ನೂ, ಬಾಯಾರಿಕೆಯನ್ನೂ ಪರಿಹರಿಸತಕ್ಕಂಥವು ಆಗಿರುತ್ತವೆ

42 ಪೇಯಂ ಯನ್ಮಾದಕಂ ಲೋಕೈಸ್ತನ್ಮದ್ಯಮಭಿಧೀಯತೇ ।
ಯಧಾರಿಷ್ಟಂ ಸುರಾ ಸೀಧುರಾಸವಾದ್ಯಮನೇಕಧಾ ॥
ಮದ್ಯಂ ಸರ್ವಂ ಭವೇದುಷ್ಣಂ ಪಿತ್ತಕೃದ್ವಾತನಾಶನಂ ।

ಭೇದನಂ ಶೀಘ್ರಪಾಕಂ ಚ ರೂಕ್ಷಂ ಕಫಹರಂ ಪರಂ ||

ಮದ್ಯದ ಸರುಕ್ತಿ ಮತ್ತು ಗುಣ ದೋಷಗಳು

ಅಮ್ಲಂ ಚ ದೀಪನಂ ರುಚ್ಯಂ ಪಾಚನಂ ಚಾಶುಕಾರಿ ಚ |
ತೀಕ್ಷ್ಣಸೂಕ್ಷ್ಮಂ ಚ ವಿಶದಂ ವ್ಯವಾಯಿ ಚ ವಿಕಾಸಿ ಚ ||

(ಭಾ. ಪ್ರ. 184.)

ಮದವನ್ನುಂಟುಮಾಡತಕ್ಕ ಪಾನಕ್ಕೆ ಜನರು ಮದ್ಯವೆಂತ ಹೇಳುತ್ತಾರೆ. ಅದು ಅರಿಷ್ಟ (ಕುದಿಸಿದ ಕಷಾಯದಿಂದ ತಯಾರಿಸಿದ್ದು), ಸುರಾ (ಹಿಟ್ಟಿನಿಂದ ಮಾಡಿದ್ದು, Beer), ಸೀಧು (ಕಬ್ಬಿನ ರಸದಿಂದ ತಯಾರಿಸಿದ್ದು), ಆಸವ (ಹಸೀ ಕಷಾಯದಿಂದ ತಯಾರಿಸಿದ್ದು), ಇವೇ ಮೊದಲಾದ ಅನೇಕ ವಿಧವಾಗಿರುವದು ಎಲ್ಲಾ ಮದ್ಯವು ಉಷ್ಣ, ಪಿತ್ತಕಾರಿ, ವಾತಹರ, ಭೇದಿಕರ, ಶೀಘ್ರಪಾಕವುಳ್ಳದ್ದು, ರೂಕ್ಷ, ಕಫಹರಕ್ಕೆ ಉತ್ತಮ, ಮತ್ತು ಹುಳಿಯಾದದ್ದು ದೀಪನಪಾಚನಕರ, ರುಚಿಕರ, ಆಶುಕಾರಿ (ಕೂಡಲೇ ಕೆಲಸಮಾಡುವಂಥಾದ್ದು), ತೀಕ್ಷ್ಣ, ಸೂಕ್ಷ್ಮ, ವಿಶದ, ವ್ಯವಾಯಿ, ಮತ್ತು ವಿಕಾಸಿ

ತಸ್ಯಾನೇಕಪ್ರಕಾರಸ್ಯ ಮದ್ಯಸ್ಯ ರಸವೀರ್ಯತಃ |
ಸೌಕ್ಷ್ಮ್ಯಾದೌಷ್ಣ್ಯಾಚ್ಚ ತೈಕ್ಷ್ಣ್ಯಾಚ್ಚ ವಿಕಾಸಿತ್ವಾಚ್ಚ ವಹ್ನಿನಾ ||
ಸಮೇತ್ಯ ಹೃದಯಂ ಪ್ರಾಪ್ಯ ಧಮನೀರೂರ್ಧ್ವಮಾಗತಂ |
ಏಕ್ಲೋಭ್ಯೇಂದ್ರಿಯಚೇತಾಂಸಿ ವೀರ್ಯಂ ಮದಯತೇಽಚಿರಾತ್ ||
ಚಿರೇಣ ಶ್ಲೈಷ್ಮಿಕೇ ಪುಂಸಿ ಪಾನತೋ ಜಾಯತೇ ಮದಃ |
ಅಚಿರಾದ್ವಾತಿಕೇ ದೃಷ್ಟಃ ಪೈತ್ತಿಕೇ ಶೀಘ್ರಮೇವ ತು ||

(ಸು 190)

ರಸದಲ್ಲಿಯೂ, ವೀರ್ಯದಲ್ಲಿಯೂ ಅನೇಕ ಪ್ರಕಾರವಾಗಿರುವ ಆ ಮದ್ಯದ ಸೂಕ್ಷ್ಮತೆಯಿಂದಲೂ, ಉಷ್ಣತೆಯಿಂದಲೂ, ತೀಕ್ಷ್ಣತೆಯಿಂದಲೂ, ವಿಕಾಸಿತ್ವದಿಂದಲೂ, ಅದರ ವೀರ್ಯವು ಅಗ್ನಿಯೊಂದಿಗೆ ಧಮನಿಗಳ ದ್ವಾರವಾಗಿ ಮೇಲಕ್ಕೆ ಬಂದು, ಹೃದಯವನ್ನು ಸೇರಿ, ಇಂದ್ರಿಯಗಳನ್ನೂ, ಮನಸ್ಸನ್ನೂ ಚೆನ್ನಾಗಿ ಅಲ್ಲಾಡಿಸಿ. ಬೇಗನೇ ಮದವನ್ನುಂಟುಮಾಡುತ್ತದೆ. ಈ ಮದವು ಕಫಪ್ರಕೃತಿಯವನಲ್ಲಿ ಕುಡಿದನಂತರ ಸ್ವಲ್ಪಕಾಲದಲ್ಲಿ ಉಂಟಾಗುತ್ತದೆ, ಅದು ವಾತ ಪ್ರಕೃತಿಯವನಲ್ಲಿ ಸಾವಕಾಶವಿಲ್ಲದೆ, ಮತ್ತು ಪಿತ್ತಪ್ರಕೃತಿಯವನಲ್ಲಿ ಶೀಘ್ರವಾಗಿ, ಕಾಣುವದು

43. ಮಾದ್ವ್ವೀಕಮವಿದಾಹಿತ್ವಾನ್ನಧುರಾನ್ವಯತಸ್ತಥಾ |
ರಕ್ತಪಿತ್ತೇಽಪಿ ಸತತಂ ಬುಧೈರ್ನ ಪ್ರತಿಷಿಧ್ಯತೇ ||

ದ್ರಾಕ್ಷಾ ಮದ್ಯದ ಗುಣ

ಮಧುರಂ ತದ್ಧಿ ರೂಕ್ಷಂ ಚ ಕಷಾಯಾನುರಸಂ ಲಘು |
ಲಘುಪಾಕಿ ಸರಂ ಶೋಷವಿಷಮಜ್ವರನಾಶನಂ || (ಸು 187)

ದ್ರಾಕ್ಷೆಹಣ್ಣಿನ ಮದ್ಯವು ವಿದಾಹಿಯಲ್ಲದ್ದರಿಂದಲೂ, ಸೀರಸ ಕೂಡಿರುವದರಿಂದಲೂ, ರಕ್ತಪಿತ್ತ ರೋಗದಲ್ಲಿ ಸಹ ಅದನ್ನು ಸುಜ್ಞರು ಯಾವಾಗಲೂ ಪ್ರತಿಷೇಧಿಸುವದಿಲ್ಲ. ಯಾಕಂದರೆ, ಅದು ಸೀ, ರೂಕ್ಷ, ಜೊಗರು ಅನುರಸವಾಗಿ ಉಳ್ಳದ್ದು, ಲಘು, ಪಾಕದಲ್ಲಿಯೂ ಲಘು, ಸರ, ಶೋಷವನ್ನು ಮತ್ತು ವಿಷಮಜ್ವರವನ್ನು ನಾಶಮಾಡತಕ್ಕಂಥಾದ್ದು

44. ಶ್ಲೇಷ್ಮದೋಷಕರಾ ವೃಷ್ಯಾ ವಾತಲಾ ಶ್ಲೇಷ್ಮವರ್ಧಿನೀ ।
ತಾಳೀ ಮದ್ಯದ ಗುಣ ಕಾಸಹೃಲ್ಲಾಸವಿಧ್ವಂಸಕಾರಿಣೀ ತಾಡಮಂಡಿಕಾ ॥
(ಹಾ. 64-65.)

ತಾಳಿಕಳ್ಳು ಕಫದೋಷಕರ, ವಾಯುವನ್ನೂ, ಕಫವನ್ನೂ ವೃದ್ಧಿಮಾಡತಕ್ಕಂಥಾದ್ದು, ವೃಷ್ಯ ಮತ್ತು ಕೆಮ್ಮನ್ನೂ, ಬಕ್ಕಟ್ಟನ್ನೂ ಪರಿಹರಿಸುವದು.

45. ಪಕ್ವೌಷಧಾಂಬುಸಿದ್ಧಂ ಯನ್ಮದ್ಯಂ ತತ್ಸ್ಯಾದರಿಷ್ಟಕಂ ।
ಅರಿಷ್ಟದ ಗುಣ ಅರಿಷ್ಟಂ ಲಘುಪಾಕೇನ ಸರ್ವತಶ್ಚ ಗುಣಾಧಿಕಂ ॥
ಅರಿಷ್ಟಸ್ಯ ಗುಣಾ ಜ್ಞೇಯಾ ಬೀಜದ್ರವ್ಯಗುಣೈಃ ಸಮಾಃ । (ಭಾ. ಪ್ರ. 184.)

ಕುದಿಸಿದ ಕಷಾಯದಿಂದ ತಯಾರಿಸಲ್ಪಟ್ಟ ಮದ್ಯವು ಅರಿಷ್ಟವೆನ್ನಿಸಿಕೊಳ್ಳುತ್ತದೆ. ಆ ಅರಿಷ್ಟವು ಲಘುಪಾಕವುಳ್ಳದ್ದಾದ್ದರಿಂದ, ಸರ್ವ ವಿಷಯಗಳಲ್ಲಿಯೂ ಅಧಿಕಗುಣವುಳ್ಳದ್ದಾಗಿದೆ. ಅರಿಷ್ಟದ ಗುಣಗಳು ಅದನ್ನು ಸಿದ್ಧಪಡಿಸುವದಕ್ಕೆ ಕೂಡಿದ ದ್ರವ್ಯಗಳ ಗುಣಗಳಿಗೆ ಸಮಾನವಾಗಿರುತ್ತವೆ.

46. ಯದಪಕ್ವೌಷಧಾಂಬುಭ್ಯಾಂ ಸಿದ್ಧಂ ಮದ್ಯಂ ಸ ಆಸವಃ ।
ಆಸವದ ಗುಣ ಆಸವಸ್ಯ ಗುಣಾ ಜ್ಞೇಯಾ ಬೀಜದ್ರವ್ಯಗುಣೈಃ ಸಮಾಃ ॥
(ಭಾ. ಪ್ರ 185.)

ಅಗ್ನಿಯಿಂದ ಪಕ್ವಮಾಡದೆ, ಔಷಧಗಳಿಗೆ ನೀರು ಕೂಡಿಸಿ ತಯಾರಿಸಲ್ಪಟ್ಟ ಮದ್ಯಕ್ಕೆ 'ಆಸವ' ಎನ್ನುತ್ತಾರೆ. ಆಸವದ ಗುಣಗಳು ಅದನ್ನು ತಯಾರಿಸುವದಕ್ಕೆ ಸೇರಿದ ದ್ರವ್ಯಗಳ ಗುಣಗಳಿಗೆ ಸಮವಾಗಿರುತ್ತವೆ.

47. ವಿಧಿನಾ ಮಾತ್ರಯಾ ಕಾಲೇ ಹಿತೈರಂತೈರ್ಯಥಾಬಲಂ ।
ಪ್ರಹೃಷ್ಟೋ ಯಃ ಪಿಬೇನ್ಮದ್ಯಂ ತಸ್ಯ ಸ್ಯಾದಮೃತಂ ಯಥಾ ॥
ಮದ್ಯಪಾನದ ನಿಯಮಗಳು ಕಿಂ ತು ಮದ್ಯಂ ಸ್ವಭಾವೇನ ಯದ್ಯೈವಾನ್ನಂ ತಥಾ ಸ್ಮೃತಂ ।
ಅಯುಕ್ತಿಯುಕ್ತಂ ರೋಗಾಯ ಯುಕ್ತಿಯುಕ್ತಂ ಯಥಾಽಮೃತಂ ॥
(ಭಾ. ಪ್ರ. 185.)

ಯಾವನು ಸಂತೋಷಪಟ್ಟವನಾಗಿ, ಶಾಸ್ತ್ರವಿಧಿ ಪ್ರಕಾರ, ತಕ್ಕ ಪ್ರಮಾಣಕ್ಕೆ ಮಿಗದೆ, ಯುಕ್ತಕಾಲದಲ್ಲಿ, ಬಲವನ್ನು ನೋಡಿಕೊಂಡು, ಹಿತದಿಂದ ಮದ್ಯವನ್ನು ಕುಡಿಯುತ್ತಾನೋ, ಅವನಿಗೆ ಅದು ಅಮೃತಪ್ರಾಯವಾಗುವದು; ಆದರೆ ಸ್ವಾಭಾವಿಕವಾಗಿ ಮದ್ಯವು, ಅನ್ನದಂತೆ, ಯುಕ್ತವಾಗಿ ಸೇವಿಸಲ್ಪಟ್ಟರೆ ಅಮೃತಕ್ಕೆ ಸಮಾನವಾದರೂ, ಯುಕ್ತಿವಿಚಾರವಿಲ್ಲದೆ ಸೇವಿಸಲ್ಪಟ್ಟರೆ, ರೋಗಗಳಿಗೆ ಕಾರಣವಾಗುವದು ಎಂತ ತಿಳಿದಿದ್ದಾರೆ.

ಅಲ್ಪಾಗ್ನೀನಾಮನಿದ್ರಾಣಾಂ ತಂದ್ರಾಶೋಕಭಯಕ್ಲಮೈಃ ।
ಮದ್ಯಮಾಂಸೋಚಿತಾನಾಂ ಚ ಮದ್ಯಮೇವಾನುಶಸ್ಯತೇ ॥ (ಚ. 181.)

ಅಗ್ನಿಬಲ ಕಡಿಮೆಯಾದವರಿಗೂ, ಅಶಕ್ತಿ, ಶೋಕ, ಭಯ ಮತ್ತು ಆಯಾಸಗಳಿದ್ದು ನಿದ್ರೆಬಾರದವರಿಗೂ, ಮದ್ಯಮಾಂಸಸೇವನೆಗೆ ಯೋಗ್ಯರಾದವರಾದರೆ, ಮದ್ಯವನ್ನೇ ವಿಧಿಸುತ್ತಾರೆ.

48. ಮಂದಂ ಸ್ಯಾತ್ ಸೃಷ್ಟವಿಣ್ಮೂತ್ರಂ ದೋಷತ್ರಯವಿದಾಹಕೃತ್ ।
ಸ್ವಾದು ಸ್ಯಾದತ್ಯಭಿಷ್ಯಂದಿ ವೃಷ್ಯಂ ಮೇದಃಕಫಾವಹಂ ॥
ವಾತಘ್ನಂ ಮಧುರಂ ಪಾಕೇ ರಕ್ತಪಿತ್ತಪ್ರಸಾದನಂ ॥

ಮೊಸರಿನ ಗುಣ

ಸ್ವಾದ್ವಮ್ಲಸ್ಯ ಗುಣಾ ಜ್ಞೇಯಾಃ ಸಾಮಾನ್ಯದಧಿವಜ್ಜನೈಃ ।
ಅಮ್ಲಂ ತು ದೀಪನಂ ಪಿತ್ತರಕ್ತಶ್ಲೇಷ್ಮವರ್ಧನಂ ।
ಅತ್ಯಮ್ಲಂ ದೀಪನಂ ರಕ್ತವಾತಪಿತ್ತಕರಂ ಪರಂ ॥ (ಭಾ. ಪ್ರ. 177.)

ಮಂದ ಮೊಸರು (ಗಟ್ಟಿಯಾಗುವ ಮೊದಲಿನದು) ಮಲಮೂತ್ರಗಳನ್ನು ಹೆಚ್ಚಿಸುತ್ತದೆ ಮತ್ತು ತ್ರಿದೋಷಗಳನ್ನೂ, ಉರಿಯನ್ನೂ ಉಂಟುಮಾಡುತ್ತದೆ. ಸೀ ಮೊಸರು (ಗಟ್ಟಿಯಾದರೂ, ಹುಳಿರಸ ವ್ಯಕ್ತವಾಗದ್ದು) ಅತಿಯಾಗಿ ಅಭಿಷ್ಯಂದಿ, ಮೇದಸ್ಸನ್ನೂ, ಕಫವನ್ನೂ ಉಂಟುಮಾಡತಕ್ಕುದಾದ್ದು, ವೃಷ್ಯ, ವಾತಹರ, ಪಾಕದಲ್ಲಿಯೂ ಸೀ ಮತ್ತು ರಕ್ತಪಿತ್ತವನ್ನು ಶಮನಮಾಡುತ್ತದೆ. ಸೀ ಹುಳಿ (ಜೊಗರು ಅನುರಸವಾಗಿ ಮಿಶ್ರರುಚಿಯುಳ್ಳ) ಮೊಸರಿನ ಗುಣಗಳು ಸಾಮಾನ್ಯವಾದ ಮೊಸರಿನಂತೆ ಎಂತ ಜನರು ತಿಳಿಯಬೇಕು. ಹುಳಿಮೊಸರು (ಸೀಯಡಗಿ ಹುಳಿಯಾದದ್ದು) ಅಗ್ನಿದೀಪನಕಾರಿ ಮತ್ತು ರಕ್ತಪಿತ್ತ ಕಫಗಳನ್ನು ವೃದ್ಧಿಮಾಡುತ್ತದೆ. ಅತಿ ಹುಳಿಯಾದದ್ದು ದೀಪನಕಾರಿ ಮತ್ತು ರಕ್ತವಾತವನ್ನೂ, ಪಿತ್ತವನ್ನೂ ವಿಶೇಷವಾಗಿ ಉಂಟುಮಾಡುತ್ತದೆ.

ಷರಾ 'ಅಭಿಷ್ಯಂದಿ'ಯ ಅರ್ಥಕ್ಕೆ III ಅ 3 ಸಂ ನೋಡು

49. ತಕ್ರಂ ಮಧುರಮಮ್ಲಂ ಕಷಾಯಾನುರಸಮುಷ್ಣವೀರ್ಯಂ ಲಘು
ರೂಕ್ಷಮಗ್ನಿದೀಪನಂ ಗರ-ಶೋಫಾತಿಸಾರ-ಗ್ರಹಣೀ-ಪಾಂಡುರೋಗಾ

ಮಜ್ಜಿಗೆಯ ಗುಣ

ರ್ಶಃ-ಪ್ಲೀಹ-ಗುಲ್ಮಾರೋಚಕ-ವಿಷಮಜ್ವರ-ತೃಷ್ಣಾ-ಛರ್ದಿ-ಪ್ರಸೇಕ-
ಶೂಲ-ಮೇದಃಶ್ಲೇಷ್ಮಾನಿಲಹರಂ ಮಧುರವಿಪಾಕಂ ಹೃದ್ಯಂ ಮೂತ್ರಕೃ
ಚ್ರಸ್ನೇಹವ್ಯಾಪತ್‌ಪ್ರಶಮನಮವೃಷ್ಯಂ ಚ ।
ಮಂಥನಾದಿಪೃಥಗ್ಭೂತಸ್ನೇಹಮಧ್ಯೋದಕಂ ತು ಯತ್ ।
ನಾತಿಸಾಂದ್ರದ್ರವಂ ತಕ್ರಂ ಸ್ವಾದ್ವಮ್ಲಂ ತುವರಂ ರಸೇ ॥ (ಸು 178.)

ತಕ್ರವೆನ್ನಿಸಿಕೊಳ್ಳುವ ಮಜ್ಜಿಗೆಯು ಸೀ, ಹುಳಿ, ಮತ್ತು ಉಪರಸವಾಗಿ ಜೊಗರು ಮಿಶ್ರವಾದದ್ದು, ಪಾಕದಲ್ಲಿ ಸೀ, ಲಘು, ವೀರ್ಯದಿಂದ ಉಷ್ಣ, ರೂಕ್ಷ, ಅಗ್ನಿದೀಪನಕರ, ಮನೋಹರವಾದದ್ದು, ವೃಷ್ಯಗುಣವಿಲ್ಲದ್ದು, ವಿಷ, ಶೋಫ, ಅತಿಸಾರ, ಗ್ರಹಣೀ, ಪಾಂಡು, ಅರ್ಶಸ್ಸು, ಪ್ಲೀಹ, ಗುಲ್ಮ, ಅರುಚಿ, ವಿಷಮಜ್ವರ, ಬಾಯಾರಿಕೆ, ವಾಂತಿ, ನೆಗಡಿ (ಅಥವಾ ಜೊಲ್ಲು), ಶೂಲೆ, ಮೇದಸ್ಸು, ಕಫ, ವಾಯು, ಈ ದೋಷಗಳನ್ನು ಪರಿಹರಿಸುವದು; ಮತ್ತು ಮೂತ್ರ ಕೃಚ್ರವನ್ನೂ, ಸ್ನೇಹಪಾನವ್ಯತ್ಯಾಸದಿಂದುಂಟಾದ ವಿಕಾರವನ್ನೂ, ಶಮನಮಾಡುತ್ತದೆ.

ಕಡೆಯೋಣ ಮೊದಲಾದ ಕ್ರಮಗಳಿಂದ ಸ್ನೇಹ (ಬೆಣ್ಣೆ) ಪ್ರತ್ಯೇಕಿಸಲ್ಪಟ್ಟಿರುವ, ಅರ್ಧಾಂಶ ನೀರುಳ್ಳ, ಅತಿಮಂದವೂ ಅತಿತೆಳ್ಳಗೂ ಅಲ್ಲದ, ಮತ್ತು ರಸದಲ್ಲಿ ಸೀ, ಹುಳಿ ಮತ್ತು ಜೊಗರು ಮಿಶ್ರವಾಗಿರುವ ಮಜ್ಜಿಗೆಗೆ ತಕ್ರವೆನ್ನುವದು.

50. ತಕ್ರಂ ನೈವ ಕ್ಷತೇ ದದ್ಯಾನ್ನೋಷ್ಣಕಾಲೇ ನ ದುರ್ಬಲೇ ।
ನ ಮೂರ್ಚ್ಛಾಭ್ರಮದಾಹೇಷು ನ ರೋಗೇ ರಕ್ತಪೈತ್ತಿಕೇ ॥
ಶೀತಕಾಲೇಽಗ್ನಿಮಾಂದ್ಯೇ ಚ ಕಫೋತ್ಥೇಷ್ವಾಮಯೇಷು ಚ ।
ಮಾರ್ಗಾವರೋಧೇ ದುಷ್ಟೇ ಚ ವಾಯೌ ತಕ್ರಂ ಪ್ರಶಸ್ಯತೇ ॥ (ಸು. 178-79.)

ಮಜ್ಜಿಗೆಯ ಪಥ್ಯಾಪಥ್ಯ ವಿಚಾರ

ತಕ್ರವನ್ನು ದುರ್ಬಲನಿಗೂ, ಕ್ಷತನಾದವನಿಗೂ, ಮೂರ್ಚ್ಛೆ, ಭ್ರಮೆ, ಉರಿ ಮತ್ತು ರಕ್ತ ಪಿತ್ತ, ಈ ರೋಗಗಳಲ್ಲಿಯೂ, ಉಷ್ಣಕಾಲದಲ್ಲಿಯೂ, ಉಪಯೋಗಿಸಕೂಡದು. ಶೀತಕಾಲದಲ್ಲಿ, ಅಗ್ನಿಮಂದವಾದಾಗ್ಗೆ, ಕಫದಿಂದ ಹುಟ್ಟಿದ ವ್ಯಾಧಿಗಳಲ್ಲಿ, (ಸ್ರೋತಸ್ಸುಗಳ) ಮಾರ್ಗದ ತಡೆಯಲ್ಲಿ, ಮತ್ತು ವಾಯು ಕೆಟ್ಟಾಗ್ಗೆ ತಕ್ರವು ಪ್ರಶಸ್ತವಾದದ್ದಾಗಿರುತ್ತದೆ.

51. ತತ್ ಪುನರ್ಮಧುರಂ ಶ್ಲೇಷ್ಮಪ್ರಕೋಪಣಂ ಪಿತ್ತಪ್ರಶಮನಂ ಚ ।
ಅಮ್ಲಂ ವಾತಘ್ನಂ ಪಿತ್ತಕರಂ ಚ ।
ವಾತೇಽಮ್ಲಂ ಸೈಂಧವೋಪೇತಂ ಸ್ವಾದು ಪಿತ್ತೇ ಸಶರ್ಕರಂ ।
ಪಿಬೇತ್ತಕ್ರಂ ಕಫೇ ಚಾಪಿ ವ್ಯೋಷಕ್ಷಾರಸಮಾಯುತಂ ॥ (ಸು. 179.)

ಮಜ್ಜಿಗೆ ಸೀ ಹುಳಿಯಾದದ್ದರ ಗುಣಭೇದ

ಆ ತಕ್ರವು ಸೀಯಾಗಿದ್ದರೆ ಕಫವನ್ನು ಪ್ರಕೋಪಿಸುತ್ತದೆ ಮತ್ತು ಪಿತ್ತವನ್ನು ಶಮನ ಮಾಡುತ್ತದೆ; ಹುಳಿಯಾದರೆ, ವಾತ ನಾಶಮಾಡುವದಲ್ಲದೆ, ಪಿತ್ತ ವೃದ್ಧಿಮಾಡುತ್ತದೆ. ವಾತ ರೋಗದಲ್ಲಿ ಹುಳಿಮಜ್ಜಿಗೆಯನ್ನು ಸೈಂಧವ ಉಪ್ಪು ಕೂಡಿಸಿಕೊಂಡು, ಪಿತ್ತರೋಗದಲ್ಲಿ ಸೀ ಮಜ್ಜಿಗೆಯನ್ನು ಸಕ್ಕರೆ ಕೂಡಿಸಿಕೊಂಡು, ಮತ್ತು ಕಫರೋಗದಲ್ಲಿ (ಹುಳಿ ಸೀ) ಮಜ್ಜಿಗೆಯನ್ನು ತ್ರಿಕಟು ಚೂರ್ಣ ಮತ್ತು ಕ್ಷಾರ ಕೂಡಿಸಿಕೊಂಡು ಕುಡಿಯಬೇಕು

52. ಏಕಲ್ಪ ಏಷ ದಧ್ಯಾದಿಃ ಶ್ರೇಷ್ಠೋ ಗವ್ಯೋಽಭಿವರ್ಣಿತಃ ।
ವಿಕಲ್ಪಾನವಶಿಷ್ಟಾಂಸ್ತು ಕ್ಷೀರವೀರ್ಯಾತ್ಸಮಾದಿಶೇತ್ ॥
(ಸು. 179.)

ಗೋವಿನ ದಧ್ಯಾದಿ ಪ್ರಶಂಸಾ

ನಾನಾ ದಧ್ಯಾದಿಗಳಲ್ಲಿ ದನದ ದಧ್ಯಾದಿಗಳೇ ಶ್ರೇಷ್ಠವಾದವುಗಳಾದ್ದರಿಂದ, ಅವುಗಳ ಕುರಿತಾದ ಶಾಸ್ತ್ರವಿಧಿಯನ್ನು ವರ್ಣಿಸಿಯದೆ. ಉಳಿದ ಜಾತಿಯ ದಧ್ಯಾದಿಗಳ ಕುರಿತಾದ ವಿಧಿಗಳನ್ನು ಆಯಾ ಜಾತಿ ಹಾಲಿನ ವೀರ್ಯದ ವಿಚಾರದಿಂದ ಹೇಳತಕ್ಕದ್ದು.

53. ಈ ಅಧ್ಯಾಯದಲ್ಲಿ ಮೇಲೆ ಪ್ರಸ್ತಾಪಿಸಿದ ಪಾನೀಯಗಳನ್ನು ಬಿಟ್ಟು ಕಾಫಿ, ಚಾ, ಅಥವಾ ಕೋಕೋ ಕಷಾಯವನ್ನು ಸೇವಿಸುವ ಅಭ್ಯಾಸವು ದಿನೇದಿನೇ ಹಬ್ಬಿ ಬೆಳೆಯುತ್ತಾ ಬರುವದರಿಂದ, ಆ ನವೀನ ಪಾನೀಯಗಳ ಗುಣದೋಷಗಳ ವಿಷಯದಲ್ಲಿ ಕೆಲವರು ಪಾಶ್ಚಾತ್ಯ ಶಾಸ್ತ್ರಜ್ಞರೇ ಬರೆದಿರುವ ಅಭಿಪ್ರಾಯವನ್ನು ಇಲ್ಲಿ ಸಂಕ್ಷೇಪವಾಗಿ ಸೂಚಿಸುವದು ಯುಕ್ತವಾಗಿ ಕಾಣುತ್ತದೆ

ಕಾಫಿ ಚಾ ಮತ್ತು ಕೋಕೋ ಉಪಯೋಗದ ದೋಷಗಳು

ಚಾ ಎಲೆಯನ್ನಾಗಲಿ, ಕಾಫಿ ಬೀಜವನ್ನಾಗಲಿ, ಅತಿಯಾಗಿ ಉಪಯೋಗಿಸಿ ತಯಾರಿಸಿದ ಪಾನಕವನ್ನು ಸೇವಿಸುವದರಿಂದ ಅಮಲು ಉಂಟಾಗುತ್ತದೆ. ಚಾ ಎಲೆಯಲ್ಲಿ ಶತಾಂಶ 3ರಿಂದ 6ರ ವರೆಗೆ 'ಥೇಯಿನ್' ಎಂಬ ವಿಷವಸ್ತು ಇರುತ್ತದೆ. ಒಂದು ಚಾ ಚಮಚೆ ಎಲೆಯಲ್ಲಿ 2 ಗುಲುಗುಂಜೀ ತೂಕದಿಂದ 3½ ಗುಲುಗುಂಜೀ ತೂಕದ ವರೆಗಿನಷ್ಟು ಆ ವಿಷ ಇರುತ್ತದೆ. ಎರಡು ತಟ್ಟೆ ಚಾ ಪಾನಕದಲ್ಲಿ ಸುಮಾರು 5 ಗುಲುಗುಂಜಿಯಷ್ಟು ವಿಷವಿರುವದು; ಈ ವಿಷ ಬೆಕ್ಕು, ಮೊಲ ಮುಂತಾದ ಚಿಕ್ಕ ಪ್ರಾಣಿಯನ್ನು ಕೊಲ್ಲುವದಕ್ಕೆ ಸಾಕು. ಆರು ತಟ್ಟೆ ಪಾನಕದಲ್ಲಿರುವ ವಿಷವು ಒಬ್ಬ ಮನುಷ್ಯನಲ್ಲಿ ಮೂರ್ಛೆಯನ್ನುಂಟುಮಾಡುವದಕ್ಕೆ ಸಾಕು. ಅದಕ್ಕೆ ಸ್ವಲ್ಪ ಕಡಿಮೆಯಾಗಿ ಸೇವಿಸಿದರೆ, ನರಗಳು ಕೆದರಿ, ನಿದ್ರೆಯಿಲ್ಲದಿರುವಿಕೆ, ಹರಟುತ್ತಿರುವದು, ಇತ್ಯಾದಿ ದೋಷಗಳು ಕಾಣುವವು ಕಾಫಿಯಲ್ಲಿ 'ಥೇಯಿನ್' ಎಂಬದಕ್ಕೆ ತುಲ್ಯಗುಣವಿರುವ 'ಕಾಫೀಯಿನ್' ಎಂಬ ವಿಷವಿರುತ್ತದೆ ಈ ವಿಷ ಶತಾಂಶ ಪ್ರಮಾಣದಲ್ಲಿ ಥೇಯಿನಿನಷ್ಟು ಇಲ್ಲದಿದ್ದಾಗ್ಯೂ. ಪಾನಕಕ್ಕೆ ಚಾ ಎಲೆಗಿಂತಲೂ ಕಾಫಿಪುಡಿಯನ್ನು ಹೆಚ್ಚಾಗಿ ಉಪಯೋಗಿಸುತ್ತಾರಾದ್ದರಿಂದ, ಸಾಧಾರಣವಾಗಿ ಒಂದು ತಟ್ಟೆ ಪಾನಕದಲ್ಲಿರುವ ವಿಷವು, ಯಾವದಾದರೂ, ಸಮತೂಕವಾಗಿರುವದು. ಇದಲ್ಲದೆ, ಕಾಫಿಬೀಜದಲ್ಲಿಯೂ, ಚಾ ಎಲೆಯಲ್ಲಿಯೂ, 'ಟ್ಯೇನಿನ್' ಎಂಬ ವಸ್ತುವು ಇರುತ್ತದೆ; ಅದು ಆಮಾಶಯದಲ್ಲಿ ಜೀರ್ಣಕ್ಕೆ ಬೇಕಾದ ಹುಳಿರಸವು ಸಾಕಷ್ಟು ಹೊರಡದಂತೆಯೂ, ಹೊರಟ ರಸವು ಬಲಹೀನವಾಗುವಂತೆಯೂ ಮಾಡುವ ಗುಣವುಳ್ಳದ್ದಾಗಿರುತ್ತದೆ ಒಟ್ಟಾರೆ ಈ ಎರಡು ಜಾತಿಯ ಪಾನಕಗಳಿಂದಲೂ ಜೀರ್ಣಶಕ್ತಿಗೂ, ನರಗಳಿಗೂ, ಮೆದುಳಿಗೂ, ಬಹಳ ಬಾಧಕವಿರುತ್ತದೆ; ಮತ್ತು ಆ ಪಾನಕಗಳಿಗೆ ಕೂಡಿಸುವ ಹಾಲು, ಸಕ್ಕರೆ, ಅಥವಾ ಬೆಲ್ಲ ಅಲ್ಲದೆ ಬೇರೆ ಆಹಾರ ಭೂತವಾದದ್ದು ಯಾವದೂ ಅವುಗಳಲ್ಲಿರುವದಿಲ್ಲ 'ಕೋಕೋ' ಎಂಬದರಲ್ಲಿಯೂ 'ಥಿಯೊಬ್ರೊಮೈನ್' ಎಂಬ ಥೇಯಿನಿಗೂ, ಕಾಫೇಯಿನಿಗೂ ಸದೃಶವಾದ ವಿಷವಿರುತ್ತದೆ. ಆದರೆ ಅದರೊಂದಿಗೆ ಸ್ನಿಗ್ಧಪದಾರ್ಥವಿರುವದರಿಂದ, ಅದು ಸ್ವಲ್ಪಮಟ್ಟಿಗೆ ಆಹಾರವಾಗಿ ಪರಿಣಮಿಸುವದೆಂತಲೂ, ಕಾಫಿ ಮತ್ತು ಚಾಯೆಲೆಯಷ್ಟು ಬಾಧಕಕರವಲ್ಲವೆಂತಲೂ ಕೆಲವರ ಮತವಿದೆ

ಈ ಹೊಸ ಪಾನೀಯಗಳಿಗೆ ಮರುಳಾಗಿ, ದ್ರವ್ಯವನ್ನೂ ಆರೋಗ್ಯವನ್ನೂ ಕಳಕೊಳ್ಳದಂತೆ, ಜೀರಿಗೆಯನ್ನಾಗಲಿ, ಕೊತ್ತುಂಬರಿಯನ್ನಾಗಲಿ ಹುರಿದು, ಕಾಫಿಯಂತೆ ಪಾನಕವನ್ನು ತಯಾರಿಸಿ ಸೇವಿಸುವ ಅಭ್ಯಾಸಮಾಡುವದು ಒಳ್ಳೇದೆಂತ ಕಾಣುತ್ತದೆ. ಕೊತ್ತುಂಬರಿ ಅಥವಾ ಜೀರಿಗೆಯು ಪಿತ್ತವನ್ನು ಬಲ ಪಡಿಸಿ, ಜೀರ್ಣದ ಕೆಲಸವನ್ನು ಪೂರೈಸಿ, ವಾಯುವನ್ನು ಸಡಿಲಿಸಿ, ಆರೋಗ್ಯವನ್ನು ಕೊಡುವದು. ಕಫದೋಷವುಳ್ಳವರು ಶುಂಠಿಯನ್ನಾಗಲಿ, ಲವಂಗಪಟ್ಟೆಯನ್ನಾಗಲಿ, ಲವಂಗವನ್ನಾಗಲಿ, ಅಲ್ಪವಾಗಿ ಕೂಡಿಸಿಕೊಳ್ಳಬಹುದು.

XIII ನೇ ಅಧ್ಯಾಯ.

ಘೃತ ತೈಲಾದಿ ಸ್ನೇಹಗಳು.

1. ಘೃತಂ ತು ಸೌಮ್ಯಂ ಶೀತವೀರ್ಯಂ ಮೃದು ಮಧುರಮಲ್ಪಾಭಿಷ್ಯಂದಿ
ಸ್ನೇಹನಮುದಾವರ್ತೋನ್ಮಾದಾಪಸ್ಮಾರಶೂಲಜ್ವರಾನಾಹವಾತಪಿತ್ತಪ್ರ
ಶಮನಮಗ್ನಿದೀಪನಂ ಸ್ಮೃತಿ-ಮತಿ-ಮೇಧಾ-ಕಾಂತಿ-ಸ್ವರ-ಲಾವಣ್ಯ-
ಸೌಕುಮಾರ್ಯೌಜಸ್ತೇಜೋ-ಒಲಕರಮಾಯುಷ್ಯಂ ವೃಷ್ಯಂ ಮೇ
ಧ್ಯಂ ವಯಃಸ್ಥಾಪನಂ ಗುರು ಚಕ್ಷುಷ್ಯಂ ಶ್ಲೇಷ್ಮಾಭಿವರ್ಧನಂ ಪಾಪ್ಮಾ
ಲಕ್ಷ್ಮೀಪ್ರಶಮನಂ ವಿಷಹರಂ ರಕ್ತೋಪಘ್ನಂ ಚ । (ಸು 179-80.)

ದನದ ತುಪ್ಪದ ಗುಣ

ತುಪ್ಪವು ಸೋಮಗುಣವುಳ್ಳದ್ದು, ಶೀತವೀರ್ಯವುಳ್ಳದ್ದು, ಮೃದು, ಮಧುರ, ಅಲ್ಪಾಭಿಷ್ಯಂದಿ ಗುಣವುಳ್ಳದ್ದು, ಸ್ನಿಗ್ಧವಾದದ್ದು, ಉದಾವರ್ತ-ಉನ್ಮಾದ-ಅಪಸ್ಮಾರ-ಶೂಲೆ-(ಹಳೇ) ಜ್ವರ-ಆನಾಹ-ವಾತ-ಪಿತ್ತಶಮನಕರ, ಅಗ್ನಿದೀಪನಕಾರಿ, ನೆನಪು-ಬುದ್ಧಿ-ಜ್ಞಾನ-ಕಾಂತಿ-ಸ್ವರ-ಲಾವಣ್ಯ-ಎಳೆತನ-ಪರಾಕ್ರಮ- ಓಜೋಗುಣ-ಬಲ ಇವುಗಳನ್ನು ಕೊಡತಕ್ಕಂಥಾದ್ದು, ಆಯುರ್ವೃದ್ಧಿಮಾಡತಕ್ಕಂಥಾದ್ದು, ಶುಕ್ರವೃದ್ಧಿಕರ, ಪವಿತ್ರವಾದದ್ದು, ಪ್ರಾಯಶ್ಚಿತಿಯನ್ನು ಕಾಪಾಡತಕ್ಕಂಥಾದ್ದು, ಗುರು, ಕಣ್ಣುಗಳಿಗೆ ಗುಣಕರ, ಕಫವೃದ್ಧಿಕರ, ದುಷ್ಟತನವನ್ನೂ, ಕಲಿಯನ್ನೂ ಶಮನ ಮಾಡತಕ್ಕಂಥಾದ್ದು, ವಿಷಹರ ಮತ್ತು ರಕ್ತೋಪಬಾಧೆಯನ್ನು ನಾಶಮಾಡತಕ್ಕಂಥಾದ್ದು ಆಗಿರುತ್ತದೆ

2. ಮಾಹಿಷಂ ತು ಘೃತಂ ಸ್ವಾದು ಪಿತ್ತರಕ್ತಾನಿಲಾಪಹಂ ।
ಶೀತಲಂ ಶ್ಲೇಷ್ಮಲಂ ವೃಷ್ಯಂ ಗುರು ಸ್ವಾದು ವಿಪಚ್ಯತೇ ॥
(ಭಾ. ಪ್ರ. 180.)

ಎಮ್ಮೆತುಪ್ಪದ ಗುಣ

ಎಮ್ಮೆತುಪ್ಪವು ಸ್ವಾದು, ಪಿತ್ತರಕ್ತವಾತಗಳನ್ನು ಪರಿಹರಿಸತಕ್ಕಂಥಾದ್ದು, ಶೀತಲ, ಕಫಕರ, ವೃಷ್ಯ, ಗುರು ಮತ್ತು ಸ್ವಾದುಪಾಕವುಳ್ಳದ್ದು ಆಗಿರುತ್ತದೆ.

3. ಅಜಮಾಜ್ಯಂ ಕರೋತ್ಯಗ್ನಿಂ ಚಕ್ಷುಷ್ಯಂ ಬಲವರ್ಧನಂ ।
ಕಾಸೇ ಶ್ವಾಸೇ ಕ್ಷಯೇ ಚಾಪಿ ಹಿತಂ ಪಾಕೇ ಭವೇತ್ಕಟು ॥
(ಭಾ. ಪ್ರ. 180.)

ಆಡಿನ ತುಪ್ಪದ ಗುಣ

ಆಡಿನ ತುಪ್ಪವು ಅಗ್ನಿಕಾರಿ, ಕಣ್ಣುಗಳಿಗೆ ಹಿತ, ಬಲವೃದ್ಧಿಕರ, ಕಟುಪಾಕವುಳ್ಳದ್ದು ಮತ್ತು ಕೆಮ್ಮು-ಉಬ್ಬಸ-ಕ್ಷಯಗಳಲ್ಲಿ ಸಹ ಹಿತವಾದದ್ದು ಆಗಿರುತ್ತದೆ.

4. ವರ್ಷಾದೂರ್ಧ್ವಂ ಭವೇದಾಜ್ಯಂ ಪುರಾಣಂ ತತ್ತ್ರಿದೋಷನುತ್ ।
ಮೂರ್ಚ್ಛಾ-ಕುಷ್ಠ-ವಿಷೋನ್ಮಾದಾಪಸ್ಮಾರ-ತಿಮಿರಾಪಹಂ ॥
ಯಥಾ ಯಥಾಽಖಿಲಂ ಸರ್ಪಿಃ ಪುರಾಣಮಧಿಕಂ ಭವೇತ್ ।

ಹಳೇ ತುಪ್ಪದ ಗುಣ

ತಥಾ ತಥಾ ಗುಣೈಃ ಸ್ವೈಃ ಸ್ವೈರಧಿಕಂ ತದುದಾಹೃತಂ ||
(ಭಾ. ಪ್ರ 181.)

ಒಂದು ವರ್ಷಕ್ಕೆ ಮೇಲಿನ ತುಪ್ಪವು ಹಳೇದು, ಅದು ತ್ರಿದೋಷಹರ; ಮತ್ತು ಮೂರ್ಛೆ-ಕುಷ್ಠ-ವಿಷ-ಉನ್ಮಾದ-ಅಪಸ್ಮಾರ-ತಿಮಿರಗಳನ್ನು ಪರಿಹರಿಸತಕ್ಕಂಥಾದ್ದು. ತುಪ್ಪವು, ಯಾವ ಜಾತಿದಾದರೂ, ಹಳೇದಾದ ಹಾಗೆ, ಅದರಲ್ಲಿ ಅದರದರ ಗುಣಗಳು ಅಧಿಕವಾಗುವವು ಎಂತ ಹೇಳಲ್ಪಟ್ಟದೆ.

5. ಯೋಜಯೇನ್ನವಮೇವಾಜ್ಯಂ ಭೋಜನೇ ತರ್ಪಣೇ ಶ್ರಮೇ |
ಹೊಸ ತುಪ್ಪದ ಉಪಯೋಗ ಬಲಕ್ಷಯೇ ಪಾಂಡುರೋಗೇ ಕಾಮಲಾನೇತ್ರರೋಗಯೋಃ ||
(ಭಾ. ಪ್ರ 181.)

ಭೋಜನದಲ್ಲಿ, ತರ್ಪಣವಿಧಿಯಲ್ಲಿ, ಶ್ರಮದಲ್ಲಿ, ಬಲಕ್ಷಯದಲ್ಲಿ, ಪಾಂಡುರೋಗದಲ್ಲಿ, ಕಾಮಿಲೆಯಲ್ಲಿ ಮತ್ತು ನೇತ್ರರೋಗದಲ್ಲಿ ಹೊಸತಾದ ತುಪ್ಪವನ್ನೇ ಉಪಯೋಗಿಸತಕ್ಕದ್ದು.

6. ರಾಜಯಕ್ಷ್ಮಣಿ ಬಾಲೇ ಚ ವೃದ್ಧೇ ಶ್ಲೇಷ್ಮಕೃತೇ ಗದೇ |
ರೋಗೇ ಸಾಮೇ ವಿಷೂಚ್ಯಾಂ ಚ ವಿಬಂಧೇ ಚ ಮದಾತ್ಯಯೇ ||
ತುಪ್ಪ ಪ್ರಶಸ್ತ ವಲ್ಲದವರು ಜ್ವರೇ ಚ ದಹನೇ ಮಂದೇ ನ ಸರ್ಪಿರ್ಬಹು ಮನ್ಯತೇ |
(ಭಾ. ಪ್ರ. 181.)

ರಾಜಯಕ್ಷ್ಮ, ಕಫದಿಂದುಂಟಾದ ರೋಗ, ಆಮವುಳ್ಳ ರೋಗ, ವಿಷೂಚಿಕಾ, ಹೊಟ್ಟೆ ಬಿಗಿಯೋಣ, ಮದಾತ್ಯಯ (ಹಳೇದಲ್ಲದ) ಜ್ವರ ಮತ್ತು ಅಗ್ನಿಮಾಂದ್ಯ, ಈ ರೋಗಗಳಲ್ಲಿಯೂ, ಬಾಲರ ಮತ್ತು ವೃದ್ಧರ ವಿಷಯದಲ್ಲಿಯೂ, ಹೆಚ್ಚು ತುಪ್ಪ ಪ್ರಶಸ್ತವಾಗಿರುವದಿಲ್ಲ.

ಬಾಲೇ ವೃದ್ಧೇ ಕ್ಷಯೇ ಚಾಮೇ ಕಫರೋಗೇ ಮದಾತ್ಯಯೇ |
ಬದ್ಧವಿಟ್ಕೇ ಜ್ವರೇ ಚೈವಾಲ್ಪಾಲ್ಪಂ ಚೈವ ಪ್ರದೀಯತೇ ||
(ನಿ. ರತ್ನಾಕರ.)

ಬಾಲವೃದ್ಧರ ಸಂಗತಿಯಲ್ಲಿಯೂ, ಕ್ಷಯ-ಆಮರೋಗ-ಕಫರೋಗ-ಮದಾತ್ಯಯ-ಮಲಬದ್ಧತೆ ಮತ್ತು ಜ್ವರ, ಈ ರೋಗಗಳಲ್ಲಿಯೂ ತುಪ್ಪವನ್ನು ಅಲ್ಪಾಲ್ಪವಾಗಿ ಕೊಡುತ್ತಾರೆ.

7. ನವನೀತಂ ಪುನಃ ಸದ್ಯಸ್ಕಂ ಲಘು ಸುಕುಮಾರಂ ಮಧುರಂ ಕಷಾಯ
ವಿಷದಮ್ಲಂ ಶೀತಲಂ ಮೇಧ್ಯಂ ದೀಪನಂ ಹೃದ್ಯಂ ಸಂಗ್ರಾಹಿ ಪಿತ್ತಾ
ನಿಲಹರಂ ವೃಷ್ಯಮವಿದಾಹಿ ಕ್ಷಯ-ಕಾಸ-ಶ್ವಾಸ-ವ್ರಣಾರ್ಶೋಽರ್ದಿತಾಪ
ಬೆಣ್ಣೆಯ ಗುಣ ಹಂ* ಗುರು ಕಫಮೇದೋವಿವರ್ಧನಂ ಬಲಕರಂ ಬೃಂಹಣಂ ಶೋಷ
ಘ್ನಂ ವಿಶೇಷತೋ ಬಾಲಾನಾಂ ಪ್ರಶಸ್ಯತೇ | ಕ್ಷೀರೋತ್ಥಂ ಪುನರ್ನವ
ನೀತಮುತ್ಕೃಷ್ಟಸ್ನೇಹಂ ಮಾಧುರ್ಯಯುಕ್ತಮತಿಶೀತಂ ಸೌಕುಮಾ

ರ್ಯಕರಂ ಚಕ್ಷುಷ್ಯಂ ಸಂಗ್ರಾಹಿ ರಕ್ತಪಿತ್ತನೇತ್ರರೋಗಹರಂ ಪ್ರಸಾದನಂ ಚ । (ಸು. 179.)

ಹೊಸತಾದ ಬೆಣ್ಣೆಯು ಲಘು, ಎಳೇತನವನ್ನುಂಟುಮಾಡತಕ್ಕಂಥಾದ್ದು, ಸೀ, ಜೊಗರು, ಮತ್ತು ಅಲ್ಪವಾಗಿ ಹುಳಿರುಚಿಯುಳ್ಳದ್ದು, ಶೀತಕರ, ಅಗ್ನಿದೀಪನಕಾರಿ, ಪವಿತ್ರವಾದದ್ದು, ಮನೋಹರವಾದದ್ದು, ಸಂಗ್ರಾಹಿ, ಪಿತ್ತವಾಯುಹರ, ವೃಷ್ಯ, ಉರಿಗುಣವಿಲ್ಲದ್ದು, ಕ್ಷಯ, ಕೆಮ್ಮು, ಉಬ್ಬಸ, ವ್ರಣ, ಅರ್ಶಸ್ಸು, ಅರ್ದಿತ, ಈ ವ್ಯಾಧಿಗಳನ್ನು ಪರಿಹರಿಸತಕ್ಕಂಥಾದ್ದು ಆಗಿರುತ್ತದೆ. ಹಳೇ ಬೆಣ್ಣೆಯು ಗುರು, ಕಫವನ್ನೂ ಮೇದಸ್ಸನ್ನೂ ವೃದ್ಧಿಮಾಡತಕ್ಕಂಥಾದ್ದು, ಬಲಕರ, ಪುಷ್ಟಿಕರ, ಶೋಷನಾಶನಕರ, ವಿಶೇಷವಾಗಿ ಬಾಲಕರಿಗೆ ಪ್ರಶಸ್ತವಾದದ್ದು. ಹಾಲಿನಿಂದ ತೆಗೆದ ಬೆಣ್ಣೆಯು ಉತ್ಕೃಷ್ಟವಾಗಿ ಸ್ನೇಹಗುಣವುಳ್ಳದ್ದು, ಸೀಯುಕ್ತವಾದದ್ದು, ಅತಿ ಶೀತ, ಸೌಕುಮಾರ್ಯವನ್ನುಂಟುಮಾಡತಕ್ಕಂಥಾದ್ದು, ಕಣ್ಣಿಗೆ ಹಿತವಾದದ್ದು, ಸಂಗ್ರಾಹಿ, ರಕ್ತಪಿತ್ತ ಮತ್ತು ನೇತ್ರರೋಗಗಳನ್ನು ಪರಿಹರಿಸತಕ್ಕಂಥಾದ್ದು ಮತ್ತು ಪ್ರಸನ್ನತೆಯನ್ನು ಕೊಡತಕ್ಕದ್ದು.

ಪಪಾ *ಪಾಠಾಂತರದಲ್ಲಿ ಗುರು' ಪದಕ್ಕೆ ಹಿಂದೆ 'ಚಿರೋತ್ಪಿತಂ' ಎಂಬ ಪದ ಕಾಣುತ್ತದೆ ಅದೇ ಸರಿಯಾದದ್ದು

8. ಸಂತಾನಿಕಾ ಪುನರ್ವಾತಘ್ನೀ ತರ್ಪಣೀ ಬಲ್ಯಾ ವೃಷ್ಯಾ ಸ್ನಿಗ್ಧಾ ರುಚ್ಯಾ ಮಧುರಾ ಮಧುರವಿಪಾಕಾ ರಕ್ತಪಿತ್ತಪ್ರಸಾದನೀ ಗುರ್ವೀ ಚ । (ಸು. 179)

ಹಾಲಿನ ಕೆನೆಯ ಗುಣ

ಹಾಲ ಕೆನೆಯು ವಾತನಾಶನಕಾರಿ, ತೃಪ್ತಿಕಾರಿ, ಬಲಕಾರಿ, ವೃಷ್ಯ, ಸ್ನಿಗ್ಧ, ರುಚಿಕರ, ಸೀ, ವಿಪಾಕದಲ್ಲಿಯೂ ಸೀ, ಗುರು ಮತ್ತು ರಕ್ತಪಿತ್ತವನ್ನು ಶಮನಮಾಡತಕ್ಕಂಥಾದ್ದು.

9. ತೈಲಂ ತ್ವಾಗ್ನೇಯಮುಷ್ಣಂ ತೀಕ್ಷ್ಣಂ ಮಧುರಂ ಮಧುರವಿಪಾಕಂ ಬೃಂಹಣಂ ಪ್ರೀಣನಂ ವ್ಯವಾಯಿ ಸೂಕ್ಷ್ಮಂ ವಿಶದಂ ಗುರು ಸರಂ ವಿಕಾಸಿ ವೃಷ್ಯಂ ತ್ವಕ್ಪ್ರಸಾದನಂ ಮೇಧಾಮಾರ್ದವಮಾಂಸಸ್ಥೈರ್ಯವರ್ಣಬಲಕರಂ ಚಕ್ಷುಷ್ಯಂ ಬದ್ಧಮೂತ್ರಂ ಲೇಖನಂ ತಿಕ್ತಕಷಾಯಾನುರಸಂ ಪಾಚನಮನಿಲಬಲಾಸಕ್ಷಯಕರಂ ಕ್ರಿಮಿಘ್ನಮಶೀತಪಿತ್ತಜನನಂ ಯೋನಿಶಿರಃಕರ್ಣಶೂಲಪ್ರಶಮನಂ ಗರ್ಭಾಶಯಶೋಧನಂ ಚ ತಥಾ ಛಿನ್ನ-ಭಿನ್ನ-ವಿದ್ಧೋತ್ಪಿಷ್ಟ-ಚ್ಯುತ-ಮಥಿತ-ಕ್ಷತ-ಪಿಚ್ಚಿತ-ಭಗ್ನ-ಸ್ಫುಟಿತ-ಕ್ಷಾರಾಗ್ನಿದಗ್ಧ-ವಿಶ್ಲಿಷ್ಟ-ದಾರಿತಾಭಿಹತ-ದುರ್ಭಗ್ನ-ಮೃಗವ್ಯಾಲವಿದಷ್ಟ-ಪ್ರಭೃತಿಷು ಚ ಪರಿಷೇಕಾಭ್ಯಂಗಾವಗಾಹೇಷು ತಿಲತೈಲಂ ಪ್ರಶಸ್ಯತೇ । (ಸು. 181.)

ಎಳ್ಳೆಣ್ಣೆಯ ಗುಣ

ಎಳ್ಳೆಣ್ಣೆಯು ಆಗ್ನೇಯಗುಣವುಳ್ಳದ್ದು, ಉಷ್ಣ, ತೀಕ್ಷ್ಣ, ಸೀ, ವಾಕದಲ್ಲಿಯೂ ಸೀ, ಧಾತುಪುಷ್ಟಿಕರ, ತೃಪ್ತಿಕರ, ವ್ಯವಾಯಿ, ಸೂಕ್ಷ್ಮ, ವಿಶದ, ಗುರು, ಸರ, ವಿಕಾಸಿ, ವೃಷ್ಯ, ಚರ್ಮಪ್ರಸನ್ನತೆಯನ್ನುಂಟುಮಾಡತಕ್ಕಂಥಾದ್ದು, ಜ್ಞಾನಶಕ್ತಿ, ಮೃದುತ್ವ, ಮಾಂಸ, ಸ್ಥಿರತ್ವ, ವರ್ಣ, ಬಲ, ಇವುಗಳನ್ನು ಕೊಡತಕ್ಕಂಥಾದ್ದು, ಕಣ್ಣಿಗೆ ಹಿತವಾದದ್ದು, ಮೂತ್ರಬದ್ಧಮಾಡತಕ್ಕ

ಸ್ವಭಾವದ್ದು, ಲೇಖನ, ಕಹಿ ಮತ್ತು ಚೊಗರು ಅನುರಸಗಳಾಗಿ ಉಳ್ಳದ್ದು, ಪಾಚನ, ವಾತ ಕಫವನ್ನು ಕಡಿಮೆಮಾಡತಕ್ಕಂಥಾದ್ದು, ಕ್ರಿಮಿನಾಶಕರ, ಶೀತಪಿತ್ತವನ್ನು ಹುಟ್ಟಿಸದಂಥಾದ್ದು, ಯೋನಿಯ, ಶಿರಸ್ಸಿನ ಮತ್ತು ಕಿವಿಯ ಶೂಲೆ ಶಾಂತಿಮಾಡತಕ್ಕಂಥಾದ್ದು ಮತ್ತು ಗರ್ಭ ಕೋಶವನ್ನು ಶೋಧಿಸತಕ್ಕಂಥಾದ್ದು ಆಗಿರುತ್ತದೆ ಹಾಗೆಯೇ, ಕಡಿದ, ಹೊಡೆದ, ಜುಚ್ಚಿದ, (ಚೂರಾದ ಅಥವಾ) ಜಜ್ಜಿದ, ಬಾರಿದ, ಕುಲುಗಿಸಿದ, ಗಾಯವಾದ, ಭಾಗವಾದ, (ಒಡೆದ ಅಥವಾ) ಹರಿದ ಅರಳಿದ (ಗುಳ್ಳೆಯಂತೆ), ಕ್ಷಾರದಿಂದ ಅಥವಾ ಅಗ್ನಿಯಿಂದ ಸುಟ್ಟ, ಅಗಲಿದ, ಸೀಳಿದ, ಬಡಿದ, ಅತಿಯಾಗಿ ಹರಿದ ಅಥವಾ ಒಡೆದ, ಮೃಗಗಳು ಇಲ್ಲವೆ ಹಾವುಗಳು ಕಡಿದ, ಇವೇ ಮೊದಲಾದ ಸಂಗತಿಗಳಲ್ಲಿಯೂ, ಪರಿಷೇಕ ಅಭ್ಯಂಗ, ಅವಗಾಹಗಳಲ್ಲಿಯೂ, ತಿಲ ತೈಲವು ಪ್ರಶಸ್ತವಾಗಿರುತ್ತದೆ

ತದ್ವಸ್ತಿಷು ಚ ಪಾನೇ ಚ ನಸ್ಯೇ ಕರ್ಣಾಕ್ಷಿಪೂರಣೇ |
ಅನ್ನಪಾನವಿಧೌ ಚಾಪಿ ಪ್ರಯೋಜ್ಯಂ ವಾತಶಾಂತಯೇ | (ಸು. 181.)

ಆ ಎಳ್ಳೆಣ್ಣೆಯು ವಸ್ತಿಗಳಲ್ಲಿಯೂ, ಪಾನಕ್ಕೂ, ನಸ್ಯಕ್ಕೂ, ಕಿವಿ ಕಣ್ಣುಗಳಲ್ಲಿ ತುಂಬಿಸುವದಕ್ಕೂ, ಅನ್ನಪಾನಗಳ ವಿಧಿಯಲ್ಲಿಯೂ, ವಾತಶಾಂತಿಗೋಸ್ಕರ ಉಪಯೋಗಿಸುವದಕ್ಕೆ ತಕ್ಕಂಥಾದ್ದಾಗಿರುತ್ತದೆ.

10 ಕುಸುಬಿಯೆಣ್ಣೆಯಲ್ಲಿ ದೋಷ

ವಿಪಾಕೇ ಕಟುಕಂ ತೈಲಂ ಕೌಸುಂಭಂ ಸರ್ವದೋಷಕೃತ್ |
ರಕ್ತಪಿತ್ತಕರಂ ತೀಕ್ಷ್ಣಮಚಕ್ಷುಷ್ಯಂ ವಿದಾಹಿ ಚ || (ಸು. 182.)

ಕುಸುಬಿಯೆಣ್ಣೆಯು ಕಟುವಾಕವುಳ್ಳದ್ದು, ತೀಕ್ಷ್ಣ, ವಿದಾಹಿ, ಕಣ್ಣಿಗೆ ಅಹಿತ, ಸರ್ವ ದೋಷಗಳನ್ನೂ ಕೆದರಿಸತಕ್ಕಂಥಾದ್ದು ಮತ್ತು ರಕ್ತಪಿತ್ತವನ್ನುಂಟುಮಾಡತಕ್ಕಂಥಾದ್ದು

11. ತೆಂಗಿನೆಣ್ಣೆಯ ಗುಣ

* * * ನಾರಿಕೇರ * * * ಕೂಷ್ಮಾಂಡಪ್ರಭೃತೀನಾಂ ತೈಲಾನಿ
ಮಧುರಾಣಿ ಮಧುರವೀರ್ಯವಿಪಾಕಾನಿ ವಾತಪಿತ್ತಪ್ರಶಮನಾನಿ ಶೀತ
ವೀರ್ಯಾಣ್ಯಭಿಷ್ಯಂದೀನಿ ಸೃಷ್ಟವಿಣ್ಮೂತ್ರಾಣ್ಯಗ್ನಿಸಾದನಾನಿ ಚೇತಿ |
(ಸು. 182)

* * * ತೆಂಗು, * * * ಬೂದಿ ಕುಂಬಳಕಾಯಿಗಳು ಮೊದಲಾದವುಗಳ ಎಣ್ಣೆಗಳು ರಸದಲ್ಲಿಯೂ ವೀರ್ಯದಲ್ಲಿಯೂ ವಿಪಾಕದಲ್ಲಿಯೂ ಸೀಯಾಗಿ, ವಾತಪಿತ್ತಗಳನ್ನು ಶಮನಮಾಡತಕ್ಕಂಥವು, ಶೀತವೀರ್ಯವುಳ್ಳವು, ಅಭಿಷ್ಯಂದಿಗುಣವುಳ್ಳವು, ಮಲಮೂತ್ರಗಳ ವಿಸರ್ಜನೆ ಮಾಡಿಸತಕ್ಕವು ಮತ್ತು ಅಗ್ನಿಯನ್ನು ಕೆಡಿಸತಕ್ಕಂಥವು ಆಗಿರುತ್ತವೆ

12. ಬೊಬ್ರಿ ತುಪ್ಪದ ತಯಾರಿಸುವಿಕೆ ಮತ್ತು ಗುಣ

ರಸಂ ತು ಮೃತ್ತಿಕಾಭಾಂಡೇ ನಾರಿಕೇಲಭವಂ ಕ್ಷಿಪೇತ್ |
ಮುಖಂ ಪಿಧಾಯ ವಸ್ತ್ರೇಣ ರಾತ್ರೌ ಸ್ಥಾಪ್ಯಂ ಗೃಹಾದ್ಬಹಿಃ ||
ಪ್ರಾತಃಕಾಲೇ ತು ನಿರ್ಮಥ್ಯ ನವನೀತಂ ತು ಕಾರಯೇತ್ |
ತತ್ಪಕ್ತ್ವಾ ತದ್ಘೃತಂ ನಾಮ ಬೃಂಹಣಂ ಬಲವರ್ಧನಂ ||

ಕೇಶ್ಯಂ ರಸೇ ಚ ಪಾಕೇ ಚ ಮಧುರಂ ಚ ರುಚಿಪ್ರದಂ ।
ಹೃದ್ಯಂ ಚ ವಾತಪಿತ್ತಘ್ನಂ ತಜ್ಜೀರ್ಣಂ ಗುರು ವಾತಹಂ ॥ (ನಿ. ರ.)

ತೆಂಗಿನಕಾಯಿಯ ಹಾಲನ್ನು ಮಣ್ಣಿನ ಗಡಿಗೆಯಲ್ಲಿ ಹಾಕಿ, ವಸ್ತ್ರದಿಂದ ಬಾಯಿಕಟ್ಟಿ, ರಾತ್ರಿಯಲ್ಲಿ ಮನೆಯ ಹೊರಗೆ ಇರಿಸಿ, ಪ್ರಾತಃಕಾಲದಲ್ಲಿ ಅದನ್ನು ಕಡೆದು, ಬೆಣ್ಣೆಯನ್ನು ತೆಗೆಯಬೇಕು. ಆ ಬೆಣ್ಣೆಯನ್ನು ಕಾಯಿಸಿ ಬಂದ ಖೊಬ್ಬರಿತುಪ್ಪವು ಬೃಂಹಣ, ಬಲವೃದ್ಧಿಕಾರಿ, ಕೇಶಕ್ಕೆ ಒಳ್ಳೇದಾದದ್ದು, ರಸದಲ್ಲಿಯೂ, ಪಾಕದಲ್ಲಿಯೂ ಸೀ, ರುಚಿಕರ, ಮನೋಹರವಾದದ್ದು ಮತ್ತು ವಾತಪಿತ್ತನಾಶಕರ. ಅದು ಹಳೇದಾದರೆ ಗುರು ಮತ್ತು ವಾತಹರ.

13. ಫಲೋದ್ಭವಾನಿ ತೈಲಾನಿ ಯಾನ್ಯನುಕ್ತಾನಿ* ಕಾನಿಚಿತ್ ।
ಗುಣಾನಾ ಕರ್ಮ ಚ ಎಜ್ಞಾಯ ಫಲವತ್ತಾನಿ ನಿರ್ದಿಶೇತ್ ॥

ಇತರ ತೈಲಗಳ ಗುಣಗಳು

ಯಾವಂತಃ ಸ್ಥಾವರಾಃ ಸ್ನೇಹಾಃ ಸಮಾಸಾತ್ಪರಿಕೀರ್ತಿತಾಃ ।
ಸರ್ವೇ ತೈಲಗುಣಾ ಜ್ಞೇಯಾಃ ಸರ್ವೇ ಚಾನಿಲನಾಶನಾಃ ॥
ಸರ್ವೇಭ್ಯಸ್ತ್ವಿಹ ತೈಲೇಭ್ಯಸ್ತಿಲತೈಲಂ ಪ್ರಶಸ್ಯತೇ ।
ನಿಷ್ಪತ್ತೇಸ್ತದ್ಗುಣತ್ವಾಚ್ಚ ತೈಲತ್ವಮಿತರೇಷ್ವಪಿ ॥ (ಸು. 183.)

ಫಲದಿಂದ ತೆಗೆದ ತೈಲಗಳು ಪ್ರತ್ಯೇಕವಾಗಿ ಹೇಳಲ್ಪಡದ ಯಾವವಾದರೂ, ಆಯಾ ಫಲದ ಗುಣಕರ್ಮಗಳನ್ನು ತಿಳಿದು ಆಯಾ ತೈಲದ ಗುಣಕರ್ಮಗಳನ್ನು ನಿಶ್ಚಯಿಸತಕ್ಕದ್ದು ಒಟ್ಟಾರ, ಸ್ಥಾವರಸ್ನೇಹಗಳೆಲ್ಲಾ ಎಳ್ಳೆಣ್ಣೆಯಂತೆಯೇ ಗುಣವುಳ್ಳವೆಂತಲೂ, ವಾಯುವನ್ನು ಪರಿಹಾರಮಾಡತಕ್ಕವು ಎಂತಲೂ ತಿಳಿಯತಕ್ಕದ್ದು ಆದರೆ ಎಲ್ಲಾ ತೈಲಗಳೊಳಗೆ ಎಳ್ಳೆಣ್ಣೆಯೇ ಪ್ರಶಸ್ತ. ಅದರ ಹಾಗಿನ ಉತ್ಪತ್ತಿ ಮತ್ತು ಗುಣವಿರುವದರಿಂದ ಮಿಕ್ಕವುಗಳಿಗೂ ತೈಲ ಎಂಬ ಹೆಸರಾಗಿರುತ್ತದೆ

ಪಠಾ * 'ಯಾನ್ಯುಕ್ತಾನೀಹ' ಎಂತಲೂ, 'ಯಾನೀತ್ಯುಕ್ತಾನಿ' ಎಂತಲೂ ಪಾಠಾಂತರಗಳು ಇದ್ದ ಹಾಗೆ ಕಾಣುತ್ತದೆ, ಅವುಗಳಿಗಿಂತಲೂ ಈ ಪಾಠವೇ ಸರಿ ಕಾಣುತ್ತದೆ

XIV ನೇ ಅಧ್ಯಾಯ.

ಸಾಧಾರಣವಾಗಿ ಉಪಯೋಗಿಸಲ್ಪಡುವ ಆಹಾರವದಾರ್ಥಗಳು.

1. ಸುದುರ್ಜರಃ ಸ್ಯಾದುರಸೋ ಬೃಂಹಣಸ್ತಂಡುಲೋ ನವಃ |
ಅಕ್ಕಿ, ಹೊಸತು ಮತ್ತು ಹಳೇದು ಸಂಧಾನಕೃನ್ಮೇಹಹರಃ ಪುರಾಣಸ್ತಂಡುಲಃ ಸ್ಮೃತಃ ||
(ಸು. 231.)

ಹೊಸ ಅಕ್ಕಿಯು ಸೀರಸವುಳ್ಳದ್ದು ಮತ್ತು ಪುಷ್ಟಿಕರ, ಆದರೆ ಜೀರ್ಣಕ್ಕೆ ಬಹು ಕಷ್ಟವಾದದ್ದು. ಹಳೇ ಅಕ್ಕಿಯು ಸಂಧಾನಕರ ಮತ್ತು ಮೇಹಹರವಾದದ್ದೆಂತ ಹೇಳಲ್ಪಟ್ಟಿದೆ.

2 ಧೌತಸ್ತು ವಿಮಲಃ ಶುದ್ಧೋ ಮನೋಜ್ಞಃ ಸುರಭಿಃ ಸಮಃ |
ಅನ್ನ, ಬಸಿದದ್ದು ಇಂಗಿಸಿದ್ದು ಸ್ವಿನ್ನಃ ಸುಪ್ರಸ್ರುತಸ್ತೂಷ್ಣೋ ವಿಶದಸ್ತ್ವೋದನೋ ಲಘುಃ ||
ಅದೌತೋಽಪ್ರಸ್ರುತೋಽಸ್ವಿನ್ನಃ ಶೀತಶ್ಚಾಪ್ಯೋದನೋ ಗುರುಃ |
(ಸು. 225)

ಅಕ್ಕಿಯನ್ನು ತೊಳೆದು, ಶೋಧಿಸಿ, ನಿರ್ಮಲಮಾಡಿಕೊಂಡು, ಸರಿಯಾಗಿ ಬೇಯಿಸಿ ಚೆನ್ನಾಗಿ ಬಸಿದ ಮತ್ತು ಬಿಸಿಯಾಗಿರುವ ಅನ್ನವು ಪರಿಮಳವಾಗಿಯೂ, ಮನೋಹರವಾಗಿಯೂ, ಅಂಟಿಲ್ಲದೆ (ಉದುರಾಗಿ)ಯೂ, ಲಘುವಾಗಿಯೂ ಇರುತ್ತದೆ. ತೊಳೆಯದೆ ಮತ್ತು ಬಸಿಯದೆ ಮಾಡಿದ, ಪಕ್ವವಾಗದ ಮತ್ತು ತಣ್ಣಗಾದ ಅನ್ನವು ಗುರುವಾಗಿರುತ್ತದೆ.

3 ಹುರಿದ ಅಕ್ಕಿಯ ಅನ್ನ ಲಘುಃ ಸುಗಂಧಿಃ ಕಫಹಾ ವಿಜ್ಞೇಯೋ ಭೃಷ್ಟ ತಂಡುಲಃ | (ಸು. 225.)

ಹುರಿದ ಅಕ್ಕಿಯು (ಅದರ ಅನ್ನ) ಲಘು, ಪರಿಮಳವುಳ್ಳದ್ದು ಮತ್ತು ಕಫಹರ ಎಂದು ತಿಳಿಯತಕ್ಕದ್ದು.

ಭೃಷ್ಟತಂಡುಲಮಿಚ್ಛಂತಿ ಗರಶ್ಲೇಷ್ಮಾಮಯೇಷ್ವಪಿ || (ಚ. 176.)

ವಿಷವಿಕಾರ ಮತ್ತು ಕಫರೋಗಗಳಲ್ಲಿ ಸಹ ಅಕ್ಕಿಯನ್ನು ಹುರಿದೇ ಉಪಯೋಗಿಸುವದಕ್ಕೆ ಇಚ್ಛಿಸುತ್ತಾರೆ.

ಭೃಷ್ಟತಂಡುಲಜಂ ರುಚ್ಯಂ ಸುಗಂಧಿ ಕಫಹೃಲ್ಲಘು |
ವಾತಾಸ್ಥಾಪಿತಮಂದಾಗ್ನಿವಿರಿಕ್ತಾನಾಂ ಪ್ರಶಸ್ಯತೇ ||
(ಭಾ. ಪ್ರ. 272.)

ಹುರಿದ ಅಕ್ಕಿಯ ಅನ್ನವು ಲಘು, ರುಚಿಕರ, ಪರಿಮಳವುಳ್ಳದ್ದು, ಕಫಹರ, ವಾತದವರಿಗೂ, ಆಸ್ಥಾಪನವಸ್ತಿ ಉಪಯೋಗಿಸಿಕೊಂಡವರಿಗೂ, ಅಗ್ನಿಮಂದವಾದವರಿಗೂ, ಭೇದಿ ಮಾಡಿಸಿಕೊಂಡವರಿಗೂ ಪ್ರಶಸ್ತವಾದದ್ದು.

4. ಸಿಕ್ಥೈರ್ವಿರಹಿತೋ ಮಂಡಃ ಪೇಯಾ ಸಿಕ್ಥಸಮನ್ವಿತಾ ।
ನಾಲ್ಕು ಬಗೆಯ ವಾದ ಗಂಜಿ ವಿಲೇಪೀ ಬಹುಸಿಕ್ತಾ ಸ್ಯಾದ್ಯವಾಗೂರ್ವಿರಲದ್ರವಾ ॥
(ಸು. 225)

ಅನ್ನದ ಕಾಳು ಇಲ್ಲದ ಗಂಜಿ (ತಿಳಿ)ಗೆ ಮಂಡವೆಂತಲೂ, ಕಾಳು ಸ್ವಲ್ಪವಾಗಿದ್ದು ನೀರೇ ಹೆಚ್ಚಾಗಿದ್ದ ಗಂಜಿಗೆ ಪೇಯಾ ಎಂತಲೂ, ಕಾಳು ಹೆಚ್ಚಾಗಿದ್ದು ನೀರು ಪ್ರತ್ಯೇಕವಿಲ್ಲದ ಗಂಜಿಗೆ ವಿಲೇಪೀ ಎಂತಲೂ, ನೀರೂ ಕಾಳೂ ಸರಿಯಿದ್ದು ಮುದ್ದೆಯಾಗದ ಗಂಜಿಗೆ ಯವಾಗೂ ಎಂತಲೂ, ಹೇಳುತ್ತಾರೆ.

ಪರಾ ಪೇಯಾ ಎಂದರೂ ಯವಾಗೂ ಎಂದರೂ ಒಂದೇ ಎಂತ ಸಿ ಸಂ ವ್ಯಾ

5 ಮಂಡೋ ಗ್ರಾಹೀ ಲಘುಃ ಶೀತೋ ದೀಪನೋ ಧಾತುಸಾಮ್ಯಕೃತ್ ।
ಮಂಡದ ಗುಣ ಜ್ವರಘ್ನಸ್ತರ್ಪಣೋ ಬಲ್ಯಃ ಪಿತ್ತಶ್ಲೇಷ್ಮಶ್ರಮಾಪಹಃ ॥
(ಭಾ. ಪ್ರ 269)

ಮಂಡ ಎಂಬ ತಿಳೀಗಂಜಿಯು ಗ್ರಾಹಿ, ಲಘು, ಶೀತ, ಅಗ್ನಿದೀಪನಕಾರಿ, ತೃಪ್ತಿಕರ, ಬಲಕರ, ಧಾತುಗಳನ್ನು ಸರಿಪಡಿಸತಕ್ಕಂಥಾದ್ದು. ಪಿತ್ತಕಫಶ್ರಮಗಳನ್ನು ಪರಿಹರಿಸತಕ್ಕಂಥಾದ್ದು ಮತ್ತು ಜ್ವರಹರ

6. ಸಾತಿಲಘ್ವೀ ಗ್ರಾಹಿಣೀ ಚ ಧಾತುಪುಷ್ಟಿವಿಧಾಯಿನೀ ।
ತೃಡ್ಜ್ವರಾನಿಲದೌರ್ಬಲ್ಯಕುಕ್ಷಿರೋಗವಿನಾಶಿನೀ ॥
ಸ್ವೇದಾಗ್ನಿಜನನೀ ಶ್ಲೇಷ್ಮಾ ವಾತವರ್ಚೋನಿಸುಲೋಮಿನೀ ।
ಪೇಯದ ಗುಣ ಶುಂಠೀಸೈಂಧವಸಂಯುಕ್ತಾ ದೀಪನೀ ಪಾಚನೀ ಚ ಸಾ ॥
ಆಮಶೂಲಹರೀ ರುಚ್ಯಾ ಸ್ಯಾದ್ವಿಬಂಧವಿನಾಶಿನೀ ॥
(ಭಾ. ಪ್ರ 269.)

ಪೇಯ ಎಂಬ ಗಂಜಿಯು ಬಹಳ ಲಘು, ಗ್ರಾಹಿ, ಧಾತುಪುಷ್ಟಿಕರ, ಬಾಯಾರಿಕೆ-ಜ್ವರ-ವಾಯು-ದುರ್ಬಲತೆ-ಕುಕ್ಷಿರೋಗ, ಇವುಗಳನ್ನು ನಾಶಮಾಡತಕ್ಕಂಥಾದ್ದು, ಬೆವರನ್ನೂ ಅಗ್ನಿಯನ್ನೂ ಉಂಟುಮಾಡತಕ್ಕಂಥಾದ್ದು, ಮತ್ತು ವಾತದ ಮಲವನ್ನು ಸಡಿಲಿಸತಕ್ಕಂಥಾದ್ದು. ಶುಂಠಿಸೈಂಧವುಪ್ಪುಗಳನ್ನು ಕೂಡಿಸಿಕೊಂಡರೆ, ಅದು ದೀಪನಪಾಚನಗಳನ್ನು ಮಾಡುವದಲ್ಲದೆ ಆಮಶೂಲೆಯನ್ನು ಪರಿಹರಿಸುವದು, ರುಚಿಕರ ಮತ್ತು (ಮಲಮೂತ್ರಗಳ) ಬದ್ಧತೆಯನ್ನು ನಾಶಮಾಡತಕ್ಕಂಥಾದ್ದು

7. ಯವಾಗೂರ್ದೀಪನೀ ಲಘ್ವೀ ತೃಷ್ಣಾಘ್ನೀ ಬಸ್ತಿಶೋಧನೀ ।
ಯವಾಗೂಗುಣ ಶ್ರಮಗ್ಲಾನಿಹರೀ ಪಥ್ಯಾ ಜ್ವರೇ ಜೈವಾತಿಸಾರಕೇ ॥
(ಭಾ. ಪ್ರ. 270.)

ಯವಾಗೂ ಎಂಬ ಗಂಜಿಯು ಲಘು, ಅಗ್ನಿದೀಪನಕಾರಿ, ಬಾಯಾರಿಕೆಯನ್ನು ಪರಿಹರಿಸ

ತಕ್ಕಂಥಾದ್ದು, ವಸ್ತಿಶೋಧನಕರ, ಶ್ರಮವನ್ನೂ ಆಯಾಸವನ್ನೂ ಪರಿಹರಿಸುವಂಥಾದ್ದು ಮತ್ತು ಜ್ವರದವರಿಗೂ ಅತಿಸಾರದವರಿಗೂ ಪಥ್ಯ.

8. ವಿಲೇಪೀ ದೀಪನೀ ಬಲ್ಯಾ ಹೃದ್ಯಾ ಸಂಗ್ರಾಹಿಣೀ ಲಘುಃ ।
ವಿಲೇಪಿಯ ಗುಣ ವ್ರಣಾಕ್ಷಿರೋಗಿಣಾಂ ಪಥ್ಯಾ ತರ್ಪಣೀ ತೃಡ್ಜ್ವರಾಪಹಾ ॥
(ಭಾ. ಪ್ರ. 270)

ವಿಲೇಪೀ ಎಂಬ ಗಂಜಿಯು ಅಗ್ನಿದೀಪನಕಾರಿ, ಬಲಕಾರಿ, ಮನೋಹರವಾದದ್ದು, ಒಳ್ಳೇ ಗ್ರಾಹೀ, ಲಘು, ತೃಪ್ತಿಕರ, ಬಾಯಾರಿಕೆ ಮತ್ತು ಜ್ವರ ಪರಿಹರಿಸತಕ್ಕಂಥಾದ್ದು ಮತ್ತು ವ್ರಣದವರಿಗೂ, ನೇತ್ರರೋಗದವರಿಗೂ ಪಥ್ಯವಾದದ್ದು.

9. ಲಾಜಮಂಡೋ ವಿಶುದ್ಧಾನಾಂ ಪಥ್ಯಃ ಪಾಚನದೀಪನಃ ।
ಅರಳಿನ ಮಂಡದ ಗುಣ ವಾತಾನುಲೋಮನೋ ಹೃದ್ಯಃ ಪಿಪ್ಪಲೀನಾಗರಾಯುತಃ ॥
(ಸು. 225.)

ಹಿಪ್ಪಲಿ ಶುಂಠಿ ಕೂಡಿಸಿದ ಅರಳುಗಂಜಿಯ ನೀರು ಶೋಧನೆಮಾಡಿಸಿಕೊಂಡವರಿಗೆ ಪಥ್ಯವಾದದ್ದು, ದೀಪನಪಾಚನಕಾರಿ, ವಾತವನ್ನು ಸಡಿಲಿಸುವದು ಮತ್ತು ಮನೋಹರವಾದದ್ದು.

10. ಗೊಧೂಮ ಉಕ್ತೋ ಮಧುರೋ ಗುರುಶ್ಚ ಬಲ್ಯಃ ಸ್ಥಿರಃ ಶುಕ್ರರುಚಿಪ್ರದಶ್ಚ ।
ಗೋದಿಯ ಗುಣ ಸ್ನಿಗ್ಧೋಽತಿಶೀತೋಽನಿಲಪಿತ್ತಹಂತಾ ಸಂಧಾನಕೃತ್ ಶ್ಲೇಷ್ಮಕರಃ ಸರಶ್ಚ ॥
(ಸು. 197.)

ಗೋದಿಯು ಸೀ, ಗುರು, ಬಲಕರ, ಸ್ಥಿರತ್ವವನ್ನೂ, ಶುಕ್ರವನ್ನೂ, ರುಚಿಯನ್ನೂ ಕೊಡತಕ್ಕಂಥಾದ್ದು, ಸ್ನಿಗ್ಧ, ಅತಿಶೀತ, ಪಿತ್ತವಾಯುಹರ, ಸಂಧಾನಕರ, ಕಫಕರ, ಸರ.

ಪರಾ ಹಳೇ ಗೋದಿಯಲ್ಲಿ ಕಫಕರ ಗುಣ ಇಲ್ಲ

11. ಯವಃ ಕಷಾಯೋ ಮಧುರೋ ಪಿಮುಶ್ಚ ಕಟುರ್ಪಾಕೇ ಕಫಪಿತ್ತಹಾರೀ ।
ವ್ರಣೇಷು ಪಥ್ಯಸ್ತಿಲವಚ್ಚ ನಿತ್ಯಂ ಪ್ರಬದ್ಧಮೂತ್ರೋ ಬಹುವಾತವರ್ಚಾಃ ॥
ಯವೆ ಗೋದಿಯ ಗುಣ ಸ್ಥೈರ್ಯಾಗ್ನಿಮೇಧಾಸ್ವರವರ್ಣಕೃಚ್ಚ ಸಪಿಚ್ಛಿಲಃ ಸ್ಥೂಲವಿಲೇಖಿನಶ್ಚ ।
ಮೇದೋಮರುತ್ಕೃಡ್ಹರಣೋಽತಿರೂಕ್ಷಃ ಪ್ರಸಾದನಃ ಶೋಣಿತಪಿತ್ತಯೋಶ್ಚ ॥
ಏಭಿರ್ಗುಣೈರ್ಹೀನತರಾಂಸ್ತು ಕಿಂಚಿತ್ ವಿದ್ಯಾದ್ಯವೇಭ್ಯೋಽತಿಯವಾನ್ ಯವೇಷ್ಯಃ ॥ (ಸು. 196-97.)

ಯವಗೋದಿಯು ಜೊಗರು ಮತ್ತು ಸೀ, ತಂಪು, ಪಾಕದಲ್ಲಿ ಖಾರ, ಕಫಪಿತ್ತಹರ, ಎಳ್ಳಿನಂತೆ ಯಾವಾಗಲೂ ವ್ರಣಗಳಲ್ಲಿ ಪಥ್ಯ, ಮೂತ್ರವನ್ನು ತಡೆಯತಕ್ಕಂಥಾದ್ದು, ಹೆಚ್ಚು ವಾತಯುಕ್ತವಾದ ಮಲಗಳನ್ನುಂಟುಮಾಡುವಂಥಾದ್ದು, ಸ್ಥಿರತೆ, ಅಗ್ನಿ, ಜ್ಞಾನ, ಸ್ವರ, ವರ್ಣ, ಇವುಗಳನ್ನು ಮಾಡುವಂಥಾದ್ದು, ಅಂಟುಳ್ಳದ್ದು, ಸ್ಥೂಲತೆಯನ್ನು ಕಡಿಮೆಮಾಡತಕ್ಕಂಥಾದ್ದು,

ಮೇದೋರೋಗ, ವಾಯು ಮತ್ತು ಬಾಯಾರಿಕೆ, ಇವುಗಳನ್ನು ಪರಿಹರಿಸುವಂಥಾದ್ದು, ಬಹಳ ರೂಕ್ಷ ಮತ್ತು ರಕ್ತಪಿತ್ತವನ್ನು ಶಮನಮಾಡತಕ್ಕಂಥಾದ್ದು. ಇವೇ ಗುಣಗಳು ಶೂಕ (ಧಾನ್ಯದ ಕೊನೆಯಲ್ಲಿ ಕಾಣುವ ಮಾಸೆ ಎಂಬ ಮುಳ್ಳು) ಇಲ್ಲದ ದೊಡ್ಡ ಯವೆಯಲ್ಲಿ ಕಿಂಚಿತ್ ಹೀನವಾಗಿ ಇರುತ್ತವೆ ಎಂತ ತಿಳಿಯಬೇಕು.

12. ತಿಂಬೀ (ಕೋಡುಳ್ಳ) ಧಾನ್ಯಗಳ ಸಾಧಾರಣ ಗುಣ

ರೂಕ್ಷಃ ಕಷಾಯೋ ವಿಷಶೋಫಶುಕ್ರ
ಬಲಾಸದೃಷ್ಟಿಕ್ಷಯಕೃದ್ವಿದಾಹೀ ।
ಕಟುರ್ವಿಪಾಕೇ ಮಧುರಸ್ತು ಶಿಂಬಃ
ಪ್ರಭಿನ್ನವಿಣ್ಮಾರುತಪಿತ್ತಲಶ್ಚ ॥ (ಸು 197)

ಶಿಂಬಿಧಾನ್ಯವು ರೂಕ್ಷ, ಜೊಗರು, ಸೀ, ವಿಪಾಕದಲ್ಲಿ ಕಟು, ವಿಷ, ಶೋಫ ಶುಕ್ರ, ಕಫ, ದೃಷ್ಟಿ, ಇವುಗಳ ಕ್ಷಯವನ್ನುಂಟುಮಾಡತಕ್ಕಂಥಾದ್ದು, ವಿದಾಹಕರ, ಮಲವನ್ನು ಬಿಡಿಸ ತಕ್ಕಂಥಾದ್ದು ಮತ್ತು ವಾತಪಿತ್ತಗಳ ವೃದ್ಧಿಯನ್ನುಂಟುಮಾಡತಕ್ಕಂಥಾದ್ದು.

ವಾತಲಾಃ ಕಫಪಿತ್ತಘ್ನಾ ಬದ್ಧಮೂತ್ರಮಲಾ ಹಿಮಾಃ । (ಭಾ. ಪ್ರ. 142.)

ಶಿಂಬೀಧಾನ್ಯಗಳು ವಾತವೃದ್ಧಿಕರ, ಮಲಮೂತ್ರಗಳನ್ನು ಬದ್ಧಮಾಡತಕ್ಕವು, ಕಫ ಪಿತ್ತವನ್ನು ನಾಶಮಾಡತಕ್ಕವು ಮತ್ತು ತಂಪು.

ಷರಾ ರಾಜವಲ್ಲಭನ ಪ್ರಕಾರವೂ ಅಗ್ನಿ, ಮಲ, ಶುಕ್ರ ಮತ್ತು ಕಫ ಇವುಗಳನ್ನು ನಾಶಮಾಡುವ ಗುಣವೂ, ಏಪ್ಪಂಥನಗುಣವೂ ನಾನಾ ವಿಧವಾದ ಶಿಂಬಿಧಾನ್ಯಗಳಲ್ಲಿ ಇವೆ (ಪು 49) ಮುಂದಿನ 13ನೇ ಸಂ ನೋಡು

13. ಬೇಳೆಗಳುಳ್ಳ ಶಿಂಬೀ ಧಾನ್ಯಗಳ ಸಾಧಾರಣ ಗುಣ

ವಿದಾಹವಂತಶ್ಚ ಭೃಶಂ ಚ ರೂಕ್ಷಾ
ವಿಷ್ಟಭ್ಯ ಜೀರ್ಯಂತ್ಯನಿಲಪ್ರದಾಶ್ಚ ॥
ರುಚಿಪ್ರದಾಶ್ಚೈವ ಸುದುರ್ಜರಾಶ್ಚ
ಸರ್ವೇ ಸ್ಮೃತಾ ವೈದಲಿಕಾಸ್ತು ಶಿಂಬಾಃ । (ಸು. 198.)

ಕೋಡುಳ್ಳ ಬೇಳೆಧಾನ್ಯಗಳೆಲ್ಲಾ ವಿದಾಹಿ, ಬಹಳ ರೂಕ್ಷ, ಹೊಟ್ಟೆ ಬಿಗಿದು ಜೀರ್ಣವಾಗ ತಕ್ಕವು, ವಾಯುವನ್ನು ವೃದ್ಧಿಮಾಡತಕ್ಕಂಥವು, ರುಚಿಕರ ಮತ್ತು ಜೀರ್ಣಕ್ಕೆ ಕಷ್ಟವಾದವು.

ಷರಾ ಮುಂದಿನ 25ನೇ ಸಂ ನೋಡು

14. ಧಾನ್ಯಗಳೊಳಗೆ ಹೊಸತು, ಹಳೇದು ಎಂಬ ಭೇದ

ನವಂ ಧಾನ್ಯಮಭಿಷ್ಯಂದಿ ಲಘು ಸಂವತ್ಸರೋಷಿತಂ ॥ (ಸು. 198.)

ಹೊಸ ಧಾನ್ಯವು ಅಭಿಷ್ಯಂದಿ, ಒಂದು ವರ್ಷ ಕಳೆದ (ಹಳೇದೆಂಬ) ಧಾನ್ಯವು ಲಘು ವಾಗಿರುತ್ತದೆ.

15. ಅಕ್ಕಿ ಪಾಯಸದ ಗುಣ

ಕ್ಷೀರಿಕಾ ದುರ್ಜರಾ ಪ್ರೋಕ್ತಾ ಬೃಂಹಣೀ ಬಲವರ್ಧಿನೀ ॥ (ಭಾ. ಪ್ರ. 161.)

ಪಾಯಸವು ಬಲವೃದ್ಧಿಕರ ಮತ್ತು ಪುಷ್ಟಿಕರ; ಆದರೆ ಜೀರ್ಣಕ್ಕೆ ಕಷ್ಟವಾದದ್ದು.

16. ಸೇವಿಕಾ ತರ್ಪಣೀ ಬಲ್ಯಾ ಗುರ್ವೀ ಪಿತ್ತಾನಿಲಾಪಹಾ ।
ಸೇಮಿಗೆ ಪಾಯಸದ ಗುಣ ಗ್ರಾಹಿಣೀ ಸಂಧಿಕೃದ್ರುಚ್ಯಾ ತಾಂ ಖಾದೇನ್ನಾತಿಮಾತ್ರಯಾ ॥
(ಭಾ. ಪ್ರ. 161.)

ಸೇಮಿಗೆಪಾಯಸವು ಗುರು, ಬಲಕಾರಿ, ತೃಪ್ತಿಕರ, ಗ್ರಾಹಿ ಮತ್ತು ರುಚಿಕರ; ಪಿತ್ತ ವಾಯುಗಳನ್ನು ಪರಿಹರಿಸುತ್ತದೆ; ಸಂದು ಕೂಡಿಸುತ್ತದೆ, ಆದರೆ ಅದನ್ನು ಅತಿಯಾಗಿ ತಿನ್ನ ಕೂಡದು.

17 ದುಗ್ಧೇನ ಸಾಜ್ಯಖಂಡೇನ ಮಂಡಕಂ ಭಕ್ಷಯೇನ್ನರಃ ।
ಅಥವಾ ಸಿದ್ಧಮಾಂಸೇನ ಸತಕ್ರವಟಕೇನ ವಾ ॥
ಮಂಡಿಗೆ ಭಕ್ಷ್ಯದ ಗುಣ ಮಂಡಕೋ ಬೃಂಹಣೋ ವೃಷ್ಯೋ ಬಲ್ಯೋ ರುಚಿಕರೋ ಭೃಶಂ ।
ಪಾಕೇಽಪಿ ಮಧುರೋ ಗ್ರಾಹೀ ಲಘುರ್ದೋಷತ್ರಯಾಪಹಾ ॥
(ಭಾ. ಪ್ರ. 161.)

ಮಂಡಿಗೆಯನ್ನು ಹಾಲು, ತುಪ್ಪ, ಸಕ್ಕರೆ ಕೂಡಿಸಿಕೊಂಡು ಅಥವಾ ಕ್ರಮದಂತೆ ಅಟ್ಟ ಮಾಂಸಯುಕ್ತವಾಗಿ, ಇಲ್ಲವೆ ಮಜ್ಜಿಗೆ ವಡೆಯೊಂದಿಗೆ, ಭಕ್ಷಿಸಬೇಕು. ಮಂಡಿಗೆಯು ಪುಷ್ಟಿ ಕರ, ವೃಷ್ಯ, ಬಲಕರ, ಒಳ್ಳೇ ರುಚಿಕರ, ಪಾಕದಲ್ಲಿಯೂ ಸೀ, ಗ್ರಾಹಿ, ಲಘು ಮತ್ತು ದೋಷತ್ರಯವನ್ನು ಪರಿಹರಿಸತಕ್ಕ ಗುಣವುಳ್ಳದ್ದು ಆಗಿರುತ್ತದೆ.

18. ಶುಷ್ಕಗೋಧೂಮಚೂರ್ಣೇನ ಕಿಂಚಿತ್ಪುಷ್ಟಾಂ ಚ ಪೋಲಿಕಾಂ ।
ತಪ್ತಕೇ ಸ್ನೇದಯೇತ್ಕೃತ್ವಾ ಭೂರ್ಯಂಗಾರೇಽಪಿ ತಾಂ ಪಚೇತ್ ॥
ಗೋದಿ ರೊಟ್ಟಿ (ಬಕರಿ)ಯ ಗುಣ ಸಿದ್ಧೃಷ್ಟಾ ರೋಟಿಕಾ ಪ್ರೋಕ್ತಾ ಗುಣಾನ್ ತಸ್ಯಾಃ ಪ್ರಚಕ್ಷ್ಮಹೇ ।
ರೋಟಿಕಾ ಬಲಕೃದ್ವೃಷ್ಯಾ ಬೃಂಹಣೀ ಧಾತುವರ್ಧನೀ ॥
ವಾತಘ್ನೀ ಕಫಕೃದ್ಗುರ್ವೀ ದೀಪ್ತ್ಯಗ್ನೀನಾಂ ಪ್ರಪೂಜಿತಾ। (ಭಾ ಪ್ರ. 161-62.)

ಗೋದಿ ಹಿಟ್ಟಿನ ಪುಡಿ ಕೂಡಿಸಿಕೊಂಡು ಸಜ್ಜಿಗೆಯಿಂದ ಸ್ವಲ್ಪ ದಪ್ಪವಾದ ಹಪ್ಪಳ ಮಾಡಿ, ಹಂಚಿನ ಮೇಲೆ ಹಾಕಿ ಕಾಯಿಸಿದನಂತರ ಒಳ್ಳೇ ಕೆಂಡದಲ್ಲಿ ಪಕ್ವಮಾಡಿದ ರೊಟ್ಟಿಯು, ಬಲಕಾರಿ, ರುಚಿಕರ, ಪುಷ್ಟಿಕರ, ಧಾತುವೃದ್ಧಿಕರ, ವೀರ್ಯವೃದ್ಧಿಕರ, ವಾತ ನಾಶನಮಾಡತಕ್ಕಂಥಾದ್ದು, ಕಫವೃದ್ಧಿಕರ ಮತ್ತು ಗುರು ಆಗಿರುತ್ತದೆ, ಅದು ಪಚನಶಕ್ತಿ ಚುರುಕಾಗಿದ್ದವರಿಗೆ ಹೆಚ್ಚಾಗಿ ಪ್ರಶಸ್ತವಾದದ್ದು.

19 ಮಾಷಾಣಾಂ ಪಿಷ್ಟಿಕಾಂ ಪೂಜ್ಯಾಲ್ಲವಣಾರ್ದ್ರಕಹಿಂಗುಭಃ ।
ತಯಾ ಪಿಷ್ಟಿಕಯಾ ಪೂರ್ಣಾ ಸಘೃತಾ ಕೃತಪೋಲಿಕಾ ॥
ಪೂರಿಯ ಗುಣ ತತಸ್ತೈಲೇನ ಪಕ್ವಾ ಸಾ ಪೂರೀಕಾ ಕಥಿತಾ ಬುಧೈಃ ।
ರುಚ್ಯಾ ಸ್ವಾದ್ವೀ ಗುರುಃ ಸ್ನಿಗ್ಧಾ ಬಲ್ಯಾ ಪಿತ್ತಾಸ್ರದೂಷಿಕಾ ॥
ಚಕ್ಷುಸ್ತೇಜೋಹರೀ ಜೋಷ್ಣಾ ಪಾಕೇ ವಾತವಿನಾಶಿನೀ ।

ತಥೈವ ಘೃತಪಕ್ವಾಪಿ ಚಕ್ಷುಷ್ಯಾ ರಕ್ತಪಿತ್ತಹೃತ್ ॥
(ಭಾ. ಪ್ರ. 162)

ಉದ್ದಿನ ಹಿಟ್ಟಿನೊಂದಿಗೆ ಉಪ್ಪು-ಶುಂಠಿ-ಹಿಂಗು ಕಲಸಿ, ಆ ಹಿಟ್ಟನ್ನು ತುಂಬಿಸಿ ಗೋದಿ ಸಜ್ಜಿಗೆಯಿಂದ ಹೋಳಿಗೆ ಮಾಡಿ, ತೈಲದಲ್ಲಿ ಕಾಯಿಸಿದ ಪೂರಿಯು ರುಚಿಕರ, ಸ್ವಾದು, ಗುರು, ಸ್ನಿಗ್ಧ, ಬಲಕಾರಿ, ಪಿತ್ತರಕ್ತವನ್ನು ಪ್ರಕೋಪಿಸತಕ್ಕಂಥಾದ್ದು, ಕಣ್ಣಿನ ದೃಷ್ಟಿಗೆ ವಿರೋಧವಾದದ್ದು, ಪಾಕದಲ್ಲಿ ಉಷ್ಣ, ಮತ್ತು ವಾತನಾಶನಮಾಡತಕ್ಕಂಥಾದ್ದು. ಅದನ್ನು ತುಪ್ಪದಲ್ಲಿ ಕಾಯಿಸಿದರೆ, ರಕ್ತಪಿತ್ತಹರವಾಗಿ ಕಣ್ಣಿಗೂ ಒಳ್ಳೇದಾಗುವದು

20. ಸಿದ್ಧೈಷಾ ಫೇನಿಕಾ ನಾಮ್ನಾ ಮಂಡಕೇನ ಸಮಾಗುಣೈಃ ।
ಚಿರೋಟಿ (ಫೇಣಿ)ಯ ಗುಣ ತತಃ ಕಿಂಚಿಲ್ಲಘುರಿಯಂ ವಿಶೇಷೋಽಯಮುದಾಹೃತಃ ॥
(ಭಾ ಪ್ರ. 166.)

ಫಣಿಯು (ಪದರು ಫಣಿ) ಮಂಡಿಗೆಗೆ ಸಮಾನ ಗುಣವುಳ್ಳದ್ದು, ಆದರೆ ಅದಕ್ಕಿಂತ ಇದು ಸ್ವಲ್ಪ ಲಘು ಎಂಬದೊಂದು ವಿಶೇಷ.

21. ಲಘುರ್ಗ್ರಾಹೀ ತ್ರಿದೋಷಘ್ನಃ ಸ್ವಾದುಃ ಶೀತೋ ರುಚಿಪ್ರದಃ ।
ಹೆಸರುಂಡಿಯ ಗುಣ ಚಕ್ಷುಷ್ಯೋ ಜ್ವರಹೃದ್ಬಲ್ಯಸ್ತರ್ಪಣೋ ಮುದ್ಗಮೋದಕಃ ॥
(ಭಾ. ಪ್ರ. 166.)

ಹೆಸರು ಹಿಟ್ಟಿನ ಕರಿದ ಕಾಳುಗಳಿಂದ ಕಟ್ಟಿದ ಲಾಡು ಲಘು, ಗ್ರಾಹಿ, ಸ್ವಾದು, ರುಚಿಕರ, ಶೀತ, ತ್ರಿದೋಷಹರ, ಜ್ವರಹರ, ಕಣ್ಣಿಗೆ ಹಿತ, ಬಲಕಾರಿ, ಮತ್ತು ತೃಪ್ತಿಕರ.

22 ಏಷಾ ಕುಂಡಲಿನೀ ನಾಮ್ನಾ ಪುಷ್ಟಿಕಾಂತಿಬಲಪ್ರದಾ ।
ಜಿಲೇಬಿಯ ಗುಣ ಧಾತುವೃದ್ಧಿಕರೀ ವೃಷ್ಯಾ ರುಚ್ಯಾ ಚ ಕ್ಷಿಪ್ರತರ್ಪಣೀ ॥
(ಭಾ. ಪ್ರ. 167.)

ಜಿಲೇಬಿಯು ಪುಷ್ಟಿಯನ್ನೂ, ಕಾಂತಿಯನ್ನೂ, ಬಲವನ್ನೂ, ಕೊಡತಕ್ಕಂಥಾದ್ದು, ಧಾತುವೃದ್ಧಿಕರ, ವೃಷ್ಯ, ರುಚಿಕರ, ಮತ್ತು ವೇಗನೇ ತೃಪ್ತಿಕೊಡುವಂಥಾದ್ದು

23. ಲಾಜಾಃ ಸ್ಯುರ್ಮಧುರಾಃ ಶೀತಾ ಲಘವೋ ದೀಪನಾಶ್ಚ ತೇ ।
ಸ್ವಲ್ಪಮೂತ್ರಮಲಾ ರೂಕ್ಷಾ ಬಲ್ಯಾಃ ಪಿತ್ತಕಫಚ್ಛಿದಃ ॥
ಅರಳಿನ ಗುಣ ಛರ್ದ್ಯತೀಸಾರದಾಹಾಸ್ರಮೇಹಮೇದಸ್ತೃಷಾಪಹಾಃ ।
(ಭಾ. ಪ್ರ. 169)

ಭತ್ತದ ಅರಳು ಸೀ. ಶೀತ, ಲಘು, ದೀಪನಕಾರಿ, ರೂಕ್ಷ, ಬಲಕಾರಿ, ಮೂತ್ರ-ಮಲಗಳನ್ನು ಕಡಿಮೆ ಮಾಡುವಂಥಾದ್ದು, ಪಿತ್ತಕಫಹರ, ಮತ್ತು ವಾಂತಿ-ಅತಿಸಾರ-ಉರಿ-ರಕ್ತ ಮೇಹ-ಮೇದೋರೋಗ-ಬಾಯಾರಿಕೆ. ಇವುಗಳನ್ನು ಪರಿಹರಿಸತಕ್ಕಂಥಾದ್ದು.

24. ಪೃಥುಕಾ ಗುರವೋ ವಾತನಾಶನಾಃ ಶ್ಲೇಷ್ಮಲಾ ಅಪಿ ।
ಅವಲಕ್ಕಿಯ ಗುಣ ಸಕ್ಷೀರಾ ಬೃಂಹಣಾ ವೃಷ್ಯಾ ಬಲ್ಯಾ ಭಿನ್ನಮಲಾಶ್ಚ ತೇ ॥
(ಭಾ. ಪ್ರ 169.)

ಅವಲಕ್ಕಿಯು ಗುರು, ಕಫವೃದ್ಧಿಕರ, ಮತ್ತು ವಾತನಾಶಕರ, ಹಾಲಿನೊಂದಿಗೆ ಕೂಡಿದರೆ ಪುಷ್ಟಿಕರ, ವೃಷ್ಯ, ಬಲಕರ, ಮತ್ತು ಮಲ ಸಡಿಲಿಸುವದು.

ಪೃಥುಕಾ ಗುರವೋ ಭೃಷ್ಟಾನ್ ಭಕ್ಷಯೇದಲ್ಪಶಸ್ತು ತಾನ್ ।
(ಜ. 177)

ಅವಲಕ್ಕಿಯು ಗುರುವಾದದ್ದರಿಂದ, ಅದನ್ನು ಹುರಿದುಕೊಂಡು ಅಲ್ಪವಾಗಿ ತಿನ್ನಬೇಕು.

25. ಮುದ್ಗ-ವನಮುದ್ಗ-ಕಲಾಯ-ಮಕುಷ್ಠ-ಮಸೂರ-ಮಂಗಲ್ಯ-ಚ
ಣಕ-ಸತೀನ-ತ್ರಿಪುಟಕ-ಹರೇಣ್ವಾಢಕೀ-ಪ್ರಭೃತಯೋ ವೈದಲಾಃ ।
ಸಾಧಾರಣವಾಗಿ ಬೇಳೆಗಳ ಗುಣ ಕಷಾಯಮಧುರಾಃ ಶೀತಾಃ ಕಟುಪಾಕಾ ಮರುತ್ಕರಾಃ ।
ಬದ್ಧಮೂತ್ರಪುರೀಷಾಶ್ಚ ಪಿತ್ತಶ್ಲೇಷ್ಮಹರಾಸ್ತಥಾ ॥ (ಸು. 195)

ಹೆಸರು, ಕಾಡು (ಕರೀ) ಹೆಸರು, ಬಟಾಣಿ, ಮಕುಷ್ಠ (ಕಾಡು ಹೆಸರಿನ ಭೇದ), ಕರೀ ಚಾನಂಗಿ, ಬಿಳೀ ಚಾನಂಗಿ, ಕಡಲೆ, ಸತೀನ (ಉರುಟು ಬಟಾಣಿ), ತ್ರಿಪುಟಕ (ಸಣ್ಣ ಬಟಾಣಿ), ಹರೇಣು (ಎಳ್ಳಿನ ಗುರ್ತುಳ್ಳ ಉರುಟು ಬಟಾಣಿ), ತೊಗರಿ ಮುಂತಾದ ಬೇಳೆಧಾನ್ಯಗಳು ಜೊಗರು, ಸೀರುಚಿಯುಳ್ಳವು, ಶೀತ, ಪಾಕದಲ್ಲಿ ಖಾರ, ವಾಯುವೃದ್ಧಿಕರ, ಮಲಮೂತ್ರ ಬದ್ಧಕರ, ಮತ್ತು ಪಿತ್ತಕಫಹರ ಆಗಿರುತ್ತವ

26. ನಾತ್ಯರ್ಥಂ ವಾತಲಾಸ್ತೇಷು ಮುದ್ಗಾ ದೃಷ್ಟಿಪ್ರಸಾದನಾಃ ।
ಹೆಸರಿನ ಗುಣ ಪ್ರಧಾನಾ ಹರಿತಾಸ್ತತ್ರ ವಸ್ಯಾಮುದ್ಗಸಮಾಃ ಸ್ಮೃತಾಃ ॥
(ಸು 195)

ಆ ಬೇಳೆಧಾನ್ಯಗಳೊಳಗೆ ಹೆಸರಿನಲ್ಲಿ ವಾತಪ್ರಕೋಪ ಗುಣವು ಕಡಿಮೆಯಾಗಿರುತ್ತದೆ, ಮತ್ತು ದೃಷ್ಟಿಪ್ರಸನ್ನತೆ ಮಾಡುವ ಗುಣವುಂಟು. ಅದರಲ್ಲಿ ಹಸುರು ವರ್ಣದ ಹಸರೇ ಪ್ರಧಾನವಾದದ್ದು. ಕಾಡು ಹೆಸರಿನಲ್ಲಿ ಅವೇ ಗುಣಗಳು ಇವೆ.

ಕಷಾಯಮಧುರೋ ರೂಕ್ಷಃ ಶೀತಃ ಪಾಕೇ ಕಟುರ್ಲಘುಃ ।
ವಿಶದಃ ಶ್ಲೇಷ್ಮಪಿತ್ತಘ್ನೋ ಮುದ್ಗಃ ಸೂಪ್ಯೋತ್ತಮೋ ಮತಃ ॥
(ಜ 157.)

ಹೆಸರು ಜೊಗರು, ಸೀ, ರೂಕ್ಷ, ಶೀತ, ಪಾಕದಲ್ಲಿ ಕಟು, ಲಘು, ವಿಶದ, ಕಫಪಿತ್ತ ನಾಶಕರ ಮತ್ತು ತೋವೆಗೆ ಉತ್ತಮವಂತ ಗಣಿಸಲ್ಪಟ್ಟದ್ದು ಆಗಿರುತ್ತದೆ.

27. ಆಢಕೀ ತು ವರಾ ರೂಕ್ಷಾ ಮಧುರಾ ಶೀತಲಾ ಲಘುಃ ।
ತೊಗರಿಯ ಗುಣ ಗ್ರಾಹಿಣೀ ವಾತಜನನೀ ವರ್ಣ್ಯಾ ಪಿತ್ತಕಫಾಸ್ರಜಿತ್ ॥ (ಭಾ ಪ್ರ 143.)

ತೊಗರಿಯು ಜೊಗರು, ರೂಕ್ಷ, ಸೀ, ಶೀತಕರ, ಲಘು, ಗ್ರಾಹಿ, ವಾತವನ್ನುಂಟು ಮಾಡುವಂಥಾದ್ದು, ವರ್ಣ ಕೊಡುತ್ತದೆ ಮತ್ತು ಪಿತ್ತ, ಕಫ, ರಕ್ತಗಳನ್ನು ಜಯಿಸು ವಂಥಾದ್ದು.

28 ಕಡಲೆಯ ಗುಣ

ವಾತಲಾಃ ಶೀತಮಧುರಾಃ ಸಕಷಾಯಾ ವಿರೂಕ್ಷಣಾಃ |
ಕಫಶೋಣಿತಪಿತ್ತಘ್ನಾಶ್ಚಣಕಾಃ ಪುಂಸ್ತ್ವನಾಶನಾಃ || (ಸು 195)
*ತ ಏವ ಘೃತಸಂಯುಕ್ತಾಸ್ತ್ರಿದೋಷಶಮನಾಃ ಪರಮ್ |

ಕಡಲೆಯು ಸೀ ಜೊಗರು ರುಚಿಯುಳ್ಳದ್ದು, ಶೀತ, ಬಹಳ ರೂಕ್ಷ, ಕಫರಕ್ತಪಿತ್ತ ಗಳನ್ನೂ, ಪುಂಸ್ತ್ವವನ್ನೂ ನಾಶಮಾಡುವ ಗುಣವುಳ್ಳದ್ದು ಮತ್ತು ವಾಯುವ್ರಕೋಪ ಮಾಡು ತ್ತದೆ. ಆದರೆ ಅದಕ್ಕೆ ತುಪ್ಪ ಕೂಡಿದರೆ ತ್ರಿದೋಷಶಮನಕ್ಕೆ ಉತ್ತಮವಾದದ್ದು

*ಪರಾ ಈ ಅರ್ಧ ಶ್ಲೋಕವು ಕೆಲವು ಪ್ರತಿಗಳಲ್ಲಿ ಕಾಣುವದಿಲ್ಲ

ಹುರಿದ ಬೇಯಿಸಿದ ಮತ್ತು ಹಸಿಯದು

ಸ ಚಾಂಗಾರೇಣ ಸಂಭೃಷ್ಟಸ್ತೈಲಭೃಷ್ಟಶ್ಚ ತದ್ಗುಣಃ |
ಆರ್ದ್ರಭೃಷ್ಟೋ ಬಲಕರೋ ರೋಚನಶ್ಚ ಪ್ರಕೀರ್ತಿತಃ ||
ಶುಷ್ಕಭೃಷ್ಟೋಽತಿರೂಕ್ಷಶ್ಚ ವಾತಕುಷ್ಠಪ್ರಕೋಪಣಃ |
ಸ್ವಿನ್ನಃ ಪಿತ್ತಕಫಂ ಹನ್ಯಾತ್ಸೂಪಃ ಕ್ಲೋಭಕರೋ ಮತಃ ||
ಆದ್ರೋರ್ಽತಿಕೋಮಲೋ ರುಚ್ಯಃ ಪಿತ್ತಶುಕ್ರಹರೋ ಹಿಮಃ |
ಕಷಾಯೋ ವಾತಲೋ ಗ್ರಾಹೀ ಕಫಪಿತ್ತಹರೋ ಲಘುಃ || (ಭಾ. ಪ್ರ. 143.)

ಕಡಲೆಯನ್ನು (ಬರೇದಾಗಿ) ಕೆಂಡದಲ್ಲಿ ಹುರಿದರೂ, ತೈಲದಲ್ಲಿ ಹುರಿದರೂ, ಅದರಲ್ಲಿ ಮೇಲೆ ಹೇಳಿದ ಗುಣಗಳೇ ಇರುವವು, ನೆನೆಸಿ ಅಥವಾ ಹಸಿಯಾಗಿ ಹುರಿದದ್ದು ಬಲಕಾರಿ ಮತ್ತು ರುಚಿಕರ; ಒಣಗಲಾಗಿಯೇ ಹುರಿದದರಲ್ಲಿ ವಿಶೇಷ ರೂಕ್ಷಗುಣವೂ, ವಾತ-ಕುಷ್ಠ ರೋಗಗಳನ್ನು ಪ್ರಕೋಪಿಸುವ ಗುಣವೂ ಇರುವವು; ಬೇಯಿಸಿದ ಕಡಲೆ ಪಿತ್ತಕಫಗಳನ್ನು ನಾಶಮಾಡುವದು, ಕಡಲೆತೋವೆಯಿಂದ ಹೊಟ್ಟೆಯಲ್ಲಿ ಕ್ಲೋಭ (ಗುಡುಗುಡು) ಉಂಟಾ ಗುವದು, ಮತ್ತು ಹಸೀಕಡಲೆಯು ಅತಿಕೋಮಲ, ರುಚಿಕರ ಜೊಗರು, ಗ್ರಾಹಿ, ಲಘು, ತಂಪು, ವಾಯುವ್ರಕೋಪಕರ ಮತ್ತು ಪಿತ್ತವನ್ನೂ, ಶುಕ್ರವನ್ನೂ. ಕಫಪಿತ್ತವನ್ನೂ ನಾಶ ಮಾಡತಕ್ಕಂಥಾದ್ದು.

29. ಉದ್ದಿನ ಗುಣ

ಮಾಷೋ ಗುರುರ್ಭಿನ್ನಪುರೀಷಮೂತ್ರಃ
ಸ್ನಿಗ್ಧೋಷ್ಣವೃಷ್ಯೋ ಮಧುರೋಽನಿಲಘ್ನಃ |
ಸಂತರ್ಪಣಃ ಸ್ತನ್ಯಕರೋ ವಿಶೇಷಾತ್
ಬಲಪ್ರದಃ ಶುಕ್ರಕಫಾವಹಶ್ಚ || (ಸು 195.)

ಉದ್ದು ಗುರು, ಸ್ನಿಗ್ಧ, ಉಷ್ಣ, ವೃಷ್ಯ, ಸೀ, ವಾತಹರ, ಪುಷ್ಟಿಕರ, ಮೊಲೆಹಾಲನ್ನು ವೃದ್ಧಿಮಾಡತಕ್ಕಂಥಾದ್ದು. ವಿಶೇಷವಾಗಿ ಬಲಕಾರಿ, ಶುಕ್ರಕಫಗಳನ್ನು ವೃದ್ಧಿ ಮಾಡುವಂಥಾದ್ದು, ಮತ್ತು ಮಲಮೂತ್ರಗಳನ್ನು ಸಡಿಲಿಸತಕ್ಕಂಥಾದ್ದು ಆಗಿರುತ್ತದೆ.

30. ಅಲಸಂದೆಯ ಗುಣ

ರೂಕ್ಷಶ್ಚೈವ ಕಷಾಯಶ್ಚ ವಾತಲಃ ಶ್ಲೇಷ್ಮಪಿತ್ತಹಾ ।
ವಿಷ್ಟಂಭೀ ಚಾಪ್ಯವೃಷ್ಯಶ್ಚ ರಾಜಮಾಷಃ ಪ್ರಕೀರ್ತಿತಃ ॥
(ಚ. 157.)

ಅಲಸಂದೆಯು ರೂಕ್ಷ, ಜೊಗರು, ವಾಯುವೃದ್ಧಿಕರ, ಕಫಪಿತ್ತಗಳನ್ನು ನಾಶಮಾಡು ವಂಧಾದ್ದು, ಸ್ತಂಭನಕಾರಿ, ಮತ್ತು ವೃಷ್ಯತ್ವಕ್ಕೆ ವಿರುದ್ಧವಾದದ್ದು ಆಗಿರುತ್ತದೆ.

ಕಷಾಯಭಾವಾನ್ನ ಪುರೀಷಭೇದೀ ನ ಮೂತ್ರಲೋ ನೈವ ಕಫಸ್ಯ ಕರ್ತಾ ।
ಸ್ವಾದುರ್ವಿಪಾಕೇ ಮಧುರೋಽಲಸಾಂದ್ರಃ ಸಂತರ್ಪಣಃ ಸ್ತನ್ಯರುಚಿಪ್ರದಶ್ಚ ॥
(ಸು. 195-96)

ಅಲಸಂದೆಯು ಜೊಗರುಗುಣವುಳ್ಳದ್ದಾದ್ದರಿಂದ, ಮಲವನ್ನು ಹೊರಗೆ ಹಾಕುವದಿಲ್ಲ, ಮೂತ್ರವನ್ನು ಹೆಚ್ಚುಮಾಡಲಾರದು, ಕಫವನ್ನುಂಟುಮಾಡಲಾರದು, ರುಚಿಯಲ್ಲಿಯೂ ವಿಪಾಕದಲ್ಲಿಯೂ ಸೀ, ತೃಪ್ತಿಕರ, ರುಚಿಕರ ಮತ್ತು ಮೊಲೆಹಾಲನ್ನು ವೃದ್ಧಿಮಾಡ ತಕ್ಕಂಧಾದ್ದು.

ರಾಜಮಾಷೋ ಗುರುಃ ಸ್ವಾದುಸ್ತುವರಸ್ತರ್ಪಣಃ ಸರಃ ।
ರೂಕ್ಷೋ ವಾತಕರೋ ರುಚ್ಯಃ ಸ್ತನ್ಯಭೂರಿಬಲಪ್ರದಃ ॥
ಶ್ವೇತೋ ರಕ್ತಸ್ತಥಾಕೃಷ್ಣಸ್ತ್ರಿವಿಧಃ ಸ ಪ್ರಕೀರ್ತಿತಃ ।
ಯೋ ಮಹಾಂಸ್ತೇಷು ಭವತಿ ಸ ಏವೋಕ್ತೋ ಗುಣಾಧಿಕಃ॥ (ಭಾ ಪ್ರ. 143.)

ಅಲಸಂದೆಯು ಗುರು, ಸೀ, ಜೊಗರು, ತೃಪ್ತಿಕರ, ಸರ, ರೂಕ್ಷ, ವಾತಕರ, ರುಚಿಕರ ಮತ್ತು ಮೊಲೆಹಾಲನ್ನೂ, ಹೆಚ್ಚು ಬಲವನ್ನೂ ಕೊಡುವಂಧಾದ್ದು. ಅಲಸಂದೆಯಲ್ಲಿ ಬಳೇದು, ಕೆಂಪು, ಕಪ್ಪು, ಎಂಬ ಮೂರು ಜಾತಿಗಳಿವ, ಅವ್ರಗಳಲ್ಲಿ ದೊಡ್ಡದಾಗಿ ಯಾವದು ಬೆಳೆಯು ವದೋ, ಅದರಲ್ಲಿಯೇ ಮೇಲೆ ಹೇಳಿದ ಗುಣಗಳು ಅಧಿಕವಾಗಿ ಇರುತ್ತವೆ.

31. ಹುರುಳಿಯ ಗುಣ

ಉಷ್ಣಃ ಕುಲತ್ಥೋ ರಸತಃ ಕಷಾಯಃ ಕಟುರ್ವಿಪಾಕೇ ಕಫಮಾರುತಘ್ನಃ ।
ಶುಕ್ರಾಶ್ಮರೀಗುಲ್ಮನಿಷೂದನಶ್ಚ ಸಂಗ್ರಾಹಕಃ ಪೀನಸಕಾಸಹಾರೀ ॥
(ಸು 196)

ಹುರುಳಿಯು ಉಷ್ಣ, ರಸದಲ್ಲಿ ಜೊಗರು, ವಿಪಾಕದಲ್ಲಿ ಖಾರ, ಕಫವಾತಹರ, ಒಳ್ಳೇ ಗ್ರಾಹಿ, ಮತ್ತು ಶುಕ್ರಾಶ್ಮರೀ, ಗುಲ್ಮ, ಪೀನಸ, ಕೆಮ್ಮು, ಇವುಗಳನ್ನು ಪರಿಹರಿಸುತ್ತದೆ

32. ಅವರೆಯ ಗುಣ

ನಿಷ್ಪಾವೋ ಮಧುರೋ ರುಚ್ಯೋ ವಿಪಾಕೇಽಮ್ಲೋ ಗುರುಃ ಸರಃ ।
ಕಷಾಯಃ ಸ್ತನ್ಯಪಿತ್ತಾಸ್ರಮೂತ್ರವಾತವಿಬಂಧಕೃತ್ ।
ವಿದಾಹ್ಯುಷ್ಣೋ ವಿಷಶ್ಲೇಷ್ಮಶೋಥಹೃಚ್ಛುಕ್ರನಾಶನಃ ॥ (ಭಾ. ಪ್ರ. 143.)

ಅವರೆಯು ಸೀ, ರುಚಿಕರ, ಹುಳಿವಿಪಾಕವುಳ್ಳದ್ದು, ಗುರು, ಸರ, ಜೊಗರು, ವಿದಾಹಿ, ಉಷ್ಣ, ಮೊಲೆಹಾಲನ್ನೂ, ರಕ್ತಪಿತ್ತವನ್ನೂ, ಮೂತ್ರವನ್ನೂ, ವಾತವನ್ನೂ, ಹೊಟ್ಟೆಬಿಗಿಯೋಣ

ವನ್ನೂ ಉಂಟುಮಾಡುವಂಥಾದ್ದು, ವಿಷವನ್ನೂ, ಕಫವನ್ನೂ, ಶೋಫೆಯನ್ನೂ ಪರಿಹರಿಸ ತಕ್ಕಂಥಾದ್ದು ಮತ್ತು ಶುಕ್ರವನ್ನು ನಾಶಮಾಡುವಂಥಾದ್ದು ಆಗಿರುತ್ತದೆ

33. ಮೊಳಕೆ ಬಂದ ಧಾನ್ಯಗಳ ಗುಣ — ವಿದಾಹಿ ಗುರು ವಿಷ್ಟಂಭಿ ವಿರೂಢಂ ದೃಷ್ಟಿದೂಷಣಂ । (ಸು. 198.)

ಮೊಳಕೆ ಬಂದ ಧಾನ್ಯವು ಗುರು ವಿಷ್ಟಂಭಿ. ವಿದಾಹಿ ಮತ್ತು ದೃಷ್ಟಿಗೆ ಕೆಟ್ಟದ್ದು.

34. ರಾಗಿಯ ಗುಣ — ತಿಕ್ತೋ ಮಧುರಕಷಾಯಃ ಶೀತಃ ಪಿತ್ತಾಸ್ರನಾಶನೋ ಬಲದಃ । (ಧ ನಿ. 230.)

ರಾಗಿಯು ಸೀ, ಚೊಗರು ಮತ್ತು ಕಹಿ ಮಿಶ್ರರುಚಿ ಉಳ್ಳದ್ದು, ಶೀತ, ಪಿತ್ತರಕ್ತಹರ ಮತ್ತು ಬಲಕರ

ಪರಾ ಇದು ಲಘು ತೃಪ್ತಿಕರ ಮತ್ತು ತ್ರಿದೋಷಶಮನಕಾರಿ ಎಂತ ಸಹ ನಿ ರ ಹೇಳುತ್ತದೆ

35 ತೋವೆಯ ಗುಣ — ದಾಲೀ ತು ಸಲಿಲೇ ಸಿದ್ಧಾ ಲವಣಾರ್ದ್ರಕಹಿಂಗುಭಿಃ ।
ಸಂಯುಕ್ತಾ ಸೂಪನಾಮ್ನಾ ಸ್ಯಾತ್ಕಥ್ಯಂತೇ ತದ್ಗುಣಾ ಅಧ ॥
ಸೂಪೋ ವಿಷ್ಟಂಭಕೋ ರೂಕ್ಷಃ ಶೀತಸ್ತು ಸ ವಿಶೇಷತಃ ।
ನಿಸ್ತುಷೋ ಭೃಷ್ಟಸಂಸಿದ್ಧಃ ಲಾಘವಂ ಸುತರಾಂ ವ್ರಜೇತ್ ॥ (ಭಾ ಪ್ರ. 161)

ಬೇಳೆಯನ್ನು ನೀರಲ್ಲಿ ಬೇಯಿಸಿ, ಉಪ್ಪು, ಶುಂಠಿ ಮತ್ತು ಹಿಂಗು ಕೂಡಿಸಿದ್ದಕ್ಕೆ ಸೂಪ ಎಂತ ಹೆಸರು. ಅದರ ಗುಣಗಳು ಹ್ಯಾಗಂದರೆ ಅದು ರೂಕ್ಷ, ವಿಷ್ಟಂಭಿ ಮತ್ತು ವಿಶೇಷ ವಾಗಿ ಶೀತ, ಮತ್ತು ಕಾವನ್ನು ತೆಗೆದುಬಿಟ್ಟು, ಹುರಿದ ಬೇಳೆಯಿಂದ ತಯಾರಿಸಲ್ಪಟ್ಟದ್ದಾದರೆ, ಅದು ಬಹಳಮಟ್ಟಿಗೆ ಲಘುವಾಗುತ್ತದೆ.

36 ಸಾರಿನ ಕ್ರಮ — ಅಷ್ಟಾದಶಗುಣೇ ನೀರೇ ಶಿಂಬೀಧಾನ್ಯಶೃತೋ ರಸಃ ।
ವಿರಲಾನ್ನೋ ಘನಃ ಕಿಂಚಿತ್ ಪೇಯಾತೋ ಯೂಷ ಉಚ್ಯತೇ ॥ (ಭಾ. ಪ್ರ. 270)

ಶಿಂಬೀಧಾನಕ್ಕೆ 18 ಪಾಲು ನೀರು ಹಾಕಿ, ಬೇಯಿಸಿ, ಕಾಳು ವಿರಳವಾಗಿ, ಪೇಯಾ ಎಂಬ ಗಂಜಿಗಿಂತ ಕಿಂಚಿತ್ ದಪ್ಪವಾದ ರಸಕ್ಕೆ ಯೂಷವೆನ್ನುತ್ತಾರೆ

ಪರಾ ಮೂರು ಪಾಲು ಬತ್ತಿಸಿ ಒಂದು ಪಾಲು ನೀರು ಉಳಿಸಬೇಕಾಗಿ ಇನ್ನೊಂದು ಗ್ರಂಥ ಹೇಳುತ್ತದೆ

37. ಹುರುಳಿ ಸಾರಿನ ಗುಣ — ಕುಲತ್ಥಯೂಷೋ ಮಧುರಃ ಕಷಾಯಃ ಕಫಂ ಸಪಿತ್ತಂ ವಿನಿಹಂತಿ ಶೀಘ್ರಂ ।
ಮೇಹಾಶ್ಮರೀವಾಯುಜಮೇದಹಂತಾ ಸಂದೀಪನೋ ಮೂತ್ರವಿಶೋಧನಶ್ಚ ॥ (ಹಾ. 49)

ಹುರುಳಿಸಾರು ಸೀ, ಚೊಗರು, ಕಫಪಿತ್ತವನ್ನು ಶೀಘ್ರದಲ್ಲಿ ಜಯಿಸುವದು, ಮೇಹ,

ಅಶ್ಮರೀ, ಮೂಲವ್ಯಾಧಿ, ಮೇದಸ್ಸು, ಇವುಗಳನ್ನು ಶಮನವಾಡುವದು. ಮೂತ್ರಶೋಧನ ಕರ ಮತ್ತು ಅಗ್ನಿದೀಪನಕರ.

ಕುಲತ್ಥಯೂಷೋಽನಿಲಹಾ ಶ್ವಾಸಪೀನಸನಾಶನಃ ।
ತೂಣೀ-ಪ್ರತೂಣೀ-ಕಾಸಾರ್ಶೋ-ಗುಲ್ಮೋದಾವರ್ತನಾಶನಃ ॥ (ಸು. 227.)

ಹುರುಳಿಸಾರು ವಾತಹರ ಮತ್ತು ಶ್ವಾಸ, ಪೀನಸ, ತೂಣೀ, ಪ್ರತೂಣೀ, ಕಾಸ, ಅರ್ಶಸ್ಸು, ಗುಲ್ಮ, ಉದಾವವರ್ತ, ಇವುಗಳನ್ನು ನಾಶಮಾಡತಕ್ಕಂಧಾದ್ದು

ಪರಾ ಪಾರಾಂತರದಲ್ಲಿ 'ಶ್ವಾಸಪೀನಸ' ಎಂಬದರ ಬದಲಿಗೆ 'ಶರ್ಕರಾಶ್ಮರಿ' ಮತ್ತು 'ಉದಾವರ್ತ' ಎಂಬದರ ಸ್ಥಾನದಲ್ಲಿ 'ಮೇದಃ ಕಫ' ಹೇಳಲ್ಪಟ್ಟಿವೆ (ರಾ 147)

38. ಆಢಕ್ಯಯೂಷಂ ಮಧುರಂ ಚ ಶೀತಂ ವಿಶೋಷಣಂ ವಾತನಿವಾರಣಂ ಚ ।
ತೊಗರಿಬೇಳೆ ಸಾರಿನ ಗುಣ ಶ್ಲೇಷ್ಮಾಪಹಂ ಪಿತ್ತಹರಂ ನರಾಣಾಂ ಕೃಮಿಂ ನಿಹನ್ಯಾದಪಿ ದಾರುಣಂ ಚ ॥
(ಹಾ. 49.)

ತೊಗರೀ ಸಾರು ಸೀ, ಶೀತ, ವಿಶೇಷವಾಗಿ ಶೋಷಣಗುಣವುಳ್ಳದ್ದು. ವಾತಹರ, ಕಫ ಹರ, ಪಿತ್ತಹರ, ಮತ್ತು ಮನುಷ್ಯರಲ್ಲಿರುವ ದಾರುಣವಾದ ಕ್ರಿಮಿಯನ್ನು ಕೊಲ್ಲುವದು.

39. ಹೆಸರುಬೇಳೆ ಸಾರಿನ ಗುಣ ಶೀತಲಂ ಮಧುರಂ ಮೌದ್ಗಂ ಯೂಷಂ ಪಿತ್ತಏಕಾರಜಿತ್ ।
ವಾತದೋಷಹರಂ ಪ್ರೋಕ್ತಂ ಜ್ವರಾಣಾಂ ಶಮನಂ ಪರಂ ॥
(ಹಾ. 49-50)

ಹೆಸರು ಸಾರು ಸೀ, ಕಫಕರ, ಪಿತ್ತಏಕಾರವನ್ನೂ, ವಾತದೋಷವನ್ನೂ ಪರಿಹರಿಸುವದು ಮತ್ತು ಜ್ವರಶಮನಕ್ಕೆ ಉತ್ತಮವಾದದ್ದು.

ಮುದ್ಗಾಮಲಕಯೂಷಸ್ತು ಗ್ರಾಹೀ ಪಿತ್ತಕಫೇ ಹಿತಃ (ಸು. 217.)

ನೆಲ್ಲಿ ಕೂಡಿಸಿ ಮಾಡಿದ ಹೆಸರ ಸಾರು ಗ್ರಾಹೀ ಮತ್ತು ಕಫರೋಗದಲ್ಲಿ ಹಿತ

40. ಕಷಾಯಂ ಕಟುಕಂ ಚೋಷ್ಣಂ ವಾತಘ್ನಂ ಪುಂಸ್ತ್ವದೋಷಕೃತ್ ।
ಕಡಲೆಬೇಳೆ ಸಾರಿನ ಗುಣ ರಕ್ತಪಿತ್ತಂ ನಿಹಂತ್ಯಾಶು ಚಣಾನಾಂ ಯೂಷಮುಚ್ಯತೇ ॥
(ಹಾ. 50)

ಕಡಲೇ ಸಾರು ಚೂಗರು ಮತ್ತು ಕಟು, ಉಷ್ಣ, ವಾತಹರ, ಪುಂಸ್ತ್ವದೋಷಕರ ಮತ್ತು ರಕ್ತಪಿತ್ತಹರ.

41. ಕೃತಾಕೃತ ಭೇದ ಅಸ್ನೇಹಲವಣಂ ಸರ್ವಮಕೃತಂ ಕಟುಕೈರ್ವಿನಾ ।
ವಿಜ್ಞೇಯಂ ಲವಣಸ್ನೇಹಕಟುಕೈಃ ಸಂಯುತಂ ಕೃತಂ ॥
(ಸು. 228)

ಉಪ್ಪು, ಖಾರ, ಸ್ನೇಹಗಳನ್ನು ಸೇರಿಸದೆ ಇದ್ದದ್ದೆಲ್ಲಾ ಅಕೃತ ಮತ್ತು ಅವುಗಳಿಂದ ಕೂಡಿದ್ದು ಕೃತ ಎಂತ ತಿಳಿಯತಕ್ಕದ್ದು.

ಹುಳಿತೋವೆ ಸೂಪಮಮ್ಲಮನಮ್ಲಂ ಚ ಗುರುಂ ವಿದ್ಯಾದ್ಯಥೋತ್ತರಂ । (ಚ. 176.)

ಹುಳಿಯುಕ್ತವಾದ ತೋವೆಗಿಂತ ಹುಳಿ ಕೂಡದ ತೋವೆಯು ಗುರು ಎಂತ ತಿಳಿಯತಕ್ಕದ್ದು.

42. ಧೂಮಸೀ ರಚಿತಾ ಹಿಂಗುಹರಿದ್ರಾಲವಣೈರ್ಯುತಾ ।
ಜೀರಕಸ್ವರ್ಜಿಕಾಭ್ಯಾಂ ಚ ತನೂಕೃತ್ಯ ಚ ವೇಲ್ಲಿತಾ ॥
ಪರ್ಪಟಾಸ್ತೇ ಸದಾಂಗಾರಭೃಷ್ಟಾಃ ಪರಮರೋಚಕಾಃ ।
ಹಪ್ಪಳದ ಗುಣ ದೀಪನಾಃ ಪಾಚನಾ ರೂಕ್ಷಾ ಗುರವಃ ಕಿಂಚಿದೀರಿತಾಃ ॥
ಮೌದ್ಗಾಶ್ಚ ತದ್ಗುಣಾಃ ಪ್ರೋಕ್ತಾ ವಿಶೇಷಾಲ್ಲಘವೋ ಹಿತಾಃ ।
ಚಣಕಸ್ಯ ಗುಣೈರ್ಯುಕ್ತಾಃ ಪರ್ಪಟಾಶ್ಚಣಕೋದ್ಭವಾಃ ॥
ಸ್ನೇಹಭೃಷ್ಟಾಸ್ತು ತೇ ಸರ್ವೇ ಭವೇಯುರ್ಮಧ್ಯಮಾ ಗುಣೈಃ ॥
(ಭಾ. ಪ್ರ 162.)

ಉದ್ದಿನ ಹಿಟ್ಟಿನಿಂದ, ಹಿಂಗು, ಅರಸಿನ, ಉಪ್ಪು, ಜೀರಿಗೆ, ಹಪ್ಪಳದ ಖಾರ, ಇವುಗಳನ್ನು ಕೂಡಿಸಿಕೊಂಡು. ಲಟಿಸಿ ತೆಳ್ಳಗೆ ಮಾಡಿದ ಹಪ್ಪಳವು, ಕೆಂಡದಲ್ಲಿ ಸುಟ್ಟುಕೊಂಡರೆ, ಅತಿ ರುಚಿಕರ, ಅಗ್ನಿದೀಪನಕಾರಿ, ಪಾಚನಕಾರಿ, ರೂಕ್ಷ ಮತ್ತು ಸ್ವಲ್ಪ ಗುರು. ಹೆಸರುಹಿಟ್ಟಿನಿಂದ ಮಾಡಿದ ಹಪ್ಪಳವು ಅದೇ ಗುಣವುಳ್ಳದ್ದು, ಆದರೆ ಲಘು ಕಡಲೆ ಹಿಟ್ಟಿನಿಂದ ಮಾಡಿದ ಹಪ್ಪಳವು ಕಡಲೆಯ ಗುಣವುಳ್ಳದ್ದಾಗಿರುತ್ತದೆ. ಆದರೆ ಆ ಎಲ್ಲಾ ಹಪ್ಪಳಗಳನ್ನು ಎಣ್ಣೆ ತುಪ್ಪಗಳಲ್ಲಿ ಕರಿದರೆ, ಅವುಗಳ ಗುಣಗಳು ಮಧ್ಯಮವಾಗುತ್ತವೆ.

43. ಏಷ್ವಂಘ್ರಿನಃ ಸ್ಮೃತಾಃ ಸರ್ವೇ ವಟಕಾ ವಾತಕೋಪನಾಃ ।
ವಡೆ ಸಂಡಿಗೆಗಳ ಗುಣ ಸಿಂಡಾಕೀ ವಾತಲಾ ಸಾಂದ್ರಾ ರುಚಿಷ್ಯಾನಲದೀಪನೀ ॥
(ಸು. 221.)

ಎಲ್ಲಾ ವಡೆಗಳು ವಾತಪ್ರಕೋಪನ ಮಾಡುವವು ಮತ್ತು ಹೊಟ್ಟೆ ಬಿಗಿಯುವ ಗುಣವುಳ್ಳವು, ಸಂಡಿಗೆಗಳು ವಾತವೃದ್ಧಿಕರ, ಆದರೆ ಮೃದು, ರುಚಿಕರ ಮತ್ತು ಅಗ್ನಿದೀಪನ ಮಾಡತಕ್ಕಂಥವು.

ಇದರಾ 'ಸಾಂದ್ರಾ' ಎಂಬಲ್ಲಿ 'ಸಾದ್ರಾ' ಎಂಬ ಪಾಠಾಂತರ ಉಂಟು ಆಗ್ಗೆ ಒಣಸಂಡಿಗೆ ವಾತಲ ಮತ್ತು ಹಸಿ ಸಂಡಿಗೆ ಅಗ್ನಿದೀಪಕಾರಿ ಎಂತ ಅರ್ಥವಾಗುತ್ತದೆ ನಾನಾ ವಿಧದ ವಡೆ ಮಾಡುವ ಕ್ರಮ ಮತ್ತು ಮಜ್ಜಿಗೆ ಇತ್ಯಾದಿಯಲ್ಲಿ ನೆನೆಸಿದ ವಡೆಯ ಗುಣವಿಶೇಷಗಳು ಭಾ ಪ್ರ ದಲ್ಲಿ ಹೇಳಲ್ಪಟ್ಟವೆ (ಪು 162-63)

44. ಸಾಮುದ್ರಂ ಮಧುರಂ ಪಾಕೇ ನಾತ್ಯುಷ್ಣಮವಿದಾಹಿ ಚ ।
ಸಮುದ್ರದ ಉಪ್ಪಿನ ಗುಣ ಭೇದನಂ ಸ್ನಿಗ್ಧವಿಷಚ್ಚ ಶೂಲಘ್ನಂ ನಾತಿಪಿತ್ತಲಂ ॥
(ಸು. 222.)

ಸಮುದ್ರದುಪ್ಪು ಪಾಕದಲ್ಲಿ ಸೀ, ಅಲ್ಪವಾಗಿ ಸ್ನಿಗ್ಧ, ಸ್ವಲ್ಪ ಉಷ್ಣವಾದರೂ ಉರಿಯನ್ನುಂಟುಮಾಡತಕ್ಕಂಥಾದ್ದಲ್ಲ, ಭೇದಿಗುಣವುಳ್ಳದ್ದು, ಸ್ವಲ್ಪ ಪಿತ್ತಕಾರಿ ಮತ್ತು ಶೂಲೆಯನ್ನು ನಾಶಮಾಡತಕ್ಕಂಥಾದ್ದು.

45. ಚಕ್ಷುಷ್ಯಂ ಸೈಂಧವಂ ಹೃದ್ಯಂ ರುಚ್ಯಂ ಲಘ್ವಗ್ನಿದೀಪನಂ ।
ಸೈಂಧವ ಲವಣದ ಗುಣ ಸ್ನಿಗ್ಧಂ ಸಮಧುರಂ ವೃಷ್ಯಂ ಶೀತಂ ದೋಷಘ್ನಮುತ್ತಮಂ ॥
(ಸು. 222.)

ಸೈಂಧವಲವಣ (ಸಿಂಧುಪ್ಪು) ಕಣ್ಣಿಗೆ ಹಿತ, ಮನೋಹರ, ರುಚಿಕರ, ಲಘು, ಅಗ್ನಿ ದೀಪನಕಾರಿ, ಸ್ನಿಗ್ಧ, ಸೀರಸಮಿಶ್ರವುಳ್ಳದ್ದು, ಶೀತ, ವೃಷ್ಯ, ಎಲ್ಲಾ ದೋಷಗಳನ್ನೂ ಪರಿಹರಿಸ ತಕ್ಕಂಥಾದ್ದು ಮತ್ತು ಉತ್ತಮವಾದದ್ದು.

46. ಅಮ್ಲಿಕಾಮ್ಲಾ ಗುರುರ್ವಾತಹರೀ ಪಿತ್ತಕಫಾಸ್ರಕೃತ್ ।
ಹುಣಸೆ ಕಾಯಿ ಮತ್ತು ಹಣ್ಣಿನ ಗುಣ ಪಕ್ವಾ ತು ದೀಪನೀ ರೂಕ್ಷಾ ಸರೋಷ್ಣಾ ಕಫವಾತಜಿತ್ ॥
(ಭಾ. ಪ್ರ. 128)

ಹುಣಸೆಕಾಯಿ ಹುಳಿ, ಗುರು, ವಾತಹರ, ಮತ್ತು ಪಿತ್ತ-ಕಫ-ರಕ್ತವಿಕಾರಗಳನ್ನುಂಟು ಮಾಡುತ್ತದೆ. ಹಣ್ಣಾದದ್ದಾದರೆ, ಉಷ್ಣ, ರೂಕ್ಷ, ಅಗ್ನಿದೀಪನಕಾರಿ, ಸರ ಮತ್ತು ಕಫ ವಾತವನ್ನು ಜಯಿಸತಕ್ಕಂಥಾದ್ದು.

47. ಸ್ವಾದುಪಾಕ್ಯಾರ್ದ್ರಮರಿಚಂ ಗುರು ಶ್ಲೇಷ್ಮಪ್ರಸೇಕಿ ಚ ।
ಕಟೂಷ್ಣಂ ಲಘು ತಚ್ಚುಷ್ಕಮವೃಷ್ಯಂ ಕಫವಾತಜಿತ್ ॥
ಕಾಳುಮೆಣಸಿನ ಗುಣ ನಾತ್ಯುಷ್ಣಂ ನಾತಿಶೀತಂ ಚ ವೀರ್ಯತೋ ಮರಿಚಂ ಸಿತಂ ।
ಗುಣವನ್ಮರಿಚೇಭ್ಯಶ್ಚ ಚಕ್ಷುಷ್ಯಂ ಚ ವಿಶೇಷತಃ ॥ (ಸು. 214.)

ಹಸಿದಾದ ಕಾಳುಮೆಣಸು ಗುರು, ಸ್ವಾದುಪಾಕವುಳ್ಳದ್ದು ಮತ್ತು ಕಫವನ್ನು ಸುರಿಸ ತಕ್ಕಂಥಾದ್ದು. ಒಣಗಿದ್ದು ಖಾರ, ಉಷ್ಣ, ಲಘು, ಕಫವಾತಹರ ಮತ್ತು ವೃಷ್ಯವಲ್ಲದ್ದು. ಬಿಳೇ (ಅಥವಾ ಬೋಳು) ಕಾಳುಮೆಣಸು ವೀರ್ಯದಲ್ಲಿ ಅತಿಶೀತವಾಗಲಿ ಅತ್ಯುಷ್ಣ ವಾಗಲಿ ಅಲ್ಲದ್ದು, ವಿಶೇಷವಾಗಿ ಕಣ್ಣಿಗೆ ಹಿತವಾದದ್ದು ಮತ್ತು ಬೇರೆ ಮೆಣಸುಗಳಿಗಿಂತ ಹೆಚ್ಚು ಗುಣವುಳ್ಳದ್ದಾಗಿರುತ್ತದೆ

ಪರಾ ಬಿಳೇ ಮೆಣಸು ಎಂಬದು ನುಗ್ಗೆಬೀಜ ಎಂತ ನಿ ಸಂ ವ್ಯಾ ಆ ದೇತದಲ್ಲಿ ಮೆಣಸಿನ ಕಾಳನ್ನು ಮೇಲಿನ ಸಿಪ್ಪೆ ತೆಗೆದು ಬಿಳಿಗೆ ಮಾಡುವ ಕ್ರಮ ಇಲ್ಲ ಎಂಬದು ಸ್ಪಷ್ಟ

48. ನಾಗರಂ ಕಫವಾತಘ್ನಂ ವಿಪಾಕೇ ಮಧುರಂ ಕಟು ।
ವೃಷ್ಯೋಷ್ಣಂ ರೋಚನಂ ಹೃದ್ಯಂ ಸಸ್ನೇಹಂ ಲಘು ದೀಪನಂ ॥
ಶುಂಠಿಯ ಗುಣ ಕಫಾನಿಲಹರಂ ಸ್ವಯ್ಯಂ ವಿಬಂಧಾನಾಹಶೂಲನುತ್ ।
ಕಟೂಷ್ಣಂ ರೋಚನಂ ಹೃದ್ಯಂ ವೃಷ್ಯಂ ಚೈವಾರ್ದ್ರಕಂ ಸ್ಮೃತಂ ॥
(ಸು. 214.)

ಒಣ ಶುಂಠಿಯು ಖಾರ, ವಿಪಾಕದಲ್ಲಿ ಸೀ, ಉಷ್ಣ, ರುಚಿಕರ, ಮನೋಹರವಾದದ್ದು, ವೃಷ್ಯ, ಕಫವಾತಹರ, ಸ್ನೇಹವುಳ್ಳದ್ದು, ಲಘು ಮತ್ತು ಅಗ್ನಿದೀಪನಕರ. ಹಸಿಶುಂಠಿ

ಯಲ್ಲಿ ಆ ಗುಣಗಳು ಇರುವದು ಮಾತ್ರವಲ್ಲದೆ, ಸ್ವರಕೊಡುವ ಮತ್ತು ಮಲಬದ್ಧತೆಯನ್ನೂ, ಅನಾಹವನ್ನೂ, ಶೂಲೆಯನ್ನೂ ಪರಿಹರಿಸುವ ಗುಣಗಳು ಇವೆ ಎಂತ ತಿಳಿದಿದ್ದಾರೆ.

49. ತೇಷಾಂ ಗುರ್ವೀ ಸ್ವಾದುಶೀತಾ ಪಿಪ್ಪಲ್ಯಾದ್ರ್ಯಾ ಕಫಾವಹಾ ।
ಹಿಪ್ಪಲಿಯ ಗುಣ ಶುಷ್ಕಾ ಕಫಾನಿಲಘ್ನೀ ಸಾ ವೃಷ್ಯಾ ಪಿತ್ತಾವಿರೋಧಿನೀ ॥
(ಸು. 214.)

ಖಾರ ಪದಾರ್ಥಗಳೊಳಗೆ ಹಸಿ ಹಿಪ್ಪಲಿಯು ಗುರು, ಸ್ವಾದು, ಶೀತ, ಮತ್ತು ಕಫ ವೃದ್ಧಿಕರ. ಒಣಗಿದ ಹಿಪ್ಪಲಿಯು ಕಫವಾಯುಹರ. ಪಿತ್ತಕ್ಕೆ ವಿರೋಧವಿಲ್ಲದ್ದು ಮತ್ತು ವೃಷ್ಯ ಆಗಿರುತ್ತದೆ

50. ಲಘೂಷ್ಣಂ ಪಾಚನಂ ಹಿಂಗು ದೀಪನಂ ಕಫವಾತಜಿತ್ ।
ಹಿಂಗಿನ ಗುಣ ಕಟು ಸ್ನಿಗ್ಧಂ ಸರಂ ತೀಕ್ಷ್ಣಂ ಶೂಲಾಜೀರ್ಣಾಬಂಧನುತ್ ॥
(ಸು. 214)

ಹಿಂಗು ಲಘು, ಉಷ್ಣ, ಖಾರ, ಸ್ನಿಗ್ಧ, ತೀಕ್ಷ್ಣ, ಸರ, ದೀಪನ, ಪಾಚನ, ಕಫವಾತಹರ ಮತ್ತು ಶೂಲೆಯನ್ನೂ ಅಜೀರ್ಣವನ್ನೂ, ಮಲಬದ್ಧತೆಯನ್ನೂ ಪರಿಹರಿಸತಕ್ಕಂಥಾದ್ದು.

51. ತೀಕ್ಷ್ಣೋಷ್ಣಂ ಕಟುಕಂ ಪಾಕೇ ರುಚ್ಯಂ ಪಿತ್ತಾಗ್ನಿವರ್ಧನಂ ।
ಜೀರಿಗೆಯ ಗುಣ ಕಟು ಶ್ಲೇಷ್ಮಾನಿಲಹರಂ ಗಂಧಾಢ್ಯಂ ಜೀರಕದ್ವಯಂ ॥ (ಸು 214.)

ಜೀರಿಗೆಗಳೆರಡು—(ಜೀರಿಗೆ ಮತ್ತು ಕರಿಜೀರಿಗೆ*) ತೀಕ್ಷ್ಣ, ಉಷ್ಣ, ಪಾಕದಲ್ಲಿ ಕಟು, ರುಚಿಕರ. ಕಟುರುಚಿಯುಳ್ಳವು, ಪಿತ್ತವನ್ನೂ ಅಗ್ನಿಯನ್ನೂ ವೃದ್ಧಿಮಾಡತಕ್ಕಂಥವು, ಕಫವಾತವನ್ನು ಪರಿಹರಿಸತಕ್ಕಂಥವು ಮತ್ತು ಪರಿಮಳವುಳ್ಳವು

*ಇದಾ ಬಿಳೀದು ಮತ್ತು ಅರಸಿನ ವರ್ಣದ್ದು ಎಂತ ಸಿ ಸಂ ವ್ಯಾ

52 ಭಕ್ಷ್ಯವ್ಯಂಜನಭೋಜ್ಯೇಷು ವಿವಿಧೇಷ್ವವಚಾರಿತಾ ।
ಆರ್ದ್ರಾ ಕುಸ್ತುಂಬರೀ ಕುರ್ಯಾತ್ ಸ್ವಾದುಸೌಗಂಧ್ಯಹೃದ್ಯತಾಂ ॥
ಕೊತ್ತಂಬರಿಯ ಗುಣ ಸಾ ಶುಷ್ಕಾ ಮಧುರಾ ಪಾಕೇ ಸ್ನಿಗ್ಧಾ ತೃಟ್‌ದಾಹನಾಶಿನೀ ।
ದೋಷಘ್ನೀ ಕಟುಕಾ ಕಿಂಚಿತ್ತಿಕ್ತಾ ಸ್ರೋತೋವಿಶೋಧನೀ ॥
(ಸು. 214-15.)

ಹಸಿ ಕೊತ್ತಂಬರಿಯು ನಾನಾ ವಿಧವಾದ ಮೇಲೋಗರ ಭಕ್ಷಾದಿಗಳಲ್ಲಿ ಉಪಯೋಗಿಸಲ್ಪಟ್ಟಲ್ಲಿ ರುಚಿ, ಪರಿಮಳ ಮತ್ತು ಮನೋಹರತ್ವವನ್ನು ಕೊಡುತ್ತದೆ. ಅದು ಒಣಗಿದ್ದಾದರೆ, ಪಾಕದಲ್ಲಿ ಸೀ. ಸ್ನಿಗ್ಧ. ಕಿಂಚಿತ್ ಕಹಿ ಮಿಶ್ರವಾಗಿ ಖಾರವಾಗಿದ್ದು, ಬಾಯಾರಿಕೆಯನ್ನೂ, ಉರಿಯನ್ನೂ, ಮೂರು ದೋಷಗಳನ್ನೂ ನಾಶಮಾಡುತ್ತದೆ ಮತ್ತು ಸ್ರೋತಸ್ಸುಗಳನ್ನು ಶೋಧಿಸತಕ್ಕಂಥಾದ್ದಾಗಿರುತ್ತದೆ.

ಧಾನ್ಯಕಂ ತುವರಂ ಸ್ನಿಗ್ಧಮವೃಷ್ಯಂ ಮೂತ್ರಲಂ ಲಘು ।
ತಿಕ್ತಂ ಕಟೂಷ್ಣವೀರ್ಯಂ ಚ ದೀಪನಂ ಪಾಚನಂ ಸ್ಮೃತಂ ॥
ಜ್ವರಘ್ನಂ ರೋಚಕಂ ಗ್ರಾಹಿ ಸ್ವಾದುಪಾಕಿ ತ್ರಿದೋಷನುತ್ ।
ತೃಷ್ಣಾದಾಹವಮಿಶ್ವಾಸಕಾಸಕಾರ್ಶ್ಯಕೃಮಿಪ್ರಣುತ್ ॥
ಆರ್ದ್ರಂ ತು ತದ್ಗುಣಂ ಸ್ವಾದು ವಿಶೇಷಾತ್ಪಿತ್ತನಾಶಿ ತತ್ ॥ (ಭಾ ಪ್ರ 82.)

ಕೊತ್ತಂಬರಿಯು ಜೊಗರು, ಸ್ನಿಗ್ಧ, ಲಘು, ಮೂತ್ರಕಾರಿ, ವೃಷ್ಯವಲ್ಲದ್ದು, ಕಹಿ, ಖಾರ, ಉಷ್ಣವೀರ್ಯವುಳ್ಳದ್ದು, ದೀಪನಪಾಚನಗುಣವುಳ್ಳದ್ದು, ರುಚಿಕರ, ಗ್ರಾಹಿ, ಪಾಕದಲ್ಲಿ ಸ್ವಾದು, ಜ್ವರಹರ, ತ್ರಿದೋಷಹರ ಮತ್ತು ಬಾಯಾರಿಕೆ, ಉರಿ, ವಾಂತಿ, ಉಬ್ಬಸ, ಕೆಮ್ಮು, ಕೃಶತೆ ಕ್ರಿಮಿ, ಈ ದೋಷಗಳನ್ನು ಜಯಿಸತಕ್ಕಂಥಾದ್ದು. ಹಸಿಯಾದದ್ದು ಅದೇ ಗುಣಗಳುಳ್ಳದ್ದು, ಸ್ವಾದು ಮತ್ತು ವಿಶೇಷವಾಗಿ ಪಿತ್ತವನ್ನು ನಾಶಮಾಡತಕ್ಕಂಥಾದ್ದು ಆಗಿರುತ್ತದೆ.

53. ಪಾಕೇ ರಸೇ ಚಾಪಿ ಕಟುಃ ಪ್ರದಿಷ್ಟಃ ಸಿದ್ಧಾರ್ಥಕಃ ಶೋಣಿತಪಿತ್ತಕೋಪೀ ।
ಎರಡು ಜಾತಿ ಸಾಸಿವೆಗಳ ಗುಣ ತೀಕ್ಷ್ಣೋಷ್ಣರೂಕ್ಷಃ ಕಫಮಾರುತಘ್ನಸ್ತಥಾಗುಣಶ್ಚಾಸಿತಸರ್ಷಪೋಽಪಿ ॥
(ಸು. 198)

ಬಿಳೀ ಸಾಸಿವೆಯು ರಸದಲ್ಲಿಯೂ ಪಾಕದಲ್ಲಿಯೂ ಖಾರ ಮತ್ತು ರಕ್ತಪಿತ್ತ ಪ್ರಕೋಪಕರ ಎಂತ ಹೇಳಲ್ಪಟ್ಟಿದೆ, ತೀಕ್ಷ್ಣ, ಉಷ್ಣ, ರೂಕ್ಷ ಮತ್ತು ಕಫವಾತಹರ ಕೆಂಪು ಅಥವಾ ಕರೀ ಸಾಸಿವೆಯು ಅದೇ ಗುಣವುಳ್ಳದ್ದು ಆಗಿರುತ್ತದೆ

54. ನಾರಿಕೇರಫಲಂ ಶೀತಂ ದುರ್ಜರಂ ವಸ್ತಿಶೋಧನಂ ।
ಎಷ್ಟಂಭೆ ಬೃಂಹಣಂ ಬಲ್ಯಂ ವಾತಪಿತ್ತಾಸ್ರದಾಹನುತ್ ॥
ತೆಂಗಿನಕಾಯಿಯ ಮತ್ತು ನೀರಿನ ಗುಣ ವಿಶೇಷತಃ ಕೋಮಲನಾರಿಕೇರಂ ನಿಹಂತಿ ಪಿತ್ತಜ್ವರಪಿತ್ತದೋಷಾನ್ ।
ತದೇವ ಜೀರ್ಣಂ ಗುರುಪಿತ್ತಕಾರಿ ಎದಾಹಿ ವಿಷ್ಟಂಭ ಮತಂ ಭಿಷಗ್ಭಿಃ ॥
ತಸ್ಯಾಂಭಃ ಶೀತಲಂ ಹೃದ್ಯಂ ದೀಪನಂ ಶುಕ್ರಲಂ ಲಘು ।
ಪಿಪಾಸಾಪಿತ್ತಜಿತ್ಸ್ವಾದುವಸ್ತಿಶುದ್ಧಿಕರಂ ಪರಂ ॥ (ಭಾ. ಪ್ರ. 126)

ತೆಂಗಿನಕಾಯಿಯು ಶೀತ, ಜೀರ್ಣಕ್ಕೆ ಕಷ್ಟವಾದದ್ದು, ಮೂತ್ರ ಶೋಧನೆಮಾಡತಕ್ಕಂಥಾದ್ದು, ವಿಶೇಷವಾಗಿ ಸ್ತಂಭನಗುಣವುಳ್ಳದ್ದು, ಪುಷ್ಟಿಕರ, ಬಲಕರ, ವಾತ್ತಪಿತ್ತ, ರಕ್ತ, ಉರಿ ಸಹ ಶಮನಮಾಡತಕ್ಕಂಥಾದ್ದು ಆಗಿರುತ್ತದೆ. ವಿಶೇಷವಾಗಿ ಎಳೇದಾದ ತೆಂಗಿನಕಾಯಿಯು ಪಿತ್ತಜ್ವರವನ್ನೂ, ಪಿತ್ತದೋಷಗಳನ್ನೂ ಪರಿಹರಿಸುತ್ತದೆ. ಆದರೆ ಬೆಳೆದು ಒಣಗಿದ ಕಾಯಿಯು ಗುರು, ಪಿತ್ತಕಾರಿ ಮತ್ತು ಉರಿಯನ್ನೂ, ವಿಷ್ಟಂಭನವನ್ನೂ ಉಂಟುಮಾಡತಕ್ಕಂಥಾದ್ದೆಂತ ವೈದ್ಯರು ನಿಶ್ಚಯಿಸಿದ್ದಾರೆ ಅದರ (ಸೀಯಾಳದ) ನೀರು ಶೀತಲ, ಮನೋಹರವಾದದ್ದು, ಲಘು, ಅಗ್ನಿದೀಪನಕಾರಿ, ಶುಕ್ರವನ್ನು ವೃದ್ಧಿಮಾಡತಕ್ಕಂಥಾದ್ದು, ಬಾಯಾರಿಕೆಯನ್ನೂ ಪಿತ್ತವನ್ನೂ ಪರಿಹರಿಸತಕ್ಕಂಥಾದ್ದು, ಸ್ವಾದು ಮತ್ತು ಮೂತ್ರಾಶಯದ ಶುದ್ಧಿಮಾಡುವದಕ್ಕೆ ಉತ್ತಮವಾದದ್ದು ಆಗಿರುತ್ತದೆ.

55. ಮೇಥಿಕಾ ವಾತಶಮನೀ ಶ್ಲೇಷ್ಮಘ್ನೀ ಜ್ವರನಾಶಿನೀ ।
ಮೆಂತೆಯ ಗುಣ (ಭಾ. ಪ್ರ. 82.)

ಮೆಂತೆಯು ವಾತಶಮನ ಮಾಡುತ್ತದೆ ಮತ್ತು ಕಫವನ್ನೂ ಜ್ವರವನ್ನೂ ನಾಶಮಾಡುತ್ತದೆ.

ಮೇಧಿಕಾ ಕಟುರುಷ್ಣಾ ಚ ರಕ್ತಪಿತ್ತಪ್ರಕೋಪಿನೀ ।
ಅರೋಚಕಹರಾ ದೀಪ್ತಿಕರೀ ವಾತಪ್ರಣಾಶಿನೀ ॥ (ಧ. ನಿ. 231.)

ಮೆಂತೆಯು ಖಾರ, ಉಷ್ಣ, ಅರುಚಿಹರ, ಅಗ್ನಿದೀಪನಕಾರಿ ಮತ್ತು ವಾತನಾಶನವನ್ನು ಮಾಡುತ್ತದೆ; ಆದರೆ ರಕ್ತಪಿತ್ತವನ್ನು ಪ್ರಕೋಪಿಸತಕ್ಕಂಥಾದ್ದಾಗಿರುತ್ತದೆ.

56. ತೃಷ್ಣಾಶೂಲಕಫೋತ್ಕ್ಲೇಶಛರ್ದಿಶ್ವಾಸನಿವಾರಣಂ ।
ಲಿಂಬೆಹಣ್ಣಿನ ಗುಣ ವಾತಶ್ಲೇಷ್ಮವಿಬಂಧಘ್ನಂ ಜಂಬೀರಂ ಗುರು ಪಿತ್ತಕೃತ್ ।
ಏರಾವತಂ ದನ್ತಶರಮಮ್ಲಂ ಶೋಣಿತಪಿತ್ತಕೃತ್ । (ಸು. 208-09)

ಲಿಂಬೆಹಣ್ಣು ಗುರು, ಪಿತ್ತಕಾರಿ, ಬಾಯಾರಿಕೆ, ಶೂಲೆ, ಕಫ, ಅನ್ನದ್ವೇಷ, ವಾಂತಿ, ಉಬ್ಬಸ, ಕಫವಾತ, ಮತ್ತು ಮಲಬದ್ಧತೆ, ಇವುಗಳನ್ನು ಪರಿಹರಿಸುತ್ತದೆ. ಗಜಲಿಂಬೆಯು ಹುಳಿ ಮತ್ತು ರಕ್ತಪಿತ್ತವನ್ನುಂಟುಮಾಡುವಂಥಾದ್ದು

ಇದಾ ಭಾ ಪ್ರ ದಲ್ಲಿ ಜಂಬೀರದಲ್ಲಿ ಸಣ್ಣದು, ದೊಡ್ಡದೆಂಬ ಭೇದಗಳಿಲ್ಲದೆ, ಸಿಂಬೂಕ ಎಂಬದು ಬೇರೆಯಾಗಿ ಕಾಣಿಸಿಯದೆ ಬೃ ನಿ ನಲ್ಲಿ ಜಂಬೀರವು ದೊಡ್ಡುಳಿ ಎಂತಲೂ, ಸಿಂಬೂಕವು ಲಂಬಿ ಎಂತಲೂ, ಕಾಣಿಸಲ್ಪಟ್ಟಿದೆ ಸುಶ್ರುತನ ಹುಳಿಹಣ್ಣುಗಳ ಪಟ್ಟಿಯಲ್ಲಿ ಸಿಂಬೂಕ ಬೇರೆ ಕಾಣುವದಿಲ್ಲ ಇಲ್ಲಿ ಜಂಬೀರ ಎಂಬದು ಲಿಂಬೆ ಎಂಬದರಲ್ಲಿ ಸಂದೇಹ ಕಾಣುವದಿಲ್ಲ

57. ಪಿತ್ತಘ್ನಂ ತೇಷು ಕುಷ್ಮಾಂಡಂ ಬಾಲಂ ಮಧ್ಯಂ ಕಫಾವಹಂ ।
ಬೂದಿಕುಂಬಳ ಕಾಯಿಯ ಗುಣ ಪಕ್ವಂ ಲಘೂಷ್ಣಂ ಸಕ್ಷಾರಂ ದೀಪನಂ ವಸ್ತಿಶೋಧನಂ ॥
ಸರ್ವದೋಷಹರಂ ಹೃದ್ಯಂ ಪಥ್ಯಂ ಚೇತೋವಿಕಾರಿಣಾಂ । (ಸು. 213.)

ಎಳೇ ಬೂದಿಕುಂಬಳಕಾಯಿಯು ಪಿತ್ತವನ್ನು ನಾಶಮಾಡುತ್ತದೆ, ಅರ್ಧ ಬೆಳೆದದ್ದು ಕಫ ವೃದ್ಧಿಮಾಡುತ್ತದೆ; ಪಕ್ವವಾದದ್ದು ಲಘು, ಉಷ್ಣ, ಕ್ಷಾರವುಳ್ಳದ್ದು, ಅಗ್ನಿದೀಪನಕರ, ಮೂತ್ರಾಶಯವನ್ನು ಶೋಧಿಸತಕ್ಕಂಥಾದ್ದು, ಸರ್ವದೋಷಹರ, ಮನೋಹರವಾದದ್ದು ಮತ್ತು ಮನೋವಿಕಾರವುಳ್ಳವರಿಗೆ ಪಥ್ಯವಾದದ್ದು ಆಗಿರುತ್ತದೆ.

58. ಅಲಾಬುರ್ಭಿನ್ನವಿಟ್ಕಾ ತು ರೂಕ್ಷಾ ಗುರ್ವ್ಯತಿಶೀತಲಾ ।
ಸೋರೆಕಾಯಿ ಗುಣ ತಿಕ್ತಾಲಾಬುರಹೃದ್ಯಾ ತು ವಾಮನೀ ವಾತಪಿತ್ತಜಿತ್ ॥ (ಸು. 213.)

ಸೀ ಸೋರೆಕಾಯಿಯು ರೂಕ್ಷ, ಗುರು, ಶೀತ ಮತ್ತು ಮಲವನ್ನು ಸಡಿಲಿಸುತ್ತದೆ. ಕಹಿ ಸೋರೆಯು ವಾಂತಿಮಾಡಿಸುವ ಗುಣವುಳ್ಳದ್ದು, ಹಿತವಲ್ಲದ್ದು ಮತ್ತು ವಾತಪಿತ್ತಗಳನ್ನು ಜಯಿಸತಕ್ಕಂಥಾದ್ದು ಆಗಿರುತ್ತದೆ.

59. ಉರ್ವಾರುಕಂ ಪಿತ್ತಹರಂ ಸುಶೀತಲಂ
ಮೂತ್ರಾಮಯಘ್ನಂ ಮಧುರಂ ರುಚಿಪ್ರದಂ ।

ಸವುತೆಕಾಯಿಯ ಗುಣ

ಸಂತಾಪಮೂರ್ಚ್ಛಾಪಹರಂ ಸುತೃಷ್ತಿದಂ
ವಾತಪ್ರಕೋಪಾಯ ಘನಂ ತು ಸೇವಿತಂ || (ಧ. ನಿ. 41.)

ಸವುತೆಕಾಯಿಯು ಪಿತ್ತಹರ, ಬಹಳ ಶೀತ, ಸೀ, ಗುರು, ರುಚಿಕರ, ತೃಪ್ತಿಕರ, ಮೂತ್ರ ರೋಗವನ್ನೂ, ಸಂತಾಪವನ್ನೂ, ಮೂರ್ಚ್ಛೆಯನ್ನೂ ಪರಿಹರಿಸುತ್ತದೆ.

ಪರಾ ಸವುತೆಕಾಯಿಯಲ್ಲಿ ಅನೇಕ ಜಾತಿಗಳಿವೆ ದೊಡ್ಡ ಜಾತಿದರಲ್ಲಿ ಎಳೇದು ಶೀತ, ಲಘು ರೂಕ್ಷ, ಅತಿಯಾಗಿ ಮೂತ್ರಕಾರಿ, ರಕ್ತಪಿತ್ತ ಮೂತ್ರಕೃಚ್ಛ್ರ, ರಕ್ತದೋಷ, ಇವುಗಳನ್ನು ಜಯಿಸತಕ್ಕಂಥಾದ್ದು, ಹಣ್ಣಾದರೆ ಉಷ್ಣ, ಅಗ್ನಿದೀಪನಕಾರಿ ಮತ್ತು ತ್ರಿದೋಷಪರ, ಮತ್ತು ಹಳೇದು ಉಷ್ಣ, ಪಿತ್ತಕರ ಮತ್ತು ಕಫವಾತವನ್ನು ನಾಶಮಾಡತಕ್ಕಂಥಾದ್ದು ಸಣ್ಣ ಜಾತಿದು ಶೀತ, ಕೆಮ್ಮು ಮತ್ತು ಪೀನಸ ಉಂಟುಮಾಡತಕ್ಕಂಥಾದ್ದು ಆದರೆ ಪಿತ್ತಹರ ಪಚನಕರ ಮತ್ತು ಅಧ್ಮಾನವಾಯುಗಳನ್ನು ಶಮನಮಾಡತಕ್ಕಂಥಾದ್ದು ಎಂತಲೂ ಮಳೆಗಾಲದಲ್ಲಿ ಬೆಳೆದ ಸವುತೆಕಾಯಿ ಒಳ್ಳೇದಲ್ಲ ಎಂತಲೂ ಹೇಳಿದ್ದು ಕಾಣುತ್ತದ (ಸಿ ರ)

ಪಡುವಲ ಕಾಯಿ, ಎಲೆ, ದಂಟು, ಬೇರಿನ ಗುಣಗಳು

60. ಪಟೋಲೀ ಸ್ವಾದು ಪಿತ್ತಘ್ನೀ ರುಚಿಕೃಜ್ಜ್ವರನಾಶಿನೀ |
ಬಲಪುಷ್ಟಿಕರೀ ಪಥ್ಯಾ ಜ್ಞೇಯಾ ದೀಪನಪಾಚನೀ ||
ಪಟೋಲಪತ್ರಂ ಪಿತ್ತಘ್ನಂ ನಾಲಂ ತಸ್ಯ ಕಫಾಪಹಂ |
ಫಲಂ ತ್ರಿದೋಷಶಮನಂ ಮೂಲಂ ಚಾಸ್ಯ ವಿರೇಚನಂ || (ರಾ ನಿ 17)

ಪಟೋಲಕಾಯಿ ಸೀ, ಪಿತ್ತನಾಶಕಾರಿ, ರುಚಿಕರ, ಜ್ವರಹರ. ದೀಪನಪಾಚನಗಳನ್ನು ಮಾಡತಕ್ಕಂಥಾದ್ದು, ಬಲಪುಷ್ಟಿಗಳನ್ನು ಕೊಡತಕ್ಕಂಥಾದ್ದು ಮತ್ತು ಪಥ್ಯವಾದದ್ದು. ಅದರ ಎಲೆಯು ವಿಶೇಷವಾಗಿ ಪಿತ್ತಹರ, ದಂಟು ಕಫಹರ, ಫಲ ತ್ರಿದೋಷಶಮನಕರ ಮತ್ತು ಬೇರು ವಿರೇಚನಕಾರಿ.

ಪರಾ ಈ ಗುಣಗಳಲ್ಲದ ವೃಷ್ಯ ಉಷ್ಣ ಸ್ನಿಗ್ಧಗುಣಗಳೂ, ಕೆಮ್ಮು, ರಕ್ತದೋಷ, ಜ್ವರ, ತ್ರಿದೋಷ ಮತ್ತು ಕ್ರಿಮಿ, ಇವುಗಳನ್ನು ನಾಶಮಾಡುವ ಗುಣವೂ ಇದೆ ಎಂತ ಭಾ ವ್ರ (ಪು 149) ಉದ್ದ ಜಾತಿದು ಕಟು, ವಿಷ್ಟಂಭಿ, ವಾತವೃದ್ಧಿಕರ, ಕಫಪ್ರಕೋಪಕರ, ಶೀತ ಮತ್ತು ಪೀವಿಕರ ಎಂತ ರಾಜವಲ್ಲಭ (ಪು 63)

ಹೀರೆಕಾಯಿಯ ಗುಣ

61. ಧಾರಾಕೋಶಾತಕೀ ಸ್ನಿಗ್ಧಾ ಮಧುರಾ ಕಫಪಿತ್ತನುತ್ |
ಈಷದ್ವಾತಕರೀ ಪಥ್ಯಾ ರುಚಿಕೃದ್ಬಲವೀರ್ಯದಾ || (ರಾ. ನಿ. 47.)

ಧಾರೆಹೀರೆಕಾಯಿಯು ಸ್ನಿಗ್ಧ, ಸೀ, ಕಫಪಿತ್ತಗಳನ್ನು ಶಮನಮಾಡತಕ್ಕಂಥಾದ್ದು, ರುಚಿಕರ, ಬಲವೀರ್ಯಗಳನ್ನು ಕೊಡತಕ್ಕಂಥಾದ್ದು ಮತ್ತು ಪಥ್ಯವಾದದ್ದು; ಆದರೆ ಸ್ವಲ್ಪ ವಾತ ಪ್ರಕೋಪನ ಮಾಡುತ್ತದೆ.

ತೊಂಡೆಕಾಯಿಯ ಗುಣ.

62. ಬಿಂಬೀಫಲಂ ಸ್ವಾದು ಶೀತಂ ಗುರು ಪಿತ್ತಾಸ್ರವಾತಜಿತ್ |
ಸ್ತಂಭನಂ ಲೇಖನಂ ರುಚ್ಯಂ ವಿಬಂಧಾಧ್ಮಾನಕಾರಕಂ ||
(ಭಾ. ಪ್ರ 149.)

ತೊಂಡೆಕಾಯಿಯು ಸ್ವಾದು, ಶೀತ, ಗುರು, ವಿಷ್ಟಂಭಿ, ಲೇಖನ, ರುಚಿಕರ, ರಕ್ತಪಿತ್ತವನ್ನೂ, ವಾತವನ್ನೂ, ಜಯಿಸತಕ್ಕಂಥಾದ್ದು ಮತ್ತು ಮಲಬದ್ಧತೆಯನ್ನೂ, ಹೊಟ್ಟೆಯುಬ್ಬರವನ್ನೂ ಉಂಟುಮಾಡತಕ್ಕಂಥಾದ್ದಾಗಿರುತ್ತದೆ.

ಬಿಂಬೀ ತು ಮಧುರಾ ಶೀತಾ ಪಿತ್ತಶ್ವಾಸಕಫಾಪಹಾ ।
ಅಸೃಗ್ಜ್ವರಹರಾ ರಮ್ಯಾ ಕಾಸಜಿದ್ಗ್ರಹಬಿಂಬಿಕಾ ॥ (ರಾ. ನಿ. 48)

(ಅದು) ಸೀ, ಶೀತ, ಮನೋಹರ ಮತ್ತು ಪಿತ್ತ, ಉಬ್ಬಸ, ಕಫ, ರಕ್ತದೋಷ, ಜ್ವರ, ಕೆಮ್ಮು, ಇವುಗಳನ್ನು ಶಮನಮಾಡುತ್ತದೆ

63. ವಾರ್ತಾಕೀ ಕಟುಕಾ ರುಚ್ಯಾ ಮಧುರಾ ಪಿತ್ತನಾಶಿನೀ ।
ಗುಳ್ಳದ ಕಾಯಿಯ ಗುಣ ಬಲಪುಷ್ಟಿಕರೀ ಹೃದ್ಯಾ ಗುರುರ್ವಾತೇಷು ನಿಂದಿತಾ ॥
(ರಾ. ನಿ. 26.)

ಗುಳ್ಳವು ಸೀ ಮತ್ತು ಖಾರರುಚಿಯುಳ್ಳದ್ದು, ರುಚಿಕರ, ಮನೋಹರವಾದದ್ದು, ಗುರು, ಪಿತ್ತನಾಶಕರ ಮತ್ತು ಬಲಪುಷ್ಟಿಗಳನ್ನು ಕೊಡುವಂಥಾದ್ದು, ಆದರೆ ವಾತರೋಗಗಳಲ್ಲಿ ಅಹಿತ ವೆಂದು ತಿಳಿಯಬೇಕು

64 ವೃಂತಾಕಂ ಸ್ವಾದು ತೀಕ್ಷ್ಣೋಷ್ಣಂ ಕಟುಪಾಕಮಪಿತ್ತಲಂ ।
ಜ್ವರವಾತಬಲಾಸಘ್ನಂ ದೀಪನಂ ಶುಕ್ರಲಂ ಲಘು ॥
ಬದನೆಕಾಯಿಯ ಗುಣ ತದ್ಬಾಲಂ ಕಫಪಿತ್ತಘ್ನಂ ವೃದ್ಧಂ ಪಿತ್ತಕರಂ ಲಘು ।
ವೃಂತಾಕಂ ಪಿತ್ತಲಂ ಕಿಂಚಿದಂಗಾರಪರಿಪಾಚಿತಂ ॥
ಕಫಮೇದೋನಿಲಾಮಘ್ನಮತ್ಯರ್ಧಂ ಲಘು ದೀಪನಂ ।
ತದೇವ ಹಿ ಗುರು ಸ್ನಿಗ್ಧಂ ಸತೈಲಂ ಲವಣಾನ್ವಿತಂ ॥ (ಭಾ. ಪ್ರ 150)

ಬದನೆಕಾಯಿಯು ಸ್ವಾದು, ತೀಕ್ಷ್ಣ, ಉಷ್ಣ, ಪಾಕದಲ್ಲಿ ಕಟು, ಪಿತ್ತಕಾರಿಯಲ್ಲದ್ದು, ಲಘು, ದೀಪನಕಾರಿ, ಶುಕ್ರವೃದ್ಧಿಕರ ಮತ್ತು ಜ್ವರವನ್ನೂ, ವಾತವನ್ನೂ, ಕಫವನ್ನೂ ನಾಶ ಮಾಡತಕ್ಕಂಥಾದ್ದು ಅದು ಎಳೇದಾದರೆ, ಕಫಪಿತ್ತಗಳನ್ನು ನಾಶಮಾಡುತ್ತದೆ ಬಲಿತರೆ ಲಘುವಾಗಿ ಪಿತ್ತವೃದ್ಧಿಮಾಡುತ್ತದೆ. ಕೆಂಡದಲ್ಲಿ ಸುಟ್ಟ ಬದನೆಯು ಕಿಂಚಿತ್ತಾಗಿ ಪಿತ್ತವೃದ್ಧಿ ಕರ, ಕಫವನ್ನೂ, ಮೇದಸ್ಸನ್ನೂ, ವಾಯುವನ್ನೂ, ಆಮವನ್ನೂ ನಾಶಮಾಡತಕ್ಕಂಥಾದ್ದು, ಲಘು ಮತ್ತು ಅಗ್ನಿದೀಪನಕಾರಿ ಅದಕ್ಕೆ ಎಣ್ಣೆ ಮತ್ತು ಉಪ್ಪು ಕೂಡಿದರೆ, ಅದು ಗುರು ಮತ್ತು ಸ್ನಿಗ್ಧಗುಣವುಳ್ಳದ್ದು ಆಗುತ್ತದೆ

65 ಕಾರವೇಲ್ಲಂ ಹಿಮಂ ಭೇದಿ ಲಘು ತಿಕ್ತಮವಾತಲಂ ।
ಹಾಗಲಕಾಯಿಯ ಗುಣ ಜ್ವರಪಿತ್ತಕಫಾಸ್ರಘ್ನಂ ಪಾಂಡುಮೇಹಕೃಮಿಾನ್ ಹರೇತ್ ॥
(ಭಾ ಪ್ರ. 149.)

ಹಾಗಲಕಾಯಿಯು ಶೀತ, ಲಘು, ಕಹಿ, ಅತಿಯಾಗಿ ವಾತಕರವಲ್ಲದ್ದು, ಭೇದಿಮಾಡಿಸ ತಕ್ಕಂಥಾದ್ದು ಮತ್ತು ಜ್ವರ, ಪಿತ್ತ, ಕಫ, ರಕ್ತ, ಪಾಂಡು, ಮೇಹ, ಕ್ರಿಮಿ ಈ ದೋಷ ಗಳನ್ನು ಪರಿಹರಿಸುತ್ತದೆ.

66 ಸೂರಣೋ ದೀಪನೋ ರೂಕ್ಷಃ ಕಷಾಯಃ ಕಂಡುಕೃತ್ಕಟುಃ ।
ವಿಷ್ಟಂಭೀ ವಿಶದೋ ರುಚ್ಯಃ ಕಫಾರ್ಶಃಕೃಂತನೋ ಲಘುಃ ॥
ಸೂರಣದ ಗಡ್ಡೆಯ ಗುಣ ವಿಶೇಷಾದರ್ಶನೇ ಪಥ್ಯಃ ಪ್ಲೀಹಗುಲ್ಮವಿನಾಶನಃ ।
ಸರ್ವೇಷಾಂ ಕಂದಶಾಕಾನಾಂ ಸೂರಣಃ ಶ್ರೇಷ್ಠ ಉಚ್ಯತೇ ॥
ದದ್ರ್ವಾಣಾಂ ಕುಷ್ಠಿನಾಂ ರಕ್ತಪಿತ್ತಿನಾಂ ನ ಹಿತೋ ಹಿ ಸಃ ॥ (ಭಾ ಪ್ರ 150)

ಸೂರಣಗಡ್ಡೆಯು ರೂಕ್ಷ, ಕಟು, ಜೊಗರು, ಲಘು, ರುಚಿಕರ, ಅಗ್ನಿದೀಪನಕಾರಿ, ವಿಷ್ಟಂಭ, ವಿಶದ, ಕಫವನ್ನೂ, ಅರ್ಶಸ್ಸನ್ನೂ, ಪ್ಲೀಹರೋಗವನ್ನೂ, ಗುಲ್ಮವನ್ನೂ ನಾಶಮಾಡುವ ಶಕ್ತಿಯುಳ್ಳದ್ದು ಮತ್ತು ವಿಶೇಷವಾಗಿ ಅರ್ಶಸ್ಸುರೋಗಗಳಲ್ಲಿ ಪಥ್ಯ ಎಲ್ಲಾ ಗಡ್ಡೆಗೆಣಸುಗಳೊಳಗೆ ಸೂರಣವು ಶ್ರೇಷ್ಠವೆನ್ನಿಸಿಕೊಂಡಿದೆ ಆದರೆ ತುರಿಯನ್ನುಂಟುಮಾಡತಕ್ಕುದಾದ್ದು ಮತ್ತು ತದ್ದು, ಕುಷ್ಠ, ರಕ್ತಪಿತ್ತ, ಈ ರೋಗವುಳ್ಳವಂಗೆ ಹಿತವಾದದ್ದಲ್ಲ

ಸ್ಫೂಲಕಂದಸ್ತು ನಾತ್ಯುಷ್ಣಃ ಸೂರಣೋ ಗುದಕೀಲಹಾ । (ಸು 222)

ದೊಡ್ಡ ಸೂರಣವು ಅತಿಯಲ್ಲದ ಉಷ್ಣ ಮತ್ತು ಮೂಲದ ಮೊಳೆಯನ್ನು ನಾಶಮಾಡತಕ್ಕುದಾದ್ದು

67 ಲಘುಮೂಲಂ ಕಟೂಷ್ಣಂ ಸ್ಯಾದ್ರುಚ್ಯಂ ಲಘು ಚ ಪಾಚನಂ ।
ದೋಷತ್ರಯಹರಂ ಸ್ವರ್ಯಂ ಜ್ವರಶ್ವಾಸಾರ್ಶನಾಶನಂ ॥
ಮೂಲಂಗಿಯ ಗುಣ ನಾಸಿಕಾಕಂಠರೋಗಘ್ನಂ ನಯನಾಮಯನಾಶನಂ ।
ಮಹತ್ತದೇವ ರೂಕ್ಷೋಷ್ಣಂ ಗುರು ದೋಷತ್ರಯಪ್ರದಂ ॥
ಸ್ನೇಹಸಿದ್ಧಂ ತದೇವ ಸ್ಯಾದ್ದೋಷತ್ರಯವಿನಾಶನಂ । (ಭಾ ಪ್ರ 151)

ಚಿಕ್ಕ ಮೂಲಂಗಿಯು ಕಟು, ಉಷ್ಣ, ಲಘು, ರುಚಿಕರ, ಪಾಚನ ದೋಷತ್ರಯಹರ, ಸ್ವರಕೂಡತಕ್ಕುದಾದ್ದು ಮತ್ತು ಜ್ವರವನ್ನೂ, ಉಬ್ಬಸವನ್ನೂ ನಾಸಾರೋಗವನ್ನೂ, ಕಂಠರೋಗವನ್ನೂ, ನೇತ್ರರೋಗವನ್ನೂ ನಾಶಮಾಡುವಂಥಾದ್ದಾಗಿರುತ್ತದೆ ದೊಡ್ಡ ಮೂಲಂಗಿಯು ರೂಕ್ಷ, ಉಷ್ಣ, ಗುರು, ತ್ರಿದೋಷಗಳನ್ನುಂಟುಮಾಡತಕ್ಕುದಾದ್ದು, ಆದರೆ ಅದನ್ನೇ ಎಣ್ಣೆ ಕೂಡಿಸಿ ಪಕ್ವಮಾಡಿದರೆ ದೋಷತ್ರಯ ನಾಶನಮಾಡುವ ಶಕ್ತಿಯುಳ್ಳದ್ದಾಗುತ್ತದೆ

68 ಸ್ನಿಗ್ಧೋಷ್ಣತೀಕ್ಷ್ಣಃ ಕಟುಪಿಚ್ಚಿಲಶ್ಚ ಗುರುಃ ಸರಃ ಸ್ವಾದುರಸಶ್ಚ ಬಲ್ಯಃ ।
ವೃಷ್ಯಶ್ಚ ಮೇಧಾ-ಸ್ವರ-ವರ್ಣ-ಚಕ್ಷುರ್ಭಗ್ನಾಸ್ಥಿಸಂಧಾನಕರೋ ರಸೋನ ॥
ಬಳ್ಳುಳ್ಳಿಯ ಗುಣ ಹೃದ್ರೋಗ-ಜೀರ್ಣಜ್ವರ-ಕುಕ್ಷಿಶೂಲ-ಏಬಂಧ-ಗುಲ್ಮಾರುಚಿ-ಕಾಸ-ರೋಘಾನ್
ದುರ್ನಾಮ-ಕುಷ್ಠಾನಲಸಾದ-ಜಂತು-ಸಮೀರಣ-ಶ್ವಾಸ-ಕಫಾಂಶ್ಚ ಹಂತಿ ।
(ಸು 216)

ಬಳ್ಳುಳ್ಳಿಯು ಸ್ನಿಗ್ಧ, ಉಷ್ಣ, ತೀಕ್ಷ್ಣ, ಕಟು, ಪಿಚ್ಚಿಲ, ಗುರು ಸರ, ೀ, ವೃಷ್ಯ, ಬಲಕರ ಬುದ್ಧಿ-ಸ್ವರ-ವರ್ಣಗಳನ್ನು ಬಲಪಡಿಸತಕ್ಕುದಾದ್ದು, ಕಣ್ಣಿಗ ಒಳ್ಳೇದಾದದ್ದು, ಒಡೆದ ಎಲು ಒನ್ನು ಕೂಡಿಸುವ ಶಕ್ತಿಯುಳ್ಳದ್ದು ಮತ್ತು ಹೃದ್ರೋಗ, ಹಳೇದಾದ ಜ್ವರ, ಹೊಟ್ಟಶೂಲೆ

ಮಲಬದ್ಧತೆ, ಗುಲ್ಮ, ಅರುಚಿ, ಕೆಮ್ಮು, ಶೋಫೆ, ಮೂಲವ್ಯಾಧಿ, ಕುಷ್ಠ, ಅಗ್ನಿಮಾಂದ್ಯ, ಕ್ರಿಮಿ, ವಾಯು, ಉಬ್ಬಸ, ಕಫ, ಇವುಗಳನ್ನೆಲ್ಲಾ ನಾಶಮಾಡುತ್ತದೆ. ಹುಳಿ ಬಿಟ್ಟು ಮಿಕ್ಕ ಐದು ರಸಗಳುಳ್ಳದ್ದಾದ್ದರಿಂದ ಇದಕ್ಕೆ 'ರಸೋನ' ಎಂಬ ಹೆಸರು ಬಂದದ್ದು.

69. ಗ್ರಾಹೀ ಗೃಂಜನಕಸ್ತೀಕ್ಷ್ಣೋ ವಾತಶ್ಲೇಷ್ಮಾರ್ಶಸಾಂ ಹಿತಃ ।
ಅರಸಿನ ಮೂಲಂ ಗಿಯ ಗುಣ ಸ್ವೇದಸೇಽಭ್ಯವಹಾರ್ಯೇ ಚ ಯೋಜಯೇತ್ತಮಪಿತ್ತಿನಾಂ ॥
(ಚ. 169.)

ಅರಸಿನ (ಕೆತ್ತಳೇ ವರ್ಣದ) ಮೂಲಂಗಿಯು ಗ್ರಾಹೀ, ತೀಕ್ಷ್ಣ, ವಾತ, ಕಫ, ಮತ್ತು ಅರ್ಶಸ್ಸು ವ್ಯಾಧಿಗಳಲ್ಲಿ ಹಿತವಾದದ್ದು ಮತ್ತು ಪಿತ್ತಶರೀರವಲ್ಲದವರಿಗೆ ಬೆವರಿಸುವ ಯೋಗದಲ್ಲಿಯೂ, ಪಥ್ಯದಲ್ಲಿಯೂ ಉಪಯೋಗಿಸತಕ್ಕುಂಧಾದ್ದಾಗಿರುತ್ತದೆ.

70. ಪಲಾಂಡುಃ ಕಟುಕೋ ಬಲ್ಯಃ ಕಫಪಿತ್ತಹರೋ ಗುರುಃ ।
ನೀರುಳ್ಳಿಯ ಗುಣ ವೃಷ್ಯಶ್ಚ ರೋಚನಃ ಸ್ನಿಗ್ಧೋ ವಾಂತಿದೋಷವಿನಾಶನಃ ॥
(ರಾ ನಿ. 148.)

ನೀರುಳ್ಳಿಯು ಖಾರ, ಗುರು, ರುಚಿಕರ, ಬಲಕರ, ವೃಷ್ಯ, ಸ್ನಿಗ್ಧ ಮತ್ತು ಕಫಪಿತ್ತಗಳನ್ನೂ, ವಾಂತಿದೋಷವನ್ನೂ ಪರಿಹರಿಸುತ್ತದೆ.

ಶ್ಲೇಷ್ಮಲೋ ಮಾರುತಘ್ನಶ್ಚ ಪಲಾಂಡುರ್ನ ಚ ಪಿತ್ತನುತ್ ।
ಆಹಾರಯೋಗೀ ಬಲ್ಯಶ್ಚ ಗುರುರ್ವೃಷ್ಯೋಽಥ ರೋಚನಃ ॥ (ಚ. 169)

ನೀರುಳ್ಳಿಯು ಕಫಕರ, ಗುರು, ರುಚಿಕರ, ಬಲಕರ, ವೃಷ್ಯ, ವಾಯುಹರ, ಪಿತ್ತನಾಶಕರವಲ್ಲದ್ದು ಮತ್ತು ಆಹಾರದೊಂದಿಗೆ ಉಪಯೋಗಿಸಲಿಕ್ಕೆ ತಕ್ಕದಾದದ್ದು

71. ಪಲಾಂಡುರ್ಮಪೂರ್ವಃ ಸ್ಯಾಚ್ಛಿಶಿರಃ ಪಿತ್ತನಾಶನಃ ।
ದೊಡ್ಡ ನೀರುಳ್ಳಿಯ ಗುಣ ಕಫಹೃದ್ದೀಪನಶ್ಚೈವ ಬಹುನಿದ್ರಾಕರಸ್ತಥಾ ॥ (ರಾ. ನಿ. 148)

ದೊಡ್ಡ ಜಾತಿಯ ನೀರುಳ್ಳಿ ಮತ್ತು ಕೆಂಪು ನೀರುಳ್ಳಿ ತಂಪು, ಪಿತ್ತನಾಶನಕಾರಿ, ಕಫವನ್ನು ತೆಗೆಯತಕ್ಕುಂಧಾದ್ದು, ಅಗ್ನಿದೀಪನಕಾರಿ ಮತ್ತು ಹೆಚ್ಚು ನಿದ್ರೆಯನ್ನುಂಟುಮಾಡುತ್ತದೆ.

72. ಮಧುರಃ ಕಫವಾತಘ್ನಃ ಪಾಚನಃ ಕಂಠಶೋಧನಃ ।
ಎಲೆಮುರಿಸೊಪ್ಪಿನ ಗುಣ ವಿಶೇಷತಃ ಪಿತ್ತಹರಃ ಸತಿಕ್ತಃ ಕಾಸಮರ್ದಕಃ ॥ (ಸು. 315.)

ಎಲೆಮುರಿಸೊಪ್ಪು ಕಹಿ ಮಿಶ್ರವುಳ್ಳ ಸೀ, ಕಫವಾತನಾಶನಕಾರಿ, ವಿಶೇಷವಾಗಿ ಪಿತ್ತಹರ, ಪಾಚನ ಮತ್ತು ಕಂಠಶೋಧನ ಮಾಡುತ್ತದೆ.

73. ಸೌಭಾಂಜನಫಲಂ ಸ್ವಾದು ಕಷಾಯಂ ಕಫಪಿತ್ತನುತ್ ।
ಸುಗ್ಗಿಕೋಡಿನ ಗುಣ ಶೂಲ-ಕುಷ್ಠ-ಕ್ಷಯ-ಶ್ವಾಸ-ಗುಲ್ಮಹೃದ್ದೀಪನಂ ಪರಂ ॥
(ಭಾ. ಪ್ರ. 149.)

ನುಗ್ಗೆಕೋಡು ಸ್ವಾದು, ಜೂಗರು, ಕಫಪಿತ್ತನಾಶಕಾರಿ, ಬಳ್ಳೀ ಅಗ್ನಿದೀಪನಕಾರಿ. ಮತ್ತು ಶೂಲ, ಕುಷ್ಠ, ಕ್ಷಯ, ಉಬ್ಬಸ, ಗುಲ್ಮ, ಈ ರೋಗಗಳನ್ನು ಶಮನಮಾಡುತ್ತದೆ

74 ಕಕೋರ್ಟೀ ಮಲಹೃತ್ ಕುಷ್ಠಹೃಲ್ಲಾಸಾರುಚಿನಾಶನೀ |
ಮಘಾಗಲ ಕಾಯಿಯ ಗುಣ ಶ್ವಾಸಕಾಸಜ್ವರಾನ್ ಹಂತಿ ಕಟುಪಾಕಾ ಚ ದೀಪನೀ ||
(ಭಾ ಪ್ರ 150)

ಮಘಾಗಲಕಾಯಿಯು ಪಾಕದಲ್ಲಿ ಕಟು, ಅಗ್ನಿದೀಪನಕಾರಿ ಮಲ ತಗೆದುಬಡುತ್ತದೆ, ಮತ್ತು ಕುಷ್ಠ ಬಿಕ್ಕಟ್ಟು, ಅರುಚಿ, ಉಬ್ಬಸ, ಕಮ್ಮು, ಜ್ವರ ಇವುಗಳನ್ನು ನಾಶಮಾಡುತ್ತದೆ

75 ಕಂಟಕಾರೀಫಲಂ ತಿಕ್ತಂ ಕಟುಕಂ ದೀಪನಂ ಲಘು |
ಕಲ್ಲಂಟೆ ಗುಣ ರೂಕ್ಷೋಷ್ಣಂ ಶ್ವಾಸಕಾಸಘ್ನಂ ಜ್ವರಾಸಿಲಕಫಾಪಹಂ || (ಭಾ ಪ್ರ 150)

ಕಲ್ಲಂಟಕಾಯಿಯು ಕಹಿ ಖಾರ, ಲಘು, ರೂಕ್ಷ, ಉಷ್ಣ, ಅಗ್ನಿದೀಪನಕಾರಿ ಮತ್ತು ಉಬ್ಬಸ, ಕಮ್ಮು ಜ್ವರ, ವಾಯು, ಕಫ, ಇವುಗಳನ್ನು ಪರಿಹರಿಸತಕ್ಕುದಾದ್ದು

76 ತ್ರಿದೋಷಶಮನೀ ವೃಷ್ಯಾ ಕಾಕಮಾಚೀ ರಸಾಯನೀ |
ಕಾಗಸೂಪ್ಪಿನ ಗುಣ ನಾತ್ಯುಷ್ಣಶೀತವೀರ್ಯಾ ಚ ಭೇದನೀ ಕುಷ್ಠನಾಶನೀ || (ಚ 162)

ಕಾಗೆಸೂಪು ತ್ರಿದೋಷಶಮನಗುಣವುಳ್ಳದ್ದು ಅತ್ಯುಷ್ಣವೂ ಅತಿಶೀತವೂ ಅಲ್ಲದ್ದು, ಭೇದಿಗುಣವುಳ್ಳದ್ದು ರಸಾಯನೀ ವೃಷ್ಯ ಮತ್ತು ಕುಷ್ಠರೋಗವನ್ನು ನಾಶಮಾಡತಕ್ಕುದಾದ್ದು

77 ದೀಪನೀ ಚೋಷ್ಣವೀರ್ಯಾ ಚ ಗ್ರಾಹಿಣೀ ಕಫಮಾರುತೇ |
(ಪುಳಿಯಾರಲ) ಪುಳ್ಳಂಕ್ಕಿರು ತಿಯ ಗುಣ ಪ್ರಶಸ್ಯತೇಽಪ್ಯರ್ಶಸಿ ಚಾಂಗೇರೀ ಗ್ರಹಣ್ಯಾಶೋರ್ಶಿತಾ ಚ ಸಾ ||
(ಚ 163)

ಪುಳ್ಳಂಪುರುಚಯು ಹುಳಿ, ಉಷ್ಣ, ಅಗ್ನಿದೀಪನಕರ, ಗ್ರಾಹಿ ಮತ್ತು ಕಫವಾಯು ರೋಗದಲ್ಲಿಯೂ, ಗ್ರಹಣೀರೋಗದಲ್ಲಿಯೂ ಅರ್ಶಸ್ಸುರೋಗದಲ್ಲಿಯೂ ಪ್ರಶಸ್ತವಾದದ್ದಾಗಿರುತ್ತದ

78 ಮಧುರಾ ಮಧುರಾ ಪಾಕೇ ಭೇದನೀ ಶ್ಲೇಷ್ಮವರ್ಧನೀ |
ಬಸಳೆ (ಬಚ್ಚಲು ಸೂಪ್ಪು) ಯ ಗುಣ ವೃಷ್ಯಾ ಸ್ನಿಗ್ಧಾ ಚ ಶೀತಾ ಚ ಸುದಗ್ಧ್ನೀ ಚಾಪ್ಯುಪೋದಿಕಾ ||
(ಚ 163)

ಬಚ್ಚಲುಸೊಪ್ಪು ರುಚಿಯಲ್ಲಿಯೂ ಪಾಕದಲ್ಲಿಯೂ ಈ ಭೇದಿಗುಣವುಳ್ಳದ್ದು, ಕಫ ವೃದ್ಧಿಕರ ವೃಷ್ಯ, ಸ್ನಿಗ್ಧ, ಶೀತ ಮತ್ತು ಮದವನ್ನು ನಾಶಮಾಡತಕ್ಕುದಾದ್ದು

79. ರೂಕ್ಷೋ ಮದವಿಷಘ್ನಶ್ಚ ಪ್ರಶಸ್ತೋ ರಕ್ತಪಿತ್ತಿನಾಂ ।
ಹಂಪೆ ಸೊಪ್ಪಿನ (ಕೀರೆಯ) ಗುಣ ಮಧುರೋ ಮಧುರಃ ಪಾಕೇ ಶೀತಲಸ್ತಂಡುಲೀಯಕಃ ॥
(ಚ. 163.)

ಹರಿವೆಸೊಪ್ಪು (ಬಿಳೇದು) ರುಚಿಯಲ್ಲಿಯೂ ಪಾಕದಲ್ಲಿಯೂ ಸೀ, ಶೀತಕರ, ರೂಕ್ಷ-ಮದ-ವಿಷಗಳನ್ನು ಪರಿಹರಿಸುತ್ತದೆ ಮತ್ತು ರಕ್ತಪಿತ್ತರೋಗದವರಿಗೆ ಪ್ರಶಸ್ತವಾದದ್ದು.

ತಂಡುಲೀಯಕೋಪೋದಿಕಾಶ್ವಬಲಾಚಿಲ್ಲೀಪಾಲಂಕ್ಯಾವಾಸ್ತೂಕಪ್ರಭೃತೀನಿ।
ಸೃಷ್ಟಮೂತ್ರಪುರೀಷಾಣಿ ಸಕ್ಷಾರಮಧುರಾಣಿ ಚ ॥
ಮಂದವಾತಕಫಾನ್ಯಾಹೂ ರಕ್ತಪಿತ್ತಹರಾಣಿ ಚ । (ಸು 217)

ಹರಿವೆಸೊಪ್ಪು, ಬಸಳೆಸೊಪ್ಪು, ಮೊದಲಾದವುಗಳು ಕ್ಷಾರವುಳ್ಳವು, ಮಧುರ, ಮಲ ಮೂತ್ರಗಳನ್ನು ಸಡಿಲಿಸತಕ್ಕವು, ರಕ್ತಪಿತ್ತಹರ ಮತ್ತು ಅಲ್ಪವಾಗಿ ವಾತಕಫಗಳನ್ನುಂಟು ಮಾಡತಕ್ಕವು

ಸರಾ ಹರಿವೆಸೊಪ್ಪು ತ್ರಿದೋಷ, ಅತಸಾರ ಜ್ವರ ವಿಷ ಸಹ ಪರಿಹರಿಸುತ್ತದಂತ ಸಿ ರ

80 ಬ್ರಾಹ್ಮೀ ಹಿಮಾ ಸರಾ ತಿಕ್ತಾ ಲಘುರ್ಮೇಧ್ಯಾ ಚ ಶೀತಲಾ ।
ಒಂದೆಲಗ (ತಿಮರಿ) ನ ಗುಣ ಕಷಾಯಾ ಮಧುರಾ ಸ್ವಾದುಪಾಕಾಯುಷ್ಯಾ ರಸಾಯನೀ ॥
ಸ್ವರ್ಯಾ ಸ್ಮೃತಿಪ್ರದಾ ಕುಷ್ಠಪಾಂಡುಮೇಹಾಸ್ರಕಾಸಜಿತ್ ।
ವಿಷಶೋಧಜ್ವರಹರೀ ತದ್ವನ್ಮಂಡೂಕಪರ್ಣ್ಯಸೀ ॥ (ಭಾ. ಪ್ರ 112)

ಒಂದೆಲಗವು ತಂಪು, ಕಹಿ, ಚೊಗರು, ಸೀ, ಪಾಕದಲ್ಲಿ ಸೀ, ಲಘು, ಸರ, ಕಫವೃದ್ಧಿ ಮಾಡತಕ್ಕಂಥಾದ್ದು, ಸ್ವರ-ಬುದ್ಧಿ-ನೆನಪುಗಳನ್ನು ಬಲಪಡಿಸುತ್ತದೆ, ರಸಾಯನ ಗುಣವುಳ್ಳದ್ದು, ಆಯುಷ್ಯವನ್ನು ವೃದ್ಧಿಮಾಡುತ್ತದೆ ಮತ್ತು ಕುಷ್ಠ-ಪಾಂಡು-ಮೇಹ-ರಕ್ತ-ಕಮ್ಮ್ಯ-ವಿಷ-ಶೋಫೆ-ಜ್ವರ, ಇವುಗಳನ್ನು ಪರಿಹರಿಸತಕ್ಕಂಥಾದ್ದು ಮಂಡೂಕಪರ್ಣಿ ಎಂಬದೂ ಅದೇ ಗುಣವುಳ್ಳದ್ದು.

81 ಮೋಚಾಫಲಂ ಸ್ವಾದು ಶೀತಂ ವಿಷ್ಟಂಭಿ ಕಫನುದ್ಗುರು ।
ಸ್ನಿಗ್ಧಂ ಪಿತ್ತಾಸ್ರತೃಡ್ದಾಹಕ್ಷತಕ್ಷಯಸಮೀರಜಿತ್ ॥
ಬಾಳೆಕಾಯಿ ಮತ್ತು ಹಣ್ಣಿನ ಗುಣ ಪಕ್ವಂ ಸ್ವಾದು ಹಿಮಂ ಪಾಕೇ ಸ್ವಾದು ವೃಷ್ಯಂ ಚ ಬೃಂಹಣಂ ।
ಕ್ಷುತ್ತೃಷ್ಣಾನೇತ್ರಗದಹೃನ್ಮೋಹಘ್ನಂ ರುಚಿಮಾಂಸಕೃತ್ ॥
(ಭಾ. ಪ್ರ. 123.)

ಬಾಳೆಕಾಯಿಯು ಸ್ವಾದು, ಶೀತ, ವಿಷ್ಟಂಭಿ, ಗುರು, ಕಫಹರ, ಸ್ನಿಗ್ಧ ಮತ್ತು ರಕ್ತಪಿತ್ತ-ತೃಷೆ-ಉರಿ-ಕ್ಷತ-ಕ್ಷಯ-ವಾಯು, ಇವುಗಳನ್ನು ಜಯಿಸತಕ್ಕಂಥಾದ್ದು. ಹಣ್ಣಾದದ್ದು ಶೀತ, ರುಚಿಯಲ್ಲಿಯೂ ಪಾಕದಲ್ಲಿಯೂ ಸೀ, ವೃಷ್ಯ, ಪುಷ್ಟಿಕರ, ಹಸಿವು-ತೃಷೆ-ನೇತ್ರರೋಗ, ಇವುಗಳನ್ನೂ, ಮೇಹರೋಗವನ್ನೂ ನಾಶಮಾಡುತ್ತದೆ ಮತ್ತು ರುಚಿಯನ್ನೂ ಮಾಂಸವನ್ನೂ ಉಂಟುಮಾಡುತ್ತದೆ.

ಪರಾ ಜಾಳೆಹಣ್ಣುಗಳಲ್ಲಿ ಅನೇಕ ಜಾತಿಗಳಿವೆ ಅವುಗಳೆಲ್ಲಾ ಕಫವೃದ್ಧಿಮಾಡತಕ್ಕಂಥವು ಸೀ ಹಣ್ಣುರುವಂಥವು ಗಳಲ್ಲಿ ತೀತಗುಣ ಹೆಚ್ಚು

82 ತೇಷಾಂ ದ್ರಾಕ್ಷಾ ಸರಾ ಸ್ವರ್ಯಾ ಮಧುರಾ ಸ್ನಿಗ್ಧಶೀತಲಾ ।
ದ್ರಾಕ್ಷೆಯ ಗುಣ ರಕ್ತಪಿತ್ತಜ್ವರಶ್ವಾಸತೃಷ್ಣಾದಾಹಕ್ಷಯಾಪಹಾ ॥ (ಸು 210)

ಸೀ ದ್ರಾಕ್ಷೀಹಣ್ಣು ಶೀತ, ಸ್ನಿಗ್ಧ, ಮಲ ಸಡಿಲಿಸುತ್ತದೆ, ಸ್ವರ ಕೊಡುತ್ತದೆ, ಮತ್ತು ರಕ್ತ ಪಿತ್ತ-ಜ್ವರ-ಉಬ್ಬಸ-ಬಾಯಾರಿಕ-ಉರಿ-ಕ್ಷಯ, ಇವುಗಳನ್ನು ಪರಿಹರಿಸುತ್ತದೆ

83 ವಾತಪಿತ್ತಕರಂ ಬಾಲಮಾಪೂರ್ಣಂ ಪಿತ್ತವರ್ಧನಂ ।
ಮಾಂಸಕಾಯಿ ಪಕ್ವಮಾಮ್ರಂ ಜಯೇದ್ವಾಯುಂ ಮಾಂಸಶುಕ್ರಬಲಪ್ರದಂ ॥
ಮತ್ತು ಹಣ್ಣಿನ ಗುಣ ಕಷಾಯಮಧುರಸ್ರಾಯಂ ಗುರು ವಿಷ್ಟಂಭಿ ಶೀತಲಂ । (ಚ 166)

ಮಾವಿನ ಎಡಿಯು ವಾತಪಿತ್ತವನ್ನುಂಟುಮಾಡುತ್ತದ, ಬೆಳೆದ ಕಾಯಿಯು ಪಿತ್ತವೃದ್ಧಿ ಮಾಡುತ್ತದೆ, ಹಣ್ಣಾದದ್ದು ಹಚ್ಚಾಗಿ ಸೀ ಮತ್ತು ಚೂಗರುರಸವುಳ್ಳದ್ದು ಗುರು, ಶೀತ, ವಿಷ್ಟಂಭಿ, ವಾಯುವನ್ನು ಗೆಲ್ಲುತ್ತದೆ ಮತ್ತು ಮಾಂಸವನ್ನೂ, ಶುಕ್ರವನ್ನೂ, ಬಲವನ್ನೂ ಕೂಡುತ್ತದ.

ಪರಾ ಅಂ ಹುಳಿಯಾದ ಕಾಯಿಯು ವಾತ, ಒತ್ತ ಕವ, ರಕ್ತಗಳ ದೋಷವನ್ನುಂಟುಮಾಡುತ್ತದ ಮೊದಲಲ್ಲಿ ಯೇ ಪಕ್ವವಾದ ಸೀ ಹಣ್ಣಿನಲ್ಲಿ ವಾತಹರಗುಣ ಹೆಚ್ಚು ಇರುತ್ತದ, ಹುಳಿಸೀಯಾದ ಹಣ್ಣಿನಲ್ಲಿ ಪಿತ್ತಪ್ರಕೋಪನ ಗುಣ ಇರುತ್ತದ ಅತಿಯಾಗಿ ಹುಳೀ ಪಣ್ಣನ್ನು ತಿಂದವರಿಗೆ ಶುಂಠಿಕಷಾಯದ ಅನುಪಾನ ಹಿತ, ಇತ್ಯಾದಿ ಎವರಗಳು ಫಾ ಪ್ರ ದಲ್ಲಿ ಕಾಣುತ್ತವೆ (ಪ್ರ 122)

84 ಸನಸಂ ಶೀತಲಂ ಪಕ್ವಂ ಸ್ನಿಗ್ಧಂ ಪಿತ್ತಾನಿಲಾಪಹಂ ।
ತರ್ಪಣಂ ಬೃಂಹಣಂ ಸ್ವಾದು ಮಾಂಸಲಂ ಶ್ಲೇಷ್ಮಲಂ ಭೃಶಂ ॥
ಬಲ್ಯಂ ಶುಕ್ರಪ್ರದಂ ಹಂತಿ ರಕ್ತಪಿತ್ತಕ್ಷತವ್ರಣಾನ್ ।
ಆಮಂ ತದೇವ ವಿಷ್ಟಂಭಿ ವಾತಲಂ ತುವರಂ ಗುರು ॥
ಹಲಸಿನಕಾಯಿ ಮತ್ತು ಹಣ್ಣಿನ ಗುಣ ದಾಹಕೃನ್ಮಧುರಂ ಬಲ್ಯಂ ಕಫಮೇದೋವಿವರ್ಧನಂ ।
ಸನಸೋದ್ಭವಬೀಜಾನಿ ವೃಷ್ಯಾಣಿ ಮಧುರಾಣಿ ಚ ॥
ಗುರೂಣಿ ಬದ್ಧವಿಟ್ಕಾನಿ ಸೃಷ್ಟಮೂತ್ರಾಣಿ ಸಂವದೇತ್ ॥
ಮಜ್ಜಾ ಪನಸಜೋ ವೃಷ್ಯೋ ವಾತಪಿತ್ತಕಫಾಪಹಃ ।
ವಿಶೇಷಾತ್ಪನಸೋ ವಜ್ರ್ಯೋ ಗುಲ್ಮಿಭಿರ್ಮಂದವಹ್ನಿಭಿಃ ॥ (ಭಾ ಪ್ರ 123)

ಹಲಸಿನ ಹಣ್ಣು ಶೀತ, ಸ್ನಿಗ್ಧ, ಪಿತ್ತವಾಯುಹರ, ತೃಪ್ತಿಕರ, ಪುಷ್ಟಿಕರ, ಸ್ವಾದು, ಮಾಂಸವೃದ್ಧಿಮಾಡತಕ್ಕಂಥಾದ್ದು, ಬಹಳ ಕಫಕರ, ಬಲವನ್ನೂ, ಶುಕ್ರವನ್ನೂ ಕೂಡತಕ್ಕಂಥಾ ದ್ದು ಮತ್ತು ರಕ್ತಪಿತ್ತ-ಕ್ಷತ-ವ್ರಣಗಳನ್ನು ಜಯಿಸುತ್ತದ ಎಳೇ ಕಾಯಿಯು ವಾಯು ಪ್ರಕೋಪ ಮಾಡುತ್ತದೆ, ವಿಷ್ಟಂಭಿ, ಗುರು, ಚೂಗರು, ಸೀ, ಬಲಕರ, ಕಫವನ್ನೂ, ಮೇದ ಸ್ಸನ್ನೂ ವೃದ್ಧಿಮಾಡುತ್ತದೆ, ಉರಿಯನ್ನುಂಟುಮಾಡುತ್ತದೆ ಹಲಸಿನ ಬೀಜವು ಸೀ, ಗುರು, ವೃಷ್ಯ, ಮಲಬದ್ಧಕರ ಮತ್ತು ಮೂತ್ರವನ್ನು ಸಡಿಲಿಸುತ್ತದೆ ಅದರ ಮಜ್ಜೆಯು ವೃಷ್ಯ,

ವಾತಪಿತ್ತಕಫಗಳನ್ನು ಕಡಿಮೆ ಮಾಡುತ್ತದೆ ವಿಶೇಷವಾಗಿ ಗುಲ್ಮರೋಗವುಳ್ಳವರೂ, ಮಂದಾಗ್ನಿಯವರೂ ಹಲಸನ್ನು ವರ್ಜಿಸತಕ್ಕದ್ದು

85 ವಿಷ್ಟ್ಯೇದಿ ಗುರು ರೂಕ್ಷಂ ಚ ಪ್ರಾಯೋಽಷ್ಟಂಭಿ ದುರ್ಜರಂ ।
ಸಾಮಾನ್ಯವಾಗಿ ಶಾಕಗಳ ಗುಣ ಸಕಷಾಯಂ ಚ ಸರ್ವಂ ಪಿ ಸ್ಯಾದು ಶಾಕಮುದಾಹೃತಂ ॥

ಎಲ್ಲಾ ಶಾಕಗಳು ಗುರು, ಜೀರ್ಣಕ್ಕೆ ಕಷ್ಟವಾದವು ರೂಕ್ಷ, ಮಲಭೇದಿಕರ, ಹೆಚ್ಚಾಗಿ ವಿಷ್ಟಂಭಿ ಮತ್ತು ಜೊಗರುಮಿಶ್ರ ಸೀ.

ಷಡಾ ಶಾಕದಲ್ಲಿ ಈ ಗುಣಗಳು ಮತ್ತು ಲೀತಪೀರ್ಯ ಇವೆ ಎಂತ ಚ (ಪ 163)

86 ಪುಷ್ಪಂ ಪತ್ರಂ ಫಲಂ ನಾಲಂ ಕಂದಾಶ್ಚ ಗುರವಃ ಕ್ರಮಾತ್ ॥
ಪುಷ್ಪಾದಿ ನಾನಾ ಶಾಕಗಳ ಗುರುತ್ವ ವಿಚಾರ (ಸು 221)

ಹೂವಿನಗಿಂತ ಸೂಪ್ಪು, ಸೊಪ್ಪಿನಗಿಂತ ಕಾಯಿ, ಕಾಯಿಗಿಂತ ದಂಟು, ದಂಟಿನಗಿಂತ ಗಡ್ಡೆಗಳು, ಹೆಚ್ಚು ಗುರು ಎಂತ ತಿಳಿಯಬೇಕು

87. ಕರ್ಕಶಂ ಪರಿಜೀರ್ಣಂ ಚ ಕೃಮಿಜುಷ್ಟಮದೇಶಜಂ ।
ಸೊಪ್ಪುಗಳ ಅಯೋಗ್ಯ ಸ್ಥಿತಿ ವರ್ಜಯೇತ್ಪತ್ರಶಾಕಂ ತದ್ಯದಕಾಲಫಲೋಪಿ ಚ ॥ (ಸು. 221.)

ದೊರಗಾದ, ಹಳೇದಾದ, ಕ್ರಿಮಿಹಿಡಿದ, ಕೆಟ್ಟ ಸ್ಥಳದಲ್ಲಿ ಹುಟ್ಟಿದ, ಮತ್ತು ಅಕಾಲದಲ್ಲಿ ಬೆಳೆದ ಸೊಪ್ಪುಗಳನ್ನು ಉಪಯೋಗಿಸದೆ ಬಿಡಬೇಕು

88. ಬಾಲಂ ಹ್ಯನಾರ್ತವಂ ಜೀರ್ಣಂ ವ್ಯಾಧಿತಂ ಕೃಮಿಭಕ್ಷಿತಂ ॥
ಗಡ್ಡೆಗಳ ಅಯೋಗ್ಯ ಸ್ಥಿತಿ ಕಂದಂ ವಿವರ್ಜಯೇತ್ಸರ್ವಂ ಯೋ ವಾ ಸಮ್ಯಕ್ ನ ರೋಹತಿ ॥
(ಸು. 322.)

ಎಳೇದಾದ, ಅಕಾಲದಲ್ಲಿ ಬೆಳೆದ, ಹಳೇದಾದ, ವ್ಯಾಧಿಪಿಡಿದ, ಕ್ರಿಮಿ ತಿಂದ ಮತ್ತು ಬೆಳಿಕೆ ಚೆನ್ನಾಗಿಲ್ಲದ, ಯಾವ ಗಡ್ಡೆಯನ್ನಾದರೂ ಉಪಯೋಗಿಸದೆ ಬಿಡತಕ್ಕದ್ದು

89. ಅಮ್ಲಂ ಕಷಾಯಮಧುರಂ ವಾತಘ್ನಂ ಗ್ರಾಹಿ ದೀಪನಂ ।
ಸ್ನಿಗ್ಧೋಷ್ಣಂ ದಾಡಿಮಂ ಹೃದ್ಯಂ ಕಫಪಿತ್ತಾವಿರೋಧಿ ಚ ॥
ವಾಳಿಂಬದ ಗುಣ ರೂಕ್ಷಾಮ್ಲಂ ದಾಡಿಮಂ ಯತ್ತು ತತ್ಪಿತ್ತಾನಿಲಕೋಪನಂ ।
ಮಧುರಂ ಪಿತ್ತನುತ್ತೇಷಾಂ ತದ್ದಿ ದಾಡಿಮಮುತ್ತಮಂ । (ಚ. 167.)

ಹುಳಿ, ಜೊಗರು ಮತ್ತು ಸೀ ರಸಗಳು ಕೂಡಿರುವ ದಾಳಿಂಬದ ಹಣ್ಣು ಸ್ನಿಗ್ಧ, ಉಷ್ಣ, ಗ್ರಾಹಿ, ಅಗ್ನಿದೀಪನಕರ, ಮನೋಹರವಾದದ್ದು, ವಾತಹರ ಮತ್ತು ಪಿತ್ತಕಫಗಳಿಗೆ ವಿರೋಧವಿಲ್ಲದ್ದು, ರೂಕ್ಷವಾಗಿ ಹುಳಿಯಾದ ದಾಳಿಂಬ ಯಾವದುಂಟೋ ಅದು ಪಿತ್ತವಾಯು

ಗಳನ್ನು ಪ್ರಕೋಪನಮಾಡುತ್ತದೆ, ಮತ್ತು ಸೀಯಾದ ದಾಳಿಂಬವು ಪಿತ್ತಶಾಂತಿಮಾಡುತ್ತದೆ ಮತ್ತು ಅದೇ ದಾಳಿಂಬಗಳೊಳಗೆ ಉತ್ತಮವಾದದ್ದಾಗಿರುತ್ತದೆ

90 ವಾತಾದಮಜ್ಜಾ ಮಧುರೋ ವೃಷ್ಯಃ ಪಿತ್ತಾನಿಲಾಪಹಃ ।
ಜಾದಾಮುನ ಗುಣ ಸ್ನಿಗ್ಧೋಷ್ಣಃ ಕಫಕೃನ್ನೇಷ್ಟೋ ರಕ್ತಪಿತ್ತವಿಕಾರಿಣಾಂ ॥
(ಭಾ ಪ್ರ 127)

ಜಾದಾಮು ಬೀಜದೊಳಗಿನ ಮಜ್ಜೆಯು ಸೀ, ವೃಷ್ಯ, ಸ್ನಿಗ್ಧ, ಉಷ್ಣ, ಕಫಕರ ಮತ್ತು ಪಿತ್ತವಾಯುವನ್ನು ಪರಿಹರಿಸತಕ್ಕುಂಧಾದ್ದು, ಅದರ ರಕ್ತಪಿತ್ತ ರೋಗದವರಿಗೆ ಹಿತವಾದದ್ದಲ್ಲ

91 ಕ್ಷತಕ್ಷಯಾವಹಂ ಹೃದ್ಯಂ ಶೀತಲಂ ತರ್ಪಣಂ ಗುರು ।
ಎರ್ಜೂರದ ಗುಣ ರಸೇ ಪಾಕೇ ಚ ಮಧುರಂ ಖರ್ಜೂರಂ ರಕ್ತಪಿತ್ತಜಿತ್ ॥ (ಸು 210)

ಎರ್ಜೂರದ ಹಣ್ಣು ಶೀತ, ಗುರು ರುಚಿಯಲ್ಲಿಯೂ ಪಾಕದಲ್ಲಿಯೂ ಸೀ, ಮನೋಹರವಾದದ್ದು, ಪುಷ್ಟಿಕರ ಮತ್ತು ಕ್ಷತ, ಕ್ಷಯ, ರಕ್ತಪಿತ್ತ, ಈ ರೋಗಗಳನ್ನು ಪರಿಹರಿಸತಕ್ಕುಂಧಾದ್ದು

92 ಎದ್ಯಾದಾಮಲಕೇ ಸರ್ವಾಸು ರಸಾಸು ಲವಣವರ್ಜಿತಾಸು ।
ನಲ್ಲಿಯ ಗುಣ ಸ್ವೇದಮೇದಃಕಫೋತ್ಕ್ಲೇದಪಿತ್ತರೋಗವಿನಾಶನಂ ॥ (ಚ 167)

ನಲ್ಲಕಾಯಿಯಲ್ಲಿ ಉಪ್ಪು ಬಿಟ್ಟು ಉಳಿದ ಎಲ್ಲಾ ರಸಗಳು ಇರುತ್ತವಂತ ತಿಳಿಯಬೇಕು ಅದರಿಂದ ಜೀವರು, ಮೇದಸ್ಸು, ಕಫ, ಅನ್ನದ್ವೇಷ ಮತ್ತು ಪಿತ್ತರೋಗ ನಾಶವಾಗುತ್ತವೆ

ಆಮ್ಲಂ ಸಮಧುರಂ ತಿಕ್ತಂ ಕಷಾಯಂ ಕಟುಕಂ ಸರಮ್ ।
ಚಕ್ಷುಷ್ಯಂ ಸರ್ವದೋಷಘ್ನಂ ವೃಷ್ಯಮಾಮಲಕೀಫಲಂ ॥
ಹಂತಿ ವಾತಂ ತದಮ್ಲತ್ವಾತ್ತಿಕ್ತಂ ಮಾಧುರ್ಯಶೃತ್ಯತಃ ।
ಕಫಂ ರೂಕ್ಷಕಷಾಯತ್ವಾತ್ಪಲೇಭ್ಯೋಽಭ್ಯಧಿಕಂ ಚ ತತ್ ॥ (ಸು 207)

ನಲ್ಲಫಲವು ಹುಳಿ, ಸೀ ಕಪಿ, ಜೂಗರು ಮತ್ತು ಎಲ್ಲಾರುಚಿಯುಳ್ಳದ್ದು, ಸರ, ಕಣ್ಣಿಗೆ ಹಿತ ಮತ್ತು ಸರ್ವ ದೋಷಗಳನ್ನು ಪರಿಹರಿಸತಕ್ಕುಂಧಾದ್ದು ಅದು ಹುಳಿಯಾಗಿರುವದರಿಂದ ವಾತವನ್ನೂ, ಸೀ ಮತ್ತು ಶೀತವಾದದ್ದರಿಂದ ಪಿತ್ತವನ್ನೂ, ರೂಕ್ಷ ಮತ್ತು ಜೂಗರು ಗುಣಗಳಿಂದ ಕಫವನ್ನೂ, ನಾಶಮಾಡುತ್ತದೆ ಮತ್ತು ಎಲ್ಲಾ ಫಲಗಳೊಳಗೆ ಅದು ಅಧಿಕ ಗುಣವುಳ್ಳದ್ದಾಗಿರುತ್ತದೆ

93 ತಿಮಂ ಕಫಿತ್ತಮಸ್ಯರ್ಮಂ ಕಫಘ್ನಂ ಗ್ರಾಹಿ ವಾತಲಂ ।
ಬೆಳಲಕಾಯಿ ಮತ್ತು ಹಣ್ಣಿನ ಗುಣ ಕಫಾನಿಲಹರಂ ಪಕ್ವಂ ಮಧುರಾಮ್ಲರಸಂ ಗುರು ॥
ಶ್ವಾಸಕಾಸಾರುಚಿಹರಂ ತೃಷ್ಣಾಘ್ನಂ ಕಂಠಶೋಧನಂ । (ಸು 207)

ಬೆಳವಲ (ಬೇಲದ) ಎಳೇ ಕಾಯಿಯು ಗ್ರಾಹಿ, ವಾತಪ್ರಕೋಪ ಮಾಡತಕ್ಕಂಥಾದ್ದು ಕಫಹರ ಮತ್ತು ಸ್ವರಸನ್ನ ಕೆಡಿಸುತ್ತದೆ. ಅದು ಪಕ್ವವಾದದ್ದಾದರೆ ಕಫವಾಯುಹರ, ಸೀ ಹುಳಿರಸವುಳ್ಳದ್ದು, ಗುರು. ಕಂಠಶೋಧನೆ ಮಾಡತಕ್ಕಂಥಾದ್ದು ಮತ್ತು ಬಾಯಾರಿಕೆಯನ್ನೂ, ಉಬ್ಬಸವನ್ನೂ, ಕೆಮ್ಮುನ್ನೂ, ಅರುಚಿಯನ್ನೂ ಪರಿಹರಿಸುತ್ತದೆ

94. ಲಘ್ವಗ್ನಿಂ ದೀಪನಂ ಹೃದ್ಯಂ ಮಾತುಲುಂಗಮುದಾಹೃತಂ ।
ತ್ವಕ್ ತಿಕ್ತಾ ದುರ್ಜರಾ ತಸ್ಯ ವಾತಕ್ರಿಮುಕಫಾಪಹಾ ॥
ಸ್ವಾದು ಶೀತಂ ಗುರು ಸ್ನಿಗ್ಧಂ ಮಾಂಸಂ ಮಾರುತಪಿತ್ತಜಿತ್ ।
ಮೇಧ್ಯಂ ಶೂಲಾಸಿಲಘರ್ದಿಕಫಾರೋಚಕನಾಶನಂ ॥
ದೀಪನಂ ಲಘು ಸಂಗ್ರಾಹಿ ಗುಲ್ಮಾಶೋರ್ಘ್ನಂ ತು ಕೇಸರಂ ।
ಶೂಲಾಜೀರ್ಣಾಮಬಂಧೇಷು ಮಂದಾಗ್ನೌ ಕಫಮಾರುತೇ ॥
ಅರುಚೌ ಚ ವಿಶೇಷೇಣ ರಸಸ್ತಸ್ಯೋಪದಿಶ್ಯತೇ ।
ಪಿತ್ತಾಸಿಲಕರಂ ಜಾಲಂ ಪಿತ್ತಲಂ ಬದ್ಧಕೇಸರಂ ॥
ಹೃದ್ಯಂ ವರ್ಣಕರಂ ರುಚ್ಯಂ ರಕ್ತಮಾಂಸಬಲಪ್ರದಂ ।
ಕಷಾಯಾನುರಸಂ ಸ್ವಾದು ವಾತಘ್ನಂ ಬೃಂಹಣಂ ಗುರು ॥
ಪಿತ್ತಾವಿರೋಧಿ ಸಂಪಕ್ವಮಾಮ್ಲಂ ಶುಕ್ರವಿವರ್ಧನಂ ।
ಬೃಂಹಣಂ ಮಧುರಂ ಬಲ್ಯಂ ಗುರು ವಿಷ್ಟಭ್ಯ ಜೀರ್ಯತಿ ॥ (ಸು 207-08)

ಹುಳಿ ಮಾದಳ ಹಣ್ಣಿನ ಗುಣ

(ಸಾಧಾರಣವಾಗಿ) ಹುಳಿ ಮಾದಳದ ಹಣ್ಣು ಲಘು ಅಗ್ನಿದೀಪನಕರ ಮತ್ತು ಮನೋಹರವಾದದ್ದು. ಅದರ ಸಿಪ್ಪೆಯು ಕಹಿ, ಜೀರ್ಣಕ್ಕೆ ಕಷ್ಟವಾದದ್ದು ಮತ್ತು ವಾತವನ್ನೂ, ಕ್ರಿಮಿಯನ್ನೂ, ಕಫವನ್ನೂ, ತೆಗೆದುಬಿಡತಕ್ಕಂಥಾದ್ದು. ಅದರ ಮಾಂಸವು ಸೀ. ಶೀತ, ಗುರು, ಸ್ನಿಗ್ಧ, ವಾತಪಿತ್ತಹರ, ಬುದ್ಧಿಯನ್ನು ಬಲಪಡಿಸತಕ್ಕಂಥಾದ್ದು ಮತ್ತು ಶೂಲೆ, ವಾಯು, ವಾಂತಿ, ಕಫ, ಅರುಚಿ, ಇವುಗಳನ್ನು ಪರಿಹರಿಸುತ್ತದೆ ಹಣ್ಣಿನೊಳಗಿನ ಕುಸುಮವು ಲಘು, ಅಗ್ನಿದೀಪನಕರ, ಗ್ರಾಹಿ ಮತ್ತು ಗುಲ್ಮ, ಮೂಲವ್ಯಾಧಿ, ಶೂಲೆ, ಅಜೀರ್ಣ, ಮಲಬದ್ಧತೆ, ಅಗ್ನಿಮಾಂದ್ಯ, ಕಫವಾತ ಮತ್ತು ಅರುಚಿ, ಇವುಗಳನ್ನು ಪರಿಹರಿಸುತ್ತದೆ, ಈ ದೋಷಗಳಲ್ಲಿ ಹೆಚ್ಚಾಗಿ ಕುಸುಮದ ರಸವು ಹೇಳಲ್ಪಡುತ್ತದೆ ಎಳೇದಾದ ಮಿಡಿಯು ಪಿತ್ತವಾಯು ವನ್ನುಂಟುಮಾಡುತ್ತದೆ. ಕುಸುಮ ಕಟ್ಟಿರುವ ಕಾಯಿಯು ಪಿತ್ತಕಾರಿ ಒಳ್ಳೇ ಪಕ್ವವಾದ ಹುಳಿ ಹಣ್ಣು ಮನೋಹರವಾದದ್ದು, ವರ್ಣಕರ, ರುಚಿಕರ, ರಕ್ತವನ್ನೂ, ಮಾಂಸವನ್ನೂ ಬಲವನ್ನೂ ಕೊಡತಕ್ಕಂಥಾದ್ದು, ಚೊಗರು ಮತ್ತು ಸೀ ಮಿಶ್ರವಾದದ್ದು, ವಾತಹರ, ಪುಷ್ಟಿ ಕರ, ಗುರು, ಪಿತ್ತಕ್ಕೆ ವಿರೋಧವಿಲ್ಲದ್ದು ಮತ್ತು ಶುಕ್ರವೃದ್ಧಿಕರ ಪಕ್ವವಾದ ಸೀ ಹಣ್ಣು ಪುಷ್ಟಿ ಕರ, ಬಲಕರ ಗುರು ಮತ್ತು ತಡೆದು ಜೀರ್ಣವಾಗುವಂಥಾದ್ದು

ಪರಾ ಎಳೇ ಕಾಯಿಯಿಂದ ರಕ್ತದೋಷ ಸಹ ಉಂಟಾಗುತ್ತದೆಂತಲೂ, ಪಕ್ವವಾದ ಹುಳಿ ಹಣ್ಣಿನಿಂದ ಶೂಲೆ ಮಲಬದ್ಧತೆ ಉಬ್ಬಸ, ಕಫ ಅಗ್ನಿಮಾಂದ್ಯ ದೋಷ, ಕೆಮ್ಮು ಸಹ ಪರಿವಾರವಾಗುತ್ತದೆಂತಲೂ, ಸಿಪ್ಪೆಯು ತೀಕ್ಷ್ಣ ಉಷ್ಣ, ಸ್ನಿಗ್ಧ ಮತ್ತು ಗುರು ಎಂತಲೂ ಸಿಪ್ಪೆಯ ರಸದಲ್ಲಿ ಶೀತ, ಗುರು, ಸ್ನಿಗ್ಧ, ಧಾತುವೃದ್ಧಿಕರ, ಕಫವೃದ್ಧಿಕರ ಮತ್ತು ವಾತಪಿತ್ತಹರ ಈ ಗುಣಗಳಿರುವವಾಗಿಯೂ, ಕೇಸರವು ಶ್ವಾಸ, ಕಾಸ ಪಿತ್ತಬು ವಾತ ಮದಾತ್ಯಯ, ಮದ, ದೋಷ

ಮಲಬದ್ಧತೆ ಮತ್ತು ವಾಂತಿ. ಇವುಗಳನ್ನು ಪರಿಹರಿಸುವ ಮತ್ತು ಬುದ್ಧಿಯನ್ನು ಬಲಪಡಿಸುವ ಗುಣವುಳ್ಳದ್ದಾಗಿಯೂ ಕೇಸರದ ರಸದಲ್ಲಿ ವಸ್ತಿಶೂಲೆ, ಕಫ, ವಾತ, ಉಬ್ಬಸ, ಕೆಮ್ಮು ಮತ್ತು ವಾಂತಿ, ಇವುಗಳನ್ನು ನಾಶಮಾಡುವ ಗುಣವಿರುವ ವಾಗಿಯೂ, ಬೀಜವು ಗರ್ಭಪ್ರದ ಜೀರ್ಣಕ್ಕೆ ಕಷ್ಟವಾದದ್ದು ಗುರು ಉಷ್ಣ, ಕಹಿ, ವೀಪನ, ಬಲಕರ ಮತ್ತು ವಾತಪಿತ್ತ ಕಫದೋಷಗಳನ್ನೂ, ಶೋಷವನ್ನೂ, ಅರ್ಶಸ್ಸನ್ನೂ ಪರಿಹರಿಸತಕ್ಕಂಥಾದ್ದೆಂತಲೂ ಪನ್ನೇನ ಮಜ್ಜಿಯು (ಗೂಂಜಿ), ಗುರು ತೀತ, ಸ್ವಾದು, ಸ್ನಿಗ್ಧ ಬಲಪ್ರದ ಮತ್ತು ವಾತಪಿತ್ತಹರವೆಂತಲೂ, ಬೇರು ಅರ್ಶಸ್ಸನ್ನು ಕ್ರಿಮಿಯನ್ನೂ, ವಿಷೂಚಯನ್ನೂ, ಮಲಬದ್ಧತೆಯನ್ನೂ, ಶೂಲೆಯನ್ನು ನಾಶಮಾಡತಕ್ಕಂಥಾದ್ದೆಂತಲೂ ಮತ್ತು ಪುಷ್ಪವು ವೀಪನ, ಗ್ರಾಹಿ, ತೀತ ಕಾರಿ, ಲಘು ಮತ್ತು ವಾತವನ್ನೂ ರಕ್ತಪಿತ್ತವನ್ನು ನಾಶಮಾಡತಕ್ಕಂಥಾದ್ದೆಂತಲೂ ಸಿ ರ ಹೇಳುತ್ತದ

95. ಮಧುಕರ್ಕಟಿಕಾ ಸ್ವಾದ್ವೀ ರೂಚಿನೀ ಶೀತಲಾ ಗುರು । ಸೀಮಾದಳದ ಗುಣ
ರಕ್ತಪಿತ್ತ-ಕ್ಷಯ-ಶ್ವಾಸ-ಕಾಸ-ಹಿಕ್ಕಾ-ಭ್ರಮಾಪಹಾ ॥ (ಭಾ ಪ್ರ 128)

ಸೀ ಮಾದಳ ಹಣ್ಣು ಸ್ವಾದು, ರುಚಿಕರ, ಶೀತ, ಗುರು ಮತ್ತು ರಕ್ತಪಿತ್ತವನ್ನೂ, ಕ್ಷಯವನ್ನೂ, ಉಬ್ಬಸವನ್ನೂ, ಕೆಮ್ಮನ್ನೂ, ಬಿಕ್ಕಟ್ಟನ್ನೂ, ಭ್ರಮೆಯನ್ನೂ ಪರಿಹರಿಸತಕ್ಕಂಥಾದ್ದು.

ಷರಾ ಇದರಲ್ಲಿ ವೃಷ್ಯತ್ವವು, ತ್ರಿದೋಷಶಮನ ಗುಣವೂ ಇರುತ್ತವೆಯಾಗಿ ಸಿ ರ

96 ಫಲಂ ಸ್ವಾದುರಸಂ ತೀಪಾಂ ತಾಲಜಂ ಗುರು ಪಿತ್ತಜಿತ್ ।
ತಾಳಿಹಣ್ಣಿನ ಬೀಜದ ಗುಣ
ತದ್ಬೀಜಂ ಸ್ವಾದುಪಾಕಂ ಚ ಮೂತ್ರಲಂ ವಾತಪಿತ್ತಜಿತ್ ॥
(ಸು 210.)

ತಾಳಿಫಲವು ಸೀ ರಸವುಳ್ಳದ್ದು, ಗುರು ಮತ್ತು ಪಿತ್ತವನ್ನು ಜಯಿಸುತ್ತದೆ. ಅದರ ಬೀಜವು ಪಾಕದಲ್ಲಿ ಸೀ, ಮೂತ್ರಕಾರಿ ಮತ್ತು ವಾತಪಿತ್ತವನ್ನು ಒಯಿಸತಕ್ಕಂಥಾದ್ದು

97 ವ್ಯಾಧಿತಂ ಕ್ರಿಮಿಜುಷ್ಟಂ ಚ ಪಾಕಾತೀತಮಕಾಲಜಂ ।
ಹಣ್ಣುಗಳ ಅಯೋಗ್ಯಸ್ಥಿತಿ
ವರ್ಜನೀಯಂ ಫಲಂ ಸರ್ವಮುಪಯೋಗತಮೇವ ಚ ॥
(ಸು 213)

ವ್ಯಾಧಿಪಿಡಿದದ್ದು, ಕ್ರಿಮಿಪಿಡಿದದ್ದು, ಅತಿಯಾಗಿ ಹಣ್ಣಾದದ್ದು, ಅಕಾಲದಲ್ಲಿ ಉಂಟಾದದ್ದು, ಸರಿಯಾಗಿ ಹಣ್ಣಾಗದ್ದು, ಇಂಥಾ ದೋಷಗಳುಳ್ಳ ಫಲವೆಲ್ಲಾ ತ್ಯಾಜ್ಯವಾಗಿರುತ್ತದೆ

XV ನೇ ಅಧ್ಯಾಯ.

ಮಾಂಸವರ್ಗ

1. ಜಲೇಶಯಾ ಆನೂಪಾ ಗ್ರಾಮ್ಯಾಃ ಕ್ರವ್ಯಭುಜ ಏಕಶಫಾ ಜಾಂಗಲಾ ಶ್ಚೇತಿ ಷಣ್ಣಾಮಂಸವರ್ಗಾಸ್ತೇಷಾಂ ವರ್ಗಾಣಾಮುತ್ತರೋತ್ತರಂ ಪ್ರಧಾನತಮಾಃ ॥ (ಸು 198)

ಮಾಂಸವರ್ಗಗಳು

ಜಲವಾಸಪ್ರಾಣಿಗಳು, ಜಲಪ್ರಾಯದೇಶ (ಕೆಸರು) ವಾಸಪ್ರಾಣಿಗಳು, ಗ್ರಾಮವಾಸಿಗಳು, ಮಾಂಸಾಶಿಗಳು, ಏಕವಾದ (ಭಾಗವಿಲ್ಲದ) ಗೊರಸುಳ್ಳವುಗಳು, ಕಾಡುವಾಸಿಗಳು, ಪೀಗೆ ಮಾಂಸಗಳೊಳಗೆ ಆರು ವರ್ಗಗಳು ಅವುಗಳು ಉತ್ತರೋತ್ತರ (ಹಿಂದಿನದಕ್ಕಿಂತ ಮುಂದಿನದು) ಮುಖ್ಯವಾಗಿರುತ್ತವೆ

2 ತೇ ಪುನರ್ದ್ವಿವಿಧಾ ಜಾಂಗಲಾ ಆನೂಪಾಶ್ಚೇತಿ । ತತ್ರ ಜಾಂಗಲವರ್ಗೋಽಷ್ಟವಿಧಃ । ತದ್ಯಥಾ । ಜಂಘಾಲಾ ವಿಷ್ಕಿರಾಃ ಪ್ರತುದಾ ಗುಹಾಶಯಾಃ ಪ್ರಸಹಾಃ ಪರ್ಣಮೃಗಾ ಬಿಲೇಶಯಾ ಗ್ರಾಮ್ಯಾಶ್ಚೇತಿ । ತೇಷಾಂ ಜಂಘಾಲವಿಷ್ಕಿರೌ ಪ್ರಧಾನತಮೌ । (ಸು 198-99)

ಜಾಂಗಲ ಮಾಂಸಗಳಲ್ಲಿ ಅಷ್ಟವಿಧಗಳು

ಇನ್ನೊಂದು ವಿಧದಲ್ಲಿ ಮಾಂಸಗಳು ಎರಡು ವಿಧ ಜಾಂಗಲಾ (ಸ್ಥಳವಾಸಿ), ಆನೂಪಾ (ಜಲವಾಸಿ) ಎಂಬ ಅವುಗಳೊಳಗೆ ಜಾಂಗಲವರ್ಗವು ಎಂಟು ವಿಧಗಳುಳ್ಳದ್ದು, ಹ್ಯಾಗಂದರೆ 1. ಜಂಘಾಲಾಃ (ಕಾಲಿನ ಬಲವೇ ಪ್ರಧಾನವಾಗಿರುವವು), 2 ವಿಷ್ಕಿರಾಃ (ಚದರಿಸಿ ಕಾಳುಗಳನ್ನು ಹೆಕ್ಕಿ ತಿನ್ನುವವು), 3. ಪ್ರತುದಾಃ (ಕೊಕ್ಕುಗಳೇ ಪ್ರಧಾನವಾಗಿರುವವು), 4. ಗುಹಾಶಯಾಃ (ಗುಹೆಯಲ್ಲಿ ವಾಸವಾಗಿರುವವು), 5. ಪ್ರಸಹಾಃ (ಬೇಟೆಪಕ್ಷಿಗಳು), 6. ಪರ್ಣಮೃಗಾಃ (ಪರ್ಣಗಳಲ್ಲಿ ವಾಸವಾಗಿರುವವು), 7 ಬಿಲೇಶಯಾಃ (ಬಿಲಗಳಲ್ಲಿ ವಾಸಮಾಡುವಂಥವು), ಮತ್ತು 8. ಗ್ರಾಮ್ಯಾಃ (ಗ್ರಾಮವಾಸಿಗಳು). ಇವುಗಳೊಳಗೆ 1ನೇ ಜಂಘಾಲಾ, 2ನೇ ವಿಷ್ಕಿರವರ್ಗದವುಗಳು, ಹೆಚ್ಚು ಪ್ರಧಾನವಾದವುಗಳಾಗಿರುತ್ತವ

3 ಆನೂಪವರ್ಗಸ್ತು ಪಂಚವಿಧಃ । ತದ್ಯಥಾ । ಕೂಲಚರಾಃ ಪ್ಲವಾಃ ಕೋಶಸ್ಥಾಃ ಪಾದಿನೋ ಮತ್ಸ್ಯಾಶ್ಚೇತಿ । (ಸು. 202)

ಆನೂಪಮಾಂಸಗಳಲ್ಲಿ ಪಂಚವಿಧಗಳು

ಆನೂಪವರ್ಗದಲ್ಲಿ ಐದು ವಿಧ ಹ್ಯಾಗಂದರ — 1 ಕೂಲಚರ (ಜಲಾಶಯಗಳ ಸಮೀಪ ಸ್ಥಳದಲ್ಲಿ ಸಂಚರಿಸುವವು), 2. ಪ್ಲವ (ಜಲಗಳಲ್ಲಿ ತೇಲುವವು), 3 ಕೋಶಸ್ಥ (ಚಿಪ್ಪುಗಳುಳ್ಳವು), 4. ಪಾದಸ್ಥ (ಪಾದವುಳ್ಳವು), ಮತ್ತು 5. ಮತ್ಸ್ಯ (ಮೀನುಗಳು).

4. ಜಾಂಗಲಾ ಮಧುರಾ ರೂಕ್ಷಾಸ್ತುವರಾ ಲಘವಸ್ತಥಾ ।
ಬಲ್ಯಾಸ್ತೇ ಬೃಂಹಣಾ ವೃಷ್ಯಾ ದೀಪನಾ ದೋಷಹಾರಿಣಃ ॥
ಮೂಕತಾಂ ಮಿನ್ಮಿನತ್ವಂ ಚ ಗದ್ಗದತ್ವಾರ್ದಿತೇ ತಥಾ ।

ಜಾಂಗಲ ಮಾಂಸಗಳ ಸಾಮಾನ್ಯ ಗುಣ

ಜಾಧಿರ್ಯಮರುಚಿಛರ್ದಿಪ್ರಮೇಹಮುಖಜಾನ್ ಗದಾನ್ ॥
ಶ್ಲೀಪದಂ ಗಲಗಂಡಂ ಚ ನಾಶಯತ್ಯನಿಲಾಮಯಾನ್ ॥ (ಭಾ. ಪ್ರ. 152.)

ಜಾಂಗಲಮಾಂಸವು ಸೀ, ರೂಕ್ಷ, ಜೊಗರು, ಲಘು. ಬಲಕರ, ಪುಷ್ಟಿಕರ, ವೃಷ್ಯ, ದೀಪನಕರ, ದೋಷಹರ ಮತ್ತು ಮೂಕತ್ವ, ಮಿನ್ಮಿಣತ್ವ, ಗದ್ಗದ, ಅರ್ದಿತ, ಕಿವುಡು, ಅರುಚಿ, ವಾಂತಿ, ಪ್ರಮೇಹ, ಮುಖರೋಗ, ಶ್ಲೀಪದ, ಗಲಗಂಡ ಮತ್ತು ವಾಯುರೋಗ ಗಳು, ಇವುಗಳನ್ನು ನಾಶಮಾಡುವದು

5 ಅನೂಪಾ ಮಧುರಾಃ ಸ್ನಿಗ್ಧಾ ಗುರವೋ ವಹ್ನಿಸಾದನಾಃ ।
ಅನೂಪಮಾಂಸಗಳ ಸಾಮಾನ್ಯ ಗುಣ ಶ್ಲೇಷ್ಮಲಾಃ ಪಿಚ್ಛಿಲಾಶ್ಚಾಪಿ ಮಾಂಸಪುಷ್ಟಿಪ್ರದಾ ಭೃಶಂ ॥
ತಥಾಭಿಷ್ಯಂದಿನಸ್ತೇ ಹಿ ನ್ಯಾಯಃ ಪಥ್ಯತಮಾಃ ಸ್ಮೃತಾಃ ॥ (ಭಾ. ಪ್ರ. 152)

ಅನೂಪಮಾಂಸವು ಸೀ, ಸ್ನಿಗ್ಧ, ಗುರು, ಅಗ್ನಿಮಾಂದ್ಯಕರ ಕಫಕರ, ಪಿಚ್ಛಿಲ, ಅಭಿಷ್ಯಂದಿ, ಒಳ್ಳೇ ಮಾಂಸಪುಷ್ಟಿಕರ ಮತ್ತು ಹಚ್ಚಾಗಿ ಉತ್ತಮಪಥ್ಯವಾದದ್ದು ಎಂತ ಹೇಳಲ್ಪಟ್ಟದೆ

6 ಕಷಾಯೋ ಮಧುರೋ ಹೃದ್ಯಃ ಪಿತ್ತಾಸ್ರಕ್ಕಫರೋಗಹಾ ।
ಸಂಗ್ರಾಹೀ ರೋಚಕೋ ಲಘ್ವಸ್ತೇಷಾಮೇಣೋ ಜ್ವರಾಪಹಃ ॥
ಅನೇಕ ಜಿಂಕೆಮಾಂಸದ ಗುಣ ಮಧುರೋ ಮಧುರಃ ಪಾಕೇ ದೋಷಘ್ನೋಽನಲದೀಪನಃ ।
ಶೀತಲೋ ಬದ್ಧವಿಣ್ಮೂತ್ರಃ ಸುಗಂಧಿರ್ಹರಿಣೋ ಲಘುಃ ॥
ಏಣಃ ಕೃಷ್ಣಸ್ತಯೋರ್ಜ್ಞೇಯೋ ಹರಿಣಸ್ತಾಮ್ರ ಉಚ್ಯತೇ ।
ನ ಕೃಷ್ಣೋ ನ ಚ ತಾಮ್ರಶ್ಚ ಕುರಂಗಃ ಸೋಭಧೀಯತೇ ॥ (ಸು. 199)

ಜಂಘಾಲಮೃಗಗಳೊಳಗ ಕಪ್ಪು ಜಿಂಕೆಯು (ಏಣ) ಜೊಗರು, ಸೀ, ಮನೋಹರ, ಸಂಗ್ರಾಹೀ, ರುಚಿಕರ, ಬಲಕರ ಮತ್ತು ಜ್ವರವನ್ನೂ, ಪಿತ್ತರಕ್ತವನ್ನೂ, ಕಫರೋಗವನ್ನೂ ಪರಿಹರಿಸತಕ್ಕಂಧಾದ್ದು ಕೆಂಪು ಜಿಂಕಯು (ಹರಿಣ) ರುಚಿಯಲ್ಲಿಯೂ ಪಾಕದಲ್ಲಿಯೂ ಸೀ, ದೋಷಹರ, ಅಗ್ನಿದೀಪನಕರ, ಶೀತ, ಮಲಮೂತ್ರ ಒದ್ದಮಾಡತಕ್ಕಂಧಾದ್ದು, ಸುಗಂಧ ವುಳ್ಳದ್ದು ಮತ್ತು ಲಘು. ಜಿಂಕೆಗಳೊಳಗೆ ಕರಿದು 'ಏಣ' ಎಂತಲೂ, ಕಂಪಿನದು 'ಹರಿಣ' ಎಂತಲೂ ಕರೆಯಲ್ಪಡುತ್ತದೆ ಕಪ್ಪೂ ಅಲ್ಲದೆ ಕಂಪೂ ಅಲ್ಲದೆ ಇರುವ ಜಿಂಕೆಗೆ 'ಕುರಂಗ' ಎನ್ನುತ್ತಾರ

ಪರಾ -ಕುರಂಗ ಈಷತ್ತಾಮ್ರ ಸ್ಯಾದೇಣತುಲ್ಯಾಕೃತಿರ್ಮಹಾನ್ ॥ ಏಣಕ್ಕೆ ಸದೃಶವಾದ ಆಕಾರವುಳ್ಳ ದ್ದಾಗಿ, ಕಿಂಚಿತ್ ಕೆಂಪಾಗಿ, ಮತ್ತು ದೊಡ್ಡ ಜಾತಿಯದಾಗಿ ಇರುವಂದಾದ್ದು ಕುರಂಗ' (ಪ್ರ ಪ್ರ 153)

7. * * * ಜಂಘಾಲಾ ಮೃಗಾಃ ಕಷಾಯಾ ಮಧುರಾ ಲಘವೋ ವಾತಪಿತ್ತ
ಸಾಮಾನ್ಯವಾಗಿ ಜಂಘಾಲ ಜಾತಿ ಮಾಂಸದ ಗುಣ ಹರಾಸ್ತೀಕ್ಷ್ಣಾ ಹೃದ್ಯಾ ಸ್ತಿಶೋಧನಾಶ್ಚ । (ಸು 199.)

ಜಂಘಾಲಪ್ರಾಣಿಗಳು ಚೊಗರು, ಸೀ, ಲಘು. ವಾತಪಿತ್ತಹರ, ತೀಕ್ಷ್ಣ, ಮುಸೋಹರ ಮತ್ತು ವಸ್ತಿಶೋಧನೆ ಮಾಡತಕ್ಕಂಥವು

ಸರಾ ಜಾ ಪ್ರ ಮೇರೆಗೆ ಕಫಪಿತ್ತಹರ, ಅಲ್ಪವಾಗಿ ವಾತಕರ ಮತ್ತು ಬಲವೃದ್ಧಿಕರ (ಪು 153)

8 ಕಷಾಯಃ ಸ್ವಾದುಲವಣಸ್ತ್ವಚ್ಯಃ ಕೇಶ್ಯೋ ರುಚಿಪ್ರದಃ |
ನವಿಲಿನ ಗುಣ ಮಯೂರಃ ಸ್ವರಮೇಧಾಗ್ನಿದೃಕ್‌ಶ್ರೋತ್ರೇಂದ್ರಿಯದಾರ್ಢ್ಯಕೃತ್ ॥ (ಸು 200)

ನವಿಲು ಚೂಗರು, ಸೀ ಮತ್ತು ಉಪ್ಪು ಮಿಶ್ರವಾಗಿ ಉಳ್ಳದ್ದು, ರುಚಿಕರ, ಚರ್ಮಕ್ಕೂ, ಕೂದಲುಗಳಿಗೂ ಹಿತ ಮತ್ತು ಸ್ವರ, ತಿಳುವಳಿಕೆ, ಅಗ್ನಿ, ದೃಷ್ಟಿ ಮತ್ತು ಶ್ರೋತ್ರೇಂದ್ರಿಯ (ಕೇಳುಒಕೆ). ಇವುಗಳ ದಾರ್ಢ್ಯವನ್ನುಂಟುಮಾಡುವದು

9 ಸ್ನಿಗ್ಧೋಷ್ಣಶ್ಲೀಷ್ಮನಿಲಹಾ ವೃಷ್ಯಃ ಸ್ವೇದಸ್ವರಬಲಾವಹಃ |
ಕೋಳಿಯ ಗುಣ ಬೃಂಹಣಃ ಕುಕ್ಕುಟೋ ವನ್ಯಸ್ತದ್ವದ್ಗ್ರಾಮ್ಯೋ ಗುರುಸ್ತು ಸಃ ॥
ವಾತರೋಗಕ್ಷಯವಮಿವಿಷಮಜ್ವರನಾಶನಃ | (ಸು 200)

ಕಾಡುಕೋಳಿಯು ಸ್ನಿಗ್ಧ, ಉಷ್ಣ, ವೃಷ್ಯ, ವಾತಹರ, ಪುಷ್ಟಿಕರ ಮತ್ತು ಬೆವರನ್ನೂ, ಸ್ವರವನ್ನೂ, ಬಲವನ್ನೂ, ಉಂಟುಮಾಡುತ್ತದೆ. ಊರಕೋಳಿಯು ಹಾಗೆಯೇ, ಆದರೆ ಅದು ಗುರು ಮತ್ತು ವಾತರೋಗ, ಕ್ಷಯ, ವಾಂತಿ, ವಿಷಮಜ್ವರ, ಇವುಗಳನ್ನು ನಾಶಮಾಡತಕ್ಕಂಥಾದ್ದು.

ಸರಾ ಕಾಡುಕೋಳಿಯು ಗುರು ಆದಕ್ಕೂ ಹೆಚ್ಚು ಗುರು ಊರಕೋಳಿ ಎಂತ ಸಿ ಸಂ ನ್ಯಾ ಆರಣ್ಯ ಕುಕ್ಕುಟಿ ಗುರು ಎಂತ ಧಾ ಪ್ರ ಸಹ ಹೇಳುತ್ತದೆ (ಪು 156)

10 * * * ಏಷ್ಮಿರಾ ಲಘವಃ ಶೀತಮಧುರಾಃ ಕಷಾಯಾ ದೋಷಶಮನಾಶ್ಚ |
ಸಾಮಾನ್ಯವಾಗಿ ಎಷ್ಮಿರ ಜಾತಿ ಮಾಂಸದ ಗುಣ (ಸು. 199)

ಏಷ್ಮಿರಜಾತಿ ಪ್ರಾಣಿಗಳ ಮಾಂಸವು ಲಘು ಶೀತ, ಸೀ, ಚೂಗರು ಮತ್ತು ತ್ರಿದೋಷ ಶಮನಕರ.

ಸರಾ ವೃಷ್ಯ, ಬಲಕರ, ಕಟುಪಾಕ, ಎಂತ ಸಹ ಧಾ ಪ್ರ (ಪು 153)

11 ರಕ್ತಪಿತ್ತಪ್ರಶಮನಃ ಕಷಾಯವಿಶದೋಽಪಿ ಚ |
ಪಾರಿವಾಳದ ಗುಣ ವಿಪಾಕೇ ಮಧುರಶ್ಚಾಪಿ ಗುರುಃ ಪಾರಾವತಃ ಸ್ಮೃತಃ ॥ (ಸು. 200)

ಪಾರಿವಾಳವು ಚೊಗರು, ವಿಶದ, ವಿಪಾಕದಲ್ಲಿ ಸೀ, ಗುರು ಮತ್ತು ರಕ್ತಪಿತ್ತವನ್ನು ಶಮನಮಾಡುವದು.

ಸರಾ ಸ್ನಿಗ್ಧ, ಸಂಗ್ರಾಹಿ ಶೀತ, ವೀರ್ಯವರ್ಧನ, ಎಂತ ಸಹ ಧಾ ಪ್ರ (ಪು 157)

12. ಕಷಾಯಮಧುರಾ ರೂಕ್ಷಾಃ ಫಲಾಹಾರಾ ಮರುತ್ಕರಾಃ ।
ಸಾಮಾನ್ಯವಾಗಿ ಪ್ರತುದ ಜಾತಿಮಾಂಸದ ಗುಣ
ಪಿತ್ತಶ್ಲೇಷ್ಮಹರಾಃ ಶೀತಾ ಬದ್ಧಮೂತ್ರಾಲ್ಪವರ್ಚಸಃ ॥ (ಸು 200.)

ಪ್ರತುದಗಳು ಫಲಗಳನ್ನು ಆಹಾರಮಾಡಿಕೊಂಡಿರುವವು, ಜೂಗರು, ಸೀ, ರೂಕ್ಷ, ವಾತ ಕರ, ಪಿತ್ತಕಫಹರ, ಶೀತ ಮತ್ತು ಮೂತ್ರವನ್ನು ಬದ್ಧವಾಗಿಯೂ, ಮಲವನ್ನು ಅಲ್ಪವಾಗಿಯೂ ಮಾಡುವ ಗುಣವುಳ್ಳವು.

13 ನಾತಿಸ್ನಿಗ್ಧಾಸಿ ಪೃಷ್ಯಾಣಿ ಸ್ವಾದುಪಾಕರಸಾನಿ ಚ ।
ಪಕ್ಷಿಗಳ ಮೊಟ್ಟೆಯ ಗುಣ
ವಾತಘ್ನಾನ್ಯತಿಶುಕ್ರಾಣಿ ಗುರೂಣ್ಯಂಡಾನಿ ಪಕ್ಷಿಣಾಂ ॥
(ಭಾ ಪ್ರ. 157)

ಪಕ್ಷಿಗಳ ಮೊಟ್ಟೆಗಳು ಅತಿಸ್ನಿಗ್ಧವಲ್ಲದವು, ಪೃಷ್ಯ, ರಸದಲ್ಲಿಯೂ ಪಾಕದಲ್ಲಿಯೂ ಸೀ, ವಾತಹರ, ಅತಿಶುಕ್ರಕರ ಮತ್ತು ಗುರು

14 ಮಧುರಾ ಗುರವಃ ಸ್ನಿಗ್ಧಾ ಬಲ್ಯಾ ಮಾರುತನಾಶನಾಃ ।
ಗುಹಾಶಯ ಜಾತಿ ಮಾಂಸದ ಗುಣ
ಉಷ್ಣವೀರ್ಯಾ ಹಿತಾ ನಿತ್ಯಂ ನೇತ್ರಗುಹ್ಯಏಕಾರಿಣಾಂ ॥ (ಸು 200.)

(ಸಿಂಯ, ಹುಲಿ, ಚಕ್ಕ, ನರಿ, ಮುಂತಾದ) ಗುಹಾಶಯ ಮೃಗಗಳು ಸೀ, ಗುರು, ಸ್ನಿಗ್ಧ, ಬಲಕರ, ವಾತಹರ, ಉಷ್ಣ ಮತ್ತು ನೇತ್ರರೋಗದವರಿಗೂ, ಗುಹ್ಯರೋಗದವರಿಗೂ ನಿತ್ಯವೂ ಹಿತವಾದವು

15 ಏತೇ ಸಿಂಹಾದಿಭಃ ಸರ್ವೇ ಸಮಾನಾ ವಾಯಸಾದಯಃ ।
ಪ್ರಸಹಜಾತಿ ಮಾಂಸದ ಗುಣ
ರಸವೀರ್ಯವಿಪಾಕೇಷು ವಿಶೇಷಾಜ್ಜ್ಞೇಷ್ಣೇ ಹಿತಾಃ ॥ (ಸು 200-203)

ಈ (ಪ್ರಸಹಜಾತಿಯ) ಕಾಗೆ ಮುಂತಾದವು ರಸ, ವೀರ್ಯ, ವಿಪಾಕಗಳಲ್ಲಿಯೂ, ಸಿಂಹಾದಿಗಳಿಗೆ ಸಮಾನವಾದವು, ವಿಶೇಷವಾಗಿ ಶೋಷರೋಗದವರಿಗೆ ಹಿತ

16. ಮಧುರಾ ಗುರವೋ ವೃಷ್ಯಾಶ್ಚಕ್ಷುಷ್ಯಾ ಶೋಷಿಣೇ ಹಿತಾಃ ।
ಪರ್ಣವಾಸಿ ಜಾತಿ ಮಾಂಸದ ಗುಣ
ಸೃಷ್ಟಮೂತ್ರಪುರೀಷಾಶ್ಚ ಕಾಸಾರ್ಶಃಶ್ವಾಸನಾಶನಾಃ ॥ (ಸು 201)

(ಮರ ಇಲಿ, ಕಾಡಬೆಕ್ಕು, ಮಂಗ ಮುಂತಾದ) ಪರ್ಣಮೃಗಗಳು ಸೀ, ಗುರು, ವೃಷ್ಯ, ಕಣ್ಣಿಗೆ ಗುಣಕರ, ಶೋಷರೋಗದವರಿಗೆ ಹಿತ, ಮಲಮೂತ್ರಗಳನ್ನು ಸಡಿಲಿಸತಕ್ಕಂಧವು ಮತ್ತು ಕೆಮ್ಮನ್ನೂ, ಅರ್ಶಸ್ಸನ್ನೂ, ಉಬ್ಬಸವನ್ನೂ, ನಾಶಮಾಡತಕ್ಕವು.

17. ವಹ್ನೇರಮೂತ್ರಂ ಸಂಹತಂ ಕುರ್ಯುರೇತೇ
ವೀರ್ಯೇ ಚೋಷ್ಣಾಃ ಪೂರ್ವವತ್ಸ್ವಾದುಪಾಕಾಃ ।
ಪಿಲವಾಸಿ ಜಾತಿ ಮಾಂಸದ ಗುಣ
ವಾತಂ ಹನ್ಯುಃ ಶ್ಲೇಷ್ಮಪಿತ್ತೇ ಚ ಕುರ್ಯುಃ
ಸ್ನಿಗ್ಧಾಃ ಕಾಸಶ್ವಾಸಕಾರ್ಶ್ಯಾಪಹಾಶ್ಚ ॥ (ಸು. 201.)

(ಮೊಲ, ಸರ್ಪ, ಇಲಿ, ಉಡು, ಮುಂಗುಲಿ ಮುಂತಾದ) ಬಿಲೇಶಯಗಳು, ಮಲ ಮೂತ್ರಗಳನ್ನು ಗಟ್ಟಿ(ಬದ್ಧ)ಮಾಡುವವು, ಉಷ್ಣವೀರ್ಯವುಳ್ಳವು, ರುಚಿಯಲ್ಲಿಯೂ, ಪಾಕದಲ್ಲಿಯೂ ಸೀ, ವಾತನಾಶಕರ, ಕಫಪಿತ್ತವೃದ್ಧಿಕರ, ಸ್ನಿಗ್ಧ ಮತ್ತು ಕೆಮ್ಮನ್ನೂ, ಉಬ್ಬಸವನ್ನೂ, ಕೃಶತೆಯನ್ನೂ ಪರಿಹರಿಸತಕ್ಕುಂಧವು.

18. ಕಷಾಯಮಧುರಸ್ತೇಷಾಂ ಶಶಃ ಪಿತ್ತಕಫಾಪಹಃ ।
ಮೊಲದ ಗುಣ ನಾತಿಶೀತಲವೀರ್ಯತ್ವಾದ್ವಾತಸಾಧಾರಣೋ ಮತಃ ॥ (ಸು 201)

ಬಿಲೇಶಯಗಳೊಳಗೆ ಮೊಲವು ಜೊಗರು, ಸೀ, ಪಿತ್ತಕಫಹರ ಮತ್ತು ಅತಿಯಲ್ಲದ ಶೀತವೀರ್ಯವುಳ್ಳದ್ದಾದ್ದರಿಂದ, ವಾತಕ್ಕೆ ಸಾಧಾರಣವಾದದ್ದು, ಅಂದರ ವಿಶೇಷ ಗುಣವಾವ ಗುಣವಿಲ್ಲದ್ದು ಆಗಿರುತ್ತದೆ

19 ಗೋಧಾ ಏಪಾಕೇ ಮಧುರಾ ಕಷಾಯಕಟುಕಾ ಸ್ಮೃತಾ ।
ಉಡುಮಾಂಸ ಗುಣ ವಾತಪಿತ್ತಪ್ರಶಮನೀ ಬೃಂಹಣೀ ಬಲವರ್ಧನೀ ॥ (ಸು 201.)

ಉಡುವು ಜೊಗರು, ಟಾರಪುಶ್ರವುಳ್ಳದ್ದು, ವಿಪಾಕದಲ್ಲ ಸೀ, ವಾತಪಿತ್ತಹರ, ಪುಷ್ಟಿಕಾರಿ ಮತ್ತು ಬಲವೃದ್ಧಿಕಾರಿ

20. ಮನರ್ಮಾಮಾಸಿಲದೋಷಘ್ನಾಃ ಕೃಮಿದೂಷೀವಷಾಪಹಾಃ ।
ಸರ್ಪಗಳ ಗುಣ ಚಕ್ಷುಷ್ಯಾ ಮಧುರಾ ಪಾಕೇ ಸರ್ಪಾ ಮೇಧಾಗ್ನಿವರ್ಧನಾಃ ॥
(ಸು 201)

(ಸಾಮಾನ್ಯವಾಗಿ) ಸರ್ಪಗಳು ಮೂಲವ್ಯಾಧಿಯನ್ನೂ, ವಾಯುದೋಷಗಳನ್ನೂ ಕ್ರಿಮಿಗಳನ್ನೂ, ದೂಷೀವಿಷವನ್ನೂ, ಪರಿಹರಿಸತಕ್ಕವು, ಕಣ್ಣಿಗೆ ಹಿತಕರ, ಪಾಕದಲ್ಲಿ ಸೀ ಮತ್ತು ಗ್ರಹಿಸುವ ಶಕ್ತಿಯನ್ನೂ ಅಗ್ನಿಯನ್ನೂ ವೃದ್ಧಿಮಾಡುವವು

21. ಗ್ರಾಮ್ಯಾ ವಾತಹರಾಃ ಸರ್ವೇ ಬೃಂಹಣಾಃ ಕಫಪಿತ್ತಲಾಃ ।
ಗ್ರಾಮವಾಸಿ ಪಶು ಮಾಂಸದ ಗುಣ ಮಧುರಾ ರಸಪಾಕಾಭ್ಯಾಂ ದೀಪನಾ ಬಲವರ್ಧನಾಃ ॥ (ಸು 202.)

(ಕುದುರ-ಕತ್ತೆ-ಒಂಟೆ ಮುಂತಾದ) ಗ್ರಾಮ್ಯ ಮೃಗಗಳು ವಾತಹರ, ಪುಷ್ಟಿಕರ, ಕಫಪಿತ್ತವೃದ್ಧಿಕರ, ರಸದಲ್ಲಿಯೂ ಪಾಕದಲ್ಲಿಯೂ ಸೀ, ದೀಪನ, ಮತ್ತು ಬಲವರ್ಧನಕಾರಿ, ಆಗಿರುತ್ತವೆ.

22. ನಾತಿಶೀತೋ ಗುರುಃ ಸ್ನಿಗ್ಧೋ ಮಂದಪಿತ್ತಕಫಃ ಸ್ಮೃತಃ ।
ಆಡಿನ ಮಾಂಸದ ಗುಣ ಛಗಲಸ್ತ್ವನಭಿಷ್ಯಂದೀ ತೇಷಾಂ ಪೀನಸನಾಶನಃ ॥ (ಸು. 202.)

ಆಡಿನ ಮಾಂಸವು ಗುರು, ಸ್ನಿಗ್ಧ, ಅತಿಯಲ್ಲದ ಶೀತ, ಅಭಿಷ್ಯಂದಿಯಲ್ಲದ್ದು, ಅಲ್ಪವಾಗಿ ಪಿತ್ತಕಪಕರ ಮತ್ತು ಪೀನಸಹರ.

ಛಾಗಮಾಂಸಂ ಲಘು ಸ್ನಿಗ್ಧಂ ಸ್ವಾದುಪಾಕಂ ತ್ರಿದೋಷನುತ್ ।
ನಾತಿಶೀತಮದಾಹಿ ಸ್ವಾತ್ ಸ್ವಾದು ಪೀನಸನಾಶನಂ ॥
ಪರಂ ಬಲಕರಂ ರುಚ್ಯಂ ಬೃಂಹಣಂ ವೀರ್ಯವರ್ಧನಂ ।

(ಭಾ. ಪ್ರ. 157)

ಆಡಿನ ಮಾಂಸವು ಲಘು, ಸ್ನಿಗ್ಧ, ಸೀಪಾಕವುಳ್ಳದ್ದು, ತ್ರಿದೋಷಹರ, ಅತಿಯಲ್ಲದ ಶೀತ ಉಷ್ಣವಲ್ಲದ್ದು, ಸೀ, ಪೀನಸಹರ, ಉತ್ತಮವಾದ ಬಲಕಾರಿ ರುಚಿಕರ, ಪುಷ್ಟಿಕರ ಮತ್ತು ವೀರ್ಯವೃದ್ಧಿಕರ

ಸರಾ ಅತಿಯಲ್ಲದ ಉಷ್ಣ ಮತ್ತು ಧಾತುಸಾಮ್ಯಕಾರಿ ಎಂತ ಸಹ ರಾ (ಪ್ರ 101)

23 ಬೃಂಹಣಂ ಮಾಂಸಮೌರಭ್ರಂ ಪಿತ್ತಶ್ಲೇಷ್ಮಾಪಹಂ ಗುರು ॥ (ಸು. 202)

ಕುರಿಮಾಂಸದ ಗುಣ

ಕುರಿಮಾಂಸವು ಪುಷ್ಟಿಕರ, ಪಿತ್ತಕಫಕರ ಮತ್ತು ಗುರು

24. ಶ್ವಾಸ-ಕಾಸ-ಪ್ರತಿಶ್ಯಾಯ-ಯಕ್ಷ್ಮಮಜ್ವರನಾಶನಂ ।
ಗೋಜಾತಿಯ ಮಾಂಸದ ಗುಣ ಶ್ರಮಾತ್ಯಗ್ನಿಪಿತಂ ಗವ್ಯಂ ಪವಿತ್ರಮನಿಲಾಪಹಂ (ಸು. 202)

ಗೋಸಂಬಂಧವಾದ ಮಾಂಸವು ಉಬ್ಬಸ, ಕೆಮ್ಮು, ನೆಗಡಿ, ಯಕ್ಷ್ಮಜ್ವರ, ಇವುಗಳನ್ನು ನಾಶಮಾಡುವದು, ಪವಿತ್ರವಾದದ್ದು, ವಾತಹರ ಮತ್ತು ಶ್ರಮಕ್ಕೂ ಅತ್ಯಗ್ನಿಗೂ ಪಿತವಾದದ್ದು.

25. ವಾತಪಿತ್ತಹರಾ ವೃಷ್ಯಾ ಮಧುರಾ ರಸಪಾಕಯೋಃ ।
ಕೂಲವಾಸಿ ಜಾತಿಯ ಮಾಂಸದ ಗುಣ ಶೀತಲಾ ಒಲಿನಃ ಸ್ನಿಗ್ಧಾ ಮೂತ್ರಲಾಃ ಕಫವರ್ಧನಾಃ ॥ (ಸು 202)

(ಆನೆ-ಕೋಣ-ಹಂದಿ ಮೊದಲಾದ) ಕೂಲಚರ ಪಶುಗಳು ರಸದಲ್ಲಿಯೂ ಪಾಕದಲ್ಲಿಯೂ ಸೀ, ವೃಷ್ಯ, ವಾತಪಿತ್ತಹರ, ಶೀತ, ಬಲಕಾರಿ, ಸ್ನಿಗ್ಧ, ಮೂತ್ರಕಾರಿ ಮತ್ತು ಕಫವೃದ್ಧಿಕರ, ಆಗಿರುತ್ತವ

26. ವಿರೂಕ್ಷಣೋ ಲೇಖನಶ್ಚ ವೀರ್ಯೋಷ್ಣಃ ಪಿತ್ತದೂಷಣಃ ।
ಆನೆಮಾಂಸದ ಗುಣ ಸ್ವಾದ್ವಮ್ಲಲವಣಾಸ್ತೇಷಾಂ ಗಜಃ ಶ್ಲೇಷ್ಮಾನಿಲಾಪಹಃ ॥ (ಸು 202.)

ಆನೆಮಾಂಸವು ವಿಶೇಷವಾಗಿ ರೂಕ್ಷ, ಲೇಖನ, ಉಷ್ಣ, ಸೀ, ಹುಳಿ ಮತ್ತು ಉಪ್ಪು ಮಿಶ್ರವಾಗಿ ಉಳ್ಳದ್ದು, ಪಿತ್ತವನ್ನು ಕೆಡಿಸತಕ್ಕಂಥಾದ್ದು ಮತ್ತು ಕಫವಾತಹರ

27. ಸ್ನಿಗ್ಧೋಷ್ಣಮಧುರೋ ವೃಷ್ಯೋ ಮಹಿಷಸ್ತರ್ಪಣೋ ಗುರುಃ ।
ಕೋಣನ ಮಾಂಸದ ಗುಣ ನಿದ್ರಾಪುಂಸ್ತ್ವಬಲಸ್ತನ್ಯವರ್ಧನೋ ಮಾಂಸದಾರ್ಢ್ಯಕೃತ್ ॥ (ಸು. 203.)

ಕೋಣನ ಮಾಂಸವು ಸ್ನಿಗ್ಧ, ಉಷ್ಣ, ಸೀ, ವೃಷ್ಯ, ತೃಪ್ತಿಕರ, ಗುರು, ಮಾಂಸದಾರ್ಢ್ಯ ಕರ ಮತ್ತು ನಿದ್ರೆಯನ್ನೂ, ಪುಂಸ್ತ್ವವನ್ನೂ, ಬಲವನ್ನೂ, ಮೊಲೆಹಾಲನ್ನೂ ವೃದ್ಧಿಮಾಡ ತಕ್ಕುಂಧಾದ್ದು.

28 ಸ್ತೇದನಂ ಬೃಂಹಣಂ ವೃಷ್ಯಂ ಶೀತಲಂ ತರ್ಪಣಂ ಗುರು |
ಕಾಡುಹಂದಿ ಮಾಂಸದ ಗುಣ ಸ್ನಿಗ್ಧಂ ಶ್ರಮಾನಿಲಹರಂ ವಾರಾಹಂ ಬಲವರ್ಧನಂ || (ಸು. 203)

ಕಾಡುಹಂದಿಯ ಮಾಂಸವು ಬೆವರನ್ನುಂಟುಮಾಡುತ್ತದೆ. ಪುಷ್ಟಿಕರ, ವೃಷ್ಯ, ಶೀತ, ತೃಪ್ತಿಕರ, ಗುರು, ಸ್ನಿಗ್ಧ, ಶ್ರಮವನ್ನೂ, ವಾಯುವನ್ನೂ ಪರಿಹರಿಸತಕ್ಕುಂಧಾದ್ದು ಮತ್ತು ಬಲ ವೃದ್ಧಿಕಾರಿ

29. ರಕ್ತಪಿತ್ತಹರಾಃ ಶೀತಾ ಸ್ನಿಗ್ಧಾ ವೃಷ್ಯಾ ಮರುಚ್ಛಿತಃ |
ಪ್ಲವ-ಸಂಘಾತಚಾರಿ ಪಕ್ಷಿಗಳ ಮಾಂಸದ ಗುಣ ಸೃಷ್ಟಮೂತ್ರಪುರೀಷಾಶ್ಚ ಮಧುರಾ ರಸಪಾಕಯೋಃ || (ಸು 203)

ನೀರಲ್ಲಿ ತೇಲುವ ಮತ್ತು ಗುಂಪಾಗಿ ಸಂಚರಿಸುವ ಪಕ್ಷಿಗಳ ಮಾಂಸವು ರಕ್ತಪಿತ್ತಹರ, ಶೀತ, ಸ್ನಿಗ್ಧ, ವೃಷ್ಯ ವಾಯುಹರ, ಮಲಮೂತ್ರಗಳನ್ನು ಸಡಿಲಿಸತಕ್ಕುಂಧಾದ್ದು ಮತ್ತು ರಸದಲ್ಲಿಯೂ ಪಾಕದಲ್ಲಿಯೂ ಸೀ

30 ಶಂಖಿಕೂರ್ಮಾದಯಃ ಸ್ವಾದುರಸಪಾಕಾ ಮರುನ್ನುದಃ |
ಶಂಖಿಕೂರ್ಮಾದಿಗಳ ಮಾಂಸದ ಗುಣ ಶೀತಾಃ ಸ್ನಿಗ್ಧಾ ಪಿತಾಃ ಪಿತ್ತೇ ವರ್ಚಸ್ಯಾಃ ಶ್ಲೇಷ್ಮವರ್ಧನಾಃ ||
(ಸು 204.)

ಶಂಖಿ, ಮುತ್ತಿನ ಹುಳ, ಮೊದಲಾದ ಕೋಶಸ್ಥಪ್ರಾಣಿಗಳ ಮತ್ತು ಆಮೆ, ಏಡಿ, ಮುಂತಾದ ಪಾದವುಳ್ಳ ಪ್ರಾಣಿಗಳ ಮಾಂಸವು ರಸದಲ್ಲಿಯೂ ಪಾಕದಲ್ಲಿಯೂ ಸೀ, ವಾತ ಹರ, ಶೀತ, ಸ್ನಿಗ್ಧ, ಪಿತ್ತರೋಗದಲ್ಲಿ ಪಿತ, ಮಲಕಾರಿ ಮತ್ತು ಕಫವೃದ್ಧಿಕರ.

31. ಕೃಷ್ಣಕರ್ಕಟಕಸ್ತೇಷಾಂ ಬಲ್ಯಃ ಕೋಷ್ಣೋಽನಿಲಾಪಹಃ |
ಏಡಿಯ ಗುಣ ಶುಕ್ಲಃ ಸಂಧಾನಕೃತ್ ಸೃಷ್ಟವಿಣ್ಮೂತ್ರೋಽನಿಲಪಿತ್ತಹಾ || (ಸು. 204)

ಕರೀ ಏಡಿಯ ಮಾಂಸವು ಬಲಕರ, ಅಲ್ಪವಾಗಿ ಉಷ್ಣ ಮತ್ತು ವಾಯುಹರ. ಬಿಳೀ ದರದ್ದು ಸಂಧಾನಕರ, ಮಲಮೂತ್ರ ಸಡಿಲಿಸತಕ್ಕುಂಧಾದ್ದು ಮತ್ತು ವಾತಪಿತ್ತಹರ.

32. ಮತ್ಸ್ಯಾಸ್ತು ದ್ವಿವಿಧಾ ನಾದೇಯಾಃ ಸಾಮುದ್ರಾಶ್ಚ | (ಸು 204)

ಏನಾನುಗಳೊಳಗೆ ಎರಡು ವಿಧ — ನದಿಗಳಿಗೆ ಸಂಬಂಧಪಟ್ಟವು ಮತ್ತು ಸಮುದ್ರಕ್ಕೆ ಸಂಬಂಧಪಟ್ಟವು.

ಸಮೀನುಗಳ ಜಾತಿ ಮತ್ತು ಗುಣ ನಾದೇಯಾ ಮಧುರಾ ಮತ್ಸ್ಯಾ ಗುರವೋ ಮಾರುತಾಪಹಾಃ |
ರಕ್ತಪಿತ್ತಕರಾಶ್ಚೋಷ್ಣಾ ವೃಷ್ಯಾಃ ಸ್ನಿಗ್ಧಾಲ್ಪವರ್ಚಸಃ || (ಸು 204)

ಅವುಗಳೊಳಗೆ ನದೀಮಾನು ಸೀ, ಗುರು, ವಾಯುಹರ, ರಕ್ತಪಿತ್ತವನ್ನುಂಟುಮಾಡ ತಕ್ಕುಂಧಾದ್ದು, ಉಷ್ಣ, ವೃಷ್ಯ, ಸ್ನಿಗ್ಧ ಮತ್ತು ಅಲ್ಪಮಲಕಾರಿ.

33. ಸರಸ್ತಡಾಗಸಂಭೂತಾಃ ಸ್ನಿಗ್ಧಾಃ ಸ್ವಾದುರಸಾಃ ಸ್ಮೃತಾಃ ।
ಕೆರೆತಟಾಕಾದಿ ಮಾನುಗಳ ಗುಣ
ಮಹಾಹ್ರದೇಷು ಬಲಿನಃ ಸ್ವಲ್ಪೇಽಂಧಸ್ಯಬಲಾಃ ಸ್ಮೃತಾಃ ॥
(ಸು 204.)

ಸರೋವರಗಳಲ್ಲಿ ಮತ್ತು ತಟಾಕಗಳಲ್ಲಿರುವ ಮಾನುಗಳು ಸ್ನಿಗ್ಧ ಮತ್ತು ಸೀ. ಬಹಳ ನೀರುಳ್ಳ ಜಲಾಶಯಗಳಲ್ಲಿರುವ ಮಾನುಗಳು ಬಲವುಳ್ಳವು ಮತ್ತು ಅಲ್ಪ ನೀರುಳ್ಳ ಬಾವಿ ಮೊದಲಾದವುಗಳಲ್ಲಿರುವವು ಅಬಲಿಗಳು ಎಂತ ಹೇಳಲ್ಪಟ್ಟದೆ

34. ಸಾಮುದ್ರಾ ಗುರವಃ ಸ್ನಿಗ್ಧಾ ಮಧುರಾ ನಾತಿಪಿತ್ತಲಾಃ ।
ಸಮುದ್ರದ ಮಾನು ಗಳ ಗುಣ
ಉಷ್ಣಾ ವಾತಹರಾ ವೃಷ್ಯಾ ವರ್ಚಸ್ಯಾಃ ಶ್ಲೇಷ್ಮವರ್ಧನಾಃ ॥
ಬಲಾವಹಾ ವಿಶೇಷೇಣ ಮಾಂಸಾಶಿತ್ವಾತ್ಸಮುದ್ರಜಾಃ । (ಸು. 204)

ಸಮುದ್ರದ ಮಾನು ಗುರು, ಸ್ನಿಗ್ಧ, ಸೀ, ಅತಿಯಲ್ಲದ ಪಿತ್ತಕಾರಿ, ಉಷ್ಣ, ವಾತಹರ, ವೃಷ್ಯ, ಮಲಕರ ಮತ್ತು ಕಫವೃದ್ಧಿಕರ ಮಾಂಸವನ್ನು ತಿನ್ನುವಂಧವಾದ್ದರಿಂದ ಸಮುದ್ರದ ಮಾನುಗಳು ವಿಶೇಷವಾಗಿ ಬಲಕೊಡತಕ್ಕವಾಗಿರುತ್ತವೆ

ಇದರ ಮೇಲಿನ ಶ್ಲೋಕದನಂತರ 'ಸಮುದ್ರಜೇ ಘ್ಯೋ ನಾದೇಯಾ ಬೃಂಹಣತ್ವಾದ್ಗುರೋತ್ತರಾಃ' । ಎಂಬ ಅರ್ಧಶ್ಲೋಕವು ಪಾಠಾಂತರದಲ್ಲಿ ಕಾಣುತ್ತದ ಆದರಿಂದ ಸಮುದ್ರದ ಮಾನಿಗಿಂತಲೂ ನದೀಮಾನಿನಲ್ಲಿ ಬೃಂಹಣ (ಪುಷ್ಟಿಕರ) ಗುಣವು ಹೆಚ್ಚು ಇರುತ್ತದೆಂತ ಅರ್ಥವಾಗುತ್ತದೆ

35. ತೇಷಾಮಪ್ಯನಿಲಘ್ನತ್ವಾಚ್ಛ್ರೋಂಟ್ಯಕೌಪ್ಯೌ ಗುಣೋತ್ತರೌ ।
ಬಾವಿಮಾನು ಗಳ ಗುಣ
ಸ್ನಿಗ್ಧತ್ವಾತ್ತಾನ್ಯದುದಕತ್ವಾತ್ತ್ಯಯೋರ್ವಾಪ್ಯಾ ಗುಣೋತ್ತರಾಃ ॥ (ಸು 204-05.)

ಬಾವಿ ಮತ್ತು ಗುಂಡಿಗಳಲ್ಲಿಯ ಮಾನು ವಾತನಾಶನಕ್ಕೆ ಹೆಚ್ಚು ಗುಣವುಳ್ಳದ್ದು. ಅವುಗಳಿಗಿಂತ ಸ್ನಿಗ್ಧತ್ವವೂ, ಸ್ವಾದುಪಾಕಗುಣವೂ ವಿಶೇಷವಾಗಿ ಇರುವ ಕಾರಣದಿಂದ, ಕುಂಟೆಯ (ದೊಡ್ಡ ಕೆರೆಯ) ಮಾನುಗಳು ಅಧಿಕ ಗುಣವುಳ್ಳವಾಗಿರುತ್ತವೆ.

36. ನಾದೇಯಾ ಗುರವೋ ಮಧ್ಯೇ ಯಸ್ಮಾತ್ಪಚ್ಚಾಸ್ಯಚಾರಿಣಃ ।
ಯಾವ ಪ್ರಾಣಿಯಲ್ಲಿ ಯಾವ ಭಾಗ ಗುರು ಎಂಬದು
ಸರಸ್ತಡಾಗಜಾನಾಂ ತು ವಿಶೇಷೇಣ ಶಿರೋ ಲಘು ॥
ಅದೂರಗೋಚರಾ ಯಸ್ಮಾತ್ತಸ್ಮಾದುತ್ಸ್ರೋದಪಾನಜಾಃ ।
ಕಿಂಚಿನ್ಮುಕ್ತ್ವಾ ಶಿರೋದೇಶಮತ್ಯರ್ಧಂ ಗುರವಸ್ತು ತೇ ॥
ಅಧಸ್ತಾದ್ಗುರವೋ ಜ್ಞೇಯಾ ಮತ್ಸ್ಯಾಃ ಸರಸಿಜಾಃ ಸ್ಮೃತಾಃ ।
ಉರೋವಿಚರಣಾತ್ತೇಷಾಂ ಪೂರ್ವಮಂಗಂ ಲಘು ಸ್ಮೃತಂ ॥ (ಸು. 205)

ನದಿಯ ಮಾನುಗಳು ಬಾಲದಿಂದಲೂ ಮುಖದಿಂದಲೂ ಸಂಚಾರಮಾಡುವಂಧವಾದ್ದರಿಂದ, ಅವುಗಳ ಮಧ್ಯಭಾಗವು ಗುರು ಆಗಿರುತ್ತದೆ. ಆದರೆ, ಹಳ್ಳ-ಕೆರೆಗಳ ಮಾನುಗಳಲ್ಲಿ

ತಲೆ ವಿಶೇಷವಾಗಿ ಲಘುವಾಗಿರುತ್ತದೆ; ಅವುಗಳು ದೂರ ಸಂಚಾರವಿಲ್ಲದೆ ಬುಗ್ಗೆನೀರು ಕುಡಿದು ಇರುವಂಥವಾದ್ದರಿಂದ, ತಲೆಭಾಗ ಸ್ವಲ್ಪ ಬಿಟ್ಟು ಮಿಕ್ಕದ್ದೆಲ್ಲಾ ಅತಿಗುರುವಾಗಿರುತ್ತದೆ ದೊಡ್ಡ ಹಳ್ಳದಲ್ಲಿ ವಿಮಾನುಗಳು ಎದೆಯ ಮೇಲೆ ಸಂಚರಿಸುವಂಥವಾದ್ದರಿಂದ, ಅವುಗಳ ಕೆಳಗಿನ ಭಾಗವು ಗುರು ಮತ್ತು ಮುಂದಿನ ಭಾಗವು ಲಘು ಎಂತ ಹೇಳಲ್ಪಟ್ಟಿದೆ

ಶಿರಃ ಸ್ಕಂಧಂ ಕಟೀ ಪೃಷ್ಠಂ ಸಕ್ಥಿನೀ ಚಾತ್ಮಪಕ್ಷಯೋಃ ।
ಗುರುಪೂರ್ವಂ ವಿಜಾನೀಯಾದ್ವಾತವಸ್ತು ಯಥೋತ್ತರಂ ॥
ಸರ್ವಸ್ಯ ಪ್ರಾಣಿನೋ ದೇಹೇ ಮಧ್ಯೋ ಗುರುರುದಾಹೃತಃ ।
ಪೂರ್ವಭಾಗೋ ಗುರುಃ ಪುಂಸಾಮುಧೋಭಾಗಸ್ತು ಯೋಷಿತಾಂ ॥
ಉರೋಗ್ರೀವಂ ಖಹಂಗಾನಾಂ ವಿಶೇಷೇಣ ಗುರು ಸ್ಮೃತಂ ।
ಪಕ್ಷ್ಮೋತ್ಕ್ಷೇಪಾತ್ಸಮೋ ದಿಷ್ಟೋ ಮಧ್ಯಭಾಗಸ್ತು ಪಕ್ಷಿಣಾಂ ॥ (ಸು 206.)

ತಲೆ, ಮುಂಡ, ಸೊಂಟ, ಪೃಷ್ಠ, ತೊಡೆಗಳು, ಇವು ಯಥಾಪೂರ್ವವಾಗಿಯೂ ರಕ್ತಾದಿ ಧಾತುಗಳು ಯಥೋತ್ತರವಾಗಿಯೂ ಗುರು ಎಂತ ತಿಳಿಯಬೇಕು, ಮತ್ತು ತೊಡೆಗಳಲ್ಲಿ ಹಿಂದಿನ ಭಾಗವು ಮುಂದಿನ ಭಾಗಕ್ಕಿಂತ ಗುರು ಸರ್ವ ಪ್ರಾಣಿಗಳಲ್ಲಿಯೂ ದೇಹದ ಮಧ್ಯಭಾಗವೇ ಗುರು ಎಂತ ಹೇಳಲ್ಪಡುತ್ತದೆ ಗಂಡಿನಲ್ಲಿ (ಮೇಲಿನ) ಮುಂಭಾಗವೂ, ಹೆಣ್ಣಿನಲ್ಲಿ (ಕೆಳಗಿನ) ಹಿಂಭಾಗವೂ ಗುರು ಪಕ್ಷಿಗಳಲ್ಲಿ ಎದೆ ಮತ್ತು ಕುತ್ತಿಗೆ ವಿಶೇಷವಾಗಿ ಗುರು. ಪಕ್ಷಿಗಳೊಳಗೆ ರೆಕ್ಕೆಗಳನ್ನು ಕಡಿದು ಉಳಿದ ಮಧ್ಯಭಾಗವು ಸಮ (ಅತಿಗುರುವೂ ಅತಿಲಘುವೂ ಅಲ್ಲ)

37 ಅರೋಚಕಂ ಪ್ರತಿಶ್ಯಾಯಂ ಗುರು ಶುಷ್ಕಂ ಪ್ರಕೀರ್ತಿತಂ ।
ವಿಷವ್ಯಾಧಿಹತಂ ಮೃತ್ಯುಂ ಬಾಲಂ ಭರ್ದಿಂ ಚ ಕೋಪಯೇತ್ ॥

ಮಾಂಸಗಳ ಆಯೋಗ್ಯತೆ

ಕಾಸಶ್ವಾಸಕರಂ ವೃದ್ಧಂ ತ್ರಿದೋಷಂ ವ್ಯಾಧಿದೂಷಿತಂ ।
ಕ್ಲಿನ್ನಮುತ್ಕ್ಲೇಶಜನನಂ ಕೃಶಂ ವಾತಪ್ರಕೋಪಣಂ ।
ಏಭ್ಯೋಽನ್ಯೇಷಾಮುಪಾದೇಯಂ ಮಾಂಸಮಿತಿ । (ಸು. 205.)

ಒಣಗಿದ ಮಾಂಸವು ಗುರುವಾಗಿ, ಅದರಿಂದ ಅರುಚಿಯೂ, ನೆಗಡಿಯೂ, ವಿಷದಿಂದ ಅಥವಾ ರೋಗದಿಂದ ಸತ್ತವರ ಮಾಂಸದಿಂದ ಮೃತ್ಯುವೂ, ಒಳೆದಾದ ಮಾಂಸದಿಂದ ವಾಂತಿಯೂ, ಮುದಿಯಾದವರ ಮಾಂಸದಿಂದ ಉಬ್ಬಸವೂ, ಕೆಮ್ಮೂ, ರೋಗದಿಂದ ದೂಷಿತವಾದ ಮಾಂಸದಿಂದ ತ್ರಿದೋಷವೂ. ಹಸೀ ಮಾಂಸದಿಂದ ಅಸಹ್ಯತೆಯೂ, ಬಡೆಯಾದ ಮಾಂಸದಿಂದ ವಾತಪ್ರಕೋಪವೂ ಉಂಟಾಗುವವಾದ್ದರಿಂದ, ಈ ದೋಷಗಳಿಲ್ಲದ ಮಾಂಸವೇ ಸ್ವೀಕರಿಸಲ್ಪಡಬೇಕಾಗಿರುತ್ತದೆ.

38. ಸ್ತ್ರಿಯಶ್ಚತುಷ್ಪಾದೇಷು, ಪುಮಾಂಸೋ ವಿಹಂಗೇಷು. ಮಹಾಶರೀರೇಷ್ವಲ್ಪಶರೀರಾ ಅಲ್ಪಶರೀರೇಷು ಮಹಾಶರೀರಾಃ, ಪ್ರಧಾನತಮಾ, ಏವಮೇಕಜಾತೀಯಾನಾಂ ಮಹಾಶರೀರೇಭ್ಯಃ ಕೃಶಶರೀರಾಃ ಪ್ರಧಾನತಮಾಃ ।

ಲಿಂಗಭೇದ ಮತ್ತು ಶರೀರಸ್ಥಿತಿ ಮೇಲೆ ಪ್ರಶಸ್ತತೆ

(ಸು. 205.)

ನಾಲ್ಕು ಕಾಲುಗಳುಳ್ಳವುಗಳೊಳಗೆ ಹೆಣ್ಣೂ, ಪಕ್ಷಿಗಳೊಳಗೆ ಗಂಡೂ, ದೊಡ್ಡ ಶರೀರವುಳ್ಳ ಜಾತಿಗಳೊಳಗೆ ಅಲ್ಪ ಶರೀರದವುಗಳೂ, ಅಲ್ಪ ಶರೀರವುಳ್ಳ ಜಾತಿಗಳೊಳಗೆ ದೊಡ್ಡ ಶರೀರದವುಗಳೂ, ಹೆಚ್ಚು ಪ್ರಧಾನವಾಗಿರುತ್ತವೆ. ಹೀಗೆಯೇ, ಒಂದೇ ಜಾತಿಗೆ ಸೇರಿದವುಗಳೊಳಗೆ ದೊಡ್ಡ ಶರೀರವುಳ್ಳದ್ದಕ್ಕಿಂತ ಕೃಶಶರೀರವುಳ್ಳದ್ದು ಹೆಚ್ಚು ಪ್ರಧಾನವಾಗಿರುತ್ತದೆ.

ಪ್ರಮಾಣಾಧಿಕಾಸ್ತು ಸ್ವಜಾತೌ ಚಾಲ್ಪಸಾರಾ ಗುರವಶ್ಚ । (ಸು. 206)

ಸ್ವಜಾತಿಯಲ್ಲಿ ಅಧಿಕಪ್ರಮಾಣವುಳ್ಳವು ಗುರು ಮತ್ತು ಅಲ್ಪವಾಗಿ ಸಾರವುಳ್ಳವು ಆಗಿರುತ್ತವೆ

39 ಅತೀವ ರೂಕ್ಷಂ ಮಾಂಸಂ ತು ವಿಹಂಗಾನಾಂ ಫಲಾಶಿನಾಂ ।
ಪಕ್ಷಿಗಳಲ್ಲಿ ಆಹಾರಭೇದದಿಂದ ಗುಣಭೇದ ಬೃಂಹಣಂ ಮಾಂಸಮತ್ಯರ್ಥಂ ವಿಗಾನಾಂ ಪಿತಿತಾಶಿನಾಂ ॥
ಮತ್ಸ್ಯಾಶಿನಾಂ ಪಿತ್ತಕರಂ ವಾತಘ್ನಂ ಧಾನ್ಯ*ಚಾರಿಣಾಂ । (ಸು. 206)

ಪಕ್ಷಿಗಳೊಳಗೆ ಫಲ ತಿಂದು ಜೀವಿಸುವವುಗಳ ಮಾಂಸವು ಅತಿರೂಕ್ಷ, ಮಾಂಸ ತಿಂದು ಜೀವಿಸುವವುಗಳ ಮಾಂಸವು ಅತಿಯಾಗಿ ಬೃಂಹಣ (ಪುಷ್ಟಿಕರ), ವಿಸಾನುಗಳನ್ನು ತಿಂದು ಜೀವಿಸುವವುಗಳ ಮಾಂಸವು ಪಿತ್ತಕರ, ಮತ್ತು ಧಾನ್ಯಗಳನ್ನು ತಿಂದು ಜೀವಿಸುವವುಗಳ ಮಾಂಸವು ವಾತಹರ, ಆಗಿರುತ್ತದೆ

ಪರಾ *'ಧಾನ್ಯ'ದ ಸ್ಥಾನದಲ್ಲಿ 'ಧನ್ವ' ಎಂತ ಪಾಠಾಂತರ ಕಾಣುತ್ತದೆ 'ವಾತಘ್ನಂ ಧನ್ವಚಾರಿಣಾಂ' ಎಂದರೆ 'ನೀರಾಶ್ರಯ ಕಡಿಮೆಯಾದ ಬಂಜರುಸ್ಥಳಗಳಲ್ಲಿ ಸಂಚರಿಸುವವುಗಳ ಮಾಂಸವು ವಾತಹರ' ಎಂತ ಅರ್ಥವಾಗುತ್ತದೆ

XVI ನೇ ಅಧ್ಯಾಯ.

ಸದ್ವೃತ್ತ (ಸದಾಚಾರ) ನಿರ್ದೇಶ.

1 ಯಶಸ್ಯಂ ಸ್ವರ್ಗ್ಯಮಾಯುಷ್ಯಂ ಧನಧಾನ್ಯವಿವರ್ಧನಂ ।
ದೇವತಾತಿಥಿ ಬ್ರಾಹ್ಮಣ ಪೂಜೆ ದೇವತಾತಿಥಿವಿಪ್ರಾಣಾಂ ಪೂಜನಂ ಗೋತ್ರವರ್ಧನಂ ॥ (ಸು. 505.)

ದೇವರ, ಅತಿಥಿಗಳ ಮತ್ತು ಬ್ರಾಹ್ಮಣರ ಪೂಜಮಾಡುವದರಿಂದ ಕೀರ್ತಿಯೂ, ಸ್ವರ್ಗವೂ, ಆಯುರ್ವೃದ್ಧಿಯೂ, ಧನಧಾನ್ಯವೃದ್ಧಿಯೂ, ಕುಲವೃದ್ಧಿಯೂ ದೊರಕುವವು.

2. ತತ್ರಾದಿತ ಏವ ನೀಹನಖರೋಮ್ಣಾ ಶುಚಿನಾ ಶುಕ್ಲವಾಸಸಾ ಲಘೂ
ಷ್ಣೀಷಛತ್ರೋಪಾನತ್ಕೇನ ದಂಡಪಾಣಿನಾ ಕಾಲೇ ಹಿತಮಿತಮಧುರ
ಪೂರ್ವಾಭಿಭಾಷಿಣಾ ಬಂಧುಭೂತೇನ ಭೂತಾನಾಂ ತು ಗುರುವೃದ್ಧಾ
ಸಂಚಾರ ನುಮತೇನ ಸುಸಹಾಯೇನಾನನ್ಯಮನಸಾ ಖಲೂಪಚರಿತವ್ಯಂ ತದಪಿ
ನ ರಾತ್ರೌ ನ ಕೇಶಾಸ್ಥಿಕಂಟಕಾಶ್ಮತುಷಭಸ್ಮೋತ್ಕರಕಪಾಲಾಂಗಾರಾ
ಮೇಧ್ಯಸ್ಥಾನಬಲಿಭೂಮಿಷು ನ ವಿಷಮೇಂದ್ರಕೀಲಚತುಷ್ಪಥಶ್ವಭ್ರಾ
ಣಾಮುಪರಿಷ್ಟಾತ್ । (ಸು. 507)

ಮೊದಲಾಗಿ ಉಗುರುಗಳನ್ನೂ ರೋಮಗಳನ್ನೂ ಕತ್ತರಿಸಿ ಗಿಡ್ಡಮಾಡಿಕೊಂಡು, ಶುಚಿಯಾಗಿ, ಬಿಳೇ ವಸ್ತ್ರಗಳನ್ನು ಧರಿಸಿಕೂಂಡು, ಹಗುರವಾದ ರುಮಾಲವನ್ನಿಟ್ಟುಕೊಂಡು, ಕೊಡೆ ಹಿಡಕೊಂಡು, ಪಾದರಕ್ಷೆ ಹಾಕಿಕೊಂಡು, ಕೈಯಲ್ಲಿ ದಂಟಿಯುಳ್ಳವನಾಗಿ, ಉಚಿತಕಾಲದಲ್ಲಿ ಹಿತವಾಗಿಯೂ, ಮಿತವಾಗಿಯೂ, ಸವಿಯಾಗಿಯೂ, ಮುಂದಾಗಿಯೂ ಮಾತಾಡುವವನಾಗಿ, ಸರ್ವ ಪ್ರಾಣಿಗಳಲ್ಲಿಯೂ ಬಂಧುಭಾವವುಳ್ಳವನಾಗಿ, ಗುರುಗಳಿಗೂ ಹಿರಿಯರಿಗೂ ವಿಧೇಯನಾಗಿ, ಒಳ್ಳೇ ಸಂಗಾತಿಗಳೊಂದಿಗೆ, ಬೇರೆ ಕಡೆ ಮನಸ್ಸಿಡದೆ, ಸಂಚರಿಸತಕ್ಕದ್ದು (ಅಥವಾ ಒಡನಾಡಬೇಕು) ಅಂಥಾ ಸಂಚಾರವನ್ನು ರಾತ್ರಿಯಲ್ಲಿಯಾಗಲಿ, ಕೂದಲು, ಎಲುಬು, ಮುಳ್ಳು, ಕಲ್ಲು, ತವುಡು, ಬೂದಿರಾಶಿ, ಕಪಾಲ, ಮಸಿ, ಮಲ, ಇವುಗಳ ಸ್ಥಾನಗಳಲ್ಲಿಯಾಗಲಿ, ಬಲಿಭೂಮಿಯಲ್ಲಿಯಾಗಲಿ, ಎತ್ತರವಾದ ಗುಡ್ಡಗಳ ಸುತ್ತು ಆಗಲಿ, ನಾಲ್ಕು ಮಾರ್ಗಗಳು ಕೂಡಿರುವ ಸ್ಥಳದ ಸವಿಾಪವಾಗಲಿ, ಖನಿಗಳ ಸುತ್ತು ಆಗಲಿ, ಮಾಡಕೂಡದು.

3. ನ ರಾಜದ್ವಿಷ್ಟಪರುಷಪೈಶುನ್ಯಾನೃತಾನಿ ವದೇತ್ । ನ ದೇವಬ್ರಾಹ್ಮಣ
ನಿಷ್ಠುರ, ಚಾಡಿ ಮುಂತಾದದ್ದು ನಿಂದ್ಯ ಪಿತೃಪರಿವಾದಾಂಶ್ಚ ನ ನರೇಂದ್ರದ್ವಿಷ್ಟೋನ್ಮತ್ತಪತಿತಕ್ಲೀಬನೀಚಾಚಾ
ರಾನುಪಾಸೀತ (ಸು. 507.)

ರಾಜವಿರುದ್ಧವಾದ, ಕ್ರೂರವಾದ, ಚಾಡಿಯಾದ, ಅಥವಾ ಸುಳ್ಳಾದ ಮಾತುಗಳನ್ನಾಡಬಾರದು, ದೇವರನ್ನೂ, ಬ್ರಾಹ್ಮಣರನ್ನೂ, ಪಿತೃಗಳನ್ನೂ, ನಿಂದಿಸಬಾರದು. ಅರಸನ

ವಿರೋಧವುಳ್ಳವರನ್ನೂ, ಉನ್ಮತ್ತರಾದವರನ್ನೂ, ಪತಿತ (ಧರ್ಮಭ್ರಷ್ಟ)ರನ್ನೂ ಸಣ್ಣ ಮನುಷ್ಯರನ್ನೂ, ನೀಚವಾದ ಆಚಾರವುಳ್ಳವರನ್ನೂ ಪೂಜಿಸಬಾರದು (ಹೊಂದಿರಬಾರದು).

4. ಕೆಲವು ನಿಷೇಧಗಳು

ಸರ್ವಪ್ರಾಣಿಷು ಬಂಧುಭೂತಃ ಸ್ಯಾತ್ ಕ್ರುದ್ಧಾನಾಮನುನೇತಾ ಭೀತಾನಾಮಾಶ್ವಾಸಯಿತಾ ದೀನಾನಾಮಭ್ಯುಪೇತ್ತಾ ಸತ್ಯಸಂಧಃ ಸಾಮಪ್ರಧಾನಃ ಪರಪರುಷವಚನಸಹಿಷ್ಣುಃ ಅಮರ್ಷಘ್ನಃ ಪ್ರಶಮಗುಣದರ್ಶೀ । ರಾಗದ್ವೇಷಹೇತೂನಾಂ ಹಂತಾ । (ಚ 46.)

ಸರ್ವಪ್ರಾಣಿಗಳಲ್ಲಿಯೂ ಬಂಧುಭಾವವುಳ್ಳವನಾಗಿಯೂ, ಸಿಟ್ಟುಗೊಂಡವರಿಗೆ ಸಮಾಧಾನ ಮಾಡುವವನಾಗಿಯೂ, ಭಯಪಟ್ಟವರಿಗೆ ಧೈರ್ಯಕೊಡುವವನಾಗಿಯೂ, ಬಡವರಿಗೆ ಸಹಾಯಕನಾಗಿಯೂ, ಸತ್ಯಸಂಧನಾಗಿಯೂ, ಸಾಮಗುಣವನ್ನು ಪ್ರಧಾನವಾಗಿಟ್ಟುಕೊಂಡವನಾಗಿಯೂ, ಅನ್ಯರ ಕ್ರೂರ ಮಾತುಗಳನ್ನು ಸಹಿಸುವವನಾಗಿಯೂ, ಸಿಟ್ಟನ್ನು ತಾಳಿಕೊಳ್ಳುವವನಾಗಿಯೂ, ಶಾಂತಗುಣಪ್ರದರ್ಶಕನಾಗಿಯೂ, ಮೋಹದ ಮತ್ತು ದ್ವೇಷದ ಹೇತುವನ್ನು ನಾಶಮಾಡುವವನಾಗಿಯೂ ಇರತಕ್ಕದ್ದು

5 ಪಾಪ ಬುದ್ಧಿ ತ್ಯಾಗ

ನಾನ್ಯಸ್ವಮಾದದ್ಯಾತ್ । ನಾನ್ಯಸ್ತ್ರಿಯಮಭಿಲಷೇತ್ । ನಾನ್ಯಶ್ರಿಯಂ ನ ವೈರಂ ರೋಚಯೇತ । ನ ಕುರ್ಯಾತ್ಪಾಪಂ ನ ಪಾಪೇಽಪಿ ಪಾಪೀ ಸ್ಯಾತ್ । ನಾನ್ಯದೋಷಾನ್ ಬ್ರೂಯಾತ್ । ನಾನ್ಯರಹಸ್ಯಮಾಗಮಯೇತ್ । (ಚ 46)

ಇನ್ನೊಬ್ಬನ ಸೊತ್ತನ್ನು ಅಪಹರಿಸಬಾರದು, ಇನ್ನೊಬ್ಬನ ಹಂಗಿಸಿನ ಅಭಿಲಾಷ ಮಾಡಬಾರದು, ಇನ್ನೊಬ್ಬನ ಸಂಪತ್ತಿನಲ್ಲಿಯಾಗಲಿ, ವೈರದಲ್ಲಿಯಾಗಲಿ, ರುಚಿಯನ್ನುಂಟುಮಾಡಬಾರದು, ಪಾಪವನ್ನು ಮಾಡಬಾರದು, ಪಾಪಿಯ ವಿಷಯದಲ್ಲಿ ಸಹ ಪಾಪಿಯಾಗಬಾರದು, ಇನ್ನೊಬ್ಬನ ದೋಷಗಳನ್ನು ಹೇಳಬಾರದು ಮತ್ತು ಇನ್ನೊಬ್ಬನ ಗುಟ್ಟನ್ನು ತಿಳಿಯಲು ಪ್ರಯತ್ನಿಸಬಾರದು.

6 ಆಸನ ಶಯನಗಳು

ನ ಜಾನುಸಮಂ ಕಠಿನಮಾಸನಮಧ್ಯಾಸೀತ । ನಾತಿನಾಸ್ತೀರ್ಣಮನುಪಹಿತಮವಿಶಾಲಮಸಮಂ ವಾ ಶಯನಂ ಪ್ರಪದ್ಯೇತ । (ಚ. 46.)

ಮೊಣಗಂಟಿನ ಎತ್ತರದ ಕಠಿಣವಾದ ಆಸನದ ಮೇಲೆ ಕೂತುಕೊಳ್ಳಬಾರದು; ವಸ್ತ್ರ ಹಾಸದ, ತಲೆಗಿಂಬಿಲ್ಲದ, ವಿಶಾಲವಲ್ಲದ, ಮತ್ತು ಎತ್ತರತಗ್ಗುಳ್ಳ, ಹಾಸಿಗೆಯನ್ನು ಉಪಯೋಗಿಸಬಾರದು

7. ಅಲ್ಪಾಸನ

ನಾಲ್ಪಕಾಷ್ಠಾಸನಮಧ್ಯಾಸೀತ । (ಸು. 508)

ಅಲ್ಪವಾದ (ಅಬಲಿಯಾದ) ಮರನ ಆಸನದ ಮೇಲೆ ಕೂತುಕೂಳ್ಳಬಾರದು.

8. ವೃಕ್ಷಪರ್ವತಪ್ರಪಾತವಿಷಮವಲ್ಮೀಕದುಷ್ಟವಾಜಿಕುಂಜರಾದ್ಯಧಿರೋ
ಹಣಾನಿ ಪರಿಹರೇತ್ ಪೂರ್ಣನದೀಸಮುದ್ರಾವಿದಿತಪಲ್ವಲಶ್ವಭ್ರಕೂಪಾ
ವತರಣಾನಿ | (ಸು 507)

ಆಪಾಯಕರವಾದ ಕೆಲಸಗಳು

ಮರ, ಪರ್ವತ, ಝರಿ, ಹತ್ತಲಿಕ್ಕೆ ಕಷ್ಟವಾದ ಸ್ಥಳ, ಹುತ್ತ ಮುತ್ತು ಕೆಟ್ಟ ಕುದುರೆ, ಆನೆ ಮುಂತಾದ ವಾಹನಗಳು, ಇವುಗಳ ಏರೋಣವನ್ನೂ, ಪೂರ್ಣವಾದ ನದಿ, ಸಮುದ್ರ, ಅರಿಯದ ಕೊಳ, ಗನಿ ಮತ್ತು ಬಾವಿ, ಇವುಗಳೊಳಗೆ ಇಳಿಯೋಣವನ್ನೂ ಬಿಟ್ಟುಬಿಡಬೇಕು

9. ನಾಗ್ನ್ಯುತ್ಪಾತಮಭಿತಶ್ಚರೇತ್ | ನೋಚ್ಚೈರ್ಹಸೇತ್ | ನ ಶಬ್ದವಂತಂ ಮಾರುತಂ ಮುಂಚೇತ್ | ನಾಸಂವೃತಮುಖೋ ಜೃಂಭಾಂ ಕ್ಷವಥುಂ ಹಾಸ್ಯಂ ವಾ ಪ್ರವರ್ತಯೇತ್ | ನ ನಾಸಿಕಾಂ ಕುಷ್ಣೀಯಾತ್ | ನ ದಂತಾನ್ ವಿಘಟ್ಟಯೇತ್ | ನ ನಖಾನ್ ವಾದಯೇತ್ | ನಾಸ್ವೇನ್ಯಭಿಹನ್ಯಾತ್ | ನ ಭೂಮಿಂ ವಿಲಿಖೇತ್ | ನ ಛಿಂದ್ಯಾತ್ತೃಣಂ | ನ ಲೋಷ್ಟಂ ಮೃದ್ನೀಯಾತ್ | ನ ವಿಗುಣಮಂಗೈಶ್ಚೇಷ್ಟೇತ | ಜ್ಯೋತೀಂಷ್ಯಗ್ನಿಂಚಾಮೇಧ್ಯಮಶಸ್ತಂ ಚ ನಾಭಿವೀಕ್ಷೇತ | (ಚ. 46)

ಕೆಲವು ದುರಭ್ಯಾಸಗಳು

ಅಗ್ನ್ಯುತ್ಪಾತದ ಸುತ್ತು ತಿರುಗಾಡಬಾರದು, ಗಟ್ಟಿಯಾಗಿ ನಗಬಾರದು, ಶಬ್ದಮಾಡಿ ವಾಯುವನ್ನು ಬಿಡಬಾರದು, ಬಾಯಿಗೆ ಸರಿಯಾಗಿ ಅಡ್ಡಹಿಡಕೊಳ್ಳದೆ ಆಕಳಿಸಲೂ, ಕೆಮ್ಮಿಸಲೂ, ನಗಲೂ, ಬಾರದು; ಮೂಗನ್ನು ಎಳೆಯಬಾರದು, ಹಲ್ಲುಗಳನ್ನು ಕಡೆಯಬಾರದು, ಉಗುರುಗಳಿಂದ ವಾದ್ಯ (ಶಬ್ದ) ಮಾಡಬಾರದು, ಎಲುಬುಗಳ ಮೇಲೆ ಹೊಡೆಯಬಾರದು, ನೆಲದ ಮೇಲೆ ಬರೆಯಬಾರದು, ಹುಲ್ಲುಕಡ್ಡಿಯನ್ನು ಸೀಳಬಾರದು; ಮಣ್ಣಿನ ಹೆಂಟೆಯನ್ನು ಹಿಸಿಕಿ ಪುಡಿಮಾಡಬಾರದು, ಅನರ್ಥವಾಗಿ ಅಂಗಚೇಷ್ಟೆಮಾಡಬಾರದು, ಜ್ಯೋತಿಗಳನ್ನೂ ಬೆಂಕಿಯನ್ನೂ, ಅಮೇಧ್ಯವನ್ನೂ, ಅಸಹ್ಯವಾದದ್ದನ್ನೂ ಸಮೀಪದಿಂದ ನೋಡಬಾರದು.

10. ನ ಕ್ಷಪಾಸ್ವಮರಸದನಚೈತ್ಯಚತ್ವರಚತುಷ್ಪಥೋಪವನಶ್ಮಶಾನಾಯತನಾನ್ಯಾಸೇವೇತ | ನೈಕಃ ಶೂನ್ಯಗೃಹಂ ನ ಚಾಟವೀಮನುಪ್ರವಿಶೇತ್ | ನ ಪಾಪವೃತ್ತಾನ್ ಸ್ತ್ರೀಮಿತ್ರಭೃತ್ಯಾನ್ ಭಜೇತ | ನೋತ್ತಮೈರ್ವಿರುಧ್ಯೇತ | ನಾವರಾನುಪಾಸೀತ | ನ ಜಿಹ್ವಂ ರೋಚಯೇತ್ | ನಾಽನಾರ್ಯಮಾಶ್ರಯೇತ್ | ನ ಭಯಮುತ್ಪಾದಯೇತ್ | ನ ಸಾಹಸಾತಿಸ್ವಪ್ನಜಾಗರಸ್ನಾನಪಾನಾಶನಾನ್ಯಾಸೇವೇತ | ನೋರ್ಧ್ವಜಾನುಶ್ಚಿರಂ ತಿಷ್ಠೇತ್ | ನ ವ್ಯಾಲಾನುಪಸರ್ಪೇತ್ ನ ದಂಷ್ಟ್ರಿಣಃ ನ ವಿಷಾಣಿನಃ | ಪುರೋವಾತಾತಪಾವಶ್ಯಾಯಾತಿಪ್ರವಾತಾನ್ ಜಹ್ಯಾತ್, ಕಲಂ ನಾರಭೇತ | ನಾನಿಭೃತೋಽಗ್ನಿಮುಪಾಸೀತ, ನೋಚ್ಛಿಷ್ಟೋ ನಾಧಃಕೃತ್ವಾ ಪ್ರತಾಪಯೇತ್ | ನಾವಿಗತಕ್ಲಮೋ ನಾಪ್ಲುತವದನೋ ನ ನಗ್ನ ಉಪಸ್ಪೃಶೇತ್ | ನ ಸ್ನಾನಶಾಟ್ಯಾ ಸ್ಪೃಶೇದುತ್ತಮಾಂಗಂ | ನ ಕೇಶಾಗಾರ್ಣ್ಯಭಿಹನ್ಯಾತ್ | ನೋಪಸ್ಪೃಶ್ಯ ತೇ ಏವ ವಾಸಸೀ ವಿಧೃಯಾತ್ | (ಚ. 46-47.)

ವೃತ್ತಾಚಾರಗಳ ಕುರಿತು ಕೆಲವು ಸದುಪದೇಶಗಳು

ರಾತ್ರಿಗಳಲ್ಲಿ ದೇವರ ಮನೆ, ಯಜ್ಞಶಾಲೆ, ಅಂಗಳ, ನಾಲ್ಕು ಮಾರ್ಗಗಳು ಕೂಡಿದ ಸ್ಥಳ, ತೋಟ, ಶ್ಮಶಾನ, ಈ ಸ್ಥಳಗಳನ್ನು ಆಶ್ರಯಿಸಬಾರದು. ಒಂಟಿಗನಾಗಿ ಖಾಲಿಯಾಗಿದ್ದ ಮನೆಯನ್ನಾಗಲಿ, ಅಡವಿಯನ್ನಾಗಲಿ, ಪ್ರವೇಶಿಸಬಾರದು ಪಾಪವೃತ್ತಿಯವರಾದ ಸ್ತ್ರೀಯರನ್ನಾಗಲಿ, ಮಿತ್ರರನ್ನಾಗಲಿ, ಚಾಕರರನ್ನಾಗಲಿ ಇಟ್ಟುಕೊಳ್ಳಬಾರದು. ಉತ್ತಮರ ಹತ್ತರ ಏರುದ್ಧ ಕಟ್ಟಿಕೊಳ್ಳಬಾರದು ಕೀಳುಜನರ ಸೇವೆ ಮಾಡಬಾರದು ನಾಲಿಗೆಯನ್ನು ರುಚಿಸಬಾರದು. ಮಾನವಂತನಲ್ಲದವನನ್ನು ಆಶ್ರಯಿಸಬಾರದು ಭಯವನ್ನು ಕಲ್ಪಿಸಬಾರದು. ಸಾಹಸವನ್ನಾಗಲಿ, ಅತಿಯಾದ ನಿದ್ರೆ, ಜಾಗರ, ಸ್ನಾನ, ಪಾನ, ಅಶನಗಳನ್ನಾಗಲಿ, ಮಾಡಬಾರದು ಕಾಲಿನ ಮೂಗಂಟನ್ನು ಮೇಲೆ ಮಾಡಿಕೊಂಡು ಹೆಚ್ಚುಕಾಲ ನಿಲ್ಲಬಾರದು. ಹಾವುಗಳ, ದಾಡೆಮೃಗಗಳ ಮತ್ತು ಕೋಡುಮೃಗಳ ಸಮೀಪಕ್ಕೆ ಹೋಗಬಾರದು ಮೂಡಣ ಗಾಳಿಯನ್ನೂ, ಬಿಸಿಲನ್ನೂ, ಮಂಜನ್ನೂ, ಬರುಗಾಳಿಯನ್ನೂ ತಪ್ಪಿಸಿಕೊಳ್ಳಬೇಕು. ಜಗಳವನ್ನು ಆರಂಭಿಸಬಾರದು ಚಂಚಲಚಿತ್ತನಾಗಿಯಾಗಲಿ, ಬಾಯಿ ಶುಚಿಮಾಡಿಕೊಳ್ಳದೆಯಾಗಲಿ, ಅಗ್ನ್ಯುಪಾಸನವಾಡಬಾರದು ಮತ್ತು ಅಗ್ನಿಯನ್ನು ಕೆಳಗೆ ಮಾಡಿ ಉರಿಸಬಾರದು. ಶ್ರಮ ಪರಿಹರಿಸಿಕೊಳ್ಳದೆ, ಬಾಯಿಯಲ್ಲಿ ಎಂಜಲಿಟ್ಟುಕೊಂಡು, ಅಥವಾ ಬತ್ತಲೆಯಾಗಿ, ಸ್ನಾನಮಾಡಬಾರದು ಸ್ನಾನದ ಅಂಗವಸ್ತ್ರದಿಂದ ತಲೆಯನ್ನು ಒರಸಬಾರದು. ತಲೆಕೂದಲುಗಳ ಕೂಟಗಳನ್ನು ಕೂಡವಬಾರದು ಸ್ನಾನಮಾಡಿ ಆ ಎರಡು ವಸ್ತ್ರಗಳನ್ನೇ ಧರಿಸಬಾರದು

11. ನಾನೃಜುಃ ಕ್ಷುಯಾನ್ನಾದ್ಯಾತ್ ನ ಶಯೀತ | ನ ವೇಗಿತೋಽನ್ಯಂ ಕಾರ್ಯಂ ಸ್ಯಾತ್ | ನ ವಾಯ್ವಗ್ನಿಸಲಿಲಸೋಮಾರ್ಕದ್ವಿಜಗುರುಪ್ರತಿಮುಖಂ ನಿಷ್ಠೀವಿಕಾವಾತವರ್ಚೋಮೂತ್ರಾಣ್ಯುತ್ಸೃಜೇತ್ | ನ ಪಂಥಾನಮವಮೂತ್ರಯೇತ್ | ನ ಜನವತಿ ನಾನ್ನಕಾಲೇ ನ ಜಪ್ಯಹೋಮಾಧ್ಯಯನಬಲಿಮಂಗಲಕ್ರಿಯಾಸು ಶ್ಲೇಷ್ಮಣಿಂಘಾನಕಂ ಮುಂಚೇತ್ | ನ ಸ್ತ್ರಿಯಮವಜಾನೀತ ನಾತಿಪ್ರಶ್ರಂಭಯೇತ್ ನ ಗುಹ್ಯಮನುಶ್ರಾವಯೇತ್ ನಾಧಿಕುರ್ಯಾತ್ (ಚ 47-48)

ವೇಗೋತ್ಸರ್ಜನ ಮತ್ತು ಸ್ತ್ರೀ ವಿಷಯ

ಸಮಕಾಯನಾಗಿರದೆ ನೀನಜಾರದು, ಉಣ್ಣಜಾರದು ಮತ್ತು ಮಲಗಬಾರದು (ನೀರು-ಮೂತ್ರ ಮೊದಲಾದ) ವೇಗವುಳ್ಳವನಾದಾಗ್ಗೆ ಅನ್ಯಕಲಸ ಮಾಡಬಾರದು ಗಾಳಿಗೂ, ಬೆಂಕಿಗೂ, ನೀರಿಗೂ, ಚಂದ್ರನಿಗೂ, ಸೂರ್ಯನಿಗೂ, ದ್ವಿಜರಿಗೂ, ಗುರುವಿಗೂ, ಎದುರಾಗಿ ಎಂಜಲುಗಿಯೋಣ(ಧೂಕಾರ)ವನ್ನೂ, ವಾಯು-ಮಲ-ಮೂತ್ರಗಳ ವಿಸರ್ಜನವನ್ನೂ ಮಾಡಬಾರದು. ಮಾರ್ಗದಲ್ಲ ಮೂತ್ರ ಮಾಡಬಾರದು. ಜನರಿರುವಲ್ಲ, ಉಣ್ಣುವಾಗ್ಗ ಮತ್ತು ಜಪ-ಹೋಮ-ಅಧ್ಯಯನ-ಬಲಿ-ಮಂಗಲಕೆಲಸದ ಕಾಲದಲ್ಲಿ ಕಫಪನ್ನಾಗಲಿ, ಮೂಗಿನ ಸಿಂಬಳವನ್ನಾಗಲಿ, ಹೊರಗೆ ಹಾಕಬಾರದು. ಸ್ತ್ರೀಯರಿಗೆ ಅಪಮಾನ ಮಾಡಬಾರದು, ಅವರಲ್ಲಿ ಅತಿಯಾಗಿ ನಂಬಿಕೆ ಇಡಬಾರದು, ಅವರಿಗೆ ಗುಟ್ಟನ್ನು ಕೇಳಿಸಬಾರದು ಮತ್ತು ಅವರಿಗೆ ಅಧಿಕಾರ ಕೊಡಬಾರದು.

12. ನ ಸತೋ ನ ಗುರೂನ್ ಪರಿವದೇತ್ । ನಾಶುಚಿರಭಿಚಾರಕರ್ಮ ಜೈತ್ಯಪೂಜ್ಯಪೂಜಾಧ್ಯಯನಮಭಿನಿರ್ವರ್ತಯೇತ್ । (ಚ 48.)

ಗುರುನಿಂದೆ ಮತ್ತು ಪೂಜಾದಿಗಳಲ್ಲಿ ಅಶುಚಿತ್ವ

ಸಜ್ಜನರನ್ನೂ, ಗುರುಗಳನ್ನೂ ದೂರಬಾರದು. ಮಂತ್ರವಾದದ ಕೆಲಸವನ್ನಾಗಲಿ, ದೇವಸ್ಥಾನದ ಅಥವಾ ಪೂಜ್ಯರ ಪೂಜೆಯನ್ನಾಗಲಿ, ಅಧ್ಯಯನವನ್ನಾಗಲಿ, ಅಶುಚಿಯಾಗಿ ನಡಿಸಬಾರದು

13 ನಾತಿಸಮಯಂ ಒಹ್ಯಾತ್ । ನ ನಿಯಮಂ ಭಂದ್ಯಾತ್ । (ಚ. 48.)

ಕಾಲಾಲಕ್ಷ್ಯತೆ ಮತ್ತು ನಿಯಮಭಂಗ

ಸಮಯವನ್ನು ಉಪಯೋಗಿಸದೆ ಅತಿಯಾಗಿ ಕಳೆಯಬಾರದು ನಿಯಮವನ್ನು ಕಡಿಯಬಾರದು (ಕಾಪಾಡಿಕೊಳ್ಳಬೇಕು)

14 ನ ಸಂಧ್ಯಾಸ್ವಭ್ಯವಹಾರಾಧ್ಯಯನಸ್ತ್ರೀಸ್ವಪ್ನಸೇವೀ ಸ್ಯಾತ್ । ನ ಬಾಲವೃದ್ಧಲುಬ್ಧಕ್ಲಿಷ್ಟಕ್ಲೀಬೈಃ ಸಹ ಸಖ್ಯಂ ಕುರ್ಯಾತ್ । ನ ಮದ್ಯದ್ಯೂತವೇಶ್ಯಾಪ್ರಸಂಗರುಚಿಃ ಸ್ಯಾತ್ । ನ ಗುಹ್ಯಂ ಏವೃಣುಯಾತ್ । ನ ಕಂಚಿದವಜಾನೀಯಾತ್ । ನಾಹಂಮಾನೀ ಸ್ಯಾತ್ । ನಾದಕ್ಷೋ ನಾದಕ್ಷಿಣೋ ನಾಸೂಯಕೋ ನ ಬ್ರಾಹ್ಮಣಾನ್ ಪರಿವದೇತ್ । ನ ಗವಾಂ ದಂಡಮುದ್ಯಚ್ಛೇತ್ । ನ ವೃದ್ಧಾನ್ ನ ಗುರೂನ್ ನ ಗಣಾನ್ ನ ನೃಪಾನ್ ವಾಧಿಕ್ಷಿಪೇತ್ ನ ಚಾತಿಬ್ರೂಯಾತ್ । ನ ಬಾಂಧವಾನುರಕ್ತಕೃಛ್ರಾದ್ವಿತೀಯಗುಹ್ಯಜ್ಞಾನ್ ಬಹಿಃ ಕುರ್ಯಾತ್ । ನಾಧೀರೋ ನಾತ್ಯುಛ್ರಿತಸತ್ವಃ ಸ್ಯಾತ್ । ನಾಭೃತಭೃತ್ಯೋ ನಾಏಶ್ರಬ್ಧಾಸ್ವಜನೋ ನೈಕಃ ಸುಖೀ ನ ದುಃಖಶೀಲಾಚಾರೋಪಚಾರೋ ನ ಸರ್ವಏಶ್ರಂಭೀ ನ ಸರ್ವಾಭಿಶಂಕೀ । ನ ಸರ್ವಕಾಲವಿಚಾರೀ । ನ ಕಾರ್ಯಕಾಲಮತಿಪಾತಯೇತ್ । ನಾಪರೀಕ್ಷಿತಮಭಿನಿವಿಶೇತ್ । ನೇಂದ್ರಿಯವಶಗಃ ಸ್ಯಾತ್ । ನ ಚಂಚಲಂ ಮನೋ ಭ್ರಾಮಯೇತ್ । ನ ಬುದ್ಧೀಂದ್ರಿಯಾಣಾಮತಿಭಾರಮಾದಧ್ಯಾತ್ । ನ ಚಾತಿದೀರ್ಘಸೂತ್ರೀ ಸ್ಯಾತ್ । ನ ಕ್ರೋಧಹರ್ಷಾವನುಏದಧ್ಯಾತ್ । ನ ಶೋಕಮನುವಶೇತ್ । ನ ಸಿದ್ಧಾವೌತ್ಸುಕ್ಯಂ ಗಚ್ಛೇತ್ ನಾಸಿದ್ಧೌ ದೈನ್ಯಂ । ಪ್ರಕೃತಿಮಭೀಕ್ಷ್ಣಂ ಸ್ಮರೇತ್ । ಹೇತುಪ್ರಭಾವನಿಶ್ಚಿತಃ ಸ್ಯಾತ್ । ಹೇತ್ವಾರಂಭನಿತ್ಯಶ್ಚ । ನ ಕೃತಮಿತ್ಯಾಶ್ವಸೇತ್ । ನ ವೀರ್ಯಂ ಜಹ್ಯಾತ್ । ನಾಪವಾದಮನುಸ್ಮರೇತ್ । (ಚ. 48-49.)

ಲೌಕಿಕ ವಿಷಯ ಸದುಪದೇಶ

ಸಂಧ್ಯಾಕಾಲಗಳಲ್ಲಿ ಊಟವನ್ನಾಗಲಿ, ಅಧ್ಯಯನವನ್ನಾಗಲಿ, ಸ್ತ್ರೀಸೇವೆಯನ್ನಾಗಲಿ, ನಿದ್ರೆಯನ್ನಾಗಲಿ, ಮಾಡುವವನಾಗಬಾರದು. ಬಾಲಕರಲ್ಲಿಯೂ, ವೃದ್ಧರಲ್ಲಿಯೂ, ಲೋಭಿಗಳಲ್ಲಿಯೂ, ದುಃಖಿತರಲ್ಲಿಯೂ, ಹೇಡಿಗಳಲ್ಲಿಯೂ, ಮಿತ್ರತ್ವವನ್ನು ಮಾಡಬಾರದು. ಮದ್ಯ

ಪಾನ, ಜುಗಾರಾಟ, ಸೂಳೆಗಾರಿಕೆ, ಇವುಗಳಲ್ಲಿ ರುಚಿಯುಳ್ಳವನಾಗಬಾರದು. ಗೋಪ್ಯವಾದದ್ದನ್ನು ಹೊರಗೆ ಹಾಕಬಾರದು. ಯಾರನ್ನಾದರೂ ಅವಮಾನಿಸಬಾರದು. ತಾನೆಂಬ ಅಹಂಕಾರವುಳ್ಳವನಾಗಬಾರದು. ದಕ್ಷನಾಗಿಯೂ, ಸತ್ಯವನ್ನು ಬಿಡದವನಾಗಿಯೂ, ಅಸೂಯೆ ಪಡದವನಾಗಿಯೂ ಇರಬೇಕು. ಬ್ರಾಹ್ಮಣರನ್ನು ದೂಷಿಸಬಾರದು. ಗೋವುಗಳಿಗೆ ದಂಟಿಯನ್ನೆತ್ತಬಾರದು ವೃದ್ಧರನ್ನೂ, ಗುರುಗಳನ್ನೂ, ಜಾತಿಗಳನ್ನೂ (ಸಮಸ್ತ ಸಮೂಹಗಳನ್ನೂ), ಅರಸರನ್ನೂ, ನಿಂದಿಸಬಾರದು ಮತ್ತು ಅವರಿಗೆ ಮುಕ್ಕಿ ಮಾತಾಡಬಾರದು. ಬಾಂಧವರನ್ನೂ, ಅನುರಾಗ(ಪ್ರೇಮ)ವುಳ್ಳವರನ್ನೂ, ಸಂಕಷ್ಟದಲ್ಲಿರುವವರನ್ನೂ, ಇನ್ನೊಬ್ಬಗೆ ತಿಳಿಯದ ಗುಟ್ಟು ತಿಳಿದವರನ್ನೂ, ಹೊರಗೆ ಹಾಕಬಾರದು. ಧೀರನಾಗಿರಬೇಕು, ಆದರೆ ಕೊಬ್ಬಿದ ಬಲವುಳ್ಳವನಾಗಬಾರದು ತೃಪ್ತನಲ್ಲದ ನೌಕರನುಳ್ಳವನಾಗಬಾರದು. ವಿಶ್ವಾಸಕ್ಕೆ ಪಾತ್ರನಲ್ಲದ ಮತ್ತು ಸ್ವಕೀಯನಲ್ಲದ ಜನವನ್ನು ಹತ್ತರ ಇಟ್ಟುಕೊಳ್ಳಬಾರದು. ಒಂಟಿಗನಾಗಿರುವದರಲ್ಲಿ ಸುಖಪಡಬಾರದು. ಶೀಲ, ಆಚಾರ, ಉಪಚಾರಗಳಲ್ಲಿ ದುಃಖಪಡುವವನಾಗಬಾರದು ಸರ್ವರಲ್ಲಿಯೂ ಸಂಜ್ಞೆಯುಳ್ಳವನಾಗಬಾರದು ಸರ್ವರಲ್ಲಿಯೂ ಅವಿಶ್ವಾಸವುಳ್ಳವನಾಗಬಾರದು ಸರ್ವಕಾಲದಲ್ಲಿಯೂ ವಿಚಾರಮಾಡು(ಶೋಧಿಸು)ತ್ತಿರಬಾರದು ಕಾರ್ಯಕ್ಕ ತಕ್ಕ ಕಾಲವನ್ನು ದಾಟಿಹೋಗಬಿಡಬಾರದು ಪರೀಕ್ಷಿಸದೆ (ಜನರನ್ನು) ಒಳಗೆ ಹೊಗಿಸಿಕೊಳ್ಳಬಾರದು. ಇಂದ್ರಿಯಗಳಿಗಧೀನನಾಗಬಾರದು. ಮನಸ್ಸನ್ನು ಚಂಚಲವಾಗಿ ತಿರುಗಬಿಡಬಾರದು. ಬುದ್ಧೀಂದ್ರಿಯಗಳನ್ನು ಅತಿಭಾರವಾಗಿ ಹೊರಬಾರದು. ಅತಿಯಾಗಿ ದೀರ್ಘಾಲೋಚನೆಯುಳ್ಳವನಾಗಬಾರದು. ಸಿಟ್ಟಿಗೂ ಹರ್ಷಕ್ಕೂ ಅನುಸರಿಸಿ ನಡೆಯಬಾರದು. ಶೋಕಕ್ಕೆ ಒಳಗಾಗಬಾರದು. ಕಾರ್ಯಲಾಭದಲ್ಲಿ ಚಿಂತಾಪರನಾಗಿರಬಾರದು. ಮತ್ತು ಕಾರ್ಯಸಿದ್ಧಿಯಾಗದ್ದಲ್ಲಿ ದೈನ್ಯಭಾವವನ್ನು ಪಡೆಯಬಾರದು. ಪ್ರಕೃತಿಯನ್ನು ಪದೇಪದೇ ನೆನಸುತ್ತಿರಬೇಕು ಹೇತುಸಮ (ಫಲದಾಯಕ) ಪ್ರಭಾವದ ಕುರಿತು ಸಂದೇಹವಿಲ್ಲದವನಾಗಿರಬೇಕು. ಹೇತುವನ್ನಾರಂಭಿಸುತ್ತಿರುವವನಾಗಿರಬೇಕು. ಮಾಡಿ ಆಯಿತೆಂತ ವಿಶ್ವಾಸ ಮಾಡಬಾರದು. ಉತ್ಸಾಹ(ಅಥವಾ ಪುರುಷಪ್ರಯತ್ನ)ವನ್ನು ಬಿಡಬಾರದು. ಅಪವಾದವನ್ನು ನೆನಪುಮಾಡುತ್ತಿರಬಾರದು.

15. ಬ್ರಹ್ಮಚರ್ಯಜ್ಞಾನದಾನಮೈತ್ರೀಕಾರುಣ್ಯಹರ್ಷಾಪೇಕ್ಷಾಪ್ರಶಮಪರಶ್ಚ ಸ್ಯಾದಿತಿ | (ಚ. 49.)

ಬ್ರಹ್ಮಚರ್ಯಾದಿ 8 ಪ್ರಧಾನ ಗುಣಗಳು

(ಮೈಥುನನಿಯಮ) ಬ್ರಹ್ಮಚರ್ಯ, ಜ್ಞಾನ (ಈಶ್ವರನ), ದಾನ, ಮಿತ್ರಭಾವ, ಕರುಣಭಾವ, ಸಂತೋಷ, ಕೋರಿಕೆ, ಪ್ರಶಮಗುಣ (ಸಮಾಧಾನ), ಇವುಗಳಲ್ಲಿ ಆಸಕ್ತನಾಗಿರಬೇಕು.

16. ನಾಗ್ನಿಗೋಗುರುಬ್ರಾಹ್ಮಣಪ್ರೇಂಖಾದಂಪತ್ಯಂತರೇಣಾಭಿಯಾಯಾತ್ | ನ ಶವಮನುಯಾಯಾತ್ | (ಸು. 508.)

ಅಗ್ನ್ಯಾದಿಗಳ ಮಧ್ಯ ಹೋಗದಾರದು

ಅಗ್ನಿಗಳ, ಗೋವುಗಳ, ಗುರುಗಳ, ಬ್ರಾಹ್ಮಣರುಗಳ, ಉಯ್ಯಾಲೆಗಳ ಮತ್ತು ದಂಪತಿಗಳ (ಗಂಡಹೆಂಡರ) ನಡುವೆ ಹೋಗಬಾರದು ಶವವನ್ನು ಹಿಂಬಾಲಿಸಬಾರದು.

17. ನಾಸ್ತಂ ಗಚ್ಛಂತಮುದ್ಯಂತಂ ವಾದಿತ್ಯಂ ವೀಕ್ಷೇತ । (ಸು. 508.)

ಸೂರ್ಯನನ್ನು ನೋಡಬಾರದು

ಕಂತುತ್ತಿರುವ ಅಥವಾ ಮೂಡುತ್ತಿರುವ ಸೂರ್ಯನನ್ನು ನೋಡಬಾರದು.

18 ನಾಗ್ನಿಂ ಮುಖೇನೋಪಧಮೇತ್ । ನಾಪೋ ಭೂಮಿಂ ವಾ ಪಾಣಿಪಾದೇನಾಭಿಹನ್ಯಾತ್ । (ಸು. 508)

ಬೆಂಕಿಯನ್ನು ಊದುವದು ಮುಂತಾದದ್ದು

ಬೆಂಕಿಯನ್ನು ಬಾಯಿಯಿಂದ ಊದಬಾರದು. ನೀರನ್ನು ಅಥವಾ ನೆಲವನ್ನು ಕೈಯಿಂದಾಗಲಿ ಕಾಲಿನಿಂದಾಗಲಿ ಒಡೆಯಬಾರದು.

19. ನ ಬಹಿರ್ಗಾನ್ ಗ್ರಾಮನಗರದೇವತಾಯತನಶ್ಮಶಾನಚತುಷ್ಪಥಸಲಿಲಾಶಯಪಥಿಸನ್ನಿಕೃಷ್ಟಾನುತ್ಸೃಜೇನ್ನಪ್ರಕಾಶಂ ನ ವಾಯ್ವಗ್ನಿಸಲಿಲಸೋಮಾರ್ಕಗೋಗುರುಪ್ರತಿಮುಖಮಾ । (ಸು. 508)

ಬಹಿರ್ಗಗಳನ್ನು ಕ್ಕೆ ಸ್ಥಳ

(ಮಲಮೂತ್ರಾದಿ) ಬಹಿರ್ಗಗಳನ್ನು ಗ್ರಾಮ, ಪಟ್ಟಣ, ದೇವಸ್ಥಾನ, ಶ್ಮಶಾನ, ನಾಲ್ಕು ಮಾರ್ಗಗಳು ಕೂಡಿರುವ ಸ್ಥಳ, ನೀರಾಶ್ರಯ ಮತ್ತು ಮಾರ್ಗ, ಇವುಗಳ ಸಮೀಪದಲ್ಲಿಯಾಗಲಿ, ಬಹಿರಂಗವಾಗಿಯಾಗಲಿ, ಗಾಳಿ, ಬೆಂಕಿ, ನೀರು, ಚಂದ್ರ, ಸೂರ್ಯ, ಗೋವು, ಗುರು, ಇವರಿಗೆ ಎದುರಾಗಿಯಾಗಲಿ ಹೊರ ಬಿಡಕೂಡದು.

20. ನಾಸಂವೃತಮುಖಃ ಸದಸಿ ಜೃಂಭೋದ್ಗಾರಶ್ವಾಸಕ್ಷವಥೂನುತ್ಸೃಜೇತ್ । ನ ಪರ್ಯಸ್ತಿಕಾವಷ್ಟಂಭಪಾದಪ್ರಸಾರಣಾನಿ ಗುರುಸನ್ನಿಧೌ ಕುರ್ಯಾತ್ । (ಸು. 508.)

ಸಭೆಯಲ್ಲಿ ಜೃಂಭಾಯಿ ಎಪಯ ಮತ್ತು ಗುರುಮರ್ಯಾದೆ

ಸಭೆಯಲ್ಲಿ ಬಾಯಿಗೆ ಅಡ್ಡ ಹಿಡಕೊಳ್ಳದೆ ಆಕಳಿಕೆ, ತೇಗು, ಶ್ವಾಸ, ಕೆಮ್ಮು, ಇವುಗಳನ್ನು ಹೊರಗೆ ಬಿಡಬಾರದು. ಗುರುವಿನ ಎದುರಿನಲ್ಲಿ ಮಲಗಲೂ, ಒರಗಲೂ, ಕಾಲು ಚಾಚಲೂ ಬಾರದು.

21. ನ ಪ್ರತತಮಿಾಕ್ಷೇತ ವಿಶೇಷಾಜ್ಜ್ಯೋತಿರ್ಭಾಸ್ಕರಸೂಕ್ಷ್ಮಚಲಭ್ರಾಂತಾನಿ । ನ ಭಾರಂ ಶಿರಸಾ ವಹೇತ್ । ನ ಸ್ವಪ್ನ-ಜಾಗರಣ-ಶಯನಾಸನ-ಸ್ನಾನ-ಚಂಕ್ರಮಣ-ಯಾನ-ವಾಹನ-ಪ್ರಧಾವನ-ಲಂಘನ-ಪ್ಲವನ-ಪ್ರತರಣ-ಹಾಸ್ಯ-ಭಾಷ್ಯ-ವ್ಯವಾಯ-ವ್ಯಾಯಾಮಾದೀನುಚಿತಾನಪ್ಯತಿಸೇವೇತ । (ಸು. 508-09.)

ಅಪಾಯಕರವಾದ ಕೆಲವು ಉದ್ಯಮಗಳು

ಕಣ್ಣುಗಳನ್ನು ವಿಶಾಲಮಾಡಿ ನೋಡಬಾರದು; ಹೆಚ್ಚಾಗಿ ಅಗ್ನಿಜ್ವಾಲೆಯನ್ನೂ, ಸೂರ್ಯನನ್ನೂ, ಸೂಕ್ಷ್ಮವಾದದ್ದನ್ನೂ, ಚಲಿಸುತ್ತಿರುವದನ್ನೂ ಮತ್ತು ಸುತ್ತುತ್ತಿರುವದನ್ನೂ ಹಾಗೆ ನೋಡಬಾರದು. ಭಾರವನ್ನು ತಲೆಯಿಂದ ಹೊರಬಾರದು. ನಿದ್ರೆ, ಜಾಗರ, ಮಲಗೋಣ, ಕೂಡ್ರೋಣ, ನಿಲ್ಲೋಣ, ತಿರುಗಾಡೋಣ, (ಗಾಡಿ ಮುಂತಾದ) ಯಾನ, (ಕುದುರ ಮುಂತಾದ) ವಾಹನ, ಓಡೋಣ, ಉಪವಾಸ, ಹಾರೋಣ, ಈಸೋಣ, ಹಾಸ್ಯ, ಮಾತು, ಮೈಥುನ, (ಕುಸ್ತಿ ಮುಂತಾದ) ವ್ಯಾಯಾಮ, ಇವು ಮೊದಲಾದವುಗಳು ಉಚಿತವಾದಾಗಲೂ ಅತಿಯಾಗಿ ಸೇವಿಸಲ್ಪಡಬಾರದು.

22. ಉಚಿತೋದಪ್ಯಹಿತಾತ್ ಕ್ರಮಶೋ ವಿರಮೇತ್ತಾ, ಹಿತಮನುಚಿತಮಪ್ಯಾಸೇ
ಅಹಿತತ್ಯಾಗದಲ್ಲಿ ನಿಯಮ ವೇತ ಕ್ರಮಶೋ, ನ ಚೈಕಾಂತತಃ ಪಾದಹೀನಾತ್ | (ಸು. 509.)

ಅಹಿತವಾದದ್ದನ್ನು ಉಚಿತವಾಗಿದ್ದರೂ (ಅಭ್ಯಾಸಮಾಡಲ್ಪಟ್ಟದ್ದಾದರೂ) ಕ್ರಮೇಣ ಬಿಡಬೇಕು, ಹಿತವಾದದ್ದನ್ನು ಉಚಿತವಲ್ಲದ್ದಾದರೂ ಕ್ರಮೇಣ ಉಪಯೋಗಿಸಬೇಕು, ಅತಿಯಾಗಿ ಅಲ್ಲ, ಕಾಲಂಶ ಪ್ರಕಾರ.

23. ನಾವಾಕ್‌ಶಿರಾಃ ಶಯೀತ | ನ ಭಿನ್ನಪಾತ್ರೇ ನಾಂಜಲಿಪುಟೇನಾಪಃ ಪಿಬೇತ್ | ಕಾಲೇ ಹಿತಮಿತಸ್ನಿಗ್ಧಮಧುರಪ್ರಾಯಮಾಹಾರಂ ವೈದ್ಯಪ್ರತ್ಯವೇಕ್ಷಿತಮಶ್ನೀಯಾತ್ | ಗ್ರಾಮ್ಯಗಣಗಣಿಕಾಪಣಿಕಶತ್ರುಶರಪತಿತಭೋಜನಾನಿ ಪರಿಹರೇತ್ | ಶೇಷಾಣ್ಯಪಿ ಚಾನಿಷ್ಟರೂಪರಸಗಂಧಸ್ಪರ್ಶಶಬ್ದಮಾನಸಾನ್ಯನ್ಯಾನ್ಯೇವಂ ಗುಣಾನ್ಯಪಿ ವಾ ಸಂಭೂಯ ದತ್ತಾನಿ ತಾನ್ಯಪಿ ಮಕ್ಷಿಕಾಬಾಲೋಪಹತಾನಿ | ನಾಪ್ರಕ್ಷಾಲಿತಪಾಣಿಪಾದೋ ಭುಂಜೀತ | (ಸು. 509)
ಅನ್ನಪಾನಶಯನಗಳ ವಿಷಯ ಸದುಪದೇಶ

ತಲೆ ಕೆಳಗೆ ಮಾಡಿಕೊಂಡು ಮಲಗಲಾರದು ಒಡಕುಪಾತ್ರೆಯಲ್ಲ, ಅಥವಾ ಕರತಲಗಳಿಂದ (ಬೊಗುಸೆಯಿಂದ), ನೀರನ್ನು ಕುಡಿಯಬಾರದು. ಉಚಿತಕಾಲದಲ್ಲ ಹಿತವಾಗಿಯೂ, ಮಿತವಾಗಿಯೂ, ಸ್ನಿಗ್ಧವಾಗಿಯೂ, ಸೀಯೇ ಹೆಚ್ಚಾಗಿಯೂ ಇರುವ ಆಹಾರವನ್ನು ವೈದ್ಯಶಾಸ್ತ್ರಕ್ಕೆ ಲಕ್ಷ್ಯವಿಟ್ಟುಕೊಂಡು ಉಣ್ಣಬೇಕು ಗ್ರಾಮಸಮೂಹದ, ಸೂಳೆಯ, ಜುಗಾರಿಯ, ಶತ್ರುವಿನ, ದಲಾಲಿಯ ಮತ್ತು ಜಾತಿಭ್ರಷ್ಟನ, ಭೋಜನಗಳನ್ನು ಸ್ವೀಕರಿಸದೆ ಬಿಡಬೇಕು ಬೇರೆ ಭೋಜನಗಳಾದರೂ ಅನಿಷ್ಟವಾದ ರೂಪ, ರುಚಿ, ವಾಸನೆ, ಸ್ಪರ್ಶ, ಶಬ್ದ (ನಿಂದೆಮಾತು), ಮನೋಭಾವ, ಇವುಗಳಿಂದ ಯುಕ್ತವಾದದ್ದಾದರ, ಅಥವಾ ಬೇರೆಯವುಗಳು ಈ ಸ್ವಭಾವದವಾದರೆ, ಅಥವಾ ಬಹುಜನರು ಕೂಡಿ ಕೊಟ್ಟದ್ದಾದರೆ, ಅಥವಾ ಸೊಣ ಮತ್ತು ಕೂದಲು ಸೇರಿ ಕೆಟ್ಟದ್ದಾದರೆ, ಅವುಗಳನ್ನು ಸಹ ಬಿಡಬೇಕು. ಕೈಕಾಲುಗಳನ್ನು ತೊಳಕೂಳ್ಳದೆ ಉಣ್ಣಬಾರದು.

ಪರಾ 'ಗ್ರಾಮಗಣ' ಎಂಬಲ್ಲಿ 'ಗ್ರಾಮ' ಎಂದರೆ ಗ್ರಾಮಸ್ಥರು, 'ಗಣ' ಎಂದರೆ ರಥಕಾರ—ಚಾರಣಾದಿ ಜಾತಿಯವರು ಎಂತಲೂ, 'ಪಣಿಕ' ಎಂದರೆ ಸೂಳೆಯಲ್ಲದ ಇತರ ವ್ಯಾಪಾರಸ್ಥ ಎಂತಲೂ 'ಶರ' ಎಂದರೆ ತನ್ನ ಆಚಾರ ಬಿಟ್ಟವನೆಂತಲೂ ಸಿ ಸಂ ವ್ಯಾ ಸೂಳೆಯರು ಮತ್ತು ಜುಗಾರಿಗಳು ಪಾಪವೃತ್ತಿಯವರಾದ್ದರಿಂದ, ಅವರ ಧರ್ಮದ ಉಟವನ್ನುಂಡವರು ಅವರ ಪಾಪಕ್ಕೆ ಭಾಗಿಗಳಾಗುವರೆಂಬದರಿಂದ ಆದು ನಿಂದ್ಯ ಎಂತಲೂ, ಗಣ' ಎಂದರೆ ಕಥೆ ಹೇಳಿ ಜೀವನಮಾಡುವವರು, ಆಟದವರು ಮುಂತಾದವರು ಎಂತ ಸಹ ಅರುಣದತ್ತ ಈ ಕಥಕಾದಿಗಳಿಗೆ ತಾಮಸಗತಿ ಹೇಳಲ್ಪಟ್ಟಿದೆ

24. ಸ್ರಜಂ ಛತ್ರೋಪಾನಹೌ ಕನಕಮತೀತವಾಸಾಂಸಿ ನ ಚಾನ್ಯೈರ್ಧೃತಾನಿ ಧಾರಯೇತ್ | (ಸು. 509.)

ಅನ್ಯರು ಧರಿಸಿದ ಮಾಲಾದಿಗಳು ತ್ಯಾಜ್ಯ

ಹೂವಿನ ಮಾಲೆ, ಕೊಡೆ, ಪಾದರಕ್ಷೆ, ಚಿನ್ನಾಭರಣ, ಹಳೆ ವಸ್ತ್ರ, ಸಹ ಅನ್ಯರಿಂದ ಧರಿಸಲ್ಪಟ್ಟದ್ದನ್ನು ಧರಿಸಬಾರದು

ಇದಾ ಅನ್ಯರು ಧರಿಸಿದ ವಸ್ತ್ರವನ್ನು ತೊಳಕೊಂಡು ಸಹ ಉಪಯೋಗಿಸಬಾರದಾಗಿ ಸಿ ಸಂ ವ್ಯಾ

25. ಸುಖಾರ್ಥಾಃ ಸರ್ವಭೂತಾನಾಂ ಮತಾಃ ಸರ್ವಾಃ ಪ್ರವೃತ್ತಯಃ |
ಧರ್ಮಪರನಾಗಬೇಕು ಸುಖಂ ಚ ನ ವಿನಾ ಧರ್ಮಾತ್ತಸ್ಮಾದ್ಧರ್ಮಪರೋ ಭವೇತ್ || (ವಾ. 6.)

ಸರ್ವ ಪ್ರಾಣಿಗಳ ಸರ್ವ ಪ್ರವರ್ತನೆಗಳು ಸುಖಪ್ರಾಪ್ತಿಗೋಸ್ಕರ, ಅಂದಾ ಸುಖವು ಧರ್ಮ ವಿನಾ ದೊರಯಲಾರದು, ಆದದರಿಂದ ಜನರು ಧರ್ಮರತರಾಗಿ ಇರತಕ್ಕದ್ದು.

26 ಹಿಂಸಾಸ್ತೇಯಾನ್ಯಥಾಕಾಮಂ ಪೈಶುನ್ಯಂ ಪರುಷಾನೃತೇ |
ಹತ್ತು ವಿಧವಾದ ಸಂಭಿನ್ನಾಲಾಪವ್ಯಾಪಾದಮಭಿಧ್ಯಾದೃಗ್ವಿಪರ್ಯಯಮ್ ||
ಪಾಪತ್ಯಾಗ ಪಾಪಂ ಕರ್ಮೇತಿ ದಶಧಾ ಕಾಯವಾಙ್ಮಾನಸೈಸ್ತ್ಯಜೇತ್ | (ವಾ. 6.)

ಹಿಂಸೆ, ಕಳ್ಳತನ, ವ್ಯಭಿಚಾರ (ಇವು 3 ಕಾಯಿಕ ಪಾಪಗಳು), ಚಾಡಿ, ನಿಷ್ಠುರ, ಸುಳ್ಳು, ಅಸಂಬದ್ಧ ಮಾತು (ಇವು 4 ವಾಕ್ಕಿನ ಪಾಪಗಳು), ದ್ರೋಹಚಿಂತನೆ, ಅಸೂಯೆ, ವಿಪರೀತ ಬುದ್ಧಿ (ನಾಸ್ತಿಕ್ಯಾದಿ), (ಇವು 3 ಮಾನಸಿಕ ಪಾಪಗಳು) ಎಂಬ ಹತ್ತು ವಿಧವಾದ ಪಾಪವನ್ನು ಕಾಯವಾಙ್ಮನಸ್ಸುಗಳಿಂದ ಬಿಡತಕ್ಕದ್ದು.

27. ಆತ್ಮವತ್ ಸತತಂ ಪಶ್ಯೇದಪಿ ಕೀಟಪಿಪೀಲಿಕಮ್ |
ಆತ್ಮವತ್ಕೀಟಪಿಪೀಲಿಕಮ್ (ವಾ. 7.)

ಒಂದು ಹುಳವನ್ನಾದರೂ ಅಥವಾ ಒಂದು ಇರುವೆಯನ್ನಾದರೂ ತನ್ನ ಹಾಗಿನದೆಂತ ಸದಾ ನೋಡ (ಭಾವಿಸಿಕೊಂಡಿರ) ಬೇಕು.

28. ಉಪಕಾರಪ್ರಧಾನಃ ಸ್ಯಾದಪಕಾರಪರೇಷ್ವಪಿ ||
ಉಪಕಾರಪ್ರಧಾನನಾಗಬೇಕು (ವಾ. 7.)

ಅಪಕಾರಪರನಾದ ಶತ್ರುವಿಗೆ ಸಹ ಉಪಕಾರ ಮಾಡುವ ಬುದ್ಧಿಯುಳ್ಳವನಾಗಬೇಕು.

29. ಆಚಾರ್ಯಃ ಸರ್ವಚೇಷ್ಟಾಸು ಲೋಕ ಏವ ಹಿ ಧೀಮತಃ |
ಲೋಕವನ್ನನುಸರಿಸು ಅನುಕುರ್ಯಾತ್ತಮೇವಾತೋ ಲೌಕಿಕೇಽರ್ಥೇ ಪರೀಕ್ಷಕಃ || (ವಾ. 8.)

ಬುದ್ಧಿವಂತನಿಗೆ ಸರ್ವ ವ್ಯವಹಾರಗಳಲ್ಲಿಯೂ ಲೋಕವೇ ಗುರುವಾದದ್ದರಿಂದ, ಲೌಕಿಕ ಪುರುಷಾರ್ಥದಲ್ಲಿ ಲೋಕವನ್ನು (ಜನಸಮುದಾಯವನ್ನು) ಸರಿಯಾಗಿ ನೋಡಿಕೊಂಡು ಅನುಸರಿಸತಕ್ಕದ್ದು.

30. ನಕ್ತಂದಿನಾನಿ ಮೇ ಯಾನ್ತಿ ಕಥಂ ಭೂತಸ್ಯ ಸಂಪ್ರತಿ ।
ಕಾಲಹರಣದ ನಿತ್ಯ ನೆನಪು ದುಃಖಭಾಜ್ಜನಭವತ್ಯೇವಂ ನಿತ್ಯಂ ಸನ್ನಿಹಿತಸ್ಮೃತಿಃ ॥ (ವಾ. 8.)

ನನ್ನ ರಾತ್ರಿಹಗಲುಗಳು ಈಗ ಹ್ಯಾಗೆ ಹೋಗುತ್ತಿವೆ (ಯಾವ ರೀತಿಯಲ್ಲಿ ನಾನು ಅವು ಗಳನ್ನು ಕಳೆಯುತ್ತಿದ್ದೇನೆ) ಎಂಬದನ್ನು ನಿತ್ಯದಲ್ಲಿಯೂ ನೆನಪಿನಲ್ಲಿಟ್ಟುಕೊಂಡರೆ ದುಃಖಕ್ಕೆ ಭಾಗಿಯಾಗಲಾರನು

31. ಸುಖ*ಮಾತ್ರಂ ಸಮಾಸೇನ ಸದ್ವೃತ್ತಸ್ಯೈತದೀರಿತಂ ।
ಸದ್ವೃತ್ತದ ಪ್ರಯೋಜನ ಆರೋಗ್ಯಮಾಯುರಥೀರ್ ವಾ ನಾಸದ್ವೃತ್ತಃ ಪ್ರಾಪ್ನುತೇ ನೃಪಃ ॥
(ಸು 509.)

ಸದಾಚಾರದಲ್ಲಿ ಸುಲಭವಾದದ್ದು ಮಾತ್ರ ಸಂಕ್ಷೇಪವಾಗಿ ಇಲ್ಲಿ ಹೇಳಲ್ಪಟ್ಟಿದೆ ಆ ರೋಗ್ಯವಾಗಲಿ, ಆಯುಸ್ಸಾಗಲಿ, ಸಂಪತ್ತಾಗಲಿ, ಸದಾಚಾರವನ್ನವಲಂಬಿಸದ ಜನರಿಗ ದೊರೆಯಲಾರದು.

*'ಮುಖಮಾತ್ರಂ' ಎಂಬ ಪಾಠಾಂತರವಿಟ್ಟುಕೆ, ಮುಖ್ಯವಾದಂತ ಮಾತ್ರ ಹೇಳಲ್ಪಟ್ಟಿದೆಂತ ಅರ್ಥವಾಗುತ್ತದೆ

XVII ನೇ ಅಧ್ಯಾಯ.

ರೋಗಿಯ ಪರೀಕ್ಷೆ.

1. ತ್ರಿವಿಧಂ ಖಲು ರೋಗವಿಶೇಷಜ್ಞಾನಂ ಭವತಿ । ತದ್ಯಥಾ । ಆಪ್ತೋಪದೇಶಃ ಪ್ರತ್ಯಕ್ಷಮನುಮಾನಂ ಚೇತಿ । (ಚ. 25.)

ರೋಗಜ್ಞಾನಕ್ಕೆ ಮೂರು ಸಾಧನಗಳು

ರೋಗಭೇದ ತಿಳಿಯುವ ಜ್ಞಾನವು ಮೂರು ವಿಧ, ಹ್ಯಾಗೆಂದರೆ ಆಪ್ತೋಪದೇಶ, ಪ್ರತ್ಯಕ್ಷ ಮತ್ತು ಅನುಮಾನ, ಎಂತ.

2. ತತ್ರಾಪ್ತೋಪದೇಶೋ ನಾಮ ಆಪ್ತವಚನಂ । (ಚ. 257)

ಆಪ್ತೋಪದೇಶ

ಅವುಗಳೊಳಗೆ ಆಪ್ತೋಪದೇಶ ಎಂಬದು ಆಪ್ತರ ವಚನ.

ರಜಸ್ತಮೋಭ್ಯಾಂ ನಿರ್ಮುಕ್ತಾಸ್ತಪೋಜ್ಞಾನಬಲೇನ ಯೇ ।
ಯೇಷಾಂ ತ್ರಿಕಾಲಮಮಲಂ ಜ್ಞಾನಮವ್ಯಾಹತಂ ಸದಾ ॥
ಆಪ್ತಾಃ ಶಿಷ್ಟಾ ಏಬುಧಾಸ್ತೇ ತೇಷಾಂ ವಾಕ್ಯಮಸಂಶಯಂ ।
ಸತ್ಯಂ ವಕ್ಷ್ಯಂತಿ ತೇ ಕಸ್ಮಾದಸತ್ಯಂ ನೀರಜಸ್ತಮಃ ॥ (ಚ. 57.)

ತಪೋಜ್ಞಾನಗಳ ಬಲದಿಂದ ಯಾರು ರಜೋಗುಣದಿಂದಲೂ, ತಮೋಗುಣದಿಂದಲೂ ಮುಕ್ತರಾಗಿದ್ದಾರೋ ಮತ್ತು ಯಾರ ಜ್ಞಾನವು ಭೂತ, ವರ್ತಮಾನ, ಭವಿಷ್ಯತ್ಕಾಲಗಳನ್ನು ವ್ಯಾಪಿಸಿಕೊಂಡು, ಸದಾಕಾಲದಲ್ಲಿಯೂ ನಿರ್ಮಲವಾಗಿಯೂ, ಚಂಚಲ ಪಡೆಯದೆಯೂ ಇದೆಯೊ, ಅಂಥವರು ಆಪ್ತರು, ಅವರೇ ಶ್ರೇಷ್ಠರು ಮತ್ತು ಪಂಡಿತರು, ಅವರ ವಾಕ್ಯವು ಸಂಶಯಾಸ್ಪದವಿಲ್ಲದ್ದು ಮತ್ತು ಅವರು ಸತ್ಯವಾದದ್ದನ್ನು ಹೇಳುತ್ತಾರೆ ರಜಸ್ತಮೋಗುಣ ಇಲ್ಲದವರು ಅಸತ್ಯವನ್ನು ಯಾಕೆ ಹೇಳ್ಯಾರು?

ತತ್ರಾಪ್ತಾಗಮಸ್ತಾವದ್ವೇದೋ ಯಶ್ಚಾನ್ಯೋಽಪಿ ಕಶ್ಚಿದ್ವೇದಾರ್ಥಾದ
ವಿರೋತಃ ಪರೀಕ್ಷಕೈಃ ಪ್ರಣೀತಃ । (ಚ. 58)

ಆಪ್ತಾಗಮ ಎಂಬದು ವೇದ ಮತ್ತು ಪರೀಕ್ಷೆ ಮಾಡಿ ರಚಿಸಲ್ಪಟ್ಟ, ವೇದಾರ್ಥಕ್ಕೆ ವಿರೋಧವಿಲ್ಲದ, ಬೇರೆ ಯಾವದಾದರೂ ಗ್ರಂಥ.

3. ಪ್ರತ್ಯಕ್ಷಂ ತು ಖಲು ತದ್ಯತ್ ಸ್ವಯಮಿಂದ್ರಿಯೈರ್ಮನಸಾ ಚೋಪ
ಲಭ್ಯತೇ । ಅನುಮಾನಂ ಖಲು ತರ್ಕೋ ಯುಕ್ತ್ಯಪೇಕ್ಷಃ । (ಚ. 257)

ಪ್ರತ್ಯಕ್ಷಾನುಮಾನಗಳು

ಯಾವದು ಸ್ವತಃ ಇಂದ್ರಿಯಗಳಿಂದಲೂ, ಮನಸ್ಸಿನಿಂದಲೂ, ತಿಳಿಯಬರುತ್ತದೋ ಅದು ಪ್ರತ್ಯಕ್ಷ. ಅನುಮಾನ ಎಂಬದು ಯುಕ್ತಿಯನ್ನು ಆಧರಿಸಿದ ಊಹೆ.

4. ತ್ರಿವಿಧೇ ತ್ವಸ್ಮಿನ್ ಜ್ಞಾನಸಮುದಾಯೇ ಪೂರ್ವಮಾಪ್ತೋಪದೇಶಾತ್
ಆಪ್ತೋಪದೇಶದ ಪ್ರಧಾನತ್ವ ಜ್ಞಾನಂ ತತಃ ಪ್ರತ್ಯಕ್ಷಾನುಮಾನಾಭ್ಯಾಂ ಪರೀಕ್ಷ್ಯೋಪಪದ್ಯತೇ ।
(ಚ. 257.)

ಮೂರು ವಿಧವಾದ ಈ ಜ್ಞಾನಸಮೂಹದಲ್ಲಿ ಒಂದನೇದು ಆಪ್ತೋಪದೇಶದಿಂದ ದೊರೆಯತಕ್ಕ ಜ್ಞಾನ, ಅದರ ಮೂಲವಾಗಿ ಪ್ರತ್ಯಕ್ಷಾನುಮಾನಗಳಿಂದ ಪರೀಕ್ಷೆ ಮಾಡಲು ಶಕ್ಯವಾಗುತ್ತದೆ

5 (a) ಪ್ರತ್ಯಕ್ಷತಸ್ತು ಖಲು ರೋಗತತ್ತ್ವಂ ಬುಭುತ್ಸುಃ ಸರ್ವೇಂದ್ರಿಯೈಃ ಸರ್ವಾನಿಂದ್ರಿಯಾರ್ಥಾನಾತುರಶರೀರಗತಾನ್ ಪರೀಕ್ಷೇತಾನ್ಯತ್ರ ರಸಜ್ಞಾನಾತ್ । ತದ್ಯಥಾ । ಅಂತ್ರಕೂಜನಂ ಸಂಧಿಸ್ಫೋಟನಮಂಗುಲೀಪರ್ವಣಾಂ ಚ ಸ್ವರವಿಶೇಷಾಂಶ್ಚ ಯೇ ಚಾನ್ಯೇಽಪಿ ಕೇಚಿಚ್ಛರೀರೋಪಗತಾಃ ಶಬ್ದಾಃ ಸ್ಯುಸ್ತಾನ್ ಶ್ರೋತ್ರೇಣ ಪರೀಕ್ಷೇತ । ವರ್ಣಸಂಸ್ಥಾನಪ್ರಮಾಣಚ್ಛಾಯಾ ಶರೀರಪ್ರಕೃತಿವಿಕಾರೌ ಚಕ್ಷುರ್ವೈಷಯಿಕಾಣಿ ಚಾನ್ಯಾನಿ ಕಾನಿ ಚ ತಾನಿ ಚಕ್ಷುಷಾ ಪರೀಕ್ಷೇತ । ರಸಂ ತು ಖಲು ಆತುರ ಶರೀರಗತಮಿಂದ್ರಿಯವೈಷಯಿಕಮನ್ಯಾನುಮಾನಾದನವಗಚ್ಛೇತ್ । ನ ಹ್ಯಸ್ಯ ಪ್ರತ್ಯಕ್ಷೇಣ ಗ್ರಹಣಮುಪಪದ್ಯತೇ । ತಸ್ಮಾದಾತುರಪರಿಪ್ರಶ್ನೈರಾತುರಮುಪರಸಂ ವಿದ್ಯಾತ್ । ಯೂಕಾಪಸರ್ಪಣೇನ ತ್ವಸ್ಯ ಶರೀರವೈರಸ್ಯಂ ಮಕ್ಷಿಕೋಪದರ್ಶನೇನ ಶರೀರಮಾಧುರ್ಯಂ । ಲೋಹಿತಪಿತ್ತಸಂದೇಹೇ ತು ಕಂ ಧಾರಿಲೋಹಿತಂ ಲೋಹಿತಪಿತ್ತಂ ವೇತಿ ಶ್ವಕಾಕಭಕ್ಷಣಾತ್ ಧಾರಿಲೋಹಿತಮಭಕ್ಷಣಾಲ್ಲೋಹಿತಮಿತ್ಯನುಮಾತವ್ಯಂ । ಏವಮನ್ಯಾನಪ್ಯಾತುರಶರೀರಗತಾನ್ ರಸಾನನುಮಿಮೀತ । ಗಂಧಾಂಸ್ತು ಖಲು ಸರ್ವಶರೀರಗತಾನಾತುರಸ್ಯ ಪ್ರಕೃತಿವೈಕಾರಿಕಾನ್ ಘ್ರಾಣೇನ ಪರೀಕ್ಷೇತ । ಸ್ಪರ್ಶಂ ಚ ಪಾಣಿನಾ ಪ್ರಕೃತಿಮಪಕೃತಿಯುಕ್ತಮಿತಿ ಪ್ರತ್ಯಕ್ಷತೋಽನುಮಾನೈಕದೇಶತಶ್ಚ ಪರೀಕ್ಷಣಮುಕ್ತಂ । (ಚ 257-58.)

ಪ್ರತ್ಯಕ್ಷಾನುಮಾನಗಳಿಂದ ರೋಗತತ್ತ್ವ ತಿಳಿಯುವ ಕ್ರಮ

ಪ್ರತ್ಯಕ್ಷವಾಗಿ ರೋಗದ ತತ್ತ್ವವನ್ನು ತಿಳಿಯಲಪೇಕ್ಷಿಸುವವನು ರೋಗಿಯ ಶರೀರದೊಳಗಣ ರಸಜ್ಞಾನ ಒಂದಲ್ಲದೆ ಮಿಕ್ಕ ಸರ್ವ ಇಂದ್ರಿಯಾರ್ಥಗಳನ್ನು ತನ್ನ ಸರ್ವ ಇಂದ್ರಿಯಗಳಿಂದ ಪರೀಕ್ಷಿಸತಕ್ಕದ್ದು ಹ್ಯಾಗೆಂದರೆ ಕೆಳಹೊಟ್ಟೆಕೂಗು, ಬೆರಳುಗಂಟುಗಳ ನೆಟ್ಟಿಗೆ, ಸ್ವರಭೇದಗಳು ಮತ್ತು ಶರೀರಸಂಬಂಧವಾದ ಬೇರೆ ಯಾವ ಶಬ್ದಗಳು ಇರುತ್ತವೋ ಅವು, ಇವುಗಳನ್ನೆಲ್ಲಾ ಕಿವಿಯಿಂದ ಪರೀಕ್ಷಿಸಬೇಕು, ವರ್ಣ, ಆಕಾರ, ಪ್ರಮಾಣ, ಛಾಯೆ, ಶರೀರ, ಇವುಗಳ ಪ್ರಕೃತಿಯನ್ನೂ, ವಿಕಾರವನ್ನೂ, ದೃಷ್ಟಿಗೆ ಗೋಚರವಾಗತಕ್ಕ ಬೇರ ಯಾವವು ಇದ್ದಾವೋ ಅವುಗಳನ್ನೂ, ಕಣ್ಣಿನಿಂದ ಪರೀಕ್ಷಿಸತಕ್ಕದ್ದು, ರೋಗಿಯ ಶರೀರದೊಳಗಣ ರಸವು ಇಂದ್ರಿಯವಿಷಯಕ್ಕ ಸಂಬಂಧಪಟ್ಟಂಥಾದ್ದಾದಾಗ್ಯೂ ಅದನ್ನು ಅನುಮಾನದಿಂದ ತಿಳಿಯತಕ್ಕದ್ದಲ್ಲದೆ ಪ್ರತ್ಯಕ್ಷವಾಗಿ ತಿಳಿಯಲು ಸಾಧ್ಯವಿಲ್ಲ, ಆದ್ದರಿಂದ ರೋಗಿಗೆ ಪ್ರಶ್ನೆ ಮಾಡಿ

ಯೇ, ಅವನ ಬಾಯಿಯ ರುಚಿಯನ್ನು ತಿಳಿಯಬೇಕು; ಹಲ್ಲುಗಳು ಹೊರಟು ಹೋಗುವದರಿಂದ ಶರೀರದಲ್ಲಿ ರಸವಿಲ್ಲವೆಂಬದನ್ನೂ, ಸೊಣ ಸವಿಾಪಿಸುವದರಿಂದ ಶರೀರವು ಸೀಯಾಗಿರಬೇಕೆಂಬದನ್ನೂ, ರಕ್ತಪಿತ್ತದ ಸಂದೇಹ ಹುಟ್ಟಿ, ಇದು ದೇಹಧಾರಯಾದ ರಕ್ತವೋ ಅಥವಾ ರಕ್ತಪಿತ್ತವೋ ಎಂಬದನ್ನು ನಿಶ್ಚಯಿಸಬೇಕಾದಾಗ್ಗೆ, ನಾಯಿ ಅಥವಾ ಕಾಗೆ ತಿಂದರೆ ಧಾರಿರಕ್ತವೆಂತಲೂ, ತಿನ್ನದೆ ಬಿಟ್ಟರೆ ರಕ್ತಪಿತ್ತವೆಂತಲೂ, ಅನುಮಾನರೀತಿಯಿಂದ ತಿಳಿಯಬೇಕು, ಹೀಗೆ ರೋಗಿಯ ಶರೀರದೊಳಗಣ ಬೇರೆ ರಸಗಳನ್ನೂ ಊಹಿಸಬೇಕು, ರೋಗಿಯ ಇಡೀ ಶರೀರದ ಸ್ವಾಭಾವಿಕ ವಾಸನೆಯನ್ನೂ, ವಿಕಾರ ಹೊಂದಿದ ವಾಸನೆಯನ್ನೂ, ಮೂಗಿನಿಂದ ಪರೀಕ್ಷಿಸಬೇಕು, ಸ್ಪರ್ಶವಿಷಯವಾದ ಪ್ರಕೃತಿ ಮತ್ತು ವಿಕಾರವನ್ನು ಕೈಯಿಂದ ಮುಟ್ಟಿ ತಿಳಿಯಬೇಕು, ಹೀಗೆ ಪ್ರತ್ಯಕ್ಷದಿಂದಲೂ, ಕೆಲವು ಅನುಮಾನಭಾಗಗಳಿಂದಲೂ, ಮಾಡಬೇಕಾದ ಪರೀಕ್ಷೆಯನ್ನು ವಿವರಿಸಿದ್ದಾಯಿತು

(11) ಇಮೇ ತು ಖಲು ಅನ್ಯೇಽಪ್ಯೇವಮೇವ ಭೂಯೋಽನುಮಾನಜ್ಞೇಯಾ ಭವಂತಿ ಭಾವಾಃ | ತದ್ಯಥಾ | ಅಗ್ನಿಂ ಜರಣಶಕ್ತ್ಯಾ, ಬಲಂ ವ್ಯಾಯಾಮಶಕ್ತ್ಯಾ, ಶ್ರೋತ್ರಾದೀನ್ ಶಬ್ದಾದಿಗ್ರಹಣೇನ, ಮನೋಽರ್ಥಾವ್ಯಭಿಚಾರೇಣ, ವಿಜ್ಞಾನಂ ವ್ಯವಸಾಯೇನ, ರಜಃ ಸಂಗೇನ, ಮೋಹಮವಿಜ್ಞಾನೇನ, ಕ್ರೋಧಮಭಿದ್ರೋಹೇಣ, ಶೋಕಂ ದೈನ್ಯೇನ, ಹರ್ಷಮಾಮೋದೇನ, ಪ್ರೀತಿಂ ತೋಷೇಣ, ಭಯಂ ವಿಷಾದೇನ, ಧೈರ್ಯಮವಿಷಾದೇನ, ವೀರ್ಯಮುತ್ಸಾಹೇನ, ಸ್ಥಾನಮವಿಭ್ರಮೇಣ, ಶ್ರದ್ಧಾಮಭಿಪ್ರಾಯೇಣ, ಮೇಧಾಂ ಗ್ರಹಣೇನ, ಸಂಜ್ಞಾಂ ನಾಮಗ್ರಹಣೇನ, ಸ್ಮೃತಿಂ ಸ್ಮರಣೇನ, ಹ್ರಿಯಮಪತ್ರಪೇಣ. ಶೀಲಮನುಶೀಲನೇನ, ದ್ವೇಷಂ ಪ್ರತಿಷೇಧೇನ, ಉಪಾಧಿಮನುಬಂಧೇನ, ಧೃತಿಮಲೌಲ್ಯೇನ, ವಶ್ಯತಾಂ ವಿಧೇಯತಯಾ, ವಯೋಭಕ್ತಿಸಾತ್ಮ್ಯವ್ಯಾಧಿಸಮುತ್ಥಾನಾನಿ ಕಾಲದೇಶೋಪಶಯವೇದನಾವಿಶೇಷೇಣ, ಗೂಢಲಿಂಗಂ ವ್ಯಾಧಿಮುಪಶಯಾನುಪಶಯಾಭ್ಯಾಂ, ದೋಷಪ್ರಮಾಣವಿಶೇಷಮಪಚಾರವಿಶೇಷೇಣ, ಆಯುಷಃ ಕ್ಷಯಮರಿಷ್ಟೈರುಪಸ್ಥಿತಶ್ರೇಯಸ್ತ್ವಂ ಕಲ್ಯಾಣಾಭಿನಿವೇಶೇನ, ಅಮಲಂ ಸತ್ವಮವಿಕಾರೇಣೇತಿ | (ಚ 258)

ಇದೇ ಮೇರೆಗೆ ಊಹಯಿಂದ ತಿಳಿಯಬೇಕಾದ ಬೇರೆ ಭಾವಗಳು ಯಾವವೆಂದರೆ:— ಅಗ್ನಿಯನ್ನು ಜೀರ್ಣಶಕ್ತಿಯಿಂದ, ಬಲವನ್ನು ವ್ಯಾಯಾಮಶಕ್ತಿಯಿಂದ, ಶ್ರೋತ್ರಾದಿ ಇಂದ್ರಿಯಗಳನ್ನು ಶಬ್ದಾದಿಗಳ ಗ್ರಹಣ(ಗೋಚರ)ಶಕ್ತಿಯಿಂದ, ಮನಸ್ಸನ್ನು ಅರ್ಥವನ್ನು ಬಿಡದೆ ಇರೋಣದರಿಂದ, ಜ್ಞಾನವನ್ನು ನಿಶ್ಚಯದಿಂದ, ರಜೋಗುಣವನ್ನು ಸಂಗದಿಂದ, ಮೋಹವನ್ನು ಜ್ಞಾನವಿಲ್ಲದಿರೋಣದಿಂದ, ಕ್ರೋಧವನ್ನು ಕಡಕುತನದಿಂದ, ಶೋಕವನ್ನು ದೈನ್ಯಭಾವದಿಂದ, ಹರ್ಷವನ್ನು ಆನಂದದಿಂದ, ಪ್ರೀತಿಯನ್ನು ಸಂತೋಷಪಡಿಸುವಿಕೆಯಿಂದ, ಭಯವನ್ನು ಜಡತನದಿಂದ, ಧೈರ್ಯವನ್ನು ಜಡತ್ವವಿಲ್ಲದಿರೋಣದರಿಂದ, ವೀರ್ಯವನ್ನು ಉತ್ಸಾಹದಿಂದ,

ಸ್ಥಾನಸ್ಥಿತಿಯನ್ನು ಭ್ರಮೆಯಿಲ್ಲದಿರೋಣದರಿಂದ, ಶ್ರದ್ಧೆಯನ್ನು ಅಭಿಪ್ರಾಯದಿಂದ, ಮೆದುಳನ್ನು ಗ್ರಹಿಸುವ ಶಕ್ತಿಯಿಂದ, ಸಂಜ್ಞೆಯನ್ನು ಹೆಸರು ತಿಳಿಯೋಣದರಿಂದ, ಸ್ಮೃತಿಯನ್ನು ನೆನಪಿರುವದರಿಂದ, ನಾಚುವ ಸ್ವಭಾವವನ್ನು ಲಜ್ಜಿಪಡುವದರಿಂದ, ಶೀಲವನ್ನು ಪದೇಪದೇ ನಡಿಸುವ ಸ್ವಭಾವದಿಂದ, ದ್ವೇಷವನ್ನು ವಿರೋಧಮಾಡೋಣದರಿಂದ, ಹೇತುವನ್ನು ಆದರ ಲಕ್ಷಣದಿಂದ, ಧೃತಿಯನ್ನು ಚಂಚಲವಿಲ್ಲದಿರೋಣದರಿಂದ, ವಶ್ಯತೆಯನ್ನು ವಶ್ಯತ್ವದಿಂದ, ವಯಸ್ಸು, ಭಕ್ತಿ, ಸಾತ್ಮ್ಯ, ವ್ಯಾಧಿಯ ಹೊರಡುವಿಕೆ, ಇವುಗಳನ್ನು ಕಾಲ-ದೇಶ-ಸುಖಕರವಾದದ್ದು-ನೋವು, ಇವುಗಳ ವಿಶೇಷದಿಂದ, ಗುಪ್ತವಾದ ಲಕ್ಷಣವುಳ್ಳ ವ್ಯಾಧಿಯನ್ನು ಸುಖಾಸುಖಕರವಾದವುಗಳಿಂದ, ದೋಷಪ್ರಮಾಣದ ಹೆಚ್ಚುಕಡಿಮೆಯನ್ನು ಅಪಚಾರದ ಹೆಚ್ಚುಕಡಿಮೆಯಿಂದ, ಆಯುಸ್ಸಿನ ಕ್ಷಯವನ್ನು ಅನಿಷ್ಟಸೂಚನೆಗಳಿಂದ, ಸುಖ ಸಮಾಪಿಸಿದ ಲಕ್ಷಣವನ್ನು ಮಂಗಲಾವೇಶದಿಂದ, ನಿರ್ಮಲವಾದ ಸತ್ವವನ್ನು (ಕ್ರೋಧ ಮುಂತಾದ) ವಿಕಾರವಿಲ್ಲದಿರೋಣದರಿಂದ, ಹೀಗೆ ಊಹಿಸಿ ತಿಳಿಯತಕ್ಕದ್ದು

ಸರ್ವಥಾ ಸರ್ವಮಾಲೋಚ್ಯ ಯಥಾಸಂಭವಮರ್ಥವಿತ್ ।
ಅಥಾಧ್ಯವಸ್ಯೇತ್ ತತ್ತ್ವೇ ಚ ಕಾರ್ಯೇ ಚ ತದನಂತರಂ ॥ (ಚ 259)

ಸರ್ವ ಲಕ್ಷಣಗಳನ್ನು ಹುಟ್ಟಿದ ಹಾಗೆ ಸರ್ವ ಪ್ರಕಾರವಾಗಿ ಆಲೋಚಿಸಿ, ಅವುಗಳ ಅರ್ಥವನ್ನು ತಿಳಿದವನಾಗಿ, ಅನಂತರ ವ್ಯಾಧಿಯ ತತ್ವವನ್ನೂ, ಮಾಡತಕ್ಕ ಪರಿಹಾರವನ್ನೂ, ನಿಶ್ಚಯಿಸತಕ್ಕದ್ದು

ರೋಗಿಯ ಪರೀಕ್ಷಾಕ್ರಮ—ಸುಶ್ರುತನ ನಿರ್ದೇಶ

6 (*a*) ತತೋ ದೂತನಿಮಿತ್ತಶಕುನಮಂಗಲಾನುಲೋಮ್ಯೇನಾತುರಗೃಹಮುಪಗಮ್ಯೋಪವಿಶ್ಯಾತುರಮುಪಪರ್ಶ್ಯೇತ್ ಸ್ಪೃಶೇತ್ ಪೃಚ್ಛೇಚ್ಚ । ತ್ರಿಭಿರೇತೈರ್ವಿಜ್ಞಾನೋಪಾಯೈ ರೋಗಾಃ ಪ್ರಾಯಶೋ ವೇದಿತವ್ಯಾ ಇತ್ಯೇಕೇ । ತತ್ತು ನ ಸಮ್ಯಕ್ । ಷಡ್ವಿಧೋ ಹಿ ರೋಗಾಣಾಂ ವಿಜ್ಞಾನೋಪಾಯಃ । ತದ್ಯಥಾ ಪಂಚಭಿಃ ಶ್ರೋತ್ರಾದಿಭಿಃ ಪ್ರಶ್ನೇನ ಚೇತಿ । (ಸು 34.)

ವೈದ್ಯನು ದೂತ-ನಿಮಿತ್ತ-ಶಕುನ-ಮಂಗಲ, ಈ ಸೂಚನೆಗಳನ್ನು ಅನುಸರಿಸಿಕೊಂಡು, ರೋಗಿಯ ಮನೆಯನ್ನು ಹೊಕ್ಕು, ಕೂತು, ರೋಗಿಯನ್ನು ಪರೀಕ್ಷಿಸಿ ನೋಡಬೇಕು, ಮುಟ್ಟಬೇಕು, ಮತ್ತು ಪ್ರಶ್ನೆ ಮಾಡಬೇಕು. ಈ ಮೂರು ಜ್ಞಾನೋಪಾಯಗಳಿಂದ ರೋಗಗಳನ್ನು ಹೆಚ್ಚಾಗಿ ತಿಳಿಯಬೇಕೆಂತ ಕೆಲವರು ಹೇಳುತ್ತಾರೆ ಆದರೆ ಅದು ಸರಿಯಲ್ಲ, ಯಾಕೆಂದರೆ ರೋಗಗಳನ್ನು ತಿಳಿಯುವ ಉಪಾಯವು ಷಡ್ವಿಧವಾಗಿರುತ್ತದೆ, ಹ್ಯಾಗೆಂದರೆ ಕಿವಿ ಮೊದಲಾದ ಪಂಚೇಂದ್ರಿಯಗಳಿಂದ ಮತ್ತು ಪ್ರಶ್ನೆಯಿಂದ.

(*b*) ತತ್ರ ಶ್ರೋತ್ರೇಂದ್ರಿಯವಿಜ್ಞೇಯಾ ವಿಶೇಷಾ ರೋಗೇಷು ವ್ರಣಾಸ್ರಾವವಿಜ್ಞಾನೀಯಾದಿಷು ವಕ್ಷ್ಯಂತೇ ಸಫೇನಂ ರಕ್ತಮಿವಾರಯನ್ನನಿಲಃ ಸಶಬ್ದೋ ನಿರ್ಗಚ್ಛತೀತ್ಯೇವಮಾದಯಃ । ಸ್ಪರ್ಶನೇಂದ್ರಿಯವಿಜ್ಞೇಯಾಃ ಶೀತೋಷ್ಣಶ್ಲಕ್ಷ್ಣಕರ್ಕಶಮೃದುಕಠಿನತ್ವಾದಯೋ ಸ್ಪರ್ಶವಿಶೇಷಾ ಜ್ವರ

ಶೋಷಾದಿಷು । ಚಕ್ಷುರಿಂದ್ರಿಯವಿಜ್ಞೇಯಾಃ ಶರೀರೋಪಚಯಾಪಚಯಾಯುರ್ಲಕ್ಷಣಬಲವರ್ಣವಿಕಾರಾದಯಃ। ರಸನೇಂದ್ರಿಯವಿಜ್ಞೇಯಾಃ ಪ್ರಮೇಹಾದಿಷು ರಸವಿಶೇಷಾಃ । ಘ್ರಾಣೇಂದ್ರಿಯವಿಜ್ಞೇಯಾ ಅರಿಷ್ಟಲಿಂಗಾದಿಷು ವ್ರಣಾನಾಮವ್ರಣಾನಾಂ ಚ ಗಂಧವಿಶೇಷಾಃ । ಪ್ರಶ್ನೇನ ಚ ವಿಜ್ಞಾನೀಯಾದ್ದೇಶಂ ಕಾಲಂ ಜಾತಿಂ ಸಾತ್ಮ್ಯಮಾತಂಕಸಮುತ್ಪತ್ತಿಂ ವೇದನಾಸಮುಥ್ಥಾಯಂ ಬಲಂ ದೀಪ್ತ್ಯಾಗ್ನಿತಾಂ ವಾತಮೂತ್ರಪುರೀಷಾಣಾಂ ಪ್ರವೃತ್ತ್ಯಪ್ರವೃತ್ತೀ ಕಾಲಪ್ರಕರ್ಷಾದೀಂಶ್ಚ ವಿಶೇಷಾನ್ ।

(ಸು 34-35.)

ಪಂಚೇಂದ್ರಿಯಗಳೊಳಗೆ ಕವಿಯ ಬಲದಿಂದ ತಿಳಿಯಬೇಕಾದ 'ನೊರೆ ಸಮೇತ ರಕ್ತವನ್ನು ಕೂಡಿಕೊಂಡು ವಾಯುವು ಶಬ್ದದೊಡನೆ ಹೊರಗೆ ಹೋಗುತ್ತದೆ' ಎನ್ನುವದು ಮತ್ತು ಹೀಗಿನ ಬೇರೆ ವಿಶೇಷಗಳು 'ವ್ರಣಾಸ್ರಾವವಿಜ್ಞಾನೀಯ' ಎಂಬ ಅಧ್ಯಾಯ ಮುಂತಾದ ಸಂದರ್ಭಗಳಲ್ಲಿ ಹೇಳುವ ರೋಗಗಳಲ್ಲಿ ವಿವರಿಸಲ್ಪಟ್ಟಿರುತ್ತವೆ. ಮುಟ್ಟುವದರಿಂದ ತಿಳಿಯಬಹುದಾದ ವಿಶೇಷಗಳು ಯಾವವೆಂದರೆ ಜ್ವರ, ಕ್ಷಯ ಮುಂತಾದ ರೋಗಗಳಲ್ಲಿ ಶೀತ, ಬಿಸಿ, ನಸೆ, ದರಗು, ಮೆತ್ತಗೆ, ಗಟ್ಟಿ, ಮುಂತಾದ ಮುಟ್ಟುವಿಕೆಯಿಂದ ಗೊತ್ತಾಗುವ ಭಾವಗಳಾಗಿರುತ್ತವೆ ಶರೀರದ ಪುಷ್ಟಿ ಅಥವಾ ಕೃಶತೆ, ಆಯುಸ್ಸಿನ ಲಕ್ಷಣ, ಉತ್ಸಾಹ, ವರ್ಣವಿಕಾರ, ಮುಂತಾದವುಗಳು ದೃಷ್ಟಿಬಲದಿಂದ ತಿಳಿಯಬಹುದಾದ ವಿಶೇಷಗಳಾಗಿರುತ್ತವೆ. ಪ್ರಮೇಹ ಮುಂತಾದ ವ್ಯಾಧಿಗಳಲ್ಲಿ ರಸವಿಶೇಷಗಳು ನಾಲಿಗೆಯಿಂದ ತಿಳಿಯಬಹುದಾದಂಥವಾಗಿರುತ್ತವೆ. ಅರಿಷ್ಟಲಕ್ಷಣಗಳೊಳಗೆ ವ್ರಣಗಳ ಅಥವಾ ಇತರ ವಾಸನೆಗಳು ಮೂಗಿನಿಂದ ತಿಳಿಯಬಹುದಾದಂಥವು. ಪ್ರಶ್ನೆಯಿಂದ ತಿಳಿಯಬೇಕಾದದ್ದು ಯಾವವೆಂದರೆ ದೇಶ, ಕಾಲ, ಜಾತಿ, ಸಾತ್ಮ್ಯ, ರೋಗದ ಹುಟ್ಟು, ನೋವುಗಳ ತೀವ್ರತೆ, ಬಲ, ಅಗ್ನಿಯ ಚುರುಕುತನ, ವಾಯು ಏನ, ಮಲದ ಮತ್ತು ಮೂತ್ರದ ಪ್ರವೃತ್ತಿ ಅಥವಾ ಪ್ರವೃತ್ತಿಯಿಲ್ಲದಿರುವಿಕೆ, ಕಾಲಪ್ರಕರ್ಷ (ಕಾಲಭೇದದ ಮೇಲೆ ಆಗುವ ಹೆಚ್ಚುಕಡಿಮೆ), ಇವೇ ಮೊದಲಾದ ವಿಶೇಷಗಳಾಗಿರುತ್ತವೆ

7. ವಿಧ್ಯಾದೃಷ್ಟಾ ವಿಕಾರಾ ಹಿ ದುರಾಖ್ಯಾತಾಸ್ತಧೈವ ಚ ।
ತಥಾ ದುಷ್ಪರಿಮೃಷ್ಟಾಶ್ಚ ಮೋಹಯೇಯುಶ್ಚಿಕಿತ್ಸಕಂ ॥ (ಸು. 35.)

ಸೂಕ್ಷ್ಮವಿಚಾರದ ಆವಶ್ಯಕತೆ

ವಿಕಾರಗಳನ್ನು ನೋಡುವಲ್ಲಿ, ಹೇಳುವಲ್ಲಿ ಅಥವಾ ಮುಟ್ಟಿ ಶೋಧಿಸುವಲ್ಲಿ ವ್ಯತ್ಯಾಸ ಉಂಟಾದರೆ, ವೈದ್ಯನು ತಪ್ಪಿಬೀಳುವನು.

8. ಏವಮಭಿಸಮೀಕ್ಷ್ಯ ಸಾಧ್ಯಾನ್ ಸಾಧಯೇದ್ಯಾಪ್ಯಾನ್ ಯಾಪಯೇದ
ಸಾಧ್ಯಾನ್ನೋಪಕ್ರಮೇತ ಪರಿಸಂವತ್ಸರೋತ್ಥಿತಾಂಶ್ಚ ವಿಕಾರಾನ್ ಪ್ರಾ
ಯಶೋ ವರ್ಜಯೇತ್ । (ಸು. 35.)

ಸಾಧ್ಯಾಸಾಧ್ಯ ಯಾಪ್ಯವಿಚಾರ

ಮೇಲೆ ಹೇಳಿದ ರೀತಿಯಿಂದ ಸರಿಯಾಗಿ ಪರೀಕ್ಷೆ ಮಾಡಿಕೊಂಡು, ಸಾಧ್ಯವಾದ ರೋಗಗಳನ್ನು ಗುಣಮಾಡಬೇಕು, ತಡೆಯಬಹುದಾದ ರೋಗಗಳನ್ನು ತಡಿಸಬೇಕು ಮತ್ತು ಅಸಾಧ್ಯ

ವಾದ ರೋಗಗಳ ಚಿಕಿತ್ಸೆಯನ್ನು ಉಪಕ್ರಮಿಸದೆ ಬಿಡಬೇಕು. ಒಂದು ವರ್ಷಕ್ಕೆ ಮೊದಲೇ ಹುಟ್ಟಿರುವ ರೋಗಗಳನ್ನು ಹೆಚ್ಚು ಪಕ್ಷ ಬಿಡಬೇಕು.

9. ಯಾಪನೀಯಂ ತಂ ವಿದ್ಯಾತ್ ಕ್ರಿಯಾ ಧಾರಯತೇ ಹಿ ಯಂ ।
ಯಾಪ್ಯಲಕ್ಷಣ ಕ್ರಿಯಾಯಾಂ ತು ನಿವೃತ್ತಾಯಾಂ ಸದ್ಯೋ ಯಶ್ಚ ವಿನಶ್ಯತಿ ॥
(ಭಾ. ಪ್ರ. 62.)

ಯಾವ ರೋಗಿಯು ಪ್ರತಿಕ್ರಿಯೆ ಮಾಡುತ್ತಿರುವದರಿಂದ ಬದುಕಿದ್ದು, ಪ್ರತಿಕ್ರಿಯೆ ನಿಲ್ಲಿಸಿದ ಕೂಡಲೇ ಮರಣವನ್ನು ಹೊಂದುವನೋ, ಅವನು ಯಾಪನೀಯ (ಮತ್ತು ಆ ರೋಗವು ಯಾಪ್ಯ)

10. ತತ್ರ ಸಾಧ್ಯಾ ಅಪಿ ವ್ಯಾಧಯಃ ಪ್ರಾಯೇಣೈಷಾಂ ದುಶ್ಚಿಕಿತ್ಸ್ಯತಮಾ ಭವಂತಿ । ತದ್ಯಥಾ । ಶ್ರೋತ್ರಿಯ-ನೃಪತಿ-ಸ್ತ್ರೀ-ಬಾಲ-ವೃದ್ಧ-ಭೀರು-
ಚಿಕಿತ್ಸೆಗೆ ಕಷ್ಟವಾದ ರೋಗಿ ವರ್ಗಗಳು ರಾಜಸೇವಕ-ಕಿತವ-ದುರ್ಬಲ-ವೈದ್ಯಾವಿದಗ್ಧ-ವ್ಯಾಧಿಗೋಪಕ-ದರಿದ್ರ-
ಕೃಪಣ-ಕ್ರೋಧವತಾಮನಾತ್ಮವತಾಮನಾಥಾನಾಂ ಚೈವಂ ನಿರೂಪ್ಯ ಚಿಕಿತ್ಸಾಂ ಕುರ್ವನ್ ಧರ್ಮಾರ್ಥಕಾಮಯಶಾಂಸಿ ಪ್ರಾಪ್ನೋತಿ । (ಸು. 35.)

ಸಾಧ್ಯವಾದ ರೋಗಗಳಾದರೂ ಕೆಲವರಿಗೆ ಹೆಚ್ಚಾಗಿ ಚಿಕಿತ್ಸೆಗೆ ಅತಿಕಷ್ಟವಾಗಿ ಪರಿಣಮಿಸುತ್ತವೆ. ಯಾರಿಗಂದರೆ ಶ್ರೋತ್ರಿಯ, ಅರಸು, ಹೆಂಗಸು, ಮಗು, ಮುದುಕ, ಹೇಡಿ, ರಾಜಸೇವಕ, ಜುಗಾರಿ, ಬಲಹೀನ, ವೈದ್ಯನೆಂಬ ಅಭಿಮಾನವುಳ್ಳವ, ವ್ಯಾಧಿಯನ್ನಡಗಿಸುವವ, ದರಿದ್ರ, ಕೃಪಣ, ಸಿಟ್ಟುಗಾರ, ಜಿತೇಂದ್ರಿಯನಲ್ಲದವ ಮತ್ತು ಅನಾಥ, ಇವರಿಗೆ. ಈ ಪ್ರಕಾರ ನೋಡಿಕೊಂಡು ಚಿಕಿತ್ಸೆ ಮಾಡುವ ವೈದ್ಯನು ಧರ್ಮ, ಅರ್ಥ, ಕಾಮ ಮತ್ತು ಯಶಸ್ಸನ್ನು ಪಡೆಯುತ್ತಾನೆ.

11. ಇಹ ಖಲು ಹೇತುರ್ನಿಮಿತ್ತಮಾಯತನಂ ಕರ್ತಾ ಕಾರಣಂ ಪ್ರತ್ಯಯಃ ಸಮುತ್ಥಾನಂ ನಿದಾನಮಿತ್ಯನರ್ಥಾಂತರಂ । ತತ್ತ್ರಿವಿಧಂ ಅಸಾತ್ಮ್ಯೇಂದ್ರಿಯಾರ್ಥಸಂಯೋಗಃ ಪ್ರಜ್ಞಾಪರಾಧಃ ಪರಿಣಾಮಶ್ಚೇತಿ । ಅತಸ್ತ್ರಿವಿಧವಿಕಲ್ಪಾ ವ್ಯಾಧಯಃ ಪ್ರಾದುರ್ಭವಂತ್ಯಾಗ್ನೇಯಸೌಮ್ಯವಾಯವ್ಯಾಃ ದ್ವಿವಿಧಾಶ್ಚಾಪರೇ ರಾಜಸಾಸ್ತಾಮಸಾಶ್ಚ । ತತ್ರ ವ್ಯಾಧಿರಾಪ-
ನಿದಾನಾದಿ ರೋಗವಿಜ್ಞಾನ ಯೋ ಗದ ಆತಂಕೋ ಯಕ್ಷ್ಮಾ ಜ್ವರೋ ವಿಕಾರ ಇತ್ಯನರ್ಥಾಂತರಂ । ತಸ್ಯೋಪಲಬ್ಧಿರ್ನಿದಾನಪೂರ್ವರೂಪಲಿಂಗೋಪಶಯಸಂಪ್ರಾಪ್ತಿತಶ್ಚ । ತತ್ರ ನಿದಾನಂ ಕಾರಣಮಿತ್ಯುಕ್ತಮಗ್ರೇ ಪೂರ್ವರೂಪಂ ಪ್ರಾಗುತ್ಪತ್ತಿರ್ಲಕ್ಷಣಂ ವ್ಯಾಧೇಃ । ಪ್ರಾದುರ್ಭೂತಲಕ್ಷಣಂ ಪುನರ್ಲಿಂಗಂ ತತ್ರ ಲಿಂಗಮಾಕೃತಿರ್ಲಕ್ಷಣಂ ಚಿಹ್ನಂ ಸಂಸ್ಥಾನಂ ವ್ಯಂಜನಂ ರೂಪಮಿತ್ಯನರ್ಥಾಂತರಂ ಅಸ್ಮಿನ್ನರ್ಥೇ । ಉಪಶಯಃ ಪುನರ್ಹೇತುವ್ಯಾಧಿವಿಪರೀತಾನಾಂ ವಿಪರೀತಾರ್ಥಕಾರಿಣಾಂ ಚೌಷಧಾಹಾರವಿಹಾರಾಣಾಂ ಉಪ

ಯೋಗಃ ಸುಖಾನುಬಂಧಃ | ಸಂಪ್ರಾಪ್ತಿರ್ಜಾತಿರಾಗತಿರಿತ್ಯನರ್ಥಾಂತರಂ ವ್ಯಾಧೇಃ ಸಾ ಸಂಖ್ಯಾಪ್ರಾಧಾನ್ಯವಿಧಿವಿಕಲ್ಪ ಬಲಕಾಲವಿಶೇಷೈರ್ಭಿದ್ಯತೇ | ಸಂಖ್ಯಾ ಯಥಾಷ್ಟೌ ಜ್ವರಾಃ ಪಂಚಗುಲ್ಮಾಃ ಸಪ್ತಕುಷ್ಠಾನ್ಯೇವಮಾದಿ | ಪ್ರಾಧಾನ್ಯಂ ಪುನರ್ದೋಷಾಣಾಂ ತರತಮಯೋಗೇನೋಪಲಭ್ಯತೇ ತತ್ರ ದ್ವಯೋಸ್ತರಸ್ತ್ರಿಷು ತಮ ಇತಿ | ವಿಧಿರ್ನಾಮ ದ್ವಿವಿಧಾ ವ್ಯಾಧಯೋ ನಿಜಾಗಂತುಭೇದೇನ ತ್ರಿವಿಧಾಸ್ತ್ರಿದೋಷಭೇದೇನ ಚತುರ್ವಿಧಾಃ ಸಾಧ್ಯಾಸಾಧ್ಯಮೃದುದಾರುಣಭೇದೇನ ಪೃಥಕ್ | ವಿಕಲ್ಪೋ ನಾಮ ಸಮವೇತಾನಾಂ ಪುನರ್ದೋಷಾಣಾಮಂಶಾಂಶಬಲವಿಕಲ್ಪೋಽಸ್ಮಿನ್ನಧ್ಯೇ | ಬಲಕಾಲವಿಶೇಷಃ ಪುನರ್ವ್ಯಾಧೀನಾಮೃತ್ಪಹೋರಾತ್ರಾಹಾರಕಾಲವಿಧಿನಿಯತೋ ಭವತಿ | ತಸ್ಮಾದ್ವ್ಯಾಧೀನ್ ಭಿಷಗನುಪಹತಸತ್ವಬುದ್ಧಿರ್ಹೇತ್ವಾದಿಭಿರ್ಭಾವೈರ್ಯಥಾವದನುಬುಧ್ಯೇತ | (ಚ. 20೭.)

1. ಹೇತು, 2. ನಿಮಿತ್ತ, 3. ಆಯತನ, 4. ಕರ್ತೃ, 5 ಕಾರಣ, 6. ಪ್ರತ್ಯಯ, 7. ಸಮುತ್ಥಾನ, 8 ನಿದಾನ, ಈ ಎಂಟು ಶಬ್ದಗಳೂ ಒಂದೇ ತಾತ್ಪರ್ಯವುಳ್ಳವು. ಇಂಥಾ ಹೇತುವು ಮೂರು ವಿಧ 1. ಹಿತವಲ್ಲದ ಇಂದ್ರಿಯವಿಷಯಗಳ ಸಂಘಟನೆ, 2. ಪ್ರಜ್ಞೆಯ (ಜ್ಞಾನದ) ತಪ್ಪು ಮತ್ತು 3. (ಕಾಲಾದಿಗಳ) ಪರಿಪಾಕ. ಈ ತ್ರಿವಿಧವಾದ ಹೇತುವಿನಿಂದ ವ್ಯಾಧಿಗಳು ಆಗ್ನೇಯ (ಪಿತ್ತಜ), ಸೌಮ್ಯ (ಕಫಜ), ವಾಯವ್ಯ (ವಾತಜ), ಎಂತ ಮೂರು ವಿಧವಾಗಿ, ಇನ್ನೊಂದು ಕ್ರಮದಲ್ಲಿ ರಾಜಸ, ತಾಮಸ, ಎಂತ ಎರಡು ವಿಧವಾಗಿ, ಹೊರಗೆ ಬರುತ್ತವೆ. ಈ ವ್ಯಾಧಿ ಶಬ್ದದ ಅರ್ಥದಲ್ಲಿ ಆಮಯ, ಗದ, ಆತಂಕ, ಯಕ್ಷ್ಮಾ, ಜ್ವರ, ವಿಕಾರ, ಎಂಬ ಶಬ್ದಗಳು ಉಪಯೋಗಿಸಲ್ಪಡುತ್ತವೆ. ಆ ವ್ಯಾಧಿಯು ನಿದಾನದಿಂದಲೂ, ಪೂರ್ವರೂಪದಿಂದಲೂ, ಲಿಂಗದಿಂದಲೂ, ಉಪಶಯದಿಂದಲೂ, ಸಂಪ್ರಾಪ್ತಿಯಿಂದಲೂ, ತಿಳಿಯಬರುತ್ತದೆ. ಅವುಗಳೊಳಗೆ ನಿದಾನವೆಂದರೆ ಕಾರಣವೆಂತ ಮೊದಲೇ ಹೇಳಲ್ಪಟ್ಟಿದೆ. ಪೂರ್ವರೂಪವೆಂಬದು ವ್ಯಾಧಿಯ (ಆರಂಭದ) ಉತ್ಪತ್ತಿಗೆ ಮೊದಲಿನ ಲಕ್ಷಣ. ವ್ಯಾಧಿಯ ಹೊರಗೆ ಬಂದ ಮೇಲಿನ ಲಕ್ಷಣವೇ ಲಿಂಗ ಎಂಬದು. ಇದೇ ಲಿಂಗ ಎಂಬ ಅರ್ಥದಲ್ಲಿ ಆಕೃತಿ, ಲಕ್ಷಣ, ಚಿಹ್ನ, ಸಂಸ್ಥಾನ, ವ್ಯಂಜನ, ರೂಪ, ಎಂಬ ಶಬ್ದಗಳೂ ಉಪಯೋಗಿಸಲ್ಪಡುತ್ತವೆ. ಹೇತುವಿಗೂ ವ್ಯಾಧಿಗೂ ಪ್ರತಿಕೂಲವಾದ ಮತ್ತು ಪ್ರತಿಕೂಲಾರ್ಥವನ್ನು ಸಂಪಾದಿಸತಕ್ಕ ಔಷಧ, ಆಹಾರ, ವಿಹಾರಗಳ ಸುಖಕರವಾದ ಉಪಯೋಗಕ್ಕೆ ಉಪಶಯವೆನ್ನುವದು. ವ್ಯಾಧಿಯ ಸಂಪ್ರಾಪ್ತಿ, ಜಾತಿ, ಆಗತಿ, ಎಂದರೆ ಒಂದೇ ಅರ್ಥ. ಸಂಪ್ರಾಪ್ತಿಯಲ್ಲಿ ಸಂಖ್ಯಾ, ಪ್ರಾಧಾನ್ಯ, ವಿಧಿ, ವಿಕಲ್ಪ, ಬಲಕಾಲ, ಇವುಗಳ ವಿಶೇಷಗಳಿಂದ ಭೇದಗಳಿವ. ಸಂಖ್ಯಾ ಎಂಬದು ಎಂಟು ಜ್ವರಗಳು, ಐದು ಗುಲ್ಮಗಳು, ಏಳು ಕುಷ್ಠಗಳು, ಎಂಬ ಹಾಗಿನವು. ಪ್ರಾಧಾನ್ಯವು ದೋಷಗಳ ತರತಮಯೋಗದಿಂದ ಉಂಟಾಗುತ್ತದೆ, ಎರಡು ಕೂಡಿದಲ್ಲಿ ತರ, ಮೂರು ಕೂಡಿದಲ್ಲಿ ತಮ. ವ್ಯಾಧಿಗಳು ನಿಜ, ಆಗಂತು, ಎಂಬ ಭೇದದಿಂದ ಎರಡು ವಿಧ, ತ್ರಿದೋಷಗಳ ಭೇದದಿಂದ ಮೂರು ವಿಧ, ಸಾಧ್ಯ, ಅಸಾಧ್ಯ, ಮೃದು, ಕರಿಣ, ಎಂಬ ಭೇದದಿಂದ ನಾಲ್ಕು ವಿಧ ಎಂಬದು ವಿಧಿ. ವಿಕಲ್ಪ ಎಂಬದು ಕೂಡಿದಂಥಾ ದೋಷಗಳ ಅಂಶಾಂಶ

ಬಲಭೇದ ಎಂಬ ಅರ್ಥದಲ್ಲಿ. ವ್ಯಾಧಿಗಳ ಬಲಕಾಲ ವಿಶೇಷವು ಋತು, ಹಗಲು, ರಾತ್ರಿ, ಆಹಾರದ ಕಾಲ, ಇವುಗಳಿಗೆ ಸಂಬಂಧಪಟ್ಟ ವಿಧಗಳಿಂದ ನಿಶ್ಚಯಿಸಲ್ಪಟ್ಟದ್ದಾಗಿರುತ್ತದೆ. ಆದ್ದರಿಂದ ವೈದ್ಯನು ಸ್ವಚ್ಛವಾದ ಸತ್ವ ಮತ್ತು ಬುದ್ಧಿಯುಳ್ಳವನಾಗಿ ವ್ಯಾಧಿಗಳನ್ನು ಹೇತು ಮೊದಲಾದ ಭಾವಗಳಿಂದ ಯಥಾರ್ಥವಾಗಿ ತಿಳಿಯತಕ್ಕದ್ದು

12. ಸ್ವಾತಂತ್ರ್ಯಪಾರತಂತ್ರ್ಯಾಭ್ಯಾಂ ವ್ಯಾಧೇಃ ಪ್ರಾಧಾನ್ಯಮಾದಿಶೇತ್ ।
(ಭಾ ಪ್ರ 240)

ಪ್ರಧಾನ ರೋಗದ ನಿಶ್ಚಯಿಸುವಿಕೆ

ಸ್ವತಂತ್ರವಾಗಿರುವಿಕೆ ಮತ್ತು ಪರಾಧೀನವಾಗಿರುವಿಕೆ ಎಂಬ ಭೇದದಿಂದ ರೋಗದ ಪ್ರಧಾನತೆಯನ್ನು ನಿಶ್ಚಯಿಸಬೇಕು

(ಉದಾಹರಣೆ —) ಯಥಾಸ್ವತಂತ್ರಸ್ಯ ಜ್ವರಸ್ಯ ಪ್ರಾಧಾನ್ಯಂ ಜ್ವರಾಧೀನಾನಾಂ ಶ್ವಾಸಾದೀನಾಮಪ್ರಾಧಾನ್ಯಂ । (ಭಾ ಪ್ರ ವ್ಯಾ 240)

ಸ್ವತಂತ್ರವಾದ ಜ್ವರ ಪ್ರಧಾನ, ಆ ಜ್ವರಕ್ಕೆ ಅಧೀನವಾಗಿ ಉಂಟಾದ ಉಬ್ಬಸ ಮುಂತಾದದ್ದು ಪ್ರಧಾನವಲ್ಲದ್ದು

ಇದರಾ ಈ ಪ್ರಕಾರ ಮಾಡುವ ಪರೀಕ್ಷೆಯಲ್ಲಿ ಕಂಡುಬರುವ ಲಕ್ಷಣಗಳು ಯಾವ ದೋಷವನ್ನು ಮತ್ತು ಯಾವ ರೋಗವನ್ನು ಸೂಚಿಸುತ್ತವೆ ಎಂಬದನ್ನು ದೋಷಗಳ ಮತ್ತು ರೋಗಗಳ ವಿವರಣೆಗಳಲ್ಲಿ ಸಂಸ್ತಾರವಾಗಿ ಹೇಳಲ್ಪಟ್ಟ ಲಕ್ಷಣಗಳ ನೆನಪಿನ ಮೇಲೆ ನಿಶ್ಚಯಿಸತಕ್ಕದ್ದು ಈ ವಿಷಯವಾದ ಕೆಲವು ಸೂತ್ರಗಳನ್ನು ಮಾತ್ರ ಈ ಸಂದರ್ಭದಲ್ಲಿ ಉಲ್ಲೇಖಿಸಲಾಗುತ್ತದೆ

13. ನಾಡೀ ಚ ಮೂತ್ರಂ ಚ ಮಲಶ್ಚ ಜಿಹ್ವಾ ।
ಶಬ್ದಶ್ಚ ಸಂಸ್ಪರ್ಶನರೂಪದೃಷ್ಟಿಃ ॥
ಯೇನ ಪ್ರಕಾರೇಣ ಪರೀಕ್ಷಣೀಯಂ ।
ಸಮಾಸತೋಽಸೌ ವಿಧಿರುಚ್ಯತೇಽತ್ರ ॥ (ಧ 6)

ನಾಡೀ ಮೊದಲಾದ ೮ ವಿಧ ಪರೀಕ್ಷೆ

ನಾಡೀ, ಮೂತ್ರ, ಮಲ, ನಾಲಿಗೆ, ಶಬ್ದ, ಸ್ಪರ್ಶನ, ರೂಪ, ಕಣ್ಣು, ಹೀಗೆ ಅಷ್ಟವಿಧವಾದ ಪರೀಕ್ಷೆಯನ್ನು ಹ್ಯಾಗೆ ಮಾಡಬೇಕಾದದ್ದೆಂಬ ವಿಧಿಯು ಇಲ್ಲಿ ಸಂಕ್ಷೇಪವಾಗಿ ಹೇಳಲ್ಪಡುತ್ತದೆ.

14 (a) ಶಾಕಪತ್ರಪ್ರಭಾ ರೂಕ್ಷಾ ಸ್ಫುಟನಾ ರಸನಾಽನಿಲಾತ್ ।
ರಕ್ತಶ್ಯಾವಾ ಭವೇತ್ಪಿತ್ತಾತ್ಪಿಚ್ಛಿಲಾ ಸ್ನಿಗ್ಧಾರ್ದ್ರಾ ಧವಲಾ ಕಫಾತ್ ॥
ಪರಿದಗ್ಧಾ ಖರಸ್ಪರ್ಶಾ ಕೃಷ್ಣಾ ದೋಷತ್ರಯೇಽಧಿಕೇ ।
ಸೈವ ದೋಷದ್ವಯಾಧಿಕ್ಯೇ ದೋಷದ್ವಿತಯಲಕ್ಷಣಾ ॥ (ಭಾ ಪ್ರ. 239.)

ನಾಲಿಗೆ ಪರೀಕ್ಷೆ

ವಾತದಿಂದ ನಾಲಿಗೆಯು ಒಣಗಿ ಒಡೆದು ತೇಗಿನ ಎಲೆಯ ಪ್ರಭೆಯುಳ್ಳದ್ದಾಗಿರುವದು, ಅಂದರೆ ದೊರಗಾಗಿರುವದು, ಪಿತ್ತದಿಂದ ಕೆಂಪು ಅಥವಾ ನೀಲವಾಗಿರುವದು, ಕಫದಿಂದ ಬಿಳ್ಳಗಾಗಿ, ಅಗ್ರದಿಂದಲೂ, ದ್ರವದಿಂದಲೂ ಕೂಡಿರುವದು, ತ್ರಿದೋಷಗಳು ಅಧಿಕವಾದಾಗ್ಗೆ

ಬೆಂದಂತೆಯೂ, ಕಪ್ಪು ವರ್ಣವಾಗಿಯೂ, ದೊರಗಾಗಿಯೂ ಇರುವದು, ಮತ್ತು ಎರಡು ದೋಷಗಳು ಅಧಿಕವಾದಾಗ್ಗೆ, ಆ ಎರಡೂ ದೋಷಗಳ ಲಕ್ಷಣಗಳಿಂದ ಕೂಡಿರುವದು.

(*b*) ಜಿಹ್ವಾತಿಜಲಸಿಕ್ತಾ ಚೇತ' ಶ್ಲೇಷ್ಮಲಾ ಸಾ ನಿಗದ್ಯತೇ ।
ಕಟುಸಿಕ್ತಾ ಪಿತ್ತವಹಾ ತಿಕ್ತಸಿಕ್ತಾತಿಪಿತ್ತಲಾ ॥
ಶೋಷಿತಾ ವಾತಲಾ ಜ್ಞೇಯಾ ಶುಷ್ಕಿತಾ ಸನ್ನಿಪಾತಿಕಾ ।
ಸ್ಫೋಟಪೀತಾ ಕೃಷ್ಣವರ್ಣಾ ಹ್ಯಸಾಧ್ಯೇ ಸಂದಿಭಾಷಿತಂ ॥
(ವೈ ಸಾ. ಸಂ. 9.)

ನಾಲಿಗೆಯೂ ಅತಿಯಾಗಿ ನೀರಿನಿಂದ ಒದ್ದೆಯಾಗಿದ್ದರೆ, ಅದು ಕಫದಿಂದ ಎಂತಲೂ, ಒದ್ದೆಯಾಗಿ ಖಾರರುಚಿ ಕಂಡರೆ ಪಿತ್ತದಿಂದ ಎಂತಲೂ, ಒದ್ದೆಯಾಗಿ ಕಹಿಯಾಗಿದ್ದರೆ ಪಿತ್ತ ಅತಿಯಾದದ್ದರಿಂದ ಎಂತಲೂ, ದ್ರವವಿಲ್ಲದೆ ಒಣಗಿಕೊಂಡಿದ್ದರೆ ವಾತದಿಂದ ಎಂತಲೂ, ಬಡೆಯಾಗಿದ್ದರ ಸನ್ನಿಪಾತದಿಂದ ಎಂತಲೂ, ವರ್ಣದಲ್ಲಿ ಕಪ್ಪು ಅಥವಾ ಅರಸಿನವಾಗಿ ಬೊಕ್ಕೆಗಳು ಎದ್ದಿದ್ದರೆ, ಅಸಾಧ್ಯಸ್ಥಿತಿ ಎಂತಲೂ ತಿಳಿಯುವದು.

(*c*) ತನುಭಾವಾ ಸ್ಥೂಲಭಾವಾ ಜಿಹ್ವಾ ಭವತಿ ಚೇತ್ತದಾ ।
ಸರ್ವವ್ಯಾಧಿರಸಾಧ್ಯತ್ವಾದೌಷಧೈರ್ನ ನಿವರ್ತತೇ ॥ (ವೈ ಸಾ. ಸಂ 9-10.)

ನಾಲಿಗೆಯು ಅತಿತೆಳ್ಳಗೆ ಅಥವಾ ಅತಿದಪ್ಪವಾಗಿದ್ದರೆ, ಯಾವ ವ್ಯಾಧಿಯಾದರೂ ಅಸಾಧ್ಯವಾದದ್ದರಿಂದ, ಔಷಧಗಳಿಂದ ಶಮನವಾಗತಕ್ಕದ್ದಲ್ಲ.

(*d*) ಜಿಹ್ವಾಮೂಲೇ ಮಲಿನತಾ ಹ್ಯಗ್ರೇ ಭವತಿ ನಿರ್ಮಲಾ ।
ವಾತಶ್ಲೇಷ್ಮವಿಕಾರಾ ಸಾ ಸನ್ನಿಪಾತಸ್ಯ ಕಾರಣಂ ॥ (ವೈ ಸಾ ಸಂ. 10.)

ನಾಲಿಗೆಯ ಬುಡವು ಮಲಿನವಾಗಿದ್ದು, ತುದಿಯು ನಿರ್ಮಲವಾಗಿರುವದು ವಾತಶ್ಲೇಷ್ಮ ವಿಕಾರವನ್ನು ಸೂಚಿಸುತ್ತದೆ ಮತ್ತು ಅದು ಸನ್ನಿಪಾತಕ್ಕೆ ಕಾರಣ

(*e*) ನಿರ್ಮಲಾ ಮೂಲದೇಶೇ ತು ಹ್ಯಗ್ರೇ ಮಲಿನತಾ ಯದಾ ।
ಪಿತ್ತವಾತವಿಕಾರಾ ಸಾ ಶೂಲಗ್ರಂಥ್ಯನುಕಾರಿಣೀ ॥ (ವೈ ಸಾ. ಸಂ. 10.)

ನಾಲಿಗೆಯು ಮೂಲದಲ್ಲಿ ನಿರ್ಮಲವಾಗಿ, ತುದಿಯಲ್ಲಿ ಮಲಿನವಾಗಿದ್ದರೆ, ಅದು ವಾತ ಪಿತ್ತ ವಿಕಾರಗಳನ್ನು ಸೂಚಿಸುತ್ತದೆ ಮತ್ತು ಅದು ಶೂಲಗ್ರಂಥಿಗೆ ಕಾರಣ.

(*f*) ಮಧ್ಯೇ ನಿಮ್ನಾ ವಿಶಾಲಾಗ್ರೇ ಶಿರೋರೋಗಾಭಿವರ್ಧಿನೀ ।
ದೀರ್ಘಸಂಕುಚಿತಾ ಜಿಹ್ವಾ ದೀರ್ಘರೋಗಮೃತಿಪ್ರದಾ ॥ (ವೈ ಸಾ. ಸಂ. 10.)

ನಾಲಿಗೆಯು ಮಧ್ಯದಲ್ಲಿ ಹಳ್ಳವಾಗಿ, ತುದಿಯಲ್ಲಿ ಅಗಲವಾಗಿದ್ದರೆ, ಅದು ಶಿರೋರೋಗದ ಅಭಿವೃದ್ಧಿಯ ಲಕ್ಷಣ. ನಾಲಿಗೆಯು ಅತಿಗಿಡ್ಡ ಅಥವಾ ಅತಿಉದ್ದವಾಗಿದ್ದರೆ, ಅದನ್ನು ದೀರ್ಘರೋಗ ಉಂಟಾಗಿ ಮರಣ ಸಂಭವಿಸುವ ಲಕ್ಷಣವೆಂದರಿಯುವದು.

(*g*) ಅತ್ಯುಷ್ಣವಾಹಾ ಬಹುಶೋಷದಾಹಾ ಸಶೀತಲಾ ಮೃತ್ಯುಭಯಪ್ರದಾ ಸ್ಯಾತ್ ।
ಏದಾರಿತಾ ಸಂಕರರೋಗಜಿಹ್ವಾ ರೋಗೇಷು ದೃಶ್ಯಾ ಭಿಷಜಾ ಹಿ ಪೂರಂ ॥
(ವೈ. ಸಾ. ಸಂ. 10.)

ನಾಲಿಗೆಯು ಅತಿಬಿಸಿಯಾಗಿ ಬಹಳ ಒಣಗಿಯೂ, ಉರಿಯುಳ್ಳದ್ದಾಗಿಯೂ ಇದ್ದರೆ, ಅಥವಾ ತಣ್ಣಗಾಗಿದ್ದರೆ, ಅದು ಮರಣಭಯವನ್ನು ಸೂಚಿಸುತ್ತದೆ. ನಾಲಿಗೆಯು ಒಡದಿರುವದು ವಾತಪಿತ್ತಾದಿ ದ್ವಂದ್ವದೋಷಜನ್ಯವಾದ ರೋಗವನ್ನು ಸೂಚಿಸುತ್ತದೆ ಆದ್ದರಿಂದ ವೈದ್ಯನು ಎಲ್ಲಾ ರೋಗಗಳಲ್ಲಯೂ ರೋಗಿಯ ನಾಲಿಗೆಯನ್ನು ಚೆನ್ನಾಗಿ ಪರೀಕ್ಷಿಸತಕ್ಕದ್ದು.

(*h*) ವಾತಕೋಪೇ ಪ್ರಸುಪ್ತೇವ ಸ್ಫುಟಿತಾ ಮಧುರಾ ಭವೇತ್ ।
ಸ್ತಬ್ಧಾ ವಸ್ರೇವಹರಿತಾ ಜಿಹ್ವಾ ಲಾಲಾಂ ಪ್ರಮುಂಚತಿ ॥
ಪಿತ್ತಕೋಪೇ ತು ರಕ್ತಾಭಾ ತಿಕ್ತಾ ದಗ್ಧೇವ ಜಾಯತೇ ।
ಜಿಹ್ವಾ ದಾಹಾನ್ವಿತಾ ವಿದ್ಧಾ ಕಂಟಕೈರಿವ ಸರ್ವತಃ ॥
ಕಫೋದಯೇ ಭವೇಜ್ಜಿಹ್ವಾ ಸ್ಥೂಲಾ ಗುರ್ವೀ ಎಲೇಪಸೀ ।
ಸುಸ್ಥೂಲಕಂಟಕೋಪೇತಾ ಕ್ಷಾರಾ ಬಹುಕಫಾವಹಾ ॥
ದೋಷದ್ವಯೇ ದ್ವಿದೋಷೋಕ್ತಲಕ್ಷಣಾ ರಸನಾ ಭವೇತ್ ।
ಸರ್ವಜಿಹ್ವಾ ತ್ರಿದೋಷೇ ಸ್ಯಾದ್ವಿಕೃತಾನೇಕಲಕ್ಷಣಾ ॥
(ಚಿ ಸಾ ಸಂ. 1025-26)

ವಾತಪ್ರಕೋಪದಲ್ಲಿ ನಾಲಿಗಯು ಒಣಗಿ, ಸ್ತಬ್ಧವಾಗಿ, ಒಡದು, ತೊಗರಿಯ ಹಾಗೆ ಹಸುರಾಗಿ, ಸೀಯಾಗಿ, ಜೊಲ್ಲು ಸುರಿಯುತ್ತಾ ಇರುವದು ಪಿತ್ತಪ್ರಕೋಪದಲ್ಲಿ ಕೆಂಪಾಗಿ, ಕಹಿಯಾಗಿ, ಸುಡಲ್ಪಟ್ಟಂತೆ, ಉರಿಯುಳ್ಳದ್ದಾಗಿ, ಎಲ್ಲಾ ಕಡಗಳಲ್ಲಿಯೂ ಮುಳ್ಳುಗಳಿಂದ ಚುಚ್ಚಲ್ಪಟ್ಟಂತೆ ಇರುವದು ಕಫೋದ್ರೇಕದಲ್ಲಿ ದಪ್ಪವಾಗಿ, ಗುರುವಾಗಿ, (ಅಗ್ರ ಎಂಬ) ಲೇಪವುಳ್ಳದ್ದಾಗಿ, ಸ್ಥೂಲವಾದ ಮುಳ್ಳುಗಳುಳ್ಳದ್ದಾಗಿ, ಕ್ಷಾರರುಚಿಯುಳ್ಳದ್ದಾಗಿ ಮತ್ತು ಬಹು ಕಫವುಳ್ಳದ್ದಾಗಿ ಇರುವದು. ನಾಲಿಗೆಯು ದ್ವಂದ್ವದೋಷಗಳಲ್ಲಿ ಆ ದೋಷಗಳ ಉಕ್ತವಾದ ಲಕ್ಷಣಗಳಿಂದಲೂ, ತ್ರಿದೋಷಗಳಲ್ಲ ಮೇಲೆ ಹೇಳಿದ ಎಲ್ಲಾ ಚಿಹ್ನೆಗಳಿಂದಲೂ, ಬೇರೆ ಅನೇಕ ವಿಕಾರಲಕ್ಷಣಗಳಿಂದಲೂ, ಕೂಡಿರುವದು.

15 (*a*) ವಾತೇನ ಪಾಂಡುರಂ ಮೂತ್ರಂ ರಕ್ತಂ ನೀಲಂ ಚ ಪಿತ್ತತಃ ।
ಮೂತ್ರಪರೀಕ್ಷೆ ರಕ್ತಮೇವ ಭವೇದ್ರಕ್ತಾದ್ದವಲಂ ಫೇನಿಲಂ ಕಫಾತ್ ॥ (ಭಾ ಪ್ರ. 239.)

ಮೂತ್ರವು ವಾತದಿಂದ ಹಳದಿಮಿಶ್ರ ಬಿಳುಪಾಗಿಯೂ, ಪಿತ್ತದಿಂದ ಕೆಂಪು ಮತ್ತು ನೀಲವಾಗಿಯೂ, ರಕ್ತದಿಂದ ಕೆಂಪಾಗಿಯೂ, ಕಫದಿಂದ ನೊರೆ ಕೂಡಿಕೊಂಡು ಸ್ವಚ್ಛವಾಗಿಯೂ, ಇರುವದು.

(b) ರಾತ್ರೇಶ್ಚತುರ್ಥಯಾಮಸ್ಯ ಘಟಿಕಾನಾಂ ಚತುಷ್ಟಯೇ ।
ಉತ್ಥಾಪ್ಯ ರೋಗಿಣಂ ವೈದ್ಯೋ ಮೂತ್ರೋತ್ಸರ್ಗಂ ತು ಕಾರಯೇತ್ ॥
ಆದ್ಯನ್ತಧಾರಾಂ ಸಂತ್ಯಜ್ಯ ಮಧ್ಯಮಾಂ ಕಾಚಭಾಜನೇ ॥
ಕಾರಯೇತ್ ಕಾಂಸ್ಯಪಾತ್ರೇ ವಾ ಕುರ್ಯಾತ್ತಾಪ್ತಾತ್ರಂ ಪಟಾವೃತಂ ॥
ತತಃ ಸೂರ್ಯೋದಯೇ ಜಾತೇ ಪ್ರಕಾಶೇ ಸತಿ ಭಾಜನೇ ।
ಸ್ಥಿತಂ ಮೂತ್ರಂ ಸಮಾಲೋಕ್ಯ ಕುರ್ಯಾತ್ತಸ್ಯ ಪರೀಕ್ಷಣಂ ॥
ವಾತೇ ತೋಯಸಮಂ ಮೂತ್ರಂ ರೂಕ್ಷಂ ಬಹುತರಂ ಭವೇತ್ ।
ರಕ್ತವರ್ಣಂ ಭವೇತ್ಪಿತ್ತೇ ಪೀತಂ ವಾ ಸ್ವಲ್ಪಮೇವ ಚ ॥
ಕಫೇ ಶ್ವೇತಂ ಘನಂ ಮೂತ್ರಂ ಸ್ನಿಗ್ಧಂ ಸಂಜಾಯತೇ ತಥಾ ।
ದ್ವಿದೋಷೇ ದ್ವಂದ್ವಚಿಹ್ನಂ ಸ್ಯಾತ್ಸರ್ವಲಿಂಗಂ ತ್ರಿದೋಷಜೇ ॥

(ಚಿ. ಸಾ. ಸಂ 1026)

ರಾತ್ರಿಯ ನಾಲ್ಕನೇ ಜಾಮದ ನಾಲ್ಕು ಗಳಿಗೆಯಲ್ಲಿ (ಸುಮಾರು ನಾಲ್ಕೂಮುಕ್ಕಾಲು ಘಂಟೆ ಸಮಯ) ವೈದ್ಯನು ರೋಗಿಯನ್ನೆಬ್ಬಿಸಿ, ಮೂತ್ರೋತ್ಸರ್ಜನ ಮಾಡಿಸಬೇಕು ಆ ಮೂತ್ರದ ಪ್ರಥಮದ ಮತ್ತು ಅಂತ್ಯದ ಧಾರೆಗಳನ್ನು ಬಿಟ್ಟು, ಮಧ್ಯದ ಧಾರೆಯನ್ನು ಗಾಜಿನ ಅಥವಾ ಕಂಚಿನ ಪಾತ್ರೆಯಲ್ಲಿ ಹೊಯಿಸಿ, ಪಾತ್ರೆಯನ್ನು ವಸ್ತ್ರದಿಂದ ಮುಚ್ಚಿಡಬೇಕು. ಆ ನಂತರ ಸೂರ್ಯೋದಯವಾಗಿ ಬೆಳಗಾದ ಮೇಲೆ, ಪಾತ್ರೆಯಲ್ಲಿದ್ದ ಮೂತ್ರವನ್ನು ಚೆನ್ನಾಗಿ ನೋಡಿ, ಅದರ ಪರೀಕ್ಷೆ ಮಾಡತಕ್ಕದ್ದು ವಾತದೋಷದಲ್ಲಿ ಮೂತ್ರವು ನೀರಿಗೆ ಸದೃಶವಾಗಿ, ರೂಕ್ಷವಾಗಿ ಮತ್ತು ಹೆಚ್ಚಾಗಿ ಇರುವದು. ಪಿತ್ತದೋಷದಲ್ಲಿ ಮೂತ್ರವು ಕೆಂಪು ಅಥವಾ ಅರಸಿನ ವರ್ಣವಾಗಿಯೂ, ಸ್ವಲ್ಪವಾಗಿಯೂ ಇರುವದು ಕಫದೋಷದಲ್ಲಿ ಮೂತ್ರವು ಬಿಳೇದಾಗಿಯೂ, ಸ್ನಿಗ್ಧವಾಗಿಯೂ, ಭಾರವುಳ್ಳದ್ದಾಗಿಯೂ, ಇರುವದು. ಎರಡು ದೋಷಗಳು ಕೂಡಿರುವಲ್ಲಿ ಆ ದೋಷಗಳ ಚಿಹ್ನೆಗಳೂ, ತ್ರಿದೋಷದಲ್ಲಿ ಎಲ್ಲಾ ಲಕ್ಷಣಗಳೂ ಮಿಶ್ರವಾಗಿ ಇರುವದು.

(c) ಸುಲಕ್ಷಿತಂ ಗೃಹೀತಂ ಯನ್ಮೂತ್ರಂ ಘಟೇ ನಿಧಾಯ ತತ್ ।
ತೈಲಬಿಂದುಂ ಕ್ಷಿಪೇತ್ತತ್ರ ನಿಶ್ಚಲೇ ವೈದ್ಯಸತ್ತಮಃ ॥
ಜಾಯಂತೇ ಬುದ್ಬುದಾ ಯತ್ರ ವಿಕಾರಃ ಸೋಽಸ್ತಿ ಪಿತ್ತಲಃ ।
ರೂಕ್ಷಂ ಚ ಶ್ಯಾಮಲಛಾಯಂ ವಾತೇ ಮೂತ್ರಂ ಪ್ರಜಾಯತೇ ॥
ತರೀಮುಪರಿ ಧತ್ತಾತಿ ತೈಲಬಿಂದುಸ್ತಥಾತ್ರ ವೈ ।
ಮೂತ್ರಂ ಶ್ಲೇಷ್ಮಣಿ ಜಾಯೇತ ಸಮಂ ಪಲ್ವಲವಾರಿಣಾ ॥
ಮೂತ್ರೇಣ ಸಾರ್ಧಂ ಮಿಲಿತಸ್ತೈಲಬಿಂದುಃ ಪ್ರಜಾಯತೇ ।
ಸಿದ್ಧಾರ್ಥತೈಲಸದೃಶಂ ಮೂತ್ರಂ ವೈ ಪಿತ್ತಮಾರುತೇ ॥

(ಚಿ. ಸಾ ಸಂ. 1026.)

ವಿಧಿಪ್ರಕಾರ ಪಿಡಿದಿಟ್ಟ ಆ ಮೂತ್ರವನ್ನು ಬಸಿಲಿನಲ್ಲಿಟ್ಟು, ಅದು ನಿಶ್ಚಲವಾಗಿರುವಾಗ್ಗೆ, ವೈದ್ಯೋತ್ತಮನು ಅದರ ಮೇಲೆ ಒಂದು ತೈಲಬಿಂದುವನ್ನು ಬಿಡಬೇಕು ಆಗ್ಗೆ ಗುಳ್ಳೆಗಳು

ಉಂಟಾದರೆ ವಿಕಾರವು ಪಿತ್ತ ಸಂಬಂಧವಾದದ್ದೆಂತ ನಿಶ್ಚಯಿಸಬೇಕು. ವಾತದೋಷದಲ್ಲಿ ಮೂತ್ರವು ರೂಕ್ಷ ಮತ್ತು ಕಪ್ಪುಛಾಯೆಯುಳ್ಳದ್ದಾಗಿರುವದಲ್ಲದೆ, ತೈಲಬಿಂದುವು ಮೂತ್ರದ ಮೇಲೆ ಹೊಗೆ ಕಟ್ಟುವದು. ಕಫದೋಷದಲ್ಲಿ ಮೂತ್ರವು ಕೊಳದ ನೀರಿನ ಸಮಾನ (ಕಲಂಕ)ವಾಗಿರುವದಲ್ಲದೆ, ತೈಲಬಿಂದುವು ಮೂತ್ರದೊಂದಿಗೆ ಕೂಡಿಕೊಂಡಿರುತ್ತದೆ. ಪಿತ್ತ ವಾತ ದೋಷದಲ್ಲಿ ಮೂತ್ರವು ಬಿಳೇ ಸಾಸಿವೆಯ ತೈಲ ಸಮಾನವಾಗಿ ಕಾಣುವದು.

(*d*) ಶ್ವೇತಧಾರಾ ಮಹಾಧಾರಾ ಪೀತಧಾರಾ ತದಾ ಜ್ವರಃ ।
ರಕ್ತಧಾರಾ ಜ್ವರೇ ದೀರ್ಘೇ ಕೃಷ್ಣಾ ಚ ಮರಣಾಯ ವೈ ॥
ಶ್ಲೇಷ್ಮವಾತೇ ಭವೇನ್ಮೂತ್ರಂ ಕಾಂಜಿಕೇನ ಸಮಂ ತಥಾ ।
ಪಾಂಡುರಂ ಶ್ಲೇಷ್ಮಪಿತ್ತೇ ಚ ಪೀತಂ ಚೈವ ಪರೀಕ್ಷಯೇತ್ ॥
ಸನ್ನಿಪಾತೇ ಚ ಯನ್ಮೂತ್ರಂ ಕೃಷ್ಣಂ ತಲ್ಲಕ್ಷಯೇದ್ಬುಧಃ ।
ಅಧೋಬಹುಲಮಾರಕ್ತಂ ಮೂತ್ರಂ ತು ಯದಿ ಲೋಕ್ಯತೇ ॥
ವದನ್ತಿ ತಚ್ಚಾತಿಸಾರಂ ಲಿಂಗಂ ತು ಲಂಗವೇದಿನಃ ।
ರಕ್ತವಾತೇನ ರಕ್ತಂ ಸ್ಯಾತ್ ಕೌಸುಂಭಂ ರಕ್ತಪಿತ್ತತಃ ॥ (ಧ. 12)

ಜ್ವರಾರಂಭದಲ್ಲಿ ಮೂತ್ರದ ಧಾರೆಯು ಬೆಳ್ಳಗೆ, ತೋರ, ಅಥವಾ ಅರಸಿನವಾಗಿರುವದು. ದೀರ್ಘಕಾಲದ ಜ್ವರದಲ್ಲಿ ಮೂತ್ರಧಾರೆಯು ಕೆಂಪಾಗುವದು. ಅದು ಕಪ್ಪಾದರೆ, ಮರಣ ಸೂಚನೆ ಎಂದು ತಿಳಿಯುವದು. ಕಫವಾತದಲ್ಲಿ ಮೂತ್ರವು ಗಂಜಿನೀರಿಗೆ ಸಮಾನವಾಗಿರುವದು. ಕಫಪಿತ್ತದಲ್ಲಿ ಬಿಳುಪೊತ್ತಿದ ಹಳದಿ, ಅಥವಾ ಹಳದಿ ಮತ್ತು ಸನ್ನಿಪಾತದಲ್ಲಿ ಕಪ್ಪು ಆಗುತ್ತದೆ. ಮೂತ್ರದ ಕೆಳಗಿನ ಭಾಗವು ಬಹಳವಾಗಿ ಕೆಂಪು ಕಂಡರೆ, ಅದು ಅತಿಸಾರದ ಲಕ್ಷಣವೆಂತ ಬಲ್ಲವರು ಹೇಳುತ್ತಾರೆ. ಮೂತ್ರವು ರಕ್ತವಾತದಲ್ಲಿ ಕೆಂಪಾಗಿಯೂ, ರಕ್ತಪಿತ್ತದಲ್ಲಿ ಕುಸುಬಿಬೀಜದಂತೆ ಕೆಂಪೊತ್ತಿದ ಅರಸಿನವಾಗಿಯೂ ಇರುತ್ತದೆ.

(*e*) ತೈಲತುಲ್ಯಂ ಭವೇನ್ಮೂತ್ರಂ ನಿತ್ಯಂ ಸಹಜಪಿತ್ತತಃ ।
ಕಫಪ್ರಕೃತಿತೋ ಮೂತ್ರಂ ತುಲ್ಯಂ ಪಲ್ವಲವಾರಿಣಾ ॥
ವಾತಪ್ರಕೃತಿತೋ ಮೂತ್ರಂ ನೀರಾಭಂ ಬಹುಲಂ ಭವೇತ್ ।
(ಚಿ. ಸಾ. ಸಂ. 1027)

ಪಿತ್ತಪ್ರಕೃತಿಯ ಮೂತ್ರವು ನಿತ್ಯವೂ ತೈಲತುಲ್ಯವಾಗಿಯೂ, ಕಫಪ್ರಕೃತಿಯಲ್ಲಿ ಕೊಳದ ನೀರಿನಂತೆ (ಕಲಂಕವಾಗಿ)ಯೂ ಮತ್ತು ವಾತಪ್ರಕೃತಿಯಲ್ಲಿ ನೀರಿನಂತೆ (ಸ್ವಚ್ಛವಾಗಿ)ಯೂ ಹೆಚ್ಚಾಗಿಯೂ ಇರತಕ್ಕದ್ದಾಗಿರುತ್ತದೆ

(*f*) ಜಲೋದರಸಮುದ್ಭೂತಂ ಮೂತ್ರಂ ಘೃತಕಣೋಪಮಂ ।
ಆಮವಾತವಶಾನ್ಮೂತ್ರಂ ತಕ್ರತುಲ್ಯಂ ಪ್ರಜಾಯತೇ ॥
ಮಲೇನ ಪೀತವರ್ಣಂ ಚ ಬಹುಲಂ ಚ ನಿಗದ್ಯತೇ ।
ಪೀತವರ್ಣಂ ಯದಾಮೂತ್ರಂ ತೈಲತುಲ್ಯಂ ಸಬುದ್ಬುದಂ ।

ತದಪ್ಯಸಾಧ್ಯಮಾದಿಷ್ಟಂ ಸದ್ಭಿರ್ವೈದ್ಯಕವೇದಿಭಿಃ ।
ಅಜೀರ್ಣೇನ ಭವೇನ್ಮೂತ್ರಂ ಶ್ವೇತಂ ಚಾಪಿ ತಥಾರುಣಂ ॥
ಅಜಾಮೂತ್ರಸಮಂ ಮೂತ್ರಮಜೀರ್ಣತ್ವಾಚ್ಚ ಜಾಯತೇ ।
ಮೂತ್ರಂ ತು ಕೃಷ್ಣತಾಂ ಯಾತಿ ಕ್ಷಯರೋಗೇ ತಥಾ ಕಿಲ ॥
ಕ್ಷಯರೋಗೇ ಯದಾ ಶ್ವೇತಮಸಾಧ್ಯಂ ತದ್ವಿನಿರ್ದಿಶೇತ್ ।
ಪೀತಮಚ್ಛಂ ಚ ಜಾಯೇತ ಮೂತ್ರಂ ಪಿತ್ತೋದಯೇ ಸತಿ ॥
ಸಮಧಾತೋಃ ಪುನಃ ಕೂಪಜಲತುಲ್ಯಂ ಚ ಕಥ್ಯತೇ ।
ಊರ್ಧ್ವನ್ನೀಲಮಧೋರಕ್ತಂ ರುಧಿರೇಣ ಪ್ರಜಾಯತೇ ॥
ಪ್ರವರ್ತತೇ ಯದಾ ಮೂತ್ರಂ ಸ್ನಿಗ್ಧಂ ತೈಲಸಮಪ್ರಭಂ ।
ಆಹಾರಾದುದರಂ ತಸ್ಯ ವೃದ್ಧಿಂ ಯಾತಿ ತದಾ ಕಿಲ ॥
ಊರ್ಧ್ವಂ ಪೀತಮಧೋರಕ್ತಂ ಮೂತ್ರಂ ಚೇದ್ರೋಗಿಣಸ್ತದಾ ।
ಪಿತ್ತಪ್ರಕೃತಿಸಂಭೂತಂ ಸನ್ನಿಪಾತಂ ವದೇದ್ಭಿಷಕ್ ॥
ಯಸ್ಯೇಕ್ಷುರಸಸಂಕಾಶಂ ಮೂತ್ರಂ ನೇತ್ರೇ ಚ ಪಿಂಜರೇ ।
ರಸಾಧಿಕ್ಯಂ ವಿಜಾನೀಯಾಲ್ಲಂಘನಂ ತಸ್ಯ ನಿರ್ದಿಶೇತ್ ॥
ರಕ್ತಂ ಸ್ವಚ್ಛಂ ಚ ಯನ್ಮೂತ್ರಂ ತಜ್ಜ್ವರಾಧಿಕ್ಯಲಕ್ಷಣಂ ।
ಧೂಮ್ರವರ್ಣಂ ಯದಾ ಮೂತ್ರಂ ಜ್ವರಾಧಿಕ್ಯಂ ತದಾದಿಶೇತ್ ॥
ಕೃಷ್ಣಮಚ್ಛಂ ಚ ಜಾನೀಯಾತ್ ಸನ್ನಿಪಾತಜ್ವರೋದ್ಭವಂ ।
ಉಪರಿಷ್ಟಾತ್ಪೀತವರ್ಣಮಧಃ ಕೃಷ್ಣಂ ಸಬುದ್ಬುದಂ ॥
ಮೂತ್ರಂ ಪ್ರಭೂತ*ದೋಷೇಣ ಸಂಶಯೋ ನಾತ್ರ ಕಶ್ಚನ ।
ಆಪೀತಫೇನರಕ್ತಾದ್ಯಮಸಿತೇಕ್ಷುರಸೋಪಮಂ ॥
ಪಿತ್ತೇ ಕಫೇಽನಿಲೇ ಮೂತ್ರೇ ನಿರಾಮೇ ಚ ಜ್ವರೇ ಭವೇತ್ ।
ಯದಾ ಪ್ರಸಾರಮಾಪ್ನೋತಿ ತೈಲಂ ಕ್ಷೇಮಂ ತದಾದಿಶೇತ್ ॥
ಬಿಂದುರೂಪಂ ಯದಾತೈಲಮಸಾಧ್ಯತ್ವಾಯ ರೋಗಿಣಃ ।
ಪ್ರಸರೇತ್ಪೂರ್ವದಿಗ್ಭಾಗೇ ಪಶ್ಚಿಮೇ ವಾ ತಥೋತ್ತರೇ ।
ತೈಲಬಿಂದುಸ್ತದಾರೋಗವಿಮುಕ್ತಂ ರೋಗಿಣೋ ದಿಶೇತ್ ॥

(ಚಿ ಸಾ. ಸಂ 1027-28.)

ಒಲೋದರಿಯ ಮೂತ್ರವು ತುಪ್ಪದ ಬಿಂದುಗಳಂತೆಯೂ, ಆಮವಾತದಲ್ಲಿ ಮಜ್ಜಿಗೆಯಂತೆಯೂ ಕಾಣುವದು. ಪೀತವರ್ಣವಾಗಿಯೂ, ಹೆಚ್ಚಾಗಿಯೂ ಇರುವ ಮೂತ್ರವು ಮಲವಿಕಾರದಿಂದ ಎಂತ ಹೇಳಲ್ಪಡುತ್ತದೆ ಪೀತವರ್ಣದ್ದಾದ ಮೂತ್ರವು ತೈಲಕ್ಕೆ ಸದೃಶವಾಗಿ, ಗುಳ್ಳೆಗಳಿಂದ ಕೂಡಿಕೊಂಡಿದ್ದರೆ, ಅದು ಅಸಾಧ್ಯವ್ಯಾಧಿಯ ಲಕ್ಷಣವೆಂತ ಸದ್ವೈದ್ಯರು ಹೇಳಿದ್ದಾರೆ. ಅಜೀರ್ಣದಿಂದ ಮೂತ್ರವು ಬೆಳ್ಳಗೆ, ಅಥವಾ ಅರುಣ (ಕಪ್ಪು ಮಿಶ್ರ ಕೆಂಪು), ಅಥವಾ ಅಡಿನ ಮೂತ್ರಕ್ಕೆ ಸಮಾನವಾಗುತ್ತದೆ. ಕ್ಷಯರೋಗದಲ್ಲಿ ಮೂತ್ರವು ಕಪ್ಪಾಗುತ್ತದಂತೆ, ಮತ್ತು ಆ ರೋಗದಲ್ಲಿ ಮೂತ್ರವು ಬೆಳ್ಳಗಾದರೆ, ಅದು ಅಸಾಧ್ಯವೆಂತ ಹೇಳಬೇಕು.

ಪಿತ್ತಪ್ರಕೋಪದಲ್ಲಿ ಮೂತ್ರವು ಸ್ವಚ್ಛ ಮತ್ತು ಅರಸಿನವಾಗುವದು. ಸಮಧಾತುವಿನ ಮೂತ್ರವು ಬಾವಿಯ ನೀರಿಗೆ ಸದೃಶವಾಗಿರುತ್ತದೆಂತ ಹೇಳುತ್ತಾರೆ. ಮೂತ್ರದ ಮೇಲಿನಂಶ ನೀಲವಾಗಿ ಅಡಿಯಂಶ ಕೆಂಪಾಗಿದ್ದರೆ, ಅದು ರಕ್ತದೋಷದಿಂದ ಎಂತ ತಿಳಿಯಬೇಕು. ಮೂತ್ರವು ಸ್ನಿಗ್ಧವಾಗಿಯೂ, ತೈಲಸಮವಾದ ಪ್ರಭೆಯುಳ್ಳದ್ದಾಗಿಯೂ ಹೋಗುತ್ತಿದ್ದರೆ, ಅಂಧವನ ಹೊಟ್ಟೆಯು ಆಹಾರದಿಂದ ವೃದ್ಧಿಯನ್ನು ಹೊಂದುತ್ತದೆ ಮೂತ್ರದ ಮೇಲಿನ ಭಾಗವು ಅರಸಿನವಾಗಿ ಅಡಿಭಾಗವು ಕೆಂಪಾಗಿದ್ದರೆ, ಆ ರೋಗಿಗೆ ಪಿತ್ತಪ್ರಕೃತಿಯಿಂದ ಹುಟ್ಟಿದ ಸನ್ನಿಪಾತ ಎಂದು ವೈದ್ಯನು ಹೇಳಬೇಕು. ಮೂತ್ರವು ಕಬ್ಬಿನ ರಸದ ಹಾಗೆ ಇದ್ದು, ಕಣ್ಣು ಕೆಂಪು ಮಿಶ್ರ ಅರಸಿನವಾಗಿದ್ದರೆ, ಆ ರೋಗಿಗೆ ರಸವು ಅಧಿಕವಾಗಿದೆ ಎಂದು ತಿಳಿದು, ಲಂಘನವನ್ನು ವಿಧಿಸತಕ್ಕದ್ದು. ಕೆಂಪಾಗಿ ಸ್ವಚ್ಛವಾಗಿರುವ ಮೂತ್ರವು ಅಧಿಕವಾದ ಜ್ವರದ ಲಕ್ಷಣ; ಹಾಗೆಯೇ, ಹೊಗೆಬಣ್ಣದ ಮೂತ್ರ ಸಹ ಜ್ವರಾಧಿಕ್ಯದ ಲಕ್ಷಣವೆಂತ ತಿಳಿಯಬೇಕು. ಕಪ್ಪಾಗಿ ಸ್ವಚ್ಛವಾದ ಮೂತ್ರವು ಸನ್ನಿಪಾತ ಜ್ವರದ ಲಕ್ಷಣ. ಮೂತ್ರದ ಮೇಲಿನ ಭಾಗವು ಅರಸಿನವಾಗಿ, ಅಡಿಭಾಗವು ಕಪ್ಪಾಗಿ, ಗುಳ್ಳೆಗಳುಳ್ಳದ್ದಾಗಿದ್ದರೆ, ಅದು ಅತಿಯಾಗಿ ಬೆಳೆದ* ದೋಷದ ಲಕ್ಷಣವೆನ್ನುವದರಲ್ಲಿ ಸಂಶಯವಿಲ್ಲ. ನಿರಾಮಜ್ವರದಲ್ಲಿ ಮೂತ್ರವು ಕರೀ ಕಬ್ಬಿನ ಹಾಲಿಗೆ ಸದೃಶವಾಗಿ, (ಪಿತ್ತದಲ್ಲಿ) ಸ್ವಲ್ಪ ಅರಸಿನವಾಗಿಯೂ, (ಕಫದಲ್ಲಿ) ನೊರೆಯುಕ್ತವಾಗಿಯೂ, (ವಾತದಲ್ಲಿ) ಕೆಂಪ್ಪೊತ್ತಿದ ಕಪ್ಪಾಗಿಯೂ, ಇರುವದು. ತೈಲಬಿಂದುವು ಸರಿಯಾಗಿ ಪಸರಿಸಿದರೆ, ಕ್ಷೇಮವಾಗುತ್ತದೆನ್ನಬೇಕು, ಬಿಂದುವಾಗಿಯೇ ನಿಂತರೆ, ರೋಗಿಯ ಚಿಕಿತ್ಸೆಯು ಅಸಾಧ್ಯವಾಗುವದೆಂತ ತಿಳಿಯಬೇಕು. ತೈಲಬಿಂದುವು ಪೂರ್ವದಿಕ್ಕಿಗೆ, ಪಶ್ಚಿಮಕ್ಕೆ, ಅಥವಾ ಉತ್ತರಕ್ಕೆ, ಪಸರಿಸಿದರೆ ರೋಗಿಗೆ ರೋಗದಿಂದ ವಿಮೋಚನೆಯಾಗುತ್ತದೆಂದು ಹೇಳಬೇಕು.

* 'ಪ್ರಭೂತದೋಷೇಣ' ಎಂಬಲ್ಲಿ 'ಪ್ರಸೂತದೋಷೇಣ' ಎಂತ ಪಾಠಾಂತರ ಕಾಣುತ್ತದೆ ಆಗ್ಗೆ 'ಪ್ರಸೂತಿಯ ದೋಷ' ಎಂತ ಅರ್ಥದಲ್ಲಿ ಓದಿಕೊಳ್ಳಬೇಕಾಗುತ್ತದೆ

(g) ನಿಮಜ್ಜತಿ ಯದಾ ಮೂತ್ರೇ ಭ್ರಮದ್ವಾ ನೈವ ಸರ್ಪತಿ |
ತದಾರಿಷ್ಟಂ ವಿಜಾನೀಯಾದ್ರೋಗಿಣೋ ನಾತ್ರ ಸಂಶಯಃ ||
(ಜಿ. ಸಾ. ಸಂ. 1028)

ಯಾವಾಗ ತೈಲಬಿಂದುವು ಮೂತ್ರದಲ್ಲಿ ಮುಳುಗುತ್ತದೋ, ಅಥವಾ ತಿರುಗುವದಲ್ಲದೆ ಪಸರಿಸುವದಿಲ್ಲವೋ, ಆಗ್ಗೆ ಆ ರೋಗಿಗೆ ನಿಃಸಂಶಯವಾಗಿ ಅನಿಷ್ಟ ಸಂಭವಿಸುತ್ತದೆಂದು ತಿಳಿಯಬೇಕು.

(h) ವಾತಪಿತ್ತಕಫಮೇಹಸಮುತ್ಥಂ ಮೂತ್ರಮಗ್ನಿಕ್ವಥಿತಂ ಪರಿಪಾಕಾತ್ |
ಪಂಚ-ಸಪ್ತ-ನವ-ಭಾಗತಃ ಕ್ರಮಾತ್ಕಲ್ಕಮುದ್ಭವತಿ ಜೇತ್ತದಸಾಧ್ಯಂ ||
(ವೈದ್ಯಚಿಂತಾಮಣಿ.)

ಮೇಹರೋಗದಲ್ಲಿ ಮೂತ್ರವನ್ನು ಬೆಂಕಿಯಿಂದ ಕುದಿಸಿ ಬತ್ತಿಸಿದ್ದಲ್ಲಿ, ವಾತಮೇಹವಾದರೆ 5ನೇ ಅಂಶ, ಪಿತ್ತಮೇಹವಾದರೆ 7ನೇ ಅಂಶ, ಕಫಮೇಹವಾದರೆ 9ನೇ ಅಂಶ, (ಇಷ್ಟು, ಅಥವಾ ಇದಕ್ಕೆ ಹೆಚ್ಚಾಗಿ,) ಮಡ್ಡು ಉಂಟಾದರೆ, ರೋಗವು ಅಸಾಧ್ಯವೆಂದು ತಿಳಿಯಬೇಕು.

16. ವಾತಕೋಪೇ ಮುಖಂ ರೂಕ್ಷಂ ಸ್ತಬ್ಧಂ ವಕ್ತ್ರಂ ಗತಪ್ರಭಂ ।
ಪಿತ್ತಕೋಪೇ ಭವೇದ್ರಕ್ತಂ ಪೀತಂ ವಾ ಪರಿತಪ್ತಕಂ ॥
ಮುಖಪರೀಕ್ಷೆ ಕಫಕೋಪೇ ಗುರು ಸ್ನಿಗ್ಧಂ ಭವೇಚ್ಛೂನಮಿವಾನನಂ ।
ತ್ರಿಲಿಂಗಂ ಚ ತ್ರಿದೋಷೇ ಸ್ಯಾತ್ ದ್ವಿಲಿಂಗಂ ಚ ದ್ವಿದೋಷಕೇ ॥
(ಚಿ. ಸಾ. ಸಂ 1025)

ವಾತ ಕೋಪಗೊಂಡಾಗ್ಗೆ ಮುಖವು ಒಣಗಿ, ಸ್ತಬ್ಧವಾಗಿ ಮತ್ತು ಪ್ರಭೆಯಿಲ್ಲದ್ದಾಗಿರುವದು. ಪಿತ್ತಪ್ರಕೋಪದಲ್ಲಿ ಮುಖವು ಕೆಂಪು ಅಥವಾ ಅರಸಿನ ವರ್ಣವಾಗಿ, ಬೆಂದ ಛಾಯೆಯುಳ್ಳದ್ದಾಗಿರುವದು. ಕಫಪ್ರಕೋಪದಲ್ಲಿ ಮುಖವು ಗುರುವಾಗಿ, ಸ್ನಿಗ್ಧವಾಗಿ ಮತ್ತು ಬಾಡಿಕೊಂಡಿರುವದು ತ್ರಿದೋಷದಲ್ಲ ಮೂರು ದೋಷಗಳ ಲಕ್ಷಣಗಳುಳ್ಳದ್ದಾಗಿಯೂ, ದಂದ್ವದೋಷದಲ್ಲಿ ಆ ಎರಡು ದೋಷಗಳ ಲಕ್ಷಣಗಳುಳ್ಳದ್ದಾಗಿಯೂ, ಇರುವದು.

17 ರೌದ್ರೇ ರೂಕ್ಷೇ ಚ ಧೂಮ್ರಾಭೇ ನಯನೇ ಸ್ತಬ್ಧಚಂಚಲೇ ।
ತಥಾಭ್ಯಂತರಕೃಷ್ಣಾಭೇ ಭವತೋ ವಾತರೋಗಿಣಃ ॥
ಪಿತ್ತರೋಗೇ ತು ಪೀತಾಭೇ ನೀಲೇ ವಾ ರಕ್ತವರ್ಣಕೇ ।
ಸಂತಪ್ತೇ ಭವತೋ ದೀಪಂ ಸಹೇತೇ ನಾವಲೋಕಿತುಂ ॥
ಜ್ಯೋತಿರ್ಹೀನೇ ಚ ಶುಕ್ಲಾಭೇ ಜಲಪೂರ್ಣೇ ಸಗೌರವೇ ।
ಮಂದಾವಲೋಕನೇ ನೇತ್ರೇ ಭವತಃ ಕಫಕೋಪತಃ ॥
ತಂದ್ರಾಮೋಹಾಕುಲೇ ಶ್ಯಾಮೇ ನಿರ್ಭುಗ್ನೇ ರೂಕ್ಷರೌದ್ರಕೇ ।
ಕಣ್ಣಿನ ಪರೀಕ್ಷೆ ರಕ್ತವರ್ಣೇ ಚ ಭವತೋ ನೇತ್ರೇ ದೋಷತ್ರಯೋದಯೇ ॥
ದೋಷತ್ರಯೇ ಭವೇಚ್ಚಿಹ್ನಂ ನೇತ್ರಯೋಸ್ತು ತ್ರಿದೋಷಜಂ ।
ದೋಷದ್ವಯಪ್ರಕೋಪೇ ತು ಭವೇದ್ದೋಷದ್ವಯೋದ್ಭವಂ ॥
ಏಕದೃಷ್ಟೇ ಯದಾ ನೇತ್ರೇ ಸ್ವಾಧೀನೇ ನ ಚ ರೋಗಿಣಃ ।
ಉನ್ಮೀಲಿತೇ ಚ ಭವತಃ ಕ್ಷಣಾದೇವ ನಿಮೀಲಿತೇ ॥
ಸತತೋನ್ಮೀಲಿತೇ ನೇತ್ರೇ ಯದ್ವಾ ನಿತ್ಯಂ ನಿಮೀಲಿತೇ ।
ವಿಲುಪ್ತಕೃಷ್ಣತಾರೇ ಚ ಭ್ರಮದ್ಧೂಮ್ರೋಗ್ರತಾರಕೇ ॥
ಬಹುವರ್ಣೇ ಚ ಭವತೋ ವಿಕೃತಾನೇಕಚೇಷ್ಟಿತೇ ।
ನೇತ್ರೇ ಮೃತ್ಯುಂ ಕಥಯತೋ ರೋಗಿಣೋ ನಾತ್ರಸಂಶಯಃ ॥
ಸೌಮ್ಯದೃಷ್ಟೇ ಪ್ರಸನ್ನಾಭೇ ಪ್ರಕೃತಿಸ್ಥೇ ಮನೋರಮೇ ।
ನೇತ್ರೇ ಕಥಯತಃ ಶೀಘ್ರಂ ರೋಗಶಾಂತಿಂ ಚ ರೋಗಿಣಃ ॥
(ಚಿ. ಸಾ. ಸಂ. 1024-25)

ವಾತರೋಗಿಯ ಕಣ್ಣುಗಳು ರೌದ್ರವಾಗಿಯೂ, ರೂಕ್ಷವಾಗಿಯೂ, ಒಳಗೆ ಕಪ್ಪಾಗಿಯೂ, ಹೊರಗೆ ಹೊಗೆಯ ವರ್ಣವಾಗಿಯೂ, ಸ್ತಬ್ಧವಾಗಿಯೂ, ಚಂಚಲವಾಗಿಯೂ ಇರುವವು. ಪಿತ್ತರೋಗದಲ್ಲಿ ಕಣ್ಣುಗಳು ಅರಸಿನ, ನೀಲ ಅಥವಾ ಕೆಂಪು ವರ್ಣವುಳ್ಳವಾಗಿ

ಯೂ, ಉರಿಯುಳ್ಳವಾಗಿಯೂ, ದೀಪದ ಬೆಳಕನ್ನು ಸಹಿಸಲಾರದವಾಗಿಯೂ, ಇರುವವು. ಕಫಪ್ರಕೋಪದಲ್ಲಿ ಕಣ್ಣುಗಳು ಬಿಳೇ ಛಾಯೆಯುಳ್ಳವಾಗಿಯೂ, ನೀರು ತುಂಬಿರುವವಾಗಿಯೂ, ಭಾರವುಳ್ಳವಾಗಿಯೂ, ಹೀನವಾದ ಪ್ರಕಾಶವುಳ್ಳವಾಗಿಯೂ, ಮಂದದೃಷ್ಟಿಯುಳ್ಳವಾಗಿಯೂ, ಇರುವವು. ತ್ರಿದೋಷಾರಂಭದಲ್ಲಿ ಕಣ್ಣುಗಳು ಶ್ಯಾಮ ಅಥವಾ ರಕ್ತವರ್ಣವುಳ್ಳವಾಗಿಯೂ, ರೂಕ್ಷವಾಗಿಯೂ, ರೌದ್ರವಾಗಿಯೂ, ತಂದ್ರಾಮೋಹಗಳಿಂದ ಪೀಡಿತವಾಗಿಯೂ, ಚಟ್ಟೆಯಾಗಿಯೂ, ಇರುವವು. ತ್ರಿದೋಷಗಳಲ್ಲಿ ಮೂರು ದೋಷಗಳ ಲಕ್ಷಣಗಳೂ ಕಣ್ಣುಗಳಲ್ಲಿ ಕಾಣುವವು. ಹಾಗೆಯೇ ದ್ವಂದ್ವದೋಷಗಳಲ್ಲಿ, ಆ ಎರಡು ದೋಷಗಳ ಲಕ್ಷಣಗಳೂ ಇರುವವು. ಕಣ್ಣುಗಳು ಒಂದೇ ದೃಷ್ಟಿಯುಳ್ಳವಾಗಿ, ರೋಗಿಯ ಸ್ವಾಧೀನವಿಲ್ಲದೆ, ತೆರದ ಕಣ್ಣುಗಳು ಕೂಡಲೇ ಮುಚ್ಚಿಹೋಗುತ್ತಾ ಇದ್ದರೆ, ಅಥವಾ ಯಾವಾಗಲೂ ತೆರದೇ ಅಥವಾ ಯಾವಾಗಲೂ ಮುಚ್ಚಿಯೇ ಇದ್ದರೆ, ಕರೀ ಆಲೆಯು ಲೋಪವಾಗಿದ್ದರೆ, ಅಥವಾ ತಾರೆಯು ತಿರುಗುತ್ತಾ ಧೂಮ್ರವರ್ಣವಾಗಿಯೂ, ಉಗ್ರವಾಗಿಯೂ, ಇದ್ದರೆ, ಕಣ್ಣುಗಳು ಬಹು ವರ್ಣವಾಗಿ ಅನೇಕ ವಿಕಾರವಾದ ಚೇಷ್ಟೆಗಳುಳ್ಳವಾದರೆ, ರೋಗಿಗೆ ಮೃತ್ಯು ಸಮೀಪಿಸಿಯದೆಂತ ನಿಶ್ಚಯವಾಗಿ ಹೇಳಬಹುದು ಸೌಮ್ಯವಾದ ದೃಷ್ಟಿಯುಳ್ಳ, ಪ್ರಸನ್ನಛಾಯೆಯುಳ್ಳ, ನಿಜಸ್ಥಿತಿಯಲ್ಲರುವ ಮತ್ತು ಮನೋಹರವಾದ ಕಣ್ಣುಗಳು ರೋಗಿಯ ರೋಗವು ಶೀಘ್ರದಲ್ಲಿ ಶಾಂತವಾಗುವದಂಬದರ ಸೂಚನೆಯಾಗಿರುತ್ತವೆ

18. ತ್ರುಟಿತಂ ಘನಿಲಂ ರೂಕ್ಷಂ ಧೂಮಲಂ ವಾತಕೋಪತಃ ।
ವಾತಶ್ಲೇಷ್ಮಪಿಕಾರೇ ಚ ಜಾಯತೇ ಕಪಿಶಂ ಮಲಂ ॥
ಬದ್ದಂ ಸುತ್ರುಟಿತಂ ಪೀತಂ ಶ್ಯಾಮಂ ಪಿತ್ತಾನಿಲಾದ್ಭವೇತ್ ।
4. ಪೀತಶ್ಯಾಮಂ ಶ್ಲೇಷ್ಮಪಿತ್ತಾದೀಷದಾರ್ದ್ರಂ ಚ ಪಿಚ್ಛಿಲಂ ।
5. ಶ್ಯಾಮಂ ತ್ರುಟಿತಪೀತಾಭಂ ಬದ್ದಂ ಶ್ವೇತಂ ತ್ರಿದೋಷತಃ ।
6. ದುರ್ಗಂಧಃ ಶಿಥಿಲಶ್ಚೈವ ವಿಷ್ಕೋತ್ಸರ್ಗೋ ಯದಾ ಭವೇತ್ ॥
ತದಾಜೀರ್ಣಂ ಮಲಂ ವೈದ್ಯೈರ್ದೋಷಜ್ಞೈಃ ಪರಿಭಾಷ್ಯತೇ ।
ಕಪಿಲಂ ಗುಂಠಯುಕ್ತಂ ಚ ಯದಿ ವರ್ಚೋಽವಲೋಕ್ಯತೇ ॥

ಮಲಪರೀಕ್ಷೆ

ಪ್ರಕ್ಷೀಣಮಲದೋಷೇಣ ದೂಷಿತಃ ಪರಿಕಥ್ಯತೇ ।
ಸಿತಂ ಮಹತ್ಪೂತಿಗಂಧಂ ಮಲಂ ಜ್ಞೇಯಂ ಜಲೋದರೇ ॥
ಶ್ಯಾಮಂ ಕ್ಷಯೇ ತ್ವಾಮವಾತೇ ಪೀತಂ ಸಕಟಿವೇದನಂ ।
ಅತಿಕೃಷ್ಣಂ ಚಾತಿಶುಭ್ರಮತಿಪೀತಂ ತಥಾರುಣಂ ॥
ಮರಣಾಯ ಮಲಂ ಕಿಂ ತು ಭೃಶೋಷ್ಣಂ ಮೃತ್ಯವೇ ಧ್ರುವಂ ।
ವಾತಸ್ಯ ಚ ಮಲಂ ಕೃಷ್ಣಂ ತತಃ ಪಿತ್ತಸ್ಯ ಪೀತವಿಟ್ ॥
ರಕ್ತವರ್ಣಮಲಂ ಕಿಂಚಿನ್ಮಲಂ ಶ್ವೇತಂ ಕಫೋದ್ಭವಂ ।
ಆಮಂ ವಾ ಶ್ವೇತಜಂ ಪ್ರಾಹುರ್ಮಿಶ್ರಿತಂ ದ್ವಂದ್ವಜಂ ವದೇತ್ ॥
ಅಪಕ್ವಂ ಸ್ಯಾದಜೀರ್ಣೇ ತು ಪಕ್ವಂ ಸ್ವಸ್ಥಮಲಂ ಭವೇತ್ ।
ಅತ್ಯಗ್ನೌ ಪೀಡಿತಂ ಶುಷ್ಕಂ ಮಂದಾಗ್ನೌ ತು ದ್ರವೀಕೃತಂ ॥

ದುರ್ಗಂಧಂ ಚಂದ್ರಿಕಾಯುಕ್ತಮಸಾಧ್ಯಂ ಮಲಲಕ್ಷಣಂ ||
20. ಬದ್ಧಂ ಶ್ಯಾಮಂ ಮರುತಿ ಕುಪಿತೇ ಪಿತ್ತಕೋಪೇ ತು ಪೀತಂ
21. ಪಾನೀಯಾಭಂ ಸಫೇನಂ ಕಫರುಷಿ ಚ ಮಲೇ ಸಾಂದ್ರಪಾಂಡೂರವರ್ಣಂ |
22. ರಕ್ತೇ ಕ್ರುದ್ಧೇ ಸರಕ್ತಂ ಜಲನಿಭಮಥ ತತ್ ದ್ವಂದ್ವಕೋಪೇ ದ್ವಿಲಿಂಗಂ
23. ಸರ್ವೈದೋರ್ಷೈಃ ಸರೋಷೈರ್ಭವತಿ ಕಿಲ ಮಲಂ ರೋಗಿಣಸ್ಸರ್ವಲಿಂಗಂ ||
ದುರ್ಗಂಧಿ ಶ್ಯಾಮವರ್ಣಂ ಮಲಮರುಣನಿಭಂ ಪಾಂಡುರಾಭಂ ವಿಚಿತ್ರಂ
ಮಾಂಸಾಭಂ ಮೇಚಕಂ ತತ್ಪ್ರಭವತಿ ಮರಣಾಯೈವ ರೋಗಾನ್ವಿತಸ್ಯ |
ಎಸ್ರಂ ಶೈಥಿಲ್ಯಯುಕ್ತಂ ಮುಹುರತಿನಿಪತತ್ಸ್ಯಾದಜೀರ್ಣಾಚ್ಚ ವರ್ಚೋ
ದಜ್ಞಾತ್ರಂ ಜೈತದೇವಂ ನಿಗದಿತಮಗದೈರ್ಲಕ್ಷಣಂ ವರ್ಚಸೋಪಿ ||
(ನಿ. ರತ್ನಾಕರ.)

ಇದರ ಮೇಲಿನ ಶ್ಲೋಕಗಳಲ್ಲಿ 4, 5, 6, 20 21, 22 ಮತ್ತು 23ನೇ ಅರ್ಧ ಶ್ಲೋಕಗಳಲ್ಲದ ಮಿಕ್ಕ ಭಾಗ ಇ ಯಲ್ಲಿಯೂ ಕಾಣುತ್ತದೆ

ವಾತಪ್ರಕೋಪದಿಂದ ಮಲವು ಕಡಿದು, ಸೊರೆ ಕೂಡಿಕೊಂಡು, ರೂಕ್ಷವಾಗಿ ಮತ್ತು ಹೊಗೆವರ್ಣವಾಗಿ, ಇರುವದು. ಕಫವಾತರೋಗದಲ್ಲಿ ಮಲದ ವರ್ಣವು ಕಪಿಶ (ಕಪ್ಪು ಮಿಶ್ರ ಅರಸಿನ)ವಾಗುವದು. ಪಿತ್ತವಾಯುವಿನಿಂದ ಮಲವು ಬದ್ಧವಾಗಿ, ಬಹಳವಾಗಿ ಒಡೆದು, ಅರಸಿನ ಶ್ಯಾಮ ಮಿಶ್ರವರ್ಣದ್ದಾಗುತ್ತದೆ ಕಫಪಿತ್ತದಿಂದ ಮಲ ಅರಸಿನ ಮತ್ತು ಶ್ಯಾಮ ಮಿಶ್ರವರ್ಣವುಳ್ಳದ್ದಾಗಿ, ಸ್ವಲ್ಪ ತೆಳ್ಳಗಾಗಿಯೂ, ಪಿಚ್ಚಿಲವಾಗಿಯೂ ಇರುವದು. ತ್ರಿದೋಷದಿಂದ ಮಲವು ಒಡೆದು, ಬದ್ಧವಾಗಿ, ವರ್ಣದಲ್ಲಿ ಶ್ಯಾಮ, ಸ್ವಲ್ಪ ಅರಸಿನ ಮತ್ತು ಬೆಳ್ಳಗಾಗಿರುವದು. ಮಲವು ಸಡಿಲಾಗಿ, ದುರ್ಗಂಧವುಳ್ಳದ್ದಾದರೆ, ಅದು ಅಜೀರ್ಣದಿಂದೆಂತ ದೋಷಜ್ಞರಾದ ವೈದ್ಯರು ಹೇಳುತ್ತಾರೆ. ಮಲವು ಅತಿಯಾಗಿ ಕ್ಷೀಣವಾದ ದೋಷದಿಂದ ಅದು ಕಪಿಲವರ್ಣವಾಗಿಯೂ, ಗಂಟುಗಳುಳ್ಳದ್ದಾಗಿಯೂ ಕಾಣುವದು ಜಲೋದರದಲ್ಲಿ ಮಲ ಬಹಳ ದುರ್ವಾಸನೆಯುಳ್ಳದ್ದಾಗಿಯೂ, ಬೆಳ್ಳಗಾಗಿಯೂ ಇರುತ್ತದೆ. ಕ್ಷಯದಲ್ಲಿ ಮಲ ಕಪ್ಪಾಗಿರುವದು. ಆಮವಾತದಲ್ಲಿ ಅರಸಿನ ವರ್ಣದ ಮಲ ಮತ್ತು ಸೂಂಟದ ನೋವು ಕಾಣುವವು. ಅತಿಕಪ್ಪು, ಅತಿಬೆಳ್ಳಗೆ, ಅತಿಅರಸಿನ ಅಥವಾ ಅತಿಅರುಣ (ಕೆಂಪು ಕಪ್ಪು ಮಿಶ್ರ) ವರ್ಣದ ಮಲವು ಮರಣ ಸೂಚಕವೆಂತ ಎಣಿಸಲ್ಪಡುತ್ತದೆ; ಆದರೆ ಅತಿಬಿಸಿಯಾದ ಮಲ ಕಂಡಲ್ಲಿ ಮರಣವುಂಟಾಗುತ್ತದೆಂಬುವದಕ್ಕೆ ಸಂದೇಹವಿಲ್ಲ. ವಾತದ ಮಲವು ಕಪ್ಪು, ಪಿತ್ತದ ಮಲವು ಅರಸಿನ ಮತ್ತು ಸ್ವಲ್ಪ ಕೆಂಪು, ಕಫದ ಮಲ ಬೆಳ್ಳಗೆ. ಆಮದಲ್ಲಿಯೂ ಮಲದ ವರ್ಣ ಬಿಳುಪು. ದ್ವಂದ್ವದೋಷಗಳಲ್ಲಿ ಮಲವು ಮಿಶ್ರವರ್ಣವಾಗುತ್ತದೆ. ಅಜೀರ್ಣದಲ್ಲಿ ಮಲವು ಅಪಕ್ವವಾಗಿಯೂ, ಸ್ವಸ್ಥವಾದವನ ಮಲವು ಪಕ್ವವಾಗಿಯೂ ಇರುತ್ತದೆ. ಅತ್ಯಗ್ನಿಯಲ್ಲಿ ಮಲವು ಒಣಗಿ ಬಿಕ್ಕಿ ಬರುವದು. ಮಂದಾಗ್ನಿಯಲ್ಲಿ ಮಲವು ತೆಳ್ಳಗಾಗಿರುತ್ತದೆ. ದುರ್ಗಂಧವಿದ್ದು, ಮಿಂಚುವ ಮಲವು ಅಸಾಧ್ಯ ರೋಗದ ಮಲಲಕ್ಷಣವೆಂದು ತಿಳಿಯಬೇಕು. ಮಲವು ವಾತಪ್ರಕೋಪದಲ್ಲಿ ಬದ್ಧ ಮತ್ತು ಕಪ್ಪಾಗಿಯೂ, ಪಿತ್ತಪ್ರಕೋಪದಲ್ಲಿ ಅರಸಿನ, ನೀಲ ಮತ್ತು ಸೊರೆಯುಕ್ತವಾಗಿಯೂ, ಕಫಪ್ರಕೋಪದಲ್ಲಿ ದಪ್ಪ ಮತ್ತು ಬೆಳ್ಳ

ಗಾಗಿಯೂ, ರಕ್ತಪ್ರಕೋಪದಲ್ಲಿ ರಕ್ತಮಿಶ್ರ ಮತ್ತು ನೀರಾಗಿಯೂ, ದ್ವಂದ್ವದೋಷಗಳಲ್ಲಿ ಎರಡು ದೋಷಗಳ ಲಕ್ಷಣಗಳುಳ್ಳದ್ದಾಗಿಯೂ, ಸರ್ವದೋಷಗಳಲ್ಲಿ ಸರ್ವ ಲಕ್ಷಣಗಳಿಂದ ಮಿಲಿತವಾಗಿಯೂ ಕಾಣುವದು ರೋಗಿಯ ಮಲದಲ್ಲಿ ದುರ್ಗಂಧ, ಶ್ಯಾಮವರ್ಣ, ಅರುಣ ವರ್ಣದ ಹೋಲುವೆ, ಅರಸಿನ ಒತ್ತಿದ ಬಿಳುಪು, ವಿಚಿತ್ರವರ್ಣ, ಮಾಂಸದ ಹೋಲುವೆ, ಕಪ್ಪು ಒತ್ತಿದ ನೀಲವರ್ಣ, ಈ ಲಕ್ಷಣಗಳು ರೋಗಿಯ ಮರಣಕ್ಕಾಗಿಯೇ ಉಂಟಾಗುತ್ತವೆ. ಅಜೀರ್ಣದಿಂದ ಮಲವು ಸಡಿಲಾಗಿ, ಮಾಂಸದ ವಾಸನೆಯುಳ್ಳದ್ದಾಗಿ, ಅತಿಯಾಗಿ, ಪದೇ ಪದೇ ಹೋಗುವದು ಹೀಗೆ ಮಲದ ಲಕ್ಷಣಗಳನ್ನು ವೈದ್ಯರು ರಿಕ್ಕು ಸೂಚಿಸುವದಕ್ಕಾಗಿ ಮಾತ್ರ ಹೇಳಿರುತ್ತಾರೆ

ಇದಾ ಮೇಲಿನ ಮಲಲಕ್ಷಣವರ್ಣನದಲ್ಲಿ ಸ್ವಲ್ಪ ಪುನರುಕ್ತಿ ಕಾಣುತ್ತದೆ ಆ ಅಂತಗಳು ಬೇರೆ ಬೇರೆ ಗ್ರಂಥಗಳಿಂದ ಸಂಗ್ರಹಿಸಲ್ಪಟ್ಟವಾಗಿರಬೇಕು

19 (a) ಪುಂಸೋ ದಕ್ಷಿಣಹಸ್ತಸ್ಯ ಸ್ತ್ರಿಯೋ ವಾಮಕರಸ್ಯ ತು ।
ಅಂಗುಷ್ಠಮೂಲಗಾಂ ನಾಡೀಂ ಪರೀಕ್ಷೇತ ಭಿಷಗ್ವರಃ ॥
ಅಂಗುಲೀಭಿಸ್ತು ತಿಸೃಭಿರ್ನಾಡೀಮವಹಿತಃ ಸ್ಪೃಶೇತ್ ।
ತಜ್ಜ್ಞೇಷ್ಟಯಾ ಸುಖಂ ದುಃಖಂ ಜಾನೀಯಾತ್ಕುಶಲೋಽಖಿಲಂ ॥
ಸದ್ಯಃಸ್ನಾತಸ್ಯ ಭುಕ್ತಸ್ಯ ಕ್ಷುತ್ತೃಷ್ಣಾತಪಶೀಲಿನಃ ।
ನಾಡಿಯ ಪರೀಕ್ಷೆ ಮತ್ತು ಗತಿಭೇದಗಳು (ಭಾ ಪ್ರ) ವ್ಯಾಯಾಮಶ್ರಾಂತದೇಹಸ್ಯ ಸಮ್ಯಗ್ ನಾಡೀ ನ ಬುಧ್ಯತೇ ॥
ವಾತಾಧಿಕೇ ಭವೇನ್ನಾಡೀ ಪ್ರವ್ಯಕ್ತಾ ತರ್ಜನೀತಲೇ ।
ಪಿತ್ತೇ ವ್ಯಕ್ತಾ ಮಧ್ಯಮಾಯಾಂ ತೃತೀಯಾಂಗುಲಿಗಾ ಕಫೇ ॥
ತರ್ಜನೀಮಧ್ಯಮಾಮಧ್ಯೇ ವಾತಪಿತ್ತಾಧಿಕೇ ಸ್ಫುಟಾ ।
ಅನಾಮಿಕಾಯಾಂ ತರ್ಜನ್ಯಾಂ ವ್ಯಕ್ತಾ ವಾತಕಫೇ ಭವೇತ್ ॥
ಮಧ್ಯಮಾನಾಮಿಕಾಮಧ್ಯೇ ಸ್ಫುಟಾ ಪಿತ್ತಕಫೇಽಧಿಕೇ ।
ಅಂಗುಲಿತ್ರಿತಯೇಪಿ ಸ್ಯಾತ್ತ್ರಿವ್ಯಕ್ತಾ ಸನ್ನಿಪಾತತಃ ॥

(ಭಾ. ಪ್ರ. 239.)

ವೈದ್ಯಶ್ರೇಷ್ಠನು ಗಂಡಸಿನ ಬಲಕೈಯ, ಹೆಂಗಸಾದರೆ ಎಡಕೈಯ, ಹೆಬ್ಬೆಟ್ಟಿನ ಬುಡದಲ್ಲಿ ನಡೆಯುವ ನಾಡಿಯನ್ನು ಪರೀಕ್ಷಿಸತಕ್ಕದ್ದು. ತನ್ನ ಮೂರು ಬೆರಳುಗಳಿಂದ ಆ ನಾಡಿಯನ್ನು ಜಾಗ್ರತೆಯಿಂದ ಮುಟ್ಟಿ ನೋಡಿ, ಅದರ ನಡಿಕೆಯಿಂದ ಅನುಭವಶಾಲಿಯಾದವನು ಎಲ್ಲಾ ಸುಖದುಃಖಗಳನ್ನು ತಿಳಿಯಬಹುದು. *ಬಗಲೇ ಸ್ನಾನ ಮಾಡಿದ, ಅಥವಾ ಉಂಡ. ಅಥವಾ ಹಸಿವು-ಬಾಯಾರಿಕೆಗಳಿಂದ ಪೀಡಿತನಾದ, ಅಥವಾ ಬಿಸಿಲಿನಲ್ಲಿದ್ದು ಬಂದ, ಅಥವಾ ವ್ಯಾಯಾಮದಿಂದ ಬಳಲಿದ ದೇಹವುಳ್ಳ ಮನುಷ್ಯನ ನಾಡಿಯು ಸರಿಯಾಗಿ ತಿಳಿಯಬರುವದಿಲ್ಲ.* ವಾತವು ಅಧಿಕವಾದಾಗ್ಗೆ, ತರ್ಜನೀ (ಹೆಬ್ಬೆಟ್ಟಿನ ಒತ್ತಿನ) ಬೆರಳಿನ ಅಡಿ ಬಲವಾಗಿಯೂ, ಪಿತ್ತವು ಅಧಿಕವಾದಾಗ್ಗೆ ಮಧ್ಯ ಬೆರಳಿನ ಅಡಿ ಬಲವಾಗಿಯೂ, ಕಫವು ಅಧಿಕವಾದಾಗ್ಗೆ ಅನಾಮಿಕ (ಉಂಗುರದ) ಬೆರಳಿನ ಅಡಿ ಬಲವಾಗಿಯೂ, ನಾಡಿಯು ಕಾಣುವದು. ವಾತಪಿತ್ತ ಅಧಿಕವಾದಾಗ್ಗೆ ನಾಡಿಯು ತರ್ಜನೀ ಮಧ್ಯಮಾ ಬೆರಳುಗಳ ನಡುವೆಯೂ,

ವಾತಕಫ ಅಧಿಕವಾದಾಗ್ಗೆ ತರ್ಜನಿಯ ಅಡಿಯಲ್ಲಿಯೂ ಅನಾಮಿಕೆಯ ಅಡಿಯಲ್ಲಿಯೂ, ಪಿತ್ತಕಫ ಅಧಿಕವಾದಾಗ್ಗೆ ಮಧ್ಯಮಾ ಅನಾಮಿಕೆಗಳ ಮಧ್ಯದಲ್ಲಿಯೂ, ಸನ್ನಿಪಾತದಲ್ಲಿ ಮೂರು ಬೆರಳುಗಳ ಅಡಿಯಲ್ಲಿಯೂ, ಬಲವಾಗಿ ಬಡಿಯುವದು.

ಪಂಾ *ಕೆಳಗೆ (j) ನೋಡಿರಿ

ವಾತಾದ್ವಕ್ರಗತಿಂ ಧತ್ತೇ ಪಿತ್ತಾದುತ್ಪ್ಲುತ್ಯ ಗಾಮಿನೀ ।
ಕಫಾನ್ಮಂದಗತಿರ್ಜ್ಞೇಯಾ ಸನ್ನಿಪಾತಾದತಿದ್ರುತಾ ॥
ವಕ್ರಮುತ್ಪ್ಲುತ್ಯ ಚಲತಿ ಧಮನೀ ವಾತಪಿತ್ತತಃ ।
ವಹೇದ್ವಕ್ರಂ ಚ ಮಂದಂ ಚ ವಾತಶ್ಲೇಷ್ಮಾಧಿಕತ್ವತಃ ॥
ಉತ್ಪ್ಲುತ್ಯ ಮಂದಂ ಚಲತಿ ನಾಡೀ ಪಿತ್ತಕಫೇಽಧಿಕೇ ।
ಕಾಮಾತ್ಕ್ರೋಧಾದ್ವೇಗವಹಾ ಕ್ಷೀಣಾ ಚಿಂತಾಭಯಪ್ಲುತಾ ॥
ಸ್ಥಿತ್ವಾ ಸ್ಥಿತ್ವಾ ಚಲೇದ್ಯಾ ಸಾ ಹಂತಿ ಸ್ಥಾನಚ್ಯುತಾ ತಥಾ ।
ಅತಿಕ್ಷೀಣಾ ಚ ಶೀತಾ ಚ ಪ್ರಾಣಾನ್ ಹಂತಿ ನ ಸಂಶಯಃ ॥
ಜ್ವರಕೋಪೇನ ಧಮನೀ ಸೋಷ್ಣಾ ವೇಗವತೀ ಭವೇತ್ ।
ಮಂದಾಗ್ನೇಃ ಕ್ಷೀಣಧಾತೋಶ್ಚ ಸೃವಂ ಮಂದತರಾ ಮತಾ ॥
ಚಪಲಾ ಕ್ಷುಧಿತಸ್ಯ ಸ್ಯಾತ್ತೃಪ್ತಸ್ಯ ಭವತಿ ಸ್ಥಿರಾ ।
ಸುಖಿನೋಽಪಿ ಸ್ಥಿರಾ ಜ್ಞೇಯಾ ತಥಾ ಬಲವತೀ ಮತಾ ॥ (ಭಾ. ಪ್ರ. 239.)

ನಾಡಿಯ ಗತಿಯು ವಾತದಲ್ಲಿ (ಅಡ್ಡಕ್ಕೆ) ಡೊಂಕಾಗಿಯೂ, ಪಿತ್ತದಲ್ಲಿ (ಮೇಲಕ್ಕೆ) ಹಾರುವದಾಗಿಯೂ, ಕಫದಲ್ಲಿ (ಜುರುಕಿಲ್ಲದೆ) ಮೆಲ್ಲಗಾಗಿಯೂ, ಸನ್ನಿಪಾತದಲ್ಲಿ ಅತಿವೇಗವುಳ್ಳದ್ದಾಗಿಯೂ, ಇರುವದು. ವಾತಪಿತ್ತಪ್ರಕೋಪದಲ್ಲಿ ಧಮನಿಯು ಡೊಂಕಾಗಿ ಹಾರಿ ನಡೆಯುವದು; ಕಫವಾತದಲ್ಲಿ ಮೆಲ್ಲಗಾಗಿಯೂ, ಡೊಂಕಾಗಿಯೂ ನಡಯುವದು, ಮತ್ತು ಕಫಪಿತ್ತದಲ್ಲಿ ಮೆಲ್ಲಗಾಗಿ ಹಾರಿ ಚಲಿಸುವದು. ಕಾಮದಿಂದ ಅಥವಾ ಕ್ರೋಧದಿಂದ ಪೀಡಿತನಾದವನ ನಾಡಿಯು ವೇಗವುಳ್ಳದ್ದಾಗಿಯೂ, ಚಿಂತೆಯಿಂದ ಅಥವಾ ಭಯದಿಂದ ನೊಂದವನ ನಾಡಿಯು ಕ್ಷೀಣವಾಗಿಯೂ ಇರುವದು. ನಾಡಿಯು ಸ್ಥಾನತಪ್ಪಿ ಅಥವಾ ನಿಂತುನಿಂತು ನಡೆಯುತ್ತಿದ್ದರ, ಮರಣ ಸಂಭವಿಸುವದೆಂದು ತಿಳಿಯುವದು ನಾಡಿಯು ಬಹಳ ಕ್ಷೀಣವಾಗಿಯೂ, ಶೀತವಾಗಿಯೂ ಇದ್ದರೆ ಸಹ ಪ್ರಾಣ ಹೋಗುವದೆಂಬದು ನಿಃಸಂಶಯ. ಜ್ವರದಲ್ಲಿ ನಾಡಿಯು ಬಿಸಿಯಾಗಿ ವೇಗವುಳ್ಳದ್ದಾಗುತ್ತದೆ ಅಗ್ನಿ ಮಂದವಾಗಿಯುಳ್ಳವನ, ಅಥವಾ ಧಾತುಕ್ಷೀಣವಾದವನ, ನಾಡಿಯು ಹೆಚ್ಚು ಮಂದ ಎಂತ ತಿಳಿದಿದ್ದಾರ. ಹಸಿದವನ ನಾಡಿಯು ಚಪಲವಾಗಿಯೂ, ಉಂಡು ತೃಪ್ತನಾದವನ ನಾಡಿಯು ಸ್ಥಿರವಾಗಿಯೂ, ಇರುತ್ತದೆ. ಸುಖವಾಗಿರುವವನ ನಾಡಿಯು ಸ್ಥಿರವಾಗಿಯೂ, ಬಲವಾಗಿಯೂ ಇರುವದೆಂದು ತಿಳಿಯಬೇಕು.

ಹರಾ ನಾಡಿಯ ಪೆಟ್ಟುಗಳಲ್ಲಿ ಒಂದೊಂದು ಕಾಣದೆ ಹೋಗುವದರಿಂದಲೇ, ಅಥವಾ ನಾಡಿಗಳ ಪೆಟ್ಟುಗಳು ಸ್ಥಾನಕ್ಕೆ ಹಿಂದೆ ಅಥವಾ ಮುಂದೆ ಕಾಣುವದರಿಂದಲೇ ಮರಣಸಂಭವವನ್ನು ಊಹಿಸಬಾರದು ಕೆಳಗೆ (d) ನೋಡಿರಿ

(h) ವಾತಾದ್ಭೇಕಮೂತ್ರಿಕಾಭಾ ಭುಜಗಗತಿಸಮಾ ಸ್ಯಾಜ್ಜಲೂಕೇವ ವಕ್ರಾ ।
ಪಿತ್ತೇ ಸ್ಯಾದ್ಭೇಕಯಾನಾ ಶಿಖಿಗಮನನಿಭಾ ಕ್ಷಿಪ್ರವೇಗಾ ಮಹೋಷ್ಣಾ ॥

ವಾತ-ಪಿತ್ತ-ಕಫ ನಾಡಿಗಳ ಲಕ್ಷಣ (ಮತಾಂತರ)

ಶ್ಲೇಷ್ಮೋತ್ಥಾ ಕುಕ್ಕುಟಾಭಾ ಪರಭೃತಗಮನಾ ಮಂದವೇಗಾತಿಶೀತಾ |
ಜೇತ್ಯೇವಂ ನಾಡಿಕಾ ಯಾ ವಹತಿ ಧಮನಿಕಾ ಕ್ಷೀರಪಾಣ್ಯೋಕ್ತಮೇತತ್ ||
(ವೈ. ಸಾ. ಸಂ. 6-7.)

ವಾತಪ್ರಕೋಪದಲ್ಲಿ ನಾಡಿಯು ಗೋಮೂತ್ರದ ಅಥವಾ ಹಾವಿನ ಅಥವಾ ಜಿಗಳೆಯ ಗತಿಯಂತೆ ಡೊಂಕಾಗಿರುವದು ಪಿತ್ತಪ್ರಕೋಪದಲ್ಲಿ ನಾಡಿಯು ಬಿಸಿಯಾಗಿ ಮತ್ತು ಕಪ್ಪೆಯ ನಡಿಕೆಯಂತೆ, ಅಥವಾ ನವಿಲಿನ ನಡಿಕೆಯಂತೆ, ಕ್ಷಿಪ್ರವೇಗವುಳ್ಳದ್ದಾಗಿ ಇರುವದು. ಕಫಾಧಿಕ್ಯದಲ್ಲಿ ನಾಡಿಯು ಶೀತವಾಗಿ, ಕೋಳಿಯಂತೆ ಅಥವಾ ಪಾರಿವಾಳದ ನಡಿಕೆಯಂತೆ, ಮಂದ ವೇಗವುಳ್ಳದ್ದಾಗಿ ಇರುವದು ಹೀಗೆ ನಾಡಿಯೆಂಬ ಧಮನಿಯ ಗತಿಲಕ್ಷಣವನ್ನು ಕ್ಷೀರಪಾಣಿಯವರು ಹೇಳಿದ್ದಾರೆ.

(c) ಕಾಷ್ಠಕುಟ್ಟೋ ಯಥಾ ಕಾಷ್ಠಂ ಕುಟ್ಟತೇ ನಾತಿವೇಗತಃ |
ಸನ್ನಿಪಾತದ ನಾಡಿಲಕ್ಷಣ ಸ್ಥಿತ್ವಾ ಸ್ಥಿತ್ವಾ ತಥಾ ನಾಡೀ ಸನ್ನಿಪಾತೇ ಭವೇದ್ಧ್ರುವಂ || (ಗ್ರಂಥಾಂತರ)

ಕಟ್ಟಿಗೆಯೊಡಿಯುವವನು ಹ್ಯಾಗೆ ಅತಿ ವೇಗವಿಲ್ಲದೆ ನಿಂತುನಿಂತು ಕಟ್ಟಿಗೆಯನ್ನು ಒಡಿಯುತ್ತಾನೋ, ಹಾಗೆ ಸನ್ನಿಪಾತದಲ್ಲಿ ನಾಡಿಯು ಒಡಿಯುವದಾಗುತ್ತದೆ.

(d) ಸವ್ಯೇನ ರೋಗಧೃತಿಕೂರ್ಪರಭಾಗಭಾಜಾ
ನಾಡೀಪರೀಕ್ಷೆ ಕ್ರಮ (ಮತಾಂತರ) ಪೀಡ್ಯಾಧದಕ್ಷಿಣಕರಾಂಗುಲಿಕಾತ್ರಯೇಣ |
ಅಂಗುಷ್ಠಮೂಲಮಧಿಪಶ್ಚಿಮಭಾಗಮಧ್ಯೇ
ನಾಡೀಂ ಪ್ರಭಾತಸಮಯೇ* ಸತತಂ ಪರೀಕ್ಷೇತ್ || (ಧ. ೧.)

ವೈದ್ಯನು ರೋಗಿಯ ಮೊಣಕೈಯನ್ನು ಬುಡದಲ್ಲಿ ತನ್ನ ಎಡಕೈಯಿಂದ ಹಿಡಕೊಂಡು ತನ್ನ ಬಲಕೈಯ ಮೂರು ಬೆರಳುಗಳಿಂದ ರೋಗಿಯ ಹೆಬ್ಬೆಟ್ಟಿನ ಬುಡವನ್ನು ಅದರ ಮೇಲಿನ ಭಾಗದ (ಒಳಪಾರ್ಶ್ವದ) ಮಧ್ಯದಲ್ಲಿ ಒತ್ತಿ, ನಾಡಿಯನ್ನು ಬೆಳಿಗ್ಗಿನ ಸಮಯದಲ್ಲಿ, ಯಾವಾಗಲೂ ಪರೀಕ್ಷಿಸತಕ್ಕದ್ದು.

*ಪಠಾ 'ಪ್ರಭಂಜನಗತಿಂ' (ವಾಯುವಿನ ಗತಿಯುಳ್ಳ) ಎಂಬ ಪಾಠಾಂತರ ಕಾಣುತ್ತದೆ ಕೈಯನ್ನು ಹಿಡಿಯುವ ವಿಷಯದಲ್ಲಿ ಮುಂದಿನ (e) ನೋಡಿರಿ

ಅಂಗುಷ್ಠಸ್ಯ ತು ಮೂಲೇ ಯಾ ಧಮನೀ ಜೀವಸಾಕ್ಷಿಣೀ |
ತಸ್ಯಾ ಗತಿವಶಾದ್ವಿದ್ಯಾತ್ಸುಖಂ ದುಃಖಂ ಚ ರೋಗಿಣಾಂ || (ನಾ. ಪ್ರ. 18.)

ಹೆಬ್ಬೆಟ್ಟಿನ ಬುಡದಲ್ಲಿ ಇರುವ ಜೀವಸಾಕ್ಷಿಯಾದ ಧಮನೀ ನಾಡಿಯ ಗತಿಭೇದದಿಂದ ರೋಗಿಯ ಸುಖವನ್ನೂ ದುಃಖವನ್ನೂ ತಿಳಿಯತಕ್ಕದ್ದು.

ಪ್ರಾತಃ ಕೃತಸಮಾಚಾರಃ ಕೃತಾಚಾರಪರಿಗ್ರಹಂ |
ಸುಖಾಸೀನಃ ಸುಖಾಸೀನಂ ಪರೀಕ್ಷಾರ್ಥಮುಪಾಚರೇತ್ || (ನಾ. ಪ್ರ. 17.)

ಪ್ರಾತಃಕಾಲದಲ್ಲಿ ವೈದ್ಯನೂ ರೋಗಿಯೂ ತಮ್ಮ ನಿತ್ಯಾಚಾರಗಳನ್ನು ತೀರಿಸಿಕೊಂಡು, ಸುಖವಾಗಿ ಕೂತುಕೊಂಡು, ನಾಡೀಪರೀಕ್ಷೆಯನ್ನು ತೊಡಗಬೇಕು.

(೮) ವಾತಪಿತ್ತಶ್ಲೇಷ್ಮಭೇದಾ ತ್ರಿವಿಧಾ ನಾಡಿರುಚ್ಯತೇ ।
ಸಾ ಚ ನಾಡೀ ಮನುಷ್ಯಾಣಾಂ ಯಾವತ್ಪ್ರಾಣಾವಧಿ ಸ್ಥಿರಾ ॥
ಯಸ್ಯಾ ಪ್ರಕೋಪಾಜ್ಜಾಯಂತೇ ನಾನಾರೋಗಾಃ ಪೃಥಗ್ವಿಧಾಃ ।
ಮಣಿಬಂಧಾಂಗುಷ್ಠಮೂಲೇ ಪಾದಮೂಲೇ ಗಲೇ ಹೃದಿ ॥
ಕುಕ್ಷೌ ಮೂರ್ಧ್ನಿ ಭ್ರುವೌ ರುಂಡಮಧ್ಯೇ ಚೈವೋಪಲಕ್ಷ್ಯತೇ ।
ಯಥಾಕ್ರಮಂ ಪರೀಕ್ಷ್ಯಾದೌ ಸಾಧ್ಯಾಸಾಧ್ಯಂ ವದೇತ್ಸುಧೀಃ ॥

ಮನುಷ್ಯ-ಮೃಗ-ಪಕ್ಷಿಗಳಲ್ಲಿ ನಾಡೀಸ್ಥಾನಗಳು

ಮೂರ್ಧ್ನಿ ಬಾಲ್ಯೇ ವಹೇನ್ನಾಡೀ ಕೌಮಾರೇ ಭ್ರೂಯುಗಾಂತರೇ ।
ಸದಾ ಕಂಠೇ ಹೃತ್ಪ್ರದೇಶೇ ಕುಕ್ಷೌ ಪಾದದ್ವಯೇ ತಥಾ ॥
ಕರಮೂಲೇ ಮುಷ್ಕಮಧ್ಯೇ ಮಧ್ಯೇ ವಯಸಿ ದೃಶ್ಯತೇ ।
ತತ್ಪರೀಕ್ಷಾವಿಧಿಂ ಪಕ್ಷೇ ಮೃಗೇ ವಾ ಖಗಜಾತಿಷು ॥
ನರಾಣಾಂ ದಕ್ಷಿಣೇ ಹಸ್ತೇ ನಾರೀಣಾಮಿತರೇ ಕರೇ ।
ಗವಾಂ ನಾಸಾಪುಟೇ ದ್ವಂದ್ವೇ ವಾಜೀನಾಂ ಶ್ರವಣದ್ವಯೇ ॥
ಮುಖನಾಸಾಗ್ರಪುಚ್ಛೇಷು ನಾಗಾನಾಂ ಗಂಡಯೋರ್ದ್ವಯೋಃ ।
ಅನ್ಯೇಷಾಮಪಿ ಜಂತೂನಾಂ ತತ್ತದ್ದೇಹಾನುಸಾರತಃ ॥
ನಾಡ್ಯಃ ಸ್ವಾನವಿಶೇಷೇಷು ನಿವಸಂತಿ ಪೃಥಕ್ ಪೃಥಕ್ ॥ (ಗ್ರಂಥಾಂತರ.)

ನಾಡಿಯಲ್ಲಿ ವಾತ ಪಿತ್ತ ಕಫಗಳೆಂಬ ಮೂರು ಭೇದಗಳಿವೆ. ಆ ನಾಡಿಯು ಮನುಷ್ಯರ ಪ್ರಾಣಾಂತ್ಯದ ವರೆಗೆ ಸ್ಥಿರವಾಗಿರುವದು. ಅದರ ಪ್ರಕೋಪದಿಂದ ನಾನಾ ವಿಧವಾದ ಬೇರೆ ಬೇರೆ ರೋಗಗಳುಂಟಾಗುವವು ಕೈಮಣಿಗಂಟಿನ ಹೆಬ್ಬೆಟ್ಟಿನ ಬುಡದಲ್ಲಿಯೂ, ಪಾದಗಳ ಬುಡದಲ್ಲಿಯೂ, ಗಂಟಲಲ್ಲಿಯೂ, ಹೃದಯದಲ್ಲಿಯೂ, ಹೊಟ್ಟೆಯಲ್ಲಿಯೂ, ತಲೆಯಲ್ಲಿಯೂ, ಹುಬ್ಬಿನಲ್ಲಿಯೂ, ರುಂಡದ ಮಧ್ಯದಲ್ಲಿಯೂ, ಆ ನಾಡಿಯು ಕಾಣುತ್ತದೆ. ಬುದ್ಧಿವಂತನು ಕ್ರಮಪ್ರಕಾರ ಆ ನಾಡಿಯನ್ನು ಮೊದಲಾಗಿ ಪರೀಕ್ಷಿಸಿ, ರೋಗದ ಸಾಧ್ಯಾಸಾಧ್ಯತೆಯನ್ನು ಹೇಳಬೇಕು. ಬಾಲಕರ ನೆತ್ತಿಯಲ್ಲಿ, ಕುಮಾರರ ಹುಬ್ಬುಗಳ ನಡುವೆ, ಸದಾಕಾಲ ಕಂಠದಲ್ಲಿ, ಹೃದಯದಲ್ಲಿ, ಕುಕ್ಷಿಯಲ್ಲಿ, ಎರಡು ಪಾದಗಳಲ್ಲಿ, ಕೈಬುಡದಲ್ಲಿ ಮತ್ತು ಮಧ್ಯ ವಯಸ್ಸಿನವನ ಅಂಡದ ಮಧ್ಯದಲ್ಲಿ ನಾಡಿಯು ಕಾಣುತ್ತದೆ. ಮೃಗ-ಪಕ್ಷಿ ಜಾತಿಗಳಲ್ಲಿ ಸಹ ನಾಡಿಯು ಸಿಕ್ಕುತ್ತದೆ. ಆ ನಾಡೀಪರೀಕ್ಷೆಯ ಕ್ರಮ ಹ್ಯಾಗಂದರೆ — ಮನುಷ್ಯರೊಳಗೆ ಗಂಡಸಿನ ಒಲಕೈಯಲ್ಲಿ ಮತ್ತು ಹೆಂಗಸಿನ ಎಡಕೈಯಲ್ಲಿ, ಗೋವುಗಳ ಎರಡು ಮೂಗುಗಳ ತುದಿಯಲ್ಲಿ, ಕುದುರೆಗಳ ಎರಡು ಕಿವಿಗಳಲ್ಲಿ, ಮುಖದಲ್ಲಿ, ಮೂಗಿನ ತುದಿಯಲ್ಲಿ ಮತ್ತು ಬಾಲದಲ್ಲಿ, ಆನೆಗಳ ಎರಡು ಗಂಡಸ್ಥಳಗಳಲ್ಲಿ ಮತ್ತು ಇತರ ಜಂತುಗಳಲ್ಲಿ ಆಯಾ ದೇಹಾನುಸಾರವಾಗಿ ಬೇರೆಬೇರೆ ಸ್ಥಾನಗಳಲ್ಲಿ ನಾಡಿಗಳು ಪ್ರತಿಪ್ರತ್ಯೇಕವಾಗಿ ಕಾಣುತ್ತವೆ.

ತಾಸಾಂ ಪರೀಕ್ಷಾ ಕರ್ತವ್ಯಾ ಭಿಷಜಾ ಸೂಕ್ಷ್ಮಬುದ್ಧಿನಾ ।
ಕದಲೀಮುಕುಳಾಕಾರಮಥವಾ ಪಂಕಜೋಪಮಂ ॥
ಪಾಣಿಮಾಲಭ್ಯ ವಾಮೇನ ರೂಪಂ ಸಮ್ಯಗ್ವಿಲೋಕಯೇತ್ । (ಗ್ರಂಥಾಂತರ.)

ಆ ನಾಡಿಗಳ ಪರೀಕ್ಷೆಯನ್ನು ವೈದ್ಯನು ಸೂಕ್ಷ್ಮಬುದ್ಧಿಯಿಂದ ಮಾಡತಕ್ಕದ್ದು. ರೋಗಿಯ ಕೈಯನ್ನು ಬಾಳಯ ಮೋತಿಯ ಆಕಾರವಾಗಿ, ಅಥವಾ ತಾವರೆಮೊಗ್ಗೆಯ ಆಕಾರವಾಗಿ, ತನ್ನ ಎಡಕೈಯಿಂದ ಹಿಡಿದು ನಾಡಿಯ ರೂಪವನ್ನು ಚನ್ನಾಗಿ ಪರೀಕ್ಷಿಸಿ ನೋಡಬೇಕು.

ಪರಾ ರೋಗಿಯ ಕೈಯನ್ನು ಇದರಲ್ಲಿ ಹೇಳಿದಂತೆ ತುಮಿಯಲ್ಲಿ ಆಪಸಾ (೧) ಯಲ್ಲಿ ಹೇಳಿದಂತೆ ಬುಡದಲ್ಲಿ ಹೆಬ್ಬೆರಳಿನ ಸಮೀಪ ಹಿಡಿಯುವದು ಯುಕ್ತ ಸ್ತ್ರೀಯಾದರೂ ಎಡತಪ ಎತ್ತುಗೈಯಿಂದ ನಾಡಿಯ ಗತಿ ನೋಡುವಾಗ ದಂತೆ ಜಾಗ್ರತೆಯಿರಬೇಕು

(*f*) ವ್ಯಾಯಾಮತೃಷ್ಣಾತಪೀಡಿತಸ್ಯ ಬುಭುಕ್ಷಿತಾಯಾ ಭುಕ್ತವತೋ ನರಸ್ಯ ।
ನಾಡೀಪರೀಕ್ಷೆಗೆ ಯೋಗ್ಯವಲ್ಲದ ಅವಸ್ಥೆಗಳು
ಅಭ್ಯಂಜನಸ್ನಾನವಧೂಪಭೋಗಕ್ರಿಯಾಸು ನಾಡೀ ನ ಚ ಬೋಧಮೇತಿ ॥
(ವೈ ಸಾ ಸಂ 7.)

ವ್ಯಾಯಾಮ, ಬಾಯಾರಿಕೆ, ಬಿಸಿಲು, ಇವುಗಳಿಂದ ಪೀಡಿಸಲ್ಪಟ್ಟವನ, ಹಸಿದವನ, ಉಂಡವನ, ತೈಲ ಹಚ್ಚಿಕೊಂಡವನ, ಸ್ನಾನ ಮಾಡಿದವನ ಮತ್ತು ಸ್ತ್ರೀಭೋಗ ಮಾಡಿದವನ ನಾಡಿಯು ಸರಿಯಾದ ಪರೀಕ್ಷೆಗೆ ಸಿಕ್ಕುವದಿಲ್ಲ

(*g*) ಯಥಾ ವೀಣಾಗತಾ ತಂತ್ರೀ ರಾಗಂ ಭಕ್ತೆ ಯಥಾತಥಂ ।
ವೀಣೆಯ ಸಾಮ್ಯ ತಥಾ ಹಸ್ತಗತಾ ನಾಡೀ ರೋಗಾನ್ನಾನಾಪ್ರಧಾನಪಿ ॥ (ಗ್ರಂಥಾಂತರ)

ವೀಣೆಯೊಳಗಿನ ತಂತಿಯು ರಾಗಭೇದಗಳನ್ನು ಹ್ಯಾಗೆ ಯಥಾರ್ಥವಾಗಿ ತಿಳಿಸುತ್ತದೋ, ಹಾಗೆ ಕೈಯೊಳಗಿನ ನಾಡಿಯು ನಾನಾ ವಿಧವಾದ ರೋಗಗಳನ್ನು ತಿಳಿಸುತ್ತದೆ

(*h*) ತರ್ಜನ್ಯಾಂ ವಾತಧಮನೀ ಮಧ್ಯಮಾಯಾಂ ತು ಪಿತ್ತಲಾ ।
ಮೂರು ಬೆರಳುಗಳಿಗೆ ಸಿಕ್ಕುವ ನಾಡಿಗಳು ಬೇರೆ ಎಂಬದಕ್ಕೆ (ಗ್ರಂಥಾಂತರ)
ಅನಾಮಿಕ್ಯಾಂ ಕಫಾ ಚೇತಿ ಕ್ರಮೋಽಯಮೃಷಿಭಾಷಿತಂ ॥
(ಗ್ರಂಥಾಂತರ.)

ತರ್ಜನೀ ಬೆರಳಿನಲ್ಲಿ ವಾತನಾಡಿ, ಮಧ್ಯದ ಬೆರಳಿನಲ್ಲಿ ಪಿತ್ತನಾಡಿ ಮತ್ತು ಅನಾಮಿಕೆ ಬೆರಳಿನಲ್ಲಿ ಕಫನಾಡಿ ಎಂಬದು ಋಷಿಗಳಿಂದ ಹೇಳಲ್ಪಟ್ಟ ಕ್ರಮವಾಗಿರುತ್ತದೆ.

(*i*) ಪ್ರಕಟೀಕುರುತೇ ನಾಡೀ ಪಾಣಿಸ್ಥಾ ರೋಗಸಂಚಯಂ ।
ವಾತಾದ್ಯೇಕ್ರಗತಿರ್ನಾಡೀ ಚಪಲಾ ಪಿತ್ತವಾಹಿನೀ ॥
ವಾತಾದಿ ದೋಷಗಳಲ್ಲಿ ನಾಡೀ ಲಕ್ಷಣ (ಗ್ರಂಥಾಂತರ)
ಕಫಾನ್ಮಂದಾ ಚ ವಿಜ್ಞೇಯಾ ಮಿಶ್ರಿತಾ ದ್ವಂದ್ವಜಾ ಭವೇತ್ ।
ವಾತಾಧಿಕಾ ಭವೇದಗ್ರೇ ಮಧ್ಯೇ ವಹತಿ ಪಿತ್ತಲಾ ।
ಅಂತೇ ಶ್ಲೇಷ್ಮಾಧಿಕಾ ನಾಡೀ ಸನ್ನಿಪಾತೇ ತ್ರಿಲಕ್ಷಣಾ (ವೈ ಸಾ. ಸಂ 3.)

ಕೈಯ (ಹೆಬ್ಬೆರಳಿನ ಮೂಲದಲ್ಲಿರುವ) ನಾಡಿಯನ್ನು ಪರೀಕ್ಷಿಸಿ ನೋಡಲಾಗಿ ಅದು ಎಲ್ಲಾ ರೋಗಗಳನ್ನೂ ಪ್ರಕಟಿಸುವದು. ಆ ನಾಡಿ ವಾತಾಧಿಕವಾದರೆ ಡೊಂಕಾಗಿ ನಡೆಯುವದು, ಪಿತ್ತನಾಡಿಯು ಚಪಲವಾಗಿ ನಡೆಯುವದು, ಶ್ಲೇಷ್ಮನಾಡಿ ಮಂದವಾಗಿ ಆಡುತ್ತಿರುವದು; ವಾತಪಿತ್ತಾದಿ ದ್ವಂದ್ವಗಳಲ್ಲಿ ಎರಡರ ಲಕ್ಷಣಗಳಿಂದ ಕೂಡಿಕೊಂಡು ನಡೆಯುವದು;

ಮತ್ತು ತ್ರಿದೋಷಗಳು ಕೂಡಿದಾಗ, ಅದರಲ್ಲಿ ಮೂರು ವಿಧವಾದ ಲಕ್ಷಣಗಳು ಬೆರಸಿ ಇರುವವು. ವಾತಾಧಿಕವಾದ ನಾಡಿ ಮುಂಭಾಗದಲ್ಲಿ (ಹೆಬ್ಬೆರಳಿನ ಮೂಲದಲ್ಲಿ) ವೆಗ್ಗಳವಾಗಿ ನಡೆಯುವದು; ಪಿತ್ತಾಧಿಕವಾದಲ್ಲಿ ಮಧ್ಯನಾಡಿ ವೆಗ್ಗಳವಾಗಿ ನಡೆಯುವದು; ಶ್ಲೇಷ್ಮಾಧಿಕವಾದರೆ ಕಡೇ ನಾಡಿ ವಗ್ಗಳವಾಗಿ ನಡೆಯುವದು, ಮತ್ತು ಸನ್ನಿಪಾತದಲ್ಲಿ ಮೂರೂ ವೆಗ್ಗಳವಾಗಿ ನಡೆಯುವವು.

(ಗ) ಪಿತ್ತಶ್ಲೇಷ್ಮಗತಿರ್ನಾಸ್ತಿ ವಾತಸ್ಯ ಗಮನೇ ಗತಿಃ ।
ವಾತ ವಿನಾ ಪಿತ್ತಕಫಗಳಿಗೆ ಗತಿಯಿಲ್ಲ
ತಸ್ಮಾತ್ತ್ವಗ್ರೇ ವಹೇದ್ವಾಯುರ್ಜಲೂಕಾ ವಕ್ರಗಾ ಯಥಾ ॥ (ನಾ. ಪ್ರ. 20)

ಪಿತ್ತಕಫಗಳ ಗತಿಯು ವಾತದ ಗತಿಯ ಮೇಲೆ ಹೊಂದಿರುತ್ತದೆ. ವಾತ ಚಲಿಸಿದ ವಿನಾ ಅವುಗಳು ಚಲಿಸಲಾರವು ಆದ್ದರಿಂದ ವಾತನಾಡಿಯು, ಜಿಗಳೆಯಂತೆ ವಕ್ರಗತಿಯಿಂದ, ಮುಂದಿನ ಭಾಗದಲ್ಲಿ ಚಲಿಸುತ್ತಿರುವದು

(ಘ) ಮುಹುಃ ಸರ್ಪಗತಿರ್ನಾಡೀ ಮುಹುಶ್ಚೇಕಗತಿಸ್ತಥಾ ।
ವಾತಪಿತ್ತದ ನಾಡಿ (ಗ್ರಂಥಾಂತರ)
ವಾತಪಿತ್ತದ್ವಯೋದ್ಭೂತಾಂ ತಾಂ ವದಂತಿ ವಿಚಕ್ಷಣಾಃ ॥ (ಧ. 6)

ಪದೇ ಪದೇ ಸರ್ಪ (ವಕ್ರ) ಗತಿ, ಹಾಗೆಯೇ ಪದೇ ಪದೇ ಕಪ್ಪೆಯ (ಹಾರುವ) ಗತಿ, ಎರಡೂ ನಾಡಿಯಲ್ಲಿ ಕಂಡರೆ, ಅದು ವಾತಪಿತ್ತಗಳೆಂಬ ದ್ವಂದ್ವದೋಷದಿಂದ ಹುಟ್ಟಿದ್ದೆಂತ ಬುದ್ಧಿವಂತರು ಹೇಳುತ್ತಾರೆ.

(ಙ) ಭುಜಗಾದಿಗತಿಸ್ತಸ್ಯಾ ರಾಜಹಂಸಗತಿಸ್ತಥಾ ।
ಕಫವಾತದ ನಾಡಿ (ಗ್ರಂಥಾಂತರ)
ವಾತಶ್ಲೇಷ್ಮದ್ವಯೋದ್ಭೂತಾಂ ಭಾಷಂತೇ ತದ್ವಿದೋ ಜನಾಃ ॥
(ನಾ. ಪ್ರ. 21-2)

ಆ ನಾಡಿಯಲ್ಲಿ ಸರ್ಪಾದಿಗಳ (ವಕ್ರ) ಗತಿಯೂ, ಹಾಗೆಯೇ ರಾಜಹಂಸದ (ಮಂದ) ಗತಿಯೂ ಕಂಡರೆ, ಅದು ವಾತಶ್ಲೇಷ್ಮಗಳೆಂಬ ದ್ವಂದ್ವದೋಷದಿಂದುಂಟಾದದ್ದೆಂತ ಬಲ್ಲವರು ಹೇಳುತ್ತಾರೆ

(ಚ) ಮಂಡೂಕಾದಿಗತಿಂ ನಾಡೀಂ ಮಯೂರಾದಿಗತಿಂ ಧರಾಂ ।
ಪಿತ್ತಶ್ಲೇಷ್ಮಸಮುದ್ಭೂತಾಂ ಪ್ರವದಂತಿ ಮನೀಷಿಣಃ ॥
ಕಫ ಪಿತ್ತದ ನಾಡಿ (ಗ್ರಂಥಾಂತರ)
ಸೂಕ್ಷ್ಮಾ ಶೀತಾ ಸ್ಥಿರಾ ನಾಡೀ ಪಿತ್ತಶ್ಲೇಷ್ಮಸಮುದ್ಭವಾ । (ನಾ. ಪ್ರ. 22.)

ನಾಡಿಯಲ್ಲಿ (ಪಿತ್ತದ) ಮಂಡೂಕಾದಿಗತಿಯೂ, (ಕಫದ) ನವಿಲು ಮುಂತಾದವುಗಳ ಗತಿಯೂ ಕಂಡರೆ, ಅದು ಕಫಪಿತ್ತಗಳೆಂಬ ದ್ವಂದ್ವದೋಷದಿಂದುಂಟಾದದ್ದೆಂತ ಬುದ್ಧಿಶಾಲಿಗಳು ಹೇಳುತ್ತಾರೆ; ಕಫಪಿತ್ತದಲ್ಲಿ ನಾಡಿಯು ಸೂಕ್ಷ್ಮವಾಗಿಯೂ, ಶೀತವಾಗಿಯೂ, ಸ್ಥಿರವಾಗಿಯೂ ಕಾಣುವದು.

(*n*) ಭುಕ್ತ್ವಕ್ರೋಷ್ಟುಗತಿರ್ನಾಡೀ ಚಾಂಚಲ್ಯಗತಿಸಂಯುತಾ ।
ಸನ್ನಿಪಾತದ ನಾಡಿ (ಗ್ರಂಥಾಂತರ) ಸನ್ನಿಪಾತೋತ್ತರಾ ನಾಡೀ ಶೀತೋಷ್ಣಾ ಚ ಪ್ರವರ್ತತೇ ॥
(ವೈ. ಸಾ. ಸಂ. 4.)

ಸನ್ನಿಪಾತದ ನಾಡಿಯು ಮೇವು ತಿಂದ ನರಿಯಂತೆಯೂ, ಚಂಚಲವಾಗಿಯೂ, ಕ್ಷಣಕ್ಕೆ ಬಿಸಿ, ಕ್ಷಣಕ್ಕೆ ತಣ್ಣಗೆ, ಈ ರೀತಿಯಾಗಿಯೂ ನಡೆಯುವದು

(*o*) ಉಷ್ಣಸ್ಪರ್ಶಾತಿವೇಗಾ ಚ ಜ್ವರನಾಡೀ ನಿಗದ್ಯತೇ ;
ಜ್ವರದ ನಾಡಿ ಅಲ್ಪವೇಗಾ ಶೀತನಾಡೀ ತದಾ ಜೀರ್ಣಂ ವಿನಿರ್ದಿಶೇತ್ ॥
(ವೈ ಸಾ. ಸಂ. 3-)

ಜ್ವರದಲ್ಲಿ ನಾಡಿಯು ಬಿಸಿಯಾಗಿಯೂ, ಹೆಚ್ಚು ವೇಗವುಳ್ಳದ್ದಾಗಿಯೂ ಇರುವದು. ನಾಡಿಯ ವೇಗವು ಅಲ್ಪವಾಗಿ, ಮುಟ್ಟುವಿಕೆಗೆ ತಣ್ಣಗಾಗಿ ಕಂಡರೆ, ಜ್ವರವು ಜೀರ್ಣವಾಯಿತೆಂತ ತಿಳಿಯುವದು.

(*p*) ಅತಿತಪ್ತಾ ಸವೇಗಾ ಚ ಸನ್ನಿಪಾತೇ ಹ್ಯಸಾಧ್ಯಕೇ ।
ಅಸಾಧ್ಯ ಸನ್ನಿಪಾತದ ನಾಡಿ ಅತಿಸೂಕ್ಷ್ಮತರಾ ನಾಡೀ ಶೂನ್ಯಲಿಂಗಾ ತ್ರಿದೋಷಜಾ ॥
(ವೈ ಸಾ. ಸಂ. 4)

ತ್ರಿದೋಷಗಳಿಂದ ಹುಟ್ಟಿದ ಅಸಾಧ್ಯವಾದ ಸನ್ನಿಪಾತಜ್ವರದಲ್ಲಿ ನಾಡಿಯು ಅತಿಬಿಸಿಯಾಗಿಯೂ, ಅತಿವೇಗವುಳ್ಳದ್ದಾಗಿಯೂ, ಅತಿಸೂಕ್ಷ್ಮವಾಗಿಯೂ, ಶೂನ್ಯಲಕ್ಷಣವುಳ್ಳದ್ದಾಗಿ (ವಾತಾದಿ ಗತಿಭೇದ ತಿಳಿಯಲಸಾಧ್ಯವಾಗಿ)ಯೂ, ಇರುವದು

ಅತಿಸ್ಫುರತಿ ವೇಗಾಚ್ಚ ಅಂತರ್ದಾಹಾಪಿ ದೃಶ್ಯತೇ ।
ಶೀತಲಾ ಸ್ನಿಗ್ಧರೋಮಾ ಚ ಹಂತಿ ನಾಡೀ ಚ ರೋಗಿಣಂ ॥
(ವೈ ಸಾ. ಸಂ. 5)

ಒಳಗೆ ಉರಿಯಿದ್ದು, ರೋಮವು ಜಿಡ್ಡಾಗಿ, ನಾಡಿಯು ಶೀತವಾಗಿ ಅತಿವೇಗದಿಂದ ಹಾರುತ್ತಿದ್ದರೆ, ಆ ರೋಗಿಯು ಸಾಯುವನು.

(*q*) ಜ್ವರೋ ವಹ್ನಿಸಮೋಽತ್ಯರ್ಕಸಮಃ ಪಂಚದಿನಂ ಯದಿ ।
ಅಸಾಧ್ಯ ಜ್ವರದ ನಾಡಿ ಅತಿಶೀಘ್ರಾ ಯದಾ ನಾಡೀ ತದಾ ಮೃತ್ಯುಂ ವಿನಿರ್ದಿಶೇತ್ ॥
(ವೈ. ಸಾ. ಸಂ. 7.)

ಜ್ವರವು ಬೆಂಕಿಗೆ ಸಮವಾಗಿ, ಅಥವಾ ಅತಿಯಾದ ಸೂರ್ಯನ ಬಿಸಿಲಿಗೆ ಸಮವಾಗಿ, ಐದು ದಿನ ಕಾಡುಯಿದ್ದು, ನಾಡಿಯು ಅತಿವೇಗವಾಗಿ ನಡೆದರೆ, ಆ ರೋಗಿಯು ಸಾಯುವನೆಂದು ಹೇಳಬೇಕು

(r) ಕರ್ಕಶಾಂ ಕರಿನಾಮುಷ್ಣಾಂ ಸವೇಗಾಂ ಶೋಣಿತಾಶ್ರಯಾಂ ।
ಜ್ವರಾತಿಸಾರದ ನಾಡಿ ಮತ್ಸ್ಯವತ್ಪರಿವರ್ತಂತೀಂ ಜ್ವರಾತಿಸಾರಗಾಂ ವದೇತ್ ॥ (ವೈ. ಸಾ. ಸಂ 5.)

ಜ್ವರಾತಿಸಾರದಲ್ಲಿ ನಾಡಿಯು ರಕ್ತಧಾತುವನ್ನಾಶ್ರಯಿಸಿಕೊಂಡು, ಮುಳ್ಳುಮುಳ್ಳಾಗಿಯೂ, ಕರಿಣವಾಗಿಯೂ, ಬಿಸಿಯಾಗಿಯೂ, ವೇಗವುಳ್ಳದ್ದಾಗಿಯೂ, ಮೀನಿನಂತೆ ಚಲಿಸುವದು

(s) ಸುಪ್ತಸರ್ಪಸ್ಯ ಸಂಕಾಶಾ ಗ್ರಹಣ್ಯಾಂ ತು ವಿಷೂಚಿಜೇ ।
ಗ್ರಹಣೀ ವಿಷೂಚೀ ಕುಕ್ಷಿರೋಗ ಪಾಂಡುರೋಗಗಳಲ್ಲಿ ವಿಚಿತ್ರಾ ಕುಕ್ಷಿರೋಗೇ ತು ಸ್ಫುರಂತೀ ಪಾಂಡುರೋಗಿಣಾಂ ॥
(ವೈ. ಸಾ. ಸಂ. 5.)

ಗ್ರಹಣೀರೋಗದಲ್ಲಿ ನಿದ್ರೆಹೋದ ಸರ್ಪನ ಉಸುರಿನಂತೆಯೂ, ವಿಷೂಚೀ ಸಂಬಂಧವಾದ ಕುಕ್ಷಿರೋಗದಲ್ಲಿ ವಿಚಿತ್ರ(ವಿವಿಧ)ಗತಿಯುಳ್ಳದ್ದಾಗಿಯೂ, ಪಾಂಡುರೋಗದಲ್ಲಿ ಹೆದರಿ ಮೆಲ್ಲಗಾಗಿಯೂ ನಡೆಯುವದು

(t) ಭೇದೇನ ಶಾಂತಾ ಗ್ರಹಣೀಗದೇನ ನಿರ್ವೀರ್ಯರೂಪಾ ತ್ವತಿಸಾರಭೇದೇ ।
ಗ್ರಹಣೀ-ಆಮಾತಿಸಾರಗಳಲ್ಲಿ ವಿಲಂಬಿಕಾಯಾಂ ಪ್ಲವಗಾ ಕದಾಚಿತ್ ಆಮಾತಿಸಾರೇ ಪೃಥುಲಾ ಜಡಾ ಚ ॥
(ಧ. 8.)

ಭೇದಿಯಿಂದ ಆಯಾಸಪಟ್ಟವನ ಮತ್ತು ಗ್ರಹಣೀರೋಗದವನ ನಾಡಿಯು ಶಾಂತವಾಗಿಯೂ, ಅತಿಸಾರದಲ್ಲಿ ನಿರ್ವೀರ್ಯ(ಬಲಹೀನ)ದ್ದಾಗಿಯೂ, ವಿಲಂಬಿಕೆ ರೋಗದಲ್ಲಿ ಅಸ್ಥಿರವಾಗಿ ಕಪ್ಪೆಯ ಹಾರುವಿಕೆಯುಳ್ಳದ್ದಾಗಿಯೂ ಮತ್ತು ಆಮಾತಿಸಾರದಲ್ಲಿ ಪುಷ್ಟಿಯಾಗಿಯೂ, ಜಡವಾಗಿಯೂ, ನಡೆಯುವದು.

(u) ಶೀರ್ಣಾ ಚ ಕಾಮಿಲಾರೋಗೇ ಪಲ್ಯಾಭಾ ರಕ್ತಪಿತ್ತಜೇ ।
ಕಾಮಿಲೆ-ರಕ್ತಪಿತ್ತ-ಕಾಸಕ್ಷಯಗಳಲ್ಲಿ ಸಕಾಸಕ್ಷಯರೋಗೇ ತು ಜಲೂಕಾಭಗತಿಂ ಧರಾ ॥ (ವೈ. ಸಾ ಸಂ. 5.)

ನಾಡಿಯು ಕಾಮಿಲೆರೋಗದಲ್ಲಿ ಕ್ಷೀಣಿಸಿ ಬಾಡಿದ ಹಾಗೆ ಇರುವದು. ರಕ್ತಪಿತ್ತರೋಗದಲ್ಲಿ ಹಲ್ಲಿಯ ಹಾಗೆ ಓಡುವದು; ಮತ್ತು ಕೆಮ್ಮು ಕೂಡಿದ ಕ್ಷಯದಲ್ಲಿ ಜಿಗಳೆಯಂತೆ ಆಡುವದು.

(v) ಮಂದಂ ಮಂದಂ ಚ ವಹತೇ ಪ್ರಸುಪ್ತಾ ಚಾಗ್ನಿಮಾಂದ್ಯಕೇ ।
ಅಗ್ನಿಮಾಂದ್ಯದಲ್ಲಿ (ವೈ. ಸಾ. ಸಂ. 3)

ಅಗ್ನಿಮಾಂದ್ಯದಲ್ಲಿ ನಾಡಿಯು ಮೆಲ್ಲಮೆಲ್ಲನೆ ಬಲಹೀನವಾಗಿ (ನಿದ್ರೆಮಾಡಿದ ಹಾಗೆ) ನಡೆಯುವದು.

ಮಂದೇಽಗ್ನೌ ಕ್ಷೀಣತಾಂ ಯಾತಿ ನಾಡೀ ಹಂಸಾಕೃತಿಸ್ತಥಾ ॥ (ನಾ. ಪ್ರ. 37.)

ಅಗ್ನಿ ಮಂದವಾದಾಗ್ಗೆ ನಾಡಿಯು ಕ್ಷೀಣವಾಗಿ ಹಂಸಪಕ್ಷಿಯಂತೆ ಮೆಲ್ಲಮೆಲ್ಲನೆ ನಡೆಯುವದು.

(*w*) ಸುಖಿತಸ್ಯ ಸ್ಥಿರಾ ಜ್ಞೇಯಾ ಚಪಲಾ ಕ್ಷುಧಿತಸ್ಯ ಸಾ ।
ಹಸಿವು-ಮಂದಾಗ್ನಿ ಮತ್ತು ಧಾತುಕ್ಷೀಣತೆಗಳಲ್ಲಿ ಮಂದಾಗ್ನೇಃ ಕ್ಷೀಣಧಾತೋಶ್ಚ ನಾಡೀ ಮಂದತರಾ ಭವೇತ್ ॥ (ನಾ. ಪ್ರ. 37.)

ಸುಖವಂತನ ನಾಡಿಯು ಸ್ಥಿರವಾಗಿಯೂ, ಹಸಿದವನ ನಾಡಿಯು ಚಪಲವಾಗಿಯೂ, ಅಗ್ನಿಮಾಂದ್ಯವಾದವನ ಮತ್ತು ಧಾತುಕ್ಷೀಣವಾದವನ ನಾಡಿಯು ಹೆಚ್ಚು ಮಂದವಾಗಿಯೂ, ಇರುವದೆಂದು ತಿಳಿಯಬೇಕು.

(*x*) ಜ್ವರಕೋಪೇನ ಧಮನೀ ಸೋಷ್ಣಾ ವೇಗವತೀ ಭವೇತ್ ।
ಜ್ವರದ ಬಿಸಿಗೆ ಕಾರಣ ಉಷ್ಣಂ ಪಿತ್ತಾದೃತೇ ನಾಸ್ತಿ ಜ್ವರೋ ನಾಸ್ತ್ಯುಷ್ಣಾ ಏನಾ ॥ (ಧ. 7.)

ಜ್ವರದಲ್ಲಿ ನಾಡಿಯು ಬಿಸಿಯಾಗಿಯೂ ವೇಗವುಳ್ಳದ್ದಾಗಿಯೂ ಇರುವದು. ಪಿತ್ತವಿಲ್ಲದೆ ಬಿಸಿಯಿಲ್ಲ; ಮತ್ತು ಬಿಸಿಯಿಲ್ಲದೆ ಜ್ವರವಿಲ್ಲ.

(*y*) ಸೌಮ್ಯಾ ಸೂಕ್ಷ್ಮಾ ಸ್ಥಿರಾ ಮಂದಾ ನಾಡೀ ಸಹಜವಾತಜಾ ।
ವಾತಜ್ವರದ ನಾಡಿ (ಗ್ರಂಥಾಂತರ) ಸ್ಥೂಲಾ ಚ ಕಠಿನಾ ಶೀಘ್ರಾ ಸ್ಪಂದತೇ ತೀವ್ರಮಾರುತೇ ॥
ವಕ್ರಾ ಚ ಚಪಲಾ ಶೀತಸ್ಪರ್ಶಾ ವಾತಜ್ವರೇ ಭವೇತ್ । (ಧ. 7.)

ವಾತನಾಡಿಯು ಸಹಜವಾಗಿ ಸೌಮ್ಯ, ಸೂಕ್ಷ್ಮ, ಸ್ಥಿರ ಮತ್ತು ಮಂದ. ವಾತವು ಹೆಚ್ಚು ಪ್ರಕೋಪಗೊಂಡಾಗ್ಗೆ ನಾಡಿಯು ಸ್ಥೂಲವಾಗಿಯೂ, ಕಠಿಣವಾಗಿಯೂ, ಶೀಘ್ರವಾಗಿಯೂ, ಆಡುವದು, ಮತ್ತು ವಾತಜ್ವರದಲ್ಲಿ ವಕ್ರವಾಗಿಯೂ, ಚಪಲವಾಗಿಯೂ, ಸ್ಪರ್ಶಕ್ಕೆ ಶೀತವಾಗಿಯೂ, ಇರುವದು

(*z*) ದ್ರುತಾ ಚ ಸರಲಾ ದೀರ್ಘಾ ಶೀಘ್ರಾ ಪಿತ್ತಜ್ವರೇ ಭವೇತ್ ।
ಪಿತ್ತಜ್ವರದ ನಾಡಿ ಶೀಘ್ರಮಾಹನನಂ ನಾಡ್ಯಾಃ ಕಾರಿನ್ಯಾಚ್ಚಲತೇ ತಥಾ ॥ (ಧ. 7.)

ಪಿತ್ತಜ್ವರದಲ್ಲಿ ನಾಡಿಯು ಸರಲವಾಗಿಯೂ, ಉದ್ದವಾಗಿಯೂ, ವೇಗವುಳ್ಳದ್ದಾಗಿಯೂ, ಅ ವಸರದಿಂದ ನಡೆಯುವದಲ್ಲದೆ, ನಾಡಿಯ ಪೆಟ್ಟು ಶೀಘ್ರವಾಗಿಯೂ ಕಠಿನವಾಗಿಯೂ ಇರುವದು.

(*aa*) ನಾಡೀ ತಂತುಸಮಾ ಮಂದಾ ಶೀತಲಾ ಶ್ಲೇಷ್ಮದೋಷಜಾ ।
ಕಫಜ್ವರದ ನಾಡಿ (ಧ. 7.)

ಕಫಜ್ವರದಲ್ಲಿ ನಾಡಿಯು ನೂಲಿಗೆ ಸದೃಶವಾಗಿಯೂ, ಮಂದವಾಗಿಯೂ, ಸ್ವಲ್ಪ ಶೀತವಾಗಿಯೂ ಇರುವದು.

(*bb*) ಚಂಚಲಾ ತರಲಾ ಸ್ಥೂಲಾ ಕಠಿನಾ ವಾತಪಿತ್ತಜಾ ।
ವಾತಪಿತ್ತದ ನಾಡಿ (ಧ. 7.)

ವಾತಪಿತ್ತದಲ್ಲಿ ನಾಡಿಯು ಚಂಚಲವಾಗಿಯೂ, ನಡುಕು ಉಳ್ಳದ್ದಾಗಿಯೂ, ಸ್ಥೂಲವಾಗಿಯೂ, ಕಠಿಣವಾಗಿಯೂ, ಇರುವದು.

(*cc*) ಈಷಚ್ಚ ದೃಶ್ಯತೇ ತೂಷ್ಣಾ ಮಂದಾ ಸ್ಯಾಚ್ಛ್ಲೇಷ್ಮವಾತಜಾ ।
ಕಫವಾತದ ನಾಡಿ ನಿರಂತರಂ ಖರಂ ಸೂಕ್ಷ್ಮಂ ಮಂದಶ್ಲೇಷ್ಮಾ ವಿನಾಬಲಂ* ॥
ರೂಕ್ಷವಾತೇ ಭವೇತ್ತಸ್ಯ ನಾಡೀ ಸ್ಯಾತ್ಪಿತ್ತಸನ್ನಿಭಾ ॥ (ಧ. 7.)

*'ವಿನಾಬಲಂ' ಎಂಬಲ್ಲಿ 'ತಿವಾತಲಂ' ಎಂಬ ಪಾಠಾಂತರ ಕಾಣುತ್ತದೆ

ಕಫವಾತದಲ್ಲಿ ನಾಡಿಯು ಅಲ್ಪ ಉಷ್ಣತೆಯುಳ್ಳದ್ದಾಗಿಯೂ, ಮಂದವಾಗಿಯೂ ಇರುವದು; ಕಫವು ಮಂದವಾಗಿ, ವಾತವು ಬಲವಾದಾಗ್ಗೆ, ನಿರಂತರವಾಗಿಯೂ, ಖರ, ಸೂಕ್ಷ್ಮ ಮತ್ತು ಬಲಹೀನವಾಗಿರುವದು. ವಾತವು ರೂಕ್ಷವಾದಾಗ್ಗೆ ನಾಡಿಯು ಪಿತ್ತನಾಡಿಗೆ ಹೋಲುವದು

(*dd*) ಸೂಕ್ಷ್ಮಾ ಶೀತಾ ಸ್ಥಿರಾ ನಾಡೀ ಪಿತ್ತಶ್ಲೇಷ್ಮಸಮುದ್ಭವಾ ॥
ಕಫಪಿತ್ತದಲ್ಲಿ. (ಧ 7.)

ಕಫಪಿತ್ತದಲ್ಲಿ ನಾಡಿಯು ಸೂಕ್ಷ್ಮವಾಗಿಯೂ, ಶೀತವಾಗಿಯೂ, ಸ್ಥಿರವಾಗಿಯೂ ಇರುವದು.

(*ee*) ಭೂತಜ್ವರೇ ಸೇಕ ಇವಾತಿವೇಗಾತ್
ಭೂತಜ್ವರದಲ್ಲಿ ಧಾವಂತಿ ನದ್ಯೋ ಹಿ ಯಥಾಬ್ಧಿಗಾಮಾಃ ॥ (ನಾ. ಪ್ರ. 31.)

ಭೂತಜ್ವರದಲ್ಲಿ ನಾಡಿಗಳು ಸಮುದ್ರಕ್ಕೆ ಹೋಗುವ ನದಿಗಳಂತೆ ಅತಿವೇಗದಿಂದ ಧಾರೆಯಾಗಿ ಓಡುವವು.

(*ff*) ಏಕಾಹಿಕೇನ ಕ್ವಚನ ಪ್ರದೂರೇ ಕ್ಷಣಾಂತಗಾಮಾ ವಿಷಮಜ್ವರೇಣ ।
ವಿಷಮಜ್ವರದಲ್ಲಿ ದ್ವಿತೀಯಕೇ ವಾಪಿ ತೃತೀಯತುರ್ಯೇ ಗಚ್ಛಂತಿ ತಪ್ತಾ ಭ್ರಮಿವತ್ಕ್ರಮೇಣ ॥
(ಧ. 7.)

ಏಕಾಹಿಕ ವಿಷಮಜ್ವರದಲ್ಲಿ ನಾಡಿಗಳು ತಮ್ಮ ಸ್ಥಾನ ಬಿಟ್ಟು ಸ್ವಲ್ಪ ದೂರದಲ್ಲಿ ಕ್ಷಣಕಾಲ ನಿಂತು ನಡೆಯುವವು. ದ್ವಿತೀಯಕ, ತೃತೀಯಕ, ಚಾತುರ್ಥಿಕ ಜ್ವರಗಳಲ್ಲಿ ನಾಡಿಗಳು ಬಿಸಿಯಾಗಿ ಚಕ್ರದಂತೆ ಸುತ್ತುತ್ತಾ ಚಲಿಸುವವು.

(*gg*) ಉದ್ವೇಗಕ್ರೋಧಕಾಮೇಷು ಭಯಚಿಂತಾಶ್ರಮೇಷು ಚ ।
ಉದ್ವೇಗ, ಸಿಟ್ಟು, ಮುಂತಾದ ಭಾವಗಳಲ್ಲಿ ಭವೇತ್ಕ್ಷೀಣಗತಿರ್ನಾಡೀ ಜ್ಞಾತವ್ಯಾ ವೈದ್ಯಸತ್ತಮೈಃ ॥ (ಧ. 7.)

ಉದ್ವೇಗ (ಗಾಬರಿ), ಸಿಟ್ಟು, ಕಾಮ, ಭಯ, ಚಿಂತೆ, ದಣಿಕೆ, ಇವುಗಳಿಂದ ನಾಡಿಗೆ ಕ್ಷೀಣಗತಿ ಉಂಟಾಗುವದೆಂದು ವೈದ್ಯೋತ್ತಮರು ತಿಳಿಯತಕ್ಕದ್ದು

(*hh*) ಅಜೀರ್ಣೇ ತು ಭವೇನ್ನಾಡೀ ಕಠಿನಾ ಪರಿತೋ ಜಡಾ ।
ಅಜೀರ್ಣದಲ್ಲಿ ಪ್ರಸನ್ನಾ ತು ದ್ರುತಾ ಶುದ್ಧಾ ತ್ವರಿತಾ ಚ ಪ್ರವರ್ತತೇ ॥ (ನಾ. ಪ್ರ. 36.)

ಅಜೀರ್ಣರೋಗದಲ್ಲಿ ನಾಡಿಯು ಸಾಧಾರಣವಾಗಿ ಕಠಿಣವಾಗಿಯೂ, ಜಡವಾಗಿಯೂ ಇರುತ್ತದಾದರೂ, ಕಲವು ವೇಳೆ ಬೇಗಬೇಗನೇ ಬಡದು ಪ್ರಸನ್ನವಾಗಿಯೂ, ಶುದ್ಧವಾಗಿಯೂ, ತ್ವರಿತವಾಗಿಯೂ ಚಲಿಸುವದು

(*ii*) ಪಕ್ವಾಜೀರ್ಣೇ ಪುಷ್ಟಿಹೀನಾ ಮಂದಂ ಮಂದಂ ವಹೇಜ್ಜಡಾ ।
ಪಕ್ವಾಜೀರ್ಣದಲ್ಲಿ (ಧ 8)

ಪಕ್ವಾಜೀರ್ಣರೋಗದಲ್ಲಿ ನಾಡಿಯು ಸಪೂರವಾಗಿಯೂ, ಜಡವಾಗಿಯೂ, ಮೆಲ್ಲ ಮೆಲ್ಲನೆ ಚಲಿಸುವದು

(*jj*) ಅಸೃಕ್ಪೂರ್ಣಾ ಭವೇತ್ಕ್ಷೀಪ್ತಾ ಗುರ್ವೀ ಸಾಮಾ
ರಕ್ತಾಘಾತ್ಯದಲ್ಲಿ ಮತ್ತು ಸಾಮದಲ್ಲಿ ಗರೀಯಸೀ । (ಧ 8)

ರಕ್ತದಿಂದ ತುಂಬಿದಾಗ್ಗೆ ನಾಡಿಯು ಸ್ವಲ್ಪ ಬಿಸಿಯಾಗಿಯೂ, ಗುರುವಾಗಿಯೂ, ಇರುವದು ಸಾಮದೋಷದಲ್ಲಿ ಮತ್ತಷ್ಟು ಗುರುವಾಗಿರುವದು

(*kk*) ಲಘ್ವೀ ಭವತಿ ದೀಪ್ತಾಗ್ನೇಸ್ತಥಾ ವೇಗವತೀ ಮತಾ । (ಧ. 8)
ದೀಪ್ತಾಗ್ನಿಯಲ್ಲಿ

ಅಗ್ನಿಯು ಚುರುಕಾದಾಗ್ಗೆ ನಾಡಿಯು ಲಘುವಾಗಿ, ವೇಗದಿಂದ ಚಲಿಸುವದು.

(*ll*) ನಿರೋಧೇ ಮೂತ್ರಶಕೃತೋರ್ವಿಡ್ಗ್ರಹೇ ತ್ವತಿಗುರ್ಪಣೀ ।
ಮಲಮೂತ್ರಗಳ ತಡೆಯಲ್ಲ ಮತ್ತು ವಿಷೂಚಿಯಲ್ಲಿ ವಿಷೂಚಿಕಾಘಭೂತೇ ಚ ಭವಂತಿ ಫೇಕವತ್ ಕ್ರಮಾಃ ॥ (ಧ. 8.)

ಮಲಮೂತ್ರಗಳನ್ನು ತಡೆದರ, ಅಥವಾ ಮಲಬದ್ಧದಲ್ಲಿ ನಾಡಿಯು ಅತಿಗುರುವಾಗಿರುವದು. ವಿಷೂಚಿಪೀಡೆಯಲ್ಲಿ ನಾಡಿಗತಿಗಳು ಕಪ್ಪೆಯಂತ ಆಗಿರುವವು

(*mm*) ಆನಾಹೇ ಮೂತ್ರಕೃಚ್ಛ್ರೇ ಚ ಭವೇನ್ನಾಡೀ ಗರಿಷ್ಠತಾ ।
ಆನಾಹ ಮತ್ತು ಮೂತ್ರಕೃಚ್ಛ್ರಗಳಲ್ಲಿ (ನಾ ಪ್ರ. 38)

ಆನಾಹದಲ್ಲಿಯೂ, ಮೂತ್ರಕೃಚ್ಛ್ರದಲ್ಲಿಯೂ, ನಾಡಿಯು ಅತ್ಯಂತ ಗುರುವಾಗಿರುವದು.

(*nn*) ವಾತೇನ ಶೂಲೇನ ಮರುತ್ಪ್ಲವೇನ ।
ವಾತಶೂಲೆಯಲ್ಲಿ ಸದೈವ ವಕ್ರಾ ಹಿ ಶಿರಾ ವಹಂತಿ ॥ (ಧ. 8.)

ವಾತದಲ್ಲಿಯೂ, ವಾತದ ಶೂಲೆಯಲ್ಲಿಯೂ, ನಾಡಿಯು ಯಾವಾಗಲೂ ವಕ್ರವಾಗಿ ಚಲಿಸುವದು.

(*oo*) ಜ್ವಾಲಾವಮಿಶಾ ಪಿತ್ತವಿಚೇಷ್ಟಿತೇನ ।
ಪಿತ್ತಶೂಲೆ ಮತ್ತು ಆಮಶೂಲೆಗಳಲ್ಲಿ ಸಾಮೇನ ಶೂಲೇನ ಚ ಪುಷ್ಪರೂಪಾ ॥ (ನಾ. ಪ್ರ, 39.)

ಪಿತ್ತದ ಶೂಲೆಯಲ್ಲಿ ನಾಡಿಯು ಅತಿಬಿಸಿಯಾಗಿಯೂ, ಆಮಯುಕ್ತವಾದ ಶೂಲೆಯಲ್ಲಿ ನಾಡಿಯು ಪುಷ್ಟಿಯಾಗಿಯೂ, ಇರುವದು.

(*pp*) ಪ್ರಮೇಹೇ ಗ್ರಂಥಿರೂಪಾ ಚ ಪ್ರಸುಪ್ತಾ ಚಾಮದೂಷಣೇ ॥
ಪ್ರಮೇಹದಲ್ಲಿ ಮತ್ತು ಆಮದೋಷದಲ್ಲಿ (ನಾ. ಪ್ರ 39.)

ಪ್ರಮೇಹದಲ್ಲಿ ಆ ನಾಡಿಯು ಗಂಟಾಗಿಯೂ, ಆಮದೋಷದಲ್ಲಿ ಬಹಳ ನಿದ್ರೆಮಾಡಿದಂತೆ ಜಡವಾಗಿಯೂ ಇರುತ್ತದೆ.

(*qq*) ಗುಲ್ಮೇನ ಕಂಪಾಧ* ಪರಾಕ್ರಮೇಣ ।
ಗುಲ್ಮ-ಕಂಪ-ಪರಾಕ್ರಮಗಳಲ್ಲಿ ಪಾರಾವತಸ್ಯೇವಗತಿಂ ಕರೋತಿ ॥ (ಧ. ೪)

ಗುಲ್ಮದಲ್ಲಿ ನಾಡಿಯು ಕಂಪವುಳ್ಳದ್ದಾಗಿ ಪರಾಕ್ರಮದಿಂದ ಪಾರಿವಾಳದಂತೆ ಗತಿಸುವದು.

*ಪರಾ 'ಕಂಪೇನ' ಎಂಬ ಪಾಠಾಂತರವಿಟ್ಟರೂ ಇದೇ ಅರ್ಥ

(*rr*) ವ್ರಣಾರ್ಧಂ ಖರಿನೇ ದೇಹೇ ಧಾವಂತೀ* ಪೈತ್ತಿಕಂ ಕ್ರಮಂ ।
ಭಗಂದರ ನಾಡಿ ವ್ರಣಾದಿಗಳಲ್ಲಿ ಭಗಂದರಾನುರೂಪೇಣ ನಾಡೀ ವ್ರಣನಿವೇದನೇ ॥
ಪ್ರಯಾತಿ ವಾತಿಕಂ ರೂಪಂ ನಾಡೀ ಪಾವಕರೂಪಿಣೀ ॥ (ಧ. 8.)

*'ಪ್ರಯಾತಿ' ಎಂಬ ಪಾಠವೂ ಕಾಣುತ್ತದೆ

ಕಠಿಣವಾದ ದೇಹದಲ್ಲಿ ವ್ರಣವುಂಟಾದಾಗ್ಗೆ ನಾಡಿಯು ಪಿತ್ತಗತಿಯನ್ನೂ ಹೊಂದುವದು; ಭಗಂದರದಲ್ಲಿಯೂ, ನಾಡೀವ್ರಣದಲ್ಲಿಯೂ ನಾಡಿಯು ಬಿಸಿಯಾಗಿಯೂ, ವಾತದ ಗತಿಯುಳ್ಳದ್ದಾಗಿಯೂ ಇರುವದು.

(*ss*) ವಾಂತಸ್ಯ ಶಲ್ಯಾಭಿಹತಸ್ಯ ಜಂತೋ ।
ವಾಂತಿ ಮೊದಲಾದ ಬಾಧೆಗಳಲ್ಲಿ ವೇಗಾವರೋಧಾಕುಲಿತಸ್ಯ ಭೂಯಃ ।
ಗತಿಂ ವಿಧತ್ತೇ ಧಮನೀ ಗಜೇಂದ್ರ ।
ಮರಾಲಮಾನೇವ ಕಫೋಲ್ಬಣೇನ ॥ (ಧ. 8.)

ವಾಂತಿಮಾಡಿದವನ, ಶಲ್ಯ ತಾಗಿದವನ, ಮತ್ತು (ಮಲಮೂತ್ರಾದಿಗಳ) ವೇಗದ ತಡೆಯಿಂದ ಪೀಡಿತನಾದವನ, ನಾಡಿಯು ಕಫವೃದ್ಧಿಯಿಂದ, ಆನೆ ಮತ್ತು ಹಂಸಗಳಂತೆ, ಮಂದವಾಗಿರುವದು.

(*tt*) ಯಾತ್ಯುಚ್ಚಕಾ* ಸ್ಥಿರಾತ್ಯಂತಾ ಯಾ ಚೇಯಂ ಮಾಂಸವಾಹಿನೀ ।
ಅಸಾಧ್ಯ ರೋಗಗಳಲ್ಲಿ ಯಾ ಚ ಸೂಕ್ಷ್ಮಾ ಚ ವಕ್ರಾ ಚ ತಾಮಸಾಧ್ಯಾಂ ವಿದುರ್ಬುಧಾಃ ॥
(ನಾ. ಪ್ರ. 23.)

*'ಯಾ ತೂಚ್ಚಾ ಚ' ಎಂಬ ಪಾಠಾಂತರ ಉಂಟು

ಯಾವ ನಾಡಿಯು ಅತಿ ಎತ್ತರವಾಗಿಯೂ ಮತ್ತು ಅತ್ಯಂತ ಸ್ಪಿರವಾಗಿಯೂ ಜಲಿಸುತ್ತದೋ, ಯಾವದು ಮಾಂಸದಂತೆ ಗಟ್ಟಿಯಾಗಿ ಕಾಣುತ್ತದೋ, ಯಾವದು ಸೂಕ್ಷ್ಮ ಮತ್ತು ವಕ್ರವಾಗಿರುವದೋ, ಅದು ಅಸಾಧ್ಯಲಕ್ಷಣವೆಂದು ಸುಜ್ಞರು ತಿಳಿಯುತ್ತಾರೆ.

(ಟಿ) ಪ್ರಮೇಹೇ ಚ ಸಮುತ್ಪನ್ನೇ ಶೂಲಕ್ಷಯಸಮುದ್ಭವೇ ।
ಪ್ರಮೇಹ ಮತ್ತು ಶೂಲಕ್ಷಯದಲ್ಲಿ ಕರಿನಾ ಸ್ಫುರಿತಾ ನಾಡೀ ವೇಗಾಚ್ಚಾಖುಗತೋಪಮಾ ॥
(ವೈ. ಸಾ ಸಂ. 5)

ಪ್ರಮೇಹರೋಗದಲ್ಲಿ ಮತ್ತು ಶೂಲ ಕೂಡಿದ ಕ್ಷಯದಲ್ಲಿ ನಾಡಿಯು ಕಠಿಣವಾಗಿ, ವೇಗದಲ್ಲಿ ಇಲಿಯ ಗತಿಗೆ ಸದೃಶವಾಗಿ, ಹಾರುತ್ತಿರುವದು.

(ಠಿ) ಕರೇ ನಾಡ್ಯಾಂ ಯದಾ ವೇಗೋ ದೃಶ್ಯತೇ ನೈವ ಪಾದಯೋಃ ।
ಅದೇ ದಿನದ ಮೃತ್ಯುಸೂಚಕ ನಾಡಿ ತದಾ ದಿನಸ್ಯ ಮಧ್ಯೇ ತು ರೋಗಿಣೋ ಮರಣಂ ಭವೇತ್ ॥
(ವೈ ಸಾ ಸಂ ೪.)

ಕೈನಾಡಿಯು ವೇಗವುಳ್ಳದ್ದಾಗಿದ್ದು, ಪಾದಗಳಲ್ಲಿ ನಾಡಿಯು ಕಾಣದೆ ಹೋದರೆ, ಆ ದಿನದ ಮಧ್ಯದಲ್ಲಿಯೇ ರೋಗಿಯ ಮರಣವು ಸಂಭವಿಸುವದು.

(ಡಿಡಿ) ಚರಣೇತಿ ವಾಮಸ್ಯ ತು ದಕ್ಷಿಣಗ್ರಂಥಿಪಶ್ಚಾತ್ ಪಾರ್ಶ್ವಸ್ಥಾ । ದಕ್ಷಿಣಸ್ಯ ತು
ಪಾದದ ನಾಡೀ ಸ್ಥಾನ ವಾಮಗ್ರಂಥಿಪಶ್ಚಾತ್‌ಪಾರ್ಶ್ವಸ್ಥೆವ ಸದುಪದೇಶಾತ್ ॥
(ಶಬ್ದಕಲ್ಪದ್ರುಮ.)

ಪಾದದ ನಾಡಿ ಎಂಬದು ಎಡಪಾದದ ಬಲಪಾರ್ಶ್ವದ ಗಂಟಿನ ಹಿಂಭಾಗದಲ್ಲಿ (ಹೆಂಗಸಿನ ವಿಷಯ) ಮತ್ತು ಬಲಪಾದದ ಎಡಪಾರ್ಶ್ವದ ಗಂಟಿನ ಹಿಂಭಾಗದಲ್ಲಿ (ಗಂಡಸರ ವಿಷಯ) ಇರುವಂಥಾದ್ದೆಂತ ಸದುಪದೇಶವಿರುತ್ತದೆ.

(ಡಿಟಿ) ಪ್ರಾತಃ ಶ್ಲೇಷ್ಮಗತಿರ್ನಾಡೀ ಮಧ್ಯಾಹ್ನೇ ಪಿತ್ತನಾಡಿಕಾ ।
ಅಪರಾಹ್ಣೇ ವಾತನಾಡೀ ಪುನಃ ಪಿತ್ತಾ ನಿಶಾರ್ಧಕೇ ॥
ನಾಡಿಯಲ್ಲಿ ಕಾಲಭೇದ ಅನುಲೋಮವಿಲೋಮೇ ಚ ವಿಕೃತಿಂ ಚೈವ ಲಕ್ಷಣಂ ।
ಆಲೋಚ್ಯ ಶಾಸ್ತ್ರಭೇದೇನ ತತಃ ಪಶ್ಯನ್ ಚಿಕಿತ್ಸಯೇತ್ ॥
(ವೈ. ಸಾ. ಸಂ. 8.)

ಹಗಲಲ್ಲೂ, ರಾತ್ರಿಯಲ್ಲೂ ಪ್ರಥಮ 10 ಗಳಿಗೆ ಕಫಕಾಲವೆಂತಲೂ, ಮಧ್ಯದ 10 ಗಳಿಗೆ ಪಿತ್ತಕಾಲವೆಂತಲೂ, ಕಡೇ 10 ಗಳಿಗೆ ವಾತಕಾಲವೆಂತಲೂ, ನೆನಪಿನಲ್ಲಿಟ್ಟು, ಅದಕ್ಕೆ ಅನುಸರಿಸಿರುವ ಸ್ವಸ್ಥನಾಡಿಗತಿಯನ್ನೂ, ವಿರೋಧವಾಗಿರುವ ವಿಕಾರ ಹೊಂದಿದ ನಾಡಿಗತಿಯನ್ನೂ, ಶಾಸ್ತ್ರಭೇದದಿಂದ ಆಲೋಚಿಸಿ, ಅನಂತರ ವಿಚಾರದಿಂದ ಚಿಕಿತ್ಸೆಮಾಡತಕ್ಕದ್ದು.

(yy) ಸ್ಥೂಲಾ ಚ ಮಧುರೇ ಮುಂದಾ ಮಂಡೂಕಸ್ಯ ಗತಿಂ ಧರಾ ।
ಆಹಾರಭೇದದಿಂದ ನಾಡೀಭೇದ ಅಮ್ಲೇ ಸ್ನಿಗ್ಧಾ ಸವೇಗಾ ಚ ಜಲಕಾಕಗತಿಂ ಧರಾ ॥ (ವೈ. ಸಾ. ಸಂ. 6.)

ಸೀಯಾದ ಆಹಾರವನ್ನು ಸೇವಿಸಿದವನ ನಾಡಿಯು ದಪ್ಪವಾಗಿಯೂ, ಮೆಲ್ಲಗಾಗಿಯೂ, ಕಪ್ಪೆಯಂತೆ ಹಾರುತ್ತಿರುವದು ಹುಳಿಯಾದ ಆಹಾರವನ್ನು ಭುಂಜಿಸಿದವನ ನಾಡಿಯು ವೇಗವುಳ್ಳದ್ದಾಗಿಯೂ, ಜಿಡ್ಡುಳ್ಳದ್ದಾಗಿಯೂ, ನೀರುಕಾಗೆಯಂತೆ ಓಡುತ್ತಿರುವದು.

ಕ್ಷಾರೇ ಸ್ವೇದಯುತಾ ವೇಗಾತ್ಸ್ಫುಷ್ಣಾ ಖಂಜಗತಿಂ ಧರಾ ।
ಕಷಾಯೇ ಚ ಮಹಾಸೂಕ್ಷ್ಮಾ ರಾಜಹಂಸಗತಿಂ ಧರಾ ॥ (ವೈ ಸಾ. ಸಂ. 6)

ಉಪ್ಪು ಮೊದಲಾದ ಕ್ಷಾರಗಳನ್ನು ಅತಿಯಾಗಿ ಭುಂಜಿಸಿದರೆ, ನಾಡಿಯು ಬೆವರುತ್ತಾ, ವೇಗವುಳ್ಳದ್ದಾಗಿ ಮತ್ತು ಅತಿಬಿಸಿಯಾಗಿ ಮೋಟನ ನಡಿಕೆಯಂತೆ ಚಲಿಸುವದು. ಜೊಗರು ಪದಾರ್ಥಗಳನ್ನು ಅಧಿಕವಾಗಿ ಭುಂಜಿಸಿದವನ ನಾಡಿಯು ಬಹಳ ಸಪೂರವಾಗಿ ರಾಜಹಂಸದಂತೆ ಸಮಾಧಾನವಾಗಿ ಚಲಿಸುವದು

ಮತಾಂತರ.

ಮಧುರೇ ಬರ್ಹಿಗಮನಾ ತಿಕ್ತೇ ಸ್ಯಾತ್ ಸ್ಥೂಲತಾಗತಿಃ ।
ಅಮ್ಲೇ ಕೋಷ್ಣಾ ಪ್ಲವಗತಿಃ ಕಟುಕೈರ್ಭೃಂಗಸನ್ನಿಭಾ ॥
ಕಷಾಯೇ ಕರಿನಾ ಮ್ಲಾನಾ ಲವಣೇ ಸರಲಾ ದ್ರುತಾ ।
ಏವಂ ದ್ವಿತ್ರಿಚತುರ್ಯೋಗೇ ನಾನಾಧರ್ಮವತೀ ಧರಾ ॥ (ನಾ. ಪ್ರ 30)

ನಾಡಿಯು ಮಧುರ ಆಹಾರವನ್ನು ಅತಿಯಾಗಿ ಭುಂಜಿಸಿದರೆ ನವಿಲಿನ ಗತಿಯುಳ್ಳದ್ದಾಗಿರುವದು, ಕಹಿಪದಾರ್ಥಗಳನ್ನು ಅತಿಯಾಗಿ ಉಪಯೋಗಿಸಿಕೊಂಡದರಿಂದ ಸ್ಥೂಲಗತಿಯುಳ್ಳದ್ದಾಗಿಯೂ, ಹುಳಿಯಿಂದ ಸ್ವಲ್ಪ ಬಿಸಿಯಾಗಿ ಕಪ್ಪೆಯ ಗತಿಯುಳ್ಳದ್ದಾಗಿಯೂ, ಖಾರದ ಪದಾರ್ಥಗಳಿಂದ ಭ್ರಮರಗತಿಯುಳ್ಳದ್ದಾಗಿಯೂ, ಜೊಗರುಪದಾರ್ಥಗಳಿಂದ ಕರಿಣವಾಗಿ ಬಾಡಿದ ಹಾಗಿನ ಗತಿಯುಳ್ಳದ್ದಾಗಿಯೂ, ಉಪ್ಪಾಗಿರುವ ಪದಾರ್ಥಗಳಿಂದ ವೇಗವುಳ್ಳದ್ದಾಗಿಯೂ, ನೆಟ್ಟಗಾಗಿಯೂ, ಚಲಿಸುವದು. ಹೀಗೆಯೇ ಎರಡು ಮೂರು ಅಥವಾ ನಾಲ್ಕು ರಸಗಳು ಕೂಡಿಕೊಂಡ ಆಹಾರಗಳಿಂದ ನಾಡಿಯು ಅವುಗಳನ್ನನುಸರಿಸಿ ನಾನಾ ಕ್ರಮಗಳಲ್ಲಿ ನಡೆಯುವದು

ಗುಡರಂಭಾಮಾಂಸರೂಕ್ಷಶುಷ್ಕತೀಕ್ಷ್ಣಾದಿಭೋಜನಾತ್ ।
ವಾತಪಿತ್ತಾರ್ತಿರೂಪೇಣ ನಾಡೀ ವಹತಿ ನಿಶ್ಚಿತಾ ॥ (ನಾ. ಪ್ರ. 32.)

ಬೆಲ್ಲ, ಬಾಳೆಹಣ್ಣು, ಮಾಂಸ, ರೂಕ್ಷಪದಾರ್ಥ, ಒಣಗಿಸಿದ ಪದಾರ್ಥ, ತೀಕ್ಷ್ಣಪದಾರ್ಥ, ಇವುಗಳು ಮೊದಲಾದವುಗಳನ್ನು ಭುಂಜಿಸಿದರಿಂದ ನಾಡಿಯು ವಾತಪಿತ್ತ ಪೀಡೆಯ ರೂಪದಿಂದ ಚಲಿಸುವದು.

(zz) ಭಾರ-ಪ್ರವಾಹ-ಮೂರ್ಚ್ಛಾ-ಭಯ-ಶೋಕ-ಪ್ರಮುಖಕಾರಣಾನ್ನಾಡೀ ।
ಭಯಂಕರವಾಗಿ ಕಂಡ ರೂ ಮೃತ್ಯುಸೂಚಕ ವಲ್ಲದ ನಾಡಿ ಸಮ್ಮೂರ್ಛಿತಾಪಿ ಗಾಢಂ ಪುನರಪಿ ಸಾ ಜೀವಿತಂ ಧತ್ತೇ ॥
(ನಾ. ಪ್ರ. 27.)

ಭಾರ ಹೊರೋಣದರಿಂದ, ಪ್ರವಾಹದಲ್ಲಿ ಬೀಳೋಣದರಿಂದ, ಮೂರ್ಚ್ಛೆಯಿಂದ, ಭಯದಿಂದ, ಶೋಕದಿಂದ, ಅಥವಾ ಬೇರೆ ಪ್ರಮುಖ ಕಾರಣದಿಂದ, ನಾಡಿಯು ತತ್ಕಾಲ ಪೂರಾ ನಿಂತರೂ, ಪುನಃ ಜೀವ ಹೊಂದುತ್ತದೆ

ಇದರಾ ಕೆಲವರು 'ಪ್ರವಾಹಮೂರ್ಚ್ಛಾ' ಎಂಬದನ್ನು ಒಂದೇ ಪದವನ್ನಾಗಿ ತೆಗೆದುಕೊಂಡು ರಕ್ತಪ್ರವಾಹವಿಗಳಿಂದ ಉಂಟಾದ ಮೂರ್ಚ್ಛೆ ಎಂತ ಅರ್ಥ ಬರೆಯಿದ್ದಾರೆ

ಪತಿತಸ್ಸಂಧಿತೋ ಭೇದೀ ನಷ್ಟಶುಕ್ರಶ್ಚ ಯೋ ನರಃ ।
ಶಾಮ್ಯತೇ ಏಸ್ಮಯಸ್ತಸ್ಯ ನ ಕೆಂಚಿನ್ಮೃತ್ಯುಕಾರಣಂ ॥ (ನಾ ಪ್ರ 28)

ಎತ್ತರದಿಂದ ಬಿದ್ದಂಥಾ, ಕಡಿದು ಸಂದುಕೂಡಿಸಲ್ಪಟ್ಟಂಥಾ, ಅತಿಸಾರದಿಂದ ಪೀಡಿತನಾದಂಥಾ, ಅಥವಾ ಶುಕ್ರ ನಷ್ಟಹೊಂದಿದಂಥಾ, ಮನುಷ್ಯನ ನಾಡಿಯು ಅಸಾಧ್ಯವಾಗಿ ಕಂಡರೂ, ಅದರಿಂದ ಏನೂ ಮರಣಕ್ಕೆ ಕಾರಣವಿಲ್ಲ ಅವನ ಏಸ್ಮಯವು ಶಾಂತವಾಗುತ್ತದೆ

ತಥಾ ಭೂತಾಭಿಷಂಗೇ ಚ ತ್ರಿದೋಷವದುಪಸ್ಥಿತಾ ।
ಸಮಾಂಗಾ ವಹತೇ ನಾಡೀ ತಥಾ ಚ ನ ಕ್ರಮಂಗತಾ ॥

ಭೂತಾದಿಗಳು ಪೀಡಿಸುವ ಸಂಗತಿಯಲ್ಲಿ, ನಾಡಿಯು ತ್ರಿದೋಷಲಕ್ಷಣಗಳನ್ನು ಕೂಡಿಕೊಂಡು ಸರಿಯಾಗಿ ನಡೆದರೂ, ಆ ಭೇದಗಳನ್ನು ಅದು ಕ್ರಮವಾಗಿ ಹೊಂದಿದ್ದಲ್ಲ.

ಇದರಾ "ಎಣಿಯ ಮೆಟ್ಟಿನ ಭೇದದಿಂದ ಸ್ವರಗಳು ಹುಟ್ಟಿ ರಾಗಭೇದಗಳು ಹ್ಯಾಗೆ ತೋರುವವೋ, ಹಾಗೆ ಮನುಷ್ಯನ ಹಸ್ತದ ಹಚ್ಚೆರಳಿನ ಬುಡದಲ್ಲಿ ಪ್ರಾಂಕ್ತವಾಗಿ ಮೂರು ಬೆರಳುಗಳನ್ನಿಟ್ಟು, ಲಕ್ಷ್ಯಧಾರಣೆಯಿಂದ ಒತ್ತಿ ನೋಡಿದರೆ, ಯವಬೀಜದಂತೆ ಮೊದಲಿನ ಬೆರಳಿಗೆ ವಕ್ರವಾಗಿಯೂ, ಎರಡನೇ ಬೆರಳಿಗೆ ಚಪಲವಾಗಿಯೂ, ಮೂರನೇ ಬೆರಳಿಗೆ ಸ್ಥಿರವಾಗಿಯೂ, ಅಷ್ಟವಾಗಿಯೂ, ಸಪ ತೋರುವ ಗತಿಗಳೇ ವಾತ, ಪಿತ್ತ, ಶ್ಲೇಷ್ಮವೆಂಬ ಹೆಸರುಳ್ಳ ಮೂರು ಗತಿಗಳೆನ್ನಿಸಿಕೊಳ್ಳುವವು

"ಈ ಮೂರು ಗತಿಗಳಿಂದ ವಂಚಭೂತಗಳೆಂಬ ಐದು ಗತಿಗಳು ಸಪ್ತಗತಿಗಳು ಮತ್ತು ಒಂಭತ್ತು ಗತಿಗಳು ಸಪ ತೋರುತ್ತವೆ, ಆ ಒಂಭತ್ತು ಗತಿಗಳು ಸಂವತ್ಸರ, ಆಯುಷ್ಯ, ಗಂಡಕಾಲ, ಋತುಕಾಲ, ಗರ್ಭಕಾಲ, ರೋಗ, ಮನೋಭಾವ, ಗ್ರಹಣ, ಸಾಧ್ಯಾಸಾಧ್ಯ ಲಕ್ಷಣ, ಭೂತ ಭವಿಷ್ಯದ್ವರ್ತಮಾನಗತಿಸ್ಥಿತಿಗಳನ್ನು ತಿಳಿಸುತ್ತವೆ ಇವು ಸಪ್ತಗ್ರಹ, ನವಗ್ರಹ ರೂಪವಾಗಿರುತ್ತವೆ

"ಕರಾಂಗುಷ್ಠ ಮೂಲದಲ್ಲಿ ಮೂರು ಸ್ಥಾನಗಳಲ್ಲಿಯೂ ಮೂರು ಬೆರಳುಗಳನ್ನಿಟ್ಟು, ಅದಿಯಲ್ಲಿ ಪಿತ್ತವನ್ನು ಆ ಮೇಲೆ ವಾತವನ್ನು, ಅನಂತರ ಶ್ಲೇಷ್ಮಸ್ಥಾನವನ್ನು ನೋಡಿದರೆ, ಕ್ರಮವಾಗಿ ಹನ್ನೆರಡು ಗತಿಗಳ ಪ್ರಕಾರ ಮೂರಾವರ್ತಿ ಬಂದರೆ ಅಂಥಾ ಮನುಷ್ಯನು ಬಹುಕಾಲ ಜೀವಿಸುತ್ತಾನೆ"

ಮೇಲಿನದು ನಾಡಿಪರೀಕ್ಷೆಯಲ್ಲಿ ಪ್ರಖ್ಯಾತಿಹೊಂದಿದ್ದ ಮೈಸೂರು ಹೊಸ ಪಂಡಿತ ಭೀಮರಾಯರು ರಚಿಸಿದ ಮೈಸೂರು ಗವರ್ನಮೆಂಟ್ ಪ್ರೆಸ್ಸಿನಲ್ಲಿ 1885ನೇ ಇಸವಿಯಲ್ಲಿ ಮುದ್ರಿಸಲ್ಪಟ್ಟ, ವೈದ್ಯಸ್ಫಂಗ್ರಹ ಎಂಬ ಗ್ರಂಥದಿಂದ ಎತ್ತಿ ತೆಗೆದದ್ದು ಇವರು ವಾತ ಪಿತ್ತ ಕಫ ಗತಿಗಳಲ್ಲದೆ, ಪೃಥ್ವೀ ಗತಿ, ಆಕಾಶಗತಿ, ಡೋಲಾಗತಿ, ಕುಂಡಲಸೀಗತಿ, ವಕ್ರ ಚಕ್ರಗತಿ ಚಪಲಚಕ್ರಗತಿಗಳೆಂಬ ಆರು ಗತಿಗಳಿರುವದಾಗಿಯೂ, ಗೋಲಾಕಾರವಾದ ಪೃಥ್ವೀಗತಿಯಲ್ಲಿ ಅಷ್ಟದಳಗಳೂ, ಆ ಪ್ರತಿದಳದಲ್ಲಿ ಬೇರೆ ಅಷ್ಟದಳಗಳಿರುವದಾಗಿಯೂ, ಈ ಭೇದಗಳಿಗೆ ಲಕ್ಷ್ಯವಿಟ್ಟು ನಾಡಿಚಲನೆಯ ಸ್ಥಾನವನ್ನು ಗೊತ್ತುಮಾಡುವದರಿಂದ ಗರ್ಭದಲ್ಲಿರುವಾಗಲೇ ಪ್ರಾಣಿಯ ಭವಿಷ್ಯತ್ತನ್ನೂ ಜನರ ಮನೋಭಾವಗಳನ್ನೂ, ಸೂರ್ಯ ಚಂದ್ರಾದಿಗಳ ಗ್ರಹಣವನ್ನೂ, ತಿಳಿಯಲು ಸಾಧ್ಯವಿದೆಯೆಂಬದು ಮುಂತಾದ ಕೆಲವು ವಿವರಗಳನ್ನು ಬರೆದು, ಆಧಾರವಾಗಿ ದತ್ತಾತ್ರೇಯರ ವಚನವೆಂತ ಕೆಲವು ಶ್ಲೋಕಗಳನ್ನು ಕೊಟ್ಟಿದ್ದಾರೆ ಇವೇ ಮೊದಲಾದ ನಾಡಿಪರೀಕ್ಷೆಗೆ ಸಂಬಂಧಪಟ್ಟ ಬಹು ವಿಸ್ತಾರವುಳ್ಳ ಸೂತ್ರಗಳು ಬಹು ಪಕ್ಷದವರಿಗೆ ಪ್ರಯೋಜನಕರವಾಗಲಾರವು ಎಂಬದರಿಂದ, ಅಂಥವುಗಳನ್ನೆಲ್ಲಾ ಈ ಭಾಗದಲ್ಲಿ ಸೇರಿಸದೆ ಬಿಟ್ಟಿರುತ್ತದೆ

20. ವಾತೇನ ಶಬ್ದಸ್ಪರ್ಶತಿಸೌಕ್ಷ್ಮ್ಯಮೇತಿ ಪಿತ್ತಪ್ರಕೋಪೇ ಸ್ಫುಟವಾಕ್ಯತಾ ಚ ।
ಶ್ಲೇಷ್ಮಪ್ರಕೋಪೇ ಗುರುತಾ ಸ್ವರೇ ಸ್ಯಾದ್ದ್ವಯೇ ದ್ವಿಲಿಂಗಂ ತ್ರಿತಯೇ ತ್ರಿಲಕ್ಷ್ಮಂ । (ಧ. 18.)

ಶಬ್ದದ ಪರೀಕ್ಷೆ

ರೋಗಿಯ ಕಂಠಸ್ವರವು ವಾತಪ್ರಕೋಪದಲ್ಲಿ ಅತಿಸೂಕ್ಷ್ಮವಾಗಿಯೂ, ಪಿತ್ತಪ್ರಕೋಪದಲ್ಲಿ ಸ್ಪಷ್ಟವಾದ ಮಾತುಗಳುಳ್ಳದ್ದಾಗಿಯೂ, ಕಫಪ್ರಕೋಪದಲ್ಲಿ ಗುರು (ತೋರ)ವಾಗಿಯೂ, ದ್ವಂದ್ವ ಮತ್ತು ತ್ರಿದೋಷಗಳಲ್ಲಿ ಆಯಾ ದೋಷಗಳ ಲಕ್ಷಣಗಳು ಮಿಶ್ರವಾಗಿಯೂ ಇರುವದು.

21. ವಾತಾಚ್ಛೀತಃ ಕಫಾಚ್ಚಾರ್ದ್ರಃ ಶೀತಲಶ್ಚ ಪರೋ ಭವೇತ್ । ಪಿತ್ತಾ
ದುಷ್ಣೋ ರುಜಾರ್ತಃ ಸ್ಯಾತ್ ಮುನಿಭಿಃ ಪರಿಕೀರ್ತಿತಃ । ದ್ವಂದ್ವೇನ
ಮಿಶ್ರಃ ಸಕಲೈಸ್ತ್ರಿಲಿಂಗಂ ಸಂಸ್ಪರ್ಶಜಾತುರ್ಯಜನೈರ್ಭಿಷಗ್ಭಿಃ ಕ್ಷಣೇನ
ಶೀತಃ ಕ್ಷಣತೋಽತಿತಪ್ತೋ ವಜ್ರ್ಯಃ ಸ ಜನ್ತುರ್ಗದಪೀಡಿತಾಂಗಃ ।

ಸ್ಪರ್ಶದಿಂದ ಪರೀಕ್ಷೆ

(ಧ. 18.)

ಮೈಯ ಸ್ಪರ್ಶವು ವಾತಪ್ರಕೋಪದಲ್ಲಿ ಶೀತವಾಗಿಯೂ, ಕಫದಲ್ಲಿ ಒದ್ದೆಯಾಗಿಯೂ, ಶೀತಲವಾಗಿಯೂ, ಪಿತ್ತದಲ್ಲಿ ಬಿಸಿಯಾಗಿಯೂ, ನೋವುಳ್ಳದ್ದಾಗಿಯೂ ಇರುತ್ತದೆ ಮತ್ತು ದ್ವಂದ್ವದೋಷಗಳಲ್ಲಿಯೂ, ತ್ರಿದೋಷಗಳಲ್ಲಿಯೂ ಆಯಾ ದೋಷಗಳ ಲಕ್ಷಣಗಳು ಮಿಶ್ರವಾಗಿ ಕಾಣುವವು ಎಂತ ಈ ಪರೀಕ್ಷೆಯಲ್ಲಿ ಕುಶಲರೂ ವೈದ್ಯರೂ ಆದ ಮುನಿಗಳಿಂದ ಹೇಳಲ್ಪಟ್ಟಿದೆ. ಯಾವ ರೋಗಿಯ ಮೈಯು ಕ್ಷಣಕ್ಕ ಶೀತ ಕ್ಷಣಕ್ಕೆ ಅತಿಬಿಸಿಯಾಗುತ್ತದೋ ಅಂಥವನ ರೋಗವು ಅಸಾಧ್ಯವಾಗಿರುತ್ತದೆ.

22. ಹೃದಯದ ಕೆಳ ಅಂಕಣಗಳು ಉಬ್ಬಿ ಸಂಕೋಚವಾಗುತ್ತಾ ಇರುವ ಸ್ಥಿತಿಯಲ್ಲಿ ಎಡ ಬದಿಯ ಅಂಕಣದಿಂದ ಧಮನಿಯೊಳಗೆ ಸೇರಿ ತೆರೆಯಾಗಿ ಚಲಿಸುವ ರಕ್ತವೇ ನಾಡಿಯಾಗಿ ಕಾಣುವದು ಎಂತ ಹಿಂದೆ ಹೇಳಿಯದೆ (59ನೇ ಪು. ನೋಡಿರಿ). ಹಾಗೆ ಒಂದೊಂದು ಸರ್ತಿ ಧಮನಿಗೆ ಸೇರುವ ರಕ್ತವು ಒಂದೊಂದು ನಾಡಿಗೆ ಕಾರಣವು. ಪ್ರತಿ ಸರ್ತಿ ಧಮನಿಗೆ ಅಷ್ಟಷ್ಟು ರಕ್ತ ಸೇರಿದೊಡನೆ ಧಮನಿಯ ಬುಡದಲ್ಲಿರುವ ಮುಚ್ಚಳವು ಮುಚ್ಚುವದರಿಂದ, ಆ ಧಮನಿಯಲ್ಲಿ ಮತ್ತೊಂದು ಚಿಕ್ಕ ಉಬ್ಬುವಿಕೆ ಉಂಟಾಗುತ್ತದೆ, ಅಂದರೆ ಧಮನಿಯಲ್ಲಿ ಪ್ರವಹಿಸುವ ರಕ್ತದಲ್ಲಿ ಎರಡನೇದೊಂದು ಚಿಕ್ಕ ತೆರೆಯುಂಟಾಗುತ್ತದೆ. ಹೀಗೆ ಪ್ರತಿನಾಡಿಯಲ್ಲಿ ಎರಡು ಪೆಟ್ಟುಗಳಿವೆ, ಒಂದು ದೊಡ್ಡದು, ಒಂದು ಚಿಕ್ಕದು. ಈ ಎರಡು ವಿಧವಾದ ಪೆಟ್ಟುಗಳಲ್ಲಿ ಅಸ್ವಸ್ಥತೆಯ ದೆಸೆಯಿಂದ ನಾನಾ ವಿಧವಾದ ಭೇದಗಳು ಉಂಟಾಗುತ್ತವೆ. ಮುಖ್ಯವಾಗಿ ಪರೀಕ್ಷಿಸತಕ್ಕ ಅವಸ್ಥೆಗಳು ಮೂರು. ಯಾವವೆಂದರೆ· (1) ವೇಗ,—ಏನಿಟಿಗೆ ಎಷ್ಟು ಪೆಟ್ಟುಗಳು ಕಾಣುತ್ತವೆ ಎಂಬದು,— (2) ಸಂಕೋಚನ ಶಕ್ತಿ,—ಗಟ್ಟಿ ಅಥವಾ ಮೃದು ಎಂಬದು; ನಾಡಿಯು ಒತ್ತಲ್ಪಡುವಾಗ್ಗೆ ಬಲವಾಗಿ ನಿಂತರ ಗಟ್ಟಿ, ಅಡಿಗೆ ಸುಲಭವಾಗಿ ಹೋದರೆ ಮೃದು,— (3) ಕ್ರಮ,—ಒಂದರ ನಂತರ ಒಂದು ಕ್ರಮವಾಗಿ ಬಡಿಯುತ್ತದೋ, ಅಥವಾ ತಪ್ಪಿ ಬಡಿಯುತ್ತದೋ ಎಂಬದು. ಆರೋಗ್ಯಸ್ಥಿತಿಯಲ್ಲಿ ನಾಡಿಯು ಕ್ರಮ ತಪ್ಪದೆಯೂ, ಸರಿಯಾದ ವೇಗವುಳ್ಳದ್ದಾಗಿಯೂ, ಒಂದೇ ರೀತಿಯಾದ ಉಬ್ಬುವಿಕೆಯುಳ್ಳದ್ದಾಗಿಯೂ, ಇರುತ್ತದೆ; ಮಿತವಾಗಿ ತುಂಬಿದ್ದು

ಪಾಶ್ಚಾತ್ಯರೀತ್ಯಾ ನಾಡೀಪರೀಕ್ಷೆ

ಬೆರಳುಗಳ ಅಡಿಯಲ್ಲಿ ಸಾವಕಾಶದಿಂದ ಉಬ್ಬುವದು ಪ್ರಾಯಸ್ಥನಾದ ಗಂಡಸಿನಲ್ಲಿ ನಾಡಿಯು ಮಿನಿಟಿಗೆ 70ರಿಂದ 75ರ ವರೆಗೆ ಬಡಿಯುವದು ಹೊಸದಾಗಿ ಜನಿಸಿದ ಶಿಶುವಿನಲ್ಲಿ 130-140ರ ವರೆಗೆ ಇರುವ ನಾಡಿಯು 3 ವರ್ಷ ಪ್ರಾಯವಾಗುವಾಗ್ಗೆ ಸುಮಾರು 100ಕ್ಕ, 10 ವರ್ಷ ಪ್ರಾಯದಲ್ಲಿ ಸುಮಾರು 90ಕ್ಕೆ, 21 ವರ್ಷ ಪ್ರಾಯದಲ್ಲಿ 70-75ಕ್ಕ, ಮತ್ತು ಮುದಿತನದಲ್ಲಿ 65-70ಕ್ಕೆ, ಇಳಿಯುವದು, ಅತಿ ವೃದ್ಧಾಪ್ಯದಲ್ಲ ಪುನಃ 75-80ಕ್ಕ ಏರುವದು ನಾಡಿಯು ಮಲಗಿದ್ದಾಗಿರುವದಕ್ಕಿಂತ ಕೂತಾಗ್ಗ ಹಚ್ಚಿರುವದು, ಮಲಗಿದ್ದಾಗ್ಗಿನದಕ್ಕಿಂತ ನಿಂತಾಗ್ಗೆ ಹೆಚ್ಚು ಬಡಿಯುವದು, ವ್ಯಾಯಾಮದಿಂದ, ಗಾಬರಿಯಿಂದ, ಅಥವಾ ಉಂಡದರಿಂದ ನಾಡಿಯ ವೇಗ ಹೆಚ್ಚುವದು ಚಳಿಯಿಂದಲೂ, ನಿದ್ರೆಯಿಂದಲೂ, ಉಪವಾಸದಿಂದಲೂ ಬಳಲುವಿಕೆಯಿಂದಲೂ, ಕಲವು ಔಷಧಗಳ ಸೇವನೆಯಿಂದಲೂ, ನಾಡಿಯ ವೇಗವು ಕಡಿಮೆಯಾಗುತ್ತದೆ ಹಂಗಸಿನಲ್ಲಿ ಗಂಡಸಿನಲ್ಲಿಯವಕ್ಕಿಂತ 6-14ರ ವರೆಗೆ ಪೆಟ್ಟುಗಳು ಹೆಚ್ಚಾಗಿರುವವು ಮುದಿತನದಲ್ಲಿ ನಾಡಿಯು ಗಟ್ಟಿಯಾಗುವದು

ನಾಡಿಯು ಬಲವಾಗಿಯೂ, ಪೂರ್ಣವಾಗಿಯೂ, ಗಟ್ಟಿಯಾಗಿಯೂ, ವೇಗವುಳ್ಳದ್ದಾಗಿಯೂ ಇದ್ದರ, ಜ್ವರ ಅಥವಾ ಬಾಕು ಇರುವ ಲಕ್ಷಣವೆಂದರಿಯುವದು.

ಪರಾ ಜ್ವರ ಬರುವ ಸಂದರ್ಭದಲ್ಲಿ ನಾಡಿಯು ಗಟ್ಟಿಯಿಲ್ಲದೆ ಮೃದುವಾಗಿರುತ್ತದೆಂತ ಇನ್ನೊಬ್ಬರ ಅಭಿಪ್ರಾಯವಿದೆ

ಚಿಕ್ಕದಾಗಿ ಅತಿವೇಗದಿಂದ ಚಲಿಸುವದು ಹೆಚ್ಚು ಅಶಕ್ತಿಯಿಂದ. ನಾಡಿಯು ಒಮ್ಮೆ ಬೇಗನೆ ಮತ್ತು ಬಲವಾಗಿ ಹೊಡದು, ತೆರೆಯು ಪಿಂತಿರುಗಿದಂತೆ ತಟ್ಟನೆ ನಿಂತರೆ, (ಅಂದರೆ ಖಾಲಿಯಿದ್ದ ನಾಳವು ಕ್ಷಣದಲ್ಲಿ ತುಂಬಿ ತಟ್ಟನೆ ಖಾಲಿಯಾದ ಹಾಗೆ ಕಂಡರೆ) ಹೃದಯದ್ವಾರದ ಮುಚ್ಚಳ ಸರಿಯಿಲ್ಲ ಎಂತ ತಿಳಿಯಬೇಕು. ಆಗಾಗ್ಗೆ ಮಧ್ಯದ ಒಂದೆರಡು ನಾಡಿ ಪೆಟ್ಟುಗಳು ತಪ್ಪುವಂಧಾದ್ದು ಹೃದಯದಲ್ಲಿ ಅಥವಾ ಶ್ವಾಸಕೋಶದಲ್ಲಿ ರಕ್ತ ಚಲಿಸುವಾಗ್ಗೆ ಉಂಟಾಗುವ ಅಭ್ಯಂತರದಿಂದ ಅಥವಾ ಬಾಕುಗಳಿಂದ, ಅಥವಾ ಮೆದುಳು ಮೃದುವಾಗುವದರಿಂದ, ಅಥವಾ ಮೂರ್ಚ್ಛೆ ಮುಂತಾದ್ದರಿಂದ, ಅಥವಾ ಹೃದಯದೊಳಗಣ ಮುಚ್ಚಳಗಳ ವಿಕಾರದಿಂದ, ಅಥವಾ ಅಂತ್ರವೃದ್ಧಿಯಲ್ಲಿ ಒಳಗೆ ದುಷ್ಟ ವ್ರಣವಾಗುವದರಿಂದ, ಅಥವಾ ಅತಿವ್ಯಾಯಾಮ, ಜಾಗರ, ವಿರಾಮವಿಲ್ಲದಿರೋಣ, ವ್ಯಾಕುಲತೆ, ಇವುಗಳಿಂದ, ಅಥವಾ ಸ್ವಲ್ಪ ಮಟ್ಟಿಗೆ ಹೊಟ್ಟೆಯುಬ್ಬರದಿಂದ ಕೂಡಿದ ಅಜೀರ್ಣದಿಂದ, ಅಥವಾ ವೃದ್ಧಾಪ್ಯದಿಂದ, ಅಥವಾ ನರಗಳು ಗಾಬರಿಪಡುವದರಿಂದ, ಉಂಟಾಗುತ್ತದೆ. ಇದು ಅತಿಯಾಗಿ ಚಾ ಕುಡಿಯುವದರಿಂದಲೂ, ಚುಟ್ಟ ಸೇದುವದರಿಂದಲೂ, ಉಂಟಾಗುತ್ತದೆ. ಅಪಸ್ಮಾರದ ವೇಗ ತೊಡಗುವ ಸಂದರ್ಭದಲ್ಲಿಯೂ ಈ ದೋಷ ಕಾಣುವದುಂಟು. ಸನ್ನಿಪಾತಜ್ವರ ಮುಂತಾದ ಕೆಲವು ಕರಿಣ ವ್ಯಾಧಿಗಳಲ್ಲಿ ಅದು ಹೆಚ್ಚಾಗಿ ಭಯಸೂಚಕವಾಗಿರುತ್ತದೆ.

ದೇಹದಲ್ಲಿ ರಕ್ತ ಕಡಿಮೆಯಾಗಿ ಬಲಹೀನತೆಯುಂಟಾದಾಗ್ಗೆ ನಾಡಿಯು ಅಬಲಿಯಾಗುತ್ತದೆ. ನಾಡಿಪೆಟ್ಟುಗಳ ಸಂಖ್ಯೆಯು ಅಂಗದಂಡನೆ ಮುಂತಾದ ವಿಶೇಷ ಕಾರಣವಿಲ್ಲದೆ ಸ್ವಾಭಾವಿಕವಾಗಿರತಕ್ಕ ಸಂಖ್ಯೆಗಿಂತ 8-10 ಹೆಚ್ಚು ಅಥವಾ ಕಡಿಮೆ ಇದ್ದರೆ, ಅಸ್ವಸ್ಥತೆ ಉಂಟೆಂತ ಊಹಿಸಬೇಕು. ಕಡಿಮೆಯಾಗುವದು ಧಾತು ದುರ್ಬಲತೆಯ ಲಕ್ಷಣ. ಹೆಚ್ಚಾದರೆ ಅಲ್ಪಸ್ವಲ್ಪವಾದರೂ ಜ್ವರದ ಚಿಹ್ನೆ ಇರಬೇಕೆಂತ ತಿಳಿಯಬಹುದು.

ಕೊಲೆರಾ ಮುಂತಾದ ಕ್ಷೀಣಿಸತಕ್ಕ ವ್ಯಾಧಿಗಳಲ್ಲಿಯೂ, ರಕ್ತಪ್ರವಾಹದಿಂದಲೂ ನಾಡಿಯು ಬಲಹೀನವಾಗಿ ನೂಲಿನಂತೆ ಇರುವದು.

ಮದ್ಯಪಾನಶೀಲನ ನಾಡಿಯು ಹೆಚ್ಚು ವೇಗವುಳ್ಳದ್ದಾಗಿರುತ್ತದೆ.

ಸ್ವಸ್ಥನ ನಾಡಿಯ ಸಂಖ್ಯೆಯು ಮಧ್ಯರಾತ್ರಿ ಸಮಯ ಕಡಿಮೆಯಾಗಿ ಪ್ರಾತಃಕಾಲದಲ್ಲಿ ಹೆಚ್ಚುತ್ತದೆ.

ಸಾಧಾರಣವಾಗಿ ಜ್ವರದಲ್ಲಿ ಮೈಕಾವು ಏರಿದ ಹಾಗೆ ನಾಡಿಯ ಸಂಖ್ಯೆಯು ಹೆಚ್ಚುವದು, ಆದರ ಕೆಲವು ಜ್ವರದ ಆರಂಭದಲ್ಲಿ, ಜ್ವರ ಹೆಚ್ಚಾಗಿದ್ದರೂ, ನಾಡಿಯ ವೇಗವು ಸ್ವಾಭಾವಿಕಕ್ಕೆ ಹೆಚ್ಚು ಏಕ್ಕಿರುವದಿಲ್ಲ ಮತ್ತು ಜ್ವರವು ಗುಣವಾಗುತ್ತಾ ಬರುವಾಗ್ಗೆ ನಾಡಿಯ ವೇಗವು ಅಶಕ್ತಿಯಿಂದ ಹೆಚ್ಚುತ್ತದೆ ಕೆಲವು ರೋಗಿಗಳಲ್ಲಿ ಜ್ವರ ಕರಿಣವಾಗಿದ್ದಾಗ್ಗೆ ನಾಡಿಯ ಸಂಖ್ಯೆಯು ಸ್ವಾಭಾವಿಕ ಸ್ಥಿತಿಯಲ್ಲಿಯೇ ನಿಂತಿರುವದುಂಟು

ಕಲವು ರೋಗಗಳಲ್ಲಿ ನಾಡಿಪೆಟ್ಟುಗಳ ಸಂಖ್ಯೆಯು 20ಕ್ಕೂ ಕಡಿಮೆಗೆ ಇಳಿಯ ಬಹುದು. ಹೃದಯದೊಳಗಣ ಮಾಂಸದ ನರಗಳು ಕ್ಷಯಿಸಿ ಕೆಡುವದರಿಂದ, ನಾಡಿಯ ವೇಗವು ಬಹಳ ಕಡಿಮೆಯಾಗುತ್ತದೆ. ಕಲವು ಸಮಯದಲ್ಲಿ ಅಪಸ್ಮಾರ ರೋಗವುಳ್ಳವನ ನಾಡಿಯು ಬಹು ಮೆಲ್ಲಗೆ ಚಲಿಸುವದುಂಟು.

ರೋಗಿಯು ಕೈಯನ್ನು ಅಡಿಗಟ್ಟು ಮಲಗಿ ಉಂಟಾಗುವ ಒತ್ತುಒಕೆಯಿಂದ, ಅಥವಾ ತೊಡಿಗೆಯು ಬಿಗಿಯಾಗುವದರಿಂದ, ಕೈನಾಡಿಯ ನಿಜಸ್ಥಿತಿಯು ವ್ಯಕ್ತವಾಗದೆ ಹೋಗುತ್ತದೆ. ಕಲವರ ಕೈಯ ಧಮನಿಯು ಸಾಧಾರಣವಾಗಿರುವದಕ್ಕಿಂತ ಯಾವಾಗಲೂ ಸಪೂರವಾಗಿಯೇ ಇರುವದುಂಟು ಅನೇಕ ಸಾರಿ ಎಡಕೈಯ ಧಮನಿಯೂ ಬಲಗೈಯ ಧಮನಿಯೂ ಒಂದೇ ಪ್ರಮಾಣವಾಗಿ ದಪ್ಪವಿರುವದಿಲ್ಲ ಇವೇ ಮೊದಲಾದ ಕಾರಣಗಳಿಂದ ನಾಡಿಯು ಅಬಲಿಯಾಗಿ ಕಾಣಬಹುದು.

ಧಮನಿಯ ಹೊದಿಕೆಯಲ್ಲಿ ಕಲ್ಲು ಕಟ್ಟಿದ ಹಾಗೆ, ಅಥವಾ ತಿಪ್ಪಿದ ಹಾಗೆ, ಅಥವಾ ಎತ್ತರತಗ್ಗು, ಇರಬಹುದು ಅದರಿಂದ ನಾಡಿಯ ಚಲನೆ ವ್ಯತ್ಯಾಸವಾಗಬಹುದು.

ಕೈನಾಡಿಪೆಟ್ಟುಗಳಲ್ಲಿ ಲೋಪಗಳು ಕಾಣುವಾಗ್ಗೆ, ಹೃದಯದಲ್ಲಿ ಆ ಲೋಪಗಳು ಕಾಣದೆ ಇರಬಹುದು

ಮೈ ಬಿಸಿಯು ಒಂದು ಡಿಗ್ರಿ ಹೆಚ್ಚಿದ್ದರ, ನಾಡಿಯ ಗತಿಯಲ್ಲಿ ಮಿನಿಟಿಗೆ ಸುಮಾರು 10 ಹೆಚ್ಚು ಕಾಣುವದು; ಮತ್ತು ಶ್ವಾಸಗಳಲ್ಲಿ 2 ಅಥವಾ 3 ಹೆಚ್ಚಿರುವದು.

ರೋಗಗಳ ಲಕ್ಷಣವಾಗಿ ವಿಶೇಷವಾದ ನಾಡಿಭೇದಗಳು ಇರುವ ಸಂಗತಿಯಲ್ಲಿ, ಆಯಾ ರೋಗದ ಲಕ್ಷಣಾದಿಗಳನ್ನು ವರ್ಣಿಸುವಾಗ ಸಂದರ್ಭಾನುಸಾರವಾಗಿ ಅವುಗಳನ್ನು ಸೂಚಿಸೋಣಾಗುವದು.

23. ಸಾಧಾರಣವಾಗಿ ಜ್ವರದ ಡಿಗ್ರಿಯೆಂತ ಕರೆಯಲ್ಪಡುವ ಉಷ್ಣಪ್ರದರ್ಶಕ ಕಡ್ಡಿ (ಥರ್ಮೋಮೀಟರ್)ಯನ್ನು ಉಪಯೋಗಿಸುವದಾದರೆ ಅದನ್ನು ಬಾಯಿಯೊಳಗೆ, ಕಂಕುಳ ಮೈ ಬಿಸಿ ಪರೀಕ್ಷೆ. ಸಂದಿನಲ್ಲಿ, ಆಸನದೊಳಗೆ ಅಥವಾ ಹೆಂಗಸಿನ ಶರೀರದೊಳಗೆ, ಇಟ್ಟು ಪಾಶ್ಚಾತ್ಯರೀತಿ ನೋಡಬೇಕು ಬಾಯಿಯೊಳಗೆ ಇಡುವದಾದರೆ ನಾಲಿಗೆಯ ಅಡಿ

ಯಲ್ಲಿಟ್ಟು ತುಟಿಗಳನ್ನು ಮುಚ್ಚಿ, ಮೂಗಿನಿಂದ ಶ್ವಾಸ ಬಿಡಬೇಕು. ಕಂಕುಳಲ್ಲಿಡುವದಾದರೆ, ಆ ಭಾಗದಲ್ಲಿ ಬೆವರಿದ್ದರೆ ಅದನ್ನುಜ್ಜಿ ತೆಗೆದು, ಪಾದರಸ ಇರುವ ತುದಿಯು ಮೈಗೆ ಸರಿಯಾಗಿ ತಗಲಿರುವ ಹಾಗೆ, ಕಡ್ಡಿಯನ್ನು ಇಡಬೇಕು, ಕಡ್ಡಿಗೂ ಮೈಗೂ ಮಧ್ಯ ವಸ್ತ್ರವಿಲ್ಲದಂತೆ ಜಾಗ್ರತೆ ತೆಗೆದುಕೂಳ್ಳಬೇಕು, ತೋಳನ್ನು ಅಮರಿಸಿ ಹಿಡಿಯುವದಲ್ಲದೆ, ಮುಂಗೈಯನ್ನು ಎದೆಯ ಕಡೆಗೆ ಅಡ್ಡವಾಗಿಡುವ ಕ್ರಮ ಒಳ್ಳೇದು, ಮತ್ತು ಗಾಳಿ ತಾಗುವ ಸಂದರ್ಭದಲ್ಲಿ ಕಡ್ಡಿಯನ್ನು ಸ್ವಲ್ಪ ಹೆಚ್ಚು ಹೊತ್ತು ಇಡಬೇಕು. ಆಸನದೊಳಗೆ ಇಡುವದಾದರೆ, ಕಡ್ಡಿಗೆ ಎಣ್ಣೆ ಹಚ್ಚಿ ಸುಮಾರು ಎರಡು ಇಂಚಿನಷ್ಟು ಒಳಗೆ ಹೊಗಿಸಬೇಕು. ಎಲ್ಲ ಇಟ್ಟರೂ, ಕಡ್ಡಿಯೊಳಗಿನ ಪಾದರಸ ಏರದೆ 1-2 ಮಿನಿಟು ಒಂದೇ ಸ್ಥಾನದಲ್ಲಿ ನಿಲ್ಲುವ ತನಕ ಇಡಬೇಕು. ಕಂಕುಳಿಗಿಂತ ಬಾಯಿಯಲ್ಲಿ, ಬಾಯಿಗಿಂತ ಆಸನದಲ್ಲಿ, ಅರ್ಧ ಅಥವಾ ಮುಕ್ಕಾಲು ಡಿಗ್ರಿ ಹೆಚ್ಚು ಬಿಸಿಯಿರುವದು ಸ್ವಸ್ಥಸ್ಥಿತಿಯಲ್ಲಿ ಮನುಷ್ಯದೇಹದ ಬಿಸಿಯು 24 ತಾಸು ಗಳಲ್ಲಿ 2-3 ಡಿಗ್ರಿ ವರಗೆ ಮೇಲೆ ಕೆಳಗೆ ಹೋಗುವದುಂಟು. ಸಾಧಾರಣವಾಗಿ ಆರೋಗ್ಯ ಸ್ಥಿತಿಯಲ್ಲಿ ಬಿಸಿಯು 98 4° ಅಥವಾ 98 6° ಇರಬೇಕು, ಬಾಯಿಯೊಳಗಾದರೆ 99 5° ಇರ ಬೇಕು ಸ್ವಾಭಾವಿಕವಾಗಿ ರಕ್ತದ ಬಿಸಿಯು 100° ಆಗಿರುತ್ತದೆ ಬಿಸಿಯು ಹೆಚ್ಚು ಹೊತ್ತು (ಕಂಕುಳಲ್ಲಿ) 99 5°ಕ್ಕೆ ಮಿಕ್ಕಿ ಅಥವಾ 97 3ಕ್ಕೆ ಕಡಿಮೆಯಾಗಿ ಇರುವದಾದರ, ಅಂಧವನಲ್ಲಿ ಯಾವದಾದರೂಂದು ರೋಗ ಉಂಟೆಂತ ಊಹಿಸಬಹುದು 103·1°ರ ವರೆಗೆ ಸಾಧಾರಣ ಜ್ವರ, ಅದರ ಮೇಲೆ 104·9°ರ ವರೆಗೆ ಕರಿಣ ಜ್ವರ ಮತ್ತು 105·8ರ ಮೇಲೆ ಅಸಾಧ್ಯ ಜ್ವರ, ಎಂತ ತಿಳಿಯುವದು ಬಿಸಿಯು ಸ್ವಸ್ಥಸ್ಥಿತಿಗೆ ಬಹಳ ಕಡಿಮಯಾಗಿರುವದು ನಿಶ್ಚೈತನ್ಯವನ್ನು ಸೂಚಿಸುತ್ತದೆ; ತ್ವರೆಯಾಗಿ ಕ್ಷೀಣತೆಯನ್ನುಂಟುಮಾಡುವ ಅಥವಾ ದೀರ್ಘಕಾಲದಿಂದ ಅನು ಭವಿಸುತ್ತಿರುವ ವ್ಯಾಧಿಯಿಂದಲೂ, ಆಭ್ಯಂತರ ರಕ್ತಸ್ರಾವದಿಂದಲೂ, ಆ ಸ್ಥಿತಿ ಉಂಟಾಗುವದು.

ಮೂತ್ರಪರೀಕ್ಷೆ, ಪಾಶ್ಚಾತ್ಯರೀತ್ಯಾ

24 ಸ್ವಸ್ಥನಾದ ಒಬ್ಬ ಪ್ರಾಯಸ್ಥನು 24 ತಾಸುಗಳಲ್ಲಿ 24ರಿಂದ 30 ಔನ್ಸು (1 ಔನ್ಸು=2½ ತೊಲೆ) ವರೆಗೆ ಮೂತ್ರ ಹೂಯ್ಯುವನು. ಸೇವಿಸಿದ ಜಲಾದಿಪಾನಗಳ ಮೇಲೆ ಯೂ, ಹವಾಸ್ಥಿತಿಯ ಮೇಲೆಯೂ, ಮೂತ್ರದ ಪ್ರಮಾಣವು ಹೆಚ್ಚು ಕಡಿಮೆ ಯಾಗುತ್ತದೆ ಚಳಿಕಾಲದಲ್ಲಿ ಬೆವರು ಕಡಿಮೆಯಾಗಿ ಮೂತ್ರ ಹೆಚ್ಚುತ್ತದೆ. ಸೀಮೂತ್ರದಲ್ಲಿ ಅದು ಹಚ್ಚಾಗಿ ಹೋಗುತ್ತದೆ. ವೃಕ್ಕಗಳು (Kidneys) ಬಾತಾಗ್ಗೆ, ಮತ್ತು ಹಚ್ಚು ಪಕ್ಷ ಜ್ವರಗಳಲ್ಲಿ ಮೂತ್ರವು ಕಡಿಮೆಯಾಗುತ್ತದೆ. ವಿಷೂಚಿಕಾರೋಗದಲ್ಲ ಮತ್ತು ನಿಶ್ಚೈತನ್ಯದಲ್ಲಿ, (ಅವಸಾದ—Collapse), ಮೂತ್ರ ಹೋಗದೆ ವೂರಾ ನಿಲ್ಲುವದು. ಮೂತ್ರಾಶಯದಲ್ಲಿಯಾಗಲಿ, ವೃಕ್ಕಗಳಲ್ಲಿಯಾಗಲಿ, ಬಾಕು ಉಂಟಾದಾಗ್ಗೆ ಮತ್ತು ಅಶ್ಮರೀ ಮುಂತಾದ ವ್ಯಾಧಿಗಳಲ್ಲಿ ಮೂತ್ರದ ಸರ್ತಿ ಹೆಚ್ಚುತ್ತದೆ. ಮೂತ್ರನಾಳದ ಅನೇಕ ರೋಗ ಗಳಲ್ಲಿ ಮೂತ್ರಿಸುವಾಗ್ಗೆ ವೇದನೆ ಉಂಟಾಗುತ್ತದೆ. ಸ್ವಸ್ಥನ ಮೂತ್ರವು ಅಲ್ಪವಾದ ಹುಲ್ಲಿನ ವರ್ಣವುಳ್ಳದ್ದು. ಅದರಲ್ಲಿ ಇರಬೇಕಾದ ಅತ್ಯಲ್ಪವಾದ ಕಫವು ಹೊಗೆಯೋ ಪಾದಿ ಅದರ ಮೇಲೆ ಬಾವೆಯಾಗಿ ನಿಲ್ಲುವದು. ಪಾತ್ರದ ಅಡಿಯಲ್ಲಿ ಭಾರವುಳ್ಳ ಬಿಳೇ ಮಡ್ಡು ನಿಂತರೆ, ಹೆಚ್ಚು ಕಫ ಉಂಟೆಂತ ತಿಳಿಯಬೇಕು. ಅದು ಮೂತ್ರಾಶಯದ ಹಳೇ ವ್ಯಾಧಿ ಗಳಲ್ಲಿ ಕಾಣುವದು. ಅರಸಿನ ಬಣ್ಣದ ಕೆಂಪು ಅಥವಾ ಕಪಿಲವರ್ಣವು ಪಿತ್ತದ ಮತ್ತು ಅರ

ಸಿನಮುಂಡಿಗೆ ರೋಗದ ಲಕ್ಷಣ. ಹೊಗೆಬಣ್ಣ ಕಂಡರೆ, ಅದರಲ್ಲಿ ಅಲ್ಪವಾಗಿ ರಕ್ತ ಉಂಟೆಂತ ತಿಳಿಯಬೇಕು. ಹೆಚ್ಚು ರಕ್ತ ಇದ್ದರೆ, ಕಪ್ಪು ಒತ್ತಿದ ಕಪಿಲ (Brown) ವರ್ಣ ಕಾಣುವದು ಶುಭ್ರವಾದ ಕೆಂಪು ವರ್ಣವು ಹೆಚ್ಚು ರಕ್ತವಿರುವ ಲಕ್ಷಣ. ಜ್ವರದ ಮೂತ್ರವು ಹಚ್ಚು ವರ್ಣವುಳ್ಳದ್ದಾಗಿ, ರಕ್ತಕ್ಕೆ ಹೋಲುವದು. ಅದರಲ್ಲಿ ರಕ್ತ ಉಂಟೋ ಇಲ್ಲವೋ ಎಂಬದನ್ನು ಭೂತಕನ್ನಡಿ ಏನಾ ನಿಶ್ಚಯಿಸಲಿಕ್ಕೆ ಕಷ್ಟ. ಕೀವುಳ್ಳ ಮೂತ್ರದಲ್ಲಿ ದುರ್ವಾಸನೆ ಬರುವದು ಮತ್ತು ಅದು ಕುದಿಸಿದ್ದಲ್ಲಿ ಸ್ವಚ್ಛವಾಗದು. ಸ್ವಸ್ಥನ ಮೂತ್ರದ ವಾಸನೆಯು ಅಲ್ಪವಾಗಿರುವದು. ಸೀ ಮೂತ್ರದ ವಾಸನೆಯು ಸೀ ಮಜ್ಜಿಗೆಯ ವಾಸನೆಯಂತೆ ಇರುವದು. ಹಳೇದಾದ ನಾನಾ ಮೂತ್ರನಾಳದ ವ್ಯಾಧಿಗಳಲ್ಲಿ ಮೂತ್ರದ ಗಾಟು ಹೆಚ್ಚಾಗಿರುವದು. ಮೂತ್ರದಲ್ಲಿ ರಕ್ತವಿರುವಾಗ್ಗೆ ಅಲ್ಪ ವ್ಯತ್ಯಸ್ತವಾಗಿ ಮಾಂಸದ ವಾಸನೆ ತೋರುವದು. ಸ್ವಸ್ಥನ ಮೂತ್ರದಲ್ಲಿ ಸಹ ಹವೆಯ ಬಿಸಿ ತಾಗಿ ಕೊಳೆಯುವದರಿಂದ ಸ್ವಲ್ಪ ಕಾಲದ ಮೇಲೆ ಹೂಗೆ ಬಣ್ಣ ಮತ್ತು ದುರ್ವಾಸನೆಯುಂಟಾಗುತ್ತದೆ.

ಮೂತ್ರವನ್ನು ಗ್ಲಾಸಿನ ನಳಿಗೆಯಲ್ಲಿಯಾಗಲಿ, ಕಬ್ಬಣದ ಅಥವಾ ಬೆಳ್ಳಿಯ ಚಮಚೆಯಲ್ಲಿಯಾಗಲಿ, ಕುದಿಸಿದಾಗ ಮೂತ್ರವು ಬೆಳ್ಳಗಾದರೆ, ಅದರಲ್ಲಿ ಆಲ್ಬ್ಯುಮೆನ್ ಇರುತ್ತದೆಂತ ತಿಳಿಯಬೇಕು. ಅದಕ್ಕೆ 1-2 ಬಿಂದು ನೈಟ್ರಿಕ್ ಎಸಿಡನ್ನು ಕೂಡಿಸಿದ್ದಲ್ಲಿ, ಅದು ಸ್ವಚ್ಛವಾಗದಿದ್ದರೆ, ಆಲ್ಬ್ಯುಮೆನ್ ಇರುತ್ತದೆಂಬದು ಖಂಡಿತ. ಮೂತ್ರದಲ್ಲಿ ಆಲ್ಬ್ಯುಮನ್ ಇರುವದು ವೃಕ್ಕಗಳ ವ್ಯಾಧಿಯ ಮುಖ್ಯ ಲಕ್ಷಣವಾದಾಗ್ಯೂ, ಕೆಲವು ವೇಳೆ ತಣ್ಣೀರಿನ ಸ್ನಾನದಿಂದ ಮತ್ತು ಮೊಟ್ಟೆ ಮುಂತಾದ ಕೆಲವು ಆಹಾರಸೇವನೆಯಿಂದ ಆ ಲಕ್ಷಣ ಕಾಣುವದುಂಟು. ಕೆಲವು ವೇಳೆ ಪಿತ್ತಕೋಶವು ಸರಿಯಾಗಿ ತನ್ನ ಕೆಲಸ ಮಾಡದ್ದರಿಂದ, ಆ ದೋಷವು ಉಂಟಾಗುತ್ತದೆ. ಕೆಲವರಲ್ಲಿ ಚಳಿಜ್ವರದಲ್ಲಿಯೂ, ಕೆಲವರಲ್ಲಿ ಅತಿಯಾದ ಮೈದಂಡನೆಯಿಂದಲೂ, ಆ ವಿಕಾರ ಕಾಣುವದುಂಟು.

ಮೂತ್ರಪರೀಕ್ಷೆ ಕಡ್ಡಿ(ಯುರಿನೋಮಿಟರ್)ಯನ್ನು ಮೂತ್ರ ಇರುವ ಗ್ಲಾಸಿಗೆ ಹಾಕಿ ನೋಡಿದ್ದಲ್ಲಿ ಅದರೊಳಗಿನ ಪಾದರಸವು 1015ರ ಮೇಲೆ 1025ರೊಳಗೆ ನಿಂತರೆ ಆರೋಗ್ಯ ಸ್ಥಿತಿಯೆನ್ನಬಹುದು. ಬರೇ ನೀರಿನ ಭಾರವು 1000 ಆಗಿರುತ್ತದೆ. ವೃಕ್ಕಗಳ ವ್ಯಾಧಿಯಲ್ಲಿ (Bright's disease) 1015ರಿಂದ 1024 ಮತ್ತು ಮಧುಮೇಹದಲ್ಲಿ 1025ರಿಂದ 1040ರ ವರೆಗೆ ಇರುವದು. ಕೆಲವು ವ್ಯಾಧಿಗಳಲ್ಲಿ 1007ರ ವರೆಗೆ ತಗ್ಗುವದುಂಟು.

ಒಂದೇ ದಿನದಲ್ಲಿ ಪ್ರತಿಸರ್ತಿ ಹೊಯ್ಯುವ ಮೂತ್ರವು ಒಂದೇ ವಿಧವಾಗಿರುವದಿಲ್ಲವಾದ್ದರಿಂದ, ಇಡೀ ದಿನದ ಮೂತ್ರವನ್ನು ಕೂಡಿಸಿಟ್ಟುಕೊಂಡು, ಅದರಲ್ಲಿ ಸ್ವಲ್ಪವನ್ನು ಪರೀಕ್ಷೆಗೆ ತೆಗೆದುಕೊಳ್ಳುವದು ಒಳ್ಳೇದೆಂತ ಕೆಲವರ ಅಭಿಪ್ರಾಯವಿದೆ.

ಪಾತ್ಚಾತ್ಯರೀತ್ಯಾ ನಾಲಿಗೆ ಪರೀಕ್ಷೆ

25. ನಾಲಿಗೆಯು ರಕ್ತವಿಲ್ಲದೆ ಬೆಳ್ಳಗಾಗಿಯೂ, ಮೃದುವಾಗಿಯೂ, ಅಗಲವಾಗಿಯೂ, ನಡುಕುಳ್ಳದ್ದಾಗಿಯೂ, ಹಲ್ಲುಗಳಿಂದ ಮಾಡಲ್ಪಟ್ಟ ಒಡಕುಗಳುಳ್ಳದ್ದಾಗಿಯೂ ಇರುವದರಿಂದ, ಪಾಂಡುರೋಗ ಇತ್ಯಾದಿಯಲ್ಲಿ ಉಂಟಾಗುವ ಅಶಕ್ತಿಯೂ, ನಿಶ್ಚೈತನ್ಯವೂ, ರಕ್ತ ನೀರಾಗಿರುವಿಕೆಯೂ, ಸೂಚಿಸಲ್ಪಡುತ್ತವೆ. ಶುಭ್ರವಾದ ಕೆಂಪು ವರ್ಣ ದೇಹದಲ್ಲಿ ರಕ್ತವು ಅತಿಯಾಗಿರುವದನ್ನು ಸೂಚಿಸುತ್ತದೆ. ಅಜೀರ್ಣದಲ್ಲಿ ಈ

ಲಕ್ಷಣವು ಕಂಡರೆ, ಅನ್ನಕೋಶದ ಪೊರೆಗಳಲ್ಲಿ ರಕ್ತವು ಅಧಿಕವಾಗಿರುತ್ತದೆಂದು ತಿಳಿಯಬೇಕು. ಪಿತ್ತದಿಂದ, ಅಥವಾ ಅಜೀರ್ಣದಿಂದ, ಅಥವಾ ಮಸೂರಿಕೆ ಮುಂತಾದ ಬೊಕ್ಕೆಗಳ ಸಂಬಂಧ ಉಂಟಾದ ಜ್ವರದಲ್ಲಿ ಸಹ ಈ ಲಕ್ಷಣ ಕಾಣುವದು. ಕಠಿಣವಾದ ಅಜೀರ್ಣದಲ್ಲಿ ಈ ಕೆಂಪು ವರ್ಣವು ನಾಲಿಗೆಯ ತುದಿಯಲ್ಲಿ ಮತ್ತು ಪಕ್ಕಗಳಲ್ಲಿ ಮಾತ್ರ ಕಾಣುವದುಂಟು.

ಹೃದಯದಲ್ಲಿ ಉಂಟಾಗುವ ನಾನಾ ರೋಗಗಳ ದೆಸೆಯಿಂದ ರಕ್ತವು ಫುಪ್ಫುಸಗಳಲ್ಲಿ ಸರಿಯಾಗಿ ಚಲಿಸದೆ ತಡ ಉಂಟಾದಲ್ಲಿ, ನಾಲಿಗೆಯು ನೀಲಮಿಶ್ರಿತ ಕೆಂಪು ವರ್ಣವಾಗಿ (ನೀಲಲೋಹಿತವಾಗಿ) ರುವದು

ನಾಲಿಗೆಯಲ್ಲಿ ಬಳೇ ಅಗ್ರವಿರುವದರಿಂದಲೇ ಅನಾರೋಗ್ಯವನ್ನು ಊಹಿಸಕೂಡದು. ಸ್ವಸ್ಥರಾದ ಕೆಲವರಲ್ಲಿ, ಹೆಚ್ಚಾಗಿ ಬೆಳಿಗ್ಗಿನ ಸಮಯ, ನಾಲಿಗೆಯು ಹಾಗಿರುವದುಂಟು. ಹಲ್ಲುಗಳ ವಿಕಾರದಿಂದಲೂ, ಬಾಯಿಯೊಳಗೆ ಅಥವಾ ಗಂಟಲಲ್ಲಿ ಅಥವಾ ನಿಜ್ಜಿಯಲ್ಲಿ ಬಾಕು ಇರುವದರಿಂದಲೂ, ನಾಲಿಗೆಯಲ್ಲ ಅಗ್ರವಾಗುತ್ತದೆ. ಅಂಥಾ ಕಾರಣಗಳು ಇಲ್ಲದೆ ನಾಲಿಗೆಯು ಮಲಿನವಾಗಿಯೂ, ನಿರಸವಾಗಿಯೂ ಇದ್ದರೆ, ಅದು ಹೆಚ್ಚಾಗಿ ಯಾವದಾದ ರೊಂದು ಜಾತಿಯ ಜ್ವರದ ಲಕ್ಷಣವೆಂದು ತಿಳಿಯಬೇಕು ಕಠಿಣವಾದ ಬಾಕು, ವಾತ, ಅಥವಾ ಜ್ವರದಲ್ಲಿ, ಕೆನೆಯ ಹಾಗಿನ ಅಗ್ರವಿದ್ದು, ರೋಗವು ಮುಂದರಿಸಿದ ಹಾಗೆ ಅದು ಕಪಿಲ ಅಥವಾ ಕಪ್ಪು ವರ್ಣವನ್ನು ಪಡೆಯುವದು, ಮತ್ತು ನಾಲಿಗೆಯು ಒಣಗಿ, ಒಡೆದು, ಸುಟ್ಟ ಹಾಗೆ ಕಾಣುವದು ಅರಸಿನಮುಂಡಿಗೆ ರೋಗದಲ್ಲಿ ಪಿತ್ತದಿಂದ ನಾಲಿಗೆಯು ಅನೇಕ ವೇಳೆ ಅರಸಿನವಾಗುವದುಂಟು. ಜ್ವರ ಮುಂತಾದ ಕಠಿಣ ವ್ಯಾಧಿಯಲ್ಲ ನಾಲಿಗೆಯು ಕ್ರಮೇಣ ತುದಿಯಿಂದ ಮತ್ತು ಪಕ್ಕಗಳಿಂದ ಸ್ವಚ್ಛವಾಗುತ್ತ ಮೇಲ್ಭಾಗದ ಅಗ್ರ ತೆಳ್ಳಗಾ ಗುತ್ತ ಬರುವದು ರೋಗವು ವಾಸಿಯಾಗುತ್ತ ಬರುವ ಲಕ್ಷಣವಾಗಿರುತ್ತದೆ. ಅಗ್ರವು ಹಾಳೆಯಾಗಿ ಏಳುತ್ತಾ, ಅಡಿಯು ಸುಣ್ಣಗಾಗಿಯೂ, ಕೆಂಪಾಗಿಯೂ, ದ್ರವಯುಕ್ತವಾಗಿಯೂ, ಮಿಂಚುತ್ತಿದ್ದರೆ, ದೇಹದೊಳಗೆ ಏನೋ ದೋಷ ಉಂಟಾಗಿ ರೋಗವು ವಾಸಿಯಾಗದಿರಲಿಕ್ಕೆ ವಿಳಂಬವಾಗಿದೆಯೆಂದು ತಿಳಿಯಬೇಕು

ನಾಲಿಗೆಯ ಮಧ್ಯಭಾಗದಲ್ಲಿಯೂ, ಮೂಲದಲ್ಲಿಯೂ ಅಗ್ರವಿದ್ದು, ಪಕ್ಕಗಳು ಕೆಂಪಾ ಗಿದ್ದರೆ, ಅದು ಅಜೀರ್ಣರೋಗವನ್ನು ಸೂಚಿಸುತ್ತದೆ. ಮತ್ತು ನಾಲಿಗೆಯನ್ನು ಹೊರಗೆ ಮಾಡಿದಾಗ್ಗೆ ಅದು ನಡುಗುತ್ತಿದ್ದರೆ, ರೋಗಿಯು ಔಷಧಗಳನ್ನು ದೋಷಕರವಾಗಿ ಉಪ ಯೋಗಿಸಿರಬೇಕು, ಅಥವಾ, ಅತಿಯಾಗಿ ಮದ್ಯಪಾನ ಮಾಡಿರಬೇಕೆಂದು ಊಹಿಸಬಹುದು.

ನಾಲಿಗೆಯು ಬೇಕಾದ ಹಾಗೆ ಆಡದೆ, ಹೊರಗೆ ಮಾಡಿದಾಗ್ಗೆ ಒಂದು ಬದಿಗೆ ಎಳದು ಹೋಗುವದು ಪಕ್ಷವಾತದ ಲಕ್ಷಣವಾಗಿರುತ್ತದೆ

26. ನಿಶ್ವಾಸೋಚ್ಛ್ವಾಸಗಳಲ್ಲಿ ಎದೆಯ ಎರಡು ಪಕ್ಕಗಳ ಚಲನೆಯು ಒಂದೇ ರೀತಿ ಯಾಗಿರಬೇಕು. ನಾಡಿಯಂತೆ ಶ್ವಾಸವು ದೇಹಾಯಾಸ, ಗಾಬರಿ, ಇತ್ಯಾದಿ ಗಳಿಂದ ವ್ಯತ್ಯಾಸವಾಗುತ್ತದೆ. ಆರೋಗ್ಯಸ್ಥಿತಿಯಲ್ಲಿ ಒಬ್ಬ ಪ್ರಾಯಸ್ಥನ ಶ್ವಾಸಗಳ ಸಂಖ್ಯೆಯು, ಮನಃಕಾಯಗಳ ವಿಶ್ರಮವಿರುವಾಗ್ಗೆ, ಸುಮಾರು ನಾಲ್ಕು ನಾಡಿ ಬಡತಗಳಿಗೆ ಒಂದರಂತೆ ಇರುತ್ತದೆ. ಆದರ ಬೇರೆ ಬೇರೆ ಜನರಲ್ಲಿ ಮಿನಿಟಿಗೆ 15ರಿಂದ

ಪಾಶ್ಚಾತ್ಯರೀತ್ಯಾ ಶ್ವಾಸಪರೀಕ್ಷೆ

18ರ ವರೆಗೆ ವ್ಯತ್ಯಾಸ ಪಡುತ್ತದೆ. ಈ ಕ್ರಮಕ್ಕೆ ಹೆಚ್ಚಾಗಿ ಅಥವಾ ಕಡಿಮೆಯಾಗಿ ಶ್ವಾಸ ಬಿಡುವ ಜನರು ವ್ಯಾಧಿಯಿಲ್ಲದೆ ಇರುವದುಂಟಾದರೂ, (12ರಿಂದ 24ರ ವರೆಗೆ ಇರುವ ದುಂಟು) ಪ್ರಾಯಶಃ ಆ ವ್ಯತಿರೇಕವು ರೋಗಸೂಚಕವೆಂದು ತಿಳಿಯಬಹುದು. ಹೆಚ್ಚಾಗಿದ್ದರೆ ಫುಪ್ಫುಸವ್ಯಾಧಿ, ಅಥವಾ ಫುಪ್ಫುಸಕ್ಕೆ ಬಾಧಿಸುವ ಬೇರೆ ವ್ಯಾಧಿ, ಕಮ್ಮಿಯಾಗಿದ್ದರೆ ಧಾತುಕ್ಷೀಣತೆ ಅಥವಾ ನರಗಳ ಮಂದತೆ, ಬಹುಶಃ ಇರುವದು. ಎರಡು ವರ್ಷ ಪ್ರಾಯದ ವರೆಗಿನ ಮಗು ಏನಿಟಿಗೆ 35 ಸರ್ತಿ, ಅನಂತರ 9 ವರ್ಷ ಪ್ರಾಯದ ವರೆಗಿನ ಬಾಲಕನು ನಿದ್ರೆಯಲ್ಲಿ 18 ಸರ್ತಿ ಎಚ್ಚರಿಕೆಯಲ್ಲಿ 23 ಸರ್ತಿ, ಆ ಮೇಲೆ 15 ವರ್ಷ ಪ್ರಾಯದ ವರೆಗಿನವರು ನಿದ್ರೆಯಲ್ಲ 18 ಸರ್ತಿ, ಎಚ್ಚರಿಕೆಯಲ್ಲಿ 20 ಸರ್ತಿ ಶ್ವಾಸ ಬಿಡುವರು; ಹೀಗೆ ಮಕ್ಕಳಲ್ಲಿ ಶ್ವಾಸದ ಸಂಖ್ಯೆಯು ಹೆಚ್ಚಿರುವದಲ್ಲದೆ, ಹೊಟ್ಟೆಯ ಮಾಂಸಖಂಡಗಳ ಚಲನೆಯೂ ಹೆಚ್ಚಾಗಿರುವದು.

ಹೆಂಗಸಿನ ಶ್ವಾಸಸಂಖ್ಯೆಯು ಗಂಡಸಿನದಕ್ಕಿಂತ ಹೆಚ್ಚಾಗಿರುವದು.

ನಾಡಿಯ 4 ಅಥವಾ 4·5 ಬಡತಗಳಿಗೆ 1ಕ್ಕಿಂತ ಹೆಚ್ಚು ಶ್ವಾಸವಿರುವಲ್ಲಿ, ಶ್ವಾಸಕೋಶದಲ್ಲಿ ಯಾವದಾದರೊಂದು ವ್ಯಾಧಿ ಉಂಟಾಗಿದೆಯಂತ ತಿಳಿಯಬಹುದು. ಅಂಥಾ ಸಂಗತಿಯಲ್ಲಿ ಶ್ವಾಸಸಂಖ್ಯೆಯು ಎನಿಟಿಗೆ ಅನೇಕ ಸರ್ತಿ 40-50ರ ವರೆಗೆ, ಕೆಲವು ಸರ್ತಿ 60-80ರ ವರೆಗೆ ಏರಿ, 5 ನಾಡಿ ಬಡತಗಳಿಗೆ 4 ಶ್ವಾಸದಂತೆ ಆಗುವದುಂಟು.

27. ಸ್ವಸ್ಥಸ್ಥಿತಿಯಲ್ಲಿ ಸಾಧಾರಣವಾಗಿ ಮಲಪ್ರವೃತ್ತಿಯು 24 ತಾಸುಗಳಲ್ಲಿ ಒಮ್ಮೆ ಆಗುವದು. ಪ್ರಕೃತ್ಯನುಸಾರವಾಗಿ ಕೆಲವರಿಗೆ ದಿನಕ್ಕ ಎರಡಾವರ್ತಿ, ಕೆಲವರಿಗೆ ಎರಡು ದಿನಗಳಲ್ಲಿ ಒಮ್ಮೆ, ಮಲಪ್ರವೃತ್ತಿಯಾಗುವ ಕ್ರಮವು ಸೌಖ್ಯದಲ್ಲಿಯೂ ಇರುವದುಂಟು ಮಕ್ಕಳಲ್ಲಿ ಮಲಪ್ರವೃತ್ತಿಯ ಸರ್ತಿಗಳು ಹೆಚ್ಚಿರುವವು. ಚಿಕ್ಕ ಕೂಸುಗಳು 24 ತಾಸುಗಳಲ್ಲಿ 3-4 ಸರ್ತಿ ಹೇಲುವದು ಸುಖಸ್ಥಿತಿಯನ್ನಬಹುದು. ಮಲ ಪ್ರವೃತ್ತಿಯ ಮೇಲೆ ರೋಗವಿಚಾರಮಾಡುವಲ್ಲಿ, ರೋಗಿಯು ಭುಂಜಿಸಿದ ಆಹಾರದ ಗುಣ ಮತ್ತು ಪ್ರಮಾಣವನ್ನೂ, ಅವನು ಹೊಂದಿದ ದೇಹಾಯಾಸವನ್ನೂ, ತಿಳಿದು ಆಲೋಚಿಸತಕ್ಕದ್ದು. ಭುಂಜಿಸಿದ ಆಹಾರವು ಅಲ್ಪವಾಗಿ, ಮಡ್ಡುಬಿಡದೆ ದೇಹಕ್ಕೆ ವ್ಯಾಪಿಸತಕ್ಕ ಸ್ವಭಾವದ್ದಾದರೆ, ಮಲವು ಕಡಿಮೆಯಾಗಿ, ಪ್ರವೃತ್ತಿಯ ಸರ್ತಿಯು ಕಡಿಮಯಾಗುವದು ಸಹಜ. ದೇಹಾಯಾಸಕರವಾದ ಉದ್ಯೋಗ ಇಲ್ಲದಿದ್ದರೂ ಹಾಗೆ ಆಗುವದುಂಟು. 3-4 ದಿನಗಳ ಮಲಬದ್ಧತೆಯು ರೋಗಲಕ್ಷಣವಂದು ತಿಳಿಯಬೇಕು. ಆದರೆ ಕೆಲವರು 6-7 ದಿನಗಳ ವರೆಗೆ ಮಲ ಹೋಗದೆ ಇದ್ದರೂ, ಅದು ತನ್ನ ಪ್ರಕೃತಿಯೆಂತ ತಿಳಕೊಳ್ಳುವವರಿದ್ದಾರೆ. ಮಲ ಪರೀಕ್ಷೆಯಲ್ಲಿ ಮಲವು ತೆಳ್ಳಗೋ, ಗಟ್ಟಿಯೋ, ಹೆಂಟೆಯಾಗಿದ್ದರೆ, ಅದರ ಆಕಾರವು ಕರುಳಿನಂತೆ ದುಂಡಾಗಿದೆಯೋ, ಅಥವಾ ಚಟ್ಟಿಯಾಗಿದೆಯೋ, ಸಪೂರವೋ, ತೋರವೋ, ಬಿಕ್ಕುವದಿದ್ದರೆ, ಮಲ ಗಟ್ಟಿಯಾಗಿ ಹೊರಗೆ ಹಾಕಲಿಕ್ಕೆ ಪ್ರಯಾಸವಾದದ್ದರಿಂದಲೋ, ಅಥವಾ ಆಮದ ದೆಸೆಯಿಂದಲೋ, ವರ್ಣವು ಕಪ್ಪೋ, ಅರಸಿನವೋ, ಬೆಳ್ಳಗೋ, ಕೆಂಪೋ, ಹಸುರೋ, ವೇದನೆ ಇದ್ದರೆ, ಅದು ಯಾವ ಕಾರಣದ್ದು ಎಂಬದನ್ನು ಆಲೋಚಿಸಬೇಕು. ಕಪ್ಪುವರ್ಣವು ರಕ್ತಮಿಶ್ರವಾದದ್ದರಿಂದಲೂ, ಕಬ್ಬಿಣ ಇತ್ಯಾದಿ ಔಷಧಗಳಿಂದಲೂ, ಮಸಿ ಇತ್ಯಾದಿ ತಿಂದದ

ಪಾಶ್ಚಾತ್ಯರೀತ್ಯಾ ಮಲಪರೀಕ್ಷೆ

ರಿಂದಲೂ, ಉಂಟಾಗುತ್ತದೆ. ರಕ್ತವು ಹೆಚ್ಚಾಗಿದ್ದರೆ ಕೆಂಪುವರ್ಣವೇ ಕಾಣುವದು. ಒಳಗೆ ವ್ರಣ ಇದ್ದರೆ, ಅದರ ದೆಸೆಯಿಂದ ಮಲದಲ್ಲಿ ಕೀವು ಕಾಣಬಹುದು. ವಾಸನೆಯ ಭೇದಗಳು ಸಹ ರೋಗನಿಶ್ಚಯಕ್ಕೆ ಪ್ರಯೋಜನಕರವಾದವಾಗಿರುತ್ತವೆ. ತೆಳ್ಳಗಿನ ಮಲವು ವಿಷೂಚಿಯಲ್ಲಿ ಅಕ್ಕಚ್ಚಿನ ರೂಪವಾಗಿಯೂ, ಅಮಭೇದಿಯಲ್ಲಿ ಹೆರದ ಮಾಂಸದಂತೆಯೂ ಕಾಣುವದು. ಬಿಳೇ ವರ್ಣವು ಪಿತ್ತ ಕಡಿಮೆಯಾದದ್ದರಿಂದ ಉಂಟಾಗುವದು. ಮೂಲವ್ಯಾಧಿ ಮೊಳೆಗಳಿಂದ, ಆಸನದ ಕುರುವಿನಿಂದ, ಅಥವಾ ಕಳಕರುಳು ಗಾಯಪಟ್ಟದ್ದರಿಂದ, ಹೊರಟು ಬರುವ ರಕ್ತವು ಕೆಂಪಾಗಿಯೇ ಇರುವದು. ಮಕ್ಕಳ ಅತಿಸಾರದಲ್ಲಿ ಮಲವು ವಾಡಿಕೆಯಾಗಿ ಹಸುರಾಗಿರುವದು; ಮತ್ತು ಅತಿಸಾರ ವಾಸಿಯಾದ ಮೇಲೆ ಚಿರಕಾಲದ ವರೆಗೆ ಆ ವರ್ಣವೇ ನಿಂತಿರುವದು ಅರಸಿನವಾದ ಮಲ ಸ್ವಲ್ಪ ಹೊತ್ತು ಇರಿಸಲ್ಪಟ್ಟರೆ, ಹಸುರಾಗುವದುಂಟು. ಮಲದ ಜೊತೆಯಲ್ಲಿ ಹುಳ ಉಂಟೋ, ಇದ್ದರೆ ಆ ಹುಳ ಯಾವ ಜಾತಿಯದು, ಎಂಬದನ್ನು ಸಹ ವಿಚಾರಿಸಿ ಆಲೋಚಿಸಬೇಕು

XVIII ನೇ ಅಧ್ಯಾಯ.

ಜಯಿಸಲಶಕ್ಯವಾದ ಉಪದ್ರವಗಳು

1 (*a*) ವಾತವ್ಯಾಧಿಃ ಪ್ರಮೇಹಶ್ಚ ಕುಷ್ಠಮರ್ಶೋ ಭಗಂದರಃ ।
ಅಶ್ಮರೀ ಮೂಢಗರ್ಭಶ್ಚ ತಥೈವೋದರಮಷ್ಟಮಂ ॥
ಅಷ್ಟಾವೇತೇ ಪ್ರಕೃತ್ಯೈವ ದುಶ್ಚಿಕಿತ್ಸ್ಯಾ ಮಹಾಗದಾಃ ।
ಪ್ರಾಣಮಾಂಸಕ್ಷಯಶ್ವಾಸತೃಷ್ಣಾಶೋಷವಮಿಾಜ್ವರೈಃ ॥
ಮೂರ್ಚ್ಛಾತಿಸಾರಹಿಕ್ಕಾಭಿಃ ಪುನಶ್ಚೈತೈರುಪದ್ರುತಾಃ ।
ವರ್ಜನೀಯಾ ವಿಶೇಷೇಣ ಭಿಷಜಾ ಸಿದ್ಧಿಮಿಚ್ಛತಾ ॥ (ಸು. 122)

ಮಹಾರೋಗಗಳು

ವಾತವ್ಯಾಧಿ, ಪ್ರಮೇಹ, ಕುಷ್ಠ, ಮೂಲವ್ಯಾಧಿ, ಭಗಂದರ, ಅಶ್ಮರೀ (ಕಲ್ಲುಮೂತ್ರ), ಮೂಢಗರ್ಭ (ಗರ್ಭದಲ್ಲಿಯೇ ಶಿಶು ಸತ್ತಿರುವದು), ಉದರವ್ಯಾಧಿ (ಜಲೋದರ ಇತ್ಯಾದಿ), ಇವು ಎಂಟು ಸ್ವಾಭಾವಿಕವಾಗಿಯೇ ಚಿಕಿತ್ಸೆಗೆ ಕಷ್ಟವಾದ ಮಹಾರೋಗಗಳಾಗಿರುತ್ತವೆ ಅವುಗಳೊಂದಿಗೆ ಬಲಕ್ಷಯ, ಮಾಂಸಕ್ಷಯ, ಉಬ್ಬಸ, ಬಾಯಾರಿಕೆ, ಯಕ್ಷ್ಮ, ವಾಂತಿ, ಜ್ವರ, ಮೂರ್ಚ್ಛೆ, ಅತಿಸಾರ, ಬಿಕ್ಕಟ್ಟು, ಈ ಉಪದ್ರವಗಳು ಕಂಡರೆ, ಸಿದ್ಧಿಯನ್ನಪೇಕ್ಷಿಸುವ ವೈದ್ಯನು ಅವುಗಳನ್ನು ಅಗತ್ಯವಾಗಿ ವರ್ಜಿಸತಕ್ಕದ್ದು.

(*b*) ವಾತವ್ಯಾಧಿರಪಸ್ಮಾರೀ ಕುಷ್ಠೀ ಶೋಫೀ ತಥೋದರೀ ।
ಗುಲ್ಮೀ ಚ ಮಧುಮೇಹೀ ಚ ರಾಜಯಕ್ಷ್ಮೀ ಚ ಯೋ ನರಃ ॥
ಅಚಿಕಿತ್ಸ್ಯಾ ಭವಂತ್ಯೇತೇ ಬಲಮಾಂಸಕ್ಷಯೇ ಸತಿ ।
ಅನ್ಯೇಷ್ವಪಿ ವಿಕಾರೇಷು ತಾನ್ ಭಿಷಕ್ ಪರಿವರ್ಜಯೇತ್ ॥ (ಚ. 395.)

ವಾತವ್ಯಾಧಿ, ಅಪಸ್ಮಾರ, ಕುಷ್ಠ, ಶೋಫ, ಉದರವ್ಯಾಧಿ, ಗುಲ್ಮ, ಮಧುಮೇಹ, ರಾಜಯಕ್ಷ್ಮ, ಈ ವ್ಯಾಧಿಗಳುಳ್ಳ ಮನುಷ್ಯರ ಬಲ ಮತ್ತು ಮಾಂಸ ಕ್ಷಯವಾಗಿದ್ದರೆ, ಅವರು ಚಿಕಿತ್ಸೆಗೆ ಅರ್ಹರಲ್ಲ. ಆ ರೋಗಗಳಿಂದ ಪೀಡಿತರಾದವರಲ್ಲಿ ಬೇರೆ ವಿಕಾರಗಳು ಉಂಟಾದರ ಸಹ ಅವರ ಚಿಕಿತ್ಸೆಯನ್ನು ವೈದ್ಯನು ಬಿಟ್ಟುಬಿಡಬೇಕು.

(*c*) ವಾತವ್ಯಾಧಿರಪಸ್ಮಾರೀ ಕುಷ್ಠೀ ರಕ್ತ್ಯುದರೀ ಕ್ಷಯೀ ।
ಗುಲ್ಮೀ ಮೇಹೀ ಚ ತಾನ್ ಕ್ಷೀಣಾನ್ ವಿಕಾರಾಽಲ್ಪೇಽಪಿ ವರ್ಜಯೇತ್ ॥
(ವಾ. 175.)

ವಾತ, ಅಪಸ್ಮಾರ, ಕುಷ್ಠ, ರಕ್ತಪಿತ್ತ, ಉದರ, ಕ್ಷಯ, ಗುಲ್ಮ, ಮೇಹ, ಈ ವ್ಯಾಧಿಗಳಿಂದ ಪೀಡಿತರಾದವರು ಕ್ಷೀಣವಾಗಿದ್ದರೆ, ರೋಗವು ಅಲ್ಪವಾಗಿದ್ದರೂ, ಅವರನ್ನು ವೈದ್ಯನು ವರ್ಜಿಸತಕ್ಕದ್ದು.

2. ಶೂನಂ ಸುಪ್ತತ್ವಚಂ ಭಗ್ನಂ ಕಂಪಾಧ್ಮಾನಸಿಪೀಡಿತಂ ।
ನರಂ ರುಜಾರ್ತಿಮಂತಂ ಚ ವಾತವ್ಯಾಧಿರ್ವಿನಾಶಯೇತ್ ॥ (ಸು. 122.)

ವಾತವ್ಯಾಧಿಯಲ್ಲಿ ಅತುಥಸೂಚನೆ

ವಾತರೋಗಿಯಲ್ಲಿ ಬಾಕು, ಚರ್ಮನಿರ್ಜೀವವಾಗಿರುವದು, ಒಡಕು, ನಡುಕು, ಹೊಟ್ಟೆಯುಬ್ಬರ, ಸಂಕಟಕರವಾದ ನೋವು, ಈ ಲಕ್ಷಣಗಳು ಕಂಡರೆ, ಆ ಮನುಷ್ಯನು ಬದುಕಲಾರನು.

ಪರಾ ಅವು ಯಾಪ್ಯಲಕ್ಷಣಗಳಂತ ವಾ ಪ್ರ (ಪು 42೦)

3. ಯಧೂಕೊತ್ಪೀಪದ್ರವಾವಿಷ್ಟಮತಿಪ್ರಸ್ರುತಮೇವ ವಾ ।
ಪ್ರಮೇಹದಲ್ಲಿ ಅಶುಭಸೂಚನೆ ಪಿಡಕಾಪೀಡಿತಂ ಗಾಢಂ ಪ್ರಮೇಹೋ ಹಂತಿ ಮಾನವಂ ॥ (ಸು. 122.)

ಪ್ರಮೇಹವ್ಯಾಧಿಗೆ ಉಕ್ತವಾದ ಉಪದ್ರವಗಳೂ, ಅಧವಾ ಅತಿಯಾಗಿ ಮೂತ್ರಹೋಗುತ್ತಿರೋಣ, ಅಧವಾ ಕಠಿಣವಾದ ಪಿಡಕಗಳು, ಇವುಗಳು ಸೇರಿದರೆ ಪ್ರಮೇಹವುಳ್ಳ ಮನುಷ್ಯನು ಬದುಕಲಾರನು

ಪರಾ 'ವಾ'ದ ಸ್ಥಾನದಲ್ಲಿ ಚ' ಛಾ ಪ್ರ ದಲ್ಲ ಕಾಣುತ್ತದೆ ಆ ಪಾರಪ್ರಕಾರ, ಮೂರು ವಿಧವಾದ ದೋಷಗಳೆಲ್ಲಾ ಕೂಡಿರುವದು ಮರಣಸೂಚಕ ಎಂತ ಅರ್ಥವಾಗುತ್ತದ

4. ಪ್ರಭಿನ್ನಂ ಪ್ರಸ್ರುತಾಂಗಂ ಚ ರಕ್ತನೇತ್ರ ಹತಸ್ವರಂ ।
ಕುಷ್ಠದಲ್ಲಿ ಅಶುಭಸೂಚನೆ ಪಂಚಕರ್ಮಗುಣಾತೀತಂ ಕುಷ್ಠಂ ಹಂತೀಹ ಕುಷ್ಠಿನಂ ॥ (ಸು. 122)

ಅಂಗಗಳು ಹಚ್ಚಾಗಿ ಒಡದು ಸುರಿಯುತ್ತಿರುವದು, ಕಣ್ಣುಗಳು ರಕ್ತವರ್ಣವಾಗಿರುವದು, ಸ್ವರ ಬಿದ್ದಿರುವದು, ಮತ್ತು (ವಮನಾದಿ) ಪಂಚಕರ್ಮಗಳು ನಿಷ್ಪ್ರಯೋಜನವಾಗಿರುವದು. ಈ ಲಕ್ಷಣಗಳುಳ್ಳ ಕುಷ್ಠರೋಗಿಯು ಆ ರೋಗದಿಂದ ಸಾಯುವನು.

5. ತೃಷ್ಣಾರೋಚಕಶೂಲಾರ್ತಮತಿಪ್ರಸ್ರುತಶೋಣಿತಂ ।
ಅರ್ಶಸ್ಸಿನಲ್ಲಿ ಅಶುಭಸೂಚನೆ ಶೋಫಾತಿಸಾರಸಂಯುಕ್ತಮಶೋರ್ವ್ಯಾಧಿರ್ವಿನಾಶಯೇತ್ ॥ (ಸು 123.)

ಬಾಯಾರಿಕೆ, ಅರುಚಿ, ಶೂಲೆ, ಅತಿಯಾಗಿ ರಕ್ತ ಸ್ರವಿಸೋಣ, ಶೋಫ, ಅತಿಸಾರ, ಈ ಲಕ್ಷಣಗಳುಳ್ಳವನನ್ನು ಮೂಲವ್ಯಾಧಿಯು ಕೊಲ್ಲುವದು.

6. ವಾತಮೂತ್ರಪುರೀಷಾಣಿ ಕ್ರಿಮಯಃ ಶುಕ್ರಮೇವ ಚ ।
ಭಗಂದರದಲ್ಲಿ ಅಶುಭಸೂಚನೆ ಭಗಂದರಾತ್ ಪ್ರಸ್ರವಂತಿ ಯಸ್ಯ ತಂ ಪರಿವರ್ಜಯೇತ್ ॥ (ಸು 123)

ಭಗಂದರವ್ರಣದಿಂದ ವಾಯು, ಮೂತ್ರ, ಮಲ, ಕ್ರಿಮಿಗಳು, ಶುಕ್ರ, ಇವು ಸ್ರವಿಸುತ್ತಿದ್ದರೆ, ಆ ರೋಗಿಯ ಚಿಕಿತ್ಸೆ ನಿಷ್ಪ್ರಯೋಜನವೆಂದರಿಯುವದು.

7. ಪ್ರಶೂನನಾಭಿವೃಷಣಂ ರುದ್ಧಮೂತ್ರಂ ರುಗನ್ವಿತಂ ।
ಅಶ್ಮರಿಯಲ್ಲಿ ಅಶುಭಸೂಚನೆ ಅಶ್ಮರೀ ಕ್ಷಪಯತ್ಯಾಶು ಸಿಕತಾಶರ್ಕರಾನ್ವಿತಾ ॥ (ಸು. 123.)

ಹೊಕ್ಕುಳು ಮತ್ತು ಅಂಡ ಹೆಚ್ಚಾಗಿ ಬಾತಿರುವದು, ಮೂತ್ರ ಒದ್ದವಾಗಿರುವದು, ನೋವು ಕೂಡಿರುವದು ಮಳಲಿನ ಹಾಗಿನ ಕಾಳುಗಳು ಸ್ರವಿಸುತ್ತಿರುವದು, ಈ ಲಕ್ಷಣಗಳುಳ್ಳವನನ್ನು ಅಶ್ಮರೀವ್ಯಾಧಿಯು ಬೇಗನೇ ಕೊಲ್ಲುವದು.

8. ಗರ್ಭಕೋಶಪರಾಸಂಗೀ ಮಕ್ಕಲ್ಲೋ ಯೋನಿಸಂವೃತಿಃ ।
ಮೂಢಗರ್ಭದಲ್ಲಿ ಆಶುಭಸೂಚನೆ ಹನ್ಯಾತ್ತಾ ಸ್ತ್ರಿಯಂ ಮೂಢಗರ್ಭೇ ಯಧೋಕ್ತಾಶ್ಚಾಪ್ಯುಪದ್ರವಾಃ ।
(ಸು. 123.)

ಮೂಢಗರ್ಭದಲ್ಲಿ ಉಕ್ತವಾದ ಉಪದ್ರವಗಳೊಂದಿಗೆ ಯೋನಿಸಂವೃತಿ (ಯೋನಿ ಮುಚ್ಚಿಕೊಳ್ಳೋಣ) ಎಂಬ ರೋಗ, ಗರ್ಭಕೋಶದಲ್ಲಿ (ಕೈಕಾಲುಗಳು ಅಥವಾ ಶಿರಸ್ಸು) ಸಿಕ್ಕಿಕೊಳ್ಳೋಣ ಮತ್ತು ಮಕ್ಕಲ್ಲ ಎಂಬ ಶೂಲೆ ಸಹಿತವಾದ ಬಾಣಂತಿರೋಗ ಕೂಡಿಕೊಂಡಿದ್ದರೆ, ಆ ಸ್ತ್ರೀಯು ಬದುಕಲಾರಳು.

9. ಪಾರ್ಶ್ವಭಂಗಾನ್ನವಿದ್ವೇಷಶೋಫಾತಿಸಾರಪೀಡಿತಂ ।
ಉದರವ್ಯಾಧಿಯಲ್ಲಿ ಆಶುಭಸೂಚನೆ ವಿರಿಕ್ತಂ ಪೂರ್ಯಮಾಣಂ ಚ ವರ್ಜಯೇದುದರಾರ್ದಿತಂ ॥ (ಸು. 123.)

ಪಾರ್ಶ್ವಗಳಲ್ಲಿ ಭಾಗವಾದ ಹಾಗಿನ ಶೂಲೆ, ಅನ್ನದ್ವೇಷ, ಶೋಫೆ, ಅತಿಸಾರ, ವಿರೇಚಿಸಲ್ಪಟ್ಟ ಹಾಗೆ ಪುನಃ ತುಂಬುತ್ತಿರೋಣ, ಈ ಲಕ್ಷಣಗಳಿಂದ ಕೂಡಿದ ಉದರರೋಗಿಯನ್ನು ಬಿಟ್ಟುಬಿಡಬೇಕು.

10. ಯಸ್ತಾಮ್ಯತಿ ವಿಸಂಜ್ಞಶ್ಚ ಶೇತೇ ನಿಪತಿತೋಽಪಿ ವಾ ।
ಶೀತಾರ್ದಿತೋಽಂತರುಷ್ಣಶ್ಚ ಜ್ವರೇಣ ಮ್ರಿಯತೇ ನರಃ ॥
ಯೋ ಹೃಷ್ಟರೋಮಾ ರಕ್ತಾಕ್ಷೋ ಹೃದಿ ಸಂಘಾತಶೂಲವಾನ್ ।
ನಿತ್ಯಂ ವಕ್ತ್ರೇಣ ಚೋಚ್ಛ್ವಸ್ಯಾತ್ ತಂ ಜ್ವರೋ ಹಂತಿ ಮಾನವಂ ॥
ಜ್ವರದಲ್ಲ ಆಶುಭಸೂಚನೆ ಹಿಕ್ಕಾಶ್ವಾಸಪಿಪಾಸಾರ್ತಂ ಮೂಢಂ ವಿಭ್ರಾಂತಲೋಚನಂ ।
ಸಂತತೋಚ್ಛ್ವಾಸಿನಂ ಕ್ಷೀಣಂ ನರಂ ಕ್ಷಪಯತಿ ಜ್ವರಃ ॥
ಅವಿಲಾಕ್ಷಂ ಪ್ರತಾಮ್ಯಂತಂ ನಿದ್ರಾಯುಕ್ತಮತೀವ ಚ ।
ಕ್ಷೀಣಶೋಣಿತಮಾಂಸಂ ಚ ನರಂ ಕ್ಷಪಯತಿ ಜ್ವರಃ ॥ (ಸು. 123.)

(1) ಸಂಕಟದಿಂದ ನರಳುತ್ತಾ, ಎಚ್ಚರಿಕೆಯಿಲ್ಲದೆ, ಬಿದ್ದ ಹಾಗೆ ಇದ್ದು, ನಿದ್ರೆಮಾಡುತ್ತಾ, ಒಳಗೆ ಬಿಸಿ ಇರುವಾಗ್ಗೆ ಹೊರಗೆ ಶೀತದಿಂದ ಪೀಡಿತನಾಗಿ, ಯಾವ ರೋಗಿ ಇರುತ್ತಾನೋ ಅವನು ಆ ಜ್ವರದಿಂದ ಸಾಯುತ್ತಾನೆ (2) ರೋಮಾಂಚ, ಕೆಂಪು ಕಣ್ಣು, ಎದೆಯಲ್ಲಿ ಬಡತದ ಶೂಲೆ, ಸದಾಕಾಲ ಬಾಯಿಯಿಂದಲೇ ಶ್ವಾಸ ಬಿಡೋಣ, ಈ ಲಕ್ಷಣಗಳುಳ್ಳ ಮನುಷ್ಯನನ್ನು ಜ್ವರವು ಕೊಲ್ಲುವದು. (3) ಬಿಕ್ಕಟ್ಟು, ಉಬ್ಬಸ, ಬಾಯಾರಿಕೆ, ಇವುಗಳಿಂದ ಪೀಡಿತನಾಗಿಯೂ, ಜ್ಞಾನವಿಲ್ಲದವನಾಗಿಯೂ, ಭ್ರಮೆಗೊಂಡ ಕಣ್ಣುಗಳುಳ್ಳವನಾಗಿಯೂ, ಅಧಿಕವಾಗಿ ಹೊರಗೆ ಶ್ವಾಸಬಿಡುವವನಾಗಿಯೂ, ಕ್ಷೀಣನಾಗಿಯೂ ಇರುವ ಮನುಷ್ಯನು ಜ್ವರದಿಂದ ಸಾಯುವನು. (4) ಸಂಕಟಪಡುವದು ವಿಶೇಷವಾಗಿ, ಕಣ್ಣು ಕಲಂಕವಾಗಿ, ನಿದ್ರೆಯು ಅತಿಯಾಗಿ ಮತ್ತು ರಕ್ತಮಾಂಸಗಳು ಕ್ಷೀಣವಾಗಿ, ಯಾವನಲ್ಲಿರುತ್ತವೋ ಆತನು ಜ್ವರದಿಂದ ನಷ್ಟವಾಗುವನು.

ಷರಾ 'ತಾಮ್ಯತಿ' ಎಂದರೆ ಪದೇ ಪದೇ ಮೂರ್ಛಿಹೋಗುತ್ತಾನೆಂದರ್ಥವೆಂತ ಸಿ ಸಂ ವ್ಯಾ. ಹರ್ಷವಿಲ್ಲದವನಾಗುತ್ತಾನೆ ಎಂದರ್ಥವಾಗಿ ಭಾ ಪ್ರ (ಪು 316) 'ಅವಿಲಾಕ್ಷಂ' ಎಂದರೆ ಗಂಜಲ್ಲೀನಂತೆ ಕಣ್ಣೀರು ಸುರಿಯುವಂಥವನೆಂತ ನಿ ಸಂ ವ್ಯಾ

11. ಶ್ವಾಸಶೂಲಪಿಪಾಸಾರ್ತಂ ಕ್ಷೀಣಂ ಜ್ವರನಿಪೀಡಿತಂ |
ಅತಿಸಾರದಲ್ಲಿ ಅಶುಭಸೂಚನೆ ವಿಶೇಷೇಣ ನರಂ ವೃದ್ಧಮತೀಸಾರೋ ವಿನಾಶಯೇತ್ || (ಸು 123.)

ಉಬ್ಬಸ, ಶೂಲೆ, ಬಾಯಾರಿಕೆ, ಕ್ಷೀಣತೆ, ಜ್ವರ, ಇವುಗಳಿಂದ ಪೀಡಿತನಾದ ರೋಗಿಯನ್ನು, ವಿಶೇಷವಾಗಿ (ಅಂಧಾ ಸ್ಥಿತಿಯ) ಮುದುಕನನ್ನು, ಅತಿಸಾರವು ಕೊಲ್ಲುವದು

12 (*a*) ಶುಕ್ಲಾಕ್ಷಮನ್ನದ್ವೇಷಾತ್ಪಾರಮೂರ್ಧ್ವಶ್ವಾಸನಿಪೀಡಿತಂ |
ಯಕ್ಷ್ಮರೋಗದಲ್ಲಿ ಅಶುಭಸೂಚನೆ ಕೃಚ್ಛ್ರೇಣ ಬಹು ಮೇಹಂತಂ ಯಕ್ಷ್ಮಾ ಹಂತೀಹ ಮಾನವಂ ||
(ಸು. 123.)

ಕಣ್ಣು ಬೆಳ್ಳಗಾಗಿರೋಣ, ಅನ್ನದ್ವೇಷ, ಊರ್ಧ್ವಶ್ವಾಸ, ಕಷ್ಟದಿಂದ ಬಹು ಸರ್ತಿ ಮೂತ್ರಿಸೋಣ, ಈ ಲಕ್ಷಣಗಳುಳ್ಳ ಮನುಷ್ಯನು ಯಕ್ಷ್ಮರೋಗದಿಂದ ಸಾಯುವನು.

ಷರಾ 'ಮೇಹಂತಂ' ಮಲಬಿಡುವವನೆಂತ ಸಿ ಸಂ ವ್ಯಾ ಶುಕ್ರವನ್ನು ಮೂತ್ರಿಸುವವನೆಂತ ಭಾ ಪ್ರ (ಪು 366)

(*b*) ಯಕ್ಷ್ಮಾ ಪಾರ್ಶ್ವರುಜಾನಾಹರಕ್ತಛರ್ದ್ಯಂಸತಾಪನಂ | (ವಾ. 173.)

ಯಕ್ಷ್ಮರೋಗವು ಪಕ್ಕಗಳ ಶೂಲೆ, ಹೊಟ್ಟೆಯುಬ್ಬರ, ರಕ್ತವಾಂತಿ, ಹೆಗಲಲ್ಲಿ ಉರಿ, ಈ ದುರ್ಲಕ್ಷಣಗಳುಳ್ಳವನನ್ನು ಕೊಲ್ಲುವದು.

(*c*) ಶರೀರಾಂತಾಶ್ಚ ಶೋಭಂತೇ ಶರೀರಶ್ಚೋಪಶುಷ್ಯತಿ |
ಬಲಂ ಚ ಹೀಯತೇ ಯಸ್ಯ ರಾಜಯಕ್ಷ್ಮಾ ಹಿನಸ್ತಿ ತಂ || (ಚ. 395.)

ರಾಜಯಕ್ಷ್ಮರೋಗದವನ ಶರೀರದ ಅಂತ್ಯಭಾಗಗಳಲ್ಲಿ ಶೋಫೆ ಕಂಡು, ಶರೀರವು ಒಣಗುತ್ತಾ, ಬಲವು ಕಡಿಮೆಯಾಗುತ್ತಾ ಬಂದರೆ, ಅವನು ಆ ರೋಗದಿಂದ ಸಾಯುವನು.

13. ಶ್ವಾಸಶೂಲಪಿಪಾಸಾನ್ನವಿದ್ವೇಷಗ್ರಂಥಿಮೂಢತಾಃ |
ಗುಲ್ಮದಲ್ಲಿ ಅಶುಭಸೂಚನೆ ಭವಂತಿ ದುರ್ಬಲತ್ವಂ ಚ ಗುಲ್ಮಿನೋ ಮೃತ್ಯುಮೇಯತಃ || (ಸು 123)

ಉಬ್ಬಸ, ಶೂಲೆ, ಬಾಯಾರಿಕೆ, ಅನ್ನದ್ವೇಷ, ಮೂಢವಾದ ಗಂಟು (ಚೆಂಡು), ಅಶಕ್ತಿ. ಈ ಲಕ್ಷಣಗಳು ಮೃತ್ಯುವನ್ನು ಸಮೀಪಿಸುವ ಗುಲ್ಮರೋಗಿಯಲ್ಲಿ ಉಂಟಾಗುವವು.

14. ಆಧ್ಮಾತಂ ಬದ್ಧನಿಷ್ಯಂದಂ ಛರ್ದಿಹಿಕ್ಕಾತೃಡನ್ವಿತಂ |
ವಿದ್ರಧಿಯಲ್ಲಿ ಅಶುಭಸೂಚನೆ ರುಜಾಶ್ವಾಸಸಮಾವಿಷ್ಟಂ ವಿದ್ರಧಿರ್ನಾಶಯೇನ್ನರಂ || (ಸು. 124.)

ಹೊಟ್ಟೆಯುಬ್ಬರ, ಕೀವುಕಟ್ಟಿಕೊಳ್ಳೋಣ, ವಾಂತಿ, ಬಿಕ್ಕಟ್ಟು, ಬಾಯಾರಿಕೆ, ಶ್ವಾಸ ಎಳೆಯುವಾಗ ನೋವು, ಈ ಲಕ್ಷಣಗಳುಳ್ಳವನನ್ನು ವಿದ್ರಧಿಯು ಕೊಲ್ಲುವದು.

15. ಪಾಂಡುರೋಗದಲ್ಲಿ ಅಶುಭಸೂಚನೆ

ಪಾಂಡುದಂತನಖೋ ಯಶ್ಚ ಪಾಂಡುನೇತ್ರಶ್ಚ ಮಾನವಃ ।
ಪಾಂಡುಸಂಘಾತದಶೋರ್ಿ ಚ ಪಾಂಡುರೋಗೀ ವಿನಶ್ಯತಿ ॥ (ಸು. 124.)

ಹಲ್ಲು, ಉಗುರು ಮತ್ತು ಕಣ್ಣು ಬಿಳೇದಾಗಿರುವದು ಮತ್ತು ರೋಗಿಯ ದೃಷ್ಟಿಗೆ ಬಿಳುಪಿನ ರಾಶಿಯೇ ಕಾಣುವದು, ಈ ಲಕ್ಷಣಗಳು ಯಾವ ಪಾಂಡುರೋಗಿಯಲ್ಲಿ ಕಾಣುತ್ತವೋ, ಅವನು ಸಾಯುವನು.

16. ರಕ್ತಪಿತ್ತದಲ್ಲಿ ಅಶುಭಸೂಚನೆ

ಲೋಹಿತಂ ಛರ್ದಯೇದ್ಯಶ್ಚ ಬಹುಶೋ ಲೋಹಿತೇಕ್ಷಣಃ ।
ರಕ್ತಾನಾಂ ಚ ದಿಶಾಂ ದ್ರಷ್ಟಾ ರಕ್ತಪಿತ್ತೀ ವಿನಶ್ಯತಿ ॥ (ಸು. 124.)

ರಕ್ತವನ್ನು ಬಹಳ ಸರ್ತಿ ವಾಂತಿಮಾಡೋಣ, ಕಣ್ಣು ಕೆಂಪಾಗೋಣ, ದಿಕ್ಕುಗಳು ಕೆಂಪಾಗಿ ಕಾಣೋಣ, ಈ ಲಕ್ಷಣಗಳಿಂದ ಕೂಡಿದ ರಕ್ತಪಿತ್ತರೋಗಿಯು ಸಾಯುವನು.

17. ಉನ್ಮಾದದಲ್ಲಿ ಅಶುಭಸೂಚನೆ

ಅವಾಙ್ಮುಖಸ್ತೂನ್ಮುಖೋ ವಾ ಕ್ಷೀಣಮಾಂಸಬಲೋ ನರಃ ।
ಜಾಗರಿಷ್ಣುರಸಂದೇಹಮುನ್ಮಾದೇನ ವಿನಶ್ಯತಿ ॥ (ಸು. 124.)

ಮುಖವನ್ನು ಕೆಳಗೆ ಬೊಗ್ಗಿಸಿಕೊಂಡೇ ಅಥವಾ ಮೇಲಕ್ಕೆತ್ತಿಕೊಂಡೇ ಇರೋಣ, ಮಾಂಸ ಮತ್ತು ಬಲ ಕ್ಷೀಣವಾಗೋಣ, ನಿದ್ರೆಯಿಲ್ಲದಿರೋಣ, ಈ ಲಕ್ಷಣಗಳು ಉನ್ಮಾದರೋಗಿಯಲ್ಲಿ ಕಂಡರ ಆತನು ನಿಶ್ಚಯವಾಗಿ ಸಾಯುವನು.

18 ಅಪಸ್ಮಾರದಲ್ಲಿ ಅಶುಭಸೂಚನೆ

ಬಹುಶೋಽಪಸ್ಮರಂತಂ ತು ಪ್ರಕ್ಷೀಣಂ ಜಲಿತಭ್ರುವಂ ।
ನೇತ್ರಾಭ್ಯಾಂ ಚ ವಿಕುರ್ವಾಣಮಪಸ್ಮಾರೋ ವಿನಾಶಯೇತ್ ॥
(ಸು. 124.)

ಬಹು ಸರ್ತಿ ಸ್ಮೃತಿ ತಪ್ಪೋಣ, ಬಹಳ ಕ್ಷೀಣತೆ, ಹುಬ್ಬುಗಳನ್ನು ಅಲ್ಲಾಡಿಸೋಣ, ಕಣ್ಣುಗಳನ್ನು ವಿಕಾರವಾಗಿ ತಿರುಗಿಸೋಣ, ಈ ಲಕ್ಷಣಗಳುಳ್ಳವನನ್ನು ಅಪಸ್ಮಾರ ರೋಗವು ಕೊಲ್ಲುವದು.

19. ಮಸೂರಿಕೆಯಲ್ಲಿ ಅಶುಭಸೂಚನೆ

ಪ್ರವಾಲಗುಲಿಕಾಭಾಸಾ ಯಸ್ಯ ಗಾತ್ರೇ ಮಸೂರಿಕಾಃ ।
ಉತ್ಪದ್ಯಾಶು ವಿನಶ್ಯಂತಿ ನ ಚಿರಾತ್ ಸ ವಿನಶ್ಯತಿ ॥ (ವಾ. 176.)

ಹವಳದ ಗುಂಡಿನ ಪ್ರಭೆಯುಳ್ಳ ಮೈಲಿಗೆ ಖಜ್ಜಿಗಳು ಯಾವನ ಶರೀರದಲ್ಲಿ ಎದ್ದು ಬೇಗನೇ ಕಾಣದೆ ಹೋಗುತ್ತವೋ, ಆತನು ಸ್ವಲ್ಪಕಾಲದಲ್ಲಿಯೇ ಮೃತವಾಗುವನು.

20. ಮಸೂರದ್ವಿದಲಪ್ರಖ್ಯಾಸ್ತಥಾ ವಿದ್ರುಮಸನ್ನಿಭಾಃ ।
ಕೋಟಲೆಯಲ್ಲಿ ಅಶುಭಸೂಚನೆ ಅಂತರ್ಮಕ್ತ್ರಾಃ ಕೃಷ್ಣಾಭಾಶ್ಚ ವಿಸ್ಫೋಟಾ ದೇಹನಾಶನಾಃ ॥
(ವಾ. 176.)

ಗುಳ್ಳೆಗಳು ಚಾಣಂಗಿ ಬೇಳೆಯ ಆಕಾರವಾಗಿಯೂ, ಹವಳದ ವರ್ಣವಾಗಿಯೂ, ಒಳ ಮುಖವಾಗಿಯೂ, ದಡ್ಡಿಗೆ ಸದೃಶವಾಗಿಯೂ ಇದ್ದರೆ, ಆ ಗುಳ್ಳೆ (ಕೋಟಲೆ) ರೋಗವು ದೇಹವನ್ನು ನಾಶಮಾಡುವದು.

21. ವಾತಾಷ್ಠೀಲಾತಿಸಂವೃದ್ಧಾ ತಿಷ್ಠಂತೀ ದಾರುಣಾ ಹೃದಿ ।
ಅಷ್ಠೀಲಾ ವ್ಯಾಧಿಯಲ್ಲಿ ಅಶುಭಸೂಚನೆ ತೃಷ್ಣಯಾ ತು ಪರೀತಸ್ಯ ಸದ್ಯೋ ಮುಷ್ಣಾತಿ ಜೀವಿತಂ ॥
(ವಾ. 175)

ವಾತ ಅಷ್ಠೀಲವು ಅತಿಯಾಗಿ ಬೆಳೆದು ಎದೆಯಲ್ಲಿ ಕಠಿಣವಾಗಿ ನಿಂತಿದ್ದು, ಜಾಯಾರಿಕೆ ಯುಂಟಾದರೆ ಆ ಮನುಷ್ಯನು ಸದ್ಯದಲ್ಲಿ ಪ್ರಾಣವನ್ನು ಬಿಡುವನು.

22. ಜ್ವರಾತಿಸಾರೌ ಶೋಫಾಂತೇ ಶ್ವಯಥುರ್ವಾ ತಯೋಃ ಕ್ಷಯೇ ।
ಶೋಫೆ ಮತ್ತು ಜ್ವರಾತಿಸಾರ ದುರ್ಬಲಸ್ಯ ವಿಶೇಷೇಣ ಜಾಯಂತೇಽಂತಾಯ ದೇಹಿನಃ ॥ (ವಾ. 174.)

ಶೋಫೆಯ ಅಂತ್ಯದಲ್ಲಿ ಜ್ವರಾತಿಸಾರಗಳು ಅಥವಾ ಜ್ವರಾತಿಸಾರಗಳ ಅಂತ್ಯದಲ್ಲಿ ಶೋಫೆ ಉಂಟಾದರೆ, ಮುಖ್ಯವಾಗಿ ರೋಗಿಯು ದುರ್ಬಲನಾಗಿದ್ದರೆ, ಆತನ ಅಂತ್ಯವು ಸಮೀಪಿಸಿತೆಂದು ತಿಳಿಯುವದು.

23. ನಾಸಾಗ್ರಂ ಭ್ರೂಯುಗಂ ಜಿಹ್ವಾಂ ಮುಖಂ ಚೈವ ನ ಪಶ್ಯತಿ ।
ಇಂದ್ರಿಯಗಳ ದುರ್ಬಲತೆ ಕರ್ಣಘೋಷಂ ನ ಜಾನಾತಿ ಸ ಗಚ್ಛೇದ್ಯಮಮಂದಿರಂ ॥

ಮೂಗಿನ ತುದಿ, ಎರಡು ಹುಬ್ಬುಗಳು, ನಾಲಿಗೆ, ಮುಖ, ಇವು ಯಾವ ರೋಗಿಗೆ ಕಾಣುವದಿಲ್ಲವೋ ಮತ್ತು ಯಾವನಿಗೆ ಕಿವಿಯೊಳಗಿನ ಘೋಷವು ಕೇಳುವದಿಲ್ಲವೋ, ಅವನು ಮೃತಿ ಹೊಂದುವನು.

24. ಯಾವಚ್ಚ ಶ್ವಸತೇ ಜೀವೋ ಯಾವತ್ಕ್ರಮತಿ ಭೇಷಜಂ ।
ಶ್ವಾಸವಿರುವ ವರೆಗೆ ಚಿಕಿತ್ಸಾವಶ್ಯಕ ತಾವತ್ಕ್ರಿಯಾ ಪ್ರಕರ್ತವ್ಯಾ ದೈವಸ್ಯ ಕುಟಿಲಾ ಗತಿಃ ॥ (ನಿ ರ)

ಯಾವ ವರೆಗೆ ಜೀವಶ್ವಾಸ ಇರುತ್ತದೋ ಮತ್ತು ಔಷಧವು ಕೆಳಗೆ ಇಳಿಯುತ್ತದೋ, ಆ ವರೆಗೆ ಪ್ರತಿಕ್ರಿಯೆಗಳನ್ನು ನಡಿಸತಕ್ಕದ್ದು. ದೈವಗತಿಯು ಕುಟಿಲವಾಗಿದೆ.

25. ಚಿಕಿತ್ಸ್ಯಮಾನಃ ಸಮ್ಯಕ್ಚ ವಿಕಾರೋ ಯೋಽಭಿವರ್ಧತೇ ।
ಸರಿಯಾದ ಚಿಕಿತ್ಸೆ ನಿಷ್ಫಲವಾಗುವದು ಪ್ರಕ್ಷೀಣಬಲಮಾಂಸಸ್ಯ ಲಕ್ಷಣಂ ತದ್ಗತಾಯುಷಃ ॥ (ಸು. 122.)

ಬಲದಲ್ಲಿಯೂ, ಮಾಂಸದಲ್ಲಿಯೂ, ಬಹಳ ಕ್ಷೀಣವಾಗಿರುವ ರೋಗಿಯ ವ್ಯಾಧಿಯು ಸರಿಯಾಗಿ ಚಿಕಿತ್ಸೆ ನಡಿಸುತ್ತಾ ಬಂದಾಗಲೂ ವೃದ್ಧಿಯಾಗುತ್ತಾ ಹೋದರೆ, ಅವನು ಆಯುಷ್ಯತೀರಿದವನೆಂದು ತಿಳಿಯಬೇಕು.

26. ನಿವರ್ತತೇ ಮಹಾವ್ಯಾಧಿಃ ಸಹಸಾ ಯಸ್ಯ ದೇಹಿನಃ |
ಮಹಾವ್ಯಾಧಿಗಳು ಫಕ್ಕನೆ ವಾಸಿಯಾಗುವದು
ನ ಚಾಹಾರಫಲಂ ಯಸ್ಯ ದೃಶ್ಯತೇ ನ ವಿನಶ್ಯತಿ || (ಸು. 122.)

ರೋಗಿಯ ಮಹಾ ರೋಗವು ಫಕ್ಕನೆ ನಿವೃತ್ತಿಯಾಗಿ, ಅವನಿಗೆ ಕೊಟ್ಟ ಆಹಾರದ ಫಲವು ಕಾಣುವದಿಲ್ಲವಾದರೆ, ಅವನು ಸಾಯುವನು

27. ವಿಷೇ ಕುಷ್ಠೇಽಪಸ್ಮಾರೇ ದುರ್ನಾಮೋದರಕಾಮಿಲೇ |
ಕಾಲಹರಣದಿಂದ ಆಸಾಧ್ಯವಾಗುವ ರೋಗಗಳು
ಆದೌ ಪ್ರತಿಕ್ರಿಯಾಂ ಕುರ್ಯಾತ್ಪಶ್ಚಾತ್ಸಾಧ್ಯಂ ನ ಯಾನ್ತಿ ತೇ |
(ವೈ. ಸಾ. ಸಂ. 27.)

ವಿಷ, ಕುಷ್ಠ, ಅಪಸ್ಮಾರ, ಮೂಲವ್ಯಾಧಿ, ಉದರವ್ಯಾಧಿ, ಕಾಮಿಲೆ, ಈ ರೋಗಗಳಿಗೆ ಪ್ರತಿಕ್ರಿಯೆಯನ್ನು ಆರಂಭದಲ್ಲಿಯೇ ಮಾಡತಕ್ಕದ್ದು; ಕಾಲ ಕಳೆದರೆ ಅವು ಸಾಧ್ಯವಾಗುವದಿಲ್ಲ.

28. ಅತಿಸಾರೇ ಜ್ವರೇ ಚೈವ ರಕ್ತಪಿತ್ತೇ ದೃಗಾಮಯೇ |
ಚಿರಪ್ರತಿಕಾರ್ಯವಾದ ರೋಗಗಳು
ಆದೌ ನ ಪ್ರತಿಕರ್ತವ್ಯಂ ವ್ಯಾಧಿವೇಗೋ ಹಿ ದುರ್ಜಯಃ ||
(ವೈ. ಸಾ. ಸಂ. 27.)

ಅತಿಸಾರ, ಜ್ವರ, ರಕ್ತಪಿತ್ತ, ನೇತ್ರರೋಗ, ಇವುಗಳಿಗೆ ಆರಂಭದಲ್ಲಿ ಪ್ರತಿಕ್ರಿಯೆಯನ್ನು ಮಾಡಬಾರದು; ಯಾಕಂದರೆ, ಅವುಗಳ ವೇಗವು ಜಯಿಸಲಶಕ್ಯವಾಗಿರುತ್ತದೆ.

XIXನೇ ಅಧ್ಯಾಯ.

ಚಿಕಿತ್ಸೋಪಕ್ರಮ

1. ಭಿಷಕ್ ದ್ರವ್ಯಾಣ್ಯುಪಸ್ಥಾತಾ ರೋಗೀ ಪಾದಚತುಷ್ಟಯಂ ।
ಗುಣವತ್ಕಾರಣಂ ಜ್ಞೇಯಂ ವಿಕಾರವ್ಯುಪಶಾಂತಯೇ ॥

ಚಿಕಿತ್ಸೆಯ ನಾಲ್ಕು ಪಾದಗಳು

ವಿಕಾರೋ ಧಾತುವೈಷಮ್ಯಂ ಸಾಮ್ಯಂ ಪ್ರಕೃತಿರುಚ್ಯತೇ ।
ಸುಖಸಂಜ್ಞಕಮಾರೋಗ್ಯಂ ವಿಕಾರೋ ದುಃಖಮೇವ ಚ ॥
ಚತುರ್ಣಾಂ ಭಿಷಗಾದೀನಾಂ ಶಸ್ತಾನಾಂ ಧಾತುವೈಕೃತೇ ।
ಪ್ರವೃತ್ತಿರ್ಧಾತುಸಾಮ್ಯಾರ್ಥಾ ಚಿಕಿತ್ಸೇತ್ಯಭಿಧೀಯತೇ ॥ (ಚ 50.)

ವೈದ್ಯ, ಔಷಧಗಳು, ಪರಿಚಾರಕ, ರೋಗಿ, ಈ ನಾಲ್ಕು ಪಾದಗಳು ವಿಕಾರಗಳ ಉಪಶಾಂತಿಗೆ ಬಲವಾದ ಕಾರಣಗಳೆಂತ ತಿಳಿಯಬೇಕು ವಾತಾದಿ ದೋಷಗಳ ವಿಷಮಸ್ಥಿತಿಯು ವಿಕಾರ; ಅವುಗಳು ಸಮವಾಗಿರುವದು ಸ್ವಸ್ಥ ಸ್ಥಿತಿ. ಆರೋಗ್ಯ ಎಂಬದು ಸುಖದ ಸಂಜ್ಞೆ, ಮತ್ತು ವಿಕಾರ ಎಂಬದು ದುಃಖವೇ. ಧಾತುಗಳು ವಿಕಾರ ಹೊಂದಿದಾಗ್ಗೆ ಅವ್ರಗಳನ್ನು ಸಮಮಾಡುವ ಉದ್ದಿಶ್ಯ ಮಾಡಲ್ಪಡುವ ಪ್ರಶಸ್ತವಾದ ವೈದ್ಯ ಮೊದಲಾದ ನಾಲ್ಕು ಅಂಗಗಳ ಪ್ರವರ್ತನೆಗೆ ಚಿಕಿತ್ಸೆ ಎನ್ನುತ್ತಾರ.

2. ಪಕ್ತೌ ಪಿ ಕಾರಣಂ ಪಕ್ತುರ್ಯಥಾ ಪಾತ್ರೇಂಧನಾನಲಾಃ ।
ವಿಜೇತುರ್ವಿಜಯೇ ಭೂಮಿಶ್ಚಮೂಃ ಪ್ರಹರಣಾನಿ ಚ ॥

ಸಿದ್ಧಿಗೆ ನಾಲ್ಕು ಪಾದಗಳ ಆವಶ್ಯಕತೆ

ಆತುರಾದ್ಯಾಸ್ತಥಾ ಸಿದ್ಧೌ ಪಾದಾಃ ಕಾರಣಸಂಜ್ಞಿತಾಃ ।
ವೈದ್ಯಸ್ಯಾತಶ್ಚಿಕಿತ್ಸಾಯಾಂ ಪ್ರಧಾನಂ ಕಾರಣಂ ಭಿಷಕ್ ॥ (ಚ. 50.)

ಅಡಿಗೆಮಾಡುವವನಿಗೆ ಪಾಕಮಾಡುವದಕ್ಕೆ ಪಾತ್ರಗಳು, ಕಟ್ಟಿಗೆ ಮತ್ತು ಬೆಂಕಿ ಮತ್ತು ಯುದ್ಧದಲ್ಲಿ ಜಯಿಸಲಪೇಕ್ಷಿಸುವವನಿಗೆ ಭೂಮಿ, ಸೇನೆ ಮತ್ತು ಆಯುಧಗಳು ಹ್ಯಾಗೆ ಅಗತ್ಯಕಾರಣಗಳೋ, ಹಾಗೆಯೇ ವೈದ್ಯನಿಗೆ ಸಿದ್ಧಿಯಾಗುವದಕ್ಕೆ ರೋಗಿ ಮೊದಲಾದ ಮೂರು ಪಾದಗಳು ಅಗತ್ಯವಾದ ಕಾರಣಗಳು. ಆದ್ದರಿಂದ, ಚಿಕಿತ್ಸೆಯಲ್ಲಿ ಪ್ರಧಾನ ಕಾರಣ ವೈದ್ಯನಾಗಿರುತ್ತಾನೆ.

3. ಗುಣವದ್ಭಿಸ್ತ್ರಿಭಿಃ ಪಾದೈಶ್ಚತುರ್ಥೋ ಗುಣವಾನ್ ಭಿಷಕ್ ।

ಪ್ರಶಸ್ತ ಪಾದಗಳ ಪ್ರಯೋಜನ

ವ್ಯಾಧಿಮಲ್ಪೇನ ಕಾಲೇನ ಮಹಾಂತಮಪಿ ಸಾಧಯೇತ್ ॥ (ಸು 125.)

ನಾಲ್ಕನೇ ಪಾದವಾದ ಗುಣಾಢ್ಯ ವೈದ್ಯನು, ಇತರ ಮೂರು ಪಾದಗಳು ಗುಣಕರವಾಗಿದ್ದರೆ, ವ್ಯಾಧಿಯು ಮಹತ್ತಾಗಿದ್ದರೂ, ಅಲ್ಪಕಾಲದಲ್ಲಿಯೇ ಅದನ್ನು ಸಾಧಿಸಲು ಶಕ್ತನಾಗುತ್ತಾನೆ.

4. ತತ್ತ್ವಾಧಿಗತಶಾಸ್ತ್ರಾರ್ಥೋ ದೃಷ್ಟಕರ್ಮಾ ಸ್ವಯಂಕೃತೀ ।
ಲಘುಹಸ್ತಃ ಶುಚಿಃ ಶೂರಃ ಸಜ್ಜೋಪಸ್ಕರಭೇಷಜಃ ॥
ಯೋಗ್ಯ ವೈದ್ಯನ ಲಕ್ಷಣಗಳು
ಪ್ರತ್ಯುತ್ಪನ್ನಮತಿರ್ಧೀಮಾನ್ ವ್ಯವಸಾಯೀ ವಿಶಾರದಃ ।
ಸತ್ಸ್ವಧರ್ಮಪರೋ ಯಶ್ಚ ಸ ಭಿಷಕ್ ಪಾದ ಉಚ್ಯತೇ ॥ (ಸು. 125-6.)

ತತ್ತ್ವ ಸಮೇತ ಶಾಸ್ತ್ರಾರ್ಥವನ್ನು ತಿಳಿದವನಾಗಿಯೂ, ಪ್ರತ್ಯಕ್ಷಾನುಭವವುಳ್ಳವನಾಗಿಯೂ, ರೋಗಗಳ ಉಪಶಾಂತಿಗೆ ತಕ್ಕವಾದ ಯೋಗಗಳನ್ನು ಸ್ವಬುದ್ಧಿಯಿಂದ ಕಲ್ಪಿಸಲು ಶಕ್ತನಾಗಿಯೂ, ಶಸ್ತ್ರಾದಿಗಳ ಉಪಯೋಗದಲ್ಲಿ ಹಸ್ತಲಾಘವವುಳ್ಳವನಾಗಿಯೂ, ಶುಚಿಯಾಗಿಯೂ, ಶೂರನಾಗಿಯೂ, ಪ್ರಶಸ್ತವಾದ ಔಷಧೋಪಕರಣಗಳಿಂದ ಕೂಡಿದವನಾಗಿಯೂ, ಚುರುಕಾದ ಆಲೋಚನಶಕ್ತಿಯುಳ್ಳವನಾಗಿಯೂ, ವಿಚಾರವಂತನಾಗಿಯೂ, ಛಲವುಳ್ಳವನಾಗಿಯೂ, ಪಂಡಿತನಾಗಿಯೂ ಸತ್ಸ್ವಧರ್ಮಗಳಲ್ಲಿ ಆಸಕ್ತನಾಗಿಯೂ ಇರುವಂಥವನೇ ವೈದ್ಯರೂಪವಾದ ಪಾದವೆನ್ನಿಸಿಕೊಳ್ಳುತ್ತಾನೆ

5. ಆಯುಷ್ಮಾನ್ ಸತ್ತ್ವವಾನ್ ಸಾಧ್ಯೋ ದ್ರವ್ಯವಾನಾತ್ಮವಾನಪಿ ।
ರೋಗಿಯಲ್ಲಿರಬೇಕಾದ ಗುಣಗಳು
ಆಸ್ತಿಕೋ ವೈದ್ಯವಾಕ್ಯಸ್ಥೋ ವ್ಯಾಧಿತಃ ಪಾದ ಉಚ್ಯತೇ ॥ (ಸು. 126)

ಆಯುರ್ದಾಯವುಳ್ಳವನಾಗಿಯೂ, ಸತ್ತ್ವ(ಸಹನಶಕ್ತಿ)ವುಳ್ಳವನಾಗಿಯೂ, ಸಾಧ್ಯವರ್ಗದ ರೋಗದಿಂದ ಪೀಡಿತನಾಗಿಯೂ, ಹಣವುಳ್ಳವನಾಗಿಯೂ, ಧೃತಿವಂತನಾಗಿಯೂ, ದೇವರಲ್ಲಿ ನಂಬಿಕೆಯುಳ್ಳವನಾಗಿಯೂ, ವೈದ್ಯನ ಮಾತನ್ನಾಧರಿಸುವವನಾಗಿಯೂ, ಇರುವ ರೋಗಿಯೇ ಚಿಕಿತ್ಸೆಯಲ್ಲಿ ರೋಗರೂಪವಾದ ಪಾದವೆನ್ನಿಸಿಕೊಳ್ಳುತ್ತಾನೆ.

6. ಪ್ರಶಸ್ತದೇಶಸಂಭೂತಂ ಪ್ರಶಸ್ತೇಽಹನಿ ಚೋದ್ಧೃತಂ ।
ಯುಕ್ತಮಾತ್ರಂ ಮನಸ್ಕಾಂತಂ ಗಂಧವರ್ಣರಸಾನ್ವಿತಂ ॥
ಪ್ರಶಸ್ತ ಔಷಧ ಲಕ್ಷಣಗಳು
ದೋಷಘ್ನಮವ್ಯಾಪನಿಕರಮವಿಕಾರಿ ವಿಪರ್ಯಯೇ ।
ಸಮೀಕ್ಷ್ಯ ದತ್ತಂ ಕಾಲೇ ಚ ಭೇಷಜಂ ಪಾದ ಉಚ್ಯತೇ ॥ (ಸು. 226.)

ಪ್ರಶಸ್ತವಾದ ಸ್ಥಳದಲ್ಲಿ ಬೆಳೆದದ್ದಾಗಿಯೂ, ಪ್ರಶಸ್ತವಾದ ದಿನದಲ್ಲಿ ಕೀಳಲ್ಪಟ್ಟದ್ದಾಗಿಯೂ, ಯುಕ್ತಪ್ರಮಾಣದ್ದಾಗಿಯೂ, ಮನಸ್ಸಿಗೆ ಪ್ರಿಯವಾದದ್ದಾಗಿಯೂ, ನಿಜವಾದ ಪರಿಮಳ, ವರ್ಣ ಮತ್ತು ರಸದಿಂದ ಕೂಡಿದ್ದಾಗಿಯೂ, ದೋಷನಾಶಕರವಾಗಿಯೂ, ಸಂಕಟಕರವಲ್ಲದ್ದಾಗಿಯೂ, ವ್ಯತ್ಯಾಸವಾದಲ್ಲಿ ಸಹ ದೋಷಕರವಲ್ಲದ್ದಾಗಿಯೂ, ಪರೀಕ್ಷಿಸಿ ತಕ್ಕ ಕಾಲದಲ್ಲಿ ಕೊಡಲ್ಪಟ್ಟದ್ದಾಗಿಯೂ, ಇರುವ ಔಷಧವೇ ಚಿಕಿತ್ಸೆಯಲ್ಲಿ ಔಷಧರೂಪವಾದ ಪಾದವೆನ್ನಿಸಿಕೊಳ್ಳುತ್ತದೆ.

7. ಸ್ನಿಗ್ಧೋಽಜುಗುಪ್ಸುರ್ಬಲವಾನ್ ಯುಕ್ತೋ ವ್ಯಾಧಿತರಕ್ಷಣೇ ।
ಯೋಗ್ಯ ಪರಿಚಾರಕನ ಲಕ್ಷಣಗಳು
ವೈದ್ಯವಾಕ್ಯಕೃದಶ್ರಾಂತಃ ಪಾದಃ ಪರಿಚರಃ ಸ್ಮೃತಃ ॥ (ಸು. 126.)

(ರೋಗಿಯಲ್ಲಿ) ಕರುಣಿಯಾಗಿಯೂ, (ರೋಗಿಯನ್ನು) ನಿಂದಿಸುವ ಸ್ವಭಾವವಿಲ್ಲದವನಾಗಿಯೂ, ಬಲವಂತನಾಗಿಯೂ, ರೋಗಿಯ ಪಾಲನೆಯಲ್ಲಿ ಆಸಕ್ತನಾಗಿಯೂ, ವೈದ್ಯನ

ಮಾತನ್ನು ನಡಿಸತಕ್ಕವನಾಗಿಯೂ, ಶ್ರಮವಿಲ್ಲದವನಾಗಿಯೂ, ಇರುವ ಪರಿಚಾರಕನೇ ಚಿಕಿತ್ಸೆಯಲ್ಲಿ ಪರಿಚಾರಕ ಎಂಬ ಪಾದವನ್ನಿಸಿಕೊಳ್ಳತ್ತಾನೆ

8. ದ್ವಿವಿಧಾಸ್ತು ಖಲು ಭಿಷಜೋ ಭವಂತಿ ಅಗ್ನಿವೇಶ! ಪ್ರಾಣಾನಾಮೇ
ದುಷ್ಟವೈದ್ಯ ಕೇಽಭಿಸರಾ ಹಂತಾರೋ ರೋಗಾಣಾಂ, ರೋಗಾಣಾಮೇಕೇಽಭಿಸರಾ
ಹಂತಾರಃ ಪ್ರಾಣಾನಾಮಿತಿ | (ಚ 189.)

ವೈದ್ಯರು ಎರಡು ವಿಧ ಕೆಲವರು ಪ್ರಾಣಗಳನ್ನು ರಕ್ಷಿಸಿ ರೋಗಗಳನ್ನು ಕೊಲ್ಲತಕ್ಕವರು, ಕೆಲವರು ರೋಗಗಳನ್ನು ರಕ್ಷಿಸಿ ಪ್ರಾಣಗಳನ್ನು ಕೂಲ್ಲತಕ್ಕವರು.

ಷಡಾ ತರಕಸಂಹಿತೆಯ ಸೂತ್ರಸ್ಥಾನದ 29ನೇ ಅಧ್ಯಾಯವು ಪೂರ್ಣವಾಗಿ ಈ ಎರಡು ವಿಧವಾದ ವೈದ್ಯನ ವರ್ಣನೆಗೆ ಉಪಯೋಗಿಸಲ್ಪಟ್ಟಿದೆ ಆ ವರ್ಣನೆಯಲ್ಲಿ ದುಷ್ಟವೈದ್ಯನ ವಿಷಯವಾದ ಒಂದು ಮಾತನ್ನು ಮಾತ್ರ ಇದರ ಕೆಳಗೆ ಕಾಣಿಸೋಣವಾಗುತ್ತದೆ

9. ಭಿಷಕ್ ಛದ್ಮ ಪ್ರವಿಶ್ಯೈವ ವ್ಯಾಧಿತಾಂಸ್ತರ್ಪಯಂತಿ ಯೇ |
ವಿತಂಸಮಿವ ಸಂತ್ಯಜ್ಯ ವನೇ ಶಾಕುಂತಿಕೋ ದ್ವಿಜಾನ್ ||
ವೈದ್ಯವೇಷಧಾರಿಗಳ ವರ್ಜನೆ ಶ್ರುತದೃಷ್ಟಕ್ರಿಯಾಕಾಲಮಾತ್ರಾಸ್ವಾನಬಲಾಪಿಷ್ಕೃತಾಃ |
ವರ್ಜನೀಯಾ ಹಿ ತೇ ಮೃತ್ಯೋಶ್ಚರಂತ್ಯನುಚರಾ ಭುವಿ || (ಚ. 192.)

ಕಾಡಿನಲ್ಲಿ ಬೇಡನು ತಾನು ಇಟ್ಟ ಗೂಡಿನ ಕಡೆಗೆ ಪಕ್ಷಿಗಳು ಹೋಗುವಂತೆ ಅವುಗಳನ್ನು ತೃಪ್ತಿಗೊಳಿಸುವಂತೆ, ವೈದ್ಯರೆಂಬ ಕಪಟವೇಷವನ್ನು ಧರಿಸಿಕೊಂಡು ರೋಗಿಗಳನ್ನು ತೃಪ್ತಿಗೊಳಿಸುತ್ತಾ, ಪ್ರತಿಕ್ರಿಯ, ಅದರ ಕಾಲ, ಔಷಧಪ್ರಮಾಣ, ಈ ಭಾಗಗಳಲ್ಲಿ ಕೇಳಿದ್ದಾಗಲಿ, ನೋಡಿದ್ದಾಗಲಿ ಇಲ್ಲದ, ಅವುಗಳ ಜ್ಞಾನದಿಂದ ಹೊರಪಟ್ಟವರಾಗಿ ಯಾರು ಇದ್ದಾರೋ, ಅವರನ್ನು ವರ್ಜಿಸತಕ್ಕದ್ದು, ಯಾಕೆಂದರೆ ಅವರು ಯಮನ ಸೇವಕರಾಗಿ ಭೂಮಿಯಲ್ಲಿ ಸಂಚರಿಸುವಂಥವರಾಗಿರುತ್ತಾರೆ

10. ಕಿಂಚಿದ್ದೋಷಪ್ರಶಮನಂ ಕಿಂಚಿದ್ಧಾತುಪ್ರದೂಷಣಂ |
ಗುಣಭೇದದಿಂದ ದ್ರವ್ಯಗಳಲ್ಲಿ ಮೂರು ವಿಧ ಸ್ವಸ್ಥವೃತ್ತೌ ಹಿತಂ ಕಿಂಚಿದ್ದ್ರವ್ಯಂ ತ್ರಿವಿಧಮುಚ್ಯತೇ || (ಚ. 6)

ದ್ರವ್ಯಗಳಲ್ಲಿ ಕೆಲವು ದೋಷಗಳನ್ನು ಶಮನಮಾಡುವ ಗುಣವುಳ್ಳವು, ಕೆಲವು ಧಾತುಗಳನ್ನು ಕೆಡಿಸುವ ಗುಣವುಳ್ಳವು ಮತ್ತು ಕೆಲವು ಸೌಖ್ಯಸ್ಥಿತಿಯಲ್ಲಿ ಹಿತಕರವಾದವು, ಹೀಗೆ ದ್ರವ್ಯಗಳು ಮೂರು ವಿಧ.

11. ತತ್ಪುನಸ್ತ್ರಿವಿಧಂ ಜ್ಞೇಯಂ ಜಾಂಗಮೌದ್ಭಿದಪಾರ್ಥಿವಂ |
ದ್ರವ್ಯಗಳ ಮೂರು ಜಾತಿ (ಚ 6)

ದ್ರವ್ಯಗಳೆಲ್ಲಾ ಪುನಃ 3 ವಿಧ —1 ಜಂಗಮ (ಚಲನಶಕ್ತಿಯುಳ್ಳ ಪ್ರಾಣಿಸಂಬಂಧವಾದದ್ದು), 2. ಔದ್ಭಿದ (ಮೊಳಿಕೆಯುಂಟಾಗಿ ಬೆಳೆಯುವ ಗಿಡವೃಕ್ಷಾದಿಗಳಿಗೆ ಸಂಬಂಧವಾದದ್ದು), 3. ಪಾರ್ಥಿವ (ಭೂಮಿಯಲ್ಲಿ ಸಿಕ್ಕುವ ಲೋಹಾದಿಗಳಿಗೆ ಸಂಬಂಧವಾದದ್ದು).

12. ಮಧೂನಿ ಗೋರಸಾಃ ಪಿತ್ತಂ ವಸಾ ಮಜ್ಜಾಸೃಗಾಮಿಷಂ ।
ಜಂಗಮ ಜಾತಿಯ ಔಷಧೋಪಯುಕ್ತ ಅಂಗಗಳು
ವಿಣ್ಮೂತ್ರಂ ಚರ್ಮರೇತೋಽಸ್ಥಿ ಸ್ನಾಯು ಶೃಂಗಂ ಖುರಾ ನಖಾಃ ॥
ಜಂಗಮೇಭ್ಯಃ ಪ್ರಯುಜ್ಯಂತೇ ಕೇಶಾ ಲೋಮಾನಿ ರೋಚನಾಃ । (ಜ. 6.)

ನಾನಾ ಜಾತಿಯ ಜೀನುಗಳು, (ಹಾಲು ಮುಂತಾದ) ಗೋರಸಗಳು, ಪಿತ್ತ, ಚರಬಿ, ಮಜ್ಜಾಧಾತು, ರಕ್ತ, ಮಾಂಸ, ಮಲ, ಮೂತ್ರ, ಚರ್ಮ, ರೇತಸ್ಸು (ಪುಣುಗು ಮುಂತಾದದ್ದು), ಎಲುಬು, ನರ, ಕೂದಲು, ಗೊರಸುಗಳು, ಉಗುರುಗಳು, ರೋಮಗಳು, ಕೂದಲುಗಳು, ರೋಚನಗಳು (ಗೋರೋಚನ ಮುಂತಾದದ್ದು), ಇವುಗಳು ಜಂಗಮ ಜಾತಿಯವುಗಳಿಂದ ಉಪಯೋಗಿಸಲ್ಪಡುತ್ತವೆ.

13. ಸುವರ್ಣಂ ಸಮಲಾಃ ಪಂಚ ಲೋಹಾಃ ಸಸಿಕತಾಃ ಸುಧಾ ।
ಪಾರ್ಥಿವ ಜಾತಿಯ ಔಷಧಗಳು
ಮನಃಶಿಲಾಲೇ ಮಣಯೋ ಲವಣಂ ಗೈರಿಕಾಂಜನೇ ॥
ಭೌಮಮೌಷಧಮುದ್ದಿಷ್ಟಂ (ಜ. 6.)

ಭಂಗಾರ, ತಾಮ್ರ, ಕಬ್ಬಿಣ, ಸೀಸ, ತವರ, ಬೆಳ್ಳಿ, ಇವುಗಳ ಕಿಟ್ಟ, ಮಳಲು, ಕಲ್ಲು ಸುಣ್ಣ, ಮನಶಿಲೆ, ಅರಿದಾಳ, ರತ್ನಗಳು, ಉಪ್ಪು, ಕಾವಿಕಲ್ಲು, ಅಂಜನಕಲ್ಲು, ಇವು ಪಾರ್ಥಿವ ಜಾತಿಯವುಗಳಲ್ಲಿ ಔಷಧಗಳಾಗಿ ಉಪಯೋಗಿಸಲ್ಪಡುತ್ತವೆ.

14. . . . ಔದ್ಭಿದಂ ತು ಚತುರ್ವಿಧಂ ।
ಔದ್ಭಿದಗಳಲ್ಲಿ ನಾಲ್ಕು ಜಾತಿ
ವನಸ್ಪತಿರ್ವೀರುಧಶ್ಚ ವಾನಸ್ಪತ್ಯಸ್ತಥೌಷಧಿಃ ॥
ಫಲೈರ್ವನಸ್ಪತಿಃ ಪುಷ್ಪೈರ್ವಾನಸ್ಪತ್ಯಃ ಫಲೈರಪಿ ।
ಓಷಧ್ಯಃ ಫಲಪಾಕಾಂತಾಃ ಪ್ರತಾನೈರ್ವೀರುಧಃ ಸ್ಮೃತಾಃ ॥ (ಜ. 6.)

ಔದ್ಭಿದಗಳಲ್ಲಿ ನಾಲ್ಕು ಜಾತಿ — 1. ಪುಷ್ಪವಿಲ್ಲದೆ ಫಲವಾಗುವ (ಹಲಸು ಮುಂತಾದ) ವನಸ್ಪತಿ, 2 ಪುಷ್ಪ ಮತ್ತು ಫಲವುಳ್ಳವು ಆದ ವಾನಸ್ಪತ್ಯ; 3. ಫಲವಾದ ಮೇಲೆ ಬದುಕದ (ಬಾಳೆ ಮುಂತಾದ) ಓಷಧಿ; 4. ಹಬ್ಬುವ ಮತ್ತು ಏರುವ (ಬಳ್ಳಿಜಾತಿ) ವೀರುಧ, ಹೀಗೆ.

15. ಮೂಲತ್ವಕ್ಸಾರನಿರ್ಯಾಸನಾಡಸ್ವರಸಪಲ್ಲವಾಃ ।
ಔದ್ಭಿದಗಳ ಔಷಧೋಪಯುಕ್ತ ಅಂಗಗಳು
ಕ್ಷಾರಾಃ ಕ್ಷೀರಂ ಫಲಂ ಪುಷ್ಪಂ ಭಸ್ಮ ತೈಲಾನಿ ಕಂಟಕಾಃ ॥
ಪತ್ರಾಣಿ ಶುಂಗಾಃ ಕಂದಾಶ್ಚ ಪ್ರರೋಹಾಶ್ಚೌದ್ಭಿದೋ ಗಣಃ । (ಜ.)

ಬೇರು, ತೊಗಲು (ಅಥವಾ ನಾರು), ತಿರುಳು, ಮೇಣ, ದಂಟು, ರಸ, ಕುಡಿ, ಉಪ್ಪು (ಸತ್ವ), ಹಾಲು, ಕಾಯಿ, ಹೂವು, ಬೂದಿ, ತೈಲಗಳು, ಮುಳ್ಳುಗಳು, ಎಲೆಗಳು, ಕೊಂಬುಗಳು (ಎಳೇ ಕಾಯಿ ಅಥವಾ ಎಲೆಯನ್ನು ಮುಚ್ಚಿರುವ ಕೋಶಗಳು), ಗಡ್ಡೆಗಳು, ಮೊಳಕೆಗಳು, ಇವು ಔದ್ಭಿದ ಜಾತಿಯವುಗಳಲ್ಲಿ ಔಷಧಭಾಗಗಳು.

16. ಕ್ವಚಿನ್ಮೂಲಂ ಕ್ವಚಿತ್ಕಂದಃ ಕ್ವಚಿತ್ಪತ್ರಂ ಕ್ವಚಿತ್ಫಲಂ ।
ಕ್ವಚಿತ್ಪುಷ್ಪಂ ಕ್ವಚಿತ್ಸರ್ವಂ ಕ್ವಚಿತ್ಸಾರಃ ಕ್ವಚಿತ್ತ್ವಚಃ ॥

ಯಾವ ಔಧ್ಧಿದದಲ್ಲಿ ಯಾವ ಅಂಗ ಪ್ರತಿಷ್ಠವೆಂಬದು

ಚಿತ್ರಕಂ ಸೂರಣಂ ನಿಂಬೋ ವಾಸಾ ಚ ತ್ರಿಫಲಾ ಕ್ರಮಾತ್ ।
ಧಾತಕೀ ಕಂಟಕಾರೀ ಚ ಖದಿರಃ ಕ್ಷೀರಪಾದಪಃ ॥
ಕ್ವಚಿನ್ನಿಂಬಸ್ಯ ಗೃಹ್ಣೀಯಾತ್ ಪತ್ರಾಭಾವೇ ತ್ವಚಾಮಪಿ ॥ (ಭಾ. ಪ್ರ. 69.)

ಚಿತ್ರಮೂಲ ಮುಂತಾದ ಕೆಲವು ದ್ರವ್ಯಗಳಿಂದ ಬೇರು, ಸೂರಣ ಮುಂತಾದವುಗಳಿಂದ ಗಡ್ಡೆ, ಕಹಿಬೇವು, ಆಡುಸೋಗೆ, ಮುಂತಾದವುಗಳಿಂದ ಎಲೆ, ಅಣಲೆ, ಶಾಂತಿ, ನೆಲ್ಲಿ, ಮುಂತಾದವುಗಳಿಂದ ಫಲ, ಧಾತಕೀ ಮುಂತಾದವುಗಳಿಂದ ಹೂವು, ಕಂಟಕಾರಿ (ಕಲ್ಲಂಟೆ ಜಾತಿ) ಮುಂತಾದವುಗಳಿಂದ ಸರ್ವಭಾಗಗಳು, ಕಾಜು ಮುಂತಾದವುಗಳ ತಿರುಳು, ಹಾಲುಮರಗಳು ಮುಂತಾದವುಗಳ ತೊಗಲು, ಉಪಯೋಗಿಸತಕ್ಕ ಭಾಗವಾಗಿರುತ್ತವೆ. ಕಲವು ಸಂಗತಿಯಲ್ಲಿ ಕಹಿಬೇವಿನ ಎಲೆ ದೊರಕದಾಗ್ಗೆ, ಅದರ ಕೆತ್ತೆಯನ್ನಾದರೂ ಉಪಯೋಗಿಸತಕ್ಕದ್ದು

ಸಾರಃ ಸ್ಯಾತ್ಖದಿರಾದೀನಾಂ ನಿಂಬಾದೀನಾಂ ತ್ವಚಸ್ತಥಾ ।
ಫಲಂ ತು ದಾಡಿಮಾದೀನಾಂ ಪಟೋಲಾದೇಶ್ಚ ದಸ್ತಥಾ ॥ (ಚಿ. ಸಾ. ಸಂ. 973.)

ಖದಿರಾದಿಗಳ ತಿರುಳು, ಕಹಿಬೇವು ಮುಂತಾದವುಗಳ ಕೆತ್ತೆ, ದಾಳಿಂಬ ಮೊದಲಾದವುಗಳ ಫಲ, ಪಡುವಲ ಮೊದಲಾದವುಗಳ ಒಳ್ಳಿ, ಉಪಯೋಗಿಸಬೇಕಾದ್ದಾಗಿರುತ್ತದೆ.

17. ಕಾಲೇಽನುಕ್ತೇ ಪ್ರಭಾತಂ ಸ್ಯಾದಂಗೇಽನುಕ್ತೇ ಜಟಾ ಭವೇತ್ ।
ಸಿದ್ಧಿಷ್ಟವಲ್ಲದ ಕಾಲಾದಿಗಳ ಊಹೆ
ಭಾಗೇಽನುಕ್ತೇ ತು ಸಾಮ್ಯಂ ಸ್ಯಾತ್ಪಾತ್ರೇಽನುಕ್ತೇ ಚ ಮೃಣ್ಮಯಂ ॥
ದ್ರವೇಽನುಕ್ತೇ ಜಲಂ ಗ್ರಾಹ್ಯಂ ತೈಲೇಽನುಕ್ತೇ ತಿಲೋದ್ಭವಂ । (ಶಾ. 5.)

(ಯೋಗಗಳಲ್ಲಿ) ಕಾಲ ಹೇಳದಿದ್ದಾಗ ಸೂರ್ಯೋದಯ, ಅಂಗ ಹೇಳದಿದ್ದಾಗ ಬೇರು, ಮಾನ ಹೇಳದಿದ್ದಾಗ ಸಮಭಾಗ, ಪಾತ್ರ ಹೇಳದಿದ್ದಾಗ ಮಣ್ಣಿನ ಪಾತ್ರ, ದ್ರವ ಹೇಳದಿದ್ದಾಗ ನೀರು ಮತ್ತು ತೈಲದ ಜಾತಿ ಹೇಳದಿದ್ದಾಗ ಎಳ್ಳೆಣ್ಣೆ, ಉಪಯೋಗಿಸಬೇಕಾದ್ದೆಂತ ತಿಳಿಯಬೇಕು.

18. ಮಹಾಂತಿ ಯಾನಿ ಮೂಲಾನಿ ಕಾಷ್ಯಗರ್ಭಾಣಿ ಯಾನಿ ಚ ।
ಕಾಷ್ಯಗರ್ಭವಾದ ಬೇರುಗಳು
ತೇಷಾಂ ತು ವಲ್ಕಲಂ ಗ್ರಾಹ್ಯಂ ಹ್ರಸ್ವಮೂಲಾನಿ ಕೃತ್ಸ್ನಶಃ ॥
(ಚಿ. ಸಾ. ಸಂ. 973.)

ಯಾವ ಬೇರುಗಳು ತೋರವಾಗಿರುತ್ತವೋ ಮತ್ತು ಯಾವವುಗಳೊಳಗೆ ಕಟ್ಟಿಗೆ ಇರುತ್ತದೋ, ಅಂಥವುಗಳ ಸಿಪ್ಪೆ ಅಥವಾ ನಾರನ್ನು ಉಪಯೋಗಿಸಬೇಕು. ಸೂಕ್ಷ್ಮವಾದ ಬೇರುಗಳಾದರೆ, ಅವುಗಳನ್ನು ಪೂರ್ಣವಾಗಿ ಉಪಯೋಗಿಸಬೇಕು.

19. ಪಂಚಮೂಲಂ ಮಹದ್ವಿಶ್ವಂ ರಸೋನಂ ಚ ಶತಾವರೀ ।
ಸಿಪ್ಪೆ ತೆಗೆದು ಬಿಡಬೇಕಾದವು
ಗುಡೂಚೀ ಹ್ಯಾರ್ದ್ರಕಂ ಜೈವ ತ್ವಕ್ಛೇದ್ಯಾಃ ಪರಿಕೀರ್ತಿತಾಃ ।

ಬೃಹತ್ಪಂಚಮೂಲಗಳು, ಒಣಶುಂಠಿ, ಬೆಳ್ಳುಳ್ಳಿ, ಶತಾವರಿ, ಅಮೃತಬಳ್ಳಿ, ಹಸಿ ಶುಂಠಿ, ಇವುಗಳ ಹೂರಗಿನ ಸಿಪ್ಪೆಯನ್ನು ಹೆರಸಿ ತೆಗೆದುಬಿಡಬೇಕು.

ಪರಾ ಈ ಆಧಾರದ ಮೇಲೆ ಬೃಹತ್ಪಂಚಮೂಲಾವಿಗಳ ಬೇರಿನ ತಿರುಳನ್ನೇ ಕೆಲವರು ಉಪಯೋಗಿಸುತ್ತಾರೆ ಆದರೆ ಶತಾವರಿಯ ಒಳಗಿನ ಕಟ್ಟಿಗೆಯನ್ನು ಉಪಯೋಗಿಸುವದಿಲ್ಲ ಶುಂಠಿ, ಪಿಪ್ಪಲಿ ಮತ್ತು ಅಮೃತಬಳ್ಳಿಯಲ್ಲಿ ಕಾಷ್ಠವಿಲ್ಲ ಆದ್ದರಿಂದ ಇದು 18ನೇ ಸಂ ಯ ಸೂತ್ರಕ್ಕೆ ಅಪವಾದವಾಗಿ ಎಣಿಸಲಿಕ್ಕೆ ಕಾರಣವಿಲ್ಲ

20. ವಲ್ಮೀಕಕುತ್ಸಿತಾಽನೂಪಶ್ಮಶಾನೋಷರಮಾರ್ಗಜಾಃ ।
ಪ್ರಶಸ್ತವಲ್ಲದ ಔಷಧಗಳ ಲಕ್ಷಣ
ಜಂತುವಹ್ನಿಹಿಮವ್ಯಾಪ್ತಾ ನೋಷಧ್ಯಃ ಕಾರ್ಯಸಾಧಕಾಃ ॥
(ಭಾ. ಪ್ರ. 69.)

ಹುತ್ತ, ಕೊಳಕು, ಕೆಸರು, ಶ್ಮಶಾನ, ಊಷರಸ್ಥಳ (ಉಪ್ಪಾಗಿರುವದು), ಮಾರ್ಗ, ಇವುಗಳಲ್ಲಿ ಹುಟ್ಟಿದ ಮತ್ತು ಹುಳ, ಬೆಂಕಿ, ಅಥವಾ ತಣಸು ತಾಗಿದ ಔಷಧಗಳು ಕಾರ್ಯಸಾಧಕವಾಗುವದಿಲ್ಲ.

21 ಸ್ನಿಗ್ಧಾಂ ಪ್ರರೋಹವತೀಂ ಮೃದ್ವೀಂ ಸ್ಥಿರಾಂ ಸಮಾಂ ಕೃಷ್ಣಾಂ
ಔಷಧ ಬೆಳೆದ ಭೂಮಿಯ ಪರೀಕ್ಷೆ
ಗೌರೀಂ ಲೋಹಿತಾಂ ವಾ ಭೂಮಿಮೌಷಧಾರ್ಥಂ ಪರೀಕ್ಷೇತ ।
(ಸು. 136.)

ತೈಲಯುಕ್ತವಾಗಿಯೂ, ಚಿಕ್ಕಗಿಡಗಳಿಂದ ತುಂಬಿದ್ದಾಗಿಯೂ, ಮೃದುವಾಗಿಯೂ, ಸ್ಥಿರವಾಗಿಯೂ, ಸಮತಟ್ಟಾಗಿಯೂ, ಕಪ್ಪು, ಅಥವಾ ಅರಸಿನ, ಅಥವಾ ಕೆಂಪುವರ್ಣವುಳ್ಳದ್ದಾಗಿಯೂ, ಇರುವ ಭೂಮಿಯನ್ನು ಪರೀಕ್ಷಿಸಿ ನೋಡಿ, ಅಂಥಾ ಭೂಮಿಯಲ್ಲಿ ಹುಟ್ಟಿದ ಔಷಧಗಳು ಪ್ರಶಸ್ತವೆಂದು ತಿಳಿಯಬೇಕು.

22. ಸೌಮ್ಯಾನ್ಯೌಷಧಾನಿ ಸೌಮ್ಯೇಷ್ವೃತುಷ್ವಾದದೀತಾಗ್ನೇಯಾನ್ಯಾಗ್ನೇಯೇಷ್ವೇವಮವ್ಯಾಪನ್ನಗುಣಾನಿ ಭವಂತಿ । ಸೌಮ್ಯಾನ್ಯೌಷಧಾನಿ ಸೌಮ್ಯೇಷ್ವೃತುಷು ಗೃಹೀತಾನಿ ಸೌಮ್ಯಗುಣಭೂಯಿಷ್ಠಾಯಾಂ ಭೂಮೌ ಜಾತಾನ್ಯತಿಮಧುರಸ್ನಿಗ್ಧಶೀತಾನಿ ಜಾಯಂತೇ । ಏತೇನ ಶೇಷಂ ವ್ಯಾಖ್ಯಾತಂ । (ಸು. 137.)
ಔಷಧಗಳನ್ನು ಸಂಗ್ರಹಿಸುವದಕ್ಕೆ ಋತು ಮತ್ತು ದೇಶ

ಸೌಮ್ಯ (ಶೀತ) ಗುಣದ ಔಷಧಗಳನ್ನು ಸೌಮ್ಯವಾದ ಋತುಗಳಲ್ಲಿ ಸಂಗ್ರಹಿಸಿದರೆ ಮತ್ತು ಅವು ಸೌಮ್ಯಗುಣ ಹೆಚ್ಚಾಗಿರುವ ಭೂಮಿಯಲ್ಲ ಬೆಳೆದವುಗಳಾದರೆ, ಅವುಗಳಲ್ಲಿ ಶೀತ, ಸ್ನಿಗ್ಧ, ಮತ್ತು ಮಧುರ ಗುಣಗಳು ಅತಿಯಾಗಿರುತ್ತವೆ; ಹಾಗೆಯೇ ಆಗ್ನೇಯ (ಉಷ್ಣ) ಗುಣದ ಔಷಧಗಳು ಆ ಗುಣವೇ ಹೆಚ್ಚಾಗಿರುವ ಭೂಮಿಯಲ್ಲಿ ಬೆಳೆದವಾಗಿದ್ದು, ಉಷ್ಣವಾದ ಋತುಗಳಲ್ಲಿ ಕೂಡಿಸಲ್ಪಟ್ಟರೆ, ಅವುಗಳಲ್ಲಿ ಆ ಆಗ್ನೇಯಗುಣಗಳು ಹೆಚ್ಚಾಗಿರುತ್ತವೆ. ಆದ್ದರಿಂದ ಸೌಮ್ಯ ಔಷಧಗಳನ್ನು ಸೌಮ್ಯ ಋತುಗಳಲ್ಲಿಯೂ, ಆಗ್ನೇಯ ಗುಣದ ಔಷಧಗಳನ್ನು ಉಷ್ಣವಾದ ಋತುಗಳಲ್ಲಿಯೂ ಸಂಗ್ರಹಿಸತಕ್ಕದ್ದು. ಹಾಗೆ ಮಾಡಿದರೆ ಅವುಗಳಲ್ಲಿ ಗುಣಗಳು ಸಂಪೂರ್ಣವಾಗಿರುತ್ತವೆ.

23. ವಿಗಂಧೇನಾಪರಾಮೃಷ್ಟಮವಿಪನ್ನಂ ರಸಾದಿಭಿಃ |
ಪ್ರಶಸ್ತ ಔಷಧ ನವಂ ದ್ರವ್ಯಂ ಪುರಾಣಂ ವಾ ಗ್ರಾಹ್ಯಮೇವ ವಿನಿರ್ದಿಶೇತ್ ||
ಲಕ್ಷಣ, ವಿಡಂಗಾದಿ ವಿಡಂಗಂ ಪಿಪ್ಪಲೀ ಕ್ಷೌದ್ರಂ ಸರ್ಪಿಶ್ಚಾಪ್ಯನವಂ ಹಿತಂ |
ಹಳೇದು ಪ್ರಶಸ್ತ ಶೇಷಮನ್ಯತ್ತ್ವಭಿನವಂ ಗೃಹ್ಣೀಯಾದ್ದೋಷವರ್ಜಿತಂ || (ಸು. 138.)

ಅನ್ಯವಾಸನೆಯಿಲ್ಲದ್ದಾಗಿಯೂ, ರಸಾದಿಗಳು ಕೆಡದ್ದಾಗಿಯೂ, ಇರುವ ಔಷಧವನ್ನು ನೋಡಿ, ಹೊಸತಾಗಬೇಕಾದ್ದಲ್ಲಿ ಹೊಸತಾಗಿಯೂ, ಹಳೇದಾಗಬೇಕಾದ್ದಲ್ಲಿ ಹಳೇದಾಗಿಯೂ ಉಪಯೋಗಿಸಬೇಕು. ವಾಯುವಿಳಂಗ, ಹಿಪ್ಪಲಿ, ಜೇನು, ತುಪ್ಪ, ಇವು ಹೊಸತಲ್ಲದ್ದು ಹಿತ; ಮಿಕ್ಕಾದ್ದೆಲ್ಲ ಹೊಸತಾದದ್ದನ್ನೇ ದೋಷವಿಲ್ಲದ್ದನ್ನು ನೋಡಿಕೊಂಡು ಉಪಯೋಗಿಸ ತಕ್ಕದ್ದು.

* ಪರಾ ಬೆಲ್ಲ, ಅಕ್ಕಿ ಸಹ ಹಾಗೆಯೇ ಹಳೇವಾಗಬೇಕೆಂತ ಘಾ ಪ್ರ (ಪು 49)

24. ಜಂಗಮಾನಾಂ ವಯಸ್ಥಾನಾಂ ರಕ್ತರೋಮನಖಾದಿಕಂ |
ಜಂಗಮಜಾತಿ ಔಷಧಗಳ ಸಂಗ್ರಹ ಕ್ಷೀರಮೂತ್ರಪುರೀಷಾಣಿ ಜೀರ್ಣಾರ್ಜಾಹಾರೇಷು ಸಂಹರೇತ್ ||
(ಸು. 138.)

ಜಂಗಮ ಜಾತಿಗಳಿಂದ ಸ್ವೀಕರಿಸುವ ರಕ್ತ, ರೋಮ, ಉಗುರು, ಮುಂತಾದವು ವ್ಯಾಯದಲ್ಲಿರುವ ಪ್ರಾಣಿಗಳದಾಗಿರಬೇಕು, ಮತ್ತು ಹಾಲು, ಮೂತ್ರ, ಮಲ (ಸಗಣಿ) ಗಳನ್ನು ಆಹಾರವು ಜೀರ್ಣವಾಗಿರುವ ಕಾಲಗಳಲ್ಲಿ ಸಂಗ್ರಹಿಸಬೇಕು.

25. ಪ್ಲೋತಮೃದ್ಭಾಂಡಫಲಕಶಂಕುವಿನ್ಯಸ್ತಭೇಷಜಂ |
ಔಷಧಗಳ ಜೋಪಾಸನೆ ಕ್ರಮ ಪ್ರಶಸ್ತಾಯಾಂ ದಿಶಿ ಶುಚೌ ಭೇಷಜಾಗಾರಮಿಷ್ಯತೇ || (ಸು. 138.)

ಔಷಧಿಯನ್ನು ವಸ್ತ್ರದ ತುಂಡಿನಲ್ಲಿ, ಮಣ್ಣಿನ ಗಡಿಗೆಯಲ್ಲಿ, ಹಲಿಗೆ ಮೇಲೆ, ಅಥವಾ ಗೂಟದಲ್ಲಿ ಅನುಕೂಲಕ್ಕೆ ಸರಿಯಾಗಿ ಇಡುವದು ಒಳ್ಳೇದು, ಮತ್ತು ಮದ್ದಿನ ಕೋಣೆಯು ಶುಚಿಯಾದ ಮತ್ತು ಪ್ರಶಸ್ತವಾದ ಕಡೆಯಲ್ಲಿರಬೇಕು.

ಧೂಮವರ್ಷಾನಿಲಕ್ಲೇದೈಃ ಸರ್ವರ್ತುಷ್ವನಭದ್ರುತೇ |
ಗ್ರಾಹಯಿತ್ವಾ ಗೃಹೇ ನ್ಯಸ್ಯೇದ್ವಿಧಿನೌಷಧಸಂಗ್ರಹಂ || (ಸು. 145.)

ಔಷಧಸಂಗ್ರಹವನ್ನು ವಿಧಿಪ್ರಕಾರ ಮಾಡಿಸಿ, ಹೊಗೆ, ಮಳೆ, ಗಾಳಿ, ತ್ಯಾವ, ಇವುಗಳಿಂದ ಎಲ್ಲಾ ಋತುಗಳಲ್ಲಿಯೂ ಕೆಡದಹಾಗಿನ ಕೋಣೆಯಲ್ಲಿರಿಸಬೇಕು.

26. ಸೂಕ್ಷ್ಮಾಣಿ ಹಿ ದೋಷಭೇಷಜದೇಶಕಾಲಬಲಶರೀರಾಹಾರಸಾತ್ಮ್ಯ
ಸತ್ವಪ್ರಕೃತಿವಯಸಾಮವಸ್ಥಾಂತರಾಣಿ | ಯಾನ್ಯನುಚಿಂತ್ಯಮಾನಾನಿ
ವೈದ್ಯನು ಆಲೋಚಿಸಬೇಕಾದ ಅವಸ್ಥಾಭೇದಗಳು ವಿಮಲವಿಪುಲಬುದ್ಧೀರಪಿ ಬುದ್ಧಿಮಾಕುಲೀಕುರ್ಯುಃ ಕಿಂ ಪುನರಲ್ಪ
ಬುದ್ಧೇಃ | (ಚ. 83.)

ದೋಷ, ಔಷಧ, ದೇಶಸ್ಥಿತಿ, ಕಾಲಸ್ಥಿತಿ, ರೋಗಿಯ ಬಲ, ಶರೀರ, ಆಹಾರ, ಸಾತ್ಮ್ಯ, ಸತ್ವ, ಪ್ರಕೃತಿ, ಮತ್ತು ಪ್ರಾಯ, ಈ ವಿಷಯಗಳಲ್ಲಿರುವ ಅವಸ್ಥಾಭೇದಗಳು ಬಹು ಸೂಕ್ಷ್ಮವಾದದ್ದರಿಂದ, ಅವುಗಳನ್ನು ಆಲೋಚಿಸುವಾಗ್ಗೆ ಹೆಚ್ಚು ಬುದ್ಧಿವಂತನಾದವನ ನಿರ್ಮಲವಾದ ಬುದ್ಧಿ ಸಹ ಭ್ರಮೆಗೊಳ್ಳುವದು; ಇನ್ನು ಅಲ್ಪ ಬುದ್ಧಿಯವನ ಅವಸ್ಥೆ ಏನು?

27. ವ್ಯಾಧಿವಿಶೇಷಾಸ್ತು ಪ್ರಾಗಭಿಹಿತಾಃ । ಸರ್ವ ಏವೈತೇ ತ್ರಿವಿಧಾಃ ಸಾಧ್ಯಾ ಯಾಪ್ಯಾಃ ಪ್ರತ್ಯಾಖ್ಯೇಯಾಶ್ಚ । ತತ್ರೈತಾನ್ ಭೂಯಸ್ತ್ರಿಧಾ ಪರೀಕ್ಷೇತ ಕಿಮಸಾವೌಪಸರ್ಗಿಕಃ ಪ್ರಾಕ್ಕೇವಲೋಽನ್ಯಲಕ್ಷಣ ಇತಿ । ತತ್ರೌಪಸರ್ಗಿಕೋ ಯಃ ಪೂರ್ವೋತ್ಪನ್ನಂ ವ್ಯಾಧಿಂ ಜಘನ್ಯಕಾಲಜಾತೋ ವ್ಯಾಧಿರುಪಸೃಜತಿ ಸ ತನ್ಮೂಲ ಏವೋಪದ್ರವಸಂಜ್ಞಃ । ಪ್ರಾಕ್ಕೇವಲೋ ಯಃ ಪ್ರಾಗೇವೋತ್ಪನ್ನೋ ವ್ಯಾಧಿರಪೂರ್ವರೂಪೋಽನುಪದ್ರವಶ್ಚ । ಅನ್ಯಲಕ್ಷಣೋ ಯೋ ಭವಿಷ್ಯದ್ವ್ಯಾಧಿಖ್ಯಾಪಕಃ ಸ ಪೂರ್ವರೂಪಸಂಜ್ಞಃ । ತತ್ರ ಸೋಪದ್ರವಮನ್ಯೋನ್ಯಾವಿರೋಧೇನೋಪಕ್ರಮೇತ ಬಲವಂತಮುಪದ್ರವಂ ವಾ । ಪ್ರಾಕ್ಕೇವಲಂ ಯಥಾಸ್ವಂ ಪ್ರತಿಕುರ್ವೀತ । ಅನ್ಯಲಕ್ಷಣೇ ತ್ವಾದಿವ್ಯಾಧೌ ಪ್ರಯತೇತ । (ಸು. 129.)

ವ್ಯಾಧಿಯಲ್ಲಿ ಪ್ರಧಾನ, ಔಪಸರ್ಗಿಕ, ಅನ್ಯಲಕ್ಷಣ ಎಂಬ ಭೇದಗಳು

ವ್ಯಾಧಿಭೇದಗಳನ್ನು ಮೊದಲೇ ಹೇಳಲಾಗಿದೆ. ಅವುಗಳೆಲ್ಲಾ ಸಾಧ್ಯ, ಯಾಪ್ಯ, ಅಸಾಧ್ಯ, ಎಂತ ಮೂರು ವಿಧ. ಇವುಗಳನ್ನೆಲ್ಲಾ ಪುನಃ ಮೂರು ವಿಧವಾಗಿ ಪರೀಕ್ಷಿಸಬೇಕು. ಇದು ಔಪಸರ್ಗಿಕವೋ, ಪ್ರಾಕ್ಕೇವಲವೋ (ಅಂದರೆ ಶುದ್ಧವಾದ ಪ್ರಥಮವ್ಯಾಧಿಯೋ), ಅಥವಾ ಅನ್ಯವ್ಯಾಧಿಯ ಲಕ್ಷಣವೋ ಎಂತ. ಅವುಗಳೊಳಗೆ ಔಪಸರ್ಗಿಕ ಎಂಬದು ಮೊದಲು ಉತ್ಪನ್ನವಾದ ವ್ಯಾಧಿಯನ್ನನುಸರಿಸಿ ಅದರ ಮೂಲವಾಗಿ ಅನಂತರ ಬಂದ ವ್ಯಾಧಿ, ಅದಕ್ಕೆ ಉಪದ್ರವ ಎನ್ನುತ್ತಾರೆ. ಹಿಂದೆ ಪೂರ್ವರೂಪವಾದ ವ್ಯಾಧಿಯಾಗಲಿ, ಮುಂದೆ ಹುಟ್ಟಿದ ಉಪದ್ರವವಾಗಲಿ ಇಲ್ಲದೆ, ಆರಂಭದಲ್ಲಿಯೇ ಹುಟ್ಟಿದ ಶುದ್ಧ ವ್ಯಾಧಿಯು ಪ್ರಾಕ್ಕೇವಲ ಎಂಬದು. ಅನ್ಯಲಕ್ಷಣ ಎಂಬದು ಅನಂತರ ಬರಲಿಕ್ಕಿರುವ ವ್ಯಾಧಿಯನ್ನು ಪ್ರಕಟಿಸುವ ವ್ಯಾಧಿ; ಅದಕ್ಕೆ ಪೂರ್ವರೂಪ ಎನ್ನುತ್ತಾರೆ. ಅವುಗಳಲ್ಲಿ ಉಪದ್ರವದಿಂದ ಕೂಡಿಕೊಂಡಿರುವ ವ್ಯಾಧಿಯನ್ನು ಪರಸ್ಪರ ವಿರೋಧವಾಗದಂತೆ ಉಪಕ್ರಮಿಸುವದು; ಅಥವಾ ಉಪದ್ರವವೇ ಬಲವಾಗಿದ್ದರೆ, ಅದನ್ನು (ಮುಖ್ಯವ್ಯಾಧಿಗೆ ವಿರೋಧವಿಲ್ಲದಂತೆ) ಉಪಕ್ರಮಿಸುವದು. ಪ್ರಾಕ್ಕೇವಲವ್ಯಾಧಿಯಾದರೆ ಅದಕ್ಕೆ ತಕ್ಕವಾದ ಪ್ರತಿಕ್ರಿಯೆಯನ್ನು ಮಾಡುವದು. ಅನ್ಯಲಕ್ಷಣ ಎಂಬದರಲ್ಲಿ ಉತ್ಪನ್ನವಾದ ವ್ಯಾಧಿಯ ಪರಿಹಾರಕ್ಕೆ (ಬರಲಿಕ್ಕಿರುವ ವ್ಯಾಧಿಗೆ ವಿರೋಧವಿಲ್ಲದಂತೆ) ಪ್ರಯತ್ನಿಸುವದು.

28. ನಿದಾನಾರ್ಥಕರೋ ರೋಗೋ ರೋಗಸ್ಯಾವ್ಯುಪಜಾಯತೇ ।
ತದ್ಯಥಾ ಜ್ವರಸಂತಾಪಾದ್ರಕ್ತಪಿತ್ತಮುದೀರ್ಯತೇ ॥
ರಕ್ತಪಿತ್ತಾಜ್ಜ್ವರಸ್ತಾಭ್ಯಾಂ ಶ್ವಾಸಶ್ಚಾವ್ಯುಪಜಾಯತೇ ।
ಪ್ಲೀಹಾಭಿವೃದ್ಧ್ಯಾ ಜಠರಂ ಜಠರಾಚ್ಛೋಫ ಏವ ಚ ॥

ಅಶೋರ್ಭ್ಯೋ ಜಾರರಂ ದುಃಖಂ ಗುಲ್ಮಶ್ಚಾಪ್ಯುಪಜಾಯತೇ ।
ಪ್ರತಿಶ್ಯಾಯಾತ್ಪ್ಲವೇತ್ಕಾಸಃ ಕಾಸಾತ್ಸಂಜಾಯತೇ ಕ್ಷಯಃ ॥

ರೋಗದಿಂದ ರೋಗ ಹುಟ್ಟುವದರ ದೃಷ್ಟಾಂತಗಳು

ಕ್ಷಯರೋಗಸ್ಯ ಹೇತುತ್ವೇ ಶೋಷಶ್ಚಾಪ್ಯುಪಜಾಯತೇ ॥

* * * * * *

ಕಶ್ಚಿದ್ಧಿ ರೋಗೋ ರೋಗಸ್ಯ ಹೇತುರ್ಭೂತ್ವಾ ನಿವರ್ತತೇ ।
ನ ಪ್ರಶಾಮ್ಯತಿ ಚಾಪ್ಯನ್ಯೋ ಹೇತುತ್ವಂ ಕುರುತೇಽಪಿ ಚ ।
ಏವಂ ಕೃಚ್ಛ್ರತಮೋ ನೃಣಾಂ ದೃಶ್ಯತೇ ವ್ಯಾಧಿಸಂಕರಃ ॥ (ಚಿ. ಸಾ. ಸಂ. 3.)

ಒಂದು ರೋಗವು ಇನ್ನೊಂದು ರೋಗದ ಹೇತುವಾಗಿ ಪರಿಣಮಿಸುತ್ತದೆ. ಹ್ಯಾಗಂದರೆ ಜ್ವರದ ಸಂತಾಪದಿಂದ ರಕ್ತಪಿತ್ತ, ರಕ್ತಪಿತ್ತದಿಂದ ಜ್ವರ, ಅವೆರಡರಿಂದಲೂ ಉಬ್ಬಸ, ಉಂಟಾಗುತ್ತದೆ; ಪ್ಲೀಹ ವೃದ್ಧಿಯಾಗುವದರಿಂದ ಉದರವ್ಯಾಧಿ, ಉದರವ್ಯಾಧಿಯಿಂದ ಶೋಫ, ಮೂಲವ್ಯಾಧಿಯಿಂದ ಹೊಟ್ಟೆಶೂಲೆ ಮತ್ತು ಗುಲ್ಮ, ನಗಡಿಯಿಂದ ಕಮ್ಮ್ಯು, ಕೆಮ್ಮಿನಿಂದ ಕ್ಷಯ ಉಂಟಾಗುತ್ತದೆ; ಕ್ಷಯಕ್ಕೆ ಹೇತುವಾಗಿ ಶೋಷ (ಯಕ್ಷ್ಮ ಎಂಬ ಶ್ವಾಸಕೋಶಗಳ ವ್ಯಾಧಿ) ಪರಿಣಮಿಸುತ್ತದೆ. ***** ಯಾವದಾದರೊಂದು ರೋಗವು ಬೇರೊಂದು ರೋಗವನ್ನುಂಟುಮಾಡಿದನಂತರ ಗುಣವಾದರೂ, ಆ ಎರಡನೇ ರೋಗವು ಶಾಂತವಾಗದೆ ಮತ್ತೊಂದು ರೋಗಕ್ಕೆ ಹೇತುವಾಗುತ್ತದೆ. ಹೀಗೆ ಮನುಷ್ಯರಿಗೆ ವ್ಯಾಧಿಗಳು ಅತಿಕಷ್ಟಕರವಾಗಿ ಕೂಡಿಕೊಳ್ಳುವದು ಕಾಣುತ್ತದೆ.

29. ನಾಸ್ತಿ ರೋಗೋ ಎನಾ ದೋಷೈರ್ಯಸ್ಮಾತ್ತಸ್ಮಾದ್ವಿಚಕ್ಷಣಃ ।
ಅನುಕ್ತಮಪಿ ದೋಷಾಣಾಂ ಲಿಂಗೈರ್ವ್ಯಾಧಿಮುಪಾಚರೇತ್ ॥ (ಸು. 130.)

ವರ್ಣಿಸಲ್ಪಡದ ರೋಗದ ಚಿಕಿತ್ಸೆ

ವಾತಾದಿ ದೋಷಗಳು ಇಲ್ಲದೆ ರೋಗವಿಲ್ಲವಾದ್ದರಿಂದ, ಬುದ್ಧಿವಂತನು ವ್ಯಾಧಿಯು ವರ್ಣಿಸಲ್ಪಡದ್ದಾದಾಗ್ಗೂ, ದೋಷಗಳ ಲಕ್ಷಣಗಳಿಂದ ಅದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ನಡಿಸತಕ್ಕದ್ದು.

30. ದೋಷಾಃ ಕ್ಷೀಣಾ ಬೃಂಹಯಿತವ್ಯಾಃ ಕುಪಿತಾಃ ಪ್ರಶಮಯಿತವ್ಯಾ ವೃದ್ಧಾ ನಿರ್ಹರ್ತವ್ಯಾಃ ಸಮಾಃ ಪರಿಪಾಲ್ಯಾ ಇತಿ ಸಿದ್ಧಾಂತಃ । ಪ್ರಾಧಾನ್ಯೇನ ವಮನವಿರೇಚನೇ ವರ್ತೇತೇ ನಿರ್ಹರಣೇ ದೋಷಾಣಾಂ । (ಸು. 546.)

ಉಪಕ್ರಮದಲ್ಲಿ ಬೃಂಹಣಾದಿ ನಾಲ್ಕು ವಿಧ

ದೋಷಗಳು ಕ್ಷೀಣವಾಗಿದ್ದರೆ ಅವುಗಳನ್ನು ಪುಷ್ಟಿಪಡಿಸಬೇಕು; ಕೋಪಗೊಂಡವುಗಳನ್ನು ಶಮನಮಾಡಬೇಕು, ವೃದ್ಧಿಯಾದವುಗಳನ್ನು ತೆಗೆದುಬಿಡಬೇಕು; ಸಮವಾಗಿರುವವನ್ನು ಪರಿಪಾಲಿಸಬೇಕು; ಇದು ಸಿದ್ಧಾಂತ. ದೋಷಗಳನ್ನು ತೆಗೆದುಬಿಡುವಲ್ಲಿ ಮುಖ್ಯವಾದ ಕ್ರಮಗಳು ವಾಂತಿ ಮತ್ತು ವಿರೇಚನ ಆಗಿರುತ್ತವೆ.

31. ಯದೀರಯೇದ್ಬಹಿರ್ದೋಷಾನ್ ಪಂಚಧಾ ಶೋಧನಂ ಚ ತತ್ ।
ನಿರೂಹೋ ವಮನಂ ಕಾಯಶಿರೋರೇಕೋಽಸ್ರವಿಸ್ರುತಿಃ । (ವಾ. 68.)

5 ವಿಧವಾದ ಶೋಧನಗಳು

ದೇಹದಿಂದ ದೋಷಗಳನ್ನು ಹೊರಗೆ ಹಾಕುವಂಥಾದ್ದು ಯಾವದೋ ಅದು ಶೋಧನ. ಅದು ಐದು ವಿಧ· 1. ನಿರೂಹವಸ್ತಿ, 2. ವಾಂತಿಮಾಡಿಸುವದು, 3. ದೇಹವಿರೇಚನ, 4. ಶಿರಸ್ಸಿನ ವಿರೇಚನ ಮತ್ತು 5. ರಕ್ತ ತೆಗೆಯುವದು, ಹೀಗೆ.

32. ಕಷಾಯಕ್ಷೀರತೋ ವಸ್ತಿರ್ನಿರೂಹಃ ಸ ನಿಗದ್ಯತೇ ।
ನಿರೂಹದ ವ್ಯಾಖ್ಯಾನ (ಚಿ. ಸಾ. ಸಂ. 932)

ಕಷಾಯ ಅಥವಾ ಹಾಲಿನ ಮೂಲಕ (ಗುದದ್ವಾರ) ಕೊಡುವ ವಸ್ತಿಗೆ ನಿರೂಹವೆಂದು ಹೆಸರು.

33. ನ ಶೋಧಯತಿ ಯದ್ದೋಷಾನ್ ಸಮಾನ್ನೋದೀರಯತ್ಯಪಿ ।
ಸಮೀಕರೋತಿ ವಿಷಮಾನ್ ಶಮನಂ ತಚ್ಚ ಸಪ್ತಧಾ ॥
ಶಮನದ ವ್ಯಾಖ್ಯಾನ ಪಾಚನಂ ದೀಪನಂ ಕ್ಷುತ್ತೃಡ್‌ವ್ಯಾಯಾಮಾತಪಮಾರುತಾಃ ।
ಬೃಂಹಣಂ ಶಮನಂ ತ್ವೇವ ವಾಯೋಃ ಪಿತ್ತಾನಿಲಸ್ಯ ಚ ॥ (ವಾ. 68.)

ದೋಷಗಳನ್ನು ಹೊರಗೆ ಹಾಕದೆ, ಸಮವಾಗಿರುವವನ್ನು ಕೆದರಿಸದೆ, ವಿಷಮವಾಗಿರುವವನ್ನು ಸರಿಪಡಿಸುವದಕ್ಕೆ ಶಮನವೆನ್ನುವದು. ಅದು ಏಳು ವಿಧ 1. ಪಾಚನ, 2. ದೀಪನ, 3. ಹಸಿವು (ಉಪವಾಸ), 4. ಬಾಯಾರಿಕೆ (ಕುಡಿಯದಿರೋಣ), 5. ವ್ಯಾಯಾಮ, 6. ಬಿಸಿಲು, ಮತ್ತು 7. ಗಾಳಿ, ಆದರ ವಾತಕ್ಕೆ ಮತ್ತು ವಾತಪಿತ್ತಕ್ಕೆ ಬೃಂಹಣವೇ ಶಮನವಾಗಿರುತ್ತದೆ (ಅಂದರೆ ಉಪವಾಸಾದಿಗಳು ವಿರುದ್ಧ).

34. ಉಪಕ್ರಮ್ಯಸ್ಯ ಹಿ ದ್ವಿತ್ವಾದ್ದ್ವಿಧೈವೋಪಕ್ರಮೋ ಮತಃ ।
ಉಪಕ್ರಮದಲ್ಲಿ ಸಂತರ್ಪಣ. ಅಪತರ್ಪಣ, ಎಂಬ ಭೇದ ಏಕಃ ಸಂತರ್ಪಣಸ್ತತ್ರ ದ್ವಿತೀಯಶ್ಚಾಪತರ್ಪಣಃ ॥
ಬೃಂಹಣೋ ಲಂಘನಶ್ಚೇತಿ ತತ್ಪರ್ಯಾಯಾವುದಾಹೃತೌ ।
ಬೃಂಹಣಂ ಯದ್ಬೃಹತ್ವಾಯ ಲಂಘನಂ ಲಾಘವಾಯ ಯತ್ ।
ದೇಹಸ್ಯ— (ವಾ. 68.)

ರೋಗಿಯಲ್ಲಿ ಎರಡು ವಿಧವಿರುವದರಿಂದ ಚಿಕಿತ್ಸೋಪಕ್ರಮವು ಎರಡೇ ವಿಧ. 1. ಸಂತರ್ಪಣ, 2. ಅಪತರ್ಪಣ. ಆ ಸಂತರ್ಪಣಕ್ಕೇನೇ ಬೃಂಹಣ ಮತ್ತು ಅಪತರ್ಪಣಕ್ಕೆ ಲಂಘನ ಎನ್ನುವದು. ಯಾವದು ದೇಹದ ಪುಷ್ಟಿಗೆ ಸಹಾಯಮಾಡುತ್ತದೋ, ಅದು ಬೃಂಹಣ; ಮತ್ತು ಯಾವದು ದೇಹವನ್ನು ಲಘುಮಾಡುವದಕ್ಕೆ ಸಹಾಯಕವೋ, ಅದು ಲಂಘನ.

35. ದೋಷಾಣಾಂ ಬಹುಸಂಸರ್ಗಾತ್ ಸಂಕೀರ್ಯಂತೇ ಹ್ಯುಪಕ್ರಮಾಃ ।
ಉಪಕ್ರಮಗಳಲ್ಲಿ ಲಂಘನಾದಿ 6 ವಿಧ ಷಟ್ಕಂ ತು ನಾತಿವರ್ತಂತೇ ತ್ರಿತ್ವಂ ವಾತಾದಯೋ ಯಥಾ ॥ (ಚ. 123.)

ದೋಷಗಳು ಬಹು ವಿಧವಾಗಿ ಕೂಡಿಕೊಳ್ಳುವದರಿಂದ ಉಪಕ್ರಮಗಳಲ್ಲಿ ಬಹಳ ಭೇದವಿದ್ದರೂ, ದೋಷಗಳು ವಾತ-ಪಿತ್ತ-ಶ್ಲೇಷ್ಮಗಳೆಂಬ ಮೂರಕ್ಕೆ ಹ್ಯಾಗೆ ಮಿಕ್ಕಿರುವದಿಲ್ಲವೋ, ಹಾಗೆಯೇ ಉಪಕ್ರಮಗಳು ಆರಕ್ಕೆ ಮಿಕ್ಕಿರುವದಿಲ್ಲ

ಲಂಘನಂ ಬೃಂಹಣಂ ಕಾಲೇ ರೂಕ್ಷಣಂ ಸ್ನೇಹನಂ ತಥಾ ।
ಸ್ವೇದನಂ ಸ್ತಂಭನಂ ಚೈವ ಜಾನೀತೇ ಯಃ ಸ ವೈ ಭಿಷಕ್ ॥ (ಚ. 120.)

ಆ ಆರು ಉಪಕ್ರಮಗಳು ಯಾವವಂದರೆ· 1. ಲಂಘನ, 2 ಬೃಂಹಣ, 3. ರೂಕ್ಷಣ, 4. ಸ್ನೇಹನ, 5. ಸ್ವೇದನ ಮತ್ತು 6. ಸ್ತಂಭನ. ಇವುಗಳನ್ನು ತಕ್ಕ ಕಾಲಗಳಲ್ಲಿ ಉಪಯೋಗಿಸಲಿಕ್ಕೆ ತಿಳಿದವನೇ ವೈದ್ಯನೆನ್ನಿಸಿಕೊಳ್ಳಲಿಕ್ಕೆ ಯೋಗ್ಯ.

36. ಯತ್ಕಿಂಚಿಲ್ಲಾಘವಕರಂ ದೇಹೇ ತಲ್ಲಂಘನಂ ಸ್ಮೃತಂ ।
ಬೃಂಹತ್ವಂ ಯಚ್ಛರೀರಸ್ಯ ಜನಯೇತ್ತಚ್ಚ ಬೃಂಹಣಂ ॥

ಲಂಘನಾದಿಗಳ ವ್ಯಾಖ್ಯಾನ

ರೌಕ್ಷ್ಯಂ ಖರತ್ವಂ ವೈಶದ್ಯಂ ಯತ್ಕುರ್ಯಾತ್ತದ್ಧಿ ರೂಕ್ಷಣಂ ।
ಸ್ನೇಹನಂ ಸ್ನೇಹನಿಷ್ಯಂದಮಾರ್ದವಕ್ಲೇದಕಾರಕಂ ॥
ಸ್ತಂಭಗೌರವಶೀತಘ್ನಂ ಸ್ವೇದನಂ ಸ್ವೇದಕಾರಕಂ ।
ಸ್ತಂಭನಂ ಸ್ತಂಭಯತಿ ಯದ್ಗತಿಮಂತಂ ಜಲಂ ಧ್ರುವಂ ॥ (ಚ. 120)

ಯಾವದು ದೇಹದಲ್ಲಿ ಲಘುತ್ವವನ್ನುಂಟುಮಾಡತಕ್ಕಂಥಾದ್ದೋ, ಅದು ಲಂಘನ, ಶರೀರದ ಪುಷ್ಟಿಯನ್ನುಂಟುಮಾಡತಕ್ಕಂಥಾದ್ದು ಯಾವದೋ, ಅದು ಬೃಂಹಣ; ರೂಕ್ಷತ್ವ, ಖರತ್ವ ಮತ್ತು ವಿಶದತ್ವ, ಇವುಗಳನ್ನುಂಟುಮಾಡುವಂಥಾದ್ದು ಯಾವದೋ, ಅದು ರೂಕ್ಷಣ, ಜಿಡ್ಡನ್ನೂ, ಸುರಿಯುವಿಕೆಯನ್ನೂ, ಮೃದುತ್ವವನ್ನೂ, ಒದ್ದೆಯಾಗಿರುವಿಕೆಯನ್ನೂ ಉಂಟುಮಾಡತಕ್ಕಂಥಾದ್ದು ಸ್ನೇಹನ, ಸ್ತಬ್ಧತೆಯನ್ನೂ, ಗುರುತ್ವವನ್ನೂ, ಶೀತವನ್ನೂ, ಹೋಗಲಾಡಿಸತಕ್ಕಂತೆ ಬೆವರನ್ನುಂಟುಮಾಡತಕ್ಕಂಥಾದ್ದು ಸ್ವೇದನ, ಗತಿಯುಳ್ಳದ್ದನ್ನೂ ಮತ್ತು ಅಸ್ಥಿರವಾದದ್ದನ್ನೂ ಸ್ಥಿರವಾಗಿ ನಿಲ್ಲಿಸತಕ್ಕಂಥಾದ್ದು ಸ್ತಂಭನ.

37. ಲಘೂಷ್ಣತೀಕ್ಷ್ಣವಿಶದಂ ರೂಕ್ಷಂ ಸೂಕ್ಷ್ಮಂ ಖರಂ ಸರಂ ।
ಕರಿನಂ ಚೈವ ಯದ್ದ್ರವ್ಯಂ ಪ್ರಾಯಸ್ತಲ್ಲಂಘನಂ ಸ್ಮೃತಂ ॥
ಗುರುಶೀತಮೃದುಸ್ನಿಗ್ಧಂ ಬಹುಲಂ ಸೂಕ್ಷ್ಮಪಿಚ್ಛಿಲಂ ।
ಪ್ರಾಯೋ ಮಂದಂ ಸ್ಥಿರಂ ಸೂಕ್ಷ್ಮಂ ದ್ರವ್ಯಂ ಬೃಂಹಣಮುಚ್ಯತೇ ॥
ರೂಕ್ಷಂ ಲಘು ಖರಂ ತೀಕ್ಷ್ಣಮುಷ್ಣಂ ಸ್ಥಿರಮಪಿಚ್ಛಿಲಂ ।

ಲಂಘನಾದಿ ಕರ್ಮ ಸಿದ್ಧಿಸ ತಕ್ಕ ದ್ರವ್ಯ ಗುಣಗಳು

ಪ್ರಾಯಶಃ ಕರಿನಂ ಚೈವ ಯದ್ದ್ರವ್ಯಂ ತದ್ಧಿ ರೂಕ್ಷಣಂ ॥
ದ್ರವಂ ಸೂಕ್ಷ್ಮಂ ಸರಂ ಸ್ನಿಗ್ಧಂ ಪಿಚ್ಛಿಲಂ ಗುರುಶೀತಲಂ ।
ಪ್ರಾಯೋ ಮಂದಂ ಮೃದು ಚ ಯದ್ದ್ರವ್ಯಂ ತತ್ಸ್ನೇಹನಂ ಮತಂ ।
ಉಷ್ಣಂ ತೀಕ್ಷ್ಣಂ ಸರಂ ಸ್ನಿಗ್ಧಂ ರೂಕ್ಷಂ ಸೂಕ್ಷ್ಮಂ ದ್ರವಂ ಸ್ಥಿರಂ ।
ದ್ರವ್ಯಂ ಗುರು ಚ ಯತ್ಪ್ರಾಯಃ ತದ್ಧಿ ಸ್ವೇದನಮುಚ್ಯತೇ ॥
ಶೀತಂ ಮಂದಂ ಮೃದು ಶ್ಲಕ್ಷ್ಣಂ ರೂಕ್ಷಂ ಸೂಕ್ಷ್ಮಂ ದ್ರವಂ ಸರಂ ।
ಯದ್ದ್ರವ್ಯಂ ಲಘು ಚೋದ್ದಿಷ್ಟಂ ಪ್ರಾಯಸ್ತತ್ಸ್ತಂಭನಂ ಸ್ಮೃತಂ ॥
(ಚ. 120-21.)

ಲಂಘನದ್ರವ್ಯವು ಹೆಚ್ಚಾಗಿ ಲಘು, ಉಷ್ಣ, ತೀಕ್ಷ್ಣ, ವಿಶದ, ರೂಕ್ಷ, ಸೂಕ್ಷ್ಮ, ಖರ, ಸರ, ಕಠಿನ, ಈ ಲಕ್ಷಣಗಳುಳ್ಳದ್ದಾಗಿದೆ.

ಬೃಂಹಣದ್ರವ್ಯವು ಹೆಚ್ಚಾಗಿ ಗುರು, ಶೀತ, ಮೃದು, ಸ್ನಿಗ್ಧ, ಸ್ಥೂಲ, ಸ್ವಲ್ಪ ಪಿಚ್ಛಿಲ, ಮಂದ, ಸ್ಥಿರ, ಸೂಕ್ಷ್ಮ, ಈ ಲಕ್ಷಣಗಳುಳ್ಳದ್ದಾಗಿದೆ.

ರೂಕ್ಷಣದ್ರವ್ಯವು ಹೆಚ್ಚಾಗಿ ರೂಕ್ಷ, ಲಘು, ಖರ, ತೀಕ್ಷ್ಣ, ಉಷ್ಣ, ಸ್ಥಿರ, ಪಿಚ್ಛಿಲ ವಲ್ಲದ್ದು, ಕಠಿನ, ಈ ಲಕ್ಷಣಗಳುಳ್ಳದ್ದಾಗಿದೆ.

ಸ್ನೇಹನದ್ರವ್ಯವು ಹೆಚ್ಚಾಗಿ ದ್ರವ, ಸೂಕ್ಷ್ಮ, ಸರ, ಸ್ನಿಗ್ಧ, ಪಿಚ್ಛಿಲ, ಗುರು, ಶೀತಲ, ಮಂದ, ಮೃದು, ಈ ಲಕ್ಷಣಗಳುಳ್ಳದ್ದಾಗಿದೆ

ಸ್ವೇದನದ್ರವ್ಯವು ಹೆಚ್ಚಾಗಿ ಉಷ್ಣ, ತೀಕ್ಷ್ಣ, ಸರ, ಸ್ನಿಗ್ಧ, ರೂಕ್ಷ, ಸೂಕ್ಷ್ಮ, ದ್ರವ, ಸ್ಥಿರ, ಗುರು, ಈ ಲಕ್ಷಣಗಳುಳ್ಳದ್ದಾಗಿದೆ.

ಸ್ತಂಭನದ್ರವ್ಯವು ಹೆಚ್ಚಾಗಿ ಶೀತ, ಮಂದ, ಮೃದು, ಶ್ಲಕ್ಷ್ಣ, ರೂಕ್ಷ, ಸೂಕ್ಷ್ಮ, ದ್ರವ, ಸರ, ಲಘು, ಈ ಲಕ್ಷಣಗಳುಳ್ಳದ್ದಾಗಿದೆ.

ಪರಾ III ಅ 2-3 ಸಂ ಗಳನ್ನು (ಪು 68-74) ನೋಡಿ

38. ಚತುಷ್ಪ್ರಕಾರಾ ಸಂಶುದ್ಧಿಃ ಪಿಪಾಸಾ ಮಾರುತಾತಪೌ ।
ಹತ್ತು ವಿಧನಾದ ಲಂಘನ ಪಾಚನಾನ್ಯುಪವಾಸಶ್ಚ ವ್ಯಾಯಾಮಶ್ಚೇತಿ ಲಂಘನಂ ॥ (ಚ. 121.)

ನಾಲ್ಕು ಪ್ರಕಾರವಾದ ಶೋಧನೆಗಳು (ವಮನ, ವಿರೇಚನ, ಶಿರೋವಿರೇಚನ, ನಿರೂಹ ಬಸ್ತಿ), ಬಾಯಾರಿಕೆ(ಯ ತಡೆ), ಗಾಳಿ, ಬಿಸಿಲು, ಪಾಚನದ್ರವ್ಯಗಳು, ಉಪವಾಸ, ವ್ಯಾಯಾಮ, ಇವು ಲಂಘನದ ವಿಧಗಳು

39. ಪ್ರಭೂತಶ್ಲೇಷ್ಮಪಿತ್ತಾಸ್ರಮಲಾಃ ಸಂದುಷ್ಟಮಾರುತಾಃ ।
ಸಂಶೋಧನೆಗೆ ಯೋಗ್ಯನಾದವನ ಲಕ್ಷಣ ಬೃಹಚ್ಛರೀರಾ ಬಲಿನೋ ಲಂಘನೀಯಾ ವಿಶುದ್ಧಿಭಿಃ ॥ (ಚ. 121.)

ಕಫ, ಪಿತ್ತ, ರಕ್ತ ಮತ್ತು ಮಲ ಹೆಚ್ಚಿ, ವಾತವು ಬಹಳವಾಗಿ ಕೆಟ್ಟು, ದೊಡ್ಡ ಶರೀರವುಳ್ಳವರಾಗಿಯೂ, ಬಲಿಷ್ಠರಾಗಿಯೂ ಇರುವವರನ್ನು ಶೋಧನಕ್ರಮಗಳಿಂದ ಲಂಘನ ಮಾಡಿಸಬಹುದು.

40. ಯೇಷಾಂ ಮಧ್ಯಬಲಾ ರೋಗಾಃ ಕಫಪಿತ್ತಸಮುತ್ಥಿತಾಃ ।
ವಮ್ಯತೀಸಾರಹೃದ್ರೋಗವಿಷೂಚ್ಯಲಸಕಜ್ವರಾಃ ॥
ಪಾಚನಕ್ಕೆ ಯೋಗ್ಯನಾದವನ ಲಕ್ಷಣ ವಿಬಂಧಗೌರವೋದ್ಗಾರಹೃಲ್ಲಾಸಾರೋಚಕಾದಯಃ ।
ಪಾಚನೈಸ್ತಾನ್ ಭಿಷಕ್ ಪ್ರಾಜ್ಞಃ ಪ್ರಾಯೇಣಾದಾವುಪಾಚರೇತ್ ॥
(ಚ. 121.)

ವಾಂತಿ, ಅತಿಸಾರ, ಹೃದ್ರೋಗ, ವಿಷೂಚೀ, ಅಲಸಕ, ಜ್ವರ, (ಮಲಾದಿಗಳ) ಬದ್ಧತೆ, ಗುರುತ್ವ, ತೇಗು, ಬಿಕ್ಕಟ್ಟು, ಅರುಚಿ, ಇವು ಮೊದಲಾದ ಕಫಪಿತ್ತದಿಂದುತ್ಪನ್ನವಾದ ರೋಗ

ಗಳು ಯಾರಲ್ಲಿ ಮಧ್ಯಬಲವಾಗಿ ಉಂಟಾಗಿಯವೋ, ಅವರನ್ನು ಪ್ರಾಜ್ಞನಾದ ವೈದ್ಯನು ಹೆಚ್ಚಾಗಿ ಆರಂಭದಲ್ಲಿ ಪಾಚನ ಯೋಗಗಳಿಂದ ಉಪಚರಿಸಬೇಕು.

41. ಅತ ಏವ ಯಧೋದ್ದಿಷ್ಟಾ ಯೇಷಾಮಲ್ಪಬಲಾ ಗದಾಃ ।
ಪಿಪಾಸಾನಿಗ್ರಹೈಸ್ತೇಷಾಮುಪವಾಸೈಶ್ಚ ತಾನ್ ಜಯೇತ್ ॥ (ಚ. 121.)

ಉಪವಾಸ ಮತ್ತು ಬಾಯಾರಿಕೆಯ ತಡೆ

ಮೇಲೆ ಹೇಳಿದ ರೋಗಗಳು ಯಾರಲ್ಲಿ (ಪಾಚನೋಪಚಾರ ನಡಿಸಿದ ಮೇಲೆ) ಅಲ್ಪ ಬಲವುಳ್ಳವಾಗಿ ಇವೆಯೋ, ಅಂಧವರಿಗೆ ಬಾಯಾರಿಕೆಯ ತಡೆಗಳಿಂದಲೂ, ಉಪವಾಸ ಗಳಿಂದಲೂ ರೋಗಗಳನ್ನು ಗುಣಮಾಡಬೇಕು.

42. ರೋಗಾನ್ ಜಯೇನ್ಮಧ್ಯಬಲಾನ್ ವ್ಯಾಯಾಮಾತಪಮಾರುತೈಃ ।
ಬಲಿನಾಂ ಕಿಂ ಪುನರ್ಯೇಷಾಂ ರೋಗಾಣಾಮವರಂ ಬಲಂ ॥ (ಚ. 121.)

ವ್ಯಾಯಾಮಾತಪ ಮಾರುತಗಳ ಉಪಯೋಗ

ಮಧ್ಯಬಲವಾದ ರೋಗಗಳಾದರೆ ಅವುಗಳನ್ನು ವ್ಯಾಯಾಮದಿಂದಲೂ, ಬಿಸಿಲು ಗಾಳಿಗಳಿಂದಲೂ, ಜಯಿಸಬೇಕು. ರೋಗಿಯು ಬಲಿಷ್ಠನಾಗಿ ರೋಗವು ಅಬಲಿಯಾದರೆ, ಅದೇ ಪ್ರಕಾರ ಉಪಚರಿಸಬೇಕೆಂಬದಕ್ಕೆ ಸಂದೇಹವಿಲ್ಲ.

43. ಸ್ನಾನಮುತ್ಸಾದನಂ ಸ್ವಪ್ನೋ ಮಧುರಾಃ ಸ್ನೇಹವಸ್ತಯಃ ।
ಶರ್ಕರಾ ಕ್ಷೀರಸರ್ಪಿಂಷಿ ಸರ್ವೇಷಾಂ ವಿದ್ಧಿ ಬೃಂಹಣಂ ॥ (ಚ. 121-12.)

ಬೃಂಹಣ ಯೋಗಗಳು

ಸ್ನಾನ, ಮೈತಿಕ್ಕುವದು, ನಿದ್ರೆ, ಮಧುರವಾದ ಸ್ನೇಹವಸ್ತಿಗಳು, ಸಕ್ಕರೆ, ಹಾಲು, ತುಪ್ಪ, ಇವು ಸರ್ವರಿಗೂ ಬೃಂಹಣವೆಂದು ತಿಳಿಯಬೇಕು.

44. ಕಟುತಿಕ್ತಕಷಾಯಾಣಾಂ ಸೇವನಂ ಸ್ತ್ರೀಷ್ವಸಂಯಮಃ ।
ಖಲೀಪಿಣ್ಯಾಕತಕ್ರಾಣಾಂ ಮಧ್ವಾದೀನಾಂ ಚ ರೂಕ್ಷಣಂ ॥ (ಚ. 122)

ರೂಕ್ಷಣ ಯೋಗಗಳು

ಖಾರ, ಕಹಿ, ಜೊಗರು, ಪದಾರ್ಥಗಳು, ತೈಲದ ಕಿಟ್ಟ, ಹಿಂಡಿ, ಮಜ್ಜಿಗೆ, ಜೇನು ಮೊದ ಲಾದವುಗಳ ಸೇವನ ಮತ್ತು ಸ್ತ್ರೀಸಂಭೋಗದಲ್ಲಿ ನಿಯಮವಿಲ್ಲದಿರುವದು ಸಹ ರೂಕ್ಷಣ.

45. ಅಭಿಷ್ಯಂದಾ ಮಹಾದೋಷಾ ಮರ್ಮಸ್ಥಾ ವ್ಯಾಧಯಶ್ಚ ಯೇ ।
ಊರುಸ್ತಂಭಪ್ರಭೃತಯೋ ರೂಕ್ಷಣೀಯಾ ನಿದರ್ಶಿತಾಃ ॥ (ಚ. 122.)

ರೂಕ್ಷಣಕ್ಕೆ ಯೋಗ್ಯ ರೋಗಗಳು

ಅತಿಯಾದ ಬೆಳಿಕೆ, ಮಹಾದೋಷಗಳು, ಮರ್ಮಸ್ಥಾನಗಳನ್ನಾಶ್ರಯಿಸಿದ ಊರು ಸ್ತಂಭ ಮೊದಲಾದ ವ್ಯಾಧಿಗಳು, ಇವುಗಳಲ್ಲಿ ರೋಗಿಗೆ ರೂಕ್ಷಣ ಹೇಳಲ್ಪಟ್ಟದೆ.

46. ರೂಕ್ಷಸ್ಯ ಸ್ನೇಹನಂ ಸ್ನೇಹೈರತಿಸ್ನಿಗ್ಧಸ್ಯ ರೂಕ್ಷಣಂ । (ಸು. 543.)

ಸ್ನೇಹನಕ್ಕರ್ಹರು

ರೂಕ್ಷನಾದಂಧವನಿಗೆ ಸ್ನೇಹಗಳಿಂದ ಸ್ನೇಹನಕ್ರಮವನ್ನು ಉಪಯೋಗಿಸಬೇಕು ಮತ್ತು ಅತಿಸ್ನಿಗ್ಧನಾಗಿರುವವನಿಗೆ ರೂಕ್ಷಣ ಉಪಚಾರಗಳನ್ನು ಮಾಡಬೇಕು.

47. ಸಂಶೋಧನಾದೃತೇ ಯೇಷಾಂ ರೂಕ್ಷಣಂ ಸಂಪ್ರವಕ್ಷ್ಯತೇ ।
ಸ್ನೇಹನಕ್ಕೆ ಅಯೋಗ್ಯರು ನ ತೇಷಾಂ ಸ್ನೇಹನಂ ಶಸ್ತಮುತ್ಸನ್ನಕಫಮೇದಸಾಂ ॥ (ಚ. 71.)

ಕಫ ಮತ್ತು ಮೇದಸ್ಸು ವೃದ್ಧಿಯಾದವರೊಳಗೆ ಯಾರಿಗೆ ಸಂಶೋಧನ ವಿನಾ ರೂಕ್ಷಣ ಹೇಳಲ್ಪಡುತ್ತದೋ ಅಂಧವರಿಗೆ ಸ್ನೇಹನಕ್ರಮವು ಪ್ರಶಸ್ತವಲ್ಲ.

48. ವಿವರ್ಜಯೇತ್ಸ್ನೇಹಪಾನಮಜೀರ್ಣೇ ಜೋದರೀ ಜ್ವರೀ ।
ದುರ್ಬಲೋಽರೋಚಕೀ ಸ್ಥೂಲೋ ಮೂರ್ಚ್ಛಾತೋ೯ ಮದಪೀಡಿತಃ ॥
ಭದ್ಯ್ರರ್ದಿತಃ ಪಿಪಾಸಾರ್ತಃ ಶ್ರಾಂತಃ ಪಾನಕ್ಲಮಾನ್ವಿತಃ ।
ದತ್ತವಸ್ತಿರ್ವಿರಿಕ್ತಶ್ಚ ವಾಂತೋ ಯಶ್ಚಾಪಿ ಮಾನವಃ ॥
ಸ್ನೇಹಪಾನ ಯಾರಿಗೆ ದೋಷಕರ ಎಂಬದು ಅಕಾಲೇ ದುರ್ದಿನೇ ಚೈವ ನ ಚ ಸ್ನೇಹಂ ಪಿಬೇನ್ನರಃ ।
ಅಕಾಲೇ ಚ ಪ್ರಸೂತಾ ಸ್ತ್ರೀ ಸ್ನೇಹಪಾನಂ ವಿವರ್ಜಯೇತ್ ॥
ಸ್ನೇಹಪಾನಾದ್ ಭವಂತ್ಯೇಷಾಂ ನೃಣಾಂ ನಾನಾವಿಧಾ ಗದಾಃ ।
ಗದಾ ವಾ ಕೃಚ್ಛ್ರತಾಂ ಯಾಂತಿ ನ ಸಿಧ್ಯಂತ್ಯಥವಾ ಪುನಃ ॥
ಗರ್ಭಾಶಯೇ ಸಶೇಷಾಃ ಸ್ಯುರಕ್ತಕ್ಲೇದಮಲಾಸ್ತತಃ । (ಸು. 542.)

ಅಜೀರ್ಣ, ಉದರವ್ಯಾಧಿ, ಜ್ವರ, ದುರ್ಬಲತೆ, ಅರುಚಿ, ಸ್ಥೂಲತೆ, ಮೂರ್ಛೆ, ಮದ, ವಾಂತಿ, ಬಾಯಾರಿಕೆ, ಬಳಲಿಕೆ, ಮದ್ಯಪಾನದ ಆಯಾಸ, ಈ ವಿಕಾರಗಳುಳ್ಳವರೂ, ವಸ್ತಿ ಉಪಯೋಗಿಸಿಕೊಂಡವರೂ, ವಿರೇಚನಮಾಡಿಕೊಂಡವರೂ, ವಾಂತಿಮಾಡಿಸಿಕೊಂಡವರೂ, ಸ್ನೇಹಪಾನ ಮಾಡಕೂಡದು, ಮತ್ತು ಯಾವ ಮನುಷ್ಯನೇ ಆಗಲಿ ಅಕಾಲದಲ್ಲಿ ಮತ್ತು ಕೆಟ್ಟ ದಿವಸದಲ್ಲಿ ಸ್ನೇಹಪಾನ ಮಾಡಬಾರದು; ಮತ್ತು ಅಕಾಲದಲ್ಲಿ ಪ್ರಸೂತವಾದ ಸ್ತ್ರೀಗೆ ಸಹ ಸ್ನೇಹಪಾನವು ವರ್ಜ್ಯ. ಇಂಥಾ ಜನರಿಗೆ ಸ್ನೇಹಪಾನದಿಂದ ನಾನಾ ವಿಧವಾದ ರೋಗಗಳು ಉಂಟಾಗುತ್ತವೆ, ಅಥವಾ ಅವರ ವ್ಯಾಧಿಗಳು ಕಷ್ಟಸಾಧ್ಯ ಸ್ಥಿತಿಯನ್ನು ಹೊಂದುತ್ತವೆ, ಅಥವಾ ಗುಣವಾಗದೆ ಹೋಗುವವು. (ಅಂಥಾ ಸ್ತ್ರೀಯ) ಗರ್ಭಾಶಯದಲ್ಲಿ ಅದರ ದೆಸೆಯಿಂದ ರಕ್ತ, ನೀರು ಮತ್ತು ಮಲ ಉಳಿದುಹೋಗುವವು.

49. ಪಿಬೇತ್ ತ್ರ್ಯಹಂ ಚತುರಹಂ ಪಂಚಾಹಂ ಷಡಹಂ ತಥಾ ।
ಸ್ನೇಹ ಪಾನ ಆರು ದಿನಗಳ ಮೇಲೆ ನಿಷ್ಪ್ರಯೋಜನ ಸಪ್ತರಾತ್ರಾತ್ಪರಂ ಸ್ನೇಹಃ ಸಾತ್ಮ್ಯೀಭವತಿ ಸೇವಿತಃ ॥ (ಸು. 541.)

ಸ್ನೇಹಪಾನವನ್ನು ಮೂರು, ನಾಲ್ಕು, ಐದು ಅಥವಾ ಆರು ದಿನ ಮಾಡಬಹುದು. ಏಳನೇ ರಾತ್ರಿ ಮೊದಲುಗೊಂಡು ಸೇವಿಸಲ್ಪಟ್ಟ ಸ್ನೇಹವು ಸಾತ್ಮ್ಯವಾಗುತ್ತದೆ (ಅಂದರೆ ಔಷಧವಾಗಿ ಕೆಲಸಮಾಡಲಾರದು).

50. ಸ್ನೇಹೋ ಹಿ ಪಾನಾನುವಾಸನಮಸ್ತಿಷ್ಕಶಿರೋಬಸ್ತ್ಯುತ್ತರಬಸ್ತಿನಸ್ಯ
ಸ್ನೇಹೋಪಯೋಗದ ವಿಧಗಳು ಕರ್ಣಪೂರಣಗಾತ್ರಾಭ್ಯಂಗಭೋಜನೇಷೂಪಯೋಜ್ಯಃ | (ಸು. 536.)

ಪಾನ, ಅನುವಾಸನ, ನೆತ್ತಿಗೆ ಲೇಪನ, ಶಿರೋಬಸ್ತಿ, ಉತ್ತರಬಸ್ತಿ, ನಸ್ಯ, ಕಿವಿಯೊಳಗೆ ತುಂಬಿಸುವದು, ಮೈಗೆ ಅಭ್ಯಂಗನ, ಭೋಜನ, ಇವುಗಳಲ್ಲಿ ಸ್ನೇಹವು ಉಪಯೋಗಿಸಲ್ಪಡ ಬೇಕಾದದ್ದು.

51. ತತ್ರ ದ್ವಿಯೋನಿಶ್ಚತುರ್ವಿಕಲ್ಪೋಽಭಿಹಿತಃ ಸ್ನೇಹಃ ಸ್ನೇಹಗುಣಾಶ್ಚ | ತತ್ರ
ನಾನಾ ವಿಧವಾದ ಜಂಗಮೇಭ್ಯೋ ಗವ್ಯಂ ಘೃತಂ ಪ್ರಧಾನಂ | ಸ್ಥಾವರೇಭ್ಯಸ್ತಿಲತೈಲಂ
ಸ್ನೇಹಗಳು ಪ್ರಧಾನಮಿತಿ | (ಸು. 536)

(ಘೃತ, ತೈಲ, ವಸಾ, ಮಜ್ಜಾ ಎಂಬ) ನಾಲ್ಕು ರೂಪವಾದ ಬೇರೆ ಬೇರೆ ಗುಣವುಳ್ಳ ಸ್ನೇಹಕ್ಕೆ (ಸ್ಥಾವರ ಜಂಗಮ ಎಂಬ) ಎರಡು ಯೋನಿಗಳು. ಅವುಗಳೊಳಗೆ ಜಂಗಮ ಜಾತಿಯ ಸ್ನೇಹಗಳಲ್ಲಿ ದನದ ತುಪ್ಪವು ಶ್ರೇಷ್ಠ ಮತ್ತು ಸ್ಥಾವರ ಜಾತಿಯ ಸ್ನೇಹಗಳಲ್ಲಿ ಎಳ್ಳಿನ ಎಣ್ಣೆಯು ಶ್ರೇಷ್ಠ.

52. ಸರ್ವೇಷಾಂ ತೈಲಜಾತಾನಾಂ ತಿಲತೈಲಂ ವಿಶಿಷ್ಯತೇ |
ಎಳ್ಳೆಣ್ಣೆ ಮತ್ತು ಹರಳೆಣ್ಣೆ ಉಪಯೋಗ ಬಲಾಧ್ಯೇ ಸ್ನೇಹನೇ ಚಾಗ್ರ್ಯಮೈರಂಡಂ ತು ವಿರೇಚನೇ ||
(ಜ. 68.)

ಎಲ್ಲಾ ತೈಲಜಾತಿಗಳೊಳಗೆ ಬಲಕೊಡುವದಕ್ಕೂ, ಸ್ನೇಹನಕ್ಕೂ, ಎಳ್ಳೆಣ್ಣೆಯು ಉತ್ತಮ, ಆದರೆ ವಿರೇಚನಕ್ಕೆ ಹರಳೆಣ್ಣೆ ಶ್ರೇಷ್ಠ.

53. ಸರ್ವ ಏವ ಸ್ನೇಹಾ ವಾತಮುಪಶಮ್ನಂತಿ |
ಸ್ನೇಹಗಳ ಸಾಮಾನ್ಯ ಗುಣ (ಸು. 537.)

ಎಲ್ಲಾ ಸ್ನೇಹಗಳು ವಾತವನ್ನು ಉಪಶಮನ ಮಾಡುತ್ತವೆ.

54. ವಾತಪಿತ್ತಾಧಿಕೇ ರಾತ್ರಾವುಷ್ಣೇ ಚಾಪಿ ಪಿಬೇನ್ನರಃ |
ಶ್ಲೇಷ್ಮಾಧಿಕೇ ದಿವಾ ಶೀತೇ ಪಿಬೇಚ್ಚಾಮಲಭಾಸ್ಕರೇ ||
ಸ್ನೇಹಪಾನಕ್ಕೆ ತಕ್ಕ ಕಾಲ ತಪ್ಪಿದರ ದೋಷ ಅತ್ಯುಷ್ಣೇ ವಾ ದಿವಾಪೀತೇ ವಾತಪಿತ್ತಾಧಿಕೇನ ಚ |
ಮೂರ್ಚ್ಛಾಂ ಪಿಪಾಸಾಮುನ್ಮಾದಂ ಕಾಮಲಾಂ ವಾ ಸಮಿಾರಯೇತ್ ||

ಶೀತೇ ರಾತ್ರೌ ಪಿಬೇತ್ಸ್ನೇಹಂ ನರಃ ಶ್ಲೇಷ್ಮಾಧಿಕೋಽಪಿ ವಾ ।
ಅನಾಹಮರುಚಿಂ ಶೂಲಂ ಪಾಂಡುತಾಂ ವಾ ಸಮೃಚ್ಛತಿ ॥ (ಚ. 68-69.)

ವಾತಪಿತ್ತವು ಅಧಿಕವಾಗಿರುವಲ್ಲಿ ಮತ್ತು ಉಷ್ಣಕಾಲದಲ್ಲಿ ಯಾವನಾದರೂ ಸ್ನೇಹ ತೆಗೆದುಕೊಳ್ಳತಕ್ಕವನು ಅದನ್ನು ರಾತ್ರಿಕಾಲದಲ್ಲಿ ಸೇವಿಸಬೇಕು. ಕಫಾಧಿಕವಾಗಿರುವಲ್ಲಿ ಮತ್ತು ಶೀತಕಾಲದಲ್ಲಿ ಸ್ನೇಹವನ್ನು ಹಗಲು ಸೂರ್ಯಪ್ರಭೆ ವಿಮಲವಾಗಿರುವಾಗ್ಗೆ ಸೇವಿಸ ತಕ್ಕದ್ದು. ಹಾಗೆ ಮಾಡದೆ ವಾತಪಿತ್ತಾಧಿಕವಾದಲ್ಲಿ, ಅಥವಾ ಅತ್ಯುಷ್ಣಕಾಲದಲ್ಲಿ, ಸ್ನೇಹ ವನ್ನು ಹಗಲು ಸೇವಿಸಿದರೆ, ಅದರಿಂದ ಮೂರ್ಚ್ಛೆ, ಬಾಯಾರಿಕೆ, ಉನ್ಮಾದ, ಅಥವಾ ಕಾಮಿಲೆ, ಉಂಟಾಗುತ್ತದೆ. ಹಾಗೆಯೇ, ಕಫಾಧಿಕವಾಗಿರುವಾಗ್ಗೆ, ಅಥವಾ ಶೀತಕಾಲದಲ್ಲಿ, ರಾತ್ರಿ ಸ್ನೇಹಪಾನ ಮಾಡಿದರೆ, ಅದರಿಂದ ಅನಾಹ, ಅರುಚಿ, ಶೂಲೆ, ಅಥವಾ ಪಾಂಡು, ಉಂಟಾ ಗುವದು.

55. ಜಲಮುಷ್ಣಂ ಘೃತೇ ಪೇಯಂ ಯೂಷಸ್ತೈಲೇಽನುಶಸ್ಯತೇ ।
ಬೇರೆಬೇರೆ ಸ್ನೇಹಪಾನಗಳಿಗೆ ಅನುಪಾನಗಳು
ವಸಾಮಜ್ಜ್ಞೋಸ್ತು ಮಂಡಃ ಸ್ಯಾತ್ ಸರ್ವೇಷೂಷ್ಣಮಥಾಂಬು ವಾ ॥ (ಚ. 69.)

ಘೃತಪಾನ ಮಾಡಿದವನಿಗೆ ಬಿಸಿನೀರನ್ನು, ತೈಲಪಾನ ಮಾಡಿದವನಿಗೆ ಸಾರನ್ನು, ವಸಾ ಅಥವಾ ಮಜ್ಜಾಪಾನ ಮಾಡಿದವನಿಗೆ ಮಂಡ(ಗಂಜಿನೀರು)ವನ್ನು, ಅಥವಾ ಎಲ್ಲಾ ಸಂಗತಿ ಗಳಲ್ಲಿಯೂ ಬಿಸಿನೀರನ್ನು ಕುಡಿಯಲಿಕ್ಕೆ ಕೂಡಬೇಕು.

56. ಯಾ ಮಾತ್ರಾ ಪರಿಜೀಯೇರ್ತ ಚತುರ್ಭಾಗಗತೇಽಹನಿ ।
ಸಾ ಮಾತ್ರಾ ದೀಪಯತ್ಯಗ್ನಿಮಲ್ಪದೋಷೇ ಚ ಪೂಜಿತಾ ॥
ಯಾ ಮಾತ್ರಾ ಪರಿಜೀಯೇರ್ತ ತಥಾರ್ಧದಿವಸೇ ಗತೇ ।
ಸಾ ವೃಷ್ಯಾ ಬೃಂಹಣೇ ಚೈವ ಮಧ್ಯದೋಷೇ ಚ ಪೂಜಿತಾ ॥
ಯಾ ಮಾತ್ರಾ ಪರಿಜೀಯೇರ್ತ ಚತುರ್ಭಾಗಾವಶೇಷಿತೇ ।
ಸ್ನೇಹನೀಯಾ ಚ ಸಾ ಮಾತ್ರಾ ಬಹುದೋಷೇ ಚ ಪೂಜಿತಾ ॥
ಸ್ನೇಹಪಾನಕ್ಕೆ ಪ್ರಮಾಣಗಳು, ಅತಿಯಾದದ್ದರ ದೋಷ ಮತ್ತು ಅದಕ್ಕೆ ಪರಿಹಾರ
ಯಾ ಮಾತ್ರಾ ಪರಿಜೀಯೇರ್ತತ್ತು ತಥಾ ಪರಿಣತೇಽಹನಿ ।
ಗ್ಲಾನಿಮೂರ್ಚ್ಛಾಮದಾನ್ ಹಿತ್ವಾ ಸಾ ಮಾತ್ರಾ ಪೂಜಿತಾ ಭವೇತ್ ॥
ಅಹೋರಾತ್ರಾದಸಂದುಷ್ಟಾ ಯಾ ಮಾತ್ರಾ ಪರಿಜೀರ್ಯತಿ ।
ಸಾ ತು ಕುಷ್ಠವಿಷೋನ್ಮಾದಗ್ರಹಾಪಸ್ಮಾರನಾಶಿನೀ ॥
ಯಥಾಗ್ನಿ ಪ್ರಥಮಾಂ ಮಾತ್ರಾಂ ಪಾಯಯೇತ ವಿಚಕ್ಷಣಃ ।
ಪೀತೋ ಹ್ಯತಿಬಹುಸ್ನೇಹೋ ಜನಯೇತ್ ಪ್ರಾಣಸಂಶಯಂ ॥
ಮಿಥ್ಯಾಹಾರಾದ್ಬಹುತ್ವಾದ್ವಾ ಯಸ್ಯ ಸ್ನೇಹೋ ನ ಜೀರ್ಯತಿ ।
ವಿಷ್ಟಭ್ಯ ಚಾಪಿ ಜೀರ್ಯೇತ್ತಂ ವಾರಿಣೋಷ್ಣೇನ ವಾಮಯೇತ್ ॥
ಜೀರ್ಣಾಜೀರ್ಣವಿಶಂಕಾಯಾಂ ಸ್ನೇಹಸ್ಯೋಷ್ಣೋದಕಂ ಪಿಬೇತ್ ।

ತೇನೋದ್ಗಾರೋ ಭವೇಚ್ಛುದ್ಧೋ ಭುಕ್ತಂ ಪ್ರತಿ ರುಚಿಸ್ತಥಾ ||
ಸ್ಯುಃ ಪಚ್ಯಮಾನೇ ತೃಡ್ದಾಹಭ್ರಮಸಾದಾರತಿಕ್ಲಮಾಃ | (ಸು. 540-41.)

ಯಾವ ಮಾತ್ರೆಯು (ಪ್ರಮಾಣ) ದಿವಸದ ನಾಲ್ಕನೇ ಒಂದು ಭಾಗದಲ್ಲಿ (3 ಘಂಟೆ ಸಮಯದಲ್ಲಿ) ಜೀರ್ಣವಾಗುತ್ತದೋ, ಅದರಿಂದ ಅಗ್ನಿ ಚುರುಕಾಗುತ್ತದೆ; ಮತ್ತು ಅದು ದೋಷವು ಅಲ್ಪವಾಗಿದ್ದಾಗ್ಗೆ ಪ್ರಶಸ್ತವಾದದ್ದು. ಯಾವ ಮಾತ್ರೆಯು ಅರ್ಧ ದಿನದಲ್ಲಿ (ಅಂದರೆ 6 ಘಂಟೆ ಸಮಯದಲ್ಲಿ) ಜೀರ್ಣವಾಗುತ್ತದೋ, ಅದರಿಂದ ವೃಷ್ಯ ಮತ್ತು ಬೃಂಹಣ ಗುಣ ಗಳು ಉಂಟಾಗುತ್ತವೆ; ಮತ್ತು ಅದು ದೋಷವು ಮಧ್ಯಸ್ಥಿತಿದಾಗಿದ್ದಾಗ್ಗೆ ಪ್ರಶಸ್ತ. ಯಾವ ಮಾತ್ರೆಯು ದಿನದ 4ನೇ 1 ಭಾಗ ಉಳಿಯುವ ಕಾಲದಲ್ಲಿ (9 ಘಂಟೆ ಕಾಲದಲ್ಲಿ) ಜೀರ್ಣ ವಾಗುತ್ತದೋ, ಅದು ಸ್ನೇಹನಮಾಡತಕ್ಕಂಥಾದ್ದು; ಮತ್ತು ಅದು ದೋಷವು ಬಹಳವಾಗಿರು ವಾಗ್ಗೆ ಪ್ರಶಸ್ತ. ಯಾವ ಮಾತ್ರೆಯು ಸಂಜೆಗೆ (12 ಘಂಟೆ ಕಾಲದಲ್ಲಿ) ಜೀರ್ಣವಾಗು ತ್ತದೋ, ಅದು ಗ್ಲಾನಿ, ಮೂರ್ಚ್ಛ, ಮದಗಳನ್ನು ಬಿಟ್ಟು ಇತರ ರೋಗಗಳಲ್ಲಿ ಪೂಜಿತವಾಗು ತ್ತದೆ. ಯಾವ ಮಾತ್ರೆಯು ಒಂದು ಹಗಲೂರಾತ್ರಿಕಾಲದಲ್ಲಿ (24 ಘಂಟೆಯಲ್ಲಿ), ವಿಶೇಷವಾಗಿ ದೋಷವನ್ನು ಮಾಡದೆ, ಜೀರ್ಣಕ್ಕೆ ಬರುತ್ತದೋ, ಅದರಿಂದ ಕುಷ್ಠ, ವಿಷ, ಉನ್ಮಾದ, ಗ್ರಹ ಮತ್ತು ಅಪಸ್ಮಾರ ನಾಶವಾಗುತ್ತವ. ಬುದ್ಧಿವಂತನು ಅಗ್ನಿಬಲ ನೋಡಿಕೊಂಡು, ಒಂದನೇ (3 ಘಂಟೆಯಲ್ಲಿ ಜೀರ್ಣಕ್ಕೆ ಬರುವಂಥಾ) ಮಾತ್ರೆಯನ್ನು ಕುಡಿಸಬೇಕು. ಕುಡಿದ ಸ್ನೇಹವು ಅತಿಹೆಚ್ಚಾದರೆ ಅದರಿಂದ ಪ್ರಾಣಸಂಶಯವುಂಟಾಗಬಹುದು. ಆಚಾರ(ಪಥ್ಯ)ದ ವ್ಯತ್ಯಾಸ ದಿಂದ ಅಥವಾ ಹೆಚ್ಚಾದ್ದರಿಂದ ಯಾರಿಗೆ ಸ್ನೇಹವು ಜೀರ್ಣವಾಗುವದಿಲ್ಲವೋ, ಅಥವಾ ಹೊಟ್ಟೆಯಲ್ಲಿ ಸ್ತಬ್ಧವಾಗಿ ನಿಂತು ಜೀರ್ಣವಾಗುತ್ತದೋ, ಅಂಥವನಿಗೆ ಬಿಸಿನೀರು ಕೊಟ್ಟು ವಾಂತಿಮಾಡಿಸತಕ್ಕದ್ದು. ಕುಡಿದ ಸ್ನೇಹವು ಜೀರ್ಣವಾಯಿತೋ ಇಲ್ಲವೋ, ಎಂಬ ಸಂಶಯ ಹುಟ್ಟಿದಾಗ್ಗೆ, ಬಿಸಿನೀರನ್ನು ಕುಡಿಯಬೇಕು; ಅದರಿಂದ ತೇಗು ಶುದ್ಧವಾಗಿ, ಊಟಕ್ಕೆ ರುಚಿ ಯುಂಟಾಗುತ್ತದೆ. ಸ್ನೇಹವು ಜೀರ್ಣವಾಗುವ ಕಾಲದಲ್ಲಿ ಬಾಯಾರಿಕೆ, ಉರಿ, ತಲೆತಿರುಕು, ಮೈಬಚ್ಚುವಿಕೆ, ಉತ್ಸಾಹವಿಲ್ಲದಿರುವದು ಮತ್ತು ನಿಶ್ಚೈತನ್ಯ ಕಾಣುವವು.

ಪರಾ ಒಂದು ಅಹೋರಾತ್ರಿಕಾಲದಲ್ಲಿ ಜೀರ್ಣವಾಗುವ ಮಾತ್ರೆಯು ದೊಡ್ಡದು, ಒಂದು ಹಗಲಲ್ಲಿ ಜೀರ್ಣವಾಗು ವಂಥಾದ್ದು ಮಧ್ಯಮ, ಮಧ್ಯಾಹ್ನದಲ್ಲಿ ಜೀರ್ಣವಾಗುವಂಥಾದ್ದು ಹೀನ ಎಂತಲೂ, ಆ ಮಧ್ಯಮ ಮಾತ್ರೆಯಲ್ಲಿ ಭ್ರಮ ಪರ ಗುಣ ಇರುತ್ತದೆಂತಲೂ ಶಾ (ಪು 137)

57. ದೋಷಾಣಾಮಲ್ಪಭೂಯಸ್ತ್ವಂ ಸಂಸರ್ಗಂ ಸಮವೇಕ್ಷ್ಯ ಚ |
ಸ್ನೇಹದ ಔಷಧ ಯೋಗಕಲ್ಪನ ಯುಂಜ್ಯಾತ್ತ್ರಿಷಷ್ಟಿಧಾ ಭಿನ್ನೈಃ ಸಮಾಸವ್ಯಾಸತೋ ರಸೈಃ || (ಸು. 540.)

ದೋಷಗಳ ಹೆಚ್ಚು ಕಡಿಮೆಯನ್ನು ಮತ್ತು ಕೂಡುವಿಕೆಯನ್ನು ಚೆನ್ನಾಗಿ ಆಲೋಚಿಸಿ ಕೊಂಡು, ಆರು ರಸಗಳನ್ನು ಒಟ್ಟಾಗಿ ಮತ್ತು ಎರಡೆರಡಾಗಿ, ಮೂರುಮೂರಾಗಿ, ನಾಲ್ಕು ನಾಲ್ಕಾಗಿ, ಅಥವಾ ಐದೈದಾಗಿ, ಕೂಡಿಸುವದರ ಭೇದದ ಮೇಲೆ 63 ವಿಧವಾಗಿರುವ ಯೋಗ ವನ್ನು ತಕ್ಕವಾಗಿ ಕಲ್ಪಿಸಿ ಉಪಯೋಗಿಸತಕ್ಕದ್ದು.

58. ಸ್ನೇಹಸಾತ್ಮ್ಯಃ ಕ್ಲೇಶಸಹಃ ಕಾಲೇ ನಾತ್ಯುಷ್ಣಶೀತಲೇ |
ಅಚ್ಚಿಣ್ಣಿಯ ಪಾನ. ಅಚ್ಛಮೇವ ಪಿಬೇತ್ಸ್ನೇಹಮಚ್ಛಪಾನಂ ಹಿ ಪೂಜಿತಂ || (ಸು. 540.)

ಸ್ನೇಹ ಒಗ್ಗುವ ಮತ್ತು ಸಂಕಟವನ್ನು ಸಹಿಸಲು ಶಕ್ತನಾದ ಮನುಷ್ಯನು, ಕಾಲವು ಅತ್ಯುಷ್ಣ, ಅಥವಾ ಅತಿ ಶೀತವಲ್ಲವಾದಾಗ, ಶುದ್ಧವಾದ ಸ್ನೇಹ(ಅಚ್ಛೆಣ್ಣೆ)ವನ್ನೇ ಪಾನಮಾಡ ಬೇಕು; ಯಾಕೆಂದರೆ ಅಗ್ಗಿ ಶುದ್ಧ ಸ್ನೇಹಪಾನವೇ ಪ್ರಶಸ್ತವಾದದ್ದು.

59. ರೂಕ್ಷಕ್ಷತವಿಷಾರ್ತಾನಾಂ ವಾತಪಿತ್ತವಿಕಾರಿಣಾಂ |
ಹೀನಮೇಧಾಸ್ಮೃತೀನಾಂ ಚ ಸಪಿರ್ಪಾನಂ ಪ್ರಶಸ್ಯತೇ ||
ತುಪ್ಪ ತೈಲಗಳು ಯಾರ್ಯಾರಿಗೆ ಹಿತ
ಕೃಮಿಕೋಷ್ಠಾನಿಲಾವಿಷ್ಟಾಃ ಪ್ರವೃದ್ಧಕಫಮೇದಸಃ |
ಪಿಬೇಯುಸ್ತೈಲಸಾತ್ಮ್ಯಾಶ್ಚ ತೈಲಂ ದಾಢ್ಯಾರ್ಥಿನಶ್ಚ ಯೇ || (ಸು. 539.)

ರೂಕ್ಷರಾದವರಿಗೂ, ಶಸ್ತ್ರದ ಗಾಯದಿಂದ ಅಥವಾ ವಿಷದಿಂದ ಪೀಡಿತರಾದವರಿಗೂ, ವಾತಪಿತ್ತವಿಕಾರವುಳ್ಳವರಿಗೂ, ಬುದ್ಧಿ ಮತ್ತು ನೆನಪು ಕಡಿಮೆಯಾದವರಿಗೂ, ಘೃತಪಾನವು ಪ್ರಶಸ್ತವಾಗಿರುತ್ತದೆ ಹೊಟ್ಟೆಯಲ್ಲ ಹುಳವುಳ್ಳವರು, ವಾಯು ಸೇರಿದವರು, ಕಫಮೇದಸ್ಸು ಗಳು ಹೆಚ್ಚಾದವರು, ತೈಲ ಒಗ್ಗುವವರು ಮತ್ತು ದೇಹದಾಢ್ಯರ್ವನ್ನು ಅಪೇಕ್ಷಿಸುವವರು ತೈಲ ವನ್ನು ಪಾನಮಾಡತಕ್ಕದ್ದು.

60. ಪೀತಮಾತ್ರೇ ಜೋಷ್ಣೋದಕೇನೋಪಸ್ಪೃಶ್ಯ ಸೋಪಾನತ್ಕೋ ಯ
ಸ್ನೇಹಪಾನಕ್ಕೆ ತಕ್ಕ ಉಪಚಾರಗಳು
ಧಾಸುಖಂ ವಿಹರೇತ್ || (ಸು. 539.)

ಘೃತವನ್ನಾಗಲಿ, ತೈಲವನ್ನಾಗಲಿ, ಪಾನಮಾಡಿದ ಕೂಡಲೇ ಬಿಸಿನೀರಿನಿಂದ ಬಾಯಿ ಮುಕ್ಕುಳಿಸಬೇಕು ಮತ್ತು ಮೆಟ್ಟು ಹಾಕಿಕೊಂಡು ಸುಖದಿಂದ ತಿರುಗಾಡಬೇಕು.

ಪರಾ 'ಉಪಸ್ಪೃಶ್ಯ' ಎಂದರೆ 'ಆಚಮನ ಮಾಡಿ' ಎಂದರ್ಥ ಎಂತ ಸಿ ಸಂ ವ್ಯಾ

ಉಷ್ಣೋದಕೋಪಚಾರೀ ಸ್ಯಾತ್ ಬ್ರಹ್ಮಚಾರೀ ಕ್ಷಪಾಶಯಃ |
ಶಕೃನ್ಮೂತ್ರಾನಿಲೋದ್ಗಾರಾನುದೀರ್ಣಾಂಶ್ಚ ನ ಧಾರಯೇತ್ ||
ವ್ಯಾಯಾಮಮುಚ್ಚೈರ್ವಚನಂ ಕ್ರೋಧಶೋಕೌ ಹಿಮಾತಪೌ |
ವರ್ಜಯೇದಪ್ರವಾತಂ ಚ ಸೇವೇತ ಶಯನಾಸನಂ || (ಚ. 72.)

ಸ್ನೇಹಪಾನ ಮಾಡಿದವನು ಎಲ್ಲಾ ಉಪಚಾರಗಳಿಗೂ ಬಿಸಿನೀರನ್ನೇ ಉಪಯೋಗಿಸು ವವನಾಗಿಯೂ, ಬ್ರಹ್ಮಚಾರಿಯಾಗಿಯೂ, ರಾತ್ರಿಯಲ್ಲೇ ಮಲಗುವವನಾಗಿಯೂ, ಇರಬೇಕು; ಹೊರಟುಂಧಾ ಮಲ-ಮೂತ್ರ-ವಾಯು-ತೇಗುಗಳ ವೇಗವನ್ನು ತಡೆದು ನಿಲ್ಲಿಸಬಾರದು; ದೇಹ ದಂಡನೆ, ಗಟ್ಟಿಯಾದ ಮಾತು, ಸಿಟ್ಟು, ಶೋಕ, ಹಿಮ ಮತ್ತು ಬಿಸಿಲು, ಇವುಗಳನ್ನು ವರ್ಜಿಸ ಬೇಕು; ಮತ್ತು ಅವನು ಕೂತುಕೊಳ್ಳುವ ಮತ್ತು ಮಲಗುವ ಎಡೆಯು ಬೀಸುವ ಗಾಳಿ ಇಲ್ಲದ್ದಾಗಿರಬೇಕು.

ಋತೇ ಭಲ್ಲಾತಕಸ್ನೇಹಾತ್ತತ್ರ ತೋಯಂ ಸುಶೀತಲಂ | (ಚಿ. ಸಾ. ಸಂ. 918.)

ಗೇರುಕಾಯಿಯ ಎಣ್ಣೆ ಸೇವಿಸಿದ್ದಲ್ಲಿ ಬಿಸಿನೀರಿನ ಉಪಚಾರ ವರ್ಜ್ಯ; ಒಳ್ಳೇ ತಣ್ಣಗಿನ ನೀರನ್ನೇ ಉಪಯೋಗಿಸತಕ್ಕದ್ದು.

61. ದೇಯಾ ದೀಪ್ತಾಗ್ನಯೇ ಮಾತ್ರಾ ಸ್ನೇಹಸ್ಯ ಪಲಸಮ್ಮಿತಾ ।
ಸ್ನೇಹಪಾನಕ್ಕೆ ಮಾತ್ರೆಗಳು
ಮಧ್ಯಮಾ ಚ ತ್ರಿಕರ್ಷಾ ಸ್ಯಾಜ್ಜಘನ್ಯಾ ಚ ದ್ವಿಕಾರ್ಷಿಕೇ ॥ (ಶಾ. 137.)

ಚುರುಕಾದ ಅಗ್ನಿಯುಳ್ಳವನಿಗೆ ಸ್ನೇಹವನ್ನು ಒಂದು ಪಲ ಪರಿಮಾಣದಲ್ಲಿ ಕೊಡ ಬೇಕು; ಮಧ್ಯಮಾಗ್ನಿಯವನಿಗೆ ಮುಕ್ಕಾಲು ಪಲ ಮತ್ತು ಹೀನಾಗ್ನಿಯವನಿಗೆ ಅರ್ಧ ಪಲವು ಯೋಗ್ಯಪ್ರಮಾಣವಾಗಿರುತ್ತದೆ

62. ಕೇವಲಂ ಪೈತ್ತಿಕೇ ಸರ್ಪಿರ್ವಾತಿಕೇ ಲವಣಾನ್ವಿತಂ ।
ಘೃತಕ್ಕೆ ಪ್ರಕ್ಷೇಪ
ಪೇಯಂ ಬಹುಕಫೇ ವಾಪಿ ವ್ಯೋಷಕ್ಷಾರಸಮನ್ವಿತಂ ॥ (ಶಾ. 137.)

ಪಿತ್ತರೋಗದಲ್ಲಿ ಬರೇದಾಗಿ (ಅಂದರೆ ಪ್ರಕ್ಷೇಪವಿಲ್ಲದೆ), ವಾತದಲ್ಲಿ ಸೈಂಧವಲವಣ ಕೂಡಿಸಿಕೊಂಡು ಮತ್ತು ಕಫ ಹೆಚ್ಚು ಇದ್ದಾಗ್ಗೆ ತ್ರಿಕಟು ಮತ್ತು ಕ್ಷಾರ ಕೂಡಿಸಿಕೊಂಡು, ಘೃತವನ್ನು ಪಾನಮಾಡಬೇಕು.

63. ಚತುರ್ವಿಧಃ ಸ್ವೇದಸ್ತದ್ಯಥಾ । ತಾಪಸ್ವೇದ ಉಷ್ಮಸ್ವೇದ ಉಪನಾಹಸ್ವೇ
ಸ್ವೇದನ ಕ್ರಮ ನಾಲ್ಕು ವಿಧ
ದೋ ದ್ರವಸ್ವೇದ ಇತಿ । ಅತ್ರ ಸರ್ವಸ್ವೇದವಿಕಲ್ಪಾವರೋಧಃ । (ಸು. 543.)

ತಾಪಸ್ವೇದ, ಉಷ್ಮಸ್ವೇದ, ಉಪನಾಹಸ್ವೇದ, ದ್ರವಸ್ವೇದ, ಎಂತ ಸ್ವೇದವು (ಬೆವರಿಸುವದು) ನಾಲ್ಕು ವಿಧ; ಅವುಗಳಲ್ಲಿ ಸರ್ವ (ಚರಕಾದಿಗಳಲ್ಲಿ ಹೇಳಿರುವ ಅಗ್ನಿಗುಣ ಸಂಶ್ರಯವಾದ ಹದಿಮೂರು ವಿಧದ) ಸ್ವೇದಗಳು ಅಡಗಿಯವೆ.

ಇದಕ್ಕೆ ನಾಲ್ಕು ಸ್ವೇದವಿಧಗಳ ವರ್ಣನಕ್ಕೆ ಮುಂದಿನ 72-73-74-75ನೆ ಸಂ ಗಳನ್ನು ನೋಡಿರಿ

64. ಚತುರ್ವಿಧೋ ಯೋಽಭಿಹಿತೋ ದ್ವಿಧಾ ಸ್ವೇದಃ ಪ್ರಯುಜ್ಯತೇ ।
ಸರ್ವಾಂಗ ಸ್ವೇದ ಮತ್ತು ಅವಯವ ಸ್ವೇದ
ಸರ್ವಸ್ಮಿನ್ನೇವ ದೇಹೇ ತು ದೇಹಸ್ಯಾವಯವೇ ತಥಾ ॥
(ಸು 544-45.)

ಆ ನಾಲ್ಕು ವಿಧವಾದ ಸ್ವೇದವು ಎರಡು ರೀತಿಯಾಗಿ ಪ್ರಯೋಗಿಸಲ್ಪಡುತ್ತದೆ (1) ಇಡೀ ಶರೀರವನ್ನು ಬೆವರಿಸುವದಕ್ಕೆ ಮತ್ತು (2) ದೇಹದ ಒಂದು ಅವಯವವನ್ನು ಮಾತ್ರ ಬೆವರಿಸುವದಕ್ಕೆ.

65. ಯೇಷಾಂ ನಸ್ಯಂ ವಿಧಾತವ್ಯಂ ವಸ್ತಿಶ್ಚೈವ ಹಿ ದೇಹಿನಾಂ ।
ನಸ್ಯ-ವಸ್ತಿ-ಶೋಧನಗಳಿಗೆ ಸ್ವೇದದ ಅಗತ್ಯತೆ
ಶೋಧನೀಯಾಶ್ಚ ಯೇ ಕೇಚಿತ್ ಪೂರ್ವಂ ಸ್ವೇದ್ಯಾಸ್ತು ತೇ ಮತಾಃ ॥
(ಸು. 545)

ಯಾವ ದೇಹಿಗಳಿಗೆ ನಸ್ಯಕರ್ಮ ಮತ್ತು ವಸ್ತಿಕರ್ಮ ಮಾಡತಕ್ಕ ಆವಶ್ಯಕ ಉಂಟೋ ಮತ್ತು ಯಾರನ್ನು ಶೋಧನಮಾಡಿಸಬೇಕೋ, ಅಂಥವರಿಗೆಲ್ಲಾ ಮುಂದಾಗಿ ಸ್ವೇದವಿಧಿಯನ್ನು ನಡಿಸತಕ್ಕದ್ದು.

66. ನಾನಭ್ಯಕ್ತೇ ನಾಪಿ ಚಾಸ್ನಿಗ್ಧದೇಹೇ ।
ಸ್ವೇದಕ್ಕೆ ಮುಂಚಿತ ಅಭ್ಯಂಜನ
ಸ್ವೇದೋ ಯೋಜ್ಯಃ ಸ್ವೇದವಿದ್ಭಿಃ ಕಥಂಚಿತ್ ॥ (ಸು. 545.)

ಅಭ್ಯಂಜನ ಮಾಡದೆ ಮತ್ತು ದೇಹವನ್ನು ಸ್ನಿಗ್ಧಮಾಡದೆ ಸ್ವೇದವಿಧಿಗಳನ್ನು ತಿಳಿದ ವೈದ್ಯನು ಯಾವ ಸಂಗತಿಯಲ್ಲಿಯಾದರೂ ಸ್ವೇದಕ್ರಮವನ್ನು ನಡಿಸಕೂಡದು. ಯಾಕಂದರೆ:

ದೃಷ್ಟಂ ಲೋಕೇ ಕಾಷ್ಠಮಸ್ನಿಗ್ಧಮಾಶು ।
ಗಚ್ಛೇದ್ಭಂಗಂ ಸ್ವೇದಯೋಗೈರ್ಗೃಹೀತಂ ॥ (ಸು 545.)

ಒಂದು ಕೋಲನ್ನು (ಪಸೆಹಚ್ಚಿ) ಸ್ನಿಗ್ಧಮಾಡಿಕೊಳ್ಳದೆ ಸ್ವೇದಕ್ರಮಗಳಿಂದ (ಬಿಸಿಮಾಡಿ) ಬಗ್ಗಿಸಲು ಯತ್ನಿಸಿದರೆ ಬೇಗನೇ ತುಂಡು ಆಗುವದು ಲೋಕದಲ್ಲಿ ಕಾಣುತ್ತದೆ.

67. ಶುಷ್ಕಾಣ್ಯಪಿ ಹಿ ಕಾಷ್ಠಾನಿ ಸ್ನೇಹಸ್ವೇದೋಪಪಾದನೈಃ ।
ಸ್ವೇದದ ಪ್ರಯೋಜನ
ನಮಯಂತಿ ಯಥಾನ್ಯಾಯಂ ಕಿಂ ಪುನರ್ಜೀವತೋ ನರಾನ್ ॥ (ಚ. 75.)

ಒಣಗಿದ ಮರದ ತುಂಡುಗಳನ್ನು ಎಣ್ಣೆ ಸವರಿ ಬೆವರಿಸಿದ್ದಲ್ಲಿ, ಸರಿಯಾಗಿ ಬೊಗ್ಗಿಸಲಿಕ್ಕಾಗುವಾಗ್ಗೆ, ಜೀವವಿರುವ ಮನುಷ್ಯರನ್ನು ಬೊಗ್ಗಿಸುವದು ಏನು ಕಷ್ಟ?

ಸ್ವೇದನಾರ್ಥಂ ಘೃತಕ್ಷೀರತೈಲಕೋಷ್ಠಾಂಶ್ಚ ಕಾರಯೇತ್ । (ಚ. 77.)

ಸ್ವೇದನಮಾಡಿಸಿಕೊಳ್ಳುವವನು ಹೊಟ್ಟೆಗೆ ತುಪ್ಪವನ್ನು, ಹಾಲನ್ನು ಅಥವಾ ತೈಲವನ್ನು ಸೇವಿಸಬೇಕು.

ಅಗ್ನೇರ್ದೀಪ್ತಿಂ ಮಾರ್ದವಂ ತ್ವಕ್ಪ್ರಸಾದಂ
ಭಕ್ತಶ್ರದ್ಧಾಂ ಸ್ರೋತಸಾಂ ನಿರ್ಮಲತ್ವಂ ।
ಕುರ್ಯಾತ್ಸ್ವೇದೋ ಹಂತಿ ನಿದ್ರಾಂ ಸತಂದ್ರಾಂ
ಸಂಧೀನ್ ಸ್ತಬ್ಧಾಂಶ್ಚೇಷ್ಟಯೇದಾಶು ಯುಕ್ತಃ ॥
ಸ್ನೇಹಕ್ಲಿನ್ನಾ ಧಾತುಸಂಸ್ಥಾಶ್ಚ ದೋಷಾಃ
ಸ್ವಸ್ಥಾನಸ್ಥಾ ಯೇ ಚ ಮಾರ್ಗೇಷು ಲೀನಾಃ ।
ಸಮ್ಯಕ್ ಸ್ವೇದೈರ್ಯೋಜಿತೈಸ್ತೇ ದ್ರವತ್ವಂ
ಪ್ರಾಪ್ತಾಃ ಕೋಷ್ಠಂ ಯಾಂತಿ ದೇಹಾದಶೇಷಾತ್ ॥ (ಸು. 545.)

ಸ್ವೇದದಿಂದ ಅಗ್ನಿದೀಪನ, ಮೃದುತ್ವ, ಚರ್ಮದ ಪ್ರಸನ್ನತೆ, ಊಟದಲ್ಲಿ ಶ್ರದ್ಧೆ ಮತ್ತು ಸ್ರೋತಸ್ಸುಗಳ ನಿರ್ಮಲತೆ, ಉಂಟಾಗುವದಲ್ಲದೆ, ಅತಿನಿದ್ರೆ ಮತ್ತು ಜಡತ್ವ ವಾಸಿಯಾಗುತ್ತವೆ ಮತ್ತು ಸ್ತಬ್ಧವಾದ ಸಂದುಗಳು ಬೇಗನೇ ಬೇಕಾದ ಹಾಗೆ ಚಲಿಸುವವು. ಸ್ನೇಹದಿಂದ ಒದ್ದೆಯಾದ ದೋಷಗಳು, ಧಾತುಗಳನ್ನಾಶ್ರಯಿಸಿರುವವುಗಳಾಗಲಿ, ತಮ್ಮ ಸ್ಥಾನಗಳಲ್ಲಿರುವವುಗಳಾಗಲಿ, (ಸ್ರೋತಸ್ಸುಗಳ) ಮಾರ್ಗಗಳಲ್ಲಿ ತಡೆದು ನಿಂತಿರುವವುಗಳಾಗಲಿ, ಸರಿಯಾಗಿ ನಡಿಸಲ್ಪಟ್ಟ ಸ್ವೇದಗಳಿಂದ ನೀರಾಗಿ, ಇಡೀ ದೇಹದಿಂದ ಹೊಟ್ಟೆಗೆ ಬಂದು ಸೇರಿ, ಹೊರಗೆ ವಿರೇಚನವಾಗಿ ಹೋಗುತ್ತವೆ.

ಪರಾ ಮೇಲಿನ ಶ್ಲೋಕಗಳಲ್ಲಿ ಪ್ರಥಮದ್ದು ಸಂಶಮನಕರವಾದ ಸ್ನೇಹ ಎನಾ ಮಾಡಿಸುವ ಸ್ವೇದದ ವಿಷಯ ವೆಂತಲೂ, ಎರಡನೇದು ಸಂಶೋಧನಕರವಾದ ಸ್ನೇಹಯುಕ್ತಸ್ವೇದದ ವಿಷಯವೆಂತಲೂ ಸಿ. ಸಂ ವ್ಯಾ

68. ಸ್ವಿನ್ನೇಽತ್ಯರ್ಥಂ ಸಂಧಿಪೀಡಾ ವಿದಾಹಃ ।
ಸ್ಫೋಟೋತ್ಪತ್ತಿಃ ಪಿತ್ತರಕ್ತಪ್ರಕೋಪಃ ॥
ಮೂರ್ಚ್ಛಾಭ್ರಾಂತಿರ್ದಾಹ-ತೃಷ್ಣೇ ಕ್ಲಮಶ್ಚ ।
ಕುರ್ಯಾತ್ತೂರ್ಣಂ ತತ್ರ ಶೀತಂ ವಿಧಾನಂ ॥ (ಸು. 545-46.)

ಅತಿಯಾಗಿ ಬೆವರಿಸಿದರ ದೋಷ, ಅದಕ್ಕೆ ಪರಿಹಾರ

ಸ್ವೇದ ಮಾಡಿಸಿದ್ದು ಅತಿಯಾದರೆ, ಸಂಧಿಗಳ ನೋವು, ಅತಿಯುರಿ, ಗುಳ್ಳೆ ಏಳುವದು, ಪಿತ್ತರಕ್ತಗಳ ಪ್ರಕೋಪ, ಮೂರ್ಚ್ಛೆ, ಭ್ರಾಂತಿ, ಜ್ವಾಲೆ, ಬಾಯಾರಿಕೆ ಮತ್ತು ಕ್ಲಮ ಉಂಟಾಗುವವು. ಅದಕ್ಕೆ ಬೇಗನೇ ಶೀತವಾದ ಉಪಚಾರಗಳನ್ನು ಮಾಡತಕ್ಕದ್ದು.

69. ಪಾಂಡುಮೇ೯ಹೀ ಪಿತ್ತರಕ್ತೀ ಕ್ಷಯಾರ್ತಃ ।
ಕ್ಷ್ವಾಮೋಽಜೀರ್ಣೀ ಜೋದಾರಾರ್ತೋ ವಿಷಾರ್ತಃ ॥
ತೃಟ್ಪರ್ದ್ಯಾರ್ತೋ ಗರ್ಭಿಣೀ ಪೀತಮದ್ಯೋ ।
ನೈತೇ ಸ್ವೇದ್ಯಾ ಯಶ್ಚ ಮತ್ಯೋ೯ಽತಿಸಾರೀ ॥
ಸ್ವೇದಾದೇಷಾಂ ಯಾಂತಿ ದೇಹಾ ವಿನಾಶಂ ।
ಚಾಸಾಧ್ಯತ್ವಂ ಯಾಂತಿ ಚೈಷಾಂ ವಿಕಾರಾಃ ॥ (ಸು. 546.)

ಸ್ವೇದಕ್ಕೆ ಅರ್ಹರಲ್ಲದವರು

ಪಾಂಡು, ಮೇಹ, ಪಿತ್ತರಕ್ತ, ಕ್ಷಯ, ಶೋಷ, ಅಜೀರ್ಣ, ಉದರವ್ಯಾಧಿ, ವಿಷ, ಬಾಯಾರಿಕೆ, ವಾಂತಿ, ಅತಿಸಾರ, ಇವುಗಳಿಂದ ಪೀಡಿತರಾದವರೂ, ಗರ್ಭಿಣಿ ಮತ್ತು ಮದ್ಯಪಾನ ಮಾಡಿದವ, ಇವರಿಗೆ ಸ್ವೇದಕ್ರಮ ನಡಿಸಕೂಡದು. ಅವರಿಗೆ ಸ್ವೇದ ಮಾಡಿಸಿದರೆ ಅವರ ದೇಹಗಳು ವಿನಾಶವನ್ನು ಹೊಂದುವವು ಮತ್ತು ಅವರ ರೋಗಗಳು ಅಸಾಧ್ಯ ಸ್ಥಿತಿಗೆ ಬರುವವು.

70. ಏತೇಷಾಂ ಸ್ವೇದಸಾಧ್ಯಾ ಯೇ ವ್ಯಾಧಯಸ್ತೇಷು ಬುದ್ಧಿಮಾನ್ ।
ಮೃದೂನ್ ಸ್ವೇದಾನ್ ಪ್ರಯುಂಜೀತ ತಥಾ ಹ್ಯನ್ಯೇಷ್ವದೃಷ್ಟಿಷು ॥
(ಸು. 546.)

ಮೃದುಸ್ವೇದ

ಸ್ವೇದಕ್ಕೆ ಅಯೋಗ್ಯರಾದ (ಮೊದಲು ಹೇಳಲ್ಪಟ್ಟ) ಇವರಿಗೆ, ವ್ಯಾಧಿಗಳು ಸ್ವೇದ ಸಾಧ್ಯವಾಗಿದ್ದರೆ, ಬುದ್ಧಿವಂತನು ಮೃದುವಾದ ಸ್ವೇದಕ್ರಮಗಳನ್ನು ಉಪಯೋಗಿಸಬೇಕು. ಹಾಗೆಯೇ, ಎದೆ, ಅಂಡ ಮತ್ತು ಕಣ್ಣು, ಈ ಅಂಗಗಳಿಗೆ ಸ್ವೇದ ಅಗತ್ಯವಾದರೆ ಮೃದು ಸ್ವೇದವನ್ನೇ ನಡಿಸಬೇಕು.

71. ಸರ್ವಾನ್ ಸ್ವೇದಾನ್ನಿವಾತೇ ಚ ಜೀರ್ಣಾನ್ನಸ್ಯಾವಚಾರಯೇತ್ ।
ಸ್ನೇಹಾಭ್ಯಕ್ತಶರೀರಸ್ಯ ಶೀತೈರಾಚ್ಛಾದ್ಯ ಚಕ್ಷುಷೀ ॥
ಸ್ವಿದ್ಯಮಾನಸ್ಯ ಚ ಮುಹುರ್ಹೃದಯಂ ಶೀತಲೈಃ ಸ್ಪೃಶೇತ್ ।
ಸಮ್ಯಕ್ಸ್ವಿನ್ನಂ ವಿಮೃದಿತಂ ಸ್ನಾನಮುಷ್ಣಾಂಬುಭಿಃ ಶನೈಃ ।

ಸ್ವೇದನ ನಡಿಸತಕ್ಕ ಕ್ರಮ

ಸ್ವಭ್ಯಕ್ತಂ ಪ್ರಾವೃತಾಂಗಂ ಚ ನಿವಾತಶರಣಸ್ಥಿತಂ ||
ಭೋಜಯೇದನಭಿಷ್ಯಂದಿ ಸರ್ವಂ ವಾಚಾರಮಾದಿಶೇತ್ | (ಸು. 546.)

ಎಲ್ಲಾ ವಿಧವಾದ ಸ್ವೇದಗಳನ್ನು, ರೋಗಿಯು ಉಂಡದ್ದು ಜೀರ್ಣವಾದ ಮೇಲೆ, ಶರೀರಕ್ಕೆ ಸ್ನೇಹ ಹಚ್ಚಿ, ಗಾಳಿಯಿಲ್ಲದ ಸ್ಥಳದಲ್ಲಿ, ನಡಿಸಬೇಕು ಮತ್ತು ಕಣ್ಣುಗಳನ್ನು ಶೀತವಾದ ವಸ್ತ್ರಾದಿಗಳಿಂದ ಮುಚ್ಚಿಡಬೇಕು; ಬೆವರುವಾಗ್ಗೆ ಎದೆಗೆ ಪದೇ ಪದೇ ತಣ್ಣಗಾದವುಗಳ ಸ್ಪರ್ಶನಕೊಡಬೇಕು; ಚೆನ್ನಾಗಿ ಬೆವರು ಬಂದ ಮೇಲೆ ಮೆಲ್ಲಗೆ ತಿಕ್ಕಿ, ಬಿಸಿನೀರಿನಿಂದ ಸ್ನಾನ ಮಾಡಿಸಿ, ಎಣ್ಣೆ ಹಚ್ಚಿ, ಅಂಗಗಳು ಮುಚ್ಚುವ ಹಾಗೆ ಹೊದ್ದಿಸಿ, ಗಾಳಿಯಿಲ್ಲದ ಕೋಣೆಯಲ್ಲಿ ಇರಿಸಿ, ಅಭಿಷ್ಯಂದಿಯಲ್ಲದ ಭೋಜನವನ್ನು ಕೊಡಬೇಕು, ಅಥವಾ ಎಲ್ಲಾ ವಿಷಯದಲ್ಲಿಯೂ ಪಥ್ಯದಲ್ಲಿರಿಸಬೇಕು.

72. ತತ್ರ ತಾಪಸ್ವೇದಃ ಪಾಣಿಕಾಂಸ್ಯಕಂದುಕಪಾಲವಾಲುಕಾವಸ್ತ್ರೈಃ ಪ್ರಯು
ತಾಪಸ್ವೇದದ ವಿಧಾನ ಜ್ಯತೇ ಶಯಾನಸ್ಯ ಚಾಂಗತಾಪೋ ಬಹುಶಃ ಖಾದಿರಾಂಗಾರೈರಿತಿ |
(ಸು. 543.)

ನಾಲ್ಕು ವಿಧವಾದ ಸ್ವೇದಗಳಲ್ಲಿ ತಾಪಸ್ವೇದವೆಂಬದು ರೋಗಿಯನ್ನು ಮಲಗಿಸಿ, ಖದಿರೆ ಮರದ ಬೆಂಕೆಯಲ್ಲಿ ಬಿಸಿ ಮಾಡಿದ ಅಂಗೈ, ತಟ್ಟೆ, ಚರಿಗೆ, ಬಾಣಲೆ, ಮಳಲು ಅಥವಾ ವಸ್ತ್ರದಿಂದ ಅಂಗವನ್ನು ಬಿಸಿಮಾಡುವದಾಗಿರುತ್ತದೆ.

ಷರಾ ಅಂಗದ ಮೇಲೆ ವಸ್ತ್ರದ ತುಂಡು ಹೊದಿಸಿ, ಮಳಲು, ವಸ್ತ್ರ ಅಥವಾ ಅಂಗೈಗೆ ಹುಳಿದ್ರವವನ್ನು ಚಿಮುಕಿಸಿ ಕೊಳ್ಳಬೇಕಾಗಿ ಛಾ ಪ್ರ (229) ವಸ್ತ್ರ, ಫಾಲ (ನೇಗಲ ಮೊನೆ) ಅಂಗೈ ಮುಂತಾದ್ದರಿಂದ ಬಿಸಿಮಾಡುವದಾಗಿ ವಾ (ಪು 80)

73. ಉಷ್ಮಸ್ವೇದಸ್ತು ಕಪಾಲಪಾಷಾಣೇಷ್ಟಕಾಲೋಹಪಿಂಡಾನಗ್ನಿವರ್ಣಾ
ಉಷ್ಮಸ್ವೇದದ ವಿಧಾನ ನದ್ಭಿರಾಸಿಂಚೇದಮ್ಲದ್ರವ್ಯೈರ್ವಾತೈರಾರ್ದ್ರಾಲಕ್ತಕಪರಿವೇಷ್ಟಿತಮಂಗ
ಪ್ರದೇಶಂ ಸ್ವೇದಯೇತ್ | (ಸು. 543.)

ಉಷ್ಮಸ್ವೇದವೆಂಬದು ಬಾಣಲೆ, (ಅಥವಾ ಆ ಆಕಾರದ ಮಣ್ಣಿನ ಪಾತ್ರೆ, ಓಡು), ಶಿಲೆ ಕಲ್ಲು, ಇಟ್ಟಿಗೆ, ಅಥವಾ ಕಬ್ಬಿಣದ ಗಟ್ಟಿಯನ್ನು ಅಗ್ನಿವರ್ಣವಾಗುವ ತನಕ ಸುಟ್ಟು, ಅದಕ್ಕೆ ನೀರು ಅಥವಾ ಹುಳಿಯಾದ ಗಂಜಿ ಮುಂತಾದ ದ್ರವಪದಾರ್ಥವನ್ನು ಚಿಮುಕಿಸಿ, ಆದರ ಸೆಕೆಯನ್ನು ಅಗತ್ಯವುಳ್ಳ ಅಂಗಕ್ಕೆ ಕೊಟ್ಟು ಬೆವರಿಸುವದು. ಆ ಅಂಗವನ್ನು ಮೊದಲಾಗಿ ಆದೇ ದ್ರವದಿಂದ ಒದ್ದೆಮಾಡಲ್ಪಟ್ಟ ವಸ್ತ್ರದಿಂದ ಸುತ್ತಿಕೊಳ್ಳಬೇಕು. ಇದರಲ್ಲಿ ಇನ್ನೊಂದು ವಿಧ ಹ್ಯಾಗಂದರೆ —

ಮಾಂಸರಸಪಯೋದಧಿಧಾನ್ಯಾಮ್ಲವಾತಹರಪತ್ರಭಂಗಕ್ವಾಥಪೂರ್ಣಾಂ
ವಾ ಕುಂಭೀಮನುತಪ್ತಾಂ ಪ್ರಾವೃತ್ಯೋಷ್ಮಾಣಂ ಗೃಹ್ಣೀಯಾತ್ |
(ಸು. 543.)

ಮಾಂಸರಸ, ಹಾಲು, ಮೊಸರು, ಧಾನ್ಯಾಮ್ಲ, ಅಥವಾ ವಾತಹರವಾದ ಎಲೆ-ಚಿಗುರುಗಳ ಕಷಾಯ, ಇದರಿಂದ ತುಂಬಿದ ಗಡಿಗೆಯನ್ನು ಕಾಯಿಸಿ, ಸೆಕೆಯನ್ನು (ಬೇಕಾದಲ್ಲಿಗೆನೇ ತಗಲುವಂತೆ)* ಮರೆ ಮಾಡಿಕೊಂಡು ಹಿಡಿಯಬೇಕು

* ಸೆಕೆಯ ತೀವ್ರತೆ ಕಡಿಮೆ ಮಾಡುವದಕ್ಕೋಸ್ಕರ ಗಡಿಗೆಯನ್ನು ಕಂಬಳಿ ಮುಂತಾದ್ದರಿಂದ ಮುಚ್ಚಿಕೊಳ್ಳುವದಾಗಿ ನಿ ಸಂ ವ್ಯಾ

ಇದರಾ ಪ್ರಸ್ತರಸ್ವೇದ, ನಾಡೀಸ್ವೇದ, ಜೀಂತಾಕಸ್ವೇದ ಅಶ್ಮಘ್ನಸ್ವೇದ, ಕರ್ಷಸ್ವೇದ, ಕುಟೀಭೂಸ್ವೇದ, ಮುಂತಾದ ಬೇರೆ ಬೇರೆ ಸ್ವೇದಕ್ರಮಗಳು ಚರಕದಲ್ಲಿ ಸವಿಸ್ತಾರವಾಗಿ ಹೇಳಲ್ಪಟ್ಟಿವೆ

74. ಉಪನಾಹಸ್ವೇದಸ್ತು ವಾತಹರಮೂಲಕಲ್ಕೈರಮ್ಲಪಿಷ್ಟೈರ್ಲವಣಪ್ರಗಾಢೈಃ ಸುಸ್ನಿಗ್ಧೈಃ ಸುಖೋಷ್ಣೈಃ ಪ್ರದಿಹ್ಯ ಸ್ವೇದಯೇತ್ | ಏವಂ ಕಾಕೋಲ್ಯಾದಿಭಿಃ ಸುರಸಾದಿಭಿಸ್ತಿಲಾತಸೀಸರ್ಷಪಕಲ್ಕೈಃ ಕೃಶರಾಪಾಯಸೋತ್ಕಾರಿಕಾಭಿರ್ವೇಶವಾರೈಃ ಶಾಲ್ವಣೈರ್ವಾ ತನುವಸ್ತ್ರಾವನದ್ಧೈಃ ಸ್ವೇದಯೇತ್ | (ಸು. 544)

ಉಪನಾಹಸ್ವೇದದ ವಿಧಾನ

ಉಪನಾಹಸ್ವೇದ ಎಂಬದು ವಾತಹರವಾದ ಬೇರುಗಳನ್ನು (ಹುಳಿಯಾದ ಗಂಜಿ, ಮಜ್ಜಿಗೆ, ಮುಂತಾದ) ಹುಳಿದ್ರವಗಳಿಂದ ಅರೆದು, ಉಪ್ಪನ್ನೂ, ಸ್ನೇಹವನ್ನೂ ಕೂಡಿಸಿ, ಕುದಿಸಿ ಮಾಡಲ್ಪಟ್ಟ, ಸುಖಕರವಾಗಿ ಬಿಸಿಯಾಗಿರುವ, ಕಲ್ಕವನ್ನು ಲೇಪಿಸಿ ಬೆನರಿಸುವದಾಗಿರುತ್ತದೆ. ಕಾಕೋಲ್ಯಾದಿಗಳನ್ನಾಗಲಿ, ಸುರಸಾದಿಗಳನ್ನಾಗಲಿ, ಎಳ್ಳು, ಅತಸಿ ಮತ್ತು ಸಾಸಿವೆ, ಇವುಗಳ ಕಲ್ಕಗಳನ್ನಾಗಲಿ, ಕೃಶರೆಗಳನ್ನಾಗಲಿ, ಪಾಯಸಗಳನ್ನಾಗಲಿ, ಉತ್ಕಾರಿಕೆಗಳನ್ನಾಗಲಿ, ವೇಶವಾರಗಳನ್ನಾಗಲಿ, ಶಾಲ್ವಣಗಳನ್ನಾಗಲಿ ತೆಳ್ಳಗಿನ ವಸ್ತ್ರದಲ್ಲಿ ಪೊಟ್ಣಮಾಡಿ, ಆ ಪೊಟ್ಣಗಳನ್ನು (ಬೇಕಾದ ಅಂಗಕ್ಕೆ) ಕಟ್ಟಿ, ಅದೇ ರೀತಿ ಬೆವರಿಸತಕ್ಕದ್ದು.

ಇದರಾ ಪಾಠಾಂತರದಲ್ಲಿ 'ಕಾಕೋಲ್ಯಾದಿ'ಗಳನಂತರ 'ಎಲಾದಿಗಳು' ಸಹ ಹೇಳಲ್ಪಟ್ಟಿವೆ ಪೊಟ್ಣಕಟ್ಟಿ ಬೆವರಿಸುವದು ಉಪನಾಹಸ್ವೇದದಲ್ಲಿ ಅಡಗಿದ 'ತಂಕರಸ್ವೇದ' ಎಂತ ನಿ ಸಂ ವ್ಯಾ

'ಕೃಶರೆ' ಎಂದರೆ ಎಳ್ಳು, ಅಕ್ಕಿ, ಉದ್ದುಗಳಿಂದ ಮಾಡಲ್ಪಟ್ಟ ಗಂಜಿ (ನಿ ಸಂ ವ್ಯಾ)

'ಪಾಯಸ' ಎಂಬದು ಅಕ್ಕಿಯನ್ನು ಹಾಲಿನಲ್ಲಿ ಬೇಯಿಸಿ ಮಾಡಲ್ಪಟ್ಟದ್ದು (ನಿ ಸಂ ವ್ಯಾ) ಯವೆಗೋಧಿ, ಎಳ್ಳು, ಹೆಸರು, ಉದ್ದು, ಇವುಗಳೊಳಗೆ ಯಾವದಾದರೊಂದರ ಚೂರ್ಣಕ್ಕೆ ಕಾಕೋಲ್ಯಾದಿ ಆನೇಕ ಔಷಧಗಳ ಕಲ್ಕವನ್ನು ಕೂಡಿಸಿ, ತುಪ್ಪ, ತೈಲ, ವಸೆ, ಮಜ್ಜೆ ಮತ್ತು ಹಾಲು, ಇವುಗಳಲ್ಲಿ ತಯಾರಿಸಲ್ಪಟ್ಟ ಐದು ವಿಧವಾದ ಪಾಯಸಗಳು ವಾತರೋಗದ ಚಿಕಿತ್ಸೆಯಲ್ಲಿ ಉಪನಾಹಕ್ಕೆ ಹೇಳಲ್ಪಟ್ಟವೆ (ಸು 404) ಈ ಯೋಗಗಳಲ್ಲಿ ಹಾಲೇ ಹೆಚ್ಚಾಗಿ ಸೇರುವದರಿಂದ ಅವುಗಳು ಪಾಯಸಗಳೆಂತ ಹೇಳಲ್ಪಟ್ಟಿವೆ

'ಉತ್ಕಾರಿಕೆ' ಎಂದರೆ —

1 ಯವೆಗೋಧಿ, ಉದ್ದು, ಹರಳುಬೀಜ, ಅತಸೀಬೀಜ, ಕುಸುಬೆಬೀಜ, ಇವುಗಳ ಹಿಟ್ಟಿನಿಂದ ತಯಾರಿಸಲ್ಪಟ್ಟ ಲಪ್ಸಿಕಾಕೃತಿಗೆ ಬಂದ ಸ್ವೇದನೋಪಾಯ ಎಂತ ಅ

2 'ಲಪ್ಸಿಕಾ' ಎಂತ ನಿ ಸಂ ವ್ಯಾ ಸಜ್ಜಗೆಯನ್ನು ತುಪ್ಪದಲ್ಲ ಹುರಿದು, ಅದನ್ನು ಸಕ್ಕರೆ ಸಮೇತ ಹಾಲಿನಲ್ಲಿ ಹಾಕಿ ಬೇಯಿಸಿ ಗಟ್ಟಿಯಾದಾಗ, ಲವಂಗ, ಕಾಳುಮೆಣಸು ಮುಂತಾದವುಗಳನ್ನು ಸೇರಿಸಿ, ಸಿದ್ಧವಾದ ದ್ರವ್ಯವು 'ಲಪ್ಸಿಕಾ' ಎಂತ ಪ್ರಸಿದ್ಧವಾಗಿದೆ (ಭಾ ಪ್ರ 161)

ತೈಲವಿರುವ ಕಾಯಿಗಳ ತಿರುಳನ್ನು ಕೂಡಿಸಿ ಮಾಡಿದ ಉತ್ಕಾರಿಕೆಯು ವಾತವ್ಯಾಧಿ ಚಿಕಿತ್ಸೆಯಲ್ಲಿ ಲೇಪಕ್ಕೆ ಹೇಳಲ್ಪಟ್ಟಿದೆ (ಸು 404)

'ವೇಶವಾರ' ಎಂದರ ಚಟ್ಟಿ ಎಂತ ಸಿ ಸಂ ವಾ ಮಸಾಲೆ ಎಂತ ಛಾ ಪ್ರ (ಪು 164) ಮಾಂಸ ಪಾಕಕ್ರಮ ವನ್ನು ಹೇಳುವಲ್ಲ ವೇಶವಾರದ ಜೀನಸುಗಳು ಎಳ್ಳದಲೆ, ಅಕ್ಕಿ, ಲವಂಗ ಮತ್ತು ಕಾಳುಮೆಣಸು. ಎಂತ ಛಾ ಪ್ರ ಹೇಳುತ್ತದೆ (ಪು 164) ಯವೆಗೋಧಿ, ಎಳ್ಳು, ಹಸರು, ಉದ್ದು, ಇವುಗಳ ಚೂರ್ಣಕ್ಕೆ ನಾನಾ ವಿಧವಾದ ಮಾಸು ಮಾಂಸಗಳನ್ನು ಕೂಡಿಸಿ ಮಾಡಿದ ವೇಶವಾರವು ವಾತಚಿಕಿತ್ಸೆಯಲ್ಲಿ ಉಪನಾಹಕ್ಕೆ ಉಕ್ತವಾಗಿದ (ಸು 404)

'ಶಾಲ್ವಣ' ಎಂಬದರ ಎವರ —

ಕಾಕೋಲ್ಯಾದಿಃ ಸವಾತಘ್ನಃ ಸರ್ವಾಮ್ಲದ್ರವ್ಯಸಂಯುತಃ |
ಸಾನೂಪೋದಕಮಾಂಸಸ್ತು ಸರ್ವಸ್ನೇಹಸಮನ್ವಿತಃ ||
ಸುಖೋಷ್ಣಃ ಸ್ವಷ್ಟಲವಣಾ ಶಾಲ್ವಣಃ ಪರಿಕೀರ್ತಿತಃ | (ಸು 400)

ಕಾಕೋಲ್ಯಾದಿಗಳಿಂದ ಮತ್ತು ವಾತಹರವಾದ ಔಷಧಗಳಿಂದ ತಯಾರಿಸಲ್ಪಟ್ಟ ಎಲ್ಲಾ ಹುಳಿದ್ರವ್ಯಗಳಿಂದಲೂ, ನಾಲ್ಕು ವಿಧವಾದ ಸ್ನೇಹಗಳಿಂದಲೂ, ಜಲೀಶಯ ಮತ್ತು ಆನೂಪಜಾತಿ ಮಾಂಸಗಳಿಂದಲೂ, ಉಪ್ಪಿನಿಂದಲೂ, ಯುಕ್ತವಾದ, ಸುಖಕರವಾಗಿ ಬಿಸಿಯಾಗಿರುವ ಲೇಪವು 'ಶಾಲ್ವಣ' ಎಂದು ಪ್ರಸಿದ್ಧವಾಗಿರುತ್ತದೆ

ದ್ರವಸ್ವೇದದ ವಿಧಾನ

75. ದ್ರವಸ್ವೇದಸ್ತು ವಾತಹರದ್ರವ್ಯಕ್ವಾಥಪೂರ್ಣೇ ಕೋಷ್ಣಕಟಾಹೇ ದ್ರೋಣ್ಯಾಂ ವಾ ವಿಗಾಹ್ಯ ಸ್ವೇದಯೇತ್ | ಏವಂ ಪಯೋಮಾಂಸರಸಯೂಷತೈಲಧಾನ್ಯಾಮ್ಲಘೃತವಸಾಮೂತ್ರೇಷ್ವವಗಾಹೇತ | ಸುಖೋಷ್ಣೈಃ ಕಷಾಯೈಃ ಪರಿಷಿಂಚೇದಿತಿ | (ಸು 544)

ದ್ರವಸ್ವೇದ ಎಂಬದು ವಾತಹರವಾದ ದ್ರವ್ಯಗಳ ಕಷಾಯದಿಂದ ತುಂಬಿದ ಸುಖೋಷ್ಣವಾದ ಕಟಾಹ ಅಥವಾ ದ್ರೋಣಿಯಲ್ಲಿ ಕೂತುಕೊಂಡಿದ್ದು (ದೇಹವನ್ನು ಮುಳುಗಿಸಿ) ಬೆವರಿಸುವದಾಗಿರುತ್ತದೆ. ಹೀಗೆ ಹಾಲು, ಮಾಂಸದ ರಸ, ಸಾರು, ತೈಲ, ಧಾನ್ಯಾಮ್ಲ, ತುಪ್ಪ, ವಸೆ, ಮೂತ್ರ, ಇವುಗಳಲ್ಲಿ ದೇಹವನ್ನು ಮುಳುಗಿಸಿ ಕೂತುಕೊಳ್ಳಬೇಕು. ಸುಖೋಷ್ಣವಾದ ಕಷಾಯಗಳಿಂದ ಧಾರಾರೂಪವಾಗಿ ಪರಿಷಿಂಚನ ಮಾಡಬೇಕು.

ನಾಭೇಃ ಷಡಂಗುಲಂ ಯಾವನ್ಮಗ್ನಂ ಕ್ವಾಥಸ್ಯ ಧಾರಯಾ |
ಕೋಷ್ಣಯಾ ಸ್ಕಂಧಯೋಃ ಸಿಕ್ತಸ್ತಿಷ್ಠೇತ್ ಸ್ನಿಗ್ಧತನುರ್ನರಃ ||
(ಭಾ. ಪ್ರ. 229-30.)

(ತೈಲಾದಿಗಳನ್ನು ಹಚ್ಚಿಕೊಂಡು) ಸ್ನಿಗ್ಧಶರೀರನಾಗಿ, ಹೊಕ್ಕುಳಿನ ಮೇಲೆ ಆರಂಗುಲ ಮುಳುಗುವ ಹಾಗೆ (ಕಷಾಯ ತುಂಬಿದ ಕಟಾಹದಲ್ಲಿ) ಕೂತು, ಉಗುರುಬಿಸಿಯಾದ ಕಷಾಯದ ಧಾರೆಯನ್ನು ಹೆಗಲುಗಳ ಮೇಲೆ ಸುರಿಸಿಕೊಂಡು* ಇರಬೇಕು.

* ಕಟಾಹ ತುಂಬುವ ವರೆಗೆ ಎಂತ ಛಾ ಪ್ರ ವ್ಯಾಖ್ಯಾನ

ನಾಲ್ಕು ವಿಧವಾದ ಸ್ವೇದಗಳ ಗುಣ ಭೇದಗಳು

76. ತತ್ರ ತಾಪೋಷ್ಮಸ್ವೇದೌ ವಿಶೇಷತಃ ಶ್ಲೇಷ್ಮಘ್ನೌ | ಉಪನಾಹಸ್ವೇದೋ ವಾತಘ್ನಃ | ಅನ್ಯತರಸ್ಮಿನ್ ಪಿತ್ತಸಂಸೃಷ್ಟೇ ದ್ರವಸ್ವೇದ ಇತಿ | (ಸು. 544.)

ನಾಲ್ಕು ವಿಧವಾದ ಸ್ವೇದಗಳೊಳಗೆ ತಾಪ-ಉಷ್ಮಸ್ವೇದಗಳು ವಿಶೇಷವಾಗಿ ಕಫನಾಶಕರವಾದವು. ಉಪನಾಹಸ್ವೇದವು ವಾತಹರ. ೮ ಕಫ ಅಥವಾ ವಾತಕ್ಕೆ ಪಿತ್ತ ಕೂಡಿದ ಸಂಗತಿಯಲ್ಲಿ ದ್ರವಸ್ವೇದವು ಪ್ರಶಸ್ತ.

77. ಕಫಮೇದೋಽನ್ವಿತೇ ವಾಯೌ ನಿವಾತಾತಪಗುರುಪ್ರಾವರಣನಿಯು
ಅಗ್ನಿವಿನಾ ಜೀವ ರಿಸುವ ಕ್ರಮ ದ್ಧಾಧ್ವವ್ಯಾಯಾಮಭಾರಹರಣಾಮರ್ಶೈಃ ಸ್ವೇದಮುತ್ಪಾದಯೇ
ದಿತಿ । (ಸು. 344)

ವಾಯುವಿನೊಂದಿಗೆ ಕಫ-ಮೇದಸ್ಸುಗಳು ಸೇರಿದಾಗ್ಗೆ, ಗಾಳಿ ಬಂಧಮಾಡುವದು, ಬಿಸಿಲು, ದಪ್ಪವಾದ ಹೊದಿಕೆ, ಉರುಡುವದು, ದಾರಿ ನಡೆಯುವದು, ವ್ಯಾಯಾಮ (ಅಂಗ ಸಾಧನೆ), ಭಾರಹೊರುವದು, ಸಿಟ್ಟು ಬರಿಸುವದು, ಇವುಗಳಿಂದ ಬೆವರಿಸಬೇಕು

78. ವೃಷಣೌ ಹೃದಯಂ ದೃಷ್ಟೀ ಸ್ವೇದಯೇನ್ಮೃದು ನೈವ ವಾ ।
ಸ್ವೇದನಕ್ಕೆ ಅವ ಯವಾಂಗಭೇದ ಮಧ್ಯಮಂ ವಂಕ್ಷಣೌ ಶೇಷಮಂಗಾವಯವಮಿಷ್ಟತಃ ॥ (ಚ. 76.)

ಅಂಡಗಳೆರಡು, ಹೃದಯ, ಎರಡು ಕಣ್ಣುಗಳು, ಇವುಗಳನ್ನು ಮೃದುವಾಗಿಯೇ ಬೆವರಿಸಬೇಕು—ಅಥವಾ ಬೆವರಿಸಲೇ ಬಾರದು ಎರಡು ತೊಡೆಸಂದುಗಳಿಗ ಮಧ್ಯಮ ಸ್ವೇದವನ್ನು ಉಪಯೋಗಿಸಬೇಕಲ್ಲದೆ, ಮಹಾಸ್ವೇದ ಯೋಗ್ಯವಲ್ಲ. ಸಾಧಾರಣವಾಗಿ ಇತರ ಅಂಗ ಅಥವಾ ಅವಯವವನ್ನು ಇಷ್ಟ ಇದ್ದಂತೆ ಬೆವರಿಸಬಹುದು

ಪರಾ ತೊಡೆ ಸಂದುಗಳಿಗೆ ಅಲ್ಪವಾದ ಸ್ವೇದ ಉಚಿತವೆಂತ ವಾ (ಪು ೬1)

79. ವ್ಯಾಧೌ ಶೀತೇ ಶರೀರೇ ಚ ಮಹಾನ್ ಸ್ವೇದೋ ಮಹಾಬಲೇ ।
ಸ್ವೇದನಕ್ಕೆ ಬಲವಿಚಾರ ದುರ್ಬಲೇ ದುರ್ಬಲಃ ಸ್ವೇದೋ ಮಧ್ಯಮೇ ಮಧ್ಯಮೋ ಹಿತಃ ॥
(ಚ. 75.)

ವ್ಯಾಧಿಯೂ ಶರೀರವೂ ಶೀತವಾಗಿ, ರೋಗಿಯು ಬಲಿಷ್ಠನಾಗಿದ್ದರ, ಮಹಾ ಸ್ವೇದ, ದುರ್ಬಲನ ಸಂಗತಿಯಲ್ಲಿ ದುರ್ಬಲವಾದ ಸ್ವೇದ, ಮಧ್ಯಮ ಬಲದವನಿಗೆ ಮಧ್ಯಮ ಸ್ವೇದ ಹಿತವಾಗುತ್ತದೆ.

80. ದ್ರವಂ ತನು ಸರಂ ಯಾವಚ್ಛೀತೀಕರಣಮೌಷಧಮ್ ।
ಸ್ತಂಭನೋಪಕ್ರಮ ಸ್ವಾದು ತಿಕ್ತಂ ಕಷಾಯಂ ಚ ಸ್ತಂಭನಂ ಸರ್ವಮೇವ ತತ್ ॥
(ಚ 122)

ದ್ರವ, ತನು, ಸರ, ಗುಣಗಳುಳ್ಳ ಔಷಧಗಳೊಳಗೆ ಮತ್ತು ಸೀ, ಕಹಿ ಮತ್ತು ಜೊಗರು ಪದಾರ್ಥಗಳೊಳಗೆ ಯಾವದು ಶೀತಕರವೋ ಅದೆಲ್ಲ ಸ್ತಂಭನವಾಗಿರುತ್ತದೆ.

81. ಪಿತ್ತಕ್ಷಾರಾಗ್ನಿದಗ್ಧಾ ಯೇ ವಮ್ಯತೀಸಾರಪೀಡಿತಾಃ ।
ಸ್ತಂಭನೀಯಕ್ಕೆ ಯೋಗ್ಯರು ವಿಷಸ್ವೇದಾತಿಯೋಗಾರ್ತಾಃ ಸ್ತಂಭನೀಯಾಸ್ತಥಾಪರಾಃ ॥
(ಚ. 122.)

ಪಿತ್ತ, ಕ್ಷಾರ, ಅಥವಾ ಬೆಂಕಿಯಿಂದ ಸುಡಲ್ಪಟ್ಟವರು, ವಾಂತಿ ಅಥವಾ ಅತಿಸಾರದಿಂದ ಪೀಡಿತರಾದವರು, ವಿಷದಿಂದ ಅಥವಾ ಸ್ವೇದನ ಅತಿಯಾದ್ದರಿಂದ ಸಂಕಷ್ಟಪಡುವವರು ಮತ್ತು ಹಾಗಿನ ಬೇರೆಯವರು ಸ್ತಂಭನೋಪಕ್ರಮಕ್ಕೆ ಯೋಗ್ಯರಾಗಿರುತ್ತಾರೆ.

82. ಪಂಚ ಕಷಾಯಶತಾನಿ । ಪಂಚ ಕಷಾಯಯೋನಯಃ । ಪಂಚವಿಧಂ ಕಷಾಯಕಲ್ಪನಂ । ಪಂಚಾಶನ್ಮಹಾಕಷಾಯಾ ಇತಿ ಸಂಗ್ರಹಃ ।

ನಾನಾ ವಿಧದ ಕಷಾಯಗಳು

ಕಷಾಯಗಳು 500, ಕಷಾಯಗಳಿಗೆ ಯೋನಿಗಳು ಐದು, ಕಷಾಯಕ್ರಮಗಳು ಐದು, ಮಹಾಕಷಾಯಗಳು 50, ಹೀಗೆ ಸಂಗ್ರಹ.

83. ಪಂಚ ಕಷಾಯಯೋನಯ ಇತಿ । ಮಧುರಕಷಾಯೋಽಮ್ಲಕಷಾಯಃ ಕಟುಕಷಾಯಸ್ತಿಕ್ತಕಷಾಯಃ ಕಷಾಯಕಷಾಯಶ್ಚೇತಿ ತಂತ್ರೇ ಸಂಜ್ಞಾ । (ಚ. 18.)

ಮಧುರಾದಿ ಕಷಾಯಯೋನಿಗಳು

ಐದು ಕಷಾಯ ಯೋನಿಗಳೆಂದರೆ ಸೀ ಕಷಾಯ, ಹುಳಿ ಕಷಾಯ, ಖಾರ ಕಷಾಯ, ಕಹಿ ಕಷಾಯ, ಚೊಗರು ಕಷಾಯ ಎಂಬ ಸಂಜ್ಞೆಯುಳ್ಳವು.

84. ಪಂಚವಿಧಂ ಕಷಾಯಕಲ್ಪನಮಿತಿ । ತದ್ಯಥಾ । ಸ್ವರಸಃ ಕಲ್ಕಃ ಶೃತಃ ಶೀತಃ ಫಾಂಟಃ ಕಷಾಯ ಇತಿ । (ಚ. 18.)

ಸ್ವರಸಾದಿ ಐದು ಕಷಾಯಕಲ್ಪನಗಳು

ಕಷಾಯಕ್ರಮಗಳು ಐದು ಎಂಬವು ಹ್ಯಾಗಂದರೆ 1. (ಜಜ್ಜಿ ವಸ್ತ್ರದಲ್ಲಿ ಹಾಕಿ ಹಿಂಡಿ ತೆಗೆದದ್ದು) ಸ್ವರಸ, 2. (ನುಣ್ಣಗೆ ಪುಡಿಮಾಡಿ ರಸದಲ್ಲಿ ಕದಡಿದ ಮುದ್ದೆ) ಕಲ್ಕ; 3. (ಬೆಂಕಿಯಲ್ಲಿ ಕುದಿಸಿ ಬತ್ತಿಸಿದ್ದು) ಶೃತ, 4. (ದ್ರವ್ಯವನ್ನು ಪುಡಿಮಾಡಿ, ನೀರಲ್ಲಿ ನೆನೆಸಿ ರಾತ್ರಿಕಾಲ ಇಟ್ಟು, ಬೆಳಿಗ್ಗೆ ಹಿಂಡಿ ತೆಗೆದದ್ದು) ಶೀತ, ಮತ್ತು 5. (ಪುಡಿಮಾಡಿ ಬಿಸಿ ನೀರಲ್ಲಿ ಹಾಕಿ, ಹಿಸಕಿ ಹಿಂಡಿ ತೆಗೆದದ್ದು) ಫಾಂಟ.

85. ತೇಷಾಂ ಯಥಾಪೂರ್ವಂ ಬಲಾಧಿಕ್ಯಂ । ಅತಃ ಕಷಾಯಕಲ್ಪನಾ ವ್ಯಾಧ್ಯಾತುರಬಲಾಪೇಕ್ಷಿಣೀ । ನತ್ವೇವಂ ಖಲು ಸರ್ವಾಣಿ ಸರ್ವತ್ರೌಷಯೋಗೀನಿ ಭವಂತಿ । (ಚ. 18.)

ಪಂಚವಿಧ ಕಷಾಯಗಳೊಳಗೆ ಬಲಭೇದ

ಆ ಐದು ವಿಧವಾದ ಕಷಾಯಕಲ್ಪನಗಳಲ್ಲಿ ಯಥಾಪೂರ್ವ ಬಲಾಧಿಕ್ಯ; ಅಂದರೆ, ಕಷಾಯಗಳಲ್ಲಿ ಫಾಂಟಕ್ಕಿಂತ ಶೀತ, ಅದಕ್ಕಿಂತ ಶೃತ, ಅದಕ್ಕಿಂತ ಕಲ್ಕ, ಅದಕ್ಕಿಂತ ಸ್ವರಸ, ಹೆಚ್ಚು ಬಲವುಳ್ಳದ್ದು. ಆದ್ದರಿಂದ ಕಷಾಯಕಲ್ಪನೆಯು ರೋಗದ ಮತ್ತು ರೋಗಿಯ ಬಲ ನೋಡಿ ನಿಶ್ಚಯಿಸಲ್ಪಡಬೇಕಾದದ್ದು; ಮತ್ತು ಹೀಗೆ ಯಾವ ಔಷಧವಾದರೂ ಎಲ್ಲಾ ಸಂಗತಿಯಲ್ಲಿಯೂ ಉಪಯೋಗಕ್ಕೆ ಬೀಳುವದಿಲ್ಲ.

86. ಪಂಚಾಶನ್ಮಹಾಕಷಾಯಾ ಇತಿ ಯದುಕ್ತಂ ತದನುವ್ಯಾಖ್ಯಾಸ್ಯಾಮಃ । ತದ್ಯಥಾ ।

ಜೀವನೀಯೋ ಬೃಂಹಣೀಯೋ ಲೇಖನೀಯೋ ಭೇದನೀಯಃ ಸಂಧಾನೀಯೋ ದೀಪನೀಯ ಇತಿ ಷಟ್ಕಃ ಕಷಾಯ ವರ್ಗಃ ।

ಬಲ್ಯೋ ವರ್ಣ್ಯಃ ಕಂಠ್ಯೋ ಹೃದ್ಯ ಇತಿ ಚತುಷ್ಕಃ ಕಷಾಯ ವರ್ಗಃ ।

ತೃಪ್ತಿಘ್ನೋಽಶೋರ್ಘ್ನಃ ಕುಷ್ಠಘ್ನಃ ಕಂಡೂಘ್ನಃ ಕೃಮಿಘ್ನೋ ವಿಷಘ್ನ ಇತಿ ಷಟ್ಕಃ ಕಷಾಯವರ್ಗಃ ।

ಸ್ತನ್ಯಜನನಃ ಸ್ತನ್ಯಶೋಧನಃ ಶುಕ್ರಜನನಃ ಶುಕ್ರಶೋಧನ ಇತಿ ಚತುಷ್ಕಃ ಕಷಾಯವರ್ಗಃ ।

ಸ್ನೇಹೋಪಗಃ ಸ್ವೇದೋಪಗೋ ವಮನೋಪಗೋ ವಿರೇಚನೋಪಗ ಆಸ್ಥಾಪನೋಪಗೋಽನುವಾಸನೋಪಗಃ ಶಿರೋವಿರೇಚನೋಪಗ ಇತಿ ಸಪ್ತಕಃ ಕಷಾಯವರ್ಗಃ ।

ಜೀವನೀಯಾದಿ 50 ಮಹಾ ಕಷಾಯಗಳ ಪ್ರಯೋಜನ

ಛರ್ದಿನಿಗ್ರಹಣಸ್ತೃಷ್ಣಾನಿಗ್ರಹಣೋ ಹಿಕ್ಕಾನಿಗ್ರಹಣ ಇತಿ ತ್ರಿಕಃ ಕಷಾಯ ವರ್ಗಃ ।

ಪುರೀಷಸಂಗ್ರಹಣೀಯಃ ಪುರೀಷವಿರಜನೀಯೋ ಮೂತ್ರಸಂಗ್ರಹಣೀಯೋ ಮೂತ್ರವಿರಜನೀಯೋ ಮೂತ್ರವಿರೇಚನೀಯ ಇತಿ ಪಂಚಕಃ ಕಷಾಯವರ್ಗಃ ।

ಕಾಸಹರಃ ಶ್ವಾಸಹರಃ ಶೋಧಹರೋ ಜ್ವರಹರಃ ಶ್ರಮಹರ ಇತಿ ಪಂಚಕಃ ಕಷಾಯವರ್ಗಃ ।

ದಾಹಪ್ರಶಮನಃ ಶೀತಪ್ರಶಮನ ಉದರ್ದಪ್ರಶಮನೋಽಂಗಮರ್ದಪ್ರಶಮನಃ ಶೂಲಪ್ರಶಮನ ಇತಿ ಪಂಚಕಃ ಕಷಾಯವರ್ಗಃ

ಶೋಣಿತಾಸ್ಥಾಪನೋ ವೇದನಾಸ್ಥಾಪನಃ ಸಂಜ್ಞಾಸ್ಥಾಪನಃ ಪ್ರಜ್ಞಾಸ್ಥಾಪನೋ ವಯಃಸ್ಥಾಪನ ಇತಿ ಪಂಚಕಃ ಕಷಾಯವರ್ಗಃ । ಇತಿ ಪಂಚಾಶನ್ಮಹಾಕಷಾಯಾಃ । (ಚ. 18-19)

50 ಮಹಾ ಕಷಾಯಗಳೆಂಬವು(ಗಳ ಲಕ್ಷಣಗಳು) ಹ್ಯಾಗಂದರೆ —

1. ಜೀವನೀಯ — ಬದುಕಿಸುವಂಥಾದ್ದು.
2. ಬೃಂಹಣೀಯ — ಪುಷ್ಟಿಮಾಡುವಂಥಾದ್ದು.
3. ಲೇಖನೀಯ — ಧಾತುಗಳನ್ನು ಅಥವಾ ಮಲಗಳನ್ನು ಒಣಗಿಸಿ ಕೃಶತೆಯನ್ನುಂಟು ಮಾಡುವಂಥಾದ್ದು.
4. ಛೇದನೀಯ — ಮಲಾದಿಗಳನ್ನು ಕಟ್ಟಿದ್ದನ್ನು ಅಥವಾ ಗಟ್ಟಿಯಾದ್ದನ್ನು ಒಡೆದು ಕೆಳಗೆ ಜೀಳಿಸುವಂಥಾದ್ದು.
5. ಸಂಧಾನೀಯ — ಕಡದ್ದನ್ನು ಯಾ ಒಡದ್ದನ್ನು ಜೋಡಿಸುವಂಥಾದ್ದು.
6. ದೀಪನೀಯ — ಅಪಕ್ವವಾದದ್ದನ್ನು ಪಕ್ವಮಾಡಿ ಅಗ್ನಿವೃದ್ಧಿಮಾಡುವಂಥಾದ್ದು.

ಹೀಗೆ ಆರು ಒಂದು ಕಷಾಯವರ್ಗ.

7. ಬಲ್ಯ — ಬಲ ಕೊಡುವಂಥಾದ್ದು.

8. ವರ್ಣ್ಯ — ವರ್ಣ ಕೊಡುವಂಥಾದ್ದು.

9. ಕಂಠ್ಯ — ಕಂಠವನ್ನು ಶೋಧನೆಮಾಡುವಂಥಾದ್ದು ಅಥವಾ ಕಂಠಕ್ಕೆ ಹಿತವಾದದ್ದು.

10. ಹೃದ್ಯ — ಹೃದಯಕ್ಕ ಹಿತವಾದದ್ದು.

ಹೀಗೆ ನಾಲ್ಕು ಒಂದು ಕಷಾಯವರ್ಗ.

11. ತೃಪ್ತಿಘ್ನ — ತೃಪ್ತಿಯನ್ನು ನಾಶಮಾಡುವಂಥಾದ್ದು (ಅಂದರೆ ಹಸಿವುಬಾಯಾರಿಕೆ ಗಳನ್ನುಂಟುಮಾಡುವಂಥಾದ್ದು)

12. ಆಶೋರ್ಘ್ನ — ಮೂಲವ್ಯಾಧಿಹರವಾದದ್ದು.

13. ಕುಷ್ಠಘ್ನ — ಕುಷ್ಠವ್ಯಾಧಿಯನ್ನು ನಾಶಮಾಡುವಂಥಾದ್ದು.

14. ಕಂಡೂಘ್ನ — ತುರಿಗಜ್ಜಿಯನ್ನು ನಾಶಮಾಡುವಂಥಾದ್ದು.

15. ಕೃಮಿಘ್ನ — ಕ್ರಿಮಿಗಳನ್ನು ಕೊಲ್ಲುವಂಥಾದ್ದು

16. ವಿಷಘ್ನ - ವಿಷವನ್ನು ಪರಿಹರಿಸುವಂಥಾದ್ದು

ಹೀಗೆ ಆರು ಒಂದು ಕಷಾಯವರ್ಗ

17. ಸ್ತನ್ಯಜನನ — ಮೊಲೆಹಾಲನ್ನು ವೃದ್ಧಿಮಾಡುವಂಥಾದ್ದು.

18 ಸ್ತನ್ಯಶೋಧನ — ಮೊಲೆಹಾಲನ್ನು ಶುದ್ಧಮಾಡುವಂಥಾದ್ದು

19. ಶುಕ್ರಜನನ — ಶುಕ್ರವನ್ನುಂಟುಮಾಡುವಂಥಾದ್ದು

20. ಶುಕ್ರಶೋಧನ — ಶುಕ್ರವನ್ನು ಶುದ್ಧಮಾಡುವಂಥಾದ್ದು.

ಹೀಗೆ ನಾಲ್ಕು ಒಂದು ಕಷಾಯವರ್ಗ.

21. ಸ್ನೇಹೋಪಗ — ಸ್ನೇಹವನ್ನು(ಜಿಡ್ಡನ್ನು)ಂಟುಮಾಡುವಂಥಾದ್ದು

22 ಸ್ವೇದೋಪಗ — ಬೆವರನ್ನುಂಟುಮಾಡುವಂಥಾದ್ದು

23. ವಮನೋಪಗ — ವಾಂತಿಯನ್ನುಂಟುಮಾಡುವಂಥಾದ್ದು.

24 ವಿರೇಚನೋಪಗ — ವಿರೇಚನಮಾಡಿಸುವಂಥಾದ್ದು.

25. ಆಸ್ಥಾಪನೋಪಗ — ದೋಷಧಾತುಗಳನ್ನು ತಮ್ಮತಮ್ಮ ಸ್ಥಾನಗಳಲ್ಲಿ ಸ್ಥಾಪಿಸ ತಕ್ಕಂಥಾದ್ದು (ನಿರೂಹವಸ್ತಿಗೆ ತಕ್ಕದ್ದು)

26. ಅನುವಾಸನೋಪಗ — ಅನುವಾಸನವಸ್ತಿಗೆ ಯೋಗ್ಯವಾದಂಥಾದ್ದು.

27. ಶಿರೋವಿರೇಚನೋಪಗ — ಶಿರೋವಿರೇಚನಕ್ಕೆ ತಕ್ಕವಾದಂಥಾದ್ದು.

ಹೀಗೆ ಏಳು ಒಂದು ಕಷಾಯವರ್ಗ.

28. ಛರ್ದಿನಿಗ್ರಹಣ — ವಾಂತಿ ನಿಲ್ಲಿಸತಕ್ಕಂಥಾದ್ದು.

29. ತೃಷ್ಣಾನಿಗ್ರಹಣ — ಬಾಯಾರಿಕೆಯನ್ನು ನಿಗ್ರಹಮಾಡತಕ್ಕಂಥಾದ್ದು

30. ಹಿಕ್ಕಾನಿಗ್ರಹ — ಬಿಕ್ಕಟ್ಟನ್ನು ನಿಲ್ಲಿಸತಕ್ಕಂಥಾದ್ದು
ಹೀಗ ಮೂರು ಒಂದು ಕಷಾಯವರ್ಗ.

31. ಪುರೀಷಸಂಗ್ರಹಣೀಯ — ಮಲಸಂಗ್ರಹ ಮಾಡ(ಕಟ್ಟಿಸ)ತಕ್ಕಂಥಾದ್ದು.

32. ಪುರೀಷವಿರಜನೀಯ — ಮಲವನ್ನು ಸ್ವಚ್ಛಮಾಡತಕ್ಕಂಥಾದ್ದು

33. ಮೂತ್ರಸಂಗ್ರಹಣೀಯ — ಮೂತ್ರ ಸಂಗ್ರಹಮಾಡ(ಕಟ್ಟಿಸ)ತಕ್ಕಂಥಾದ್ದು

34. ಮೂತ್ರವಿರಜನೀಯ — ಮೂತ್ರವನ್ನು ಸ್ವಚ್ಛಮಾಡತಕ್ಕಂಥಾದ್ದು

35. ಮೂತ್ರವಿರೇಚನೀಯ — ಮೂತ್ರವನ್ನು ವಿರೇಚನಮಾಡಿಸತಕ್ಕಂಥಾದ್ದು.
ಹೀಗೆ ಐದು ಒಂದು ಕಷಾಯವರ್ಗ.

36. ಕಾಸಹರ — ಕೆಮ್ಮು ವಾಸಿಮಾಡತಕ್ಕಂಥಾದ್ದು.

37. ಶ್ವಾಸಹರ — ಉಬ್ಬಸ ವಾಸಿಮಾಡತಕ್ಕಂಥಾದ್ದು

38. ಶೋಥಹರ — ಶೋಥೆ(ಬಾಕು) ವಾಸಿಮಾಡತಕ್ಕಂಥಾದ್ದು

39. ಜ್ವರಹರ — ಜ್ವರಹರವಾದಂಥಾದ್ದು

40. ಶ್ರಮಹರ — ಶ್ರಮವನ್ನು ಪರಿಹರಿಸತಕ್ಕಂಥಾದ್ದು.
ಹೀಗೆ ಐದು ಒಂದು ಕಷಾಯವರ್ಗ

41. ದಾಹಪ್ರಶಮನ — ಉರಿಯನ್ನು ಶಾಂತಮಾಡತಕ್ಕಂಥಾದ್ದು

42. ಶೀತಪ್ರಶಮನ — ಶೀತವನ್ನು ವಾಸಿಮಾಡತಕ್ಕಂಥಾದ್ದು.

43. ಉದರ್ದಪ್ರಶಮನ — ಉದರ್ದರೋಗ (ಸೀರುಕೋಟಲೆಖೇದ) ಶಮನಮಾಡ
ತಕ್ಕಂಥಾದ್ದು

44 ಅಂಗಮರ್ದಪ್ರಶಮನ — ಅಂಗಗಳ ಸೆಳತ ಶಮನಮಾಡತಕ್ಕಂಥಾದ್ದು

45. ಶೂಲಪ್ರಶಮನ — ಶೂಲ ಶಮನಮಾಡತಕ್ಕಂಥಾದ್ದು.
ಹೀಗೆ ಐದು ಒಂದು ಕಷಾಯವರ್ಗ.

46. ಶೋಣಿತಾಸ್ಥಾಪನ — ರಕ್ತ ನಿಲ್ಲಿಸಿಡುವಂಥಾದ್ದು.

47. ವೇದನಾಸ್ಥಾಪನ — ನೋವು ನಿಲ್ಲಿಸುವಂಥಾದ್ದು.

48. ಸಂಜ್ಞಾಸ್ಥಾಪನ — ಎಚ್ಚರಿಕೆಯನ್ನು ಸರಿಪಡಿಸುವಂಥಾದ್ದು.

49. ಪ್ರಜ್ಞಾಸ್ಥಾಪನ — ಬುದ್ಧಿಯನ್ನು ಸರಿಪಡಿಸುವಂಥಾದ್ದು.

50. ವಯಃಸ್ಥಾಪನ — ಪ್ರಾಯವನ್ನು ಕಾಪಾಡುವಂಥಾದ್ದು.

ಹೀಗೆ ಐದು ಒಂದು ಕಷಾಯವರ್ಗ.

ಇವು ಐವತ್ತು ಮಹಾಕಷಾಯಗಳ ಲಕ್ಷಣಗಳು.

87. ತೇಷಾಮೇಕೈಕಸ್ಮಿನ್ ಮಹಾಕಷಾಯೇ ದಶದಶಾವಯವಿಕಾನ್ ಕಷಾಯಾನನುವ್ಯಾಖ್ಯಾಸ್ಯಾಮಃ | ತಾನ್ಯೇವ ಪಂಚ ಕಷಾಯಶತಾನಿ ಭವಂತಿ | (ಚ. 19.)

ಹತ್ತು ಬಗೆ ಔಷಧಗಳುಳ್ಳ 50 ಮಹಾಕಷಾಯಯೋಗಗಳು

ಆ ಐವತ್ತು ಮಹಾ ಕಷಾಯಗಳೊಳಗೆ ಒಂದೊಂದರಲ್ಲಿ ಹತ್ತುಹತ್ತು ಅವಯವ(ದ್ರವ್ಯ)ಗಳಿರುವ ಕಷಾಯಗಳನ್ನು ಇನ್ನು ಹೇಳುತ್ತೇವೆ. ಅವುಗಳೇ ಐನೂರು ಕಷಾಯಗಳಾಗುತ್ತವೆ. ತದ್ಯಥಾ | ಹ್ಯಾಗಂದರೆ —

1. ಜೀವಕರ್ಷಭಕೌ ಮೇದಾ ಮಹಾಮೇದಾ ಕಾಕೋಲೀ ಕ್ಷೀರಕಾಕೋಲೀ ಮುದ್ಗಮಾಷಪರ್ಣ್ಯೌ ಜೀವಂತೀ ಮಧುಕಮಿತಿ ದಶೇಮಾನಿ ಜೀವನೀಯಾನಿ ಭವಂತಿ |

ಜೀವಕ, ಋಷಭಕ, ಮೇದೆ, ಮಹಾಮೇದೆ, ಕಾಕೋಲ, ಕ್ಷೀರಕಾಕೋಲಿ*, ಕಾಡು ಹೆಸರು, ಕಾಡು ಉದ್ದು, ಜೀವಂತೀ, ಜ್ಯೇಷ್ಠಮಧು, ಇವು ಹತ್ತು ಜೀವನೀಯಗಳು.

* ಪರಾ ಇವು ಆರೂ ಸಾಧಾರಣವಾಗಿ ಈಗ ಸಿಕ್ಕತಕ್ಕವಲ್ಲ. ಮೂರು ದ್ವಂದ್ವಗಳಾದ ಅವುಗಳ ಸ್ಥಾನಗಳಲ್ಲಿ ಕ್ರಮವಾಗಿ ನೆಲಕುಂಬಳಗಡ್ಡೆ, ಶತಾವರಿ, ಅಶ್ವಗಂಧ ಇವುಗಳನ್ನು ಸೇರಿಸಿಕೊಳ್ಳಬೇಕಾಗಿ ವಿಧಿಯಿರುತ್ತದೆ

2. ಕ್ಷೀರಿಣೀ ರಾಜಕ್ಷವಕಂ ಬಲಾ ಕಾಕೋಲೀ ಕ್ಷೀರಕಾಕೋಲೀ ವಾಟ್ಯಾಯನೀ ಭದ್ರೌದನೀ ಭಾರದ್ವಾಜೀ ಪಯಸ್ಯಾಶ್ವ್ಯಗಂಧಾ ಇತಿ ದಶೇಮಾನಿ ಬೃಂಹಣೀಯಾನಿ ಭವಂತಿ |

ಕ್ಷೀರಿಣೀ, ಕರೀಸಾಸಿವೆ, ಕಡೀರು (ಕಲ್ಲಂಗಡಲೆ), ಕಾಕೋಲಿ, ಕ್ಷೀರಕಾಕೋಲಿ, ಸಹದೇವಿ, ಉರ್ಕಿ, ಕಾಡುಹತ್ತಿ, ಪಯಸ್ಯಾ, ಋಷ್ಯಗಂಧಾ, ಇವು ಹತ್ತು ಬೃಂಹಣೀಯ.

3. ಮುಸ್ತ-ಕುಷ್ಠ-ಹರಿದ್ರಾ-ದಾರುಹರಿದ್ರಾ-ಪಟೋತಿವಿಷಾ-ಕಟುರೋಹಿಣೀ-ಚಿತ್ರಕ-ಚಿರಬಿಲ್ವ-ಹೈಮವತ್ಯ ಇತಿ ದಶೇಮಾನಿ ಲೇಖನೀಯಾನಿ ಭವಂತಿ |

ಭದ್ರಮುಷ್ಟಿ, ಚಂಗಲಕೋಷ್ಠ (ಇಲ್ಲಿ ಇದಕ್ಕೆ ಕಂಕುಷ್ಠ ಅನ್ನುತಾರೆ, ಮಲ ಕೊಟ್ಟಂ), ಅರಸಿನ, ಮರದರಸಿನ, ಬಜೆ, ಅತಿವಿಡೆಯ, ಕಟುಕರೋಹಿಣಿ, ಚಿತ್ರಮೂಲ, ಹೊಂಗೆ (ಕೊರುಂಗುಮರ), ಅಣಿಲೆಕಾಯಿ, ಇವು ಹತ್ತು ಲೇಖನೀಯ.

* ಪರಾ ಮಲಯಾಳ ವೈದ್ಯಗ್ರಂಥಗಳಲ್ಲಿ 'ಚಿರಬಿಲ್ವ'ಕ್ಕೆ 'ಅವಿಲ್' ಎಂಬ ಅರ್ಥ ಬರೆದದ್ದು ಕಾಣುತ್ತದೆ ಸ ವೃ ವ ಯಲ್ಲಿಯೂ ಇದೇ ಅರ್ಥವನ್ನನುಸರಿಸಿ ಕನ್ನಡ ಹೆಸರು 'ಗುಡ್ಡೆರೆಂಜಿ', 'ಬೀಗದ ಮರ' ಮತ್ತು ತುಳು 'ರಾಹುಬೀಜ' ಎಂತ ಬರೆಯಲ್ಪಟ್ಟಿದೆ ಥ ಸಿ, ರಾ ಸಿ, ಥಾ ಪ್ರ ಸಹ 'ಚಿರಬಿಲ್ವ', ಅಥವಾ 'ಚಿರಿಬಿಲ್ವ' ಎಂಬದು 'ಕರಂಜ'ವೇ ಎಂತ ಹೇಳುತ್ತವೆ

4. ಸುವಹಾಕೋರ್ಕರುವೂಕಾಗ್ನಿಮುಖೀಚಿತ್ರಾಚಿತ್ರಕಚಿರಬಿಲ್ವಶಂಖಿನೀಸಕು
ಲಾದನೀಸ್ವರ್ಣಕ್ಷೀರಿಣ್ಯ ಇತಿ ದಶೇಮಾನಿ ಭೇದನೀಯಾನಿ ಭವಂತಿ ।

ಕರಿಜೀರಿಗೆ, ಎಕ್ಕೆ, ಕೆಂಪು ಹರಳುಗಿಡ, ಕೋಳಿಕುಟುಮ, ಹಾವುಮೆಕ್ಕೆ, ಬಿಳೇ ಹರಳು ಗಿಡ, ಹೊಂಗೆ, ಕಾಡಪಾವಟೆ ಬಳ್ಳಿ, ಕಟುಕರೋಹಿಣಿ, ಸ್ವರ್ಣಕ್ಷೀರಿ, ಇವು ಹತ್ತು ಭೇದನೀಯ.

5. ಮಧುಕಮಧುಪರ್ಣೀಪೃಶ್ನಿಪರ್ಣ್ಯಂಬಷ್ಠಕೀಸಮಂಗಾಮೋಚರಸಧಾತ
ಕೀಲೋಧ್ರಪ್ರಿಯಂಗುಕಟ್ಫಲಾನೀತಿ ದಶೇಮಾನಿ ಸಂಧಾನೀಯಾನಿ ಭ
ವಂತಿ ।

ಜ್ಯೇಷ್ಠಮಧು, ಶಿವನಿ (ಮಲ. ಕುಮಿಳಾ), ಓರೆಲೆ, ಮಾಚಿಕಾಯಿ (ಅಗ್ರದ ಕಾಯಿ), ನಾಚಿಕೆ ಗಿಡ, ಬೂರುಗದ ಮೇಣ (ಮಲ. ಇಲಎನ್ ಪಶೆ), ಧಾತಕೀ ಪುಷ್ಪ, ಲೋಧ್ರ, ಪ್ರಿಯಂಗು, ದಡ್ಡಾಲ (ಮಲ. ಆಲಂ), ಇವು ಹತ್ತು ಸಂಧಾನೀಯ.

6. ಪಿಪ್ಪಲೀ-ಪಿಪ್ಪಲೀಮೂಲ-ಚವ್ಯ-ಚಿತ್ರಕ-ಶೃಂಗವೇರಾಮ್ಲವೇತಸ-ಮರಿ
ಚಾಜಮೋದಾ-ಭಲ್ಲಾತಕಾಸ್ಥಿ-ಹಿಂಗುನಿರ್ಯಾಸಾ ಇತಿ ದಶೇಮಾನಿ
ದೀಪನೀಯಾನಿ ಭವಂತಿ ।

ಪಿಪ್ಪಲಿ, ಹಿಪ್ಪಲೀಮೂಲ, ಕಾಡುಮೆಣಸಿನ ಬೇರು, ಚಿತ್ರಮೂಲ, ಶುಂಠಿ, ಅಮ್ಲವೇತಸ, ಕಾಳುಮೆಣಸು, ವೋಮ, ಗೇರುಕಾಯಿ ತಿರಳು, ಹಿಂಗು, ಇವು ಹತ್ತು ದೀಪನೀಯ.

7. ಐಂದ್ರ್ಯೃಷಭ್ಯತಿರಸಸ್ಯ್ಯಾಪ್ಯೋಕ್ತಾ-ಪಯಸ್ಯಾಶ್ವಗಂಧಾ-ಸ್ಥಿರಾ-ರೋಪಿ
ಣೀ-ಬಲಾತಿಬಲಾ ಇತಿ ದಶೇಮಾನಿ ಬಲ್ಯಾನಿ ಭವಂತಿ ।

ಯಾಲಕ್ಕಿ, ಕೋಡುಧಾನ್ಯ, ಅತಿರಸಾ (ಜ್ಯೇಷ್ಠಮಧುಭೇದ), ಕಾಡು ಉದ್ದು, ಪಯಸ್ಯಾ, ಅಶ್ವಗಂಧಿ, ಕಾಡುಹೆಸರು, ಜಟಾಮಾಂಸಿ (ಅಥವಾ ದನದ ಮಾಂಸ), ಕಡೀರು, ಉರ್ಕಿ, ಇವು ಹತ್ತು ಬಲಕೊಡುವಂಥವು.

8. ಚಂದನ-ತುಂಗ-ಪದ್ಮಕೋಶೀರ-ಮಧುಕ-ಮಂಜಿಷ್ಠಾ-ಸಾರಿವಾ-ಪಯ
ಸ್ಯಾಸಿತಾಲತಾ ಇತಿ ದಶೇಮಾನಿ ವರ್ಣ್ಯಾನಿ ಭವಂತಿ ।

ಶ್ರೀಗಂಧ, ತೆಂಗು, ಪದ್ಮಕ, ಲಾವಂಚ, ಜ್ಯೇಷ್ಠಮಧು, ಮಂಜಿಷ್ಠ, ಬಿಳೇ ನಾಮದ ಬೇರು (ಸುಗಂಧಿ ಬೇರು), ಪಯಸ್ಯಾ, ನೀಲಬೇರು, ಜ್ಯೋತಿಷ್ಮತಿ, ಇವು ಹತ್ತು ವರ್ಣ ಕೊಡುವಂಥವು.

9. ಸಾರಿವೇಕ್ಷುಮೂಲ-ಮಧುಕ-ಪಿಪ್ಪಲೀ-ದ್ರಾಕ್ಷಾ-ವಿದಾರೀ-ಕೈಟರ್ಯ-
ಹಂಸಪದೀ-ಬೃಹತೀ-ಕಂಟಕಾರಿಕಾ ಇತಿ ದಶೇಮಾನಿ ಕಂರ್ಯಾನಿ ಭ
ವಂತಿ ।

ಬಿಳೇ ನಾಮದ ಬೇರು, ಕಬ್ಬಿನ ಬೇರು, ಜ್ಯೇಷ್ಠಮಧು, ಹಿಪ್ಪಲಿ, ದ್ರಾಕ್ಷೆ, ನೆಲಕುಂಬಳ ಗಡ್ಡೆ, ಕರಿಬೇವು, ಹಂಸಪಾದಿ, ಗುಳ್ಳದ ಬೇರು, ಕಲ್ಲಂಟೆ ಬೇರು, ಇವು ಹತ್ತು ಕಂರಶುದ್ಧ ಮಾಡತಕ್ಕಂಥವು.

10. ಆಮ್ರಾಮ್ರಾತಕ-ನಿಕುಚ-ಕರಮರ್ದ-ವೃಕ್ಷಾಮ್ಲಾಮ್ಲವೇತಸ-ಕುವಲಯ-ಬದರ-ದಾಡಿಮ-ಮಾತುಲುಂಗಾನೀತಿ ದಶೇಮಾನಿ ಹೃದ್ಯಾನಿ ಭವಂತಿ |

ಮಾವು, ಅಂಬಟೆ, ಜಲವೇತಸ, ಕಮರಿಕೆ ಹಣ್ಣು, ಮುರುಗನ ಹುಳಿ, ಅಮ್ಲವೇತಸ, ಉತ್ಪಲ*, ಬೊಗರಿ, ದಾಳಿಂಬ, ಮಾದಳ, ಇವು ಹತ್ತು ಹೃದ್ಯ.

* ಇದಕ್ಕೆ ಮಲಯಾಳ ವೈದ್ಯಕಗ್ರಂಥದಲ್ಲಿ 'ಚಿಂಬಳಿನೀರ್ಕಳಂಬು' ಎಂತ ಬರೆದದ್ದು ಕಾಣುತ್ತದೆ

11 ನಾಗರ-ಚಿತ್ರಕ-ಚವ್ಯ-ವಿಡಂಗ-ಮೂರ್ವಾ-ಗುಡೂಚೀ ವಚಾ-ಮುಸ್ತ-ಪಿಪ್ಪಲೀ-ಪಟೋಲಾನೀತಿ ದಶೇಮಾನಿ ತೃಪ್ತಿಘ್ನಾನಿ ಭವಂತಿ |

ಶುಂಠಿ, ಚಿತ್ರಮೂಲ, ಕಾಡುಮೆಣಸಿನ ಬೇರು, ವಾಯುವಿಳಂಗ, ಕುರಟಿಗೆ ಬೇರು (ಮಲ. ಪೆರುಂಕುರುಂಬ), ಅಮೃತಬಳ್ಳಿ, ಬಜೆ, ಭದ್ರಮುಷ್ಟಿ, ಹಿಪ್ಪಲಿ, ಕಹಿಪಡುವಲು, ಇವು ಹತ್ತು ತೃಪ್ತಿನಾಶಕರ, ಅಂದರೆ ಹಸಿವೆ ಉಂಟುಮಾಡತಕ್ಕವು.

12. ಕುಟಜ-ಬಿಲ್ವ-ಚಿತ್ರಕ-ನಾಗರಾತಿವಿಷಾಭಯಾ-ಧನ್ವಯಾಸಕ-ದಾರುಹರಿದ್ರಾ-ವಚಾ-ಚವ್ಯಾನೀತಿ ದಶೇಮಾನಿ ಅಶೋರ್ಘ್ನಾನಿ ಭವಂತಿ |

ಕೊಡಸಿಗ, ಬಿಲ್ವಪತ್ರೆ, ಚಿತ್ರಮೂಲ, ಸಣ್ಣ ಭದ್ರಮುಷ್ಟಿ, ಅತಿವಿಷೆಯ, ಅಣಲೆಕಾಯಿ, ಬೀಳುಪಚ್ಚೆರಂಗಿ, ಮರದರಸಿನ, ಬಜೆ, ಕಾಡುಮೆಣಸಿನ ಬೇರು, ಇವು ಹತ್ತು ಮೂಲವ್ಯಾಧಿ ಪರಿಹಾರಮಾಡತಕ್ಕವು

13 ಖದಿರಾಭಯಾಮಲಕ-ಹರಿದ್ರಾರುಷ್ಕರ-ಸಪ್ತಪರ್ಣಾರಗ್ವಧ-ಕರಹೀರ-ವಿಡಂಗ-ಚಾತಿಪ್ರವಾಲಾ ಇತಿ ದಶೇಮಾನಿ ಕುಷ್ಠಘ್ನಾನಿ ಭವಂತಿ |

ಕಾಚು, ಅಣಲೆಕಾಯಿ, ನೆಲ್ಲಿ, ಅರಸಿನ, ಗೇರುಕಾಯಿ, ಹಾಲೆಮರ, ಕಕ್ಕೆಮರ, ಕಣಗಿಲು, ವಾಯುವಿಳಂಗ, ಚಾಪಿಕೊಡಿ, ಇವು ಹತ್ತು ಕುಷ್ಠನಾಶಕಾರಿ

14. ಚಂದನ-ನಲದ-ಕೃತಮಾಲ-ನಕ್ತಮಾಲ-ನಿಂಬ-ಕುಟಜ-ಸರ್ಷಪ-ಮಧುಕ-ದಾರುಹರಿದ್ರಾ-ಮುಸ್ತಾನೀತಿ ದಶೇಮಾನಿ ಕಂಡೂಘ್ನಾನಿ ಭವಂತಿ |

ಶ್ರೀಗಂಧ, ಲಾವಂಚ, ಕಕ್ಕೆಮರ, ಹೊಂಗೆಮರ, ಕಹಿಬೇವು, ಕೊಡಸಿಗ, ಸಾಸಿವೆ, ಜ್ಯೇಷ್ಠಮಧು, ಮರದರಸಿನ, ಭದ್ರಮುಷ್ಟಿ, ಇವು ಹತ್ತು ತುರಿಯನ್ನು ನಾಶಮಾಡತಕ್ಕವು.

15. ಅಕ್ಷೀವ-ಮರಿಚ-ಗಂಡೀರ-ಕೇವೂಕ-ವಿಡಂಗ-ನಿರ್ಗುಂಡೀ-ಕಿಣಿಹೀ-ಶ್ವದಂಷ್ಟ್ರಾ-ವೃಷಪರ್ಣಿಕಾಮಪರ್ಣಿಕಾ ಇತಿ ದಶೇಮಾನಿ ಕ್ರಿಮಿಘ್ನಾನಿ ಭವಂತಿ |

ಉಪ್ಪು, ಕಾಳುಮೆಣಸು, ಕಳ್ಳಿ, ಕೆಮುಕಗಡ್ಡೆ, ವಾಯುವಿಳಂಗ, ಕರೀ ನೆಕ್ಕಿ, ಬಿಳೇ ಉತ್ತರಣೆ, ನೆಗ್ಗಿಲಮುಳ್ಳು, ವೃಷಪರ್ಣಿಕಾ (ಬಸ್ತಾನ್ತ್ರೀ), ಇಲಿಕಿವಿ, ಇವು ಹತ್ತು ಕ್ರಿಮಿನಾಶನಕಾರಿ.

16. ಹರಿದ್ರಾ-ಮಂಜಿಷ್ಠಾ-ಸುವಹಾ-ಸೂಕ್ಷ್ಮೈಲಾ-ಸಾಲಿಂದೀ-ಚಂದನ-ಕತಕ-ಶಿರೀಷ-ಸಿಂಧುವಾರ-ಶ್ಲೇಷ್ಮಾತಕಾ ಇತಿ ದಶೇಮಾನಿ ವಿಷಘ್ನಾನಿ ಭವಂತಿ |

ಅರಸಿನ, ಮಂಜಿಷ್ಠ, ಈಶ್ವರೀ, ಸಣ್ಣಯಾಲಕ್ಕಿ, ಮೂವೆಲೆ, ಶ್ರೀಗಂಧ, ಚಿಲ್ಲಬೀಜ, ಬಾಗೆಮರ, ಬಿಳೇ ನೆಕ್ಕಿ, ಜಳ್ಳಿಮರ (ಮಣ್ಣಡ್ಡೆ), ಇವು ಹತ್ತು ವಿಷನಾಶನ ಮಾಡತಕ್ಕವು.

17. ವೀರಣ-ಶಾಲಿಷಷ್ಟಿಕೇಕ್ಷು-ವಾಲಿಕಾ-ದರ್ಭ-ಕುಶ-ಕಾಶ-ಗುಂದ್ರೇತ್ಕಟ-ಕತ್ಯೃಣ-ಮೂಲಾನೀತಿ ದಶೇಮಾನಿ ಸ್ತನ್ಯಜನನಾನಿ ಭವಂತಿ |

ಲಾವಂಚ, 60 ದಿನಗಳಲ್ಲಿ ಬೆಳೆಯುವ ಭತ್ತ, ಕಬ್ಬು, ಮುಡಿವಾಳ, ದರ್ಭೆ*, ಕುಶದರ್ಭೆ, ಕಾಶದರ್ಭೆ, ಶರದರ್ಭೆ, ಮೃದುದರ್ಭೆ, ಮಜ್ಜಿಗೆಹುಲ್ಲು, ಇವುಗಳ ಬೇರುಗಳು, ಇವು ಹತ್ತು ಮೊಲೆಹಾಲನ್ನುಂಟುಮಾಡತಕ್ಕವು

* ಪರಾ ಎಲೆಗಳು ಉದ್ದವಾಗಿಯೂ, ಛಾರೆಯುಳ್ಳವಾಗಿಯೂ ದೂಷ್ಟವಾಗಿಯೂ ಇರುವದು 'ದರ್ಭೆ', ಗಿಡ್ಡಾಗಿಯೂ, ಮೃದುವಾಗಿಯೂ ಕೊನೆ ಸೂಜಿಯಂತೆ ಮುಳ್ಳಾಗಿಯೂ ಇರುವದು 'ಕುಶ' ಎಲೆಗಳು ಚೌರಿಯಾಗಿರುವದು 'ಕಾಶ'

18. ಪಾರಾ-ಮಹೌಷಧ-ಸುರದಾರು-ಮುಸ್ತ-ಮೂರ್ವಾ-ಗುಡೂಚೀ-ಪತ್ಸಕಫಲ-ಕಿರಾತತಿಕ್ತ-ಕಟುರೋಹಿಣೀ-ಶಾರಿವಾ ಇತಿ ದಶೇಮಾನಿ ಸ್ತನ್ಯ ಶೋಧನಾನಿ ಭವಂತಿ |

ಪಾಡಾವಳಿಗಡ್ಡೆ, (ಇನ್ನೊಂದು ಪಕ್ಷ, ಅಗಳು ಶುಂಠಿ), ಶುಂಠಿ, ದೇವದಾರು, ಭದ್ರಮುಷ್ಟಿ, ಕುರುಟಿಗೆ, ಅಮೃತಬಳ್ಳಿ, ಇಂದ್ರಜೀವಿ, ಕಿರಾತಕಡ್ಡಿ, ಕಟುಕರೋಹಿಣಿ, ನಾಮದ ಬೇರು (ಸುಗಂಧಿ), ಇವು ಹತ್ತು ಮೊಲೆಹಾಲನ್ನು ಶುದ್ಧಮಾಡತಕ್ಕವು.

19. ಜೀವಕರ್ಷಭಕ-ಕಾಕೋಲೀ-ಕ್ಷೀರಕಾಕೋಲೀ-ಮುದ್ಗಪರ್ಣೀ-ಮಾಷಪರ್ಣೀ-ಮೇದಾ-ವೃಕ್ಷರುಹಾ-ಜಟಿಲಾ-ಕುಲಿಂಗಾ ಇತಿ ದಶೇಮಾನಿ ಶುಕ್ರಜನನಾನಿ ಭವಂತಿ |

ಜೀವಕ, ಋಷಭಕ, ಕಾಕೋಲೀ, ಕ್ಷೀರಕಾಕೋಲೀ, ಕಾಡು ಪೆಸರು, ಕಾಡು ಉದ್ದು, ಮೇದೆ, ಬಂದಣಿಕೆ, ಜಟಾಮಾಂಸಿ, ಗುಬ್ಬಿಮಾಂಸ, ಇವು ಹತ್ತು ಶುಕ್ರವನ್ನುಂಟುಮಾಡತಕ್ಕವು.

20. ಕುಷ್ಠೈಲವಾಲುಕ-ಕಟ್ಫಲ-ಸಮುದ್ರಫೇನ-ಕದಂಬನಿರ್ಯಾಸೇಕ್ಷು-ಕಾಂಡೇಕ್ಷ್ವಿಕ್ಷುರಕ-ವಸುಕೋಶೀರಾಣೀತಿ ದಶೇಮಾನಿ ಶುಕ್ರಶೋಧನಾನಿ ಭವಂತಿ |

ಚಂಗಲಕೋಷ್ಠ, ಏಲವಾಲುಕ, ಕಟ್ಫಲ, ಸಮುದ್ರನಾಲಿಗೆ, ಕಡಹದಮರದ ಮೇಣ, ಕಬ್ಬು, ಕಾಶದರ್ಭೆ, ಕೊಳವಳಿಕೆ, ವೃದ್ಧಿ (ಅಥವಾ ಕೃಷ್ಣಾಗರು), ಲಾವಂಚ, ಇವು ಹತ್ತು ಶುಕ್ರಶೋಧನಮಾಡತಕ್ಕವು.

21. ಮೃದ್ವೀಕಾ - ಮಧುಕ-ಮಧುಪರ್ಣೀ-ಮೇದಾ-ವಿದಾರೀ-ಕಾಕೋಲೀ-ಕ್ಷೀರಕಾಕೋಲೀ-ಜೀವಕ-ಜೀವಂತೀ-ಶಾಲಪರ್ಣ್ಯಃ ಇತಿ ದಶೇಮಾನಿ ಸ್ನೇಹೋಪಯೋಗಾನಿ ಭವಂತಿ ।

ದ್ರಾಕ್ಷೀ, ಜ್ಯೇಷ್ಠಮಧು, ಶಿವನಿ, ಮೇದೇ, ನೆಲಕುಂಬಳ, ಕಾಕೋಲೀ, ಕ್ಷೀರಕಾಕೋಲೀ, ಜೀವಕ, ಜೀವಂತೀ, ಮೂವೆಲೆ, ಇವು ಹತ್ತು ಸ್ನೇಹನಕರ್ಮಕ್ಕೆ ಉಪಯೋಗವುಳ್ಳವು.

22. ಶೋಭಾಂಜನ-ಕೈರಂಡಾರ್ಕ-ವೃಶ್ಚೀರ-ಪುನರ್ನವಾ-ಯವ-ತಿಲ-ಕುಲತ್ಥ-ಮಾಷ-ಬದರಾಣೀತಿ ದಶೇಮಾನಿ ಸ್ವೇದೋಪಗಾನಿ ಭವಂತಿ ।

ನುಗ್ಗೆ, ಹರಳು, ಎಕ್ಕೆ, ಬಿಳೇ ಪುನರ್ನವ, ಕೆಂಪು ಪುನರ್ನವ, ಯವೆಗೋದಿ, ಎಳ್ಳು, ಹುರುಳಿ, ಉದ್ದು, ಬೊಗರಿ, ಇವು ಹತ್ತು ಬೆವರಿಸುವದಕ್ಕೆ ಉಪಯೋಗವಾದಂಧವು.

23. ಮಧು - ಮಧುಕ - ಕೋವಿದಾರ - ಕರ್ಬುದಾರ-ನೀಪ–ವಿದುಲ-ಬಿಂಬೀ-ಶಣಪುಷ್ಪೀ-ಸದಾಪುಷ್ಪೀ-ಪ್ರತ್ಯಕ್ಪುಷ್ಪ್ಯಃ ಇತಿ ದಶೇಮಾನಿ ವಮನೋಪಗಾನಿ ಭವಂತಿ ।

ಜೇನು, ಜ್ಯೇಷ್ಠಮಧು, ಕೆಂಪು ಮುಂದಾರ, ಬಿಳೇ ಮುಂದಾರ, ಕಡಹದಮರ, ಬೆತ್ತ, ಕಹಿತೊಂಡೆ, ಗಿಲಿಗಜಿ, ಎಕ್ಕೆ, ಉತ್ತರಣೆ, ಇವು ಹತ್ತು ವಮನಕ್ಕೆ ಉಪಯೋಗವಾದಂಧವು.

24. ದ್ರಾಕ್ಷಾ-ಕಾಶ್ಮರ್ಯ-ಪರುಷಕಾಭಯಾಮಲಕ-ವಿಭೀತಕ-ಕುವಲ-ವದರ-ಕರ್ಕಂಧೂ-ಪೀಲೂನೀತಿ ದಶೇಮಾನಿ ವಿರೇಚನೋಪಗಾನಿ ಭವಂತಿ ।

ದ್ರಾಕ್ಷೆ, ಶಿವನಿ, ಪರೂಷಕ, ಅಣಿಲೆಕಾಯಿ, ನೆಲ್ಲಿಕಾಯಿ, ತಾರೆಕಾಯಿ, ರಾಜಬೊಗರಿ, ಬೊಗರಿ, ಚಿಕ್ಕ ಬೊಗರಿ, ಪೀಲು (ಗೋಣಿಮರ), ಇವು ಹತ್ತು ವಿರೇಚನಕ್ಕೆ ಉಪಯೋಗವಾದಂಧವು.

25. ತ್ರಿವೃದ್ಬಿಲ್ವ - ಪಿಪ್ಪಲೀ - ಕುಷ್ಠ - ಸರ್ಷಪ-ವಚಾ-ವತ್ಸಕಫಲ-ಶತಪುಷ್ಪಾ-ಮಧುಕ-ಮದನಫಲಾನೀತಿ ದಶೇಮಾನ್ಯಾಸ್ಥಾಪನೋಪಗಾನಿ ಭವಂತಿ ।

ತಿಗಡೆ, ಬಿಲ್ವಪತ್ರೆ, ಹಿಪ್ಪಲಿ, ಚಂಗಲಕೋಷ್ಠ, ಸಾಸಿವೆ, ಬಜೆ, ಇಂದ್ರಜೀವಿ, ಸಬ್ಬಸಿಗೆ, ಜ್ಯೇಷ್ಠಮಧು, ಮಾಯಿಫಲ, ಇವು ಹತ್ತು ಆಸ್ಥಾಪನ (ಬಸ್ತಿವಿಶೇಷ) ಕರ್ಮಕ್ಕೆ ಉಪಯೋಗವಾದಂಧವು.

26. ರಾಸ್ನಾ-ಸುರದಾರು-ಬಿಲ್ವ-ಮದನ-ಶತಪುಷ್ಪಾ-ವೃಶ್ಚೀರ-ಪುನರ್ನವಾಶ್ವ ದಂಷ್ಟ್ರಾಗ್ನಿಮಂಥ-ಶ್ಯೋಣಾಕಾ ಇತಿ ದಶೇಮಾನಿ ಅನುವಾಸನೋಪ ಗಾನಿ ಭವಂತಿ ।

ಅರತೆ, ದೇವದಾರ, ಬಿಲ್ವಪತ್ರೆ, ಮಾಯಿಫಲ, ಸಬ್ಬಸಿಗೆ, ಬಿಳೇ ಪುನರ್ನವ, ಪುನರ್ನವ (ನೆಲಬಸಳೆ), ನೆಗ್ಗಿಲು, ನರುವಲು, ಆಸೆಮುಂಗು, ಇವು ಹತ್ತು ಅನುವಾಸನ (ಬಸ್ತಿವಿಶೇಷ) ಕರ್ಮಕ್ಕೆ ಉಪಯುಕ್ತವಾದಂಥವು

27. ಜ್ಯೋತಿಷ್ಮತೀ-ಕ್ಷವಕ-ಮರಿಚ-ಪಿಪ್ಪಲೀ-ವಿಡಂಗ-ಶಿಗ್ರು-ಸರ್ಷಪಾಪಾ ಮಾರ್ಗ-ತಂಡುಲ-ಶ್ವೇತಾ-ಮಹಾಶ್ವೇತಾ ಇತಿ ದಶೇಮಾನಿ ಶಿರೋವಿರೇ ಚನೋಪಗಾನಿ ಭವಂತಿ ।

ಜ್ಯೋತಿಷ್ಮತೀ, ಕೆಂಪುಸಾಸಿವೆ, ಕಾಳುಮೆಣಸು, ಹಿಪ್ಪಲಿ, ವಾಯುವಿಳಂಗ, ನುಗ್ಗೆ, ಬಿಳೇಸಾಸಿವೆ, ಉತ್ತರಣೆ, ಶ್ವೇತಾ (ಕನ್ನೆ?), ನೆಲಕುಂಬಳ, ಇವು ಹತ್ತು ಶಿರೋವಿರೇಚನಕ್ಕೆ ಉಪಯುಕ್ತವಾದಂಥವು.

28. ಜಂಬ್ವಾಮ್ರಪಲ್ಲವ-ಮಾತುಲಂಗಾಮ್ಲ-ಬದರ-ದಾಡಿಮ-ಯವ-ಯಷ್ಟಿ ಕೋಶೀರ-ಮೃಲ್ಲಾಜಾ ಇತಿ ದಶೇಮಾನಿ ಛರ್ದಿನಿಗ್ರಹಾಣಿ ಭವಂತಿ ।

ನೇರಳೆ, ಮಾವಿನಕುಡಿ, ಮಾದಳ ಹುಳಿ, ಬೊಗರಿ, ದಾಳಿಂಬ, ಇಂದ್ರಜೀವಿ, ಜ್ಯೇಷ್ಠ ಮಧು, ಲಾವಂಚ, ಗೋಪಿಚಂದನ, ಅರಳು, ಇವು ಹತ್ತು ವಾಂತಿಯನ್ನು ನಿಲ್ಲಿಸತಕ್ಕವು.

29. ನಾಗರ-ಧನ್ವಯಾಸಕ-ಮುಸ್ತ-ಪರ್ಪಟಕ-ಚಂದನ-ಕಿರಾತತಿಕ್ತಕ-ಗು ಡೂಚೀ-ಹ್ರೀಬೇರ-ಧಾನ್ಯಕ-ಪಟೋಲಾನೀತಿ ದಶೇಮಾನಿ ತೃಷ್ಣಾನಿಗ್ರ ಹಾಣಿ ಭವಂತಿ ।

ಶುಂಠಿ, ಬಳ್ಳಿತುರುಚ, ಭದ್ರಮುಷ್ಟಿ, ಪರ್ಪಾಟಕ, ಶ್ರೀಗಂಧ, ಕಿರಾತಕಡ್ಡಿ, ಅಮೃತ ಬಳ್ಳಿ, ಮುಡಿವಾಳ*, ಕೊತ್ತಂಬರಿ, ಕಹಿಪಡುವಲು, ಇವು ಹತ್ತು ಬಾಯಾರಿಕೆಯನ್ನು ನಿಲ್ಲಿಸತಕ್ಕವು.

* ಈ ಸ್ಥಾನದಲ್ಲಿ ಇರುವೇರಿದಂಟನ್ನು ಉಪಯೋಗಿಸುವದು ಮಲಯಾಳದ ವಾಡಿಕೆಯಾಗಿದೆ

30. ಶಟೀ-ಪುಷ್ಕರಮೂಲ-ಬದರಬೀಜ-ಕಂಟಕಾರಿಕಾ-ಬೃಹತೀ-ವೃಕ್ಷರು ಹಾಭಯಾ-ಪಿಪ್ಪಲೀ-ದುರಾಲಭಾ-ಕುಲೀರಶೃಂಗ್ಯ ಇತಿ ದಶೇಮಾನಿ ಹಿಕ್ಕಾನಿಗ್ರಹಾಣಿ ಭವಂತಿ ।

ಕಚ್ಚೂರ, ಪುಷ್ಕರಮೂಲ, ಬೊಗರಿಬೀಜ, ಕಲ್ಲಂಟೆ, ಗುಳ್ಳ, ಬಂದಣಿಕೆ, ಅಣಿಲೆಕಾಯಿ, ಹಿಪ್ಪಲಿ, ಬಳ್ಳಿತುರುಚ, ಕರ್ಕಟಕಶೃಂಗಿ, ಇವು ಹತ್ತು ಬಿಕ್ಕಟ್ಟನ್ನು ನಿಗ್ರಹಿಸತಕ್ಕವು

31. ಪ್ರಿಯಂಗ್ವನಂತಾವಮ್ರಾಸ್ಥಿ-ಕಟ್ವಂಗ-ಲೋಧ್ರ-ಮೋಚರಸ-ಸಮಂಗಾ-ಧಾತಕೀಪುಷ್ಪ-ಪದ್ಮಾ-ಪದ್ಮಕೇಶರಾಣೀತಿ ದಶೇಮಾನಿ ಪುರೀಷಸಂಗ್ರಹ ಣಾನಿ ಭವಂತಿ ।

ಪ್ರಿಯಂಗು, ಬಳ್ಳಿತುರುಜ, ಮಾವಿನ ಬೀಜದ ತಿರುಳು, ಆನೆಮುಂಗು, ಲೋಧ್ರ, ಬೂರುಗದ ಮೋಣ, ಮಂಜಿಷ್ಠ,* ಧಾತಕೀಪುಷ್ಪ, ಪುರುಷರತ್ನ, ಪದ್ಮಕೇಸರ, ಇವು ಹತ್ತು ಮಲವನ್ನು ಸಂಗ್ರಹವಾಡತಕ್ಕವು.

ಅಥವಾ ನಾಚಿಕೆ ಗಿಡದ ಬೇರು ಮಲಯಾಳ ಗ್ರಂಥದಲ್ಲಿ ವರಜು ಎಂಬ ಬೇರು' ಎಂತ ಬರೆದದ್ದು ಕಾಣುತ್ತದೆ

32. ಜಂಬು-ಶಲ್ಲಕೀತ್ವಕ್-ಕಚ್ಛುರಾ-ಮಧುಕ-ಶಾಲ್ಮಲೀ-ಶ್ರೀವೇಷ್ಟಕ-ಭೃಷ್ಟ ಮೃತ್ಪಯಸ್ಯೋತ್ಪಲ-ತಿಲಕಣಾ ಇತಿ ದಶೇಮಾನಿ ಪುರೀಷವಿರಜನೀ ಯಾನಿ ಭವಂತಿ ।

ನೇರಳು, ಬೇಲದ ಜಕ್ಕ, ಬಳ್ಳಿತುರುಜ, ಇಪ್ಪೆ, ಬೂರುಗ, ಸರಳ ಧೂಪ (ಚಂಜಲ್ಯ), ಸುಟ್ಟ ಮಣ್ಣು, ಪಯಸ್ಯಾ, ನೈದಿಲೆ, ಎಳ್ಳುಕಾಳು, ಇವು ಹತ್ತು ಮಲವನ್ನು ಸ್ವಚ್ಛಮಾಡ ತಕ್ಕಂಧವು.

33. ಜಂಬ್ವಾಮ್ರ-ಪ್ಲಕ್ಷ-ವಟಕ-ಪೀತನೋದುಂಬರಾಶ್ವತ್ಥ-ಭಲ್ಲಾತಕಾಂತಕ-ಸೋಮವಲ್ಕಾ ಇತಿ ದಶೇಮಾನಿ ಮೂತ್ರಸಂಗ್ರಹಣಾನಿ ಭವಂತಿ ।

ನೇರಳು, ಮಾವು, ಒಸುರಿ (ಇತ್ತಿ), ಗೋಳಿ (ಆಲ), ಕಿರುಗೋಳಿ (ಗೋಣಿ), ಅತ್ತಿ, ಅಶ್ವತ್ಥ, ಗೇರು, ಕಲ್ಲತ್ತಿ, ಬಳೇ ಕಾಜು, ಇವು ಹತ್ತು ಮೂತ್ರವನ್ನು ಸಂಗ್ರಹಮಾಡ ತಕ್ಕಂಧವು.

34. ವೃಕ್ಷಾದನೀ-ಶ್ವದಂಷ್ಟ್ರಾ-ವಸುಕ-ವಶಿರ-ಪಾಷಾಣಭೇದ-ದರ್ಭ-ಕುಶ-ಕಾಶ-ಗುಂದ್ರೇತ್ಕಟ-ಮೂಲಾನೀತಿ ದಶೇಮಾನಿ ಮೂತ್ರವಿರೇಚನೀಯಾ ನಿ ಭವಂತಿ ।

ನೆಲಕುಂಬಳಗಡ್ಡೆ, ನೆಗ್ಗಿಲು, ವಾಸ್ತುಕಶಾಕ, ಬಜೆ, ಪಾಷಾಣಭೇದಿ, ದರ್ಭೆ, ಕುಶ, ಕಾಶ, ಶರ, ಮೃದುದರ್ಭೆ, ಇವುಗಳ ಮೂಲಗಳು, ಇವು ಹತ್ತು ಮೂತ್ರವಿರೇಚನ ಮಾಡಿಸತಕ್ಕವು.

35. ಪದ್ಮೋತ್ಪಲ-ನಲಿನ-ಕುಮುದ-ಸೌಗಂಧಿಕ-ಪುಂಡರೀಕ-ಶತಪತ್ರ-ಮಧು ಕ-ಪ್ರಿಯಂಗು-ಧಾತಕೀಪುಷ್ಪಾಣೀತಿ ದಶೇಮಾನಿ ಮೂತ್ರವಿರಜನೀ ಯಾನಿ ಭವಂತಿ ।

ತಾವರೆ, ಬಿಳೇ ತಾವರೆ, ನೀಲತಾವರೆ, ಕೆಂದಾವರೆ, ನೈದಿಲೆ, ಬಿಳೇ ನೈದಿಲೆ, ಕೆಂಪು ನೈದಿಲೆ, ಇಪ್ಪೆ, ಪ್ರಿಯಂಗು, ಧಾತಕೀ, ಇವುಗಳ ಪುಷ್ಪಗಳು, ಇವು ಹತ್ತು ಮೂತ್ರವನ್ನು ಸ್ವಚ್ಛಮಾಡತಕ್ಕವು.

36. ದ್ರಾಕ್ಷಾಭಯಾಮಲಕ-ಪಿಪ್ಪಲೀ-ದುರಾಲಭಾ-ಶೃಂಗೀ-ಕಂಟಕಾರಿಕಾ-ವೃಶ್ಚೀರ-ಪುನರ್ನವಾ-*ವಾತಾವಮಲ್ಯ ಇತಿ ದಶೇಮಾನಿ ಕಾಸಹರಾಣಿ ಭವಂತಿ ।

* ಈ ವಾ' ಆಧಿಕವಾಗಿರಬೇಕು 'ವಾತಾಮಲಕೀ' ಎಂಬ ಶಬ್ದ ವೀರ ಎಲ್ಲಿಯೂ ಕಾಣುವದಿಲ್ಲ

ದ್ರಾಕ್ಷೆ, ಅಣಿಲೆಕಾಯಿ, ನೆಲ್ಲಿಕಾಯಿ, ಹಿಪ್ಪಲ, ಒಳ್ಳಿತುರುಜ, ಕರ್ಕಟಶೃಂಗೀ, ಕಲ್ಲಂಟಿ, ಬಿಳೇ ಪುನರ್ನವ, ಪುನರ್ನವ, ನೆಲನೆಲ್ಲಿ, ಇವು ಹತ್ತು ಕೆಮ್ಮು ಪರಿಹರಿಸತಕ್ಕವು

37. ಶಟೀ-ಪುಷ್ಕರಮೂಲಾಮ್ಲವೇತಸೈಲಾ-ಹಿಂಗ್ವಗುರು-ಸುರಸಾ-ತಾಮಲಕೀ-ಜೀವಂತೀ-ಚಂಡಾ ಇತಿ ದಶೇಮಾನಿ ಶ್ವಾಸಹರಾಣಿ ಭವಂತಿ ।

ಕಚ್ಚೂರ, ಪುಷ್ಕರಮೂಲ, ಅಮ್ಲವೇತಸ, ಯಾಲಕ್ಕಿ, ಹಿಂಗು, ಅಗಿಲುಗಂಧ, ತುಳಸೀ, ನೆಲನೆಲ್ಲಿ, ಜೀವಂತೀ, ನಸುಗುನ್ನಿ (ನಾಯಿಸೊಣಗು), ಇವು ಹತ್ತು ಉಬ್ಬಸವನ್ನು ಪರಿಹರಿಸುವಂಥವು.

38. ಪಾಟಲಾಗ್ನಿಮಂಥ-ಬಿಲ್ವ-ಶ್ಯೋಣಾಕ-ಕಾಶ್ಮರ್ಯ-ಕಂಟಕಾರಿಕಾ-ಬೃಹತೀ-ಶಾಲಿಪರ್ಣೀ-ಪೃಶ್ನಿಪರ್ಣೀ-ಗೋಕ್ಷುರಕಾ ಇತಿ ದಶೇಮಾನಿ ಶೋಥಹರಾಣಿ ಭವಂತಿ ।

ಪಾದರಿ, ನರುವಲು, ಬಿಲ್ವಪತ್ರೆ, ಆನಮುಂಗು, ಶಿವನಿ, ಕಲ್ಲಂಟಿ, ಗುಳ್ಳ, ಓರೆಲೆ, ಮೂವೆಲೆ, ನೆಗ್ಗಿಲು, ಇವು ಹತ್ತು ಶೋಥವನ್ನು ಪರಿಹರಿಸತಕ್ಕಂಥವು.

39. ಶಾರಿವಾ-ಶರ್ಕರಾ-ಪಾರಾ-ಮಂಜಿಷ್ಠಾ-ದ್ರಾಕ್ಷಾ-ಪೀಲು-ಪರೂಷಕಾ ಭಯಾಮಲಕ-ಎಷೀತಕಾನೀತಿ ದಶೇಮಾನಿ ಜ್ವರಹರಾಣಿ ಭವಂತಿ ।

ನಾಮದ ಬೇರು, ಸಕ್ಕರೆ, ಪಾಡಾವಳಿಗಡ್ಡೆ, ಮಂಜಿಷ್ಠ, ದ್ರಾಕ್ಷೆ, ಪೀಲು (ಗೋಣಿಮರ), ಪರೂಷಕ, ಅಣಿಲೆಕಾಯಿ, ನೆಲ್ಲಿಕಾಯಿ, ಶಾಂತಿಕಾಯಿ, ಇವು ಹತ್ತು ಜ್ವರಹರವಾದಂಥವು.

40. ದ್ರಾಕ್ಷಾ-ಖರ್ಜೂರ-ಪಿಯಾಲ-ಬದರ-ದಾಡಿಮ-ಫಲ್ಗು-ಪರುಷಕೇಕ್ಷು-ಯವ-ಯಷ್ಟಿಕಾ ಇತಿ ದಶೇಮಾನಿ ಶ್ರಮಹರಾಣಿ ಭವಂತಿ ।

ದ್ರಾಕ್ಷೆ, ಖರ್ಜೂರ, ಮೋರಂಟೆ (ಮಲ. ಮುರಳಾ), ಬೊಗರಿ, ದಾಳಿಂಬ, ಕಾಡು ಅತ್ತಿ, ಪರೂಷಕ, ಕಬ್ಬು, ಯವೆಗೋದಿ, ಜ್ಯೇಷ್ಠಮಧು, ಇವು ಹತ್ತು ಶ್ರಮಪರಿಹರಿಸತಕ್ಕವು

41. ಲಾಜಾ-ಚಂದನ-ಕಾಶ್ಮರ್ಯಫಲ-ಮಧುಕ-ಶರ್ಕರಾ-ನೀಲೋತ್ಪಲೋಶೀರ-ಶಾರಿವಾ-ಗುಡೂಚೀ-ಹ್ರೀವೇರಾಣೀತಿ ದಶೇಮಾನಿ ದಾಹಪ್ರಶಮನಾನಿ ಭವಂತಿ ।

ಅರಳು, ರಕ್ತಚಂದನ, ಶಿವನೀಹಣ್ಣು, ಜ್ಯೇಷ್ಠಮಧು, ಸಕ್ಕರೆ, ನೈದಿಲು, ಲಾವಂಚ, ನಾಮದ ಬೇರು, ಅಮೃತಬಳ್ಳಿ, ಕರಿಮುಡಿಸಾಳ, ಇವು ಹತ್ತು ಉರಿ ಶಮನಮಾಡತಕ್ಕವು.

42. ತಗರಾಗುರು - ಧನ್ಯಾಕ - ಶೃಂಗವೇರ - ಭೂತೀಕ - ವಚಾ - ಕಂಟಕಾರಿಕಾಗ್ನಿ ಮಂಥ - ಶ್ಯೋಣಾಕ - ಪಿಪ್ಪಲ್ಯ ಇತಿ ದಶೇಮಾನಿ ಶೀತಪ್ರಶಮನಾನಿ ಭವಂತಿ ।

ತಗರ, ಅಗಿಲುಗಂಧ, ಕೊತ್ತಂಬರಿ, ಶುಂಠಿ, ಮಜ್ಜಿಗೆ ಹುಲ್ಲು (ಅಥವಾ ನೆಲಬೇವು), ಬಜೆ, ಕಲ್ಲಂಟೆ, ನರುವಲು, ಆನೆಮುಂಗು, ಹಿಪ್ಪಲಿ, ಇವು ಹತ್ತು ಶೀತಶಮನಮಾಡತಕ್ಕಂಥವು.

43. ತಿಂದುಕ - ಪಿಯಾಲ - ಬದರ - ಖದಿರ - ಕದರ - ಸಪ್ತಪರ್ಣಾರ್ಜುನಾಸನಾರಿಮೇದಾ ಇತಿ ದಶೇಮಾನ್ಯುದರ್ದಪ್ರಶಮನಾನಿ ಭವಂತಿ ।

ಬಂದ, ಮೋರಂಟೆ (ಮಲ. ಮುರಳ್), ಬೊಗರಿ, ಕೆಂಪು ಕಾಚು, ಬಿಳೆ ಕಾಚು, ಹಾಲೆ (ಏಳೆಲೆ ಬಾಳೆ), ರಾಳ, ಮತ್ತಿ, ಅಸನ (ಬೇಂಬ), ಕರಿಜಾಲಿ (ಇರಿಮೇದ), ಇವು ಹತ್ತು ಉದರ್ದರೋಗವನ್ನು ಶಮನಮಾಡತಕ್ಕವು.

44. ವಿದಾರೀಗಂಧಾ - ವೃಶ್ಚಿಪರ್ಣೀ - ಬೃಹತೀ - ಕಂಟಕಾರಿಕೈರಂಡ - ಕಾಕೋಲೀ - ಚಂದನೋಶೀರೈಲಾ - ಮಧುಕಾನೀತಿ ದಶೇಮಾನಿ ಅಂಗಮರ್ದಪ್ರಶಮನಾನಿ ಭವಂತಿ ।

ಮೂವೆಲೆ, ಓರೆಲೆ, ಗುಳ್ಳ, ಕಲ್ಲಂಟೆ, ಹರಳು, ಕಾಕೋಲೀ, ಶ್ರೀಗಂಧ, ಲಾವಂಚ, ಯಾಲಕ್ಕಿ, ಜ್ಯೇಷ್ಠಮಧು, ಇವು ಹತ್ತು ಅಂಗಮರ್ದವನ್ನು ಶಮನಮಾಡತಕ್ಕವು.

45. ಪಿಪ್ಪಲೀ - ಪಿಪ್ಪಲೀಮೂಲ - ಚವ್ಯ - ಚಿತ್ರಕ - ಶೃಂಗವೇರ - ಮರಿಚಾಜಮೋದಾಜಗಂಧಾಜಾಜೀ - ಗಂಡೀರಾಣೀತಿ ದಶೇಮಾನಿ ಶೂಲಪ್ರಶಮನಾನಿ ಭವಂತಿ ।

ಹಿಪ್ಪಲಿ, ಹಿಪ್ಪಲೀಮೂಲ, ಕಾಡು ಮೆಣಸಿನ ಬೇರು, ಚಿತ್ರಮೂಲ, ಶುಂಠಿ, ಕಾಳು ಮೆಣಸು, ಓಮ, ಸಿರಿಕಾಳ (ಮಲ ಕಾರ್ವೇಳ), ಜೀರಿಗೆ, ಗಂಡೀರ,* ಇವು ಹತ್ತು ಶೂಲ ಶಮನಮಾಡತಕ್ಕವು.

* 'ಸಮಷ್ಯಲಾ' ಎಂತಲೂ 'ಸದ್ಯಾಮ್ಲ' ಎಂತಲೂ ಇದಕ್ಕೆ ಹೆಸರುಗಳಿವೆ

46. ಮಧು - ಮಧುಕ - ರುಧಿರ - ಮೋಚರಸ - ಮೃತ್ಕಪಾಲ - ಲೋಧ್ರ - ಗೈರಿಕ - ಪ್ರಿಯಂಗು - ಶರ್ಕರಾ - ಲಾಜಾ ಇತಿ ದಶೇಮಾನಿ ಶೋಣಿತಾಸ್ಥಾಪನಾನಿ ಭವಂತಿ ।

ಜೇನು, ಜ್ಯೇಷ್ಠಮಧು, ಕುಂಕುಮಕೇಸರ, ಬೂರುಗದ ಮೇಣ, ಮಣ್ಣಿನ ಕಪಾಲ, ಲೋಧ್ರ, ಕಾವಿಕಲ್ಲು, ಪ್ರಿಯಂಗು, ಸಕ್ಕರೆ, ಅರಳು, ಇವು ಹತ್ತು ರಕ್ತವನ್ನು ನಿಲ್ಲಿಸತಕ್ಕವು.

47. ಶಾಲ - ಕಟ್ಫಲ - ಕದಂಬ - ಪದ್ಮಕ - ತುರಂಗ - ಮೋಚರಸ - ಶಿರೀಷ - ವಂಜುಲೈಲವಾಲುಕಾಶೋಕಾ ಇತಿ ದಶೇಮಾನಿ ವೇದನಾಸ್ಥಾಪನಾನಿ ಭವಂತಿ ।

ರಾಳದ ಮರ, ದಡ್ಡಾಲ, ಕಡಹದ ಮರ, ಪದ್ಮಕ, ಸೈಂಧವ (ಅಥವಾ ಸಪ್ತಂಗ), ಬೂರುಗದ ಮೇಣ, ಬಾಗೆಮರ, ನೇಮಿಮರ, ಸುರಸುರಿಕೆ, ಅಶೋಕ, ಇವು ಹತ್ತು ವೇದನೆಯನ್ನು ನಿಲ್ಲಿಸತಕ್ಕವು.

48. ಹಿಂಗು-ಕೃಟಯಾರಿಮೇದಾ-ವಚಾ-ಚೋರಕ-ವಯಃಸ್ಥಾ-ಗೋಲೋಮಾ-ಜಟಿಲಾ-ಪಲಂಕಷಾಶೋಕ-ರೋಹಿಣ್ಯ ಇತಿ ದಶೇಮಾನಿ ಸಂಜ್ಞಾಸ್ಥಾಪನಾನಿ ಭವಂತಿ ।

ಹಿಂಗು, ಕರಿಬೇವು, ಅರಿಮೇದ, ಬಜೆ, ಕಚೋರ ಅಮೃತಬಳ್ಳಿ, ಬಿಳೇ ಬಜೆ, ಜಟಾಮಾಂಸಿ, ಅರತೆ, ಕಟುಕರೋಹಿಣಿ, ಇವು ಹತ್ತು ಎಚ್ಚರಿಕೆಯನ್ನು ಸರಿಪಡಿಸತಕ್ಕವು.

49. ಐಂದ್ರೀ-ಬ್ರಹ್ಮೀ-ಶತವೀರ್ಯಾ-ಸಹಸ್ರವೀರ್ಯಾಮೋಘಾವ್ಯಥಾ-ಶಿವಾರಿಷ್ಟಾ-ವಾಟ್ಯಪುಷ್ಪೀ-ವಿಷ್ವಕ್ಸೇನಕಾಂತಾ ಇತಿ ದಶೇಮಾನಿ ಪ್ರಜ್ಞಾಸ್ಥಾಪನಾನಿ ಭವಂತಿ ।

ಹಾವುಮೆಕ್ಕೆ, ಒಂದೆಲಗ, ಶತಾವರಿ, ಮಹಾಶತಾವರಿ, ವಾಯುವಿಳಂಗ, ಚಂಗಲಕೋಷ್ಠ, ನೆಲ್ಲಿ, ಕಟುಕರೋಹಿಣಿ, ಸಹದೇವಿ, ಪ್ರಿಯಂಗು, ಇವು ಹತ್ತು ಪ್ರಜ್ಞೆಯನ್ನು ಸರಿಪಡಿಸತಕ್ಕವು.

50. ಅಮೃತಾಭಯಾ-ಧಾತ್ರೀ-ಮುಸ್ತಾ-ಶ್ವೇತಾ-ಜೀವಂತ್ಯತಿರಸಾ-ಮಂಡೂಕಪರ್ಣಾ-ಸ್ಥಿರಾ-ಪುನರ್ನವಾ ಇತಿ ದಶೇಮಾನಿ ವಯಃಸ್ಥಾಪನಾನಿ ಭವಂತಿ ।

ಅಮೃತಬಳ್ಳಿ, ಅಣಿಲೆಕಾಯಿ, ನೆಲ್ಲಿಕಾಯಿ, ಭದ್ರಮುಷ್ಟಿ, ಬಿಳೇಬಜೆ, ಜೀವಂತಿ, ಅರತೆ, ಒಂದೆಲಗ, ಮೂವೆಲೆ, ಪುನರ್ನವ, ಇವು ಹತ್ತು ವಯಸ್ಸನ್ನು ಕಾಪಾಡತಕ್ಕಂಥವು.

88. ಇತಿ ಪಂಚಕಷಾಯಶತಾನ್ಯಭಿಸಮಸ್ಯ ಪಂಚಾಶನ್ಮಹಾಕಷಾಯಾಃ ಮಹತಾಂ ಚ ಕಷಾಯಾಣಾಂ ಲಕ್ಷಣೋದಾಹರಣಾರ್ಥಂ ವ್ಯಾಖ್ಯಾತಾ ಭವಂತಿ | ನ ಹಿ ವಿಸ್ತರಸ್ಯ ಪ್ರಮಾಣಮಸ್ತಿ ನ ಚಾಪ್ಯತಿಸಂಕ್ಷೇಪೋಽಲ್ಪಬುದ್ಧೀನಾಂ ಸಾಮರ್ಥ್ಯಾಯೋಪಕಲ್ಪ್ಯತೇ | ತಸ್ಮಾದನತಿಸಂಕ್ಷೇಪೇಣಾನತಿವಿಸ್ತರೇಣ ಚೋದ್ದಿಷ್ಟಾಃ | ಏತಾವಂತೋ ಹ್ಯಲ್ಪಬುದ್ಧೀನಾಂ ವ್ಯವಹಾರಾಯ ಬುದ್ಧಿಮತಾಂ ಚ ಸ್ವಾಲಕ್ಷಣ್ಯಾನುಮಾನಯುಕ್ತಿಕುಶಲಾನಾಮನುಕ್ತಾರ್ಥಜ್ಞಾನಾಯೇತಿ । (ಚ 24.)

ಯುಕ್ತ ಕಷಾಯ ಯೋಗಗಳ ಉದ್ದೇಶ

ಹೀಗೆ 500 ಕಷಾಯಗಳನ್ನು ಮುಗಿಸಿದ್ದಲ್ಲದೆ, ಮಹಾಕಷಾಯಗಳ ಲಕ್ಷಣವನ್ನು ಉದಾಹರಿಸುವದಕ್ಕೋಸ್ಕರ 50 ಮಹಾಕಷಾಯಗಳನ್ನು ಸಹ ವಿವರಿಸಲಾಯಿತು. ವಿಸ್ತಾರಕ್ಕೆ ಮಿತಿಯಿಲ್ಲ ಮತ್ತು ಅತಿಸಂಕ್ಷೇಪವು ಅಲ್ಪ ಬುದ್ಧಿಯುಳ್ಳವರ ಬುದ್ಧಿಸಾಮರ್ಥ್ಯಕ್ಕೆ ಸಾಕಾಗು

ವದಿಲ್ಲ. ಆದ್ದರಿಂದ ಅತಿಸಂಕ್ಷೇಪವನ್ನಾಗಲಿ ಅತಿವಿಸ್ತಾರವನ್ನಾಗಲಿ ಮಾಡದೆ ಉದ್ದೇಶಿಸಲಾಯಿತು. ಇಷ್ಟರ ಮಟ್ಟಿಗೆ ಹೇಳೋಣಾದದ್ದು ಅಲ್ಪಬುದ್ಧಿಯವರ ವ್ಯವಹಾರಕ್ಕೂ, ಸ್ವಲಕ್ಷಣಗಳನ್ನು ಗ್ರಹಿಸುವದರಲ್ಲಿಯೂ, ಊಹನೆ ಕ್ರಮದಲ್ಲಿಯೂ, ಜೋಡಣೆಯಲ್ಲಿಯೂ, ಪ್ರವೀಣರಾದ ಬುದ್ದಿವಂತರಿಗೆ ಸ್ಪಷ್ಟವಾಗಿ ಹೇಳಲ್ಪಡದ ಅರ್ಥವನ್ನು ತಿಳಿಸುವದಕ್ಕೂ ಉಪಯುಕ್ತವಾಗಿರುತ್ತದೆ.

89 (*a*) ತೇಷಾಂ ಕರ್ಮಸು ವಾಹ್ಯೇಷು ಯೋಗಮಾಭ್ಯಂತರೇಷು ಚ ।
ಯೋಗಗಳನ್ನು ಬದಲಾಯಿಸುವ ಸಂದರ್ಭ
ಸಂಯೋಗಂ ಚ ವಿಯೋಗಂ ಚ ಯೋ ವೇದ ಸ ಭಿಷಗ್ವರಃ ॥
(ಚ. 25.)

ಆ ಕಷಾಯಗಳನ್ನು ಸಾಧಿಸತಕ್ಕ ಕರ್ಮಗಳ ಸ್ಥಿತಿಭೇದಗಳ ಮೇಲೆ ಯೋಗಪ್ರಕಾರವೇ, ಅಥವಾ ಅವಶ್ಯವಾದ ಬೇರೆ ಔಷಧಗಳನ್ನು ಕೂಡಿಸಿಕೊಂಡು, ಅಥವಾ ಬೇಡದವುಗಳನ್ನು ಬಿಟ್ಟುಬಿಟ್ಟು, ಉಪಯೋಗಿಸಲಿಕ್ಕೆ ಯಾವನು ಒಲ್ಲನೋ ಅವನೇ ಶ್ರೇಷ್ಠನಾದ ವೈದ್ಯನಾಗಿರುತ್ತಾನೆ.

(*b*) ಸಮೀಕ್ಷ್ಯ ದೋಷಭೇದಾಂಶ್ಚ ಗಣಾನ್ ಭಿನ್ನಾನ್ ಪ್ರಯೋಜಯೇತ್ ।
ಪೃಥಙ್ಮಿಶ್ರಾನ್ ಸಮಸ್ತಾನ್ವಾ ಗಣಂ ವಾ ವ್ಯಸ್ತಸಂಹತಂ ॥ (ಸು. 145.)

ದೋಷಭೇದಗಳನ್ನು ನೋಡಿಕೊಂಡು, ಬೇರೆ ಬೇರೆ ಗಣಗಳಲ್ಲಿ ಹೇಳಲ್ಪಟ್ಟ ಔಷಧಗಳನ್ನು ಪ್ರತ್ಯಪ್ರತ್ಯೇಕವಾಗಿಯೋ, ಮಿಶ್ರಮಾಡಿಯೋ, ಒಟ್ಟುಕೂಡಿಸಿಯೋ, ಕೆಲವನ್ನು ಬಿಟ್ಟು ಭಿನ್ನಮಾಡಿಯೋ, ಅಥವಾ ಒಂದೇ ಗಣದ ಔಷಧಗಳನ್ನು ತೂಕದಲ್ಲಿ ಹೆಚ್ಚುಕಡಿಮೆ ಮಾಡಿಯೋ, ಉಪಯೋಗಿಸತಕ್ಕದ್ದು

(*c*) ವ್ಯಾಧೇರಯುಕ್ತಂ ಯದ್ದ್ರವ್ಯಂ ಗಣೋಕ್ತಮಪಿ ತತ್ತ್ಯಜೇತ್ ।
ಅನುಕ್ತಮಪಿ ಯದ್ಯುಕ್ತಂ ಯೋಜಯೇತ್ತತ್ರ ತದ್ಬುಧಃ ॥
(ಶಾ. 5.)

ಗಣದಲ್ಲಿ ಹೇಳಲ್ಪಟ್ಟ ಔಷಧಗಳಲ್ಲಿ ಒಂದು ಆಗಿದ್ದರೂ, ಯಾವ ದ್ರವ್ಯವು ರೋಗಕ್ಕೆ ಯುಕ್ತವಲ್ಲವೋ ಅದನ್ನು ಬುದ್ಧಿವಂತನು ಬಿಟ್ಟುಬಿಡಬೇಕು; ಮತ್ತು ಯಾವದು ರೋಗಕ್ಕೆ ಯುಕ್ತವಾಗಿರುತ್ತದೋ, ಅದನ್ನು ಗಣದಲ್ಲಿ ಹೇಳದೆ ಇದ್ದಾಗ್ಯೂ, ಕೂಡಿಸಿಕೊಳ್ಳತಕ್ಕದ್ದು.

90. ಏಕಮಪ್ಯೌಷಧಂ ಯೋಗೇ ಯಸ್ಮಿನ್ ಯತ್ಪುನರುಚ್ಯತೇ ।
ಯೋಗದಲ್ಲಿ ಪುನರುಕ್ತಿಯ ವ್ಯವಸ್ಥೆ
ಮಾನತೋ ದ್ವಿಗುಣಂ ಪ್ರೋಕ್ತಂ ತದ್ದ್ರವ್ಯಂ ತತ್ತ್ವದರ್ಶಿಭಿಃ ॥
(ಶಾ. 5.)

ಯಾವದಾದರೊಂದು ಯೋಗದಲ್ಲಿ ಒಂದೇ ಔಷಧವು ಎರಡು ಸರ್ತಿ ಹೇಳಲ್ಪಟ್ಟರೆ, ಅದನ್ನು ತೂಕದಲ್ಲಿ ಎರಡು ಪಾಲಷ್ಟು ಕೂಡಿಸತಕ್ಕದ್ದೆಂತ ಬಲ್ಲವರು ಹೇಳಿರುತ್ತಾರೆ.

91. ರೋಗಾ ಯೇಽಪ್ಯತ್ರ ನೋದ್ದಿಷ್ಟಾ ಬಹುತ್ವಾನ್ನಾಮರೂಪತಃ ।
ತೇಷಾಮಪ್ಯೇತದೇವ ಸ್ಯಾದ್ದೋಷಾದೀನ್ ವೀಕ್ಷ್ಯ ಭೇಷಜಂ ॥

ಎವರಿಸಲ್ಪಡದ ರೋಗಗಳ ಚಿಕಿತ್ಸೆ

ದೋಷದೂಷ್ಯನಿದಾನಾನಾಂ ವಿಪರೀತಂ ಹಿತಂ ಧ್ರುವಂ ।
ಉಕ್ತಾನುಕ್ತಾನ್ ಗದಾನ್ಸರ್ವಾನ್ಸಮ್ಯಗ್ಯುಕ್ತಂ ನಿಯಚ್ಛತಿ ॥
(ಚ. 827.)

ರೋಗಗಳು ಹೆಸರಿನಿಂದಲೂ ರೂಪದಿಂದಲೂ ಬಹಳವಾಗಿರುವ ದೆಸೆಯಿಂದ ಇಲ್ಲಿ ಯಾವ ರೋಗಗಳು ವರ್ಣಿಸಲ್ಪಡಲಿಲ್ಲವೋ, ಅವುಗಳಿಗೆ ಇದೇ ಔಷಧವನ್ನು ದೋಷಾದಿ ಗಳಿಗೆ ಲಕ್ಷ್ಯವಿಟ್ಟು ಕೊಡತಕ್ಕದ್ದಾಗಿರುತ್ತದೆ. ಯಾವ ರೋಗವೇಯಾಗಲಿ, ದೋಷಗಳಿಗೂ, ವಿಕಾರದ ಲಕ್ಷಣಗಳಿಗೂ, ಅವುಗಳ ಕಾರಣಗಳಿಗೂ ವಿರುದ್ಧವಾದದ್ದು ರೋಗಿಗೆ ಹಿತಕರ ವಾಗುವದಕ್ಕೆ ಸಂದೇಹವಿಲ್ಲ ಅದನ್ನು ಒಳ್ಳೇದಾಗಿ ಯುಕ್ತಿಯಿಂದ ಉಪಯೋಗಿಸಿದರೆ, ಸರ್ವ ರೋಗಗಳು, ವರ್ಣಿಸಲ್ಪಟ್ಟವಾಗಲಿ, ವರ್ಣಿಸಲ್ಪಡದವಾಗಲಿ, ಪರಿಹಾರವಾಗುವವು.

92. ಆಸ್ಯಾದಾಮಾಶಯಸ್ಥಾನಾ ಹಿ ರೋಗಾನ್ನಸ್ಯಃ ಶಿರೋಗತಾನ್ ।
ಗುದಾತ್ಪಕ್ವಾಶಯಸ್ಥಾಂಶ್ಚ ಹಂತ್ಯಾಶು ದ್ರವಮೌಷಧಂ ॥

ಔಷಧ ಸೇವನೆಗೆ ಮುಖಗಳು

ಶರೀರಾವಯವೋತ್ಥೇಷು ವೀಸರ್ಪಪಿಡಕಾದಿಷು ।
ಯಥಾದೇಶಂ ಪ್ರದೇಹಾದಿ ಶಮನಂ ಸ್ಯಾದ್ವಿಶೇಷತಃ ॥ (ಚ. 287.)

ಆಮಾಶಯದ ರೋಗಗಳಿಗೆ ಪಾನರೂಪವಾಗಿ, ತಲೆರೋಗಗಳಿಗೆ ನಸ್ಯರೂಪವಾಗಿ, ಪಕ್ವಾಶಯದ ರೋಗಗಳಿಗೆ ಆಸನದ್ವಾರ (ನಿರೂಹಾದಿ ಕ್ರಮಗಳಿಂದ), ದ್ರವಯುಕ್ತವಾದ ಔಷಧವು ಉಪಯೋಗಿಸಲ್ಪಟ್ಟಲ್ಲಿ, ಆ ರೋಗಗಳು ಬೇಗನೆ ವಾಸಿಯಾಗುವವು. ಶರೀರದ ಯಾವದಾದರೊಂದು ಅವಯವದಲ್ಲಿ ಉತ್ಪನ್ನವಾದ ವಿಸರ್ಪ ಪಿಡಕಾದಿಗಳಲ್ಲಿ ಆಯಾ ಸ್ಥಳಕ್ಕೆ ಲೇಪಾದಿಗಳನ್ನು ಉಪಯೋಗಿಸುವದರಿಂದ ವಿಶೇಷ ಗುಣ ಸಿಕ್ಕುವದು.

XX ನೇ ಅಧ್ಯಾಯ.

ಔಷಧೋಪಯೋಗವಿಧಾನಗಳು

1 ನಾನಾ ಔಷಧೋಪಯೋಗವಿಧಾನಗಳು

ಇತ್ಯೇತತ್ಕ್ವಾಥಕಲ್ಕಾಜ್ಯತೈಲಲೇಹ್ಯರಸಾಯನೈಃ ।
ಪಾನಾಭ್ಯಂಜನಲೇಪೈಶ್ಚ ನಸ್ಯವಸ್ತ್ಯವಗಾಹನೈಃ ॥
ಧಾರಾವಗಾಹನೈಶ್ಚೈವ ಪ್ರಯುಂಜ್ಯಾತ್ಸರ್ವಮೌಷಧಂ ।

ರೋಗೋಕ್ತವಾದ ಎಲ್ಲಾ ಔಷಧಗಳನ್ನು ಕಷಾಯವಾಗಿಯಾಗಲಿ, ಕಲ್ಕವಾಗಿಯಾಗಲಿ, ತುಪ್ಪವಾಗಿಯಾಗಲಿ, ತೈಲವಾಗಿಯಾಗಲಿ, ಲೇಹ್ಯವಾಗಿಯಾಗಲಿ, ರಸಾಯನವಾಗಿಯಾಗಲಿ, ಪಾನಕವಾಗಿಯಾಗಲಿ, ಅಭ್ಯಂಜನವಾಗಿಯಾಗಲಿ, ಲೇಪವಾಗಿಯಾಗಲಿ, ನಸ್ಯವಾಗಿಯಾಗಲಿ, ವಸ್ತಿರೂಪವಾಗಿಯಾಗಲಿ, ಸ್ನಾನರೂಪವಾಗಿಯಾಗಲಿ, ಧಾರಾಸ್ನಾನವಾಗಿಯಾಗಲ, ಸಂಗತ್ಯನುಸಾರವಾಗಿ ಉಪಯೋಗಿಸತಕ್ಕದ್ದು

2. ತೂಕಳತೆಯ ಅವಶ್ಯಕತೆ

ನ ಮಾನೇನ ವಿನಾ ಯುಕ್ತಿರ್ದ್ರವ್ಯಾಣಾಂ ಜಾಯತೇ ಕ್ವಚಿತ್ ।
ಅತಃ ಪ್ರಯೋಗಕಾರ್ಯಾರ್ಧಂ ಮಾನಮತ್ರೋಚ್ಯತೇ ಮಯಾ ॥
(ಶಾ. 2.)

ಯಾವ ಸಂಗತಿಯಲ್ಲಿಯಾದರೂ ತೂಕಳತೆಯಿಲ್ಲದೆ ಔಷಧಗಳ ಉಪಯೋಗವಿಲ್ಲ. ಆದ್ದರಿಂದ ಔಷಧ ಪ್ರಯೋಗದ ಸಿದ್ಧಿಗಾಗಿ ತೂಕಳತೆಯು ಇಲ್ಲಿ ಹೇಳಲ್ಪಡುತ್ತದೆ

3. ಮಾಗಧತೂಕಗಣನ

ಯವೋಽಷ್ಟಸರ್ಷಪೈಃ ಪ್ರೋಕ್ತೋ ಗುಂಜಾ ಸ್ಯಾತ್ತಚ್ಚತುಷ್ಟಯಂ ।
ಷಡ್ಭಿಸ್ತು ರಕ್ತಿಕಾಭಿಃ ಸ್ಯಾನ್ಮಾಷಕೋ ಹೇಮಧಾನ್ಯಕೌ ॥
* * * * * * *
ಮಾಷಟಂಕಾಕ್ಷಬಿಲ್ವಾನಿಕುಡವಃ ಪ್ರಸ್ಥಮಾಢಕಂ ।
ರಾಶಿಗೋಣೀಖಾರಿಕೇತಿ ಯಥೋತ್ತರಚತುರ್ಗುಣಾಃ ॥ (ಶಾ. 2. 3.)

8 ಸಾಸಿವೆಗೆ 1 ಯವೆ, 4 ಯವೆಗೆ 1 ಗುಂಜಾ (ಗುಲಗುಂಜಿ), 6 ಗುಂಜಾ ತೂಕಕ್ಕೆ 1 ಮಾಷ, ಅಥವಾ ಹೇಮ ಅಥವಾ ಧಾನ್ಯಕ * * * * * * * * 4 ಮಾಷಕ್ಕೆ 1 ಟಂಕ, 4 ಟಂಕಕ್ಕೆ 1 ಅಕ್ಷ, 4 ಅಕ್ಷಕ್ಕೆ 1 ಬಿಲ್ವ, 4 ಬಿಲ್ವಕ್ಕೆ 1 ಕುಡವ, 4 ಕುಡವಕ್ಕೆ 1 ಪ್ರಸ್ಥ, 4 ಪ್ರಸ್ಥಕ್ಕೆ 1 ಆಢಕ, 4 ಆಢಕಕ್ಕೆ 1 ರಾಶಿ, 4 ರಾಶಿಗೆ 1 ಗೋಣಿ, 4 ಗೋಣಿಗೆ 1 ಖಾರಿಕಾ ಹೀಗೆ ಮಾಷದಿಂದ ಖಾರಿಕಾ ವರೆಗಿನವು ಪ್ರಮಾಣದಲ್ಲಿ ಯಥೋತ್ತರ 4ರಷ್ಟು ಹೆಚ್ಚು ಆಗಿರುತ್ತವೆ.

4. ಮಾಷ = ಹೇಮ, ಧಾನ್ಯ, ಧಾನ್ಯಕ
ಶಾಣ = 4 ಮಾಷ } ಧರಣ, ಟಂಕ, ನಿಷ್ಕ

ಮಾನದಲ್ಲಿ ಉಪಯೋಗಿಸಲ್ಪಡುವ ಪರ್ಯಾಯ ಪದಗಳು

ಕೋಲ = 2 ಶಾಣ } ಕ್ಷುದ್ರಕ, ವಟಕ, ವಂಕ್ಷಣ, ದ್ರಂಕ್ಷಣ, ಬದರ.

ಕರ್ಷ = 2 ಕೋಲ } ಪಾಣಿ, ಮಾನಿಕಾ, ಪಾಣಿಮಾನಿಕಾ, ಅಕ್ಷ, ಏಚು, ಪಾಣಿತಲ, ಕಿಂಚಿತ್ಪಾಣಿ, ತಿಂದುಕ, ವಿಡಾಲಪದಕ, ಷೋಡಶಿಕಾ, ಕರಮಧ್ಯ, ಹಂಸಪದ, ಸುವರ್ಣ, ಕವಲಗ್ರಹ, ಉದುಂಬರ.

ಅರ್ಧಪಲ = 2 ಕರ್ಷ } ಶುಕ್ತಿ, ಅಷ್ಟಮಿಕಾ.

ಪಲ = ಮುಷ್ಟಿ, ಆಮ್ರ, ಚತುರ್ಥಿಕಾ, ಪ್ರಕುಂಚ, ಷೋಡಶೀ, ಬಿಲ್ವ.

2 ಪಲ = ಪ್ರಸೃತಿ, ಪ್ರಸ್ಥಕ.

2 ಪ್ರಸೃತಿ = ಅಂಜಲಿ, ಕುಡವ, ಅರ್ಧಶರಾವಕ, ಅಷ್ಟಮಾನ.

2 ಕುಡವ = ಮಾನಿಕಾ, ಶರಾವ, ಅಷ್ಟಪಲ.

2 ಶರಾವ = ಪ್ರಸ್ಥ,

4 ಪ್ರಸ್ಥ = ಆಢಕ, ಭಾಜನ, ಕಾಂಸಪಾತ್ರ, 64 ಪಲ.

4 ಆಢಕ = ದ್ರೋಣ, ಕಲಶ, ನಲ್ವಣ, ಅರ್ಮಣ, ಉನ್ಮಾನ, ಘಟ, ರಾಶಿ.

2 ದ್ರೋಣ = ಸೂರ್ಪ, ಕುಂಭ, 64 ಶರಾವಕ

2 ಸೂರ್ಪ = ದ್ರೋಣೀ, ವಾಹ, ಗೋಣಿ.

4 ದ್ರೋಣಿ = ಖಾರಿ, 4096 ಪಲ.

ಭಾರ = 2000 ಪಲ.

ತುಲಾ = 100 ಪಲ.

ಪರಾ ಇದಕ್ಕೆ ಆಧಾರವಾದ ಶ್ಲೋಕಗಳನ್ನು ಗ್ರಂಥವಿಸ್ತಾರದ ಭಯಕ್ಕಾಗಿ ಲೋಪಿಸಿಯದೆ

5. ಯವೋ ದ್ವಾದಶಭಿರ್ಗೌರಸರ್ಷಪೈಃ ಪ್ರೋಚ್ಯತೇ ಬುಧೈಃ ।
ಯವದ್ವಯೇನ ಗುಂಜಾ ಸ್ಯಾತ್ತ್ರಿಗುಂಜೋ ವಲ್ಲ ಉಚ್ಯತೇ ॥

ಕಾಳಿಂಗ ತೂಕ ಗಣನದ ಭೇದ

ಮಾಷೋ ಗುಂಜಾಭಿರಷ್ಟಾಭಿಃ ಸಪ್ತಭಿರ್ವಾ ಭವೇತ್ಕ್ವಚಿತ್ ।
ಸ್ಯಾಚ್ಚತುರ್ಮಾಷಕೈಃ ಶಾಣಃ ಸ ನಿಷ್ಕಷ್ಟಂಕ ಏವ ಚ ॥
ಗದ್ಯಾಣೋ ಮಾಷಕೈಃ ಷಡ್ಭಿಃ ಕರ್ಷ ಸ್ಯಾದ್ದಶಮಾಷಕಃ । (ಶಾ. 8)

12 ಬಿಳೇ ಸಾಸಿವ = 1 ಯವೆ, 2 ಯವೆ = 1 ಗುಂಜಾ, 3 ಗುಂಜಾ = 1 ವಲ್ಲ, 8 ಗುಂಜಾ, ಅಥವಾ ಕೆಲವು ಸಂಗತಿಯಲ್ಲಿ 7, = 1 ಮಾಷ, 4 ಮಾಷ = ಶಾಣ, ಅಥವಾ ನಿಷ್ಕ, ಅಥವಾ ಟಂಕ, 6 ಮಾಷ = 1 ಗದ್ಯಾಣ, 10 ಮಾಷ = 1 ಕರ್ಷ.

6. ಮಾಷಸ್ತು ಪಂಚಭಿಃ ಷಡ್ಭಿಸ್ತಥಾ ಸಪ್ತಭಿರಷ್ಟಭಿಃ ।
ದಶಭಿರ್ದ್ವಾದಶಭಿಶ್ಚ ರಕ್ತಿಭಿಃ ಷಡ್ವಿಧೋ ಮತಃ ॥

ತೂಕದ ವಿಚಾರದಲ್ಲಿ ಮತಭೇದ

ಚರಕಸ್ಯ ಹಿ ಮಾಷಸ್ತು ದಶಗುಂಜಾಭಿರೇವ ಚ ।
ಚರಕಸ್ಯ ತು ಚಾರ್ಧೇನ ಸುಶ್ರುತಸ್ಯ ತು ಮಾಷಕಃ ॥ (ಭೈ. ರ.)

1 ಮಾಷಕ್ಕೆ 5–6–7–8–10–12 ಗುಂಜಾ ಎಂತ ಆರು ಮತ ಉಂಟು. ಚರಕನ ಮತದಲ್ಲಿ ಮಾಷಕ್ಕೆ 10 ಗುಂಜಾ ಮತ್ತು ಸುಶ್ರುತನ ಪ್ರಕಾರ ಚರಕನ ಮಾಷದ ಅರ್ಧಕ್ಕೆನೇ ಮಾಷ.

ಸರಾ ಮಾಗಧಮಾನದಲ್ಲಿ ಕಾಲು ಪಲವಾದ ಕರ್ಷಕ್ಕೆ 32 ಸಾಸಿವೆಗಳ ಗುಂಜಾ 96 ಆಗುತ್ತದೆ, ಮತ್ತು ಕಲಿಂಗಮಾನದಲ್ಲಿ 24 ಸಾಸಿವೆಗಳ 70 ಯಾ 80 ಗುಂಜಾ ಈಗ, ಗುಂಜಾ ಎಂಬದು ಹಾಗತೂಕ 120¼ ಹಾಗ ತೂಕಕ್ಕೆ 180 ಗ್ರೈನ ಭಾರವುಳ್ಳ ಒಂದು ತೊಲೆಯಾದ್ದರಿಂದ, ಸಾಧಾರಣವಾಗಿ 1 ಗುಂಜೆಯು 1½ ಗ್ರೈನ ಆಗುತ್ತದೆ ಈ ಗುಂಜೆಯ ಭಾರಕ್ಕೆ ಮಾಗಧಮಾನದಲ್ಲಿ ಹೇಳಿದ ಪ್ರಕಾರ 32 ಸಾಸಿವೆಗಳು ಹಿಡಿಯುತ್ತವೆ ಈ ಲೆಕ್ಕದಲ್ಲಿ, 1 ಮಾಗಧ ಪಲಕ್ಕೆ 9 ಗ್ರೈನ ಕಡಿಮೆ 3¼ ತೊಲೆಯಾಗುತ್ತದೆ 12 ಗುಂಜಾದ ಮಾಷ ಉಂಟೆಂಬದು ಕಾಲಿಂಗ ಮಾನದ ಲೆಕ್ಕದಲ್ಲಿಯಾದರೆ, ಪಲಕ್ಕೆ 3 ತೊಲೆಯಾಗುವದು ಆದರೆ 12 ಗುಂಜಯಂಬದು 18 ಗ್ರೈನ ಮತ್ತು 16 ಮಾಷಕ್ಕೆ 1 ಕರ್ಷ ಎಂತ ಮಾಗಧಮಾನರೀತ್ಯಾ ಎಣಿಸಿದರೆ, 1 ಪಲಕ್ಕೆ 8 ತೊಲೆಯಾಗುವದು ಚರಕನ ಮತದಲ್ಲಿ 8 ಸಾಸಿವೆಗೆ=1 ಅಕ್ಕಿ, 2 ಅಕ್ಕಿಗೆ, 1 ಉದ್ದು, 2 ಉದ್ದಿಗೆ, 1 ಯವೆ, 16 ಯವೆಗೆ, 1 ಮಾಷ, 12 ಮಾಷಕ್ಕೆ, 1 ಕರ್ಷ (ಚ 863) ಈ ಲೆಕ್ಕದಲ್ಲಿ ಪಲವು 8 ತೊಲೆ 22 ಗ್ರೈನ ಆಗುತ್ತದೆ ಹೀಗೆ ಮತಭೇದಗಳು ಇರುವದರಿಂದ ಕೆಲವರು ಪಲಕ್ಕೆ 4 ತೊಲೆಯಂತೆಯೂ ಕೆಲವರು ಪಲಕ್ಕೆ 6 ತೊಲೆಯಂತೆಯೂ, ಕೆಲವರು ಪಲಕ್ಕೆ 8 ತೊಲೆಯಂತೆಯೂ, ವೈದ್ಯರು ಉಪಯೋಗಿಸುತ್ತಾ ಬರುತ್ತಾರಾಗಿ ಕಾಣುತ್ತದೆ ಆದರೆ 3 ತೊಲೆಯ ಪಲವು ಈಗಲೂ ಮದ್ರಾಸ್ ಮುಂತಾದ ಪ್ರಾಂತದಲ್ಲಿ ಜಾರಿಯಿರುತ್ತದೆ, ಈ ಪಲವೇ ಮಧ್ಯಮ ಬಲದ ಮನುಷ್ಯನಿಗೆ ಯೋಗ್ಯವಾದ್ದೆಂತ ಈ ಕೆಳಗಿನ ಶ್ಲೋಕದಿಂದ ಕಾಣುತ್ತದ

7 ಪಲತೂಕದ ನಿರ್ಣಯ

ಪಲಂ ತು ತ್ರಿವಿಧಂ ಹ್ಯಷ್ಟದಶದ್ವಾದಶನಿಷ್ಕಕೈಃ ।
ಹೀನಮಧ್ಯೋತ್ತಮಬಲವತಾಂ ಯುಕ್ತ್ಯಾ ಯಥಾಕ್ರಮಂ ॥
(ವೈ. ಸಾ. ಸಂ 118.)

ಪಲ ಎಂಬದು 3 ವಿಧ 8 ವರಹತೂಕದ್ದು 1, 10 ವರಹತೂಕದ್ದು 1, 12 ವರಹ ತೂಕದ್ದು 1. ಇವು ಯಥಾಕ್ರಮವಾಗಿ ಹೀನ, ಮಧ್ಯ, ಉತ್ತಮ, ಬಲದವರಿಗೆ ಉಪಯೋಗಿಸತಕ್ಕವಾಗಿರುತ್ತವೆ.

ಸರಾ ಇಲ್ಲಿ ರೂಢಿಯಾಗಿರುವ 54 ಗ್ರೈನಗಳ ವರಹತೂಕವೇ ಗ್ರಾಹ್ಯ ಕಾಲಿಂಗಮಾನದಲ್ಲಿಯೂ ಮಾಷಕ್ಕೆ 12 (ಸಣ್ಣ) ಗುಂಜಾ ಹಿಡಿದರೆ, ನಿಷ್ಕಕ್ಕೆ 54 ಗ್ರೈನ ಆಗುತ್ತದೆ

8. ದೋಷಬಲಾದಿಗಳ ಮೇಲೆ ಮಾತ್ರೆಯ ನಿರ್ಣಯ

ಸ್ಥಿತಿರ್ನಾಸ್ತ್ಯೇವ ಮಾತ್ರಾಯಾಃ ಕಾಲಮಗ್ನಿವಯೋಬಲಂ ।
ಪ್ರಕೃತಿಂ ದೋಷದೇಶೌ ಚ ದೃಷ್ಟ್ವಾ ಮಾತ್ರಾಂ ಪ್ರಕಲ್ಪಯೇತ್ ॥
(ಶಾ. 4.)

ಮಾತ್ರೆಯನ್ನು, ಅಂದರೆ ಒಂದೊಂದು ಸರ್ತಿ ಕೊಡತಕ್ಕ ಔಷಧದ ತೂಕ ಅಥವಾ ಅಳತೆ ಪರಿಮಾಣವನ್ನು, ಕಾಲ, ದೇಶ, ರೋಗಿಯ ಅಗ್ನಿ, ಬಲ, ವಯಸ್ಸು, ಮತ್ತು ಪ್ರಕೃತಿ ಮತ್ತು ದೋಷ, ಇವುಗಳನ್ನು ನೋಡಿಕೊಂಡು ನಿಶ್ಚಯಿಸಬೇಕಲ್ಲದೆ, ಅದಕ್ಕೆ ಸ್ಥಿರವಾದ ಸ್ಥಾನವಿರುವದೇ ಇಲ್ಲ.

ಸರಾ ಈ ಕೆಳಗೆ ಕಷಾಯಾದಿಗಳ ನಿಯಮಗಳಲ್ಲಿ ಹೇಳುವ ಔಷಧತೂಕಗಳನ್ನು ಸಾಧಾರಣವಾಗಿ ವರಮಾವಧಿಯಂತ ತಿಳಿಯಬಹುದು

9. ಪಾನೀಯಂ ಷೋಡಶಗುಣಂ ಕ್ವುಣ್ಣೇ ದ್ರವ್ಯಪಲೇ ಕ್ಷಿಪೇತ್ ।
ಮೃತ್ಪಾತ್ರೇ ಕ್ವಾಥಯೇದ್ಯಾಮ್ಯಮಷ್ಟಮಾಂಶಾವಶೇಷಿತಂ ॥
ತಜ್ಜಲಂ ಪಾಯಯೇದ್ಧೀಮಾನ್ ಕೋಷ್ಣಂ ಮೃದ್ವಗ್ನಿಸಾಧಿತಂ ।
ಶೃತಃ ಕ್ವಾಥಃ ಕಷಾಯಶ್ಚ ನಿರ್ಯೂಹಃ ಸ ನಿಗದ್ಯತೇ ॥
ಆಹಾರರಸಪಾಕೇ ಚ ಸಂಜಾತೇ ದ್ವಿಪಲೋನ್ಮಿತಂ ।
ವೃದ್ಧವೈದ್ಯೋಪದೇಶೇನ ಪಿಬೇತ್ಕ್ವಾಥಂ ಸುಪಾಚಿತಂ ॥ (ಶಾ. 41.)

ಶೃತಕಷಾಯದ ಕ್ರಮ

ಒಂದು ಪಲ ಕಷಾಯ ದ್ರವ್ಯವನ್ನು (ಕುಟ್ಟಿ) ಪುಡಿಮಾಡಿ, ಮಣ್ಣಿನ ಗಡಿಗೆಯಲ್ಲಿ ಹಾಕಿ, ಅದಕ್ಕೆ 16 ಪಾಲು (4 ಕುಡ್ತೆ) ನೀರು ಹೊಯಿದು, ಸಣ್ಣ ಉರಿಯಿಂದ ಕುದಿಸಿ, ನೀರು ಬತ್ತಿ ಅರ್ಧ ಕುಡ್ತೆಗೆ ಇಳಿದ ಕೂಡಲೇ, ಪಾತ್ರೆಯನ್ನು ಒಲೆಯಿಂದ ಕೆಳಗೆ ಇರಿಸಿ, ಶೋಧಿಸಿದ ಆ ನೀರನ್ನು ಅಲ್ಪವಾಗಿ ಬಿಸಿಯಿರುವಾಗ್ಗೆ, ರೋಗಿಯ ಆಹಾರವು ಜೀರ್ಣವಾದ ಕಾಲ ನೋಡಿ ಕೊಂಡು, ಕುಡಿಸಬೇಕು. ಆ ನೀರಿಗೆ ಶೃತ ಎಂತಲೂ, ಕ್ವಾಥ ಎಂತಲೂ, ಕಷಾಯ ಎಂತ ಲೂ, ನಿರ್ಯೂಹ ಎಂತಲೂ, ಹೇಳುತ್ತಾರೆ.

10. ತತ್ರಾನ್ಯತಮಪರಿಮಾಣಸಮ್ಮಿತಾನಾಂ ಯಥಾಯೋಗಂ ತ್ವಕ್ಪತ್ರಮೂ
ಲಾದೀನಾಮಾತಪಪರಿಶೋಷಿತಾನಾಂ ಛೇದ್ಯಾನಿ ಖಂಡಶಶ್ಛೇದಯಿ
ತ್ವಾ ಭೇದ್ಯಾನ್ಯಣುಶೋ ಭೇದಯಿತ್ವಾವಕುಟ್ಯಾಷ್ಟಗುಣೇನ ಷೋಡಶ
ಗುಣೇನ ವಾಂಭಸಾಭಿಷಿಚ್ಯ ಸ್ವಾಲ್ಯಾಂ ಚತುರ್ಭಾಗಾವಶಿಷ್ಟಂ
ಕ್ವಾಥಯಿತ್ವಾಪಹರೇದಿತ್ಯೇಷ ಕಷಾಯಪಾಕಕಲ್ಪಃ । (ಸು. 538.)

ಕಷಾಯಪಾಕದ ಸಾಮಾನ್ಯ ಕ್ರಮ

ಯೋಗ ಪ್ರಕಾರ ಚಕ್ಕೆ, ಎಲೆ, ಬೇರು, ಮುಂತಾದ ದ್ರವ್ಯಗಳನ್ನು, ಒಣಗಲು ಹಾಕ ಬೇಕಾದ ಸಂಗತಿಯಲ್ಲಿ, ಬಿಸಿಲಲ್ಲಿ ಒಣಗಿಸಿಕೊಂಡು, ತೂಕಮಾಡಿ, ಉಕ್ತಪರಿಮಾಣ ತೆಗೆದು ಕೊಂಡು, ಒಣಗಲು ಹಾಕಬೇಕಾದದ್ದರ ಬದಲಿಗೆ ಹಸಿಯನ್ನೇ ಕೂಡಿಸುವದಾದರೆ ಎರಡು ಪಾಲಷ್ಟು ಸೇರಿಸಿಕೊಂಡು, ತುಂಡುಮಾಡಲ್ಪಡಬೇಕಾದವುಗಳನ್ನು ಚಿಕ್ಕ ಚೂರುಗಳಾಗಿ ಕಡಿದು, ಪುಡಿಮಾಡಲ್ಪಡಬೇಕಾದವುಗಳನ್ನು ನುಣ್ಣಗಿನ ಚೂರ್ಣವಾಗುವಂತೆ ಜಜ್ಜಿ ಒಟ್ಟಾಗಿ ಕುಟ್ಟಿ, ಗಡಿಗೆಯಲ್ಲಿ ಹಾಕಿ, ಅದರ ಮೇಲೆ ಎಂಟು ಪಾಲೋ, ಹದಿನಾರು ಪಾಲೋ, ನೀರು ಹೊಯಿದು, ಆ ನೀರಿನ ಕಾಲು ಭಾಗ ಉಳಿಯುವ ವರೆಗೆ ಕುದಿಸಿ, ಗಡಿಗೆಯನ್ನು ಒಲೆ ಯಿಂದ ಕೆಳಗೆ ಇಳಿಸಬೇಕು. ಇದು ಕಷಾಯಪಾಕದ ಕ್ರಮವಾಗಿರುತ್ತದೆ.

ಕ್ವಾಥಂ ದ್ರವ್ಯಪಲೇ ಕುರ್ಯಾತ್ ಪ್ರಸ್ಥಾರ್ಧಂ ಪಾದಶೇಷಿತಂ ।
(ವಾ. 432,)

ಕಷಾಯವನ್ನು ಒಂದು ಪಲ ಔಷಧಕ್ಕೆ 8 ಪಲದಷ್ಟು ನೀರಿಟ್ಟು, ಕಾಲು ಪಾಲಿಗೆ ಬತ್ತಿಸಿ ಮಾಡತಕ್ಕದ್ದಾಗಿರುತ್ತದೆ.

11. ಚತುರ್ಗುಣಂ ಮೃದುದ್ರವ್ಯೇ ಕರಿನೇಽಷ್ಟಗುಣಂ ಜಲಂ ।
ಮೃದ್ವಾದಿಕ್ವಾಥ್ಯಸಂಘಾತೇ ದದ್ಯಾದಷ್ಟಗುಣಂ ಪಯಃ ।

ಅತ್ಯಂತಕರಿನೇ ದ್ರವ್ಯೇ ನೀರಂ ಷೋಡಶಿಕಂ ಮತಂ ।

ದ್ರವ್ಯಭೇದದ ಮೇಲೆ ಕಷಾಯಕ್ಕೆ ನೀರು

ಕರ್ಷಾದಿತಃ ಪಲಂ ಯಾವತ್ ಕ್ಷಿಪೇತ್ ಷೋಡಶಿಕಂ ಜಲಂ ॥
ತದೂರ್ಧ್ವಂ ಕುಡವಂ ಯಾವದ್ದ್ವಿವೇದಷ್ಟಗುಣಂ ಪಯಃ ।
ಪ್ರಸ್ಥಾದಿತಃ ಕ್ಷಿಪೇನ್ನೀರಂ ಖಾರೀ ಯಾವಚ್ಚತುರ್ಗುಣಂ ॥

(ಭಾ. ಪ್ರ. 196.)

ಕಷಾಯ ದ್ರವ್ಯವು (ದ್ರಾಕ್ಷಿ, ಹಸೀ ಅಮೃತಬಳ್ಳಿ ಮುಂತಾದ) ಮೃದು ಜಾತಿದ್ದಾದರೆ, ನೀರು ನಾಲ್ಕು ಪಾಲಷ್ಟು ಇಡಬೇಕಾದದ್ದು. (ಒಣಗಿದ ಕಡೀರು, ಭದ್ರಮುಷ್ಟಿ, ಮುಂತಾದ) ಒಣಗಿದ ದ್ರವ್ಯವಾದರೆ, ನೀರನ್ನು ಎಂಟು ಪಾಲಷ್ಟು ಇಡಬೇಕು. ಬೇರೆ ಬೇರೆ ಜಾತಿಯವು ಕೂಡಿರುವದಾದರೂ, ಎಂಟು ಪಾಲಷ್ಟು ನೀರು ಹಾಕಬೇಕು. ದ್ರವ್ಯವು ಅತ್ಯಂತ ಕರಿಣ ಜಾತಿದ್ದು (ಬಹಳ ಒಣಗಿದ ಖದಿರೆತಿರಳು, ಗಂಧ, ದೇವದಾರ ಮುಂತಾದವು) ಆದರೆ, ಹದಿನಾರು ಪಾಲಷ್ಟು ನೀರು ಇಡಬೇಕೆಂಬದು ವಿಧಿ. ದ್ರವ್ಯದ ತೂಕವು ಕರ್ಷ ಹಿಡಿದು ಪಲದ ವರೆಗಿರುವಲ್ಲಿ, ನೀರು ಹದಿನಾರು ಪಾಲು ಅದಕ್ಕ ಮಿಕ್ಕಿ ನಾಲ್ಕು ಪಲದ ವರೆಗೆ ದ್ರವ್ಯ ಗಳಿಗೆ ನೀರು ಎಂಟು ಪಾಲಷ್ಟು. ದ್ರವ್ಯಗಳ ತೂಕವು ಒಂದು ಪ್ರಸ್ಥ (16 ಪಲ) ಮೊದಲು ಗೊಂಡು ಒಂದು ಖಾರಿ ವರೆಗಿರುವದಾದರೂ, ನೀರು ನಾಲ್ಕು ಪಾಲಷ್ಟು ಇಟ್ಟರೆ ಸಾಕು.

ಕರ್ಷಾದೌ ತು ಪಲಂ ಯಾವದ್ದದ್ಯಾದ್ದಶಗುಣಂ ಜಲಂ ।

(ಚಿ. ಸಾ. ಸಂ. 375.)

ಔಷಧದ ತೂಕವು ಒಂದು ಕರ್ಷ ಆದಿಯಾಗಿ ಒಂದು ಪಲದ ವರೆಗಿರುವ ಸಂಗತಿಯಲ್ಲಿ, ನೀರನ್ನು ಹತ್ತು ಪಾಲಷ್ಟು ಹಾಕಬೇಕು.

ಪರಾ ಪಾಶ್ಚಾತ್ಯರು ಕಷಾಯ ಹೇಳುವಲ್ಲಿ, ಔಷಧವು ಇಂತಿಷ್ಟು ಕಾಲ ಮರಳುವ ನೀರಲ್ಲಿರಬೇಕೆಂತ ಬೇರೆ ಬೇರೆ ಔಷಧಕ್ಕೆ ಬೇರೆ ಬೇರೆ ಕಾಲ ಹೇಳುವದರ ಪ್ರಯೋಜನಾರ್ಥವೇ, ಕಷಾಯಕ್ಕೆ ನೀರನ್ನು ಇಂತಿಷ್ಟೇ ಇಡಬೇಕೆಂಬ ವಿಚಾರವು ಆಯುರ್ವೇದದಲ್ಲಿ ಮಾಡೋಣಾಗಿದೆ ಎಂಬದು ಸ್ಪಷ್ಟ

12. ಮಾತ್ರೋತ್ತಮಾ ಪಲೇನ ಸ್ಯಾತ್ ತ್ರಿಭಿಶ್ಚಾಕ್ಷೈಶ್ಚ ಮಧ್ಯಮಾ ।
ಜಘನ್ಯಾ ಸ್ಯಾತ್ಪಲಾರ್ಧೇನ ಸ್ನೇಹಕ್ವಾಥೌಷಧೇಷು ಚ ॥
ಕ್ವಾಥದ್ರವ್ಯಪಲೇ ವಾರಿ ದ್ವಿರಷ್ಟಗುಣಮಿಷ್ಯತೇ ।
ಚತುರ್ಭಾಗಾವಶಿಷ್ಟಂ ತು ಪೇಯಂ ಪಲಚತುಷ್ಟಯಂ ॥

ಕಷಾಯದ ಮಾತ್ರೆ

ದೀಪ್ತಾನಲಂ ಮಹಾಕಾಯಂ ದಾಪಯೇದಂಜಲಿಂ ಜಲಂ ।
ಅನ್ಯೇ ತ್ವರ್ಧಂ ಪರಿತ್ಯಜ್ಯ ಪ್ರಸೃತಿಂ ತು ಚಿಕಿತ್ಸಕಾಃ ॥
ಕ್ವಾಥತ್ಯಾಗಮನಿಚ್ಛಂತಸ್ತ್ವಷ್ಟಭಾಗಾವಶೇಷಿತಂ ।
ಪಾರಂಪರ್ಯೋಪದೇಶೇನ ವೃದ್ಧವೈದ್ಯಾಃ ಪಲದ್ವಯಂ ॥

(ಚಿ. ಸಾ ಸಂ. 19.)

ತೈಲದ ಮತ್ತು ಕಷಾಯೌಷಧಗಳ ಮಾತ್ರೆಯು, ಉತ್ತಮ ಪಕ್ಷ ಒಂದು ಪಲ, ಮಧ್ಯಮ ಪಕ್ಷ ಮುಕ್ಕಾಲು ಪಲ, ಮತ್ತು ಹೀನ ಪಕ್ಷ ಅರ್ಧ ಪಲವಾಗಿರುತ್ತದೆ. ಒಂದು ಪಲ ಔಷ

ಧಕ್ಕೆ ಹದಿನಾರು ಪಾಲು ನೀರು ಇಟ್ಟು, ಕಾಲಂಶಕ್ಕೆ ಬತ್ತಿಸಿ, ಶೋಧಿಸಿದ ನಾಲ್ಕು ಪಲವನ್ನು ಅಗ್ನಿ ಚುರುಕುಳ್ಳ ಮತ್ತು ದೊಡ್ಡ ಶರೀರವುಳ್ಳ ರೋಗಿಗೆ ಕೊಡತಕ್ಕದ್ದು, ಇತರರಿಗೆ ಅರ್ಧವನ್ನು ಉಳಿಸಿ ಅರ್ಧ ಕುಡುತೆಯನ್ನೇ ಕೊಡಬೇಕು. ಕಷಾಯಕ್ಕೆ ಅಸಹ್ಯ ಪಡುವ ರೋಗಿಗೆ ಕಷಾಯವನ್ನು ಅಷ್ಟಾವಶೇಷವಾಗಿ ಬತ್ತಿಸಿ, ಅರ್ಧ ಕುಡುತೆಯನ್ನು ವೃದ್ಧ ವೈದ್ಯರು, ಪಾರಂಪರ್ಯೋಪದೇಶ ಪ್ರಕಾರ ಕೊಡುತ್ತಾರೆ.

13. ನವಾನ್ಯೇವ ಹಿ ಯೋಜ್ಯಾನಿ ದ್ರವ್ಯಾಣ್ಯಖಿಲಕರ್ಮಸು ।
ದ್ರವ್ಯಗಳಲ್ಲಿ ಯಾವದು ಹಳೇದು ಯಾವದು ಹೊಸತು ಆಗಬೇಕೆಂಬದು
ಏನಾ ವಿಡಂಗಕೃಷ್ಣಾಭ್ಯಾಂ ಗುಡಧಾನ್ಯಾಜ್ಯಮಾಕ್ಷಿಕೈಃ ॥
(ಭಾ ಪ್ರ. 69.)

ಎಲ್ಲಾ ಕೆಲಸಗಳಲ್ಲಿಯೂ ಔಷಧಗಳು ಹೊಸದಾದವುಗಳೇ ಉಪಯೋಗಿಸಲ್ಪಡಬೇಕು. ಆದರೆ ವಾಯುವಿಳಂಗ, ಹಿಪ್ಪಲಿ, ಬೆಲ್ಲ, ಆಹಾರಧಾನ್ಯ, ತುಪ್ಪ, ಮತ್ತು ಜೇನು ಹೊಸದಾಗಿರಬಾರದು.

ಪುರಾಣಂ ತು ಪ್ರಶಸ್ತಂ ಸ್ಯಾತ್ತಾಂಬೂಲಂ ಕಾಂಜಿಕಂ ತಥಾ ॥
(ಭಾ. ಪ್ರ. 69.)

ವೀಳ್ಯದೆಲೆಯು ಹಳೇ ಬಳ್ಳಿದು ಪ್ರಶಸ್ತ, ಹಾಗೆಯೇ ಹುಳಿಗಂಜಿ (ಅನ್ನ ಬಸಿದ ನೀರು) ಹಳೇದು ಒಳ್ಳೇದು.

ಪುರಾಣಾಃ ಸ್ಯುರ್ಗುಣೈರ್ಯುಕ್ತಾ ಆಸವಾ ಧಾತವೋ ರಸಾಃ । (ನಿ. ರ.)

ಆಸವಗಳು, ಲೋಹಗಳು ಮತ್ತು (ಪಾದರಸಾದಿ) ರಸಗಳು ಹಳೇಯವಾದರೆ, ಅವುಗಳಲ್ಲಿ ಗುಣಗಳು ಹೆಚ್ಚಿರುವವು.

14. ಶುಷ್ಕಂ ನವೀನಂ ಯದ್ದ್ರವ್ಯಂ ಯೋಜ್ಯಂ ಸಕಲಕರ್ಮಸು ।
ದ್ರವ್ಯಗಳು ಹಸಿಯಾದಲ್ಲಿ ದ್ವಿಗುಣ ಮಾಡಬೇಕಾದ್ದು
ಆರ್ದ್ರಂ ಚ ದ್ವಿಗುಣಂ ಯುಂಜ್ಯಾತ್ ಏಷ ಸರ್ವತ್ರ ನಿಶ್ಚಯಃ ॥
(ಶಾ. 4.)

ಎಲ್ಲಾ ಕೆಲಸಗಳಲ್ಲಿ ಹೊಸತಾಗಿಯೂ ಒಣಗಿದ್ದಾಗಿಯೂ ಇರುವ ಔಷಧವು ಉಪಯೋಗಿಸಲ್ಪಡಬೇಕು, ಅದು ಒಣಗದೆ ಹಸಿಯಾಗಿದ್ದರೆ, ಅದನ್ನು ತೂಕದಲ್ಲಿ ಎರಡು ಪಾಲಷ್ಟು ಕೂಡಿಸಿಕೊಳ್ಳಬೇಕು. ಇದು ಸರ್ವತ್ರ ನಿಶ್ಚಯ.

15. ಗುಡೂಚೀ ಕುಟಜೋ ವಾಸಾ ಕೂಷ್ಮಾಂಡಶ್ಚ ಶತಾವರೀ ।
ಅಶ್ವಗಂಧಾ ಸಹಚರೀ ಶತಪುಷ್ಪಾ ಪ್ರಸಾರಿಣೀ ॥
ಹಸಿಯಾಗಿಯೇ ಉಪಯೋಗಿಸಬೇಕಾದ ದ್ರವ್ಯಗಳು
ಪ್ರಯೋಕ್ತವ್ಯಾ ಸದೈವಾರ್ದ್ರಾ ದ್ವಿಗುಣಾ ನೈವ ಕಾರಯೇತ್ ।
(ಶಾ. 4.)

ಅಮೃತಬಳ್ಳಿ, ಕೊಡಸಿಗ, ಆಡುಸೋಗೆ, ಬೂದಿಕುಂಬಳ, ಶತಾವರಿ (ಹಲವುಮಕ್ಕಳ ತಾಯಿ), ಅಶ್ವಗಂಧ (ಹಿರೇಮದ್ದು), ಅರಸಿನ ಗೋರಟೆ, ಸಬ್ಬಸಿಗೆ (ಸತಾಪೆ), ಪ್ರಸಾರಿಣೀ, ಇವು ಯಾವಾಗಲೂ ಹಸಿಯಾಗಿಯೇ ಉಪಯೋಗಿಸಲ್ಪಡತಕ್ಕವಾದ್ದರಿಂದ, ಅವುಗಳನ್ನು ಹಿಂದಿನ ಸೂತ್ರ ಪ್ರಕಾರ ದುಬಾರೆಯಾಗಿ ಕೂಡಿಸಬಾರದು.

ವಾಸಾ-ನಿಂಬ-ಪಟೋಲ-ಕೇತಕಿ-ಬಲಾ-ಕೂಷ್ಮಾಂಡಕೈಂದ್ರೀ-ವರೀ-
ವರ್ಷಾಭೂ-ಕುಟಜಾಶ್ವಗಂಧ-ಸಹಿತಾಸ್ತಾಃ ಪೂತಿಗಂಧಾಮೃತಾಃ ।
ಮಾಂಸಂ ನಾಗಬಲಾಕುರಂಟಕಪುರೋ ಹಿಂಗ್ವಾರ್ದ್ರಕೇ ನಿತ್ಯಶೋ
ಗ್ರಾಹ್ಯಾಸ್ತತ್‌ಕ್ಷಣಮೇವ ನ ದ್ವಿಗುಣಿತಾ ಯೇ ಚೇಕ್ಷುಜಾತಾ ಘನಾಃ ॥

ಆಡುಸೋಗೆ, ಕಹಿಬೇವು, ಕಹಿಪಡುವಲು, ಕೇದಗೆ, ಕಲ್ಲಂಗಡಲೆ (ಕಡೀರು), ಬೂದಿಕುಂಬಳಕಾಯಿ, ಹಾವುಮೆಕ್ಕೆ, ಶತಾವರಿ, ಪುನರ್ನವಿ, ಕೊಡಸಿಗ, ಅಶ್ವಗಂಧ, ಇಂಗಳದ ಮರ, ಅಮೃತಬಳ್ಳಿ, ಮಾಂಸ, ಆನೆಕಡೀರು, ಹಳದಿಗೋರಟೆ, ಗುಗ್ಗುಳ, ಹಿಂಗು, ಹಸೀ ಶುಂಠಿ, ಬೆಲ್ಲ, ಇವುಗಳು ಆಗಲೇ ಹಸಿಯಾಗಿಯೇ ಉಪಯೋಗಿಸಲ್ಪಡತಕ್ಕವು. ಅವುಗಳನ್ನು ದ್ವಿಗುಣ ಮಾಡಬಾರದು

ಷರಾ ಈ ಶ್ಲೋಕವು ಮೂರು ಗ್ರಂಥಗಳಲ್ಲಿ ಮೂರು ವಿಧವಾಗಿ ಕಾಣುತ್ತದೆ ಒಂದು ಪಾಠದಲ್ಲಿ ಅಶ್ವಗಂಧ ಬಿಟ್ಟು ಸುವರ್ಣಗಡ್ಡೆ, ಒಂದು ಪಾಠದಲ್ಲಿ ಮಾಂಸದ ಬದಲಿಗೆ ಜಟಾಮಾಂಸಿ, ಇತ್ಯಾದಿ ಭೇದಗಳು ಕಾಣುತ್ತವೆ ಪೂತಿಗಂಧ ಎಂದರೆ ಗಂಧಪ್ರಸಾರಿಣೀ ಎಂತ ಭಾ ಪ್ರ ದ ವ್ಯಾಖ್ಯಾನ ಉಂಟು ಆ ಶಬ್ದವು ಗಂಧಕಕ್ಕೂ ಇಂಗುವೀ ವೃಕ್ಷಕ್ಕೂ ಬರುತ್ತದಾಗಿ ಶಾಲಿಗ್ರಾಮೌಷಧಶಬ್ದಸಾಗರ ಹೇಳುತ್ತದೆ

16. ಚೂರ್ಣಸ್ನೇಹಾಸವಾಲೇಹಾಃ ಪ್ರಾಯಶಶ್ಚಂದನಾನ್ವಿತಾಃ ।
'ಚಂದನ' ಎಂಬದಕ್ಕೆ ಅರ್ಥಭೇದ ಕಷಾಯಲೇಪಯೋಃ ಪ್ರಾಯೋ ಯುಜ್ಯತೇ ರಕ್ತಚಂದನಂ ॥ (ಶಾ. 5.)

ಚೂರ್ಣ, ಸ್ನೇಹ, ಆಸವ, ಲೇಹ, ಇವುಗಳಲ್ಲಿ ಚಂದನವೆಂಬದು ಹೆಚ್ಚಾಗಿ ಶ್ರೀಗಂಧ; ಕಷಾಯ ಲೇಪಗಳಿಗೆ ಚಂದನ ಎಂಬಲ್ಲಿ ಹೆಚ್ಚಾಗಿ ರಕ್ತಚಂದನವು ಕೂಡಿಸಲ್ಪಡುತ್ತದೆ.

17. ಕ್ವಾಥೇ ಕ್ಷಿಪೇತ್ಸಿತಾಮಂಶೈಶ್ಚತುರ್ಥಾಷ್ಟಮಷೋಡಶೈಃ ।
ಕಷಾಯಕ್ಕೆ ಪ್ರಕ್ಷೇಪಗಳು ವಾತಪಿತ್ತಕಫಾತಂಕೇ ವಿಪರೀತಂ ಮಧು ಸ್ಮೃತಂ ॥ (ಶಾ. 41.)

ಕಷಾಯಕ್ಕೆ ಸಕ್ಕರೆಯನ್ನು ಮೇಲ್ಪ್ರಡಿಯಾಗಿ ಹಾಕುವದಾದರೆ, ವಾತದೋಷದಲ್ಲಿ (ಔಷಧದ) ಕಾಲಂಶ, ಪಿತ್ತದೋಷದಲ್ಲಿ ಎಂಟನೆ ಒಂದಂಶ, ಕಫದ ದೋಷದಲ್ಲಿ ಹದಿನಾರನೆ ಒಂದು ಅಂಶ ಪ್ರಕಾರ, ಕೂಡಿಸತಕ್ಕದ್ದು. ಜೇನು ಮೇಲ್ಪ್ರಡಿಯಾದರೆ, ವಾತದಲ್ಲಿ ಹದಿನಾರನೆ ಒಂದು ಅಂಶ, ಪಿತ್ತದಲ್ಲಿ ಎಂಟನೆ ಒಂದು ಅಂಶ, ಕಫದಲ್ಲಿ ಕಾಲಂಶ ಪ್ರಕಾರ ಕೂಡಿಸ ಬೇಕಾದ್ದಾಗಿರುತ್ತದೆ.

ಜೀರಕಂ ಗುಗ್ಗುಲುಂ ಕ್ಷಾರಂ ಲವಣಂ ಚ ಶಿಲಾಜತು ।
ಹಿಂಗು ತ್ರಿಕಟುಕಂ ಚೈವ ಕ್ವಾಥೇ ಶಾಣೋನ್ಮಿತಂ ಕ್ಷಿಪೇತ್ ॥

ಕ್ಷೀರಂ ಘೃತಂ ಗುಡಂ ತೈಲಂ ಮೂತ್ರಂ ಚಾನ್ಯದ್ರವಂ ತಥಾ ।
ಕಲ್ಕಂ ಚೂರ್ಣಾದಿಕಂ ಕ್ವಾಥೇ ನಿಕ್ಷಿಪೇತ್ಕರ್ಷಸಮ್ಮಿತಂ ॥ (ಶಾ. 41.)

ಕಷಾಯಕ್ಕೆ ಜೀರಿಗೆ, ಗುಗ್ಗುಳ, ಕ್ಷಾರ, ಉಪ್ಪು, ಶಿಲಾಜಿತು, ಹಿಂಗು, ತ್ರಿಕಟು, ಇವುಗಳ ಚೂರ್ಣವನ್ನು ಮೇಲ್ಪುಡಿಯಾಗಿ ಕೂಡಿಸುವ ಸಂಗತಿಯಲ್ಲಿ, ಅದಕ್ಕೆ ಪರಿಮಾಣ ಒಂದು ಶಾಣ (ಅರ್ಧಕಳಂಜ). ಹಾಲನ್ನಾಗಲಿ, ತುಪ್ಪವನ್ನಾಗಲಿ, ಬೆಲ್ಲವನ್ನಾಗಲಿ, ತೈಲವನ್ನಾಗಲಿ, ಮೂತ್ರವನ್ನಾಗಲಿ, ಬೇರೆ ದ್ರವಪದಾರ್ಥವನ್ನಾಗಲಿ, ಕಲ್ಕವನ್ನಾಗಲಿ, ಚೂರ್ಣಾದಿಗಳನ್ನಾಗಲಿ, ಕೂಡಿಸುವದಾದರೆ, ಕಾಲು ಪಲದಷ್ಟು ಹಾಕತಕ್ಕದ್ದು.

18. ಕ್ಷುಣ್ಣೇ ದ್ರವ್ಯಪಲೇ ಸಮ್ಯಕ್ ಜಲಮುಷ್ಣಂ ವಿನಿಕ್ಷಿಪೇತ್ ।
ಘಾಂಟ ಕಷಾಯದ ಕ್ರಮ ಮೃತ್ಪಾತ್ರೇ ಕುಡವೋನ್ಮಾನಂ ತತಸ್ತು ಸ್ರಾವಯೇತ್ಪಟಾತ್ ॥
ಸಃ ಸ್ಯಾಚ್ಚೂರ್ಣದ್ರವಃ ಘಾಂಟಸ್ತನ್ಮಾನಂ ದ್ವಿಪಲೋನ್ಮಿತಂ ।
ಮಧುಸಿತಾಗುಡಾದೀಂಶ್ಚ ಕ್ವಾಥವತ್ತತ್ರ ನಿಕ್ಷಿಪೇತ್ ॥ (ಶಾ. 55.)

ಒಂದು ಪಲ ದ್ರವ್ಯವನ್ನು ಕುಟ್ಟಿ, ಚೂರ್ಣಮಾಡಿ, ಮಣ್ಣಿನ ಪಾತ್ರೆಯಲ್ಲಿಟ್ಟು, ಅದಕ್ಕೆ ಒಂದು ಕುಡುತೆ ಕುದಿಯುವ ನೀರನ್ನು ಹಾಕಿ, ಸ್ವಲ್ಪ ಹೊತ್ತು ಇಟ್ಟು, ವಸ್ತ್ರದಿಂದ ಶೋಧಿಸಿ ತೆಗೆದ ಚೂರ್ಣದ ರಸಕ್ಕೆ ಘಾಂಟ ಎನ್ನುತ್ತಾರೆ. ಅದರ ಮಾತ್ರೆ ಅರ್ಧ ಕುಡುತೆ. ಅದಕ್ಕೆ ಜೇನು, ಸಕ್ಕರೆ, ಬೆಲ್ಲ, ಮುಂತಾದ ಪ್ರಕ್ಷೇಪವನ್ನು ಶೃತಕಷಾಯಕ್ಕೆ ಹೇಳಿದ ಕ್ರಮದಲ್ಲಿ ಕೂಡಿಸತಕ್ಕದ್ದು.

19. ಕ್ಷುಣ್ಣಂ ದ್ರವ್ಯಪಲಂ ಸಮ್ಯಕ್ ಷಡ್ಭಿರ್ನೀರಪಲೈಃ ಪ್ಲುತಂ ।
ಶೀತ ಕಷಾಯದ ನಿಶೋಷಿತಂ ಹಿಮಃ ಸಃ ಸ್ಯಾತ್ತದ್ವಾ ಶೀತಕಷಾಯಕಃ ॥
ಕ್ರಮ ತನ್ಮಾನಂ ಘಾಂಟವಜ್ಜ್ಞೇಯಂ ಸರ್ವತ್ರೈವೈಷ ನಿಶ್ಚಯಃ । (ಶಾ. 56.)

ಒಂದು ಪಲ ದ್ರವ್ಯವನ್ನು ಚೂರ್ಣಮಾಡಿ, ಅದಕ್ಕೆ ಆರು ಪಲ (ಒಂದೂವರೆ ಕುಡುತೆ) ನೀರು ಹಾಕಿ, ಕದಡಿ, ಒಂದು ರಾತ್ರಿಕಾಲ (ಅಥವಾ ಒಂದು ಹಗಲು) ಇರಿಸಿ, ಬೆಳಿಗ್ಗೆ ಶೋಧಿಸಿ ತೆಗೆದ ರಸವು ಹಿಮ ಎನ್ನಿಸಿಕೊಳ್ಳುತ್ತದೆ. ಅದಕ್ಕ ಶೀತಕಷಾಯವೆಂತಲೂ ಹೇಳುತ್ತಾರೆ. ಅದರ ಮಾತ್ರೆಯು ಯಾವಾಗಲೂ ಘಾಂಟಕಷಾಯದಂತೆಯೇ ಆಗಿರುತ್ತದೆಂಬದು ನಿಶ್ಚಯ.

20. ದ್ರವ್ಯಮಾರ್ದ್ರಂ ಶಿಲಾಪಿಷ್ಟಂ ಶುಷ್ಕಂ ವಾ ಸಜಲಂ ಪಿಬೇತ್ ।
ಪ್ರಕ್ಷೇಪಾಶ್ಚಾಪಿ ಕಲ್ಕಾಸ್ತೇ ತನ್ಮಾನಂ ಕರ್ಷಸಮ್ಮಿತಂ ॥
ಕಲ್ಕ ಕಷಾಯದ ಕ್ರಮ ಮತ್ತು ಅದಕ್ಕೆ ಪ್ರಕ್ಷೇಪ ಕಲ್ಕೇ ಮಧು ಘೃತಂ ತೈಲಂ ದೇಯಂ ದ್ವಿಗುಣಮಾತ್ರಯಾ ।
ಸಿತಾಂ ಗುಡಂ ಸಮಂ ದದ್ಯಾದ್ದ್ರವಾ ದೇಯಾಶ್ಚತುರ್ಗುಣಾಃ ॥
(ಶಾ. 57.)

ಹಸಿ ಔಷಧವನ್ನು, ಒಣಗಲಾದರೆ ಚೂರ್ಣಮಾಡಿ ನೀರು ಕೂಡಿಸಿಕೊಂಡು, ಕಲ್ಲಲ್ಲಿ ಅರೆದು, ಬೇಕಾದ ಪ್ರಕ್ಷೇಪ ಕೂಡಿಸಿಕೊಂಡು, ಕುಡಿಯುವದು. ಅದಕ್ಕೆ ಕಲ್ಕ ಕಷಾಯ ವೆಂತ ಹೆಸರು. ಕಲ್ಕಕ್ಕೆ ಜೇನನ್ನಾಗಲಿ, ತುಪ್ಪವನ್ನಾಗಲಿ, ತೈಲವನ್ನಾಗಲಿ, ಕೂಡಿಸುವ ದಾದರೆ, ಎರಡು ಪಾಲಷ್ಟು ಹಾಕಬೇಕು. ಸಕ್ಕರೆಯನ್ನು ಅಥವಾ ಬೆಲ್ಲವನ್ನು ಕೂಡಿಸುವ ಸಂಗತಿಯಲ್ಲಿ ಸರಿಪಾಲು ಮತ್ತು ದ್ರವಪದಾರ್ಥ ಸೇರಿಸುವಲ್ಲಿ ನಾಲ್ಕು ಪಾಲಷ್ಟು ಕೂಡಿಸ ತಕ್ಕದ್ದು. ಕಲ್ಕದ ಮಾತ್ರೆ ಕಾಲು ಪಲ.

ಪರಾ ಚೂರ್ಣೋದಕಸ್ಥಿತಃ (ವಾ 431) —ಅಂದರೆ ನೀರು ಕೂಡಿಸದ ಪುಡಿಗೆ ಚೂರ್ಣವೆಂತ ಹೆಸರು

ಪೇಷ್ಯಸ್ಯ ಕರ್ಷಮಾಲೋಡ್ಯಂ ತದ್ದ್ರವಸ್ಯ ಪಲತ್ರಯೇ | (ವಾ. 432.)

ಕಾಲು ಪಲ ಔಷಧವನ್ನು ಅರೆದು ನುಣ್ಣಗೆ ಪುಡಿಮಾಡಿ ಮೂರು ಪಲ ದ್ರವಪದಾರ್ಥ ದಲ್ಲಿ ಕಲಸಿದ ಕಲ್ಕವು ಮಧ್ಯಮಾನ.

21. ಸದ್ಯಃಸಮುದ್ಧೃತಾತ್ಕ್ಷುಣ್ಣಾದ್ಯಃ ಸ್ರವೇತ್ಪಟಪೀಡಿತಾತ್ |
ಸ್ವರಸಕಷಾಯದ ಕ್ರಮ ಮತ್ತು ಮಾತ್ರೆ ಸ್ವರಸಃ ಸ ಸಮುದ್ದಿಷ್ಟಃ | (ವಾ 431.)

ಆಗಲೇ ಸಂಗ್ರಹಿಸಿದ (ಹಸಿ) ಔಷಧವನ್ನು ಜಜ್ಜಿ, ವಸ್ತ್ರದ ತುಂಡಿನಲ್ಲಿ ಹಾಕಿ, ಹಿಂಡಿ ದರೆ ಬರುವ ರಸಕ್ಕೆ ಸ್ವರಸವನ್ನುತ್ತಾರೆ.

ಸ್ವರಸಸ್ಯ ಗುರುತ್ವಾಚ್ಚ ಪಲಮರ್ಧಂ ಪ್ರಯೋಜಯೇತ್ | (ಶಾ 37)

ಸ್ವರಸವು ಗುರುವಾದ್ದರಿಂದ, ಸರ್ತಿಗೆ ಅದರಿಂದ ಅರ್ಧಪಲವನ್ನು ಪ್ರಯೋಗಿಸತಕ್ಕದ್ದು.

ಪರಾ ವಾಗ್ಭಟನ ಪ್ರಕಾರ (ಪು 432) "ಮಧ್ಯಂ ತು ಮಾನಂ ನಿರ್ದಿಷ್ಟಂ ಸ್ವರಸಸ್ಯ ಚತುಃಪಲಂ" ಸ್ವರಸದ ಮಧ್ಯ ಮಾನ ನಾಲ್ಕು ಪಲ ಎಂತ ಕಾಣುತ್ತದೆ ಆ ಪ್ರಕಾರ ಕೆಲವು ವೈದ್ಯರು ಒಂದೊಂದು ಕುಡುತೆ ರಸವನ್ನು ವಿಚಾರವಿಲ್ಲದೆ ಕುಡಿಸುವದುಂಟೆಂತ ಕಾಣುತ್ತದೆ ಕಚ್ಚಿನ ರಸ 1 ಕುಡುತೆ ಕುಡಿಯುವದರಿಂದ ಬಾಧಕ ಬರಲಾರದಾದರೂ, ಬೆಳ್ಳುಳ್ಳಿ ರಸ, ನುಗ್ಗೆರಸ, ಶುಂಠಿರಸ, ಇತ್ಯಾದಿ ತೀಕ್ಷ್ಣವಾದ ಸ್ವರಸದಲ್ಲಿ ಒಂದು ಕುಡುತೆಯಷ್ಟು ಕುಡಿಯುವದಕ್ಕೆ ಶಕ್ತರಾದ ರೋಗಿಗಳು ಬಹು ಮಂದಿ ಇರಲಾರರು ಶಾ ನ ಅರ್ಧ ಪಲದ ಮಾತ್ರೆಯೇ ಬಾ ಪ್ರ ದಲ್ಲಿಯೂ ಆಧರಿಸಲ್ಪಟ್ಟದೆ

22. ಮಧುಶ್ವೇತಾಗುಡಕ್ಷಾರಾನ್ ಜೀರಕಂ ಲವಣಂ ತಥಾ |
ಸ್ವರಸಕ್ಕೆ ಪ್ರಕ್ಷೇಪ ಘೃತಂ ತೈಲಂ ಚ ಚೂರ್ಣಾದೀನ್ ಕೋಲಮಾತ್ರಾನ್ ರಸೇ ಕ್ಷಿಪೇತ್ ||
(ಶಾ. 38.)

ಸ್ವರಸಕ್ಕೆ ಜೇನು, ಸಕ್ಕರ, ಬೆಲ್ಲ, ಕ್ಷಾರ, ಜೀರಿಗೆ ಪುಡಿ, ಸೈಂಧವಲವಣ, ತುಪ್ಪ, ತೈಲ, ಚೂರ್ಣ ಮುಂತಾದ್ದನ್ನು ಕೂಡಿಸುವದಾದರೆ, (ಒಂದೂವರೆ ಪಾವಲಿತೂಕ) ಅರ್ಧ ಕರ್ಷ ತೂಕ ಹಾಕಬೇಕು.

23. ಮಂಥೋಽಪಿ ಫಾಂಟಭೇದಃ ಸ್ಯಾತ್ತೇನ ಚಾತ್ರೈವ ಕಥ್ಯತೇ |
ಮಂಥದ ಕ್ರಮ ಮತ್ತು ಮಾತ್ರೆ ಜಲೇ ಚತುಷ್ಪಲೇ ಶೀತೇ ಕ್ಷುಣ್ಣಂ ದ್ರವ್ಯಪಲಂ ಕ್ಷಿಪೇತ್ ||
ಮೃತ್ಪಾತ್ರೇ ಮಂಥಯೇತ್ಸಮ್ಯಕ್ ತಸ್ಮಾಚ್ಚ ದ್ವಿಪಲಂ ಪಿಬೇತ್ |
(ಶಾ. 56.)

'ಮಂಧ' ಎಂಬದು ಘಾಂಟ ಕಷಾಯದ ಭೇದವಾಗಿರುತ್ತದೆ. ಒಂದು ಪಲ ಔಷಧ ದ್ರವ್ಯವನ್ನು ನುಣ್ಣಗೆ ಚೂರ್ಣಮಾಡಿ, ಅದಕ್ಕೆ ನಾಲ್ಕು ಪಲ ತಣ್ಣೀರು ಕೂಡಿಸಿ, ಮಣ್ಣಿನ ಗಡಿಗೆಯಲ್ಲಿ ಚೆನ್ನಾಗಿ ಕಡದದ್ದು ಮಂಧ ಅದರಿಂದ ಎರಡು ಪಲ ಕುಡಿಯುವದು (ಇದು ಮಾತ್ರೆ).

24. ಅತ್ಯಂತಶುಷ್ಕಂ ಯದ್ದ್ರವ್ಯಂ ಸುಪಿಷ್ಟಂ ವಸ್ತ್ರಗಾಲಿತಂ ।
ತತ್ಸ್ಯಾತ್ ಚೂರ್ಣರಜಃ ಕ್ಷ್ವೋದಸ್ತನ್ಮಾತ್ರಾ ಕರ್ಷಸಮ್ಮಿತಾ ॥
(ಭಾ. ಪ್ರ. 194.)

ಚೂರ್ಣದ ಕ್ರಮ ಮತ್ತು ಮಾತ್ರೆ

ಅತ್ಯಂತ ಒಣಗಲಾದ ದ್ರವ್ಯಗಳನ್ನು ಚೆನ್ನಾಗಿ ಕುಟ್ಟಿ, ವಸ್ತ್ರಗಾಲಿತ ಮಾಡಿದ್ದಲ್ಲಿ, ಸಿಕ್ಕುವ ನುಣ್ಣಗಿನ ಚೂರ್ಣದ ದೂಳು ಚೂರ್ಣವೆನ್ನಿಸಿಕೊಳ್ಳುತ್ತದೆ. ಅದರ ಮಾತ್ರೆ ಒಂದು ಕರ್ಷ (ಮುಕ್ಕಾಲು ತೊಲೆ) ತೂಕ

25. ಚೂರ್ಣೇ ಗುಡಃ ಸಮೋ ದೇಯಃ ಶರ್ಕರಾ ದ್ವಿಗುಣಾ ಭವೇತ್ ।
ಚೂರ್ಣೇಷು ಭರ್ಜಿತಂ ಹಿಂಗು ದೇಯಂ ನೋತ್ಕ್ಲೇದಕೃದ್ಭವೇತ್ ॥
ಲಿಹೇಚ್ಚೂರ್ಣಂ ದ್ರವೈಃ ಸರ್ವೈರ್ಘೃತಾದ್ಯೈರ್ದ್ವಿಗುಣೋನ್ಮಿತೈಃ ।
ಪಿಬೇಚ್ಚತುರ್ಗುಣೈರೇವ ಚೂರ್ಣಮಾಲೋಡಿತಂ ದ್ರವೈಃ ॥ (ಶಾ 59.)

ಚೂರ್ಣಸೇವನ ವಿಧಿ

ಚೂರ್ಣಕ್ಕೆ ಬೆಲ್ಲ ಕೂಡಿಸಿಕೊಳ್ಳುವಲ್ಲ ಸರಿಪಾಲು, ಸಕ್ಕರೆ ಕೂಡಿಸಿಕೊಳ್ಳುವಲ್ಲಿ ಎರಡರಷ್ಟು ಸೇರಿಸತಕ್ಕದ್ದು. ಹಿಂಗು ಕೂಡಿಸುವ ಸಂಗತಿಯಲ್ಲಿ ತುಪ್ಪ ಕೂಡಿಸಿ ಹುರಿದು ಪುಡಿ ಮಾಡಿ ಸೇರಿಸಬೇಕು, ಆಗ್ಗೆ ಅದರಿಂದ ಉತ್ಕ್ಲೇದ (ಹೇಸಿ, ವಾಂತಿ ಬಂದ ಹಾಗೆ ಆಗುವದು) ಉಂಟಾಗುವದಿಲ್ಲ. ತುಪ್ಪ ಮೊದಲಾದ ದ್ರವಪದಾರ್ಥಗಳಿಂದ ನೆಕ್ಕುವ ಸಂಗತಿಯಲ್ಲಿ, ಅಂಧಾ ದ್ರವವನ್ನು ಎರಡು ಪಾಲಷ್ಟು ಕೂಡಿಸಿಕೊಳ್ಳಬೇಕು. ಇತರ ದ್ರವಗಳಲ್ಲಿ ಕದಡಿ ಕುಡಿಯುವದಾದರೆ, ಅಂಧಾ ದ್ರವವನ್ನು ನಾಲ್ಕು ಪಾಲಷ್ಟು ಉಪಯೋಗಿಸಬೇಕು.

26. ಚೂರ್ಣಾವಲೇಹಗುಟಿಕಾಕಲ್ಕಾನಾಮನುಪಾನಕಂ ।
ಪಿತ್ತವಾತಕಫಾತಂಕೇ ತ್ರಿದ್ವ್ಯೇಕಪಲಮಾಹರೇತ್ ॥
ಯಥಾ ತೈಲಂ ಜಲೇ ವ್ಯಾಪ್ತಂ ಕ್ಷಣೇನೈವ ವಿಸರ್ಪತಿ ।
ಅನುಪಾನಬಲಾದಂಗೇ ತಥಾ ಸರ್ಪತಿ ಭೇಷಜಂ ॥ (ಭಾ ಪ್ರ 194-99.)

ಚೂರ್ಣಾದಿಗಳಿಗೆ ಅನುಪಾನಗಳು

ಚೂರ್ಣ, ಲೇಹ, ಗುಳಿಗೆ, ಅಥವಾ ಕಲ್ಕ ಸೇವಿಸಿದ ಕೂಡಲೇ (ಕಷಾಯ, ನೀರು ಮುಂತಾದ) ಅನುಪಾನವನ್ನು ಪಿತ್ತದೋಷದಲ್ಲಿ ಮೂರು ಪಲದಷ್ಟು, ವಾತದೋಷದಲ್ಲಿ ಎರಡು ಪಲದಷ್ಟು, ಮತ್ತು ಕಫದ ದೋಷದಲ್ಲಿ ಒಂದು ಪಲದಷ್ಟು ಕುಡಿಯಬೇಕು. ನೀರಲ್ಲಿ ಬಿದ್ದ ತೈಲವು ಹ್ಯಾಗೆ ಕ್ಷಣದಲ್ಲಿ ಪಸರಿಸುತ್ತದೋ, ಹಾಗೆ ಔಷಧವು ಅನುಪಾನದ ಬಲದಿಂದ ದೇಹದೊಳಗೆ ವ್ಯಾಪಿಸುತ್ತದೆ.

ತರಾ ಶಾ ನ ಪಾರಪ್ರಕಾರ ವಾತದಲ್ಲಿ ಮೂರು ಪಾಲು, ಪಿತ್ತದಲ್ಲಿ ಎರಡು ಪಾಲು, ಅನುಪಾನಯುಕ್ತವೆಂತ ಅರ್ಥವಾಗುತ್ತದೆ

27. ದ್ರವೇಣ ಯಾವತಾ ಸಮ್ಯಕ್ ಚೂರ್ಣಂ ಸರ್ವಂ ಪ್ಲುತಂ ಭವೇತ್ ।
ಚೂರ್ಣದ ಭಾವನೆಯ ಕ್ರಮ ಭಾವನಾಯಾಃ ಪ್ರಮಾಣಂ ತು ಚೂರ್ಣೇ ವ್ಯೋಕ್ತಂ ಭಿಷಗ್ವರೈಃ ॥
(ಶಾ. 60.)

ಚೂರ್ಣವನ್ನು ರಸಗಳಲ್ಲಿ ಭಾವನೆ ಮಾಡುವ ಸಂಗತಿಯಲ್ಲಿ, ಪೂರಾ ಚೂರ್ಣವು ಚೆನ್ನಾಗಿ ಒದ್ದೆಯಾಗಿ ಮುಳುಗುವಷ್ಟು ರಸವನ್ನು ಕೂಡಿಸತಕ್ಕದ್ದು. ಹೀಗೆ ಭಾವನೆಯ ಪ್ರಮಾಣವನ್ನು ವೈದ್ಯೋತ್ತಮರು ಹೇಳಿರುತ್ತಾರೆ

ತರಾ ಚೂರ್ಣವನ್ನು ಹಾಗೆ ರಾತ್ರಿ ಇಡೀ ಮುಳುಗಿಸಿಟ್ಟು ಹಗಲು ಬಿಸಿಲಲ್ಲಿ ಒಣಗಿಸಬೇಕು ಮಾತ್ರೆ ಮಾಡುವಲ್ಲಿ ಭಾವನೆಯಂದರೆ, ಇದೇ ಪ್ರಮಾಣ ಪ್ರಕಾರ ದ್ರವವನ್ನು ಕೂಡಿಸಿ, ಅದು ಆರುವ ವರೆಗೆ ಕಲ್ಲ ಮೇಲೆ ಅರೆಯುವದು.

28. ಪುಟಪಾಕಸ್ಯ ಮಾತ್ರೇಯಂ ಲೇಪಸ್ಯಾಂಗಾರವರ್ಣತಾ ।
ಲೇಪಂ ಚ ದ್ವ್ಯಂಗುಲಂ ಸ್ಥೂಲಂ ಕುರ್ಯಾದ್ದ್ವ್ಯಂಗುಷ್ಠಮಾತ್ರಕಂ ॥
ಪುಟಪಾಕದ ಕ್ರಮ ಕಾಶ್ಮರೀವಟಜಂಬ್ವಾದಿಪತ್ರೈರ್ವೇಷ್ಟನಮುತ್ತಮಂ ।
ಪಲಮಾತ್ರರಸೋ ಗ್ರಾಹ್ಯಃ ಕರ್ಷಮಾತ್ರಂ ಮಧು ಕ್ಷಿಪೇತ್ ॥
ಕಲ್ಕಚೂರ್ಣದ್ರವಾದ್ಯಾಸ್ತು ದೇಯಾಃ ಸ್ವರಸವದ್ಬುಧೈಃ । (ಶಾ. 39.)

(ಪುಟಪಾಕಮಾಡಿದ ಕಲ್ಕದ ರಸ ಉಪಯೋಗಿಸಬೇಕಾದಲ್ಲಿ, ದ್ರವ್ಯ ಅಥವಾ ಕಲ್ಕವನ್ನು ಎಲೆಗಳಿಂದ ಮುಚ್ಚಿ, ನೂತ್ರದಿಂದ ಕಟ್ಟಿ ಸುತ್ತು ಹಸಿ ಮಣ್ಣನ್ನು ಮೆತ್ತಿ, ಮೇಲಿಗೆ ಒಣಗಿದ ಪುಡಿ ಮಣ್ಣನ್ನು ಚಲ್ಲಿ, ಬೆಂಕಿಯಲ್ಲಿ ಹಾಕಿ, ಬೇಯಿಸಿ, ಅನಂತರ ಒಡೆದು ಬೆಂದ ಔಷಧದ ರಸ ತೆಗೆದು ಉಪಯೋಗಿಸಬೇಕಾದದ್ದು) ಲೇಪವು ಎರಡು ಅಂಗುಷ್ಠಗಳ ಅಂಗುಲದಲ್ಲಿ ಎರಡು ಅಂಗುಲ ದಪ್ಪವಿರಬೇಕು. ಆ ಲೇಪವು ಸುಟ್ಟು ಕಪ್ಪಾದ ಕೂಡಲೇ ಬೆಂಕಿಯಿಂದ ತೆಗೆಯಬೇಕು. ಸುತ್ತುವದಕ್ಕೆ ಕಾಶ್ಮರೀ, ಆಲ, ನೇರಳೆ, ಮೊದಲಾದ ಮರಗಳ ಎಲೆಗಳು ಪ್ರಶಸ್ತ ರಸದ ಮಾತ್ರೆಯು ಒಂದು ಪಲ ಅದಕ್ಕ ಜೇನು ಕೂಡಿಸುವದಾದರೆ, ಜೇನು ಕಾಲು ಪಲ. ಕಲ್ಕ, ಚೂರ್ಣ, ದ್ರವಾದಿಗಳನ್ನು ಸ್ವರಸಕ್ಕೆ ಹೇಳಿದ ಕ್ರಮದಲ್ಲಿ ಕೂಡಿಸತಕ್ಕದ್ದು.

29. ಕಂಡಿತಂ ತಂಡುಲಪಲಂ ಜಲೇಽಷ್ಟಗುಣಿತೇ ಕ್ಷಿಪೇತ್ ।
ಅಕ್ಕಚ್ಚನ್ನು ತಯಾರಿಸುವ ಕ್ರಮ ಭಾವಯಿತ್ವಾ ಜಲಂ ಗ್ರಾಹ್ಯಂ ದೇಯಂ ಸರ್ವತ್ರ ಕರ್ಮಸು ॥
(ಶಾ. 39.)

ಕುಟ್ಟಿ ನಿರ್ಮಲಗೊಳಿಸಿದ ಅಕ್ಕಿ ಪಲ ಒಂದಕ್ಕೆ ಎಂಟು ಪಾಲಷ್ಟು ನೀರು ಹಾಕಿ, ಅಕ್ಕಿ ನೆನೆದ ಮೇಲೆ ಶೋಧಿಸಿದ್ದಲ್ಲಿ, ಸಿಕ್ಕುವ ನೀರು ಎಲ್ಲಾ ಕೆಲಸಗಳಲ್ಲಿಯೂ ಉಪಯೋಗಿಸಲಿಕ್ಕ ಯೋಗ್ಯವಾಗಿರುತ್ತದೆ.

30. ಕ್ವಾಣ್ಣಂ ದ್ರವ್ಯಪಲಂ ಸಾಧ್ಯಂ ಚತುಃಷಷ್ಟಿಪಲೇ ಜಲೇ ।
ಪಾಯಾಂಕೆಗೆ ಕೊಡುವ ಕಷಾಯದ ಕ್ರಮ ಅರ್ಧಶಿಷ್ಟಂ ಚ ತದ್ದೇಯಂ ಪಾನೇ ಭಕ್ತಾದಿಸಂವಿಧೌ ॥
(ಶಾ. 53-54.)

ಒಂದು ಪಲ ದ್ರವ್ಯವನ್ನು ಜಜ್ಜಿ 64 ಪಲ ನೀರಲ್ಲಿ ಹಾಕಿ, ಕುದಿಸಿ, ಅರ್ಧ ನೀರು ಬತ್ತಿ, ಉಳಿದ ಕಷಾಯವು ಭೋಜನಾದಿ ಸಂದರ್ಭಗಳಲ್ಲಿ ಪಾನಕ್ಕೆ ಕೊಡಲು ಯೋಗ್ಯವಾದದ್ದು.

31. ಅಷ್ಟಮೇನಾಂಶಶೇಷೇಣ ಚತುರ್ಥೇನಾರ್ಧಕೇನ ವಾ ।
ಕುಡಿಯುವದಕ್ಕೆ ಬಿಸಿನೀರು ಅಥವಾ ಕ್ವಥನೇನೈವ ಸಿದ್ಧಮುಷ್ಣೋದಕಂ ಪಿಬೇತ್ ॥ (ಶಾ. 54.)

ನೀರನ್ನು ಕಾಯಿಸಿ ಕುದಿ ಬಂದ ಕೂಡಲೇ, ಅಥವಾ ಅರ್ಧ ಬತ್ತಿದಾಗ, ಅಥವಾ ಕಾಲಂಶ ಉಳಿದಾಗ, ಅಥವಾ ಎಂಟನೇ ಒಂದು ಅಂಶ ಉಳಿದಾಗ, ತೆಗೆದು ಇಟ್ಟುಕೊಂಡ ಬಿಸಿನೀರನ್ನು ಕುಡಿಯುವದಕ್ಕೆ ಉಪಯೋಗಿಸಬೇಕು.

32. ಶ್ಲೇಷ್ಮಾಮವಾತಮೇದೋಘ್ನಂ ವಸ್ತಿಶೋಧನದೀಪನಂ ।
ರಾತ್ರಿಯಲ್ಲಿ ಬಿಸಿನೀರಿನ ಪಾನ ಕಾಸಶ್ವಾಸಜ್ವರಾನ್ ಹಂತಿ ಪೀತಮುಷ್ಣೋದಕಂ ನಿಶಿ ॥
(ಶಾ. 54 ಮತ್ತು ಭಾ. ಪ್ರ. 195.)

ಬಿಸಿನೀರನ್ನು ರಾತ್ರಿಯಲ್ಲಿ ಕುಡಿಯುವದರಿಂದ ಕಫ, ಆಮ, ವಾತ, ಮೇದೋರೋಗ (ಸ್ಥೂಲತೆ), ಕೆಮ್ಮು, ಉಬ್ಬಸ, ಜ್ವರ, ಇವು ಪರಿಹಾರವಾಗುವದಲ್ಲದೆ ಮೂತ್ರಶೋಧನೆ ಸರಿಯಾಗುತ್ತದೆ ಮತ್ತು ಅದು ದೀಪನಕಾರಿ.

ಪರಾ XII ಅ 14ನೇ ಸಂ (ಪು 236) ನೋಡಿರಿ

33. ಕ್ಷೀರಮಷ್ಟಗುಣಂ ದ್ರವ್ಯಾತ್ ಕ್ಷೀರಾನ್ನೀರಂ ಚತುರ್ಗುಣಂ ।
ಹಾಲು ಕಷಾಯದ ಕ್ರಮ ಕ್ಷೀರಾವಶೇಷಂ ತತ್ಪೀತಂ ಶೂಲಮಾಮೋದ್ಭವಂ ಜಯೇತ್ ॥ (ಶಾ. 54.)

ಹಾಲುಕಷಾಯಕ್ಕೆ, ದ್ರವ್ಯದ ಮಾನದ ಎಂಟರಷ್ಟು ಹಾಲು ಮತ್ತು ಹಾಲಿಗೆ ನಾಲ್ಕರಷ್ಟು ನೀರು ಕೂಡಿಸಿ, ಕುದಿಸಿ, ನೀರು ಬತ್ತಿಹೋಗಿ ಹಾಲು ಮಾತ್ರ ಉಳಿದ ಕೂಡಲೇ, ಇಳಿಸುವದು. ಇಂಥಾ ಹಾಲುಕಷಾಯದ ಪಾನವು ಆಮಶೂಲವನ್ನು ಪರಿಹರಿಸುತ್ತದೆ

ಪರಾ ಕುದಿ ಬರುವ ವರೆಗೆ ಮತ್ತು ಇಳಿಸಿದ ಮೇಲೆ ಸ್ವಲ್ಪ ತಣಿಯುವ ವರೆಗೆ ಹಾಲು ಕೆನೆಕಟ್ಟದಂತೆ ಮಗುಚುತ್ತಾ ಇರಬೇಕು

34. ವಟಕಾಶ್ಚಾಥ ಕಥ್ಯಂತೇ ತನ್ನಾಮ ಗುಟಿಕಾ ವಟೀ ।
ವಟಕದ ಕ್ರಮ ಮೋದಕೋ ವಟಿಕಾ ಪಿಂಡೀ ಗುಡೋ ವರ್ತಿಸ್ತಥೋಚ್ಯತೇ ॥
ಲೇಹವತ್ಸಾಧ್ಯತೇ ವಹ್ನೌ ಗುಡೋ ವಾ ಶರ್ಕರಾಥವಾ ।
ಗುಗ್ಗುಲುರ್ವಾ ಕ್ಷಿಪೇತ್ತತ್ರ ಚೂರ್ಣಂ ತನ್ನಿರ್ಮಿತಾ ವಟೀ ॥
ಕುರ್ಯಾದವಹ್ನಿಸಿದ್ಧೇನ ಕ್ವಚಿತ್ ಗುಗ್ಗುಲುನಾ ವಟೀಂ ।

ದ್ರವೇಣ ಮಧುನಾ ವಾಪಿ ಗುಟಿಕಾಂ ಕಾರಯೇದ್ಬುಧಃ ||
ಸಿತಾ ಚತುರ್ಗುಣಾ ದೇಯಾ ವಟೇಷು ದ್ವಿಗುಣೋ ಗುಡಃ |
ಚೂರ್ಣಾಚ್ಚೂರ್ಣಸಮಃ ಕಾರ್ಯೋ ಗುಗ್ಗುಲುರ್ಮಧು ತತ್ಸಮಂ ||
ದ್ರವಂ ಚ ದ್ವಿಗುಣಂ ದೇಯಂ ಮೋದಕೇಷು ಭಿಷಗ್ವರೈಃ |
ಕರ್ಷಪ್ರಮಾಣಾ ತನ್ಮಾತ್ರಾ ಬಲಂ ದೃಷ್ಟ್ವಾ ಪ್ರಯುಜ್ಯತೇ || (ಶಾ. 72.)

ವಟಕಕ್ಕೆ ಗುಟಿಕಾ, ವಟೀ, ಮೋದಕ, ವಟಿಕಾ, ಪಿಂಡೀ, ಗುಡ, ವರ್ತಿ, ಎಂತಲೂ ಹೆಸರುಗಳಿವೆ ಅದನ್ನು ತಯಾರಿಸುವ ಕ್ರಮ ಹ್ಯಾಗಂದರೆ — ಬೆಲ್ಲವನ್ನು, ಸಕ್ಕರೆಯನ್ನು, ಅಥವಾ ಗುಗ್ಗುಲವನ್ನು ಅಗ್ನಿಯಿಂದ ಕರಗಿಸಿ ಲೇಹದಂತೆ ಮಾಡಿಕೊಂಡು ಅದಕ್ಕೆ ಚೂರ್ಣ ಕೂಡಿಸಿ ವಟಕ ಮಾಡುವದು. ಕೆಲವು ಸಂಗತಿಯಲ್ಲಿ ಉರಿಯನ್ನು ತಾಗಿಸದೆ ಗುಗ್ಗುಲ ಮತ್ತು ದ್ರವ ಕೂಡಿಸಿ ಅರೆದು, ಅಥವಾ ಜೇನಿನಿಂದ, ಬುದ್ಧಿವಂತನು ಗುಳಿಗೆಯನ್ನು ಮಾಡತಕ್ಕದ್ದು. ಸಕ್ಕರೆ ಕೂಡಿಸುವದಾದರೆ ಚೂರ್ಣದ ನಾಲ್ಕು ಪಾಲಷ್ಟು, ಬೆಲ್ಲ ಕೂಡಿಸುವದಾದರೆ ಎರಡು ಪಾಲಷ್ಟು, ಗುಗ್ಗುಲವನ್ನು ಅಥವಾ ಜೇನನ್ನು ಕೂಡಿಸುವದಾದರೆ ಚೂರ್ಣಕ್ಕೆ ಸರಿ ಪಾಲಷ್ಟು, ಸೇರಿಸಿ ವಟಕವನ್ನು ಮಾಡಬೇಕು. ವೈದ್ಯೋತ್ತಮರು ಮೋದಕಗಳನ್ನು ತಯಾರಿಸುವದಕ್ಕೆ ದ್ರವವನ್ನು ಚೂರ್ಣಕ್ಕೆ ಎರಡು ಪಾಲಷ್ಟು ಉಪಯೋಗಿಸಬೇಕು. ಈ ವಟಕಗಳು ಪ್ರಮಾಣದಲ್ಲಿ ಒಂದು ಕರ್ಷತೂಕದ ವರೆಗೆ ರೋಗಿಯ ಬಲ, ರೋಗದ ಬಲ, ಮತ್ತು ಕಾಲದ ಬಲ ನೋಡಿಕೊಂಡು ಕೊಡಲ್ಪಡುತ್ತವೆ.

ಷರಾ ಗುಡತಬ್ದವು ಲೇಪಕ್ಕೂ ಬರುತ್ತದೆ

35. ಕ್ವಾಥಾದೇರ್ಯತ್ಪುನಃ ಪಾಕಾದ್ಘನತ್ವಂ ಸಾ ರಸಕ್ರಿಯಾ |
ಸೋಽವಲೇಹಶ್ಚ ಲೇಹಶ್ಚ ತನ್ಮಾತ್ರಾ ಸ್ಯಾತ್ಪಲೋನ್ಮಿತಾ ||
ಸಿತಾ ಚತುರ್ಗುಣಾ ಕಾರ್ಯಾ ಚೂರ್ಣಾಚ್ಚ ದ್ವಿಗುಣೋ ಗುಡಃ |
ಲೇಹದ ಕ್ರಮ ಮತ್ತು ಪಾಕದ ಪರೀಕ್ಷೆ ಮುಂತಾದದ್ದು ದ್ರವಂ ಚತುರ್ಗುಣಂ ದದ್ಯಾದಿತಿ ಸರ್ವತ್ರ ನಿಶ್ಚಯಃ ||
ಸುಪಕ್ವೇ ತಂತುಮತ್ತ್ವಂ ಸ್ಯಾದವಲೇಹೇಽಪ್ಸು ಮಜ್ಜನಂ |
ಸ್ಥಿರತ್ವಂ ಪೀಡಿತೇ ಮುದ್ರಾ ಗಂಧವರ್ಣರಸೋದ್ಭವಃ ||
ದುಗ್ಧಮಿಕ್ಷುರಸಂ ಯೂಷಂ ಪಂಚಮೂಲಕಷಾಯಜಮ್ |
ವಾಸಾಕ್ವಾಥಂ ಯಥಾಯೋಗ್ಯಮನುಪಾನಂ ಪ್ರಶಸ್ಯತೇ || (ಭಾ. ಪ್ರ. 196.)

ಕಷಾಯಾದಿಗಳ ಪುನಃ ಪಾಕದಿಂದ ದಪ್ಪವಾದ ಮತ್ತು ರಸಯುಕ್ತವಾದ ಔಷಧಕ್ಕೆ ಅವಲೇಹ ಎಂತಲೂ, ಲೇಹವೆಂತಲೂ ಹೇಳುತ್ತಾರೆ. ಅದರ ಮಾತ್ರೆಯು ಒಂದು ಪಲತೂಕ. ಅದನ್ನು ತಯಾರಿಸುವದಕ್ಕೆ ಸಕ್ಕರೆಯನ್ನು ಚೂರ್ಣದ ನಾಲ್ಕು ಪಾಲಷ್ಟು, ಬೆಲ್ಲವಾದರೆ ಎರಡು ಪಾಲಷ್ಟು, ಮತ್ತು ದ್ರವ ನಾಲ್ಕು ಪಾಲಷ್ಟು, ಸೇರಿಸತಕ್ಕದ್ದು ಎಂಬದು ಎಲ್ಲಾ ಸಂಗತಿಗಳಲ್ಲಿಯೂ ನಿಶ್ಚಯ. ಸರಿಯಾಗಿ ಪಕ್ವವಾದಾಗ್ಗೆ (ಬೆರಳುಗಳಿಂದ ಮುಟ್ಟಿ ನೋಡಿದರೆ) ಲೇಹದಲ್ಲಿ ನೂಲು ಬರುವದು; ನೀರಲ್ಲಿ ಹಾಕಿದರೆ ಅದು ಮುಳುಗುವದು, ಮುದ್ದೆಗೆ ಬರುವದು; ಬೆರಳುಗಳಿಂದ ಒತ್ತಿದರೆ ಬೆರಳುಗಳ ರೇಖೆಗಳು ಅದರಲ್ಲಿ ಕಾಣುವವು; ಮತ್ತು ಸರಿ

ಯಾದ ಪರಿಮಳ, ವರ್ಣ ಮತ್ತು ರಸ ಉಂಟಾಗುವವು. ಹೀಗೆ ಸಿದ್ಧಪಡಿಸಿದ ಲೇಹವನ್ನು ಸೇವಿಸಿದನಂತರ ಅನುಪಾನವಾಗಿ ಹಾಲು, ಕಬ್ಬಿನ ರಸ, ಯೂಷ, ಪಂಚಮೂಲಗಳ ಕಷಾಯ, ಆಡುಸೋಗೆ ಕಷಾಯ, ಇವುಗಳೊಳಗೆ ಒಂದನ್ನು ಯಥಾಯೋಗ್ಯವಾಗಿ ಸೇವಿಸುವದು ಪ್ರಶಸ್ತವಾಗಿರುತ್ತದೆ.

ಷರಾ ಮಾತ್ರೆಯು ಒಂದು ಪಲ ಎಂಬದು ಅತ್ಯಂತ ಪರಿಮಿತಿ ಎಂದು ಮುಂದಿನ ಆಧಾರವಿಂದ ಕಾಣುತ್ತದೆ

36. ಮೋದಕಂ ವಟಕಂ ಲೇಹಂ ಕರ್ಷಮಾತ್ರಂ ಪ್ರಯೋಜಯೇತ್ತಾ ।
ಲೇಹಾದಿಗಳ ಮಾತ್ರಾವಿಚಾರ
ಕರ್ಷದ್ವಯಂ ಪಲಂ ವಾಪಿ ದೇಯಂ ರೋಗಾಗ್ನ್ಯಪೇಕ್ಷಯಾ ॥
(ಚೆ. ಸಾ. ಸಂ. 147.)

ಮೋದಕ, ವಟಕ, ಅಥವಾ ಲೇಹವನ್ನು ಒಂದು ಕರ್ಷಪ್ರಮಾಣದಲ್ಲಿ ಉಪಯೋಗಿಸ ತಕ್ಕದ್ದು. ರೋಗದ ಬಲ ಮತ್ತು ಅಗ್ನಿಬಲ ನೋಡಿಕೊಂಡು ಎರಡು ಕರ್ಷ, ಅಥವಾ ಒಂದು ಪಲ, ಸಹ ಕೊಡಬಹುದು.

37. ಕಲ್ಕಾಚ್ಚತುರ್ಗುಣೀಕೃತ್ಯ ಘೃತಂ ವಾ ತೈಲಮೇವ ಚ ।
ಘೃತತೈಲಗಳಿಗೆ ದ್ರವಕಲ್ಕಗಳ ಸಾಮಾನ್ಯ ವಿಧಿ
ಚತುರ್ಗುಣೇ ದ್ರವೇ ಸಾಧ್ಯಂ ತಸ್ಯ ಮಾತ್ರಾ ಪಲೋಸ್ಮಿತಾ ॥
(ಶಾ. 84-85.)

ತುಪ್ಪವನ್ನು ಅಥವಾ ತೈಲವನ್ನು ಅದರ ಕಾಲಂಶ ಕಲ್ಕ ಮತ್ತು ನಾಲ್ಕರಷ್ಟು ದ್ರವ ಕೂಡಿಸಿ ಸಾಧಿಸತಕ್ಕದ್ದು ಅಂಥಾ ಘೃತ ಅಥವಾ ತೈಲದ ಮಾತ್ರೆಯು ಒಂದು ಪಲತೂಕ ವಾಗಿರುತ್ತದೆ.

38. ಅಂಬುಕ್ವಾಧರಸೈರ್ಯತ್ರ ಪೃಥಕ್ ಸ್ನೇಹಸ್ಯ ಸಾಧನಂ ।
ದ್ರವಭೇದದ ಮೇಲೆ ಕಲ್ಕ ಪ್ರಮಾಣಭೇದ
ಕಲ್ಕಸ್ಯಾಂಶಂ ತತ್ರ ದದ್ಯಾಚ್ಚತುರ್ಧಂ ಷಷ್ಟಮಷ್ಟಮಂ ॥ (ಭಾ. ಪ್ರ. 196.)
ದುಗ್ಧೇ ದಧಿರಸೇ ತಕ್ರೇ ಕಲ್ಕೋ ದೇಯೋಽಷ್ಟಮಾಂಶಿಕಃ ।
ಕಲ್ಕಸ್ಯ ಸಮ್ಯಕ್ಪಾಕಾರ್ಧಂ ತೋಯಮತ್ರ ಚತುರ್ಗುಣಂ ॥ (ಶಾ. 85)

ನೀರು, ಕಷಾಯ ಮತ್ತು ರಸ, ಇವುಗಳೊಳಗೆ ಒಂದರಿಂದಲೇ ಪ್ರತ್ಯೇಕವಾಗಿ ಸ್ನೇಹ ವನ್ನು ಕಾಯಿಸಬೇಕಾದ ಸಂಗತಿಯಲ್ಲಿ, ನೀರು ಕೂಡಿಸುವಂಥಾದ್ದಕ್ಕೆ ಕಾಲಂಶ, ಕಷಾಯ ವನ್ನು ಕೂಡಿಸುವಾಗ್ಗೆ ಆರನೇ ಒಂದಂಶ ಮತ್ತು ಸ್ವರಸದಿಂದಲೇ ಕಾಯಿಸುವದಾದರೆ ಎಂಟನೇ ಒಂದಂಶ, ಈ ಕ್ರಮದಲ್ಲಿ ಕಲ್ಕವನ್ನು ಹಾಕಬೇಕು. ಹಾಲಿನಲ್ಲಿ, ಮೊಸರುನೀರಿನಲ್ಲಿ, ಅಥವಾ ಮಜ್ಜಿಗೆಯಲ್ಲಿ ಕಾಯಿಸುವ ಸಂಗತಿಯಲ್ಲಿ, ಕಲ್ಕವನ್ನು ಎಂಟನೇ ಒಂದಂಶ ಪ್ರಮಾಣದಲ್ಲಿ ಸೇರಿಸುವದಲ್ಲದೆ, ಕಲ್ಕವು ಚೆನ್ನಾಗಿ ಪಾಕವಾಗುವದಕ್ಕಾಗಿ ನಾಲ್ಕು ಪಾಲಷ್ಟು ನೀರನ್ನು ಕೂಡಿಸಿಕೊಳ್ಳಬೇಕು.

ಷರಾ 2ನೇ ಶ್ಲೋಕದಲ್ಲಿ 'ಕಲ್ಕಸ್ಯ' ಎಂಬದಕ್ಕೆ 'ಕಲ್ಕಾಚ್ಚ' ಎಂಬ ಪಾಠ ಛಾ ಪ್ರ ದಲ್ಲಿ ಕಾಣುವದಲ್ಲದೆ, ಕಲ್ಕದ ನಾಲ್ಕು ಪಾಲು ನೀರು ಕೂಡಿಸಬೇಕಾದದ್ದು ಕಲ್ಕವನ್ನು ಅರಿಯಲಿಕ್ಕೆ ಎಂತ ಆದರಲ್ಲಿಯೂ ವ್ಯಾಖ್ಯಾನ ಉಂಟು ಅದು ಸರಿ ಕಾಣುವವಿಲ್ಲ —"ಕ್ಷೀರಮಸ್ತ್ವಾರ ನಾಲಾನಾಂ ಪಾಕೋ ನಾಸ್ತಿ ವಿನಾಂಭಸಾ" । ಎಂತ ವಚನವಿರುವದರಿಂದ ಕಷಾಯ

ಎಲ್ಲದೆ ಹಾಲು, ಮೊಸರುನೀರು, ಅಥವಾ ಹುಳಿಗಂಜಿನೀರು ಮಾತ್ರ ಹೇಳಲ್ಪಟ್ಟಿರುವ ಸಂಗತಿಯಲ್ಲಿ, ತುಪ್ಪಕ್ಕೆ ನಾಲ್ಕರಷ್ಟು ನೀರನ್ನು ಕೂಡಿಸಿಕೊಳ್ಳಬೇಕಾಗಿ ವೈ ಸಾ ಸಂ ದಲ್ಲಿ ಹೇಳಿಯದೆ (ಪು 119)

39. ಪಂಚಪ್ರಭೃತಿ ಯತ್ರ ಸ್ಯುರ್ದ್ರವಾಣಿ ಸ್ನೇಹಸನ್ನಿಧೌ ।
ತತ್ರ ಸ್ನೇಹಸಮಾನ್ಯಾಹುರರ್ವಾಕ್ ಸ್ಯಾಚ್ಚ ಚತುರ್ಗುಣಂ ॥
(ವೈ. ಸಾ. ಸಂ. 58.)

ಅನೇಕ ದ್ರವಗಳು ಕೂಡುವಲ್ಲ ಪ್ರಮಾಣ

ಸ್ನೇಹದ ಜತೆಯಲ್ಲಿ ಐದು ಅಥವಾ ಹೆಚ್ಚು ದ್ರವಗಳು ಸೇರುವ ಸಂಗತಿಯಲ್ಲಿ, ಪ್ರತಿ ದ್ರವವು ಸ್ನೇಹಕ್ಕೆ ಸರಿಮಾನ ಇದ್ದರೆ ಸಾಕು. ಆಗ್ಗೆ ನಾಲ್ಕು ಪಾಲಷ್ಟು ದ್ರವ ಮೊದಲೇ (ಹಿಂದಿನ ನಾಲ್ಕರಿಂದಲೇ) ಆಗಿಹೋಗುತ್ತದೆ.

ಪರಾ ಇಲ್ಲಿ ಬರೆದ ಅರ್ಥಕ್ಕೆ ಸರಿಯಾಗಿ, ಶ್ಲೋಕದ 4ನೇ ಪಾದಕ್ಕೆ 'ಯಥಾಪೂರ್ವಂ ಚತುರ್ಗುಣಂ' ಎಂತ ಪಾರಾಂತರ ಕಾಣುತ್ತದೆ

40. ದ್ರವ್ಯೇಣ ಕೇವಲೇನೈವ ಸ್ನೇಹಪಾಕೋ ಭವೇದ್ಯದಿ ।
ತತ್ರಾಂಬುಪಿಷ್ಟಃ ಕಲ್ಕಃ ಸ್ಯಾಜ್ಜಲಂ ಚಾತ್ರ ಚತುರ್ಗುಣಂ ॥
(ಭಾ. ಪ್ರ. 197.)

ದ್ರವ ಉಕ್ತವಲ್ಲದ ಸ್ನೇಹದ ಎಚಾರ

ಬರೇ ದ್ರವ್ಯದಿಂದ ಸ್ನೇಹಪಾಕವಾಗಬೇಕಾದ ಸಂಗತಿಯಲ್ಲಿ, ಕಲ್ಕವನ್ನು ನೀರಿನಿಂದ ಅರೆದು ಕೂಡಿಸುವದಲ್ಲದೆ, ನಾಲ್ಕು ಪಾಲಷ್ಟು ನೀರನ್ನು ಹಾಕಬೇಕು.

ಪರಾ ಕಲ್ಕವನ್ನು ಅರಿಯಲಿಕ್ಕೆ ಕಲ್ಕದ ನಾಲ್ಕು ಪಾಲಷ್ಟು ನೀರು ಕೂಡಿಸಿದರೆ ಸಾಕೆಂತಲೂ, ಸ್ನೇಹದ ನಾಲ್ಕು ಪಾಲು ನೀರು ಬೇಡವೆಂತಲೂ, ಕೆಲವರ ಪಕ್ಷ ಇರುತ್ತದೆ

41. ಕ್ವಾಥೇನ ಕೇವಲೇನೈವ ಪಾಕೋ ಯತ್ರೇರಿತಃ ಕ್ವಚಿತ್ ।
ಕ್ವಾಥದ್ರವ್ಯಸ್ಯ ಕಲ್ಕೋಽಪಿ ತತ್ರ ಸ್ನೇಹೇ ಪ್ರಯುಜ್ಯತೇ ॥
ಕಲ್ಕಹೀನಸ್ತು ಯಃ ಸ್ನೇಹಃ ಸ ಸಾಧ್ಯಃ ಕೇವಲೇ ದ್ರವೇ । (ಶಾ. 85)

ಕಲ್ಕ ಹೇಳಲ್ಪಡದ ಸ್ನೇಹದ ಎಚಾರ

ಕೆಲವು ಸಂಗತಿಯಲ್ಲಿ ಬರೇ ಕಷಾಯದಿಂದಲೇ ಸ್ನೇಹಪಾಕ ಹೇಳಿರುವದುಂಟು. ಅಂಥಾ ಸಂಗತಿಯಲ್ಲಿ ಕಷಾಯಕ್ಕೆ ಹೇಳಿದ ದ್ರವ್ಯಗಳ ಕಲ್ಕವನ್ನೇ ಉಪಯೋಗಿಸತಕ್ಕದ್ದು. ಕಷಾಯವನ್ನು ಸಹ ಹೇಳದೆ, ಬರೇ ಸ್ವರಸಾದಿ ದ್ರವಗಳಿಂದ ಸ್ನೇಹ ವಿಧಿಸಲ್ಪಟ್ಟಿರುವ ಸಂಗತಿಯಲ್ಲಿ, ಕಲ್ಕವಿಲ್ಲದೆ ಸ್ನೇಹವನ್ನು ಕಾಯಿಸಬೇಕಾಗಿರುತ್ತದೆ.

42. ಪುಷ್ಪಕಲ್ಕಸ್ತು ಯಃ ಸ್ನೇಹಸ್ತತ್ರ ತೋಯಂ ಚತುರ್ಗುಣಂ ।
ಸ್ನೇಹಾತ್ಸ್ನೇಹಾಷ್ಟಮಾಂಶಶ್ಚ ಪುಷ್ಪಕಲ್ಕಃ ಪ್ರಯುಜ್ಯತೇ ॥
(ಶಾ. 85.)

ಪುಷ್ಪಕಲ್ಕದ ಸ್ನೇಹವಿಚಾರ

ಸ್ನೇಹಕ್ಕೆ ಪುಷ್ಪಕಲ್ಕವನ್ನೇ ಹೇಳಿರುವ ಸಂಗತಿಯಲ್ಲಿ ಸ್ನೇಹಕ್ಕೆ ನಾಲ್ಕರಷ್ಟು ನೀರು ಕೂಡಿಸಿಕೊಳ್ಳುತ್ತಾರೆ, ಮತ್ತು ಸ್ನೇಹದ ಎಂಟನೇ ಒಂದು ಅಂಶ ಪುಷ್ಪಕಲ್ಕವನ್ನು ಉಪಯೋಗಿಸುತ್ತಾರ

43. ವರ್ತಿವತ್ ಸ್ನೇಹಕಲ್ಕಃ ಸ್ಯಾದ್ಯದಾಂಗುಲ್ಯಾ ವಿವರ್ತಿತಃ ।
ಶಬ್ದಹೀನೋಽಗ್ನಿನಿಕ್ಷಿಪ್ತಃ ಸ್ನೇಹಃ ಸಿದ್ಧೋ ಭವೇತ್ತದಾ ॥

ಸ್ನೇಹಪಾಕದ ಲಕ್ಷಣಗಳು

ಯದಾ ಫೇನೋದ್ಗಮಸ್ತೈಲೇ ಫೇನಶಾಂತಿಶ್ಚ ಸರ್ಪಿಷಿ |
ವರ್ಣಗಂಧರಸೋತ್ಪತ್ತಿಃ ಸ್ನೇಹಃ ಸಿದ್ಧೋ ಭವೇತ್ತದಾ || (ಭಾ. ಪ್ರ 197.)

ಸ್ನೇಹದ ಕಲ್ಕವನ್ನು ಬೆರಳುಗಳಿಂದ ಉರುಳಿಸಿದಾಗ ನೆಣೆ ಬರುವದು, ಬೆಂಕಿಯಲ್ಲಿ ಹಾಕಿದರೆ ಶಬ್ದ ಹುಟ್ಟದಿರುವದು, ತೈಲವಾದರೆ ಅದರಲ್ಲಿ (ಬಿಳೇ) ನೊರೆ ಬರುವದು, ತುಪ್ಪ ವಾದರೆ ನೊರೆ ಶಾಂತವಾಗುವದು, ಮತ್ತು ವರ್ಣ, ಪರಿಮಳ ಮತ್ತು ರಸ ಉತ್ಪನ್ನವಾಗು ವದು, ಇವು ಸ್ನೇಹಪಾಕಸಿದ್ಧವಾದ ಲಕ್ಷಣಗಳು.

ಷರಾ ಮಡ್ಡನ್ನು ಬೆಂಕಿಕೆಂಡದಲ್ಲಿ ಹಾಕಿದಾಗ ಏನೂ ಶಬ್ದ ಹುಟ್ಟದಿರುವ ವರೆಗೆ ಒಲೆಯ ಮೇಲಿಂಸಿದರೆ, ಕಾದದ್ದು ಹೆಚ್ಚಾಗುವ ಸಂಭವವಿದೆಯಾದ್ದರಿಂದ, ಸ್ವಲ್ಪ ಮೊದಲೇ ಒಲೆಯಿಂದ ಕಂಚನ್ನು ಕೆಳಗೆ ಇಳಿಸಿ, ಮಗಚುತ್ತಾ ಇರಬೇಕು

44 (*a*) ಸ್ನೇಹಪಾಕಸ್ತ್ರಿಧಾ ಪ್ರೋಕ್ತೋ ಮೃದುರ್ಮಧ್ಯಃ ಖರಸ್ತಥಾ |
ಈಷತ್ಸರಸಕಲ್ಕಸ್ತು ಸ್ನೇಹಪಾಕೋ ಮೃದುರ್ಭವೇತ್ ||

ಮೂರು ವಿಧವಾದ ಪಾಕ

ಮಧ್ಯಪಾಕಸ್ಯ ಸಿದ್ಧಿಶ್ಚ ಕಲ್ಕೇ ನೀರಸಕೋಮಲೇ |
ಈಷತ್ಕಠಿನಕಲ್ಕಶ್ಚ ಸ್ನೇಹಪಾಕೋ ಭವೇತ್ಖರಃ ||
ತದೂರ್ಧ್ವಂ ದಗ್ಧಪಾಕಃ ಸ್ಯಾದ್ದಾಹಕೃನ್ನಿಷ್ಪ್ರಯೋಜನಃ |
ಆಮಪಾಕಶ್ಚ ನಿರ್ವೀರ್ಯೋ ವಹ್ನಿಮಾಂದ್ಯಕರೋ ಗುರುಃ ||
(ಭಾ. ಪ್ರ. 147.)

ಸ್ನೇಹಪಾಕದಲ್ಲಿ ಮೃದು, ಮಧ್ಯ, ಖರ ಎಂಬ ಮೂರು ವಿಧಗಳಿವೆ. ಕಲ್ಕದಲ್ಲಿ ಅಲ್ಪ ವಾಗಿ ರಸ ಇರುವಾಗ ಇಳಿಸಿದ ಸ್ನೇಹದ ಪಾಕವು ಮೃದುಪಾಕ; ರಸ ಪೂರಾ ಬತ್ತಿ ಕಲ್ಕ ಮೆತ್ತಗೆ ಇರುವಾಗ ತೆಗೆದದ್ದು ಮಧ್ಯಪಾಕ, ಕಲ್ಕವು ಸ್ವಲ್ಪ ಗಟ್ಟಿಯಾದಾಗ್ಗಿನ ಸ್ನೇಹ ಪಾಕವು ಖರಪಾಕ, ಅದಕ್ಕೂ ಮೇಲೆ ಕಾಯಿಸಿದ್ದು ದಗ್ಧಪಾಕ (ಸುಟ್ಟದ್ದು), ಅಂಧಾ ದಗ್ಧ ಪಾಕವು ಉರಿಯುಂಟುಮಾಡತಕ್ಕದ್ದು ಮತ್ತು ನಿಷ್ಪ್ರಯೋಜನವಾದದ್ದು. (ಮೃದುಪಾಕ ಕ್ಕೂ ಮೊದಲೇ ಇಳಿಸಿದ) ಆಮ (ಹಸಿ) ಪಾಕವು ಗುರು, ವೀರ್ಯವಿಲ್ಲದ್ದು ಮತ್ತು ಅಗ್ನಿ ಮಾಂದ್ಯವನ್ನುಂಟುಮಾಡತಕ್ಕಂಥಾದ್ದು.

(*b*) ಖರೋ ಮಣಿರವಃ ಕಾಂಸ್ಯೇ ಮೃದುಃ ಪಿಚುನಿವರ್ತಕಃ |
ಚಿಕ್ಕಣಃ ಸ್ಪರ್ಶಮಾತ್ರೇಣ ಸಿಮ್ನಭಾವಂ ಪ್ರಪದ್ಯತೇ ||
(ವೈ ಸಾ ಸಂ. 119)

ಖರಪಾಕಕ್ಕೆ ಕಿಟ್ಟವಂ ತೆಗೆದು ಉಂಡೆಮಾಡಿ ಕಂಚಿನ ತಳಿಗೆ ಮೇಲೆ ಹೊಡೆಯಲು, ಕಲ್ಲ ಹರಳುಗಳಿಂದ ಹೊಡೆದ ಹಾಗೆ ಧ್ವನಿಯಾಗುವದು. ಮೃದು ಪಾಕಕ್ಕೆ, ಕಿಟ್ಟವಂ ತೆಗೆದು ನೋಡಲು, ಹತ್ತಿಯಂತೆ ಮೆತ್ತಗಿರುವದು. ಚಿಕ್ಕಣಪಾಕಕ್ಕೆ ಕಿಟ್ಟವಂ ತೆಗೆದು, ಬೆರಳಿಂದ ಮುಟ್ಟಿದ ಮಾತ್ರದಿಂದ ತಗ್ಗುವದು, ಅಂದರೆ ಹೊಂಡ ಬೀಳುವದು

ಷರಾ ಮೇಲಿನ ವಿವರಣದಲ್ಲಿ 'ಚಿಕ್ಕಣ' ಎಂಬದು ಮಧ್ಯಪಾಕವಾಗಿರುತ್ತದೆ 'ಚಿಕ್ಕಣ' ಎಂದರೆ ಮೇಣ ದೊರಗು ಹುಟ್ಟಿದ ಮೇಣವೇ 'ಖರ'

(c) ಸ್ನೇಹಪಾಕೋಽಧ ಕಲ್ಕೇ ಸ್ಯಾನ್ಮೃದುರಂಗುಲಿಲೇಪಿನಿ ।
ನ ಗೃಹ್ಣಾತ್ಯಂಗುಲಿಂ ಮಧ್ಯಃ ಶೀರ್ಯಮಾಣೋ ಖರಃ ಸ್ಮೃತಃ ॥
(ಚಿ. ಸಾ. ಸಂ. 70.)

ಸ್ನೇಹಪಾಕಗಳಲ್ಲಿ ಮೃದು ಎಂಬದು ಕಲ್ಕವು ಬೆರಳಿಗೆ ಹತ್ತುವಂಥಾದ್ದು, ಮಧ್ಯ ಎಂಬದು ಕಲ್ಕವು ಬೆರಳಿಗೆ ಹಿಡಿಯದಂಥಾದ್ದು ಮತ್ತು ಖರ ಎಂಬದು ಕಲ್ಕವು ಗಟ್ಟಿಯಾಗಿ ಒಡೆಯಲಿಕ್ಕಾದದ್ದು.

(d) ತತ್ರ ಸ್ನೇಹೌಷಧಿವಿವೇಕಮಾತ್ರಂ ಯತ್ರ ಭೇಷಜಂ ಸ ಮೃದುರಿತಿ ।
ಮಧೂಚ್ಛಿಷ್ಟಮಿವ ವಿಶದಮವಿಲೇಪಿ ಭೇಷಜಂ ಯತ್ರ ಸ ಮಧ್ಯಮಃ ।
ಕೃಷ್ಣಮವಸನ್ನಮಿಷದ್ವಿಶದಂ ಚಿಕ್ಕಣಂ ಚ ಯತ್ರ ಭೇಷಜಂ ಸ ಖರ ಇತಿ ।
ಅತ ಊರ್ಧ್ವಂ ದಗ್ಧಸ್ನೇಹೋ ಭವತಿ । (ಸು 539)

ಸ್ನೇಹಪಾಕಗಳಲ್ಲಿ ಕಲ್ಕದ ಔಷಧವು, ಅಂದರೆ ಮಡ್ಡು, ಸ್ನೇಹದಿಂದ ಬೇರೆಯಾದೊಡನೆ ನಿಲ್ಲಿಸಿದ್ದು ಮೃದು, ಮಡ್ಡು ಜೇನುಮೇಣದಂತೆ ಕೂಡಿಕೊಂಡು, ಬೇರೆಯಾಗಿ, ಬೆರಳಿಗೆ ಹಿಡಿಯದೆ ಇದ್ದದ್ದು ಮಧ್ಯಮ, ಮಡ್ಡು ಕಪ್ಪಾಗಿ, ಸ್ವಲ್ಪ ದೊರಗಾಗಿ, ಪ್ರತ್ಯೇಕವಾಗಿ, ಮೇಣವುಳ್ಳದ್ದಾಗಿದ್ದದ್ದು ಖರ, ಮತ್ತು ಅದಕ್ಕೂ ಮೇಲೆ ಪಾಕವಾದದ್ದು ದಗ್ಧ (ಹೊತ್ತಿದ) ಸ್ನೇಹವಾಗುತ್ತದೆ.

ಇದರಾ ತೈಲಾದಿಗಳಿಗೆ ಸೇರುವ ಔಷಧಗಳ ಮತ್ತು ರಸಗಳ ಗುಣಭೇದದಿಂದ ಪಾಕಲಕ್ಷಣಗಳಲ್ಲಿಯೂ ಭೇದವುಂಟಾಗುತ್ತದಾದ್ದರಿಂದ, ಆಯಾ ಸಂಗತಿಯಲ್ಲಿ ಸರಿಯಾದ ಪಾಕವನ್ನು ಗೊತ್ತುಮಾಡುವದಕ್ಕೆ ಈ ಸಂಖ್ಯೆಯಲ್ಲಿ ಉಪದಿಷ್ಟವಾದ ಎಲ್ಲಾ ಲಕ್ಷಣಗಳನ್ನು ನೆನಪಿನಲ್ಲಿಟ್ಟುಕೊಳ್ಳುವದು ಅವಶ್ಯಕವಾಗಿರುತ್ತದೆ

45. ನಸ್ಯಾರ್ಥಂ ಸ್ಯಾನ್ಮೃದುಃ ಪಾಕೋ ಮಧ್ಯಮಃ ಸರ್ವಕರ್ಮಸು ।
ಪಾಕಭೇದದ ಪ್ರಯೋಜನ ಅಭ್ಯಂಗಾರ್ಥಂ ಖರಃ ಪ್ರೋಕ್ತೋ ಯುಂಜ್ಯಾದೇವಂ ಯಥೋಚಿತಂ ॥
(ಶಾ. 86.)

ನಸ್ಯರೂಪವಾಗಿ ಉಪಯೋಗಿಸುವದಕ್ಕೆ ಮೃದುಪಾಕವಾಗಬೇಕು; ಮಧ್ಯಮಪಾಕವು ಸರ್ವ ಕರ್ಮಗಳಲ್ಲಿಯೂ ಉಪಯೋಗಿಸಬಹುದಾದದ್ದು, ಅಭ್ಯಂಗನಕ್ಕೆ ಖರಪಾಕವು ಹೇಳಲ್ಪಟ್ಟದೆ. ಹೀಗೆ ಯಥೋಚಿತವಾಗಿ ಪಾಕಭೇದವನ್ನು ಉಪಯೋಗಿಸತಕ್ಕದ್ದು.

ಇದರಾ ಮೃದುಪಾಕದ ತೈಲಘೃತಗಳು ಸ್ವಲ್ಪಕಾಲದಲ್ಲಿಯೇ ಕೆಡುವವು ತಿಂಗಳಮಾನದಲ್ಲಿ ಉಪಯೋಗಿಸತಕ್ಕ ಅಭ್ಯಂಗನದ ತೈಲವನ್ನು ಖರಪಾಕದಲ್ಲಿಯೇ ಇಳಿಸಬೇಕು, ಮೂರು ಪಾಕಭೇದಗಳ ಪ್ರಯೋಜನದ ಕುರಿತಾದ ಶಾ ನ ವಚನವು ಚರಕನ ಮತಕ್ಕೆ ಅನುಸರಿಸಿ ಉಂಟು ಆದರೆ ಸುಶ್ರುತನ ಮತ (ಪು 539) ಪ್ರಕಾರ ಮೃದುಪಾಕವು ಪಾನಕ್ಕೂ, ಪಥ್ಯಕ್ಕೂ, ಮಧ್ಯಮಪಾಕವು ನಸ್ಯಕ್ಕೂ ಅಭ್ಯಂಗನಕ್ಕೂ ಮತ್ತು ಖರಪಾಕವು ಬಸ್ತಿಗೂ, ಕರ್ಣಪೂರಣಕ್ಕೂ ಉಪಯುಕ್ತವಾದವು ಆಗಿರುತ್ತವೆ ಶ್ರುತಿ ಎರಡು ವಿಧವಾಗಿರುವಲ್ಲಿ ಎರಡೂ ಧರ್ಮ ಎಂಬ ಮನುವಚನವನ್ನಾಧರಿಸಿ ಎರಡೂ ಪ್ರಮಾಣಗಳೇ ಎಂತ ನಿ ಸಂ ವ್ಯಾ

46 (a) ಘೃತತೈಲಗುಡಾದೀಂಶ್ಚ ಸಾಧಯೇನ್ನೈಕವಾಸರೇ ।
ಸ್ನೇಹಾದಿಗಳ ಪಾಕಕ್ಕೆ ಕಾಲ ಪ್ರಕುರ್ವಂತ್ಯುಷಿತಾ ಹ್ಯೇತೇ ವಿಶೇಷಾದ್ಗುಣಸಂಚಯಂ ॥ (ಶಾ. 86.)

ತುಪ್ಪ, ತೈಲ ಗುಡಾದಿಗಳನ್ನು ಒಂದೇ ದಿವಸದಲ್ಲಿ ಪಾಕಮಾಡಿ ಸಿದ್ಧಪಡಿಸಬಾರದು. ಇವುಗಳನ್ನು ಕೆಲವು ದಿವಸ ಒಲೆಯ ಮೇಲೆಯೇ ಇರಿಸಿ, ಸಾಪಕಾಶದಿಂದ ಪಾಕಮಾಡಿದರೆ, ಹೆಚ್ಚಾಗಿ ಅವುಗಳಲ್ಲಿ ಗುಣಸಂಗ್ರಹವಾಗುವದು.

(*b*) ಕ್ಷೀರೇ ದ್ವಿರಾತ್ರಂ ಸ್ವರಸೇ ತ್ರಿರಾತ್ರಂ ಸ್ನೇಹೇ ಕಷಾಯೇಷು ಚ ಪಂಚರಾತ್ರಂ |
(ವೈ ಸಾ. ಸಂ. 123.)

ಸ್ನೇಹವನ್ನು ಕ್ಷೀರದಲ್ಲಿ ಪಾಕಮಾಡುವದಾದರೆ ಎರಡು ದಿನ, ಸ್ವರಸದಲ್ಲಿಯಾದರೆ ಮೂರು ದಿನ, ಮತ್ತು ಕಷಾಯಗಳಲ್ಲಿಯಾದರೆ ಐದು ದಿನ ಒಲೆಯ ಮೇಲೆ ಇರಿಸಿ, ಪಾಕ ಮಾಡತಕ್ಕದ್ದು. ಇನ್ನೊಂದು ಆಧಾರ ಪ್ರಕಾರ —

(*c*) ಕ್ವಾಥೇ ರಸೇ ಮಸ್ತುನಿ ದಧ್ನಿ ತಕ್ರೇ ಧಾನ್ಯಾಮ್ಲಮೂತ್ರಾದಿಷು ಚ ತ್ರಿರಾತ್ರಂ ||
(ವೈ. ಸಾ. ಸಂ. 123.)

ಸ್ನೇಹವನ್ನು ಕಷಾಯದಲ್ಲಿ, ಸ್ವರಸದಲ್ಲಿ, ಮೊಸರುನೀರಿನಲ್ಲಿ, ಮೊಸರಿನಲ್ಲಿ, ಮಜ್ಜಿಗೆ ಯಲ್ಲಿ, ಧಾನ್ಯಾಮ್ಲದಲ್ಲಿ, ಮತ್ತು ಮೂತ್ರಾದಿಗಳಲ್ಲಿ ಕಾಯಿಸುವಾಗಲೂ ಮೂರು ರಾತ್ರಿ ಪಾಕವಾಗಬೇಕು.

47 (*a*) ಮಾಸದ್ವಯಾತ್ತ್ವಧಾ ಚೂರ್ಣಂ ಹೀನವೀರ್ಯತ್ವಮಾಪ್ನುಯಾತ್ |
ಚೂರ್ಣಾದಿಗಳ ವೀರ್ಯವತ್ಕಾಲ ಹೀನತ್ವಂ ಗುಟಿಕಾಲೇಹೌ ಲಭೇತೇ ವತ್ಸರಾತ್ಪರಂ ||
ಹೀನಾಃ ಸ್ಯುಸ್ತೈಲಾದ್ಯಾಶ್ಚತುರ್ಮಾಸಾಧಿಕಾತ್ತ್ವಧಾ || (ಶಾ. 5)

ಎರಡು ತಿಂಗಳನಂತರ ಚೂರ್ಣದಲ್ಲಿ ವೀರ್ಯ ಕಡಿಮೆಯಾಗುತ್ತದೆ, ಗುಳಿಗೆ ಮತ್ತು ಲೇಹ ಒಂದು ವರ್ಷದನಂತರ ಹೀನಗುಣವುಳ್ಳದ್ದಾಗುತ್ತವೆ ಮತ್ತು ತುಪ್ಪತೈಲಗಳು ನಾಲ್ಕು ತಿಂಗಳ ಮೇಲೆ ಗುಣಹೀನವಾಗುತ್ತವೆ.

ಷರಾ ನಾಲ್ಕು ತಿಂಗಳು ಎಂಬದು ಒಂದು ವರ್ಷದ ಮೇಲೆ ನಾಲ್ಕು ತಿಂಗಳು ಎಂತ ವ್ಯಾಖ್ಯಾನ ಬರೆದು ಅದಕ್ಕೆ ಬಲವಾಗಿ ಮುಂದಿನ ಶ್ಲೋಕವು (*b*) ಭಾ ಪ್ರ ದಲ್ಲಿ ಎತ್ತಿ ಬರೆಯಲ್ಪಟ್ಟದೆ ಈ ಊರಿನ ಹವೆಯ ಸ್ಥಿತಿಯಿಂದ ತೈಲಾದಿ ಗಳನ್ನು ಬಾಸಿಯಲ್ಲ ಪಾಕಟ್ಟು, ಸರಿಯಾಗಿ ಬಾಯಿ ಕಟ್ಟಿ ಇಟ್ಟರೆ, ಅವು ಒಂದು ವರ್ಷದ ಮೇಲೆ ವರೆಗೂ ಒಳ್ಳೆ ಸ್ಥಿತಿಯಲ್ಲಿ ಇರುತ್ತವೆ ಆದರೆ ಈಗಿನ ವಾಡಿಕೆಯಂತೆ ಬಾಟ್ಲಿಯಲ್ಲಿ ಪಾಕಪುವದಾದರೆ, ನಾಲ್ಕು ತಿಂಗಳ ಅವಧಿಯೇ ಸರಿ ಕಾಣುತ್ತದೆ

(*b*) ಘೃತಮಬ್ದಾತ್ಪರಂ ಪಕ್ವಂ ಹೀನವೀರ್ಯತ್ವಮಾಪ್ನುಯಾತ್ |
ತೈಲಂ ಪಕ್ವಮಪಕ್ವಂ ಚ ಚಿರಸ್ಥಾಯಿ ಗುಣಾಧಿಕಂ || (ಭಾ. ಪ್ರ. 212.)

ಕಾಯಿಸಿದ ತುಪ್ಪವು ಒಂದು ವರ್ಷದನಂತರ ಹೀನವೀರ್ಯದ್ದಾಗುತ್ತದೆ. ತೈಲವು ಕಾಯಿಸಿದ್ದಾಗಲಿ, ಹಸಿಯಾಗಲಿ, ಹೆಚ್ಚು ಕಾಲ ಇಟ್ಟರೆ ಅಧಿಕ ಗುಣವುಳ್ಳದ್ದಾಗುತ್ತದೆ.

ಷರಾ ಈ ಆಧಾರಕ್ಕೆ ತೈಲದ ಮಟ್ಟಿಗೆ ಈ ಕೆಳಗಿನ ವಚನವು (*c*) ಸಹ ವಿರೋಧ

(*c*) ಪಕ್ವತೈಲಾದ್ಭವೇದ್ವೀರ್ಯಂ ಹೀನಮಬ್ದಾರ್ಧತಃ ಪರಂ |
ಘೃತಾಚ್ಚಾಬ್ದಾತ್ಪರಂ ಪಕ್ವಂ ಗುಡಾದೇಸ್ತ್ವಬ್ದತಃ ಪರಂ || (ಚಿ. ಸಾ. ಸಂ. 70)

ಕಾಯಿಸಿದ ತೈಲದ ವೀರ್ಯವು ಆರು ತಿಂಗಳನಂತರ ಹೀನವಾಗುತ್ತದೆ; ಆದರೆ ಕಾಯಿಸಿದ ತುಪ್ಪ ಮತ್ತು ಗುಡಗಳ ವೀರ್ಯವು ಒಂದು ವರ್ಷದನಂತರ ಹೀನವಾಗುತ್ತದೆ.

ಪರಾ ಲೇಹಗುಡಾದಿಗಳ ಪಾಕವು ಬಹಳ ಎಳೇದಾದರೆ ಔಷಧವು ಬೇಗನೇ ಕೆಡುವದು

48. ಘೃತಂ ತೈಲಂ ಚ ಪಾನೀಯಂ ಕಷಾಯಂ ವ್ಯಂಜನಾದಿಕಂ ।
ತಣ್ಣಗಾದ ಘೃತಾದಿಗಳನ್ನು ಪುನಃ ಬಿಸಿ ಮಾಡುವದರ ನಿಷೇಧ
ಪಕ್ತ್ವಾ ಶೀತೀಕೃತಂ ತಪ್ತಂ ತತ್ಸರ್ವಂ ಸ್ಯಾದ್ವಿಷೋಪಮಂ ।
(ನಿ. ರ.)

ತುಪ್ಪ, ತೈಲ, ಕುಡಿಯುವ ನೀರು, ಕಷಾಯ, ಮತ್ತು ಮೇಲೋಗರ ಮುಂತಾದವುಗಳು ಪಾಕಮಾಡಲ್ಪಟ್ಟು ತಣಿದ ಮೇಲೆ, ಪುನಃ ಬಿಸಿಮಾಡಲ್ಪಟ್ಟರೆ, ಅವೆಲ್ಲಾ ವಿಷಕ್ಕೆ ಸಮಾನವಾಗುವವು.

49 (*a*) ದ್ರವೇಷು ಚಿರಕಾಲಸ್ಥಂ ದ್ರವ್ಯಂ ಯತ್ಸಂಧಿತಂ ಭವೇತ್ ।
ಆಸವಾರಿಷ್ಟಭೇದೈಸ್ತು ಪ್ರೋಚ್ಯತೇ ಭೇಷಜೋಚಿತಂ ॥
ಆಸವಾರಿಷ್ಟಗಳ ಕ್ರಮ
ಯದಪಕ್ವೌಷಧಾಂಬುಭ್ಯಾಂ ಸಿದ್ಧಂ ಮದ್ಯಂ ಸ ಆಸವಃ ।
ಅರಿಷ್ಟಃ ಕ್ವಾಥಸಾಧ್ಯಃ ಸ್ಯಾತ್ ತಯೋರ್ಮಾನಂ ಪಲೋನ್ಮಿತಂ ॥ (ಶಾ. 99.)

ಔಷಧದ್ರವ್ಯವನ್ನು ದ್ರವಪದಾರ್ಥಗಳಲ್ಲಿ ಹೆಚ್ಚುಕಾಲ ಇಟ್ಟು, ಹುಳಿಸಿ, ಮಾಡಿದ ಆಸವ ಮತ್ತು ಅರಿಷ್ಟ ಎಂಬ ಎರಡು ವಿಧವಾದ ಮದ್ಯವು ಔಷಧಕ್ಕೆ ಉಚಿತವಾದದ್ದಾಗಿ ಹೇಳಲ್ಪಡುತ್ತದೆ. ಅವುಗಳಲ್ಲಿ ಔಷಧವನ್ನು ಪಕ್ವಮಾಡದೆ ತಣ್ಣೀರು ಕೂಡಿಸಿ ಮಾಡಿದ ಮದ್ಯವು ಆಸವ ಎಂತಲೂ, ಔಷಧವನ್ನು ನೀರಲ್ಲಿ ಹಾಕಿ ಕುದಿಸಿದ ಕಷಾಯದಿಂದ ತಯಾರಿಸಿದ ಮದ್ಯವು ಅರಿಷ್ಟ ಎಂತಲೂ, ತಿಳಿಯಬೇಕು. ಅವೆರಡರ ಮಾತ್ರೆಯು ಒಂದು ಪಲತೂಕವಾಗಿರುತ್ತದೆ.

(*b*) ಅನುಕ್ತಮಾನಾರಿಷ್ಟೇಷು ದ್ರವೇ ದ್ರೋಣೇ ಗುಡಾತ್ತುಲಾಂ ।
ಕ್ಷ್ವೇದ್ರಂ ಕ್ಷಿಪೇದ್ಗುಡಾದರ್ಧಂ ಪ್ರಕ್ಷೇಪಂ ದಶಮಾಂಶಿಕಂ ॥ (ಶಾ. 100.)

ಅರಿಷ್ಟಗಳಿಗೆ ತೂಕ ಹೇಳದ ಸಂಗತಿಯಲ್ಲಿ, 16 ಪ್ರಸ್ಥ ದ್ರವಕ್ಕೆ 100 ಪಲ ಬೆಲ್ಲ, ಅದರ ಅರ್ಧ ಜೇನು, ಮತ್ತು (ಬೆಲ್ಲದ) ಹತ್ತನೇ ಒಂದು ಅಂಶ ಪ್ರಕ್ಷೇಪ (ಮೇಲ್ಪಡಿ), ಕೂಡಿಸಬೇಕು.

50. ಕಂದಮೂಲಫಲಾದೀನಿ ಸಸ್ನೇಹಲವಣಾನಿ ಚ ।
ಶುಕ್ತ ಮತ್ತು ಚುಕ್ರ
ಯತ್ರ ದ್ರವೇಽಭಿಸೂಯಂತೇ ತಚ್ಛುಕ್ತಮಭಿಧೀಯತೇ ॥
ವಿನಷ್ಟಮಮ್ಲತಾಂ ಯಾತಂ ಮದ್ಯಂ ವಾ ಮಧುರದ್ರವಃ ।
ವಿನಷ್ಟಃ ಸಂಧಿತೋ ಯಸ್ತು ತಚ್ಚುಕ್ರಮಭಿಧೀಯತೇ ॥ (ಶಾ. 100.)

ಗಡ್ಡೆ, ಬೇರು, ಫಲ ಮೊದಲಾದವುಗಳು ಸ್ನೇಹ ಮತ್ತು ಲವಣಗಳೊಂದಿಗೆ ದ್ರವದಲ್ಲಿ ಹೆಚ್ಚು ಕಾಲ ಇರಿಸಲ್ಪಟ್ಟಲ್ಲಿ, ಯಾವ ರಸಾಂತರವನ್ನು ಹುಟ್ಟಿಸುತ್ತವೋ, ಅದಕ್ಕೆ ಶುಕ್ತವೆಂದು ಹೆಸರು. ಮದ್ಯವು ರಸಾಂತರ ಪಡೆದು ಹುಳಿಯಾದದ್ದಕ್ಕೆ, ಅಥವಾ ಸೀಯಾದ ದ್ರವವೇ ಆ ರುಚಿ ಹೋಗಿ ಹುಳಿಯಾದದ್ದಕ್ಕೆ, ಚುಕ್ರವೆನ್ನುತ್ತಾರೆ.

51 (*a*) ಯನ್ಮಸ್ತ್ಯಾದಿ ಶುಚೌ ಭಾಂಡೇ ಸಕ್ಷೌದ್ರಗುಡಕಾಂಜಿಕಂ ।
ಚುಕ್ರಸಂಧಾನದ ಕ್ರಮ ಧಾನ್ಯರಾಶೌ ತ್ರಿರಾತ್ರಸ್ಥಂ ಶುಕ್ತಂ ಚುಕ್ರಂ ತದುಚ್ಯತೇ ॥
(ಚಿ ಸಾ. ಸಂ 179)

ಮೊಸರುನೀರು ಮುಂತಾದದ್ದಕ್ಕೆ ಜೇನನ್ನೂ, ಬೆಲ್ಲವನ್ನೂ, ಹುಳಿ ಗಂಜಿನೀರನ್ನೂ ಕೂಡಿಸಿ, ಅದನ್ನು ಶುಚಿಯಾದ ಮಂಡೆಯಲ್ಲಿ ತುಂಬಿ, ಧಾನ್ಯದ ರಾಶಿಯಲ್ಲಿ ಮೂರು ದಿನಗಳು ಇರಿಸಿದ್ದಲ್ಲಿ, ಉಂಟಾಗುವ ಶುಕ್ತಕ್ಕೆ ಚುಕ್ರವೆನ್ನುತ್ತಾರೆ

(*b*) ಗುಡಕ್ಷೌದ್ರಾರಣಾಲಾನಿ ಸಮಸ್ತಾನಿ ಯಥೋತ್ತರಂ ।
ಶಂಸಂತಿ ದ್ವಿಗುಣಾನ್ ಭಾಗಾನ್ ಸಮ್ಯಕ್ ಚುಕ್ರಸ್ಯ ಸಿದ್ಧಯೇ ॥
(ಚಿ ಸಾ. ಸಂ 179)

ಚುಕ್ರವು ಸರಿಯಾಗಿ ಸಿದ್ಧಿಸುವದಕ್ಕೋಸ್ಕರ ಬೆಲ್ಲ, ಜೇನು, ಹುಳಿ ಗಂಜಿನೀರು, ಮತ್ತು ಮೊಸರುನೀರು, ಇವುಗಳನ್ನು ಯಥೋತ್ತರ ಇಮ್ಮಡಿಯಾಗಿ ಕೂಡಿಸುವದು ಪ್ರಶಸ್ತವೆನ್ನುತ್ತಾರೆ

52. ಗುಡಾಂಬುನಾ ಸತೈಲೇನ ಕಂದಶಾಕಫಲೈಸ್ತಥಾ ।
ಗುಡಶುಕ್ತ ಸಂಧಿತಂ ಚಾಮ್ಲತಾಂ ಯಾತಂ ಗುಡಸುಕ್ತಂ ಪ್ರಚಕ್ಷತೇ ॥ (ಶಾ. 100.)

ಬೆಲ್ಲ, ನೀರು, ತೈಲ, ಗಡ್ಡೆ, ಬೇರು, ಫಲ, ಇವುಗಳನ್ನು ಕೂಡಿಸಿಟ್ಟಲ್ಲಿ, ಅವು ಕೂಡಿ ಉಂಟಾಗುವ ಹುಳಿಯಾದ ಮದ್ಯಕ್ಕೆ ಗುಡಸುಕ್ತವೆನ್ನುತ್ತಾರೆ.

XXI ನೇ ಅಧ್ಯಾಯ.

ವಮನ ವಿರೇಚನ ವಿಧಿಗಳು.

1. ಪ್ರಾಧಾನ್ಯೇನ ವಮನವಿರೇಚನೇ ವರ್ತೇತೇ ನಿರ್ಹರಣೇ ದೋಷಾಣಾಂ | (ಸು. 546.)

ವಮನವಿರೇಚನಗಳ ಉಪಯೋಗ

ದೋಷಗಳನ್ನು ಹೊರಗೆ ಹಾಕುವದಕ್ಕೆ ವಮನ (ವಾಂತಿ ಮಾಡಿಸುವದು) ವಿರೇಚನ (ಜುಲಾಬು ಮಾಡಿಸುವದು)ಗಳು ಪ್ರಧಾನವಾಗಿರುತ್ತವೆ

2. ತಥಾತುರಂ ಸ್ನಿಗ್ಧಂ ಸ್ವಿನ್ನಮಭಿಷ್ಯಂದಿಭಿರಾಹಾರೈರನವಬದ್ಧದೋಷ ಮವಲೋಕ್ಯ ಶ್ವೋ ವಮನಂ ಪಾಯಯಿತಾಸ್ಮೀತಿ ಸಂಭೋಜಯೇತ್ ತೀಕ್ಷ್ಣಾಗ್ನಿಂ ಬಲವಂತಂ ಬಹುದೋಷಂ ಮಹಾವ್ಯಾಧಿಪರೀತಂ ವಮನ ಸಾತ್ಮ್ಯಂ ಚ | (ಸು. 547.)

ವಮನಕ್ಕೆ ಹಿಂದಿನ ದಿನದ ಕರ್ತವ್ಯ

ತೀಕ್ಷ್ಣವಾದ ಅಗ್ನಿಯುಳ್ಳವನೂ, ಬಲವಂತನೂ, ಬಹು ದೋಷಗಳಿಂದ ಕೂಡಿದವನೂ, ಮಹಾವ್ಯಾಧಿಯಿಂದ ಪೀಡಿತನೂ, ವಮನಸಾತ್ಮ್ಯನಾದವನೂ ಆದ ರೋಗಿಯನ್ನು (ಸ್ನೇಹನ ಕ್ರಮದಿಂದ) ಸ್ನಿಗ್ಧನೂ, (ಸ್ವೇದನ ಕ್ರಮದಿಂದ) ಸ್ವಿನ್ನನೂ, ಬದ್ಧದೋಷವಿಲ್ಲದವನೂ ಆದದ್ದನ್ನು ನೋಡಿಕೊಂಡು, ನಾಳೆ ವಾಂತಿ ಮಾದ್ದನ್ನು ಕೊಡಿಸುತ್ತೇನೆಂತ (ಹಿಂದಿನ ದಿನ) ಅಭಿಷ್ಯಂದಿಯಾದ ಆಹಾರಗಳಿಂದ ಚೆನ್ನಾಗಿ ಉಣ್ಣಿಸಬೇಕು.

ಪರಾ ಅಭಿಷ್ಯಂದಿಯ ಅರ್ಥಕ್ಕೆ 713ನೇ ಪುಟ ನೋಡಿರಿ

3. ಅಥಾಪರೇದ್ಯುಃ ಪೂರ್ವಾಹ್ಣೇ ಸಾಧಾರಣೇ ಕಾಲೇ ವಮನದ್ರವ್ಯ ಕಷಾಯಕಲ್ಕಚೂರ್ಣಸ್ನೇಹಾನಾಮನ್ಯತಮಸ್ಯ ಮಾತ್ರಾಂ ಪಾಯ ಯಿತ್ವಾ ವಾಮಯೇತ್ | ಯಥಾಯೋಗಂ ಕೋಷ್ಠವಿಶೇಷಮವೇ ಕ್ಷ್ಯಾಸಾತ್ಮ್ಯಜೇಭ್ವಸ್ದುರ್ಗಂಧದುರ್ದರ್ಶನಾನಿ ಚ ವಮನಾನಿ ವಿದ ಧ್ಯಾತ್ | ಅತೋ ವಿಪರೀತಾನಿ ವಿರೇಚನಾನಿ | (ಸು. 547.)

ವಮನಕ್ಕೆ ಕಾಲ ಮತ್ತು ದ್ರವ್ಯ

ಮಾರನೆ ದಿನ ಪೂರ್ವಾಹ್ಣದಲ್ಲಿ, ಶೀತವೂ ಉಷ್ಣವೂ ಅಲ್ಲದ ಕಾಲದಲ್ಲಿ, ವಮನದ್ರವ್ಯ ಗಳಿಂದ ತಯಾರಿಸಲ್ಪಟ್ಟ ಕಷಾಯ, ಕಲ್ಕ, ಚೂರ್ಣ, ಸ್ನೇಹ, ಇವುಗಳಲ್ಲಿ ಒಂದನ್ನು ತಕ್ಕ ಪ್ರಮಾಣದಲ್ಲಿ ಕುಡಿಸಿ ವಾಂತಿ ಮಾಡಿಸಬೇಕು. ರೋಗಿಯ ಹೊಟ್ಟೆಯ ಸ್ಥಿತಿವಿಶೇಷವನ್ನು ನೋಡಿಕೊಂಡು, ರೋಗಿಗೆ ಹಿತವಲ್ಲದ್ದು, ಅಸಹ್ಯಕರವಾದದ್ದು, ದುರ್ವಾಸನೆಯುಳ್ಳದ್ದು, ಮತ್ತು ನೋಡುವಿಕೆಗೆ ಅಹಿತವಾದದ್ದು ಆಗುವ ರೀತಿಯಲ್ಲಿ ಯೋಗ ಪ್ರಕಾರ ವಮನ ಔಷಧಗಳನ್ನು ಕಲ್ಪಿಸಬೇಕು. ವಿರೇಚನ ಔಷಧಗಳು ಇದಕ್ಕೆ ವಿರುದ್ಧ ಲಕ್ಷಣಗಳುಳ್ಳ ವಾಗಿರಬೇಕು.

4 ತತ್ರ ಸುಕುಮಾರಂ ಕೃಶಂ ಬಾಲಂ ವೃದ್ಧಂ ಭೀರುಂ ವಾ ವಮನಸಾ
ವಮನ ಪಾನಾ ಧ್ಯೇಷು ಏಕಾರೇಷು ಕ್ಷೀರದಧಿತಕ್ರಯವಾಗೂನಾಮನ್ಯತಮಮಾ
ನಂತರದ ಉಪ ಕಂರಂ ಪಾಯಯೇತ್ | ಪೀತೌಷಧಂ ಚ ಪಾಣಿಭಿರಗ್ನಿತಪ್ತೈಃ ಪ್ರತಾ
ಚಾರ ವ್ಯಮಾನಂ ಮುಹೂರ್ತಮುಪೇಕ್ಷೇತ | (ಸು. 547.)

ಅತಿನೂತನ ಶರೀರದವನಿಗೂ, ಕೃಶನಾದವನಿಗೂ, ಬಾಲನಿಗೂ, ವೃದ್ಧನಿಗೂ, ಹೆಚ್ಚಾಗಿ ಅಂಜುವ ಸ್ವಭಾವದವನಿಗೂ, ವಮನದಿಂದ ಗುಣವಾಗತಕ್ಕ ರೋಗಗಳಲ್ಲಿ ಹಾಲು, ಮೊಸರು, ಮಜ್ಜಿಗೆ, ಗಂಜಿನೀರು, ಇವುಗಳೊಳಗೆ ಒಂದನ್ನು ಕಂರದ ವರೆಗೆ ಕುಡಿಸಬೇಕು ಔಷಧ ವನ್ನು ಕುಡಿದವನನ್ನು ಅಗ್ನಿಯಿಂದ ಬಿಸಿಯಾದ ಕೈಗಳಿಂದ ಒರಸಿ ಬಿಸಿಮಾಡುತ್ತಾ, ಎರಡು ಗಳಿಗೆ ಕಳೆಯಬೇಕು

ಷರಾ ಕ್ಷೀರಾದಿಗಳು ಔಷಧಸಿದ್ಧವಲ್ಲದಿದ್ದರೆ, ಅವುಗಳನ್ನು ವಮನಪಾನಕ್ಕೆ ಮುಂಚಿತವಾಗಿ ಕುಡಿಸಬೇಕಾಗಿ ಸಿ ಸಂ ವ್ಯಾ

5. ತಸ್ಯ ಚ ಸ್ವೇದಪ್ರಾದುರ್ಭಾವೇಣ ಶಿಥಿಲತಾಮಾಪನ್ನಂ ಸ್ವೇಭ್ಯಃ
ಸ್ಥಾನೇಭ್ಯಃ ಪ್ರಚಲಿತಂ ಕುಕ್ಷಿಮನುಸ್ಮೃತಂ ಜಾನೀಯಾತ್ತತಃ ಪ್ರವೃತ್ತ
ವಮನಾರಂಭದಲ್ಲಿ ಹೃಲ್ಲಾಸಂ ಜ್ಞಾತ್ವಾ ಜಾನುಮಾತ್ರಾಸನೋಪವಿಷ್ಟಮಾಪ್ತೈರ್ಲಲಾಟೇ
ಮಾಡಬೇಕಾದದ್ದು ಪೃಷ್ಠೇ ಪಾರ್ಶ್ವಯೋಃ ಕಂರೇ ಚ ಪಾಣಿಭಃ ಸುಪರಿಗೃಹೀತಮಂಗು
ಲೀಗಂಧರ್ವಹಸ್ತೋತ್ಪಲನಾಲಾನಾಮನ್ಯತಮೇನ ಕಂರಮಭಿಸ್ಪೃ
ಶಂತಂ ವಾಮಯೇತ್ತಾವದ್ಯಾವತ್ಸಮ್ಯಗ್ವಾಂತಲಿಂಗಾನೀತಿ | (ಸು. 547.)

ಆತಗೆ ಬೆವರು ಹೊರಗೆ ಕಂಡ ಕೂಡಲೇ, (ದೋಷಗಳು) ಸಡಿಲಾಗಿ ತಮ್ಮ ತಮ್ಮ ಸ್ಥಾನಗಳನ್ನು ಬಿಟ್ಟು ಹೊಟ್ಟೆಗೆ ಬಂದು ಸೇರಿದವೆಂತ ತಿಳಿಯಬೇಕು. ಆ ಮೇಲೆ ಬಿಕ್ಕಟ್ಟು (ವಾಂತಿ ಬರುವ ಲಕ್ಷಣ) ಹುಟ್ಟಿದ್ದು ತಿಳಿದು, ಕಾಲ ಮೊಣಗಂಟಿನಷ್ಟು ಎತ್ತರವಾದ ಆಸನದ ಮೇಲೆ ರೋಗಿಯನ್ನು ಕೂತುಕೊಳ್ಳಿಸಿ, ಅವನ ಆಪ್ತರು ಅವನ ಹಣೆಯಲ್ಲಿ, ಬೆನ್ನಿನಲ್ಲಿ, ಪಕ್ಕ ಗಳಲ್ಲಿ, ಮತ್ತು ಕಂರದಲ್ಲಿ, ಕೈಗಳಿಂದ ಚೆನ್ನಾಗಿ ಹಿಡಕೊಂಡು, ರೋಗಿಯ ಬೆರಳಿನಿಂದ, ಅಥವಾ ಬಿಳೇ ಹರಳೆಲೆಯ ದಂಟಿನಿಂದ, ಅಥವಾ ನೈದಿಲೆದಂಟಿನಿಂದ, ಗಂಟಲನ್ನು ಮುಟ್ಟಿಸಿ, ಒಳ್ಳೇದಾಗಿ ವಾಂತಿಯಾದ ಲಕ್ಷಣಗಳು ಕಾಣುವ ವರೆಗೆ, ವಾಂತಿಮಾಡಿಸಬೇಕು.

6. ಪಿತ್ತೇ ಕಫಸ್ಯಾನು ಸುಖಂ ಪ್ರವೃತ್ತೇ
ವಮನ ಸರಿಯಾ ಶುದ್ಧೇಷು ಹೃತ್ಕಂರಶಿರಸ್ಸು ಚಾಪಿ |
ದ್ದರ ಲಕ್ಷಣಗಳು ಲಘೌ ಚ ದೇಹೇ ಕಫಸಂಸ್ರವೇ ಚ
ಸ್ನಿತೇ ಸುವಾಂತಂ ಪುರುಷಂ ವ್ಯವಸ್ಯೇತ್ || (ಸು. 548.)

ಕಫದ ಹಿಂದೆ ಪಿತ್ತವು ಸುಖವಾಗಿ ಹೊರಟು ಹೋಗಿ, ಹೃದಯ, ಕಂರ ಮತ್ತು ತಲೆ ಸಹ ಶುದ್ಧವಾಗಿ, ದೇಹವು ಲಘುವಾಗಿ, ಕಫ ಹೊರಗೆ ಸ್ರವಿಸುವದು ನಿಂತಾಗ್ಗೆ, ಆ ಪುರು ಷನು ಒಳ್ಳೇದಾಗಿ ವಾಂತಿ ಮಾಡಿದನೆಂದು ನಿಶ್ಚಯಿಸಬೇಕು.

7. ಸಮ್ಯಗ್ವಾಂತಂ ಚೈನಮಭಿಸಮೀಕ್ಷ್ಯ ಸ್ನೇಹನವಿರೇಚನಶಮನಾನಾಂ
ವಮನಾನಂತರದ ಧೂಮಾನಾಮನ್ಯತಮಂ ಸಾಮರ್ಥ್ಯತಃ ಪಾಯಯಿತ್ವಾಚಾರಿಕ
ಲ್ಲಿ ಧೂಮಪಾನ ಮಾದಿಶೇತ್ | (ಸು. 548.)

ಅವನು ಒಳ್ಳೇದಾಗಿ ವಾಂತಿ ಮಾಡಿದ್ದನ್ನು ತಿಳಿದು, ಸ್ನೇಹನ ಹೊಗೆ, ವಿರೇಚನ ಹೊಗೆ ಮತ್ತು ಶಮನ ಹೊಗೆ, ಇವುಗಳೊಳಗೆ ಒಂದನ್ನು (ದೋಷಕ್ಕೆ ಲಕ್ಷ್ಯವಿಟ್ಟು) ಅವನ ಸಾಮರ್ಥ್ಯಕ್ಕೆ ತಕ್ಕವಾಗಿ ಪಾನಮಾಡಿಸಿ, ಆಹಾರವಿಹಾರಾದಿಗಳ ಪಥ್ಯ ವಿಧಿಸಬೇಕು.

8. ತತೋಽಪರಾಹ್ಣೇ ಶುಚಿಶುದ್ಧದೇಹಮುಷ್ಣಾಭಿರದ್ಭಿಃ ಪರಿಷಿಕ್ತಗಾತ್ರಂ |
ವಮನಾನಂತರದ ಕುಲತ್ಥಮುದ್ಗಾಢಕಿಜಾಂಗಲಾನಾಂ ಯೂಷೈ ರಸೈರ್ವಾವ್ಯುಪಭೋಜ
ಪಥ್ಯ ಯೇತ್ತು || (ಸು. 548)

ಆ ಮೇಲೆ ಅಪರಾಹ್ಣದಲ್ಲಿ ಅವನನ್ನು ಬಿಸಿನೀರಿನಿಂದ ಸ್ನಾನ ಮಾಡಿಸಿ, ಅವನ ದೇಹವು ಶುದ್ಧವೂ, ಶುಚಿಯೂ ಆದ ಮೇಲೆ, ಹುರುಳೀಸಾರು, ಹೆಸರುಬೇಳೆ ಸಾರು, ತೊಗರಿಬೇಳೆ ಸಾರು, ಅಥವಾ ಜಾಂಗಲ ಮಾಂಸದ ರಸ, ಇವುಗಳಿಂದ ಸಹ ಯಥಾಯುಕ್ತವಾಗಿ ಉಣ್ಣಿಸಬೇಕು.

ಪರಾ ಅಗ್ನಿ ಮುಂದವಾಗಿರುವದಾದರೆ, ಅಥವಾ ಕಫ ಬಹಳ ಕಡಿಮೆಯಾಗಿದ್ದರೆ, ಗಂಜಿಯನ್ನು ಕೊಡಬೇಕು ಎಂತ ತಾತ್ಪರ್ಯ

9. ಛಿನ್ನೇ ತರೌ ಪುಷ್ಪಫಲಪ್ರರೋಹಾ ಯಥಾ ವಿನಾಶಂ ಸಹಸಾ ವ್ರಜಂತಿ |
ವಮನದ ಗುಣ ತಥಾಹೃತೇ ಶ್ಲೇಷ್ಮಣಿ ಶೋಧನೇನ ತಜ್ಜಾ ವಿಕಾರಾಃ ಪ್ರಶಮಂ ಪ್ರಯಾಂತಿ ||
(ಸು. 548.)

ಮರವನ್ನು ಕಡಿದರೆ ಅದರ ಹೂವು, ಫಲ ಮತ್ತು ಚಿಗುರುಗಳು ಹ್ಯಾಗೆ ಬೇಗನೇ ನಾಶ ಹೊಂದುತ್ತವೋ, ಹಾಗೆ ಶೋಧನದಿಂದ ಕಫವನ್ನು ತೆಗೆದುಬಿಟ್ಟರೆ, ಆ ಕಫದಿಂದ ಹುಟ್ಟಿದ ರೋಗಗಳೆಲ್ಲಾ ಶಾಂತವಾಗುತ್ತವೆ.

10. ನ ವಾಮಯೇತ್ ತೈಮಿರಿಕೋರ್ಧ್ವವಾತ
ಗುಲ್ಮೋದರಪ್ಲೀಹಕೃಮಿಶ್ರಮಾರ್ತಾನ್ |
ಸ್ಥೂಲಕ್ಷತಕ್ಷೀಣಕೃಶಾತಿವೃದ್ಧ
ಮೂತ್ರಾತುರಾನ್ ಕೇವಲವಾತರೋಗಾನ್ ||
ವಮನಕ್ಕೆ
ಅಯೋಗ್ಯರು ಸ್ತರೋಪಘಾತಾಧ್ಯಯನಪ್ರಸಕ್ತ
ದುಶ್ಚರ್ದಿದುಃಕೋಷ್ಣತೃಡಾರ್ತಬಾಲಾನ್ |
ಊರ್ಧ್ವಾಸ್ರಪಿತ್ತಿಕ್ಷುಧಿತಾತಿರೂಕ್ಷ
ಗರ್ಭಿಣ್ಯುದಾವರ್ತಿನಿರೂಹಿತಾಂಶ್ಚ || (ಸು. 548.)

ತಿಮಿರ, ಊರ್ಧ್ವವಾಯು, ಗುಲ್ಮ, ಉದರವ್ಯಾಧಿ, ಪ್ಲೀಹವೃದ್ಧಿ, ಕೃಮಿ, ಶ್ರಮ, ಇವುಗಳಿಂದ ಪೀಡಿತರಾದವರೂ, ಸ್ಥೂಲರೂ, ಕ್ಷತರೂ, ಕ್ಷೀಣರೂ, ಕೃಶರೂ, ಅತಿವೃದ್ಧರೂ,

ಮೂತ್ರರೋಗಿಗಳೂ, ಬರೇ ವಾತರೋಗದವರೂ, ಸ್ವರೋಪಘಾತದವರೂ, ಅಧ್ಯಯನದ ವ್ಯಾಸಂಗದವರೂ, ಕಷ್ಟದಿಂದ ವಾಂತಿಮಾಡತಕ್ಕವರೂ, ಹೊಟ್ಟೆ ಕೆಟ್ಟವರೂ, ಬಾಯಾರಿಕೆಯಿಂದ ಪೀಡಿತರಾದವರೂ, ಬಾಲರೂ, ಊರ್ಧ್ವರಕ್ತಪಿತ್ತದವರೂ, ಹಸಿದವರೂ, ಅತಿರೂಕ್ಷರೂ, ಗರ್ಭಿಣಿಯರೂ, ಉದಾವರ್ತ ರೋಗದವರೂ, ನಿರೂಹವಸ್ತಿ ಸೇವಿಸಿದವರೂ, ಇವರನ್ನು ವಾಂತಿಮಾಡಿಸಬಾರದು.

11. ಅವಮ್ಯವಮನಾದ್ರೋಗಾಃ ಕೃಛ್ರತಾಂ ಯಾಂತಿ ದೇಹಿನಾಂ |
ಅನುಚಿತವಾದ ವಮನದ ದೋಷ
ಅಸಾಧ್ಯತಾಂ ವಾ ಗಚ್ಛಂತಿ ನೈತೇ ವಾಮ್ಯಾಸ್ತತಃ ಸ್ಮೃತಾಃ || (ಸು. 548)

ವಮನಕ್ಕೆ ಅಯೋಗ್ಯರಾದವರಿಗೆ ಮದ್ದುಕೊಟ್ಟು ವಾಂತಿಮಾಡಿಸುವದರಿಂದ ಅವರ ರೋಗಗಳು ವಾಸಿಯಾಗುವದಕ್ಕೆ ಕಷ್ಟದ ಸ್ಥಿತಿಯನ್ನು, ಅಥವಾ ಅಸಾಧ್ಯತೆಯನ್ನು, ಹೊಂದುವವು. ಆದ್ದರಿಂದ ಇಂಥವರನ್ನು ವಾಂತಿಮಾಡಿಸಬಾರದಾಗಿ ಹೇಳೋಣಾಗಿದೆ.

12. ವಿರೇಚನಮಪಿ ಸ್ನಿಗ್ಧಸ್ವಿನ್ನಾಯ ವಾಂತಾಯ ಚ ದೇಯಂ | ಅಥಾತುರಂ
ಶ್ವೋ ವಿರೇಚನಂ ಪಾಯಯಿತಾಸ್ಮೀತಿ ಲಘು ಭೋಜಯೇತ್ | ಫಲಾ
ಎರೇಚನಕ್ಕೆ ಹಿಂದಣ ದಿನದ ಕರ್ತವ್ಯ
ಮ್ಲಮುಷ್ಣೋದಕಂ ಚೈನಮನುಪಾಯಯೇತ್ | ಅಥಾಽಪರೇಽಹನಿ
ವಿಗತಶ್ಲೇಷ್ಮಾಣಮಾತುರೋಪಕ್ರಮಣೀಯಾದವೇಕ್ಷ್ಯಾನ್ಯತರಮಥಾಸ್ಮೈ
ಔಷಧಮಾತ್ರಾಂ ಪಾತುಂ ಪ್ರಯಚ್ಛೇತ್ | (ಸು. 549.)

ವಿರೇಚನವನ್ನು ಸಹ ಸ್ನೇಹನ ಮತ್ತು ಸ್ವೇದನಮಾಡಿಸಿಕೊಂಡವನಿಗೆ ಮತ್ತು ವಮನ ಕ್ರಮ ನಡಿಸಿದ ಮೇಲೆ ಕೊಡತಕ್ಕದ್ದಾಗಿರುತ್ತದೆ. ಅದರಲ್ಲಿ ರೋಗಿಗೆ ನಾಳೆ ವಿರೇಚನದ ಔಷಧವನ್ನು ಕುಡಿಸುತ್ತೇನೆಂತ (ಹಿಂದಿನ ದಿನದಲ್ಲಿ) ಲಘುವಾದ ಭೋಜನ ಮಾಡಿಸಿ, (ಮಾದಳ ಮುಂತಾದ) ಹಣ್ಣುಗಳ ಹುಳಿಯನ್ನು ಕೊಟ್ಟು, ಬಿಸಿನೀರನ್ನು ಕುಡಿಸಬೇಕು. ಅನಂತರ ಮಾರನೆ ದಿನ ರೋಗಿಯು ಕಫವನ್ನು ತೆಗೆದುಬಿಟ್ಟ ಮೇಲೆ, ಅವನನ್ನು ಚಿಕಿತ್ಸೋಪಕ್ರಮಕ್ಕೆ ಹೇಳಿರುವ ರೀತಿಯಿಂದ ಪರೀಕ್ಷಿಸಿ, ಆ ಮೇಲೆ ಅವನಿಗೆ ಕುಡಿಯುವದಕ್ಕೆ ತಕ್ಕ ಪ್ರಮಾಣದಲ್ಲಿ ಔಷಧವನ್ನು ಕೊಡತಕ್ಕದ್ದು.

ಷರಾ ಹಿಂದಿನ ದಿನದ ಊಟ ಎಂಬದು ಪೂರ್ವಾಹ್ನದಲ್ಲಿ ಎಂತಲೂ ಆ ದಿನ ರಾತ್ರಿ ಊಟ ನಿಷಿದ್ಧವೆಂತಲೂ ಸಿ ಸಂ ವ್ಯಾ

13. ತತ್ರ ಮೃದುಃ ಕ್ರೂರೋ ಮಧ್ಯ ಇತಿ ತ್ರಿವಿಧಃ ಕೋಷ್ಠೋ ಭವತಿ | ತತ್ರ
ಬಹುಪಿತ್ತೋ ಮೃದುಃ ಸ ದುರ್ಗ್ಹೀನಾಪಿ ವಿರಿಚ್ಯತೇ | ಬಹುವಾತಶ್ಲೇ
ಕೋಷ್ಠಭೇದದ ಮೇಲೆ ಎರೇಚನ ಮಾತ್ರಾಭೇದ
ಷ್ಮಾ ಕ್ರೂರಃ ಸ ದುರ್ವಿರೇಚ್ಯಃ | ಸಮದೋಷೋ ಮಧ್ಯಮಃ ಸ ಸಾ
ಧಾರಣ ಇತಿ | ತತ್ರ ಮೃದೌ ಮಾತ್ರಾ ಮೃದ್ವೀ ತೀಕ್ಷ್ಣೇ ಕ್ರೂರೇ ಮ
ಧ್ಯೇ ಮಧ್ಯಾ ಕರ್ತವ್ಯೇತಿ | (ಸು. 549.)

ಮಾತ್ರೆ ನಿಶ್ಚಯಿಸುವಾಗ್ಗೆ ಹೊಟ್ಟೆಯು ಮೃದು, ಕ್ರೂರ, ಮತ್ತು ಮಧ್ಯ ಎಂಬ ಮೂರು ವಿಧವಾಗಿರುತ್ತದೆಂಬದನ್ನು ತಿಳಿದಿರಬೇಕು. ಅವುಗಳೊಳಗೆ ಬಹು ಪಿತ್ತವುಳ್ಳದ್ದು ಮೃದು;

ಅದಕ್ಕೆ ಹಾಲು ಕೊಟ್ಟರೂ ವಿರೇಚನವಾಗುತ್ತದೆ. ಬಹು ವಾತಕಫಗಳುಳ್ಳದ್ದು ಕ್ರೂರ; ಅದು ವಿರೇಚನಕ್ಕೆ ಕಷ್ಟವಾದದ್ದು. ದೋಷಗಳು ಸಮವಾಗಿದ್ದದ್ದು ಮಧ್ಯಮ; ಅದಕ್ಕೆ ಸಾಧಾರಣವಾದ ವಿರೇಚನ ಸಾಕಾಗುತ್ತದೆ. ಮೃದುಕೋಷ್ಠಕ್ಕೆ ಮೃದುವಾದ ಮಾತ್ರೆ, ಕ್ರೂರಕೋಷ್ಠಕ್ಕೆ ತೀಕ್ಷ್ಣವಾದ ಮಾತ್ರೆ, ಮತ್ತು ಮಧ್ಯಸ್ಥಿತಿಯ ಕೋಷ್ಠಕ್ಕೆ ಸಾಧಾರಣವಾದ ಮಾತ್ರೆ ಉಪಯೋಗಿಸಬೇಕು.

14. ಯಥಾ ಚ ವಮನೇ ಪ್ರಸೇಕೌಷಧಕಫಪಿತ್ತಾನಿಲಾಃ ಕ್ರಮೇಣ ಗ
ಕ್ರಮವಾದ ವಮನ ವಿರೇಚನಗಳ ಲಕ್ಷಣಗಳು ಚ್ಛಂತಿ । ಏವಂ ವಿರೇಚನೇ ಮೂತ್ರಪುರೀಷಪಿತ್ತೌಷಧಕಫಾ ಇತಿ ।
(ಸು. 549.)

ವಾಂತಿಗೆ ಔಷಧ ಕೊಟ್ಟಾಗ್ಗೆ ಪ್ರಥಮತಃ ಎಂಜಲ ನೀರು, ಅನಂತರ ಔಷಧ, ಅನಂತರ ಕಫ, ಅನಂತರ ಪಿತ್ತ, ಕಡೆಗೆ ವಾಯು ಹ್ಯಾಗೆ ಕ್ರಮವಾಗಿ ಹೋಗುತ್ತವೋ, ಹಾಗೆಯೇ ವಿರೇಚನಕ್ಕೆ ತೆಗೆದುಕೊಂಡಾಗ ಪ್ರಥಮತಃ ಮೂತ್ರ, ಅನಂತರ ಮಲ, ಅನಂತರ ಪಿತ್ತ, ಅನಂತರ ಔಷಧ, ಕಡೆಗೆ ಕಫ (ಸಿಂಬಳ) ಹೊರಗೆ ಹೋಗುವವು.

15. ಗತೇಷು ದೋಷೇಷು ಕಫಾನ್ವಿತೇಷು ನಾಭ್ಯಾ ಲಘುತ್ವೇ ಮನಸಶ್ಚ ತುಷ್ಟೌ ।
ಚೆನ್ನಾಗಿ ವಿರೇಚನವಾದದ್ದರ ಲಕ್ಷಣಗಳು ಗತೇಽನಿಲೇ ಚಾಪ್ಯನುಲೋಮಭಾವಂ ಸಮ್ಯಗ್ವಿರಿಕ್ತಂ ಮನುಜಂ ವ್ಯವಸ್ಯೇತ್ ॥
(ಸು. 550)

ದೋಷಗಳು ಕಫ ಕೂಡಿಕೊಂಡು ಹೊರಗೆ ಹೋಗಿ, ನಾಭಿಯು ಲಘುವಾಗಿ, ಮನಸ್ಸಿಗೆ ಸಂತೋಷ ಉಂಟಾಗಿ, ವಾಯುವು ಸ್ವಭಾವಸ್ಥಿತಿಗೆ ಬಂದಲ್ಲಿ, ಆ ಮನುಷ್ಯನಿಗೆ ಸರಿಯಾಗಿ ವಿರೇಚನವಾಯಿತೆಂತ ನಿಶ್ಚಯಿಸಬೇಕು.

16. ಮಂದಾಗ್ನಿಮಕ್ಷೀಣಮಸದ್ವಿರಿಕ್ತಂ ನ ಪಾಯಯೇತಾಹನಿ ತತ್ರ ಪೇಯಾಂ ।
ವಿರಿಕ್ತನಿಗೆ ಆ ಹಾರನಿಯಮ ಕ್ಷೀಣಂ ತೃಡಾರ್ತಂ ಸುವಿರೇಚಿತಂ ಚ ತನ್ವೀಮಶೀತಾಂ ಲಘು ಪಾಯಯೇತ ॥
(ಸು. 550.)

ವಿರೇಚನವು ಸರಿಯಾಗದೆ, ಕ್ಷೀಣತೆಯುಂಟಾಗದೆ, ಅಗ್ನಿಯು ಮಂದವಾಗಿಯೇ ಇರುವದಾದರೆ, ಆ ದಿನ ಅವನಿಗೆ ಗಂಜಿಯನ್ನು ಕುಡಿಯ ಕೊಡಬಾರದು. ವಿರೇಚನವು ಸರಿಯಾಗಿ ಆಗಿ, ಬಾಯಾರಿಕೆಯುಂಟಾಗಿ, ಕ್ಷೀಣನಾದರೆ, ಅವನಿಗೆ ತೆಳ್ಳಗಾಗಿಯೂ ತಣ್ಣಗಲ್ಲದೆಯೂ ಇರುವ ಗಂಬಿಯನ್ನು ಲಘುವಾಗಿ ಕುಡಿಸಬೇಕು.

17. ಯಥೌದಕಾನಾಮುದಕೇಽಪನೀತೇ ಚರಸ್ಥಿರಾಣಾಂ ಭವತಿ ಪ್ರಣಾಶಃ ।
ವಿರೇಚನದ ಗುಣ ಪಿತ್ತೇ ಹೃತೇ ತ್ವೇವಮುಪದ್ರವಾಣಾಂ ಪಿತ್ತಾತ್ಮಕಾನಾಂ ಭವತಿ ಪ್ರಣಾಶಃ ॥
(ಸು. 550.)

ನೀರಾಶಯದಲ್ಲಿರುವ ಚರಸ್ಥಿರ ಸಜೀವಮೂರ್ತಿಗಳು ನೀರನ್ನು ತೆಗೆದುಬಿಟ್ಟರೆ ಹ್ಯಾಗೆ ನಾಶವನ್ನು ಹೊಂದುತ್ತವೋ, ಹಾಗೆ ಪಿತ್ತವನ್ನು (ವಿರೇಚನದ್ವಾರಾ) ತೆಗೆದುಬಿಟ್ಟರೆ, ಪಿತ್ತ ಸಂಬಂಧವಾದ ಉಪದ್ರವಗಳು ನಾಶವಾಗುತ್ತವೆ.

18. ಮಂದಾಗ್ನ್ಯತಿಸ್ನೇಹಿತಬಾಲವೃದ್ಧ
ಸ್ಥೂಲಾಃ ಕ್ಷತಕ್ಷೀಣಭಯೋಪತಪ್ತಾಃ ।
ಶ್ರಾಂತಸ್ತೃಡಾರ್ತೋಽಪರಿಜೀರ್ಣಭಕ್ತೋ
ಗರ್ಭಿಣ್ಯಂಧೋ ಗಚ್ಛತಿ ಯಸ್ಯ ಚಾಸೃಕ್ ।।
ವಿರೇಚನಕ್ಕೆ ಅಯೋಗ್ಯರು
ನವಪ್ರತಿಶ್ಯಾಯಮದಾತ್ಯಯಿಾ ಚ
ನವಜ್ವರೀ ಯಾ ಚ ನವಪ್ರಸೂತಾ ।
ಶಲ್ಯಾರ್ದಿತಾಶ್ಚಾಪ್ಯವಿರೇಚನೀಯಾಃ
ಸ್ನೇಹಾದಿಭಿರ್ಯೇ ತ್ವನುಪಸ್ಕೃತಾಶ್ಚ ।। (ಸು. 550)

ಅಗ್ನಿ ಮಂದವಾದವನೂ, ಅತಿಯಾಗಿ ಸ್ನೇಹ ಸೇವಿಸಿದವನೂ, ಬಾಲನೂ, ವೃದ್ಧನೂ, ಸ್ಥೂಲನೂ, ಕ್ಷತನೂ, ಕ್ಷೀಣನೂ, ಭಯಪಟ್ಟವನೂ, ಬಳಲಿದವನೂ, ಬಾಯಾರಿದವನೂ, ಉಂಡದ್ದು ಪೂರ್ಣವಾಗಿ ಜೀರ್ಣವಾಗದವನೂ, ಗರ್ಭಿಣಿಯೂ, ಯಾರಲ್ಲಿ ರಕ್ತವು ಕೆಳಗಣ ದ್ವಾರಗಳಿಂದ ಹೊರಗೆ ಹೋಗುತ್ತಿದೆಯೋ ಅಂಥವನೂ, ಹೊಸತಾಗಿ ನೆಗಡಿಯಾದವನೂ, ಮದಾತ್ಯಯ ರೋಗದವನೂ, ಹೊಸ ಜ್ವರದವನೂ, ಹೊಸ ಬಾಣಂತಿಯೂ, ಶಲ್ಯದಿಂದ ಪೀಡಿತನಾದವನೂ ಮತ್ತು ಯಾರನ್ನು ಮುಂದಾಗಿ ಸ್ನೇಹಾದಿ ಕ್ರಮಗಳಿಂದ ಸಿದ್ಧಪಡಿಸಲಿಲ್ಲವೋ ಅಂಥವರು ಸಹ ವಿರೇಚನಕ್ಕೆ ತಕ್ಕವರಲ್ಲ.

19. ವಿರೇಚನೈರ್ಯಾಂತಿ ನರಾ ವಿನಾಶ
ಅನುಚಿತವಾದ ವಿರೇಚನದ ದೋಷ
ಮಜ್ಞಾಪ್ರಯುಕ್ತೈರವಿರೇಚನೀಯಾಃ । (ಸು. 550.)

ವಿರೇಚನಕ್ಕೆ ಪಾತ್ರರಲ್ಲದ ಜನರು ಮೂಢತನಿಂದ ಕೊಡಲ್ಪಟ್ಟ ವಿರೇಚನದೌಷಧಗಳನ್ನು ಸೇವಿಸುವದರಿಂದ ನಾಶವನ್ನು ಹೊಂದುತ್ತಾರೆ.

20. ಯಾತ್ಯಧೋ ದೋಷಮಾದಾಯ ಪಚ್ಯಮಾನಂ ವಿರೇಚನಂ ।
ವಮನವಿರೇಚನೌಷಧಗಳ ಕರ್ಮಭೇದ.
ಗುಣೋತ್ಕರ್ಷಾದ್ ವ್ರಜತ್ಯೂರ್ಧ್ವಮಪಕ್ವಂ ವಮನಂ ಪುನಃ ।।

ವಿರೇಚನದ ಔಷಧವು ಪಾಕಮಾಡಲ್ಪಡುತ್ತಿರುವಾಗ ದೋಷವನ್ನು ಹಿಡಕೊಂಡು ಕೆಳಗೆ ಹೋಗುತ್ತದೆ; ಆದರೆ ವಮನದ ಔಷಧವು ತನ್ನ ಗುಣದ ಪ್ರಭಾವದಿಂದ ಅಪಕ್ವವಾಗಿಯೇ ಮೇಲೆ ಹೋಗುತ್ತದೆ

21. ಪೀತಂ ಯದೌಷಧಂ ಪ್ರಾತರ್ಭುಕ್ತಪಾಕಸಮೇ ಕ್ಷಣೇ ।
ಪ್ರಶಸ್ತ ವಿರೇಚನೌಷಧದ ಕರ್ಮಕಾಲ
ಪಕ್ತಿಂ ಗಚ್ಛತಿ ದೋಷಾಂಶ್ಚ ನಿರ್ಹರೇತ್ತತ್ಪ್ರಶಸ್ಯತೇ ।। (ಸು. 551.)

ಬೆಳಿಗ್ಗೆ ಕುಡಿದಂಥ ಯಾವ (ವಿರೇಚನದ) ಔಷಧವು ಉಂಡ ಅನ್ನ ಪಾಕವಾಗುವದಕ್ಕೆ ಸಮಕಾಲದೊಳಗೆ ಪಚನವಾಗಿ ದೋಷಗಳನ್ನು ತೆಗೆದುಬಿಡುತ್ತದೋ, ಅದು ಪ್ರಶಸ್ತವಾಗಿರುತ್ತದೆ.

22. ದುರ್ಬಲಸ್ಯ ಚಲಾನ್ ದೋಷಾನಲ್ಪಾನಲ್ಪಾನ್ ಪುನಃ ಪುನಃ ।
ಹರೇತ್ಪ್ರಭೂತಾನಲ್ಪಾಂಸ್ತು ಶಮಯೇತ್ಪ್ರಚ್ಯುತಾನಪಿ ॥

ದುರ್ಬಲನ ದೋಷಗಳನ್ನು ಪರಿಹರಿಸುವ ಉಪಾಯ

ಹರೇದ್ದೋಷಾಂಶ್ಚಲಾನ್ ಪಕ್ವಾನ್ ಬಲಿನೋ ದುರ್ಬಲಸ್ಯ ಚ ।
ಚಲಾ ಹ್ಯುಪೇಕ್ಷಿತಾ ದೋಷಾಃ ಕ್ಲೇಶಯೇಯುಶ್ಚಿರಂ ನರಂ ॥
(ಸು. 551.)

ದುರ್ಬಲನಾಗಿರುವವನ ದೋಷಗಳು ಮಹತ್ವದ್ದಾಗಿ, ಚಲನವಾಗಿದ್ದರೆ, ಅವುಗಳನ್ನು ಅಲ್ಪ ಅಲ್ಪವಾಗಿ ಪುನಃ ಪುನಃ ತೆಗೆದುಬಿಡಬೇಕು, ಆದರೆ ದೋಷಗಳು ಚಲನವಾಗಿದ್ದರೂ, ಅಲ್ಪವಾಗಿದ್ದರೆ, ಅವುಗಳನ್ನು ಶಮನಕ್ರಮಗಳಿಂದ ಜಯಿಸತಕ್ಕದ್ದು; ಮತ್ತು ಚಲನವಾದ ದೋಷಗಳು ಪಕ್ವವಾಗಿದ್ದರೆ, ರೋಗಿಯು ಬಲಿಷ್ಠನಾಗಲಿ ದುರ್ಬಲನಾಗಲಿ, ಅವುಗಳನ್ನು ತೆಗೆದುಬಿಡಬೇಕು, ಯಾಕಂದರೆ ಚಲಿಸಿದಂಥಾ ದೋಷಗಳು ಉಪೇಕ್ಷಿಸಲ್ಪಟ್ಟರೆ ಮನುಷ್ಯನನ್ನು ಬಹುಕಾಲ ದುಃಖಿಸುವವು.

23. ಮಂದಾಗ್ನಿಂ ಕ್ರೂರಕೋಷ್ಠಂ ಚ ಸಕ್ಷಾರಲವಣೈರ್ಯುತೈಃ ।
ಸಂಧುಕ್ಷಿತಾಗ್ನಿಂ ಸ್ನಿಗ್ಧಂ ಚ ಸ್ವಿನ್ನಂ ಚೈವ ವಿರೇಚಯೇತ್ ॥
(ಸು. 551.)

ವಿರೇಚನಕ್ಕೆ ಮುಂದಾಗಿ ಅಗ್ನಿಯನ್ನೂ ಕೋಷ್ಠವನ್ನೂ ಸರಿಪಡಿಸಿಕೊಳ್ಳುವದು

ಅಗ್ನಿಯು ಮಂದವಾಗಿ ಹೊಟ್ಟೆಯು ಕ್ರೂರಸ್ವಭಾವದ್ದಾಗಿರುವವನಿಗೆ ಕ್ಷಾರ ಲವಣಗಳಿಂದ ಕೂಡಿದ ತುಪ್ಪಗಳನ್ನು ಕೊಟ್ಟು ಅಗ್ನಿಯನ್ನು ಚುರುಕುಮಾಡಿ, ಸ್ನಿಗ್ಧನನ್ನಾಗಿ ಮಾಡಿ, ಸ್ವೇದಕ್ರಮದಿಂದ ಬೆವರಿಸಿದ ಮೇಲೆಯೇ ವಿರೇಚನ ಔಷಧವನ್ನು ಕೊಡತಕ್ಕದ್ದಾಗಿರುತ್ತದೆ.

24. ನ ಚಾತಿಸ್ನೇಹಪೀತಸ್ತು ಪಿಬೇತ್ಸ್ನೇಹವಿರೇಚನಂ ।
ದೋಷಾಃ ಪ್ರಚಲಿತಾಃ ಸ್ವಾನಾದ್ಭ್ರಂಯಃ ಶ್ಲಿಷ್ಯಂತಿ ವರ್ತ್ಮಸು ॥
(ಸು. 551-52.)

ಸ್ನೇಹ ವಿರೇಚನಕ್ಕೆ ಅಯೋಗ್ಯರು

ಆದರೆ ಅತಿಯಾಗಿ ಸ್ನೇಹಪಾನಮಾಡಿದವನಿಗೆ ಸ್ನೇಹರೂಪವಾದ ವಿರೇಚನವನ್ನು ಕೊಡಬಾರದು, ಯಾಕೆಂದರೆ, (ಮೊದಲಿನ ಸ್ನೇಹನದಿಂದ) ಸ್ಥಾನಗಳನ್ನು ಬಿಟ್ಟಿರುವ ದೋಷಗಳು ಪುನಃ ಮಾರ್ಗಗಳಲ್ಲಿ ತಡೆದು ಹಿಡಕೊಳ್ಳುತ್ತವೆ.

25. ವಿಷಾಭಿಘಾತಪಿಡಕಾಶೋಫಪಾಂಡುವಿಸರ್ಪಿಣಃ ।
ನಾತಿಸ್ನಿಗ್ಧಾ ವಿಶೋಧ್ಯಾಃ ಸ್ಯುಸ್ತಥಾ ಕುಷ್ಠಪ್ರಮೇಹಿಣಃ ॥
(ಸು. 552.)

ಸ್ನೇಹ ವಿರೇಚನದಲ್ಲಿ ರೋಗವಿಚಾರ

ವಿಷ, ಅಭಿಘಾತ, ಪಿಟಕ, ಶೋಫ, ಪಾಂಡು, ವಿಸರ್ಪ, ಕುಷ್ಠ, ಪ್ರಮೇಹ, ಇವುಗಳಿಂದ ಪೀಡಿತರಾದವರನ್ನು ಅತಿಸ್ನಿಗ್ಧರನ್ನಾಗಿ ಮಾಡಿ ಶೋಧನ ಮಾಡಿಸಬಾರದು.

26. ಪ್ರಾಗಪೀತಂ ನರಂ ಶೋಧ್ಯಂ ಪಾಯಯೇತೌಷಧಂ ಮೃದು ।
ತತೋ ವಿಜ್ಞಾತಕೋಷ್ಠಸ್ಯ ಕಾರ್ಯಂ ಸಂಶೋಧನಂ ಪುನಃ ॥ (ಸು. 552.)

ಶೋಧನವನ್ನು ಮೊದಲು ಸೇವಿಸದವನ ವಿಚಾರ

ಶೋಧನದ ಔಷಧವನ್ನು ಮೊದಲು ಸೇವಿಸದ ಮನುಷ್ಯನಿಗೆ ಶೋಧನ ಮಾಡಿಸಬೇಕಾದ್ದಲ್ಲಿ ಮೃದುವಾದ ಔಷಧವನ್ನು ಕುಡಿಸಿ, ಹೊಟ್ಟೆಯ ಸ್ವಭಾವವನ್ನು ತಿಳಿದುಕೊಂಡು, ಅನಂತರ ಅವಶ್ಯವಿದ್ದರೆ ಪುನಃ ಚೆನ್ನಾಗಿ ಶೋಧನ ಮಾಡಿಸಬಹುದು.

27. ಸುಖಂ ದೃಷ್ಟಫಲಂ ಹೃದ್ಯಮಲ್ಪಮಾತ್ರಂ ಮಹಾಗುಣಂ ।
ವ್ಯಾಪತ್ಸ್ವಲ್ಪಾತ್ಯಯಂ ಚಾಪಿ ಪಿಬೇನ್ನೃಪತಿರೌಷಧಂ ॥ (ಸು. 552.)

ಪ್ರಶಸ್ತ ವಿರೇಚನೌಷಧದ ಲಕ್ಷಣ

ಅರಸನಿಗೆ ಕೊಡುವ ಔಷಧವು ಸುಖಕರವಾಗಿಯೂ, ಮನೋಹರವಾಗಿಯೂ, ಮಹಾ ಗುಣವುಳ್ಳದ್ದಾಗಿಯೂ, ಪ್ರಮಾಣದಲ್ಲಿ ಅಲ್ಪವಾಗಿಯೂ, ಇರಬೇಕು ಮಾತ್ರವಲ್ಲದೆ, ಅದನ್ನು ಮೊದಲು ಕೊಟ್ಟು ಫಲ ನೋಡಿರಬೇಕು ಮತ್ತು ಅದು ಸರಿಯಾಗಿ ಕೆಲಸ ಮಾಡದೆ ಹೋದರೆ ಉಂಟಾಗತಕ್ಕ ದೋಷವು ಅಲ್ಪವಾಗಿರಬೇಕು

28 ಸ್ನೇಹಸ್ವೇದಾವನಭ್ಯಸ್ಯ ಯಸ್ತು ಸಂಶೋಧನಂ ಪಿಬೇತ್ ।
ದಾರುಶುಷ್ಕಮಿವಾನಾಮೇ ದೇಹಸ್ತಸ್ಯ ವಿಶೀರ್ಯತೇ ॥ (ಸು. 552.)

ಶೋಧನಕ್ಕೆ ಸ್ನೇಹ ಸ್ವೇದಗಳ ಅವಶ್ಯಕತೆ

ಸ್ನೇಹಸ್ವೇದಗಳನ್ನು ಅಭ್ಯಾಸಮಾಡದೆ ಯಾವನು ಸಂಶೋಧನದ ಔಷಧವನ್ನು ಕುಡಿಯುತ್ತಾನೋ, ಒಣಗಿದ ಮರದ ತುಂಡು ಬೊಗ್ಗಿಸುವಾಗ ಮುರಿದು ಹೋಗುವಂತೆ, ಅವನ ದೇಹವು ಕೆಡಕನ್ನು ಹೊಂದುತ್ತದೆ.

29. ವೈದ್ಯಾತುರನಿಮಿತ್ತಂ ವಮನಂ ವಿರೇಚನಂ ಚ ಪಂಚದಶಧಾ ವ್ಯಾಪದ್ಯತೇ । ತತ್ರ ವಮನಸ್ಯಾಧೋಗತಿರೂರ್ಧ್ವಂ ವಿರೇಚನಸ್ಯೇತಿ ಪೃಥಕ್ । ಸಾಮಾನ್ಯಮುಭಯೋಃ ಸಾವಶೇಷೌಷಧತ್ವಂ ಜೀರ್ಣೌಷಧತ್ವಂ ಹೀನಾಧಿಕದೋಷಾಪಹೃತತ್ವಂ ವಾತಶೂಲಮಯೋಗೋಽತಿಯೋಗೋ ಜೀವಾಧಾನಮಾಧ್ಮಾನಂ ಪರಿಕರ್ತಿಕಾ ಪರಿಸ್ರಾವಃ ಪ್ರವಾಹಿಕಾ ಹೃದಯೋಪಸರಣಂ ವಿಬಂಧ ಇತಿ । (ಸು. 552.)

ಶೋಧನ ಸಂಬಂಧ ಉಂಟಾಗಬಹುದಾದ ದೋಷಗಳು

ವೈದ್ಯನ ನಿಮಿತ್ತ ಮತ್ತು ರೋಗಿಯ ನಿಮಿತ್ತ ಸೇರಿ, ವಮನ ಮತ್ತು ವಿರೇಚನ ಹದಿನೈದು ವಿಧವಾಗಿ ಕೆಡಕನ್ನುಂಟುಮಾಡುತ್ತವೆ. ಅವುಗಳೊಳಗೆ ವಮನವು ಕೆಳಗೆ ಹೋಗುವದು ಮತ್ತು ವಿರೇಚನವು ಮೇಲೆ ಹೋಗುವದೆಂಬದು ಅದದಕ್ಕೆ ಪ್ರತ್ಯೇಕ ಉಳಿದ ಎರಡಕ್ಕೂ ಸಾಮಾನ್ಯವಾದ ದೋಷಗಳು ಯಾವವೆಂದರೆ 1. ಔಷಧದ ಶೇಷ ಹೊಟ್ಟೆಯೊಳಗುಳಿದುಹೋಗುವದು, 2. ಔಷಧವು ಜೀರ್ಣವಾಗಿ ಹೋಗುವದು, 3. ದೋಷಾಪಹಾರ ಕಡಿಮೆಯಾಗುವದು, 4. ದೋಷಾಪಹಾರ ಅಧಿಕವಾಗುವದು, 5. ವಾತಶೂಲ,

6. ಅಯೋಗ (ಔಷಧ ಕಡಿಮೆಯಾಗಿ ಕೊಟ್ಟದ್ದು), 7. ಅತಿಯೋಗ, 8. ಜೀವ ತೆಗೆಯುವದು, 9. ಆಧ್ಮಾನ, 10. ಪರಿಕರ್ತಿಕಾ (ಕತ್ತರಿಸಿದ ಹಾಗಿನ ನೋವು), 11. ಪರಿಸ್ರಾವ (ನೀರು ಊಜುವದು), 12. ಪ್ರವಾಹಿಕಾ (ಅತಿಸಾರ), 13. ಹೃದಯ ಸೇರುವದು, 14. ಮಲಬದ್ಧತೆ, ಹೀಗೆ ಹದಿನಾಲ್ಕು.

ವಮನದ ಅಧೋಗತಿಗೆ ಕಾರಣ ಮತ್ತು ಪರಿಹಾರ

30. ತತ್ರ ಬುಭುಕ್ಷಾಪೀಡಿತಸ್ಯಾತಿತೀಕ್ಷ್ಣಾಗ್ನೇರ್ಮೃದುಕೋಷ್ಠಸ್ಯ ಚಾವತಿಷ್ಠಮಾನಂ ದುರ್ಬಲಸ್ಯ ವಾ ಗುಣಸಾಮಾನ್ಯಭಾವಾದ್ವಮನಮಧೋಗಚ್ಛತಿ । ತತ್ರೇಪ್ಸಿತಾನವಾಪ್ತಿರ್ದೋಷೋತ್ಕ್ಲೇಶಶ್ಚ । ತಮಾಶು ಸ್ನೇಹಯಿತ್ವಾ ಭೂಯಸ್ತೀಕ್ಷ್ಣತರೈರ್ವಾಮಯೇತ್ । (ಸು. 552-53.)

ಅವುಗಳೊಳಗೆ, ಹಸಿವೆಯಿಂದ ಪೀಡಿತನಾದವನಿಗೆ, ಅತಿತೀಕ್ಷ್ಣವಾದ ಅಗ್ನಿಯುಳ್ಳವನಿಗೆ, ಮೃದು ಹೊಟ್ಟೆಯವನಿಗೆ, ಅಥವಾ ದುರ್ಬಲನಿಗೆ, (ಕಫವಿಲ್ಲದಿರುವಿಕೆ) ಗುಣವು ಸಾಮಾನ್ಯವಾಗಿರುವದರಿಂದ, ಕೂಡಲ್ಪಟ್ಟ ವಮನೌಷಧವು ನಿಂತಿದ್ದು (ಪಾಕವಾಗಿ) ಕೆಳಗೆ ಹೋಗುತ್ತದೆ. ಅದರಿಂದ ಈಪ್ಸಿತವು ಪೂರೈಸದೆ ಹೋಗುವದಲ್ಲದೆ, ದೋಷವು ವೃದ್ಧಿಯಾಗುತ್ತದೆ. ಅಂಥವರಿಗೆ ಬೇಗನೇ ಸ್ನೇಹಕ್ರಮವನ್ನು ನಡಿಸಿ, ಇನ್ನೂ ತೀಕ್ಷ್ಣವಾದ ಔಷಧಗಳಿಂದ ಪುನಃ ವಾಂತಿಮಾಡಿಸಬೇಕು.

ವಿರೇಚನದ ಊರ್ಧ್ವಗತಿಗೆ ಕಾರಣ ಮತ್ತು ಪರಿಹಾರ

31. ಅಪರಿಶುದ್ಧಾಮಾಶಯಸ್ಯೋತ್ಕೃಷ್ಟಶ್ಲೇಷ್ಮಣಃ ಸಶೇಷಾನ್ನಸ್ಯ ವಾऽಹೃದ್ಯಮತಿಪ್ರಭೂತವಿರೇಚನಂ ಪೀತಮೂರ್ಧ್ವಂ ಗಚ್ಛತಿ । ತತ್ರಾಶುದ್ಧಾಮಾಶಯಮುಲ್ಬಣಶ್ಲೇಷ್ಮಾಣಮಾಶು ವಾಮಯಿತ್ವಾ ಭೂಯಸ್ತೀಕ್ಷ್ಣತರೈರ್ವಿರೇಚಯೇತ್ । ಆಮಾಶಯೇ ತ್ವಾಮವತ್ ಸಂವಿಧಾನಂ । ಅಹೃದ್ಯೇऽತಿಪ್ರಭೂತೇ ಚ ಹೃದ್ಯಂ ಪ್ರಮಾಣಂ ಯುಕ್ತಂ ಚ । ಅತ ಊರ್ಧ್ವಮುತ್ತಿಷ್ಠತ್ಯೌಷಧೇ ನ ತೃತೀಯಂ ಪಾಯಯೇತ್ । ತತಸ್ತ್ವೇನಂ ಮಧುಘೃತಫಾಣಿತಯುಕ್ತೈರ್ಲೇಹೈರ್ವಿರೇಚಯೇತ್ । (ಸು 553.)

ಆಮಾಶಯ ಶುದ್ಧಮಾಡಲ್ಪಡದವನಿಗೆ, ಅತಿಯಾಗಿ ಕಫವಿದ್ದವನಿಗೆ, ಅಥವಾ ಉಂಡ ಅನ್ನದ ಶೇಷ ಪಚನವಾಗದೆ ಉಳಿದವನಿಗೆ, ಮನಸ್ಸಿಗೆ ಒಪ್ಪದ ರೀತಿಯಲ್ಲಿ, ಅಥವಾ ಪ್ರಮಾಣದಲ್ಲಿ ಹೆಚ್ಚಾಗಿ, ಕೊಡಲ್ಪಟ್ಟ ವಿರೇಚನವು ಮೇಲಕ್ಕೆ ಹೋಗುತ್ತದೆ. ಆ ಸಂಗತಿಯಲ್ಲಿ ಆಮಾಶಯ ಶುದ್ಧವಿಲ್ಲದವನನ್ನೂ, ಕಫ ಹೆಚ್ಚಾದವನನ್ನೂ, ಬೇಗನೆ ವಾಂತಿಮಾಡಿಸಿ, ಪುನಃ ಇನ್ನೂ ತೀಕ್ಷ್ಣವಾದ ಔಷಧಗಳನ್ನು ಕೊಟ್ಟು ವಿರೇಚನ ಮಾಡಿಸಬೇಕು. ಆಮಾಶಯದ ವಿಷಯದಲ್ಲಿ ಆಮಕ್ಕೆ ಹೇಳಿರುವ (ಪಾಚನಾದಿ) ವಿಧಿ ಯುಕ್ತವಾದದ್ದು. ಮೊದಲು ಕೊಟ್ಟ ಔಷಧವು ಮನಸ್ಸಿಗೆ ಒಗ್ಗ(ಹಿತವಾಗದ)ದ ಸಂಗತಿಯಲ್ಲಿ, ಒಗ್ಗುವ ಹಾಗಿನ ಔಷಧವನ್ನು ಕೊಡತಕ್ಕದ್ದು; ಮತ್ತು ಪ್ರಮಾಣ ಹೆಚ್ಚಾದ ಸಂಗತಿಯಲ್ಲಿ, ಯುಕ್ತಪ್ರಮಾಣವನ್ನು ಕಲ್ಪಿಸಬೇಕು; ಆ ಮೇಲೆಯೂ ಔಷಧವು ನಿಂತದ್ದಾದರೆ, ಮೂರನೆ ಸರ್ತಿ ವಿರೇಚನವನ್ನು ಕೊಡಕೂಡದು; ಆದರೆ ಆ ಮೇಲೆ ಅಂಥವನಿಗೆ ಜೇನು, ತುಪ್ಪ, ಮತ್ತು ರವೆ ಬೆಲ್ಲ, ಇವುಗಳಿಂದ ಕೂಡಿದ ಲೇಹಗಳನ್ನು ಕೊಟ್ಟು ವಿರೇಚನ ಮಾಡಿಸಬೇಕು

32. ದೋಷವಿಗ್ರಥಿತಮಲ್ಪಮೌಷಧಮವಸ್ಥಿತಮೂರ್ಧ್ವಭಾಗಿಕಮಧೋಭಾಗಿಕಂ ವಾ ನ ಸ್ರಂಸಯತಿ ದೋಷಾನ್ । ತತ್ರ ತೃಷ್ಣಾ ಪಾರ್ಶ್ವಶೂಲಂ ಛರ್ದಿರ್ಮೂರ್ಚ್ಛಾ ಪರ್ವಭೇದೋ ಹೃಲ್ಲಾಸಾರತ್ಯುದ್ಗಾರಾವಿಶುದ್ಧಿಶ್ಚ ಭವತಿ । ತಮುಷ್ಣಾಭಿರದ್ಭಿರಾಶು ವಾಮಯೇತ್ । ಸಾವಶೇಷೌಷಧ ಮತಿಪ್ರಥಾವಿತದೋಷಮತಿಬಲಮಸಮ್ಯಗ್ವಿರಿಕ್ತಮಪ್ಯೇವಂ ವಾಮಿಯೇತ್ । (ಸು. 553.)

ಔಷಧ ಹೊಟ್ಟೆಯಲ್ಲಿ ಉಳಿದು ಹೋಗುವದು ಅಥವಾ ಜೀರ್ಣವಾಗುವದು

ವಮನಕ್ಕಾಗಲಿ, ವಿರೇಚನಕ್ಕಾಗಲಿ, ಕೊಡಲ್ಪಟ್ಟ ಔಷಧವು ಅಲ್ಪವಾಗಿ, ದೋಷಗಳೊಂದಿಗೆ ಕೂಡಿಕೊಂಡು ನಿಂತಲ್ಲಿ, ದೋಷಗಳನ್ನು ಹೊರಗೆ ಹಾಕುವದಿಲ್ಲ. ಹಾಗಾದಲ್ಲಿ ಬಾಯಾರಿಕೆ, ಪಾರ್ಶ್ವಶೂಲ, ವಾಂತಿ, ಮೂರ್ಚ್ಛೆ, ಗಂಟುಗಳ ನೋವು, ಬಿಕ್ಕಟ್ಟು, ಉಲ್ಲಾಸವಿಲ್ಲದಿರೋಣ, ಮತ್ತು ಅಶುದ್ಧವಾದ ತೇಗು ಉಂಟಾಗುತ್ತವೆ. ಅಂಥವಗೆ ಬಿಸಿನೀರು ಕುಡಿಸಿ, ಬೇಗನೇ ವಾಂತಿಮಾಡಿಸಬೇಕು. ಔಷಧದ ಶೇಷ ಹೊಟ್ಟೆಯೊಳಗೆ ಉಳಿದುಹೋದಾಗಲೂ, ದೋಷಗಳು ಅತಿಯಾಗಿ ಓಡುತ್ತಿದ್ದು, ರೋಗಿಯು ಅತಿಬಲವಂತನಾಗಿ, ವಿರೇಚನವು ಚೆನ್ನಾಗಿ ಆಗಿರದಿದ್ದರೆ, ಅಂಥವನನ್ನು ಅದೇ ರೀತಿ ವಾಂತಿಮಾಡಿಸತಕ್ಕದ್ದು.

33 ತತ್ರ ವಮನೇ ದೋಷಶೇಷಃ ಗೌರವಮುತ್ಕ್ಲೇಶಂ ಹೃದಯಾವಿಶುದ್ಧಂ ವ್ಯಾಧಿವೃದ್ಧಿಂ ಕರೋತಿ । ತತ್ರ ಯಥಾಯೋಗಂ ಪಾಯಯಿತ್ವಾ ವಾಮಯೇದ್ದೃಢತರಂ । ವಿರೇಚನೇ ಗುದಪರಿಕರ್ತನಮೂಧ್ನಾನಂ ಶಿರೋ ಗೌರವಮನಿಃಸರಣಂ ವಾ ವಾಯೋರ್ವ್ಯಾಧಿವೃದ್ಧಿಂ ಕರೋತಿ । ತಮುಪಪಾದ್ಯ ಭೂಯಃ ಸ್ನೇಹಸ್ವೇದಾಭ್ಯಾಂ ವಿರೇಚಯೇದ್ದೃಢತರಂ ॥ (ಸು. 553.)

ದೋಷಶೇಷದ ಲಕ್ಷಣ ಮತ್ತು ಪರಿಹಾರ

ವಮನದಲ್ಲಿ ದೋಷಶೇಷವು ಉಳಿದುಹೋದರೆ, ಮೈಭಾರ, ಸಂಕಟ, ಹೃದಯದ ಅಶುದ್ಧತೆ ಮತ್ತು ವ್ಯಾಧಿಯ ವೃದ್ಧಿ ಉಂಟಾಗುತ್ತವೆ. ಅದಕ್ಕೆ ಯುಕ್ತವಾದ ಕ್ರಮದಲ್ಲಿ ಔಷಧವನ್ನು ಕುಡಿಸಿ, ಮೊದಲಿಗಿಂತ ಹೆಚ್ಚಾಗಿ ವಾಂತಿಮಾಡಿಸಬೇಕು. ವಿರೇಚನದಲ್ಲಿ ಉಳಿದುಹೋದ ದೋಷಶೇಷದಿಂದ ಆಸನದಲ್ಲಿ ಕತ್ತರಿಸಿದ ಹಾಗಿನ ನೋವು, ಹೊಟ್ಟೆ ಬಿಗಿಯೋಣ, ತಲೆಭಾರ, ವಾಯುವು ಹೊರಗೆ ಹೊರಡದಿರುವದು, ಅಥವಾ ವ್ಯಾಧಿಯ ವೃದ್ಧಿ, ಉಂಟಾಗುತ್ತದೆ. ಅಂಥವನನ್ನು ಪುನಃ ಸ್ನೇಹಸ್ವೇದ ಕ್ರಮಗಳಿಂದ ಅನುಕೂಲಿಸಿ ಮೊದಲಿಗಿಂತ ಹೆಚ್ಚಾಗಿ ವಿರೇಚನ ಮಾಡಿಸಬೇಕು.

34. ನಾತಿಪ್ರವರ್ತಮಾನೇ ತಿಷ್ಠತಿ ವಾ ದುಷ್ಟಸಂಶೋಧನೇ ತತ್ಸಂತೇಜನಾರ್ಥಮುಷ್ಣೋದಕಂ ಪಾಯಯೇತ್ । ಪಾಣಿತಾಪೈಶ್ಚ ಪಾರ್ಶ್ವೋರ್ದರಮುಪಸ್ವೇದಯೇತ್ । ತತಃ ಪ್ರವರ್ತಂತೇ ದೋಷಾಃ । (ಸು. 554.)

ಶೋಧನ ಸರಿಯಾಗುವದಕ್ಕೆ ಅನುಕೂಲಿಸುವದು

ಶೋಧನೆಯು ಅಲ್ಪವಾಗಿ ಪ್ರವರ್ತಿಸುತ್ತಿದ್ದಲ್ಲಿ, ಅಥವಾ ಆಗದೆ ನಿಂತಿರುವಲ್ಲಿ, ಅಥವಾ ಕೆಟ್ಟ ರೀತಿಯಲ್ಲಿ ಆಗುತ್ತಿರುವಲ್ಲಿ, ಆ ಔಷಧಕ್ಕೆ ಚುರುಕು ಕೊಡುವ ಉದ್ದಿಶ್ಯವಾಗಿ ಬಿಸಿನೀರನ್ನು ಕುಡಿಸಿ, ಕೈಯ ಬಿಸಿಯಿಂದ ಬದಿಹೊಟ್ಟೆಯನ್ನು ಬೆವರಿಸಬೇಕು. ಅದರಿಂದ ದೋಷಗಳ ಪ್ರವೃತ್ತಿಯುಂಟಾಗುತ್ತದೆ

35. ತತ್ರ ವಮನಾತಿಯೋಗೇ ಪಿತ್ತಾತಿಪ್ರವೃತ್ತಿರ್ಬಲವಿಸ್ರಂಸೋ ವಾತಕೋಪಶ್ಚ ಬಲವಾನ್ ಭವತಿ | ತಂ ಘೃತೇನಾಭ್ಯಜ್ಯಾವಗಾಹ್ಯ ಶೀತಾಸ್ವಪ್ಸು ಶರ್ಕರಾಮಧುಮಿಶ್ರೈರ್ಲೇಹೈರುಪಚರೇದ್ಯಥಾಸ್ವಂ | (ಸು. 555.)

ವಮನಾತಿಯೋಗದ ದೋಷ ಮತ್ತು ಅದಕ್ಕೆ ಪರಿಹಾರ

ವಮನೌಷಧವು ಅತಿಯಾದರೆ, ಪಿತ್ತಪ್ರವೃತ್ತಿಯು ಅತಿಯಾಗಿ, ಬಲ ಕುಂದುತ್ತದೆ ಮತ್ತು ವಾತಕೋಪವು ಬಲವಾಗುತ್ತದೆ. ಅಂಧವನನ್ನು ತುಪ್ಪ ಹಚ್ಚಿ, ತಣ್ಣೀರಿನಲ್ಲಿ ಮುಳುಗಿಸಿ ವಿಾಯಿಸಿ, ಸಕ್ಕರೆ ಮತ್ತು ಜೇನು ಮಿಶ್ರವುಳ್ಳ ಲೇಹಗಳನ್ನು ಕೊಟ್ಟು, ಅವನಿಗೆ ಹಿತವಾಗುವಂತೆ ಉಪಚಾರ ಮಾಡಬೇಕು.

36. ವಿರೇಚನಾತಿಯೋಗೇ ಕಫಸ್ಯಾತಿಪ್ರವೃತ್ತಿರುತ್ತರಕಾಲಂ ಚ ಸರಕ್ತಸ್ಯ ತತ್ರಾಪಿ ಬಲವಿಸ್ರಂಸೋ ವಾತಕೋಪಶ್ಚ ಬಲವಾನ್ ಭವತಿ | ತಮತಿಶೀತಾಂಬುಭಿಃ ಪರಿಷಿಚ್ಯಾವಗಾಹ್ಯ ವಾ ಶೀತೈಸ್ತಂಡುಲಾಂಬುಭಿರ್ಮಧುಮಿಶ್ರಶ್ಚರ್ದಯೇತ್ | ಪಿಚ್ಛಾವಸ್ತಿಂ ಚಾಸ್ಮೈ ದದ್ಯಾತ್ | ಕ್ಷೀರಸರ್ಪಿಷಾ ಚೈನಮನುವಾಸಯೇತ್ | ಪ್ರಿಯಂಗ್ವಾದಿ ಚಾಸ್ಮೈ ತಂಡುಲಾಂಬುನಾ ಪಾತುಂ ಪ್ರಯಚ್ಛೇತ್ ಕ್ಷೀರರಸಯೋಶ್ಚಾನ್ಯತರೇಣ ಭೋಜಯೇತ್ | (ಸು. 555.)

ವಿರೇಚನಾತಿಯೋಗದ ದೋಷ ಮತ್ತು ಅದಕ್ಕೆ ಪರಿಹಾರ

ವಿರೇಚನವು ಅತಿಯಾದರೆ, ಕಫವು ಅತಿಯಾಗಿ ಪ್ರವೃತ್ತಿಯಾಗುವದು ಮತ್ತು ಕಡೇ ಭಾಗದಲ್ಲಿ ಅದು ರಕ್ತಕೂಡಿಕೊಂಡು ಹೋಗುವದು. ಆ ಸಂಗತಿಯಲ್ಲಿಯೂ ಬಲ ಕುಂದುವದು ಮತ್ತು ಬಲವಾದ ವಾತಪ್ರಕೋಪವುಂಟಾಗುತ್ತದೆ. ಅಂಧವನನ್ನು ಅತಿತಣ್ಣಗಾದ ನೀರಿನಿಂದ ಪರಿಷೇಚನ (ನೀರನ್ನು ಸುರಿಯುವದು) ಮಾಡಿ. ಅಥವಾ ಮುಳುಗುಸ್ನಾನ ಮಾಡಿಸಿ, ತಣ್ಣಗಿನ ಅಕ್ಕಿನೀರ (ಅಕ್ಕಚ್ಚು) ನ್ನು ಜೇನು ಕೂಡಿಸಿ ಕೊಟ್ಟು, ವಾಂತಿ ಮಾಡಿಸಬೇಕು, ಗಂಜಿನೀರನ್ನು ವಸ್ತಿದ್ವಾರ ಕೊಡಬೇಕು, ಹಾಲು ತುಪ್ಪಗಳಿಂದ ಅನುವಾಸನವಸ್ತಿ ಕೊಡಬೇಕು, ಅಕ್ಕಿನೀರಿನಿಂದ ಪ್ರಿಯಂಗ್ವಾದಿಯನ್ನು ಕುಡಿಯಕೊಡಬೇಕು, ಮತ್ತು ಹಾಲಿನಿಂದ ಅಥವಾ ಮಾಂಸದ ರಸದಿಂದ ಭೋಜನಮಾಡಿಸಬೇಕು.

37. ತಸ್ಮಿನ್ನೇವ ವಮನಾತಿಯೋಗೇ ಪ್ರವೃದ್ಧೇ ಶೋಣಿತಂ ಷ್ಠೀವತಿ ಛರ್ದಯತಿ ವಾ | ತತ್ರ ಜಿಹ್ವಾನಿಃಸರಣಮಕ್ಲೇವ್ಯಾವೃತ್ತಿರ್ಹನುಸಂಹನನಂ ತೃಷ್ಣಾ ಹಿಕ್ಕಾ ಜ್ವರೋ ವೈಸಂಜ್ಞ್ಯಮಿತ್ಯುಪದ್ರವಾ ಭವಂತಿ | ತಮ ಜಾಸೃಕ್‌ಚಂದನೋಶೀರಾಂಜನಲಾಜಚೂರ್ಣೈಃ ಸಶರ್ಕರೋದಕೈರ್ಮಂಥಂ ಪಾಯಯೇತ್ | ಫಲರಸೈರ್ವಾ ಸಘೃತಕ್ಷೌದ್ರಶರ್ಕರೈಃ ಶುಂಗಾಭಿರ್ವಾ ವಟಾದೀನಾಂ ಪೇಯಾಂ ಸಿದ್ಧಾಂ ಸಕ್ಷೌದ್ರಾಂ ವಜೋರ್ಗಾಹಿಭಿರ್ವಾ ಪಯಸಾ ಜಾಂಗಲರಸೇನ ವಾ ಭೋಜಯೇತ್ | ಅತಿಸ್ರುತಶೋಣಿತವಿಧಾನೇನೋಪಚರೇತ್ | ಜಿಹ್ವಾಮತಿಸರ್ಪಿತಾಂ ತ್ರಿಕಟುಕಲವಣಚೂರ್ಣಪ್ರಘೃಷ್ಟಾಂ ತಿಲದ್ರಾಕ್ಷಾಪ್ರಲಿಪ್ತಾಂ ವಾ ಪೀಡಯೇತ್ |

ವಮನಾತಿಯೋಗದ ವಿಶೇಷ ಉಪದ್ರವಗಳು ಮತ್ತು ಅವುಗಳಿಗೆ ಪರಿಹಾರ

ಪ್ರವಿಷ್ಟಾಯಾಮಮ್ಲಮನ್ಯೇ ತಸ್ಯ ಪುರಸ್ತಾತ್ ಸ್ವಾದಯೇಯುಃ | ವ್ಯಾವೃತ್ತೇ ಚಾಕ್ಷಿಣೀ ಘೃತಾಭ್ಯಕ್ತೇ ಪೀಡಯೇತ್ | ಹನುಸಂಹನನೇ ವಾತಶ್ಲೇಷ್ಮಹರಂ ನಸ್ಯಂ ಸ್ವೇದಾಂಶ್ಚ ವದಧ್ಯಾತ್ | ತೃಷ್ಣಾದಿಷು ಚ ಯಥಾಸ್ವಂ ಪ್ರತಿಕುರ್ವೀತ | ವಿಸಂಜ್ಞೇ ವೇಣುವೀಣಾಗೀತಸ್ವನಂ ಶ್ರಾವಯೇತ್ | (ಸು. 555)

ಅದೇ ಅತಿಯಾದ ವಾಂತಿಯು ಬಹಳ ವೃದ್ಧಿಯಾದರೆ, ಎಂಜಲೊಂದಿಗೆ ರಕ್ತವನ್ನುಗಿಯುತ್ತಾನೆ, ಅಥವಾ ರಕ್ತವನ್ನು ವಾಂತಿಮಾಡುತ್ತಾನೆ ಆಗ್ಗೆ ನಾಲಗೆ ಹೊರಗೆ ಬರುವದು, ಕಣ್ಣುಗಳು ಒಳಗೆ ತಿರುಗಿ ತೆರೆದಿರುವವು, ದವಡೆಗಳು ಕಲ್ಲಾಗಿ ಬಿಡಿಸಿಕೊಂಟಿರುವವು, ಬಾಯಾರಿಕೆ, ಬಿಕ್ಕಟ್ಟು, ಜ್ವರ, ಸಂಜ್ಞೆ ತಪ್ಪುವದು, ಈ ಉಪದ್ರವಗಳುಂಟಾಗುವವು ಅಂಥವನಿಗೆ ಅಡಿನ ರಕ್ತ, ಶ್ರೀಗಂಧ, ಲಾವಂಚ, ರಸಾಂಜನ, ಅರಳಿನ ಚೂರ್ಣ, ಇವುಗಳಿಂದಲೂ, ಸಕ್ಕರೆನೀರಿನಿಂದಲೂ, ಕೂಡಿದ ಮುಂಥವನ್ನು ಕುಡಿಸಬೇಕು ಹಣ್ಣಿನ ರಸಗಳಿಂದ, ಅಥವಾ ತುಪ್ಪ, ಸಕ್ಕರೆ, ಜೇನುಗಳಿಂದ, ಅಥವಾ ಅಲ ಮೊದಲಾದವುಗಳ ಮಲಕಟ್ಟತಕ್ಕ ಕುಡಿಗಳಿಂದ ತಯಾರಿಸಲ್ಪಟ್ಟ ಜೇನು ಕೂಡಿದ ಗಂಜಿಯನ್ನು, ಅಥವಾ ಹಾಲಿನಿಂದ, ಅಥವಾ ಜಾಂಗಲ ಮಾಂಸರಸದಿಂದ, ಉಣ್ಣಿಸಬೇಕು. ಅತಿಯಾಗಿ ರಕ್ತ ತೆಗೆದದ್ದಕ್ಕೆ ಹೇಳಿದ ವಿಧಾನಕ್ಕನುಸಾರವಾಗಿ ಉಪಚಾರಮಾಡಬೇಕು ಅತಿಯಾಗಿ ಹೊರಗೆ ಬಂದ ನಾಲಗೆಯನ್ನು ತ್ರಿಕಟು, ಸೈಂಧವಲವಣ, ಇವುಗಳ ಚೂರ್ಣದಿಂದ ತಿಕ್ಕಿ, ಅಥವಾ ಒಳ್ಳೆ ಮತ್ತು ದ್ರಾಕ್ಷಿಗಳ ಲೇಪನ ಮಾಡಿ, ಒಳಗೆ ನೂಕಬೇಕು, ಮತ್ತು ಅದು ಒಳಗೆ ಹೋದ ಮೇಲೆ, ಬೇರೆಯವರು ಅವನ ಮುಂದೆ ಹುಳಿಫಲಗಳ ಸ್ವಾದು ನೋಡಿ ತೋರಿಸಬೇಕು. ತೆರಕೂಡಿರುವ ಕಣ್ಣುಗಳಿಗೆ ತುಪ್ಪ ಹಚ್ಚಿ ಮಲ್ಲನೆ ತಿಕ್ಕಿ ಹತ್ತರ ಮಾಡಬೇಕು. ದವಡೆ ಬಿಡಿಸಿಕೊಂಡು ಜೇಷ್ಟಾರಹಿತವಾಗಿರುವದಕ್ಕೆ ವಾತಕಫಹರವಾದ ನಸ್ಯವನ್ನೂ, ಸ್ವೇದಗಳನ್ನೂ, ಉಪಯೋಗಿಸುವದು. ಬಾಯಾರಿಕೆ ಮುಂತಾದ ಉಪದ್ರವಗಳಲ್ಲಿ ಆಯಾ ಉಪದ್ರವಕ್ಕೆ ವಿಧಿಸಿರುವ ಪ್ರತಿಕ್ರಿಯೆಗಳನ್ನೇ ನಡಿಸುವದು ಸಂಜ್ಞತಪ್ಪಿರುವದಕ್ಕೆ ಕೊಳಲು, ವೀಣೆ ಬಾರಿಸಿ ಸ್ವರವನ್ನು ಕೇಳಿಸಬೇಕು

ವಿರೇಚನಾತಿಯೋಗದ ವಿಶೇಷ ಉಪದ್ರವಗಳು ಮತ್ತು ಅವುಗಳಿಗೆ ಪರಿಹಾರ

38 ವಿರೇಚನಾತಿಯೋಗೇ ಚ ಸಚಂದ್ರಕಂ ಸಲಿಲಮಧಃ ಸ್ರವತಿ | ತತೋ ಮಾಂಸಧಾವನಪ್ರಕಾಶಮುತ್ತರಕಾಲಂ ಜೀವಶೋಣಿತಂ ಚ ತತೋ ಗುದನಿಃಸರಣಂ ವೇಪಥುರ್ವಮನಾತಿಯೋಗೋಪದ್ರವಾಶ್ಚಾಸ್ಯ ಭವಂತಿ | ತಮಪಿ ನಿಃಸ್ರುತಶೋಣಿತವಿಧಾನೇನೋಪಚರೇತ್ | ನಿಃಸರ್ಪಿತಗುದಸ್ಯ ಗುದಮಭ್ಯಜ್ಯ ಪರಿಸ್ವೇದ್ಯಾಂತಃ ಪೀಡಯೇತ್ ಕ್ಷುದ್ರರೋಗಚಿಕಿತ್ಸಿತಂ ವಾ ವೀಕ್ಷೇತ | ವೇಪಥೌ ವಾತವ್ಯಾಧಿವಿಧಾನಂ ಕುರ್ವೀತ | ಜಿಹ್ವಾ ನಿಃಸರಣಾದಿಷೂಕ್ತಃ ಪ್ರತೀಕಾರಃ | ಅತಿಪ್ರವೃತ್ತೇ ವಾ ಜೀವಶೋಣಿತೇ ಕಾಶ್ಮರೀಫಲಬದರೀದೂರ್ವೋಶೀರೈಃ ಶೃತೇನ ಪಯಸಾ ಘೃತಮಂಡಾಂ ಜನಯುಕ್ತೇನ ಸುಶೀತೇನಾಸ್ಥಾಪಯೇತ್ | ನ್ಯಗ್ರೋಧಾದಿಕಷಾಯ

ಕ್ಷೀರೇಕ್ಷುರಸಘೃತಶೋಣಿತಸಂಸೃಷ್ಟೈಶ್ಚ ನಂ ವಸ್ತಿಭಿರುಪಾಚರೇತ್ |
ಶೋಣಿತಷ್ಠೀವನೇ ರಕ್ತಪಿತ್ತರಕ್ತಾತಿಸಾರಕ್ರಿಯಾಶ್ಚಾಸ್ಯ ವಿದಧ್ಯಾತ್ |
ನ್ಯಗ್ರೋಧಾದಿಂ ಚಾಸ್ಯ ವಿದಧ್ಯಾತ್ಪಾನಭೋಜನೇಷು | (ಸು. 556.)

ವಿರೇಚನವು ಕೊಟ್ಟದ್ದು ಅತಿಯಾದರೆ, ನೀರು ಚಂದ್ರಾಕಾರದ ಗುಳ್ಳೆಗಳಿಂದ ಕೂಡಿ ಕೊಂಡು ಕೆಳಗೆ ಸ್ರವಿಸುವದು, ಅನಂತರ ಮಾಂಸ ತೊಳದ ನೀರಿನ ಹಾಗಿನ ಕಫ ಮತ್ತು ಕಡೆಗೆ ಜೀವರಕ್ತವು ಸ್ರವಿಸುವದು, ಅದಕ್ಕೆ ಮೇಲೆ ಆಸನವು ಹೊರಗೆ ಬರುವದು, ನಡುಕು ಮತ್ತು ಪಮನಾತಿಯೋಗದಲ್ಲಿ ಉಂಟಾಗುವ ಉಪದ್ರವಗಳು ಸಹ ಸಂಭವಿಸುತ್ತವೆ. ಅಂಥವ ನಿಗೆ ಸುರಿದುಹೋಗುವ ರಕ್ತಕ್ಕೆ ಹೇಳಿರುವ ವಿಧಾನದಲ್ಲಿ ಉಪಚಾರಮಾಡತಕ್ಕದ್ದು. ಹೊರಗೆ ಬಂದ ಆಸನಕ್ಕೆ ಸ್ನೇಹ ಹಚ್ಚಿ, ಸುತ್ತು ಬೆವರಿಸಿ, ಒಳಗೆ ಸೂಕಬೇಕು, ಅಥವಾ ಕ್ಷುದ್ರರೋಗ ಚಿಕಿತ್ಸೆಯನ್ನು ನೋಡಿಕೊಂಡು ಅಲ್ಲಿ ಹೇಳಿರುವ ಪ್ರತಿಕ್ರಿಯೆ ನಡಿಸಬೇಕು. ನಡುಕಿಗೆ ವಾತವ್ಯಾಧಿವಿಧಾನವನ್ನು ನಡಿಸತಕ್ಕದ್ದು ನಾಲಿಗೆ ಹೊರಗ ಒಂದದ್ದು ಮುಂತಾದ ಉಪದ್ರವಗಳಿಗೆ ಮೊದಲು (ಹಿಂದಿನ ಸಂ ಯಲ್ಲಿ) ಹೇಳಿದ್ದೇ ಚಿಕಿತ್ಸೆ ಜೀವರಕ್ತವು ಅತಿ ಯಾಗಿ ಹೋದಾಗ್ಗೆ, ಕಾಶ್ಮರೀ ಹಣ್ಣು, ಬೊಗರಿ, ದೂರ್ವೆ, ಲಾವಂಚ, ಇವುಗಳನ್ನು ಕೂಡಿಸಿ ಕಾಯಿಸಿದ ಹಾಲಿಗೆ ಘೃತಮಂಡ ಮತ್ತು ಅಂಜನ ಕೂಡಿಸಿ, ಚೆನ್ನಾಗಿ ತಣಿಸಿ, ಅದರಿಂದ ಆ ಸ್ಥಾಪನೆ ಕ್ರಮ ನಡಿಸತಕ್ಕದ್ದು, ಮತ್ತು ನ್ಯಗ್ರೋಧಾದಿವರ್ಗದ ಕಷಾಯ, ಹಾಲು, ಕಬ್ಬಿನ ರಸ, ತುಪ್ಪ, ಮತ್ತ ರಕ್ತಗಳಿಂದ ಕೂಡಿದ ವಸ್ತಿಗಳಿಂದ ಉಪಚರಿಸುವದು ರಕ್ತ ಉಗಿ ಯುವ ಸಂಗತಿಯಲ್ಲಿ, ರಕ್ತಪಿತ್ತಕ್ಕ ಮತ್ತು ರಕ್ತಾತಿಸಾರಕ್ಕೆ ಹೇಳಿದ ಕ್ರಿಯೆಗಳನ್ನು ನಡಿಸ ತಕ್ಕದ್ದು. ಮತ್ತು ಪಾನಕ್ಕೂ ಭೋಜನಕ್ಕೂ ನ್ಯಗ್ರೋಧಾದಿ ವರ್ಗದ ಔಷಧಗಳನ್ನೇ ಉಪ ಯೋಗಿಸಬೇಕು

ಷರಾ ಆಂಜನ ಎಂಬದು ಸ್ರೋತೋಂಜನ ಎಂತ ಸಿ ಸಂ ವ್ಯಾ

39. ಜೀವಶೋಣಿತರಕ್ತಪಿತ್ತಯೋಶ್ಚ ಜಿಜ್ಞಾಸಾರ್ಥಂ ತಸ್ಮಿನ್ *ಪಿಚುವ್ಲೋತಂ ವಾ ಕ್ಷಿಪೇತ್ | ಯದ್ಯುಷ್ಣೋದಕಪ್ರಕ್ಷಾಲಿತಮಪಿ ವಸ್ತ್ರಂ ರಂಜಯತಿ ತಜ್ಜೀವಶೋಣಿತಮವಗಂತವ್ಯಂ ಸಭಕ್ತಂ ಚ ಶುನೇ ದದ್ಯಾತ್ ಶಕ್ತುಸಂ ಮಿಶ್ರಂ ವಾ ಸ ಯದ್ಯುಪಭುಂಜೀತ ತಜ್ಜೀವಶೋಣಿತಮವಗಂತವ್ಯಂ | (ಸು. 556.)

ಜೀವರಕ್ತ-ಪಿತ್ತ ರಕ್ತಗಳ ಪರೀಕ್ಷೆ

ಜೀವರಕ್ತವೋ, ರಕ್ತಪಿತ್ತವೋ ಎಂಬ ಸಂಶಯನಿವೃತ್ತಿಗಾಗಿ, ಅದರಲ್ಲಿ ಒಂದು ಹತ್ತಿಯ ವಸ್ತ್ರದ ತುಂಡನ್ನು ಹಾಕಬೇಕು ಅದನ್ನು ಬಿಸಿನೀರಿನಿಂದ ತೊಳೆದಾಗಲೂ ವಸ್ತ್ರದಲ್ಲಿ ಬಣ್ಣ ಉಳಿಯುತ್ತದಾದರೆ, ಅದು ಜೀವರಕ್ತವೆಂತ ತಿಳಿಯುವದು, ಮತ್ತು ಅದನ್ನು ಅನ್ನ ದೊಂದಿಗೆ ಅಥವಾ ಹಿಟ್ಟಿನೊಂದಿಗೆ ಬೆರಸಿ ನಾಯಿಗೆ ಕೊಟ್ಟಲ್ಲಿ ಅದನ್ನು ನಾಯಿಯು ತಿನ್ನುತ್ತ ದಾದರೆ, ಅದು ಜೀವರಕ್ತ ಎಂತ ನಿಶ್ಚಯಿಸಬೇಕು

ಷರಾ 'ಪಿಚು' ಎಂತ ಪಾಠ ಇಟ್ಟು, ಅದಕ್ಕೆ ಎಕ್ಕೆಯ ಹತ್ತಿ ಎಂದು ಅರ್ಥ ಎಂತ ಸಿ ಸಂ ವ್ಯಾ

40. ಅಸ್ನಿಗ್ಧಸ್ನಿಗ್ಧೇನ ರೂಕ್ಷಮೌಷಧಮುಪಯುಕ್ತಮಬ್ರಹ್ಮಚಾರಿಣಾ ವಾ ವಾಯುಂ ಕೋಪಯತಿ | ತತ್ರ ವಾಯುಃ ಪ್ರಕುಪಿತಃ ಪಾರ್ಶ್ವಪೃಷ್ಠ

ಶೋಫನದಲ್ಲಿ ವಾಯು ಪ್ರಕೋಪ

ಶ್ರೋಣಿಮನ್ಯಾಮರ್ಮಶೂಲಂ ಮೂರ್ಚ್ಛಾಂ ಭ್ರಮಂ ಸಂಜ್ಞಾನಾಶಂ ಚ ಕರೋತಿ । ತಮಭ್ಯಜ್ಯ ಧಾನ್ಯಸ್ವೇದೇನ ಸ್ವೇದಯಿತ್ವಾ ಯಷ್ಠೀಮಧುಕವಿಪಕ್ವೇನ ತೈಲೇನಾನುವಾಸಯೇತ್ । (ಸು. 553-54.)

ಸ್ನೇಹಸ್ವೇದಕ್ರಮಗಳನ್ನು ನಡಿಸಿಕೊಳ್ಳದೆ, ಅಥವಾ ಬ್ರಹ್ಮಚಾರಿಯಾಗಿರದೆ, ರೂಕ್ಷ ಗುಣದ ಔಷಧವನ್ನು ಸೇವಿಸಿದರೆ, ವಾಯು ಪ್ರಕೋಪಗೊಂಡು ಪಾರ್ಶ್ವಗಳಲ್ಲಿ, ಬೆನ್ನಿನಲ್ಲಿ, ಸೊಂಟದಲ್ಲಿ, ಕುತ್ತಿಗೆ ಹಿಂಬದಿ ಮತ್ತು ಮರ್ಮ(ಹೃದಯ)ದಲ್ಲಿ ನೋವನ್ನೂ, ಮೂರ್ಚ್ಛೆಯನ್ನೂ, ಭ್ರಮವನ್ನೂ, ಎಚ್ಚರಪಲ್ಲದಿರುವಿಕೆಯನ್ನೂ, ಉಂಟುಮಾಡುತ್ತದೆ ಅಂಧವನಿಗೆ ಸ್ನೇಹ ಹಚ್ಚಿ, ಧಾನ್ಯಸ್ವೇದಕ್ರಮದಲ್ಲಿ ಬೆವರಿಸಿ, ಜ್ಯೇಷ್ಠಮಧು ಕೂಡಿಸಿ ತಯಾರಿಸಿದ ತೈಲದಿಂದ ಅನುವಾಸನ ವಸ್ತಿಯನ್ನು ಉಪಯೋಗಿಸಬೇಕು.

41. ಸ್ನೇಹಸ್ವೇದಾಭ್ಯಾಮವಿಭಾವಿತಶರೀರೇಣಾಲ್ಪಮೌಷಧಮಲ್ಪಗುಣಂ ವಾ ಪೀತಮೂರ್ಧ್ವಮಧೋ ವಾ ನಾಭ್ಯೇತಿ ದೋಷಾಂಶ್ಚೋತ್ಕ್ಲಿಶ್ಯ ತೈಃ ಸಹ ಬಲಕ್ಷಯಮಾಪಾದಯತಿ । ತತ್ರಾಧ್ಮಾನಂ ಹೃದಯಗ್ರಹಸ್ತೃಷ್ಣಾ ಮೂರ್ಚ್ಛಾ ದಾಹಶ್ಚ ಭವತಿ । ತಮಯೋಗಮಿತ್ಯಾಚಕ್ಷತೇ । ತಮಾಶು ವಾಮಯೇನ್ಮದನಫಲಲವಣಾಂಬುಭಿರ್ವಿರೇಚಯೇತ್ತೀಕ್ಷ್ಣತರೈಃ ಕಷಾಯೈಶ್ಚ । ದುರ್ವಾಂತಸ್ಯ ತು ಸಮುತ್ಕ್ಲಿಷ್ಟಾ ದೋಷಾ ವ್ಯಾಪ್ಯ ಶರೀರಂ ಕಂಡೂಶ್ವಯಥುಕುಷ್ಠಪಿಡಕಾಜ್ವರಾಂಗಮರ್ದಸಿಸ್ತೋದನಾನಿ ಕುರ್ವಂತಿ । ತತಸ್ತಾನವಶೇಷಾನ್ಮಹೌಷಧೇನಾಪಹರೇತ್ । (ಸು. 554)

ಅಯೋಗದ ಲಕ್ಷಣ ಮತ್ತು ಅದಕ್ಕೆ ಪರಿಹಾರ

ಸ್ನೇಹಸ್ವೇದಕ್ರಮಗಳನ್ನು ನಡಿಸಿ ಸಿದ್ಧಮಾಡಿಕೊಳ್ಳದ ದೇಹದವನು ಅಲ್ಪವಾದ ಅಥವಾ ಅಲ್ಪಗುಣವುಳ್ಳ ಔಷಧವನ್ನು ಕುಡಿದರೆ, ಅದು ಮೇಲಕ್ಕಾಗಲಿ ಕಳಗಾಗಲಿ ಹೋಗದೆ ನಿಂತು, ದೋಷಗಳನ್ನು ಕೆದರಿಸಿ, ಅವುಗಳೊಂದಿಗೆ ಕೂಡಿಕೊಂಡು, ಬಲಕ್ಷಯವನ್ನುಂಟು ಮಾಡುತ್ತದೆ; ಮತ್ತು ಅದರಿಂದ ಹೊಟ್ಟೆ ಬಿಗಿಯೋಣ, ಹೃದಯ ಹಿಡಕೊಳ್ಳುವದು, ಬಾಯಾರಿಕೆ, ಮೂರ್ಚ್ಛೆ, ಉರಿ ಸಹ ಉಂಟಾಗುತ್ತವೆ. ಅದಕ್ಕ ಅಯೋಗವೆನ್ನುತ್ತಾರೆ. ಅಂಧವನಿಗೆ ಮಾಯಿಫಲ, ಉಪ್ಪುನೀರುಗಳಿಂದ ಬೇಗನೇ ವಾಂತಿ ಮಾಡಿಸಬೇಕು ಮತ್ತು ಮೊದಲಿಗಿಂತ ಹೆಚ್ಚು ತೀಕ್ಷ್ಣವಾದ ಕಷಾಯಗಳಿಂದ ವಿರೇಚನ ಮಾಡಿಸಬೇಕು ಸರಿಯಾಗಿ ವಾಂತಿಯಾಗದವನಲ್ಲಿ ಕೆದರಿದ ದೋಷಗಳು ಶರೀರವನ್ನು ವ್ಯಾಪಿಸಿ, ಗಜ್ಜಿ, ಶೋಫೆ, ಕುಷ್ಠ, ಪಿಟಕ, ಜ್ವರ, ಅಂಗಗಳಲ್ಲಿ ಹಿಸಿಕೆದ ಹಾಗಿನ ನೋವು ಮತ್ತು ಜಜ್ಜಿದ ಹಾಗಿನ ನೋವು, ಇವುಗಳನ್ನುಂಟು ಮಾಡುತ್ತವೆ. ಆದ್ದರಿಂದ ಅಂಧಾ ಉಳಿದುಹೋದ ಮದ್ದನ್ನು ಬಲವುಳ್ಳ ಔಷಧದಿಂದ ಹೊರಗೆ ಹಾಕಬೇಕು.

42. ಕ್ಷಾಮೇಣಾತಿಮೃದುಕೋಷ್ಠೇನ ಮಂದಾಗ್ನಿನಾ ರೂಕ್ಷೇಣ ವಾತತೀಕ್ಷ್ಣೋಷ್ಣಾತಿಲವಣಮತಿರೂಕ್ಷಂ ವಾ ಪೀತಮೌಷಧಂ ಪಿತ್ತಾನಿಲೌ ಪ್ರದೂಷ್ಯ ಪರಿಕರ್ತಿಕಾಮಾಪಾದಯತಿ । ತತ್ರ ಗುದನಾಭಿಮೇಢ್ರವಸ್ತಿಶಿರಸ್ಸು ಪರಿಕರ್ತನಮನಿಲಸಂಗೋ ವಾಯುವಿಷ್ಟಂಭೋ ಭಕ್ತಾರುಚಿಶ್ಚ

ಪರಿಕರ್ತಿಕೆಯ ಲಕ್ಷಣ ಮತ್ತು ಅದಕ್ಕೆ ಪರಿಹಾರ

ಭವತಿ । ತತ್ರ ಪಿಚ್ಛಾವಸ್ತಿರ್ಯಷ್ಟೀಮಧುಕಕೃಷ್ಣಾತಿಲಕಲ್ಕಮಧುಘೃತ
ಯುಕ್ತಃ । ಶೀತಾಂಬುಪರಿಷಿಕ್ತಂ ಚೈನಂ ಪಯಸಾ ಭುಕ್ತವಂತಂ ಘೃತ
ಮಂಡೇನ ಯಷ್ಟೀಮಧುಕಸಿದ್ಧೇನ ತೈಲೇನ ವಾಽನುವಾಸಯೇತ್ ।
(ಸು. 556-57.)

ಕೃಶನಾದವನು, ಅತಿಮೃದು ಕೋಷ್ಠದವನು, ಮಂದಾಗ್ನಿಯವನು, ಅಥವಾ ರೂಕ್ಷ ನಾದವನು, ಅತಿರೂಕ್ಷವಾದ, ಅತಿತೀಕ್ಷ್ಣವಾದ, ಅತ್ಯುಷ್ಣವಾದ ಅಥವಾ ಅತಿ ಉಪ್ಪಾದ ಔಷಧವನ್ನು ಕುಡಿದಲ್ಲಿ, ಅದು ಪಿತ್ತವಾಯುಗಳ ದೋಷವನ್ನುಂಟುಮಾಡಿ, ಪರಿಕರ್ತಿಕೆ ಯನ್ನು ತರುತ್ತದೆ. ಅದರಿಂದ ಆಸನ, ನಾಭಿ, ಮೇಢ್ರ, ವಸ್ತಿಯ ತಲೆ, ಈ ಸ್ಥಾನಗಳಲ್ಲಿ ಸುತ್ತು ಕತ್ತರಿಸಿದ ಹಾಗಿನ ನೋವು, ವಾಯು ಕೂಡಿಕೊಳ್ಳುವದು, ವಾಯುವಿನ ತಡೆ, ಮತ್ತು ಅನ್ನದಲ್ಲಿ ಅರುಚಿ, ಈ ಲಕ್ಷಣಗಳು ಉಂಟಾಗುತ್ತವೆ ಅದಕ್ಕೆ ಜ್ಯೇಷ್ಠಮಧು, ಕರೀ ಎಳ್ಳಿನ ಕಲ್ಕ, ಜೇನು ಮತ್ತು ತುಪ್ಪಗಳಿಂದ ಕೂಡಿದ ಗಂಜಿನೀರಿನ ವಸ್ತಿಯನ್ನು ಕೊಡುವದು, ಅಥವಾ ಅವನನ್ನು ತಣ್ಣೀರಿನಿಂದ ಸ್ನಾನಮಾಡಿಸಿ, ಹಾಲಿನಿಂದ ಉಣ್ಣಿಸಿ, ತುಪ್ಪ, ಗಂಜಿನೀರು, ಮತ್ತು ಜ್ಯೇಷ್ಠಮಧು, ಇವುಗಳಿಂದ ತಯಾರಿಸಲ್ಪಟ್ಟ ತೈಲದಿಂದ ಅನುವಾಸನ ಮಾಡಬೇಕು.

43. ಯಸ್ಯೂರ್ಧ್ವಮಧೋ ವಾ ಭೇಷಜವೇಗಂ ಪ್ರವೃತ್ತಮಜ್ಞತ್ವಾದ್ವಿನಿಹಂತಿ ತಸ್ಯೋಪಸರಣಂ ಹೃದಿ ಕುರ್ವಂತಿ ದೋಷಾಃ । ತತ್ರ ಪ್ರಧಾನಮರ್ಮ ಸಂತಾಪಾದ್ವೇದನಾಭಿರತ್ಯರ್ಥಂ ಪೀಡ್ಯಮಾನೋ ದಂತಾನ್ ಕಿಟಕಿಟಾ ಯತೇ ಉದ್ಗತಾಕ್ಷೋ ಜಿಹ್ವಾಂ ಖಾದತಿ ಪ್ರತಾಮ್ಯತ್ಯಚೇತಾಶ್ಚ ಭವತಿ। ತಂ ಪರಿವರ್ಜಯಂತಿ ಮೂರ್ಖಾಃ । ತಮಭ್ಯಜ್ಯ ಧಾನ್ಯಸ್ವೇದೇನ ಸ್ವೇದ ಯೇದ್ಯಷ್ಟಿಮಧುಕಸಿದ್ಧೇನ ಚ ತೈಲೇನಾನುವಾಸಯೇತ್ । ಶಿರೋ ವಿರೇಚನಂ ಚಾಸ್ಮೈ ತೀಕ್ಷ್ಣಂ ವಿದಧ್ಯಾತ್ । ತತೋ ಯಷ್ಟಿಮಧುಕಮಿ ಶ್ರೇಣ ತಂಡುಲಾಂಬುನಾ ಛರ್ದಯೇದ್ಯಥಾದೋಷೋಚ್ಚಾಯೇನ ಚೈನಂ ವಸ್ತಿಭಿರುಪಾಚರೇತ್ । (ಸು 557.)

ದೋಷನದಲ್ಲ ದೋಷಗಳು ಹೃದಯವನ್ನು ಸೇರುವದು

ಯಾವನು ಮೇಲಕ್ಕಾಗಲಿ ಕೆಳಕ್ಕಾಗಲಿ ಹೊರಟಂಥಾ ಔಷಧದ ವೇಗವನ್ನು ಹೆಡ್ಡತನ ದಿಂದ ತಡೆದು ನಿಲ್ಲಿಸುತ್ತಾನೋ, ಅವನ ವಾತಾದಿ ದೋಷಗಳು ಹೃದಯದಲ್ಲಿ ಹೋಗಿ ಕೂಡು ತ್ತವೆ. ಆಗ್ಗೆ, ಪ್ರಧಾನ ಮರ್ಮವಾದ ಹೃದಯದಲ್ಲಿ ಉಂಟಾಗುವ ಸಂತಾಪದ ದೆಸೆಯಿಂದ ಅತ್ಯಂತವಾದ ವೇದನೆಗಳಿಂದ ಪೀಡಿತನಾಗಿ, ಹಲ್ಲುಗಳನ್ನು ಕಿಟಕಿಟ ಕಡದು, ಕಣ್ಣುಗಳನ್ನು ಮೇಲಕ್ಕೆ ಮಾಡಿ, ನಾಲಿಗೆಯನ್ನು ಕಚ್ಚುತ್ತಾ, ಬಹಳ ಸಂಕಟಪಡುತ್ತಾ, ಪ್ರಜ್ಞೆಯಿಲ್ಲದೆ ಇರು ತ್ತಾನೆ. ಅಂಥವನನ್ನು ಮೂರ್ಖರು ಚಿಕಿತ್ಸೆಮಾಡದೆ ಬಿಟ್ಟುಬಿಡುತ್ತಾರೆ. ಅವನಿಗೆ ಸ್ನೇಹ ಹಚ್ಚಿ, ಧಾನ್ಯಸ್ವೇದದಿಂದ ಬೆವರಿಸಿ, ಜ್ಯೇಷ್ಠಮಧುವಿನಿಂದ ತಯಾರಿಸಿದ ತೈಲದಿಂದ ಅನು ವಾಸನವನ್ನು ಮಾಡಬೇಕು, ಮತ್ತು ಅವನಿಗೆ ತೀಕ್ಷ್ಣವಾಗಿ ಶಿರೋವಿರೇಚನ ಮಾಡಿಸ ತಕ್ಕದ್ದು. ಆ ಮೇಲೆ ಜ್ಯೇಷ್ಠಮಧುವಿನ ಚೂರ್ಣವನ್ನು ಮಿಶ್ರಮಾಡಿ, ಅಕ್ಕಿ ತೊಳೆದ ನೀರನ್ನು ಅವನಿಗೆ ಕೊಟ್ಟು ವಾಂತಿ ಮಾಡಿಸಬೇಕು; ಮತ್ತು ಹೆಚ್ಚಾದ ದೋಷವನ್ನು ನೋಡಿಕೊಂಡು ಅದಕ್ಕೆ ತಕ್ಕವಾದ ವಸ್ತಿಗಳಿಂದ ಉಪಚರಿಸತಕ್ಕದ್ದು.

44. ಯಾ ತು ವಿರೇಚನೇ ಗುದಪರಿಕರ್ತಿಕಾ ತದ್ವಮನೇ ಕಂಠಕ್ಷಣಾ ನಂ ಯದಧಃ ಪರಿಸ್ರವಣಂ ಸ ಊರ್ಧ್ವಭಾಗೇ ಶ್ಲೇಷ್ಮಪ್ರಸೇಕೋ ಯಾ ತ್ವಧಃ ಪ್ರವಾಹಿಕಾ ಸಾ ತೂರ್ಧ್ವಶುಷ್ಕೋದ್ಗಾರಾ ಇತಿ | (ಸು. 558.)

ವಿರೇಚನೆಯ ಉಪದ್ರವಗಳಿಗೆ ಪ್ರತಿಯಾದ ವಮನ ಉಪದ್ರವಗಳು

ವಿರೇಚನದಲ್ಲಿ ಉಂಟಾಗುವ ಆಸನ ಪರಿಕರ್ತನಕ್ಕೆ ಸರಿಯಾದದ್ದು ವಮನದಲ್ಲಿ ಕಂಠ ಬಿದ್ದುಹೋಗುವದು, ಕೆಳಗೆ ಉಂಟಾಗುವ ಪರಿಸ್ರಾವಕ್ಕೆ ಸರಿಯಾದದ್ದು ಮೇಲ್ಭಾಗದಲ್ಲಿ ಕಫ ಸುರಿಯುವದು, ಮತ್ತು ಕೆಳಗಿನ ಪ್ರವಾಹಿಕೆಗೆ ಸರಿಯಾದದ್ದು ಊರ್ಧ್ವದಲ್ಲಿ ಒಣವಾಂತಿ (ಅಥವಾ ತೇಗು) ಆಗಿರುತ್ತದೆ.

45. ಕ್ರೂರಕೋಷ್ಠಸ್ಯಾತಿಪ್ರಭೂತದೋಷಸ್ಯ ಮೃದ್ವೌಷಧಮವಚಾರಿತಂ ಸಮುತ್ಕ್ಲಿಶ್ಯ ದೋಷಾನ್ನ ನಿಃಶೇಷಾನಪಹರತಿ | ತತಸ್ತೇ ದೋಷಾಃ ಪರಿಸ್ರಾವಮಾಪಾದಯಂತಿ | ತತ್ರ ದೌರ್ಬಲ್ಯೋದರವಿಷ್ಟಂಭಾರುಚಿ ಗಾತ್ರಸದನಾನಿ ಭವಂತಿ | ಸವೇದನೌ ಚಾಸ್ಯ ಪಿತ್ತಶ್ಲೇಷ್ಮಾಣೌ ಪರಿಸ್ರವತಸ್ತಂ ಪರಿಸ್ರಾವಮಿತ್ಯಾಚಕ್ಷತೇ ತಮಜಕರ್ಣಧವತಿನಿಶಪಲಾಶ ಕಷಾಯೈರ್ಮಧುರಸಂಯುಕ್ತೈರಾಸ್ಥಾಪಯೇತ್ | ಉಪಶಾಂತದೋಷಂ ಸ್ನಿಗ್ಧಂ ಚ ಭೂಯಃ ಸಂಶೋಧಯೇತ್ | (ಸು. 557.)

ಪರಿಸ್ರಾವದ ಲಕ್ಷಣ ಮತ್ತು ಅದಕ್ಕೆ ಪರಿಹಾರ

ಕ್ರೂರ ಹೊಟ್ಟೆಯುಳ್ಳವನೂ, ಅತಿಯಾಗಿ ಬೆಳೆದ ದೋಷವುಳ್ಳವನೂ, ಮೃದು ಔಷಧವನ್ನು ತಪ್ಪಾಗಿ ಸೇವಿಸಿದ್ದಲ್ಲಿ, ಅದು ದೋಷಗಳನ್ನು ಕಿತ್ತು, ನಿಃಶೇಷವಾಗಿ ತೆಗೆದುಬಡುವದಿಲ್ಲ. ಆದ್ದರಿಂದ ಆ ದೋಷಗಳು ಪರಿಸ್ರಾವವನ್ನುಂಟುಮಾಡುತ್ತವೆ. ಆಗ್ಗೆ ದುರ್ಬಲತೆ, ಹೊಟ್ಟೆ ಬಿಗಿಯುವದು, ಅರುಚಿ, ಮೈನೋವು, ಸಹ ಸಂಭವಿಸುತ್ತವೆ, ಮತ್ತು ಅವನ ಪಿತ್ತ ಕಫಗಳು ನೋವು ಕೂಡಿ ಸ್ರವಿಸುತ್ತವೆ ಅದಕ್ಕೆ ಪರಿಸ್ರಾವ ಎನ್ನುತ್ತಾರೆ. ಅಂಥವನಿಗೆ ಅಜಕರ್ಣ (ಚಿಕ್ಕರಾಳ), ಬಿಳೇನಂದಿ, ನೇಮಿ, ಪಲಾಶ, ಇವುಗಳ ಕಷಾಯವನ್ನು ಮಧುರ ಮಿಶ್ರದಿಂದ ಕೊಟ್ಟು, ಆಸ್ಥಾಪನೆ ಮಾಡಬೇಕು; ಮತ್ತು ಆ ಪರಿಸ್ರಾವದೋಷವು ಶಾಂತವಾದ ಮೇಲೆ ಅವನಿಗೆ ಸ್ನೇಹಕ್ರಮ ನಡಿಸಿ ಪುನಃ ಶೋಧನಮಾಡಿಸಬೇಕು.

46. ಅತಿರೂಕ್ಷೋಽತಿಸ್ನಿಗ್ಧೋ ವಾ ಭೇಷಜಮವಚಾರಿತಮಪ್ರಾಪ್ತಂ ವಾ ವಾತವರ್ಚ ಉದೀರಯೇತ್ | ವೇಗಾಘಾತೇನ ವಾ ಪ್ರವಾಹಿಕಾ ಭವತಿ | ತತ್ರ ಸವಾತಂ ಸದಾಹಂ ಸಶೂಲಂ ಸಶ್ವೇತಂ ಸಪಿಚ್ಛಿಲಂ ಕೃಷ್ಣಂ ರಕ್ತಂ ವಾ ಭೃಶಂ ಪ್ರವಾಹಮಾಣಃ ಕಫಮುಪವಿಶತಿ ತಂ ಪರಿಸ್ರಾವವಿಧಾನೇನೋಪಾಚರೇತ್ | (ಸು. 557.)

ಪ್ರವಾಹಿಕೆಯ ಲಕ್ಷಣ ಮತ್ತು ಅದಕ್ಕೆ ಪರಿಹಾರ

ಅತಿರೂಕ್ಷನಾದವನು, ಅಥವಾ ಅತಿಸ್ನಿಗ್ಧನಾದವನು, ತಕ್ಕ ಉಪಚಾರವಿಲ್ಲದೆ, ಅಥವಾ ಅಯುಕ್ತವಾಗಿ, ಸೇವಿಸಿದ ಮದ್ದು ವಾತದ ಮಲವನ್ನು ಕೆದರಿಸುತ್ತದೆ; ಅದರಿಂದ, ಅಥವಾ ಅಂಥವನಲ್ಲಿ ವೇಗದ ತಡೆಯುಂಟಾಗುವದರಿಂದ, ಪ್ರವಾಹಿಕೆ ಉತ್ಪನ್ನವಾಗುತ್ತದೆ. ಆಗ್ಗೆ ಅವನು

ವಾಯು, ಉರಿ, ಶೂಲ, ಇವುಗಳಿಂದ ಕೂಡಿಕೊಂಡ ಪಿಚ್ಚಿಲವಾದ ಮತ್ತು ಬಿಳುಪು ಮಿಶ್ರ ಕಫ ಅಥವಾ ಕೆಂಪಾದ, ಕಫವನ್ನು ಬಹಳವಾಗಿ ಹೇಲುತ್ತಾನೆ. ಅಂಥವನಿಗೆ ಪರಿಸ್ರಾವಕ್ಕೆ ಹೇಳಿದ ವಿಧಾನದಿಂದ ಉಪಚಾರಮಾಡತಕ್ಕದ್ದು.

ಪರಾ ಶೋಧನವಿಧಿಗಳಿಗೆ ವ್ಯತಿರಿಕ್ತವಾಗಿ ನಡೆಯುವದರಿಂದ ಉಂಟಾಗುವ ಇತರ ಉಪದ್ರವಗಳಿಗೆ ಇದೇ ಮೇರೆಗೆ ದೋಷಾದಿಗಳನ್ನು ನೋಡಿಕೊಂಡು ಚಿಕಿತ್ಸೆ ನಡಿಸುವದು

47. ಅಜೀರ್ಣಂ ಶೀತಪಾನೀಯಂ ವ್ಯಾಯಾಮಂ ಮೈಥುನಂ ತಥಾ ।
ವಾಂತಿಯನಂತರದ ಅಚಾರಿಕಗಳು ಸ್ನೇಹಾಭ್ಯಂಗಂ ಪ್ರಕೋಪಂ ಚ ದಿನೈಕಂ ವರ್ಜಯೇತ್ಸುಧೀಃ ॥ (ಶಾ. 114.)

ವಮನ ಮಾಡಿಸಿಕೊಂಡ ಪ್ರಾಜ್ಞನು ಅಜೀರ್ಣದ ಆಹಾರ, ತಣ್ಣಗಿನ ಪಾನ, ವ್ಯಾಯಾಮ, ಮೈಥುನ, ಸ್ನೇಹಾಭ್ಯಂಗ, ಹೆಚ್ಚಿನ ಕೋಪ, ಇವುಗಳನ್ನು ಒಂದು ದಿನ ಬಿಡಬೇಕು.

48. ಪೀತ್ವಾ ವಿರೇಚನಂ ಶೀತಜಲೈಃ ಸಂಸಿಚ್ಯ ಚಕ್ಷುಷೀ ।
ಸುಗಂಧಿಂ ಕಿಂಚಿದಾಘ್ರಾಯ ತಾಂಬೂಲಂ ಶೀಲಯೇದ್ವರಂ ॥
ವಿರೇಚನ ಸೇವಿಸಿದವನಿಗೆ ಪಥ್ಯ ನಿವಾತಸ್ಥೋ ನ ವೇಗಾಂಶ್ಚ ಧಾರಯೇನ್ನ ಸ್ವಪೇತ್ತಥಾ ।
ಶೀತಾಂಬು ನ ಸ್ಪೃಶೇತ್ಕ್ವಾಪಿ ಕೋಷ್ಣನೀರಂ ಪಿಬೇನ್ಮುಹುಃ ॥ (ಶಾ. 147.)

ವಿರೇಚನದ ಮದ್ದನ್ನು ಸೇವಿಸಿದ ಮೇಲೆ, ಕಣ್ಣುಗಳಿಗೆ ತಣ್ಣೀರನ್ನು ಹಚ್ಚಿ, ಸುಗಂಧವುಳ್ಳ ಯಾವದಾದರೊಂದು ವಸ್ತುವನ್ನು ಮೂಸಿ, ಒಳ್ಳೇ ತಾಂಬೂಲವನ್ನು ಸೇವಿಸಬೇಕು, ಗಾಳಿ ಬೀಸದ ಕೋಣೆಯಲ್ಲಿರಬೇಕು; ಹೊರಟ ವೇಗಗಳನ್ನು ತಡೆದು ನಿಲ್ಲಿಸಬಾರದು; ನಿದ್ರೆಮಾಡ ಬಾರದು; ಎಲ್ಲಿಯಾದರೂ ತಣ್ಣೀರನ್ನು ಮುಟ್ಟಬಾರದು; ಮತ್ತು ಅಲ್ಪ ಬಿಸಿಯುಳ್ಳ ನೀರನ್ನು ಪದೇ ಪದೇ ಕುಡಿಯಬೇಕು.

49. ಪ್ರವಾತಸೇವಾ-ಶೀತಾಂಬು-ಸ್ನೇಹಾಭ್ಯಂಗಮಜೀರ್ಣತಾಂ ।
ವಿರೇಚನಾನಂತರದ ಪಥ್ಯ ವ್ಯಾಯಾಮಂ ಮೈಥುನಂ ಚೈವ ನ ಸೇವೇತ ವಿರೇಚಿತಃ ॥ (ಶಾ. 148.)

ವಿರೇಚನ ಮಾಡಿಸಿಕೊಂಡವನು ಗಾಳಿ ಬೀಸುವಲ್ಲಿಗೆ ಹೋಗಬಾರದು; ಮತ್ತು ತಣ್ಣೀರು. ಸ್ನೇಹಾಭ್ಯಂಗ, ಅಜೀರ್ಣಕರವಾದ ವಸ್ತು, ವ್ಯಾಯಾಮ, ಮೈಥುನ, ಇವುಗಳನ್ನು ಉಪಯೋಗಿಸಬಾರದು.

50. ಕ್ವಾಥ್ಯದ್ರವ್ಯಸ್ಯ ಕುಡವಂ ಶ್ರಾವಯಿತ್ವಾ ಜಲಾಢಕೇ ।
ವಮನಕ್ಕೆ ಕ್ವಾಥಾದಿ ಮಾತ್ರಾಎಚಾರ ಅರ್ಧಭಾಗಾವಶಿಷ್ಟಂ ಚ ವಮನೇಷ್ವವಚಾರಯೇತ್ ॥
ಕ್ವಾಥಪಾನೇ ನವಪ್ರಸ್ಥಾ ಜ್ಯೇಷ್ಠಾ ಮಾತ್ರಾ ಪ್ರಕೀರ್ತಿತಾ ।
ಮಧ್ಯಮಾ ಷಣ್ಮಿತಾ ಪ್ರೋಕ್ತಾ ತ್ರಿಪ್ರಸ್ಥಾ ಚ ಕನೀಯಸೀ ॥

ಕಲ್ಕಚೂರ್ಣಾವಲೇಹಾನಾಂ ತ್ರಿಪಲಂ ಜ್ಯೇಷ್ಠಮಾತ್ರಯಾ ।
ಮಧ್ಯಮಂ ದ್ವಿಪಲಂ ವಿದ್ಯಾತ್ ಕನೀಯಸ್ತು ಪಲಂ ಭವೇತ್ ॥
(ಶಾ. 142-43.)

ಕಷಾಯದ ಔಷಧ ಪಲ ನಾಲ್ಕಕ್ಕೆ ನಾಲ್ಕು ಪ್ರಸ್ತ (ಹದಿನಾರು ಪಾಲು) ನೀರು ಹಾಕಿ, ಅರ್ಧಾಂಶ ಬತ್ತಿಸಿದ ಕಷಾಯವನ್ನು ವಮನದಲ್ಲಿ ಕೊಡತಕ್ಕದ್ದು. ಉತ್ತಮಪಕ್ಷ ಒಂಭತ್ತು ಪ್ರಸ್ಥ, ಮಧ್ಯಮ ಪಕ್ಷ ಆರು ಪ್ರಸ್ಥ, ಕಡೇ ಪಕ್ಷ ಮೂರು ಪ್ರಸ್ಥ, ಕಷಾಯ ಕುಡಿಯಬೇಕು. ಕಲ್ಕ, ಚೂರ್ಣ, ಲೇಹಗಳ ಪ್ರಮಾಣ, ಉತ್ತಮ ಪಕ್ಷ ಮೂರು ಪಲ, ಮಧ್ಯಮ ಪಕ್ಷ ಎರಡು ಪಲ, ಕಡೇ ಪಕ್ಷ ಒಂದು ಪಲ ಎಂತ ತಿಳಿಯಬೇಕು

51. ವಮನೇ ಚ ವಿರೇಕೇ ಚ ತಥಾ ಶೋಣಿತಮೋಕ್ಷಣೇ ।
ತೋಥನಾದಿಗಳಲ್ಲಿ ಅರ್ಧತ್ರಯೋದಶಪಲಂ ಪ್ರಸ್ಥಮಾಹುರ್ಮನೀಷಿಣಃ ॥ (ಭಾ. ಪ್ರ. 215)
ಪ್ರಸ್ಥಪ್ರಮಾಣ

ವಮನದಲ್ಲಿಯೂ, ವಿರೇಚನದಲ್ಲಿಯೂ, ರಕ್ತ ತೆಗೆಯುವದರಲ್ಲಿಯೂ, ಪ್ರಸ್ಥವೆಂಬದು ಆರೂವರೆ ಪಲ ಎಂತ ತಿಳಿಯುತ್ತಾರೆ.

ಪರಾ 1) 'ಅರ್ಧ' ಎಂಬಲ್ಲಿ 'ಸಾರ್ಧ' ಎಂತ ಶಾ ಸಂಹಿತೆಯಲ್ಲ (ಪು 143) ಕಾಣುತ್ತದೆ ಆ ಪಾಠವನ್ನಿಟ್ಟು ಕೊಂಡರೆ ಪ್ರಸ್ಥಕ್ಕೆ ಹದಿಮೂರುವರೆ ಪಲ ಎಂತ ಅರ್ಥವಾಗುತ್ತದೆ ಆಗ್ಗೆ ಹಿಂದಿನ ಸಂಖ್ಯೆಯಲ್ಲಿ ಎರಡು ಪ್ರಸ್ಥ ಕಷಾಯವನ್ನು ಕುಡಿಯಬೇಕೆಂತ ವಿಧಿಸಿ, ಅನಂತರ ಕನಿಷ್ಠ ಮಾತ್ರೆಯೇ ಮೂರು ಪ್ರಸ್ಥ ಎಂತ ಹೇಳಿದ್ದರಲ್ಲಿ ಪರಸ್ಪರ ವಿರೋಧ ಕಾಣುವದು ಭಾ ಪ್ರ ದ ವ್ಯಾಖ್ಯಾನದಲ್ಲ ಮೇಲಿನ ಶ್ಲೋಕದ ಅರ್ಧತ್ರಯೋದಶ ಎಂಬ ಪದಕ್ಕೆ 'ಸಾರ್ಧ ಷಟ್ಕಮ್' (ಆರೂವರೆ) ಎಂತ ಸ್ಪಷ್ಟವಾಗಿ ಅರ್ಥ ಹೇಳಲ್ಪಟ್ಟಿದೆ

ಪರಾ 2) ಔಷಧದ ಪ್ರಮಾಣವನ್ನು ನಿಶ್ಚಯಿಸುವಾಗ ಔಷಧದ ಶಕ್ತಿಯನ್ನು, ಕುಡಿಯುವ ಕಷಾಯದ ಪ್ರಮಾಣವನ್ನು ನಿಶ್ಚಯಿಸುವಾಗ ರೋಗಿಯ ಆಮಾಶಯದ ಪ್ರಮಾಣವನ್ನು, ಆಲೋಚಿಸಿಕೊಳ್ಳತಕ್ಕದ್ದು ಚರಕ ಸುಶ್ರುತಗಳಲ್ಲಿ ಕಂಡದ ಪರಿಗೆ ಬಿಸಿನೀರು ಇತ್ಯಾದಿ ಕುಡಿಯಬೇಕೆಂತ ಬರೆದಿರುವದು ಆಮಾಶಯದ ಪ್ರಮಾಣಸೂಚಕಾರ್ಥ ಎಂತ ತಿಳಿಯಬಹುದು

XXII ನೇ ಅಧ್ಯಾಯ.

ವಸ್ತಿವಿಧಿ.

1. ತತ್ರ ಸ್ನೇಹಾದೀನಾಂ ಕರ್ಮಣಾಂ ವಸ್ತಿಕರ್ಮ ಪ್ರಧಾನತಮಮಾಹು ರಾಚಾರ್ಯಾಃ । ಕಸ್ಮಾದನೇಕಕರ್ಮಕರತ್ವಾದ್ವಸ್ತೇರಿಹ ವಸ್ತಿರ್ನಾನಾ ವಿಧದ್ರವ್ಯಸಂಯೋಗಾದ್ದೋಷಾಣಾಂ ಸಂಶೋಧನಸಂಶಮನಸಂಗ್ರಹ ಣಾನಿ ಕರೋತಿ । ಕ್ಷೀಣಶುಕ್ರಂ ವಾಜೀಕರೋತಿ ಕೃಶಂ ಬೃಂಹಯತಿ ಸ್ಥೂಲಂ ಕರ್ಷಯತಿ ಚಕ್ಷುಃ ಪ್ರೀಣಯತಿ ವಲೀಪಲಿತಮುಪಹಂತಿ ವಯಃ ಸ್ಥಾಪಯತಿ । ಶರೀರೋಪಚಯಂ ವರ್ಣಬಲಮಾರೋಗ್ಯಮಾಯುಷಃ ಪರಿವೃದ್ಧಿಂ ಚ ಕರೋತಿ ವಸ್ತಿಃ ಸಮ್ಯಗುಪಾಸಿತಃ । (ಸು. 558.)

ವಸ್ತಿಯ ಗುಣ

ಸ್ನೇಹಾದಿಕರ್ಮಗಳೊಳಗೆ ವಸ್ತಿಕರ್ಮವು ಅತ್ಯಂತ ಪ್ರಧಾನವೆಂತ ಆಚಾರ್ಯರು ಹೇಳುತ್ತಾರೆ ಯಾಕೆಂದರೆ ವಸ್ತಿಯು ಅನೇಕ ಕೆಲಸಗಳನ್ನು ಸಾಧಿಸುತ್ತದೆ. ನಾನಾ ವಿಧವಾದ ದ್ರವ್ಯಗಳನ್ನು ಕೂಡಿಸಿ ತಯಾರಿಸಿದ ವಸ್ತಿಯು ದೋಷಗಳ ಸಂಶೋಧನವನ್ನೂ, ಸಂಶಮನವನ್ನೂ, ಸಂಗ್ರಹಣವನ್ನೂ (ತಡೆದು ನಿಲ್ಲಿಸುವಿಕೆಯನ್ನೂ), ಸಿದ್ಧಿಸುತ್ತದೆ. ಸರಿಯಾಗಿ ಉಪಯೋಗಿಸಲ್ಪಟ್ಟ ವಸ್ತಿಯು ಶುಕ್ರಕ್ಷೀಣನಾದವನಿಗೆ ವಾಜೀಕರಶಕ್ತಿಯನ್ನು ಕೊಡುತ್ತದೆ, ಕೃಶನಾದವನನ್ನು ಪುಷ್ಟಿಪಡಿಸುತ್ತದೆ, ಸ್ಥೂಲನನ್ನು ಕೃಶಮಾಡುತ್ತದೆ, ಕಣ್ಣುಗಳ ಪ್ರಸನ್ನತೆಯನ್ನುಂಟುಮಾಡುತ್ತದೆ, ನೆರಿನರೆಗಳನ್ನು ನಾಶಮಾಡುತ್ತದೆ, ವಯಸ್ಸನ್ನು ನಿಲ್ಲಿಸುತ್ತದೆ (ಮುದಿತನವನ್ನು ದೂರ ಮಾಡುತ್ತದೆ), ಮತ್ತು ಮೈಕೂಡುವಿಕೆಯನ್ನೂ, ವರ್ಣವನ್ನೂ, ಬಲವನ್ನೂ, ಆರೋಗ್ಯವನ್ನೂ, ಆಯುಸ್ಸಿನ ವೃದ್ಧಿಯನ್ನೂ, ಸಂಪಾದಿಸುತ್ತದೆ.

2. ತಥಾ ಜ್ವರಾತಿಸಾರ-ತಿಮಿರ-ಪ್ರತಿಶ್ಯಾಯ-ಶಿರೋರೋಗಾಧಿಮಂಥಾರ್ದಿತಾಕ್ಷೇಪಕ-ಪಕ್ಷಘಾತೈಕಾಂಗಸರ್ವಾಂಗರೋಗಾಧ್ಮಾನೋದರ-ಶರ್ಕರಾ-ಶೂಲ-ವೃದ್ಧ್ಯುಪದಂಶಾನಾಹ-ಮೂತ್ರಕೃಚ್ಛ್ರ-ಗುಲ್ಮ-ವಾತಶೋಣಿತ-ವಾತಮೂತ್ರ-ಪುರೀಷೋದಾವರ್ತ-ಶುಕ್ರಾರ್ತವಸ್ತನ್ಯನಾಶ-ಹೃದ್ಗ್ರಹನುಮನ್ಯಾಗ್ರಹಾರ್ಶೋಽಶ್ಮರೀ-ಮೂಢಗರ್ಭಪ್ರಭೃತಿಷು ಚಾತ್ಯರ್ಥಮುಪಯುಜ್ಯತೇ । (ಸು. 558-59.)

ವಸ್ತಿಪ್ರಶಸ್ತ ವ್ಯಾಧಿಗಳು

ಆದ್ದರಿಂದ ಜ್ವರ, ಅತಿಸಾರ, ತಿಮಿರ, ನೆಗಡಿ, ಶಿರೋರೋಗ, ಅಧಿಮಂಥ, ಅರ್ದಿತ, ಆಕ್ಷೇಪಕ, ಪಕ್ಷಘಾತ, ಏಕಾಂಗರೋಗ, ಸರ್ವಾಂಗರೋಗ, ಆಧ್ಮಾನ, ಉದರ, ಶರ್ಕರಾ, ಶೂಲ, ವೃಷಣವೃದ್ಧಿ, ಉಪದಂಶ, ಆನಾಹ, ಮೂತ್ರಕೃಚ್ಛ್ರ, ಗುಲ್ಮ, ವಾತಶೋಣಿತ, ವಾತ ಮೂತ್ರ, ವಾತಪುರೀಷ, ಉದಾವರ್ತ, ಶುಕ್ರನಾಶ, ಆರ್ತವನಾಶ, ಸ್ತನ್ಯನಾಶ, ಹೃದ್ಗ್ರಹ, ಹನುಗ್ರಹ, ಮನ್ಯಾಗ್ರಹ, ಅರ್ಶಸ್ಸು, ಅಶ್ಮರೀ, ಮೂಢಗರ್ಭ, ಮುಂತಾದವುಗಳಲ್ಲಿ ವಸ್ತಿಯು ಬಹಳವಾಗಿ ಉಪಯೋಗಿಸಲ್ಪಡುತ್ತದೆ.

3. ವಸ್ತಿರ್ವಾತೇ ಚ ಪಿತ್ತೇ ಚ ಕಫೇ ರಕ್ತೇ ಚ ಶಸ್ಯತೇ ।
ಎಲ್ಲಾ ದೋಷಗಳಿಗೂ ವಸ್ತಿಯು ಹಿತ ಸಂಸರ್ಗೇ ಸನ್ನಿಪಾತೇ ಚ ವಸ್ತಿರೇವ ಹಿತಃ ಸದಾ ॥ (ಸು. 559.)

ವಸ್ತಿಯು ವಾತದಲ್ಲಿಯೂ, ಪಿತ್ತದಲ್ಲಿಯೂ, ಕಫದಲ್ಲಿಯೂ, ರಕ್ತದೋಷದಲ್ಲಿಯೂ, ಪ್ರಶಸ್ತವಾಗಿರುತ್ತದೆ, ಮತ್ತು ದೋಷಗಳ ಸಂಸರ್ಗದಲ್ಲಿಯೂ, ಸನ್ನಿಪಾತದಲ್ಲಿಯೂ ಸದಾ ವಸ್ತಿಯೇ ಹಿತವಾದದ್ದು.

4. ನೇತ್ರಂ ಕಾರ್ಯಂ ಸುವರ್ಣಾದಿಧಾತುಭಿರ್ವೃಕ್ಷವೇಣುಭಿಃ ।
ನಲೈರ್ದಂತೈರ್ವಿಷಾಣಾಗ್ರೈರ್ಮಣಿಭಿರ್ವಾ ವಿಧೀಯತೇ ॥
ಏಕವರ್ಷಾತ್ತು ಷಡ್ವರ್ಷಂ ಯಾವನ್ಮಾನಂ ಷಡಂಗುಲಂ ।
ತತೋ ದ್ವಾದಶಕಂ ಯಾವನ್ಮಾನಂ ಸ್ಯಾದಷ್ಟಸಮ್ಮಿತಂ ॥
ತತಃ ಪರಂ ದ್ವಾದಶಭಿರಂಗುಲೈರ್ನೇತ್ರದೀರ್ಘತಾ ।
ವಸ್ತಿಯ ನಳಿಗೆ ಮುದ್ಗಭಿದ್ರಂ ಕಲಾಯಾಭಂ ಭಿದ್ರಂ ಕೋಲಾಸ್ಥಿರಂಧ್ರಕಂ ॥
ಯಥಾಸಂಖ್ಯಂ ಭವೇನ್ನೇತ್ರಂ ಶ್ಲಕ್ಷ್ಣಂ ಗೋಪುಚ್ಛಸನ್ನಿಭಂ ।
ಆತುರಾಂಗುಷ್ಠಮಾನೇನ ಮೂಲೇ ಸ್ಯಾದ್ವಿಲಂ ವಿಧೀಯತೇ ॥
ಕನಿಷ್ಠಿಕಾಪರೀಣಾಹಮಗ್ರೇ ಚ ಗುಟಿಕಾಮುಖಂ ।
ತನ್ಮೂಲೇ ಕರ್ಣಿಕೇ ದ್ವೇ ಚ ಕಾರ್ಯೇ ಭಾಗಾಚ್ಚ ತುರ್ಯಕಾತ್ ॥
(ಶಾ 149.)

ಸುವರ್ಣಾದಿ ಲೋಹಗಳಿಂದ, ಮರದ ತಿರುಳಿನಿಂದ, ಓಟೆಗಳಿಂದ, ಬಿದುರುಗಳಿಂದ, ದಂತಗಳಿಂದ, ಕೊಂಬುಗಳ ತುದಿಯಿಂದ, ಅಥವಾ (ಸ್ಫಟಿಕಾದಿ) ಮಣಿಗಳಿಂದ ಒಂದು ನಳಿಗೆಯನ್ನು ಮಾಡಬೇಕು ಅದು ಒಂದು ವರ್ಷದಿಂದ ಆರು ವರ್ಷದ ವರೆಗಿನ ವ್ಯಾಯದವನಿಗಾದರೆ ಆರು ಅಂಗುಲ, ಅದರ ಮೇಲೆ 12 ವರ್ಷಗಳ ವರೆಗೆ ಎಂಟು ಅಂಗುಲ, ಅದಕ್ಕೂ ದೊಡ್ಡವರಿಗೆ 12 ಅಂಗುಲ, ಉದ್ದವಿರಬೇಕು ಅದರ ತೂತು ಹೆಸರುಗಾತ್ರ, ಪುಟಾಣಿ ಕಡಲೆ ಗಾತ್ರ, ಅಥವಾ ಬೊಗರಿ ಬೀಜದ ಗಾತ್ರ, ಆಯಾ ವ್ಯಾಯ ವರ್ಗಕ್ಕೆ ಸರಿಯಾಗಿ ಇರಬೇಕು; ಮತ್ತು ಆ ನಳಿಗೆಯು ನುಣುಪಾಗಿ ಗೋವಿನ ಬಾಲದ ಆಕಾರದಲ್ಲಿರಬೇಕು ಅದು ಬುಡದಲ್ಲಿ ರೋಗಿಯ ಹೆಬ್ಬೆಟ್ಟಿನಷ್ಟು ಮತ್ತು ತುದಿಯಲ್ಲಿ ಕಿರೀಬೆರಳಿನಷ್ಟು ತೋರವಾಗಿದ್ದು, ಮುಖದಲ್ಲಿ ಗುಳಿಗೆಯಂತೆ ಗೋಲಾಕಾರವಾಗಿರಬೇಕು. ಅದರ ಬುಡದಲ್ಲಿ ಎರಡು, ಮತ್ತು ತುದಿಯಿಂದ ನಾಲ್ಕನೇ ಒಂದು ಅಂಶದ ದೂರದಲ್ಲಿ ಒಂದು, ಹೀಗೆ ಮೂರು ಕಿವಿಗಳಿರಬೇಕು.

ಪರಾ ಬುಡದ ಎರಡು ಕಿವಿಗಳು ವಸ್ತಿಯನ್ನು ಕಟ್ಟುವ ಉದ್ದಿತ್ಯ, ಮೂರನೇದು ಅಸನದೊಳಗೆ ಹೋಗತಕ್ಕ ನಳಿಗೆಯ ಅಂತವನ್ನು ತೋರಿಸುವ ಉದ್ದಿತ್ಯ ಎಂತ ತಿಳಿಯಬೇಕು ಸುಶ್ರುತನು ನಳಿಗೆಗೆ ಲೋಹಗಳೊಳಗೆ ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ, ಉತ್ತಾಳೆ, ಇವುಗಳನ್ನು ಹೇಳಿದ್ದಾನೆ, ಮತ್ತು ಮೇಲೆ ಹೇಳಿದ ನಳಿಗೆಯ ತೋರದ ಪ್ರಮಾಣವನ್ನು 25 ವರ್ಷ ವ್ಯಾಯದ ಮೇಲಿನವರಿಗೆ ಮಾತ್ರ ವಿಧಿಸಿದ್ದಾನೆ ಮುಂದಿನ ಸಂ ೫ ನೋಡಿರಿ

5. ಪಂಚವಿಂಶತೇರೂರ್ಧ್ವಂ ದ್ವಾದಶಾಂಗುಲಂ ಮೂಲೇಽಂಗುಷ್ಠೋದರಪರಿಣಾಹಮಗ್ರೇ ಕನಿಷ್ಠಿಕೋದರಪರಿಣಾಹಮಗ್ರೇ ತ್ರ್ಯಂಗುಲಸನ್ನಿವಿಷ್ಟಕ

ನಳಿಗೆಯ ಪ್ರಮಾಣದ ವ್ಯವಸ್ಥೆ

ರ್ಣಿಕಂ ಗೃಧ್ರಪತ್ರನಾಡೀತುಲ್ಯಪ್ರವೇಶಂ ಕೋಲಾಸ್ಥಿಮಾತ್ರಂ ಛಿದ್ರಂ ಛಿನ್ನ ಕಲಾಯಾಮಾತ್ರಂ ಛಿದ್ರಮಿತ್ಯೇಕೇ | ಸರ್ವಾಣಿ ಮೂಲೇ ವಸ್ತಿನಿಬಂಧನಾರ್ಥಂ ದ್ವಿಕರ್ಣಿಕಾನಿ | (ಸು. 559.)

25 ವರ್ಷ ಪ್ರಾಯದ ಮೇಲೆ ನಳಿಗೆಯು ಹನ್ನೆರಡಂಗುಲ ಉದ್ದ, ಮೂಲದಲ್ಲಿ ಹೆಬ್ಬೆಟ್ಟಿನಷ್ಟು ತೋರ, ತುದಿಯಲ್ಲಿ ಕಿರಿಬೆರಳಿನಷ್ಟು ತೋರ, ಇರಬೇಕು. ನಳಿಗೆಯ ತುದಿಯಿಂದ ಮೂರು ಅಂಗುಲ ದೂರದಲ್ಲಿ ಒಂದು ಕಿವಿ, ಹದ್ದಿನ ರೆಕ್ಕೆಯ ಗರಿಯಷ್ಟು ಪ್ರವೇಶ (ಅಂದರೆ ತುದಿಯ ರಂಧ್ರ), ಬೊಗರಿಬೀಜದಷ್ಟು, ಕೆಲವರ ಪಕ್ಷದಲ್ಲಿ ನೆನೆದ ಬಟಾಣಿಕಡಲೆಯಷ್ಟು, ಒಳಗಿನ ಟೊಳ್ಳು ಸಹ ಇರತಕ್ಕದ್ದು. ಎಲ್ಲಾ ನಳಿಗೆಗಳಿಗೂ ಬುಡದಲ್ಲಿ ವಸ್ತಿಯನ್ನು ಕಟ್ಟುವ ದಕ್ಕೋಸ್ಕರ ಎರಡು ಕಿವಿಗಳಿರಬೇಕು.

ಇದಾ ಸುಶ್ರುತದಲ್ಲಿ ಕಡಿಮೆ ಪ್ರಾಯದವರಿಗೆ ಕಡಿಮೆ ಪ್ರಮಾಣಗಳು ಹೇಳಲ್ಪಟ್ಟಿವೆ ಪ್ರಾಯದಲ್ಲಿ ಒಂದು ವರ್ಷ, 8 ವರ್ಷ 16 ವರ್ಷ ಎಂಬ ಮೂರು ವರ್ಗ ಮಾಡಿ, ಆ ವರ್ಗಗಳಿಗೆ ಕ್ರಮವಾಗಿ 6, 8, 10 ಅಂಗುಲ ಉದ್ದ, ಕಿರಿಬೆರಳಷ್ಟು, ಆದರ ಒತ್ತಿನ ಉಂಗುರದ ಬೆರಳಿನಷ್ಟು, ಮಧ್ಯದ ಬೆರಳಿನಷ್ಟು ತೋರ, $1\frac{1}{2}$ ಅಂಗುಲ, 2 ಅಂಗುಲ, $2\frac{1}{2}$ ಅಂಗುಲದಲ್ಲಿ ತುದಿಯ ಕಿವಿ, ಕಂಕಪಕ್ಷಿ (ಸಣ್ಣ ಹದ್ದು), ಶ್ಯೇನಪಕ್ಷಿ (ಗಿಡಗ) ಮತ್ತು ನವಿಲು, ಇವುಗಳ ಗರಿಯಷ್ಟು ಬುಡದ ಟೊಳ್ಳು ಮತ್ತು ಹೆಸರು, ಉದ್ದು, ಪುಟಾಣಿ ಕಡಲೆಯಷ್ಟು ತುದಿಯ ರಂಧ್ರ, ಹೇಳಲ್ಪಟ್ಟಿವೆ 16 ವರ್ಷದ ಮೇಲೆ 25 ವರ್ಷದ ಒಳಗಿನವರಿಗೆ ಪ್ರಾಯ, ಬಲ, ಮತ್ತು ಶರೀರ ನೋಡಿಕೊಂಡು ನಳಿಗೆಯ ಮತ್ತು ವಸ್ತಿಯ ಪ್ರಮಾಣವನ್ನೇರಿಸಿಕೊಳ್ಳಬೇಕಾಗಿಯೂ ಎಪ್ಪತ್ತು ವರ್ಷ ಪ್ರಾಯದ ಮೇಲಿನವರಿಗೆ 16 ವರ್ಷ ಪ್ರಾಯದವರಿಗೆ ಹೇಳಿದ ನಳಿಗೆಯ ಮತ್ತು ದ್ರವ್ಯದ ಪ್ರಮಾಣಗಳನ್ನೇ ಯೋಚಿಸಬೇಕಾಗಿ ಸಹ ಹೇಳಲ್ಪಟ್ಟಿದೆ (ಪು 559)

6. ವೃಗಾಜಶೂಕರಗವಾಂ ಮಹಿಷಸ್ಯಾಪಿ ವಾ ಭವೇತ್ |
ವಸ್ತಿಚೀಲ. ಮೂತ್ರಕೋಶಸ್ಯ ವಸ್ತಿಸ್ತು ತದಲಾಭೇ ಚ ಚರ್ಮಜಃ || (ಶಾ. 149.)

ವಸ್ತಿಯು (ಚೀಲವು) ಜಿಂಕೆಯ, ಆಡಿನ, ಹಂದಿಯ, ಗೋವಿನ, ಅಥವಾ ಕೋಣನ, ಮೂತ್ರಕೋಶದ್ದಾಗಿರಬೇಕು; ಅದು ಸಿಕ್ಕದಾಗ್ಗೆ ಚರ್ಮದ್ದಾಗಬಹುದು.

ದೃಢಸ್ತನುರ್ನಷ್ಟಶಿರೋವಿಗಂಧಃ
ಕಷಾಯರಕ್ತಃ ಸುಮೃದುಃ ಸುಶುದ್ಧಃ |
ನೃಣಾಂ ವಯೋ ವೀಕ್ಷ್ಯ ಯಥಾನುರೂಪಂ
ನೇತ್ರೇಷು ಯೋಜ್ಯಸ್ತು ಸುಬದ್ಧಸೂತ್ರಃ ||
ವಸ್ತೇರಭಾವೇ ಪ್ಲವಜೋ ಗಲೋ ವಾ
ಸ್ಯಾದಂಕಪಾದಃ ಸುಘನಃ ಪಟೋ ವಾ || (ಚ. 876.)

ವಸ್ತಿಯು ಬಲವುಳ್ಳದ್ದಾಗಿಯೂ, ತೆಳ್ಳಗಾಗಿಯೂ, ಬಹು ಮೃದುವಾಗಿಯೂ, ಬಹು ಶುದ್ಧವಾಗಿಯೂ, ಕಲೆ ಮತ್ತು ದುರ್ಗಂಧ ಇಲ್ಲದ್ದಾಗಿಯೂ, ಕಷಾಯದ ಕೆಂಪುವರ್ಣವುಳ್ಳದ್ದಾಗಿಯೂ, ಇರಬೇಕು; ಮತ್ತು ಜನರ ಪ್ರಾಯ ನೋಡಿಕೊಂಡು, ಅದಕ್ಕೆ ತಕ್ಕ ಪ್ರಮಾಣದ ನಳಿಗೆಗಳಿಗೆ ಅದನ್ನು ಸೂತ್ರಗಳಿಂದ ಗಟ್ಟಿಯಾಗಿ ಬಿಗಿಯಬೇಕು. ಮೂತ್ರಕೋಶವು ದೊರೆಯದ ಸಂಗತಿಯಲ್ಲಿ, ಕಪ್ಪೆಯ ಕುತ್ತಿಗೆಯನ್ನು, ಅಥವಾ ಅದರ ಶರೀರ ಮತ್ತು ಪಾದವನ್ನು, ಅಥವಾ ಬಹಳ ದಪ್ಪದ ವಸ್ತ್ರದ ತುಂಡನ್ನು, ಉಪಯೋಗಿಸಬಹುದು.

ಷರಾ ಅಂಕಪಾದ ಎಂದರೆ ಆಡು, ಜಂಕೆ ಮೊದಲಾದವುಗಳ ಒಂದು ಅವಯವಭೇದ ಎಂತ ಅರುಣದತ್ತ. 'ಅಂಕ' ಎಂಬದು ಶರೀರಕ್ಕೂ, ಸೊಂಟಕ್ಕೂ ಬರುತ್ತದೆಂತ ನಿಘಂಟುಗಳು ಹೇಳುತ್ತವೆ

7. ವಸ್ತಿಂ ತತಃ ಸವ್ಯಕರೇ ನಿಧಾಯ ಸುಬದ್ಧಮುಚ್ಚಾಪ್ಯಸ್ಯ ಚ ನಿರ್ವ್ಯಲೀಕಂ ।
ಅಂಗುಷ್ಠಮಧ್ಯೇನ ಮುಖಂ ಪಿಧಾಯ ನೇತ್ರಾಗ್ರಸಂಸ್ಥಾಮಪನೀಯ ವರ್ತಿಂ ॥
ತೈಲಾಕ್ತಗಾತ್ರಂ ಕೃತಮೂತ್ರವಿಟ್ಕಂ ನಾತಿಕ್ಷುಧಾರ್ತಂ ಶಯನೇ ಮನುಷ್ಯಂ ।
ಸಮೇಽಧವೇಷನ್ನತಶೈರಸೇ ವಾ ನಾತ್ಯುಚ್ಛ್ರಿತೇ ಸ್ವಾಸ್ತರಣೋಪಪನ್ನೇ ॥
ವಸ್ತಿಯನ್ನು ಕೊಡುವ ವಿಧಾನ
ಸವ್ಯೇನ ಪಾರ್ಶ್ವೇನ ಸುಖಂ ಶಯಾನಂ ಕೃತ್ವರ್ಜುದೇಹಂ ಸ್ವಭುಜೋಪಧಾನಂ ॥
ನಿಕುಂಚ್ಯ ಸವ್ಯೇತರದಸ್ಯ ಸಕ್ಥಿ ವಾಮಂ ಪ್ರಸಾರ್ಯ ಪ್ರಣಯೇತ್ತತಸ್ತಂ ॥
ಸ್ನಿಗ್ಧೇ ಗುದೇ ನೇತ್ರಚತುರ್ಥಭಾಗಂ ಸ್ನಿಗ್ಧಂ ಶನೈರ್ಮಧ್ಯೃಜುವೃಷ್ಣವಂಶಂ ।
ಅಕಂಪನಾವೇಪನಲಾಘವಾದೀನ್ ಪಾಣ್ಯೋರ್ಗುಣಾಂಶ್ಚಾಪಿ ಹಿ ದರ್ಶಯಂಸ್ತಂ॥
ಪ್ರಪೀಡ್ಯ ಚೈಕಗ್ರಹಣೇನ ದತ್ತಂ ನೇತ್ರಂ ಶನೈರೇವ ತತೋಽಪಕರ್ಷೇತ್ ।
(ಚ. 876)

ವಸ್ತಿಯನ್ನು ಉಪಯೋಗಿಸಿಕೊಳ್ಳತಕ್ಕ ಮನುಷ್ಯನು ಮೈಗೆ ತೈಲ ಹಚ್ಚಿಕೊಂಡು, ಮಲ ಮೂತ್ರಗಳ ವಿಸರ್ಜನೆ ಮಾಡಿ, ಅತಿಹಸಿವು ಇಲ್ಲದ ವೇಳೆ, ಅತಿಉತ್ತರವಲ್ಲದ ಮತ್ತು ಸಮವಾದ ಅಥವಾ ತಲೆಭಾಗ ಅಲ್ಪಸ್ವಲ್ಪ ತಗ್ಗಿದ ಹಾಸಿಗೆಯ ಮೇಲೆ, ಒಳ್ಳೇ ವಸ್ತ್ರ ಹಾಸಿಕೊಂಡು, ಎಡದ ಕಾಲನ್ನು ಚಾಚಿ, ಬಲದ ಕಾಲನ್ನು ಮಡಚಿಕೊಂಡು, ಎಡದ ಮಗ್ಗಲ ಮೇಲೆ, ತನ್ನ ಭುಜವನ್ನೇ ತಲೆಗಿಂಬು ಮಾಡಿಕೊಂಡು, ದೇಹವನ್ನು ನೆಟ್ಟಗೆ ಮಾಡಿಕೊಂಡು, ಸುಖವಾಗಿ ಮಲಗಿಕೊಳ್ಳಬೇಕು. (ಮೊದಲು ಹೇಳಿದ ರೀತಿಯಲ್ಲಿ ವಸ್ತಿಯನ್ನು ಕಟ್ಟಿರುವ) ನಳಿಗೆಯ ತುದಿಬಾಯನ್ನು ಬತ್ತಿಯಿಂದ ಮುಚ್ಚಿಕೊಂಡು, ವಸ್ತಿಗೆ ಸ್ನೇಹವನ್ನೋ, ಕಷಾಯವನ್ನೋ ತುಂಬಿಸಿ, ಸರಿಯಾಗಿ ಬಾಯಿ ಬಿಗಿದು, ವಸ್ತಿಯನ್ನು ಎಡದ ಕೈಯಲ್ಲಿ ಹಿಡಕೊಂಡು, ನಳಿಗೆಯ ತುದಿಯ ಬತ್ತಿಯನ್ನು ತೆಗೆದುಬಿಟ್ಟು, ಆ ಬಾಯಿಯನ್ನು ಹೆಬ್ಬೆಟ್ಟಿನ ಮಧ್ಯದಿಂದ ಮುಚ್ಚಿ, ಆಸನಕ್ಕೂ, ನಳಿಗೆಗೂ, ಸ್ನೇಹ ಹಚ್ಚಿದ ಮೇಲೆ, ನಳಿಗೆಯ ಕಾಲಂಶವು ಒಳಗೆ ಸೇರುವ ಹಾಗೆ ಗುದದೊಳಗೆ ಅದನ್ನು ಮೃದುವಾಗಿ ಮತ್ತು ಬೆನ್ನಕೋಲಿಗೆ ಸರಿ ನೆಟ್ಟಗಾಗಿ, ಅಲ್ಲಾಡದಿರುವಿಕೆ, ನಡುಗದಿರುವಿಕೆ, ಇತ್ಯಾದಿ ಕೈಲಾಘವ ಗುಣಗಳನ್ನು ಉಪಯೋಗಿಸಿ, ಮೆಲ್ಲಗೆ ನಡಿಸಬೇಕು; ಮತ್ತು ವಸ್ತಿಯನ್ನು ಒಂದೇ ಸರ್ತಿ ಬಲದ ಕೈಯಿಂದ ಮೆಲ್ಲನೆ ಹಿಂಡಬೇಕು. ಆ ಮೇಲೆ ನಳಿಗೆಯನ್ನು ಹಾಗೆಯೇ ಮೆಲ್ಲಗೆ ಹೊರಗೆ ಎಳೆದು ತೆಗೆಯಬೇಕು.

8. ಯಃ ಸ್ನೇಹೈರ್ದೀಯತೇ ಸ ಸ್ಯಾದನುವಾಸನನಾಮಕಃ ।
ಅನುವಾಸನ ನಿರೂಹ ಎಂಬ ವಸ್ತಿಭೇದ.
ಕಷಾಯಕ್ಷೀರತೈಲೈರ್ಯೋ ನಿರೂಹಃ ಸ ನಿಗದ್ಯತೇ ॥
(ಶಾ. 148.)

ಸ್ನೇಹಗಳಿಂದ ಕೊಡಲ್ಪಡುವ ವಸ್ತಿ ಯಾವದೋ, ಅದಕ್ಕೆ ಅನುವಾಸನ ಎಂತಲೂ, ಕಷಾಯ, ಹಾಲು, ಮತ್ತು ತೈಲಗಳಿಂದ ಕೊಡಲ್ಪಡುವಂಥಾದ್ದು ಯಾವದೋ, ಅದಕ್ಕೆ ನಿರೂಹ ಎಂತಲೂ ಹೆಸರು ಆಗಿರುತ್ತದೆ.

9. ತತ್ರ ದ್ವಿವಿಧೋ ವಸ್ತಿಃ ನೈರೂಹಿಕಃ ಸ್ನೈಹಿಕಶ್ಚ | ಆಸ್ಥಾಪನಂ ನಿರೂಹ ಇತ್ಯರ್ಥಾಂತರಂ* | ತಸ್ಯ ವಿಕಲ್ಪೋ ಮಾಧುತೈಲಿಕಃ | ತಸ್ಯ ಪರ್ಯಾಯಶಬ್ದೋ ಯಾಪನೋ ಯುಕ್ತರಥಃ ಸಿದ್ಧವಸ್ತಿರಿತಿ | ಸ ದೋಷನಿರ್ಹರಣಾಚ್ಚರೀರರೋಗಹರಣಾದ್ವಾ ನಿರೂಹಃ ವಯಃಸ್ಥಾಪನಾದಾಯುಃಸ್ಥಾಪನಾದ್ವಾಸ್ಥಾಪನಂ | (ಸು. 560.)

ನಿರೂಹದ ನಿರುಕ್ತಿ ಮತ್ತು ಪರ್ಯಾಯ ಪದಗಳು

ವಸ್ತಿಯು ಎರಡು ವಿಧ ನಿರೂಹವಸ್ತಿ ಮತ್ತು ಸ್ನೇಹವಸ್ತಿ. ಆಸ್ಥಾಪನ ಎಂತ ನಿರೂಹಕ್ಕೆ ಅರ್ಥಭೇದದ ಮೇಲೆ ಹೇಳುವದು. ಮಾಧುತೈಲವಸ್ತಿ ಎಂಬದು, ನಿರೂಹವಸ್ತಿಗಳೊಳಗೆ ಒಂದು. ಯಾಪನ, ಯುಕ್ತರಥ, ಸಿದ್ಧವಸ್ತಿ, ಎಂಬವು ಸಹ ಅದರ ಭೇದಗಳು. ದೋಷಗಳನ್ನು ಹೊರಗೆ ತೆಗೆದುಬಿಡುವದರಿಂದ, ಅಥವಾ ಶರೀರದ ರೋಗಗಳನ್ನು ಪರಿಹರಿಸುವದರಿಂದ, ನಿರೂಹ ಎಂತಲೂ, ಪ್ರಾಯವನ್ನು ಸ್ಥಾಪಿಸುವದರಿಂದ (ಮುದಿತನ ಬಾರದ ಹಾಗೆ ಕಾಪಾಡುವದರಿಂದ), ಅಥವಾ ಆಯುಸ್ಸನ್ನು ಸ್ಥಾಪಿಸುವದರಿಂದ, ಆಸ್ಥಾಪನವೆಂತಲೂ ಆ ವಸ್ತಿಗೆ ಹೆಸರುಗಳು.

ಷರಾ *'ಇತ್ಯನರ್ಥಾನ್ತರಮ್' ಎಂಬ ಪಾರಾಂತರವನ್ನಿಟ್ಟುಕೊಂಡರೆ, ಆಸ್ಥಾಪನ ಎಂದರೂ, ನಿರೂಪ ಎಂದರೂ, ಒಂದೇ ಅರ್ಥ ಎಂತ ಅಭಿಪ್ರಾಯವಾಗುತ್ತದೆ ದೋಷಗಳನ್ನೂ ಧಾತುಗಳನ್ನೂ ತಮ್ಮತಮ್ಮ ಸ್ಥಾನಗಳಲ್ಲಿ ಸ್ಥಾಪಿಸುವದರಿಂದ 'ಆಸ್ಥಾಪನ' ಎಂಬ ಹೆಸರು ಎಂತ ಭಾ ಪ್ರ (ಪ 212)

10. ತತ್ರ ಯಥಾಪ್ರಮಾಣಗುಣವಿಹಿತಃ ಸ್ನೇಹವಸ್ತಿರೇಕಲ್ಪೋಽನುವಾಸನಃ ಪಾದಾವಕೃಷ್ಟಃ | ಅನುವಸನ್ನಪಿ ನ ದುಷ್ಯತ್ಯನುದಿವಸಂ ವಾ ದೀಯತ ಇತ್ಯನುವಾಸನಃ | ತಸ್ಯಾಪಿ ವಿಕಲ್ಪೋಽರ್ಧಾರ್ಧಮಾತ್ರಾವಕೃಷ್ಟೋಽಪರಿಹಾರ್ಯೋ ಮಾತ್ರಾವಸ್ತಿರಿತಿ | (ಸು. 560.)

ಅನುವಾಸನ ನಿರುಕ್ತಿ

ಪ್ರಮಾಣದಲ್ಲಿಯೂ ಗುಣದಲ್ಲಿಯೂ ಆಸ್ಥಾಪನೆಯ ಕಾಲಂಶಕ್ಕೆ ತಗ್ಗಿಸಲ್ಪಟ್ಟ ಸ್ನೇಹವಸ್ತಿಗೆ ಅನುವಾಸನ ಎಂತ ಹೇಳುತ್ತಾರೆ. ಒಟ್ಟಿಗಿರುವದರಿಂದ ದೋಷಕರವಾಗುವದಿಲ್ಲ, ಅಥವಾ ಪ್ರತಿ ದಿವಸ ಕೊಡಲ್ಪಡುತ್ತದೆ, ಎಂಬದರಿಂದ ಅನುವಾಸನ ಎಂಬ ಹೆಸರು. ಅದಕ್ಕೂ ಕಾಲಂಶಕ್ಕೆ ತಗ್ಗಿಸಲ್ಪಟ್ಟ, ಪಥ್ಯಬೇಕಾಗಿಲ್ಲದ, ಅನುವಾಸನಕ್ಕೆ ಮಾತ್ರಾವಸ್ತಿ ಎನ್ನುತ್ತಾರೆ.

ಷರಾ ಸಂ 11 ನೋಡಿರಿ

11. ಕರ್ಮವ್ಯಾಯಾಮಭಾರಾಧ್ವಪಾನಸ್ತ್ರೀಕರ್ಷಿತೇಷು ಚ |
ದುರ್ಬಲೇ ವಾತಭಗ್ನೇ ಚ ಮಾತ್ರಾವಸ್ತಿಃ ಸದಾ ಮತಃ |
ಹ್ರಸ್ವಾಯಾಃ ಸ್ನೇಹಮಾತ್ರಾಯಾಃ ಮಾತ್ರಾವಸ್ತಿಃ ಸಮೋ ಭವೇತ್ |
ಯಥೇಷ್ಟಾಹಾರಚೇಷ್ಟಸ್ಯ ಸರ್ವಕಾಲಂ ನಿರತ್ಯಯಃ |
ಬಲ್ಯಂ ಸುಖೋಪಚಯ್ಯಂ ಚ ಸುಖಂ ಸೃಷ್ಟಪುರೀಷಕೃತ್ |
ಸ್ನೇಹಮಾತ್ರಾವಿಧಾನಂ ಹಿ ಬೃಂಹಣಂ ವಾತರೋಗನುತ್ | (ಚ. 884-85.)

ಮಾತ್ರಾವಸ್ತಿ

ಕೆಲಸದಿಂದ, ವ್ಯಾಯಾಮದಿಂದ, ಭಾರ ಹೊತ್ತದ್ದರಿಂದ, ದಾರಿನಡಿಕೆಯಿಂದ, ಮತ್ತು ಮದ್ಯಪಾನದಿಂದ ನೊಂದವನಿಗೂ, ದುರ್ಬಲನಿಗೂ, ವಾತದಿಂದ ಪೀಡಿತನಾದವನಿಗೂ

ಯಾವಾಗಲೂ ಮಾತ್ರಾವಸ್ತಿಯು ಯುಕ್ತವಾದದ್ದು. ಸ್ನೇಹವಾನಕ್ಕೆ ಉಕ್ತವಾದ ಪ್ರಮಾಣ ಗಳೊಳಗೆ ಕಡಿಮೆಯಾದ ಪ್ರಮಾಣಕ್ಕೆ ತುಲ್ಯವಾಗಿ ಸ್ನೇಹವನ್ನು ಉಪಯೋಗಿಸುವ ಅನು ವಾಸನಕ್ಕೆ ಮಾತ್ರಾವಸ್ತಿ ಎನ್ನುವದಾಗಿರುತ್ತದೆ. ಅದು ಆಹಾರಚೇಷ್ಟೆಗಳಲ್ಲಿ ಇಷ್ಟ ಕಂಡಂತೆ ನಡಕೊಳ್ಳುವವನಿಗೆ ಸರ್ವಕಾಲದಲ್ಲಿಯೂ ದೋಷಕರವಲ್ಲದ್ದಾಗಿರುತ್ತದೆ. ಈ ಸ್ನೇಹ ಮಾತ್ರಾಕ್ರಮವು ಸುಖವಾಗಿ ಉಪಯೋಗಿಸಬಹುದಾದದ್ದು, ಬಲಕರ, ಸುಖಕರ, ಮಲ ವನ್ನು ಸಡಿಲಿಸತಕ್ಕಂಥಾದ್ದು, ಪುಷ್ಟಿಕರ ಮತ್ತು ವಾತರೋಗಹರ.

ಷರಾ ಈ ಮಾತ್ರಾವಸ್ತಿಯು ಬಾಲರಿಗೆ, ವೃದ್ಧರಿಗೆ, ಅಲ್ಪವಾದ ಅಗ್ನಿಬಲವುಳ್ಳವರಿಗೆ, ಅರಸರಿಗೆ ಮತ್ತು ಸುಖ ಜೀವಿಗಳಿಗೆ ಸಹ ತೀಲಮಾಡಬೇಕಾದ್ದೆಂತ ವಾ (ಪು 93)

12. ನಿರೂಹಃ ಶೋಧನೋ ಲೇಖೀ ಸ್ನೇಹನೋ ಬೃಂಹಣೋ ಮತಃ ।
ನಿರೂಹಶೋಧಿತಾನ್ಮಾರ್ಗಾನ್ ಸಮ್ಯಕ್ಸ್ನೇಹೋಽನುಗಚ್ಛತಿ ॥

ನಿರೂಹವಸ್ತಿಯ ಗುಣ

ಅಪೇತಸರ್ವದೋಷಾಸು ನಾಡೀಷ್ವಿವ ವಹಜ್ಜಲಂ ।
ಸರ್ವದೋಷಹರಶ್ಚಾಸೌ ಶರೀರಸ್ಯ ಚ ಜೀವನಃ ॥
ತಸ್ಮಾದ್ವಿಶುದ್ಧದೇಹಸ್ಯ ಸ್ನೇಹವಸ್ತಿರ್ವಿಧೀಯತೇ । (ಸು. 560-61.)

ನಿರೂಹವು ಶೋಧನ ಮತ್ತು ಲೇಖನಗುಣಗಳುಳ್ಳದ್ದು. ಸ್ನೇಹನವು (ಅನುವಾಸನ ವಸ್ತಿಯು) ಬೃಂಹಣ. ಸರ್ವ ಕಲ್ಮಷವನ್ನು ತೆಗೆದುಬಿಟ್ಟ ನಳಿಗೆಗಳಲ್ಲಿ ನೀರು ಹ್ಯಾಗೆ ಸರಿ ಯಾಗಿ ಸಂಚರಿಸುತ್ತದೋ, ಹಾಗೆ ನಿರೂಹದಿಂದ ಶುದ್ಧಮಾಡಲ್ಪಟ್ಟ ಮಾರ್ಗಗಳಲ್ಲಿ ಸ್ನೇಹವು ಚೆನ್ನಾಗಿ ಅನುಸರಿಸುತ್ತದೆ ಮತ್ತು ಅದು ಶರೀರದ ಸರ್ವ ದೋಷಗಳನ್ನು ಪರಿಹರಿಸಿ ಬದು ಕಿಸುವಂಥಾದ್ದು. ಆದ್ದರಿಂದ ದೇಹ ಶುದ್ಧಿಯಾದ ಮೇಲೆ ಸ್ನೇಹವಸ್ತಿಯು ಕೊಡಲ್ಪಡುತ್ತದೆ.

ಷರಾ ಸ್ನಿಗ್ಧವಲ್ಲದ ದೇಹಕ್ಕೆ ಅನುವಾಸನವೇ ಹಿತ ಮತ್ತು ಮೂರು, ನಾಲ್ಕು ಸರ್ತಿ ಅನುವಾಸನ ಮಾಡಿ ದೇಹವು ಸ್ನಿಗ್ಧವಾದ ಮೇಲೆ, ಮಾರ್ಗಗಳ ಶುದ್ಧಿಗಾಗಿ, ಶೋಧನರೂಪವಾದ ನಿರೂಹವನ್ನು ಕೊಡತಕ್ಕದ್ದು ಎಂತ ವಾ (ಪು 90)

13. ಪಕ್ವಾದ್ವಿರೇಕೋ ವಾಂತಸ್ಯ ತತಶ್ಚಾಪಿ ನಿರೂಹಣಂ ।
ಸದ್ಯೋನಿರೂಢೋಽನುವಾಸ್ಯಃ ಸಪ್ತರಾತ್ರಾದ್ವಿರೇಚಿತಃ ॥
(ಸು. 567.)

ವಮನ ವಿರೇಚನ ವಸ್ತಿಗಳಿಗೆ ಕಾಲಾಂತರ ನಿಯಮ

ವಾಂತಿಮಾಡಿಸಿಕೊಂಡು ಒಂದು ಪಕ್ಷದಲ್ಲಿ ವಿರೇಚನ ಯುಕ್ತ; ಅದರನಂತರ ನಿರೂಹ ವಸ್ತಿ; ನಿರೂಹದ ಮೇಲೆ ಕೂಡಲೇ ಮತ್ತು ವಿರೇಚನ ಮಾಡಿಸಿಕೊಂಡನಂತರ ಏಳು ರಾತ್ರಿ ಗಳಲ್ಲಿ ಅನುವಾಸನ ಮಾಡಿಸಿಕೊಳ್ಳಬಹುದು.

ದ್ವ್ಯಹೇ ತ್ರ್ಯಹೇ ಚಾಹ್ನ್ಯಥ ಪಂಚಮೇ ಚ ದದ್ಯಾನ್ನಿರೂಹಾದನುವಾಸನಂ ಚ ।
(ಚಿ. ಸಾ. ಸಂ. 942.)

ನಿರೂಹ ಸೇವಿಸಿದ 3ನೇ, 4ನೇ ಮತ್ತು 5ನೇ ದಿವಸಗಳಲ್ಲಿ ಅನುವಾಸನ ಸಹ ಕೊಡಬೇಕು.

14. ಸ್ನೇಹವಸ್ತಿವಿಧಾನೇನ ಬುಧಃ ಕುರ್ಯಾನ್ನಿರೂಹಣಂ ।
(ಶಾ. 152.)

ನಿರೂಹವಸ್ತಿ ವಿಧಾನ.

ಸ್ನೇಹವಸ್ತಿ (ಅನುವಾಸನ) ಕೊಡುವ ಕ್ರಮದಲ್ಲಿಯೇ ನಿರೂಹವಸ್ತಿಯನ್ನು ಬುದ್ಧಿವಂತನು ಕೊಡತಕ್ಕದ್ದಾಗಿರುತ್ತದೆ.

15. ಪಕ್ವಾಶಯೇ ತಥಾ ಶ್ರೋಣ್ಯಾಂ ನಾಭ್ಯಧಸ್ತಾಚ್ಚ ಸರ್ವತಃ ।
ಸಮ್ಯಕ್ಪ್ರಣಿಹಿತೋ ವಸ್ತಿಃ ಸ್ಥಾನೇಷ್ವೇತೇಷು ತಿಷ್ಠತಿ ॥
ವಸ್ತಿಯು ಮಾಡುವ ಕೆಲಸ
ಪಕ್ವಾಶಯಾದ್ವಸ್ತಿವೀರ್ಯಂ ಸ್ವದೇಹಮುಪಸರ್ಪತಿ ।
ವೃಕ್ಷಮೂಲೇ ನಿಷಿಕ್ತಾನಾಮಪಾಂ ವೀರ್ಯಮಿವ ದ್ರುಮಂ ॥ (ಸು. 561.)

ಸರಿಯಾಗಿ ಕೊಡಲ್ಪಟ್ಟ ವಸ್ತಿಯು ಪಕ್ವಾಶಯದಲ್ಲಿಯೂ, ಶ್ರೋಣಿಯಲ್ಲಿಯೂ, ನಾಭಿಯ ಕೆಳಗಿನ ಎಲ್ಲಾ ಎಡೆಗಳಲ್ಲಿಯೂ ನಿಂತು ಕೆಲಸ ಮಾಡುತ್ತದೆ. ಆ ಪಕ್ವಾಶಯದಿಂದ ವಸ್ತಿಯ ವೀರ್ಯವು, ಮರದ ಬುಡದಲ್ಲಿ ಹೊಯಿದ ನೀರಿನ ವೀರ್ಯವು ಮರದೊಳಗೆ ಸೇರುವ ಹಾಗೆ, ಆತನ ದೇಹವನ್ನೆಲ್ಲಾ ವ್ಯಾಪಿಸುತ್ತದೆ.

ಸ ಚಾಪಿ ಸಹಸಾ ವಸ್ತಿಃ ಕೇವಲಃ ಸಮಲೋಽಪಿ ವಾ ।
ಪ್ರತ್ಯೇತಿ ತ್ವನಿಲೈರ್ವೀರ್ಯಮಪಾನಾದ್ಯೈರ್ವಿನೀಯತೇ ॥
ವೀರ್ಯೇಣ ವಸ್ತಿರಾದತ್ತೇ ದೋಷಾನಾಪಾದಮಸ್ತಕಾತ್ ।
ಪಕ್ವಾಶಯಸ್ಥೋಽಂಬರಗೋ ಭೂಮೇರಕೋರ್ ರಸಾನಿವ ॥ (ಸು. 561.)

ಆ ವಸ್ತಿಯು ಕೇವಲವಾಗಿ, ಅಥವಾ ಮಲದಿಂದ ಕೂಡಿಕೊಂಡು, ಬೇಗನೇ ಹೊರಗೆ ಹಿಂದೆ ಬಂದಾಗ್ಯೂ, ಅಪಾನಾದಿ ವಾಯುಗಳು ಅದರ ವೀರ್ಯವನ್ನು ಶರೀರದ ಎಲ್ಲಾ ಭಾಗಗಳಿಗೂ ಒಯ್ಯುತ್ತವೆ. ಮತ್ತು ಆಕಾಶದಲ್ಲಿ ನಿಂತಿರುವ ಸೂರ್ಯನು ಭೂಮಿಯ ರಸಗಳನ್ನು ಹೀರಿದ ಹಾಗೆ, ಪಕ್ವಾಶಯದಲ್ಲಿ ನಿಂತ ಆ ವಸ್ತಿಯು ತನ್ನ ವೀರ್ಯದಿಂದ ಮಸ್ತಕದಿಂದ ಪಾದದ ವರೆಗಿನ ದೋಷಗಳನ್ನು ಎಳೆದು ತೆಗೆದುಕೊಳ್ಳುತ್ತದೆ.

16. ಯಥಾವಯೋ ನಿರೂಹಾಣಾಂ ಯಾ ಮಾತ್ರಾಃ ಪರಿಕೀರ್ತಿತಾಃ ।
ನಿರೂಹಸ್ನೇಹವಸ್ತಿಗಳಲ್ಲಿ ಮಾತ್ರಾ ಭೇದ
ಪಾದಾವಕೃಷ್ಟಾಸ್ತಾಃ ಕಾರ್ಯಾಃ ಸ್ನೇಹವಸ್ತಿಷು ದೇಹಿನಾಂ ॥
(ಸು. 567.)

ನಿರೂಹಗಳಿಗೆ ಮನುಷ್ಯನ ಪ್ರಾಯದ ಮೇಲೆ ಯಾವ ಪ್ರಮಾಣಗಳು ಹೇಳಲ್ಪಟ್ಟವೋ, ಅವುಗಳನ್ನು ಸ್ನೇಹವಸ್ತಿಗಳಲ್ಲಿ ಕಾಲಂಶಕ್ಕೆ ತಗ್ಗಿಸಿ ಉಪಯೋಗಿಸತಕ್ಕದ್ದು.

17. ಯೂಷಕ್ಷೀರರಸೈಸ್ತಸ್ಯಾದ್ಯಥಾವ್ಯಾಧಿಮವೇಕ್ಷ್ಯ ವಾ ।
ಅನುವಾಸನಕ್ಕೆ ಪೂರ್ವ ಭೋಜನನಿಯಮ
ಯಥೋಚಿತಾತ್ವಾದಹೀನಂ ಭೋಜಯಿತ್ವಾನುವಾಸಯೇತ್ ॥
(ಸು. 571.)

ಅನುವಾಸನಕ್ಕೆ ಮೊದಲು ರೋಗಿಯನ್ನು ಸಾರಿನಿಂದ, ಹಾಲಿನಿಂದ, ಮಾಂಸರಸದಿಂದ, ಅಥವಾ ವ್ಯಾಧಿಗೆ ಯುಕ್ತವಾದ ಬೇರೆ ವಿಧದಿಂದ, ಉಣ್ಣಿಸುವಲ್ಲಿ ಉಚಿತಪ್ರಮಾಣಕ್ಕೆ ಕಾಲಂಶ ಕಡಿಮೆ ಮಾಡಬೇಕು.

ಪರಾ ಕಫಕ್ಕೆ ಹೆಸರಿನ ಸಾರು, ಪಿತ್ತಕ್ಕೆ ಹಾಲು ಮತ್ತು ವಾತಕ್ಕೆ ಮಾಂಸರಸ ಯುಕ್ತ (ನಿ ಸಂ. ವ್ಯಾ)

ನ ವಾಭುಕ್ತವತಃ ಸ್ನೇಹಃ ಪ್ರಣೇಧೇಯಃ ಕಥಂಚನ ।
ಶುದ್ಧತ್ವಾಚ್ಚೂನ್ಯಕೋಷ್ಠಸ್ಯ ಸ್ನೇಹ ಊರ್ಧ್ವಮಧೋತ್ಪತೇತ್ ॥ (ಸು. 571.)

ಖಾಲಿ ಹೊಟ್ಟೆಯು ಶುದ್ಧವಾಗಿರುವ ದೆಸೆಯಿಂದ ಸ್ನೇಹವು ಮೇಲಕ್ಕೆ ಏರುವದಾದ್ದರಿಂದ, ಉಣ್ಣದೆ ಹಸಿದಿರುವವನಿಗೆ ಅನುವಾಸನವನ್ನು ಹ್ಯಾಗೂ ಕೊಡಬಾರದು.

18. ದತ್ವಾದೌ ಸೈಂಧವಸ್ಯಾಕ್ಷಂ ಮಧುನಃ ಪ್ರಸೃತಿದ್ವಯಂ ।
ವಿನಿರ್ಮಥ್ಯ ತತೋ ದದ್ಯಾತ್ ಸ್ನೇಹಸ್ಯ ಪ್ರಸೃತಿತ್ರಯಂ ॥
ಏಕೀಭೂತೇ ತತಃ ಸ್ನೇಹೇ ಕಲ್ಕಸ್ಯ ಪ್ರಸೃತಿಂ ಕ್ಷಿಪೇತ್ ।
ಸಮ್ಮೂರ್ಚ್ಛಿತೇ ಕಷಾಯಂ ತು ಚತುಃಪ್ರಸೃತಿಸಮ್ಮಿತಂ ॥

ನಿರೂಹೌಷಧವನ್ನು ಸಿದ್ಧಪಡಿಸುವ ಕ್ರಮ

ವಿತರೇಚ್ಯ ತದಾವಾಪಮಂತೇ ದ್ವಿಪ್ರಸೃತೋನ್ಮಿತಂ ।
ಏವಂ ಪ್ರಕಲ್ಪಿತೋ ವಸ್ತಿರ್ದ್ವಾದಶಪ್ರಸೃತೋ ಭವೇತ್ ॥
ಜ್ಯೇಷ್ಠಾಯಾಃ ಖಲು ಮಾತ್ರಾಯಾಃ ಪ್ರಮಾಣಮಿದಮೀರಿತಂ ।
ಅಪಹ್ರಾಸೇ ಭಿಷಕ್ಕುರ್ಯಾತ್ ತದ್ವತ್ ಪ್ರಸೃತಿಹಾಪನಂ ॥
ಯಥಾವಯೋ ನಿರೂಹಾಣಾಂ ಕಲ್ಪನೇಯಮುದಾಹೃತಾ ।
ಸೈಂಧವಾದಿದ್ರವಾಂತಾನಾಂ ಸಿದ್ಧಿಕಾಮೈರ್ಭಿಷಗ್ವರೈಃ ॥ (ಸು. 581.)

ಸೈಂಧವಲವಣ ಕಾಲು ಪಲ, ಜೇನು ನಾಲ್ಕು ಪಲ, ಸ್ನೇಹ ಆರು ಪಲ, ಕಲ್ಕ ಎರಡು ಪಲ, ಕಷಾಯ ಎಂಟು ಪಲ, ಸ್ವರಸ, ಹಾಲು, ಹುಳಿಗಂಜಿನೀರು, ಮೂತ್ರಗಳ ಆವಾಪ ನಾಲ್ಕು ಪಲ, ಹೀಗೆ ಸೈಂಧವಲವಣ ಬಿಟ್ಟು ಇಪ್ಪತ್ತನಾಲ್ಕು ಪಲ (ಹನ್ನೆರಡು ಪ್ರಸೃತಿ). ಇದು ದೊಡ್ಡವರಿಗೆ ಯುಕ್ತವಾದ ನಿರೂಹದ ಪ್ರಮಾಣ; ಕಡಿಮೆ ಪ್ರಾಯದವರಿಗೆ ಹಾಗೆಯೇ ಪ್ರಾಯಕ್ಕೆ ತಕ್ಕವಾಗಿ ವೈದ್ಯನು ಪ್ರಸೃತಿಯಲ್ಲಿ ಕಡಿಮೆಮಾಡಿಕೊಂಡು ಉಪಯೋಗಿಸಬೇಕು. ಸೈಂಧವ ಮೊದಲುಗೊಂಡು ದ್ರವಾಂತ ವರೆಗಿನ ಈ ನಿರೂಹಕಲ್ಪನವು ಉದಾಹರಣಾರ್ಥವಾಗಿ ಸಿದ್ಧಿಯನ್ನು ಬಯಸುವ ಪಂಡಿತೋತ್ತಮರಿಂದ ಹೇಳಲ್ಪಟ್ಟದೆ. ಆರಂಭದಲ್ಲಿ ಸೈಂಧವ ಲವಣವನ್ನೂ ಜೇನನ್ನೂ ಒಂದು ಪಾತ್ರೆಯಲ್ಲಿ ಹಾಕಿ, ಅಂಗೈಯಿಂದ ಸ್ನೇಹವನ್ನು ಸ್ವಲ್ಪ ಸ್ವಲ್ಪವಾಗಿ ಕೂಡಿಸಿಕೊಂಡು ಉಜ್ಜಬೇಕು, ಅದೆಲ್ಲಾ ಸರಿಯಾಗಿ ಕೂಡಿ ಒಂದೇಯಾದ ಮೇಲೆ ನುಣ್ಣಗಾಗಿ ಪುಡಿಮಾಡಿದ ಕಲ್ಕವನ್ನು ಕಲಸಿ, ಕಷಾಯವನ್ನು ಸೇರಿಸಿ, ಮಂತಿನಿಂದ ಕಡೆದು, ತೆಳ್ಳಗೂ ಅಲ್ಲದೆ ದಪ್ಪವೂ ಅಲ್ಲದೆ ಸರಿಯಾಯಿತೆಂತ ತಿಳಿದು, ಸ್ವರಸಾದಿ ಆವಾಪಗಳನ್ನು ಕೂಡಿಸತಕ್ಕದ್ದಾಗಿರುತ್ತದೆ.

ಷರಾ ನಿರೂಹವು ಕೈಗೆ ಹಿಡಿಯಬೇಕು ಆದರೆ ಲೇಪವಾಗಿ ಸಿಲ್ಲಬಾರದು ಮತ್ತು ಭಕ್ತಲಿಯಂತೆ ಎಂಗಡವಾಗಬಾರದು "ಧಾರಯೇದೌಷಧಂ ಪಾಣಿಂ ನ ತಿಷ್ಠತ್ಯವಲಿಪ್ಯ ಚ । ನ ಕರೋತಿ ಚ ಸೀಮನ್ತಂ ಸುನಿರೂಹಃ ಪ್ರಯೋಜಿತಃ" ॥ (ಚ ಸಾ ಸಂ 943)

19. ಸ್ವಸ್ಥೇ ಕಲ್ವಧಸ್ಯ ಚತ್ವಾರೋ ಭಾಗಾಃ ಸ್ನೇಹಸ್ಯ ಪಂಚಮಃ ।
ಕ್ರುದ್ಧೇಽನಿಲೇ ಚತುರ್ಥಸ್ತು ಷಷ್ಠಃ ಪಿತ್ತೇ ಕಫೇಽಷ್ಟಮಃ ॥

ದೋಷಭೇದದ ಮೇಲೆ ನಿರೂಹ ಕಲ್ಪನೆ

ಸರ್ವೇಷು ಚಾಷ್ಟಮೋ ಭಾಗಃ ಕಲ್ಕಾನಾಂ ಲವಣಂ ಪುನಃ ।

ಕ್ಷೌದ್ರಂ ಮೂತ್ರಂ ಫಲಂ ಕ್ಷೀರಮಮ್ಲಂ ಮಾಂಸರಸಂ ತಥಾ ||
ಯುಕ್ತ್ಯಾ ಪ್ರಕಲ್ಪಯೇದ್ಧೀಮಾನ್ ನಿರೂಹೇ ಕಲ್ಪನಾತ್ವಿಯಂ |
(ಸು. 580-81.)

ಸ್ವಸ್ಥನಾದವನಿಗೆ ನಾಲ್ಕುಪಾಲು ಕಷಾಯ ಮತ್ತು ಐದನೇ ಒಂದಂಶ ಸ್ನೇಹ. ವಾತ ಪ್ರಕೋಪಗೊಂಡಾಗ್ಗೆ ಸ್ನೇಹವು ನಾಲ್ಕನೇ ಒಂದಂಶ, ಪಿತ್ತ ಪ್ರಕೋಪಗೊಂಡಾಗ್ಗೆ ಸ್ನೇಹವು ಆರನೇ ಒಂದು ಅಂಶ, ಮತ್ತು ಕಫವು ಕೋಪಗೊಂಡಾಗ್ಗೆ ಸ್ನೇಹವು ಎಂಟನೇ ಒಂದು ಅಂಶ; ಎಲ್ಲಾ ಸಂಗತಿಗಳಲ್ಲಿಯೂ ಕಲ್ಕವು ಎಂಟನೇ ಒಂದು ಅಂಶ; ಸೈಂಧವ ಉಪ್ಪು, ಜೇನು, ಮೂತ್ರ, ಫಲ, ಹಾಲು, ಹುಳಿದ್ರವ, ಮತ್ತು ಮಾಂಸರಸ, ಇವುಗಳನ್ನು ಬುದ್ಧಿವಂತನು ಸಂಗತ್ಯಾನುಸಾರ ಯುಕ್ತಪ್ರಮಾಣದಲ್ಲಿ ಕೂಡಿಸಬೇಕು. ಇದು ನಿರೂಹಕಲ್ಪನೆಯಾಗಿರುತ್ತದೆ.

ಇದಕ್ಕೆ ಚರಕನ ಪ್ರಕಾರ ಕಷಾಯವು ಐದು ಪಾಲು ಇರಬೇಕು ನಾಲ್ಕು ಪಾಲು ಎಂಬದು ಸಂ 18ನೇಯಲ್ಲಿ ಹೇಳಲ್ಪಟ್ಟಿರುವ 12 ಪ್ರಸೃತಿಗಳಲ್ಲಿ ನಾಲ್ಕು, ಪಂಚಮ, ಚತುರ್ಥ ಮುಂತಾದ ಭಾಗಗಳು ಸಹ ಅದೇ 12 ಪ್ರಸೃತಿಗಳ ಅಂತಗಳು ಎಂತ ನಿ ಸಂ ವ್ಯಾ ಸಂ 21 ನೋಡಿರಿ

20. ನಿರೂಹಮಾತ್ರಾ ಪ್ರಸೃತಾರ್ಧಮಾದ್ಯೇ ವರ್ಷೇ ತತೋಽರ್ಧಪ್ರಸೃತಾಭಿವೃದ್ಧಿಃ | ಆದ್ವಾದಶಾತ್ ಸ್ಯಾತ್ ಪ್ರಸೃತಾಭಿವೃದ್ಧಿರಷ್ಟಾದಶಾದ್ದ್ವಾದಶತಃ ಪರಂ ಸ್ಯುಃ || (ಚ. 877.)

ವಯೋಭೇದದ ಮೇಲೆ ನಿರೂಹಪ್ರಮಾಣ

ನಿರೂಹಪ್ರಮಾಣವು ಒಂದನೇ ವರ್ಷದ ಮಗುವಿಗೆ ಅರ್ಧ ಪ್ರಸೃತಿ (ಒಂದು ಪಲ), ಅನಂತರ ಹನ್ನೆರಡು ವರ್ಷ ಪ್ರಾಯವಾಗುವ ವರೆಗೆ ವರ್ಷ ಒಂದಕ್ಕೆ ಅರ್ಧ ಪ್ರಸೃತಿಯಂತೆ, ಆ ಮೇಲೆ ವರ್ಷ ಒಂದಕ್ಕೆ ಒಂದು ಪ್ರಸೃತಿಯಂತೆ ಏರಿಸಿ ಹದಿನೆಂಟನೇ ವರ್ಷದ ಮೊದಲುಗೊಂಡು ಹನ್ನೆರಡು ಪ್ರಸೃತಿಯಾಗಿರುತ್ತದೆ.

ಆಸಪ್ತತೇರುಕ್ತಮಿದಂ ಪ್ರಮಾಣಮತಃಪರಂ ಷೋಡಶವದ್ವಿಧೇಯಂ |
ನಿರೂಹಮಾತ್ರಾ ಪ್ರಸೃತಪ್ರಮಾಣಾ ಬಾಲೇ ಚ ವೃದ್ಧೇ ಚ ಮೃದುರ್ವಿಶೇಷಃ | (ಚ. 877.)

ಈ ಹನ್ನೆರಡು ಪ್ರಸೃತಿ ಪ್ರಮಾಣವು ಎಪ್ಪತ್ತು ವರ್ಷ ಪ್ರಾಯದ ವರೆಗೆ ಆಗಿರುತ್ತದೆ. ಅದರ ಮೇಲೆ ಹದಿನಾರು ವರ್ಷ ಪ್ರಾಯದವನ ಪ್ರಮಾಣವನ್ನು ಉಪಯೋಗಿಸಬೇಕು. ಬಾಲರಿಗೂ, ವೃದ್ಧರಿಗೂ, ನಿರೂಹದ ಪ್ರಸೃತಿಪ್ರಮಾಣವನ್ನು ತಗ್ಗಿಸಿ, ಮೃದುವಾಗಿ ಕೊಡತಕ್ಕದ್ದು.

21. ಮಧುಸ್ನೇಹನಕಲ್ಕಾಖ್ಯಾಃ ಕಷಾಯಾ ವಾ ಮತಾಃ ಕ್ರಮಾತ್ |
ತ್ರೀಣಿ ಷಡ್ ದ್ವಾದಶ ತ್ರೀಣಿ ಪಲಾನ್ಯನಿಲರೋಗಿಷು ||
ಪಿತ್ತೇ ಚತ್ವಾರಿ ಚತ್ವಾರಿ ದ್ವೇ ದ್ವೇ ಜೈವ ಚತುಷ್ಟಯಂ |
ಷಟ್ ತ್ರೀಣಿ ದ್ವಾದಶ ತ್ರೀಣಿ ಕಫೇ ಚಾಪಿ ನಿರೂಹಣಂ ||
(ಚಿ. ಸಾ. ಸಂ. 940.)

ದೋಷಭೇದದ ಮೇಲೆ ಜೇನು ಮುಂತಾದ್ದರ ಪ್ರಮಾಣ.

ನಿರೂಹಣಕ್ಕೆ ವಾತ ಪಿತ್ತ ಕಫ ದೋಷಗಳಲ್ಲಿ ಜೇನು, ಸ್ನೇಹ, ಕಲ್ಕ ಮತ್ತು ಕಷಾಯ ಗಳನ್ನು ಕೂಡಿಸತಕ್ಕ ಪ್ರಮಾಣ ಹ್ಯಾಗಂದರೆ:—

	ಜೇನು	ಸ್ನೇಹ	ಕಲ್ಕ	ಕಷಾಯ	
ವಾತದಲ್ಲಿ ಪಲ	3	+ 6	+ 12	+ 3 =	24 ಪಲ (12 ಪ್ರಸೃತಿ)
ಪಿತ್ತದಲ್ಲಿ . . .	4	+ 4	+ 8	+ 8 =	24
ಕಫದಲ್ಲಿ . . .	6	+ 3	+ 12	+ 3 =	24

ಷರಾ ವಾತದಲ್ಲಿ ಜೇನನ್ನು ನಾಲ್ಕು ಪಲ ಕೂಡಿಸಬೇಕಾಗಿ ಶಾ (ಪು 154)

22. ತತಃ ಪ್ರಣಿಹಿತೇ ಸ್ನೇಹ ಉತ್ತಾನೋ ವಾಕ್‌ಥತಂ ಭವೇತ್ |
ಅನುವಾಸನಕ್ಕೆ ಪಶ್ಚಾತ್ಕರ್ಮ
ಪ್ರಸಾರಿತೈಃ ಸರ್ವಗಾತ್ರೈಸ್ತಥಾ ವೀರ್ಯಂ ವಿಸರ್ಪತಿ || (ಸು. 572.)

ಸ್ನೇಹವಸ್ತಿ ಕೊಟ್ಟ ನಳಿಗೆಯನ್ನು ಹಿಂದಕ್ಕೆ ತೆಗೆದ ಮೇಲೆ ನೂರು ಮಾತ್ರಾಕಾಲ ಇಡೀ ಶರೀರವನ್ನು ಬಿಡಿಸಿಕೊಂಡು ಅಂಗಾತನಾಗಿ ಮಲಗಬೇಕು. ಹಾಗೆ ಮಾಡುವದರಿಂದ ಸ್ನೇಹದ ವೀರ್ಯವು ದೇಹದೊಳಗೆ ಪಸರಿಸುತ್ತದೆ.

ಏವಂ ಪ್ರಣಿಹಿತೇ ವಸ್ತೌ ಮಂದಾಯಾಸೋಽಧ ಮಂದವಾಕ್ |
ಸ್ವಾಸ್ತೀರ್ಣೇ ಶಯನೇ ಕಾಮಮಾಸೀತಾಚಾರಿಕೇ ರತಃ || (ಸು. 572.)

ಹೀಗೆ ಅನುವಾಸನ ಮಾಡಿಸಿಕೊಂಡವನು ಹೆಚ್ಚು ಆಯಾಸ ತೆಗೆದುಕೊಳ್ಳದೆ ಮತ್ತು ಹೆಚ್ಚು ಮಾತಾಡದೆ, ಹಾಸಿದ ಹಾಸಿಗೆಯ ಮೇಲೆ ಸುಖವಾಗಿ, ಆಹಾರವಿಹಾರಗಳ ಪಥ್ಯವನ್ನಾ ಚರಿಸಿಕೊಂಡು, ಇರಬೇಕು.

23. ಸ್ವಜಾನುನಃ ಕರಾವರ್ತಂ ಕುರ್ಯಾಚ್ಛೋಟಕಯಾ ಪುನಃ |
ಏಷಾ ಮಾತ್ರಾ ಭವೇದೇಕಾ ಸರ್ವತ್ರೈವೈಷ ನಿಶ್ಚಯಃ ||
ಮಾತ್ರಾಕಾಲದ ಗಣನ
ನಿಮಿಷೋನ್ಮೇಷಣಂ ಪುಂಸಾಮಂಗುಲ್ಯಾ ಛೋಟಕಾಽಥವಾ |
ಗುರ್ವಕ್ಷರೋಚ್ಚಾರಣಂ ವಾ ಸ್ಯಾನ್ಮಾತ್ರೇಯಂ ಸ್ಮೃತಾ ಬುಧೈಃ ||
(ಭಾ. ಪ್ರ. 219.)

ತನ್ನ ಮೊಣಗಂಟಿನಿಂದ ಕೈಯನ್ನು ಎತ್ತಿ ಚಿಟಕಿ ಹೊಡೆದು ಪುನಃ ಮೊಣಗಂಟನ್ನು ಮುಟ್ಟುವ ಕಾಲಕ್ಕೆ ಒಂದು ಮಾತ್ರೆ ಆಗುತ್ತದೆಂಬದು ಸರ್ವತ್ರ ನಿಶ್ಚಯವಾದದ್ದು, ಅಥವಾ ಕಣ್ಣುಗಳನ್ನು ಮುಚ್ಚಿ ಬಿಡಿಸುವದು, ಅಥವಾ ಬೆರಳುಗಳಿಂದ ಚಿಟಿಕಿ ಹೊಡೆಯುವದು, ಅಥವಾ ಗುರು ಅಕ್ಷರ (ದೀರ್ಘಾಕ್ಷರ ಅಥವಾ ಒತ್ತಕ್ಷರ)ವನ್ನು ಉಚ್ಚಾರ ಮಾಡುವದು, ಒಂದು ಮಾತ್ರೆಯ ಕಾಲವೆಂತ ಬುದ್ಧಿವಂತರು ಎಣಿಸುತ್ತಾರೆ.

24. ಯಸ್ಯಾನುವಾಸನೋ ದತ್ತಃ ಸಕೃದನ್ವಕ್ಷಮಾವ್ರಜೇತ್ |
ಅನುವಾಸನ ಒಂದೇ ಸಾರಿ ಹಿಂದೆ ಬಂದಲ್ಲಿ ಕರ್ತವ್ಯ
ಅತ್ಯೌಷ್ಣ್ಯಾದತಿತೈಕ್ಷ್ಣ್ಯಾದ್ವಾ ವಾಯುನಾ ವಾ ಪ್ರಪೀಡಿತಃ ||
ಸವಾತೋಽಧಿಕಮಾತ್ರೋ ವಾ ಗುರುತ್ವಾದ್ವಾ ಸಭೇಷಜಃ |
ತಸ್ಯಾನ್ಯೋಽಲ್ಪತರೋ ದೇಯೋ ನ ಹಿ ಸ್ನಿಕ್ಷ್ಯತ್ಯತಿಷ್ಠತಿ || (ಸು. 572.)

ಕೊಡಲ್ಪಟ್ಟ ಅನುವಾಸನವು ಅತ್ಯುಷ್ಣತೆ, ಅತಿತೀಕ್ಷ್ಣತೆ, ಗುರುತ್ವ, ಅಥವಾ ವಾಯು ಪೀಡೆಯ ದೆಸೆಯಿಂದ, ವಾತಯುಕ್ತವಾಗಿ, ಅಧಿಕ ಪ್ರಮಾಣವಾಗಿ, ಅಥವಾ ಔಷಧದೊಂದಿಗೆ, ಒಂದೇ ಸಾರಿ ನಳಿಗೆಯನ್ನು ಹಿಂಬಾಲಿಸಿ ಹಿಂದಕ್ಕೆ ಬಂದ ಪಕ್ಷದಲ್ಲಿ, ಅಂಧವನಿಗೆ ಬೇರೆ ಅಲ್ಪ ತರವಾದ ಸ್ನೇಹವಸ್ತಿಯನ್ನು ಕೊಡತಕ್ಕದ್ದು. ವಸ್ತಿಯು ಒಳಗೆ ನಿಲ್ಲದ ವಿನಾ ಸ್ನಿಗ್ಧತೆ ಯುಂಟಾಗುವದಿಲ್ಲ.

25. ಸಾನಿಲಃ ಸಪುರೀಷಶ್ಚ ಸ್ನೇಹಃ ಪ್ರತ್ಯೇತಿ ಯಸ್ಯ ತು ।
ಓಷಜೋಷೌ ವಿನಾ ಶೀಘ್ರಂ ಸ ಸಮ್ಯಗನುವಾಸಿತಃ ॥ (ಸು. 572.)

ಅನುವಾಸನ ಸರಿಯಾಗಿ ಹಿಡಿದ ಲಕ್ಷಣ

ಕೊಟ್ಟಂಥಾ ಸ್ನೇಹವು ವಾಯುವನ್ನು ಮತ್ತು ಮಲವನ್ನು ಕೂಡಿಕೊಂಡು, ಉರಿ ಸುಡತ ಗಳಿಲ್ಲದೆ, ಶೀಘ್ರದಲ್ಲಿ ಹೊರಗೆ ಬಂದರೆ, ಅಂಧವನಿಗೆ ಅನುವಾಸನವು ಚೆನ್ನಾಗಿ ಆಯಿತೆಂತ ತಿಳಿಯಬೇಕು

26. ಜೀರ್ಣಾನ್ನಮಥ ಸಾಯಾಹ್ನೇ ಸ್ನೇಹೇ ಪ್ರತ್ಯಾಗತೇ ಪುನಃ ।
ಲಘ್ವನ್ನಂ ಭೋಜಯೇತ್ತಾಮಂ ದೀಪ್ತಾಗ್ನಿಸ್ತು ನರೋ ಯದಿ ॥ (ಸು. 572.)

ಅನುವಾಸನ ದಿನದ ಭೋಜನನಿಯಮ

ಸಾಯಂಕಾಲದಲ್ಲಿ ಸ್ನೇಹವು ಹೊರಗೆ ಬಂದು, ಉಂಡ ಅನ್ನವು ಜೀರ್ಣವಾಗಿ, ಹಸಿವು ಚೆನ್ನಾಗಿ ಉಂಟಾಗಿದ್ದರೆ, ಅಂಧವನಿಗೆ ಲಘುವಾದ ಭೋಜನವನ್ನು ಬೇಕಾದಷ್ಟು ಕೊಡ ಬಹುದು.

27. ಪ್ರಾತರುಷ್ಣೋದಕಂ ದೇಯಂ ಧಾನ್ಯನಾಗರಸಾಧಿತಂ ।
ತೇನಾಸ್ಯ ದೀಪ್ಯತೇ ವಹ್ನಿರ್ಭಕ್ತಾಕಾಂಕ್ಷಾ ಚ ಜಾಯತೇ ॥ (ಸು. 572.)

ಮಾರಣೆ ದಿನ ಬೆಳಿಗ್ಗೆ ಕೊತ್ತುಂಬರಿ ಮತ್ತು ಶುಂಠಿ ಹಾಕಿ ಕಾಯಿಸಿದ ಬಿಸಿ ನೀರನ್ನು ಕೊಟ್ಟಲ್ಲಿ, ಅಗ್ನಿಯು ಚುರುಕಾಗಿ ಆಹಾರದ ಇಚ್ಛೆಯುಂಟಾಗುತ್ತದೆ.

ಮಾರಣೆ ದಿನದ ಕರ್ತವ್ಯ

28. ಯಸ್ಯ ನೋಪದ್ರವಂ ಕುರ್ಯಾತ್ ಸ್ನೇಹವಸ್ತಿರನಿಃಸೃತಃ ।
ಸರ್ವೋಽಲ್ಪೋ ವಾವೃತೋ ರೌಕ್ಷ್ಯಾದುಪೇಕ್ಷ್ಯಃ ಸ ವಿಜಾನತಾ ॥ (ಚ. 884.)

ಉಪದ್ರವವಿಲ್ಲದೆ ನಿಂತ ಅನುವಾಸನ ಉಪೇಕ್ಷ್ಯ

ಕಳುಹಿಸಿದಂಥ ಸ್ನೇಹವು ಹೊರಗೆ ಬಾರದೆ ರೌಕ್ಷ್ಯದ ದೆಸೆಯಿಂದ ಪೂರಾ ಅಥವಾ ಅಲ್ಪ ನಿಂತುಹೋದ್ದರಿಂದ ಉಪದ್ರವಗಳೇನೂ ಕಾಣದಿದ್ದರೆ, ಅದನ್ನು ಬುದ್ಧಿವಂತನು ಉಪೇಕ್ಷಿಸ ಬೇಕು.

ಷರಾ ಇದೇ ಶ್ಲೋಕ ಸು ದಲ್ಲಿಯೂ ಕಾಣುತ್ತದೆ (ಪು. 575)

29. ಅನಾಯಾಂತಂ ತ್ವಹೋರಾತ್ರಾತ್ಸ್ನೇಹಂ ಸಂಶೋಧನೈರ್ಜಯೇತ್ ।
ಸ್ನೇಹವಸ್ತ್ವಾವನಾಯಾತೇ ನಾನ್ಯಃ ಸ್ನೇಹೋ ವಿಧೀಯತೇ ॥
(ಸು. 575.)

ಅನುವಾಸನ ಹಿಂದೆ ಬಾರದ್ದಕ್ಕೆ ಪರಿಹಾರ

ಒಂದು ಹಗಲೂರಾತ್ರಿಯೊಳಗೆ (ಒಂದು ದಿನದಲ್ಲಿ) ಸ್ನೇಹವು ಹಿಂದಕ್ಕೆ ಬಾರದಿದ್ದರೆ, ಅದನ್ನು ಸಂಶೋಧನ ವಸ್ತಿಗಳಿಂದ ಜಯಿಸಬೇಕು. ಕೊಟ್ಟ ಸ್ನೇಹವಸ್ತಿಯು ಹಿಂತಿರುಗಿ ಬಾರದ್ದಲ್ಲಿ, ಬೇರೆ ಸ್ನೇಹವನ್ನು ಕೊಡಕೂಡದು.

30. ಅನೇನ ವಿಧಿನಾ ಷಡ್ವಾ ಸಪ್ತ ವಾಷ್ಟೌ ನವೈವ ವಾ ।
ವಿಧೇಯಾ ವಸ್ತಯಸ್ತೇಷಾಮಂತರಾ ತು ನಿರೂಹಣಂ ॥
(ಸು. 573.)

ಅನುವಾಸನಗಳ ಸಂಖ್ಯೆಯ ನಿಯಮ

ಈ ಕ್ರಮದಿಂದ ಸ್ನೇಹವಸ್ತಿಯನ್ನು ಆರು, ಏಳು, ಎಂಟು, ಅಥವಾ ಒಂಭತ್ತು, ಸರ್ತಿ ಕೊಡಬಹುದು. ಮಧ್ಯದಲ್ಲಿ ನಿರೂಹಣ ವಸ್ತಿಯನ್ನು ಕೊಡಬೇಕು.

31. ಸ್ನೇಹವಸ್ತಿಂ ನಿರೂಹಂ ವಾ ನೈಕಮೇವಾತಿಶೀಲಯೇತ್ ।
ಸ್ನೇಹಾದಗ್ನಿವಧೋತ್ಕ್ಲೇಶೌ ನಿರೂಹಾತ್ಪವನಾದ್ಭಯಂ ॥
ತಸ್ಮಾನ್ನಿರೂಢೋಽನುವಾಸ್ಯೋ ನಿರೂಹ್ಯಶ್ಚಾನುವಾಸಿತಃ ।
ನೈವಂ ಪಿತ್ತಕಫೌತ್ಕ್ಲೇಶೌ ಸ್ಯಾತಾಂ ನ ಪವನಾದ್ಭಯಂ ॥ (ಸು. 573.)

ನಿರೂಹ-ಅನುವಾಸನಗಳ ಶೀಲ

ಸ್ನೇಹವಸ್ತಿಯನ್ನು ಅಥವಾ ನಿರೂಹವಸ್ತಿಯನ್ನು ಒಂದನ್ನಾಗಿಯೇ ಅತಿಯಾಗಿ ಶೀಲ ಮಾಡಬಾರದು. ಸ್ನೇಹದಿಂದ ಅಗ್ನಿನಾಶ ಮತ್ತು ಉತ್ಕ್ಲೇಶ (ವಾಂತಿಯಾಗುವ ಸಂಕಟ) ಉಂಟಾಗುತ್ತವೆ, ಮತ್ತು ನಿರೂಹದಿಂದ ವಾಯುವಿನ ಭಯ ಸಂಭವಿಸುತ್ತದೆ. ಆದ್ದರಿಂದ ನಿರೂಹ ಸೇವಿಸಿದವನು ಅನುವಾಸನವನ್ನೂ, ಅನುವಾಸನ ಸೇವಿಸಿದವನು ನಿರೂಹವನ್ನೂ ಉಪಯೋಗಿಸಿದ್ದಲ್ಲಿ, ಪಿತ್ತಕಫದ ದೋಷವಾಗಲಿ, ಉತ್ಕ್ಲೇಶವಾಗಲಿ, ವಾಯುವಿನ ಭಯವಾಗಲಿ ಉಂಟಾಗುವದಿಲ್ಲ

32. ತತೋ ನೇತ್ರಮಪನೀಯ ತ್ರಿಂಶನ್ಮಾತ್ರಾಃ ಪೀಡನಕಾಲಾದುಪೇಕ್ಷ್ಯೋತ್ತಿಷ್ಠೇತ್ಯಾತುರಂ ಬ್ರೂಯಾತ್ । ಆತುರಮುಪವೇಶಯೇದುತ್ಕಟುಕಂ ವಸ್ತ್ಯಾಗಮನಾರ್ಥಂ । ನಿರೂಹಪ್ರತ್ಯಾಗಮನಕಾಲಸ್ತು ಮುಹೂರ್ತೋ ಭವತಿ । (ಸು. 578.)

ನಿರೂಹದ ಪಶ್ಚಾತ್ಕರ್ಮ

ನಿರೂಹವಸ್ತಿಯನ್ನು ಕೊಟ್ಟು ನಳಿಗೆಯನ್ನು ಹಿಂದೆ ತೆಗೆದ ಮೇಲೆ, ವಸ್ತಿಯನ್ನು ಹಿಂಡಿದ ಕ್ಷಣದಿಂದ ಮೂವತ್ತು ಮಾತ್ರಾಕಾಲ ಸುಮ್ಮಗಿದ್ದು, ಅನಂತರ ರೋಗಿಯನ್ನು ಏಳು ಎಂದು ಹೇಳಿ, ವಸ್ತಿಯು ಹಿಂದಕ್ಕೆ ಬರುವದಕ್ಕೋಸ್ಕರ ಉತ್ಕಟವಾಗಿ (ಮುಕುಳಿಯನ್ನು ಆಧರಿಸಿ) ಕೂತುಕೊಳ್ಳಿಸಬೇಕು. ನಿರೂಹ ತಿರುಗಿ ಬರುವದಕ್ಕೆ ಬೇಕಾದ ಕಾಲವು ಒಂದು ಮುಹೂರ್ತ(48 ಮಿನಿಟು)ವಾಗಿರುತ್ತದೆ.

33. ಅನೇನ ವಿಧಿನಾ ವಸ್ತಿಂ ದದ್ಯಾದ್ವಸ್ತಿವಿಶಾರದಃ ।
ದ್ವಿತೀಯಂ ವಾ ತೃತೀಯಂ ವಾ ಚತುರ್ಥಂ ವಾ ಯಥಾರ್ಹತಃ ॥

ನಿರೂಹಗಳ ಸಂಖ್ಯಾನಿಯಮ

ಸಮ್ಯಗ್ನಿರೂಢಲಿಂಗೇ ತು ಪ್ರಾಪ್ತೇ ವಸ್ತಿಂ ನಿವಾರಯೇತ್ ।
ಅಪಿ ಹೀನಕ್ರಮಂ ಕುರ್ಯಾನ್ನ ತು ಕುರ್ಯಾದತಿಕ್ರಮಂ ॥
ವಿಶೇಷಾತ್ಸುಕುಮಾರಾಣಾಂ ಹೀನ ಏವ ಕ್ರಮೋ ಹಿತಃ । (ಸು. 579.)

ವಸ್ತಿಕ್ರಮದಲ್ಲಿ ಕುಶಲನಾದಂಧವನು ನಿರೂಹವಸ್ತಿಯನ್ನು ಇದೇ ವಿಧದಿಂದ ಎರಡನೇ, ಮೂರನೇ, ಅಥವಾ ನಾಲ್ಕನೇ, ಸರ್ತಿ ಬೇಕಾದ ಹಾಗೆ ಕೊಡಬಹುದು. ನಿರೂಹವು ಸರಿಯಾಗಿ ಆದ ಲಕ್ಷಣ ಕಂಡ ಮೇಲೆ, ನಿರೂಹವಸ್ತಿಯನ್ನು ನಿವಾರಿಸಬೇಕು. ನಿರೂಹವನ್ನು ಕ್ರಮಕ್ಕೆ ಕಡಿಮೆಯಾಗಿಯಾದರೂ ಮಾಡಬಹುದು. ಆದರೆ ಕ್ರಮಕ್ಕೆ ಅತಿಯಾಗಿ ಮಾಡ ಕೂಡದು. ಮುಖ್ಯವಾಗಿ ಎಳೇ ಶರೀರದವರಿಗೆ ಹೀನವಾದ ಕ್ರಮವೇ ಹಿತವಾದದ್ದು.

ಷಡಾ ಪ್ರಥಮತಃ ಕೊಟ್ಟ ನಿರೂಹವು ತಾನಾಗಿ ಪ್ರಯತ್ನವಿಲ್ಲದೆ ಹಿಂದಕ್ಕೆ ಬಂದಾಗ್ಗೆ ಮಾತ್ರ ಪುನಃ ಕೊಡಬೇಕಾದದ್ದು (ವಾ 91)

34. ಸಮ್ಯಕ್ನಿರೂಢಲಿಂಗಂ ತು ನಾಸಂಭಾವ್ಯ ನಿವರ್ತ್ತಯೇತ್ ॥
ಪ್ರಾಕ್ ಸ್ನೇಹ ಏಕಃ ಪಂಚಾನ್ತೇ ದ್ವಾದಶಾಸ್ಥಾಪನಾನಿ ಚ ।

ವಸ್ತಿಯ ಕರ್ಮ-ಕಾಲ-ಯೋಗಗಳಿಂಬವು

ಸಾನ್ವಾಸನಾನಿ ಕರ್ಮೈವಂ ವಸ್ತಯಸ್ತ್ರಿಂಶದೀರಿತಾಃ ॥
ಕಾಲಃ ಪಂಚದಶೈಕೋಽತ್ರ ಪ್ರಾಕ್ ಸ್ನೇಹಾಸ್ತೇ ತ್ರಯಸ್ತಥಾ ।
ಷಟ್ ಪಂಚ ವಸ್ತ್ಯನ್ತರಿತಾಃ ಯೋಗೋಽಷ್ಟೌ ವಸ್ತಯೋಽತ್ರ ತು ॥
ತ್ರಯೋ ನಿರೂಹಾಃ ಸ್ನೇಹಾಶ್ಚ ಸ್ನೇಹಾವಾದ್ಯನ್ತಯೋರುಭೌ । (ವಾ 92-3.)

ನಿರೂಹವು ಸರಿಯಾಗಿ ಸಫಲವಾದ ಲಕ್ಷಣವನ್ನು ಕಾಣದೆ ಅದನ್ನು ನಿಲ್ಲಿಸಬಾರದು. ಆರಂಭದಲ್ಲಿ ಒಂದು ಸ್ನೇಹವಸ್ತಿ, ಅಂತ್ಯದಲ್ಲಿ ಐದು ಸ್ನೇಹವಸ್ತಿಗಳು, ಮಧ್ಯದಲ್ಲಿ ಹನ್ನೆರಡು ಅನುವಾಸನಗಳೊಂದಿಗೆ ಹನ್ನೆರಡು ನಿರೂಹವಸ್ತಿಗಳು, ಹೀಗೆ ಕೊಡಲ್ಪಟ್ಟ ಮೂವತ್ತು ವಸ್ತಿಗಳಿಗೆ ಕರ್ಮ ಎನ್ನುತ್ತಾರೆ. ಆರಂಭದಲ್ಲಿ ಒಂದು ಸ್ನೇಹ, ಅಂತ್ಯದಲ್ಲಿ ಮೂರು ಸ್ನೇಹಗಳು, ಮಧ್ಯದಲ್ಲಿ ಒಂದು ಸ್ನೇಹದನಂತರ ಒಂದು ನಿರೂಹದಂತೆ ಕೊಡಲ್ಪಟ್ಟ ಆರು ಸ್ನೇಹಗಳು ಮತ್ತು ಐದು ನಿರೂಹಗಳು, ಹೀಗೆ ಉಪಯೋಗಿಸಿದ ಹದಿನೈದು ವಸ್ತಿಗಳಿಗೆ ಕಾಲ ಎನ್ನುತ್ತಾರೆ. ಆರಂಭದಲ್ಲಿ ಒಂದು ಸ್ನೇಹ, ಮಧ್ಯದಲ್ಲಿ ಮೂರು ನಿರೂಹಗಳು ಮತ್ತು ಮೂರು ಸ್ನೇಹಗಳು ಒಂದರನಂತರ ಒಂದರಂತೆ, ಅಂತ್ಯದಲ್ಲಿ ಒಂದು ಸ್ನೇಹ, ಹೀಗೆ ಕೊಡಲ್ಪಟ್ಟ ಎಂಟು ವಸ್ತಿಗಳಿಗೆ ಯೋಗವೆನ್ನುತ್ತಾರೆ.

35. ಯಸ್ಯ ಕ್ರಮೇಣ ಗಚ್ಛಂತಿ ವಿಟ್ಪಿತ್ತಕಫವಾಯವಃ ।

ನಿರೂಹ ಸರಿಯಾದ್ದರ ಲಕ್ಷಣ

ಲಾಘವಂ ಜೋಪಜಾಯೇತ ಸುನಿರೂಢಂ ತಮಾದಿಶೇತ್ ॥
(ಸು. 579.)

ಯಾವನಿಗೆ ನಿರೂಹವಸ್ತಿಯನ್ನು ಉಪಯೋಗಿಸಿಕೊಂಡದ್ದರಿಂದ, ಮಲ, ಪಿತ್ತ, ಕಫ

ಮತ್ತು ವಾಯು ಕ್ರಮವಾಗಿ ಹೊರಗೆ ಬಂದು, ಲಘುತ್ವ ಉಂಟಾಗುತ್ತದೋ, ಅವನ ನಿರೂಹ ಣವು ಸರಿಯಾಯಿತೆಂತ ತಿಳಿಯಬೇಕು.

36. ಸುನಿರೂಢಂ ತತೋ ಜಂತುಂ ಸ್ನಾನವಂತಂ ತು ಭೋಜಯೇತ್ ।
ಪಿತ್ತಶ್ಲೇಷ್ಮಾನಿಲಾವಿಷ್ಟಂ ಕ್ಷೀರಯೂಷರಸೈಃ ಕ್ರಮಾತ್ ॥
ನಿರೂಹ ಕೊಟ್ಟ ದಿನದ ಭೋಜನನಿಯಮ
ಸರ್ವಂ ವಾ ಜಾಂಗಲರಸೈರ್ಭೋಜಯೇದವಿಕಾರಿಭಿಃ ।
ತ್ರಿಭಾಗಹೀನಮರ್ಧಂ ವಾ ಹೀನಮಾತ್ರಮಥಾಪಿ ವಾ ॥
ಯಥಾಗ್ನಿದೋಷಂ ಮಾತ್ರೇಯಂ ಭೋಜನಸ್ಯ ವಿಧೀಯತೇ ॥ (ಸು. 579.)

ನಿರೂಹಣ ಸರಿಯಾಗಿ ಆದಂಧವನನ್ನು ಸ್ನಾನಮಾಡಿಸಿ, ಪಿತ್ತದೋಷವುಳ್ಳವನಾದರೆ ಹಾಲಿನಿಂದ, ಕಫದೋಷವುಳ್ಳವನಾದರೆ ಸಾರಿನಿಂದ, ವಾತದೋಷವುಳ್ಳವನಾದರೆ ಮಾಂಸ ರಸದಿಂದ, ಉಣ್ಣಿಸಬೇಕು, ಅಥವಾ ಯಾರನ್ನಾದರೂ ದೋಷಕರವಲ್ಲದ ಜಾಂಗಲಮಾಂಸ ರಸಗಳಿಂದ ಉಣ್ಣಿಸಬಹುದು. ಆದರೆ ಆಹಾರದ ಪ್ರಮಾಣವನ್ನು ಕಾಲಂಶಕ್ಕೆ, ಅರ್ಧಾಂಶಕ್ಕೆ, ಅಥವಾ ಸ್ವಲ್ಪಮಟ್ಟಿಗೆ, ದೋಷ ಮತ್ತು ಅಗ್ನಿ ನೋಡಿಕೊಂಡು, ಕಡಿಮೆ ಮಾಡಿಕೊಳ್ಳಬೇಕು.

37. ಅನಾಯಾಂತಂ ಮುಹೂರ್ತಾತ್ತು ನಿರೂಹಂ ಶೋಧನೈರ್ಹರೇತ್ ।
ನಿರೂಹ ಹಿಂದೆ ಬಾರದ್ದಕ್ಕೆ ಪರಿಹಾರ
ತೀಕ್ಷ್ಣೈರ್ನಿರೂಹೈರ್ಮತಿಮಾನ್ ಕ್ಷಾರಮೂತ್ರಾಮ್ಲಸಂಯುತೈಃ ॥
(ಸು. 579.)

ಒಂದು ಮುಹೂರ್ತಕಾಲದಲ್ಲಿ ನಿರೂಹವು ಹಿಂದಕ್ಕೆ ಬಾರದಿದ್ದರೆ, ಅದನ್ನು ಶೋಧನ ಕರವಾದ, ತೀಕ್ಷ್ಣವಾದ ಮತ್ತು ಯವಕ್ಷಾರ, ಗೋಮೂತ್ರ ಮತ್ತು ಹುಳಿಗಂಜಿ, ಇವುಗಳಿಂದ ಕೂಡಿದ, ಬೇರೆ ನಿರೂಹಗಳನ್ನು ಕೊಟ್ಟು ಹೊರಗೆ ತೆಗೆದುಬಿಡಬೇಕು.

38. ವಸ್ತೇರುತ್ತರಸಂಜ್ಞಸ್ಯ ವಿಧಿಂ ವಕ್ಷ್ಯಾಮ್ಯತಃ ಪರಂ ।
ಚತುರ್ದಶಾಂಗುಲಂ ನೇತ್ರಮಾತುರಾಂಗುಲಸಮ್ಮಿತಂ ॥
ಮಾಲತೀಪುಷ್ಪವೃಂತಾಗ್ರಂ ಛಿದ್ರಂ ಸರ್ಷಪನಿರ್ಗಮಂ ।
ಮೇಢ್ರಾಯಾಮಸಮಂ ಕೇಚಿದಿಚ್ಛಂತಿ ಖಲು ತದ್ವಿದಃ ॥
ಸ್ನೇಹಪ್ರಮಾಣಂ ಪರಮಂ *ಕುಚ್ಚಶ್ಚಾತ್ರ ಪ್ರಕೀರ್ತಿತಃ ।
ಪಂಚವಿಂಶಾದಧೋ ಮಾತ್ರಾಂ ವಿದಧ್ಯಾದ್ಬುದ್ಧಿಕಲ್ಪಿತಾಂ ॥
ಉತ್ತರವಸ್ತಿಯ ವಿಧಿ
ನಿವಿಷ್ಟಕರ್ಣಿಕಂ ಮಧ್ಯೇ ನಾರೀಣಾಂ ಚತುರಂಗುಲೇ ।
ಮೂತ್ರಸ್ರೋತಃ ಪರೀಣಾಹಂ ಮುದ್ಗವಾಹಿ ದಶಾಂಗುಲಂ ॥
ತಾಸಾಮಪತ್ಯಮಾರ್ಗೇ ತು ನಿದಧ್ಯಾಚ್ಚತುರಂಗುಲಂ ।
ದ್ವ್ಯಂಗುಲಂ ಮೂತ್ರಮಾರ್ಗೇ ತು ಕನ್ಯಾನಾಂ ತ್ವೇಕಮಂಗುಲಂ ॥
ವಿಧೇಯಂ ಚಾಂಗುಲಂ ತಾಸಾಂ ವಿಧಿವದ್ವಕ್ಷ್ಯತೇ ಯಥಾ ।
ಸ್ನೇಹಸ್ಯ ಪ್ರಸೃತಂ ಚಾತ್ರ ಸ್ವಾಂಗುಲೀಮೂಲಸಮ್ಮಿತಂ ॥

ದೇಯಂ ಪ್ರಮಾಣಂ ಪರಮಮರ್ವಾಗ್ಬುದ್ಧಿವಿಕಲ್ಪಿತಂ ।
ಔರಭ್ರಃ ಶೌಕರೋ ವಾಪಿ ವಸ್ತಿರಾಜಶ್ಚ ಪೂಜಿತಃ ॥
ತದಲಾಭೇ ಪ್ರಯುಂಜೀತ ಗಲಚರ್ಮ ತು ಪಕ್ಷಿಣಾಂ ।
ಅಸ್ಯಾಲಾಭೇ ದೃತೇಃ ಪಾದೋ ಮೃದುಚರ್ಮ ತತೋಽಪಿ ವಾ ॥
ಅಥಾತುರಮುಪಸ್ನಿಗ್ಧಂ ಸುಸ್ವಿನ್ನಂ ಪ್ರಥಿತಾಶಯಂ ।
ಯವಾಗೂಂ ಸಘೃತಕ್ಷೀರಾಂ ಪೀತವಂತಂ ಯಥಾಬಲಂ ॥
ನಿಷಣ್ಣಮಾಜಾನುಸಮೇ ಪೀಠೇ ಸ್ಥಾನಾಶ್ರಯೇ ಸಮೇ ।
ಸ್ವಭ್ಯಕ್ತವಸ್ತಿಮೂರ್ಧಾನಂ ತೈಲೇನೋಷ್ಣೇನ ಮಾನವಂ ॥
ತತಃ ಸಮಂ ಸ್ಥಾಪಯಿತ್ವಾ ನಾಲಮಸ್ಯ ಪ್ರಹರ್ಷಿತಂ ।
ಪೂರ್ವಂ ಶಲಾಕಯಾನ್ವಿಷ್ಯ ತತೋ ನೇತ್ರಮನಂತರಂ ॥
ಶನೈಃ ಶನೈಘೃರ್ಷಿತಾಭ್ಯಕ್ತಂ ವಿದಧ್ಯಾದಂಗುಲಾನಿ ಷಟ್ ।
ತತೋಽವಪೀಡಯೇದ್ವಸ್ತಿಂ ಶನೈರ್ನೇತ್ರಂ ಚ ನಿರ್ಹರೇತ್ ॥
(ಸು. 575-76.)

ಪರಾ *"ಪ್ರಕುಂಚಂ ಚಾತ್ರಕೀರ್ತಿತಂ" ಎಂಬ ಪಾರವೇ ಸರಿಯಾಗಿರಬೇಕು ಕುಬ್ಜ ಎಂಬ ಶಬ್ದವು ಅನೇಕ ನಿಘಂಟುಗಳಲ್ಲಿ ಕಾಣುವದಿಲ್ಲ

ಉತ್ತರವಸ್ತಿಯೆಂಬದರ ವಿಧಿಯು ಹ್ಯಾಗಂದರೆ—ಅದರ ನಳಿಗೆಯು ರೋಗಿಯ ಬೆರಳ ಲೆಕ್ಕದಲ್ಲಿ (ಗಂಡಸರಿಗೆ) ಹದಿನಾಲ್ಕು ಅಂಗುಲವಿರಬೇಕು. ನಳಿಗೆಯ ತುದಿಯು ಜಾಜಿ ಹೂವಿನ ತೊಟ್ಟಿನಷ್ಟು ತೋರ ಮತ್ತು ಅದರ ರಂಧ್ರವು ಸಾಸಿವೆಕಾಳು ಹೋಗುವಷ್ಟು ಇರ ಬೇಕು. ಕೆಲವರು ಬಲ್ಲವರು ಮೇಢ್ರದ ಉದ್ದಕ್ಕೆ ಸರಿ ಅದರ ಉದ್ದ ಇರಬೇಕನ್ನುತ್ತಾರೆ. ಇದಕ್ಕೆ ಸ್ನೇಹದ ಪರಮಾವಧಿ ಪ್ರಮಾಣ ಒಂದು ಪಲ. 25 ವರ್ಷಗಳಿಗಿಂತ ಕೆಳಗಿನವರಿಗೆ ಪ್ರಮಾಣವನ್ನು ಬುದ್ಧಿಯಿಂದ ನಿಶ್ಚಯಿಸತಕ್ಕದ್ದು (ಕ್ರಮದಿಂದ ತಗ್ಗಿಸಬೇಕು). ಕವಿಯು ಗಂಡಸರಿಗಾದರೆ ಮಧ್ಯದಲ್ಲಿ, ಹೆಂಗಸರಿಗಾದರೆ ತುದಿಯಿಂದ ನಾಲ್ಕು ಅಂಗುಲದಲ್ಲಿ ಇರ ಬೇಕು; ಮತ್ತು ಅದು ಹೆಂಗಸರ ಮೂತ್ರಮಾರ್ಗದಷ್ಟು ತೋರ, ಹತ್ತು ಅಂಗುಲ ಉದ್ದ, ಮತ್ತು ಹೆಸರುಕಾಳು ಹೋಗುವಷ್ಟು ರಂಧ್ರವುಳ್ಳದ್ದಾಗಿರಬೇಕು. ಅವರ ಹೆರುವ ಮಾರ್ಗ ದಲ್ಲಿ ನಳಿಗೆಯನ್ನು ನಾಲ್ಕು ಅಂಗುಲ ಹೊಗಿಸಬೇಕು; ಮೂತ್ರಮಾರ್ಗದಲ್ಲಿಯಾದರೆ ಎರಡು ಅಂಗುಲ; ಕನ್ಯೆಯರಾದರೆ ಮೂತ್ರಮಾರ್ಗದಲ್ಲಿ ಒಂದೇ ಅಂಗುಲ ಹೊಗಿಸಬೇಕು. ಅವ ರಿಗೆ ಅಂಗುಲದ ವಿಧಿ ಹ್ಯಾಗಂದರೆ ಇವರ ವಿಷಯದಲ್ಲಿ ಪ್ರಸೃತ ಎಂಬದು ಆಯಾ ಜನರ ಎರಡು ಬೆರಳುಗಳ ಬುಡದಷ್ಟು ಆಗಿರುತ್ತದೆ. ಸ್ನೇಹದ ಅಂಥಾ ಒಂದು ಪ್ರಸೃತ ಪರಮಾವಧಿ ಪ್ರಮಾಣವಾಗಿರುತ್ತದೆ. ಅದಕ್ಕೆ ಕಡಿಮೆಯಾಗಿ ಬುದ್ಧಿಯಿಂದ ಪ್ರಮಾಣವನ್ನು ನಿಶ್ಚಯಿಸ ಬೇಕು. ಕುರಿಯ, ಕಾಡು ಹಂದಿಯ, ಅಥವಾ ಆಡಿನ, ಮೂತ್ರಕೋಶವು ಪ್ರಶಸ್ತ. ಅದು ಸಿಕ್ಕ ದಿದ್ದರೆ, ಪಕ್ಷಿಗಳ ಕುತ್ತಿಗೆಯ ಚರ್ಮವನ್ನು ಉಪಯೋಗಿಸಬೇಕು. ಅದೂ ಸಿಕ್ಕದಾಗ್ಗೆ, ತಿದಿಯ ಬುಡ, ಅದೂ ಇಲ್ಲದಾಗ ಮೃದು ಚರ್ಮ, ಆಗಬಹುದು. ಈಗ ರೋಗಿಯನ್ನು ಸ್ನೇಹ ಹಚ್ಚಿ ಬೆವರಿಸಿದ ಮೇಲೆ, ಮಲಮೂತ್ರಾದಿ ವಿಸರ್ಜನ ಮಾಡಿಸಿ, ತುಪ್ಪ ಹಾಲು

ಗಳೊಂದಿಗೆ ಯವಾಗುವನ್ನು ಬಲಕ್ಕೆ ತಕ್ಕವಾಗಿ ಕುಡಿಸಿ, ಕಾಲ ಮೊಣಗಂಟಿನಷ್ಟು ಎತ್ತರವಾದ, ಸ್ಥಿರವಾಗಿ ನೆಲದ ಮೇಲೆ ನಿಂತ ಮತ್ತು ಎತ್ತರತಗ್ಗು ಇಲ್ಲದ ಪೀಠದ ಮೇಲೆ ಕೂತು ಕೊಳ್ಳಿಸಿ, ಅವನ ಮೂತ್ರನಾಳದ ತಲೆಗೆ ಬಿಸಿಯಾದ ತೈಲವನ್ನು ಚೆನ್ನಾಗಿ ಹಚ್ಚಿ, ಅವನ ನಾಳವನ್ನು ಹರ್ಷಿಸಿ, ನೆಟ್ಟಗೆ ನಿಲ್ಲಿಸಿ, ಮುಂದಾಗಿ ಒಂದು ಲೋಹದ ಕಡ್ಡಿಯನ್ನು ಹೊಗಿಸಿ ನೋಡಿದನಂತರ, ತುಪ್ಪ ಹಚ್ಚಿದ ವಸ್ತಿನಳಿಗೆಯನ್ನು ಮೆಲ್ಲಮೆಲ್ಲನೆ ಆರು ಅಂಗುಲ ಒಳಗೆ ಹೊಗಿಸಬೇಕು. ಆ ಮೇಲೆ ವಸ್ತಿಯನ್ನು ಹಿಂಡಬೇಕು. ಮತ್ತು ನಳಿಗೆಯನ್ನು ಮೆಲ್ಲನೆ ಹೊರಗೆ ಎಳೆದು ತೆಗೆಯಬೇಕು.

ಇದರ ಚರಕಸಂಹಿತೆಯಲ್ಲಿ ನಳಿಗೆಯ ಉದ್ದ ಗಂಡಸರಿಗೆ 12 ಅಂಗುಲವಿರಬೇಕೆಂತಲೂ, ಮೂತ್ರದ್ವಾರದ ಉತ್ತರವಸ್ತಿಗೆ ಸ್ನೇಹಪ್ರಮಾಣವು ಅರ್ಧಪಲವೆಂತಲೂ, ಪ್ರಾಯದ ಮೇಲೆ ಈ ಪ್ರಮಾಣವನ್ನು ಹೆಚ್ಚುಕಡಿಮೆ ಮಾಡಬೇಕೆಂತಲೂ, ಹೇಳಲ್ಪಟ್ಟಿದೆ (ಪು 908-09)

39. ತತಃ ಪ್ರತ್ಯಾಗತಸ್ನೇಹಮಪರಾಹ್ಣೇ ವಿಚಕ್ಷಣಃ ।
ಉತ್ತರವಸ್ತಿ ಕೊಟ್ಟ ದಿನ ದ ಭೋಜನನಿಯಮ ಭೋಜಯೇತ್ಪಯಸಾ ಮಾತ್ರಾಂ ಯೂಷೇಣಾಧ ರಸೇನ ವಾ ॥ (ಸು. 576.)

ಆ ಮೇಲೆ ಸ್ನೇಹ ಹೊರಗೆ ಬಂದದ್ದು ನೋಡಿ ಅಪರಾಹ್ಣದಲ್ಲಿ ಅವನನ್ನು ಬುದ್ಧಿವಂತನು ಹಾಲಿನಿಂದಾಗಲಿ (ಪಿತ್ತಕ್ಕೆ), ಸಾರಿನಿಂದಾಗಲಿ (ಕಫಕ್ಕೆ), ಮಾಂಸರಸಗಳಿಂದಾಗಲಿ (ವಾತಕ್ಕೆ), ಪ್ರಮಾಣದಲ್ಲಿ ಉಣ್ಣಿಸಬೇಕು.

40. ಅನೇನ ವಿಧಿನಾ ದದ್ಯಾದ್ವಸ್ತೀಂ ಸ್ತ್ರೀಂಶ್ಚತುರೋಽಪಿ ವಾ ॥
ಉತ್ತರವಸ್ತಿಯ ಸಂಖ್ಯಾನಿಯಮ (ಸು. 576.)

ಇದೇ ವಿಧಾನದಿಂದ ಮೂರೋ ನಾಲ್ಕೋ ವಸ್ತಿಗಳನ್ನು ಕೊಡಬಹುದು.

ಇದರ ಒಮ್ಮೆ ಕಳುಹಿಸಿದ ಸ್ನೇಹವು ಹೊರಗೆ ಬಂದ ಮೇಲೆ, ಸ್ವಲ್ಪ ಸಮಯ ತಡೆದು, ಪುನಃ ವಸ್ತಿ ಕೊಡುವದೆಂತಲೂ, ಪಾಗೆ ಒಂದೇ ದಿನದಲ್ಲಿ 3 ಅಥವಾ 4 ವಸ್ತಿಗಳನ್ನು ಕೊಡಬಹುದಾಗಿಯೂ ನಿ. ಸಂ. ವ್ಯಾ (ಸಂ 42 ನೋಡಿರಿ)

41. ಸ್ತ್ರೀಣಾಂ ಚಾರ್ತವಕಾಲೇ ತು ಪ್ರತಿಕರ್ಮ ತದಾಚರೇತ್ ।
ಹೆಂಗಸರಿಗೆ ಉತ್ತರ ವಸ್ತಿಗೆ ಪ್ರಶಸ್ತ ಕಾಲ ಗರ್ಭಾಸನಾ ಸುಖಂ ಸ್ನೇಹಂ ತದಾದತ್ತೇ ಹ್ಯಪಾವೃತಾ ॥
ಗರ್ಭಂ ಯೋನಿಸ್ತದಾ ಶೀಘ್ರಂ ಜಿತೇ ಗೃಹ್ಣಾತಿ ಮಾರುತೇ । (ಚ. 909.)

ಸ್ತ್ರೀಯರ ಗರ್ಭಾಶಯದ ದೋಷಕ್ಕೆ ಪ್ರತಿಕರ್ಮವನ್ನು ಅವರು ಮುಟ್ಟಾಗಿರುವ ಕಾಲದಲ್ಲಿ ಮಾಡತಕ್ಕದ್ದು. ಆಗ್ಗೆ ಗರ್ಭಾಸನವು ತೆರೆದಿದ್ದು ಸ್ನೇಹವನ್ನು ಸುಖವಾಗಿ ತೆಗೆದುಕೊಳ್ಳುತ್ತದೆ. ಮತ್ತು ಆಗ್ಗೆ ವಾತದೋಷವನ್ನು ಪರಿಹರಿಸಿದರೆ, ಯೋನಿಯು ಬೇಗನೆ ಗರ್ಭವನ್ನು ಧರಿಸುತ್ತದೆ.

42. ಉತ್ತಾನಾಯಾಃ ಶಯಾನಾಯಾಃ ಸಮ್ಯಕ್ ಸಂಕೋಚ್ಯ ಸಕ್ಥಿನೀ ।
ಅಧಾಸ್ಯಾಃ ಪ್ರಣಯೇನ್ನೇತ್ರಮನುವಂಶಗತಂ ಸುಖಂ ॥

ಹೆಂಗಸರಿಗೆ ಉತ್ತರ ವಸ್ತಿ ಕೊಡುವ ವಿಧಾನ

ದ್ವಿಸ್ತ್ರಿಶ್ಚತುರ್ವಾ ತಾಂ ಸ್ನೇಹಾನಹೋರಾತ್ರೇಣ ಯೋಜಯೇತ್ ।
ವಸ್ತಿಂ ವಸ್ತಾ ಪ್ರಣೀತೇ ಚ ವಸ್ತಿಶ್ಚಾನಂತರೋ ಭವೇತ್ ॥
ತ್ರಿರಾತ್ರಂ ಕರ್ಮ ಕುರ್ವೀತ ಸ್ನೇಹಮಾತ್ರಾಂ ವಿವರ್ಧಯನ್ ।
ಅನೇನೈವ ವಿಧಾನೇನ ಕರ್ಮ ಕುರ್ಯಾತ್ಪುನಸ್ತ್ರ್ಯಹಾತ್ ॥ (ಚ. 910.)

ಸ್ತ್ರೀಯನ್ನು, ಕಾಲುಗಳನ್ನು ಚೆನ್ನಾಗಿ ಮಡಚಿ ಅಂಗಾತವಾಗಿ ಮಲಗಿಸಿ, ವಸ್ತಿಯ ನಳಿಗೆಯನ್ನು ಬೆನ್ನ ಕೋಲಿಗನುಸರಿಸಿ ಸುಖವಾಗಿ ನಡಿಸತಕ್ಕದ್ದು. ಹೀಗೆ, ಹೆಂಗಸಿಗೆ ಎರಡು, ಮೂರು, ಅಥವಾ ನಾಲ್ಕು ಸರ್ತಿ, ಸ್ನೇಹಗಳನ್ನು ಒಂದು ಅಹೋರಾತ್ರಿ ಕಾಲದೊಳಗೆ ಕೊಡ ಬಹುದು. ವಸ್ತಿಯನ್ನು ಮೂತ್ರಮಾರ್ಗವಾಗಿ ಕಳುಹಿಸುವದಾದರೆ, ವಸ್ತಿಯನ್ನು ಒಂದರ ನಂತರ ಒಂದಾಗಿ ಕೊಡುವದಾಗಿರುತ್ತದೆ. ಸ್ನೇಹದ ಪ್ರಮಾಣವನ್ನು ಏರಿಸಿಕೊಂಡು ಮೂರು ದಿನ ಬಿಡದೆ ವಸ್ತಿಕರ್ಮ ನಡಿಸಿ, ಅನಂತರ ಮೂರು ದಿನ ಬಿಟ್ಟು, ಪುನಃ ಅದೇ ವಿಧದಿಂದ ವಸ್ತಿಕರ್ಮ ನಡಿಸತಕ್ಕದ್ದು.

ಪರಾ ರೋಗಿಯು ಕಾಲ ಮೊಣಗಂಟುಗಳನ್ನು ಮೇಲಕ್ಕೆ ಮಾಡಿಕೊಂಡು ಮಲಗಬೇಕು ಮತ್ತು ಗರ್ಭಾಶಯದ ವಿಶುದ್ಧಿಗಾದರೆ ಸ್ನೇಹವನ್ನು ದ್ವಿಗುಣಮಾಡಿಕೊಳ್ಳಬೇಕು (ಸು 576)

43. ಶರ್ಕರಾಮಧುಮಿಶ್ರೇಣ ಶೀತೇನ ಮಧುಕಾಂಬುನಾ ।
ವಸ್ತಿಯಿಂದುಂಟಾದ ಉರಿಗೆ ಪರಿಹಾರ. ದಹ್ಯಮಾನೇ ತದಾ ವಸ್ತೌ ದದ್ಯಾದ್ವಸ್ತಿಂ ವಿಚಕ್ಷಣಃ ॥
ಕ್ಷೀರವೃಕ್ಷಕಷಾಯೇಣ ಪಯಸಾ ಶೀತಲೇನ ಚ । (ಸು. 577.)

ವಸ್ತಿಪ್ರದಾನದ ದೋಷ ಮುಂತಾದ್ದರಿಂದ ಮೂತ್ರಾಶಯದಲ್ಲಿ ಉರಿ ಕಾಣುವದಾದರೆ, ಬುದ್ಧಿವಂತನು ಜೇಷ್ಠಮಧುವಿನ ಕಷಾಯವನ್ನಾಗಲಿ, ಹಾಲುಮರದ ಕಷಾಯವನ್ನಾಗಲಿ, ಹಾಲನ್ನಾಗಲಿ, ತಣಿಸಿ ಜೇನು ಮತ್ತು ಸಕ್ಕರೆ ಕೂಡಿಸಿಕೊಂಡು, ವಸ್ತಿಮೂಲಕ ಕೊಡಬೇಕು.

44. ಸಮ್ಯಗ್ದತ್ತಸ್ಯ ಲಿಂಗಾನಿ ವ್ಯಾಪದಃ ಕ್ರಮ ಏವ ಚ ।
ಉತ್ತರವಸ್ತಿ ಸರಿಯಾದ್ದರ ಲಕ್ಷಣ ಮುಂತಾದ್ದು. ವಸ್ತೇರುತ್ತರಸಂಜ್ಞಸ್ಯ ಸಮಾನಂ ಸ್ನೇಹವಸ್ತಿನಾ ॥
(ಸು. 577.)

ಉತ್ತರವಸ್ತಿಯನ್ನು ಕೊಟ್ಟದ್ದು ಸರಿಯಾದ್ದರ ಲಕ್ಷಣಗಳು, ವ್ಯತ್ಯಾಸವಾದ್ದರಿಂದ ಉಂಟಾಗುವ ಉಪದ್ರವಗಳು ಮತ್ತು ಅವುಗಳನ್ನು ಪರಿಹರಿಸುವ ಕ್ರಮ ಸ್ನೇಹವಸ್ತಿಗೆ ಸಮಾನವಾಗಿರುತ್ತವೆ.

45. ಸ್ನೇಹಪೀತಸ್ಯ ವಾಂತಸ್ಯ ವಿರಿಕ್ತಸ್ಯ ಸ್ರುತಾಸೃಜಃ ।
ನಿರೂಢಸ್ಯ ಚ ಕಾಯಾಗ್ನಿರ್ಮಂದೋ ಭವತಿ ದೇಹಿನಃ ॥
ಶೋಧನಾದಿಗಳಲ್ಲಿ ಆಲ್ಪಾಹಾರದ ಪ್ರಶಸ್ತತೆ ಸೋಽನ್ನೈರತ್ಯರ್ಧಗುರುಭಿರುಪಯುಕ್ತೈಃ ಪ್ರಶಾಮ್ಯತಿ ।
ಆಲ್ಪೋ ಮಹದ್ಭಿರ್ಬಹುಭಿಶ್ಚಾದಿತೋಽಗ್ನಿರಿವೇಂಧನೈಃ ॥
ಸ ಚಾಲ್ಪೈರ್ಲಘುಭಿಶ್ಚಾನ್ನೈರುಪಯುಕ್ತೈರ್ವಿವರ್ಧತೇ ।

ಕಾಷ್ಯೈರಣುಭಿರಲ್ಪೈಶ್ಚ ಸಂಧುಕ್ಷಿತ ಇವಾನಲಃ ||
ಹೃತದೋಷಪ್ರಮಾಣೇನ ಸದಾಹಾರವಿಧಿಃ ಸ್ಮೃತಃ | (ಸು. 588.)

ಸ್ನೇಹವನ್ನು ಕುಡಿದವನ, ವಾಂತಿ ಮಾಡಿಸಿಕೊಂಡವನ, ವಿರೇಚನ ಮಾಡಿಸಿಕೊಂಡವನ, ರಕ್ತ ತೆಗಿಸಿಕೊಂಡವನ ಮತ್ತು ನಿರೂಹಣ ಮಾಡಿಸಿಕೊಂಡವನ ಕಾಯಾಗ್ನಿಯು ಮಂದ ವಾಗಿರುತ್ತದೆ. ಅಲ್ಪವಾದ ಅಗ್ನಿಯು ದೊಡ್ಡವುಗಳಾದ ಹೆಚ್ಚು ಕಟ್ಟಿಗೆಗಳಿಂದ ಮುಚ್ಚಲ್ಪಟ್ಟರೆ ಹ್ಯಾಗೋ, ಹಾಗೆ ಗುರುವಾದ ಆಹಾರವನ್ನು ಅತಿಯಾಗಿ ಸೇವಿಸುವದರಿಂದ ಕಾಯಾಗ್ನಿಯು ಶಾಂತವಾಗುತ್ತದೆ; ಮತ್ತು ಚೂರುಮಾಡಲ್ಪಟ್ಟ ಅಲ್ಪವಾದ ಕಟ್ಟಿಗೆಗಳನ್ನು ಹಾಕಿ ಊದಿದ ಬೆಂಕಿಯಂತೆ, ಲಘುವಾದ ಮತ್ತು ಅಲ್ಪವಾದ ಆಹಾರಗಳನ್ನು ಉಪಯೋಗಿಸುವದರಿಂದ ಕಾಯಾಗ್ನಿಯು ವೃದ್ಧಿಯಾಗುತ್ತದೆ. ಆದ್ದರಿಂದ ಆಹಾರವಿಧಿಯು ಯಾವಾಗಲೂ ತೆಗೆದಂಥ ದೋಷಗಳ ಪ್ರಮಾಣಕ್ಕೆ ಅನುಸರಿಸಿರತಕ್ಕದ್ದಾಗಿ ಹೇಳಲ್ಪಟ್ಟಿದೆ.

46. ನಾತ್ಯುಚ್ಛ್ರಿತಂ ನಾಸ್ಯತಿನೀಚಪಾದಂ ಸಪಾದಪೀಠಂ ಶಯನಂ ಪ್ರಶಸ್ತಂ |
ವಸ್ತಿಕಾಲದ ಪ್ರಶಸ್ತ ಶಯನ ಲಕ್ಷಣ
ಪ್ರಧಾನಮೃದ್ವಾಸ್ತರಣೋಪಪನ್ನಂ ಪ್ರಾಕ್ ಶೀರ್ಷಕಂ ಶುಕ್ಲಪಟೋತ್ತರೀಯಂ ||
(ಚ. 878.)

ನಿರೂಹ ತೆಗೆದುಕೊಳ್ಳುವವರಿಗೆ ಅತಿಎತ್ತರವಲ್ಲದ, ಅತಿತಗ್ಗಲ್ಲದ ಮತ್ತು ಪಾದಪೀಠ ಗಳುಳ್ಳ ಮಂಚವು ಪ್ರಶಸ್ತ, ಮೇಲೆ ಹಾಸುವ ವಸ್ತ್ರವು ದಪ್ಪವಾಗಿಯೂ ಮೃದುವಾಗಿಯೂ ಇರಬೇಕು; ಹೊದ್ದುಕೊಳ್ಳುವರೆ ಬಿಳೇ ವಸ್ತ್ರವಿರಬೇಕು; ಮತ್ತು ತಲೆಭಾಗವು ಪೂರ್ವಕ್ಕಿರ ಬೇಕು.

47. ನತ್ವಾಮಂ ಪ್ರಣಯೇತ್ಸ್ನೇಹಂ ನ ಹ್ಯಭಿಷ್ಯಂದಯೇದ್ಗುದಂ |
ಹಸಿ ಸ್ನೇಹ ಅನುವಾಸನೆಗೆ ಅಯುಕ್ತ.
ಸಾವಶೇಷಂ ಚ ಕುರ್ವೀತ ವಾಯುಃ ಶೇಷೇ ಹಿ ತಿಷ್ಠತಿ ||
ನ ಚೈವ ಗುದಕಂರಾಭ್ಯಾಂ ದದ್ಯಾತ್ಸ್ನೇಹಮನಂತರಂ |
ಉಭಯಸ್ಮಾತ್ಸಮಂ ಗಚ್ಛನ್ ವಾಯ್ವಗ್ನೀನ್ ದೂಷಯೇತ್ಸಮಂ || (ಚ. 884.)

ವಸ್ತಿಗೆ ಯಾವ ಸ್ನೇಹವನ್ನಾದರೂ ಹಸಿಯಾಗಿ ಉಪಯೋಗಿಸಬಾರದು. ಅದು ಆಸನ ದಲ್ಲಿ ತಡೆಯನ್ನುಂಟುಮಾಡುವದು ಮತ್ತು ವಾಯುವು ಅಂಧಾ ಸ್ನೇಹದ ಅಂಶವನ್ನು ಒಳಗೆ ಉಳಿಸುವದು. ಹಾಗೆ ಶೇಷ ಉಳಿದಾಗ್ಗೆ, ಗುದದಿಂದಲೂ, ಕಂರದಿಂದಲೂ ಪುನಃ ಸ್ನೇಹವನ್ನು ಕೊಡಲೇ ಬಾರದು. ಎರಡು ಕಡೆಗಳಿಂದಲೂ ಸಮನಾಗಿ ಹೋಗಿ ಸೇರುವ ಸ್ನೇಹವು ವಾಯುಗಳನ್ನೂ ಅಗ್ನಿಗಳನ್ನೂ ಪೂರ್ಣವಾಗಿ ಕೆಡಿಸುವದು.

48. ಷಟ್‌ಸಪ್ತತಿಃ ಸಮಾಸೇನ ವ್ಯಾಪದಃ ಪರಿಕೀರ್ತಿತಾಃ |
ವಸ್ತಿದೋಷಗಳ ಸಂಖ್ಯೆ
(ಸು. 563.)

ವಸ್ತಿವಿಧಾನದಲ್ಲಿ ವ್ಯತ್ಯಾಸವಾಗುವದರಿಂದ ಎಪ್ಪತ್ತಾರು ಉಪದ್ರವಗಳು ಸಂಭವಿಸು ತ್ತವೆ.

49. ತತ್ರ ನೇತ್ರಂ ಜಲಿತಂ ವಿವರ್ತಿತಂ ಪಾರ್ಶ್ವಾವಪೀಡಿತಮತ್ಯುತ್ಕ್ಷಿಪ್ತ
ನಳಿಗೆ ನಡಿಸುವ ದೋಷಗಳು ಮವಸನ್ನಂ ತಿರ್ಯಕ್‌ಕ್ಷಿಪ್ತಮಿತಿ ಷಟ್ಪ್ರಣಿಧಾನದೋಷಾಃ | (ಸು. 562.)

ನಳಿಗೆಯನ್ನು ಅಲ್ಲಾಡಿಸಿದ್ದು, ತಿರುಗಿಸಿದ್ದು, ಪಾರ್ಶ್ವಕ್ಕೆ ಒತ್ತಿದ್ದು, ಅತಿಯಾಗಿ ಮೇಲಕ್ಕೆ ದೂಡಿದ್ದು, ಕೆಳಗೆ ಮಾಡಿ ಕಳುಹಿಸಿದ್ದು, ಅಡ್ಡವಾಗಿ ದೂಡಿದ್ದು, ಎಂಬವು ಆರು ವಸ್ತಿನಳಿಗೆಯನ್ನು ನಡಿಸುವ ದೋಷಗಳು.

50. ಅತಿಸ್ಥೂಲಂ ಕರ್ಕಶಮವನತಮಣು ಭಿನ್ನಂ ಸನ್ನಿಕೃಷ್ಟವಿಪ್ರಕೃಷ್ಟಕರ್ಣಿ
ನಳಿಗೆಯ ದೋಷಗಳು ಕಂ ಸೂಕ್ಷ್ಮಾತಿಛಿದ್ರಮತಿದೀರ್ಘಮತಿಹ್ರಸ್ವಮಿತ್ಯೇಕಾದಶ ನೇತ್ರದೋಷಾಃ | (ಸು. 562.)

ನಳಿಗೆಯು ಅತಿತೋರ, ದರಗು, ಬೊಗ್ಗಿದ್ದು, ಸವೂರ, ಅಥವಾ ಒಡಕುಳ್ಳದ್ದಾಗಿರುವದು, ಅದರ ಕಿವಿಯು ಯುಕ್ತಸ್ಥಾನಕ್ಕೆ ಸವಿಾಪದಲ್ಲಿ ಅಥವಾ ದೂರದಲ್ಲಿರುವದು, ಅದರ ತೂತು ಅತಿಸೂಕ್ಷ್ಮ, ಅಥವಾ ಅತಿದೊಡ್ಡದಾಗಿರುವದು, ಮತ್ತು ನಳಿಗೆಯು ಅತಿಉದ್ದ ಅಥವಾ ಅತಿಗಿಡ್ಡ ಆಗಿರುವದು, ಇವು ಹನ್ನೊಂದು ವಸ್ತಿನಳಿಗೆಯ ದೋಷಗಳು.

51. ಬಹಲತಾಲ್ಪತಾ ಸಛಿದ್ರತಾ ಪ್ರಸ್ತೀರ್ಣತಾ ದುರ್ಬದ್ಧತೇತಿ ಪಂಚ ವಸ್ತಿ
ವಸ್ತಿಚೀಲದ ದೋಷಗಳು ದೋಷಾಃ | (ಸು. 562)

ವಸ್ತಿಯು ದೊಡ್ಡದಾಗಿರುವದು (ಅಥವಾ ಮಾಂಸಯುಕ್ತವಾಗಿ ಗಟ್ಟಿಯಾಗಿರುವದು), ಚಿಕ್ಕದಾಗಿರುವದು, ರಂಧ್ರಯುಕ್ತವಾಗಿರುವದು, ಬಹಳ ವಿಶಾಲವಾಗಿರುವದು, ಸರಿಯಾಗಿ ಕಟ್ಟಲ್ಪಡದಿರುವದು, ಇವು ಐದು ವಸ್ತಿ(ಚೀಲದ)ದೋಷಗಳು.

52. ಅತಿಪೀಡಿತತಾ ಶಿಥಿಲಪೀಡಿತತಾ ಭೂಯೋ ಭೂಯೋಽವಪೀಡನಂ
ವಸ್ತಿ ಹಿಂಡುವ ದೋಷಗಳು ಕಾಲಾತಿಕ್ರಮ ಇತಿ ಚತ್ವಾರಃ ಪೀಡನದೋಷಾಃ | (ಸು. 562.)

ಅತಿಯಾಗಿ ಹಿಂಡಿದ್ದು, ಸಡಿಲಾಗಿ ಹಿಂಡಿದ್ದು, ಪದೇಪದೇ ಹಿಂಡುವದು, ಕಾಲ ನಿಯಮ ತಪ್ಪುವದು, ಇವು ನಾಲ್ಕು ವಸ್ತಿಯನ್ನು ಹಿಂಡುವಲ್ಲಿ ದೋಷಗಳು.

53. ಅಮತಾ ಹೀನತಾತಿಮಾತ್ರತಾಽತಿಶೀತತಾತ್ಯುಷ್ಣತಾತಿತೀಕ್ಷ್ಣತಾತಿಮೃ
ದ್ರವ್ಯದೋಷ ಗಳು ದುತಾತಿಸ್ನಿಗ್ಧತಾತಿರೂಕ್ಷತಾತಿಸಾಂದ್ರತಾತಿದ್ರವತೇತ್ಯೇಕಾದಶ ದ್ರವ್ಯ ದೋಷಾಃ | (ಸು. 562.)

(ಸ್ನೇಹವು) ಹಸಿಯಾಗಿರುವದು, ಪ್ರಮಾಣದಲ್ಲಿ ಹೀನವಾಗಿರುವದು, ಪ್ರಮಾಣದಲ್ಲಿ ಅತಿಯಾಗಿರುವದು, ಅತಿಶೀತವಾಗಿರುವದು, ಅತ್ಯುಷ್ಣವಾಗಿರುವದು, ಅತಿತೀಕ್ಷ್ಣವಾಗಿರುವದು, ಅತಿಮೃದುವಾಗಿರುವದು, ಅತಿಸ್ನಿಗ್ಧವಾಗಿರುವದು, ಅತಿರೂಕ್ಷವಾಗಿರುವದು, ಅತಿದಪ್ಪವಾಗಿರುವದು, ಅತಿತೆಳ್ಳಗಾಗಿರುವದು, ಇವು ಹನ್ನೊಂದು ದ್ರವ್ಯದೋಷಗಳು.

54. ಅವಾಕ್‌ಶೀರ್ಷೋಚ್ಛೀರ್ಷನ್ಯುಬ್ಜೋತ್ತಾನಸಂಕುಚಿತದೇಹಸ್ಥಿತತಾ ದ
ದೋಷಕರವಾದ ಮಲಗುವಿಕೆ ಕ್ಷಿಣಪಾರ್ಶ್ವಶಾಯಿನಃ ಪ್ರದಾನಮಿತಿ ಸಪ್ತ ಶಯ್ಯಾದೋಷಾಃ | (ಸು. 562.)

ತಲೆ ಕೆಳಗಾಗಿರುವದು, ತಲೆ ಎತ್ತರವಾಗಿರುವದು, ದೇಹವನ್ನು ಎದುರಿಗೆ ಬೊಗ್ಗಿಸಿರುವದು, ದೇಹ ಅಂಗಾತವಾಗಿರುವದು, ದೇಹವನ್ನು ಮುದುರಿಸಿರುವದು, ಕೂತಿರುವದು, ಬಲಮಗ್ಗಲಲ್ಲಿ ಮಲಗಿರುವಾಗ ವಸ್ತಿ ಕೊಡುವದು, ಇವು ಏಳು ಹಾಸಿಗೆಯ (ಮಲಗುವ) ದೋಷಗಳು.

55. ಏವಮೇತಾಶ್ಚತ್ವಾರಿಂಶದ್ವ್ಯಾಪದೋ ವೈದ್ಯನಿಮಿತ್ತಾಃ |
ವೈದ್ಯನಿಮಿತ್ತವಾದ ದೋಷಗಳ ಸಂಖ್ಯೆ (ಸು. 562.)

* * * * * * * * ಹೀಗೆ ಇವು ನಾಲ್ವತ್ತನಾಲ್ಕು ಉಪದ್ರವಗಳು ವೈದ್ಯನಿಮಿತ್ತವಾಗಿ ಉಂಟಾಗತಕ್ಕವು

56. ಸ್ನೇಹಸ್ತ್ವಷ್ಟಾಭಿಃ ಕಾರಣೈಃ ಪ್ರತಿಹತೋ ನ ಪ್ರತ್ಯಾಗಚ್ಛತಿ ತ್ರಿಭಿರ್ದೋ
ಸ್ನೇಹವನ್ನು ತಡೆಯತಕ್ಕ ವೈದ್ಯಾತುರ ದೋಷಗಳು ಷೈರಶನಾಭಿಭೂತೋ ಮಲವ್ಯಾಮಿಶ್ರೋ ದೂರಾನುಪ್ರವಿಷ್ಟೋಽಸ್ನಿಗ್ಧ
ಸ್ಯಾನುಷ್ಣೋಽಲ್ಪೋಽಭುಕ್ತವತೋಽಲ್ಪಾಶನಸ್ಯ ಚೇತಿ ವೈದ್ಯಾತುರ
ನಿಮಿತ್ತಾ ಭವಂತಿ | (ಸು. 562.)

ಕಳುಹಿಸಿದಂಥ ಸ್ನೇಹವು ಎಂಟು ಕಾರಣಗಳಿಂದ ತ್ರಿದೋಷಗಳಿಂದ ತಡೆಯಲ್ಪಟ್ಟು ಹಿಂತಿರುಗಿ ಬಾರದೆ ಇರುತ್ತದೆ; ಯಾವವೆಂದರೆ. — ಆಹಾರದ ವಶವಾಗುವದರಿಂದ, ಮಲದೊಂದಿಗೆ ಬೆರಸಿಹೋಗುವದರಿಂದ, ದೂರದ ವರೆಗೆ ಪ್ರವೇಶವಾಗುವದರಿಂದ, ರೋಗಿಯು ಸ್ನಿಗ್ಧವಾಗದಿರುವದರಿಂದ, ಸ್ನೇಹವು ಬಿಸಿಯಿಲ್ಲದಿರುವದರಿಂದ, ಅಲ್ಪವಾದ್ದರಿಂದ, ರೋಗಿಯು ಉಣ್ಣದಿರುವದರಿಂದ, ಉಂಡದ್ದು ಕಡಿಮೆಯಾದ್ದರಿಂದ, ಹೀಗೆ ಎಂಟು. ಇವು ವೈದ್ಯ ಮತ್ತು ಆತುರರಿಬ್ಬರ ನಿಮಿತ್ತದಿಂದ ಉಂಟಾಗುವಂಥವು.

57. ಅಯೋಗಸ್ತ್ವುಭಯೋರಾಧ್ಮಾನಂ ಪರಿಕರ್ತಿಕಾ ಪರಿಸ್ರಾವಃ ಪ್ರವಾಹಿ
ವೈದ್ಯನಿಮಿತ್ತವಾದ ದೋಷಗಳು ಕಾ ಹೃದಯೋಪಸರಣಮಂಗಪ್ರಗ್ರಹೋಽತಿಯೋಗೋ ಜೀವಾದಾನ
ಮಿತಿ ನವ ವ್ಯಾಪದೋ ವೈದ್ಯನಿಮಿತ್ತಾ ಭವಂತಿ | (ಸು. 562.)

ನಿರೂಹಾನುವಾಸನಗಳ ಅಯೋಗ (ಅಲ್ಪವಾಗಿರುವದು ಅಥವಾ ಅಲ್ಪಗುಣವುಳ್ಳದ್ದಾಗಿರುವದು), ಆಧ್ಮಾನ, ಪರಿಕರ್ತಿಕಾ, ಪರಿಸ್ರಾವ, ಪ್ರವಾಹಿಕಾ, ಹೃದಯೋಪಸರಣ, ಅಂಗ ಹಿಡಕೊಳ್ಳುವದು, ಅತಿಯೋಗ, ಜೀವಾದಾನ, ಇವು ಒಂಭತ್ತು ಸಂಕಷ್ಟಗಳು ವೈದ್ಯನಿಮಿತ್ತ ಉಂಟಾಗತಕ್ಕವು.

ಷರಾ ವಮನವಿರೇಚನ ಅಧ್ಯಾಯದಲ್ಲಿ ಶೋಧನಸಂಬಂಧವಾದ ದೋಷಗಳ ವಿವರಣ ನೋಡಿರಿ

58. ಆತುರನಿಮಿತ್ತಾಃ ಪಂಚದಶ ಆತುರೋಪದ್ರವಚಿಕಿತ್ಸಿತೇ ವಕ್ಷ್ಯಂತೇ |
ರೋಗಿನಿಮಿತ್ತವಾದ ದೋಷಗಳು. (ಸು. 562.)

ರೋಗಿನಿಮಿತ್ತವಾದವು ಹದಿನೈದು ದೋಷಗಳು. ಇವುಗಳನ್ನು ಆತುರೋಪದ್ರವಚಿಕಿತ್ಸೆ ಎಂಬ ಅಧ್ಯಾಯದಲ್ಲಿ ವಿವರಿಸೋಣಾಗುವದು.

ಹರಾ ಚರಕಸಂಹಿತೆಯಲ್ಲಿ ರೋಗಿಯು 1 ಗಟ್ಟಿಯಾಗಿ ಮಾತಾಡೋಣ, 2 ರಥದ (ಯಾನದ) ನಡುಕು, 3 ಅತಿಯಾಗಿ ನಡೆದಾಡುವದು, 4 ಅತಿಯಾಗಿ ಕೂತಲ್ಲೇ ಕೂತುಕೊಳ್ಳುವದು, 5 ಅಜೀರ್ಣಭೋಜನ, 6 ಅಹಿತ ಭೋಜನ, 7 ಹಗಲು ನಿದ್ರೆ, 8 ಮೈಥುನ, ಇವುಗಳನ್ನು ಮಹಾ ದೋಷಕರವಾದ್ದರಿಂದ ಮುಖ್ಯವಾಗಿ ಬಿಡಬೇಕಾಗಿ ಹೇಳಿಯದೆ ಸುಶ್ರುತದಲ್ಲಿ ಇವು ಎಂಟು, 9 ಸ್ನಾನ, 10 ಆಯಾಸ, 11 ಶೋಕ, 12 ಕ್ರೋಧ, 13 ಗಾಳಿ, 14 ಬಿಸಿಲು ಮತ್ತು 15 ಶೀತವಾದ ಅನ್ನಪಾನ, ಇವು ಏಳು ಸಹ ಸೇರಿ ಹದಿನೈದು ದೋಷಕರವಾಗಿ ವಿವರಿಸಲ್ಪಟ್ಟವೆ

59. ಸರ್ವಕ್ಷಮೋ ನಿರಾಸಂಗೋ ರತಿಯುಕ್ತಃ ಸ್ಥಿರೇಂದ್ರಿಯಃ ।
ವಸ್ತಿಸೇವನೆಯಲ್ಲ ಬಲವಾನ್ ಸತ್ವಸಂಪನ್ನೋ ವಿಜ್ಞೇಯಃ ಪ್ರಕೃತಿಂ ಗತಃ ॥
ಪಥ್ಯಕಾಲಾವಧಿ. ಏತಾಂ ಪ್ರಕೃತಿಮಪ್ರಾಪ್ತಃ ಸರ್ವವಜ್ರ್ಯಾನಿ ವರ್ಜಯೇತ್ । (ಚ. 921.)

ರೋಗಿಯು ಸರ್ವವನ್ನು ಸಹಿಸ ಶಕ್ತನೂ, ಆಸಂಗ (ಹಿಡಿದಿರುವದು) ಇಲ್ಲದವನೂ, ರತಿ (ಹರ್ಷ) ಯುಕ್ತನೂ, ದೃಢೇಂದ್ರಿಯನೂ, ಬಲವಂತನೂ, ಸತ್ವಸಂಪನ್ನನೂ, ಆದಾಗ ಸ್ವಸ್ಥನಾದನೆಂದು ತಿಳಿಯಬೇಕು. ಹೀಗೆ ಸ್ವಸ್ಥನಾಗುವ ಪರ್ಯಂತ ಅವನು ಅಪಥ್ಯವಾದಂಥವು (ಪಾನಾಹಾರವಿಹಾರಾದಿ)ಗಳನ್ನೆಲ್ಲಾ ಬಿಟ್ಟಿರಬೇಕು.

60. ನ ಬೃಂಹಣೀತಾನ್ ವಿದಧೀತ ವಸ್ತೀನ್
ವಿಶೋಧನೀಯೇಷು ಗದೇಷು ವೈದ್ಯಃ ।
ಕುಷ್ಠಪ್ರಮೇಹಾದಿಷು ಮೇದುರೇಷು
ಬೃಂಹಣಕ್ಕೂ ಶೋಧನಕ್ಕೂ ಯೋಗ್ಯರಲ್ಲದವರು ನರೇಷು ಯೇ ಚಾಪಿ ವಿಶೋಧನೀಯಾಃ ॥
ಕ್ಷೀಣಕ್ಷತಾನಾಂ ನ ವಿಶೋಧನೀಯಾನ್
ನ ಶೋಷಿಣಾಂ ನೋ ಭೃಶದುರ್ಬಲಾನಾಂ ।
ನ ಮೂರ್ಛಿತಾನಾಂ ಚ ನ ಶೋಧಿತಾನಾಂ
ಯೇಷಾಂ ಚ ದೋಷೇಷು ನಿಬದ್ಧವಾಯುಃ ॥ (ಚ. 867.)

ಯಾವ ರೋಗಗಳಲ್ಲಿ ವಿಶೇಷವಾದ ಶೋಧನಗಳು ವಿಧಿಸಲ್ಪಟ್ಟವೋ, ಅಂಥಾ ಕುಷ್ಠ ಪ್ರಮೇಹಾದಿ ರೋಗಗಳಲ್ಲಿ, ಅತಿಸ್ನಿಗ್ಧರಾದ ಜನರಿಗೆ, ಮತ್ತು ಯಾರಿಗೆ ವಿಶೋಧನಗಳು ಹೇಳಲ್ಪಟ್ಟವೋ ಅಂಥವರಿಗೆ, ಬೃಂಹಣಕರವಾದ ವಸ್ತಿಗಳನ್ನು ವೈದ್ಯನು ವಿಧಿಸಬಾರದು. ಕ್ಷೀಣರಿಗೂ, ಕ್ಷತರಿಗೂ, ರಾಜಯಕ್ಷ್ಮರೋಗದವರಿಗೂ, ಬಹಳ ದುರ್ಬಲರಾದವರಿಗೂ, ಮೂರ್ಚ್ಛೆಹೊಂದಿದವರಿಗೂ, ಮೊದಲೇ ಶೋಧನಮಾಡಿಕೊಂಡವರಿಗೂ ಮತ್ತು ಯಾರ ದೋಷಗಳಲ್ಲಿ ವಾಯು ಸಿಕ್ಕಿಕೊಂಡದೋ ಅಂಥವರಿಗೆ, ಶೋಧನಕರವಾದ ವಸ್ತಿಗಳನ್ನು ವಿಧಿಸಬಾರದು.

61. ಶಾಖಾಗತಾಃ ಕೋಷ್ಠಗತಾಶ್ಚ ರೋಗಾ
ಮರ್ಮೋರ್ಧ್ವಸರ್ವಾವಯವಾಂಗಜಾಶ್ಚ ।
ಯೇ ಸಂತಿ ತೇಷಾಂ ನ ತು ಕಶ್ಚಿದನ್ಯೋ

ವಾಯೋಃ ಪರಂ ಜನ್ಮನಿ ಹೇತುರಸ್ತಿ ||
ವಿಣ್ಮೂತ್ರಪಿತ್ತಾದಿಮಲಾಶಯಾನಾಂ
ವಿಕ್ಷೇಪಸಂಹಾರಕರಃ ಸ ಯಸ್ಮಾತ್ |
ವಸ್ತಿಪ್ರಶಂಸೆ ತಸ್ಯಾತಿವೃದ್ಧಸ್ಯ ಶಮಾಯ ನಾನ್ಯದ್
ವಸ್ತೇರ್ವಿನಾ ಭೇಷಜಮಸ್ತಿ ಕಿಂಚಿತ್ ||
ತಸ್ಮಾಚ್ಚಿಕಿತ್ಸಾರ್ಧಮಿತಿ ಬ್ರುವಂತಿ
ಸರ್ವಾಂ ಚಿಕಿತ್ಸಾಮಪಿ ವಸ್ತಿಮೇಕೇ | (ಚ. 867-68.)

ಶಾಖೆಗಳನ್ನು ಅವಲಂಬಿಸಿರುವ, ಹೊಟ್ಟೆಯೊಳಗಿನ, ಮರ್ಮಗಳಲ್ಲಿ, ಊರ್ಧ್ವಭಾಗದಲ್ಲಿ, ಸರ್ವ ಅವಯವಗಳಲ್ಲಿ, ಅಥವಾ ಇಡೀ ಶರೀರದಲ್ಲಿ, ಹುಟ್ಟಿದ ರೋಗಗಳು ಯಾವವು ಇರುತ್ತವೋ, ಅವುಗಳ ಜನ್ಮಕ್ಕೆ ವಾಯು ವಿನಾ ಬೇರೆಯಾದ ಕಾರಣ ಮುಖ್ಯ ಯಾವದೂ ಇರುವದಿಲ್ಲ. ಹೇಲು, ಮೂತ್ರ, ಪಿತ್ತ, ಮೊದಲಾದ ಮಲಾಶಯಗಳ ಕೆಲಸಗಳನ್ನು ಸರಿಯಾಗಿ ನಡಿಸುವದು ಮತ್ತು ನಿಲ್ಲಿಸುವದು ಆ ವಾಯುವೇ ಆಗಿರುವದರಿಂದಲೂ, ಅಂಥಾ ವಾಯುವಿನ ಅತಿವೃದ್ಧಿಯನ್ನು ಶಮನಮಾಡುವದಕ್ಕೆ ವಸ್ತಿವಿನಾ ಬೇರೆ ಯಾವ ಔಷಧವೂ ಇಲ್ಲದಿರುವದರಿಂದಲೂ, ವಸ್ತಿಯು ಚಿಕಿತ್ಸೆಯ ಅರ್ಧ ಎಂತ ಹೇಳುತ್ತಾರೆ. ಕೆಲವರು ವಸ್ತಿಯೇ ಸರ್ವ ಚಿಕಿತ್ಸೆಯೆಂತ ಹೇಳುವವರಿದ್ದಾರ.

62. ನೃಪಾಣಾಂ ತತ್ಸಮಾನಾನಾಂ ತಥಾ ಸುಮಹತಾಮಪಿ |
ನಾರೀಣಾಂ ಸುಕುಮಾರಾಣಾಂ ಶಿಶುಸ್ಥವಿರಯೋರಪಿ ||
ದೋಷನಿರ್ಹರಣಾರ್ಥಾಯ ಬಲವರ್ಣೋದಯಾಯ ಚ |
ಸಮಾಸೇನೋಪದೇಕ್ಷ್ಯಾಮಿ ವಿಧಾನಂ ಮಾಧುತೈಲಿಕಂ ||
ಯಾನಸ್ತ್ರೀಭೋಜ್ಯಪಾನೇಷು ನಿಯಮಶ್ಚಾತ್ರ ನೋಚ್ಯತೇ |
ಫಲಂ ಚ ವಿಪುಲಂ ದೃಷ್ಟಂ ವ್ಯಾಪದಾಂ ಚಾಪ್ಯಸಂಭವಃ ||
ಮಾಧುತೈಲಿಕ ಯೋಗ ಮತ್ತು ಅದರ ಗುಣ ಯೋಜ್ಯಸ್ತ್ವತಃ ಸುಖೇನೈವ ನಿರೂಹಕ್ರಮಮಿಚ್ಛತಾ |
ಯದೇಚ್ಛತಿ ತದೈವೈಷ ಪ್ರಯೋಕ್ತವ್ಯೋ ವಿಪಶ್ಚಿತಾ ||
ಮಧುತೈಲೇ ಸಮೇ ಸ್ಯಾತಾಂ ಕ್ವಾಥಶ್ಚೈರಂಡಮೂಲಜಃ |
ಪಲಾರ್ಧಂ ಶತಪುಷ್ಪಾಯಾಸ್ತತೋಽರ್ಧಂ ಸೈಂಧವಸ್ಯ ಚ ||
ಫಲೇನೈಕೇನ ಸಂಯುಕ್ತಃ ಖಜೇನ ಚ ವಿಲೋಡಿತಃ |
ದೇಯಃ ಸುಖೋಷ್ಣೋ ಭಿಷಜಾ ಮಾಧುತೈಲಿಕಸಂಜ್ಞಿತಃ || (ಸು. 586.)

ಅರಸುಗಳಿಗೂ, ಅವರಿಗೆ ಸಮಾನರಾದ ಬೇರೆ ಮಹಾನುಭಾವರಿಗೂ, ಸ್ತ್ರೀಯರಿಗೂ, ನೂತನ ಶರೀರದವರಿಗೂ, ಶಿಶುಗಳಿಗೂ, ವೃದ್ಧರಿಗೂ, ದೋಷಗಳನ್ನು ಹೊರಗೆ ತೆಗೆದುಬಿಟ್ಟು, ಬಲ ಮತ್ತು ವರ್ಣ ಉಂಟುಮಾಡುವದಕ್ಕೆ 'ಮಾಧುತೈಲಿಕ' ಎಂಬ ವಿಧಾನವನ್ನು ಸಂಕ್ಷೇಪದಿಂದ ಉಪದೇಶಮಾಡೋಣಾಗುತ್ತದೆ. ಅದನ್ನು ಉಪಯೋಗಿಸಿದಾಗ್ಗೆ, ಯಾನ, ಸ್ತ್ರೀಸಂಭೋಗ, ಅನ್ನಪಾನಗಳಲ್ಲಿ ನಿಯಮವು ಅವಶ್ಯವಿಲ್ಲ. ಅದರ ಮಹತ್ತಾದ ಫಲ ನೋಡಿಯದೆ. ಅದನ್ನು

ಸೇವಿಸಿದನಂತರ ರೋಗಗಳು ಸಂಭವಿಸುವದಿಲ್ಲ. ಆದ್ದರಿಂದ ನಿರೂಹಕ್ರಮವನ್ನಪೇಕ್ಷಿಸು ವವರು ಅದನ್ನು ಸುಖವಾಗಿ ಉಪಯೋಗಿಸಬಹುದು; ಮತ್ತು ಯಾವಾಗ ರೋಗಿಯು ಅಪೇಕ್ಷಿಸುತ್ತಾನೋ, ಆಗಲೇ ವೈದ್ಯನು ಅದನ್ನು ಪ್ರಯೋಗಿಸಬಹುದು. ಜೇನು ಮತ್ತು ತೈಲ ಸರಿಪಾಲು, ಹರಳುಬೇರಿನ ಕಷಾಯ (ಜೇನು ತೈಲಗಳ ಒಟ್ಟು ಮಾನಕ್ಕೆ ಸರಿ ಪಾಲು), ಸತಾಪೆ ಅರ್ಧ ಪಲ, ಸೈಂಧವ ಉಪ್ಪು ಕಾಲುಪಲ, ಮತ್ತು ಒಂದು ಫಲ, ಇವುಗಳನ್ನು ಕೂಡಿಸಿ ಮಂತಿನಿಂದ ಕಡೆದು, ಸುಖೋಷ್ಣವಾಗಿ ವೈದ್ಯನು ಕೊಡತಕ್ಕದ್ದು. ಅದು ಮಾಧು ತೈಲಿಕ ಎಂಬ ಹೆಸರುಳ್ಳದ್ದು.

ಷರಾ ಒಂದು ಫಲ ಎಂಬದು ಮಾಯಿಫಲವೆಂತ ಕಾಣುತ್ತದೆ ನಿ ಸಂ ವ್ಯಾ ಪ್ರಕಾರ ಇದು ಮತ್ತು ಯುಕ್ತ ರಥ, ಸಿದ್ಧವಸ್ತಿ, ದೋಷಹರವಸ್ತಿ, ಪಾಂಚಮೂಲಿಕವಸ್ತಿ, ಈ ಐದು ಮಾಧುತೈಲಿಕ ವಸ್ತಿಗಳಲ್ಲಿ ಜೇನು, ತೈಲ, ಕಷಾಯ ಮುಂತಾದ್ದು ಸೇರಿ 18 ಪಲವಾಗುವ ಹಾಗೆ ತಯಾರಿಸಿ, ಅದಕ್ಕೆ ಮೃದುವಾದ ಮಾಂಸರಸ, ಹುಳಿ ಗಂಜಿ ನೀರು, ಮುಂತಾದ್ದನ್ನು ಸರಿಪಾಲು, ಅಂದರೆ 18 ಪಲ, ಸೇರಿಸತಕ್ಕದ್ದು ಚ ಸಾ ಸಂ ದಲ್ಲಿ 'ಫಲೇನೈಕೇನ' ಎಂಬಲ್ಲಿ 'ಪಲೇನೈಕೇನ' ಎಂತ ಕಾಣುತ್ತದೆ ಆ ಪಾಠ ಸರಿಯಾದರೆ ಯಾವದರ ಒಂದು ಪಲ ಎಂಬದು ಸಂದೇಹಾಸ್ಪದ

63. ವಚಾ ಮಧುಕತೈಲಂ ಚ ಕ್ವಾಥಃ ಸರಸಸೈಂಧವಃ |
ಯುಕ್ತರಥಯೋಗ ಪಿಪ್ಪಲೀಫಲಸಂಯುಕ್ತೋ ವಸ್ತಿರ್ಯುಕ್ತರಥಃ ಸ್ಮೃತಃ ||
(ಸು. 586-87.)

ಬಜೆ, ಜೇನು ಮತ್ತು ತೈಲಕ್ಕೆ ಕಷಾಯ, ರಸ, ಸೈಂಧವಲವಣ, ಹಿಪ್ಪಲಿ ಮತ್ತು ಫಲ ಕೂಡಿಸಿ, ತಯಾರಿಸಿದ ವಸ್ತಿಯು ಯುಕ್ತರಥ ಎನ್ನಿಸಿಕೊಳ್ಳುತ್ತದೆ

ಷರಾ ಇದರಲ್ಲಿ ಕಷಾಯ ಎಂಬದು ಹರಳು ಬೇರಿನದೇ ರಸ ಎಂಬದು ಶಾ ನ ಯೋಗದಲ್ಲಿ ಕಾಣುವವಿಲ್ಲ ಫಲ ಶಬ್ದ ಎಲ್ಲಾ ಪುಸ್ತಕಗಳಲ್ಲಿಯೂ ಉಂಟು ನಿ ಸಂ ವ್ಯಾ ದಲ್ಲಿ ಪಿಪ್ಪಲೀಫಲ ಎಂಬದಕ್ಕೆ ಪಿಪ್ಪಲೀಮೂಲ ಎಂತ ಅರ್ಥ ಬರೆದು, ಬಜೆ, ಸೈಂಧವ, ಹಿಪ್ಪಲೀಮೂಲ ಸಹ ಕಾಲು ಪಲ ಪ್ರಕಾರ, ಮಧುತೈಲಗಳು 8¼ ಪಲ, ಅಷ್ಟೇ ಕಷಾಯ ಸೇರಿಸಬೇಕಾದ್ದೆಂತ ಉಕ್ತವಾಗಿದೆ

64. ಯವಕೋಲಕುಲತ್ಥಾನಾಂ ಕ್ವಾಥೋ ಮಾಗಧಿಕಾ ಮಧು |
ಸಿದ್ಧವಸ್ತಿಯೋಗ ಸಸೈಂಧವಃ ಸಮಧುಕಃ ಸಿದ್ಧವಸ್ತಿರಿತಿ ಸ್ಮೃತಃ ||

ಯವೆಗೋದಿ, ಬೊಗರಿ, ಹುರುಳಿ, ಇವುಗಳ ಕಷಾಯ, ಹಿಪ್ಪಲಿ, ಜ್ಯೇಷ್ಠಮಧು, ಸೈಂಧವಲವಣ, ಜೇನು, ಇವುಗಳಿಂದ ಕೂಡಿದ ವಸ್ತಿಗೆ ಸಿದ್ಧವಸ್ತಿ ಎನ್ನುತ್ತಾರೆ.

ಷರಾ ಈ ಸಿದ್ಧವಸ್ತಿಯ ಯೋಗವು ಬೇರೆ ಎರಡು ವಿಧವಾಗಿ ಎರಡು ಪುಸ್ತಕಗಳಲ್ಲಿ ಕಾಣುತ್ತದೆ. ನಿ ಸಂ ವ್ಯಾ ದ ಪ್ರಕಾರ ಯವಾದಿಗಳ ಕಷಾಯ 8¼ ಪಲ, ಮಧುತೈಲಗಳು ಸೇರಿ 8¼ ಪಲ, ಸೈಂಧವಾದಿಗಳು ಒಂದು ಪಲ, ಸೇರಿಸ ಬೇಕಾದ್ದು ಸುಶ್ರುತದಲ್ಲಿ, ಮಾಧುತೈಲಕ, ಯುಕ್ತರಥ, ದೋಷಹರ, ಪಾಂಚಮೂಲಿಕ, ಸಿದ್ಧ ಮತ್ತು ಮುಸ್ತಾದಿಕ ಎಂಬ ವಸ್ತಿಗಳ ಯೋಗಗಳನ್ನು ಹೇಳಿದನಂತರ, "ರೋಗವನ್ನೂ, ಔಷಧವನ್ನೂ, ತಿಳಿದು ಈ ಬೀಜದಿಂದ ಬುದ್ಧಿಶಾಲಿ ಯು ತನ್ನ ಬುದ್ಧಿಯಿಂದ ನೂರು ಕಟ್ಟಳೆ ವಸ್ತಿಗಳನ್ನು ಕಲ್ಪಿಸಬೇಕು, ಅಜೀರ್ಣದಲ್ಲಿ ವಸ್ತಿಯನ್ನು ಉಪಯೋಗಿಸ ಬಾರದು, ಹಗಲು ನಿದ್ರೆಯನ್ನು ವರ್ಜಿಸಬೇಕು, ಉಳಿದ ಆಹಾರ ಆಚಾರಗಳಲ್ಲಿ ಯುಕ್ತ ಕಂಡಂತೆ ಮಾಡಬಹುದು, ಈ ವಸ್ತಿಯಲ್ಲಿ ಜೇನು ಮತ್ತು ತೈಲ ಪ್ರಧಾನವಾಗಿ ಉಪಯೋಗಿಸಲ್ಪಡುವದರಿಂದ, ಮಾಧುತೈಲಕ ಎಂತ ಅದಕ್ಕೆ ವೈದ್ಯರು ಹೇಳುತ್ತಾರೆ. ಸುಖಿಗಳಾಗಿಯೂ, ಅಲ್ಪ ದೋಷವುಳ್ಳವರಾಗಿಯೂ, ನಿತ್ಯದಲ್ಲಿಯೂ ಸ್ನಿಗ್ಧರಾಗಿಯೂ, ಮೃದುವಾದ ಹೊಟ್ಟೆಯುಳ್ಳವರಾಗಿಯೂ, ಯಾರು ಇದ್ದಾರೊ, ಅವರಿಗೆ ಮಾಧುತೈಲಿಕಗಳನ್ನು ವಿಧಿಸಬೇಕು" ಎಂಬ ಅರ್ಥವುಳ್ಳ ವಚನಗಳು ಕಾಣುತ್ತವೆ (ಪು 587-588)

ಈ ವಸ್ತು ಕ್ರಮಕ್ಕೆ ನಮ್ಮ ಪೂರ್ವಿಕ ವೈದ್ಯಶಿರೋಮಣಿಗಳು ಮಹತ್ವವನ್ನು ಕೊಟ್ಟು, ಅದನ್ನು ಯುಕ್ತಿವಿಶೇಷ ದಿಂದ ಉಪಯೋಗಿಸಿ ಯಾವ ರೋಗದಲ್ಲಿಯಾದರೂ ವಿಶೇಷವಾದ ಪ್ರಯೋಜನ ಪಡೆಯಬಹುದಾಗಿ ಸೂಚಿಸಿ, ಆ ವಿಷಯ ಬಹು ವಿಸ್ತಾರವಾಗಿ ತಮ್ಮ ಗ್ರಂಥಗಳಲ್ಲಿ ಬರೆದಿದ್ದಾರೆ ಚರಕಸಂಹಿತೆಯಲ್ಲಿಯೂ, ಸುಶ್ರುತಸಂಹಿತೆಯಲ್ಲಿಯೂ, ಐದೈದು ದೊಡ್ಡ ಅಧ್ಯಾಯಗಳು ಈ ಭಾಗವನ್ನೇ ಹೇಳುತ್ತವೆ ಆದರೆ ಅದನ್ನು ಗುರೂಪದೇಶ ವಿನಾ ಪೂರ್ಣವಾಗಿ ತಿಳಿದು ವಸ್ತಿಕರ್ಮವನ್ನು ಸರಿಯಾಗಿ ನಡಿಸುವದು ಸಾಮಾನ್ಯ ಜನರಿಗೆ ಪ್ರಯಾಸ, ಅದಲ್ಲದೆ ಪಾಶ್ಚಾತ್ಯ ವೈದ್ಯಶಾಲೆಗಳಲ್ಲಿ ಕಲಿಯದ ಆಯುರ್ವೇದಪಂಡಿತರಿಗೆ ಅಂಥಾ ಕ್ರಮಗಳನ್ನು ನಡಿಸಲಿಕ್ಕೆ ಈಗಿನ ಕಾಲದಲ್ಲಿ ರೋಗಿಗಳು ಒಪ್ಪುವದು ಕಷ್ಟ ಇದನ್ನೆಲ್ಲಾ ಆಲೋಚಿಸಿ ಅತಿ ಸಂಕ್ಷೇಪವನ್ನಾಗಲಿ, ಅತಿ ವಿಸ್ತಾರವನ್ನಾಗಲಿ ಮಾಡದೆ ವಸ್ತು ವಿಷಯ ಸಾರಾಂಶವನ್ನು ಈ ಅಧ್ಯಾಯದಲ್ಲಿ ಸಂಗ್ರಹಿಸಿಯದೆ

XXIIIನೇ ಅಧ್ಯಾಯ.

ಗಂಡೂಷ-ಕವಲ-ಪ್ರತಿನಾರಣ-ಲೇಪ-ಮೂರ್ಧತೈಲ-ಕರ್ಣಪೂರಣ ವಿಧಿಗಳು.

1. ಚತುರ್ವಿಧಃ ಸ್ಯಾದ್ಗಂಡೂಷಃ ಸ್ನೈಹಿಕಃ ಶಮನಸ್ತಥಾ ।
ಕವಲಗಂಡೂಷಗಳ ವಿಧಗಳು ಶೋಧನೋ ರೋಪಣಶ್ಚೈವ ಕವಲಶ್ಚಾಪಿ ತದ್ವಿಧಃ ॥ (ಶಾ. 163.)

ಗಂಡೂಷವೂ, ಕವಲವೂ, ನಾಲ್ಕು ವಿಧ ಸ್ನೈಹಿಕ, ಶಮನ, ಶೋಧನ, ಮತ್ತು ರೋಪಣ.

2. ಸುಖಂ ಸಂಚಾರ್ಯತೇ ಯಾ ತು ಮಾತ್ರಾ ಸಾ ಕವಲೇ ಸ್ಮೃತಾ ।
ಕವಲಕ್ಕೂ ಗಂಡೂಷಕ್ಕೂ ಭೇದ ಅಸಂಚಾರ್ಯಾ ತು ಯಾ ಮಾತ್ರಾ ಗಂಡೂಷಃ ಸ ಪ್ರಕೀರ್ತಿತಃ ॥ (ಸು. 599.)

ಬಾಯಿಯೊಳಗೆ ಸಂಚರಿಸದ ಹಾಗೆ ತುಂಬಿಸುವ ಪ್ರಮಾಣವು ಗಂಡೂಷ ಎಂತ ಪ್ರಸಿದ್ಧವಾಗಿದೆ. ಕವಲದಲ್ಲಿ ಪ್ರಮಾಣವು ಬಾಯಿಯೊಳಗೆ ಸುಖವಾಗಿ ಸಂಚರಿಸುವ ಹಾಗಿನದಾಗಿರುತ್ತದೆ.

3. ಸ್ನಿಗ್ಧೋಷ್ಣೈಃ ಸ್ನೇಹಿಕೋ ವಾತೇ ಸ್ವಾದುಶೀತೈಃ ಪ್ರಸಾದನಃ ।
ಬೇರೆಬೇರೆ ಗಂಡೂಷಾದಿಗಳ ಉಪಯೋಗ ಪಿತ್ತೇ ಕಟ್ವಮ್ಲಲವಣೈ ರೂಕ್ಷೋಷ್ಣೈಃ ಶೋಧನಃ ಕಫೇ ॥
ಕಷಾಯತಿಕ್ತಮಧುರೈಃ ಕಟೂಷ್ಣೈ ರೋಪಣೋ ವ್ರಣೇ ।
ಚತುರ್ವಿಧಸ್ಯ ಚೈವಾಸ್ಯ ವಿಶೇಷೋಽಯಂ ಪ್ರಕೀರ್ತಿತಃ ॥ (ಸು. 599)

ಸ್ನಿಗ್ಧ ಮತ್ತು ಉಷ್ಣದ್ರವ್ಯಗಳಿಂದ ತಯಾರಿಸಲ್ಪಡುವ ಕವಲ ಅಥವಾ ಗಂಡೂಷ ಸ್ನೇಹಿಕ, ಅದನ್ನು ವಾತದಲ್ಲಿ ಉಪಯೋಗಿಸತಕ್ಕದ್ದು. ಸೀ ಮತ್ತು ಶೀತದ್ರವ್ಯಗಳಿಂದ ತಯಾರಿಸಲ್ಪಟ್ಟದ್ದು ಶಮನ, ಅದು ಪಿತ್ತದಲ್ಲಿ ಉಪಯುಕ್ತ. ಖಾರವಾದ, ಹುಳಿಯಾದ, ಉಪ್ಪಾದ, ರೂಕ್ಷವಾದ ಮತ್ತು ಬಿಸಿಯಾದ ದ್ರವ್ಯಗಳಿಂದ ಮಾಡಿದ್ದು ಶೋಧನ; ಅದು ಕಫದಲ್ಲಿ ಉಪಯೋಗಿಸತಕ್ಕಂಥಾದ್ದು. ಜೊಗರು, ಕಹಿ, ಸೀ, ಕಟು ಮತ್ತು ಉಷ್ಣವಾದ ದ್ರವ್ಯಗಳಿಂದ ಮಾಡಲ್ಪಟ್ಟದ್ದು ರೋಪಣ, ಅದು ವ್ರಣದಲ್ಲಿ ಪ್ರಯೋಜನವುಳ್ಳದ್ದು. ಹೀಗೆ ನಾಲ್ಕು ವಿಧವಾದ ಕವಲಗಂಡೂಷಗಳ ಭೇದಗಳು ಹೇಳಲ್ಪಟ್ಟಿವೆ.

4. ದದ್ಯಾದ್ದ್ರವೇಷು ಸಂಚೂರ್ಣಂ ಗಂಡೂಷೇ ಕೋಲಮಾತ್ರಕಂ ।
ದ್ರವ್ಯಪ್ರಮಾಣ ಕರ್ಷಪ್ರಮಾಣಃ ಕಲ್ಕಶ್ಚ ಕವಲೇ ದೀಯತೇ ಬುದ್ಧೈಃ ॥ (ಶಾ. 163.)

ಗಂಡೂಷದಲ್ಲಿ ದ್ರವಪದಾರ್ಥಗಳೊಂದಿಗೆ ಅರ್ಧ ಕರ್ಷಪ್ರಮಾಣ ಚೂರ್ಣವನ್ನು ಕೂಡಿಸಬೇಕು; ಮತ್ತು ಕವಲದಲ್ಲಿ ಕಲ್ಕವನ್ನು ಬುದ್ಧಿವಂತರು ಒಂದು ಕರ್ಷಪ್ರಮಾಣ ಉಪಯೋಗಿಸುತ್ತಾರೆ.

5. ಧಾರ್ಯತೇ ಪಂಚಮಾದ್ವರ್ಷಾತ್ ಗಂಡೂಷಕವಲಾದಯಃ |
(ಶಾ. 163.)

ಗಂಡೂಷಾದಿಗಳಿಗೆ ಪ್ರಾಯವಿಚಾರ

ಐದನೇ ವರ್ಷ ಮೊದಲುಗೊಂಡು ಗಂಡೂಷಕವಲಾದಿಗಳನ್ನು ಉಪಯೋಗಿಸುತ್ತಾರೆ.

6. ತಾವಚ್ಚ ಧಾರಯಿತವ್ಯೋಽನನ್ಯಮನಸೋನ್ನತದೇಹೇನ ಯಾವದ್ದೋಷ
ಪರಿಪೂರ್ಣಕಫೋಲತ್ವಂ ನಾಸಾಸ್ರೋತೋನಯನಪರಿಪ್ಲಾವಶ್ಚ ಭವತಿ
ತದಾ ವಿಮೋಕ್ತವ್ಯಃ | ಪುನಶ್ಚಾನ್ಯೋ ಗ್ರಹೀತವ್ಯ ಇತಿ | (ಸು. 599.)

ಗಂಡೂಷಾದಿಗಳ ಧಾರಣಕಾಲ

ಗಂಡೂಷಕವಲಗಳನ್ನು ಬೇರೆ ಕಡೆಗೆ ಮನಸ್ಸನ್ನು ಹೋಗಬಿಡದೆ, ದೇಹವನ್ನು ಎತ್ತಿ ಕೊಂಡು, ಕಫೋಲಗಳಲ್ಲಿ ದೋಷವು (ಕಫವು) ತುಂಬಿ, ಮೂಗಿನ ಸೊಳ್ಳೆಗಳಲ್ಲಿಯೂ, ಕಣ್ಣುಗಳಲ್ಲಿಯೂ ನೀರು ಸುರಿಯುವ ವರೆಗೆ, ಬಾಯಿಯೊಳಗೆ ಇಟ್ಟುಕೊಂಡು, ಅನಂತರ ಹೊರಗೆ ಉಗಿಯಬೇಕು; (ಶುದ್ಧವಾದ ಲಕ್ಷಣ ಕಾಣದಿದ್ದರೆ,) ಪುನಃ ಬೇರೆ ಕವಲ ಅಥವಾ ಗಂಡೂಷವನ್ನು ಇಟ್ಟುಕೂಳ್ಳತಕ್ಕದ್ದು

7. ವ್ಯಾಧೇರಪಚಯಸ್ತುಷ್ಟಿರ್ವೈಶದ್ಯಂ ವಕ್ತ್ರಲಾಘವಂ |
ಇಂದ್ರಿಯಾಣಾಂ ಪ್ರಸಾದಶ್ಚ ಕವಲೇ ಶುದ್ದಿಲಕ್ಷಣಂ || (ಸು. 599.)

ಗುಣ ಸಿದ್ಧಿಸಿದ ಲಕ್ಷಣ

ವ್ಯಾಧಿಯು ವಾಸಿಯಾಗುವದು, ಸಂತೋಷ, ನಿರ್ಮಲತೆ, ಬಾಯಿಯ ಲಘುತ್ವ, ಇಂದ್ರಿಯಗಳ ಪ್ರಸನ್ನತೆ, ಇವು ಕವಲದಿಂದುಂಟಾಗತಕ್ಕ ಶುದ್ದಿಯ ಲಕ್ಷಣಗಳು.

8. ಹೀನೇ ಜಾಡ್ಯಕಫೋತ್ಕ್ಲೇಶಾವರಸಜ್ಞಾನಮೇವ ಚ |
ಅತಿಯೋಗಾನ್ಮುಖೇ ಪಾಕಃ ಶೋಷಸ್ತ್ವಙ್ನಾರುಚಿಕ್ಲಮಾಃ ||
ಶೋಧನೀಯೇ ವಿಶೇಷೇಣ ಭವಂತ್ಯೇವಂ ನ ಸಂಶಯಃ | (ಸು. 600.)

ಹೀನಾತಿಯೋಗಗಳ ಲಕ್ಷಣಗಳು

ಔಷಧ ಉಪಯೋಗಿಸಿದ್ದು ಕಡಿಮೆಯಾದರೆ, ಜಾಡ್ಯತನ, ಕಫ ಮೇಲೆ ಬರುವದು, ಮತ್ತು ರುಚಿ ತಿಳಿಯದೆ ಹೋಗುವದು, ಈ ಲಕ್ಷಣಗಳು ಉಂಟಾಗುತ್ತವೆ; ಮತ್ತು ಅತಿಯಾದರೆ, ಬಾಯಿ ಬೆಂದುಹೋಗುವದು, ಒಣಗುವದು, ಬಾಯಾರಿಕೆ, ಅರುಚಿ ಮತ್ತು ಆಯಾಸ ಉಂಟಾಗುತ್ತವೆ. ಈ ಲಕ್ಷಣಗಳು ವಿಶೇಷವಾಗಿ ಶೋಧನಕರವಾದ ಕವಲದಲ್ಲಿ ನಿಶ್ಚಯವಾಗಿ ಕಾಣುವವು.

9. ಯಸ್ಯೌಷಧಸ್ಯ ಗಂಡೂಷಸ್ತಸ್ಯೈವ ಪ್ರತಿಸಾರಣಂ |
ಕವಲಶ್ಚಾಪಿ ತಸ್ಯೈವ ಜ್ಞೇಯೋಽತ್ರ ಕುಶಲೈರ್ನರೈಃ ||
(ಶಾ. 164.)

ಕವಲ, ಗಂಡೂಷ ಪ್ರತಿಸಾರಣಗಳಿಗೆ ಒಂದೇ ಔಷಧ

ಗಂಡೂಷಕ್ಕೆ ಉಪಯೋಗಿಸುವ ಔಷಧಗಳಿಂದಲೇ ಕವಲವನ್ನೂ ಪ್ರತಿಸಾರಣವನ್ನೂ ತಯಾರಿಸುವದಾಗಿರುತ್ತದೆಂತ ಬುದ್ಧಿವಂತರು ತಿಳಿಯತಕ್ಕದ್ದು.

10. ವಿಭಜ್ಯ ಭೇಷಜಂ ಬುಧ್ಯಾ ಕುರ್ಯೀತ ಪ್ರತಿಸಾರಣಂ ।
ಕಲ್ಕೋ ರಸಕ್ರಿಯಾ ಕ್ಷ್ವೇದ್ರಂ ಚೂರ್ಣಂ ಚೇತಿ ಚತುರ್ವಿಧಂ ॥
ಪ್ರತಿಸಾರಣ ಕಲ್ಪನಾ ಮತ್ತು ಯೋಗಾಯೋಗ
ಅಂಗುಲ್ಯಗ್ರಪ್ರಣೀತಂ ತು ಯಥಾಸ್ವಂ ಮುಖರೋಗಿಣಾಂ ।
ತಸ್ಮಿನ್ ಯೋಗಮಯೋಗಂ ಚ ಕವಲೋಕ್ತಂ ವಿಭಾವಯೇತ್ ॥ (ಸು. 600.)

ಬಾಯಿಯ ರೋಗಗಳಲ್ಲಿ ಬೆರಳುಗಳ ತುದಿಯಿಂದ ತಕ್ಕ ಹಾಗೆ ತಾಗಿಸುವಂಥಾದ್ದಕ್ಕೆ ಪ್ರತಿಸಾರಣ ಎಂಬದು. ಕಲ್ಕ, ರಸಕರ್ಮ, ಜೇನು, ಚೂರ್ಣ, ಎಂಬ ನಾಲ್ಕು ವಿಧವಾದ ಪ್ರತಿಸಾರಣವನ್ನು ಔಷಧದ ಗುಣದೋಷಗಳ ಮೇಲೆ ಬುದ್ಧಿವಂತಿಕೆಯಿಂದ ಕಲ್ಪಿಸಬೇಕಾಗಿರುತ್ತದೆ. ಅದರ ಸರಿಯಾದ ಯೋಗ, ಹೀನಯೋಗ, ಮತ್ತು ಅತಿಯೋಗ, ಇವುಗಳನ್ನು ಕವಲದ ಸಂಗತಿಯಲ್ಲಿ ಹೇಳಿದ್ದದರಿಂದ ತಿಳಿಯಬೇಕು.

11. ಆಲೇಪಕಸ್ಯ ನಾಮಾನಿ ಲಿಪ್ತಿರ್ಲೇಪಶ್ಚ ಲೇಪನಂ ।
ದೋಷಘ್ನೋ ವಿಷಹಾ ವರ್ಣ್ಯೋ ಮುಖಾಲೇಪಸ್ತ್ರಿಧಾ ಮತಃ ॥
ಲೇಪನವಿಧಿ
ತ್ರಿಪ್ರಮಾಣಶ್ಚತುರ್ಭಾಗಸ್ತ್ರಿಭಾಗೋಽರ್ಧಾಂಗುಲೋನ್ನತಃ ।
ಆದ್ರ್ಯೋ ವ್ಯಾಧಿಹರಃ ಸ ಸ್ಯಾಚ್ಛುಷ್ಕೋ ದೂಷಯತಿ ಛವಿಂ ॥ (ಶಾ. 165.)

ಆಲೇಪಕಕ್ಕೆ ಲಿಪ್ತಿ ಎಂತಲೂ, ಲೇಪ ಎಂತಲೂ, ಲೇಪನ ಎಂತಲೂ ಹೇಳುತ್ತಾರೆ. ಅದು ದೋಷಹರ, ವಿಷಹರ, ವರ್ಣಕರ, ಎಂತ ಮೂರು ವಿಧ. ಅದರ ದಪ್ಪದ ಪ್ರಮಾಣಗಳು ಮೂರು —ಕಾಲಂಗುಲ, ಅಂಗುಲದ ತ್ರಿಭಾಗ, ಅರ್ಧಾಂಗುಲ. ಹಸಿಯಾಗಿರುವ ವರೆಗೆ ಅದು ರೋಗಹರ, ಒಣಗಿದ ಮೇಲೆ ಅದು (ಚರ್ಮದ) ಛಾಯೆಯನ್ನು ಕೆಡಿಸುತ್ತದೆ.

ಷರಾ ಸಂ 13 ಮತ್ತು 19 ನೋಡಿರಿ

12. ಆಲೇಪ ಆದ್ಯ ಉಪಕ್ರಮ ಏಷ ಸರ್ವಶೋಫಾನಾಂ ಸಾಮಾನ್ಯಃ ಪ್ರಧಾನತಮಶ್ಚ । (ಸು. 69.)
ಲೇಪ ಶೋಫೆಗೆ ಮುಖ್ಯ

ಆಲೇಪವು (ವ್ರಣಚಿಕಿತ್ಸೆಯಲ್ಲಿ) ಆರಂಭದ ಉಪಕ್ರಮ. ಅದು ಎಲ್ಲಾ ಬಾಕುಗಳಿಗೆ ಸಾಮಾನ್ಯವಾಗಿ ಉಪಯುಕ್ತವಾದದ್ದು ಮತ್ತು ಅತಿ ಶ್ರೇಷ್ಠವಾದದ್ದು.

13. ನ ಚ ಶುಷ್ಯಮಾಣಮುಪೇಕ್ಷೇತಾನ್ಯತ್ರ ಪೀಡಯಿತವ್ಯಾತ್ । ಶುಷ್ಕೋ ಹ್ಯಪಾರ್ಧಕೋಽರುಷ್ಕರ*ಶ್ಚ । (ಸು. 69.)
ಲೇಪವನ್ನು ಒಣಗ ಬಿಡುವ ವಿಷಯ

ವ್ರಣವನ್ನು ಒತ್ತಿ ಹಿಂಡಬೇಕಾದ್ದಲ್ಲಿ ಮಾತ್ರವಲ್ಲದೆ, ಇತರ ಸಂಗತಿಯಲ್ಲಿ ಲೇಪವನ್ನು ಒಣಗಲಿಕ್ಕೆ ಬಿಡಬಾರದು. ಒಣಗಿದ ಲೇಪವು ಪ್ರಯೋಜನವಿಲ್ಲದ್ದು ಮತ್ತು ಚರ್ಮವನ್ನು ಕೊರೆಯುತ್ತದೆ.

ಷರಾ *'ರುಷ್ಕರಃ' ಎಂಬ ಪಾಠಾಂತರದಲ್ಲಿ ನೋವನ್ನುಂಟುಮಾಡುತ್ತದೆಂತ ಅರ್ಥವಾಗುತ್ತದೆ

14. ಸ ತ್ರಿವಿಧಃ ಪ್ರಲೇಪಃ ಪ್ರದೇಹ ಆಲೇಪಶ್ಚ । ತೇಷಾಮಂತರಂ ಪ್ರಲೇಪಃ ಶೀತಸ್ತನುರವಿಶೋಷೀ ವಿಶೋಷೀ ಚ । ಪ್ರದೇಹಸ್ಊಷ್ಣಃ ಶೀತೋ ವಾ

ತ್ರಿವಿಧವಾದ ಲೇಪದ ಉಪಯೋಗ

ಬಹುಲೋಽಬಹುರವಿಶೋಷೀ ಚ । ಮಧ್ಯಮೋಽತ್ರಾಲೇಪಃ । ತತ್ರ ರಕ್ತಪಿತ್ತಪ್ರಸಾದಕೃದಾಲೇಪಃ । ಪ್ರದೇಹೋ ವಾತಶ್ಲೇಷ್ಮಪ್ರಶಮನಃ ಸಂಧಾನಃ ಶೋಧನೋ ರೋಪಣಃ ಶೋಫವೇದನಾಪಹಶ್ಚ ತಸ್ಯೋಪಯೋಗಃ ಕ್ಷತಾಕ್ಷತೇಷು । (ಸು. 69)

ಲೇಪದಲ್ಲಿ ಪ್ರಲೇಪ, ಪ್ರದೇಹ, ಆಲೇಪ, ಎಂತ ಮೂರು ವಿಧಗಳಿವೆ. ಅವುಗಳ ಭೇದವೇನೆಂದರೆ ಪ್ರಲೇಪವು ಶೀತ ಮತ್ತು ತೆಳ್ಳಗೆ. ಅದರಲ್ಲಿ ಒಣಗಿಸು(ಆರಿಸು)ವಂಥಾದ್ದು ಮತ್ತು ಒಣಗಿಸುವ ಗುಣವಿಲ್ಲದಿರುವಂಥಾದ್ದು ಸಹ ಉಂಟು. ಪ್ರದೇಹವು ಉಷ್ಣ (ವಾತಕಫಕ್ಕೆ), ಅಥವಾ (ಪಿತ್ತರಕ್ತಕ್ಕೆ) ಶೀತವಿರಬಹುದು; ಅದು ಗಟ್ಟಿ, ಬಹಳ ದಪ್ಪವಲ್ಲದ್ದು ಮತ್ತು ಒಣಗಿಸುವ ಸ್ವಭಾವವಿಲ್ಲದ್ದು. ಮಧ್ಯಮ ತರದ್ದು ಆಲೇಪ. ಅವುಗಳೊಳಗೆ ಆಲೇಪದಿಂದ ರಕ್ತ ಪಿತ್ತಗಳು ಶಮನವಾಗುತ್ತವೆ. ಪ್ರದೇಹದಲ್ಲಿ ವಾತಶ್ಲೇಷ್ಮಗಳ ಶಮನ, ಕೂಡಿಸುವದು, ಶೋಧಿಸುವದು, ಬೆಳಿಸುವದು, ಮತ್ತು ಬಾಕನ್ನೂ ನೋವನ್ನೂ ಪರಿಹರಿಸುವದು, ಈ ಗುಣಗಳಿವೆ. ಆಲೇಪವು ಹುಣ್ಣಿದ್ದಲ್ಲಿಯೂ, ಹುಣ್ಣಿಲ್ಲದ ಬರೇ ಶೋಫೆಯಲ್ಲಿಯೂ, ಉಪಯೋಗವುಳ್ಳದ್ದಾಗಿರುತ್ತದೆ.

ಷರಾ ಹಚ್ಚುವ ಗಂಧದಷ್ಟು ದಪ್ಪವಾದದ್ದು ಪ್ರಲೇಪ 'ಅಬಹು' ಎಂಬಲ್ಲ 'ಬಹು' ಎಂತ ಪಾರಾಂತರ ಕಾಣುತ್ತದೆ ಆಗ್ಗೆ ಪ್ರದೇಹವು ದಪ್ಪವಾದದ್ದು ಎಂತ ಅರ್ಥವಾಗುತ್ತದೆ ಹ್ಯಾಗೂ ಅದು ಆಲೇಪಪ್ರಲೇಪಗಳಿಗಿಂತ ದಪ್ಪ

15. ಯಸ್ತು ಕ್ಷತೇಷೂಪಯುಜ್ಯತೇ ಸ ಭೂಯಃ ಕಲ್ಕ ಇತಿ ಸಂಜ್ಞಾಂ ಲಭತೇ ನಿರುದ್ಧಾಲೇಪನಸಂಜ್ಞಸ್ತೇನಾಸ್ರಾವಸನ್ನಿರೋಧೋ ಮೃದುತಾ ಪೂತಿ ಮಾಂಸಾಪಕರ್ಷಣಮಂತರ್ನಿದೋರ್ಷತಾ ವ್ರಣಶುದ್ಧಿಶ್ಚ ಭವತಿ । (ಸು. 69.)

ಕಲ್ಕಲೇಪದ ಗುಣ

ಹುಣ್ಣುಗಳಲ್ಲಿ ಉಪಯೋಗಿಸಲ್ಪಡುವ ಲೇಪವು ಕಲ್ಕ ಎಂತ ಕರೆಯಲ್ಪಡುತ್ತದೆ. ಅದಕ್ಕೆ ಆಲೇಪ ಎನ್ನುವದಿಲ್ಲ. ಅದರಿಂದ (ರಕ್ತಾದಿಗಳ) ಸ್ರಾವದ ತಡೆ, ಮೃದುತ್ವ, ಕೊಳೆತ ಮಾಂಸವನ್ನು ಹೊರಗೆ ಹಾಕುವದು, ಒಳಗಿನ ದೋಷ (ಕೀವು) ಪರಿಹಾರ ಮಾಡುವದು ಮತ್ತು ವ್ರಣದ ಶುದ್ಧಿ ಉಂಟಾಗುತ್ತವೆ.

16. ಅವಿದಗ್ಧೇಷು ಶೋಫೇಷು ಹಿತಮಾಲೇಪನಂ ಭವೇತ್ ।
ಯಥಾಸ್ವಂ ದೋಷಶಮನಂ ದಾಹಕಂಡೂರುಜಾಪಹಂ ॥ (ಸು. 69.)

ಶಮನಕರವಾದ ಲೇಪ

ಪಕ್ವವಾಗದ ಶೋಫೆಗಳಲ್ಲಿ ಆಯಾ ದೋಷವನ್ನು ಶಮನ ಮಾಡಿ, (ಪಿತ್ತದ) ಉರಿ, (ಕಫದ) ತುರಿ ಮತ್ತು (ವಾತದ) ನೋವನ್ನು ಪರಿಹರಿಸತಕ್ಕ ಆಲೇಪವು ಹಿತವಾಗುತ್ತದೆ.

17. ಮರ್ಮದೇಶೇಷು ಯೇ ರೋಗಾ ಗುಹ್ಯೇಷ್ವಪಿ ತಥಾ ನೃಣಾಂ ।
ಸಂಶೋಧನಾಯ ತೇಷಾಂ ಹಿ ಕುರ್ಯಾದಾಲೇಪನಂ ಭಿಷಕ್ ॥ (ಸು. 69.)

ಮರ್ಮಸ್ಥಳಗಳಿಗೆ ಆಲೇಪವೇ ಹಿತ

ಮರ್ಮಸ್ಥಳಗಳಲ್ಲಿಯೂ, ಗುಹ್ಯಸ್ಥಾನಗಳಲ್ಲಿಯೂ ಜನರಿಗೆ ಉಂಟಾಗುವ ರೋಗಗಳ ಶೋಧನಕ್ಕೆ ಸಹ ವೈದ್ಯನು ಆಲೇಪನವನ್ನೇ ಮಾಡಬೇಕು.

18. ಷಡ್ಭಾಗಂ ಪೈತ್ತಿಕೇ ಸ್ನೇಹಂ ಚತುರ್ಭಾಗಂ ಚ ವಾತಿಕೇ ।
ಆಲೇಪಕ್ಕೆ ಸ್ನೇಹಪ್ರಮಾಣ ಅಷ್ಟಭಾಗಂ ತು ಕಫಜೇ ಸ್ನೇಹಮಾತ್ರಾಂ ಪ್ರದಾಪಯೇತ್ ॥ (ಸು. 69.)

ಪಿತ್ತಸಂಬಂಧವಾದ ರೋಗದಲ್ಲಿ ಆರನೇ ಒಂದು ಭಾಗ, ವಾತಸಂಬಂಧವಾದ್ದರಲ್ಲಿ ಕಾಲಂಶ, ಕಫದಿಂದ ಹುಟ್ಟಿದ್ದರಲ್ಲಿ ಎಂಟನೆ ಒಂದು ಅಂಶ, ಈ ಪ್ರಮಾಣದಲ್ಲಿ ಸ್ನೇಹವನ್ನು ಆಲೇಪಕ್ಕೆ ಕೂಡಿಸಿಕೊಳ್ಳಬೇಕು.

19. ತಸ್ಯ ಪ್ರಮಾಣಮಾರ್ದ್ರಮಾಹಿಷಚರ್ಮೋತ್ಸೇಧಮುಪದಿಶಂತಿ ।
ಆಲೇಪದ ದಪ್ಪ (ಸು. 70.)

ಆಲೇಪದ ಪ್ರಮಾಣವು ದಪ್ಪದಲ್ಲಿ ಹಸಿ ಎಮ್ಮೆ ಚರ್ಮದಷ್ಟು ಇರಬೇಕೆಂತ ಉಪದೇಶ ವಿರುತ್ತದೆ.

20. ನ ಚಾಲೇಪಂ ರಾತ್ರೌ ಪ್ರಯುಂಜೀತ ಮಾಭೂಚ್ಛೈತ್ಯ್ಯಪಿಹಿತೋಷ್ಮಣಾ
ಆಲೇಪವು ರಾತ್ರಿಯಲ್ಲ ನಿಷಿದ್ಧ ಸ್ತದನಿರ್ಗಮಾದ್ವಿಕಾರಪ್ರವೃತ್ತಿರಿತಿ । (ಸು. 70.)

ರಾತ್ರಿಕಾಲದಲ್ಲಿ ಆಲೇಪವನ್ನು ಉಪಯೋಗಿಸಬಾರದು; (ಶೋಫೆಯ) ಬಿಸಿಯು ಶೈತ್ಯ ದಿಂದ ತಡೆಯಲ್ಪಟ್ಟಿರುವಾಗ್ಗೆ ಆಲೇಪನವನ್ನು ಮಾಡಿದರೆ, ಆ ಬಿಸಿಯು ಹೊರಗೆ ಬಾರದಿರುವ ಪ್ರಯುಕ್ತ ವಿಕಾರವು ಅಭಿವೃದ್ಧಿಯಾಗುತ್ತದೆ.

ಪರಾ ರಾತ್ರಿಕಾಲದಲ್ಲಿ ಸ್ವಾಭಾವಿಕವಾಗಿ ರೋಮಕೂಪಗಳಿಂದ ಹೊರಗೆ ಬರತಕ್ಕ ಬಿಸಿಯನ್ನು ಆಲೇಪವು ತಡೆದು ದೋಷವನ್ನುಂಟುಮಾಡುತ್ತದ ಎಂತ ತಾತ್ಪರ್ಯ

21. ಪ್ರದೇಹಸಾಧ್ಯೇ ವ್ಯಾಧೌ ತು ಹಿತಮಾಲೇಪನಂ ದಿವಾ ।
ಪ್ರದೇಹಕ್ಕೆ ಬದಲಾಗಿ ಆಲೇಪ ಪಿತ್ತರಕ್ತಾಭಿಘಾತೋತ್ಥೇ ಸವಿಷೇ ಚ ವಿಶೇಷತಃ ॥ (ಸು. 70.)

ಪ್ರದೇಹವನ್ನುಪಯೋಗಿಸಿ ಸಾಧ್ಯವಾಗತಕ್ಕ ವ್ಯಾಧಿಗಳಲ್ಲಿ ಹಗಲುಕಾಲದಲ್ಲಿ ಆಲೇಪನ ವನ್ನು ಮಾಡುವದರಿಂದ ಹಿತವಾಗುತ್ತದೆ. ಇದು ವಿಶೇಷವಾಗಿ ಪಿತ್ತರಕ್ತದ ದೋಷದಿಂದ ಉಂಟಾದ ಸಂಗತಿಯಲ್ಲಿ ಮತ್ತು ವಿಷ ಕೂಡಿರುವಲ್ಲಿ ಹಿತ.

22. ನ ಚ ಪರ್ಯುಷಿತಂ ಲೇಪಂ ಕದಾಚಿದವಚಾರಯೇತ್ ।
ಉಪರ್ಯುಪರಿ ಲೇಪಂ ತು ನ ಕದಾಚಿತ್ ಪ್ರದಾಪಯೇತ್ ॥
ಹಳೇ ಲೇಪ ಮತ್ತು ಲೇಪದ ಮೇಲೆ ಲೇಪ ನಿಷಿದ್ಧ ಉಷ್ಮಾಣಂ ವೇದನಾಂ ದಾಹಂ ಘನತ್ವಾಜ್ಜನಯೇತ್ಸ ಹಿ ।
ನ ಚ ತೇನೈವ ಲೇಪೇನ ಪ್ರದೇಹಂ ದಾಪಯೇತ್ಪುನಃ ॥
ಶುಷ್ಕಭಾವಾತ್ಸ ನಿರ್ವೀರ್ಯೋ ಯುಕ್ತೋಽಪಿ ಸ್ಯಾದಪಾರ್ಥಕಃ ॥
(ಸು 70)

ಹಳೇದಾದ ಲೇಪವನ್ನು ಯಾವಾಗಲಾದರೂ ಉಪಯೋಗಿಸಬಾರದು. ಮತ್ತು ಲೇಪ ಗಳನ್ನು ಒಂದರ ಮೇಲೆ ಒಂದಾಗಿ ಯಾವಾಗಲಾದರೂ ಹಚ್ಚಬಾರದು. ಹಾಗೆ ಹಾಕಿದರೆ,

ಲೇಪವು ದಪ್ಪವಾಗಿ ಬಿಸಿಯನ್ನೂ, ನೋವನ್ನೂ, ಉರಿಯನ್ನೂ, ಉಂಟುಮಾಡುವದು. ಅದ ಲ್ಲದೆ ಅದೇ ಲೇಪದಿಂದಲೇ ಪುನಃ ಪ್ರದೇಹವನ್ನು ತಯಾರಿಸಿ ಹಾಕಬಾರದು; ಅದು ಒಣಗಿರುವ ದೆಸೆಯಿಂದ ಅದರಲ್ಲಿ ವೀರ್ಯವಿಲ್ಲ; ಆದ್ದರಿಂದ ಅದನ್ನು ಉಪಯೋಗಿಸಿದರೂ ಪ್ರಯೋಜನ ವಿರಲಾರದು.

23. ಅಭ್ಯಂಗಸೇಕಪಿಚವೋ ವಸ್ತಿಶ್ಚೇತಿ ಚತುರ್ವಿಧಂ ।
ಮೂರ್ಧತೈಲಂ ಬಹುಗುಣಂ ತದ್ವಿದ್ಯಾದುತ್ತರೋತ್ತರಂ ॥

ನಾಲ್ಕು ವಿಧವಾದ ಮೂರ್ಧತೈಲ ಮತ್ತು ಅವುಗಳ ಉಪಯೋಗ

ತತ್ರಾಭ್ಯಂಗಃ ಪ್ರಯೋಕ್ತವ್ಯೋ ರೌಕ್ಷ್ಯಕಂಡೂಮಲಾದಿಷು ।
ಅರೂಷಿಕಾಶಿರಸ್ತೋದದಾಹಪಾಕವ್ರಣೇಷು ತು ॥
ಪರಿಷೇಕಃ ಪಿಚುಃ ಕೇಶಶಾತಸ್ಫುಟನಧೂಪನೇ ।
ನೇತ್ರಸ್ತಂಭೇ ಚ ವಸ್ತಿಸ್ತು ಪ್ರಸುಪ್ತ್ಯರ್ದಿತಜಾಗರೇ ॥
ನಾಸಾಸ್ಯಶೋಷೇ ತಿಮಿರೇ ಶಿರೋರೋಗೇ ಚ ದಾರುಣೇ ॥ (ವಾ. 102.)

ಅಭ್ಯಂಗ, ಸೇಕ (ಧಾರೆ), ಪಿಚು (ಹತ್ತಿಯಲ್ಲಿ ನೆನೆಸಿ ಇಡುವುದು), ವಸ್ತಿ, ಎಂಬ ನಾಲ್ಕು ವಿಧವಾದ ಮೂರ್ಧತೈಲದಲ್ಲಿ ಉತ್ತರೋತ್ತರ ಹೆಚ್ಚು ಗುಣವುಳ್ಳದ್ದಾಗಿವೆ. ಅವು ಗಳೊಳಗೆ ಅಭ್ಯಂಗವನ್ನು ರೌಕ್ಷ್ಯ, ತುರಿ, ಮಲ, ಮುಂತಾದ ಸಂಗತಿಗಳಲ್ಲಿಯೂ, ಪರಿಷೇಕ ವನ್ನು ಅರೂಷಿಕಾ, ತಲೆನೋವು, ತಲೆ ಉರಿ, ತಲೆ ಬೆಂದುಹೋದ ಹಾಗಿರುವದು, ತಲೆ ವ್ರಣ, ಇವುಗಳಲ್ಲಿಯೂ, ಪಿಚುವನ್ನು ಕೂದಲು ಉದುರುವದು, ಕೂದಲು ಸೀಳುವದು, ಧೂಪ ಕೊಡುವದು, ನೇತ್ರಸ್ತಂಭ, ಇವುಗಳಲ್ಲಿಯೂ, ವಸ್ತಿಯನ್ನು ಪ್ರಸುಪ್ತಿ, ಅರ್ದಿತ, ನಿದ್ರೆ ಇಲ್ಲ ದಿರುವದು, ಮೂಗು ಮತ್ತು ಬಾಯಿಯ ಒಣಗುವಿಕೆ, ತಿಮಿರ, ಶಿರೋರೋಗ, ಮತ್ತು ದಾರುಣ ಎಂಬ ಕಪಾಲರೋಗ, ಇವುಗಳಲ್ಲಿಯೂ, ಉಪಯೋಗಿಸತಕ್ಕದ್ದು.

24 (*a*) ವಿಧಿಸ್ತಸ್ಯ ನಿಷಣ್ಣಸ್ಯ ಪೀಠೇ ಜಾನುಸಮೇ ಮೃದೌ ।
ಶುದ್ಧಾಕ್ತಸ್ನಿಗ್ಧದೇಹಸ್ಯ ದಿನಾಂತೇ ಗವ್ಯಮಾಹಿಷಂ ॥
ದ್ವಾದಶಾಂಗುಲವಿಸ್ತೀರ್ಣಂ ಚರ್ಮಪಟ್ಟಂ ಶಿರಃಸಮಂ ।
ಆಕರ್ಣಬಂಧನಸ್ಥಾನಂ ಲಲಾಟೇ ವಸ್ತ್ರವೇಷ್ಟಿತೇ ॥
ತೈಲವೇಣಿಕಯಾ ಬದ್ಧ್ವಾ ಮಾಷಕಲ್ಕೇನ ಲೇಪಯೇತ್ ।

ಶಿರೋವಸ್ತಿವಿಧಿ

ತತೋ ಯಥಾವಿಧಿ ಶೃತಂ ಸ್ನೇಹಂ ಕೋಷ್ಣಂ ನಿಷೇಚಯೇತ್ ॥
ಊರ್ಧ್ವಂ ಕೇಶಭುವೋ ಯಾವದ್ ದ್ವ್ಯಂಗುಲಂ ಧಾರಯೇಚ್ಚ ತಂ ।
ಆವಕ್ತನಾಸಿಕೋತ್ಕ್ಲೇದಾದ್ದಶಾಷ್ಟೌ ಷಟ್ ಚಲಾದಿಷು ॥
ಮಾತ್ರಾಸಹಸ್ರಾಣ್ಯರುಜೇ ತ್ವೇಕಂ ಸ್ಕಂಧಾದಿ ಮರ್ದಯೇತ್ ।
ಮುಕ್ತಸ್ನೇಹಸ್ಯ ಪರಮಂ ಸಪ್ತಾಹಂ ತಸ್ಯ ಸೇವನಂ ॥ (ವಾ. 103.)

ಶಿರೋವಸ್ತಿವಿಧಿ ಹ್ಯಾಗಂದರೆ — ರೋಗಿಗೆ ಶೋಧನ, ಸ್ನೇಹನ, ಸ್ವೇದನಕ್ರಮಗಳನ್ನು ನಡಿಸಿಕೊಂಡು, ಅವನನ್ನು ಸಂಜೆಹೊತ್ತಿನಲ್ಲಿ ಮೊಣಗಂಟಿಗೆ ಸರಿ ಎತ್ತರವಾದ ಮತ್ತು ಮೃದು ವಾದ ಆಸನದಲ್ಲಿ ಕೂತುಕೊಳ್ಳಿಸಿ, ಹಣೆಗೆ ವಸ್ತ್ರ ಸುತ್ತಿ, ಹನ್ನೆರಡಂಗುಲ ವಿಸ್ತೀರ್ಣವುಳ್ಳ, ತಲೆಗೆ

ಸಮವಾದ, ಕಿವಿಗೆ ಕಟ್ಟುವ ಹಾಗಿನ, ದನದ ಅಥವಾ ಎಮ್ಮೆಯ ಚರ್ಮದ ಹಾಳೆಯನ್ನು ವಸ್ತ್ರದ ಪಟ್ಟಿಯಿಂದ ಕಟ್ಟಿ, ಸುತ್ತು ಉದ್ದಿನ ಹಿಟ್ಟಿನ ಕಲ್ಕದಿಂದ ಲೇಪಮಾಡಿ, ಅದರ ಮೇಲೆ ವ್ಯಾಧಿಗೆ ತಕ್ಕದಾಗಿ ಕಾಯಿಸಲ್ಪಟ್ಟ ಸ್ನೇಹವನ್ನು ಸುಖವಾದ ಬಿಸಿಯಾಗಿ ತಲೆಯಿಂದ ಎರಡು ಅಂಗುಲ ಪ್ರಮಾಣ ಮೇಲೆ ಏರುವಷ್ಟು ಹೊಯ್ಯಬೇಕು. ಆ ಸ್ನೇಹವನ್ನು, ಬಾಯಿಯಿಂದಲೂ, ಮೂಗಿನಿಂದಲೂ ದ್ರವ ಇಳಿಯುವ ಪರ್ಯಂತ, ಇರಿಸಬೇಕು. ವಾತರೋಗದಲ್ಲಿ ಹತ್ತು ಸಹಸ್ರ ಮಾತ್ರಾಕಾಲ, ಪಿತ್ತದಲ್ಲಿ ಎಂಟು ಸಹಸ್ರ ಮಾತ್ರಾಕಾಲ ಮತ್ತು ಕಫದಲ್ಲಿ ಆರು ಸಹಸ್ರ ಮಾತ್ರಾಕಾಲ, ರೋಗವಿಲ್ಲದಾಗ್ಗೆ ಒಂದು ಸಹಸ್ರ ಮಾತ್ರಾಕಾಲ, ಇಟ್ಟುಕೊಳ್ಳತಕ್ಕದ್ದು. ಸ್ನೇಹವನ್ನು ತೆಗೆದ ಮೇಲೆ ಹೆಗಲು ಮುಂತಾದವುಗಳನ್ನು (ತಲೆ, ಕುತ್ತಿಗೆ, ಬೆನ್ನು, ಹಣೆ ಮತ್ತು ಮುಖವನ್ನು ಕೈಗಳಿಂದ) ತಿಕ್ಕಬೇಕು ಏಳು ದಿನ ಅದನ್ನು ಸೇವಿಸಬಹುದು.

(b) ರೋಗಾನ್ ಶಿರಸಿ ಸಂಭೂತಾನ್ ಹತ್ವಾತಿಪ್ರಬಲಾನ್ ಗುಣಾನ್ ।
ಕರೋತಿ ಶಿರಸೋ ವಸ್ತಿರುಕ್ತಾ ಯೇ ಮೂರ್ದ್ಧತೈಲಿಕಾಃ ॥
ಶುದ್ಧದೇಹಸ್ಯ ಸಾಯಾಹ್ನೇ ಯಥಾವ್ಯಾಧ್ಯಶಿತಸ್ಯ ತು ।
ಸುಶ್ರುತ ಪ್ರಕಾರ ಋಜ್ವಾಸೀನಸ್ಯ ಬದ್ಧ್ನೀಯಾದ್ವಸ್ತಿಕೋಶಂ ತತೋ ದೃಢಂ ॥
ಯಥಾವ್ಯಾಧಿಶೃತಸ್ನೇಹಪೂರ್ಣಂ ಸಂಯಮ್ಯ ಧಾರಯೇತ್ ।
ತರ್ಪಣೋಕ್ತಂ ದಶಗುಣಂ ಯಥಾದೋಷಂ ವಿಧಾನವಿತ್ ॥
(ಸು. 709-10.)

ಶಿರೋವಸ್ತಿಯಿಂದ, ತಲೆಯಲ್ಲಿ ಉಂಟಾದ ಪ್ರಬಲವಾದ ರೋಗಗಳು ಪರಿಹಾರವಾಗಿ, ಮೂರ್ಧತೈಲಕ್ಕೆ ಹೇಳಲ್ಪಟ್ಟ ಗುಣಗಳು ಸಿದ್ಧಿಸುವವು. ಶುದ್ಧ ದೇಹನಾದ ರೋಗಿಯನ್ನು ವ್ಯಾಧಿಗೆ ತಕ್ಕವಾದ ಪಥ್ಯದಿಂದ ಉಣ್ಣಿಸಿ, ಸಾಯಂಕಾಲದಲ್ಲಿ ನೆಟ್ಟಗೆ ಕೂತುಕೊಳ್ಳಿಸಿ, ಅವನ ತಲೆಗೆ ವ್ಯಾಧಿಗೆ ತಕ್ಕದಾಗಿ ಕಾಯಿಸಲ್ಪಟ್ಟ ಸ್ನೇಹವನ್ನು ತುಂಬಿಸಿದ ವಸ್ತಿಚೀಲವನ್ನು ಗಟ್ಟಿಯಾಗಿ ಕಟ್ಟಬೇಕು. ಅದನ್ನು ಅವನು ತರ್ಪಣಕ್ರಮಕ್ಕೆ ಹೇಳಲ್ಪಟ್ಟ ಕಾಲದ ಹತ್ತುಪಾಲಷ್ಟು ಕಾಲ ದೋಷಕ್ಕೆ ತಕ್ಕವಾಗಿ ಧರಿಸಬೇಕು.

ಪರಾ ಭೋಜನವಿಲ್ಲದೆ ತಿರೋವಸ್ತಿ ಪ್ರಶಸ್ತವೆಂತ ಶಾ ದಲ್ಲಿ ಕಾಣಿಸಿದ್ದು ರಾತ್ರಿಭೋಜನಕ್ಕೆ ಮೊದಲೆಂಬ ಅರ್ಥ ದಲ್ಲಿಯಾಗಿರಬೇಕು ಚ ಸಾ ಸಂ ಪ್ರಕಾರ ತಲೆ ಮುಚ್ಚುತಕ್ಕ ಪ್ರಮಾಣದ ಚರ್ಮವನ್ನು ಸುತ್ತು ಎಂಟು ಅಂಗುಲ ಎತ್ತರಿಸಿ ತಲೆಗೆ ಕಟ್ಟಿ, ಅದರ ಕೆಳಗೆ ಉದ್ದಿನ ಹಿಟ್ಟಿನ ಲೇಪವನ್ನು ಮಾಡಿ, ರೋಗಿಯನ್ನು ಅಲ್ಲಾಡದಿರುವ ಹಾಗೆ ಕೂತುಕೊಳ್ಳಿಸಿ, ಚರ್ಮದ ಮೇಲೆ ಬಿಸಿ ತೈಲವನ್ನು ತುಂಬಿಸಬೇಕಾಗಿಯೂ, ಹಾಗೆ ತೈಲವನ್ನು ನೋವು ಶಾಂತವಾಗುವ ತನಕ, ಅಥವಾ ಒಂದು ಅಥವಾ ಅರ್ಧ ಜಾಮಕಾಲ, ಅಥವಾ ಕಫದಲ್ಲಿ 500, ಪಿತ್ತದಲ್ಲಿ 800, ವಾತದಲ್ಲಿ 1000 ಮಾತ್ರಾಕಾಲ, ಅಥವಾ ವೃದ್ಧ ವೈದ್ಯೋಪದೇಶ ಪ್ರಕಾರ ಎಂಟೂವರೆ ಗಳಿಗೆ ಕಾಲ, ಧರಿಸಿಕೊಳ್ಳಬೇಕಾಗಿಯೂ, ಹೀಗೆ ಐದು ದಿವಸ ಅಥವಾ ಏಳು ದಿವಸ ಇಡಬಹುದಾಗಿಯೂ ಕಾಣುತ್ತದೆ (ಪು 765) ತಲೆಯ ಸುತ್ತು ಒಂದು ಚರ್ಮದ ಸುಮಾರು ಮೂರು ಅಂಗುಲ ಅಗಲವಾದ ಉಂಗುರವನ್ನು ಕಟ್ಟಿ, ಅದರ ಸಂದಿನಲ್ಲಿ ಎಣ್ಣೆ ಇಳಿಯದ ಹಾಗೆ ಉದ್ದಿನ ಹಿಟ್ಟನ್ನು ಹಚ್ಚಿ, ಮೇಲೆ ಬರೇ ತಲೆಗೆ ತೈಲವನ್ನು ಹಾಕಿ ಧರಿಸುವ ವಾಡಿಕೆ ಇದ್ದ ಹಾಗೆ ಕಾಣುತ್ತದೆ

25. ವಿಮೋಜ್ಯ ಶಿರಸೋ ವಸ್ತಿಂ ಗೃಹ್ಣೀಯಾಚ್ಚ ಸಮಂತತಃ ।
ತಿರೋವಸ್ತಿಯ ನಂತರ ಸ್ನಾನ ಊರ್ಧ್ವಕಾಯಂ ತತಃ ಕೋಷ್ಣೈರ್ಜಲೈಃ ಸ್ನಾನಂ ಚ ಕಾರಯೇತ್ ॥
(ಶಾ. 175-76.)

ತಕ್ಕ ವಿಧಿಕಾಲ ದಾಟಿದ ಕೂಡಲೇ ವಸ್ತಿಯನ್ನು ತಲೆಯಿಂದ ತೆಗೆದುಬಿಟ್ಟು, ತಲೆಯನ್ನು ಸುತ್ತಲು ಹಿಡಿದು, ದೇಹ ನೆಟ್ಟಗೆ ಇರಿಸಿ, ಸುಖಕರವಾದ ಬಿಸಿನೀರಿನಿಂದ ಸ್ನಾನಮಾಡಿಸತಕ್ಕದ್ದು.

ಪರಾ ಅನಂತರ ಷಷ್ಟಿಕಾದಿ ಅಕ್ಕಿಯ ಅನ್ನವನ್ನು ಜಾಂಗಲ-ಆನೂಪ ಮಾಂಸರಸಗಳೊಂದಿಗೆ ಮತ್ತು ದಾಳಿಂಬ ಮುಂತಾದ ಹುಳಿಯೊಂದಿಗೆ ಕೊಟ್ಟು ಲೆಕ್ಕದಲ್ಲಿ ಉಣ್ಣಿಸಬೇಕು ಚ ಸಾ ಸಂ (ಪು 765)

26. ಸ್ವೇದಯೇತ್ಕರ್ಣಮೂಲೇ ತು ಕಿಂಚಿನ್ನು ಪಾರ್ಶ್ವಶಾಯಿನಃ |
ಮೂತ್ರೈಃ ಸ್ನೇಹೈ ರಸೈಃ ಕೋಷ್ಣೈಸ್ತತಃ ಶ್ರೋತ್ರಂ ಪ್ರಪೂರಯೇತ್ ||
ಕರ್ಣಪೂರಣ ಕರ್ಣಂ ಚ ಪೂರಿತಂ ರಕ್ಷ್ಣೇಚ್ಛತಂ ಪಂಚ ಶತಾನಿ ಚ |
ಸಹಸ್ರಂ ವಾಪಿ ಮಾತ್ರಾಣಾಂ ಶ್ರೋತ್ರಕಂರಶಿರೋಗದೇ || (ಶಾ. 176.)

ಕಿವಿಯ ಬುಡವನ್ನು ಹೊರಗಿನಿಂದ ತಿಕ್ಕಿ ಬೆವರಿಸಿ, ರೋಗಿಯನ್ನು ಸ್ವಲ್ಪ ಪಾರ್ಶ್ವಕ್ಕೆ ಒರಗಿ ಮಲಗಿಸಿ, ಮೂತ್ರಗಳನ್ನೋ, ಸ್ನೇಹಗಳನ್ನೋ, ರಸಗಳನ್ನೋ, ಹಿತವಾದ ಬಿಸಿಯಾಗಿರುವಾಗಲೇ, ಕಿವಿಯೊಳಗೆ ತುಂಬಿಸುವದು. ಹಾಗೆ ತುಂಬಿಸಿದ ಔಷಧವನ್ನು ಕಿವಿ, ಕಂಠ, ಮತ್ತು ತಲೆರೋಗಗಳಲ್ಲಿ (ಯಥಾಕ್ರಮವಾಗಿ) ನೂರು, ಐನೂರು, ಮತ್ತು ಸಹಸ್ರ, ಮಾತ್ರಾಕಾಲದ ವರೆಗೆ ಕಾಪಾಡಬೇಕು.

ಪರಾ ನೋವು ಕಡಿಮೆಯಾಗುವ ವರೆಗೆ, ನೋವಿಲ್ಲದ ಸಂಗತಿಯಲ್ಲಿ ಒಂದು ನೂರು ಮಾತ್ರಾಕಾಲ, ಇಟ್ಟು ಕೊಳ್ಳಬೇಕಾಗಿ ವಾ (ಪು 103)

XXIV ನೇ ಅಧ್ಯಾಯ.

ನೇತ್ರಕರ್ಮಗಳು.

1. ಸೇಕ ಆಶ್ಚ್ಯೋತನಂ ಪಿಂಡೀ ವಿಡಾಲಸ್ತರ್ಪಣಂ ತಥಾ ।
ನೇತ್ರಕರ್ಮ ಏಳು ವಿಧ ಪುಟಪಾಕೋಽಂಜನಂ ಚೈಭಿಃ ಕಲ್ಪೈರ್ನೇತ್ರಮುಪಾಚರೇತ್ ॥
(ಭಾ. ಪ್ರ. 233)

ಕಣ್ಣುಗಳನ್ನು ಸೇಕ, ಆಶ್ಚ್ಯೋತನ, ಪಿಂಡಿ, ವಿಡಾಲ, ತರ್ಪಣ, ಪುಟಪಾಕ, ಅಂಜನ, ಎಂಬ ವಿಧಿಗಳಿಂದ ಉಪಚರಿಸಬೇಕು.

2. ಪಿಂಡಿಕಾ ವಲಿಕಾ ಪ್ರೋಕ್ತಾ ಬಧ್ಯತೇ ಪಟ್ಟವಸ್ತ್ರಕೈಃ ।
ಪಿಂಡೀವಿಧಿ ನೇತ್ರಾಭಿಷ್ಯಂದಯೋಗ್ಯಾ ಸಾ ವ್ರಣೇಷ್ವಪಿ ನಿಬಧ್ಯತೇ ॥ (ಶಾ. 183.)

ವಸ್ತ್ರತುಂಡುಗಳಿಂದ ಕಣ್ಣುಗಳಿಗೆ ಕಟ್ಟುವ ಔಷಧಕಲ್ಕದ ಮುದ್ದೆಗೆ ಪಿಂಡಿಕಾ ಎನ್ನುತ್ತಾರೆ. ಅದು ಕಣ್ಣುಗಳ ನೀರು ಸುರಿಯುವದಕ್ಕೂ, ವ್ರಣಕ್ಕೂ, ಉಪಯೋಗವುಳ್ಳದ್ದಾಗಿರುತ್ತದೆ.

3. ವಿಡಾಲಕೋ ಬಹಿರ್ಲೇಪೋ ನೇತ್ರೇ ಪಕ್ಷ್ಮವಿವರ್ಜಿತೇ ।
ವಿಡಾಲಕವಿಧಿ ತಸ್ಯ ಮಾತ್ರಾ ಪರಿಜ್ಞೇಯಾ ಮುಖಾಲೇಪವಿಧಾನವತ್ ॥ (ಶಾ. 183.)

ಕಣ್ಣುಗಳಿಗೆ ರೆಪ್ಪೆ ಬಿಟ್ಟು ಹೊರಗಿನಿಂದ ಹಾಕುವ ಲೇಪಕ್ಕೆ ವಿಡಾಲಕ ಎಂದು ಹೆಸರು. ಅದರ ಪ್ರಮಾಣ ಮುಖಲೇಪದಂತೆಯೇ ಆಗಿರುತ್ತದೆ.

4. ಸಂಶುದ್ಧದೇಹಶಿರಸೋ ಜೀರ್ಣಾನ್ನಸ್ಯ ಶುಭೇ ದಿನೇ ।
ಪೂರ್ವಾಹ್ಣೇ ಚಾಪರಾಹ್ಣೇ ವಾ ಕಾರ್ಯಮಕ್ಷ್ಣೋಶ್ಚ ತರ್ಪಣಂ ॥
ವಾತಾತಪರಜೋಹೀನೇ ವೇಶ್ಮನ್ಯುತ್ತಾನಶಾಯಿನಃ ।
ಆಧಾರೌ ಮಾಷಚೂರ್ಣೇನ ಕ್ಲಿನ್ನೇನ ಪರಿಮಂಡಲೌ ॥
ಸಮೌ ದೃಢಾವಸಂಬಾಧೌ ಕರ್ತವ್ಯೌ ನೇತ್ರಕೋಶಯೋಃ ।
ತರ್ಪಣವಿಧಿ. ಪೂರಯೇದ್ ಘೃತಮಂಡಸ್ಯ ವಿಲೀನಸ್ಯ ಸುಖೋದಕೈಃ ॥
ಅಪಕ್ಷ್ಮಗ್ರಾತ್ತತಃ ಸ್ಥಾಪ್ಯಂ ಪಂಚ ತದ್ವಾಕ್‌ಶತಾನಿ ಚ ।
ಸ್ವಸ್ಥೇ ಕಫೇ ಷಟ್ ಪಿತ್ತೇಽಷ್ಟೌ ದಶ ವಾತೇ ತದುತ್ತಮಂ ॥
ರೋಗಸ್ಥಾನವಿಶೇಷೇಣ ಕೇಚಿತ್ಕಾಲಂ ಪ್ರಚಕ್ಷತೇ ।
ಯಥಾಕ್ರಮೋಪದಿಷ್ಟೇಷು ತ್ರೀಣ್ಯೇಕಂ ಪಂಚ ಸಪ್ತ ಚ ॥
ದಶ ದೃಷ್ಟ್ಯಾಮಥಾಷ್ಟೌ ಚ ವಾಕ್‌ಶತಾನಿ ವಿಭಾವಯೇತ್ । (ಸು. 706.)

ರೋಗಿಯು ದೇಹವನ್ನೂ, ತಲೆಯನ್ನೂ, (ವಿರೇಚನಾದಿ ಕ್ರಮಗಳಿಂದ) ಶುದ್ಧ ಮಾಡಿಕೊಂಡನಂತರ, ಶುಭದಿನ ನೋಡಿಕೊಂಡು, ಪೂರ್ವಾಹ್ನ ಅಥವಾ ಅಪರಾಹ್ಣದಲ್ಲಿ ಅನ್ನ

ಜೀರ್ಣವಾಗಿರುವ ಕಾಲದಲ್ಲಿ, ಕಣ್ಣುಗಳಿಗೆ ತರ್ಪಣಕ್ರಮವು ನಡಿಸಲ್ಪಡತಕ್ಕದ್ದು. ಗಾಳಿ, ಬಿಸಿಲು ಮತ್ತು ದೂಳು, ಇಲ್ಲದ ಮನೆಯಲ್ಲಿ ರೋಗಿಯು ಅಂಗಾತವಾಗಿ ಮಲಗಬೇಕು. ಎರಡು ಕಣ್ಣುಗಳ ಕೋಶಗಳಿಗೂ ಸುತ್ತಲು, ಉರುಟಾದ, ಎತ್ತರತಗ್ಗು ಇಲ್ಲದ, ಮತ್ತು ಕೋಶಗಳಿಗೆ ಅತಿಸಮೀಪವಲ್ಲದ ಮತ್ತು ಎಡೆಯಿಲ್ಲದಂತೆ ಗಟ್ಟಿಯಾಗಿ ಹಿಡಿದ, ಎರಡು ದಂಡೆಗಳನ್ನು ನೀರಿನಿಂದ ಕಲಸಿದ ಉದ್ದಿನ ಹಿಟ್ಟಿನಿಂದ ಕಟ್ಟಬೇಕು. ಅವುಗಳ ಮಧ್ಯ ಅಲ್ಪ ಬಿಸಿಯಾದ ನೀರನ್ನು ಕೂಡಿಸಿ ಕರಗಿಸಿದ ತುಪ್ಪವನ್ನು ರೆಪ್ಪೆಕೂದಲುಗಳ ತುದಿ ವರೆಗೆ ತುಂಬಿಸಬೇಕು. ಹಾಗೆ ಸ್ವಸ್ಥನ ವಿಷಯದಲ್ಲಿ 500 ಮಾತ್ರಾಕಾಲ, ಕಫದೋಷದಲ್ಲಿ 600 ಮಾತ್ರಾಕಾಲ, ಪಿತ್ತದೋಷದಲ್ಲಿ 800 ಮಾತ್ರಾಕಾಲ, ವಾತದೋಷದಲ್ಲಿ 1000 ಮಾತ್ರಾಕಾಲ, ಇರಿಸತಕ್ಕದ್ದು; ಇದು ಉತ್ತಮಪಕ್ಷ. ರೋಗದ ಸ್ಥಾನಭೇದದ ಮೇಲೆ ಕಾಲಭೇದ ಮಾಡಬೇಕೆಂತ ಕೆಲವರ ಅಭಿಪ್ರಾಯವಿದೆ ಹ್ಯಾಗಂದರೆ ಸಂಧಿಗತರೋಗದಲ್ಲಿ 300, ವರ್ತ್ಮಗತ ರೋಗದಲ್ಲಿ 100, ಶುಕ್ಲಗತರೋಗದಲ್ಲಿ 500, ಕೃಷ್ಣಗತರೋಗದಲ್ಲಿ 700, ಸರ್ವಗತ ರೋಗದಲ್ಲಿ 1000, ದೃಷ್ಟಿಗತರೋಗದಲ್ಲಿ 800, ಮಾತ್ರಾಕಾಲ ಇರಿಸತಕ್ಕದ್ದು.

ಷರಾ ದಂಡೆಯು ಎರಡಂಗುಲ ಎತ್ತರವಿರಬೇಕಾಗಿಯೂ, ಕಣ್ಣು ಮುಚ್ಚಿಸಿ, ರೆಪ್ಪೆಕೂದಲು ಮುಳುಗುವ ತನಕ ತುಪ್ಪವನ್ನು ಸುರಿದು, ಆನಂತರ ಮೆಲ್ಲಗೆ ಕಣ್ಣು ತೆರಿಸಬೇಕಾಗಿಯೂ, ವಾ ವಿಂದ ಕಾಣುತ್ತದೆ

ತತಶ್ಚಾಪಾಂಗತಃ ಸ್ನೇಹಂ ಸ್ರಾವಯಿತ್ವಾಕ್ಷಿ ಶೋಧಯೇತ್ ।
ಸ್ವಿನ್ನೇನ ಯವಪಿಷ್ಟೇನ ಸ್ನೇಹವಿರ್ಯೋದ್ಧೃತಂ ತತಃ ॥
ಯಥಾಸ್ವಂ ಧೂಮಪಾನೇನ ಕಫಮಸ್ಯ ವಿಶೋಧಯೇತ್ । (ಸು. 706.)

ಆ ಮೇಲೆ ಕಣ್ಣಿನ ಹೊರಮೂಲೆಯಲ್ಲಿ ದಂಡೆ ಕಡಿದು, ಸ್ನೇಹವನ್ನು ಹೊರಗೆ (ಪಾತ್ರೆಕ್ಕೆ) ಸುರಿಸಿ, ಕಣ್ಣನ್ನು ತುಪ್ಪದಿಂದ ಕಲಸಿದ ಯವೆಗೋದಿ ಹಿಟ್ಟಿನಿಂದ ಶುದ್ಧಮಾಡಿ, ಸ್ನೇಹವೀರ್ಯದಿಂದುಂಟಾದ ಕಫವನ್ನು ಯುಕ್ತವಾದ (ಶಿರೋವಿರೇಚನಕರವಾದ) ಧೂಮಪಾನದಿಂದ ಹೋಗಗೊಳಿಸಬೇಕು.

5. ಏಕಾಹಂ ವಾ ತ್ರ್ಯಹಂ ವಾಪಿ ಪಂಚಾಹಂ ಚೇಷ್ಯತೇ ಪರಂ ।
ತರ್ಪಣಕ್ಕೆ ಕಾಲಾವಧಿ (ಸು. 706.)

ಈ ತರ್ಪಣಕ್ರಮವನ್ನು ಒಂದು ದಿನ, ಅಥವಾ ಮೂರು ದಿನ, ಅಥವಾ ಪರಮಾವಧಿ ಐದು ದಿನ ನಡಿಸುವದು ಒಳ್ಳೇದು.

ಷರಾ ಈ ತರ್ಪಣಕ್ರಮವನ್ನು ವಾತದೋಷದಲ್ಲಿ ಪ್ರತಿದಿನ, ಪಿತ್ತದಲ್ಲಿ ಮಧ್ಯ ಒಂದು ದಿನ ಬಿಟ್ಟು, ಕಫದಲ್ಲಿಯೂ ಸ್ವಸ್ಥಸ್ಥಿತಿಯಲ್ಲಿಯೂ ಮಧ್ಯ ಎರಡು ದಿನ ಬಿಟ್ಟು, ಈ ರೀತಿ ಕಣ್ಣಿಗೆ ತೃಪ್ತಿಯುಂಟಾಗುವ ವರೆಗೆ ನಡಿಸಬಹುದಾಗಿ ವಾ (ಪು 107)

6. ತರ್ಪಣೇ ತೃಪ್ತಿಲಿಂಗಾನಿ ನೇತ್ರಸ್ಯೇಮಾನಿ ಲಕ್ಷಯೇತ್ ।
ಸಾರ್ಥಕವಾದ ತರ್ಪಣದ ಲಕ್ಷಣಗಳು ಸುಖಸ್ವಪ್ನಾವಬೋಧತ್ವಂ ವೈಶದ್ಯಂ ವರ್ಣಪಾಟವಂ ॥
ನಿರ್ವೃತಿರ್ವ್ಯಾಧಿವಿಧ್ವಂಸಃ ಕ್ರಿಯಾಲಾಘವಮೇವ ಚ । (ಸು. 706-07.)

ತರ್ಪಣ ಸಾರ್ಥಕವಾದ ಲಕ್ಷಣಗಳು ಯಾವವೆಂದರೆ: ನಿದ್ರೆ ಮತ್ತು ಎಚ್ಚರ ಸುಖವಾಗಿರುವದು, ಕಣ್ಣಿನ ನಿರ್ಮಲತೆ, ವರ್ಣವು ಶುಭ್ರವಾಗಿರುವದು, ಸುಖ, ರೋಗನಾಶ, ಕಣ್ಣಿನ (ತೆರೆಯುವಿಕೆ ಮುಚ್ಚುವಿಕೆ ಮುಂತಾದ) ಕ್ರಿಯೆಗಳ ಲಘುತ್ವ, ಇವು.

7. ಅನಯೋರ್ದೋಷಬಾಹುಲ್ಯಾತ್ ಪ್ರಯತೇತ ಚಿಕಿತ್ಸಿತೇ ।
ಹೀನಾತಿಯೋಗಗಳಿಗೆ ಚಿಕಿತ್ಸಾಕ್ರಮ ಧೂಮನಸ್ಯಾಂಜನೈಃ ಸೇಕೈ ರೂಕ್ಷೈಃ ಸ್ನಿಗ್ಧೈಶ್ಚ ಯೋಗವಿತ್ ॥ (ಸು. 707.)

ತರ್ಪಣವಿಧಿ ನಡಿಸಿದ್ದು ಅತಿಯಾದರೆ, ಅಥವಾ ಹೀನವಾದರೆ, ಬಹು ದೋಷಗಳು ಉಂಟಾಗುತ್ತವೆ. ಅವುಗಳನ್ನು ಧೂಮ, ನಸ್ಯ, ಅಂಜನ, ಸೇಕಗಳನ್ನು, ರೂಕ್ಷವಾಗಿಯೋ, ಸ್ನಿಗ್ಧವಾಗಿಯೋ, ತಕ್ಕ ಹಾಗೆ ಯೋಗಜ್ಞನಾದ ವೈದ್ಯನು ನಡಿಸಿ, ಪರಿಹರಿಸಲಿಕ್ಕೆ ಪ್ರಯತ್ನಿಸಬೇಕು.

8. ದುರ್ದಿನಾತ್ಯುಷ್ಣಶೀತೇಷು ಚಿಂತಾಯಾಂ ಸಂಭ್ರಮೇಷು ಚ ।
ತರ್ಪಣಕ್ಕೆ ಯುಕ್ತವಲ್ಲದ ಸಂದರ್ಭ ಅಶಾಂತೋಪದ್ರವೇ ಚಾಕ್ಷ್ಣಿ ತರ್ಪಣಂ ನ ಪ್ರಶಸ್ಯತೇ ॥ (ಸು. 707.)

ಅತ್ಯುಷ್ಣ ಮತ್ತು ಅತಿಶೀತವಾದ ಕಾಲಗಳಲ್ಲಿ, ಕೆಟ್ಟ ದಿನಗಳಲ್ಲಿ, ರೋಗಿಯು ಚಿಂತೆಯಲ್ಲಿರುವಾಗ್ಗೆ, ಗಾಬರಿ ಸಮಯಗಳಲ್ಲಿ, ಮತ್ತು ಕಣ್ಣಿನ ಉಪದ್ರವಗಳು ಶಾಂತವಾಗದಿರುವಾಗ, ತರ್ಪಣಕ್ರಮವು ಪ್ರಶಸ್ತವಲ್ಲ

9. ಪುಟಪಾಕಸ್ತಥೈತೇಷು ನಸ್ಯಂ ಯೇಷು ಚ ಗರ್ಹಿತಂ ।
ತರ್ಪಣಾರ್ಹಾ ನ ಯೇ ಪ್ರೋಕ್ತಾಃ ಸ್ನೇಹಪಾನಾರ್ಹಮಾಶ್ಚ ಯೇ ॥
ಪುಟಪಾಕಕ್ಕೆ ಯೋಗ್ಯರು ತತಃ ಪ್ರಶಾಂತದೋಷೇಷು ಪುಟಪಾಕಕ್ಷಮೇಷು ಚ ।
ಪುಟಪಾಕಃ ಪ್ರಯೋಕ್ತವ್ಯೋ ನೇತ್ರೇಷು ಭಿಷಜಾ ಭವೇತ್ ॥ (ಸು. 707.)

ಈ ಸಂಗತಿಗಳಲ್ಲಿ (ಸಂ. 8ರಲ್ಲಿ ಹೇಳಿದ ದುರ್ದಿನಾದಿಗಳಲ್ಲಿ)ಯೂ, ಯಾರಿಗೆ ನಸ್ಯವು ತ್ಯಾಜ್ಯವೋ, ಯಾರು ತರ್ಪಣಕ್ಕೆ ಅರ್ಹರಲ್ಲವೋ, ಮತ್ತು ಯಾರು ಸ್ನೇಹಪಾನಕ್ಕೆ ಶಕ್ತರಲ್ಲವೋ, ಅವರಿಗೆ ಸಹ ಪುಟಪಾಕಕ್ರಮವು ಪ್ರಶಸ್ತವಲ್ಲ. ರೋಗಿಗಳು ಪುಟಪಾಕಕ್ರಮವನ್ನು ಸಹಿಸಲಿಕ್ಕೆ ಶಕ್ತರಾಗಿರುವ ಸಂಗತಿಗಳಲ್ಲಿ, ಕಣ್ಣುಗಳ ದೋಷಗಳು ಶಾಂತವಾದನಂತರ, ವೈದ್ಯನು ಪುಟಪಾಕವನ್ನು ಉಪಯೋಗಿಸಬೇಕು.

ಪರಾ ತರ್ಪಣದಿಂದ ಸ್ನೇಹವನ್ನು ಎಳಕೊಂಡ ದೃಷ್ಟಿಯು ಅಬಲವಾಗುವದರಿಂದ, ಅದಕ್ಕೆ ಬಲಕೊಡುವದಕ್ಕಾಗಿ ತರ್ಪಣಾನಂತರದಲ್ಲಿ ಪುಟಪಾಕವನ್ನು ಉಪಯೋಗಿಸಬೇಕಾಗಿ ವಾ ಹೇಳುತ್ತದೆ (ಪು 107) ಅದೇ ತಾತ್ಪರ್ಯದಿಂದ ಕಣ್ಣುಗಳ ದೋಷಗಳು ಶಾಂತವಾದ ಮೇಲೆ ಎಂತ ಹೇಳಿರುವದಾಗಿರಬೇಕು

10. ಸ್ನೇಹನೋ ಲೇಖನೀಯಶ್ಚ ರೋಪಣೀಯಶ್ಚ ಸ ತ್ರಿಧಾ ।
ಪುಟಪಾಕದ 3 ವಿಧ ಮತ್ತು ಅವುಗಳ ಉಪಯೋಗ ಹಿತಃ ಸ್ನಿಗ್ಧೋತಿರೂಕ್ಷಸ್ಯ ಸ್ನಿಗ್ಧಸ್ಯಾಪಿ ಚ ಲೇಖನಃ ॥
ದೃಷ್ಟೇರ್ಬಲಾರ್ಧಮಿತರಃ ಪಿತ್ತಾಸೃಕ್‌ವ್ರಣವಾತನುತ್ । (ಸು. 707.)

ಪುಟಪಾಕವು ಸ್ನೇಹನ, ಲೇಖನ, ರೋಪಣ ಎಂಬ ಮೂರು ವಿಧಗಳುಳ್ಳದ್ದು. ಅತಿಯಾಗಿ ರೂಕ್ಷನಾದವನಿಗೆ ಸ್ನೇಹನ, ಸ್ನಿಗ್ಧನಾದವನಿಗೆ ಲೇಖನ, ಮತ್ತು ದೃಷ್ಟಿಗೆ ಬಲ ಕೊಡುವದಕ್ಕೂ, ಪಿತ್ತರಕ್ತ, ವ್ರಣ, ವಾತಗಳನ್ನು ಪರಿಹರಿಸಲಿಕ್ಕೂ ರೋಪಣ, ಹಿತವಾಗಿರುತ್ತದೆ.

11. ಸ್ನೇಹಮಾಂಸವಸಾಮಜ್ಜಮೇದಃಸ್ವಾದ್ವೌಷಧೈಃ ಕೃತಃ ।
ಸ್ನೇಹನ ಪುಟಪಾಕದ ವಿಧಿ ಸ್ನೇಹನಃ ಪುಟಪಾಕಸ್ತು ಧಾಯ್ಯೋರ್ದ್ವೇ ವಾಕ್‌ಶತೇ ತು ಸಃ ||
(ಸು. 707.)

ಸ್ನೇಹನ ಪುಟಪಾಕವನ್ನು ಸ್ನೇಹವುಳ್ಳ ಮಾಂಸ, ವಸೆ, ಮಜ್ಜೆ, ಮೇದಸ್ಸು ಮತ್ತು ಸೀರುಚಿಯುಳ್ಳ ಔಷಧಗಳು, ಇವುಗಳಿಂದ ಕಲ್ಪಿಸತಕ್ಕದ್ದು. ಅದನ್ನು ಇನ್ನೂರು ಮಾತ್ರಾಕಾಲ ಧರಿಸತಕ್ಕದ್ದು.

12. ಜಾಂಗಲಾನಾಂ ಯಕೃನ್ಮಾಂಸೈರ್ಲೇಖನದ್ರವ್ಯಸಂಭೃತೈಃ ।
ಕೃಷ್ಣಲೋಹರಜಸ್ತಾಮ್ರಶಂಖವಿದ್ರುಮಸಿಂಧುಜೈಃ ||
ಲೇಖನ ಪುಟಪಾಕದ ವಿಧಿ ಸಮುದ್ರಫೇನಕಾಸೀಸಸ್ರೋತೋಜದಧಿಮಸ್ತುಭಿಃ ।
ಲೇಖನೋ ವಾಕ್‌ಶತಂ ತಸ್ಯ ಪರಂ ಧಾರಣಮುಚ್ಯತೇ || (ಸು. 707-08.)

ಜಾಂಗಲಪ್ರಾಣಿಗಳ ಯಕೃತ್ತು-ಮಾಂಸಗಳನ್ನೂ, ಲೇಖನಸ್ವಭಾವದ ದ್ರವ್ಯಗಳನ್ನೂ, ಅಯಸ್ಕಾಂತದ ಪುಡಿ, ತಾಮ್ರ, ಶಂಖ, ಹವಳ, ಸೈಂಧವಲವಣ, ಕಡಲನಾಲಿಗೆ, ಹಿರೇಕಸ, ಸ್ರೋತೋಂಜನ, ಮೊಸರು, ಮೊಸರುನೀರು, ಇವುಗಳನ್ನು ಸಹ ಸೇರಿಸಿ ಲೇಖನ ಪುಟಪಾಕವನ್ನು ಕಲ್ಪಿಸಬೇಕು ಅದನ್ನು ಧರಿಸತಕ್ಕ ಪರಮಾವಧಿ ಕಾಲವು ಒಂದು ನೂರು ಮಾತ್ರಾಕಾಲ ಎಂತ ಹೇಳಲ್ಪಟ್ಟಿದೆ.

ಷರಾ 'ಸ್ರೋತೋಜ' ಎಂಬದು ಸೌವೀರಾಂಜನ ಎಂತ ನಿ ಸಂ ವ್ಯಾ

13. ಸ್ತನ್ಯಜಾಂಗಲಮಧ್ವಾಜ್ಯತಿಕ್ತದ್ರವ್ಯವಿಪಾಚಿತಃ ।
ರೋಪಣ ಪುಟಪಾಕದ ವಿಧಿ ಲೇಖನಾತ್ತ್ರಿಗುಣೋ ಧಾಯ್ಯಃ ಪುಟಪಾಕಸ್ತು ರೋಪಣಃ || (ಸು. 708.)

ರೋಪಣ ಪುಟಪಾಕವನ್ನು ಮೊಲೆಹಾಲು, ಜಾಂಗಲಮಾಂಸ, ಜೇನು, ತುಪ್ಪ, ಕಹಿದ್ರವ್ಯ, ಇವುಗಳನ್ನು ಸೇರಿಸಿ, ಕಾಯಿಸಿ ತಯಾರಿಸತಕ್ಕದ್ದು. ಅದರ ಧಾರಣಕಾಲವು ಲೇಖನ ಪುಟಪಾಕದ ಮೂರು ಪಾಲಷ್ಟು ಆಗಿರುತ್ತದೆ.

ಷರಾ ಪುಟಪಾಕದ ವಿಧಿಯನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಿಯದೆ ಆ ವಿಧಿಪ್ರಕಾರ ಮಣ್ಣು ಮೆತ್ತಿ, ಕೆಂಡದಲ್ಲಿ ಸುಟ್ಟ ಮೇಲೆ ಒಡೆದು, ಬೆಂದ ಔಷಧಗಳ ರಸವನ್ನು ತರ್ಪಣಕ್ಕೆ ಹೇಳಿದ ಕ್ರಮದಲ್ಲಿ ಕಣ್ಣಿಗೆ ಒಳಮೂಲೆಯಲ್ಲಿ ಹಿಂಡತಕ್ಕದ್ದಾಗಿರುತ್ತದೆ ರಸವನ್ನು ಸ್ನೇಹನ-ಲೇಖನಗಳಲ್ಲಿ ಅಲ್ಪ ಬಿಸಿಯಾಗಿ ಮತ್ತು ರೋಪಣದಲ್ಲಿ ತಣ್ಣಗಾಗಿ ಹಿಂಡಬೇಕು

14. ತೇಜಾಂಸ್ಯನಿಲಮಾಕಾಶಮಾದರ್ಶಂ ಭಾಸ್ವರಾಣಿ ಚ ।
ನೇಕ್ಷೇತ ತರ್ಪಿತೇ ನೇತ್ರೇ ಪುಟಪಾಕಕೃತೇ ತಥಾ ||

ತರ್ಪಣ ಪುಟಪಾಕಗಳಿಗೆ ಉಪಚಾರ ಮತ್ತು ಅಪಚಾರ ದೋಷಕ್ಕೆ ಪರಿಹಾರ

ವಿಧ್ಯೋಪಚಾರಾದನಯೋರ್ಯೋ ವ್ಯಾಧಿರುಪಜಾಯತೇ ।
ಅಂಜನಾಶ್ಚ್ಯೋತನಸ್ವೇದೈರ್ಯಥಾಸ್ವಂ ತಮುಪಾಚರೇತ್ ॥
ಪ್ರಸನ್ನವರ್ಣಂ ವಿಶದಂ ವಾತಾತಪಸಹಂ ಲಘು ।
ಸುಖಿಸ್ವಪ್ನಾವಬೋಧ್ಯಕ್ಷಿ ಪುಟಪಾಕಗುಣಾನ್ವಿತಂ ॥ (ಸು. 708.)

(ದೀಪ ಮುಂತಾದ) ಜ್ವಾಲೆಗಳು, ಬೀಸುವ ಗಾಳಿ, ಆಕಾಶ, ಕನ್ನಡಿ, (ಸೂರ್ಯಾದಿ) ಮಿಂಚುವ ವಸ್ತುಗಳು, ಇವುಗಳನ್ನು ಕಣ್ಣುಗಳಿಗೆ ತರ್ಪಣವಿಧಿಯನ್ನಾಗಲಿ, ಪುಟಪಾಕ ವಿಧಿಯನ್ನಾಗಲಿ, ಮಾಡಿಸಿಕೊಂಡವನು ನೋಡಬಾರದು. ಈ ನಿಯಮಕ್ಕೆ ವ್ಯತಿರಿಕ್ತವಾಗಿ ನಡೆಯುವದರಿಂದ ತರ್ಪಣ ಪುಟಪಾಕಗಳ ಸಂಬಂಧವಾಗಿ ಉಂಟಾಗುವ ವ್ಯಾಧಿಯನ್ನು ಅಂಜನದಿಂದಲೋ, ಆಶ್ಚ್ಯೋತನ-ಸ್ವೇದಗಳಿಂದಲೋ, ತಕ್ಕ ಹಾಗೆ ಉಪಚರಿಸಬೇಕು. ಕಣ್ಣು ತಿಳಿಯಾಗಿಯೂ, ಪ್ರಸನ್ನವರ್ಣವುಳ್ಳದ್ದಾಗಿಯೂ, ಲಘುವಾಗಿಯೂ, ಬಿಸಿಲು ಗಾಳಿಗಳನ್ನು ಸಹಿಸುವ ಶಕ್ತಿಯುಳ್ಳದ್ದಾಗಿಯೂ ಇರುವದಲ್ಲದೆ, ನಿದ್ರೆ ಮತ್ತು ಎಚ್ಚರ ಸುಖವಾದರ, ಪುಟಪಾಕವು ಗುಣಕರವಾಯಿತೆಂತ ತಿಳಿಯಬೇಕು.

15 ಯಥಾದೋಷೋಪಯುಕ್ತಂ ತು ನಾತಿಪ್ರಬಲಮೋಜಸಾ ।
ರೋಗಮಾಶ್ಚ್ಯೋತನಂ ಹಂತಿ ಸೇಕಸ್ತು ಬಲವತ್ತರಂ ॥
ತೌ ತ್ರಿಧೈವೋಪಯುಜ್ಯೇತೇ ರೋಗೇಷು ಪುಟಪಾಕವತ್ ।
ಲೇಖನೇ ಸಪ್ತ ಚಾಷ್ಟೌ ವಾ ಬಿಂದವಃ ಸ್ನೈಹಿಕೇ ದಶ ॥

ಆಶ್ಚ್ಯೋತನ-ಸೇಕಗಳ ವಿಧಿಗಳು

ಆಶ್ಚ್ಯೋತನೇ ಪ್ರಯೋಕ್ತವ್ಯಾ ದ್ವಾದಶೈವ ತು ರೋಪಣೇ ।
ಸೇಕಸ್ಯ ದ್ವಿಗುಣಃ ಕಾಲಃ ಪುಟಪಾಕಾತ್ಪರೋ ಮತಃ ॥
ಅಥವಾ ಕಾರ್ಯನಿರ್ವೃತ್ತೇರುಪಯೋಗೋ ಯಥಾಕ್ರಮಂ ।
ಪೂರ್ವಾಪರಾಹ್ಣೇ ಮಧ್ಯಾಹ್ನೇ ರುಜಾಕಾಲೇಷು ಚೋಭಯೋಃ ॥
ಯೋಗಾಯೋಗಾನ್ ಸ್ನೇಹಸೇಕೇ ತರ್ಪಣೋಕ್ತಾನ್ ಪ್ರಚಕ್ಷತೇ ॥
(ಸು. 709.)

ದೋಷಕ್ಕೆ ತಕ್ಕ ಹಾಗೆ ಉಪಯೋಗಿಸಲ್ಪಟ್ಟ ಆಶ್ಚ್ಯೋತನವು ಅತಿಪ್ರಬಲವಲ್ಲದ ಉಪದ್ರವವನ್ನು ತನ್ನ ಶಕ್ತಿಯಿಂದ ಕೊಲ್ಲುತ್ತದೆ. ಅದಕ್ಕಿಂತ ಸೇಕವು ಹೆಚ್ಚು ಬಲವುಳ್ಳದ್ದಾಗಿರುತ್ತದೆ. ಅವು (ಆ ಆಶ್ಚ್ಯೋತನ ಸೇಕ)ಗಳನ್ನು ಪುಟಪಾಕದಂತೆ ಮೂರು ವಿಧವಾಗಿ ರೋಗಭೇದಗಳ ಮೇಲೆ ಉಪಯೋಗಿಸುತ್ತಾರೆ. (ಆ ಮೂರು ವಿಧಗಳೊಳಗೆ) ಲೇಖನದಲ್ಲಿ ಏಳು, ಅಥವಾ ಎಂಟು, ಬಿಂದುಗಳು, ಸ್ನೇಹನದಲ್ಲಿ ಹತ್ತು ಬಿಂದುಗಳು. ರೋಪಣದಲ್ಲಿ ಹನ್ನೆರಡು ಬಿಂದುಗಳು, ಈ ಪ್ರಕಾರ ಆಶ್ಚ್ಯೋತನದ ಮಾತ್ರೆಯಾಗಿರುತ್ತದೆ. ಸೇಕದಲ್ಲಿ ಪರಮಾವಧಿ ಧಾರಣಕಾಲವು ಪುಟಪಾಕದ ಎರಡರಷ್ಟು ಆಗಿರುತ್ತದೆ; ಅಥವಾ ಉದ್ದೇಶ ಪೂರೈಸುವ ವರೆಗೆ ಕ್ರಮಪ್ರಕಾರ ಉಪಯೋಗಿಸುವದು. ದೋಷಭೇದದ ಮೇಲೆ ಪೂರ್ವಾಹ್ಣದಲ್ಲಿ, ಅಪರಾಹ್ಣದಲ್ಲಿ ಮತ್ತು ಮಧ್ಯಾಹ್ನದಲ್ಲಿ, ಮತ್ತು ರೋಗದ ಕಾಲಗಳಲ್ಲಿ, ಆಶ್ಚ್ಯೋತನ ಸೇಕವಿಧಿಗಳನ್ನು ನಡಿಸಬಹುದು. ಸ್ನೇಹನಸೇಕದಲ್ಲಿ ನಡಿಸಿದ ಹೀನಾತಿಯೋಗದ ಲಕ್ಷಣಗಳು ತರ್ಪಣವಿಧಿಯಲ್ಲಿ ಹೇಳಲ್ಪಟ್ಟವೇ ಆಗಿರುತ್ತವೆಂತ ತಿಳಿಯಬೇಕು.

ಇದರಿಂದ ಇತರ ಪರಿಷೇಕದ ಹೀನಾತಿಯೋಗಗಳ ಲಕ್ಷಣಗಳು ಪುಟಪಾಕದಂತೆ ಆಗಿರುತ್ತವೆ ನೇತ್ರರೋಗದ ಆರಂಭದ ಮೂರು ದಿನ ಲಘುಭೋಜನ ಮಾಡಿಕೊಂಡಿದ್ದು, ನಾಲ್ಕನೇ ದಿನ ರೋಗದ ಲಕ್ಷಣಗಳು ಸರಿಯಾಗಿ ಕಂಡ ದ್ದನ್ನು ನೋಡಿ, ಆಶ್ಚೋತನ ಪರಿಷೇಕಗಳನ್ನು ನಡಿಸತಕ್ಕದ್ದು ಸಿ ಸಂ ವ್ಯಾ

16. ವ್ಯಕ್ತರೂಪೇಷು ದೋಷೇಷು ಶುದ್ಧಕಾಯಸ್ಯ ಕೇವಲೇ ।
ನೇತ್ರ ಏವ ಸ್ಥಿತೇ ದೋಷೇ ಪ್ರಾಪ್ತಮಂಜನಮಾಚರೇತ್ ॥
ಲೇಖನಂ ರೋಪಣಂ ಚಾಪಿ ಪ್ರಸಾದನಮಥಾಪಿ ವಾ ।
ತತ್ರ ಪಂಚ ರಸಾನ್ ವ್ಯಸ್ತಾನಾದ್ಯೈಕರಸವರ್ಜಿತಾನ್ ॥
ಪಂಚಧಾ ಲೇಖನಂ ಯುಂಜ್ಯಾದ್ಯಥಾದೋಷಮತಂದ್ರಿತಃ ।
ನೇತ್ರವರ್ತ್ಮಶಿರಾಕೋಶಸ್ರೋತಃಶೃಂಗಾಟಕಾಶ್ರಿತಂ ॥

ಅಂಜನದಲ್ಲಿ ಲೇಖನಾದಿ ಭೇದಗಳು ಮತ್ತು ಅವುಗಳ ಉಪಯೋಗ

ಮುಖನಾಸಾಕ್ಷಿಭಿದೋರ್ಷಮೋಜಸಾ ಸ್ರಾವಯೇತ್ತು ತತ್ ।
ಕಷಾಯತಿಕ್ತಕಂ ಚಾಪಿ ಸಸ್ನೇಹಂ ರೋಪಣಂ ಮತಂ ॥
ತತ್ ಸ್ನೇಹಶೈತ್ಯಾದ್ವರ್ಣ್ಯಂ ಸ್ಯಾದ್ ದೃಷ್ಟೇಶ್ಚ ಬಲವರ್ಧನಂ ।
ಮಧುರಂ ಸ್ನೇಹಸಂಪನ್ನಮಂಜನಂ ತು ಪ್ರಸಾದನಂ ॥
ದೃಷ್ಟಿದೋಷಪ್ರಸಾದಾರ್ಥಂ ಸ್ನೇಹನಾರ್ಥಂ ಚ ತದ್ಧಿತಂ ।
ಯಥಾದೋಷಂ ಪ್ರಯೋಜ್ಯಾನಿ ತಾನಿ ದೋಷವಿಶಾರದೈಃ ॥
ಅಂಜನಾನಿ ಯಥೋಕ್ತಾನಿ ಪ್ರಾಹ್ಣಸಾಯಾಹ್ನರಾತ್ರಿಷು । (ಸು 710.)

ಕಣ್ಣಿನಲ್ಲಿಯೇ ನಿಂತಿರುವ ದೋಷದಲ್ಲಿ, ದೋಷಗಳ ಲಕ್ಷಣಗಳು ಸರಿಯಾಗಿ ಕಂಡ ಮೇಲೆ (ದೋಷಗಳು ಪಕ್ವವಾದ ಮೇಲೆ), ರೋಗಿಯ ದೇಹವನ್ನು ಶುದ್ಧಮಾಡಿ (ವಿರೇಚ ನಾದಿಗಳಿಂದ), ಅಂಜನವನ್ನು ಲೇಖನರೂಪವಾಗಿಯೋ, ರೋಪಣರೂಪವಾಗಿಯೋ, ಅಥವಾ ಪ್ರಸಾದನರೂಪವಾಗಿಯೋ, ತಕ್ಕ ಹಾಗೆ ಉಪಯೋಗಿಸತಕ್ಕದ್ದು. ಹಾಗೆ ಮಾಡು ವಲ್ಲಿ ಲೇಖನವನ್ನು ಆದ್ಯರಸವಾದ ಸೀ ಬಿಟ್ಟು ಮಿಕ್ಕ ಐದು ರಸಗಳೊಳಗೆ ಒಂದರಿಂದೊಂದ ರಂತೆ ಐದು ವಿಧವಾಗಿ ದೋಷಕ್ಕೆ ತಕ್ಕ ಹಾಗ ಬುದ್ಧಿವಂತಿಕೆಯಿಂದ ಉಪಯೋಗಿಸಬೇಕು. ಹಾಗೆ ಉಪಯೋಗಿಸಿದ ಅಂಜನವು ಕಣ್ಣಿನ ರೆಪ್ಪೆಗಳ ಶಿರೆ, ಕೋಶ ಮತ್ತು ಸ್ರೋತಸ್ಸು, ಇವುಗಳಲ್ಲಿ ಮತ್ತು ಶೃಂಗಾಟಕದಲ್ಲಿ ಆಶ್ರಯಿಸಿಕೂಂಡ ದೋಷವನ್ನು ಬಾಯಿ, ಮೂಗು, ಮತ್ತು ಕಣ್ಣುಗಳ ದ್ವಾರ ತನ್ನ ಶಕ್ತಿಯಿಂದ ಹೊರಗೆ ಸುರಿಸುತ್ತದೆ. ಜೊಗರು ಮತ್ತು ಕಹಿ ಗಳಿಂದ ತಯಾರಿಸಿದ ಸ್ನೇಹ ಕೂಡಿದ ಅಂಜನವು ರೋಪಣವನ್ನಿಸಿಕೊಳ್ಳುತ್ತದೆ ಅದು ತನ್ನ ಸ್ನೇಹದ ಶೈತ್ಯಗುಣದಿಂದ ವರ್ಣ ಕೊಡುತ್ತದೆ ಮತ್ತು ದೃಷ್ಟಿಗೆ ಬಲಕೊಡುತ್ತದೆ. ಸೀಯಿಂದ ತಯಾರಿಸಿದ ಸ್ನೇಹ ಕೂಡಿದ ಅಂಜನವು ಪ್ರಸಾದನವೆನ್ನಿಸಿಕೊಳ್ಳುತ್ತದೆ. ಅದು ದೃಷ್ಟಿಯ ದೋಷವನ್ನು ಶಮನ ಮಾಡುವದಕ್ಕೂ, ಸ್ನೇಹನಕ್ಕೂ, ಹಿತವಾಗಿರುತ್ತದೆ. ದೋಷಭೇದ ಗಳನ್ನು ಚೆನ್ನಾಗಿ ತಿಳಿದ ವೈದ್ಯರು ಮೇಲೆ ವಿವರಿಸಿದ ಅಂಜನಗಳನ್ನು ದೋಷಕ್ಕೆ ತಕ್ಕ ಹಾಗೆ ಪೂರ್ವಾಹ್ನ (ಕಫಕ್ಕೆ), ಸಾಯಾಹ್ನ (ವಾತಕ್ಕೆ), ಮತ್ತು ರಾತ್ರಿ (ಪಿತ್ತಕ್ಕೆ) ಪ್ರಯೋ ಗಿಸಬೇಕು.

ಇದರಾ ರಾತ್ರಿಯಲ್ಲಿ, ನಿದ್ರೆಕಾಲದಲ್ಲಿ, ಮಧ್ಯಾಹ್ನದಲ್ಲಿ ಮತ್ತು ಬಿಸಿಲಿನ ಉಷ್ಣತೆಯಿಂದ ಕಣ್ಣು ದಾಡಿರುವಾಗ್ಗೆ, ಅಂಜನವನ್ನು ಉಪಯೋಗಿಸದಾರದಾಗಿ ವಾ (ಪು 105) ಹೇಮಂತ-ತಿತಿರ ಋತುಗಳಲ್ಲಿ ಮಧ್ಯಾಹ್ನ, ಗ್ರೀಷ್ಮ-ಶರತ್

ಋತುಗಳಲ್ಲಿ ಪೂರ್ವಾಹ್ಣ ಮತ್ತು ಅಪರಾಹ್ಣ, ವರ್ಷ ಋತುವಿನಲ್ಲಿ ಮೋಡವಿಲ್ಲದ ಮತ್ತು ಅತ್ಯುಷ್ಣವಲ್ಲದ ಕಾಲ ಮತ್ತು ವಸಂತ ಋತುವಿನಲ್ಲಿ ಸದಾಕಾಲ, ಅಂಜನಕ್ಕೆ ಪ್ರಶಸ್ತವೆಂತ ಶಾ (ಪು 186)

17. ಗುಟಿಕಾರಸಚೂರ್ಣಾನಿ ತ್ರಿವಿಧಾನ್ಯಂಜನಾನಿ ತು ।
ಗುಟಿಕಾ ರಸ ಚೂರ್ಣ ಎಂಬ ಅಂಜನಭೇದ
ಯಥಾಪೂರ್ವಂ ಬಲಂ ತೇಷಾಂ ಶ್ರೇಷ್ಠಮಾಹುರ್ಮನೀಷಿಣಃ ॥ (ಸು. 710.)

ಗುಳಿಗೆ, ರಸ, ಚೂರ್ಣ, ಎಂತ ಅಂಜನವು ಮೂರು ವಿಧ. ಅವುಗಳೊಳಗೆ ಚೂರ್ಣಕ್ಕಿಂತ ರಸ, ಮತ್ತು ರಸಕ್ಕಿಂತ ಗುಳಿಗೆ ಹೆಚ್ಚು ಬಲವುಳ್ಳದ್ದು ಮತ್ತು ಶ್ರೇಷ್ಠ ಎಂತ ಬುದ್ಧಿವಂತರ ಮತವಾಗಿರುತ್ತದೆ.

18. ಹರೇಣುಮಾತ್ರಾ ವರ್ತಿಃ ಸ್ಯಾಲ್ಲೇಖನಸ್ಯ ಪ್ರಮಾಣತಃ ।
ಅಂಜನದ ಪ್ರಮಾಣಗಳು
ಪ್ರಸಾದನಸ್ಯ ಚಾಧ್ಯರ್ಧಾ ದ್ವಿಗುಣಾ ರೋಪಣಸ್ಯ ಚ ॥
ರಸಾಂಜನಸ್ಯ ಮಾತ್ರಾ ತು ಪಿಷ್ಟವರ್ತಿಮಿತಾ ಮತಾ ।
ದ್ವಿತ್ರಿಚತುಃಶಲಾಕಾಶ್ಚ ಚೂರ್ಣಸ್ಯಾಪ್ಯನುಪೂರ್ವಶಃ ॥ (ಸು. 710.)

ಲೇಖನಕ್ಕೆ ಗುಳಿಗೆಯ ಪ್ರಮಾಣ ಪುಟಾಣಿಕಡಲೆಯಷ್ಟು, ಪ್ರಸಾದನಕ್ಕೆ ಅದರ ಒಂದೂವರೆ ಪಾಲಷ್ಟು, ರೋಪಣಕ್ಕೆ ಎರಡು ಪಾಲಷ್ಟು ಆಗಿರುತ್ತದೆ. ರಸರೂಪವಾದ ಅಂಜನದ ಮಾತ್ರೆಯು ಚೂರ್ಣದ ಅಂಜನದಂತೆಯೇ. ಚೂರ್ಣದ ಮಾತ್ರೆ ಲೇಖನಕ್ಕೆ ಎರಡು, ರೋಪಣಕ್ಕೆ ಮೂರು, ಮತ್ತು ಪ್ರಸಾದನಕ್ಕೆ ನಾಲ್ಕು ಕಡ್ಡಿಗಳಾಗಿರುತ್ತವೆ.

ಷರಾ ವಾಗ್ಭಟನ ಪ್ರಕಾರ ಗುಳಿಗೆ ರೇಣಕಿಬೀಜದಷ್ಟು, ರಸ ವಾಯುವಿಳಂಗದಷ್ಟು ತೀಕ್ಷ್ಣವಿರದೆ ಮೃದುವಾದರೆ, ಇದಕ್ಕೆ ದ್ವಿಗುಣ, ಚೂರ್ಣವು ತೀಕ್ಷ್ಣವಾದರೆ ಎರಡು ಶಲಾಕೆ ಮತ್ತು ಮೃದುವಾದರೆ ಮೂರು ಶಲಾಕೆ, ಹೀಗೆ ಪ್ರಮಾಣಗಳಾಗಿರುತ್ತವೆ ಶಾ —ನ ಪ್ರಕಾರ ರಸದ ಮಾತ್ರೆಯು ಉತ್ತಮಪಕ್ಷ ಮೂರು, ಮಧ್ಯಮಪಕ್ಷ ಎರಡು, ಹೀನಪಕ್ಷ ಒಂದು, ವಾಯುವಿಳಂಗದಷ್ಟು ಆಗಿರುತ್ತದೆ

19 ತೇಷಾಂ ತುಲ್ಯಗುಣಾನ್ಯೇವ ವಿದಧ್ಯಾದ್ಭಾಜನಾನ್ಯಪಿ ।
ಸೌವರ್ಣ್ಯಂ ರಾಜತಂ ಶಾರ್ಙ್ಗಂ ತಾಮ್ರಂ ವೈದೂರ್ಯಕಾಂಸ್ಯಜಂ ॥
ಅಂಜನಕಡ್ಡಿಯ ತಯಾರಿಸುವಿಕೆ
ಆಯಸಾನಿ ಚ ಯೋಜ್ಯಾನಿ ಶಲಾಕಾಶ್ಚ ಯಥಾಕ್ರಮಂ ।
ವಕ್ತ್ರಯೋರ್ಮುಕುಲಾಕಾರಾ ಕಲಾಯಪರಿಮಂಡಲಾ ॥
ಅಷ್ಟಾಂಗುಲಾ ತನುರ್ಮಧ್ಯೇ ಸುಕೃತಾ ಸಾಧುನಿಗ್ರಹಾ ।
ಔಡುಂಬರ್ಯಶ್ಮಜಾತಾಪಿ ಶಾರೀರೀ ವಾ ಹಿತಾ ಭವೇತ್ ॥ (ಸು. 711.)

ಅಂಜನಕ್ಕೆ ಸದೃಶವಾದ (ಲೇಖನಾದಿ) ಗುಣವುಳ್ಳ ಪಾತ್ರಗಳನ್ನೇ ಉಪಯೋಗಿಸಬೇಕು. ಕಡ್ಡಿಯನ್ನು ಭಂಗಾರದಿಂದ, ಬೆಳ್ಳಿಯಿಂದ, ಕೊಂಬಿನಿಂದ, ತಾಮ್ರದಿಂದ, ವೈಡೂರ್ಯದಿಂದ, ಕಂಚಿನಿಂದ ಮತ್ತು ಕಬ್ಬಿಣಗಳಿಂದ ಉಕ್ತಕ್ರಮದಲ್ಲಿ ತಯಾರಿಸಿ ಉಪಯೋಗಿಸತಕ್ಕದ್ದು. ಅದರ ಎರಡು ತುದಿಗಳು ಮೊಗ್ಗೆಯ ಆಕಾರವಾಗಿಯೂ, ಕಲಾಯ ಧಾನ್ಯದಂತೆ ಉರುಟಾಗಿಯೂ, ನಡು ಸಪೂರವಾಗಿಯೂ, (ದೊರಗು ಮುಂತಾದ ದೋಷವಿಲ್ಲದೆ) ಒಳ್ಳೇ ರೀತಿಯಿಂದ ಮಾಡಲ್ಪಟ್ಟದ್ದಾಗಿಯೂ, ಹಿಡಿಯಲಿಕ್ಕೆ ಅನುಕೂಲವಾಗಿಯೂ, ಇರಬೇಕು; ಮತ್ತು

ಆದು ಎಂಟಂಗುಲ ಉದ್ದವಿರಬೇಕು. ತಾಮ್ರದಿಂದಾಗಲಿ, ಶಿಲೆಯಿಂದಾಗಲಿ, (ಕೊಂಬು ಮುಂತಾದ) ಶರೀರಾವಯವದಿಂದಾಗಲಿ, ತಯಾರಿಸಲ್ಪಟ್ಟ ಶಲಾಕೆಯು ಹಿತವಾಗುವದು.

ಇದರಾ ಸದೃಶಗುಣಗಳಿಂದರೆ ಚಿನ್ನದಲ್ಲಿ ಸೀ, ಬೆಳ್ಳಿಯಲ್ಲಿ ಹುಳಿ, ಕೊಂಬಿನಲ್ಲಿ ಉಪ್ಪು, ತಾಮ್ರ ಮತ್ತು ಕಬ್ಬಿಣದಲ್ಲಿ ಚೊಗರು, ವೈಡೂರ್ಯದಲ್ಲಿ ಖಾರ, ಕಂಚನಲ್ಲಿ ಕಹಿ, ಇರುವದರಿಂದ ಅಂಜನದ ಗುಣಕ್ಕೆ ಸದೃಶವಾದ ಗುಣವುಳ್ಳ ಪಾತ್ರವಾಗಬೇಕೆಂತ ನಿ ಸಂ ವ್ಯಾ ಆದರೆ ವಾಗ್ಭಟನು ಲೇಖನಕ್ಕೆ ತಾಮ್ರದ ಶಲಾಕೆ, ರೋಪಣಕ್ಕೆ ಕಾಲಲೋಹದ್ದು ಮತ್ತು ಕೈಬೆರಳು, ಮತ್ತು ಪ್ರಸಾದನಕ್ಕೆ ಚಿನ್ನ ಅಥವಾ ಬೆಳ್ಳಿಯ ಶಲಾಕೆ ಪ್ರಶಸ್ತವೆಂತಲೂ, ಶಲಾಕೆಯ ಉದ್ದ ಹತ್ತಂಗುಲವಿರಬೇಕೆಂತಲೂ, ಹೇಳುತ್ತಾನೆ ಶಾರೀರಿ ಎಂಬದಕ್ಕೆ ಬೆರಳು ಎಂಬ ಅರ್ಥ ಸರಿಯಲ್ಲ ಎಂಬ ಪಕ್ಷ ಉಂಟು

20. ವಾಮೇನಾಕ್ಷಿ ವಿನಿರ್ಭುಜ್ಯ ಹಸ್ತೇನ ಸುಸಮಾಹಿತಃ ।
ಶಲಾಕಯಾ ದಕ್ಷಿಣೇನ ಕ್ಷಿಪೇತ್ಸ್ನೇಹಾನೀನಮಂಜನಂ ॥
ಅಪಾಂಗ್ಯಂ ವಾ ಯಥಾಯೋಗ್ಯಂ ಕುರ್ಯಾಚ್ಚಾಪಿ ಗತಾಗತಂ ।
ವರ್ತ್ಮೋಪಲೇಖಮಪಿ ವಾ ಯತ್ತದಂಗುಲ್ಯೈವ ಪ್ರಯೋಜಯೇತ್ ॥

ಅಂಜನ ಕಡ್ಡಿಯನ್ನು ಉಪಯೋಗಿಸುವ ಕ್ರಮ

ಅಕ್ಷ್ಣಿ ನಾತ್ಯಂತಯೋರಂಜ್ಯಾದ್ ಬಾಧಮಾನೋಽಪಿ ವಾ ಭಿಷಕ್ ।
ನ ವಾ ನಿರ್ವಾಂತದೋಷೇಽಕ್ಷ್ಣಿ ಧಾವನಂ ಸಂಪ್ರಯೋಜಯೇತ್ ॥
ದೋಷಃ ಪ್ರತಿನಿವೃತ್ತಃ ಸನ್ ಹನ್ಯಾದ್ ದೃಷ್ಟೇರ್ಬಲಂ ತಥಾ ।
ಗತದೋಷಮಪೇತಾಶ್ರು ಪಶ್ಯೇದ್ಯತ್ ಸಮ್ಯಗಂಭಸಾ ॥
ಪ್ರಕ್ಷಾಲ್ಯಾಕ್ಷಿ ಯಥಾದೋಷಂ ಕಾರ್ಯಂ ಪ್ರತ್ಯಂಜನಂ ತತಃ ।
(ಸು. 711.)

ವೈದ್ಯನು ಏಕಾಗ್ರಚಿತ್ತನಾಗಿ, ಎಡದ ಕೈಯಿಂದ ಕಣ್ಣನ್ನು ಬಿಡಿಸಿ ಹಿಡಿದು, ಬಲದ ಕೈಯಿಂದ ಶಲಾಕೆ ದ್ವಾರ ಅಂಜನವನ್ನು ಕಣ್ಣಿನ ಮೂಗಿನಕಡೆ ತುದಿ ಸಮೀಪ, ಅಥವಾ ಹೊರ ಮೂಲೆ ಸಮೀಪ, ಹಾಕಿ ಯುಕ್ತರೀತಿಯಲ್ಲಿ ಇನ್ನೊಂದು ತುದಿ ವರೆಗೆ ಎಳೆದು ಹಿಂದೆ ತರಬೇಕು. ರೆಪ್ಪೆಗೆ ಹಚ್ಚ ತಕ್ಕದ್ದನ್ನು ಬೆರಳಿನಿಂದಲೇ ಪ್ರಯೋಗಿಸಬೇಕು. ಕಣ್ಣಿನ ಬಹಳ ತುದಿ ವರೆಗೆ ಆಗಲಿ, ನೋವಾಗುವ ಹಾಗೆ ಆಗಲಿ, ಅಂಜನ ಮಾಡಬಾರದು. ಕಣ್ಣಿನ ದೋಷವು ಹೊರಗೆ ಹೋಗುವ ವರೆಗೆ ಕಣ್ಣನ್ನು ತೊಳೆಯಬಾರದು; ಹಾಗೆ ತೊಳೆದರೆ ದೋಷವು ಹಿಂತಿರುಗಿ ನಿಂತು, ದೃಷ್ಟಿಯ ಬಲವನ್ನು ಕೆಡಿಸೀತು. ಕಣ್ಣಿನ ದೋಷ ಹೋಗಿ, ನೀರು ಬರುವದು ನಿಂತ ಕೂಡಲೇ, ನೀರಿನಿಂದ ಕಣ್ಣನ್ನು ಚೆನ್ನಾಗಿ ತೊಳೆದು, ಆ ಮೇಲೆ ದೋಷಕ್ಕೆ ತಕ್ಕ ಹಾಗೆ ಪ್ರತ್ಯಂಜನ ಮಾಡತಕ್ಕದ್ದು.

21. ಶ್ರಮೋದಾವರ್ತರುದಿತಮದ್ಯಕ್ರೋಧಭಯಜ್ವರೈಃ ।
ವೇಗಾಘಾತಶಿರೋದೋಷೈಶ್ಚಾರ್ತಾನಾಂ ನೇಷ್ಯತೇಽಂಜನಂ ॥

ಅಂಜನಕ್ಕೆ ಅಯೋಗ್ಯರು

ರಾಗರುಕ್ತಿಮಿರಾಸ್ರಾವಶೂಲಸಂರಂಭಸಂಭವಾತ್ । (ಸು. 711)

ಶ್ರಮ, ಉದಾವರ್ತ, ಶೋಕ, ಮದ್ಯ, ಸಿಟ್ಟು, ಭಯ, ಜ್ವರ, ವೇಗಗಳ ತಡೆ, ಶಿರೋದೋಷ, ಇವುಗಳಿಂದ ಪೀಡಿತರಾದವರಿಗೆ ಅಂಜನದಿಂದ ಕಣ್ಣು ಕೆಂಪು, ನೋವು, ತಿಮಿರ, ನೀರು ಸುರಿಯುವಿಕೆ, ಶೂಲೆ ಮತ್ತು ಬಾಕು, ಈ ದೋಷಗಳುಂಟಾಗುವದರಿಂದ ಅಂಜನವು ಹಿತವಲ್ಲ.

22. ಅಥಾನುನ್ಮೀಲಯನ್ ದೃಷ್ಟಿಮಂತಃ ಸಂಚಾರಯೇತ್ ಶನೈಃ ।
ಅಂಜಿತೇ ವರ್ತ್ಮನೀ ಕಿಂಚಿತ್ ಚಾಲಯೇಚ್ಚೈವಮಂಜನಂ ॥
ತೀಕ್ಷ್ಣಂ ವ್ಯಾಪ್ನೋತಿ ಸಹಸಾ ನ ಚೋನ್ಮೇಷನಿಮೇಷಣಂ ।
ನಿಷ್ಪೀಡನಂ ಚ ವರ್ತ್ಮಭ್ಯಾಂ ಕ್ಷಾಲನಂ ವಾ ಸಮಾಚರೇತ್ ॥

ಅಂಜನ ತಾಗಿಸಿದ ನಂತರದ ಕರ್ತವ್ಯ

ಅಪೇತೌಷಧಸಂರಂಭಂ ನಿರ್ವೃತಂ ನಯನಂ ಯದಾ ।
ವ್ಯಾಧಿದೋಷರ್ತುಯೋಗ್ಯಾಭಿರದ್ಭಿಃ ಪ್ರಕ್ಷಾಲಯೇತ್ತದಾ ॥
ದಕ್ಷಿಣಾಂಗುಷ್ಠಕೇನಾಕ್ಷಿ ತತೋ ವಾಮಂ ಸವಾಸಸಾ ।
ಊರ್ಧ್ವವರ್ತ್ಮನಿ ಸಂಗೃಹ್ಯ ಶೋಧ್ಯಂ ವಾಮೇನ ಚೇತರತ್ ॥
ವರ್ತ್ಮಪ್ರಾಪ್ತಾಂಜನಾದ್ ದೋಷೋ ರೋಗಾನ್ ಕುರ್ಯಾದತೋಽನ್ಯಥಾ।
(ವಾ. 105-06.)

ಅಂಜನ ಹಾಕಿದ ಮೇಲೆ, ಕಣ್ಣನ್ನು ಬಿಡಿಸದೆನೇ ಒಳಗೆ ದೃಷ್ಟಿಯನ್ನು ಮೆಲ್ಲಗೆ ತಿರುಗಿಸ ಬೇಕು, ಆ ಮೇಲೆ ರೆಪ್ಪೆಗಳನ್ನು ಸ್ವಲ್ಪವಾಗಿ ಅಲ್ಲಾಡಿಸಬೇಕು. ಹೀಗೆ ಮಾಡುವದರಿಂದ ತೀಕ್ಷ್ಣವಾದ ಅಂಜನವು (ಕಣ್ಣಿನೊಳಗೆ) ವ್ಯಾಪಿಸುವದು. ಫಕ್ಕನೆ ಕಣ್ಣು ತೆರೆದು ಮುಚ್ಚು ವದು, ರೆಪ್ಪೆಗಳಿಂದ ಎಳೆದು ಪೀಡಿಸುವದು, ಅಥವಾ ತೊಳೆಯುವದು, ಗರ್ಹಿತವಾಗಿರುತ್ತದೆ. ಔಷಧಿಯ ಪ್ರತಾಪ ನಿಂತು ಕಣ್ಣು ಯಥಾಸ್ಥಿತಿಗೆ ಬಂದನಂತರ, ಕಣ್ಣನ್ನು ವ್ಯಾಧಿಗೂ, ದೋಷಕ್ಕೂ, ಋತುವಿಗೂ, ತಕ್ಕ ಹಾಗಿನ ನೀರಿನಿಂದ ತೊಳೆಯಬೇಕು. ಆ ಮೇಲೆ ಬಲದ ಕೈಯ ಹೆಬ್ಬೆಟ್ಟಿನಿಂದ ರೋಗಿಯ ಎಡದ ಕಣ್ಣನ್ನೂ, ಎಡದ ಹೆಬ್ಬೆಟ್ಟಿನಿಂದ ರೋಗಿಯ ಬಲದ ಕಣ್ಣನ್ನೂ, ಮೇಲಿನ ರೆಪ್ಪೆಯಲ್ಲಿ ಹಿಡಿದು, ವಸ್ತ್ರದಿಂದ ಒರಸಿ ಶುದ್ಧಮಾಡತಕ್ಕದ್ದು. ಹಾಗೆ ಶೋಧಿಸದಿದ್ದರೆ, ರೆಪ್ಪೆಗಳಿಗೆ ಹಿಡಿದ ಅಂಜನದ ದೆಸೆಯಿಂದ ದೋಷವು ಕೆದರಿ ಅನೇಕ ರೋಗ ಗಳನ್ನುಂಟುಮಾಡುವದು.

XXV ನೇ ಅಧ್ಯಾಯ

ಧೂಮವಿಧಿಗಳು.

1. ಧೂಮಃ ಪಂಚವಿಧೋ ಭವತಿ | ತದ್ಯಥಾ | ಪ್ರಾಯೋಗಿಕಃ ಸ್ನೇಹನೋ ವೈರೇಚನಃ ಕಾಸಘ್ನೋ ವಾಮನೀಯಶ್ಚೇತಿ | (ಸು. 591.)

ಧೂಮದಲ್ಲಿ ಐದು ವಿಧ

ಧೂಮವು (ಹೊಗೆಯು) ಐದು ವಿಧ; ಹ್ಯಾಗಂದರೆ 1. ಪ್ರಾಯೋಗಿಕ, 2. ಸ್ನೇಹನ, 3. ವೈರೇಚನ (ವಿರೇಚನ ಮಾಡಿಸತಕ್ಕದ್ದು), 4. ಕಾಸಘ್ನ (ಕೆಮ್ಮು ಪರಿಹರಿಸತಕ್ಕಂಥಾದ್ದು), ಮತ್ತು 5. ವಾಮನೀಯ (ವಾಂತಿಮಾಡಿಸತಕ್ಕಂಥಾದ್ದು).

2. ತತ್ರೈಲಾದಿನಾ ಕುಷ್ಠತಗರವರ್ಜ್ಯೈರ್ಣ ಶ್ಲಕ್ಷ್ಣಪಿಷ್ಟೇನ ದ್ವಾದಶಾಂಗುಲಂ ಶರಕಾಂಡಂ ಕ್ಷ್ಮಾಮೇಣಾಷ್ಟಾಂಗುಲಂ ವೇಷ್ಟಯಿತ್ವಾ ಲೇಪಯೇದೇಷಾ ವರ್ತಿಃ ಪ್ರಾಯೋಗಿಕೇ | ಸ್ನೇಹಫಲಸಾರಮಧೂಚ್ಛಿಷ್ಟಸರ್ಜರಸಗುಗ್ಗುಲುಪ್ರಭೃತಿಭಿಃ ಸ್ನೇಹಮಿಶ್ರೈಃ ಸ್ನೇಹನೇ | ಶಿರೋವಿರೇಚನದ್ರವ್ಯೈರ್ವೈರೇಚನೇ | ಬೃಹತೀಕಂಟಕಾರಿಕಾತ್ರಿಕಟುಕಕಾಸಮರ್ದಹಿಂಗ್ವಿಂಗುದೀತ್ವಙ್ಮಾನಃಶಿಲಾಭಿನ್ನರುಹಾಕರ್ಕಟಶೃಂಗೀಪ್ರಭೃತಿಭಿಃ ಕಾಸಹರೈಶ್ಚ ಕಾಸಘ್ನೇ | ಸ್ನಾಯುಚರ್ಮಖುರಶೃಂಗಕರ್ಕಟಕಾಸ್ಥಿಶುಷ್ಕಮತ್ಸ್ಯವಲ್ಲೂರಕೃಮಿಪ್ರಭೃತಿಭಿರ್ವಾಮನೀಯೈಶ್ಚ ವಾಮನೀಯೇ | (ಸು. 591-92.)

ಪಂಚವಿಧ ಧೂಮಗಳನ್ನು ತಯಾರಿಸುವ ಕ್ರಮ

ಏಲಾದಿವರ್ಗದ ಔಷಧಗಳೊಳಗೆ ಕುಷ್ಠ ಮತ್ತು ತಗರ ಬಿಟ್ಟು ಉಳಿದವುಗಳ ನುಣ್ಣಗಿನ ಹಿಟ್ಟು ಮಾಡಿ, ಹನ್ನೆರಡಂಗುಲ ಉದ್ದದ ಶರದರ್ಭೆಯ ಕಡ್ಡಿ ತುಂಡಿಗೆ ಮಧ್ಯ ಎಂಟು ಅಂಗುಲ ಉದ್ದಕ್ಕೆ (ತುದಿಗಳಿಂದ ಎರಡು ಅಂಗುಲ ಬಿಟ್ಟು) ನಾರಿನ ವಸ್ತ್ರದ ತುಂಡನ್ನು ಸುತ್ತಿ, ಆ ಪುಡಿಯನ್ನು ಅದರ ಮೇಲೆ ಲೇಪಿಸಿ, ಮಾಡಿದ ವರ್ತಿಯು ಪ್ರಾಯೋಗಿಕ. ತೈಲವುಳ್ಳ ಫಲಗಳ ತಿರುಳುಗಳು, ಜೇನುಮೇಣ, ರಾಳ, ಗುಗ್ಗುಳ, ಮುಂತಾದವುಗಳಿಂದ ಸ್ನೇಹ ಮಿಶ್ರಮಾಡಿ ತಯಾರಿಸಿದ ವರ್ತಿಯು ಸ್ನೇಹನ ಶಿರೋವಿರೇಚನಕ್ಕೆ ಉಕ್ತವಾದ ದ್ರವ್ಯಗಳಿಂದ ತಯಾರಿಸಿದ ವರ್ತಿಯು ವೈರೇಚನ. ಗುಳ್ಳ, ಕಲ್ಲಂಟೆ, ತ್ರಿಕಟು, ಚಗತೆ, ಹಿಂಗು, ಇಂಗುದೀ, ದಾಲ್ಚೀನಿ ಚೆಕ್ಕೆ, ಮಣಿಶಿಲೆ, ಅಮೃತಬಳ್ಳಿ, ಕರ್ಕಟಶೃಂಗಿ, ಮುಂತಾದ ಕೆಮ್ಮು ಪರಿಹಾರಕವಾದ ಔಷಧಗಳಿಂದ ತಯಾರಿಸಿದ ವರ್ತಿಯು ಕಾಸಘ್ನ. ನರ, ಚರ್ಮ, ಗೊರಸು, ಕೋಡು, ಏಡಿಯ ಎಲುಬು, ಒಣಗಿದ ಮೀನು, ಒಣಗಿದ ಮಾಂಸ, ಕೃಮಿ, ಮುಂತಾದ ವಾಂತಿ ಮಾಡಿಸತಕ್ಕ ವಸ್ತುಗಳಿಂದ ತಯಾರಿಸಿದ ವರ್ತಿಯು ವಾಮನೀಯ ಆಗಿರುತ್ತದೆ.

ಪದಾ ವರ್ತಿಯು ನೇತ್ರದ ಆರನೇ ಒಂದು ಅಂತ ಉದ್ದವಿರಬೇಕೆಂತ ಸಾಧಾರಣ ನಿಯಮವಿರುತ್ತದೆ. (ಮುಂದಿನ ಸಂ 4 ನೋಡಿರಿ)

3. ತತ್ರ ವಸ್ತಿನೇತ್ರದ್ರವ್ಯೈರ್ಧೂಮನೇತ್ರದ್ರವ್ಯಾಣಿ ವ್ಯಾಖ್ಯಾತಾನಿ ಭವಂತಿ | ಧೂಮನೇತ್ರಂ ತು ಕನಿಷ್ಠಿಕಾಪರಿಣಾಹಮಗ್ರೇ ಕಲಾಯಮಾತ್ರಂ ಸ್ರೋ

ತೋ ಮೂಲೇऽಂಗುಷ್ಠಪರಿಣಾಹಂ ಧೂಮವರ್ತಿಪ್ರವೇಶಸ್ರೋತೋऽಂಗುಲಾನ್ಯಷ್ಟಚತ್ವಾರಿಂಶತ್ ಪ್ರಾಯೋಗಿಕೇ । ದ್ವಾತ್ರಿಂಶತ್ ಸ್ನೇಹನೇ । ಚತುರ್ವಿಂಶತಿರ್ವೈರೇಚನೇ । ಷೋಡಶಾಂಗುಲಂ ಕಾಸಘ್ನೇ ವಾಮನೀಯೇ ಚ । ಏತೇऽಪಿ ಕೋಲಾಸ್ಥಿಮಾತ್ರಛಿದ್ರೇ ಭವತಃ । ವ್ರಣನೇತ್ರಮಷ್ಟಾಂಗುಲಂ ವ್ರಣಧೂಪನಾರ್ಥಂ ಕಲಾಯಪರಿಮಂಡಲಂ ಕುಲತ್ಥವಾಹಿಸ್ರೋತ ಇತಿ । (ಸು. 592.)

ಧೂಮದ ನಳಿಗೆಯ ಏವರ

ವಸ್ತಿಯ ನಳಿಗೆಗೆ ಯಾವ ದ್ರವ್ಯಗಳು ಹೇಳಲ್ಪಟ್ಟವೋ, ಅವೇ ಧೂಮನಳಿಗೆಗೂ ಪ್ರಶಸ್ತವಾದವುಗಳಾಗಿರುತ್ತವೆ. ಆದರೆ ಧೂಮದ ನಳಿಗೆಯು ತುದಿಯಲ್ಲಿ ಕಿರಿಬೆರಳಷ್ಟು ತೋರ ಮತ್ತು ಕಲಾಯ (ಪುಟಾಣಿಕಡಲೆ) ಧಾನ್ಯದಷ್ಟು ಗೋಳೆ, ಮತ್ತು ಬುಡದಲ್ಲಿ ಹೆಬ್ಬೆಟ್ಟಿನಷ್ಟು ತೋರ ಮತ್ತು ಧೂಮದ ವರ್ತಿ ಹೊಗುವಷ್ಟು ಗೋಳೆ, ಸಹ ಉಳ್ಳದ್ದಾಗಿರಬೇಕು. ಅದರ ಉದ್ದವು ಪ್ರಾಯೋಗಿಕದಲ್ಲಿ ನಾಲ್ವತ್ತೆಂಟು ಅಂಗುಲ, ಸ್ನೇಹನದಲ್ಲಿ ಮೂವತ್ತೆರಡು ಅಂಗುಲ, ವೈರೇಚನದಲ್ಲಿ ಇಪ್ಪತ್ತನಾಲ್ಕು ಅಂಗುಲ, ವಾಮನೀಯದಲ್ಲಿ ಅಥವಾ ಕಾಸಘ್ನದಲ್ಲಿ ಹದಿನಾರು ಅಂಗುಲ, ಇರಬೇಕು. ಕಾಸಘ್ನ ಮತ್ತು ವಾಮನೀಯದ ನಳಿಗೆಗಳ ಛಿದ್ರವು ಬೊಗರಿಬೀಜದಷ್ಟು ಇರಬೇಕು. ವ್ರಣಗಳಿಗೆ ಧೂಪ ಕೊಡುವದಕ್ಕೆ ಉಪಯೋಗಿಸಲ್ಪಡುವ ವ್ರಣನಳಿಗೆಯು ಎಂಟು ಅಂಗುಲ ಉದ್ದವಾಗಿಯೂ, ಕಲಾಯಧಾನ್ಯದಷ್ಟು ತೋರವಾಗಿಯೂ, ಹುರುಳಿ ಹೊಗುವಷ್ಟು ಗೋಳೆಯುಳ್ಳದ್ದಾಗಿಯೂ ಇರತಕ್ಕದ್ದು.

ಷರಾ ವಾಮನೀಯಕ್ಕೆ ನೇತ್ರದ ಉದ್ದ ಹತ್ತು ಅಂಗುಲವಿದ್ದರೆ ಸಾಕೆಂಬ ಮತಾಂತರವನ್ನು ಕೆಲವರು ಅವಲಂಬಿಸುತ್ತಾರೆ

ಧೂಮನಾಡೀ ಭವೇತ್ತತ್ರ ತ್ರಿಖಂಡಾ ಚ ತ್ರಿಪರ್ವಿಕಾ ॥ ಭಾ. ಪ್ರ. (ಪು 226-27.)

ಧೂಮದ ನಳಿಗೆಯಲ್ಲಿ ಮೂರು ಗಂಟುಗಳು ಮತ್ತು ಮೂರು ತುಂಡುಗಳು ಇರಬೇಕು.

4. ಜಲೇ ಸ್ಥಿತಾಮಹೋರಾತ್ರಮಿಷೀಕಾಂ ದ್ವಾದಶಾಂಗುಲಾಂ ।
ಪಿಷ್ಟೈರ್ಧೂಮೌಷಧೈರೇವಂ ಪಂಚಕೃತ್ವಃ ಪ್ರಲೇಪಯೇತ್ ॥
ವರ್ತಿರಂಗುಷ್ಠವತ್ ಸ್ಥೂಲಾ ಯವಮಧ್ಯಾ ಯಥಾ ಭವೇತ್ ।
ಛಾಯಾಶುಷ್ಕಾಂ ವಿಗರ್ಭಾಂ ತಾಂ ಸ್ನೇಹಾಭ್ಯಕ್ತಾಂ ಯಥಾಯಥಂ ॥
ಧೂಮನೇತ್ರಾರ್ಪಿತಾಂ ಪಾತುಮಗ್ನಿವ್ಲಷ್ಟಾಂ ಪ್ರಯೋಜಯೇತ್ । (ವಾ. 100)

ಧೂಮದ ಬತ್ತಿಯನ್ನು ತಯಾರಿಸುವ ಕ್ರಮ

ಹನ್ನೆರಡಂಗುಲ ಉದ್ದದ (ದರ್ಭೆಯ ದಂಟಿನ ಅಥವಾ ಬೇರಿನ) ಕಡ್ಡಿಯನ್ನು ನೀರಲ್ಲಿ ಒಂದು ಹಗಲೂ ರಾತ್ರಿ ನೆನಸಿಟ್ಟು, ಅನಂತರ ಅದಕ್ಕೆ ಹೊಗೆಯ ಔಷಧಗಳನ್ನು ಅರೆದು ತಯಾರಿಸಿದ ಹಿಟ್ಟನ್ನು ಐದು ಸರ್ತಿ ಲೇಪಿಸಿ, ಅಂಗುಷ್ಠದಷ್ಟು ತೋರವಾಗಿ ಮಧ್ಯದಲ್ಲಿ ಯವೆಯಾಕಾರವಾಗಿ ಇರುವ ಬತ್ತಿಯನ್ನು ಮಾಡಿ, ನೆಳಲಲ್ಲಿ ಒಣಗಿಸಿ, ಒಳಗಿನ ಕಡ್ಡಿಯನ್ನು ತೆಗೆದುಬಿಟ್ಟು, ಅಲ್ಪಸ್ವಲ್ಪ ಸ್ನೇಹವನ್ನು ಹಚ್ಚಿ, ನಳಿಗೆಯೊಳಗೆ ಹೊಗಿಸಿ, ತುದಿಗೆ ಬೆಂಕಿ ಹಚ್ಚಿ, ಹೊಗೆಯನ್ನು ಕುಡಿಯಲಿಕ್ಕೆ ಉಪಯೋಗಿಸತಕ್ಕದ್ದಾಗಿರುತ್ತದೆ.

ಷರಾ ಕಲ್ಕಕರ್ಷ ಪ್ರಮಾಣ ಎಂತ ಶಾ (ಪು 162)

5. ಅಥ ಸುಖೋಪವಿಷ್ಟಃ ಸುಮನಾ ಋಜ್ವಧೋದೃಷ್ಟಿರತಂದ್ರಿತಃ ಸ್ನೇಹಾ
ಕ್ತಾಂ ಪ್ರದೀಪ್ತಾಗ್ರಾಂ ವರ್ತಿಂ ನೇತ್ರಸ್ರೋತಸಿ ಪ್ರಣಿಧಾಯ ಧೂಮಂ
ಪಿಬೇತ್ | (ಸು. 592.)

ಬತ್ತಿಯನ್ನು ಸೇದುವ ಕ್ರಮ

ಧೂಮಪಾನ ಮಾಡತಕ್ಕವನು ಸುಖವಾಗಿ ನೆಟ್ಟಗೆ ಕೂತು, ದೃಷ್ಟಿಯನ್ನು ಕೆಳಗೆ ಮಾಡಿ ಕೊಂಡು, ಮನಸ್ಸು ಕೂಟ್ಟು, ಎಚ್ಚರದಿಂದ, ಬತ್ತಿಗೆ ಸ್ನೇಹ ಹಚ್ಚಿ, ತುದಿಗೆ ಉರಿ ಕೊಟ್ಟು, ಬತ್ತಿಯನ್ನು ನಳಿಗೆಯ ಗೋಳೆಯೊಳಗೆ ಇಟ್ಟು, ಹೊಗೆಯನ್ನು ಕುಡಿಯತಕ್ಕದ್ದು.

6. ಮುಖೇನ ತಂ ಪಿಬೇತ್ಪೂರ್ವಂ ನಾಸಿಕಾಭ್ಯಾಂ ತತಃ ಪಿಬೇತ್ |
ಮುಖಪೀತಂ ಮುಖೇನೈವ ವಮೇತ್ ಪೀತಂ ಚ ನಾಸಯಾ ||
ಮುಖೇನ ಧೂಮಮಾದಾಯ ನಾಸಿಕಾಭ್ಯಾಂ ನ ನಿರ್ಹರೇತ್ |
ತೇನ ಹಿ ಪ್ರತಿಲೋಮೇನ ದೃಷ್ಟಿಸ್ತತ್ರ ವಿಹನ್ಯತೇ || (ಸು 592.)

ಹೊಗೆಯನ್ನು ಹೊರಗೆ ಬಿಡುವ ಕ್ರಮ

ಧೂಮವನ್ನು ಮೊದಲು ಬಾಯಿಯಿಂದ ಸೇದಿ, ಅನಂತರ ಎರಡು ಮೂಗಿನ ಸೊಳ್ಳೆ ಗಳಿಂದ ಸೇದಬೇಕು. ಬಾಯಿಯಿಂದ ಸೇದಿದ್ದಾಗಲಿ, ಮೂಗಿನಿಂದ ಸೇದಿದ್ದಾಗಲಿ, ಬಾಯಿ ಯಿಂದಲೇ ಹೊರಗೆ ಬಿಡಬೇಕಲ್ಲದೆ, ಬಾಯಿಯಿಂದ ಹೊಗೆಯನ್ನು ತೆಗೆದುಕೊಂಡು ಮೂಗಿನ ಸೊಳ್ಳೆಗಳಿಂದ ಹೊರಗೆ ಬಿಡಬಾರದು ಹಾಗೆ ಪ್ರತಿಲೋಮವಾಗಿ ಹೊಗೆ ಬಿಡುವದರಿಂದ, ದೃಷ್ಟಿಗೆ ಬಾಧಕ ಉಂಟಾಗುತ್ತದೆ.

ಇದರಿಂದ ಮೂಗಿನಲ್ಲಿ ಅಥವಾ ತಿರಸ್ಸಿನಲ್ಲಿ ಸೇರಿರುವ ದೋಷವು ಪೀಡಿಸುವ ಸಂಗತಿಯಲ್ಲಿ ಪ್ರಥಮತಃ ಮೂಗಿನಿಂದ ಹೊಗೆ ಸೇದತಕ್ಕದ್ದೆಂತ ಪಾ (ಪು 99)

7. ವಿಶೇಷತಸ್ತು ಪ್ರಾಯೋಗಿಕಂ ಘ್ರಾಣೇನಾದದೀತ ಸ್ನೇಹನಂ ಮುಖ
ನಾಸಾಭ್ಯಾಂ ನಾಸಿಕಯಾ ವೈರೇಚನಂ ಮುಖೇನೈವೇತರೌ |
(ಸು. 592)

ಹೊಗೆಯನ್ನು ಬಾಯಿ ಮೂಗುಗಳಿಂದ ಸೇದುವದಕ್ಕೆ ವಿಧಿ

ವಿಶೇಷವಾಗಿ ಪ್ರಾಯೋಗಿಕ ಧೂಮವನ್ನು ಮೂಗಿನಿಂದಲೂ, ಸ್ನೇಹನಧೂಮವನ್ನು ಬಾಯಿ ಮತ್ತು ಮೂಗಿನಿಂದಲೂ, ವೈರೇಚನಧೂಮವನ್ನು ಮೂಗಿನಿಂದಲೂ, ಮತ್ತು ಇತರ ಎರಡು ವಿಧದ ಧೂಮವನ್ನು ಬಾಯಿಯಿಂದಲೇ, ಸೇದತಕ್ಕದ್ದು.

8. ತತ್ರ ಪ್ರಾಯೋಗಿಕೇ ವರ್ತಿಂ ವ್ಯಪಗತಶರಕಾಂಡಾಂ ನಿವಾತಾತಪಶು
ಷ್ಕಾಮಂಗಾರೇಷ್ವವದೀಪ್ಯ ನೇತ್ರಮೂಲಸ್ರೋತಸಿ ಪ್ರಯುಜ್ಯ ಧೂ
ಮಮಾಹರೇತಿ ಬ್ರೂಯಾತ್ | ಏವಂ ಸ್ನೇಹನಂ ವೈರೇಚನಿಕಂ ಚ
ಕುರ್ಯಾದಿತಿ | (ಸು. 592.)

ಪ್ರಾಯೋಗಿಕ, ಸ್ನೇಹನ, ವೈರೇಚನಿಕ ವರ್ತಿಗಳನ್ನು ಉಪಯೋಗಿಸುವ ಕ್ರಮ

ಪ್ರಾಯೋಗಿಕ ಧೂಮದ ಸಂಗತಿಯಲ್ಲಿ ವರ್ತಿಯ ಕಡ್ಡಿಯನ್ನು ತೆಗೆದುಬಿಟ್ಟು, ಬಿಸಿಲು ಮತ್ತು ಗಾಳಿಗೆ ಇಡದೆ ಒಣಗಿಸಿದ ವರ್ತಿಯನ್ನು ಕೆಂಡಕ್ಕೆ ಹಿಡಿದು, ಉರಿ ಹತ್ತಿಸಿ, ನಳಿಗೆಯ ಬುಡದ ಗೋಳೆಯೊಳಗೆ ಹೊಗಿಸಿ, ಹೊಗೆಯನ್ನು ತೆಗೆದುಕೊ ಎಂದು ಹೇಳಬೇಕು. ಇದೇ ರೀತಿ ಸ್ನೇಹನ ಮತ್ತು ವೈರೇಚನ ಧೂಮಪಾನಗಳನ್ನು ಮಾಡಿಸತಕ್ಕದ್ದು.

9. ಇತರಯೋರ್ವ್ಯಪೇತಧೂಮಾಂಗಾರೇ ಸ್ಥಿರೇ ಸಮಾಹಿತೇ ಶರಾವೇ ಪ್ರಕ್ಷಿಪ್ಯ ವರ್ತಿಂ ಮೂಲಚ್ಛಿದ್ರೇಣಾನ್ಯೇನ ಶರಾವೇಣ ಪಿಧಾಯ ತಸ್ಮಿನ್ ಛಿದ್ರೇ ನೇತ್ರಮೂಲಂ ಸಂಯೋಜ್ಯ ಧೂಮಮಾಸೇವೇತ | (ಸು. 592-93.)

ಕಾಸಘ್ನ-ವಾಮನೀಯ ವರ್ತಿಗಳನ್ನು ಉಪಯೋಗಿಸುವ ಕ್ರಮ

ಕಾಸಘ್ನ ಮತ್ತು ವಾಮನೀಯ ಎಂಬ ಧೂಮಗಳ ಸಂಗತಿಯಲ್ಲಿ, ವರ್ತಿಯನ್ನು (ಅಥವಾ ಚೂರ್ಣವನ್ನು) ಹೊಗೆಯಿಲ್ಲದ ಬೆಂಕಿಕೆಂಡಗಳುಳ್ಳ ಮತ್ತು ಗಟ್ಟಿಯಾಗಿಯೂ, ಸರಿಯಾಗಿಯೂ ಇರಿಸಲ್ಪಟ್ಟ ಚಟ್ಟಿಯೊಳಗೆ ಹಾಕಿ, ಅಡಿಯಲ್ಲಿ ರಂಧ್ರವುಳ್ಳ ಬೇರೊಂದು ಚಟ್ಟಿಯಿಂದ ಮುಚ್ಚಿ, ಆ ರಂಧ್ರದಲ್ಲಿ ಧೂಮದ ನಳಿಗೆಯ ಬುಡವನ್ನು ನಿಲ್ಲಿಸಿ, ಹೊಗೆಯನ್ನು ಸೇವಿಸಬೇಕು.

10 ಪ್ರಶಾಂತೇ ಧೂಮೇ ವರ್ತಿಮವಶಿಷ್ಟಾಂ ಪ್ರಕ್ಷಿಪ್ಯ ಪುನರಪಿ ಧೂಮಂ ಪಾಯಯೇದಾದೋಷಶುದ್ಧೇರೇಷ ಧೂಮಪಾನೋಪಾಯವಿಧಿಃ | (ಸು. 593.)

ಧೂಮಪಾನಗಳ ವರ್ತಿ ಸಂಖ್ಯೆ

ಹೊಗೆಯು ಶಾಂತವಾದ ಮೇಲೆ, ಉಳಿದ ವರ್ತಿಯನ್ನು ತೆಗೆದು ಬಿಸಾಕಿ, ಪುನಃ ಅದೇ ರೀತಿ ದೋಷಗಳು ಶುದ್ಧವಾಗುವ ವರೆಗೆ ಹೊಗೆಯನ್ನು ಸೇದಿಸಬೇಕು. ಇದು ಧೂಮಪಾನ ಮಾಡುವ ಉಪಾಯವನ್ನು ಕುರಿತಾದ ವಿಧಿಯಾಗಿರುತ್ತದೆ

ಪ್ರಾಯೋಗಿಕಂ ತ್ರೀಂಸ್ತ್ರೀನುಚ್ಛ್ವಾಸಾನಾದದೀತ | ಮುಖನಾಸಿಕಾಭ್ಯಾಂ ಚ ಪರ್ಯಾಯಾಂಸ್ತ್ರೀಂಶ್ಚತುರೋ ವೇತಿ | ಸ್ನೈಹಿಕಂ ಯಾವದಶ್ರುಪ್ರವೃತ್ತಿಃ | ವೈರೇಚನಿಕಮಾದೋಷದರ್ಶನಾತ್ | ತಿಲತಂಡುಲಯವಾಗೂಪೀತೇನ ಪಾತವ್ಯೋ ವಾಮನೀಯಃ | ಗ್ರಾಸಾಂತರೇಷು ಕಾಸಘ್ನ ಇತಿ | (ಸು. 594)

ಪ್ರಾಯೋಗಿಕದ ಹೊಗೆಯನ್ನು ಮೂರುಮೂರು ಸರ್ತಿ ಎಳೆಯಬೇಕು. ಹೀಗೆ ಬಾಯಿಯಿಂದ ಮತ್ತು ಮೂಗಿನಿಂದ ಮೂರು ಅಥವಾ ನಾಲ್ಕು ಆವರ್ತಿ. ಸ್ನೇಹಿಕ ಹೊಗೆಯನ್ನು ಕಣ್ಣುನೀರು ಬರುವ ಪರ್ಯಂತ ಮತ್ತು ವೈರೇಚನದ ಹೊಗೆಯನ್ನು ದೋಷವು ಕಾಣುವ ವರೆಗೆ ಸೇದುವದು. ವಮನಧೂಮವನ್ನು ಕೊಡುವದಕ್ಕೆ ಮೊದಲು ರೋಗಿಗೆ ಎಳ್ಳು ಮತ್ತು ಅಕ್ಕಿಯಿಂದ ಮಾಡಿದ ತೆಳ್ಳಗಿನ ಗಂಜಿಯನ್ನು ಕುಡಿಸಬೇಕು. ಕಾಸಘ್ನ ಧೂಮವನ್ನು ಆಹಾರಗಳ ತುತ್ತುಗಳ ಮಧ್ಯ ಉಪಯೋಗಿಸತಕ್ಕದ್ದು.

ಇದರಿಂದ ಮೂರು ಸರ್ತಿಗಳಿಂದ ಸೇದಿ ಹೊರಗೆ ಬಿಡುವದು ಒಂದು ಆವರ್ತಿ ಹಾಗಿನ 3 ಅಥವಾ 4 ಆವರ್ತಿ ಧೂಮಪಾನವನ್ನು ಮಾಡಬೇಕೆಂತ ಅಭಿಪ್ರಾಯ

11. ವ್ರಣಧೂಮಂ ಶರಾವಸಂಪುಟೋಪನೀತೇನ ನೇತ್ರೇಣ ವ್ರಣಮಾನಯೇತ್ | ಧೂಮನಾದ್ವೇದನೋಪಶಮೋ ವ್ರಣವೈಶದ್ಯಮಾಸ್ರಾವೋಪಶಮಶ್ಚ ಭವತಿ | (ಸು. 594.)

ವ್ರಣಧೂಮ ವಿಧಿ

ವ್ರಣಧೂಮವನ್ನು ಚಟ್ಟಿಯ ಮುಚ್ಚಳದಲ್ಲಿ ನೆಟ್ಟ ನಳಿಗೆಯಿಂದ ವ್ರಣಕ್ಕೆ ಒಯ್ಯಬೇಕು. ಹಾಗೆ ಹೊಗೆ ಕೊಡುವದರಿಂದ ನೋವು ಶಾಂತವಾಗುವದಲ್ಲದೆ, ವ್ರಣವು ಶುದ್ಧವಾಗಿ, ಅದರಿಂದ ಬರುವ ಸ್ರಾವವು ನಿಲ್ಲುವದು.

12. ತತ್ರ ಶೋಕಶ್ರಮಭಯಾಮರ್ಷೌಷ್ಣ್ಯವಿಷರಕ್ತಪಿತ್ತಮದಮೂರ್ಚ್ಛಾದಾಹಪಿಪಾಸಾಪಾಂಡುರೋಗತಾಲುಶೋಷಛರ್ದಿಶಿರೋಽಭಿಘಾತೋದ್ಧಾರಾಪತರ್ಪಿತತಿಮಿರಪ್ರಮೇಹೋದರಾಧ್ಮಾನೋರ್ಧ್ವವಾತಾರ್ತಬಾಲವೃದ್ಧದುರ್ಬಲವಿರಿಕ್ತಾಸ್ಥಾಪಿತಜಾಗರಿತಗರ್ಭಿಣೀರೂಕ್ಷಕ್ಷೀಣಕ್ಷತೋರಸ್ಕಮಧುಘೃತದಧಿದುಗ್ಧಮತ್ಸ್ಯಮದ್ಯಯವಾಗೂಪೀತಾಲ್ಪಕಫಾಶ್ಚ ನ ಧೂಮಮಾಸೇವೇರನ್ | (ಸು 593.)

ಧೂಮಪಾನಕ್ಕೆ ಅಯೋಗ್ಯರು

ಶೋಕ, ಶ್ರಮ, ಭಯ, ಸಿಟ್ಟು, ಉಷ್ಣತೆ, ವಿಷ, ರಕ್ತಪಿತ್ತ, ಮದ, ಮೂರ್ಚ್ಛೆ, ಉರಿ, ಬಾಯಾರಿಕೆ, ಪಾಂಡುರೋಗ, ತಾಲು ಒಣಗುವಿಕೆ, ವಾಂತಿ, ತಲೆಬಡತ, ತೇಗು, ಲಂಘನ, ತಿಮಿರ, ಪ್ರಮೇಹ, ಉದರವ್ಯಾಧಿ, ಹೊಟ್ಟೆಯುಬ್ಬರ, ಊರ್ಧ್ವವಾತ, ಇವುಗಳಿಂದ ಪೀಡಿತರಾದವರೂ, ಬಾಲರೂ, ಮುದುಕರೂ, ಬಲಹೀನರೂ, ವಿರೇಚನ ಮಾಡಿಸಿಕೊಂಡವರೂ, ಆಸ್ಥಾಪನ ವಸ್ತಿ ಸೇವಿಸಿದವರೂ, ಜಾಗರಮಾಡಿದವರೂ, ಗರ್ಭಿಣಿಯರೂ, ರೂಕ್ಷರೂ, ಕ್ಷೀಣರಾದವರೂ, ಉರಃಕ್ಷತರೂ, ಜೇನು, ತುಪ್ಪ, ಮೊಸರು, ಹಾಲು, ಮೀನು, ಮದ್ಯ, ಮತ್ತು ಯವಾಗು ಗಂಜಿ, ಇವುಗಳನ್ನು ಸೇವಿಸಿದವರೂ ಮತ್ತು ಅಲ್ಪವಾದ ಕಫವುಳ್ಳವರು, ಇವರೆಲ್ಲಾ ಧೂಮವನ್ನು ಪಾನಮಾಡಬಾರದು.

13. ತತ್ರ ಸ್ನೇಹನೋ ವಾತಂ ಶಮಯತಿ, ಸ್ನೇಹಾದುಪಲೇಪಾಚ್ಚ | ವೈರೇಚನಃ ಶ್ಲೇಷ್ಮಾಣಮುತ್ಕ್ಲೇಶ್ಯಾಪಕರ್ಷತಿ, ರೌಕ್ಷ್ಯಾತ್ತೈಕ್ಷ್ಣ್ಯಾದೌಷ್ಣ್ಯಾದ್ವೈಶದ್ಯಾಚ್ಚ | ಪ್ರಾಯೋಗಿಕಃ ಶ್ಲೈಷ್ಮಾಣಮುತ್ಕ್ಲೇಶಯತ್ಯುತ್ಕ್ಲಿಷ್ಟಂ ಚಾಪಕರ್ಷತಿ, ಸಾಧಾರಣತ್ವಾತ್ ಪೂರ್ವಾಭ್ಯಾಮಿತಿ | (ಸು. 593.)

ಸ್ನೇಹನ-ವೈರೇಚನ-ಪ್ರಾಯೋಗಿಕ ಧೂಮಗಳ ಕರ್ಮ

ಅವುಗಳೊಳಗೆ ಸ್ನೇಹನ ಧೂಮವು ತನ್ನ ಜಿಡ್ಡಿನಿಂದಲೂ, ಲೇಪವಾಗಿ ಹಿಡಿಯುವ ಸ್ವಭಾವದಿಂದಲೂ, ವಾತವನ್ನು ಶಮನಮಾಡುತ್ತದೆ. ವೈರೇಚನವು ತನ್ನ ರೂಕ್ಷ, ತೀಕ್ಷ್ಣ, ಉಷ್ಣ ಮತ್ತು ವಿಶದಗುಣಗಳಿಂದ ಕಫವನ್ನು ಕೆತ್ತು, ಹೊರಗೆ ಹಾಕುತ್ತದೆ ಪ್ರಾಯೋಗಿಕವು ಮೇಲಿನ ಎರಡಕ್ಕೆ ಸಮಾನಗುಣವುಳ್ಳದ್ದಾದ್ದರಿಂದ ಕಫವನ್ನು ಕೀಳುತ್ತದೆ ಮತ್ತು ಸಡಿಲಾಗಿರುವ ಕಫವನ್ನು ಹೊರಗೆ ಹಾಕುತ್ತದೆ.

14. ನರೋ ಧೂಮೋಪಯೋಗಾಚ್ಚ ಪ್ರಸನ್ನೇಂದ್ರಿಯವಾಙ್ಮನಾಃ | ದೃಢಕೇಶದ್ವಿಜಶ್ಮಶ್ರುಸುಗಂಧಿವಿಶದಾನನಃ || (ಸು. 593.)

ಧೂಮೋಪಯೋಗದ ಸಾಮಾನ್ಯ ಗುಣ

ಮನುಷ್ಯನು (ಪ್ರಾಯೋಗಿಕ) ಧೂಮವನ್ನು ಉಪಯೋಗಿಸುವದರಿಂದ, ಅವನ ಇಂದ್ರಿಯಗಳು, ಮಾತು ಮತ್ತು ಮನಸ್ಸು ಪ್ರಸನ್ನವಾಗುವದಲ್ಲದೆ, ಅವನ ಕೂದಲು, ಹಲ್ಲು

ಮತ್ತು ಎಂಸೆ ಬಲವಾಗುವವು, ಮತ್ತು ಬಾಯಿಯು ಸುವಾಸನೆಯುಳ್ಳದ್ದೂ, ನಿರ್ಮಲವೂ ಆಗುತ್ತದೆ.

15. ಅಕಾಲಪೀತಃ ಕುರುತೇ ಭ್ರಮಮೂರ್ಚ್ಛಾಶಿರೋರುಜಃ ।
ಅಕಾಲ ಧೂಮಪಾನದ ದೋಷ ಘ್ರಾಣಶ್ರೋತ್ರಾಕ್ಷಿಜಿಹ್ವಾನಾಮುಪಘಾತಂ ಚ ದಾರುಣಮ್ ॥ (ಸು. 593.)

ಅಕಾಲದಲ್ಲಿ ಧೂಮಪಾನ ಮಾಡುವದರಿಂದ ಭ್ರಮೆ, ಮೂರ್ಚ್ಛೆ ಮತ್ತು ತಲೆನೋವು ಉಂಟಾಗುವದಲ್ಲದೆ, ಮೂಗು, ಕಿವಿ, ಕಣ್ಣು ಮತ್ತು ನಾಲಿಗೆಗಳಲ್ಲಿ ಕಠಿನವಾದ ರೋಗಗಳು ಸಂಭವಿಸುವವು.

ಪರಾ ಅಕಾಲದಲ್ಲಿ ಅಥವಾ ಅತಿಯಾಗಿ ಧೂಮಪಾನ ಮಾಡುವದರಿಂದ ಕಿವುಡುತನ, ಕುರುಡುತನ, ಮೂಕತ್ವ, ರಕ್ತಪಿತ್ತ, ತಲೆತಿರುಕು, ಈ ರೋಗಗಳು ಉಂಟಾಗುತ್ತವೆಂತಲೂ, ಆಗ್ಗೆ ಘೃತಪಾನ, ವಿರೇಚನ ಮತ್ತು ರಕ್ತಮೋಕ್ಷಣ ಹಿತಕರವಾಗುತ್ತವೆಂತಲೂ ಚಿ ಸಾ ಸಂ (ಪು 953) ಧೂಮಪಾನದ ದೋಷಕ್ಕೆ ನಾವನ-ಅಂಜನ-ತರ್ಪಣಗಳು ಸಹ ಹಿತವೆಂತಲೂ, ತುಪ್ಪ, ಕಬ್ಬಿನ ರಸ, ದ್ರಾಕ್ಷಿ, ಹಾಲು, ಸಕ್ಕರೆ ಪಾನಕ, ಸೀ ಮತ್ತು ಹುಳಿ ರಸಗಳು, ಇವುಗಳನ್ನು ವಮನಕ್ಕಾಗಿ ಕೊಡಬೇಕಾಗಿಯೂ, ಶಾ (ಪು 162)

16. ಹೃತ್ಕಂಠೇಂದ್ರಿಯಸಂಶುದ್ಧಿರ್ಲಾಘವಂ ಶಿರಸಃ ಶಮಃ ।
ಸರಿಯಾದ ಧೂಮಪಾನದ ಲಕ್ಷಣ ಯದೋರಿತಾನಾಂ ದೋಷಾಣಾಂ ಸಮ್ಯಕ್ ಪೀತಸ್ಯ ಲಕ್ಷಣಮ್ ॥
ಚಿ. ಸಾ. ಸಂ. (ಪು. 953.)

ಎದೆಯ, ಕಂಠದ ಮತ್ತು ಇಂದ್ರಿಯಗಳ ಶುದ್ಧತೆ, ತಲೆ ಹಗುರವಾಗುವದು ಮತ್ತು ಕೆದರಿದ್ದ ದೋಷಗಳು ಶಾಂತವಾಗುವದು, ಇವು ಸರಿಯಾದ ಧೂಮಪಾನದ ಲಕ್ಷಣವಾಗಿರುತ್ತವೆ.

17. ಧೂಮೋ ದ್ವಾದಶಕಾದ್ವರ್ಷಾದ್ ಗೃಹ್ಯತೇಽಶೀತಿಕಾನ್ನ ಚ ।
ಧೂಮಪಾನಕ್ಕೆ ಪ್ರಾಯ ಭಾ. ಪ್ರ. (ಪು. 226.)

ಹನ್ನೆರಡು ವರ್ಷಕ್ಕೆ ಕಡಿಮೆ ಪ್ರಾಯದ ಮಕ್ಕಳೂ, ಎಂಭತ್ತು ವರ್ಷಕ್ಕೆ ಮಿಕ್ಕಿದ ಮುದುಕರೂ ಧೂಮಪಾನವನ್ನು ಮಾಡಬಾರದು

ಪರಾ XXVI ಅ 18ನೇ ಸಂ ನೋಡಿರಿ

XXVI ನೇ ಅಧ್ಯಾಯ.

ನಸ್ಯವಿಧಿ

1. ಔಷಧಮೌಷಧಸಿದ್ಧೋ ವಾ ಸ್ನೇಹೋ ವಾ ನಾಸಿಕಾಭ್ಯಾಂ ದೀಯತ ಇತಿ ನಸ್ಯಂ । ತದ್ ದ್ವಿವಿಧಂ ಶಿರೋವಿರೇಚನಂ ಸ್ನೇಹನಂ ಚ । ತದ್ ದ್ವಿವಿಧಮಪಿ ಪಂಚಧಾ । ತದ್ಯಥಾ । ನಸ್ಯಂ ಶಿರೋವಿರೇಚನಂ ಪ್ರತಿಮರ್ಶೋಽವಪೀಡಃ ಪ್ರಧಮನಂ ಚ । ತೇಷು ನಸ್ಯಂ ಪ್ರಧಾನಂ ಶಿರೋವಿರೇಚನಂ ಚ ನಸ್ಯ ವಿಕಲ್ಪಃ ಪ್ರತಿಮರ್ಶಃ ಶಿರೋವಿರೇಚನವಿಕಲ್ಪೋಽವಪೀಡಃ ಪ್ರಧಮನಂ ಚ । ತತೋ ನಸ್ಯಶಬ್ದಃ ಪಂಚಧಾ ನಿಪಾತಿತಃ । ತತ್ರ ಯಃ ಸ್ನೇಹನಾರ್ಥಂ ಶೂನ್ಯಶಿರಸಾಂ ಗ್ರೀವಾಸ್ಕಂಧೋರಸಾಂ ಬಲಜನನಾರ್ಥಂ ದೃಷ್ಟಿಪ್ರಸಾದಜನನಾಯ ವಾ ಸ್ನೇಹೋ ವಿಧೀಯತೇ ತಸ್ಮಿನ್ ವೈಶೇಷಿಕೋ ನಸ್ಯಶಬ್ದಃ । (ಸು. 594.)

ನಸ್ಯದ ನಿರ್ದೇಶ ಮತ್ತು ವಿಧಗಳು

ಔಷಧವು, ಅಥವಾ ಔಷಧದಿಂದ ತಯಾರಿಸಲ್ಪಟ್ಟ ಸ್ನೇಹವು, ಮೂಗಿನ ಸೊಳ್ಳೆಗಳಿಂದ ಕೊಡಲ್ಪಡುತ್ತದೆಂಬದು ನಸ್ಯ. ಅದು ಶಿರೋವಿರೇಚನ ಮತ್ತು ಸ್ನೇಹನ ಎಂತ ಎರಡು ವಿಧ. ಆ ಎರಡರಲ್ಲಿ ಐದು ಸೇರಿವೆ. ಯಾವವೆಂದರೆ 1 ನಸ್ಯ, 2. ಶಿರೋವಿರೇಚನ, 3. ಪ್ರತಿಮರ್ಷ, 4 ಅವಪೀಡ, ಮತ್ತು 5. ಪ್ರಧಮನ. ಇವೈದರೊಳಗೆ ನಸ್ಯ ಮತ್ತು ಶಿರೋವಿರೇಚನ ಎಂಬವು ಪ್ರಧಾನವಾದವು. ಪ್ರತಿಮರ್ಶವು ನಸ್ಯದ ಭೇದ, ಅವಪೀಡ ಮತ್ತು ಪ್ರಧಮನ ಎಂಬವು ಶಿರೋವಿರೇಚನದ ಭೇದಗಳು, ಇವೈದಕ್ಕೂ ಸಾಮಾನ್ಯವಾಗಿ ನಸ್ಯಶಬ್ದವು ಉಪಯೋಗಿಸಲ್ಪಡುತ್ತದಾದರೂ, ವಿಶೇಷವಾಗಿ ನಸ್ಯ ಎನ್ನುವದು ತಲೆ ಶೂನ್ಯವಾದವರ ಸ್ನೇಹನಕ್ಕಾಗಿಯೂ, ಕುತ್ತಿಗೆ, ಭುಜ ಮತ್ತು ಎದೆಗಳಿಗೆ ಬಲಕೊಡುವದಕ್ಕಾಗಿಯೂ, ದೃಷ್ಟಿಯ ಪ್ರಸನ್ನತೆಯನ್ನುಂಟುಮಾಡುವದಕ್ಕೂ, ಕೊಡಲ್ಪಡುವ ಸ್ನೇಹಕ್ಕಾಗಿರುತ್ತದೆ.

ಪರಾ ನಸ್ಯಕರ್ಮದಲ್ಲಿ ಸ್ನೇಹನ, ರೇಚನ ಎಂತ ಎರಡು ವಿಧ ಆವುಗಳಲ್ಲಿ ಸ್ನೇಹನವು ಪುಷ್ಟಿಕೊಡುವಂಥಾದ್ದು, ರೇಚನವು ಕೃಶತೆಯನ್ನುಂಟುಮಾಡುವಂಥಾದ್ದು (ಶಾ 156)

2. ಮರ್ಶಶ್ಚ ಪ್ರತಿಮರ್ಶಶ್ಚ ದ್ವಿಧಾ ಸ್ನೇಹೋಽತ್ರ ಮಾತ್ರಯಾ ।
ಕಲ್ಕಾದ್ಯೈರವಪೀಡಸ್ತು ತೀಕ್ಷ್ಣೈರ್ಮೂರ್ಧವಿರೇಚನಃ ॥
ಧ್ಮಾನಂ ವಿರೇಚನಶ್ಚೂರ್ಣೋ ಯುಂಜ್ಯಾತ್ತಂ ಮುಖವಾಯುನಾ ।
ಷಡಂಗುಲದ್ವಿಮುಖಯಾ ನಾಡ್ಯಾ ಭೇಷಜಗರ್ಭಯಾ ॥
ಸ ಹಿ ಭೂರಿತರಂ ದೋಷಂ ಚೂರ್ಣತ್ವಾದವಕರ್ಷತಿ । (ವಾ. 95.)

ಮರ್ಶ-ಪ್ರತಿಮರ್ಶ-ಅವಪೀಡ-ಧಮನಗಳ ಭೇದ

ಸ್ನೇಹನಸ್ಯದಲ್ಲಿ ಪ್ರಮಾಣಭೇದದ ಮೇಲೆ ಮರ್ಶ, ಪ್ರತಿಮರ್ಶ, ಎಂತ ಎರಡು ವಿಧ. ತೀಕ್ಷ್ಣವಾದ ಕಲ್ಕಾದಿಗಳಿಂದ ತಯಾರಿಸಿದ ಶಿರೋವಿರೇಚನನಸ್ಯಕ್ಕೆ ಅವಪೀಡ ಎಂತಲೂ, ಚೂರ್ಣರೂಪವಾದ ವಿರೇಚನನಸ್ಯಕ್ಕೆ ಧ್ಮಾನ ಎಂತಲೂ ಹೆಸರು ಧ್ಮಾನದಲ್ಲಿ ಆರು ಅಂಗುಲ ಉದ್ದವಾದ, ಎರಡು ಬಾಯಿಗಳುಳ್ಳ, ನಳಿಗೆಯಲ್ಲಿ ಔಷಧವನ್ನು ತುಂಬಿಸಿ, ಆ

ಚೂರ್ಣವನ್ನು ಬಾಯಿಯ ಗಾಳಿಯಿಂದ (ಊದಿ) ಉಪಯೋಗಿಸುವದಾಗಿರುತ್ತದೆ; ಅದು ಚೂರ್ಣರೂಪವಾದ್ದರಿಂದ ದೋಷವನ್ನು ಬಹಳವಾಗಿ ಹೊರಗೆ ಹಾಕುತ್ತದೆ.

3. ತತ್ತು ನಸ್ಯಂ ದೇಯಂ ವಾತಾಭಿಭೂತೇ ಶಿರಸಿ ದಂತಕೇಶಶ್ಮಶ್ರು ಪ್ರಪಾತದಾರುಣಕರ್ಣಶೂಲಕರ್ಣಕ್ಷ್ವೇಡತಿಮಿರಸ್ವರೋಪಘಾತ ನಾಸಾರೋಗಾಸ್ಯಶೋಷಾಪಬಾಹುಕಾಕಾಲಜವಲೀಪಲಿತಪ್ರಾ ದುರ್ಭಾವದಾರುಣಪ್ರಬಾಧೇಷು ವಾತಪೈತ್ತಿಕೇಷು ಮುಖರೋಗೇಷ್ವ ನ್ಯೇಷು ಚ ವಾತಪಿತ್ತಹರದ್ರವ್ಯಸಿದ್ಧೇನ ಸ್ನೇಹೇನೇತಿ | (ಸು. 594-95.)

ಸ್ನೇಹನನಸ್ಯಕ್ಕೆ ಅರ್ಹರು

ಆ (ಸ್ನೇಹ) ನಸ್ಯವು, ತಲೆಯಲ್ಲಿ ವಾತದೋಷವು ಪ್ರಬಲವಾದಾಗ್ಗೆ, ಹಲ್ಲು, ಕೂದಲು ಮತ್ತು ಮೀಸೆ ಉದುರುವದು, ದಾರುಣ, ಕಿವಿಶೂಲೆ, ಕಿವಿಯಲ್ಲಿ ಶಬ್ದ, ತಿಮಿರ, ಸ್ವರಬೀಳುವದು, ನಾಸಿಕಾರೋಗ, ಬಾಯಿಹುಣ್ಣು, ಅಪಬಾಹುಕ, ಅಕಾಲದಲ್ಲಿ ನೆರಿನರೆಗಳು ಕಾಣುವದು, ಇವುಗಳ ಕರಿನವಾದ ಬಾಧೆಗಳಲ್ಲಿ ಮತ್ತು ವಾತಪಿತ್ತಗಳಿಂದ ಹುಟ್ಟಿದ ಬೇರೆ ಮುಖರೋಗಗಳಲ್ಲಿ, ವಾತಪಿತ್ತಹರವಾದ ದ್ರವ್ಯಗಳಿಂದ ತಯಾರಿಸಲ್ಪಟ್ಟ ಸ್ನೇಹದಿಂದ ಕೊಡಬೇಕಾದ್ದಾಗಿರುತ್ತದೆ.

4. ಶಿರೋವಿರೇಚನಂ ಶ್ಲೇಷ್ಮಣಾಭಿವ್ಯಾಪ್ತತಾಲುಕಂರಶಿರಸಾಮರೋಚಕ ಶಿರೋಗೌರವಶೂಲಪೀನಸಾರ್ಧಾವಭೇದಕಕೃಮಿಪ್ರತಿಶ್ಯಾಯಾಪಸ್ಮಾರ ಗಂಧಾಜ್ಞಾನೇಷ್ವನ್ಯೇಷು ಚೋರ್ಧ್ವಜತ್ರುಗತೇಷು ಕಫಜೇಷು ವಿಕಾರೇಷು. ಶಿರೋವಿರೇಚನದ್ರವ್ಯೈಸ್ತತ್ಸಿದ್ಧೇನ ವಾ ಸ್ನೇಹೇನೇತಿ | (ಸು. 595.)

ಶಿರೋವಿರೇಚನನಸ್ಯಕ್ಕೆ ಅರ್ಹರು

ತಾಲು, ಕಂರ ಮತ್ತು ತಲೆ, ಇವುಗಳಲ್ಲಿ ಕಫ ವ್ಯಾಪಿಸಿರುವವರಿಗೂ, ಅರುಚಿ, ತಲೆಭಾರ, ಶೂಲ, ಪೀನಸ, ಅರೆತಲೆಯ ಒಡತ, ಕೃಮಿ, ನೆಗಡಿ, ಅಪಸ್ಮಾರ, ವಾಸನೆ ತಿಳಿಯದಿರುವದು, ಈ ರೋಗಗಳಲ್ಲಿಯೂ, ಕಫದಿಂದ ಹುಟ್ಟಿದ ಕುತ್ತಿಗೆಯ ಮೇಲಕ್ಕೆ ನಿಂತಿರುವ ಬೇರೆ ಉಪದ್ರವಗಳಲ್ಲಿಯೂ, ಶಿರೋವಿರೇಚನ ಮಾಡಿಸತಕ್ಕ ದ್ರವ್ಯಗಳಿಂದಾಗಲಿ, ಅವುಗಳಿಂದ ತಯಾರಿಸಲ್ಪಟ್ಟ ಸ್ನೇಹದಿಂದಾಗಲಿ, ಶಿರೋವಿರೇಚನರೂಪವಾದ ನಸ್ಯವು ಉಪಯೋಗಿಸಲ್ಪಡಬೇಕಾದ್ದಾಗಿರುತ್ತದೆ.

5. ತತ್ರೈತದ್ ದ್ವಿವಿಧಮಭುಕ್ತವತೋಽನ್ನಕಾಲೇ ಪೂರ್ವಾಹ್ಣೇ ಶ್ಲೇಷ್ಮರೋಗಿಣಾಂ ಮಧ್ಯಾಹ್ನೇ ಪಿತ್ತರೋಗಿಣಾಮಪರಾಹ್ಣೇ ವಾತರೋಗಿಣಾಂ | (ಸು. 595.)

ನಸ್ಯಗಳಿಗೆ ಯೋಗ್ಯಕಾಲ

ಮೇಲೆ ಹೇಳಿದ ಎರಡು ವಿಧವಾದ (ಸ್ನೈಹಿಕ ಮತ್ತು ವೈರೇಚನಿಕ) ನಸ್ಯಗಳನ್ನು ಉಂಡಿರದವಗೆ ಅನ್ನಕಾಲದಲ್ಲಿ, ಕಫರೋಗಿಗಾದರೆ ಪೂರ್ವಾಹ್ನದಲ್ಲಿ, ಪಿತ್ತರೋಗಿಗಾದರೆ ಮಧ್ಯಾಹ್ನದಲ್ಲಿ, ಮತ್ತು ವಾತರೋಗಿಗಾದರೆ ಅಪರಾಹ್ಣದಲ್ಲಿ, ಉಪಯೋಗಿಸತಕ್ಕದ್ದು.

ಷರಾ ಶರತ್ ಮತ್ತು ವಸಂತಋತುಗಳಲ್ಲಿಯೂ, ಸ್ವಸ್ಥನಿಗೂ ಪೂರ್ವಾಹ್ಣದಲ್ಲಿ, ಹೇಮಂತ-ಶಿಶಿರ ಎಂಬ ಶೀತವಾದ ಋತುಗಳಲ್ಲಿ ಮಧ್ಯಾಹ್ನಕಾಲದಲ್ಲಿ, ಗ್ರೀಷ್ಮಋತುವಿನಲ್ಲಿ, ಸಾಯಂಕಾಲ, ಮತ್ತು ವರ್ಷಋತುವಿನಲ್ಲಿ ಬಿಸಿಲು ಕಾಣುವ ದಿನದಲ್ಲಿ, ನಸ್ಯ ಉಪಯೋಗಿಸಬೇಕಾಗಿ ವಾ (ಪು 96) ರೋಗವು ಕಠಿನವಾದಲ್ಲಿ ರಾತ್ರಿಯಲ್ಲಿಯೂ ನಸ್ಯ ಮಾಡಬಹುದೆಂತ ಶಾ (ಪು 156)

6. ಅಥ ಪುರುಷಾಯ ಶಿರೋವಿರೇಚನೀಯಾಯ ದನ್ತಕಾಷ್ಠಧೂಮ
ಪಾನಾಭ್ಯಾಂ ವಿಶುದ್ಧವಕ್ತ್ರಸ್ರೋತಸೇ ಪಾಣಿತಾಪಪರಿಸ್ವಿನ್ನಮೃದಿತ
ಗಲಕಪೋಲಲಲಾಟಪ್ರದೇಶಾಯ ವಾತಾತಪರಜೋಹೀನವೇಶ್ಮನ್ಯು

ಶಿರೋವಿರೇಚನದ ಕ್ರಮ

ತ್ತಾನಶಾಯಿನೇ ಪ್ರಸಾರಿತಕರಚರಣಾಯ ಕಿಂಚಿತ್ಪ್ರವಿಲಂಬಿತಶಿರಸೇ
ವಸ್ತ್ರಾಚ್ಛಾದಿತನೇತ್ರಾಯ ವಾಮಹಸ್ತಪ್ರದೇಶಿನ್ಯಗ್ರೋನ್ನಾಮಿತನಾ
ಸಾಗ್ರಾಯ ವಿಶುದ್ಧಸ್ರೋತಸಿ ದಕ್ಷಿಣಹಸ್ತೇನ ಸ್ನೇಹಮುಷ್ಣಾನು
ತಪ್ತಂ ರಜತಸುವರ್ಣತಾಮ್ರಮೃತ್ಪಾತ್ರಶುಕ್ತೀನಾಮನ್ಯತಮಸ್ಥಂ
ಶುಕ್ತ್ಯಾ ಪಿಚುನಾ ವಾ ಸುಖೋಷ್ಣಂ ಸ್ನೇಹಮದ್ರುತಮಾಸಿಂಚೇದ
ವಚ್ಛಿನ್ನಧಾರಂ ಯಥಾ ನೇತ್ರೇ ನ ಪ್ರಾಪ್ನೋತಿ |
ಸ್ನೇಹೇಽವಸಿಚ್ಯಮಾನೇ ತು ಶಿರೋ ನೈವ ಪ್ರಕಂಪಯೇತ್ |
ನ ಕುಪ್ಯೇನ್ನ ಪ್ರಭಾಷೇಚ್ಚ ನ ಕ್ಷ್ವೇಣ್ಯಾನ್ನ ಹಸೇತ್ತಥಾ ||
ಏತೈರ್ಹಿ ವಿಹಿತಃ ಸ್ನೇಹೋ ನ ಸಮ್ಯಕ್ ಪ್ರತಿಪದ್ಯತೇ |
ತತಃ ಕಾಸಪ್ರತಿಶ್ಯಾಯಶಿರೋಽಕ್ಷಿಗದಸಂಭವಃ || (ಸು 595)

ಶಿರೋವಿರೇಚನ ಮಾಡಿಸಿಕೊಳ್ಳತಕ್ಕ ಪುರುಷನ ಬಾಯಿಯನ್ನು ದಂತಕಾಷ್ಠದಿಂದಲೂ, ಧೂಮಪಾನದಿಂದಲೂ, ಚೆನ್ನಾಗಿ ಶುದ್ಧಮಾಡಿಸಿ, ಗಂಟಲು, ಕಪಾಲ ಮತ್ತು ಹಣೆ ಪ್ರದೇಶಗಳನ್ನು ಕೈ ಬಿಸಿಯಿಂದ ಬೆವರಿಸಿ, ತಿಕ್ಕಿದ ಮೇಲೆ, ಅವನನ್ನು ಗಾಳಿ, ಬಿಸಿಲು ಮತ್ತು ದೂಳು ಇಲ್ಲದ ಕೋಣೆಯಲ್ಲಿ ಅಂಗಾತನೆ, ಕೈಕಾಲು ಚಾಚಿ, ತಲೆಯನ್ನು ಕಿಂಚಿತ್ತಾಗಿ ಮುಂದಕ್ಕೆ ಬಗ್ಗಿರುವಂತೆ ಮಲಗಿಸಿ, ಅವನ ಕಣ್ಣುಗಳನ್ನು ವಸ್ತ್ರದಿಂದ ಮುಚ್ಚಿ, ವೈದ್ಯನ ಎಡದ ಕೈಯ ಪ್ರದೇಶಿನೀ (ಹೆಬ್ಬೆಟ್ಟಿನ ಒತ್ತಿನ) ಬೆರಳಿನ ತುದಿಯಿಂದ ರೋಗಿಯ ಮೂಗಿನ ತುದಿಯನ್ನು ಎತ್ತಿ, ಸೊಳ್ಳೆಯನ್ನು ಚೆನ್ನಾಗಿ ಶುದ್ಧಮಾಡಿ, ಬಲದ ಕೈಯಿಂದ ಬೆಳ್ಳಿ, ಚಿನ್ನ, ತಾಮ್ರ, ಮಣ್ಣು ಇವುಗಳ ಪಾತ್ರಗಳು, ಚಿಪ್ಪು, ಇವುಗಳೊಳಗೆ ಯಾವದಾದರೊಂದರಲ್ಲಿರಿಸಿದ್ದ ಕಾಯಿಸಿದ ಸ್ನೇಹವನ್ನು ಚಿಪ್ಪಿನಿಂದಾಗಲಿ, ಹತ್ತಿಯಿಂದಾಗಲಿ, ಸುಖೋಷ್ಣವಾಗಿ, ಅವಸರವಿಲ್ಲದೆಯೂ, ಧಾರೆ ಕಡಿಯುವಂತೆಯೂ, ಸ್ನೇಹವು ಕಣ್ಣುಗಳಿಗೆ ಸೇರದ ಹಾಗೂ, ಹೊಯ್ಯಬೇಕು. ಸ್ನೇಹವನ್ನು ಹೊಯ್ಯುವ ಸಮಯದಲ್ಲಿ ರೋಗಿಯು ತಲೆಯನ್ನು ಅಲ್ಲಾಡಿಸಲೇ ಬಾರದು, ಕೋಪಗೊಳ್ಳಬಾರದು, ಮಾತನಾಡಬಾರದು, ಮೂಗಿನಿಂದ ಶ್ವಾಸ ಬಿಡಬಾರದು (ಮೂಗ ಸುರಿಯಬಾರದು), ಮತ್ತು ನಗಬಾರದು. ಈ ಅಪಚಾರಗಳಿಂದ ಹಾಕಿದ ಸ್ನೇಹವು ಸರಿಯಾಗಿ ಸೇರುವದಿಲ್ಲವಾದ್ದರಿಂದ, ಕೆಮ್ಮು, ಪೀನಸ, ಶಿರೋರೋಗಗಳು ಮತ್ತು ನೇತ್ರರೋಗಗಳು ಸಂಭವಿಸುವವು.

ಷರಾ ಪಾದಗಳನ್ನು ಕಿಂಚಿತ್ತಾಗಿ ಎತ್ತರವಿಟ್ಟುಕೊಳ್ಳಬೇಕಾಗಿಯೂ, ಒಂದು ಮೂಗಿನ ಸೊಳ್ಳೆಯನ್ನು ಮುಚ್ಚಿ ಇತರ ಸೊಳ್ಳೆಗೆ, ಹೀಗೆ ಪರ್ಯಾಯದಿಂದ, ಔಷಧವನ್ನು ಹಾಕಬೇಕಾಗಿಯೂ ವಾ (ಪು 96) ಕಷಾಯಾದಿಗಳ ನಸ್ಯವನ್ನು ಇದೇ ಕ್ರಮದಲ್ಲಿ ನಡಿಸತಕ್ಕದ್ದು (ಸಿ ಸಂ ವ್ಯಾ)

7 (*a*) ತಸ್ಯ ಪ್ರಮಾಣಮಷ್ಟೌ ಬಿಂದವಃ ಪ್ರದೇಶಿನೀಪರ್ವದ್ವಯನಿಃಸೃತಾಃ ಪ್ರಥಮಮಾತ್ರಾ ದ್ವಿತೀಯಾ ಶುಕ್ತಿಸ್ತೃತೀಯಾ ಪಾಣಿಶುಕ್ತಿರಿತ್ಯೇತಾಸ್ತಿಸ್ರೋ ಮಾತ್ರಾ ಯಥಾಬಲಂ ಪ್ರಯೋಜ್ಯಾಃ । ಸ್ನೇಹನಸ್ಯಂ ನ ಜೋಪಗಿಲೇತ್ ಕಥಂಚಿದಪಿ । (ಸು. 595-96.)

ಸ್ನೇಹನ ನಸ್ಯದ ಪ್ರಮಾಣಗಳು

ಆ (ಸ್ನೇಹನ) ನಸ್ಯದ ಪ್ರಮಾಣವು ಪ್ರದೇಶಿನೀ ಬೆರಳ ಎರಡು ಗಂಟುಗಳಿಂದ ಹೊರಟ (ಎರಡು ಗಂಟುಗಳು ಮುಳುಗಿಸಿಬಿಟ್ಟ) ಬಿಂದುಗಳು ಎಂಟು. ಇದು ಪ್ರಥಮ ಮಾತ್ರೆ, ಎರಡನೇದು ಒಂದು ಶುಕ್ತಿ, ಮತ್ತು ಮೂರನೇದು ಪಾಣಿಶುಕ್ತಿ. ಈ ಮೂರು ಪ್ರಮಾಣಗಳನ್ನು ಬಲಕ್ಕೆ ತಕ್ಕ ಹಾಗೆ ಪ್ರಯೋಗಿಸತಕ್ಕದ್ದು ಸ್ನೇಹನಸ್ಯವನ್ನು ಹ್ಯಾಗಾದರೂ ನುಂಗಬಾರದು.

ಷರಾ (*b*) ನೋಡಿ ಎಂಟು ಬಿಂದುಗಳೆಂಬದು ಒಂದು ಸೊಳ್ಳೆಗೆ, ಎರಡು ಸೊಳ್ಳೆಗಳಿಗೆ ಒಟ್ಟು ಹದಿನಾರು ಬಿಂದುಗಳು ಪ್ರಥಮ ಪ್ರಮಾಣ

(*b*) ದ್ವಾತ್ರಿಂಶದ್ಬಿಂದವಶ್ಚಾಪಿ ಶುಕ್ತಿರಿತ್ಯಭಿಧೀಯತೇ ।
ದ್ವೇ ಶುಕ್ತೌ ಪಾಣಿಶುಕ್ತಿಶ್ಚ ಜ್ಞೇಯಾ ತು ಕುಶಲೈರ್ನರೈಃ ॥
(ಚಿ. ಸಾ. ಸಂ. 958.)

ಮೂವತ್ತೆರಡು ಬಿಂದುಗಳಿಗೆ ಒಂದು ಶುಕ್ತಿ ಎನ್ನುವದು, ಅಂಧಾ ಎರಡು ಶುಕ್ತಿಗಳಿಗೆ ಒಂದು ಪಾಣಿಶುಕ್ತಿಯಾಗಿರುತ್ತದೆಂತ ತಿಳಿಯಬೇಕು.

8. ಶೃಂಗಾಟಕಮಭಿಪ್ಲಾವ್ಯ ನಿರೇತಿ ವದನಾದ್ಯಥಾ ।
ಕಫೋತ್ಕ್ಲೇಶಭಯಾಚ್ಚೈವ ನಿಷ್ಠೀವೇದವಿಧಾರಯನ್ ॥
ದತ್ತೇ ಚ ಪುನರಪಿ ಸಂಸ್ವೇದ್ಯ ಗಲಕಪೋಲಾದೀನ್ ಧೂಮಮಾಸೇವೇತ ಭೋಜಯೇಚ್ಚೈನಮಭಿಷ್ಯಂದಿ ತತೋಽಸ್ಯಾಚಾರಿಕಮಾದಿಶೇತ್ । ರಜೋಧೂಮಸ್ನೇಹಾತಪಮದ್ಯದ್ರವಪಾನಶಿರಃಸ್ನಾನಾತಿಯಾನಕ್ರೋಧಾದೀನಿ ಚ ಪರಿಹರೇತ್ । (ಸು. 596.)

ಸ್ನೇಹನನಸ್ಯ ಉಪಯೋಗಿಸಿದನಂತರದ ಉಪಚಾರ

ಮೂಗಿಗೆ ಹಾಕಿದ ಸ್ನೇಹವು ಶೃಂಗಾಟಕದಲ್ಲಿ ತುಂಬಿ, ಒಳಗೆ ಬಾಯಿಯೊಳಗೆ ಹೊರಟ ಹಾಗೆ, ಅದನ್ನು ಹೊರಗೆ ಉಗಿಯತಕ್ಕದ್ದು. ಹಾಗೆ ಮಾಡದೆ ಹೋದರೆ, ಕಫ ಕೆದರುವ ಭಯ ಸಹ ಇದೆ ಈ ಸ್ನೇಹನಸ್ಯ ಮಾಡಿದ ಮೇಲೆ, ಪುನಃ ಗಂಟಲು, ಕಪೋಲ, ಮುಂತಾದವುಗಳನ್ನು ಬೆವರಿಸಿ, ಧೂಮಪಾನ ಮಾಡಿಸಬೇಕು. ಅನಂತರ ಅಭಿಷ್ಯಂದಗುಣವುಳ್ಳ ಆಹಾರದಿಂದ ಉಣ್ಣಿಸಿ, ಪಥ್ಯದಲ್ಲಿರಿಸಬೇಕು. ದೂಳು, ಹೊಗೆ, ಸ್ನೇಹ, ಬಿಸಿಲು, ಮದ್ಯ, ಮತ್ತು ಇತರ ದ್ರವಗಳ ಪಾನ, ತಲೆಸ್ನಾನ, ಅತಿಸವಾರಿ, ಕ್ರೋಧ, ಮುಂತಾದವುಗಳನ್ನು ವರ್ಜ್ಯಮಾಡಿಸತಕ್ಕದ್ದು.

ಷರಾ ನಸ್ಯದ ಅಂತ್ಯದಲ್ಲಿ ನೂರು ಮಾತ್ರಾಕಾಲ ಅಂಗಾತನಾಗಿ ಇದ್ದು, ಅನಂತರ ಧೂಮಪಾನಮಾಡಿ, ಸುಖೋಷ್ಣವಾದ ನೀರನ್ನು ಕಂಠಶುದ್ಧಿಗಾಗಿ ಬಾಯಿಯಲ್ಲಿಟ್ಟುಕೊಳ್ಳಬೇಕಾಗಿ ವಾ (ಪು 96)

9. ಲಾಘವಂ ಶಿರಸೋ ಯೋಗೇ ಸುಖಸ್ವಪ್ನಪ್ರಬೋಧನಂ ।
ವಿಕಾರೋಪಶಮಃ ಶುದ್ಧಿರಿಂದ್ರಿಯಾಣಾಂ ಮನಃಸುಖಂ ॥

ಸ್ನೇಹನ ನಸ್ಯದ ಯೋಗಾತಿಯೋಗಾಯೋಗಗಳ ಲಕ್ಷಣಗಳು

ಕಫಪ್ರಸೇಕಃ ಶಿರಸೋ ಗುರುತೇಂದ್ರಿಯವಿಭ್ರಮಃ ।
ಲಕ್ಷಣಂ ಮೂರ್ಧ್ನ್ಯತಿಸ್ನಿಗ್ಧೇ ರೂಕ್ಷಂ ತತ್ರಾವಚಾರಯೇತ್ ॥
ಅಯೋಗೇ ಚೈವ ವೈಗುಣ್ಯಮಿಂದ್ರಿಯಾಣಾಂ ಚ ರೂಕ್ಷತಾ ।
ರೋಗಾಶಾಂತಿಶ್ಚ ತತ್ರೇಷ್ಟಂ ಭೂಯೋ ನಸ್ಯಂ ಪ್ರಯೋಜಯೇತ್ ॥
(ಸು. 596.)

ತಲೆ ಹಗುರ ಕಾಣುವದು, ಸುಖವಾದ ನಿದ್ರೆ ಮತ್ತು ಎಚ್ಚರ, ರೋಗಶಮನ, ಇಂದ್ರಿಯಗಳ ಶುದ್ಧಿ, ಮನಸ್ಸಿಗೆ ಸುಖ, ಇವು ಸ್ನೇಹನಸ್ಯ ಸರಿಯಾದ್ದರ ಲಕ್ಷಣಗಳು ಕಫ ಸುರಿಯುವಿಕೆ, ತಲೆಭಾರ, ಇಂದ್ರಿಯಗಳ ಭ್ರಮ, ಇವು ತಲೆಯ ಸ್ನಿಗ್ಧತೆ ಅತಿಯಾದ್ದರ ಲಕ್ಷಣಗಳು; ಅದರ ಪರಿಹಾರಕ್ಕೆ ರೂಕ್ಷವಾದ ಉಪಚಾರವನ್ನು ನಡಿಸಬೇಕು. ಇಂದ್ರಿಯಗಳ ಗುಣ ಬದಲಾಗುವಿಕೆ, ರೂಕ್ಷತೆ, ರೋಗಶಾಂತವಾಗದಿರುವದು, ಇವು ಹೀನಯೋಗದ ಲಕ್ಷಣಗಳು; ಈ ಸಂಗತಿಯಲ್ಲಿ ಪುನಃ ಇಷ್ಟವಾದ ನಸ್ಯವನ್ನು ಪ್ರಯೋಗಿಸತಕ್ಕದ್ದು.

10. ಚತ್ವಾರೋ ಬಿಂದವಃ ಷಡ್ವಾ ತಥಾಷ್ಟೌ ವಾ ಯಥಾಬಲಂ ।
ಶಿರೋವಿರೇಕಸ್ನೇಹಸ್ಯ ಪ್ರಮಾಣಮಭಿನಿರ್ದಿಶೇತ್ ॥
ನಸ್ಯೇ ತ್ರೀಣ್ಯುಪದಿಷ್ಟಾನಿ ಲಕ್ಷಣಾನಿ ಪ್ರಯೋಗತಃ ।
ಶುದ್ಧಿಹೀನಾತಿಸಂಜ್ಞಾನಿ ವಿಶೇಷಾಚ್ಚಾಸ್ತ್ರಚಿಂತಕೈಃ ॥

ತಿರೋವಿರೇಕ ಸ್ನೇಹದ ಪ್ರಮಾಣ ಮತ್ತು ಶುದ್ಧ ಹೀನಾತಿಯೋಗಗಳ ಲಕ್ಷಣಗಳು

ಲಾಘವಂ ಶಿರಸಃ ಶುದ್ಧಿಃ ಸ್ರೋತಸಾಂ ವ್ಯಾಧಿನಿರ್ಜಯಃ ।
ಚಿತ್ತೇಂದ್ರಿಯಪ್ರಸಾದಶ್ಚ ಶಿರಸಃ ಶುದ್ಧಿಲಕ್ಷಣಂ ॥
ಕಂಡೂಪದೇಹೌ ಗುರುತಾ ಸ್ರೋತಸಾಂ ಕಫಸಂಸ್ರವಃ ।
ಮೂರ್ಧ್ನಿ ಹೀನವಿಶುದ್ಧೇ ತು ಲಕ್ಷಣಂ ಪರಿಕೀರ್ತಿತಂ ॥
ಮಸ್ತುಲುಂಗಾಗಮೋ ವಾತವೃದ್ಧಿರಿಂದ್ರಿಯವಿಭ್ರಮಃ ।
ಶೂನ್ಯತಾ ಶಿರಸಶ್ಚಾಪಿ ಮೂರ್ಧ್ನಿ ಗಾಢವಿರೇಚಿತೇ ॥ (ಸು. 596-97.)

ಶಿರೋವಿರೇಚನಕ್ಕೆ ಕೊಡತಕ್ಕ ಸ್ನೇಹದ ಉತ್ತಮ, ಮಧ್ಯಮ, ಹೀನ ಪ್ರಮಾಣಗಳಾದ, ಎಂಟು, ಆರು, ನಾಲ್ಕು, ಬಿಂದುಗಳನ್ನು ಬಲಕ್ಕೆ ಸರಿಯಾಗಿ ನಿಶ್ಚಯಿಸಬೇಕು. ಈ ನಸ್ಯದ ಪ್ರಯೋಗದಲ್ಲಿ ಶುದ್ಧ, ಹೀನ, ಅತಿ, ಎಂಬ ಮೂರು ವಿಧಗಳ ಲಕ್ಷಣಗಳನ್ನು ವಿಶೇಷವಾಗಿ ಶಾಸ್ತ್ರಜ್ಞರು ಹೇಳಿರುವದು ಹ್ಯಾಗಂದರೆ ತಲೆಯು ಹಗುರವಾಗೋಣ, ಸ್ರೋತಸ್ಸುಗಳ ಶುದ್ಧಿ, ವ್ಯಾಧಿಯ ನಾಶ, ಚಿತ್ತದ ಮತ್ತು ಇಂದ್ರಿಯಗಳ ಪ್ರಸನ್ನತೆ, ಇವು ತಲೆಯು ಶುದ್ಧವಾದ್ದರ ಲಕ್ಷಣಗಳಾಗಿರುತ್ತವೆ. ಸ್ರೋತಸ್ಸುಗಳು ಭಾರವಾಗಿ ಕಾಣುವದು, ಮೂಗಿನಲ್ಲಿ ತುರಿ ಮತ್ತು ಲೇಪ ಮತ್ತು ಕಫ ಸುರಿಯೋಣ, ಇವು ತಲೆಯ ಶುದ್ಧಿಯು ಹೀನವಾದ್ದರ ಲಕ್ಷಣಗಳು. ಮೆದುಳು ಬರುವದು, ವಾತದ ವೃದ್ಧಿ, ಇಂದ್ರಿಯಗಳ ಭ್ರಮ, ತಲೆ ಶೂನ್ಯವಾಗಿ ಕಾಣುವದು, ಇವು ತಲೆಯನ್ನು ಅತಿಯಾಗಿ ವಿರೇಚನ ಮಾಡಿಸಿದ್ದರ ಲಕ್ಷಣಗಳಾಗಿರುತ್ತವೆ.

11. ಹೀನಾತಿಶುದ್ಧೇ ಶಿರಸಿ ಕಫವಾತಘ್ನಮಾಚರೇತ್ ।
ಸಮ್ಯಗ್ವಿಶುದ್ಧೇ ಶಿರಸಿ ಸರ್ಪಿರ್ನಸ್ಯಂ ನಿಷೇಚಯೇತ್ ॥

ವಿರೇಚನ ನಸ್ಯದ ಹೀನಾತಿಯೋಗ ಗಳಿಗೆ ಪರಿಹಾರ

ಏಕಾಂತರಂ ದ್ವ್ಯಂತರಂ ವಾ ಸಪ್ತಾಹಂ ವಾ ಪುನಃ ಪುನಃ ।
ಏಕವಿಂಶತಿರಾತ್ರಂ ವಾ ಯಾವದ್ವಾ ಸಾಧು ಮನ್ಯತೇ ॥
ಮಾರುತೇನಾಭಿಭೂತಸ್ಯ ವಾತ್ಯಂತಂ ಯಸ್ಯ ದೇಹಿನಃ ।
ದ್ವಿಕಾಲಂ ಚಾಪಿ ದಾತವ್ಯಂ ನಸ್ಯಂ ತಸ್ಯ ವಿಜಾನತಾ ॥ (ಸು. 597.)

ತಲೆ ಶುದ್ಧವಾದದ್ದು ಹೀನವಾದರೆ ಅಥವಾ ಅತಿಯಾದರೆ, ಕಫವಾತಹರವಾದ ಉಪಚಾರ ಗಳನ್ನು ಮಾಡಬೇಕು. ತಲೆಯು ಒಳ್ಳೇದಾಗಿ ಶುದ್ಧವಾದ್ದಲ್ಲಿ, ತುಪ್ಪವನ್ನು ನಸ್ಯ ಮಾಡಿಸ ಬೇಕು. ಈ ನಸ್ಯವನ್ನು ದಿನ ಬಿಟ್ಟು ದಿನ, ಅಥವಾ ಎರಡು ದಿನ ಬಿಟ್ಟು, ಅಥವಾ ಏಳು ದಿನ ಬಿಡದೆ, ಅಥವಾ ಇಪ್ಪತ್ತೊಂದು ರಾತ್ರಿ, ಅಥವಾ ಸುಖವಾದದ್ದು ಕಾಣುವ ವರೆಗೆ, ಮಾಡ ಬೇಕು. ವಾಯುವಿನಿಂದ (ತಲೆಯಲ್ಲಿ) ಅತ್ಯಂತವಾಗಿ ಪೀಡಿತನಾದ ಮನುಷ್ಯನಿಗೆ ತಿಳಿದಂಥಾ ವೈದ್ಯನು ದಿನಕ್ಕೆ ಎರಡು ಸಾರಿ ಸಹ ನಸ್ಯಮಾಡಿಸಬಹುದು.

ಪರಾ ತಲೆಯಲ್ಲಿ ವಾತದ ದೋಷ, ಹಿಧ್ಮ, ಅಪತಾನಕ, ಮನ್ಯಾಸ್ತಂಭ, ಸ್ವರಭ್ರಂಶ, ಈ ವಿಕಾರಗಳಲ್ಲಿ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆಗೆ, ಇತರ ರೋಗದಲ್ಲಿ ದಿನ ಬಿಟ್ಟು ದಿನ ಏಳು ದಿನಗಳ ವರೆಗೆ, ನಸ್ಯ ಉಪಯೋಗಿಸಬೇಕಾಗಿ ವಾ (ಪು 96)

12. ಅವಪೀಡಸ್ತು ಶಿರೋವಿರೇಚನವದಭಿಷ್ಯಂದಸರ್ಪದಷ್ಟವಿಸಂಜ್ಞೇಭ್ಯೋ ದದ್ಯಾಚ್ಛಿರೋವಿರೇಚನದ್ರವ್ಯಾಣಾಮನ್ಯತಮಮವಪಿಷ್ಯಾವಪೀಡ್ಯಚೇ ತೋವಿಕಾರಕೃಮಿವಿಷಾಭಿಪನ್ನಾನಾಂ ಚೂರ್ಣಂ ಪ್ರಧಮೇತ್ । ಶರ್ಕರೇಕ್ಷುರಸಕ್ಷೀರಘೃತಮಾಂಸರಸಾನಾಮನ್ಯತಮಂ ಕ್ಷೀಣಾನಾಂ ಶೋಣಿತಪಿತ್ತೇ ಚ ವಿದಧ್ಯಾತ್ । (ಸು 597.)

ಅವಪೀಡ ಮತ್ತು ಪ್ರಧಮನವಿಧಿಗಳು

ಅವಪೀಡ ಎಂಬದು ಶಿರೋವಿರೇಚನಕ್ಕೆ ಉಕ್ತವಾದ ದ್ರವ್ಯಗಳಲ್ಲಿ ಯಾವದಾದ ರೂಂದನ್ನು ಅರೆದು (ಮಾಡಿದ ಕಲ್ಕವನ್ನು) ಹಿಂಡಿ, (ಆ ರಸವನ್ನು) ಅಭಿಷ್ಯಂದದವರಿಗೆ, ಸರ್ಪ ಕಚ್ಚಿದವರಿಗೆ ಮತ್ತು ಸಂಜ್ಞೆ ತಪ್ಪಿದವರಿಗೆ, ಶಿರೋವಿರೇಚನದಂತೆ, ನಸ್ಯವಾಗಿ ಉಪ ಯೋಗಿಸುವಂಥಾದ್ದಾಗಿರುತ್ತದೆ. ಅದನ್ನೇ ಕುಟ್ಟಿ ಚೂರ್ಣ ಮಾಡಿ, ಮನೋವಿಕಾರದವ ರಿಗೂ, ಕೃಮಿದೋಷದವರಿಗೂ, ವಿಷಬಾಧೆಯುಳ್ಳವರಿಗೂ, ನಸ್ಯವಾಗಿ ಕೊಡುವಂಥಾದ್ದು ಪ್ರಧಮನ. ಕ್ಷೀಣರಾದವರಿಗೂ, ರಕ್ತಪಿತ್ತದವರಿಗೂ, ಸಕ್ಕರೆ, ಕಬ್ಬಿನ ರಸ, ಹಾಲು, ತುಪ್ಪ, ಮಾಂಸರಸ, ಇವುಗಳೊಳಗೊಂದನ್ನು ನಸ್ಯವಾಗಿ ಉಪಯೋಗಿಸತಕ್ಕದ್ದು.

13. ನಸ್ಯೇನ ಪರಿಹರ್ತವ್ಯೋ ಭುಕ್ತವಾನಪಕರ್ಷಿತೋಽತ್ಯರ್ಧತರುಣಪ್ರತಿಶ್ಯಾಯಿ ಗರ್ಭಿಣೀ ಪೀತಸ್ನೇಹೋದಕಮದ್ಯಸ್ತ್ರೀಽಜೀರ್ಣೇ ದತ್ತವಸ್ತಿಃ ಕ್ರುದ್ಧೋ ಗರಾರ್ತಸ್ತೃಷಿತಃ ಶೋಕಾಭಿಭೂತಃ ಶ್ರಾಂತೋ ಬಾಲೋ ವೃದ್ಧೋ ವೇಗಾವರೋಧಿತಃ ಶಿರಃಸ್ನಾತುಕಾಮಶ್ಚೇತಿ । ಅನಾರ್ತವೇ ಚಾಭ್ರೇ ನಸ್ಯಧೂಮೌ ಪರಿಹರೇತ್ । (ಸು. 597.)

ನಸ್ಯಕ್ಕೆ ಅರ್ಹರಲ್ಲದವರು

ನಸ್ಯಕ್ಕೆ ಅರ್ಹರಲ್ಲದವರು ಯಾರೆಂದರೆ ಉಂಡವ, ಶೋಧನೆಮಾಡಿಸಿಕೊಂಡವ, ಬಹಳ ಎಳೇ ಪೀನಸರೋಗವುಳ್ಳವ, ಗರ್ಭಿಣೀ, ಸ್ನೇಹವನ್ನು, ನೀರನ್ನು, ಮದ್ಯವನ್ನು, ಅಥವಾ ಇತರ

ದ್ರವವನ್ನು ಪಾನಮಾಡಿದವ, ಅಜೀರ್ಣರೋಗದವ, ವಸ್ತಿ ಉಪಯೋಗಿಸಿಕೊಂಡವ, ಕ್ರೋಧ ಪಟ್ಟವ, ವಿಷಪೀಡಿತನಾದವ, ಬಾಯಾರಿಕೆಯುಳ್ಳವ, ಶೋಕಗ್ರಸ್ತ, ಬಳಲಿದವ, ಬಾಲಕ, ಮುದುಕ, ವೇಗವನ್ನು ತಡಕೊಂಡವ ಮತ್ತು ತಲೆಸ್ನಾನದಪೇಕ್ಷೆಯುಳ್ಳವ, ಇವರಾಗಿರುತ್ತಾರೆ. ಋತುಸಂಬಂಧವಲ್ಲದ ಮೋಡವಿರುವ ದಿವಸದಲ್ಲಿ ನಸ್ಯವನ್ನೂ, ಧೂಮವನ್ನೂ, ಸೇವಿಸಬಾರದು.

ಪ್ರತಿಮರ್ಶಕ್ಕೆ ಹದಿನಾಲ್ಕು ಕಾಲಗಳು

14. ಪ್ರತಿಮರ್ಶಶ್ಚತುರ್ದಶಸು ಕಾಲೇಷೂಪಾದೇಯಃ । ತದ್ಯಥಾ । ತಲ್ಪೋತ್ಥಿತೇನ ಪ್ರಕ್ಷಾಲಿತದಂತೇನ ಗೃಹಾನ್ನಿರ್ಗಚ್ಛತಾ ವ್ಯಾಯಾಮವ್ಯವಾಯಾಧ್ವಪರಿಶ್ರಾಂತೇನ ಮೂತ್ರೋಚ್ಚಾರಕವಲಾಂಜನಾಂತೇ ಭುಕ್ತವತಾ ಛರ್ದಿತವತಾ ದಿವಾಸ್ವಪ್ನೋತ್ಥಿತೇನ ಸಾಯಂ ಚೇತಿ । (ಸು. 598.)

ಪ್ರತಿಮರ್ಶವನ್ನು ಹದಿನಾಲ್ಕು ಕಾಲಗಳಲ್ಲಿ ಉಪಯೋಗಿಸಬೇಕು — (1) ಹಾಸಿಗೆಯಿಂದೆದ್ದಕೂಡಲೇ, (2) ಹಲ್ಲು ತಿಕ್ಕಿ ತೊಳೆದ ಕೂಡಲೇ, (3) ಮನೆಯಿಂದ ಹೊರಗೆ ಹೊರಡುವಾಗ್ಗೆ, (4) ವ್ಯಾಯಾಮದಿಂದ ಬಳಲಿದವ, (5) ವ್ಯವಾಯದಿಂದ ಬಳಲಿದವ, (6) ಮಾರ್ಗ ನಡೆದು ಬಳಲಿದವ, (7) ಮೂತ್ರೋತ್ಸರ್ಜನದ ಅಂತ್ಯದಲ್ಲಿ, (8) ಮಲೋತ್ಸರ್ಜನದ ಅಂತ್ಯದಲ್ಲಿ, (9) ಕವಲದ ಅಂತ್ಯದಲ್ಲಿ, (10) ಅಂಜನದ ಅಂತ್ಯದಲ್ಲಿ, (11) ಊಟದನಂತರ, (12) ವಾಂತಿಯಾದ ಮೇಲೆ, (13) ಹಗಲು ನಿದ್ರೆಯಿಂದೆದ್ದ ಕೂಡಲೇ ಮತ್ತು (14) ಸಾಯಂಕಾಲ.

ಷರಾ ವಾ ದಲ್ಲಿ 3ನೇ ಕಾಲವನ್ನು ಬಿಟ್ಟು ತಿರೋಭ್ಯಂಜನದ ಅಂತ್ಯ ಮತ್ತು ಹಾಸದ ಅಂತ್ಯ ಸೇರಿಸಿ 15 ಕಾಲಗಳಾಗಿ ಕಾಣಿಸಿಯದೆ (ಪು 97)

ಪ್ರತಿಮರ್ಶದ ಪ್ರಮಾಣ

15. ಈಷದುಚ್ಛಿಂಘತಃ ಸ್ನೇಹೋ ಯಾವದ್ವಕ್ತ್ರಂ ಪ್ರಪದ್ಯತೇ ।
ನಸ್ಯೇ ನಿಷಿಕ್ತಂ ತಂ ವಿದ್ಯಾತ್ ಪ್ರತಿಮರ್ಶಂ ಪ್ರಮಾಣತಃ ॥ (ಸು. 598.)

ಮೂಗಿನ ಹೊಳ್ಳೆಯೊಳಗೆ ಬಿಟ್ಟ ನಸ್ಯಸ್ನೇಹದ ಬಿಂದುವು, ಸ್ವಲ್ಪ ಮೇಲಕ್ಕೆ ಎಳದಲ್ಲಿ, ಬಾಯಿಗೆ ಮುಟ್ಟುವದಕ್ಕೆ ಎಷ್ಟು ಬೇಕೋ, ಅದು ಪ್ರತಿಮರ್ಶದ ತಕ್ಕ ಪ್ರಮಾಣವೆಂತ ತಿಳಿಯತಕ್ಕದ್ದು.

ಷರಾ ಮೇಲೆ ಹೇಳಿದ ಕಾಲಗಳಲ್ಲೆಲ್ಲಾ ಎರಡು ಬಿಂದುಗಳ ಪ್ರಮಾಣ ಉಪಯೋಗಿಸುವದಾಗಿ ವಾ (ಪು 97)

ನಸ್ಯದ ಗುಣಗಳು

16. ನಸ್ಯೇನ ರೋಗಾಃ ಶಾಮ್ಯಂತಿ ನರಾಣಾಮೂರ್ಧ್ವಜತ್ರುಜಾಃ ।
ಇಂದ್ರಿಯಾಣಾಂ ಚ ವೈಮಲ್ಯಂ ಕುರ್ಯಾದಾಸ್ಯಂ ಸುಗಂಧಿ ಚ ॥
ಹನುದಂತಶಿರೋಗ್ರೀವಾತ್ರಿಕಬಾಹೂರಸಾಂ ಬಲಂ ।
ಬಲೀಪಲಿತಖಾಲಿತ್ಯವ್ಯಂಗಾನಾಂ ಚಾಪ್ಯಸಂಭವಃ ॥ (ಸು. 598-99.)

ನಸ್ಯದಿಂದ ಮನುಷ್ಯರ ಕುತ್ತಿಗೆಸಂದಿನ ಮೇಲಿನ ಅಂಗಗಳಲ್ಲಿ ಹುಟ್ಟಿದ ರೋಗಗಳು ಶಮನವಾಗಿ, ಇಂದ್ರಿಯಗಳ ಶುದ್ಧಿ, ಬಾಯಿಯ ಪರಿಮಳ, ದವಡೆ, ಹಲ್ಲು, ತಲೆ, ಕುತ್ತಿಗೆ,

ತ್ರಿಕ, ತೋಳು ಮತ್ತು ಎದೆ, ಇವುಗಳ ಬಲ ಸಹ ಉಂಟಾಗುವದಲ್ಲದೆ, ನೆರಿ, ನರೆ, ಕೂದಲು ಉದುರುವಿಕೆ ಮತ್ತು ಬಂಗು ಸಂಭವಿಸದಿರುವವು

17. ತೈಲಂ ಕಫೇ ಸವಾತೇ ಸ್ಯಾತ್ ಕೇವಲೇ ಪವನೇ ವಸಾಂ ।
ದೋಷಗಳ ಮೇಲೆ ಸ್ನೇಹ ಭೇದ
ದದ್ಯಾತ್ಸರ್ಪಿಃ ಸದಾ ಪಿತ್ತೇ ಮಜ್ಜಾನಂ ಚ ಸಮಾರುತೇ ॥
ಚತುರ್ವಿಧಸ್ಯ ಸ್ನೇಹಸ್ಯ ವಿಧಿರೇಷ ಪ್ರಕೀರ್ತಿತಃ ।
ಶ್ಲೇಷ್ಮಸ್ಥಾನಾವಿರೋಧಿತ್ವಾತ್ ತೇಷು ತೈಲಂ ವಿಧೀಯತೇ ॥ (ಸು. 599.)

ವಾತ ಕೂಡಿದ ಕಫದಲ್ಲಿ ತೈಲ (ಎಳ್ಳೆಣ್ಣೆ), ಕೇವಲ ವಾತದಲ್ಲಿ ವಸೆ, ಪಿತ್ತದಲ್ಲಿ ಯಾವಾಗಲೂ ತುಪ್ಪ, ವಾತ ಕೂಡಿದ ಪಿತ್ತದಲ್ಲಿ ಮಜ್ಜೆ, ಉಪಯೋಗಿಸಲ್ಪಡಬೇಕು. ನಾಲ್ಕು ವಿಧವಾದ ಸ್ನೇಹದ ಈ ವಿಧಿಯು ಪ್ರಸಿದ್ಧವಾದದ್ದು. ಅವುಗಳೊಳಗೆ ತೈಲವು ಕಫಸ್ಥಾನಕ್ಕೆ (ಶಿರಸ್ಸಿಗೆ) ವಿರೋಧಮಾಡತಕ್ಕದ್ದಲ್ಲವಾದ್ದರಿಂದ ಅದು (ಹೆಚ್ಚಾಗಿ) ವಿಧಿಸಲ್ಪಡುತ್ತದೆ.

ಷರಾ ತಿರಸ್ಸು ಶ್ಲೇಷ್ಮಸ್ಥಾನವಾದ್ದರಿಂದ ಸಿತ್ಯಾಭ್ಯಾಸವಾಗಿ ನಸ್ಯಮಾಡುವದಕ್ಕೆ ತೈಲವೇ ಪ್ರಶಸ್ತ, ಇತರ ಸ್ನೇಹಗಳು ಸ್ವಸ್ಥನಿಗೆ ಹಿತವಲ್ಲ (ವಾ 97)

18. ನ ನಸ್ಯಮೂನಸಪ್ತಾಬ್ದೇ ನಾತೀತಾಶೀತಿವತ್ಸರೇ ।
ನಸ್ಯ, ಧೂಮ, ಕವಲ, ಶೋಧನಗಳಿಗೆ ಪ್ರಾಯ ಮತ್ತು ಪ್ರತಿಮರ್ಶ ಪ್ರಶಂಸಾ
ನ ಚೋನಾಽಷ್ಟಾದಶೇ ಧೂಮಃ ಕವಲೋ ನೋನಪಂಚಮೇ ॥
ನ ಶುದ್ಧಿರೂನದಶಮೇ ನ ಚಾತಿಕ್ರಾಂತಸಪ್ತತೌ ॥
ಆಜನ್ಮಮರಣಂ ಶಸ್ತಃ ಪ್ರತಿಮರ್ಶಸ್ತು ವಸ್ತಿವತ್ ॥
ಮರ್ಶವಚ್ಚ ಗುಣಾನ್ ಕುರ್ಯಾತ್ ಸ ಹಿ ನಿತ್ಯೋಪಸೇವನಾತ್ ।
ನ ಚಾತ್ರ ಯಂತ್ರಣಾ ನಾಪಿ ವ್ಯಾಪದ್ಭ್ಯೋ ಮರ್ಶವದ್ಭಯಂ ॥ (ವಾ. 97)

ಏಳು ವರ್ಷ ಪ್ರಾಯದೊಳಗಿನವರಿಗೂ, 80 ವರ್ಷ ಪ್ರಾಯ ಕಳೆದವರಿಗೂ ನಸ್ಯವು ವಿಹಿತವಲ್ಲ. ಹದಿನೆಂಟು ವರ್ಷ ಪ್ರಾಯದೊಳಗಿನವರಿಗೆ ಧೂಮಪಾನ, ಐದು ವರ್ಷ ಪ್ರಾಯದೊಳಗಿನವರಿಗೆ ಕವಲ, ಹತ್ತು ವರ್ಷದೊಳಗಿನವರಿಗೂ ಎಪ್ಪತ್ತು ವರ್ಷ ಪ್ರಾಯ ದಾಟಿದವರಿಗೂ ಶೋಧನ, ಸಹ ಹಿತವಲ್ಲ. ಆದರೆ ಪ್ರತಿಮರ್ಶವನ್ನು ಹುಟ್ಟಿದಂದಿನಿಂದ ಸಾಯುವ ವರೆಗೂ, ವಸ್ತಿಯಂತೆ, ಉಪಯೋಗಿಸಬಹುದು. ಪ್ರತಿ ನಿತ್ಯ ಉಪಯೋಗಿಸಲ್ಪಟ್ಟ ಪ್ರತಿಮರ್ಶದಿಂದ ಮರ್ಶದ ಗುಣಗಳೆಲ್ಲಾ ಸಿಕ್ಕುವವು. ಅದಕ್ಕೆ ಪರಿಹಾರ(ಪಥ್ಯ)ವಗತ್ಯವಿಲ್ಲ, ಮತ್ತು ಮರ್ಶದಲ್ಲಿದ್ದ ಹಾಗೆ ರೋಗಗಳುಂಟಾಗುವ ಭಯವು ಪ್ರತಿಮರ್ಶದಲ್ಲಿ ಇಲ್ಲ.

ಷರಾ XXV ಅ ಸಂ 17 ನೋಡಿ

19. ನಸ್ಯೇ ಶಿರೋವಿರೇಕೇ ಚ ವ್ಯಾಪದೋ ದ್ವಿವಿಧಾಃ ಸ್ಮೃತಾಃ ।
ನಸ್ಯದಿಂದುಂಟಾಗುವ ಆಪತ್ತುಗಳು
ದೋಷೋತ್ಕ್ಲೇಶಾತ್ ಕ್ಷಯಾಚ್ಚೈವ ವಿಜ್ಞೇಯಾಸ್ತಾ ಯಥಾಕ್ರಮಮ್ ॥
ದೋಷೋತ್ಕ್ಲೇಶನಿಮಿತ್ತಾಸ್ತು ಜಯೇಚ್ಛಮನಶೋಧನೈಃ ।
ಅಥ ಕ್ಷಯನಿಮಿತ್ತಾಸ್ತು ಯಥಾಸ್ವಂ ಬೃಂಹಣಂ ಹಿತಮ್ ॥ (ಸು. 597-98.)

ನಸ್ಯ, ಶಿರೋವಿರೇಕ, ಎಂಬ ಎರಡು ವಿಧವಾದ ನಸ್ಯದಲ್ಲಿಯೂ (ಹೀನಾತಿಮಾತ್ರೆ, ನಸ್ಯದ್ರವ್ಯವು ಅತಿ ಶೀತವಾಗಿರುವದು, ಅಥವಾ ಅತಿ ಉಷ್ಣವಾಗಿರುವದು, ಒಂದೇ ಸರ್ತಿ ಹಾಕುವದು, ತಲೆಯನ್ನು ಅತಿಯಾಗಿ ಬೊಗ್ಗಿಸುವದು, ಒಳಗೆ ಎಳಕೊಳ್ಳುವದು, ಅಲ್ಲಾಡಿಸುವದು, ನುಂಗುವದು, ಪ್ರತಿಷೇಧಿಸಿರುವಲ್ಲಿ ಉಪಯೋಗಿಸುವದು, ಇವುಗಳಿಂದ) ಉಂಟಾಗುವ ವ್ಯಾಧಿಗಳು ಎರಡು ವಿಧ: ಕೆಲವು ದೋಷದ ಕೆದರುವಿಕೆಯಿಂದ, ಕೆಲವು ಕ್ಷಯದಿಂದ ಎಂತ ತಿಳಿಯಬೇಕು. ದೋಷದ ಕೆದರುವಿಕೆಯ ನಿಮಿತ್ತವಾಗಿ ಉಂಟಾದವುಗಳನ್ನು ಶಮನ-ಶೋಧನಗಳಿಂದ ಜಯಿಸಬೇಕು, ಆದರೆ ಕ್ಷಯನಿಮಿತ್ತವಾದವುಗಳಲ್ಲಿ ತಕ್ಕವಾದ ಬೃಂಹಣವು ಹಿತವಾಗುತ್ತದೆ.

20. ಧ್ಮಾನಂ ವಿರೇಚನಶ್ಚೂರ್ಣೋರ್ ಯುಂಜ್ಯಾತ್ತಂ ಮುಖವಾಯುನಾ |
ಪ್ರಥಮನಕ್ಕೆ ನಳಿಗೆ ಷಡಂಗುಲದ್ವಿಮುಖಯಾ ನಾಡ್ಯಾ ಭೇಷಜಗರ್ಭಯಾ || (ವಾ. 95.)

ಪ್ರಥಮನ ನಸ್ಯದಲ್ಲಿ ವಿರೇಚನಕರವಾದ ಔಷಧದ ಚೂರ್ಣವನ್ನು ಆರಂಗುಲ ಉದ್ದವಾದ ಮತ್ತು ಎರಡು ಬಾಯಿಗಳುಳ್ಳ ನಳಿಗೆಯಲ್ಲಿ ತುಂಬಿಸಿ ಬಾಯಿಯ ಗಾಳಿಯಿಂದ ಊದಿ ಉಪಯೋಗಿಸತಕ್ಕದ್ದು.

XXVIIನೇ ಅಧ್ಯಾಯ.

ಜಿಗಳೆ ಕಚ್ಚಿಸುವ ಕ್ರಮ (ರಕ್ತಮೋಕ್ಷಣ).

1. ನೃಪಾಢ್ಯಬಾಲಸ್ಥವಿರಭೀರುದುರ್ಬಲನಾರೀಸುಕುಮಾರಾಣಾಮನುಗ್ರ
ಜಿಗಳೆ ಯೋಗದ ಪ್ರಯೋಜನ. ಹಾರ್ಥಂ ಪರಮಸುಕುಮಾರೋಽಯಂ ಶೋಣಿತಾವಸೇಚನೋಪಾ
ಯೋಽಭಿಹಿತೋ ಜಲೌಕಸಃ | (ಸು. 43-44.)

ಅರಸು, ಧನಾಢ್ಯ, ಬಾಲ, ಮುದುಕ, ಹೇಡಿ, ಅಶಕ್ತ, ಸ್ತ್ರೀ, ನೂತನದವ, ಇವರ ಕ್ಷೇಮಕ್ಕೆ ರಕ್ತ ತೆಗೆದುಬಿಡುವದು ಆವಶ್ಯಕವಾದಾಗ್ಗೆ, ಜಿಗಳೆಯನ್ನು ಉಪಯೋಗಿಸುವದು ಅತ್ಯಂತ ಲಘುವಾದ ಉಪಾಯವಾಗಿ ವಿಧಿಸಲ್ಪಟ್ಟಿರುತ್ತದೆ.

2. ತತ್ರ ವಾತಪಿತ್ತಕಫದುಷ್ಟಶೋಣಿತಂ ಯಥಾಸಂಖ್ಯಂ ಶೃಂಗಜಲೌಕಾಲಾ
ರಕ್ತಾವಸೇಚನದ ಉಪಾಯಗಳು ಬುಭಿರವಸೇಚಯೇತ್ ಸ್ನಿಗ್ಧಶೀತರುಕ್ಷತ್ವಾತ್ ಸರ್ವಾಣಿ ಸರ್ವೈರ್ವಾ |
(ಸು. 44.)

ವಾತದಿಂದ ಕೆಟ್ಟ ರಕ್ತವನ್ನು ತೆಗೆಯುವದಕ್ಕೆ ಸ್ನಿಗ್ಧಗುಣವಿರುವ ಕೋಡು, ಪಿತ್ತದಿಂದ ಕೆಟ್ಟ ರಕ್ತವನ್ನು ತೆಗೆಯುವದಕ್ಕೆ ಶೀತವಾದ ಜಿಗಳೆಯು, ಕಫದಿಂದ ಕೆಟ್ಟ ರಕ್ತವನ್ನು ತೆಗೆಯುವದಕ್ಕೆ ರೂಕ್ಷವಾದ ಸೋರೆಕಾಯಿ, ಮೂರು ದೋಷಗಳೂ ಕೂಡಿರುವಲ್ಲಿ ಮೂರೂ, ಉಕ್ತವಾಗಿರುತ್ತವೆ.

3. ಉಷ್ಣಂ ಸಮಧುರಂ ಸ್ನಿಗ್ಧಂ ಗವಾಂ ಶೃಂಗಂ ಪ್ರಕೀರ್ತಿತಂ |
ತಸ್ಮಾದ್ವಾತೋಪಸೃಷ್ಟೇ ತು ಹಿತಂ ತದವಸೇಚನೇ ||
ಕೋಡು, ಜಗಳೆ, ಮತ್ತು ಸೋರೆ ಬುರುಡೆ ಗುಣಗಳು ಶೀತಾಧಿವಾಸಾ ಮಧುರಾ ಜಲೌಕಾ ವಾರಿಸಂಭವಾ |
ತಸ್ಮಾತ್ಪಿತ್ತೋಪಸೃಷ್ಟೇ ತು ಹಿತಾ ಸಾ ತ್ವವಸೇಚನೇ ||
ಅಲಾಬು ಕಟುಕಂ ರೂಕ್ಷಂ ತೀಕ್ಷ್ಣಂ ಚ ಪರಿಕೀರ್ತಿತಂ |
ತಸ್ಮಾತ್ ಶ್ಲೇಷ್ಮೋಪಸೃಷ್ಟೇ ತು ಹಿತಂ ತದವಸೇಚನೇ || (ಸು. 44.)

ಗೋವಿನ ಕೋಡು: ಉಷ್ಣ, ಮಧುರ ಮತ್ತು ಸ್ನಿಗ್ಧ ಎಂತ ಪ್ರಸಿದ್ಧವಾಗಿರುವದರಿಂದ, ವಾತದುಷ್ಟವಾದ ರಕ್ತವನ್ನು ತೆಗೆಯುವದಕ್ಕೆ ಹಿತವಾಗಿರುತ್ತದೆ. ಜಿಗಳೆಯು ನೀರಲ್ಲಿ ಹುಟ್ಟಿ ಶೀತ ಸ್ಥಾನದಲ್ಲಿ ವಾಸಿಸುವಂಥಾದ್ದು ಮತ್ತು ಮಧುರವಾದ್ದರಿಂದ, ಪಿತ್ತದೋಷದ ರಕ್ತವನ್ನು ತೆಗೆದು ಬಿಡುವದಕ್ಕೆ ಹಿತವಾದದ್ದು. ಸೋರೆಕಾಯಿಯು ಕಟು, ರೂಕ್ಷ, ಮತ್ತು ತೀಕ್ಷ್ಣ ಎಂತ ಕೀರ್ತಿ ಹೊಂದಿದೆಯಾದ್ದರಿಂದ, ಶ್ಲೇಷ್ಮದೋಷದ ರಕ್ತವನ್ನು ತೆಗೆದುಬಿಡುವದಕ್ಕೆ ಹಿತವಾಗಿರುತ್ತದೆ.

4. ತತ್ರ ಪ್ರಚ್ಛಿತೇ ತನುವಸ್ತ್ರಪಟಲಾವನದ್ಧೇನ ಶೃಂಗೇಣ ಶೋಣಿತಮ
ಕೊಂಬಿನಿಂದ ಮತ್ತು ಸೋರೆಕಾಯಿಯಿಂದ ರಕ್ತ ತೆಗೆಯುವ ಕ್ರಮ ವಸೇಚಯೇದಾಚೂಷಣಾತ್ | ಸಾಂತರ್ದೀಪಯಾಽಲಾಬ್ವಾ |
(ಸು. 44.)

ಅವಶ್ಯವಿದ್ದಲ್ಲಿ ಗಾಯಮಾಡಿ ತೆಳ್ಳಗಿನ ವಸ್ತ್ರದಿಂದ ಮುಚ್ಚಲ್ಪಟ್ಟಿರುವ ಕೊಂಬನ್ನು ಕಚ್ಚಿಸಿ, ರಕ್ತವನ್ನು ತೆಗೆಯಬೇಕು. ಸೋರೆಕಾಯಿಯನ್ನು ಒಳಗೆ ದೀಪ ಇಟ್ಟು ಉಪಯೋಗಿಸುವದಾಗಿರುತ್ತದೆ.

ಇದರ ಕೊಂಬಿನ ಮತ್ತು ಬುರುಡೆಯ ಪ್ರಮಾಣಗಳು ಬೇರೆಬೇರೆ ರೀತಿಯಾಗಿ ಗ್ರಂಥಗಳಲ್ಲಿ ಹೇಳಲ್ಪಟ್ಟಿವೆ ಕೋಡು ಹತ್ತು ಅಂಗುಲ ಮತ್ತು ಬುರುಡೆ ಹನ್ನೆರಡು ಅಂಗುಲವಿರಬೇಕಾಗಿ ತಾ (ಪು 179-80) ಈ ಕ್ರಮಗಳನ್ನು ನಡಿಸತಕ್ಕವರು ಗುರುಮುಖೇನ ಅನುಭವ ಮಾಡಿಕೊಳ್ಳಬೇಕು

5. ತಾ ದ್ವಾದಶ ತಾಸಾಂ ಸವಿಷಾಃ ಷಟ್ ತಾವತ್ಯ ಏವ ನಿರ್ವಿಷಾಃ । ತತ್ರ ಸವಿಷಾಃ ಕೃಷ್ಣಾ ಕರ್ಬುರಾ ಅಲಗರ್ದಾ ಇಂದ್ರಾಯುಧಾ ಸಾಮುದ್ರಿಕಾ ಗೋಚಂದನಾ ಚೇತಿ । ತಾಸ್ವಂಜನಚೂರ್ಣವರ್ಣಾ ವೃದ್ಧು ಶಿರಾಃ ಕೃಷ್ಣಾ । ವರ್ಮಿಮತ್ಸ್ಯವದಾಯತಾ ಛಿನ್ನೋನ್ನತಕುಕ್ಷಿಃ ಕರ್ಬುರಾ । ರೋಮಶಾ ಮಹಾಪಾರ್ಶ್ವಾ ಕೃಷ್ಣಮುಖ್ಯಲಗರ್ದಾ । ಇಂದ್ರಾಯುಧವದೂರ್ಧ್ವರಾಜಿಭಿಶ್ಚಿತ್ರಿತಾ ಇಂದ್ರಾಯುಧಾ । ಈಷದಸಿತಪೀತಿಕಾ ವಿಚಿತ್ರಪುಷ್ಪಾಕೃತಿಚಿತ್ರಾ ಸಾಮುದ್ರಿಕಾ । ಗೋವೃಷಣವದಧೋಭಾಗೇ ದ್ವಿಧಾಭೂತಾಕೃತಿರಣುಮುಖೀ ಗೋಚಂದನೇತಿ । (ಸು. 44.)

ಜಿಗಳೆಗಳ ಜಾತಿಗಳು ಮತ್ತು ವಿಷಜಾತಿಗಳ ವಿವರಣ

ಜಿಗಳೆಗಳೊಳಗೆ ಹನ್ನೆರಡು ಜಾತಿಗಳಿವೆ. ಅವುಗಳಲ್ಲಿ ಆರು ವಿಷವುಳ್ಳವು, ಮತ್ತು ಆರು ನಿರ್ವಿಷವಾದವು. ವಿಷವುಳ್ಳ ಜಾತಿಗಳ ಹೆಸರು· 1 ಕೃಷ್ಣಾ, 2. ಕರ್ಬುರಾ, 3. ಅಲಗರ್ದಾ, 4. ಇಂದ್ರಾಯುಧಾ, 5. ಸಾಮುದ್ರಿಕಾ, ಮತ್ತು 6. ಗೋಚಂದನಾ. ಅವುಗಳಲ್ಲಿ ಅಂಜನದ ಚೂರ್ಣದಂತೆ ಕಪ್ಪಾಗಿ ತಲೆ ದೊಡ್ಡದಾಗಿರುವಂಥಾದ್ದು ಕೃಷ್ಣಾ ಎಂಬದು. ವರ್ಮಿ ಎಂಬ ಮೀನಿನಂತೆ ಉದ್ದವಾಗಿ ಎತ್ತರತಗ್ಗಾದ ಹೊಟ್ಟೆಯುಳ್ಳದ್ದು ಕರ್ಬುರಾ ಎಂಬದು. ರೋಮವುಳ್ಳದ್ದಾಗಿಯೂ*, ಮಹಾ ಪಾರ್ಶ್ವಗಳುಳ್ಳದ್ದಾಗಿಯೂ, ಕರೀ ಮುಖವುಳ್ಳದ್ದಾಗಿಯೂ, ಇರುವಂಥಾದ್ದು ಅಲಗರ್ದಾ ಎಂಬದು. ಇಂದ್ರನ ಆಯುಧದಂತೆ ಮೇಲ್ಮುಖವಾದ ರೇಖೆಗಳ ಚಿತ್ತಾರವುಳ್ಳದ್ದು ಇಂದ್ರಾಯುಧ ಎಂಬದು. ಕಿಂಚಿತ್ ಕಪ್ಪು ಕೂಡಿದ ಅರಸಿನ ವರ್ಣದ್ದಾಗಿಯೂ, ವಿಚಿತ್ರವಾದ ಪುಷ್ಪಾಕಾರದ ಚಿತ್ತಾರ(ಬಿಳೇ ಚುಕ್ಕಿಗಳು)ವುಳ್ಳದ್ದಾಗಿಯೂ, ಇರುವಂಥಾದ್ದು ಸಾಮುದ್ರಿಕ ಎಂಬದು ಎತ್ತಿನ ಅಂಡಗಳಂತೆ ಕೆಳಭಾಗದಲ್ಲಿ ಎರಡಾದ ಆಕಾರವುಳ್ಳದ್ದಾಗಿಯೂ, ಸೂಕ್ಷ್ಮ ಮುಖವುಳ್ಳದ್ದಾಗಿಯೂ ಇರುವಂಥಾದ್ದು ಗೋಚಂದನ ಎಂಬದಾಗಿರುತ್ತದೆ.

* ಇದರ ನಿರಿಗಳಿಂದ ರೋಮವುಳ್ಳದ್ದಾಗಿ ಕಾಣುತ್ತದೆಂತ ಸಿ ಸಂ ವ್ಯಾ

6. ಅಥ ನಿರ್ವಿಷಾಃ । ಕಪಿಲಾ ಪಿಂಗಲಾ ಶಂಕುಮುಖೀ ಮೂಷಿಕಾ ಪುಂಡರೀಕಮುಖೀ ಸಾವರಿಕಾ ಚೇತಿ । ತತ್ರ ಮನಃಶಿಲಾರಂಜಿತಾಭ್ಯಾಮಿವ ಪಾರ್ಶ್ವಾಭ್ಯಾಂ ವೃಷ್ಠೇ ಸ್ನಿಗ್ಧಮುಗ್ಧವರ್ಣಾ ಕಪಿಲಾ । ಕಿಂಚಿದ್ರಕ್ತಾ ವೃತ್ತಕಾಯಾ ಪಿಂಗಾಽಶುಗಾ ಚ ಪಿಂಗಲಾ । ಯಕೃದ್ವರ್ಣಾ ಶೀಘ್ರಪಾಯಿನೀ ದೀರ್ಘತೀಕ್ಷ್ಣಮುಖೀ ಶಂಕುಮುಖೀ । ಮೂಷಿಕಾಕೃತಿವರ್ಣಾಽನಿಷ್ಟಗಂಧಾ ಚ ಮೂಷಿಕಾ । ಮುದ್ಗವರ್ಣಾ ಪುಂಡರೀಕ

ನಿರ್ವಿಷವಿಲ್ಲದ ಜಾತಿಗಳ ವಿವರ

ತುಲ್ಯವಕ್ತ್ರಾ ಪುಂಡರೀಕಮುಖೀ । ಸ್ನಿಗ್ಧಾ ಪದ್ಮಪತ್ರವರ್ಣಾಷ್ಟಾದ
ಶಾಂಗುಲಪ್ರಮಾಣಾ ಸಾವರಿಕಾ ಸಾ ಚ ಪಶ್ವರ್ಥೇ । ಇತ್ಯೇತಾ
ಅವಿಷಾ ವ್ಯಾಖ್ಯಾತಾಃ । ತಾಸಾಂ ಯವನಪಾಂಡ್ಯಸಹ್ಯಪೌತನಾದೀನಿ
ಕ್ಷೇತ್ರಾಣಿ । ತೇಷು ಮಹಾಶರೀರಾ ಬಲವತ್ಯಃ ಶೀಘ್ರಪಾಯಿನ್ಯೋ
ಮಹಾಶನಾ ನಿರ್ವಿಷಾಶ್ಚ ವಿಶೇಷೇಣ ಭವಂತಿ । (ಸು. 45.)

ನಿರ್ವಿಷ ಜಾತಿಗಳ ಹೆಸರುಗಳೇನೆಂದರೆ:— 1. ಕಪಿಲಾ, 2. ಪಿಂಗಲಾ, 3. ಶಂಕು ಮುಖೀ, 4. ಮೂಷಿಕಾ, 5. ಪುಂಡರೀಕಮುಖೀ, ಮತ್ತು 6. ಸಾವರಿಕಾ ಅವುಗಳೊಳಗೆ ಮಣಿಶಿಲೆಯ ಬಣ್ಣ ಹಚ್ಚಿದ ಹಾಗಿನ ಎರಡು ಪಾರ್ಶ್ವಗಳುಳ್ಳದ್ದಾಗಿಯೂ, ಬೆನ್ನಿನಲ್ಲಿ ಸ್ನಿಗ್ಧವಾದ ಹೆಸರಕಾಳಿನ ವರ್ಣವುಳ್ಳದ್ದಾಗಿಯೂ, ಇರುವಂಥಾದ್ದು ಕಪಿಲಾ. ಕಿಂಚಿತ್ ಕೆಂಪಾದ ಕಪಿಲವರ್ಣವುಳ್ಳದ್ದಾಗಿಯೂ, ಉರುಟುಶರೀರವುಳ್ಳದ್ದಾಗಿಯೂ, ಶೀಘ್ರಚಲನೆಯುಳ್ಳದ್ದಾಗಿಯೂ, ಇರುವಂಥಾದ್ದು ಪಿಂಗಲಾ. ಯಕೃತ್ತಿನ ವರ್ಣ(ನೀಲ ಒತ್ತಿದ ಕೆಂಪು)ವುಳ್ಳದ್ದಾಗಿಯೂ, ಶೀಘ್ರವಾಗಿ ಕುಡಿಯುವ ಸ್ವಭಾವವುಳ್ಳದ್ದಾಗಿಯೂ, ದೀರ್ಘವೂ, ತೀಕ್ಷ್ಣವೂ, ಆದ ಮುಖವುಳ್ಳದ್ದಾಗಿಯೂ, ಇರುವಂಥಾದ್ದು ಶಂಕುಮುಖೀ ಇಲಿಯ ಆಕಾರ ಮತ್ತು ವರ್ಣವುಳ್ಳದ್ದಾಗಿಯೂ, ಅನಿಷ್ಟವಾದ ವಾಸನೆಯುಳ್ಳದ್ದಾಗಿಯೂ, ಇರುವಂಥಾದ್ದು ಮೂಷಿಕಾ. ಹೆಸರಕಾಳಿನ ವರ್ಣವುಳ್ಳದ್ದಾಗಿಯೂ, ತಾವರೆಗೆ ಸದೃಶವಾದ (ವಿಸ್ತೃತವಾದ) ಮುಖವುಳ್ಳದ್ದಾಗಿಯೂ, ಇರುವಂಥಾದ್ದು ಪುಂಡರೀಕಮುಖೀ. ಸ್ನಿಗ್ಧವಾಗಿಯೂ, ತಾವರೆ ಎಲೆಯ ವರ್ಣವುಳ್ಳದ್ದಾಗಿಯೂ, ಹದಿನೆಂಟು ಅಂಗುಲ ಉದ್ದವಾಗಿಯೂ, ಇರುವಂಥಾದ್ದು ಸಾವರಿಕಾ; ಅದು ಪಶುಗಳ ಬಗ್ಗೆ ಉಪಯೋಗಿಸುವಂಥಾದ್ದು. ಇದು ನಿರ್ವಿಷಗಳ ವರ್ಣನ. ಅವುಗಳ ದೇಶಗಳು ಯವನ, ಪಾಂಡ್ಯ, ಸಹ್ಯ, ಪೌತನ (ಮಧುರಾ ಪ್ರದೇಶ) ಮುಂತಾದವಾಗಿರುತ್ತವೆ. ಆ ದೇಶಗಳಲ್ಲಿ ದೊಡ್ಡ ಶರೀರವುಳ್ಳವಾಗಿಯೂ, ಬಲವಂತವಾಗಿಯೂ, ಶೀಘ್ರವಾಗಿ ಕುಡಿಯುವ ಸ್ವಭಾವವುಳ್ಳವಾಗಿಯೂ, ಹೆಚ್ಚು ಆಹಾರಬೇಕಾದವಾಗಿಯೂ, ವಿಷ ಇಲ್ಲದವಾಗಿಯೂ, ಇರುವಂಥವು ಹೆಚ್ಚಾಗಿ ಉಂಟಾಗುತ್ತವೆ.

7. ತತ್ರ ಸವಿಷಮತ್ಸ್ಯಕೀಟದರ್ದುರಮೂತ್ರಪುರೀಷಕೋಥಜಾತಾಃ ಕಲು ಷೇಷ್ವಂಭಃಸು ಚ ಸವಿಷಾಃ । ಪದ್ಮೋತ್ಪಲನಲಿನಕುಮುದಸೌಗಂಧಿ ಕಕುವಲಯಪುಂಡರೀಕಶೈವಾಲಕೋಥಜಾತಾ ವಿಮಲೇಷ್ವಂಭಃಸು ಚ ನಿರ್ವಿಷಾಃ ।

ಸವಿಷ ನಿರ್ವಿಷ ಜಗಳಿಗಳ ಹುಟ್ಟು ಮತ್ತು ಸ್ಥಾನ

ಕ್ಷೇತ್ರೇಷು ವಿಚರಂತ್ಯೇತಾಃ ಸಲಿಲೇಷು ಸುಗಂಧಿಷು ।
ನ ಚ ಸಂಕೀರ್ಣಚಾರಿಣ್ಯೋ ನ ಚ ಪಂಕೇಶಯಾಃ ಸುಖಾಃ ॥ (ಸು. 45.)

ವಿಷಜಾತಿಯ ಜಿಗಳೆಗಳು ವಿಷಯುಕ್ತವಾದ ಮೀನು, ಹುಳ, ಮತ್ತು ಕಪ್ಪೆಗಳ, ಮಲ ಮೂತ್ರಗಳ ಕೊಳೆಯಲ್ಲಿ ಹುಟ್ಟಿ, ಮಲಿನವಾದ ನೀರುಗಳಲ್ಲಿ ವಾಸಿಸಿರುತ್ತವೆ. ನಿರ್ವಿಷವಾದವು ಪದ್ಮ, ಉತ್ಪಲ, ನಲಿನ, ಕುಮುದ, ಸೌಗಂಧಿಕ, ಕುವಲಯ, ಪುಂಡರೀಕ, ಎಂಬ ತಾವರೆ ಮತ್ತು ನೈದಿಲೆ ಜಾತಿಗಳು ಮತ್ತು ನೀರಲ್ಲಿರುವ ಆಟ, ಇವುಗಳ ಕೊಳೆಯಲ್ಲಿ ಹುಟ್ಟಿ,

ನಿರ್ಮಲವಾದ ನೀರುಗಳಲ್ಲಿ ವಾಸಿಸಿರುತ್ತವೆ. ಇವು ಸುಗಂಧವುಳ್ಳ ನೀರುಗಳಲ್ಲಿ ಮತ್ತು ಗದ್ದೆಗಳಲ್ಲಿ ಸಂಚರಿಸುತ್ತವೆ. ಅವು ಮಲಿನವಾದ ಎಡೆಗಳಲ್ಲಿ ಸಂಚರಿಸತಕ್ಕವಲ್ಲ, ಕೆಸರಿನಲ್ಲಿ ಮಲಗುವವಲ್ಲ ಮತ್ತು ಅವು ಸುಖಕರವಾದವಾಗಿರುತ್ತವೆ.

ಪರಾ ಪದ್ಮವು ಅಲ್ಪ ಬಿಳ್ಪಗೆ, ಉತ್ಪಲ ಅಲ್ಪ ನೀಲ, ನಲಿನ ಅಲ್ಪ ಕೆಂಪು, ಸೌಗಂಧಿಕ ಅತ್ಯಂತ ಪರಿಮಳವುಳ್ಳದ್ದು ಮತ್ತು ಚಂದ್ರೋದಯಕ್ಕೆ ಅರಳುವ ಗರ್ದಭ ಪುಷ್ಪ ಎಂಬ ಹೆಸರುಳ್ಳದ್ದು, ಕುವಲಯ ರಕ್ತೋತ್ಪಲ, ಮತ್ತು ಪುಂಡರೀಕ ಅತಿ ಬಿಳ್ಪಗಿನ ಪದ್ಮ, ಎಂತ ಸಿ ಸಂ ವ್ಯಾ

8. ತಾಭಿರ್ದಷ್ಟೇ ಪುರುಷೇ ದಂಶೇ ಶ್ವಯಥುರತಿಮಾತ್ರಂ ಕಂಡೂರ್ಮೂರ್ಚ್ಛಾ ಜ್ವರೋ ದಾಹಶ್ಚರ್ದಿರ್ಮದಃ ಸದನಮಿತಿ ಲಿಂಗಾನಿ ಭವಂತಿ | ತತ್ರ ಮಹಾಗದಃ ಪಾನಾಲೇಪನನಸ್ಯಕರ್ಮಾದಿಷೂಪಯೋಜ್ಯಃ | ಇಂದ್ರಾಯುಧಾದಷ್ಟಮಸಾಧ್ಯಮಿತಿ | (ಸು. 44-45.)

ವಿಷಜಾತಿ ಜಿಗಳೆ ಕಚ್ಚಿದ ವ್ಯಥೆ ಮತ್ತು ಅದಕ್ಕೆ ಪರಿಹಾರ

ವಿಷಜಾತಿಯ ಜಿಗಳೆಯು ಮನುಷ್ಯನಿಗೆ ಕಚ್ಚಿದರೆ, ಕಚ್ಚಿದ ಗಾಯದಲ್ಲಿ ಅತಿಯಾದ ಬಾಕು ಮತ್ತು ತುರಿ, ಮೂರ್ಛೆ, ಜ್ವರ, ಉರಿ, ವಾಂತಿ, ಮದ, ನೋವು, ಈ ಲಕ್ಷಣಗಳು ಕಾಣುವವು. ಆಗ್ಗೆ ಪಾನ, ಲೇಪನ, ನಸ್ಯಕರ್ಮ ಮೊದಲಾದವುಗಳಿಗೆ ವಿಷಚಿಕಿತ್ಸೆಯಲ್ಲಿ ಹೇಳಲ್ಪಟ್ಟ ಮಹಾಗದ ಎಂಬ ತ್ರಿವೃತಾದಿಯೋಗವನ್ನು ಉಪಯೋಗಿಸಬೇಕು. ಇಂದ್ರಾಯುಧ ಎಂಬ ಜಾತಿಯ ಜಿಗಳೆ ಕಚ್ಚಿದ್ದು ಅಸಾಧ್ಯವಾಗಿರುತ್ತದೆ.

9. ತಾಸಾಂ ಪ್ರಗ್ರಹಣಮಾರ್ದ್ರಚರ್ಮಣಾಸ್ಯೈರ್ವಾ ಪ್ರಯೋಗೈರ್ಗೃಹ್ಣೀಯಾತ್ | ಅಧ್ವನಾಂ ನವೇ ಮಹತಿ ಘಟೇ ಸರಸ್ತಡಾಗೋದಕಪಂಕಮಾವಾಪ್ಯ ನಿದಧ್ಯಾತ್ | ಭಕ್ಷ್ಯಾರ್ಥೇ ಚಾಸಾಮುಪಹರೇಚ್ಛೈವಲಂ ವಲ್ಲೂರಮೌದಕಾಂಶ್ಚ ಕಂದಾಂಶ್ಚೂರ್ಣೀಕೃತ್ಯ ಶಯ್ಯಾರ್ಧಂ ತೃಣಮೌದಕಾನಿ ಚ ಪತ್ರಾಣಿ | ದ್ವ್ಯಹಾತ್ ತ್ರ್ಯಹಾಚ್ಚಾನ್ಯಜಲಂ ಭಕ್ಷ್ಯಂ ಚ ದದ್ಯಾತ್ ಸಪ್ತರಾತ್ರಾತ್ ಸಪ್ತರಾತ್ರಾಚ್ಚ ಘಟಮನ್ಯಂ ಸಂಕ್ರಾಮಯೇತ್ | (ಸು. 45-6.)

ಜಿಗಳೆಗಳನ್ನು ಹಿಡಿದಿಡುವ ಕ್ರಮ

ಜಿಗಳೆಗಳನ್ನು ಒದ್ದೆ ಚರ್ಮದಿಂದ ಅಥವಾ ಬೇರೆ ಪ್ರಯೋಗಗಳಿಂದ ಹಿಡಿಯಬೇಕು. ಆ ಜಿಗಳೆಯನ್ನು, ಹೊಸದಾದ ದೊಡ್ಡ ಕೊಡಕ್ಕೆ ಸರೋವರದ ಅಥವಾ ಕೆರೆಯ ನೀರನ್ನು ಮತ್ತು ಕೆಸರನ್ನು ಹಾಕಿ, ಅದರಲ್ಲಿ ಇಡಬೇಕು. ಅವುಗಳ ಆಹಾರಾರ್ಥವಾಗಿ ನೀರಲ್ಲಿರುವ ಆಟವನ್ನೂ, ಒಣಗಿದ ಮಾಂಸವನ್ನೂ, ನೀರಲ್ಲಿ ಬೆಳೆದ ಗಡ್ಡೆಗಳ ಚೂರ್ಣವನ್ನೂ, ಮಲಗಲಿಕ್ಕೆ ಹುಲ್ಲನ್ನು ಮತ್ತು ನೀರಲ್ಲಿ ಬೆಳೆದ ಎಲೆಗಳನ್ನು, ಹಾಕಬೇಕು. ಎರಡು ಅಥವಾ ಮೂರು ದಿನಗಳಿಗೊಮ್ಮೆ ಬೇರೆ ನೀರನ್ನೂ, ಭಕ್ಷ್ಯವನ್ನೂ ಕೊಡಬೇಕು; ಮತ್ತು ಏಳು ದಿನಗಳಿಗೊಮ್ಮೆ ಕೂಡವನ್ನೂ ಬದಲಾಯಿಸಬೇಕು.

10. ಸ್ಥೂಲಮಧ್ಯಾಃ ಪರಿಕ್ಲಿಷ್ಟಾಃ ಪೃಥ್ವ್ಯೋ ಮಂದವಿಚೇಷ್ಟಿತಾಃ | ಅಗ್ರಾಹಿಣ್ಯೋಽಲ್ಪಪಾಯಿನ್ಯಃ ಸವಿಷಾಶ್ಚ ನ ಪೂಜಿತಾಃ || (ಸು. 46)

ಅಯೋಗ್ಯವಾದ ಜಿಗಳೆಗಳ ಲಕ್ಷಣ

ತೋರವಾದ ಮಧ್ಯವುಳ್ಳ, ಕೋಪಗೊಂಡ, ದೊಡ್ಡದಾದ, ಮಂದಗತಿಯುಳ್ಳ, ಪಿಡಿಯದ, ಅಲ್ಪವಾಗಿ ಕುಡಿಯುವ, ಮತ್ತು ವಿಷಜಾತಿಯ ಜಿಗಳೆಗಳು ಪೂಜ್ಯವಲ್ಲ.

11. ಅಥ ಜಲೌಕೋಽವಸೇಕಸಾಧ್ಯವ್ಯಾಧಿತಮುಪವೇಶ್ಯ ಸಂವೇಶ್ಯ ವಾ ವಿರೂಕ್ಷ್ಯ ಚಾಸ್ಯ ತಮವಕಾಶಂ ಮೃದ್ಗೋಮಯಚೂರ್ಣೈರ್ಯಧ್ಯರುಜಃ ಸ್ಯಾತ್ | ಗೃಹೀತಾಶ್ಚ ತಾಃ ಸರ್ಷಪರಜನೀಕಲ್ಕೋದಕಪ್ರದಿಗ್ಧಗಾತ್ರೀಃ ಸಲಿಲಸರಕಮಧ್ಯೇ ಮುಹೂರ್ತಸ್ಥಿತಾ ವಿಗತಕ್ಲಮಾ ಜ್ಞಾತ್ವಾ ತಾಭೀರೋಗಂ ಗ್ರಾಹಯೇತ್ | ಸೂಕ್ಷ್ಮಶುಕ್ಲಾರ್ದ್ರಪಿಚುವ್ಲೋತಾವಚ್ಛನ್ನಾಂ ಕೃತ್ವಾ ಮುಖಮಪಾವ್ಯಣುಯಾದಗೃಹ್ಣಂತ್ಯೈ ಕ್ಷೀರಬಿಂದುಂ ಶೋಣಿತಬಿಂದುಂ ವಾ ದದ್ಯಾಚ್ಛಸ್ತ್ರಪದಾನಿ ವಾ ಕುರ್ವೀತ ಯದ್ಯೇವಮಪಿ ನ ಗೃಹ್ಣೀಯಾತ್ತದಾನ್ಯಾಂ ಗ್ರಾಹಯೇತ್ | ಯದಾ ಚ ನಿವಿಶತೇಽಶ್ವಖುರವದಾನನಂ ಕೃತ್ವೋನ್ನಮ್ಯ ಚ ಸ್ಕಂಧಂ ತದಾ ಜಾನೀಯಾದ್ (ಗೃಹ್ಣಾತೀತಿ) ಗೃಹ್ಣಂತೀಂ ಚಾರ್ದ್ರವಸ್ತ್ರಾವಚ್ಛನ್ನಾಂ ಧಾರಯೇತ್ಸೇಚಯೇಚ್ಚ | ದಂಶೇತೋದಕಂಡುಪ್ರಾದುರ್ಭಾವೈರ್ಜಾನೀಯಾಚ್ಛುದ್ಧಮಿಯಮಾದತ್ತ ಇತಿ ಶುದ್ಧಮಾದದಾನಾಮಪನಯೇತ್ | (ಸು. 46.)

ಜಿಗಳೆ ಕಚ್ಚಿಸುವ ವಿಧಿಗಳು

ಜಿಗಳೆ ಕಚ್ಚಿಸಿ ರಕ್ತ ತೆಗೆಯುವದರಿಂದ ಸಾಧ್ಯವಾದ ರೋಗವುಳ್ಳ ಮನುಷ್ಯನನ್ನು ಕೂತುಕೊಳ್ಳಿಸಿ, ಅಥವಾ ಮಲಗಿಸಿ, ಅವನ ಆ ಸ್ಥಳದಲ್ಲಿ ನೋವಿಲ್ಲದಿದ್ದರೆ, ಅಲ್ಲಿಯ ಜಿಡ್ಡು ಹೋಗುವ ಹಾಗೆ ಮಣ್ಣು ಮತ್ತು ಸಗಣಿಯ ಚೂರ್ಣದಿಂದ ತಿಕ್ಕಬೇಕು. ಹಿಡಿದಿಟ್ಟ ಆ ಜಿಗಳೆಗಳ ಶರೀರಕ್ಕೆ ಸಾಸಿವೆ ಮತ್ತು ಅರಸಿನದ ಕಲ್ಕವನ್ನು ಕದಡಿದ ನೀರನ್ನು ಹಚ್ಚಿ, ಅವುಗಳನ್ನು ನೀರು ತುಂಬಿದ ಕವಳಿಗೆಯಲ್ಲಿ ಒಂದು ಮುಹೂರ್ತಕಾಲ ಇರಿಸಬೇಕು. ಆ ಮೇಲೆ ಅವುಗಳ ಶ್ರಮ ಪರಿಹಾರವಾದ್ದನ್ನು ತಿಳಿದು, ಅವುಗಳಿಂದ ರೋಗವುಳ್ಳ ಸ್ಥಳವನ್ನು ಹಿಡಿಸಬೇಕು. ಸೂಕ್ಷ್ಮ ಮತ್ತು ಬಿಳೇದು ಆದ ಹತ್ತಿ ಅಥವಾ ವಸ್ತ್ರದ ತುಂಡನ್ನು ಒದ್ದೆಮಾಡಿ ಅದರಿಂದ ಜಿಗಳೆಯನ್ನು ಮುಚ್ಚಿ ಹಿಡಕೊಂಡು, ಅದರ ಮುಖವನ್ನು ತೆರೆಯಬೇಕು*. ಆಗ್ಗೆ ಅದು ಹಿಡಿಯದಿದ್ದರೆ ಒಂದು ಬಿಂದು ಹಾಲನ್ನಾಗಲಿ, ರಕ್ತವನ್ನಾಗಲಿ, ಬಿಡಬೇಕು. ಅಥವಾ ಶಸ್ತ್ರದಿಂದ ಗೀರಿ ಗುರುತುಗಳನ್ನು ಮಾಡಬೇಕು ಹೀಗೆ ಮಾಡಿದಾಗ್ಯೂ, ಅದು ಹಿಡಿಯದಿದ್ದರೆ, ಅದನ್ನು ಬಿಟ್ಟು ಬೇರೊಂದನ್ನು ಹಿಡಿಸಬೇಕು. ಯಾವಾಗ ಅದು ಕುದುರೆ ಕಾಲ ಗೊರಸಿನಂತೆ ಬಾಯಿಯನ್ನು ಬಿಡಿಸಿಕೊಂಡು, ದೇಹವನ್ನು ಎತ್ತಿಕೊಂಡು, ಹಿಡಿಯುತ್ತದೋ, ಆಗ್ಗೆ ಅದು ರಕ್ತವನ್ನು ಹೀರುತ್ತದೆಂತ ತಿಳಿದು, ಅದನ್ನು ಒದ್ದೆ ವಸ್ತ್ರದಿಂದ ಮುಚ್ಚಿ ಹಿಡಕೊಂಡು, ಅದರ ಮೇಲೆ ನೀರು ಬಿಡಬೇಕು. ಗಾಯದಲ್ಲಿ ನೋವು ಮತ್ತು ತುರಿಕೆ ಹೊರಟರೆ, ಜಿಗಳೆಯು ಶುದ್ಧವಾದ ರಕ್ತವನ್ನೇ ಕುಡಿಯುತ್ತದೆಂದು ತಿಳಿದು ಅದನ್ನು ಬಿಡಿಸಿಬಿಡಬೇಕು.

*'ಮುಚ್ಚಬೇಕು' ಎಂದರ್ಥವಾಗಿ ಸಿ ಸಂ ವ್ಯಾ

12. ಅಥ ಶೋಣಿತಗಂಧೇನ ನ ಮುಂಚೇನ್ಮುಖಮಸ್ಯಾಃ ಸೈಂಧವಚೂರ್ಣೇನಾವಕಿರೇತ್ | ಅಥ ಪತಿತಾಂ ತಂಡುಲಕಂಡನಪ್ರದಿಗ್ಧಗಾತ್ರೀಂ ತೈಲ

ಲವಣಾಭ್ಯಕ್ತಮುಖೀಂ ವಾಮಹಸ್ತಾಂಗುಲೀಭ್ಯಾಂ ಗೃಹೀತಪುಚ್ಛಾಂ ದಕ್ಷಿಣಹಸ್ತಾಂಗುಷ್ಠಾಂಗುಲೀಭ್ಯಾಂ ಶನೈಃ ಶನೈರನುಲೋಮಮನುಮಾರ್ಜಿಯೇದಾಮುಖಾದ್ವಾಮಯೇತ್ತಾವದ್ಯಾವತ್ಸಮ್ಯಗ್ವಾಂತಲಿಂಗಾನೀತಿ । ಸಮ್ಯಗ್ವಾಂತಾ ಸಲಿಲಸರಕನ್ಯಸ್ತಾ ಭೋಕ್ತುಕಾಮಾ ಸತೀ ಚರೇತ್ । ಯಾ ಸೀದತಿ ನ ಚೇಷ್ಟತೇ ಸಾ ದುರ್ವಾಂತಾ ತಾಂ ಪುನಃ ಸಮ್ಯಗ್ವಾಮಯೇತ್ । ದುರ್ವಾಂತಾಯಾ ವ್ಯಾಧಿರಸಾಧ್ಯ ಇಂದ್ರಮದೋ ನಾಮ ಭವತಿ । ಅಥ ಸುವಾಂತಾಂ ಪೂರ್ವವತ್ಸನ್ನಿದಧ್ಯಾತ್ ಶೋಣಿತಸ್ಯ ಚ ಯೋಗಾಯೋಗಾನವೇಕ್ಷ್ಯ ಜಲೌಕೋವ್ರಣಾನ್ಮಧು ನಾವಘಟ್ಟಯೇಚ್ಛೀತಾಭಿರದ್ಭಿಶ್ಚ ಪರಿಷೇಚಯೇದ್ ಬಧ್ನೀತ ವಾ ವ್ರಣಂ ಕಷಾಯಮಧುರಸ್ನಿಗ್ಧಶೀತೈಶ್ಚ ಪ್ರದೇಹೈಃ ಪ್ರದಿಹ್ಯಾದಿತಿ ।

(ಸು. 46-47.)

ಜಿಗಳೆಯ ಉಪಚಾರ

ಜಿಗಳೆಯು ರಕ್ತದ ವಾಸನೆಯಿಂದ* ಹಿಡಿದದ್ದನ್ನು ಬಿಡುವದಿಲ್ಲ. ಆಗ್ಗೆ ಅದರ ಮುಖಕ್ಕೆ ಸೈಂಧವ ಉಪ್ಪಿನ ಚೂರ್ಣವನ್ನು ಚಲ್ಲಿದಲ್ಲಿ ಅದು ಬೀಳುತ್ತದೆ. ಆ ಮೇಲೆ ಅದರ ಶರೀರಕ್ಕೆ ಅಕ್ಕಿಪುಡಿಯನ್ನು ಲೇಪಿಸಿ, ಬಾಯಿಗೆ ತೈಲ ಮತ್ತು ಸೈಂಧವಲವಣವನ್ನು ಹಚ್ಚಿ, ಅದರ ಬಾಲವನ್ನು ಎಡದ ಕೈಯ ಬೆರಳುಗಳಿಂದ ಹಿಡಕೊಂಡು, ಬಲದ ಕೈಯ ಹೆಬ್ಬೆಟ್ಟು ಮತ್ತು ಬೆರಳಿಂದ ಮೆಲ್ಲಮೆಲ್ಲಗಾಗಿ ಕೆಳಗೆ ಬಾಯಿಯ ಕಡೆಗೆ ಒರಸಿ, ಬಾಯಿಯಿಂದ ವಾಂತಿಮಾಡಿಸಬೇಕು. ಈ ಕ್ರಮವನ್ನು ಚೆನ್ನಾಗಿ ವಾಂತಿಮಾಡಿದ ಲಕ್ಷಣಗಳು ಕಾಣುವ ವರೆಗೆ ನಡಿಸಬೇಕು. ಚೆನ್ನಾಗಿ ವಾಂತಿಮಾಡಿದ ಜಿಗಳೆಯನ್ನು ನೀರುಳ್ಳ ಕವಳಿಯೊಳಗೆ ಇಟ್ಟಲ್ಲಿ ಅದು ಉಣ್ಣುವ ಅಪೇಕ್ಷೆಯಿಂದ ಸಂಚರಿಸುವದು. ಅದು ಚಲಿಸದೆ ಜಡವಾಗಿದ್ದರೆ, ಅದು ವಾಂತಿಮಾಡಿದ್ದು ಸಾಲದೆಂತ ತಿಳಿದು, ಅದನ್ನು ಪುನಃ ಚೆನ್ನಾಗಿ ವಾಂತಿಮಾಡಿಸಬೇಕು. ಅದು ಸರಿಯಾಗಿ ವಾಂತಿಮಾಡದಿರುವದರಿಂದ 'ಇಂದ್ರಮದ' ಎಂಬ ಹೆಸರಿನ ಅಸಾಧ್ಯವಾದ ವ್ಯಾಧಿ ಉಂಟಾಗುವದು. ಸರಿಯಾಗಿ ವಾಂತಿಮಾಡಿದ ಜಿಗಳೆಯನ್ನು ಮೊದಲಿನಂತೆ ಪಾತ್ರೆಯಲ್ಲಿ ಕ್ರಮದಂತೆ ಇರಿಸತಕ್ಕದ್ದು. ರಕ್ತವನ್ನು ತೆಗೆದದ್ದು ಸರಿಯಾಯಿತು ಅಥವಾ ಸಾಲದು ಎಂಬದನ್ನು ನೋಡಿಕೊಂಡು, ಜಿಗಳೆ ಕಚ್ಚಿದ ಗಾಯವನ್ನು ಜೇನು ಹಚ್ಚಿ ಕೂಡಿಸಿ, ಅದರ ಮೇಲೆ ತಣ್ಣಗಾದ ನೀರನ್ನು ಚಿಮುಕಿಸಬೇಕು. ಅಥವಾ ವ್ರಣವನ್ನು (ವಸ್ತ್ರದಿಂದ) ಕಟ್ಟಿ, ಜೊಗರು, ಸೀ, ಸ್ನಿಗ್ಧ ಮತ್ತು ಶೀತವಾದ ಲೇಪಗಳನ್ನು ಲೇಪಿಸತಕ್ಕದ್ದು.

*ಇದಾ —ಜಿಗಳೆಗೆ ಗಂಧೇಂದ್ರಿಯವಿಲ್ಲದರಿಂದ, 'ಗಧ್ದೇನ' (ಆಶೆಯಿಂದ) ಎಂಬ ಪಾಠವಿರಬೇಕೆಂತ ಕೆಲವರ ಪಕ್ಷ ಉಂಟಾಗಿ ಸಿ ಸಂ ವ್ಯಾ

13. ಶೋಣಿತಂ ಸ್ರಾವಯೇಜ್ಜಲ್ಯೋರಾಮಯಂ ಪ್ರಸಮೀಕ್ಷ್ಯ ಚ ।
ಪ್ರಸ್ಥಂ ಪ್ರಸ್ಥಾರ್ಧಕಂ ವಾಪಿ ಪ್ರಸ್ಥಾರ್ಧಾರ್ಧಮಥಾಪಿ ವಾ ॥ (ಶಾ. 178.)

ರಕ್ತಸ್ರಾವಣದ ಪ್ರಮಾಣ

ಮನುಷ್ಯನ ರೋಗವನ್ನು ನೋಡಿಕೊಂಡು, ಒಂದು ಪ್ರಸ್ಥ, ಅರ್ಧ ಪ್ರಸ್ಥ, ಅಥವಾ ಕಾಲು ಪ್ರಸ್ಥ ರಕ್ತವನ್ನು ಸುರಿಸಿ ತೆಗೆಯಬಹುದು.

14. ನ ಕುರ್ವೀತ ಶಿರಾಮೋಕ್ಷಂ ಕೃಶಸ್ಯಾತಿವ್ಯವಾಯಿನಃ ।
ಕ್ಲೀಬಸ್ಯ ಭೀರೋರ್ಗರ್ಭಿಣ್ಯಾಃ ಸೂತಾಯಾಃ ಪಾಂಡುರೋಗಿಣಃ ॥
ಪಂಚಕರ್ಮವಿಶುದ್ಧಸ್ಯ ಪೀತಸ್ನೇಹಸ್ಯ ಚಾರ್ಶಸಾಮ್ ।
ಸರ್ವಾಂಗಶೋಥಯುಕ್ತಾನಾಮುದರಿಶ್ವಾಸಕಾಸಿನಾಮ್ ॥
ಛರ್ದ್ಯತೀಸಾರಕುಷ್ಠಾನಾಮತಿಸ್ನಿಗ್ಧತನೋರಪಿ ।
ರಕ್ತಸ್ರಾವಣಕ್ಕೆ ಅಯೋಗ್ಯರು
ಊನಷೋಡಶವರ್ಷಸ್ಯ ಗತಸಪ್ತತಿಕಸ್ಯ ಚ ॥
ಆಘಾತಾತ್ಸ್ರುತರಕ್ತಸ್ಯ ಶಿರಾಮೋಕ್ಷೋ ನ ಶಸ್ಯತೇ ।
ಏಷಾಂ ಚಾತ್ಯಯಿಕೇ ರೋಗೇ ಜಲೌಕಾಭಿರ್ವಿನಿರ್ಹರೇತ್ ॥
ತಥಾ ಚ ವಿಷಜುಷ್ಟಾನಾಂ ಶಿರಾಮೋಕ್ಷೋ ನ ಶಸ್ಯತೇ ।
ಗೋಶೃಂಗೇಣ ಜಲೌಕಾಭಿರಲಾಬೂಭಿರಪಿ ತ್ರಿಧಾ ॥
ವಾತಪಿತ್ತಕಫೈರ್ದುಷ್ಟಂ ಶೋಣಿತಂ ಸ್ರಾವಯೇದ್ ಬುಧಃ ।
(ಭಾ. ಪ್ರ. 232.)

ಕೃಶನಾದವ, ಅತಿಯಾಗಿ ಮೈಥುನ ಮಾಡಿದವ, ಷಂಡ, ಹೇಡಿ, ಗರ್ಭಿಣೀ, ಬಾಣಂತಿ, ಪಾಂಡುರೋಗಿ, ಪಂಚಕರ್ಮಗಳಿಂದ ಶೋಧನಮಾಡಿಸಿಕೊಂಡವ, ಸ್ನೇಹಪಾನ ಮಾಡಿದವ, ಮೂಲವ್ಯಾಧಿಯವರು, ಸರ್ವಾಂಗಶೋಫೆಯುಳ್ಳವರು, ಉದರವ್ಯಾಧಿಯವರು, ಉಬ್ಬಸ ಮತ್ತು ಕೆಮ್ಮು ಉಳ್ಳವರು, ವಾಂತಿಯುಳ್ಳವರು, ಅತಿಸಾರದವ, ಕುಷ್ಠರೋಗದವ, ಅತಿಯಾಗಿ ಸ್ನೇದಮಾಡಿಸಿಕೊಂಡ ಶರೀರದವ, ಹದಿನಾರು ವರ್ಷಕ್ಕೆ ಕಡಿಮೆ ಪ್ರಾಯದವ, ಎಪ್ಪತ್ತು ವರ್ಷ ಪ್ರಾಯ ಮಿಕ್ಕಿದವ, ಗಾಯಪಟ್ಟು ರಕ್ತ ಸುರಿದವ, ಇವರಿಗೆಲ್ಲಾ ಶಿರಾನಾಳವನ್ನು ಚುಚ್ಚಿ ರಕ್ತವನ್ನು ತೆಗೆದುಬಿಡುವದು ಪ್ರಶಸ್ತವಲ್ಲ ಇವರ ರೋಗವು ಅತಿಯಾಗಿ ಬೆಳೆದಿರುವಲ್ಲಿ ಜಿಗಳೆಗಳನ್ನು ಕಚ್ಚಿಸಿ ರಕ್ತವನ್ನು ತೆಗೆದುಬಿಡಬೇಕು. ಹಾಗೆಯೇ ವಿಷಪೀಡೆಯವರಿಗೂ ಶಿರಾಮೋಕ್ಷಣವು ಪ್ರಶಸ್ತವಲ್ಲ. (ಶಿರಾಮೋಕ್ಷಣ ನಿಷಿದ್ಧವಾದವರಿಗೆ ರಕ್ತ ತೆಗೆಯುವದು ಅವಶ್ಯಕವಾದಾಗ್ಗೆ ಮುಂತಾದ ಸಂದರ್ಭಗಳಲ್ಲಿ) ವಾತದೋಷದವರಿಗೆ ಗೋವಿನ ಕೊಂಡಿನಿಂದ, ಪಿತ್ತದೋಷದವರಿಗೆ ಜಿಗಳೆಗಳಿಂದ ಮತ್ತು ಕಫದೋಷದವರಿಗೆ ಸೋರೆಕಾಯಿಯ ಬುರುಡೆಯಿಂದ, ಈ ಪ್ರಕಾರ ಮೂರು ವಿಧವಾಗಿ ಬುದ್ಧಿವಂತನು ರಕ್ತವನ್ನು ತೆಗೆದುಬಿಡಬೇಕು.

XXVIII ನೇ ಅಧ್ಯಾಯ.

ಔಷಧಕಾಲಗಳು.

1. ಅತ ಊರ್ಧ್ವಂ ದಶೌಷಧಕಾಲಾನ್ ವಕ್ಷ್ಯಾಮಃ | ತತ್ರ ನಿರ್ಭಕ್ತಂ ಪ್ರಾಗ್ಭಕ್ತಮಧೋಭಕ್ತಂ ಮಧ್ಯೇಭಕ್ತಮಂತರಾಭಕ್ತಂ ಸಭಕ್ತಂ ಸಾಮುದ್ಗಂ ಮುಹುರ್ಮುಹುರ್ಗ್ರಾಸಂ ಗ್ರಾಸಾಂತರಂ ಚೇತಿ ದಶೌಷಧಕಾಲಾಃ | (ಸು. 907.)

ಹತ್ತು ಕಾಲಗಳು

ಔಷಧಕಾಲಗಳು ಹತ್ತು; ಅವು ಯಾವವೆಂದರೆ.—1. ನಿರ್ಭಕ್ತ (ಊಟವಿಲ್ಲದೆ), 2. ಪ್ರಾಗ್ಭಕ್ತ (ಊಟಕ್ಕೆ ಮೊದಲು), 3. ಅಧೋಭಕ್ತ (ಊಟದ ಕೊನೆಗೆ), 4. ಮಧ್ಯೇ ಭಕ್ತ (ಊಟದ ಮಧ್ಯ), 5. ಅಂತರಾಭಕ್ತ (ಊಟಗಳ ಮಧ್ಯ), 6-7. ಸಭಕ್ತ (ಊಟ ಗಳೊಂದಿಗೆ), 8. ಸಾಮುದ್ಗ (ಊಟದ ಆದಿ ಮತ್ತು ಅಂತ್ಯಗಳಲ್ಲಿ), 9. ಮುಹುರ್ಮುಹುಃ (ಪದೇಪದೇ), 10. ಗ್ರಾಸಾಂತರ (ತುತ್ತುಗಳ ನಡುವೆ), ಹೀಗೆ ಹತ್ತು ಕಾಲಗಳು.

2. ತತ್ರ ನಿರ್ಭಕ್ತಂ ಕೇವಲಮೇವೌಷಧಮುಪಯುಜ್ಯತೇ |
ವೀರ್ಯಾಧಿಕಂ ಭವತಿ ಭೇಷಜಮನ್ನಹೀನಂ
ಹನ್ಯಾತ್ತದಾಮಯಮಸಂಶಯಮಾಶು ಚೈವ |
ತದ್ಬಾಲವೃದ್ಧಯುವತೀಮೃದವೋಽಥ ಪೀತ್ವಾ
ಗ್ಲಾನಿಂ ಪರಾಂ ಸಮುಪಯಾಂತಿ ಬಲಕ್ಷಯಂ ಚ || (ಸು. 907.)

ನಿರ್ಭಕ್ತವಿಧಿಯ ಗುಣ ದೋಷಗಳು

ಅವುಗಳೊಳಗೆ ನಿರ್ಭಕ್ತ ಎಂಬದು ಬರೇ ಔಷಧವನ್ನೇ ಕೊಡುವದಾಗಿರುತ್ತದೆ. ಅನ್ನ ಇಲ್ಲದ ಔಷಧಿಯಲ್ಲಿ ವೀರ್ಯ ಹೆಚ್ಚು ಇರುವದರಿಂದ, ಅದು ರೋಗವನ್ನು ನಿಃಸಂಶಯವಾಗಿ ಬೇಗನೇ ನಾಶಮಾಡುತ್ತದೆ. ಆದರೆ ಅದನ್ನು ಬಾಲರಿಗೂ, ವೃದ್ಧರಿಗೂ, ಸ್ತ್ರೀಯರಿಗೂ, ಮೆತ್ತಗಿನ (ನೂತನ) ದೇಹದವರಿಗೂ ಕೊಟ್ಟಲ್ಲಿ, ಅವರಿಗೆ ಬಹಳ ಆಯಾಸ ಮತ್ತು ಬಲ ಕುಂದುವಿಕೆ ಉಂಟಾಗುವವು.

ಪ್ರಾಯಃ ಪಿತ್ತಕಫೋದ್ರೇಕೇ ವಿರೇಕವಮನಾರ್ಥಯೋಃ |
ಲೇಖನಾರ್ಥೇ ಚ ಭೈಷಜ್ಯಂ ಪ್ರಭಾತೇಽನನ್ನಮಾಹರೇತ್ || (ಭಾ. ಪ್ರ. 237.)

ಪಿತ್ತಕಫಗಳು ಉದ್ರೇಕವಾಗಿರುವಲ್ಲಿ, ವಿರೇಚನವನ್ನಾಗಲಿ ವಾಂತಿಯನ್ನಾಗಲಿ ಮಾಡಿಸುವ ಉದ್ದಿಶ್ಯ ಮತ್ತು ಲೇಖನದ ಉದ್ದಿಶ್ಯ, ಔಷಧವು ಹೆಚ್ಚಾಗಿ ಬೆಳಿಗ್ಗೆ ಊಟವಾ ಡದೆ ಸೇವಿಸಲ್ಪಡತಕ್ಕದ್ದಾಗಿರುತ್ತದೆ.

3. ಪ್ರಾಗ್ಭಕ್ತಂ ನಾಮ ಯತ್ತು ಪ್ರಾಗ್ಭಕ್ತಸ್ಯೋಪಯುಜ್ಯತೇ |
ಶೀಘ್ರಂ ವಿಪಾಕಮುಪಯಾತಿ ಬಲಂ ನ ಹಿಂಸ್ಯಾ
ದನ್ನಾವೃತಂ ನ ಚ ಮುಹುರ್ವದನಾನ್ನಿರೇತಿ |

ಪ್ರಾಗ್ಭಕ್ತ ವಿಧಿಯ ಉಪಯೋಗ

ಪ್ರಾಗ್ಭಕ್ತಸೇವಿತಮಧೋ ಬಲಮಾದಧಾತಿ
ದದ್ಯಾಚ್ಚ ವೃದ್ಧಶಿಶುಭೀರುವರಾಂಗನಾಭ್ಯಃ ॥ (ಸು. 907-08.)

ಪ್ರಾಗ್ಭಕ್ತ ಎಂಬದು ಊಟಕ್ಕೆ ಮೊದಲು (ಆರಂಭದಲ್ಲಿ) ಕೊಡಲ್ಪಡುವಂಥಾದ್ದು. ಪ್ರಾಗ್ಭಕ್ತವಾಗಿ ಸೇವಿಸಿದ ಔಷಧವು ಬೇಗನೇ ವಿವಾಕವಾಗುತ್ತದೆ; ಬಲವನ್ನು ಕೆಡಿಸುವದಿಲ್ಲ; ಅನ್ನದಿಂದ ಮುಚ್ಚಲ್ಪಡುವದರಿಂದ ಪದೇ ಪದೇ ಬಾಯಿಯಿಂದ ಹೊರಗೆ ಬರುವದಿಲ್ಲ; ಮತ್ತು ಬಲಪಡುತ್ತದೆ. ಅದು ವೃದ್ದರಿಗೂ, ಶಿಶುಗಳಿಗೂ, ಹೆದರುವವರಿಗೂ, ಉತ್ತಮ ಸ್ತ್ರೀಯರಿಗೂ, ಕೊಡತಕ್ಕಂಥಾದ್ದಾಗಿರುತ್ತದೆ.

4. ಅಧೋಭಕ್ತಂ ನಾಮ ಯದ್ಭುಕ್ತಾಂತೇ ಪೀಯತೇ ।

ಅಧೋಭಕ್ತ ವಿಧಿಯ ಉಪಯೋಗ

ಪೀತಂ ಯದನ್ನಮುಪಯುಜ್ಯ ತದೂರ್ಧ್ವಕಾಯೇ
ಹನ್ಯಾದ್ಗದಾನ್ ಬಹುವಿಧಾಂಶ್ಚ ಬಲಂ ದಧಾತಿ । (ಸು. 908.)

ಊಟದ ಅಂತ್ಯದಲ್ಲಿ ಕುಡಿಯುವಂಥಾದ್ದು ಅಧೋಭಕ್ತ ಎಂಬದು. ಊಟಮಾಡಿ ಕುಡಿದ ಔಷಧವು ಮೇಲಿನ ದೇಹದಲ್ಲಿ ಉಂಟಾದ ಬಹು ವಿಧವಾದ ರೋಗಗಳನ್ನು ನಾಶ ಮಾಡಿ, ಬಲವನ್ನು ಕೊಡುತ್ತದೆ.

5. ಮಧ್ಯೇಭಕ್ತಂ ನಾಮ ಯನ್ಮಧ್ಯೇ ಭಕ್ತಸ್ಯ ಪೀಯತೇ ।

ಮಧ್ಯೇಭಕ್ತ ವಿಧಿಯ ಉಪಯೋಗ

ಮಧ್ಯೇ ತು ಪೀತಮುಪಹಂತ್ಯವಿಸಾರಿಭಾವಾದ್
ಯೇ ಮಧ್ಯದೇಹಮಭಿಭೂಯ ಭವಂತಿ ರೋಗಾಃ । (ಸು. 908.)

ಊಟದ ಮಧ್ಯದಲ್ಲಿ ಕೊಡುವಂಥಾದ್ದು ಮಧ್ಯೇಭಕ್ತ ಎಂಬದು. ಊಟದ ಮಧ್ಯದಲ್ಲಿ ಕುಡಿದ ಔಷಧವು, ಬೇಗನೇ ಕೆಳಗೆ ಇಳಿದು ಹೋಗದಿರುವದರಿಂದ, ಮಧ್ಯದೇಹವನ್ನು ಹಿಡಿದು ಉಂಟಾಗುವ ರೋಗಗಳನ್ನು ನಾಶಮಾಡುವದು.

6. ಅಂತರಾಭಕ್ತಂ ನಾಮ ಯದಂತರಾ ಪೀಯತೇ ಪೂರ್ವಾಪರಯೋರ್ಭಕ್ತಯೋಃ ।

ಅಂತರಾಭಕ್ತ ವಿಧಿಯ ಉಪಯೋಗ

ಹೃದ್ಯಂ ಮನೋಬಲಕರನ್ನ್ವತಿದೀಪನೀಯಂ
ಪಥ್ಯಂ ಚ ಸಂಭವತಿ ಚಾಂತರಭಕ್ತಮೇತತ್ ॥ (ಸು. 908.)

ಹಿಂದೆ ಮುಂದಿನ (ಬೆಳಿಗ್ಗಿನ ಮತ್ತು ಸಂಜೆಯ) ಊಟಗಳ ಮಧ್ಯದಲ್ಲಿ ಕೊಡಲ್ಪಡುವಂಥಾದ್ದು ಅಂತರಾಭಕ್ತ ಎಂಬದು. ಇದು ಹೃದ್ಯ, ಮನಸ್ಸಿಗೆ ಬಲಕೊಡತಕ್ಕಂಥಾದ್ದು, ಮತ್ತು ಅತಿ ದೀಪನಕಾರಿಯಾದ್ದರಿಂದ ಪಥ್ಯವಾಗಿರುತ್ತದೆ.

ಪರಾ ಪಾರಾಂತರ ಪ್ರಕಾರ ಇದು ಸದಾ ಪಥ್ಯವಾದದ್ದು

7. ಸಭಕ್ತಂ ನಾಮೌಷಧೇಷು ಯತ್ಸಾಧ್ಯತೇ ಭಕ್ತಂ ।

ಸಭಕ್ತ ವಿಧಿಯ ಉಪಯೋಗ

ಪಥ್ಯಂ ಸಭಕ್ತಮಬಲಾಬಲಯೋರ್ಹಿ ನಿತ್ಯಂ
ತದ್ದ್ವೇಷಿಣಾಮಪಿ ತಥಾ ಶಿಶುವೃದ್ಧಯೋಶ್ಚ । (ಸು. 908.)

ಔಷಧಗಳನ್ನು ಸೇರಿಸಿ ಊಟವನ್ನು ತಯಾರಿಸಿಕೊಡುವಂಥಾದ್ದು ಸಭಕ್ತ ಎಂಬದು. ಅದು ಸ್ತ್ರೀಯರಿಗೂ, ಬಲಹೀನರಿಗೂ, ಔಷಧವನ್ನು ದ್ವೇಷಿಸುವವರಿಗೂ, ಶಿಶುಗಳಿಗೂ, ವೃದ್ಧರಿಗೂ, ಯಾವಾಗಲೂ ಪಥ್ಯವಾಗಿರುತ್ತದೆ.

8. ಸಾಮುದ್ಗಂ ನಾಮ ಯದ್ಭಕ್ತಸ್ಯಾದಾವಂತೇ ಚ ಪೀಯತೇ ।
ಸಾಮುದ್ಗ ವಿಧಿಯ ಉಪಯೋಗ
ದೋಷೇ ದ್ವಿಧಾ ಪ್ರತಿಸೃತೇ ತು ಸಾಮುದ್ಗಸಂಜ್ಞ
ಮಾದ್ಯಂತಯೋರ್ಯದಶನಸ್ಯ ನಿಷೇವ್ಯತೇ ತು । (ಸು. 908.)

ಊಟದ ಆದಿಯಲ್ಲಿಯೂ, ಅಂತ್ಯದಲ್ಲಿಯೂ, ಕೊಡಲ್ಪಡುವಂಥಾದ್ದು ಸಾಮುದ್ಗ ಎಂಬದು. ದೋಷಗಳು ಎರಡು ವಿಧವಾಗಿ (ಮೇಲಕ್ಕೂ ಕೆಳಗೂ,) ಹೊರಟಿರುವ ಸಂಗತಿಯಲ್ಲಿ, ಊಟದ ಆದಿಯಲ್ಲಿಯೂ ಅಂತ್ಯದಲ್ಲಿಯೂ ಸಾಮುದ್ಗ ಎಂಬದು ಸೇವಿಸಲ್ಪಡುತ್ತದೆ.

9. ಮುಹುರ್ಮುಹುರ್ನಾಮ ಸಭಕ್ತಮಭಕ್ತಂ ವಾ ಯದೌಷಧಂ ಮುಹು
ಮುಹುರ್ಮುಹುಃ ವಿಧಿಯ ಉಪಯೋಗ
ರ್ಮುಹುರುಪಯುಜ್ಯತೇ ।
ಶ್ವಾಸೇ ಮುಹುರ್ಮುಹುರತಿಪ್ರಸೃತೇ ಚ ಕಾಸೇ
ಹಿಕ್ಕಾವಮಿಷು ಚ ವದನ್ತ್ಯುಪಯೋಜ್ಯಮೇತತ್ । (ಸು. 908.)

ಅನ್ನದೊಂದಿಗೆಯಾಗಲಿ, ಊಟವಿಲ್ಲದೆಯಾಗಲಿ, ಪದೇಪದೇ ಉಪಯೋಗಿಸಲ್ಪಡುವ ಔಷಧವು ಮುಹುರ್ಮುಹುಃ ಎಂಬದು. ಅದು ಉಬ್ಬಸದಲ್ಲಿಯೂ, ಬಿಕ್ಕಟ್ಟಿನಲ್ಲಿಯೂ, ವಾಂತಿಯಲ್ಲಿಯೂ, ಅತಿಯಾಗಿ ಬೆಳೆದ ಕೆಮ್ಮಿನಲ್ಲಿಯೂ, ಉಪಯೋಗಿಸಲ್ಪಡತಕ್ಕಂಥಾದ್ದಾಗಿ ಹೇಳುತ್ತಾರೆ.

10. ಗ್ರಾಸಾಂತರಂ ನಾಮ ಯತ್ಪಿಂಡವ್ಯಾಮಿಶ್ರಂ ।
ಗ್ರಾಸಾಂತರ ವಿಧಿಯ ಉಪಯೋಗ
ಗ್ರಾಸಾಂತರೇಷು ವಿತರೇದ್ಧೂಮನೀಯಧೂಮಾನ್
ಶ್ವಾಸಾದಿಷು ಪ್ರಥಿತದೃಷ್ಟಗುಣಾಂಶ್ಚ ಲೇಹಾನ್ । (ಸು. 908-09.)

ತುತ್ತಿನೊಂದಿಗೆ ಮಿಶ್ರವಾದದ್ದು ಗ್ರಾಸಾಂತರ ಎಂಬದು ವಮನಕ್ಕಾಗಿ ಸೇವಿಸುವ ಧೂಮಗಳನ್ನು ಮತ್ತು ಉಬ್ಬಸ ಮುಂತಾದ ರೋಗಗಳಲ್ಲಿ ಪ್ರಸಿದ್ಧವಾದ ಮತ್ತು ನೋಡಿದ ಗುಣಗಳುಳ್ಳ ಲೇಹಗಳನ್ನು ತುತ್ತುಗಳ ನಡುವೆ ಸೇವಿಸತಕ್ಕದ್ದು.

11. ಕಫೋದ್ರೇಕೇ ಗದೇ ನಾನ್ನಂ ಬಲಿನೋ ರೋಗರೋಗಿಣೋಃ ।
ಅನ್ನಾದೌ ವಿಗುಣೇಽಪಾನೇ ಸಮಾನೇ ಮಧ್ಯ ಇಷ್ಯತೇ ॥
ವಾಗ್ಭಟನ ಪ್ರಕಾರ ಕಾಲಭೇದಗಳ ಉಪಯೋಗ
ವ್ಯಾನೇಽಂತೇ ಪ್ರಾತರಾಶಸ್ಯ ಸಾಯಮಾಶಸ್ಯ ತೂತ್ತರೇ ।
ಗ್ರಾಸಗ್ರಾಸಾಂತಯೋಃ ಪ್ರಾಣೇ ಪ್ರದುಷ್ಟೇ ಮಾತರಿಶ್ವನಿ ॥
ಮುಹುರ್ಮುಹುರ್ವಿಷಚ್ಛರ್ದಿಹಿಕ್ಕಾತೃಟ್ಶ್ವಾಸಕಾಸಿಷು ।

ಯೋಜ್ಯಂ ಸಭೋಜ್ಯಂ ಭೈಷಜ್ಯಂ ಭೋಜ್ಯೈಷ್ಟೈರರೋಚಕೇ ||
ಕಂಪಾಕ್ಷೇಪಕಹಿಕ್ಕಾಸು ಸಾಮುದ್ಗಂ ಲಘುಭೋಜಿನಾಂ |
ಊರ್ಧ್ವಜತ್ರುವಿಕಾರೇಷು ಸ್ವಪ್ನಕಾಲೇ ಪ್ರಶಸ್ಯತೇ || (ವಾ. 68.)

ರೋಗಿಯೂ ರೋಗವೂ ಬಲವಾಗಿರುವಾಗ್ಗೆ ಕಫೋದ್ರೇಕದ ರೋಗದಲ್ಲಿ ಅನ್ನವಿಲ್ಲದೆ ಔಷಧವನ್ನು ಕೊಡುವದು ಪ್ರಶಸ್ತ. ಅಪಾನವಾಯುವು ಕೋಪಗೊಂಡಾಗ ಊಟದ ಆದಿಯಲ್ಲಿ, ಸಮಾನವಾಯುವು ಕೋಪಗೊಂದಾಗ ಊಟದ ಮಧ್ಯದಲ್ಲಿ, ವ್ಯಾನವಾಯುವು ಕೆಟ್ಟಾಗ ಬೆಳಿಗ್ಗೆ ಊಟದ ಅಂತ್ಯದಲ್ಲಿ, ಉದಾನವಾಯುವು ಕೋಪಗೊಂಡಾಗ ಸಂಜೆ ಊಟದ ಅಂತ್ಯದಲ್ಲಿ, ಪ್ರಾಣವಾಯುವಿನ ದೋಷದಲ್ಲಿ ತುತ್ತುಗಳೊಂದಿಗೆ ಮತ್ತು ತುತ್ತುಗಳ ನಡುವೆ, ವಿಷ, ವಾಂತಿ, ಬಿಕ್ಕಟ್ಟು, ಬಾಯಾರಿಕೆ, ಉಬ್ಬಸ ಮತ್ತು ಕೆಮ್ಮು, ಈ ವ್ಯಾಧಿಗಳಲ್ಲಿ ಪದೇ ಪದೇ, ಅರುಚಿಯಲ್ಲಿ ವಿಚಿತ್ರವಾದ ಭೋಜನಪದಾರ್ಥಗಳೊಂದಿಗೆ, ಕಂಪ, ಆಕ್ಷೇಪಕ ಮತ್ತು ಬಿಕ್ಕಟ್ಟು, ಈ ರೋಗಗಳಲ್ಲಿ ಲಘುವಾದ ಊಟಗಳಿಗೆ ಸಾಮುದ್ಗವಾಗಿ, ಕುತ್ತಿಗೆ ಸಂಧಿಗೆ ಮೇಲಿನ ಅಂಗಗಳ ವ್ಯಾಧಿಗಳಲ್ಲಿ ನಿದ್ರೆಕಾಲದಲ್ಲಿ, ಔಷಧವನ್ನು ಕೊಡುವದು ಪ್ರಶಸ್ತವಾಗಿರುತ್ತದೆ.

ರಾಮಕೃಷ್ಣವರ್ಯನಾಮಧಾರಿಣಾ-
ಸ್ರಂಣರಾಮಚಂದ್ರವಿಪ್ರಸೂನುನಾ |
ದೇಶನಾಮ ಯೇನ ಕೀರ್ತಿತಂ ಪಣಂ
ಬೂರಿತಿ ಪ್ರಕಾಶಿತೋಽಯಮಾಕರಃ ||
ನೀತೋ ಹ್ಯಾಯುರ್ವೇದಸಾರಾದ್ಯಭಾಗಃ
ವೈದ್ಯಶ್ರೇಷ್ಠೈಸ್ಸುಶ್ರುತಾದ್ಯೈಃ ಪ್ರಣೀತಾತ್ |
ಸತ್ತ್ವೈಕಾಢ್ಯೈಸ್ಸಂಹಿತಾಬ್ಧೇರಮೋಘಃ
ಜ್ಞಾನಾಗ್ನಿಂ ಸಂಧುಕ್ಷಿತುಂ ಮಂದಭೂತಂ ||
ಅನುಮೋದಿತೋ ಭವತು ಮೇಽಲ್ಪ ಉದ್ಯಮೋ
ಗುಣದರ್ಶಿಭಿರ್ನಿಖಿಲಪಂಡಿತೋತ್ತಮೈಃ |
ಜನತಾಸುಖೋಪಚಯಚೋದಿತೋ ಹಿ ಸಃ
ಜಗದೇಕನಾಥಕೃಪಯಾ ಚ ಸಾಧಿತಃ ||

ಇತಿ ಆಸ್ರಂಣ ರಾಮಚಂದ್ರ ಉಪಾಧ್ಯಾಯರ ಮಕ್ಕಳು ಪಣಂಬೂರು ರಾಮಕೃಷ್ಣಯ್ಯನವರು ಸುಶ್ರುತಾದಿ ವೈದ್ಯಶ್ರೇಷ್ಠರುಗಳಿಂದ ರಚಿಸಲ್ಪಟ್ಟ ಸಂಹಿತೆಗಳಿಂದ ಲೋಕೋಪಕಾರಾರ್ಥವಾಗಿ ಸಂಗ್ರಹಿಸಿ ಕನ್ನಡಾರ್ಥ ಸಹಿತವಾಗಿ ಬರೆದ ಆಯುರ್ವೇದಸಾರದ ಪ್ರಥಮ ಭಾಗವು ಸಂಪೂರ್ಣವು.

ಆಯುರ್ವೇದಸಾರದ ಅಕಾರಾದಿ ಸೂಚಿಗಳು.

ಅ	ಅ	ಸಂ	ಪು
ಅಂಗಗಳು . .	II	1	3
ಅಂಗ (ತ್ವಕ್ಪರ್ಯಂತ) ವಿಸಿ ಕ್ಷಯ . .	II	4	3
ಅಂಗ(ಬಿಳಿಕೆಯಿಲ್ಲದ)ಗಳು	II	92	38
ಅಂಗವಿಭಾಗಗಳಲ್ಲಿಯ ಮರ್ಮಸಂಖ್ಯೆ	II	96	39
ಅಂಗವಿಭಾಗಗಳಲ್ಲಿಯ ತಿರಾ ಸಂಖ್ಯೆ .	II	82	35
ಅಂಜನಕಡ್ಡಿಯ ತಯಾರಿಸುವಿಕೆ . .	XXIV	19	464
ಅಂಜನಕಡ್ಡಿಯನ್ನುಪಯೋಗಿಸುವ ಕ್ರಮ .	XXIV	20	465
ಅಂಜನಕ್ಕೆ ಅಯೋಗ್ಯರು	XXIV	21	465
ಅಂಜನ ತಾಗಿಸಿದನಂತರದ ಕರ್ತವ್ಯ . .	XXIV	22	466
ಅಂಜನದಲ್ಲಿ ಗುಟಿಕಾ-ರಸ-ಚೂರ್ಣ ಎಂಬ ಭೇದಗಳು	XXIV	17	464
ಅಂಜನದಲ್ಲಿ ಲೇಖನಾದಿ ಭೇದಗಳು .	XXIV	16	463
ಅಂಜನ ಪ್ರಮಾಣಗಳು	XXIV	18	464
ಅಂಡವೃದ್ಧಿ ರೋಗ	VII	65	147
ಅಂತರಾಭಕ್ತ ಎಂಬ ಔಷಧ ಕಾಲ	XXVIII	6	490
ಅಕಾಲ ಧೂಮಪಾನದ ದೋಷ . .	XXV	15	472
ಅಕ್ಕಚ್ಚನ್ನು ತಯಾರಿಸುವ ಕ್ರಮ . .	XX	29	398
ಅಕ್ಕಿಪಾಯಸದ ಗುಣ	XIV	15	256
ಅಕ್ಕಿ ಹೊಸತು ಮತ್ತು ಹಳೇದು .	XIV	1	253
ಅಗ್ನಿ ಕ್ಷಾರ ವಿರೇಕಗಳು ಬಾಲವೃದ್ಧರಿಗೆ ವರ್ಜ್ಯ	IX	20	191
ಅಗ್ನಿ(ಜಾಠರ)ಗೆ ವಾಯುವಿನ ಸಹಾಯ. . .	IX	18	190
ಅಗ್ನಿ-ದೀಪನ .	III	14	76
ಅಗ್ನಿದೋಷಕ್ಕೆ ಪರಿಹಾರ	IX	17	189
ಅಗ್ನಿ ಭೇದಗಳು . .	IX	16	188
ಅಗ್ನಿಯಾದ ಪಿತ್ತದ ಪಂಚವಿಧಗಳು. . . .	V	17	109
ಅಗ್ನಿವಾಯುಗಳು ವಾಮಕ.	III	10	75
ಅಗ್ನಿವಿಕಾರದ ಭೇದಗಳು	VII	24	141
ಅಗ್ನಿ ವಿನಾ ಬಿವರಿಸುವದು	XIX	77	371

ಅ	ಅ	ಸಂ	ಪು
ಅಗ್ನ್ಯಾಶಯದ ಸ್ಥಾನ	II	7	5
ಅಚ್ಚು ಬೆಲ್ಲದ ಗುಣ	XII	35	241
ಅಚ್ಚಿಣ್ಣೆಯ ಪಾನ	XIX	58	363
ಅಜೀರ್ಣದ ಭೇದಗಳು .	VII	5	138
ಅಡಿಕೆಯ ಗುಣ	XI	22	220
ಅಡಿಕೆ ಸೊಕ್ಕು	VII	113 (m)	167
ಅತಿಯಾಗಿ ಉಂಡದ್ದರ ದೋಷಗಳು	X	15	200
ಅತಿಸಾರದಲ್ಲಿ ಅಶುಭಸೂಚನೆ	XVIII	11	343
ಅತಿಸಾರಭೇದಗಳು	VII	2	138
ಅಧಿಮಂಥರೋಗದ ಭೇದಗಳು	VII	99 (i)	162
ಅಧೋಭಕ್ತ ಎಂಬ ಔಷಧ ಕಾಲ	XXVIII	4	490
ಅನಿಲಾನಲ-ಲೇಖನ	III	15	76
'ಅನುಲೋಮನ' ಎಂಬದರ ತಾತ್ಪರ್ಯ	III	3 (b)	72
ಅನುವಾಸನ ಉಪದ್ರವವಿಲ್ಲದೆ ನಿಂತಲ್ಲಿ ಉಪೇಕ್ಷ್ಯ	XXII	28	436
ಅನುವಾಸನ ಒಂದೇ ಸರ್ತಿ ಹಿಂದೆ ಬಂದಲ್ಲಿ ಕರ್ತವ್ಯ	XXII	24	435
ಅನುವಾಸನಕ್ಕೆ ಪಶ್ಚಾತ್ಕರ್ಮ	XXII	22	435
ಅನುವಾಸನಕ್ಕೆ ಪೂರ್ವದ ಭೋಜನನಿಯಮ	XXII	17	432
ಅನುವಾಸನಗಳ ಸಂಖ್ಯಾನಿಯಮ .	XXII	30	437
ಅನುವಾಸನಗಳಿಗೆ ಹಸಿ ಸ್ನೇಹ ಅಯುಕ್ತ	XXII	47	443
ಅನುವಾಸನದ ಮಾರನೆ ದಿನದ ಕರ್ತವ್ಯ .	XXII	27	436
ಅನುವಾಸನದಿನದ ಭೋಜನ ನಿಯಮ	XXII	26	436
ಅನುವಾಸನನಿರುಕ್ತಿ . .	XXII	10	430
ಅನುವಾಸನ-ನಿರೂಹಗಳ ತೀಲ . .	XXII	31	437
ಅನುವಾಸನ ಸರಿಯಾಗಿ ಹಿಡದ ಲಕ್ಷಣ . .	XXII	25	436
ಅನುವಾಸನ ಹಿಂದೆ ಬಾರದ್ದಕ್ಕೆ ಪರಿಹಾರ	XXII	29	437
ಅನೂಪಮಾಂಸದ ಪಂಚವಿಧಗಳು .	'ಅನೂಪ' ನೋಡಿ		
ಅನೂಪಮಾಂಸದ ಸಾಮಾನ್ಯ ಗುಣ . .			

ಅ	ಅ	ಸಂ	ಪು
ಅನ್ತಗಳು-ಪಾಶ್ಚಾತ್ಯರೀತ್ಯಾ	II	133	61
ಅನ್ನದ್ರವಶೂಲೆ .	VII	48	144
ಅನ್ನನಾಳ-ಪಾಶ್ಚಾತ್ಯರೀತ್ಯಾ	II	128	59
ಅನ್ನ (ನಿಂದ್ಯವಾದ)	X	22	203
ಅಗ್ನ್ಯಾದಿಗಳ ಮಧ್ಯೆ ಹೋಗ ಬಾರದು	XVI	16	295
ಅನ್ನಪಾನ(ವಿರುದ್ಧ)ಗಳಿಂದ ಬಾಧಿಸಲ್ಪಟ್ಟವರು	IX	13	187
ಅನ್ನ-ಪಾನ-ಶಯನಗಳ ಕುರಿತು ಸದುಪದೇಶಗಳು .	XVI	23	297
ಅನ್ನ-ಬಸಿದದ್ದು ಮತ್ತು ಇಂಗಿಸಿದ್ದು	XIV	2	253
ಅನ್ನ (ಹಿಟ್ಟಿನ)	V	28	204
ಅನ್ನ (ಹುರಿದಕ್ಕಿಯ)	XIV	3	253
ಅನ್ಯಧೃತಮಾಲಾದಿಗಳು ತ್ಯಾಜ್ಯ	XVI	24	298
ಅಪಸ್ಮಾರದಲ್ಲಿ ಅಶುಭಸೂಚನೆ	XVIII	18	344
ಅಪಸ್ಮಾರಭೇದಗಳು	VII	44	143
ಅಪಾಯಕರವಾದ ಕೆಲಸಗಳು	XVI	8 21	292 296
ಅಭಿಷ್ಯಂದ ರೋಗದ ಭೇದಗಳು	VII	99	162
'ಅಭಿಷ್ಯಂದಿ' ಎಂಬದರ ತಾತ್ಪರ್ಯ	III	3 (24)	73
ಅಭ್ಯಂಗ . .	XI	8	214
ಅಭ್ಯಂಗಾದಿಗಳಿಗೆ ಅಯೋಗ್ಯರು .	XI	12	216
ಅಭ್ಯಂಗಾದಿಗಳಿಗೆ ತೈಲವಿಚಾರ	XI	11	216
ಅಯನಭೇದ ಮತ್ತು ಲಕ್ಷಣಗಳು.	VIII	1	169
ಅರಸಿನ ಮೂಲಂಗಿಯ ಗುಣ	XIV	69	272
ಅರಳಿನ ಗುಣ . .	XIV	23	258
ಅರಳಿನ ಮಂಡದ ಗುಣ	XIV	9	255
ಅರಿಷ್ಟದ ಗುಣ . 'ಆಸವ' ನೋಡಿರಿ	XII	45	244
ಅರೋಚಕಭೇದಗಳು .	VII	25	141
ಅರ್ಬುದ ರೋಗದ ಭೇದಗಳು .	VII	69	148
ಅರ್ತಸ್ಸಿನಲ್ಲಿ ಅಶುಭಸೂಚನೆ	XVIII	5	341
ಅರ್ತಸ್ಸು ಭೇದಗಳು	VII	11	138
ಅಲಸಂಡೆಯ ಗುಣ	XIV	30	261
ಅಲಸಭೇದಗಳು .	VII	7	138
ಅಲ್ಪಾಸನ ವರ್ಜ್ಯ	XVI	7	291

ಅ	ಅ	ಸಂ	ಪು
ಅವಪೀಡ ಎಂಬ ನಸ್ಯವಿಧಿ	XXVI	12	478
ಅವಯವ(ತ್ವಗಾದಿ)ಗಳ ಸಂಖ್ಯೆ .	II	5	5
ಅವರೆಯ ಗುಣ	XIV	32	261
ಅವಲಕ್ಕಿ ಗುಣ .	XIV	24	259
ಅವಲಕ್ಕಿ ತಿನ್ನುವದಕ್ಕೆ ಕಾಲ	X	29	205
ಅಶನದ ಹನ್ನೆರಡು ವಿಧಗಳು 'ಊಟ' ನೋಡಿ	X	32	206
ಅಶನ (ನಿಂದ್ಯವಾದ)	X	26	204
ಅಶ್ಮರಿಯಲ್ಲಿ ಅಶುಭಸೂಚನೆಗಳು	XVIII	7	341
ಅಶ್ಮರಿಯಲ್ಲಿ ಭೇದಗಳು	VII	58	146
ಅಷ್ಟವೀರ್ಯ(ದ್ರವ್ಯಗಳ)ಗಳು	III	18	77
ಅಷ್ಟವೀರ್ಯಗಳು ಹ್ಯಾಗೆ ಗ್ರಾಹ್ಯ	III	20	78
ಅಷ್ಟೀಲವ್ಯಾಧಿಯಲ್ಲಿ ಅಶುಭಸೂಚನೆ	XVIII	21	341
ಅಸ್ಥಿದೋಷಜ ವ್ಯಾಧಿಗಳು	VI	9	132
ಅಸ್ಥಿಭಂಗದಲ್ಲಿ ಭೇದಗಳು	VII	75	149
ಅಹಿತತ್ಯಾಗದಲ್ಲಿ ನಿಯಮ	XVI	22	297
ಆ			
ಆಂತರಿಕ್ಷ ನೀರಿನ ಗುಣ	XII	1	232
ಆಂತರಿಕ್ಷ ನೀರಿನ ಭೇದಗಳು	XII	3	233
ಆಕಾತ-ನಿಂತಮನ	III	12	76
ಆಕಾತೀಯದ ಲಕ್ಷಣಗಳು	III	8	75
ಆಗಂತುವ್ಯಾಧಿಯಲ್ಲಿ ದೋಷವೈಷಮ್ಯ .	VI	20	135
ಆಗ್ನೇಯ-ಸೌಮ್ಯಗಳಭೇದ	IV	6	84
ಆಡಿನ ತುಪ್ಪದ ಗುಣ .	XIII	3	248
ಆಡಿನ ಮಾಂಸದ ಗುಣ	XV	22	284
ಆತ್ಮವಧ್ಯೀಟ ಪಿಪೀಲಿಕಮ್	XVI	27	298
ಆನಾಹರೋಗದ ಭೇದಗಳು	VII	51	145
ಆನೂಪದೇಶದ ಲಕ್ಷಣ	IX	15	187
ಆನೂಪಮಾಂಸಗಳ ಪಂಚವಿಧಗಳು	XV	3	280
ಆನೂಪಮಾಂಸಗಳ ಸಾಮಾನ್ಯ ಗುಣ . .	XV	5	281
ಆಮಾಂಸದ ಗುಣ .	XV	26	285
ಆಪ್ತೋಪದೇಶ . .	XVII	2	300
ಆಪ್ತೋಪದೇಶದ ಪ್ರಧಾನತ್ವ	XVII	4	301
ಆಪ್ಯದ ಲಕ್ಷಣಗಳು .	III	5	74
ಆಮದೋಷಕ್ಕೆ ಹೇತುಗಳು	X	16	201
ಆಮವಾತರೋಗದ ಭೇದಗಳು	VII	45	144
ಆಮವಿಷ	X	17	201

ಆ	ಅ	ಸಂ	ಪು
ಆಮಾಶಯದ ಕೆಲಸ	V	24	113
ಆಮಾಶಯದ ಸ್ಥಾನ	II	7	5
ಆಮಾಶಯ ಪಾಶ್ಚಾತ್ಯರೀತ್ಯಾ	II	129	60
ಆಮ್ಲಪಿತ್ತರೋಗ	VII	86	152
ಆರೋಗ್ಯಪ್ರಶಂಸಾ	I		1-2
ಆಲೇಪ ಲೇಪ' ನೋಡಿರಿ			
ಆವರಣಗೋಗದ ಭೇದಗಳು	VII	105	165
ಆಶಯಗಳ ಹೆಸರು	II	6	5
'ಆಶುಕಾರಿ' ಎಂಬದರ ಅರ್ಥ	III	2 (19)	70
ಆಶ್ಚ್ಯೋತನ (ನೇತ್ರಕರ್ಮದಲ್ಲಿ) ವಿಧಿ	XXIV	15	462
ಆಸನಶಯನಗಳು	XVI	6	291
ಆಸವದ ಗುಣ	XII	46	244
ಆಸವಾರಿಷ್ಟಗಳ ಕ್ರಮ	XX	49	406
ಆಸ್ಥಾಪನಾನುವಾಸನಗಳ (ವಾತಕ್ಕೆ) ಪ್ರತಸ್ಯತೆ ವಸ್ತಿ ನೋಡಿರಿ	V	12	108
ಆಹಾರ ಅತಿಯಾದ್ದರ ದೋಷಗಳು	X	15	200
ಆಹಾರ(ಉಷ್ಣ)ಕ್ಕೆ ಅರ್ಹರು	X	34	206
ಆಹಾರ(ಔಷಧ)ಕ್ಕೆ ಅರ್ಹರು	X	39	207
ಆಹಾರ (ತಂಗಳ)	X	44	208
ಆಹಾರದ ರಸವಿಚಾರ	X	18	202
ಆಹಾರದಲ್ಲಿ ಗುರು ಲಘು ವಿಚಾರ	X	30-31	205
ಆಹಾರ (ದೋಷಪ್ರತಿಮನ)	X	41	207
ಆಹಾರ(ದ್ರವ)ಕ್ಕೆ ಅರ್ಹರು	X	37	207
ಆಹಾರದ್ರವ್ಯಗಳು ನಾಲ್ಕು ವಿಧ	III	28	80
ಆಹಾರಪದಾರ್ಥಗಳ (ಕೆಲವು) ಜೀರ್ಣಕಾಲ	III	30	81
ಆಹಾರಪದಾರ್ಥಗಳ (ಕೆಲವು) ಲಕ್ಷಣಗಳು	III	29	81
ಆಹಾರಪಾಕ	II	117-120	46-53
ಆಹಾರಪಾನಗಳ ಪ್ರಮಾಣ	X	12	199
ಆಹಾರ(ಮಿತ)ದ ಲಕ್ಷಣ	X	13	199
ಆಹಾರ(ರೂಕ್ಷ)ಕ್ಕೆ ಅರ್ಹರು	X	36	207
ಆಹಾರ ವಿಧಿಗಳು (ಹನ್ನೆರಡು)	X	32	206
ಆಹಾರ (ವೃತ್ಥರ್ಥ)	X	42	208
ಆಹಾರ(ಶುಷ್ಕ)ಕ್ಕೆ ಅರ್ಹರು	X	37	207
ಆಹಾರ (ಸಾತ್ಮ್ಯ)	X	11	199
ಆಹಾರ(ಶೀತ)ಕ್ಕೆ ಅರ್ಹರು	X	33	206
ಆಹಾರ(ಸ್ನಿಗ್ಧ)ಕ್ಕೆ ಅರ್ಹರು	X	35	206
ಆಹಾರ(ಹಿಟ್ಟಿನ)ಕ್ಕೆ ಕಾಲ	X	29	201
ಆಹಾರ(ಹೀನ)ದ ದೋಷಗಳು	X	14	200
ಆಹಾರ(ಹೀನಮಾತ್ರಾ)ಕ್ಕೆ ಅರ್ಹರು	X	40	207
ಇ			
ಇಂಗಿನ ಗುಣ	XIV	10	266
ಇಂದ್ರಿಯಗಳ ದುರ್ಬಲತೆಯ ಆಶುಫಲಲಕ್ಷಣ	XVIII	23	345
ಇಂದ್ರಿಯಾಯತನ ವಾಕ್ಯಗಳು	VI	13	133
ಉ			
ಉಂಡುಕದ ಉತ್ಪತ್ತಿ	II	62	26
ಉಂಡು-ನೀರು ಕುಡಿಯದಿರದು	XII	19	237
ಉಣ್ಣುವದಕ್ಕೆ ಹಿತವಾದ ಸ್ಥಳ ಮತ್ತು ಉಪಕರಣಗಳು	X	7	198
ಉಣ್ಣುವದು (ಅತಿ ಏಳಂಬವಾಗಿ)	X	9	198
ಉಣ್ಣುವದು (ಅತಿ ವೇಗವಾಗಿ)	X	8	198
ಉಣ್ಣುವದು (ಜಿಸಿಯಾಗಿ)	X	1	196
ಉಣ್ಣುವದು (ಮಿತವಾಗಿ)	X	3	196
ಉಣ್ಣುವದು (ಸಾತ್ಮ್ಯವಾಗಿ)	X	11	199
ಉಣ್ಣುವದು (ಸ್ನಿಗ್ಧವಾಗಿ)	X	2	196
ಉಣ್ಣುವದು (ಹರಟುತ್ತಾ)	X	10	199
ಉಣ್ಣುವದು (ಹಸಿದು)	X	4	197
ಉಣ್ಣುವಲ್ಲಿ ವಿರುದ್ಧವೀರ್ಯ ವರ್ಜ್ಯ 'ಊಟ' ನೋಡಿ	X	6	198
ಉಚ್ಛ್ವಾಸನಿಃಶ್ವಾಸ	II	67	27
ಉಡುವಿನ ಮಾಂಸದ ಗುಣ	XV	19	284
ಉತ್ತಮ ಸಾತ್ಮ್ಯಕ್ಕೆ ಯತ್ನ	IX	14	187
ಉತ್ತರವಸ್ತಿ ಕೊಟ್ಟ ದಿನದ ಭೋಜನ	XXII	39	441
ಉತ್ತರವಸ್ತಿಯ ಸಂಖ್ಯಾನಿಯಮ	XXII	40	441
ಉತ್ತರವಸ್ತಿ ವಿಧಿ	XXII	38	439
ಉತ್ತರವಸ್ತಿ ಸರಿಯಾದ್ದರ ಲಕ್ಷಣ	XXII	44	442
ಉತ್ತರವಸ್ತಿ (ಹೆಂಗಸಿಗೆ) ಕೊಡುವ ವಿಧಾನ	XXII	42	441
ಉತ್ತರವಸ್ತಿ ಹೆಂಗಸಿಗೆ ಕೊಡುವದಕ್ಕೆ ಪ್ರತಸ್ತ ಕಾಲ ವಸ್ತಿ' ನೋಡಿರಿ	XXII	41	441
ಉತ್ತರಾಯಣ ದೌರ್ಬಲ್ಯಕರ	VIII	3	169

ಉ	ಅ	ಸಂ	ಪು
ಉದರರೋಗಭೇದಗಳು	VII	54	145
ಉದರವ್ಯಾಧಿಯಲ್ಲಿ ಅಶುಭ ಸೂಚನೆ . . .	XVIII	9	342
ಉದರ್ದರೋಗ .	VII	84	152
ಉದಾವರ್ತ ರೋಗಭೇದಗಳು	VII	50	144
ಉದ್ದಿನ ಗುಣ	XIV	29	260
ಉನ್ಮಾದದಲ್ಲಿ ಅಶುಭಸೂಚನೆ .	XVIII	17	344
ಉನ್ಮಾದದಲ್ಲಿ ಭೇದಗಳು	VII	42	143
ಉಪಕಾರ ಪ್ರಧಾನನಾಗವೀಕು . . .	XVI	28	298
ಉಪಕ್ರಮ—ನಾಲ್ಕು ವಿಧ 'ಚಿಕಿತ್ಸಾ' ನೋಡಿ	XIX	30	355
ಉಪದಂಶರೋಗದ ಭೇದಗಳು . . .	VII	79	149
ಉಪಧಾತುವಿಷದ ಭೇದಗಳು	VII	113 (e)	166
ಉಪನಾಹ ಸ್ವೇದದ ವಿಧಾನ	XIX	74	369
ಉಪವಾಸದ ಉಪಯೋಗ .	XIX	41	359
ಉಪವಿಷದ ಭೇದಗಳು	VII	113 (f	167
ಉಪ್ಪಿನಲ್ಲಿ ಕಣ್ಣಿಗೆ ಅಪಥ್ಯವಲ್ಲದ್ದು .	IV	31	94
ಉಪ್ಪಿನ (ಸಮುದ್ರದ) ಗುಣ	XIV	44	264
ಉಪ್ಪಿನ (ಸೈಂಧವ) ಗುಣ	XIV	45	265
ಉಪ್ಪುರಸದ ಗುಣದೋಷಗಳು	IV	13	88
ಉಭಯ ಕಾಲಾಶನಕ್ಕೆ ಅರ್ಹರು	X	38	207
ಉರೋಗ್ರಹದ ಭೇದಗಳು	VII	52	145
'ಉಷ್ಣ' ಎಂಬದರ ತಾತ್ಪರ್ಯ	III	2 (2)	69
ಉಷ್ಣಾಹಾರಕ್ಕೆ ಅರ್ಹರು	X	34	206
ಉಷ್ಣೋಪದ್ರವದ ಭೇದಗಳು	VII	110	166
ಉಷ್ಣಸ್ವೇದದ ವಿಧಾನ—'ಸ್ವೇದ' ನೋಡಿರಿ			

ಊ			
ಊಟ(ಉಭಯಕಾಲ)ಕ್ಕೆ ಅರ್ಹರು . . .	X	38	207
ಊಟ(ಏಕಕಾಲ)ಕ್ಕೆ ಅರ್ಹರು	X	38	207
ಊಟದಲ್ಲಿ ಹೀನಮಾತ್ರೆ	'ಆಹಾರ' ನೋಡಿ		
ಊಟ(ಬೆಳಿಗ್ಗಿನ ಮತ್ತು ರಾತ್ರಿಯ)ಗಳ ಭೇದ . .	X	5	197
ಊಟ(ರಾತ್ರಿ)ದ ಸಮಯ	X	20	202
ಊಟ(ಹಗಲು)ದ ಕಾಲಸಿಯಮ . .	X	21	202
ಊಟ(ಹಿಂದಿನದಿನದ ತಂಗಳ) 'ಉಣ್ಣುವದು' ಮತ್ತು 'ಭೋಜನ' ನೋಡಿ	X	44	208

ಋ			
ಋತುಕಾಲ—(ಸ್ತ್ರೀಯ)	XI	44	230
ಋತುಗಳ ಕಾಲ-(ಚಾಂದ್ರ)	VIII	6	170
ಋತುಗಳ ಕಾಲ-(ದೋಷೋಪಚಯಾದಿ ಮೂಲೆ)	VIII	7	170
ಋತುಗಳ ಕಾಲ-(ಸೌರ್ಯ)	VIII	8	171
ಋತುಗಳ ವಿಷಯ-ಚರಕ	VIII	14	174
ಋತುಗಳ ವಿಷಯ-ಭಾವಪ್ರಕಾಶ .	VIII	13	173
ಋತು(ಗ್ರೀಷ್ಮ)ವಿಗೆ ಉಪಚಾರ.	VIII	18	176
ಋತು(ಗ್ರೀಷ್ಮ- ತಿತಿರ)ಗಳಲ್ಲಿ ವಾತದ ಸಂಚಯ ಪ್ರಕೋಪಗಳು	VIII	11	172
ಋತುಚರ್ಯ	VIII		169
ಋತುದೋಷಗಳ ನಿರ್ಹರಣ	VIII	12	172
ಋತು(ವರ್ಷ)ವಿಗೆ ಉಪಚಾರ	VIII	19	177
ಋತು(ವರ್ಷ)ವಿನ ಹೊಸ ನೀರಿನ ದೋಷ .	XII	4	233
ಋತು (ವರ್ಷ-ಶರತ್) ಗಳಲ್ಲಿ ಪಿತ್ತಚಯಕೋಪಗಳು	VIII	9	171
ಋತು(ವಸಂತ)ವಿಗೆ ಉಪಚಾರ .	VIII	17	176
ಋತು(ಶರತ್)ವಿಗೆ ಉಪಚಾರ .	VIII	20	178
ಋತು(ತಿತಿರ)ವಿಗೆ ಉಪಚಾರ	VIII	16	175
ಋತು (ಹೇಮಂತ-ವಸಂತ) ಗಳಲ್ಲಿ ಕಫಚಯ ಕೋಪಗಳು . .	VIII	10	171
ಋತು(ಹೇಮಂತ)ವಿನಲ್ಲಿ ಕರ್ತವ್ಯ . .	VIII	15	174

ಎ			
ಎದೆಯ ಮರ್ಮಗಳು.	II	99	39
ಎಮ್ಮೆ ತುಪ್ಪದ ಗುಣ .	XIII	2	248
ಎಲುಬುಗಳ ಕೂಟಗಳು .	II	14	8
ಎಲುಬುಗಳ ಪ್ರಯೋಜನ .	II	18	11
ಎಲುಬುಗಳ ರಚನಾಭೇದಗಳು . . .	II	17	11

ಎ	ಅ	ಸಂ	ಪ
ಎಲುಬುಗಳ ವರ್ಣನ—ಪಾಶ್ಚಾತ್ಯರೀತ್ಯಾ .	II	123	54
ಎಲುಬುಗಳ ಸಂಖ್ಯೆ ಮತ್ತು ಸ್ಥಾನ	II	16	9
ಎಲುಬುಗಳ ಸಂದುಗಳಲ್ಲಿ ಸ್ಥಿರ ಚರ ಭೇದ	II	23	12
ಎಲುಬು ಸಂದುಗಳ ಸಂಖ್ಯೆ ಮತ್ತು ಸ್ಥಾನಗಳು . 'ಸಂಧಿಗಳು' ನೋಡಿರಿ	II	24	13
ಎಲೆಮುರಿ ಸೊಪ್ಪಿನ ಗುಣ	XIV	72	272
ಎಲೆಗಳ ಮದ	VII	113 (t)	168
ಎಳ್ಳೆಣ್ಣೆಯ ಉಪಯೋಗ	XIX	52	361
ಎಳ್ಳೆಣ್ಣೆಯ ಗುಣ 'ತೈಲ' ನೋಡಿರಿ	XIII	9	250
ಏ			
ಏಕಕಾಲಾತನಕ್ಕೆ ಆರ್ಹರು	X	38	207
ಏಕರಸ ಸಾತ್ಮ್ಯ	IX	12	186
ಏಡಿ ಮಾಂಸದ ಗುಣ	XV	31	286
ಏಲಕ್ಕಿಯ ಗುಣ	XI	25	221
ಒ ಓ			
ಒಂದೆಲಗ 'ತಿಮರೆ' ನೋಡಿ			
ಓಷ್ಠರೋಗದ ಭೇದಗಳು	VII	92 (a)	156
ಔ			
ಔದ್ಭಿದಗಳ ಔಷಧೋಪಯುಕ್ತ ಅಂಗಗಳು	XIX	15	350
ಔದ್ಭಿದಗಳ ನಾಲ್ಕು ಜಾತಿಗಳು	XIX	14	350
ಔದ್ಭಿದಗಳಲ್ಲಿ ಔಷಧಕ್ಕೆ ಪ್ರಶಸ್ತಾಂಗಗಳ ಭೇದಗಳು.	XIX	16	350
ಔದ್ಭಿದಗಳಲ್ಲಿ ಸಿಪ್ಪೆ ತೆಗದು ಬಿಟ್ಟು ಉಪಯೋಗಿಸತಕ್ಕವು .	XIX	19	351
ಔಷಧಗಳ ಜೋಪಾನ ಕ್ರಮ 'ಜಂಗಮ', 'ಪಾರ್ಥಿವ' ನೋಡಿ . .	XIX	25	353
ಔಷಧಗಳಲ್ಲಿ ಹಳೇದು ಪ್ರಶಸ್ತವಾದವು .	XIX	23	353
ಔಷಧ(ಪ್ರಶಸ್ತ)ದ ಲಕ್ಷಣಗಳು .	XIX	6 23	348 353
ಔಷಧ(ಪ್ರಶಸ್ತವಲ್ಲದ)ಗಳ ಲಕ್ಷಣ	XIX	20	352
ಔಷಧಸಂಗ್ರಹಕ್ಕೆ ಋತು ಮತ್ತು ದೇಶವಿಚಾರ	XIX	22	352
ಔಷಧಸಂಗ್ರಹಕ್ಕೆ ಬೆಳೆದ ಭೂಮಿಯ ಪರೀಕ್ಷೆ . .	XIX	21	352

ಔ	ಅ	ಸಂ	ಪ
ಔಷಧಸೇವನ ಕಾಲಗಳಲ್ಲಿ ಆಂತರಾಭಕ್ತ ಎಂಬದು	XXVIII	6	490
ಔಷಧಸೇವನ ಕಾಲಗಳಲ್ಲಿ ಆಧೋಭಕ್ತ ಎಂಬದು .	XXVIII	4	490
ಔಷಧಸೇವನ ಕಾಲಗಳಲ್ಲಿ ಗ್ರಾಸಾಂತರ ಎಂಬದು	XXVIII	10	491
ಔಷಧಸೇವನ ಕಾಲಗಳಲ್ಲಿ ನಿರ್ಭಕ್ತ ಎಂಬದು	XXVIII	2	489
ಔಷಧಸೇವನ ಕಾಲಗಳಲ್ಲಿ ಪ್ರಾಗ್ಭಕ್ತ ಎಂಬದು	XXVIII	3	489
ಔಷಧಸೇವನ ಕಾಲಗಳಲ್ಲಿ ಮಧ್ಯೇಭಕ್ತ .	XXVIII	5	490
ಔಷಧಸೇವನ ಕಾಲಗಳಲ್ಲಿ ಮುಹುರ್ಮುಹುಃ	XXVIII	9	491
ಔಷಧಸೇವನ ಕಾಲಗಳಲ್ಲಿ ಸಭಕ್ತ	XXVIII	7	490
ಔಷಧಸೇವನ ಕಾಲಗಳಲ್ಲಿ ಸಾಮುದ್ಗ	XXVIII	8	491
ಔಷಧಸೇವನೆಗೆ ಮುಖಗಳು	XIX	92	387
ಔಷಧಸೇವನೆಗೆ ಹತ್ತು ಕಾಲಗಳು ವಾಗ್ಭಟ	XXVIII	11	491
ಔಷಧಸೇವನೆಗೆ ಹತ್ತು ಕಾಲಗಳು ಸುಶ್ರುತ	XXVIII	1	489
ಔಷಧಾಹಾರಕ್ಕೆ ಆರ್ಹರು	X	39	207
ಔಷಧೋಪಯೋಗ ವಿಧಾನಗಳು	XIX	1	388
ಕ			
ಕಂಡರೆಗಳು . .	II	21	12
ಕಂಡರೆಗಳ ಉಪಯೋಗ	II	22	12
ಕಡಲೆ ಗುಣ	XIV	28	260
ಕಡಲೆಬೇಳೆ ಸಾರಿನ ಗುಣ	XIV	40	263
ಕಣಿಯ-ಪಾಶ್ಚಾತ್ಯರೀತ್ಯಾ	II	138	63
ಕಣ್ಣಿನ ಪರೀಕ್ಷೆ .	XVII	17	314
ಕಣ್ಣಿನ ವರ್ಣನ	II	60	24
ಕಣ್ಣಿನ ವರ್ಣನ-ಪಾಶ್ಚಾತ್ಯರೀತ್ಯಾ . . .	II	139	64
ಕಪಾಲರೋಗದ ಭೇದಗಳು	VII	98	159
ಕಪಿಕಚ್ಛು ತುರಿಕೆ	VII	113 (i)	167
ಕಫಕ್ಕೆ ಮುಖ್ಯಾಶ್ರಯ ಆಮಾಶಯ . .	V	24	113
ಕಫದ ಪಂಚವಿಧ ಕರ್ಮಗಳು	V	25	114
ಕಫದ ಪ್ರಯೋಜನ	II	51	22
ಕಫದ ಲಕ್ಷಣ . .	V	26	114
ಕಫಪಿತ್ತವಾಯುಗಳು ಚಂದ್ರ ಸೂರ್ಯ ವಾಯುಗಳಿಗೆ ಸದೃಶ . . .	V	1	102

ಕ	ಅ	ಸಂ	ಪು
ಕಫ ಪಿತ್ತ ವಾಯುಗಳು ದೇಹೋತ್ಪತ್ತಿ, ಸ್ಥಿತಿ, ಲಯಗಳಿಗೆ ಕಾರಣ	V	2	102
ಕಫಪ್ರಕೋಪ ಕಾರಣಗಳು	V	30	116
ಕಫಪ್ರಕೋಪಕಾಲ	V	31	117
ಕಫಮೂಲವಾದ 20 ರೋಗಗಳು	V	27	115
ಕಫರೋಗಗಳನ್ನು ಗೊತ್ತು ಮಾಡುವ ರೀತಿ	V	28	115
ಕಫರೋಗಗಳಿಗೆ ಸಾಮಾನ್ಯ ಉಪಚಾರಕ್ರಮ	V	29	116
ಕಫರೋಗಭೇದಗಳು	VII	90	155
ಕಫಾತಯದ ಸ್ಥಾನ .	II	7	5
'ಶ್ಲೇಷ್ಮ' ನೋಡಿರಿ			
ಕಬ್ಬಿನ ಗುಣ ಮತ್ತು ಭಕ್ಷಣಕಾಲ	XII	30	240
ಕಬ್ಬಿನರಸ (ಆವೆಯಲ್ಲಿ ತೆಗದ)	XII	32	240
ಕಬ್ಬಿನರಸ (ಜಗಿದ)	XII	31	240
ಕಬ್ಬಿನರಸ (ಪಕ್ವಮಾಡಿದ)	XII	33	241
ಕರುಳುಗಳು	II	20	12
'ಕರ್ಕಶ' ಎಂಬದರ ಅರ್ಥ	III	2	70
ಕರ್ಣಪಾಲಿರೋಗದ ಭೇದಗಳು .	VII	94	158
ಕರ್ಣಪೂರಣದ ಪ್ರಯೋಜನ	XI	9	215
ಕರ್ಣಪೂರಣವಿಧಿ	XXIII	26	457
ಕರ್ಣಮೂಲರೋಗದ ಭೇದಗಳು	VII	95	158
ಕರ್ಣರೋಗದ ಭೇದಗಳು	VII	93	158
ಕರ್ಪೂರದ ಗುಣ	XI	29	222
ಕಲೆ (ಕಫಧರಾ ಎಂಬ)	II	50	22
ಕಲೆಗಳ ವಿವರಣ	II	43	21
ಕಲೆಗಳ ಸಂಖ್ಯೆ	II	44	21
ಕಲೆಗಳ ಸ್ಥಾನ ಮತ್ತು ರೂಪ	II	45	21
ಕಲೆ (ಪಿತ್ತಧರಾ ಎಂಬ)	II	54	23
ಕಲೆ (ಮಲಧರಾ ಎಂಬ)	II	52	23
ಕಲೆ (ಮಾಂಸಧರಾ ಎಂಬ)	II	46	21
ಕಲೆ (ಮೇದೋಧರಾ ಎಂಬ)	II	48	22
ಕಲೆ (ರಕ್ತಧರಾ ಎಂಬ)	II	47	21
ಕಲೆ (ಶುಕ್ರಧರಾ ಎಂಬ)	II	56	23
ಕಲ್ಕ-'ಲೇಪ' ಮತ್ತು 'ಘೃತ' ನೋಡಿರಿ			
ಕಲ್ಲಂಟೆಯ ಗುಣ	XIV	75	273
ಕಲ್ಲುಸಕ್ಕರೆಯ ಗುಣ	XII	38	242
ಕವಲಕ್ಕೂ ಗಂಡೂಷಕ್ಕೂ ಭೇದ .	XXIII	2	450

ಕ	ಅ	ಸಂ	ಪು
ಕವಲಕ್ಕೆ ಪ್ರಾಯ	XXVI	18	480
ಕವಲ ಗಂಡೂಷಗಳ ವಿಧಗಳು	XXIII	1	450
ಕವಲ ಗಂಡೂಷ ಪ್ರತಿಸಾರಣಗಳಿಗೆ ಒಂದೇ ಔಷಧ	XXIII	9	451
ಕವಲಸಿದ್ಧವಿದ ಲಕ್ಷಣ	XXIII	7	451
ಕವಲಾದಿಗಳಲ್ಲಿ ಹೀನಾತಿಯೋಗ ಲಕ್ಷಣಗಳು	XXIII	8	451
'ಗಂಡೂಷ' ನೋಡಿ			
ಕಷಾಯ(ಕಲ್ಕ)ದ ಕ್ರಮ	XX	20	395
ಕಷಾಯಕ್ಕೆ ಪ್ರಕ್ಷೇಪಗಳು	XX	17	394
ಕಷಾಯಗಳ ನಾನಾ ವಿಧಗಳು	XIX	82	372
ಕಷಾಯಗಳ (ಪಂಚಮೂಲ) ಬಲಭೇದ	XIX	85	372
ಕಷಾಯಗಳ ಮಧುರಾದಿಯೋನಿಗಳು	XIX	83	372
ಕಷಾಯಗಳ ಸ್ವರಸಾದಿ ಪಂಚಕಲ್ಪಗಳು	XIX	84	372
ಕಷಾಯಗಳಿಗೆ ದ್ರವ್ಯಭೇದದ ಮೇಲೆ ನೀರು	XX	11	391
ಕಷಾಯದ ಮಾತ್ರೆ	XX	12	392
ಕಷಾಯಪಾಕದ ಸಾಮಾನ್ಯ ಕ್ರಮ	XX	10	391
ಕಷಾಯ(ಘಾಂಟ)ದ ಕ್ರಮ.	XX	18	395
ಕಷಾಯ(ಡಾಯಾರಿಕೆಗೆ)ದ ಕ್ರಮ	XX	30	399
ಕಷಾಯ (ಮಹಾ) 50ರ ಯೋಗಗಳು	XIX	87	376
ಕಷಾಯ (ಮಹಾ) 50ರ ಒವರ	XIX	86	372
ಕಷಾಯಯೋಗಗಳ ದೃಷ್ಟಾಂತಗಳ ಉದ್ದೇಶ	XIX	88	385
ಕಷಾಯಯೋಗಗಳನ್ನು ಬದಲಾಯಿಸುವದು	XIX	89	386
ಕಷಾಯ(ತೀತ)ದ ಕ್ರಮ	XX	19	395
ಕಷಾಯ(ಶೃತ)ದ ಕ್ರಮ	XX	9	391
ಕಷಾಯ(ಸ್ವರಸ)ಕ್ಕೆ ಪ್ರಕ್ಷೇಪ	XX	22	396
ಕಷಾಯ(ಸ್ವರಸ)ದ ಕ್ರಮವ ಮಾತ್ರೆ .	XX	21	396
ಕಷಾಯ (ಹಾಲು)ದ ಕ್ರಮ	XX	33	399
ಕಷಾಯಾರಗಳಲ್ಲಿ ವಾತ ಪ್ರಕೋಪನ ಇಲ್ಲದವು	IV	32	94
ಕಹಿರಸದ ಗುಣದೋಷಗಳು	IV	15	89

ಕ	ಅ	ಸಂ	ಪು
ಕಾಗೆಸೊಪ್ಪಿನ ಗುಣ	XIV	76	273
ಕಾಡರೋಗದ ಭೇದಗಳು	VII	99 (e)	161
ಕಾಚಿನ ಗುಣ	XI	24	220
ಕಾಡುಹಂದಿ ಮಾಂಸದ ಗುಣ	XV	28	286
ಕಾಫಿಪಾನದ ದೋಷ	XII	53	246
ಕಾಮಿಲೆ ರೋಗ	VII	15	139
ಕಾಯಿಸಿದ ಹಾಲಿನ ಗುಣ	XII	26	239
ಕಾರ್ಶ್ಯಕ್ಕೆ ಪರಿಹಾರ	IX	6	184
ಕಾರ್ಶ್ಯಲಕ್ಷಣ, ಕಾರಣ ಮತ್ತು ಪರಿಹಾರ	XI	5	183
ಕಾಲ(ತ್ರೀತೋಷ್ಣ)ಗಳ ಭೇಧ	VIII	21	179
ಕಾಲಪರಣದ ನಿತ್ಯ ನೆನಪು	XVI	30	299
ಕಾಲಪರಿಣಮದಿಂದ ಅಸಾಧ್ಯವಾಗುವ ರೋಗಗಳು	XVIII	27	246
ಕಾಲಾಂತರ ಪ್ರಾಣಹರ ಮರ್ಮಗಳು	II	105	42
ಕಾಲಾದಿ(ನಿರ್ದಿಷ್ಟವಲ್ಲದ)ಗಳ ಊಹೆ	XIX	17	351
ಕಾಲಾಲಕ್ಷ್ಯತೆ	XVI	13	294
ಕಾಲುಗಳಲ್ಲಿರುವ ಮರ್ಮಗಳು	II	97	39
ಕಾಸಫ್ಲ ಘೃತವರ್ತಿ	XXV	9	470
ಕಾಳಿಂಗ ತೂಕಗಣನ ಭೇದ	XX	5	389
ಕಾಳು ಮೆಣಸಿನ ಗುಣ	XIV	47	265
ಕವಿಯ ವರ್ಣನೆ--ಪಾಶ್ಚಾತ್ಯ ರೀತ್ಯಾ	II	141	65
ಕೀರೆ-'ಹರಿವೆಸೊಪ್ಪು' ನೋಡಿ			
ಕುಂಬಳ — 'ಬೂದಿಕುಂಬಳ' ನೋಡಿ			
ಕುಂಭಕಾಮಿಲೆ ರೋಗ	VII	16	140
ಕುಡಿದ ನೀರು ಪಕವಾಗುವದಕ್ಕೆ ಕಾಲ	XII	20	237
ಕುಡಿಯುವದಕ್ಕೆ ಬಿಸಿನೀರು	XX	31	399
ಕುತ್ತಿಗೆಗೆ ಮೇಲಿನ ಮರ್ಮಗಳು	II	101	40
ಕುರಿಮಾಂಸದ ಗುಣ	XV	23	285
ಕುಷ್ಠರೋಗದ ಭೇದಗಳು	VII	81	150
ಕುಷ್ಠರೋಗದಲ್ಲಿ ಅಶುಭ ಸೂಚನೆ	XVIII	4	341
ಕುಸುಬಿ ಎಣ್ಣೆಯ ದೋಷ	XIII	10	251
ಕೂದಲು ಬಾಚೋಣ	XI	6	213
ಕೂರ್ಚಗಳು	II	11	7
ಕೂರ್ಮ—'ಶಂಖ' ನೋಡಿ			
ಕೂಲವಾಸಿ ಜಾತಿಯ ಮಾಂಸಗಳ ಗುಣ .	XV	25	285

ಕ	ಅ	ಸಂ	ಪು
ಕೃತಾಕೃತ (ಮೇಲೋಗರದಲ್ಲಿ) ಭೇದ	XIV	41	263
ಕೃತ್ರಿಮ ವಿಷದ ಭೇದಗಳು	VII	113 (c)	166
ಕೃಷ್ಣಗತ ರೋಗದ ಭೇದಗಳು	VII	99 (d)	161
ಕೆತ್ತೆಯ ಮದ	VII	113 (r)	168
ಕೆಮ್ಮನಲ್ಲಿ ಭೇದಗಳು	VII	19	140
ಕೈಗಳ ಮರ್ಮಗಳು	II	98	39
ಕೊಂಬಿನ (ಗೋಜಾತಿ) ಗುಣ	XXVII	3	482
ಕೊಂಬಿನಿಂದ ರಕ್ತಾವಸೇಚನ	XXVII	4	482
ಕೊತ್ತುಂಬರಿಯ ಗುಣ	XIV	52	266
ಕೊಬ್ಬರಿ ತುಪ್ಪದ ಗುಣ	XIII	12	251
ಕೋಕೋಪಾನದ ದೋಷ	XII	53	246
ಕೊಟಲೆರೋಗದಲ್ಲಿ ಅಶುಭಸೂಚನೆ	XVIII	20	345
ಕೋಣನ ಮಾಂಸದ ಗುಣ	XV	27	285
ಕೋದ್ರವದ ಮದ	VII	113 (p)	167
ಕೋಷ್ಠಭೇದಗಳು	VII	74	149
ಕೋಷ್ಠ ಭೇಧದ ಮೇಲೆ ವಿರೇಚನ ಮಾತ್ರೆ	XXI	13	411
ಕೋಳಿಮಾಂಸದ ಗುಣ	XV	9	282
ಕ್ರಿಮಿಭೇದಗಳು	VII	13	139
ಕ್ಲೋಮಾಟಗಳ ಸ್ಥಾನಗಳು	II	61	26
ಕ್ಷಯದಲ್ಲಿ ಭೇದಗಳು	VII	20	140
ಕ್ಷಾರಕರ್ಮ ಬಾಲವೃದ್ಧರಿಗೆ ವರ್ಜ್ಯ	IX	20	191
ಕ್ಷೀರೋಪದ್ರವ	VII	112	166
ಕ್ಷುದ್ರರೋಗ ಭೇದಗಳು	VII	82	151
ಕ್ಷುದ್ರಾನ್ತ್ರ - ಪಾಶ್ಚಾತ್ಯರೀತ್ಯಾ	II	133	61
ಕ್ಷೌರಕರ್ಮ	XI	5	213

ಖ

ಖರ್ಜೂರದ ಗುಣ	XIV	91	277
ಖಾರ ಕಹಿಗಳು ವಾತಪ್ರಕೋಪನಕರವಲ್ಲದವು	IV	32	94
ಖಾರರಸದ ಗುಣದೋಷಗಳು	IV	41	88
ಖಾರರಸದ ಪಿತ್ತವೃದ್ಧಿಗುಣ	IV	8	85
ಖೊಬ್ರಿ ತುಪ್ಪ—'ಕೊಬ್ರಿ' ನೋಡಿ			

ಗ	ಅ	ಸಂ	ಪು
ಗಂಜಿಯ ನಾಲ್ಕು ವಿಧಗಳು	XIV	4	254
ಗಂಡಮಾಲೆ ರೋಗ	VII	66	147
ಗಂಡಾಲಜೀರೋಗ	VII	67	147
ಗಂಡೂಷ ಕವಲಗಳು ಸಿದ್ಧಿಸಿದ ಲಕ್ಷಣ	XXIII	7	451
ಗಂಡೂಷಕ್ಕೂ, ಕಲವಕ್ಕೂ, ಭೇದ	XXIII	2	450
ಗಂಡೂಷದ ವಿಧಗಳು	XXIII	1	450
ಗಂಡೂಷಾದಿಗಳ ಧಾರಣ ಕಾಲ	XXIII	6	451
ಗಂಡೂಷಾದಿಗಳ (ಬೇರೆ ಬೇರೆ) ಉಪಯೋಗ	XXIII	3	450
ಗಂಡೂಷಾದಿಗಳ ಹೀನಾತಿಯೋಗ	XXIII	8	451
ಗಂಡೂಷಾದಿಗಳಿಗೆ ದ್ರವ್ಯ ಪ್ರಮಾಣ	XXIII	4	450
ಗಂಡೂಷಾದಿಗಳಿಗೆ ಪ್ರಾಯ ವಿಚಾರ . 'ಕವಲ' ನೋಡಿ	XXIII	5	451
ಗಂಧಮಾಲೆಗಳ ಧಾರಣ	XI	17	218
ಗಡ್ಡೆಗಳ ಅಯೋಗ್ಯಸ್ಥಿತಿ	XIV	88	276
ಗರ್ಭಜ (ಸ್ತ್ರೀಯಲ್ಲ) ರೋಗ ಭೇದಗಳು	VII	102 (e)	163
ಗರ್ಭಸ್ಥಾನ .	II	32	19
ಗರ್ಭಾಧಾನ (ಅತ್ಯಂತ ಬಾಲವಯಸ್ಸಿನಲ್ಲಿ)	XI	38	228
ಗರ್ಭಾಧಾನ (ಅತ್ಯಂತ ವೃದ್ಧರಲ್ಲಿ)	XI	39	229
ಗರ್ಭಾಧಾನ (ರೋಗಿಗಳಲ್ಲಿ)	XI	39	229
ಗರ್ಭಾಶಯಸ್ಥಾನ	II	30	18
ಗರ್ಭಿಣಿಯಲ್ಲಿ ಆರ್ತವಗತಿ	II	58	24
ಗಲರೋಗದ ಭೇದಗಳು	VII	92 (f)	157
ಗಾಳಿಯನ್ನು ಲಂಘನಾರ್ಥವಾಗಿ ಉಪಯೋಗಿಸುವದು .	XIX	42	359
ಗಾಳಿಯಲ್ಲಿರುವ ಮೂಲ ಭೂತಗಳು	III	25	79
ಗುಟಿಕಾಂಜನ	XXIV	17	464
ಗುಡತುಕ್ತ	XX	52	407
ಗುದ-ಪಾಶ್ಚಾತ್ಯರೀತ್ಯಾ	II	134	62
ಗುದಸ್ಥಾನ ಮತ್ತು ಅದರ ವೇಧ . .	II	77	33
'ಗುರು' ಎಂಬದರ ಅರ್ಥ	III	2 (9)	69
ಗುರುಸಿಂಬೆ .	XVI	12	294
ಗುರು ಮರ್ಯಾದೆ	XVI	20	296

ಗ	ಅ	ಸಂ	ಪು
ಗುರುಲಘುವಿಚಾರದಾವಶ್ಯಕತೆ ಇಲ್ಲದವರು	X	31	205
ಗುಲ್ಮದ ಭೇದಗಳು .	VII	55	145
ಗುಲ್ಮದಲ್ಲಿ ಅಶುಭಸೂಚನೆ	XVIII	13	343
ಗುಳ್ಳದಕಾಯಿಯ ಗುಣ	XIV	63	270
ಗುಹಾಶಯ ಚಾತಿ ಮಾಂಸಗಳ ಗುಣ	XV	14	283
ಗೋಜಾತಿ ಮಾಂಸಗಳ ಗುಣ	XV	24	285
ಗೋಮಯ ಗುಣ	XIV	10	255
ಗೋಮಯರೊಟ್ಟಿಯ ಗುಣ .	XIV	18	257
ಗೋವಿನ ದಧ್ಯಾದಿ ಪ್ರತಿನಿಧಿ	XII	52	246
ಗ್ರಂಥಿರೋಗದ ಭೇದಗಳು	VII	68	147
ಗ್ರಹಣೀರೋಗದ ಭೇದಗಳು	VII	3	138
ಗ್ರಾಮವಾಸಿಪಾತಿ ಮಾಂಸಗಳ ಗುಣ	XV	21	284
ಗ್ರಾಸಾಂತರ ಔಷಧ	XXVIII	10	491
'ಗ್ರಾಹಿ' ಎಂಬದರ ಅರ್ಥ	III	3 (13)	72
ಗ್ರೀಷ್ಮಋತುವಿಗೆ ತಕ್ಕ ಉಪಚಾರ	VIII	18	176
ಗ್ರೀಷ್ಮ-ಶಿಶಿರ ಋತುಗಳಲ್ಲಿ ವಾತವ ಸಂಚಯ ಪ್ರಕೋಪಗಳು	VIII	11	172
ಗ್ಲಾನಿರೋಗ	VII	34	142

ಘ.			
ಘೃತತೈಲಗಳಿಗೆ ಅನೇಕ ದ್ರವಗಳು ಸೇರುವಲ್ಲಿ ಅವುಗಳ ಪ್ರಮಾಣ	XX	39	402
ಘೃತತೈಲಗಳಿಗೆ ಕಲ್ಕ ಹೇಳಲ್ಪಡದಲ್ಲಿ	XX	41	402
ಘೃತತೈಲಗಳಿಗೆ ದ್ರವ ಉಕ್ತವಲ್ಲದಲ್ಲಿ	XX	40	402
